

ಆಸ್ವಾದ

ಪ್ರೊ॥ ಎಂ. ವಿ. ಸೀತಾರಾಮಯ್ಯ
ಅಭಿನಂದನ ಗ್ರಂಥ

[illegible] ಕಲಾ ಸಂಪಾದಕರು

ನಮಸ್ಕಾರಗಳು.

[illegible]

([illegible])

೯-೧೦-೧೯೬೭



ಆಸ್ವಾದ

ಪ್ರೊಫೆಸರ್ ಎಂ. ವಿ. ಸೀತಾರಾಮಯ್ಯ ಅವರಿಗೆ ಅರ್ಪಿಸಿದ
ಅಭಿನಂದನ ಗ್ರಂಥ

ಸಂಪಾದಕರು :

ಶ್ರೀವತ್ಸ
ಅನಂತಪದ್ಮನಾಭರಾವ್
ಎಚ್. ಎಂ. ರಂಗನಾಥ್

ಉದಯಭಾನು ಕಲಾಸಂಘ (ರಿ.)
೨೩೫-೧, ಕೆಂಪೇಗೌಡನಗರ, ಬೆಂಗಳೂರು-೫೬೦ ೦೧೯

AASWADA--Felicitation Volume presented to Professor M. V. Seetharamaiah. Published by Udayabhanu KalaSangha, (Regd.) 235-1, Kempegowdanagar, Bangalore-560 019.

First edition Oct. 1983. Pp. 636 + xii Price Rs. 75.

ಮೊದಲನೆಯ ಮುದ್ರಣ ಅಕ್ಟೋಬರ್, ೧೯೮೩

ಸಲಹೆಗಾರರು :

ಪ್ರೊ॥ ಜಿ. ವೆಂಕಟಸುಬ್ಬಯ್ಯ
ಡಾ॥ ಹಾ. ಮಾ. ನಾಯಕ
ಎಲ್. ಎಸ್. ಶೇಷಗಿರಿರಾವ್

ಸಂಪಾದಕರು :

ಶ್ರೀವತ್ಸ
ಅನಂತಪದ್ಮನಾಭರಾವ್
ಎಚ್. ಎಂ. ರಂಗನಾಥ್

ಬೆಲೆ : ರೂ. ೭೫

ಪ್ರತಿಗಳಿಗೆ :

ಉದಯಭಾನು ಕಲಾಸಂಘ (ರಿ.)
235-1, ಕೆಂಪೇಗೌಡನಗರ, ಬೆಂಗಳೂರು-560 019

ಹೊದಿಕೆಚಿತ್ರ – ಕಲೆ : ಶ್ರೀ ಕಮಲೇಶ್
ಮುದ್ರಣ : ಅಶ್ವಥ್ ಪ್ರಿಂಟರ್ಸ್, ಬೆಂಗಳೂರು-11

ಮುದ್ರಕರು :
ಶ್ರೀ ಸುಧಾ ಪ್ರಿಂಟರ್ಸ್, ಉತ್ತರಾದಿಮಠದ ಆವರಣ, ಪಂಪಮಹಾಕವಿ ರಸ್ತೆ, ಶಂಕರಪುರ, ಬೆಂಗಳೂರು 560 004

ಅರಿಕೆ

ಕನ್ನಡ ನಾಡು ನುಡಿಗಳಿಗೆ ಗಣನೀಯ ಸೇವೆ ಸಲ್ಲಿಸಿದ ಹಿರಿಯರನ್ನು ಗೌರವಿಸಿ ಅವರಿಗೆ ಅಭಿನಂದನ ಗ್ರಂಥವನ್ನು ಅರ್ಪಿಸುವುದು ಕನ್ನಡದಲ್ಲಿ ಶಿಷ್ಟ ಸಂಪ್ರದಾಯ. ಒಬ್ಬ ಲೇಖಕನ ಜೀವನ–ಕೃತಿಗಳ ಸಮಗ್ರ ಅಧ್ಯಯನ, ಮತ್ತು ಮೌಲ್ಯಮಾಪನ ವನ್ನು ಸಮಕಾಲೀನ ಲೇಖಕರೇ ಮಾಡಬೇಕಾದ್ದರಿಂದ ಕೆಲವೊಂದು ಮಿತಿಗಳಲ್ಲಿ ಅಭಿನಂದನ ಗ್ರಂಥದ ಲೇಖನಗಳು ರೂಪುಗೊಳ್ಳುತ್ತವೆ. ಕೆಲವು ಸಂದರ್ಭಗಳಲ್ಲಿ ಲೇಖಕರಿಗೆ ಪ್ರಿಯವಾದ ಯಾವುದಾದರೂ ವಿಷಯಗಳಿಗೆ ಸಂಬಂಧಿಸಿದಂತೆ ಲೇಖನ ಗಳನ್ನು ಬರೆಸಿ ಅಭಿನಂದನ ಗ್ರಂಥದಲ್ಲಿ ಅಳವಡಿಸುವ ರೂಢಿಯೂ ಇದೆ. ಪ್ರೊ. ಎಂ. ವಿ. ಸೀತಾರಾಮಯ್ಯ ಅವರಿಗೆ ಅರ್ಪಿಸುತ್ತಿರುವ 'ಆಸ್ವಾದ' ಗ್ರಂಥ ಈ ಎರಡು ಆಶಯಗಳನ್ನೂ ಒಳಗೊಂಡಿದೆ.

'ಮೈ ವೆಂಸೀ ರಾಘವ' ಕಾವ್ಯನಾಮದಿಂದ ಖ್ಯಾತರಾದ ಪ್ರೊ. ಎಂ. ವಿ. ಸೀತಾ-ರಾಮಯ್ಯ ಅವರು ಹಿರಿಯ ಸಾಹಿತಿಗಳು, ಶಾಸ್ತ್ರ ವಿಷಯಗಳಿಗೆ ಸಂಬಂಧಿಸಿದಂತೆ ಅಗ್ರಪಂಕ್ತಿಯ ಸಂಶೋಧಕರು. ಅಧ್ಯಯನ-ಅಧ್ಯಾಪನಗಳಲ್ಲಿ ಅಪಾರವಾದ ಅನುಭವ ಪಡೆದವರು. ದೈಹಿಕ ಅನಾರೋಗ್ಯದ ತೊಂದರೆಯಲ್ಲೂ ಅಧ್ಯಯನ ಮತ್ತು ಸಂಶೋಧನೆಯಲ್ಲಿ ಅವರಿಗಿರುವ ಅದಮ್ಯ ಉತ್ಸಾಹ, ಸಾಹಿತ್ಯದ ಕೆಲಸಗಳಲ್ಲಿ ತನ್ಮಯತೆ ಆದರ್ಶಪ್ರಾಯವಾದವು. ತಮ್ಮ ಸಾಹಿತ್ಯ ಕೃತಿಗಳಿಂದ ಸಾರಸ್ವತ ಲೋಕ ವನ್ನು ಶ್ರೀಮಂತಗೊಳಿಸುವುದರ ಜೊತೆಗೆ ಬಿ. ಎಂ. ಶ್ರೀ. ಸ್ಮಾರಕ ಪ್ರತಿಷ್ಠಾನ ಸಂಸ್ಥೆ ಯನ್ನು ಸ್ಥಾಪಿಸಿ ಸಂಶೋಧಕ–ವಿದ್ವಾಂಸರಿಗೆ ಉಪಯುಕ್ತ ಮಾರ್ಗದರ್ಶನ ನೀಡು ತ್ತಿದ್ದಾರೆ. ಸರಳ ಸುಸಂಸ್ಕೃತ ಸ್ನೇಹ ಜೀವಿಯಾಗಿ ನುಡಿಸೇವೆ ಮಾಡುತ್ತಿರುವ ಸಾರ್ಥಕ ಜೀವನ ಅವರದು.

ಇಂಥ ಹಿರಿಯರನ್ನು ಗೌರವಿಸಿ ಅಭಿನಂದನ ಗ್ರಂಥವನ್ನು ಅರ್ಪಿಸಬೇಕೆಂಬ ಯೋಜನೆಯನ್ನು ಉದಯಭಾನು ಕಲಾಸಂಘ ಎರಡು ವರ್ಷಗಳ ಹಿಂದೆ ರೂಪಿಸಿತು. ಎಂ. ವಿ. ಸೀ. ಅವರ ಕೃತಿ-ಲೇಖನಗಳ ಸಮಗ್ರವಾದ ಸಮೀಕ್ಷೆಯನ್ನು ನಡೆಸಬೇಕು, ಜೊತೆಗೆ ಕನ್ನಡ ಸಾಹಿತ್ಯವನ್ನು ಅಧ್ಯಯನ ಮಾಡುವವರಿಗೆ ಉಪಯುಕ್ತ ಆಕರ ಗ್ರಂಥವಾಗಬೇಕು ಎಂಬ ಅಪೇಕ್ಷೆಯಂತೆ ಗ್ರಂಥದ ರೂಪರೇಷೆಗಳನ್ನು ಯೋಜಿಸ ಲಾಯಿತು. ಈ ಕೆಲಸವನ್ನು ಉದಯಭಾನು ಕಲಾಸಂಘ ನಮಗೆ ಒಪ್ಪಿಸಿದಾಗ

ಅಳುಕಿನಿಂದಲೇ ಒಪ್ಪಿಕೊಂಡೆವು. ಹಿರಿಯರಾದ ಪ್ರೊ. ಜಿ. ವೆಂಕಟಸುಬ್ಬಯ್ಯ ಡಾ|| ಹಾ. ಮಾ. ನಾಯಕ ಮತ್ತು ಶ್ರೀ ಎಲ್. ಎಸ್. ಶೇಷಗಿರಿರಾಯರು ಅಳುಕಿಗೆ ಕಾರಣವಿಲ್ಲವೆಂದು ಧೈರ್ಯ ತುಂಬಿ ಸೂಕ್ತ ಸಲಹೆಗಳನ್ನು ನೀಡಿ ಉಪಕರಿಸಿದ್ದಾರೆ. ನಾಡಿನ ಹಲವು ಲೇಖಕರು ತಮ್ಮ ಅಮೂಲ್ಯ ಲೇಖನಗಳನ್ನು ನೀಡಿ ಉಪಕರಿಸಿದ್ದಾರೆ. ಪ್ರೋತ್ಸಾಹದ ಮಾತುಗಳನ್ನಾಡಿದ್ದಾರೆ. ಲೇಖನಗಳ ಅಚ್ಚಿನ ಪ್ರತಿಯನ್ನು ತಯಾರಿಸುವಲ್ಲಿ ಶ್ರೀ ಬಿ. ಎ. ರಂಗನಾಥ್ ಅವರು ಶ್ರಮಿಸಿದ್ದಾರೆ. ಲೇಖನಗಳಲ್ಲಿ ಬರುವ ಸಂಸ್ಕೃತ ಶ್ಲೋಕಗಳ ಶುದ್ಧಪಾಠಗಳನ್ನು ನಿರ್ಧರಿಸುವಲ್ಲಿ ವಿದ್ವಾನ್ ಚಂದ್ರ ಶೇಖರ ಭಟ್ಟರು ನೆರವಾಗಿದ್ದಾರೆ. ಛಾಯಾಚಿತ್ರಗಳನ್ನು ಒದಗಿಸಿದ ಶ್ರೀ ಬಿ. ವಿ. ಕೆ. ಮೂರ್ತಿ ಸ್ಟುಡಿಯೋ, ರಕ್ಷಾಪುಟ ಕಲಾವಿನ್ಯಾಸಕ ಶ್ರೀ ಕಮಲೇಶ್, ಮುದ್ರಣ ಕಾರ್ಯವನ್ನು ನಿರ್ವಹಿಸಿದ ಶ್ರೀ ಸುಧಾ ಮುದ್ರಣಾಲಯ ಇವರಿಗೆಲ್ಲ ನಾವು ಕೃತಜ್ಞರು.

'ಆಸ್ವಾದ'ಗ್ರಂಥವನ್ನು ಸ್ವೀಕರಿಸಲು ಒಪ್ಪಿದ ಪ್ರೊಫೆಸರ್ ಎಂ. ವಿ. ಸೀತಾ ರಾಮಯ್ಯ ಅವರಿಗೆ ಉದಯ ಭಾನು ಕಲಾ ಸಂಘ ಮತ್ತು ಸಂಪಾದಕ ಮಂಡಳಿ ಕೃತಜ್ಞವಾಗಿದೆ.

ಅನಂತಪದ್ಮನಾಭರಾವ್
ಸಂಪಾದಕರ ಪರವಾಗಿ

ಸಲಹೆಗಾರರ ಪರವಾಗಿ

ಸಲವತ್ತೆರಡು ವರ್ಷಗಳ ಹಿಂದೆ ಆಚಾರ್ಯ ಬಿ. ಎಂ. ಶ್ರೀಯವರಿಗೆ ಅವರ ಅಭಿಮಾನಿಗಳೂ ಶಿಷ್ಯರೂ 'ಸಂಭಾವನೆ' ಎಂಬ ಅಭಿನಂದನಾ ಗ್ರಂಥವನ್ನು ಸಮರ್ಪಿಸಿ ಕನ್ನಡದಲ್ಲಿ ಒಂದು ಶುಭ ಸಂಪ್ರದಾಯ.ವನ್ನು ಪ್ರಾರಂಭಿಸಿದರು. ಸಾಹಿತ್ಯ ಕ್ಷೇತ್ರದಲ್ಲಿ ಹಿರಿಯ ಸೇವೆ ಸಲ್ಲಿಸಿದವರ ಜೀವನ ಮತ್ತು ಕೃತಿಗಳ ಅಧ್ಯಯನ ಈ ರೀತಿ ನಡೆಯುವು ದರಿಂದ ದಿನದಿನಕ್ಕೆ ತನ್ನ ಮೇರೆಗಳನ್ನು ಹಿಗ್ಗಿಸಿಕೊಳ್ಳುತ್ತಿರುವ ಸಾಹಿತ್ಯದಲ್ಲಿ ಆಸಕ್ತಿ ಇರುವವರಿಗೆ ತುಂಬಾ ಲಾಭ ಉಂಟು. ಅಲ್ಲದೆ ಈ ಅಧ್ಯಯನದಲ್ಲಿ ಭಾಗಿಗಳಾಗು ವವರು ಬೇರೆ ಬೇರೆ ಪೀಳಿಗೆಗಳವರೂ ಸಾಹಿತ್ಯದೃಷ್ಟಿ ಉಳ್ಳವರೂ ಆದುದರಿಂದ ಓದುಗರಿಗೆ ಸಮಕಾಲೀನ ವಿಮರ್ಶೆಯ ದೃಷ್ಟಿಗಳ ಮತ್ತು ಮೌಲ್ಯಗಳ ಪರಿಚಯವೂ ಆಗುತ್ತದೆ. ಇಂತಹ ಗ್ರಂಥದ ಸಿದ್ಧತೆಯ ಕಾರ್ಯವನ್ನು ತರುಣ ಪೀಳಿಗೆಯವರು ಕೈಗೊಳ್ಳುವುದರಿಂದ ಸಾಹಿತ್ಯ ಮತ್ತು ಸಂಸ್ಕೃತಿಗಳ ಕ್ಷೇತ್ರದಲ್ಲಿ ಹಲವು ಪೀಳಿಗೆಗಳವರ ನಡುವೆ ಸ್ನೇಹ-ವಿಶ್ವಾಸಗಳು ವರ್ಧಿಸುವುದು ಸಾಧ್ಯವಾಗುತ್ತದೆ.

ಸುಮಾರು ಎರಡು ದಶಕಗಳ ಕಾಲ ಆಡಂಬರ-ಅಬ್ಬರಗಳಿಲ್ಲದೆ ಒಳ್ಳೆಯ ಕೆಲಸ ಮಾಡುತ್ತಿರುವ ಉದಯಭಾನು ಕಲಾ ಸಂಘದ ತರುಣ ಕಾರ್ಯಕರ್ತರು ಈಗಾಗಲೇ ಉಪಯುಕ್ತ ಪ್ರಕಟಣೆಗಳನ್ನು ಹೊರತಂದಿದ್ದಾರೆ. ಕವಿ, ಕತೆಗಾರ, ಕಾದಂಬರಿಕಾರ, ನಾಟಕಕಾರ, ಪ್ರಬಂಧಕಾರರಾಗಿ ಸೃಜನ ಸಾಹಿತ್ಯಕ್ಕೆ ಬೆಲೆಬಾಳುವ ಕಾಣಿಕೆಗಳನ್ನು ನೀಡಿರುವ ಪ್ರೊಫೆಸರ್ ಎಂ. ವಿ. ಸೀತಾರಾಮಯ್ಯನವರು ವಿಮರ್ಶಕರಾಗಿ, ಸಂಶೋಧಕ ರಾಗಿ, ಅಧ್ಯಾಪಕರಾಗಿ ಸಾಹಿತ್ಯ ಸಂಸ್ಕೃತಿಗಳ ಅಧ್ಯಯನದಲ್ಲಿ ಸ್ಮರಣೀಯ ಸಾಧನೆ ಗಳಿಸಿದ್ದಾರೆ. ಬಿ. ಎಂ. ಶ್ರೀ. ಪ್ರತಿಷ್ಠಾನವನ್ನು ಸ್ಥಾಪಿಸಿ ಹೊಸದೊಂದು ನಂದಾ ದೀಪವನ್ನು ನಾಡಿಗೆ ನೀಡಿದ್ದಾರೆ. ಈ ಹಿರಿಯರಿಗೆ ಗೌರವ ಗ್ರಂಥವನ್ನು ಸಮರ್ಪಿಸ ಬೇಕೆಂದು ನಿಶ್ಚಯಿಸಿದ ಉದಯಭಾನು ಕಲಾ ಸಂಘದ ಯುವಕ ಸಮರ್ಥ ಉತ್ಸಾಹಿ ಗಳು ನಾವು ಸಲಹೆಗಾರರಾಗಿರಬೇಕೆಂದು ಆಹ್ವಾನಿಸಿ ನಮ್ಮನ್ನು ಗೌರವಿಸಿದ್ದಾರೆ.

ಸೀತಾರಾಮಯ್ಯನವರ ಬಹುಮುಖ ಸೇವೆಗೆ ಗ್ರಂಥದ ಮೊದಲನೆಯ ಭಾಗ ಕನ್ನಡಿಯಾಗಿದೆ. ಅವರಿಗೆ ಪ್ರಿಯವಾದ ಸಂಶೋಧನೆಯ ಕ್ಷೇತ್ರಕ್ಕೆ ಎರಡನೆಯ ಭಾಗ ಗಣನೀಯ ಕೊಡುಗೆಯಾಗುತ್ತದೆ ಎಂದು ನಮ್ಮ ನಂಬಿಕೆ. ಈ ಕಾರ್ಯದ ಶ್ರಮವು ಸಂಘದ ಮತ್ತು ಸಂಪಾದಕ ಮಂಡಲಿಯ ತರುಣ ಗೆಳೆಯರದು. ಆಗೀಗ ಕೆಲವು

ಸಲಹೆಗಳನ್ನು ನೀಡಿ ಅವರ ಉತ್ಸಾಹ, ದಕ್ಷತೆ, ಸಾಧನೆಗಳನ್ನು ಕಂಡು ಸಂತೋಷಿಸುವ ಅವಕಾಶ ನಮ್ಮದು. ಸುಮಾರು ಅರ್ಧ ಶತಮಾನ ದುಡಿದ ಹಿರಿಯರೊಬ್ಬರಿಗೆ ಈ ಸಾರ್ಥಕ ರೀತಿಯಲ್ಲಿ ಕೃತಜ್ಞತೆ ಸೂಚಿಸುವ ಸಂತೋಷದ ಕಾರ್ಯದಲ್ಲಿ ನಮ್ಮನ್ನು ಈ ರೀತಿ ಭಾಗಿಗಳನ್ನಾಗಿ ಮಾಡಿದ ಉದಯಭಾನು ಕಲಾಸಂಘದ ಅಧಿಕಾರಿಗಳು ಮತ್ತು ಸದಸ್ಯರಿಗೆ ನಮ್ಮ ವಂದನೆಗಳು.

ಬೆಂಗಳೂರು
9-10-1983

ಎಲ್. ಎಸ್. ಶೇಷಗಿರಿರಾವ್
ಸಲಹೆಗಾರರ ಪರವಾಗಿ

ಪ್ರಕಾಶಕರ ನುಡಿ

ಕನ್ನಡದ ಹಿರಿಯ ಸಾಹಿತಿಗಳೂ ಸಂಶೋಧಕರೂ ಬಿ. ಎಂ. ಶ್ರೀ. ಸ್ಮಾರಕ ಪ್ರತಿಷ್ಠಾನದ ಸ್ಥಾಪಕರೂ ಆದ ಪ್ರೊ|| ಎಂ. ವಿ. ಸೀತಾರಾಮಯ್ಯ ಅವರು ತಮ್ಮ ಬಹುಮುಖವಾದ ನುಡಿ ಸೇವೆಯಿಂದ ನಮಗೆಲ್ಲ ಚಿರಪರಿಚಿತರು. ಪ್ರತಿಭಾಸಂಪನ್ನರಾದ ಈ ಹಿರಿಯರನ್ನು ಗೌರವಿಸಿ ಅವರಿಗೆ ಒಂದು ಅಭಿನಂದನ ಗ್ರಂಥವನ್ನು ಅರ್ಪಿಸಬೇಕೆಂದು ಉದಯಭಾನು ಕಲಾಸಂಘದ ಕೆಲವರು ಸದಸ್ಯರು ಸಲಹೆ ಮಾಡಿದರು. ಸಂಘದ ಕಾರ್ಯಕಾರಿ ಸಮಿತಿಯು ಈ ವಿಷಯವನ್ನು ಪರಿಶೀಲಿಸಿ ಸಂಪಾದಕ ಮಂಡಲಿಯನ್ನು ರಚಿಸಿತು. ನಮ್ಮ ಮೇಲಿನ ಅಭಿಮಾನದಿಂದ ಪ್ರೊ|| ಎಂ. ವಿ. ಸೀ. ಅವರು ಒಪ್ಪಿಗೆ ನೀಡಿದರು. ಸಂಘದ ಕೋರಿಕೆಯಂತೆ ಹಿರಿಯರಾದ ಪ್ರೊ|| ಜಿ. ವೆಂಕಟಸುಬ್ಬಯ್ಯ, ಡಾ|| ಹಾ. ಮಾ. ನಾಯಕ, ಶ್ರೀ ಎಲ್. ಎಸ್. ಶೇಷಗಿರಿರಾವ್ ಇವರುಗಳು ಸಲಹೆಗಾರರಾಗಿ ಸೂಕ್ತ ಮಾರ್ಗದರ್ಶನ ನೀಡಿದ್ದಾರೆ.

ಅಭಿನಂದನ ಗ್ರಂಥದಲ್ಲಿ ಎರಡು ಭಾಗಗಳಿರಬೇಕೆಂದೂ ಮೊದಲ ಭಾಗದಲ್ಲಿ ಪ್ರೊ|| ಎಂ. ವಿ. ಸೀ. ಅವರ ಜೀವನ-ಕೃತಿಗಳ ಸಮೀಕ್ಷೆ ಮತ್ತು ಎರಡನೇ ಭಾಗದಲ್ಲಿ ಕನ್ನಡ ಸಾಹಿತ್ಯ, ಸಂಸ್ಕೃತಿ, ಇತ್ಯಾದಿ ವಿಷಯಗಳ ಬಗ್ಗೆ ಸಂಶೋಧನ ಲೇಖನಗಳನ್ನು ಪ್ರಕಟಿಸಬೇಕೆಂದು ಸಂಪಾದಕ ಮಂಡಲಿ ತೀರ್ಮಾನಿಸಿತು. ಅಭಿನಂದನ ಗ್ರಂಥಕ್ಕೆ 'ಆಸ್ವಾದ' ಹೆಸರನ್ನೂ ಸಂಸ್ಮರಣ ಸಂಚಿಕೆಗೆ ಕಲಾವಿಕಾಸ-'ಮೈಮೆಂಸೀ ರಾಘವ ದರ್ಶನ' ಎಂಬ ಹೆಸರನ್ನೂ ಸಲಹೆಗಾರರು ಸೂಚಿಸಿದರು.

ಉದಯಭಾನು ಕಲಾಸಂಘ ಈ ಕಾರ್ಯಕ್ಕೆ ವಿವಿಧ ಮೂಲಗಳಿಂದ ನೆರವನ್ನು ಪಡೆದಿದೆ. ಪ್ರಮುಖವಾಗಿ ಜನ್ಮಭೂಮಿ ಪ್ರೆಸ್ ಟ್ರಸ್ಟ್‌ನ ಶ್ರೀ ಬಿ. ಕೃಷ್ಣ, ಅಮೆರಿಕೆಯಲ್ಲಿರುವ ಕನ್ನಡಬಾಂಧವರು, ಕರ್ನಾಟಕ ಸರ್ಕಾರದವರು ನೆರವು ನೀಡಿದ್ದಾರೆ. ಸಂಪಾದಕ ಮಂಡಲಿಯ ಸದಸ್ಯರು, ಸಲಹೆಗಾರರು, ಸಂಘದ ಪದಾಧಿಕಾರಿಗಳು, ಮತ್ತು ಪ್ರಕಾಶನ ಸಮಿತಿಯವರು ಮತ್ತು ವೀನಸ್ ಬೈಂಡರ್ಸ್‌ನ ನಾರಾಯಣ ಅವರು ಶಕ್ತಿಮೀರಿ ಶ್ರಮಿಸಿದ್ದಾರೆ. ಕಳೆದ ಹತ್ತೊಂಬತ್ತು ವರ್ಷಗಳಿಂದ ಕನ್ನಡ ಸಾಹಿತ್ಯ, ಸಂಸ್ಕೃತಿ, ಕಲಾರಂಗ ಮತ್ತು ಸಮಾಜ ಸೇವೆಗಳಲ್ಲಿ ನಿರತವಾಗಿರುವ ನಮ್ಮ ಸಂಘಕ್ಕೆ ಕನ್ನಡ ಕಾರ್ಯಕರ್ತರ ಮತ್ತು ಹಿರಿಯರ ಸಹಕಾರವೇ ಶ್ರೀರಕ್ಷೆ. 'ಆಸ್ವಾದ' ಪ್ರಕಟನೆಯಲ್ಲಿ ನೆರವಾದ ಎಲ್ಲ ಮಹನೀಯರಿಗೂ ಉದಯಭಾನು ಕಲಾಸಂಘ ಕೃತಜ್ಞತೆಗಳನ್ನರ್ಪಿಸುತ್ತದೆ.

ಬೆಂಗಳೂರು
9-10-1983

ಎಂ. ನರಸಿಂಹ — ಕಾರ್ಯದರ್ಶಿ
ಶ್ರೀವತ್ಸ — ಅಧ್ಯಕ್ಷ

ಉದಯಭಾನು ಕಲಾಸಂಘ (ರಿ.)

ಉದಯಭಾನು ಕಲಾ ಸಂಘ (ರಿ.)


ಕೆಂಪೇಗೌಡನಗರ, ಬೆಂಗಳೂರು–560 019

ಕಾರ್ಯಕಾರಿ ಸಮಿತಿ

ಪ್ರಧಾನ ಪೋಷಕರು	:	ಲಯನ್ ಎನ್. ಆರ್. ಚಂದ್ರನ್ ಅಧ್ಯಕ್ಷರು, ಲಯನ್ಸ್ ಕ್ಲಬ್, ಬೆಂಗಳೂರು ಪಶ್ಚಿಮ.
ಪೋಷಕರು	:	ಎಸ್. ಕೆ. ಹರಿಹರೇಶ್ವರ (ಅಮೆರಿಕ) ಬಿ. ಕೃಷ್ಣ, ಜನ್ಮಭೂಮಿ ಪ್ರೆಸ್ ಟ್ರಸ್ಟ್
ಅಧ್ಯಕ್ಷರು	:	ಶ್ರೀವತ್ಸ
ಉಪಾಧ್ಯಕ್ಷರು	:	ಲಯನ್ ಎನ್. ರಾಜಶೇಖರಯ್ಯ
ಕಾರ್ಯದರ್ಶಿ	:	ಎಂ. ನರಸಿಂಹ
ಸಹ ಕಾರ್ಯದರ್ಶಿಗಳು	:	ಬಿ. ಪಿ. ಚಂದ್ರಮೋಹನ್ ಬಿ. ಶಂಕರಲಿಂಗೇಗೌಡ
ಖಜಾಂಚಿ	:	ಕೆ. ಎಲ್. ರಾಮಚಂದ್ರ
ಸಮಿತಿ ಲೆಕ್ಕ ಪರಿಶೋಧಕರು	:	ಎಂ. ದತ್ತಾತ್ರಿ
ಸಮಿತಿ ಸದಸ್ಯರು	:	ಲಯನ್ ಕೆ. ವಿ. ಕೃಷ್ಣಮೂರ್ತಿ ಕೆ. ಎನ್. ಸೋಮಶೇಖರ್ ಬಿ. ಎನ್. ಕೃಷ್ಣಮೂರ್ತಿ ಎಚ್. ಎಂ. ರಂಗನಾಥ್ ಟಿ. ಆರ್. ಸತ್ಯನಾರಾಯಣ ಎಂ. ಜಿ. ಕಪನಿಗೌಡ ಬಿ. ಎನ್. ಶೇಷಗಿರಿರಾವ್ ಲಯನ್ ವಿ. ಆರ್. ಕೃಷ್ಣಮೂರ್ತಿ

ಪರಿವಿಡಿ

ಆಸ್ವಾದ ಭಾಗ-೨



ಎಂ. ವಿ. ಸೀ. ದಂಪತಿಗಳು

ನನ್ನ ಸಾಹಿತ್ಯಜೀವನ ಸ್ಮೃತಿಗಳು

ಎಂ. ವಿ. ಸೀತಾರಾಮಯ್ಯ

ಪ್ರಾರಂಭ ವರ್ಷದ ಪ್ರೇರಣೆಗಳು

ಬರಹಗಾರನ ಬದುಕಿಗೂ ಅವನ ಬರಹಕ್ಕೂ ಯಾವ ಸಂಬಂಧವೂ ಇಲ್ಲ, ಕೃತಿ ವಿಮರ್ಶೆ ಕೃತಿಕಾರನ ಬದುಕನ್ನು ಅಗತ್ಯವಾಗಿ ಗಮನಿಸಬೇಕಾಗಿಲ್ಲ, ಎನ್ನುವ ಒಂದು ಪಂಥವಿದೆ, ಸಾಹಿತ್ಯ ವಿಮರ್ಶೆಯ ಕ್ಷೇತ್ರದಲ್ಲಿ. ನಾನು ಈ ಪಂಥಕ್ಕೆ ಸೇರಿದವನಲ್ಲ. ಪರಿಸರದ ಪ್ರಭಾವದಿಂದ ವ್ಯತ್ಯಾಸಹೊಂದುತ್ತ ಬೆಳೆಯುತ್ತಹೋಗುವ ಅವನ ವ್ಯಕ್ತಿತ್ವ, ಅವನ ನಿತ್ಯದ ಬದುಕು, ಇವು ಅವನ ಸಾಹಿತ್ಯಜೀವನದ ಮೇಲೆ ಮುದ್ರೆಯೊತ್ತುತ್ತವೆ. ನಿತ್ಯದ ಬದುಕು–ಬರಹದ ಬದುಕು, ಇವುಗಳ ಅಂಟು–ನಂಟು ನನ್ನ ಅನುಭವಕ್ಕೂ ಬಂದಿದೆ. ನನ್ನ ಕೈವಾಡವಿಲ್ಲದೆ ಸಂಭವಿಸಿದ ಬದುಕಿನ ಸಂಗತಿಗಳು ನನ್ನ ಸಾಹಿತ್ಯಜೀವನವನ್ನು ರೂಪಿಸಿವೆ. ಮೇಲುನೋಟಕ್ಕೆ ಕಾರಣವಿಲ್ಲದ ಕಾರ್ಯವಾಗಿ, ಅನಿರೀಕ್ಷಿತ ಸೋಜಿಗದ ಸಂಗತಿಯಾಗಿ ಕಂಡರೂ ನನ್ನ ಸಾಹಿತ್ಯಕಾರ್ಯದ ಬೀಜ ನನ್ನ ಬದುಕಿನಲ್ಲಿ, ಹುಟ್ಟಿನಲ್ಲಿ ಹುದುಗಿದೆ. ನನ್ನ ಸಾಹಿತ್ಯ ನಿರ್ಮಾಣ ಶಕ್ತಿ, ಭಾಷಾ ಸಾಮರ್ಥ್ಯ, ಆಸ್ತಿಕ್ಯ, ಆಧ್ಯಾತ್ಮಿಕ ದೃಷ್ಟಿ, ಪಾಂಡಿತ್ಯ ಪ್ರವಣತೆ, ಮುಂತಾಗಿ—ನನ್ನ ಈವರೆಗಿನ ಬರವಣಿಗೆಯ ರಾಶಿಯಲ್ಲಿ ಯಾವ ಯಾವ ವಿಶೇಷ ಲಕ್ಷಣಗಳು ಕಾಣಿಸಿಕೊಂಡಿವೆಯೋ ಅವೆಲ್ಲ, ವಾಗ್ಗೇಯಕಾರ ಭಕ್ತಕವಿ—ನನ್ನ ಮುತ್ತಜ್ಜ—ತಿಮ್ಮಪ್ಪದಾಸರಿಂದ ನನಗೆ ಆನುವಂಶಿಕವಾಗಿ ದೊರೆತ ಪಿತ್ರಾರ್ಜಿತ ಎಂದು ಈಚೆಗೆ ನನ್ನ ತಿಳಿವಳಿಕೆಗೆ ಬಂದಿದೆ. ಇದರ ಜೊತೆಗೆ, ಬಹುಶಃ ಜನ್ಮಾಂತರಗಳ ಸಂಸ್ಕಾರ–ವಿಶೇಷ, ಹಾಗೂ ಈ ಜನ್ಮದ ನನ್ನ ಪ್ರಯತ್ನಗಳು, ಇವು ಸ್ವಯಾರ್ಜಿತ. ಈ ಕಾರ್ಯ–ಕಾರಣ ಸರಣಿಯನ್ನು adinfinitum ಆಗಿ, ನಿರವಧಿಯಾಗಿ, ಹಿಂದ–ಹಿಂದಕ್ಕೆ ಒಯ್ದರೆ "ಕಾರಣಂ ಕಾರಣಾನಾಂ" ಆದ ಆದಿಮೂಲವನ್ನು ತಲಪುತ್ತದೆ. ಈ ಬರೆಯುವ ಶಕ್ತಿ, ಪ್ರತಿಭೆ, ದೈವದತ್ತ—ವಾಗ್ದೇವಿಯ ವರಪ್ರಸಾದ—ಎಂದರೂ ಇದೇ ಅರ್ಥ–ಎಂದು ನನಗೆ ತೋರುತ್ತದೆ.

ಪ್ರಕಟಣೆ: ಆಕಾಶವಾಣಿಯ ಕೃಪೆ

ನಾನು, 'ಸಾಹಿತಿ ಆಗೇನು' ಎಂಬ ಕನಸು–ಮನಸಿನಲ್ಲಿಯೂ ಎಣಿಸಿರಲಿಲ್ಲ. ನನ್ನ ಒಬ್ಬ ದೊಡ್ಡಪ್ಪನ ಮಗ ನಮ್ಮ ಮನೆಯಲ್ಲೇ ಓದಿಕೊಂಡಿದ್ದ. ಹೈಸ್ಕೂಲು ವಿದ್ಯಾರ್ಥಿ, ಬುದ್ಧಿವಂತ. 'ವಿಕಟ–ವಿನೋದಿನಿ', ಎಂ. ಎಸ್. ಪುಟ್ಟಣ್ಣನವರ 'ಮಾಡಿದ್ದುಣ್ಣೋ ಮಹಾರಾಯ', ಮುಂತಾದ ಆಗಿನ ಕಾಲದ ಜನಪ್ರಿಯ ಕೃತಿಗಳನ್ನು ನನ್ನ ತಾಯಿಯ ಮುಂದೆ, ಒಮ್ಮೊಮ್ಮೆ ನಾಟಕೀಯವಾಗಿ ಓದಿ ತೋರಿಸುತ್ತಿದ್ದ. ಎಂಟು–ಹತ್ತು ವರ್ಷದ ಹುಡುಗ ನಾನು, ಆಸಕ್ತಿಯಿಂದ ಕೇಳಿಸಿಕೊಳ್ಳುತ್ತಿದ್ದೆ. ಅದೇ ಕಾಲದಲ್ಲಿ, ಶ್ರೀವೈಷ್ಣವ ವಿದ್ವಾಂಸರೊಬ್ಬರಿಂದ, ನನ್ನ ತಂದೆ, ವಾಲ್ಮೀಕಿ ರಾಮಾಯಣವನ್ನು ಪಾರಾಯಣ ಮಾಡಿಸಿದರು. ರಾಮ ಪಟ್ಟಾಭಿಷೇಕ ನೆರವೇರಿಸಿದರು. ಅವರು ತರಿಸಿಕೊಂಡಿದ್ದ ದೇವಶಿಖಾಮಣಿ ಅಳಸಿಂಗರಾಚಾರ್ಯರ ಕನ್ನಡ ರಾಮಾಯಣದ ಸಂಪುಟಗಳು ಈಗಲೂ ನನ್ನ ಬಳಿ ಇವೆ. ಆಗ ಅವುಗಳನ್ನು ನಾನು ಓದದಿದ್ದರೂ, ಅವುಗಳಲ್ಲಿನ ಚಿತ್ರಗಳನ್ನು ನೋಡಿ, ರಾಮಾಯಣ ಪಾರಾಯಣದ ಭಾಗಗಳ ಕನ್ನಡ ಅನುವಾದವನ್ನು ಕೇಳಿ, ರಾಮಾಯಣದಿಂದ ಪ್ರಭಾವಿತನಾಗಿದ್ದೇನೆ. ಹನುಮಂತನ ಪಾತ್ರ, ನನ್ನ ಮನಸ್ಸನ್ನು ಸೆಳೆದಿತ್ತು. ನಮ್ಮ ಮನೆಯ ಪಕ್ಕದಲ್ಲೇ ಅರಮನೆಯ "ಆನೆಕರೋಟಿ"—ಎಂದರೆ "ಗಜಶಾಲೆ". ಹನುಮಂತನ ಚಿತ್ರ, ಆನೆಯ ಚಿತ್ರಗಳನ್ನು ಬರೆಯುವುದರಿಂದ ನನ್ನ ಚಿತ್ರ–ಲೇಖನ ಮೊದಲಾಯಿತು. ಪದ್ಯ ಬರೆಯುವ ಗೀಳು ಹಿಡಿದದ್ದು ಆಮೇಲೆ. ನನ್ನ ಸೋದರತ್ತೆ ತಾವು ಹೋಗುತ್ತಿದ್ದ ಹರಿಕಥೆಗಳಿಗೂ, ದೊಂಬಿದಾಸರ ಕುಣಿತ, ಬಯಲಾಟಗಳಿಗೂ ತಪ್ಪದೆ ನನ್ನನ್ನು ಕರೆದೊಯ್ಯುತ್ತಿದ್ದರು. ನನ್ನ ತಂದೆಯೇ ಒಮ್ಮೆ ಬೀದಿಯ ಉದ್ದಕ್ಕೂ ಚಪ್ಪರ ಹಾಕಿಸಿ, ಹರಿಕಥಾ ಸಪ್ತಾಹ ಏರ್ಪಡಿಸಿದ್ದರು. ಹರಿದಾಸರುಗಳ ಕೀರ್ತನೆಗಳು ಕಿವಿಗೆ ಬೀಳದ ದಿನವೇ ಇರಲಿಲ್ಲ. ನಮ್ಮ ಮನೆಯಲ್ಲೇ ನನ್ನ ತಂದೆ, ದೊಡ್ಡಪ್ಪ, ಪ್ರತಿ ಶನಿವಾರ ಭಜನೆ ಮಾಡುತ್ತಿದ್ದರು. 'ಪೂರ್ವಿಕರು ಮಾಡಿದ ಕೀರ್ತನೆಗಳು' ಎಂದು 'ಪೂಜಾವಿಧಾನದ ಕೀರ್ತನೆಗಳನ್ನು ಹಾಡುತ್ತಿದ್ದರು. ಈ ಕೀರ್ತನೆಗಳೇ ನಾನು ಈಚೆಗೆ ಸಂಪಾದನೆ ಮಾಡಿ, ಬೆಂಗಳೂರು ವಿಶ್ವವಿದ್ಯಾನಿಲಯ ಪ್ರಕಟಿಸಿರುವ "**ಅರ್ಚನ**". ನಾಯಕ ವೆಂಕಟರಾಯರೆಂಬವರು ನಮ್ಮ ಶನಿವಾರದ ಭಜನೆಗಳಿಗೆ ಬಂದು, ದಾಸರ ಪದಗಳನ್ನು ಬಲು ಚೆನ್ನಾಗಿ ಹಾಡುತ್ತಿದ್ದರು. ಪುಸ್ತಕದ ರಾಘವೇಂದ್ರರಾಯರೆಂಬುವರು, ಮೃದಂಗ ನುಡಿಸುತ್ತಿದ್ದರು. ಇವರ ಬಳಿ ನಾನು ಮೃದಂಗ ವಾದನ ಕಲಿಯಲು ನನ್ನ ತಂದೆ ಏರ್ಪಾಡುಮಾಡಿದರು. ಈ ಹಿನ್ನಲೆಯಲ್ಲಿ, ನನ್ನಲ್ಲಿ ಹುದುಗಿದ್ದ ಸಾಹಿತ್ಯ, ಸಂಗೀತ ಕಲೆಗಳ ಸಂಸ್ಕಾರಕ್ಕೆ ಉದ್ದೀಪನ ದೊರಕಿತು.

ನಾನು ಮಾಧ್ಯಮಿಕ ಶಾಲೆಯನ್ನು ಸೇರುವ ವೇಳೆಗೆ ಚಿತ್ರ ಬರೆಯುವ ಗೀಳು, ಪದ್ಯ ಬರೆಯುವುದಕ್ಕಿಂತ ಮೊದಲೇ ಹೇಗೆ ಹಿಡಿದಿತ್ತು ಎನ್ನುವುದನ್ನು ಈಗಾಗಲೇ

ಸೂಚಿಸಿದ್ದೇನೆ. ಆ ವಿಚಾರವನ್ನು ಇಲ್ಲಿ ಬೆಳಸುವುದಿಲ್ಲ. ಚಿತ್ರಕಲೆಯಲ್ಲಿ ಸಿದ್ಧಿ-ಪ್ರಸಿದ್ಧಿಗಳನ್ನು ಪಡೆಯದಿದ್ದರೂ, ದಿವಂಗತ ಕೆ. ವೆಂಕಟಪ್ಪ, ಗುರುಗಳಾದ ಟಿ. ಎಸ್. ವೆಂಕಣ್ಣಯ್ಯ ಮುಂತಾದವರ ಮೆಚ್ಚುಗೆ ಗಳಿಸುವ ಮಟ್ಟಿಗೆ, ಅದರಲ್ಲಿ ತಕ್ಕ ಮಟ್ಟಿನ ಪರಿಣತಿ ಪಡೆದಿದ್ದೆ. ನನ್ನ ಕೆಲವು ಸಾಹಿತ್ಯ ಕೃತಿಗಳಿಗೆ ಚಿತ್ರಕಲೆಯ ವಿಚಾರ ವಸ್ತುವಾಗಿದೆ ; ಒಟ್ಟನಲ್ಲಿ ಅದರ ಪ್ರಭಾವ ನನ್ನ ಸಾಹಿತ್ಯ ರಚನೆಯ ಮೇಲೆ ಗಮನಾರ್ಹವಾಗಿದೆ. ಕ್ರಮ-ಕ್ರಮವಾಗಿ, ನನ್ನ ಸಾಹಿತ್ಯದ ಉಪಾಸನೆ ಚಿತ್ರ ಕಲೆಯ ಸಾಧನೆಯನ್ನು ಹಿಂದಿಕ್ಕಿತು.

ನಾನು ಮಾಧ್ಯಮಿಕ ಶಾಲೆಯಲ್ಲಿ ಓದುತ್ತಿದ್ದಾಗ, ನನ್ನ ದೊಡ್ಡಮ್ಮನ (ತಾಯಿಯ ಅಕ್ಕ) ಒಬ್ಬ ಮಗ ಟೀಚರ್ಸ್ ಟ್ರೇನಿಂಗ್ ಪರೀಕ್ಷೆಗಾಗಿ ನಮ್ಮ ಮನೆಯಲ್ಲಿ ಓದಿಕೊಂಡಿದ್ದ. ಆತ ವೆಂಕಟಾಚಾರ್ಯರ, ಗಳಗನಾಥರ ಕಾದಂಬರಿಗಳನ್ನು ತಂದು ಒಮ್ಮೊಮ್ಮೆ ಗಟ್ಟಿಯಾಗಿಯೇ ಓದುತ್ತಿದ್ದ. ಈ ಓದು, ನನ್ನಲ್ಲಿ ಆಸಕ್ತಿ ಹುಟ್ಟಿಸಿ, ನಾನೂ ಅವುಗಳನ್ನು ಕೈಗೆತ್ತಿಕೊಂಡು ಓದುವಂತೆ ಮಾಡಿತು. ವೆಂಕಟಾಚಾರ್ಯರ 'ಅಡವಿಯ ಹುಡುಗಿ', 'ಆನಂದ ಮಠ', ದೇವೀ ಚೌಧುರಾಣಿ', 'ದುರ್ಗೇಶ ನಂದಿನಿ', ಇವು ನನಗೆ ತುಂಬ ಮೆಚ್ಚಿಗೆಯಾದವು. ನನ್ನ ಒಬ್ಬ ಸಹಪಾಠಿಯೊಂದಿಗೆ,—ಈತನ ಹೆಸರು ವೆಂಕಟರಾಯ ಎಂದು ನೆನಪು—joint authorship ನಲ್ಲಿ ವೆಂಕಟಾಚಾರ್ಯರ ಶೈಲಿಯನ್ನು ಅನುಕರಿಸಿ, ಒಂದು ಸಾಹಸಮಯ, ಪ್ರೇಮಮಯ, ಅದ್ಭುತ ರಮ್ಯ ಕಾದಂಬರಿಯನ್ನು ರಚಿಸತೊಡಗಿದ್ದೆ ! ಈ ಸಾಹಿತ್ಯಸಾಹಸ ಮೊದಲ ಅಧ್ಯಾಯಕ್ಕೇ ಮುಕ್ತಾಯವಾಯಿತು. ಕಾದಂಬರಿಯ ಕಥಾವಸ್ತುವಿನ ಕಲ್ಪನೆಯೂ ಇರಲಿಲ್ಲ. ಕಥಾನಾಯಕ, ಕಥಾನಾಯಕಿ, ದರೋಡೆಕಾರರು, ಖಳ ನಾಯಕ ಮುಂತಾದ ಪಾತ್ರಗಳೇನೋ ಮನಸ್ಸಿನಲ್ಲಿ ಸುಳಿದಾಡಿ ನಿದ್ರಾಭಂಗ ಮಾಡುತ್ತಿದ್ದವು. ಗೊಂಡಾರಣ್ಯ, ಗಾಢಾಂಧಕಾರ, ಕಳ್ಳರಗುರು, ಭವಾನೀ ಠಾಕೂರ, ಸಿಡಿಲು ಮಿಂಚು ಗುಡುಗು ಮಳೆ, ಕಾಡು ಪ್ರಾಣಿಗಳ ಗರ್ಜನೆ, ಮಳೆಯಲ್ಲಿ ಸಿಕ್ಕಿಕೊಂಡ ಅನಾಥ ಬಾಲಿಕೆಯ ಅರಣ್ಯರೋದನ, ಇಂಥ ಮಾತುಗಳ ಪ್ರಯೋಗ ಮಾತ್ರ ನೆನಪಿನಲ್ಲಿದೆ

ನಾನು ಮೈಸೂರಿನ ಬಸಮಯ್ಯನವರ ಕೊಲಿಜಿಯೇಟ್ ಹೈಸ್ಕೂಲಿನ ವಿದ್ಯಾರ್ಥಿ. ನನ್ನ ಶಾಲಾವ್ಯಾಸಂಗದ ದಿನಗಳಲ್ಲಿ ಕನ್ನಡ ಪಠ್ಯಪುಸ್ತಕಗಳ ಪದ್ಯಗಳನ್ನು ಬಾಯಿಪಾಠ ಮಾಡುವ ರೂಢಿಯಿತ್ತು. ಹೈಸ್ಕೂಲ್ ತರಗತಿಗಳಲ್ಲಿ ನಮ್ಮ ಕನ್ನಡ ಪಂಡಿತರು ಶ್ರೀ ರಾಮಯ್ಯ ಎಂಬುವರು ಪದ್ಯಗಳನ್ನು ಚೆನ್ನಾಗಿ ಓದುತ್ತಿರಲಿಲ್ಲ. ಬೇರೆ ತರಗತಿಗಳಲ್ಲಿ ಪಾಠ ಮಾಡುತ್ತಿದ್ದ ಶ್ರೀ ಅಳಗಿರೀಶಾಚಾರ್ಯರೆಂಬವರು, ರಾಗಯುಕ್ತವಾಗಿ, ಬಲು ಚೆನ್ನಾಗಿ ಪದ್ಯವಾಚನ ಮಾಡುತ್ತಿದ್ದರು. ಆನೇ ತಾನೇ ಮಹಾರಾಜ ಕಾಲೇಜಿನ ಪಂಡಿತ ಪದವಿಯಿಂದ ವಿಶ್ರಾಂತರಾಗಿದ್ದ ಶಾಸಕಾಸ

ಹಳ್ಳಿ ವರದಾಚಾರ್ಯರು ನಮ್ಮ ಶಾಲೆಗೆ ನೇಮಕಗೊಂಡು ಬಂದಿದ್ದರು.—ನಾನು ಜೂನಿಯರ್ ಇಂಟರ್ ಮೀಡಿಯೆಟ್ ತರಗತಿಯಲ್ಲಿ ಓದುತ್ತಿದ್ದಾಗ; ಇವರ ಓದಾಣಿಕೆಯೂ ವಿಶಿಷ್ಟವಾಗಿ ಮನೋಜ್ಞವಾಗಿತ್ತು. ಕಳಲಿ ಕೃಷ್ಣರಾಯರು ನಮ್ಮ ಪಕ್ಕದ ಮನೆಗೆ ಬಂದು ಭಾರತವಾಚನ ಮಾಡುತ್ತಿದ್ದರು. ಪದ್ಯಗಳ ಬಾಯಿಪಾಠದ ಅಭ್ಯಾಸ, ಸುಶ್ರಾವ್ಯ ಪದ್ಯವಾಚನದ ಕೇಳ್ಮೆ—ಇವುಗಳ ಪರಿಣಾಮವಾಗಿ ಭಾಮಿನಿ, ವಾರ್ಧಕ ಮುಂತಾದ ಮಾತ್ರಾ ಛಂದಸ್ಸುಗಳ ಧಾಟಿಗಳು ಮನಸ್ಸಿನಲ್ಲಿ ಊರಿದ್ದುವು. ಅರ್ಥ ಭಾವಗಳ ಕಡೆಗೆ ಗಮನವಿಲ್ಲದಿದ್ದರೂ, ಚೌಪದಿ, ಷಟ್ಪದಿ ಪದ್ಯಗಳ ರಚನೆಯಲ್ಲಿ ಕೈಯಾಡಿಸುತ್ತಿದ್ದೆ. ಕುಮಾರವ್ಯಾಸ ಭಾರತ, ಜೈಮಿನಿಭಾರತಗಳಲ್ಲಿ ವಿಶೇಷ ಆಸಕ್ತಿ ಬೆಳೆಸಿಕೊಂಡಿದ್ದೆ.

ಇದೇ ಕಾಲದಲ್ಲಿ, ಇಂಗ್ಲಿಷ್ ಭಾಷೆಯ ಹಲವು ಕಾದಂಬರಿಗಳನ್ನು ಓದಿ ಮುಗಿಸಿದ್ದೆ. ಕ್ಯಾಪ್ಟನ್ ಮ್ಯಾರಿಯಟ್, ಚಾರಲ್ಸ್ ಕಿಂಗ್‌ಸ್ಲಿ, ಡ್ಯಾನಿಯಲ್ ಡೀಫೋ, ಸರ್ ವಾಲ್ಟರ್ ಸ್ಕಾಟ್, ಥಾಮಸ್ ಹಾರ್ಡಿ, ಚಾರ್ಲ್ಸ್ ಡಿಕನ್ಸ್, ಮುಂತಾದ ಮಹಾ ಕಾದಂಬರಿಕಾರರ ಅನೇಕ ಕಾದಂಬರಿಗಳನ್ನು ಓದಿ ಮುಗಿಸಿದ್ದೆ. ಡಿಕೆನ್ಸ್ ಮತ್ತು ಹಾರ್ಡಿಯವರ ಜೀವನ ದರ್ಶನ ನನ್ನ ಮೇಲೆ ತಕ್ಕಮಟ್ಟಿನ ಪ್ರಭಾವ ಬೀರಿವೆ. 16–17ರ ಪ್ರಾಯದ ಓದು ಇದೆಲ್ಲ.

ನನ್ನ ದುರ್ಬಲವಾಗಿದ್ದ ಬರವಣಿಗೆಯ ಆಸಕ್ತಿಯನ್ನು ಬದುಕಿನ ಬಲವನ್ನಾಗಿ ಮಾರ್ಪಡಿಸಿದ ಒಂದೆರಡು ಸಂದರ್ಭಗಳು ಗಮನಾರ್ಹ. ನಾನು ಸೀನಿಯರ್ ಇಂಟರ್ ಮೀಡಿಯೆಟ್ ತರಗತಿಯಲ್ಲಿದ್ದಾಗ, ತೀ. ನಂ. ಶ್ರೀಕಂಠಯ್ಯನವರು ಕನ್ನಡ ಅಧ್ಯಾಪಕರಾಗಿ ನೇಮಕಗೊಂಡು ನನ್ನ ಗುರುಗಳಾದರು. ಅದಕ್ಕೂ ಮೊದಲೆ ನನ್ನ ಅವರ ಪರಸ್ಪರ ಪರಿಚಯ ಆಗಿ, ಸ್ನೇಹದ ಸಲಿಗೆಯಿಂದ ನಡೆದುಕೊಳ್ಳುತ್ತಿದ್ದೆವು. ಅವರ ಪರಿಚಯ ಲಾಭವಾದದ್ದು, ನಮ್ಮ ಮನೆಯಲ್ಲಿ ವಿದ್ಯಾವ್ಯಾಸಂಗಕ್ಕೆಂದು ಬಂದಿದ್ದ ನನ್ನ ಚಿಕ್ಕಮ್ಮನ (ತಾಯಿಯ ತಂಗಿ) ಮಗ ಬಿ. ನಂಜುಂಡಯ್ಯನ ಮೂಲಕ. ನಂಜುಂಡಯ್ಯನೂ ತೀ. ನಂ. ಶ್ರೀಯವರೂ ಸಹಪಾಠಿಗಳು. 'ಗಳಸ್ಯ–ಕಂಠಸ್ಯ' ಎನ್ನುವಂಥ ಸ್ನೇಹ ಅವರದ್ದು. ಸ್ನೇಹಿತನನ್ನು ನೋಡುವುದಕ್ಕೆಂದು ತೀ. ನಂ. ಶ್ರೀ. ನಮ್ಮ ಮನೆಗೆ ಬರುತ್ತಿದ್ದರು. ನನ್ನ ಚಿತ್ರಕಲೆಯ ಮಾದರಿಗಳು ತೀ. ನಂ. ಶ್ರೀಯವರ ಗಮನ ಸೆಳೆದು, ಮೆಚ್ಚುಗೆಗೆ ಪಾತ್ರವಾದವು. "ಕುರುಡ–ಭಿಕ್ಷುಕ", "ಬೋಧಿ ದರ್ಶನ", ಎಂಬ ನನ್ನ ಎರಡು ಚಿತ್ರಗಳ ಪ್ರತಿಕೃತಿಗಳನ್ನು ಪರಿಚಯ ಲೇಖನಗಳೊಂದಿಗೆ ಪ್ರಬುದ್ಧ ಕರ್ಣಾಟಕದಲ್ಲಿ ಕೆಲವು ವರ್ಷಗಳ ತರುವಾಯ ಪ್ರಕಟಿಸಿದವರು-ಅವರು. ನನ್ನ ಪದ್ಯ ರಚನೆಯ ಆಸಕ್ತಿಯೂ ಅವರ ಗಮನ ಸೆಳೆಯಿತು. ನಾನು ಎಸ್. ಎಸ್. ಎಲ್. ಸಿ. ತರಗತಿಯಲ್ಲಿದ್ದಾಗಲೇ—192[illegible]ರಲ್ಲಿ—ಅವರೊಮ್ಮೆ ನಮ್ಮ ಮನೆಗೆ ಎಂದಿನಂತೆ ಬಂದಿದ್ದಾಗ, ಮಾರನೆಯ ದಿನ ನನ್ನ

ಹುಟ್ಟುಹಬ್ಬವೆಂಬ ಸಂಗತಿ ಅವರಿಗೆ ತಿಳಿಯಿತು. ನನ್ನನ್ನು ತಮ್ಮ ಮನೆಗೆ ಬರಮಾಡಿಕೊಂಡು, ಅದೇ ತಾನೇ ಪ್ರಕಟವಾಗಿದ್ದ 'ಶ್ರೀ' ಯವರ 'ಇಂಗ್ಲಿಷ್ ಗೀತೆ' ಗಳ ಒಂದು ಪ್ರತಿಯನ್ನು ಉಡುಗೊರೆಯಾಗಿ ಕೊಟ್ಟರು. ಅವರಲ್ಲಿನ ಪದ್ಯಗಳನ್ನು ಓದಿ, ಅರ್ಥಮಾಡಿಕೊಂಡು, ಮೆಚ್ಚಿಕೊಂಡ ಮೇಲೆ—ಈ ಪುಸ್ತಕವನ್ನೇ ಏಕೆ ಉಡುಗೊರೆಯಾಗಿ ಕೊಟ್ಟರು ಎನ್ನುವುದು ಮನವರಿಕೆಯಾಯಿತು. ಪದ್ಯರಚನೆಯಲ್ಲಿ, ಭಾವಾಭಿವ್ಯಕ್ತಿಯಲ್ಲಿ, ಹೊಸಮಾರ್ಗದ ದಿಕ್ಕೂ ಕಾಣಿಸಿತು ನನಗೆ. ಹೀಗೆ, "ಶ್ರೀ" ದ್ವಯರು ಕಾವ್ಯರಚನೆಯ ದೀಕ್ಷಾ ಗುರುಗಳಾದರು. ನನ್ನ ಬಳಿಯಿದ್ದ ಇಂಗ್ಲಿಷ್ ಕವನ ಸಂಕಲನಗಳಲ್ಲಿನ ಹಲ ಕೆಲವು ಪದ್ಯಗಳನ್ನು ಕನ್ನಡಕ್ಕೆ ಅನುವಾದ ಮಾಡಿದೆ; ಸ್ವತಂತ್ರವಾಗಿಯೂ ಕೆಲವು ಪದ್ಯಗಳನ್ನು ಬರೆದು ತೀ. ನಂ. ಶ್ರೀ. ಯವರಿಗೆ ತೋರಿಸಿದೆ. ಮುಂದಿನ ಕೆಲವು ವರ್ಷಗಳಲ್ಲಿ, 1934ರಲ್ಲಿ, ನಾನು ಬೆಂಗಳೂರಿಗೆ ಬರುವವರೆಗೆ, ನಾನು ಬರೆದದ್ದನ್ನೆಲ್ಲ ಅವರಿಗೆ ತೋರಿಸುತ್ತಿದ್ದೆ. ಅವರ ರಚನಾತ್ಮಕ ವಿಮರ್ಶೆಯಿಂದ ಪ್ರಯೋಜನ ಪಡೆಯುತ್ತಿದ್ದೆ. ಬರಹಗಾರನಾಗಿ ನನ್ನ ಜನ್ಮವರ್ಷ 1926. (ನಿಜವಾದ ಜನ್ಮವರ್ಷ 1910).

ನನ್ನ ಬರವಣಿಗೆ, ತೀ. ನಂ. ಶ್ರೀ. ಯವರ ತಿದ್ದಾಣಿಕೆ–ಇವಕ್ಕೊಂದು ಚಿಕ್ಕ ಉದಾಹರಣೆ ಕೊಡುತ್ತೇನೆ: ಪ್ರಸಿದ್ಧ ಜರ್ಮನ್ ಕವಿ ಗಯಟೆಯ ಕೆಲವು ಕಿರು ಕವನಗಳನ್ನು ಅನುವಾದ ಮಾಡಿದ್ದೆ. ಎರಡೇ ಸಾಲಿನ ಒಂದು ಮುಕ್ತಕದ ಅನುವಾದ ಹೀಗೆ ಇತ್ತು:

ಮಾಲೆಯನು ಕಟ್ಟುವುದು ಬಲು ಸುಲಭವಹುದು:
ಬಲು ಕಷ್ಟ ಸರಿಯಾದ ಮುಡಿವವರನರಸುವುದು.

ಎರಡನೆಯ ಸಾಲನ್ನು ತೀ. ನಂ. ಶ್ರೀ. "ಬಲುಕಷ್ಟ ಮುಡಿವುದಕೆ ತಕ್ಕವರ ನರಸುವುದು" ಎಂದು ತಿದ್ದಿದ ಮೇಲೆ, ರಚನೆ ಹೇಗೆ ಉತ್ತಮಗೊಂಡಿತು ಎನ್ನುವುದನ್ನು ಬಿಡಿಸಿಹೇಳಬೇಕಾಗಿಲ್ಲ. ಮಹಾರಾಜ ಕಾಲೇಜಿನ ಕರ್ಣಾಟಕ ಸಂಘ ಪ್ರಕಟಿಸಿದ "ತಳಿರು" ಕವನ ಸಂಕಲನದಲ್ಲಿ (1930ರಲ್ಲಿ) ನನ್ನ ಎರಡು ಪ್ರಾರಂಭದ ಕವನಗಳು ಸೇರುವುದಕ್ಕೂ ತೀ. ನಂ. ಶ್ರೀ. ಮುಖ್ಯ ಕಾರಣರು. ವೆಂಕಣ್ಣಯ್ಯನವರ ಉತ್ತೇಜನವೂ ಕಡಮೆಯದಲ್ಲ. ಇಂಥ ಮಾರ್ಗದರ್ಶನದಿಂದ ಕವಿಗೆ, ಸ್ವವಿಮರ್ಶೆಯ ಶಕ್ತಿ ಲಭಿಸುತ್ತದೆ. ನಾನು, ಅನುಭವದಿಂದ ಹೇಳುವ ಮಾತು ಇದು. ಬಿ. ಎಂ. ಶ್ರೀ. ಯವರು ಮೈಸೂರು ವಿಶ್ವವಿದ್ಯಾನಿಲಯದ ಆಶ್ರಯದಲ್ಲಿ 'ರಜತ ಮಹೋತ್ಸವ ಸ್ವರ್ಣ ಪದಕ ಕವಿತಾ ಸ್ಪರ್ಧೆ' ಯನ್ನು ಏರ್ಪಡಿಸಿದ್ದರು. ಮೊದಲ ಸಲ ಕೆ. ವಿ. ಪುಟ್ಟಪ್ಪನವರು ಈ ಪದಕವನ್ನು ಪಡೆದರು. ರಾಜರತ್ನಂ, ಎಲ್. ಗುಂಡಪ್ಪ ಪಡೆದುಕೊಂಡಿದ್ದರು. ನಾನು ಜೂನಿಯರ್ ಎಂ. ಎ. ತರಗತಿಗೆ ಬಂದಾಗ, ನನಗೂ ಸ್ಪರ್ಧಿಸುವ ಆಸೆಯಾಯಿತು. ಭಗ್ನ ಪ್ರಣಯಿಯಾದ ಚಿತ್ರಗಾರನೊಬ್ಬನ ವಿರಹ

ಉನ್ಮಾದಕ್ಕೆ ತಿರುಗಿದ ಸ್ವಕಪೋಲ ಕಲ್ಪಿತ ವಸ್ತುವನ್ನು ಆಧರಿಸಿ, ಸರಳ ರಗಳೆಯಲ್ಲಿ ನೀಳ್ಗವನವೊಂದನ್ನು ರಚಿಸಿದೆ. ಸುಮಾರು 150 ಪಂಕ್ತಿಗಳು. ತೀ. ನಂ. ಶ್ರೀ ಯವರಿಗೆ ತೋರಿಸಿದೆ. ಓದಿ, ಏನೂ ಹೇಳದೆ ಹಿಂದಿರುಗಿಸಿದರು. ಅವರ ಮೌನವೇ ವಿಮರ್ಶೆಯಾಗಿತ್ತು. ನಾನೂ ನಿರಾಶೆಗೊಂಡರೂ, ಪ್ರಯತ್ನವನ್ನು ಬಿಡಲಿಲ್ಲ. ನನ್ನ ರಚನೆಯನ್ನು ಮತ್ತೆ ಮತ್ತೆ ಓದಿದೆ. ಸಪ್ಪೆಯಾಗಿ, ಗದ್ಯರಚನೆಯಂತೆ ಕಂಡಿತು. ರಚನೆ 300 ಪಂಕ್ತಿಗಳಿಗೆ ಕಡಿಮೆಯಿಲ್ಲದೆ ಇರತಕ್ಕದ್ದು ಎಂಬ ನಿಯಮವನ್ನೂ ತೀ. ನಂ. ಶ್ರೀ. ನನ್ನ ಗಮನಕ್ಕೆ ತಂದಿದ್ದರು. ಕೆಲವು ದಿನ ಬಿಟ್ಟು, ಪದ್ಯವನ್ನು ಮತ್ತೆ ಓದಿದೆ. ಏನೋ ಹೊಳೆಯಿತು. ಪದ್ಯದ ಪ್ರತಿಸಾಲನ್ನು ಎರಡಾಗಿ ಒಡೆದು ಕೆಲವು ಮಾತುಗಳನ್ನು ತೆಗೆದು ಮತ್ತೆ ಕೆಲವನ್ನು ಹೊಸದಾಗಿ ಸೇರಿಸಿ. ಅಂತ್ಯಪ್ರಾಸ ಯೋಜನೆ ಮಾಡಿ, ಪ್ರತಿಮಾಡಿ, ಮತ್ತೆ ತೀ. ನಂ. ಶ್ರೀ. ಯವರಿಗೆ ತೋರಿಸಿದೆ. "ಚೆನ್ನಾಗಿದೆ ಈ ಹೊಸಪದ್ಯ, ಸ್ಪರ್ಧೆಗೆ ಕಳಿಸು" ಎಂದು ಉತ್ತೇಜನ ಕೊಟ್ಟರು. "ಹೊಸಪದ್ಯವಲ್ಲ, ಅದೇಯೆ" ಎಂದು ತಿಳಿಸಿದೆ. ಅವರು ಆಶ್ಚರ್ಯ ಪಟ್ಟರು. ಪದ್ಯವನ್ನು ಮಾರ್ಪಡಿಸಿದ ವಿಧಾನವನ್ನು ತಿಳಿಸಿದಾಗ ನಕ್ಕುಬಿಟ್ಟರು. 'ಆ ಚಿತ್ರಗಳು' ಎಂಬ ಪದ್ಯವನ್ನು ಸ್ಪರ್ಧೆಗೆ ಕಳಿಸಿದೆ. ಸ್ವರ್ಣಪದಕವೂ ಲಭಿಸಿತು. ಈ ಪದ್ಯ "ಆ ಚಿತ್ರಗಳು ಮತ್ತು ಇತರ ಕಥನ ಕವನಗಳು" ಎಂಬ ಸಂಕಲನದಲ್ಲಿ ಸೇರಿದೆ.

ಹೀಗೆ, ತೀ. ನಂ. ಶ್ರೀ. ಅವರ ಉತ್ತೇಜನದಿಂದ 1926ರಿಂದ ಪ್ರಾರಂಭವಾದ ಕಾವ್ಯರಚನೆಯ ಪ್ರಯತ್ನಗಳ ಜೊತೆ-ಜೊತೆಯಲ್ಲೇ, ಲಲಿತಪ್ರಬಂಧ, ಸಣ್ಣಕಥೆ, ನಾಟಕ, ಈ ಸಾಹಿತ್ಯ ಪ್ರಾಕಾರಗಳಲ್ಲಿಯೂ ನನ್ನ ಪ್ರಾರಂಭದ ಕೃತಿರಚನೆ ಸಾಗಿತು. ಸಣ್ಣಕಥೆಗಳ ರಚನೆಗೆ ಪ್ರೇರಣೆ ನೀಡಿದ್ದು, ಎಸ್. ಎಸ್. ಎಲ್. ಸಿ. ತರಗತಿಯಲ್ಲಿ ಪಠ್ಯಪುಸ್ತಕವಾಗಿ ನಾನು ಓದಿದ 'ಶ್ರೀನಿವಾಸ'ರ ಮೊದಲ ಕಥಾ ಸಂಕಲನ "ಕೆಲವು ಸಣ್ಣ ಕಥೆಗಳು". ವಾಸ್ತವವಾಗಿ ನಮ್ಮ ಕನ್ನಡ ಪಂಡಿತರು ರಾಮಯ್ಯನವರು, "ಪಾಠ ಮಾಡುವುದು ಇವರಲ್ಲಿ ಏನಿದೆ ? ನೀವೇ ಓದಿಕೊಳ್ಳಿ" ಎಂದು ಈ ಪುಸ್ತಕವನ್ನು ಪಾಠ ಮಾಡಲೇ ಇಲ್ಲ! ಮುಂದೆ, ಆಂಗ್ಲ ಕಥೆಗಾರರ ಕಥಾತಂತ್ರಗಳಿಂದ ಪ್ರಭಾವಿತನಾದೆ. ಅಮೇರಿಕದ ಕಥೆಗಾರ ನಥೆನಿಯಲ್ ಹಾಥಾರ್ನನ Rappaccinic's Daughter, The Great Stone Face, Prophetic Pictures ಎಂಬೀ ಮೂರು ಕಥೆಗಳನ್ನು ಪ್ರಾರಂಭದಲ್ಲಿ ರೂಪಾಂತರ ಮಾಡಿದೆ. ಇವೂ, ಅನುವಾದಗೊಂಡ ಇನ್ನು ನಾಲ್ಕು ಕಥೆಗಳೂ ಕೂಡಿ 1936ರಲ್ಲಿ "ಶಿಲಾಮುಖ" ಎಂಬ ಹೆಸರಿನ ಸಂಕಲನದಲ್ಲಿ ಪ್ರಕಟವಾದವು. ಶಿಕ್ಷಕ-ಶಿಕ್ಷಣ ಶಾಲಾ ತರಗತಿಗಳಿಗೆ ಪಠ್ಯವೂ ಆಯಿತು. ಈ ಅನುವಾದಗಳಿಂದಾಗಿ, ಕತೆ ಬರೆಯುವ ಕಲೆಯಲ್ಲಿ ಕೈ ಕುದುರಿತು. ಜೊತೆ–ಜೊತೆಗೇ ಸ್ವತಂತ್ರ ಕತೆಗಳನ್ನೂ ಬರೆಯತೊಡಗಿದೆ. ಮೊತ್ತ ಮೊದಲಕತೆ

'ದೋಸೆಯ ಆಸೆಯೋ ?' (1926) ಕಾಲೇಜಿನ ಯೂನಿಯನ್ ಪತ್ರಿಕೆಯಲ್ಲಿ ಪ್ರಕಟವಾದ ಹಾಗೆ ನೆನಪು. ಪತ್ರಿಕೆಯ ಸಂಚಿಕೆಯಾಗಲೀ, ಕತೆಯ ಹಸ್ತಪ್ರತಿಯಾಗಲೀ ಈಗ ಸಿಕ್ಕುವಂತಿಲ್ಲ. ಸ್ವತಂತ್ರ ಕತೆಗಳ ಸಂಕಲನ 'ಮಾರ್ಗದರ್ಶಕ' 1940ರಲ್ಲಿ ಪ್ರಕಟವಾಯಿತು. ನಾನು ಬಿ. ಎ. ತರಗತಿಯಲ್ಲಿದ್ದಾಗಲೇ ಬರೆದ "ಹೆಸರುಗಳು" ಮತ್ತು "ಮುಗಿಲುಗಳು" ಎಂಬೆರಡು ಲಲಿತ ಪ್ರಬಂಧಗಳು ಕಾಲೇಜು ಯೂನಿಯನ್ ಪತ್ರಿಕೆಯಲ್ಲಿ ಪ್ರಕಟವಾದವು. ಅಂದು ಬರೆದ 'ಮುಗಿಲುಗಳು' ಇಂದಿಗೂ ಸಹೃದಯರ ಮೆಚ್ಚುಗೆಗೆ ಪಾತ್ರವಾಗಿ, ಅನೇಕ ಸಂಕಲನಗಳಲ್ಲಿ ಸೇರ್ಪಡೆಯಾಗಿದೆ. ವಜ್ರಮಹೋತ್ಸವದ ಸಂದರ್ಭದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿರುವ ಪ್ರಬಂಧಗಳ ಇಂಗ್ಲಿಷ್ ಅನುವಾದದ ಸಂಕಲನದಲ್ಲಿ ಈಚೆಗೆ ಸೇರ್ಪಡೆಯಾಗಿದೆ. "ಕೃತಿಯ ಗುಣಮುಖ್ಯವೇ ಹೊರತು, ಅದನ್ನು ಕೃತಿಕಾರ ಯಾವ ವಯಸ್ಸಿನಲ್ಲಿ ಬರೆದ ಎನ್ನುವುದು ಅಷ್ಟು ಮುಖ್ಯವಲ್ಲ—" ಎನ್ನುವುದು ಈ ಪ್ರಬಂಧದಿಂದ ಗೊತ್ತಾಗುತ್ತದೆ. "ಗುಣೇಷು ಪೂಜಾಸ್ಥಾನಂ, ನಚ ವಯಃ, ನಚ ಲಿಂಗಂ" ಎಂಬ ಮಾತು ಸಾಹಿತ್ಯ ಸೃಷ್ಟಿಗೂ ಅನ್ವಯಿಸುತ್ತದೆ. ವಿದ್ಯಾರ್ಥಿಯಾಗಿದ್ದಾಗಲೇ ಬರೆದ ನಾಟಕ "ಹೂವಿನ ಆಸೆ"–ಬಾಲ ವಿಧವೆಯ ಪುನರ್ವಿವಾಹದ ವಿಷಯವನ್ನು ಕುರಿತ ನಾಟಕ—1936ರಲ್ಲಿ ಪ್ರಕಟವಾಯಿತು. ಪ್ರಕಟವಾದ ಮೇಲೆ, ಹಳೆಯ ಮೈಸೂರು ರಾಜ್ಯದಲ್ಲಿ ನನಗೆ ತಿಳಿದ ಹಾಗೆ ಒಟ್ಟು 20–30 ಸಲ ಪ್ರದರ್ಶಿತವಾಗಿದೆ. ಶ್ರೀರಂಗರು ನನ್ನ ಒಪ್ಪಿಗೆ ಪಡೆದು, ಮೈಸೂರು ಕಡೆಯ ಭಾಷೆಯನ್ನು, ಧಾರವಾಡದ ಆಡುಮಾತಿಗೆ ತಿರುಗಿಸಿ, "ಹೂವಿನ ಆಸೆ" ಯನ್ನು ಪ್ರದರ್ಶಿಸಿದರು. ವಿಸ್ಮೃತಿ ಲೋಕದ ವಸ್ತುವಾದ ಈ ಕೃತಿ ಅಂದು ಒಂದು ಬಹು ಯಶಸ್ವೀ ನಾಟಕ. ಆಂಗ್ಲ ನಾಟಕಗಳ ಓದು, ಹಾಗೂ ಶಾಲೆಕಾಲೇಜಿನ ನಾಟಕ ಪ್ರದರ್ಶನಗಳಲ್ಲಿ ಅಭಿನಯಿಸಿದ ಅನುಭವ–ಇವೇ ನಾಟಕ ರಚನೆಗೆ ಪ್ರೇರಣೆ. ಎಂ. ಎ. ತರಗತಿಯಲ್ಲಿದ್ದಾಗ, ರಾಜರತ್ನಂ ಅವರ ಶಿಶುಗೀತೆಗಳಿಗೆ ಚಿತ್ರಬರೆದು ಕೊಟ್ಟ ಮೇಲೆ, ಮಕ್ಕಳ ಪದ್ಯಗಳ ರಚನೆಗೆ ಪ್ರೇರಣೆ ಉಂಟಾಯಿತು. ಮದರಾಸು ವಿಶ್ವವಿದ್ಯಾನಿಲಯ ಹೊರತಂದಿದ್ದ 'ಕವಿರಾಜ ಮಾರ್ಗ'ವನ್ನು ಪತ್ರಿಕೆಯೊಂದಕ್ಕೆ ವಿಮರ್ಶೆ ಮಾಡಲು ಗುರು ವೆಂಕಣ್ಣಯ್ಯ ಪ್ರೋತ್ಸಾಹ ಕೊಟ್ಟರು. ಈಚೆಗೆ ಈ ಆದಿಗ್ರಂಥವನ್ನು ಸಂಪಾದನೆ ಮಾಡುವುದಕ್ಕೆ ಪ್ರೇರಣೆ, ಅಂದು ನಾನು ಅದರಲ್ಲಿ ಬೆಳೆಸಿಕೊಂಡಿದ್ದ ಆಸಕ್ತಿ ; ಗುರುಗಳ ಬೋಧನೆಯ ಫಲ. ಒಟ್ಟಿನ ಮೇಲೆ, ವಿದ್ಯಾರ್ಥಿ ದಶೆಯಲ್ಲಿ ನಾನು ಬರೆದ ಕೃತಿಗಳಲ್ಲಿ ಬಾಲಿಶ ಎನ್ನಬಹುದಾದ ಕೆಲವು ಪದ್ಯಗಳನ್ನೂ, ಒಂದೆರಡು ಕಥೆಗಳನ್ನೂ, ಬಿಟ್ಟರೆ. ಉಳಿದವು ಆಧುನಿಕ ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ಕೃತಿಕಾರನಿಗೆ ಅಗ್ರಗಣ್ಯಸ್ಥಾನವನ್ನಲ್ಲದಿದ್ದರೂ, ಒಂದು ಗಣ್ಯ ಸ್ಥಾನವನ್ನು ದೊರಕಿಸಿಕೊಟ್ಟವು. ರಾಜರತ್ನಂ ಅವರು ತಮ್ಮ ಶಿಶುಗೀತೆಗಳಿಗೆ, ನನ್ನಿಂದ ಚಿತ್ರಗಳನ್ನು ಬರೆಯಿಸಿಕೊಳ್ಳದಿದ್ದರೆ,

ನಾನು ಬಹುಶಃ 'ಹೂವಾಡಗಿತ್ತಿ'ಯ 'ರಾಘವ'ನಾಗುತ್ತಿರಲಿಲ್ಲ! "ಕವಿರಾಜಮಾರ್ಗ"ವನ್ನು ಪಾಠ ಹೇಳಿದ ಪ್ರೊ. ವೆಂಕಣ್ಣಯ್ಯನವರು, 'ಪ್ರಜಾಮತ'ದ ಕಡೆಯಿಂದ ನನಗೆ 1931ರಲ್ಲಿ ವಿಮರ್ಶೆಗೆ ಬಂದಿದ್ದ 'ಕವಿರಾಜ ಮಾರ್ಗ'ವನ್ನು ವಿಮರ್ಶೆ ಮಾಡಲು ಮಾರ್ಗದರ್ಶನ ಮಾಡಿರದಿದ್ದರೆ ಬಹುಶಃ "ಕವಿರಾಜ ಮಾರ್ಗ"ವನ್ನು ಪರಿಷ್ಕರಿಸಿ ಸಂಪಾದನೆ ಮಾಡಲು ನನಗೆ ಪ್ರೇರಣೆಯುಂಟಾಗುತ್ತಿರಲಿಲ್ಲ. ಸಾಹಿತ್ಯ ನಿರ್ಮಾಣಕ್ಕೆ ಪ್ರೇರಣೆಕೊಟ್ಟ ಶಕ್ತಿಗಳಲ್ಲಿ ಗ್ರಂಥಗಳ ಪ್ರಭಾವದ ಜೊತೆಗೆ ಗುರುವರ್ಗದ ಉತ್ತೇಜನವೂ ಸೇರಿದೆ. ಈ ಗುರು-ಶಕ್ತಿಗಳಿಗೆ ನಮಸ್ಕಾರ.

ಹರೆಯದ ದೃಷ್ಟಿ-ಧೋರಣೆ

ಸಾಹಿತ್ಯದ ನಾನಾ ಪ್ರಕಾರಗಳಲ್ಲಿ ನಾನು ಬರೆಯುವಂತೆ ಪ್ರೇರಣೆ ನೀಡಿದ ಶಕ್ತಿಗಳ ವಿಚಾರ ಹೇಳಿದೆನಷ್ಟೆ. ಒಳ್ಳೆಯ ಪುಸ್ತಕ ಓದಿ, ಎಲ್ಲರೂ ಪ್ರಭಾವಿತರಾಗ ಬಹುದು. ಆದರೆ ಎಲ್ಲರೂ ಬರಹಗಾರರಾಗುವುದಿಲ್ಲ. "ಪ್ರತಿಭಾನಂ, ಕಾವ್ಯ ವಿದ್ಯಾಪ್ರಜಯ ಪರಿಚಯಂ, ವೃದ್ಧಸೇವಾನುರಾಗಂ, ಸತತಾಭ್ಯಾಸ ಪ್ರಯತ್ನಂ" ಇವು, "ನಿಯತಂ ಕವಿತೆಗೆ ಕಾರಣಂ". ಪ್ರತಿಭೆ ವ್ಯಕ್ತಪಡುವುದು ಅಸಾಧಾರಣವಾದ ಬರಹದ ಶಕ್ತಿಯಲ್ಲಿ. ಪ್ರತಿಭೆ ಎನ್ನುವುದು ಸಹಜವಾದ ಸೃಷ್ಟಿಕಾರ್ಯ ಸಾಮರ್ಥ್ಯ. ಕೆಲವರಲ್ಲಿ ಇದು ತೀವ್ರ ; ಕೆಲವರಲ್ಲಿ ಇದು ಮಂದ. ಅಂತೂ, ಈಗ ಹೇಳಿದ ಎಲ್ಲ ಕಾರಣಗಳೂ ನನ್ನ ಸಾಹಿತ್ಯ ಸೃಷ್ಟಿಗೆ ನೆರವಾಗಿವೆ. 'ನವೋದಯ' ಎನ್ನುವುದು, ಈಚೆಗೆ ಬಳಕೆಗೆ ಬಂದ ಮಾತು; ಆಗ 'ಆಧುನಿಕಸಾಹಿತ್ಯ' ಎನ್ನುವ ಮಾತು ಬಳಕೆಯ ಲ್ಲಿತ್ತು. ಸಾಹಿತ್ಯ ವಿಮರ್ಶೆಯಲ್ಲಿ ನಿರ್ದೇಶನ ಸೌಕರ್ಯಕ್ಕಾಗಿ ಬಳಸುವ ಮಾತುಗಳು ಇವು. ಈ ನವೋದಯ ಯುಗದಲ್ಲಿ ಬೆಳಕಿಗೆ ಬಂದ ತರುಣರ ಪೀಳಿಗೆಗೆ ಸೇರಿದವನು ನಾನು. ಮೈಸೂರು ಮಹಾರಾಜರವರ ಕಾಲೇಜಿನ ಕರ್ಣಾಟಕ ಸಂಘ ಪ್ರಕಟಿಸಿದ 'ಕಿರಿಯ ಕಾಣಿಕೆ' ಮತ್ತು 'ತಳಿರು' ಕವನ ಸಂಕಲನಗಳಲ್ಲಿ ಕಾಣಿಸಿಕೊಂಡ ಕುವೆಂಪು, ಪು. ತಿ. ನರಸಿಂಹಾಚಾರ್, ತೀ. ನಂ. ಶ್ರೀ, ಎಲ್. ಗುಂಡಪ್ಪ, ರಾಜರತ್ನಂ, ದಿನ ಕರ ದೇಸಾಯಿ-ಈ ಕವಿಗಳ ಬಳಗದಲ್ಲಿ ನನಗೂ ಎಡೆ ಕೊಟ್ಟಿತು ಸಂಘ. ಈ ಸಂಘಕ್ಕೆ ನಾನು ಕೃತಜ್ಞ. ಆ ಬಳಗಕ್ಕೆ ಸೇರಿದವನು ಎಂಬ ಕ್ಷಮ್ಯವಾದ ಹೆಮ್ಮೆ- ನನಗೆ. ಆ ಕಾಲದ ಕವಿಗಳಲ್ಲಿ ಕಂಡು ಬಂದ ಯುಗ ಲಕ್ಷಣಗಳೆಲ್ಲ-ಹೆಚ್ಚಾಗಿಯೋ, ಕಡಮೆಯಾಗಿಯೋ-ನನ್ನ ಕೃತಿಗಳಲ್ಲೂ ಕಂಡು ಬಂದಿವೆ. ಇವುಗಳಲ್ಲಿ ಪ್ರಕೃತಿ ಪ್ರೇಮ, ಪ್ರಕೃತಿಯ ಆರಾಧನೆ, ಒಂದು ಮುಖ್ಯ ಲಕ್ಷಣ. ಪ್ರಾಚೀನ ಸಂಸ್ಕೃತ-ಕನ್ನಡ ಕಾವ್ಯಗಳಲ್ಲಿ ನಮ್ಮ ಕವಿಗಳು ಪ್ರಕೃತಿಯನ್ನು ಕಂಡು ವರ್ಣಿಸುತ್ತಿದ್ದ ವಸ್ತುನಿಷ್ಠ ರೀತಿಗೂ ಇಂಗ್ಲಿಷ್ ರೊಮ್ಯಾಂಟಿಕ್ ಕವಿಗಳು ವರ್ಣಿಸುತ್ತಿದ್ದ ವ್ಯಕ್ತಿನಿಷ್ಠ-

ಸ್ವಾನುಭವ ಪ್ರಧಾನವಾದರೀತಿಗೂ ಇದ್ದ ವ್ಯತ್ಯಾಸ, ಭಾಷೆ ಮತ್ತು ನಿರೂಪಣೆಗಳಲ್ಲಿ ಇದ್ದ ವ್ಯತ್ಯಾಸ, "ಶ್ರೀ" ಯವರ ಇಂಗ್ಲಿಷ್ ಗೀತಗಳನ್ನು ಓದಿದ ಮೇಲೆ ಮನವರಿಕೆಯಾಯಿತು. ಪ್ರಕೃತಿ ಮಾತ್ರವಲ್ಲದೆ, ಗಂಡು-ಹೆಣ್ಣಿನ ಪ್ರಣಯ, ಸಾಮಾನ್ಯ ಜನಜೀವನದಿಂದ ಕಾವ್ಯವಸ್ತುವನ್ನು ಆಯ್ದುಕೊಳ್ಳುವುದು, ಈ ವಿಷಯದಲ್ಲಿಯೂ ಆಂಗ್ಲ ಕವಿಗಳೇ ನನ್ನ ಆದರ್ಶ. ನನಗೆ ಇಷ್ಟವಾದ, ಕೆಲವು ಇಂಗ್ಲಿಷ್ ಕವನಗಳನ್ನು ಅಂದು-ಇಂದೂ ಅನುವಾದ ಮಾಡಿದ್ದೇನೆ. ಇಂಗ್ಲಿಷ್ ಕವಿಗಳಲ್ಲಿ ವರ್ಡ್ಸ್‌ವರ್ತ್ ನನಗೆ ಹೆಚ್ಚು ಪ್ರಿಯ. ನಾನು, ಮಲೆನಾಡಿನ ಮಗುವಲ್ಲ; ಮೈಸೂರಿನಲ್ಲಿ ಹುಟ್ಟಿ ಬೆಳೆದವನು. ಅಲ್ಲಿನ ಸುಂದರ ಕೃತಕೋದ್ಯಾನಗಳಲ್ಲಿ ವಿಹರಿಸಿದವನಾದರೂ, ನನ್ನ ಕಣ್ಣಿಗೆ ನಿತ್ಯವೂ ಬೀಳುತ್ತಿದ್ದ, ನಿಸರ್ಗದ ನೋಟವೆಂದರೆ—ವಿಶಾಲವಾದ ನೀಲಾಕಾಶ; ನಮ್ಮ ಮನೆಯ ಬಿಸಿಲುಮುಚ್ಚಿನ ಮೇಲೆ ನಿಂತು ನೋಡಿದರೆ ಕಾಣುತ್ತಿದ್ದ, ಚಾಮುಂಡಿಬೆಟ್ಟದ ಮೇಲ್ಭಾಗ; ಅದರ ಮೇಲೆ ಹಾದು ಹೋಗುತ್ತಿದ್ದ ಮೋಡದ ದಿಬ್ಬಣ; ಕಾಲೇಜು ಮೈದಾನದ ಪಡುಗಡೆಯ ಅಂಚಿನಲ್ಲಿ ರಂಜಿಸುತ್ತಿದ್ದ ಸಂಜೆಗೆಂಪಿನ ಸಿರಿವಂತಿಕೆ; ಹಿತ್ತಲ ಮೂಲೆಯ ದಾಳಿಂಬೆ ಮರದ ಸಿಂಧೂರ ವರ್ಣದ ದಾಳಿಂಬೆ ಹೂ; ಆ ಮರದ ಕೊಂಬೆ-ಕಡ್ಡಿಗಳ ಮೇಲೆ ಕುಳಿತು, ಬಗೆ-ಬಗೆಯ ದನಿ-ಹೂಗಳನ್ನರಳಿಸುತ್ತಿದ್ದ, ಹೆಸರರಿಯದ ಹಾಡು-ಹಕ್ಕಿಗಳು—ಇಷ್ಟೇ—, ನನ್ನ ಸಂಕುಚಿತ ನಿಸರ್ಗ ಪ್ರಪಂಚ. ಮೋಡಗಳು ನನ್ನ 'ಮುಗಿಲುಗಳು' ಎಂಬ ಪ್ರಬಂಧ ಅಲ್ಲದೆ ಅನೇಕ ರಚನೆಗಳಿಗೆ ವಸ್ತು. ನನ್ನ ಒಂದು ಕಥೆಯ ಹೆಸರು 'ಮೋಡದ ದಿಬ್ಬಣ'. ನನ್ನ ಬಗೆ ಬಾನಿನಲ್ಲಿ ರೂಪಗೊಂಡಿತು. "ಮೇಘಲಿಂಗ"; ಬಿಡು ಬೀಸಿನ ಪಾಠ ಕಲಿಸಿತು. "ತೆವಳು ಮೋಡ". ನಾನು, ಈಗಲೂ ಮೇಘಲೋಕ ನಿರತ. "ಮೇಘಾಲೋಕೇ ಭವತಿ ಸುಖಿನೋಽಪ್ಯನ್ಯಥಾ ವೃತ್ತಿ ಚೇತಃ" ಎಂದಿರುವನಲ್ಲವೆ ಕಾಳಿದಾಸ? ನನ್ನ "ಅನ್ಯಥಾ ವೃತ್ತಿ" ಸಾಹಿತ್ಯದ ಮೂಲಕ ಸತ್ಯಾನ್ವೇಷಣೆ; ಸೌಂದರ್ಯ ದರ್ಶನ.

ನಾನು ವಿದ್ಯಾರ್ಥಿಯಾಗಿದ್ದಾಗ, ರಾಜರ ಆಳ್ವಿಕೆಯಲ್ಲಿದ್ದ ಮೈಸೂರು ಸಂಸ್ಥಾನದಲ್ಲಿ ಸ್ವಾತಂತ್ರ್ಯ ಸಂಗ್ರಾಮದ ಗಾಳಿ ಅಷ್ಟೇನೂ ಬಲವಾಗಿ ಬೀಸುತ್ತಿರಲಿಲ್ಲ. ಗಾಂಧೀಜಿ ಮೈಸೂರಿಗೆ ಬಂದಿದ್ದಾಗ ಅವರ ದರ್ಶನ ಮಾಡಿದ ಮೇಲೆ, ಇತರ ಕೆಲವು ವಿದ್ಯಾರ್ಥಿಗಳಂತೆ ಖಾದಿ ಧರಿಸತೊಡಗಿದೆ. ಮಹಾತ್ಮಗಾಂಧೀಜಿಯವರೇ ಮೈಸೂರು ರಾಜ್ಯವನ್ನು "ರಾಮರಾಜ್ಯ" ಎಂದು ಕರೆದು, ರಾಜ್ಯವನ್ನೂ—ರಾಜರನ್ನೂ ಮೆಚ್ಚಿಕೊಂಡಿದ್ದರು. ಬಿ. ಎಂ. ಶ್ರೀ. ಮುಂತಾದವರು ಅಪ್ಪಟ ರಾಜಭಕ್ತರಾಗಿದ್ದರು. ಕೃಷ್ಣರಾಜ ಒಡೆಯರ ಆಳ್ವಿಕೆಯ ರಜತ ಮಹೋತ್ಸವದ ಪ್ರಗಾಥವನ್ನೂ ರಚಿಸಿದ್ದರು. ಕೆ. ವಿ. ಪುಟ್ಟಪ್ಪನವರು ಕೂಡ "ಬೆಳ್ಳಿಯ ಹಬ್ಬದ ಕಬ್ಬದ ಬಳ್ಳಿ" ಯನ್ನು ಹಬ್ಬಿಸಿದ್ದರು. ನನ್ನ ತಾತ-ಮುತ್ತಾತಂದಿರ ಕಾಲದಿಂದ

ನಮ್ಮ ಮನೆತನ ಅರಮನೆಯ ಆಶ್ರಯದಲ್ಲಿ ಬೆಳೆದುದು. ನನ್ನ ತಂದೆಯ ಕಾಲದಲ್ಲಿ ಆ ಉದಾರ ಆಶ್ರಯ ನಿಂತುಹೋಯಿತು. ಅವರು, ಅರಮನೆಯ ಕಚೇರಿಯ ಸಿಬ್ಬಂದಿ ವರ್ಗದಲ್ಲಿ ಹತ್ತಿಪ್ಪತ್ತು ರೂಪಾಯಿ ಸಂಬಳದ ಗುಮಾಸ್ತರು. ದೊಡ್ಡ ಸಂಸಾರದ ಹೊಣೆ ; ಸಾಲದ ಹೊರೆ. ಕುಟುಂಬ ದಟ್ಟದಾರಿದ್ರ್ಯಕ್ಕೆ ಸಿಲುಕಿರ ದಿದ್ದರೂ, ಬಡ ಕುಟುಂಬ ಎಂದೇ ಹೇಳಬೇಕು. ನಾನು ಹುಟ್ಟಿ ಬೆಳೆದ ಮೈಸೂರಿನ ಹಳೆಯ ಅಗ್ರಹಾರದ ಹಾರುವರ ಕೇರಿಯ ನಿವಾಸಿಗಳೆಲ್ಲ ಕಡು ಬಡವರೇ. ನಮ್ಮ ಬೀದಿಯಲ್ಲಿ ಓಡಾಡುತ್ತಿದ್ದವರೆಲ್ಲ ಇನ್ನೂ ಬಡವರು. ಇವರ ಪ್ರತಿನಿಧಿಗಳೇ ನನ್ನ "ಜೀವನ ನಾಟಕ' ಕೃತಿಯ ಪಾತ್ರವರ್ಗ. ಪ್ರತಿನಿತ್ಯವೂ ಬಡತನದ ಕಣ್ಣು ಕುಕ್ಕುವ ನೋಟಗಳನ್ನು ಕಾಣುತ್ತಿದ್ದ ಅಂದಿನ ಬಡ ವಿದ್ಯಾರ್ಥಿಗೆ–ರಾಮಕೃಷ್ಣ ಪರಮಹಂಸ, ಮಹಾತ್ಮಗಾಂಧಿ, ಇವರ ಉಪದೇಶಗಳ ಪ್ರಭಾವಕ್ಕೆ ಒಳಗಾಗಿ, ವಿಶಾಲ ಮನೋ ಧರ್ಮದ ಮಾನವೀಯತೆಯ ಭೂಮಿಕೆಯಲ್ಲಿ ನಿಂತು, ಸರ್ವ ಸಮಾನತೆಯ ಕನಸು ಕಾಣುತ್ತಿದ್ದ, ಆದರ್ಶವಾದಿ ತರುಣ ಕವಿಗೆ—ಫ್ರಾನ್ಸಿನ ಮಹಾಕ್ರಾಂತಿಯ ವಿಚಾ ರವೂ, ರಷ್ಯದ 1917ರ ಅಕ್ಟೋಬರ್ ಕ್ರಾಂತಿಯೂ–ಅಂದಿನ ಪೀಳಿಗೆಯ ಅನೇಕ ವಿದ್ಯಾವಂತ ತರುಣರಿಗೆ ಕಾಣಿಸಿಕೊಟ್ಟಂತೆ, ನನಗೂ ಒಂದು ನೂತನ ಸಮಾಜ ನಿರ್ಮಾಣದ ಕನಸನ್ನು ಕಾಣಿಸಿಕೊಟ್ಟಿತು. ಈ ಕಾಲದಲ್ಲಿ, ನನ್ನ ಮನೆತನಕ್ಕೆ ಬಂದ ರಾಜನಿಷ್ಠೆ ಮರೆಯಾಯಿತು ; ಆಸ್ತಿಕ್ಯ ಸಡಿಲಗೊಂಡಿತು ; ನನ್ನ ಕುಲಧರ್ಮಕ್ಕೆ ಹೇಳಿದ ಸಾಂಪ್ರದಾಯಿಕ ಆಚಾರ–ವಿಚಾರಗಳಲ್ಲಿ ನಂಬಿಕೆ ಉಡುಗಿ, ಹಿರಿಯರ ಮನಸ್ಸು ನೋಯಿಸಲಾರದೆ ಕಾಟಾಚಾರಕ್ಕೆ ಅವುಗಳನ್ನು ಅನುಸರಿಸುತ್ತಿದ್ದೆ. ನನ್ನಲ್ಲಿ ಸಹಜವಾಗಿಯೇ ಇದ್ದ ಮತಾತೀತವಾದ ವಿಶಾಲ ಮನೋಭಾವ. ಮಾನ ವೀಯ ದೃಷ್ಟಿ, ದೃಢಗೊಂಡುವು. ದೀನದಲಿತರಲ್ಲಿ, ಪತಿತರಲ್ಲಿ, ನನ್ನ ಅನುಕಂಪೆ ಬಲವಾಯಿತು. "ಬೀದಿಯೊಳಗಲೆಯುತಿಹಳಾರಿವಳು ಚೆಲುವೆ" ಎಂಬ ನನ್ನ ಪ್ರಾರಂಭ ಕಾಲದ ಪದ್ಯವೊಂದರಲ್ಲಿ ಈ ಅನುಕಂಪೆ ಪ್ರಕಟವಾಯಿತು. ಇದು "ತಳಿರು" ಸಂಕಲನದಲ್ಲಿ ಪ್ರಕಟವಾಗಿದೆ. ನಮ್ಮ ಬೀದಿಯ ಜನ ಮುಸ್ಲಿಮ್ ತಿರುಪೆಯ ಹುಡುಗಿ ಒಬ್ಬಳಿಗೆ—"ಬೇರೆ ಮತದವಳೆಂದು ಭಿಕ್ಷೆಯನು ಕೊಡರು, ದೂರನಡೆ, ತೊಲಗೆಂದು ಗದರಿಸುವರು"—, "ತಮ್ಮಂತೆ ಜೀವಿಯೆಂದೆಣಿಸದಿಹರು", ಎಂಬ ಸನ್ನಿವೇಶವನ್ನು ಕಂಡು ಕೊರಗಿದೆ. ಸನ್ನಿವೇಶ ಬೇರೆಯೇ ಆದರೂ ಈ ಹುಡುಗಿಯ ಚೆಲುವಿನ ವರ್ಣನೆಯ ಸಾಲುಗಳಲ್ಲಿ "King Copheuta and The Beggar Maid" ಎಂಬ ಕವಿತೆಯ ಪ್ರಭಾವವನ್ನು ಯಾರೂ ಗುರುತಿಸಬಹುದು.

ಬಿಳಿತೊನ್ನಿನ ಬಾಲಕನೊಬ್ಬನನ್ನು ಇತರ ಬಾಲಕರು ದೂರವಿಡುತ್ತಿದ್ದುದು ನನಗೆ ತುಂಬಾ ವ್ಯಥೆಯುಂಟುಮಾಡಿತು. ಆ ಸಂದರ್ಭದಲ್ಲಿ ರಚಿತವಾದದ್ದು ನನ್ನ "ಬಗೆದಂತೆ ಬಾಳು" ಎಂಬ ಸಣ್ಣ ಕಥೆ. ಬೆಂಗಳೂರು ಸೆಂಟ್ರಲ್ ಕಾಲೇಜು ಕರ್ನಾ

ಟಕ ಸಂಘದ ಮುದ್ದಣ ಸ್ವರ್ಣಪದಕ ಕಥಾ ಸ್ಪರ್ಧೆಯಲ್ಲಿ ಎರಡನೆಯ ಬಹುಮಾನ ಪಡೆಯಿತು. ಇಂಥ ಸನ್ನಿವೇಶಗಳಲ್ಲಿ ಕೃತಿ ರಚನೆಯ ಮೂಲಕ ಅನುಕಂಪವನ್ನು ವ್ಯಕ್ತಪಡಿಸುವುದು ಸುಲಭ. ಎಷ್ಟೋ ಇನ್ನಿತರ ಸಂದರ್ಭಗಳಲ್ಲಿ, ನನ್ನ ನಂಬಿಕೆ—ನಿಷ್ಠೆಗಳನ್ನು ಕಾರ್ಯತಃ ಆಚರಣೆಗೆ ತರುವಲ್ಲಿ ಮಾತ್ರ, ನಾನು ಸೋತಿದ್ದೆ–ಎಂದು ಕಾಣುತ್ತದೆ. ಅಂದಿನ ವಾತಾವರಣ ಅಂಥದು. ಸಮಾಜದ ಕಟ್ಟು ಕಟ್ಟಲೆಗಳನ್ನು ಎದುರಿಸಿ ತನ್ನ ಮನಸ್ಸಾಕ್ಷಿಯಂತೆ ನಡೆದುಕೊಳ್ಳಲು. ಇಂದಿನ ತರುಣ ಪೀಳಿಗೆಗೆ ಸುಲಭವಾಗಿರುವಷ್ಟು, ಅಂದಿನ ಪೀಳಿಗೆಗೆ ಸುಲಭವಾಗಿರಲಿಲ್ಲ. ಧರ್ಮಸಂಕಟದ ಇಕ್ಕಳಕ್ಕೆ ಸಿಲುಕಿ ಒದ್ದಾಡುತ್ತಿದ್ದೆವು. ಇಂಥ ಸನ್ನಿವೇಶದಲ್ಲಿ ಮೂಡಿ ಬಂದದ್ದು ಈ ಕವನ :

ಜಾತಿಮತಗಳ ಹೊದಿಕೆಯನು ತೆಗೆದು ಹರಿದು
ಕುಲಗೋತ್ರವೆಂಬ ಹುಸಿ ಹೆಸರ ಕಿತ್ತೊಗೆದು
ಪ್ರೀತಿಗೆಲ್ಲರು ಒಂದೆ ಎಂಬುದನು ಅರಿದು
ಬಳಗ ಬಂಧುಗಳೆಂಬ ಭಾವನೆಯ ತೆಗೆದು
ಮಾತೆಯೊಬ್ಬಳ ಮುಂದೆ ಭೇಧವನು ಮರೆದು
ಬಾಳು 'ಧರ್ಮ' ದಲೆಂಬ ದನಿಯ ಕೇಳಿವೆನು :
ಹೃದಯದೊಳದನಿಯು ಅದು, ದಿವ್ಯದನಿಯು.
ಕೇಳಿದಂತೆಯೇ ನಡೆಯೆ, ಎಲ್ಲವನು ತೊರೆದು,
ಎದೆಯಿಲ್ಲ, ಎದೆಯಿಲ್ಲ, ಸುಮ್ಮನಿಹೆನು.
ಹಾಳಾದ ಈ ಹುಟ್ಟು,—ಕಬ್ಬಿಣದ ಕಟ್ಟು :
ಆದ ಮುರಿದು ಬಿಸುಡುವೆನು, ಎಲ್ಲವನು ಸುಟ್ಟು :
ನಡೆಯಿಸೆನ್ನನು ದೇವ ಶಕ್ತಿಯನು ಕೊಟ್ಟು.

ಇದು ನನ್ನೊಬ್ಬನ ಎದೆಗುದಿಯಾಗಿರಲಿಲ್ಲ. ಬಹುಶಃ ಮೇಲುಜಾತಿಯವರು ಎನಿಸಿಕೊಂಡಿದ್ದ ಎಲ್ಲ ತರುಣರನ್ನೂ ಬಾಧಿಸುತ್ತಿದ್ದ ಧರ್ಮ ಸಂಕಟ. 'ಧರ್ಮ' ಬೇರೆ, 'ಜಾತಿ' ಬೇರೆ—ಎಂಬ ವಿವೇಕ ಜಾಗೃತವಾದದ್ದರಿಂದಲೇ ಆ ತೊಳಲಿಕೆ. ಈ ಜಾತಿ ಸಮಸ್ಯೆ ಈಗಲೂ ನನ್ನನ್ನು ಕಾಡುತ್ತಿದೆ. ಅದಕ್ಕೆ ಸಂಬಂಧಪಟ್ಟಂತೆ ಒಂದು ಕಾದಂಬರಿ ಕಲ್ಪನೆಯಲ್ಲಿ ರೂಪಗೊಂಡು ಸಿದ್ಧವಾಗಿದೆ. ಬರೆಯುವುದಕ್ಕೆ ವ್ಯವಧಾನವಾಗಿಲ್ಲ. ಈ ಪದ್ಯದ ಸಂದರ್ಭದಲ್ಲಿ ನಡೆದ ಒಂದು ಸ್ವಾರಸ್ಯದ ಸಂಗತಿ ಎಂದರೆ, ಇದು ನಮ್ಮ ಬೆಂಗಳೂರು ಆಕಾಶವಾಣಿ ಕೇಂದ್ರದಲ್ಲಿ ಪ್ರಸಾರವಾದಾಗಲೆಲ್ಲ, 'ಕುವೆಂಪು ರಚಿಸಿದ್ದು' ಎಂದು ಹೇಳಲಾಗುತ್ತಿದೆ. ಕುವೆಂಪು ಅವರನ್ನು ಈ ಧರ್ಮ ಸಂಕಟಕ್ಕೆ ಸಿಲುಕಿಸುವುದು ಸರಿಯಲ್ಲ.

ಸೌದೆ ಒಡೆಯುವುದು, ಬಾವಿಯಿಂದ ನೀರು ಸೇದುವುದು, ಗಂಟು–ಮೂಟೆ ಹೊರುವುದು, ಬಟ್ಟೆ ಒಗೆದುಕೊಳ್ಳುವುದು, ದೂರ ನಡೆಯುವುದು, ಮುಂತಾದ ಕಾಯಕಷ್ಟದ ಕೆಲಸಗಳನ್ನು ಚಿಕ್ಕಂದಿನಲ್ಲಿ ಸಮಯ ಬಿದ್ದಾಗ ಮಾಡಿದ್ದೇನೆ. ಆದ್ದರಿಂದ, ದೇಹಶ್ರಮದ ಕೆಲಸ ಮಾಡುವವರ ಬಗೆಗೆ ಎಂದಿನಿಂದಲೂ ನನಗೆ ಮೆಚ್ಚುಗೆ, ಗೌರವ, ಕನಿಕರ. ಅಂದಿನ ದಿನಗಳಲ್ಲಿ ಇಂದಿನಷ್ಟು ಕೂಲಿ ಸಿಕ್ಕುತ್ತಿರಲಿಲ್ಲ ದುಡಿಯುವ ಜನಕ್ಕೆ. ಕೈಲಾಗದಿದ್ದರೂ ಹೊಟ್ಟೆಯ ಪಾಡಿಗಾಗಿ ಕಟ್ಟಿಗೆ ಸೀಳುತ್ತಿದ್ದ ಒಬ್ಬ ಮುದುಕನನ್ನು ಕಂಡಾಗ, ಬಡವರ ಬಗೆಗೆ ಮರುಕ, ಸಿರಿವಂತರ ಮೇಲೆ ಆಕ್ರೋಶ—ಒಂದು ಕವನದಲ್ಲಿ ಉಕ್ಕಿಬಂದುವು. ಈ ಕವನ ರಚನೆಯ ಸಂದರ್ಭದಲ್ಲಿ ನಾನು ಓದಿದ್ದ Burns ಕವಿಯ Song of the Shirt ಎಂಬ ಪದ್ಯ ಪ್ರೇರಕ ಶಕ್ತಿಯಾಗಿತ್ತು. ನನ್ನ ಕವನದ ಕೆಲವು ಪಂಕ್ತಿ ಹೀಗಿವೆ :

ಕಡಿದೂ ಕಡಿದೂ ಸೌದೆಯ ಕಡಿದು
ದುಡಿದೂ ದುಡಿದೂ ದಿನವೂ ದುಡಿದು
ಇಂದಿನವರೆಗೂ ಹೊಟ್ಟೆಯ ಹೊರೆದು
ಹೆಂಡತಿ ಮಕ್ಕಳನೆಲ್ಲರ ಪೊರೆದು
ಬಾಳುತಿಹನೀ ನರಕದ ಬದುಕ—
ನೋಡಮ್ಮೊ ಸೌದೆಯ ಕಡಿಯುವ ಮುದುಕ.

* * *

ಮನೆಮನೆಗಲೆಯುತ ನಿತ್ಯವು ದುಡಿವರೆ
ತನ್ನಯ ಬಾಳನು ಬಲಿಗೊಟ್ಟು
ಸಿರಿವಂತರ ಸಿರಿಗಡಲಿಂದವನಿಗೆ
ಸಿಕ್ಕುವುದೊಂದೇ ಒಂದು ತೊಟ್ಟು !
ಜಿಗಣೆಯ ತೆರದಿ ಕುಬೇರನ ಕುವರರು
ಬಡಬಗ್ಗರ ಎದೆರಕ್ತವ ಹೀರಿ
ಆಳ ಆಳದಲಿ ಬೇರೂರಿ
ಯುಗ ಯುಗವಾಯ್ತು, ಬೆಳೆಯುತಲಿಹರು
ದೊಡ್ಡ ಕಾಡಾಗಿ
ಅಧರ್ಮದ ಬೀಡಾಗಿ.
ಸುಮ್ಮನೆ ಬಿಡುವುದೆ ಈ ಕಾಡನ್ನು
ಬಡವನ ಬಡ ಕೊಡಲಿಯ ಪೆಟ್ಟು ?
ಮಲಗಿಹ ಅವನೆದೆ ಕೋಪದ ಕಿಚ್ಚು
ನೆಲಸಮ ಮಾಡದೆ ಕೊನೆಗದ ಸುಟ್ಟು ?

"ಕವಳ ತಾಯಿ" ಎಂಬ ನನ್ನ ಇನ್ನೊಂದು ಕವನದಲ್ಲೂ, ಬಡತನದ ಬವಣೆಯ ಚಿತ್ರವಿದೆ. ಸಿರಿವರಿತನಿಗೆ ಎಚ್ಚರಿಕೆ ಇದೆ. ಈ ಎರಡು ಕವಿತೆಗಳೂ ಸೇರಿದಂತೆ, 1926ರಿಂದ 1943ರವರೆಗೆ ರಚಿತವಾದ ಬಹು ಸಂಖ್ಯೆಯ ಕವನಗಳು–"ರಾಘವ" ಎಂಬ ಕಾವ್ಯನಾಮದೊಂದಿಗೆ–1944ರಲ್ಲಿ "ಹಕ್ಕಿಹಾಡು" ಸಂಕಲನವಾಗಿ ಪ್ರಕಟವಾದವು. ನನ್ನ ಕಾವ್ಯ ಜೀವನದಲ್ಲಿ ಈ ವರ್ಷ ಮುಖ್ಯವಾದ ಒಂದು ಘಟ್ಟ. "ಕಾವ್ಯಾಲಾಪ", 40-50 ಪದ್ಯಗಳ ಒಂದು ತೀರ ಚಿಕ್ಕ ಪುಸ್ತಕ. ಪುಸ್ತಕ ಚಿಕ್ಕದಾದರೂ, ಅದರ ಪರಿಣಾಮ, ಅಂದಿನ ಸಾಹಿತ್ಯ ಪ್ರಪಂಚದಲ್ಲಿ ತಕ್ಕ ಮಟ್ಟಿಗೆ ಆಯಿತು. ಬಡತನದ ಬಗೆಗೆ ನನ್ನ ಅನುಕಂಪದ ವಿಚಾರವನ್ನು ಈಗ ತಾನೇ ಪ್ರಸ್ತಾಪಿಸಿದ್ದೇನೆ. ಅದರ ಹಿನ್ನೆಲೆಯನ್ನೂ ಕುರಿತು ಹೇಳಿದ್ದೇನೆ. ರಷ್ಯದ ಅಕ್ಟೋಬರ್ ಕ್ರಾಂತಿಯ ಪ್ರಭಾವ ನನ್ನ ಮೇಲಾಗಿದ್ದರೂ, ನಾನು ಕಮ್ಯುನಿಸಮ್ಮಿನ ಸಿದ್ಧಾಂತವನ್ನು ಪೂರ್ತಿ ಒಪ್ಪಿರಲಿಲ್ಲ. ಮಹಾತ್ಮರು ಬೋಧಿಸಿದ ಅಹಿಂಸಾಯುತ ಕ್ರಾಂತಿಯಲ್ಲಿ ನನ್ನ ನಿಷ್ಠೆ ದೃಢವಾಗಿ ನೆಲೆಸಿತ್ತು. 1942-43ರ ಸುಮಾರಿನಲ್ಲಿ, ಭಾರತದ ಎಲ್ಲಾ ಪ್ರಾಂತಗಳ ಸಾಹಿತ್ಯದಲ್ಲೂ, ಪ್ರಗತಿಶೀಲ ಸಾಹಿತ್ಯದ ಚಳವಳಿ ಜೋರಾಗಿ ಪ್ರಾರಂಭವಾಗಿತ್ತು. ಸಾಹಿತ್ಯ ಬಡವರ ಬವಣೆಯನ್ನು ಚಿತ್ರಿಸಬೇಕು, ಆ ಮೂಲಕ ಸರ್ವ ಸಮಾನತಾ ತತ್ವವನ್ನು ಪ್ರತಿಪಾದಿಸಬೇಕು–ಎಂಬ ನಿಲುವಿನಲ್ಲಿ ತಪ್ಪೇನೂ ಇಲ್ಲ. ಪ್ರಗತಿಶೀಲ ಪಂಥದ ಬರಹಗಾರರು ಇಷ್ಟಕ್ಕೇ ನಿಲ್ಲದೆ, ಸಮಕಾಲೀನ ಕವಿಗಳು ನಿಸರ್ಗದ ವರ್ಣನೆ ಮಾಡುತ್ತಿದ್ದುದನ್ನೂ ಪ್ರಾಚೀನ ಸಾಂಸ್ಕೃತಿಕ ಪರಂಪರೆಯಲ್ಲಿ ನಿಷ್ಠೆಯುಳ್ಳವರಾಗಿದ್ದುದನ್ನೂ ಕಟುವಾಗಿ ಟೀಕಿಸಿದರು ; ಈ ಕವಿಗಳು ದಂತದ ಗೋಪುರದಲ್ಲಿ ಕುಳಿತು ಬರೆಯುವವರು–ಎಂದು ಹಾಸ್ಯ ಮಾಡಿದರು : ಇವರು ಪ್ರಗತಿಶೀಲರ ದೃಷ್ಟಿಯಲ್ಲಿ ಪ್ರತಿಗಾಮಿಗಳಾದರು. ಹರೆಯದ ಬಿಸಿರಕ್ತದ 'ರಾಘವ'ನಿಗೆ ಇದು ಸಹಿಸಲಿಲ್ಲ. ಪ್ರಗತಿಶೀಲ ಸಾಹಿತ್ಯದ ನಿಲುವನ್ನು ಪದ್ಯರೂಪದಲ್ಲಿ ಪ್ರತಿಭಟಿಸುತ್ತಾ, ಆ ಗುಂಪಿನೊಂದಿಗೆ ಬಹುಮಟ್ಟಿಗೆ ಏಕಾಂಗಿಯಾಗಿಯೇ ಹೋರಾಡಿದನು. 'ಕಾವ್ಯಾಲಾಪ' ಪ್ರಕಟವಾದ ಕೂಡಲೆ ಅದಕ್ಕೆ ಪ್ರತಿಕ್ರಿಯೆಯಾಗಿ "ವ್ಯರ್ಥಾಲಾಪ"ವೂ, ಪ್ರಗತಿಶೀಲ ಸಾಹಿತ್ಯಕ್ಕೆ ನಿಷ್ಠನಾಗಿದ್ದ ಕವಿಯಿಂದ ಹೊರಬಂದಿತು. ಕಾವ್ಯಾಲಾಪದ ಪದ್ಯಗುಚ್ಛ, ಪ್ರಗತಿಶೀಲ ಚಳವಳಿಯ ಮುಖ್ಯ ಆಪಾದನೆಗಳನ್ನು ನಿಮಿತ್ತ ಮಾಡಿಕೊಂಡು ರಚಿತವಾಗಿದ್ದರೂ, ಕಾವ್ಯದ ಸ್ವರೂಪ, ಕಾವ್ಯದ ವಸ್ತು, ಕಾವ್ಯದ ಕಾರ್ಯ, ಕಾವ್ಯದಲ್ಲಿ ಹೊಸತು–ಹಳತರ ಪ್ರಶ್ನೆ, ಕಾವ್ಯದ ಮಹಿಮೆ, ಮುಂತಾಗಿ ಪ್ರಾಚೀನ ಕವಿಗಳು ಕಾವ್ಯದ ಪೀಠಿಕಾ ಪ್ರಕರಣದಲ್ಲಿ ಏನೆಲ್ಲ ನಿರ್ವಚಿಸುತ್ತಿದ್ದರೋ ಅದೇ ಮಾದರಿಯಲ್ಲಿ ಸ್ವತಂತ್ರವಾಗಿ, ಸಮಕಾಲೀನ ಸಂದರ್ಭಕ್ಕೆ ಅನುಗುಣವಾಗಿ, ರಚಿತವಾದದ್ದು. ಒಟ್ಟಿನಲ್ಲಿ, ಈಗ ನವೋದಯ ಕಾವ್ಯ ಎನ್ನುವ ಕಾಲದ ಕವಿಗಳ ಕಾವ್ಯದ ಸಮರ್ಥನೆ ಕಾವ್ಯಾಲಾಪದಲ್ಲಿದೆ. ಕಾವ್ಯತತ್ವದ

ಜಿಜ್ಞಾಸೆಯ ಕೆಲವು ಮುಖ್ಯ ವಿಚಾರಗಳು ಕಾವ್ಯಾಲಾಪದಲ್ಲಿ ಹಾಸುಹೊಕ್ಕಾಗಿ ಬಂದಿವೆ. ಪ್ರಗತಿಶೀಲ ಸಾಹಿತ್ಯದ ಚಳವಳಿ "ಕಾವ್ಯಾಲಾಪ"ದಿಂದ ತಣ್ಣಗಾಯಿತು ಎಂದು ತಿಳಿಯಬಾರದು. ಅದರ ಸಿದ್ಧಾಂತದ ತಳಹದಿಯೇ ಕಾವ್ಯತತ್ವಕ್ಕೆ ವಿರುದ್ಧವಾದದ್ದರಿಂದ ಬೇಗನೆ ನಿಂತುಹೋಯಿತು. ರಾಜಕೀಯ ಉಪಾಧಿಗೆ ಬದ್ಧವಾದದ್ದರಿಂದ, ಕಾವ್ಯವಸ್ತುವಿನ ಆಯ್ಕೆಗೆ ಸ್ವಯಂಕಲ್ಪಿತವಾದ ನಿರ್ಬಂಧ ಏರ್ಪಟ್ಟು, ಬಡತನದ ಚಿತ್ರಣದ ಸಾಧ್ಯತೆಗಳೂ ಮುಗಿದು ಹೋಗಿ, ಅಶ್ಲೀಲ ವಸ್ತುವಿನ ವಿನ್ಯಾಸವೂ, ಪ್ರಗತಿಯ ಚಿಹ್ನೆ ಎನ್ನುವ ಕಡೆಗೂ ಚಳವಳಿ ವಾಲಿತು ಹೊಸಗನ್ನಡ ಸಾಹಿತ್ಯದ ಚರಿತ್ರೆಯಲ್ಲಿ ಇದೊಂದು ಪ್ರಮುಖ ಘಟ್ಟ. ಇದರಲ್ಲಿ ನನ್ನ ಪಾತ್ರವೂ ಪ್ರಮುಖವಾಗಿತ್ತು ಎಂಬ ಸಂಗತಿಯನ್ನು ಆಗಿನವರೇ—"ಕಾವ್ಯಾಲಾಪ" ಮತ್ತು "ಹಕ್ಕಿಹಾಡ"ನ್ನು ಸಹೃದಯತೆಯಿಂದ ವಿಮರ್ಶಿಸಿದ ಮಾಸ್ತಿ ಮುಂತಾಗಿ ಕೆಲವರ ಹೊರತು ಉಳಿದ ಅನೇಕ ಸಾಹಿತಿಗಳೇ ಗಮನಿಸಲಿಲ್ಲ–ಎಂದು ನಾನು ತಿಳಿದಿದ್ದೇನೆ. ನನ್ನ ತಿಳಿವಳಿಕೆ ತಪ್ಪಾಗಿರುವುದೂ ಸಾಧ್ಯ. ಅದು ಹೇಗಾದರೂ ಇರಲಿ, ಈವರೆಗಿನ ನನ್ನ ಸಾಹಿತ್ಯ ಸೃಷ್ಟಿಯಲ್ಲಿ ರಾಷ್ಟ್ರೀಯ ಪ್ರಜ್ಞೆ ಅಷ್ಟು ಪ್ರಮುಖವಾಗಿರಲಿಲ್ಲ ; ಪದ್ಯಕ್ಕೆ ಹೋಲಿಸಿದರೆ, ಗದ್ಯ ಸಾಹಿತ್ಯದ ಸೃಷ್ಟಿಯೂ ಕಡಮೆಯೇ. ವಾಸ್ತವವಾಗಿ, ಇದು ಕನ್ನಡದ ಹೊಸ ಸಾಹಿತ್ಯ ಸೃಷ್ಟಿಯ ಪ್ರಾರಂಭದ ಲಕ್ಷಣವೇ ಆಗಿತ್ತು ಎನ್ನಬಹುದು. ಮುಂದಿನ ವರ್ಷಗಳಲ್ಲಿ ನಾನು ಪದ್ಯರಚನೆಯನ್ನು ಮುಂದುವರಿಸಿಕೊಂಡು ಹೋದರೂ, ಗದ್ಯ ಗ್ರಂಥಗಳ ರಚನೆಗೆ ವಿಶೇಷವಾಗಿ ಗಮನ ಹರಿಸಿದೆ. ಅದಕ್ಕೆ ಕಾರಣವೂ ಇತ್ತು. ಆವರೆಗೆ ಕಾವ್ಯರಚನೆಯಲ್ಲಿ ನಾನು ಹೊಂದಿದ್ದ ಗುರಿ ಏನು ಎನ್ನುವುದು 'ಬೇಡಿಕೆ' ಎಂಬ ಪದ್ಯದಲ್ಲಿ ಹೀಗೆ ವ್ಯಕ್ತವಾಗಿದೆ :

ಒಂದು ವರವ ನಿನ್ನೊಳಿಂದು
  ದೇವ, ಬೇಡುವೆ—
ಬೇಡಿ ಬೇಡಿ ಮೊರೆಯನಿಡುವೆ
  ಕೊನೆಗೆ ಕಾಡುವೆ.
ಹೊನ್ನ ರಾಶಿ ಸುರಿಯಲೆಂಬ
  ಕೀಳು ಬಯಕೆಯಲ್ಲವು ;
ಆಯುರಾರೋಗ್ಯ ಹೆಚ್ಚಲೆಂಬ
  ಆಸೆಯಲ್ಲವು ;
ಜಸದ ಬಯಕೆ ಬೇಡವೆನಗೆ,
  ಜಸವು ಗರ್ವದಾಗರ ;
ಮೋಕ್ಷವಲ್ಲ, ಮೋಕ್ಷವಿಲ್ಲ,
  ಮೋಕ್ಷ ಶೂನ್ಯಸಾಗರ.

ಒಂದೆ ವರವ ನಿನ್ನೊಳಿಂದು
ದೇವ ಬೇಡುವೆ—
ನನ್ನನೊಂದು ಹಕ್ಕಿಮಾಡು,
ಹಾಡಿ ಹಾಡಿ ಹಾಡುವೆ.

* *

ನನ್ನ ಹಾಡಿನಲ್ಲಿ ಮತ್ತೆ
ವರವ ಬೇಡೆನು ;
ಅವರು ಇವರು ಮೆಚ್ಚಲೆಂದು
ಹಾಡ ಹಾಡೆನು ;
ನನ್ನ ಹಾಡಿನಲ್ಲಿ ಅಂದು
ಗೋಳ ಕರೆಯೆನು ;
ಆದರಂದು, ಎಂದೆಂದು
ನಿನ್ನ ಮರೆಯೆನು.
ಎಲ್ಲಿ ಕುಳಿತರಲ್ಲಿ ನಾನು
ಹಾಡುತಿರುವೆನು ;
ಹಾಡಿಗಾಗಿ ಹಾಡನೊಂದ
ಹಾಡುತಿರುವೆನು ;
ಹಾಡುತಿರುವ ಜಗದ ಜೊತೆಗೆ
ಹಾಡುತಿರುವೆನು.
ಹಕ್ಕಿಯಾಗಿ ಹಾಡಿ ನಿನ್ನ
ವೀಣೆಯಾಗುವೆ ;
ಹಾಡಿ ದುಡಿದು, ಕೊನೆಗೆ ನಿನ್ನ
ವಾಣಿಯಾಗುವೆ !

ಕೀರ್ತಿ, ಹಣ ಸಂಪಾದನೆ, ಪ್ರಶಂಸೆ–ಇದು ಯಾವುದನ್ನೂ ಬಯಸದೆ, ಕೇವಲ ಆತ್ಮ ಸಂತೋಷಕ್ಕಾಗಿ ಕೃತಿರಚನೆ ಮಾಡಿದೆ. ಪ್ರಾರಂಭದ ವರ್ಷಗಳಲ್ಲಿ ಈ ನನ್ನ ಧ್ಯೇಯವನ್ನು ತಿಳಿಸುವ—The Poet is a nightingale which Sings to cheer its own solitude–ಎಂಬ ಷೆಲ್ಲಿ ಕವಿಯ ವಾಕ್ಯವನ್ನು ನನ್ನ ಪ್ರಥಮ ಕವನ ಸಂಕಲನ "ಹಕ್ಕಿ ಹಾಡು"ವಿನಲ್ಲಿ, ನನ್ನ ಧ್ಯೇಯ ವಾಕ್ಯವಾಗಿ ಮುದ್ರಿಸಿದ್ದೇನೆ. ಬದುಕಿನುದ್ದಕ್ಕೂ ಧ್ಯೇಯವನ್ನು ಪೂರ್ತಿಯಾಗಿ ಉಳಿಸಿಕೊಳ್ಳುವುದು ಸಾಧ್ಯವಾಗಲಿಲ್ಲವೆಂಬುದು ಇಂದಿಗೂ ನನ್ನ ವಿಷಾದ.

ಹರೆಯದ ಕಾಲದ ಕೃತಿಗಳು

1933ರಲ್ಲಿ ಕನ್ನಡ ಎಂ. ಎ. ಪದವಿಯನ್ನು ಪಡೆದು, 1934ರ ಫೆಬ್ರವರಿ ತಿಂಗಳಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಸಂಬಳ ಪಡೆಯುವ ಕಾರ್ಯದರ್ಶಿಯಾಗಿ ನೇಮಕಗೊಂಡೆ. ಕನ್ನಡ ಸಾಹಿತ್ಯ ಪರಿಷತ್ತಿನ ಚರಿತ್ರೆಯಲ್ಲಿ ಹೊಸ ಅಧ್ಯಾಯ ಪ್ರಾರಂಭವಾದ ವರ್ಷ ಅದು. ಆ ವರ್ಷ ಡಿ. ವಿ. ಗುಂಡಪ್ಪನವರು ಪರಿಷತ್ತಿನ ಉಪಾಧ್ಯಕ್ಷರಾಗಿ ಕಾರ್ಯಾರಂಭಮಾಡಿದ್ದರು. ಪರಿಷತ್ತಿನ ಕಚೇರಿಯ ಕೆಲಸಗಳನ್ನು ಒಪ್ಪೊತ್ತಿನ ಗುಮಾಸ್ತೆ ಒಬ್ಬರು ನೋಡಿಕೊಳ್ಳುತ್ತಿದ್ದರು. ಪರಿಷತ್ತಿನ ಆಯ–ವ್ಯಯಗಳ ಲೆಕ್ಕವಿಡುವುದು, ಕನ್ನಡ ಮತ್ತು ಇಂಗ್ಲೀಷು ಪತ್ರವ್ಯವಹಾರಗಳನ್ನು ಸ್ವತಂತ್ರವಾಗಿ ಮಾಡುವುದು, ಪರಿಷತ್ಪತ್ರಿಕೆ ಮತ್ತು ಇತರ ಪ್ರಕಟನೆಗಳ ಸಂಪಾದಕೀಯ ಕಾರ್ಯದಲ್ಲಿ ಸಹಾಯ ಮಾಡುವುದು, ಪರಿಷತ್ತಿಗೆ ಆಗಮಿಸುವ ಅತಿಥಿಗಳು, ಸದಸ್ಯರು ಇವರನ್ನು ಸ್ವಾಗತಿಸುವುದು, ಪುಸ್ತಕ ಭಂಡಾರದ ಮೇಲ್ವಿಚಾರಣೆ–ಹೀಗೆ, ಬಹುಮುಖವಾದ, ಕಾರ್ಯಕಲಾಪಗಳನ್ನು ಉಪಾಧ್ಯಕ್ಷರು, ಗೌರವ ಕಾರ್ಯದರ್ಶಿಗಳು, ಗೌರವ ಕೋಶಾಧಿಕಾರಿಗಳು, ಉಪಸಮಿತಿಗಳ ವ್ಯವಸ್ಥಾಪಕರುಗಳು ಮುಂತಾಗಿ ಹಲವು ಅಧಿಕಾರಿಗಳ ಮರ್ಜಿಯನ್ನ ಅನುಸರಿಸಿ ನಡೆಸಿಕೊಂಡು ಹೋಗುವ ಹೊಣೆಗಾರಿಕೆ ನನ್ನದಾಗಿತ್ತು. ಪರಿಷತ್ತಿನ ಕೆಲಸಕ್ಕೆ ಸೇರುವುದಕ್ಕೆ ಮುಂಚೆ ಶಾಂತಿನಿಕೇತನದಲ್ಲೋ, ಕಲ್ಕತ್ತೆಯಲ್ಲೋ ಚಿತ್ರಕಲೆಯ ಅಭ್ಯಾಸವನ್ನು ಮುಂದುವರಿಸಬೇಕೆಂಬ ಉದ್ದೇಶದಿಂದ ಮೈಸೂರನ್ನು ಬಿಟ್ಟು, ಕಲ್ಕತ್ತೆಯ ಪ್ರಯಾಣವನ್ನು ಕೈಗೊಂಡಿದ್ದೆ. ಈ ನನ್ನ ಉದ್ದೇಶಕ್ಕೆ ಬಿ. ಎಂ. ಶ್ರೀ ವೆಂಕಣ್ಣಯ್ಯನವರು, ಮಾಸ್ತಿ, ತೀ. ನಂ. ಶ್ರೀ, ಇವರೆಲ್ಲ ತುಂಬ ಒತ್ತಾಸೆ ನೀಡಿದ್ದರು. ಶಾಂತಿನಿಕೇತನದಲ್ಲಿ ಪ್ರವೇಶ ದೊರೆಯುವುದು ಕಷ್ಟವೆಂದು ಅಲ್ಲಿದ್ದ ನಾರಾಯಣ ಸಂಗಮರಿಂದ ಉತ್ತರ ಬಂತು. ಕಲ್ಕತೆಯಲ್ಲಿ ಊಟವಸತಿಗಳಿಗೆ ಅನುಕೂಲ ದೊರೆಯಲಿಲ್ಲ. ಮದರಾಸಿನವರೆಗೆ ಪ್ರಯಾಣಮಾಡಿದ್ದವನು, ಮೈಸೂರಿಗೆ ಹಿಂದಿರುಗಿದೆ. ಜೀವನದ ಒಂದು ಧ್ಯೇಯ ನೆರವೇರದೆ, ನಿರಾಶನಾಗಿ, ನಿರುದ್ಯೋಗಿಯಾಗಿದ್ದ ನನ್ನನ್ನು ಕನ್ನಡ ತಾಯ ಗುಡಿಯ ಸೇವಕನಾಗಿ ನಿಲ್ಲಿಸಿದವರು ಗುರುವರ್ಯ ವೆಂಕಣ್ಣಯ್ಯನವರು. ಗುಂಡಪ್ಪನವರ ಕೈಕೆಳಗೆ ಕೆಲಸಮಾಡಿದರೆ ಮುಂದೆ ಯಾವ ಕೆಲಸವನ್ನು ಬೇಕಾದರೂ ನಿಭಾಯಿಸುವ ಸಾಮರ್ಥ್ಯ ಬರುತ್ತದೆ ಎಂದು ವೆಂಕಣ್ಣಯ್ಯನವರು ಭರವಸೆಕೊಟ್ಟಿದ್ದರು. ಅವರ ಮಾತು ಹುಸಿಯಾಗಲಿಲ್ಲ.

ಗುಂಡಪ್ಪನವರ ನೇತೃತ್ವದಲ್ಲಿ, ಕಚೇರಿಯ ಕೆಲಸದ ಅನುಭವ, ವ್ಯವಹಾರ ಚಾತುರ್ಯ, ದೊರೆಯಿತು. ಸಾಹಿತ್ಯದೃಷ್ಟಿಯಿಂದ ಹೆಚ್ಚಿನ ಪ್ರಯೋಜನವಾದದ್ದು ಎ.ಆರ್. ಕೃಷ್ಣಶಾಸ್ತ್ರಿಗಳಿಗೆ ಪರಿಷತ್ಪತ್ರಿಕೆಯ ಸಂಪಾದನಾ ಕಾರ್ಯದಲ್ಲಿ ಸಹಾಯಕ

ನಾಗಿದ್ದ ಕಾರಣದಿಂದ. ಪರಿಷತ್ ಪತ್ರಿಕೆಯಲ್ಲಿ, "ಪ್ರಾಚ್ಯ-ಲೇಖನಾವಳಿ" ಎಂಬ ಹೊಸ ವಿಭಾಗವೊಂದನ್ನು ಅವರು ಪ್ರಾರಂಭಮಾಡಿದರು. ಪರಿಷತ್ಪತ್ರಿಕೆಗೆ ವಿನಿಮಯವಾಗಿ ಬರುತ್ತಿದ್ದ, ಚಂದಾಕೊಟ್ಟು ತರಿಸುತ್ತಿದ್ದ ಅನೇಕ ವಿದ್ವತ್ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದ್ದ ಲೇಖನಗಳೆಲ್ಲವನ್ನೂ ಓದಿ, ಮಹತ್ವಪೂರ್ಣ ಲೇಖನಗಳ ಸಾರಾಂಶವನ್ನು ಬರೆದು ಸಿದ್ಧಪಡಿಸುವ ಕಾರ್ಯವನ್ನು, ಕರಡಚ್ಚು ತಿದ್ದುವುದು ಮುಂತಾದ ಇತರ ಕಾರ್ಯಗಳೊಂದಿಗೆ, ಕೃಷ್ಣಶಾಸ್ತ್ರಿಗಳು ನನಗೆ ವಹಿಸಿದ್ದರು. ನಾನು ಪರಿಷತ್ತಿನಲ್ಲಿದ್ದಷ್ಟು ಕಾಲ ಈ ಕೆಲಸಗಳಿಂದ ದೊರೆತ ಸಂಪಾದಕೀಯ ಅನುಭವ ಅತ್ಯಮೂಲ್ಯವಾದುದು. ಈ ಕಾಲದಲ್ಲಿ ಪರಿಷತ್ಪತ್ರಿಕೆಗಾಗಲಿ, ಬೇರೆ ಯಾವುದೇ ಪತ್ರಿಕೆಗಾಗಲೀ, ನಾನು ವಿಮರ್ಶಾತ್ಮಕ, ಸಂಶೋಧನಾತ್ಮಕ ಲೇಖನಗಳನ್ನು ಬರೆಯದೆ ಹೋದರೂ ಕನ್ನಡದಲ್ಲಿ ಸಾಹಿತ್ಯ ವಿಮರ್ಶೆ, ಸಂಶೋಧನೆ ಹೇಗೆ ನಡೆಯುತ್ತಿದೆ ಎನ್ನುವುದರ ನಿಕಟವಾದ, ನಿರಂತರವಾದ, ಪರಿಚಯ ನನಗಾಯಿತು ; ವಿಮರ್ಶನ ದೃಷ್ಟಿ, ಸಂಶೋಧನ ದೃಷ್ಟಿ ಬೆಳೆದುವು. ವಿದ್ವತ್ಪೂರ್ಣವಾದ ಲೇಖನಗಳ ಕರಡಚ್ಚು ತಿದ್ದುವುದೇ ಒಂದು ಸ್ವಾರಸ್ಯವಾದ ಅನುಭವವಾಗಿತ್ತು. ಗೋವಿಂದ ಪೈ ಅವರು ರೂಢಿಯಲ್ಲಿದ್ದ ಶಬ್ದರೂಪಗಳನ್ನು, ತಮ್ಮದೇ ಆದ ರೀತಿಯಲ್ಲಿ ಬಳಸುತ್ತಿದ್ದರು. ಉದಾಹರಣೆಗೆ, ಎಲ್ಲರೂ ಸಾಧಾರಣವಾಗಿ ಬಳಸುವ "ಖಂಡಿತ" ಎಂಬ ಶಬ್ದವನ್ನು "ಕಂಡಿತ" ಎಂದು ಪ್ರಯೋಗಿಸಿದ್ದರು. ಅದನ್ನು ನಾನು 'ಖಂಡಿತ' ಎಂದು ತಿದ್ದಿದಾಗ ಅವರ ಬರವಣಿಗೆಯ ಒಂದು ಅಕ್ಷರವನ್ನೂ ತಿದ್ದಕೂಡದೆಂದು ಕೃಷ್ಣಶಾಸ್ತ್ರಿಗಳು ತಿಳಿಸಿದರು. ಪರಿಷತ್ತಿನ ಸಭೆ ಸಮಾರಂಭಗಳ ವರದಿಗಳು ವಾರ್ಷಿಕ ವರದಿ, ಸಾಹಿತ್ಯಸಮ್ಮೇಳನ, ಸಕಲ ಸದಸ್ಯರ ಸಭೆ, ಕಾರ್ಯಸಮಿತಿ-ಉಪಸಮಿತಿಗಳ ಗೊತ್ತುವಳಿಗಳು-ಮುಂತಾದವುಗಳನ್ನು ಕೂಡ ನಿರ್ದುಷ್ಟವಾದ, ಆಕರ್ಷಕವಾದ, ಸಾಹಿತ್ಯದ ಮಟ್ಟದಲ್ಲಿ ಬರೆಯುವುದು ಹೇಗೆ ಎನ್ನುವುದರಲ್ಲಿ ಗುಂಡಪ್ಪನವರಿಂದ ನಾನು ಕಲಿತದ್ದು ಬಹಳ. ಪರಿಷತ್ತಿಗೆ ಬರುತ್ತಿದ್ದ ಸಾಹಿತಿಗಳ ಸ್ನೇಹ, ಪರಿಚಯ ಬೇಗನೆಯೆ ದೊರೆತವು. ಬೇರೆ ಬೇರೆ ಸ್ಥಳಗಳಲ್ಲಿ ನಡೆಯುತ್ತಿದ್ದ ಸಾಹಿತ್ಯ ಸಮ್ಮೇಳನ, ಅದರ ಸಂದರ್ಭದಲ್ಲೇ ನಡೆಯುತ್ತಿದ್ದ ಸಕಲ ಸದಸ್ಯರ ವಾರ್ಷಿಕಾಧಿವೇಶನಗಳು, ಇವುಗಳಿಗೆ ನಾನು ಪರಿಷತ್ತಿನ ಕಚೇರಿಯ ಪರವಾಗಿ ಹೋಗಲೇಬೇಕಾಗಿತ್ತು. ಅಖಿಲ ಕರ್ನಾಟಕದ ಕವಿಗಳ, ಸಾಹಿತಿಗಳ, ವಿದ್ವಾಂಸರ ಪರಿಚಯ, ಸ್ನೇಹ ಈ ಅಧಿವೇಶನಗಳಲ್ಲಿ ಆಗಿ, ಕಾಲಕ್ರಮದಲ್ಲಿ ಬೆಳೆಯುತ್ತ ಬಂದವು. ಈ ಎಲ್ಲ ಸಾಹಿತಿಗಳ ಸಂಗಕ್ಕೆ ಬೆಲೆ ಕಟ್ಟುವುದಾದರೂ ಹೇಗೆ? ಇವರಲ್ಲಿ ಅನೇಕರು ವಯಸ್ಸಿನಲ್ಲಿ, ಸಾಧನೆಯಲ್ಲಿ, ಸಿದ್ಧಿಯಲ್ಲಿ, ನನಗಿಂತ ಹಿರಿಯರು. ನನ್ನ ಸಾಹಿತ್ಯ ಸೃಷ್ಟಿಕಾರ್ಯಕ್ಕೆ ಕೆಲವರಿಂದ, ದೊರೆತ ಉತ್ತೇಜನ ಸಂಜೀವಿನಿಯಾಗಿತ್ತು.

ಇಂಥವರಲ್ಲಿ ಗೋವಿಂದ ಪೈ ಅವರನ್ನು ಮುಖ್ಯವಾಗಿ ನೆನೆಯಬೇಕು. 'ಹಕ್ಕಿಹಾಡು' ಪ್ರಕಟವಾದಂದಿನಿಂದ, ಪ್ರತಿಯೊಂದು ಪುಸ್ತಕವನ್ನು ಅವರಿಗೆ ಕಳಿಸಿಕೊಟ್ಟಿದ್ದೇನೆ. ಅದು ಕೈಸೇರಿದ ಕೂಡಲೇ ಅವರು ಅದನ್ನು ಪೂರ್ತಿಯಾಗಿ ಓದಿ, ಕಾರ್ಡುತುಂಬ ಅವರ Trade Mark ಎನ್ನಬಹುದಾದ Violet (ಪಾಟಲವರ್ಣದ) ಶಾಯಿಯಲ್ಲಿ ಎದೆತುಂಬ ಮೆಚ್ಚುಗೆಯ ಮಾತುಗಳನ್ನು ಬರೆಯುತ್ತಿದ್ದರು. ನನಗೆ ಮಾತ್ರವಲ್ಲ, ಪುಸ್ತಕ ಕಳಿಸಿದ ಪ್ರತಿ ಗ್ರಂಥಕರ್ತನಿಗೂ ಈ ರೀತಿ ಅಭಿಪ್ರಾಯ ತಿಳಿಸುವ ರೂಢಿಯಿಟ್ಟುಕೊಂಡಿದ್ದರು. ಮಾತ್ರವಲ್ಲ, ಅದನ್ನು ಒಂದು ವ್ರತವಾಗಿ ನಡೆಸಿಕೊಂಡು ಬಂದಿದ್ದರು. ಎಷ್ಟು ಜನ ಹೀಗೆ ಮಾಡಿದ್ದಾರೆ? ಮಾಡುತ್ತಿದ್ದಾರೆ? ಪುಸ್ತಕದ ಬಗೆಗೆ ಮಾತ್ರವಲ್ಲ, ಭಾಷೆ, ಸಾಹಿತ್ಯ, ಸಂಶೋಧನೆಗಳಿಗೆ ಸಂಬಂಧಪಟ್ಟಂತೆ ಯಾವ ಸಂದೇಹದ ಪ್ರಶ್ನೆಯನ್ನು ಮುಂದಿಟ್ಟರೂ ಕೂಡಲೇ ಉತ್ತರ ಬರೆಯುತ್ತಿದ್ದರು. ಇವರಿಂದ ಕಲಿತ ಪಾಠವನ್ನು ಕೈಲಾದ ಮಟ್ಟಿಗೂ ಅನುಷ್ಠಾನದಲ್ಲಿ ಇಟ್ಟುಕೊಳ್ಳಲು ಪ್ರಯತ್ನಿಸಿದ್ದೇನೆ. ಇಂಥ ಶ್ರೇಷ್ಠ ವ್ಯಕ್ತಿಗಳ ಪರಿಚಯ, ಪರಿಷತ್ತಿನಲ್ಲಿ ಇರದಿದ್ದರೆ, ನನಗೆ ಆಗುತ್ತಿರಲಿಲ್ಲ.

ನಾನು ಪರಿಷತ್ತಿನ ಕಾರ್ಯದರ್ಶಿಯಾಗಿ ಕೆಲಸ ಮಾಡುತ್ತಿದ್ದಾಗ, ಕನ್ನಡ–ಹಿಂದೀ ವಾದ : "ಕರ್ಣಾಟಕವೋ—ಕರ್ನಾಟಕವೋ" ಎಂಬ ವಾಗ್ಯುದ್ಧ ನಡೆದುವು. ಪರಿಷತ್ತಿನ ಅಧಿಕಾರಿಗಳಿಗೂ, ಸಂಸ್ಥೆಯ ಬಗೆಗೆ ಟೀಕೆ ಮಾಡುವವರಿಗೂ ವಾದ ವಿವಾದಗಳು ನಡೆಯುತ್ತಲೇ ಇದ್ದುವು. ಪ್ರಾಯದ ಬಿಸಿ ನೆತ್ತರು ಹರಿಯುತ್ತಿದ್ದ ನನಗೆ ಈ ವಾದಗಳಲ್ಲಿ ಭಾಗವಹಿಸಬೇಕೆಂಬ ಉತ್ಸುಕತೆ. ಪರಿಷತ್ತಿಗೆ ನೇಮಕಗೊಂಡ ಹೊಸದರಲ್ಲಿ ಕನ್ನಡದ ಬಗೆಗೆ ಇದ್ದ ನಿರಭಿಮಾನವನ್ನು ಕುರಿತು 'ತಾಯಿನಾಡು' ಪತ್ರಿಕೆಗೆ ಒಂದು ಲೇಖನ ಬರೆದೆ. ಉಪಾಧ್ಯಕ್ಷ ಗುಂಡಪ್ಪನವರು ಪರಿಷತ್ತಿನ ಸೇವಕನಾದ ನಾನು ವಾದ ವಿವಾದದಲ್ಲಿ ತೊಡಗಕೂಡದೆಂದು ಆದೇಶ ನೀಡಿದರು. ಈ ಆದೇಶವನ್ನು ನಾನು ಪಾಲಿಸಿದೆ. 'ಕರ್ನಾಟಕ–ಕರ್ಣಾಟಕ' ವಿವಾದ ನಡೆದದ್ದು ಬಿ.ಎಂ.ಶ್ರೀ ಉಪಾಧ್ಯಕ್ಷರಾಗಿದ್ದ ಕಾಲದಲ್ಲಿ. ಇದರದ್ದೇ ಒಂದು ಚರಿತ್ರೆ. ಅದ್ದರಿಂದ, ಆ ಬಗ್ಗೆ ಇಲ್ಲಿ ಬೆಳೆಸುವುದಿಲ್ಲ. ಈ ವಿವಾದಕ್ಕೆ ಪರೋಕ್ಷವಾಗಿ ನಾನೇ ಮೂಲ ಕಾರಣ ; ಬೀಜ ಬಿತ್ತಿದವನು. ಗುರುಗಳಾದ ಬಿ.ಎಂ.ಶ್ರೀ ಶಿಷ್ಯನ ಅಪರಾಧವನ್ನು ಬಿಟ್ಟುಕೊಡದೆ, ಅಕ್ಷರ ವ್ಯತ್ಯಾಸವನ್ನು ವಿರೋಧಿಸಿ ಪ್ರಚಂಡ ಯುದ್ಧವನ್ನೇ ಹೂಡಿದ ತಮ್ಮ ಗುರುಗಳಾದ ಬೆಳ್ಳಾವೆ ವೆಂಕಟನಾರಣಪ್ಪನವರ ಎದುರು ನಿಂತು ಹೋರಾಡಿದರು. ನನ್ನ ಜೊತೆಯವರೆಲ್ಲ–ಎಲ್. ಗುಂಡಪ್ಪ, ಕ.ವೆಂ. ರಾಘವಾಚಾರ್, ರಾಜರತ್ನಂ, ತೀ. ನಂ. ಶ್ರೀ. ಮುಂತಾದವರು ಬಿ. ಎಂ. ಶ್ರೀ.ಯವರ ಪಕ್ಷ ವಹಿಸಿದರು. ನಾನು ನಿಷ್ಪಕ್ಷಿಕ ಎಂಬಂತೆ ತೆಪ್ಪಗಿದ್ದೆ. ಬಳ್ಳಾರಿ ಸಾಹಿತ್ಯ ಸಮ್ಮೇಳನದಲ್ಲಿ ಪರಿಷತ್ತಿನ ಹೆಸರಿನ ಸಂಬಂಧವಾಗಿ ಹುಟ್ಟಿದ ವಾದಕ್ಕೆ

ಕಾರಣವಾದ "ನ-ಣ" ಕಾರಗಳ ಗೊಡವೆಯೇ ಬೇಡ ಎಂದು, "ಕರ್ಣಾ(ರ್ನಾ)ಟಕ ಸಾಹಿತ್ಯ ಪರಿಷತ್ತು ಇದ್ದುದು "ಕನ್ನಡ ಸಾಹಿತ್ಯ ಪರಿಷತ್ತು" ಆಯಿತು.

ಈ ಎಲ್ಲ ವಾದಗಳೂ ನನ್ನ ಸ್ವಭಾವದಲ್ಲಿದ್ದ ಹೋರಾಟದ ಓಲನ್ನು ಕೆಣಕುತ್ತಲೇ ಇದ್ದವು. ಆದರೆ ಪರಿಷತ್ತಿನ ಸಂಬಳಗಾರನಾಗಿದ್ದುಕೊಂಡು, ಉದ್ರೇಕವನ್ನು ಅಡಗಿಸಿಕೊಳ್ಳಬೇಕಾಗಿತ್ತು. ಪ್ರಗತಿಶೀಲ ಸಾಹಿತ್ಯದ ವಾದ ಎದ್ದಾಗ, ನಾನು ಪರಿಷತ್ತಿನ ಹುದ್ದೆಯನ್ನು ಬಿಟ್ಟು, ಮೈಸೂರು ವಿಶ್ವವಿದ್ಯಾಲಯ ಕೈಗೊಂಡಿದ್ದ ಇಂಗ್ಲೀಷು-ಕನ್ನಡ ನಿಘಂಟು ನಿರ್ಮಾಣಕ್ಕೆಂದು ಏರ್ಪಾಟಾಗಿದ್ದ ಕಚೇರಿಯಲ್ಲಿ ಸಂಪಾದಕ ಸಹಾಯಕರಲ್ಲಿ ಒಬ್ಬನಾಗಿ ಕೆಲಸ ಮಾಡುತ್ತಿದ್ದೆ. ನಿಘಂಟುವಿನ ಪ್ರಧಾನ ಸಂಪಾದಕರು ಬೆಳ್ಳಾವೆ ವೆಂಕಟನಾರಣಪ್ಪನವರು. ಮೈಸೂರು ವಿಶ್ವವಿದ್ಯಾನಿಲಯ ಆಗ ಇನ್ನೂ ಪೂರ್ತಿಯಾಗಿ ಸರ್ಕಾರದ ಅಧೀನದಲ್ಲಿಯೇ ಇತ್ತು. ನಾನು ಸರ್ಕಾರಿ ನೌಕರ. ಪ್ರಗತಿಶೀಲ ಸಾಹಿತ್ಯದ ಸಿದ್ಧಾಂತಗಳನ್ನು ಪ್ರತಿಭಟಿಸಿ ಬರೆಯಬೇಕೆಂಬ ಪ್ರಚೋದನೆ ತೀವ್ರವಾಗಿತ್ತು. ನನ್ನ ಅಭಿಪ್ರಾಯಗಳನ್ನು ಪದ್ಯ ರೂಪದಲ್ಲಿ ಬರೆಯುತ್ತ ಹೋದೆ. ಬರವಣಿಗೆ ಪ್ರಾರಂಭವಾದದ್ದು 1943ರ ಜನವರಿ. ಬರೆ-ಬರೆದಂತೆ ನನ್ನ ಆಪ್ತಮಿತ್ರರಾಗಿದ್ದ ಮೋಟಗಾನಹಳ್ಳಿ ಸುಬ್ರಹ್ಮಣ್ಯಶಾಸ್ತ್ರಿಗಳಿಗೆ ಪದ್ಯಗಳನ್ನು ತೋರಿಸುತ್ತಿದ್ದೆ. ಆಗ ಅವರು ಪರಿಷತ್ತಿನ ಕನ್ನಡ ನುಡಿಯ ಸಂಪಾದಕರು. ನನ್ನ ಪದ್ಯಗಳನ್ನು ಅವರು ಪತ್ರಿಕೆಯಲ್ಲಿ ಕ್ರಮವಾಗಿ ಪ್ರಕಟಿಸುತ್ತಾ ಬಂದರು. "ಕವಿಮಿತ್ರ" ಎಂಬ ಅರ್ಥಪೂರ್ಣ ಕಾವ್ಯನಾಮ ಸಹಿತ, 'ಕಾವ್ಯಾಲಾಪ' ಎಂಬ ಹೆಸರಿನಡಿಯಲ್ಲಿ, ಪದ್ಯಗಳು ಪ್ರಕಟವಾದುವು. ನನ್ನ ಹರೆಯದ ಹೋರಾಟದ ಮನೋಧರ್ಮದ ಸ್ಥಿತಿಯಲ್ಲಿ ಮೂಡಿಬಂದದ್ದು "ಕಾವ್ಯಾಲಾಪ". ಇದರ ಬಗ್ಗೆ ಈ ಹಿಂದೆಯೂ ಕೆಲವು ಮಾತುಗಳನ್ನು ಆಡಿರುವೆನಾದ್ದರಿಂದ, ಹೆಚ್ಚು ಹೇಳಬೇಕಾದ ಕಾರಣವಿಲ್ಲ. ಕನ್ನಡ ಸಾಹಿತ್ಯ ಪರಿಷತ್ತು ಮತ್ತು ನಿಘಂಟು ಕಚೇರಿಗಳಲ್ಲಿ ಕೆಲಸ ಮಾಡಿದ 10-12ವರ್ಷಗಳ ಅವಧಿಯಲ್ಲಿ "ಶಿಲಾಮುಖಿ", "ಮಾರ್ಗದರ್ಶಕ", "ರತಿದೇವಿ" ಎಂಬ ಮೂರು ಕಥಾಸಂಕಲನಗಳು ; "ಹಕ್ಕಿಹಾಡು", "ಆ ಚಿತ್ರಗಳು", "ಕಾವ್ಯಾಲಾಪ", "ಹೂವಾಡಿಗಿತ್ತಿ", "ರಾಗ", ಎಂಬ ಐದು ಪದ್ಯದ ಪುಸ್ತಕಗಳು ; "ಹೂವಿನ ಆಸೆ", "ತೆರೆಮರೆಯ ಚಿತ್ರಗಳು" ಎಂಬ ಎರಡು ನಾಟಕಗಳು ; "ಹಿಡಿ ಹೂವು" ಎಂಬ ವಿವಿಧ ಬರಹಗಳ ಸಂಕಲನ ; "ಭಾಗ್ಯಲಕ್ಷ್ಮಿ" ಎಂಬ ಒಂದು ಕಾದಂಬರಿ ಪ್ರಕಟವಾಗಿ, ಸಾಹಿತ್ಯ ಸೃಷ್ಟಿಯ ದೃಷ್ಟಿಯಿಂದ ವ್ಯರ್ಥವೆನಿಸಲಿಲ್ಲ. ಇಂದಿನ ಪೀಳಿಗೆಗೆ ಇವು Out of date, Out of fashion ಆಗಿ ಕಾಣಬಹುದು. ಪ್ರತಿಯೊಂದು ಸಾಹಿತ್ಯಕೃತಿಯೂ ತನ್ನ ಕಾಲದಲ್ಲಿ ಜನಪ್ರಿಯವಾಗಿದ್ದಷ್ಟು ಮುಂದೆ ಇರದು. ಇದು ಸಹಜ. ಪ್ರತಿಯೊಂದು ಕಾಲದಲ್ಲಿಯೂ ಆ ಕಾಲದ ಬರಹಗಾರರ ಕೃತಿಗಳು ಮುಂದೆ ಬರದೆ ಹೋದರೆ, ಅವುಗಳನ್ನು ಕೇಳುವರಾರು? ಆದರೂ,

ಒಳ್ಳೆಯ ಕೃತಿಗಳು ಎಲ್ಲ ಕಾಲದವರಿಗೂ ಬೇಕಾಗುತ್ತವೆ. ಆದ್ದರಿಂದ ಅವು ಆಗಿಂದಾಗ್ಗೆ ಪುನರ್ಮುದ್ರಣ ಆಗುವ ವ್ಯವಸ್ಥೆ ಆಗಬೇಕು. ಮಾರ್ಗದರ್ಶಕ, ಹೂವಾಡಿಗಿತ್ತಿ, ಭಾಗ್ಯಲಕ್ಷ್ಮಿ, ಹೂವಿನ ಆಸೆ ಇವು ಎರಡು ಮೂರು ಸಲ ಮುದ್ರಣವಾಗಿವೆ.

ಈಗ ಹೆಸರಿಸಿದ ಕೃತಿಗಳಲ್ಲಿ ಎರಡು ಮೂರರ ಸಂಬಂಧದಲ್ಲಿ ಗಮನಾರ್ಹವಾದ ಸಂಗತಿಗಳುಂಟು. ಆದ್ದರಿಂದ ತಿಳಿಸಬಯಸುತ್ತೇನೆ. ಪ್ರಕಾಶಕರು ತಾವಾಗಿ ಮುಂದೆ ಬಂದು ಒಬ್ಬ ಗ್ರಂಥಕರ್ತನನ್ನು ಬೇಡಿ, ಹಸ್ತಪ್ರತಿ ಪಡೆಯಬೇಕಾದರೆ ಆತ "ಕರೆಯುವ ಹಸು" ಆಗಿರಬೇಕು; "ಗೊಡ್ಡು" ಯಾದರೂ ಪ್ರಯೋಜನವಿಲ್ಲ, ಎಳಗರುವಾದರೂ ಪ್ರಯೋಜನವಿಲ್ಲ. ಆ ಕಾಲದಲ್ಲಿ ನಾನು ತಕ್ಕಮಟ್ಟಿಗೆ ಹೆಸರಾದ ತರುಣ ಬರಹಗಾರನಾಗಿದ್ದರೂ ಪ್ರಕಾಶಕರಿಗೆ ಲಾಭತರುವಷ್ಟು 'ಜನಪ್ರಿಯ' ಇಲ್ಲವೆ 'ಪ್ರಸಿದ್ಧ' ಬರಹಗಾರನಾಗಿರಲಿಲ್ಲ. ಹೀಗೆಂದು ನನ್ನ ತಿಳಿವಳಿಕೆ 1940-41ರ ಸುಮಾರಿನಲ್ಲಿ. ನನ್ನ ಮಾತಾ-ಪಿತೃಗಳು ತೀರಿಹೋಗಿದ್ದರು. ತಕ್ಕಮಟ್ಟಿನ ಪಿತೃಋಣ ಇತ್ತು. ನನ್ನ ಪಾಲಿನದನ್ನಾದರೂ ತೀರಿಸಬೇಕೆಂಬ ಸಹಜವಾದ ತವಕ. ಹಾಥಾರ್ನಿನ ಕತೆಗಳನ್ನು ಪಠ್ಯ ಪುಸ್ತಕ ಮಾಡಿಸಬಹುದು ಎಂದು ಆಪ್ತ-ಮಿತ್ರರು ಸಲಹೆಮಾಡಿದರು. ಅವನ ನಾಲ್ಕು ಕತೆಗಳನ್ನು ಹೊಸದಾಗಿ ಅನುವಾದ ಮಾಡಿದ್ದೆ. ಪ್ರಕಾಶಕರನ್ನು ಕೇಳಿ, 'ಇಲ್ಲ' ಎನ್ನಿಸಿಕೊಳ್ಳುವುದು ಎಂದೂ ನನಗೆ ಬೇಸರದ ವಿಷಯ. ಬಿ. ಎಂ. ಶ್ರೀ. ಸ್ವರ್ಣಪದಕವನ್ನು ಮಾರಿ "ಯೌವ್ವನ ಸುಧೆ" ಎಂಬ ಕಥಾಪುಸ್ತಕವನ್ನು ಸ್ವಂತವಾಗಿ ಅಚ್ಚುಹಾಕಿಸಿದೆ. ಪುಸ್ತಕ ಪ್ರಕಟವಾದ ದೃಷ್ಟ, ಲಾಭ.

"ಭಾಗ್ಯಲಕ್ಷ್ಮಿ" ಎಂಬ ಕಾದಂಬರಿ 1944ರಲ್ಲಿ ಪಠ್ಯಪುಸ್ತಕ ಆಗಿ, ಪಿತೃಋಣದಲ್ಲಿ ಅರ್ಧದಷ್ಟನ್ನು ತೀರಿಸಲು ನೆರವಾಯಿತು. ಇದಕ್ಕಿಂತ ಹೆಚ್ಚಾಗಿ, ನನಗೆ ಸಂತೋಷಕೊಟ್ಟ ವಿಚಾರ. ಇಂದಿನ ಬರಹಗಾರರಲ್ಲಿ ಹಲಕೆಲವರು ಅದನ್ನು ಪಠ್ಯ-ಪುಸ್ತಕವಾಗಿ ಓದಿ, ಮೆಚ್ಚಿಕೊಂಡಿದ್ದಾರೆ: ಸಾಹಿತ್ಯದಲ್ಲಿ ಆಸಕ್ತಿ ತಳೆದಿದ್ದಾರೆ ಎನ್ನಬಹುದು. ಬರಹಗಾರರಲ್ಲದ ಒಬ್ಬೊಬ್ಬರು, ಬೇರೆಯ ರೀತಿಯಲ್ಲಿ ಪ್ರಭಾವಿತರಾಗಿದ್ದಾರೆ. ಕಪ್ಪು ಹೆಂಡತಿಯನ್ನು ಮದುವೆಯಾಗಿ, ಅವಳನ್ನು ತಾತ್ಸಾರದಿಂದ ಕಾಣುತ್ತಿದ್ದು, ಆಕಸ್ಮಾತ್ತಾಗಿ ಈ ಕಾದಂಬರಿಯನ್ನು ಓದಿ, ತಮ್ಮ ನಡತೆಯನ್ನು ತಿದ್ದಿಕೊಂಡವರ ನಿದರ್ಶನಗಳನ್ನು ಸಂಗತಿ ಬಲ್ಲವರು ನನಗೆ ತಿಳಿಸಿದ್ದಾರೆ. ಸಾಹಿತ್ಯ, "ಕಾಂತಾ ಸಂಮಿತತಯೋಪದೇಶಯುಜೇ" ಎನ್ನುವುದಕ್ಕೆ ಈ ಕೃತಿ ಒಂದು ನಿದರ್ಶನವಾಗಿ ಪರಿಣಮಿಸಿದೆ. ಎಂದರೆ, ಇದರಲ್ಲಿ ಉಪದೇಶ ಇದೆ ಎಂದಲ್ಲ. ನನಗೆ ಪ್ರಿಯವಾದ ಹಾಥಾರ್ನಿನ ಕಥೆಗಳ ವಿಷಯದಲ್ಲಿ The Story is the Moral ಎಂದು ವಿಮರ್ಶಕರ ಅಭಿಪ್ರಾಯ. ನನ್ನ ಕತೆಗೂ ಇದು ಅನ್ವಯಿಸುತ್ತದೆ. ಈ ಗ್ರಂಥದ

ಬಗ್ಗೆ ಇನ್ನೊಂದು ಸ್ವಾರಸ್ಯದ ಸಂಗತಿ ಉಂಟು. ಪಠ್ಯಪುಸ್ತಕ ಸಮಿತಿಯಲ್ಲಿ ಇದಕ್ಕೆ ಬಹುಮತ ಬಂದಾಗ ; "ಇದು ಪಠ್ಯಪುಸ್ತಕ ಆಗಲು ಯೋಗ್ಯವಾಗಿಲ್ಲ, ಪುಸ್ತಕದಲ್ಲಿ ಅನೇಕ ಕಡೆ 'ಪ್ರಸ್ತ' ಎಂಬ ಮಾತು ಬರುತ್ತದೆ" ಎಂದು ಒಬ್ಬರು ವಿದ್ವಾಂಸರು ಆಕ್ಷೇಪವೆತ್ತಿದರು. ಈ ಆಕ್ಷೇಪ ಎತ್ತುವವರಲ್ಲಿ ಅವರ ಉದ್ದೇಶ ಬೇರೆಯಾಗಿತ್ತು. ಅವರ ಪ್ರಸಕ್ತಿ ಇಲ್ಲಿ ಅಪ್ರಕೃತ. 'ಪ್ರಸ್ತ' ಎನ್ನುವುದನ್ನು ಮಾರ್ಪಡಿಸುವಂತೆ ನನಗೆ ಸಮಿತಿಯ ಸೂಚನೆ ಬಂತು. ಮಾರ್ಪಾಟಿನೊಡನೆ ಪಠ್ಯಪುಸ್ತಕದ ಪರಿಷ್ಕೃತ ಮುದ್ರಣ ಸಿದ್ಧವಾಯಿತು. ಇಲ್ಲಿ ಪ್ರಸಕ್ತವಾದದ್ದು ಅಶ್ಲೀಲದ ಪ್ರಶ್ನೆ. ಮಾಸ್ತಿಯವರ 'ಸುಬ್ಬಣ್ಣ' ಕಾದಂಬರಿಯಲ್ಲಿ ಕೇವಲ ಒಂದು ಮಾತು ಅಶ್ಲೀಲ ಎಂಬ ಕಾರಣದಿಂದ ಎ. ಆರ್. ಕೃಷ್ಣಶಾಸ್ತ್ರಿಗಳು ಅದನ್ನು 'ಪ್ರಬುದ್ಧ ಕರ್ನಾಟಕ'ದಲ್ಲಿ ಪ್ರಕಟಿಸಲು ಒಪ್ಪದೆ, ಆ ಮಾತು ಸ್ವಲ್ಪ ಮಾರ್ಪಟ್ಟ ಮೇಲೆ ಪ್ರಕಟಿಸಿದ್ದು ಪ್ರಸಿದ್ಧವಾದ ಸಂಗತಿ. ನನ್ನ "ತೆರೆಮರೆಯ ಚಿತ್ರಗಳು" ನಾಟಕವನ್ನೂ ಅನೀತಿಯುತ ಎಂದು, ನನ್ನ ವಿಷಯದಲ್ಲಿ ತುಂಬ ಪ್ರೀತಿಯಿಟ್ಟಿದ್ದ ಶಾಸ್ತ್ರಿಗಳು ಪ್ರಕಟಿಸಲು ನಿರಾಕರಿಸಿದರು. ಅದು ಆಮೇಲೆ ಬೇರೆಯಾಗಿ ಪ್ರಕಟವಾಯಿತು. ಶ್ಲೀಲ–ಅಶ್ಲೀಲದ ಪ್ರಶ್ನೆ ಎಲ್ಲ ಕಾಲದಲ್ಲೂ ಇದ್ದದ್ದೆ. ಅದರ ಇತಿ–ಮಿತಿ ಮಾತ್ರ ಕಾಲಕಾಲಕ್ಕೆ, ವ್ಯಕ್ತಿಯಿಂದ ವ್ಯಕ್ತಿಗೆ, ಏರು–ಪೇರಾಗುತ್ತ ಇರುತ್ತದೆ.

"ಭಾಗ್ಯಲಕ್ಷ್ಮಿ" ಪ್ರಕಟವಾದಾಗ, 1942ರಲ್ಲಿ, ನನ್ನ ವಯಸ್ಸು 32. ಇದನ್ನು ಓದಿ ಮೆಚ್ಚಿಕೊಂಡ ಎಂ. ಆರ್. ಶ್ರೀನಿವಾಸಮೂರ್ತಿಯವರು, 40 ವರ್ಷವಾದ ಮೇಲೆ ಕಾದಂಬರಿ ಬರೆಯಬೇಕು, ಆ ವೇಳೆಗೆ ಲೋಕಾನುಭವ ಸಮೃದ್ಧವಾಗಿರುತ್ತದೆ, ಎಂದು ಸಲಹೆ ಮಾಡಿದರು. "ಮಾದನ ಮಗಳು" ಕಾದಂಬರಿಯನ್ನು ಬರೆಯತೊಡಗಿದ್ದವನು, ನಿಲ್ಲಿಸಿಬಿಟ್ಟೆ ; ನಿಲ್ಲಿಸಲು ಬೇರೆಯ ಕಾರಣವೂ ಇತ್ತು. ಹಾಗೆ ಮಾಡಿದ್ದು ಒಳ್ಳೆಯದೂ ಆಯಿತು. ಮೂರ್ತಿಯವರ ಸಲಹೆಯಲ್ಲಿ ಹಿತಾಂಶ ಇದೆಯೆಂದು ನನಗೆ ತೋರಿದೆ.

ಪರಿಷತ್ತು ಮತ್ತು ನಿಘಂಟು ಕಚೇರಿಗಳಲ್ಲಿ ಕೆಲಸ ಮಾಡುತ್ತ, ಲೇಖನ ಕಾರ್ಯಕ್ಕೆ ಬಿಡುವು ಸಿಕ್ಕುತ್ತಿರಲಿಲ್ಲ. ಇದರಿಂದಾಗಿ, ನಿಷ್ಠೆಗೆಟ್ಟು ಬರವಣಿಗೆಯ ಕೆಲಸ ಮಾಡುತ್ತಿದ್ದೆ. ಕಷ್ಟ, ಕಾರ್ಪಣ್ಯ, ಸಾವು, ನೋವು, ನ್ಯುಮೋಲಿ, ಮನಸ್ಸಿನ ಮೇಲೆ ಅಗುತುಕೊಂಡವು. 1946ರ ವೇಳೆಗೆ ನಿಘಂಟುವಿನ ಕಚೇರಿಯ ಕೆಲಸ ಮುಗಿದು, ಕಾಲೇಜಿನ ಅಧ್ಯಾಪಕನಾಗಿ ವರ್ಗಪಡೆದಿದ್ದೆ. 1947ರಲ್ಲಿ ಸ್ವಾತಂತ್ರ್ಯ ಬಂತು. 1948ರಲ್ಲಿ ಮಹಾತ್ಮರ ಕೊಲೆಯಾಯಿತು ; ಇದು ಕೂಡ ಮಾನಸಿಕವಾಗಿ ಯಾತನೆ ತಂದಿತು. ಇಲ್ಲಿಂದ ಮುಂದೆ, ನನ್ನ ಬರಹಗಳಲ್ಲಿ ರಾಷ್ಟ್ರೀಯ ಭಾವನೆ ಪ್ರಭಾವ ಬೀರತೊಡಗಿತು. "ಅಶೋಕ ಚಕ್ರ" ಪ್ರಕಟವಾದದ್ದು ಆಗ.

ನನ್ನ ಆರೋಗ್ಯ ಕುಸಿದದ್ದು ಆಗಲೇ. ಈಚೆಗೆ, ನನ್ನ ಮಿತ್ರರೊಬ್ಬರು ನನಗೆ "The Sick Man of Karnataka" ಎಂಬ ಪ್ರಶಸ್ತಿಯನ್ನು ನೀಡಿದ್ದಾರೆ; ಹಾಸ್ಯಕ್ಕಾಗಿ ಅಲ್ಲ; ತುಂಬ ಅಭಿಮಾನದಿಂದ. ನನ್ನ ಹರೆಯದ ವರ್ಷ ಮುಗಿಯಿತು. ಅಕಾಲಿಕ ಮುಪ್ಪು ದೇಹವನ್ನು ಆವರಿತು. ಆದರೆ, ಮನಸ್ಸಿಗೆ, ಚೈತನ್ಯಕ್ಕೆ, ಮುಪ್ಪು ಬರಲಿಲ್ಲ. ಇದು ದೇವರ ಕೃಪೆ.

ಪೂರ್ಣ ತೃಪ್ತಿಯನ್ನು ಕೊಟ್ಟ ನನ್ನ ಕೃತಿ.

ಯಾರಾದರೂ "ನಿಮಗೆ ಪೂರ್ಣ ತೃಪ್ತಿ ಕೊಟ್ಟ ಕೃತಿ ಯಾವುದು ?" ಎಂದು ಕೇಳಿದರೆ, ಉತ್ತರ ಹೇಳುವುದು ಕಷ್ಟವಾಗುತ್ತದೆ. ಮೊದಲನೆಯದಾಗಿ, "ಪೂರ್ಣ ತೃಪ್ತಿ" ಎನ್ನುವ ಸಮಸ್ತ ಪದ ವಿಚಾರಣೀಯವಾಗಿ ಕಾಣುತ್ತದೆ. "ತೃಪ್ತಿ" ಎನ್ನುವ ಮಾತಿನಲ್ಲಿಯೇ ಪೂರ್ಣತೆಯ ಭಾವ ಅಡಗಿದೆ ಎಂದಮೇಲೆ, ಪೂರ್ಣತೃಪ್ತಿ—ಎಂದರೇನು ? ತೃಪ್ತಿಯಾಗಿ ಊಟಮಾಡಿದೆ ಎಂದರೆ, ಮಾಡಿದ ಊಟ ರುಚಿಸಿದ್ದು ಮಾತ್ರವಲ್ಲ, ಹೊಟ್ಟೆ ತುಂಬಿತು ಎಂದೂ ಅರ್ಥ. ಇದು ಊಟ ಮಾಡುವವನ ದೃಷ್ಟಿಯಿಂದ ಹೇಳಿದ ಮಾತು. ಅಡಿಗೆ ಮಾಡಿದವರ ದೃಷ್ಟಿಯಿಂದ, ಮಾಡಿದ ಅಡಿಗೆ ಕೆಲವರಿಗೆ ರುಚಿಸಿ, ಇನ್ನು ಕೆಲವರಿಗೆ ರುಚಿಸದೆ ಹೋಗಬಹುದು. ಅಡಿಗೆ ಮಾಡುವವನು ಪಾಕಪಂಡಿತನಾದ್ದರಿಂದ, ರುಚಿ ಬಲ್ಲವನಾದ್ದರಿಂದ, ತನ್ನ ರುಚಿ ಭೋಜಕರ ರುಚಿ ಎರಡನ್ನು ಲಕ್ಷ್ಯದಲ್ಲಿಟ್ಟುಕೊಂಡೇ ಅಡಿಗೆಯನ್ನು ಸಿದ್ಧ ಮಾಡುತ್ತಾನೆ. ತಾನು ಊಟ ಮಾಡಿದಾಗ ತನಗೇ ರುಚಿಸದ ಭೋಜನವನ್ನು ಇತರರು ಹೊಗಳಿದರೆ, ಅವರ ರುಚಿ ಕೆಟ್ಟಿರಬೇಕು, ಇಲ್ಲವೆ ತಮಗೆ ತೃಪ್ತಿಯಾಗದಿದ್ದರೂ ಉಪಚಾರಕ್ಕೆ ಮುಖಸ್ತುತಿ ಮಾಡಿರಬೇಕು. ಸಾಹಿತ್ಯ ಕೃತಿಯ ವಿಷಯದಲ್ಲಿಯೂ ಈ ಎಲ್ಲ ಸಾಧ್ಯತೆಗಳೂ ಉಂಟು. "ಲೋಕೋ ಭಿನ್ನರುಚಿಃ" ಎಂಬ ಮಾತು ಇದೆಯಷ್ಟೆ. ಹಲವು ರುಚಿಗಳಿಗೆ ಪ್ರಿಯವಾಗುವಂತೆ ಅಡಿಗೆ ಮಾಡುವುದು ಎಷ್ಟು ಕಷ್ಟವೋ ಸಾಹಿತ್ಯ ಕೃತಿ ರಚಿಸುವುದೂ ಅಷ್ಟೇ ಕಷ್ಟ; ಹಾಗೆ ಮಾಡಬೇಕಾದದ್ದೂ ಇಲ್ಲ. "ನಮ್ಮಮ್ಮನ ಹಾಗೆ, ನಿನಗೆ ಅಡಿಗೆ ಮಾಡುವುದಕ್ಕೆ ಬರುವುದಿಲ್ಲ" ಎಂದು ಹೊಸದಾಗಿ ಮನೆಗೆ ಬಂದ ಹೆಂಡತಿಗೆ ಗಂಡ ಹೇಳುವುದು ಸಾಮಾನ್ಯ. ಅತ್ತೆಯ ಕೈಕೆಳಗೆ ನುರುಗಿದ ಮೇಲೆ ಸೊಸೆ, ಅಮ್ಮನ ಹಾಗೆ ಏಕೆ, ಅಮ್ಮನ ಅಮ್ಮನ ಹಾಗೂ ಮಾಡಬಲ್ಲಳು. ಆಗ ಗಂಡ, "ಅಮ್ಮನ ಕೈಲಾಗುವುದಿಲ್ಲ, ಇನ್ನು ಮೇಲೆ ನೀನೆ ಅಡಿಗೆ ಮಾಡು" ಎಂದು ಸೂಚ್ಯವಾಗಿ, ಹೆಂಡತಿಯ ಅಡಿಗೆಯ ಕಡೆಗೆ ಒಲಿಯುತ್ತಾನೆ. ಮೊದಲು, ಕೆಲವು ಕಾಲ ಬರಹಗಾರನ ಕೃತಿಗಳು ಬಾಲಿಶ, ಅಪಕ್ವ ಆಗಿರಬಹುದು. ಕೈ ಕುದುರಿದ ಮೇಲೆ, ನಿಜವಾದ ಬರಹಗಾರ ತನ್ನ ರುಚಿ ಸಿದ್ಧಿಯಲ್ಲಿ

ನಂಬಿಕೆ ಉಳ್ಳವನಾಗುತ್ತಾನೆ. ಆತ್ಮವಿಶ್ವಾಸದಿಂದ ಬರೆಯುತ್ತಾನೆ. ತನಗೇ ತೃಪ್ತಿಕೊಡದ ಕೃತಿಯನ್ನು ಅವನು ಎಂದಿಗೂ ಪ್ರಕಟಿಸುವುದಿಲ್ಲ. ಇಂಥ ಬರಹಗಾರನ ಬರಹ ಬರೆಯುವಾಗಲೂ, ಬರೆದ ಮೇಲೂ ಅವನಿಗೆ ತೃಪ್ತಿ ಕೊಡುತ್ತದೆ. ಈ ದೃಷ್ಟಿಯಿಂದ, ನಾನು ಬರೆದ ಪದ್ಯ, ಕಥೆ, ಕಾದಂಬರಿ, ನಾಟಕ, ಪ್ರಬಂಧ, ಇವುಗಳಲ್ಲಿ ಬಹುಪಾಲಿನವು ನನಗೆ ತೃಪ್ತಿ ಕೊಟ್ಟಿವೆ. ಒಂದು ನಿರ್ದಿಷ್ಟ ಶ್ರೋತೃವರ್ಗವನ್ನು ಗಮನದಲ್ಲಿರಿಸಿಕೊಂಡೋ, ಇಲ್ಲವೆ, ಒಂದು ಶ್ರೋತೃವರ್ಗವನ್ನು ಕಲ್ಪಿಸಿಕೊಂಡೋ ನಾನು ಎಂದೂ ಬರೆದಿಲ್ಲ. ಎಲ್ಲರಿಗೂ ಅರ್ಥವಾಗಬೇಕೆಂದು ಉದ್ದೇಶಪೂರ್ವಕವಾಗಿ ಸರಳವಾದ ಭಾಷೆಯನ್ನು ಬಳಸಹೋಗಿಲ್ಲ; ಹಾಗೆಯೇ ಪಾಂಡಿತ್ಯ ಪ್ರದರ್ಶನಕ್ಕಾಗಿ ಪ್ರೌಢವಾಗಿಯೂ ಬರೆಯಹೋಗಿಲ್ಲ. ಅಪವಾದಗಳು ಇಲ್ಲವೆಂದಲ್ಲ. ಒಂದು ಕಡೆ, ಕಸರತ್ತು ಮಾಡುವುದಕ್ಕಾಗಿ ಬಿ. ಎಂ. ಶ್ರೀಯವರಂತೆ ಪುಟತುಂಬ ಒಂದೇ ವಾಕ್ಯ ಬರೆದಿದ್ದೇನೆ ; ನಾನೂ, ಸ್ವಲ್ಪ ಸಂಸ್ಕೃತ ಬಲ್ಲೆ ಎಂದು ತೋರಿಸಿಕೊಳ್ಳಲು ಒಂದೆರಡು ಪದ್ಯಗಳನ್ನು ಸಂಸ್ಕೃತ ಭೂಯಿಷ್ಠವಾಗಿ ಬರೆದಿದ್ದೇನೆ. ಕಥೆ ಕಾದಂಬರಿಗಳಲ್ಲಂತೂ, "ತಲೆಗೆಲ್ಲಾ ಒಂದೇ ಮಂತ್ರ" ಎನ್ನುವಂತೆ, ಏಕಶ್ರುತಿಯ, ಒಂದೇ ಬಗೆಯ ಶೈಲಿಯಲ್ಲಿ ಬರೆಯುವ ರೀತಿ, ನನಗೆ ಒಪ್ಪಿತವಿಲ್ಲ. ಶೈಲಿಯ ವಿಚಾರದಲ್ಲಿ ನಾನು ಯಾವ ಪೂರ್ವಗ್ರಹಿಕೆಯಿಂದಲೂ ಬರೆಯಹೊರಡುವುದಿಲ್ಲ. ನನ್ನ ಕೃತಿಯ ವಸ್ತು ಅಥವಾ ವಿಷಯ ತನ್ನ ಶೈಲಿಯನ್ನು ತಾನೇ ಗೊತ್ತುಮಾಡಿಕೊಳ್ಳುತ್ತದೆ. ಸೃಜನಶೀಲ ಕೃತಿಗಳ ಬಗೆಗೆ ಮಾತ್ರ ಈ ಮಾತು. ಹತ್ತು ಸಂಪುಟಗಳ "ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ" ಗೆಂದು ನಾನು ಬರೆದ "ಶಾಸ್ತ್ರ ಸಾಹಿತ್ಯ" ಸಂಪುಟವನ್ನು ಉದ್ದೇಶಪೂರ್ವಕವಾಗಿ ಕೂಡಿದ ಮಟ್ಟಿಗೂ, ಸರಳವಾದ ಭಾಷೆಯಲ್ಲಿ ಬರೆದಿದ್ದೇನೆ. ಈ ಜಾತಿಯ ಗ್ರಂಥರಚನೆಯಲ್ಲಿ ಈ ದೃಷ್ಟಿ ಇರಬೇಕು ; ಈ ಗ್ರಂಥ ನನಗೆ "ಪೂರ್ಣ ತೃಪ್ತಿ"ಯನ್ನು ಕೊಟ್ಟಿದೆ ಎಂದು ಮೊದಲಿಗೇ ಹೇಳಿಬಿಡುತ್ತೇನೆ.

ತೃಪ್ತಿಯ ವಿಚಾರ ಹೇಳಿದೆ. ಈಗ ಪೂರ್ಣತೃಪ್ತಿಯ ವಿಚಾರಕ್ಕೆ ಬರುತ್ತೇನೆ. ನಾನು ಈ ಮೊದಲೇ ಹೇಳಿದಂತೆ ನಿಜವಾದ ಬರಹಗಾರನ ಕೃತಿ ಅವನಿಗೆ ತೃಪ್ತಿ ಕೊಟ್ಟೇ ಕೊಡುತ್ತದೆ. ಏಕೆಂದರೆ ಅವನು ಬರೆಯುವುದೇ ಆತ್ಮಸಂತೋಷಕ್ಕಾಗಿ, ಆತ್ಮತೃಪ್ತಿಗಾಗಿ. ಈ ತೃಪ್ತಿಯೇ ಲಾಕ್ಷಣಿಕರು ಹೇಳುವ "ಸದ್ಯಃ ಪರನಿರ್ವೃತ್ತಿ", ಅಥವಾ "ತತ್ಕಾಲದ ಪರಮಾನಂದ", divine bliss here and now. ಕೃತಿ ರಚನೆ ಮಾಡುವಾಗ, ಮಾಡಿದ ಕೂಡಲೆ, ದೊರಕುವ ಸಂತೃಪ್ತಿ ಇದೆಯಲ್ಲ, ಇದನ್ನು "ಪೂರ್ಣತೃಪ್ತಿ" ಎಂದು ಕರೆಯಬಹುದು. ನಾನು ರಚಿಸಿರುವ ಎಲ್ಲ ಕೃತಿಗಳೂ ಅಲ್ಲದಿದ್ದರೂ, ಹಲವು ಈ ತೃಪ್ತಿಯನ್ನು ಕೊಟ್ಟಿರುವುದರಿಂದ, ಯಾವ

ಒಂದು ಕೃತಿಯನ್ನು ಮಾತ್ರ ಪೂರ್ಣತೃಪ್ತಿಯನ್ನು ಕೊಟ್ಟದ್ದು ಎಂದು ಹೇಳುವುದು ಕಷ್ಟವಾಗುತ್ತದೆ.

ಪೂರ್ಣತೃಪ್ತಿಗೆ ಮುಖ್ಯವಾದ ಇನ್ನೊಂದು ಮುಖವುಂಟು. ಅದಿಗೊಂದು ದೃಷ್ಟಾಂತವನ್ನು ಮತ್ತೆ ಪ್ರಸ್ತಾಪಿಸಬಹುದಾದರೆ, ಮನೆಯಾಕೆ ಮಾಡಿದ ಅಡಿಗೆ ಸಾರ್ಥಕವಾಗುವುದು, ಮನೆಯವರೆಲ್ಲ ಉಂಡು "ಚೆನ್ನಾಗಿದೆ" ಎಂದು ಬಾಯಿ ಚಪ್ಪರಿಸಿದಾಗ. ಆಗ ಮನೆಯಾಕೆಯ ಮುಖ ಹಪ್ಪಳ ಅರಳಿದ ಹಾಗೆ ಅರಳುತ್ತದೆ. Proof of the Pudding is in the eating. ಕಡಬು ಚೆನ್ನಾಗಿದೆ ಎಂದು ಮಾಡಿದವರೇ ಹೇಳಿದರೆ ಏನು ಸಾರ್ಥಕ್ಯ ? ತಿಂದವರು ಹಾಗೆ ಹೇಳಬೇಕು. ಕವಿ ತಾನು ಬರೆದ ತೃಪ್ತಿ ಪಡೆದಮೇಲೆ ಸಹೃದಯರು ಓದಿ ತೃಪ್ತಿ ಪಡಲಿ—ಎಂದು ಬಯಸುತ್ತಾನೆ. "ಕಟ್ಟಿಯುಮೇನೊ ಮಾಲೆಗಾರನ ಪೂಸ ಬಾಸಿಗಂ, ಮುಡಿವ ಭೋಗಿಗಳಿಲ್ಲದೆ ಬಾಡಿ ಪೋಗದೇ ?" ಎಂಬ ಜನ್ನನ ಮಾತು ಈ ಅಭಿಪ್ರಾಯವನ್ನು ಬಹು ಮನೋಜ್ಞವಾಗಿ ತಿಳಿಸಿದೆ. ಕಾವ್ಯದ ಹುಟ್ಟು ಕವಿಯ ಪ್ರತಿಭೆಯಲ್ಲಿ : ಅದರ ನೆಲಸು ಸಹೃದಯನ ಹೃದಯದಲ್ಲಿ. "ಸರಸ್ವತ್ಯಾಸ್ತತ್ವಂ ಕವಿ ಸಹೃದಯಾಖ್ಯಂ ವಿಜಯತೇ". ಸರಸ್ವತೀತತ್ವವು ಕವಿ–ಸಹೃದಯರಿಬ್ಬರನ್ನು ಅವಲಂಬಿಸಿರತಕ್ಕದ್ದು ; ಅವರ ಅನ್ಯೋನ್ಯಾಶ್ರಯದಲ್ಲಿ ಕಾವ್ಯದ ಗೆಲುವಿನ ಗುಟ್ಟು. ಈ ವಿಜಯಸಿದ್ಧಿಯೇ ನಿಜವಾದ ಯಶಸ್ಸು. ಕವಿ ಯಶಃ ಪ್ರಾರ್ಥೀ ; ಯಶಸ್ಸನ್ನು ಬಯಸತಕ್ಕವನು. ತನ್ನ ಕೃತಿಯಿಂದ ಯಶಸ್ಸು ದೊರಕಿದಾಗಲೇ, ಎಂದರೆ, ತಾನು ಬದುಕಿರುವಾಗ, ತಡವಾಗಿಯಾದರೂ, ಸಹೃದಯರು—ಇವರ ಸಂಖ್ಯೆ ಅಪಾರವಾಗಿರಬೇಕಿಲ್ಲ—ಪರಿಮಿತ ಸಂಖ್ಯೆಯ ಸಹೃದಯರು ಅಯಾಚಿತವಾಗಿ ತಮ್ಮ ಮೆಚ್ಚುಗೆಯನ್ನು ತಿಳಿಸಿದಾಗಲೇ ಕವಿಗೆ ಪೂರ್ಣತೃಪ್ತಿ. ಹೆಚ್ಚುಕಡಿಮೆ ಜನ್ನನ ಮಾತನ್ನು ಹೋಲುವ ಗಯಟೆ ಕವಿಯ ಮಾತನ್ನು ಇಲ್ಲಿ ಸ್ಮರಿಸುವುದು ಸೂಕ್ತ: ಮಾಲೆಯನು ಕಟ್ಟುವುದು ಬಲು ಸುಲಭವಹುದು; ಬಲು ಕಷ್ಟ ಮುಡಿವುದಕೆ ತಕ್ಕವರನರಸುವುದು ! ಕಷ್ಟಪಟ್ಟು ಗ್ರಂಥರಚನೆಮಾಡಬಹುದು; ಕಷ್ಟ ಏಕೆಂದರೆ, ಗ್ರಂಥರಚನೆ ಮಾಲೆ ಕಟ್ಟುವಷ್ಟು ಸುಲಭವಲ್ಲ. ಇಂಗ್ಲಿಷಿನಲ್ಲಿ ವಾಡಿಕೆಯಾಗಿ ಹೇಳುವಂತೆ, ಗ್ರಂಥರಚನೆಯಲ್ಲಿ inspiration ಸೂರ್ತಿ ಒಂದು ಪಾಲಾದರೆ, perspiration ಬೆವರು ಸುರಿಸುವುದು, ಕೆಲವು ವೇಳೆ ರಕ್ತ ಬಸಿಯುವುದೂ ಆಗಬಹುದು—ಇದು ಹತ್ತು ಪಾಲು. ನಮ್ಮ ಲಾಕ್ಷಣಿಕರು ಗ್ರಂಥರಚನೆಯ ಸಂಕಷ್ಟವನ್ನು ಪ್ರಸವವೇದನೆಗೆ ಹೋಲಿಸಿದ್ದಾರೆ. ಗ್ರಂಥ ರಚನೆಯಾದಮೇಲೆ ಆತ್ಮತೃಪ್ತಿಯಾದರೂ, ಸಹೃದಯರ ಮೆಚ್ಚುಗೆಯ ಪೂರ್ಣತೃಪ್ತಿ ದೊರಕಲು ಬಹು ಕಾಲ ಕಾಯಬೇಕು. ಇದು ಅಚ್ಚಿನ ಯುಗ. ಬರೆದ ಗ್ರಂಥ ಅಚ್ಚಿನಮನೆ ಕಾಣಬೇಕಾದರೆ ಅಶ್ವಮೇಧಯಾಗ ಮಾಡಿದ ಹಾಗೆ. ಅಚ್ಚಾಗದೆ ಜನ ಓದುವಂತಿಲ್ಲ ; ಓದುಗರು ದೊರೆಯದೆ, ಸಹೃದಯರು ದೊರೆಯುವಂತಿಲ್ಲ. ಒಂದು ಗ್ರಂಥ ರಚಿತ

ವಾಗುವ ಕಾಲಕ್ಕೂ, ಅಚ್ಚಾಗುವ ಕಾಲಕ್ಕೂ, ಅಚ್ಚಾಗಿ ಅವರ ವಿಮರ್ಶೆಗಳು ಹೊರಬರುವ ಕಾಲಕ್ಕೂ ನಡುನಡುವೆ ವರ್ಷಗಳ ಅಂತರ ಕಾಣಿಸಿಕೊಂಡು, ಸಹೃದಯರ ಮೆಚ್ಚುಗೆಯನ್ನು ತಿಳಿಯಲು ಗ್ರಂಥಕರ್ತ ವರ್ಷಗಟ್ಟಲೆ ಕಾಯಬೇಕಾಗುತ್ತದೆ. ಗ್ರಂಥ ಅಚ್ಚಾಗಿ ಬಂದ ಕೂಡಲೇ, ನೂರು ಪ್ರತಿಗಳನ್ನು ಗೌರವಾರ್ಥ ಗುರುಹಿರಿಯ ಮಿತ್ರವರ್ಗಕ್ಕೆ ಕಳಿಸಿಕೊಟ್ಟರೆ, ಮೂರು ಮೆಚ್ಚುಗೆಯ ಪತ್ರ ಬಂದರೆ ಹೆಚ್ಚು. ಆದರೂ ಈ ಮೂರು ಮೆಚ್ಚುಗೆಯ ಪತ್ರ ಸ್ವತಃ ಬರಹಗಾರರೂ, ಸಹೃದಯರೂ ಆದವರಿಂದ ಬಂದಾಗ, ಅವು ನೂರು ಪತ್ರಕ್ಕೆ ಸಮನಾಗುತ್ತವೆ. ಸಹೃದಯರಾದ ವಿಮರ್ಶಕರ ಮೆಚ್ಚುಗೆಯ ಮಾತೂ ಒಡಗೂಡಿದಾಗ ಕೃತಿಕಾರನಿಗೆ ಪೂರ್ಣತೃಪ್ತಿ ಲಭಿಸುತ್ತದೆ. ಈ ಬಗೆಯ ಪೂರ್ಣತೃಪ್ತಿ ನನ್ನ "ಮುಗಿಯದ ಮಾಯೆ" ಎಂಬ ಕವನ ಸಂಕಲನ, "ಮುಗಿಲುಗಳು" ಎಂಬ ಪ್ರಬಂಧ ಸಂಕಲನ, "ಜೀವನ ನಾಟಕ" ಎಂಬ ವ್ಯಕ್ತಿ ಚಿತ್ರಗಳ ಸಂಕಲನಗಳ ಬಗೆಗೆ ಉಂಟಾಗಿದೆ. ನಾನು ಸಂಪಾದನೆ ಮಾಡಿರುವ "ಕವಿರಾಜ ಮಾರ್ಗ", "ಉದಯಾದಿತ್ಯಾಲಂಕಾರ" ಮತ್ತು "ಅರ್ಜುನ" ಎಂಬ ಗ್ರಂಥಗಳ ಬಗೆಗೂ ಪೂರ್ಣತೃಪ್ತಿ ದೊರಕಿದೆ. ಈಗ ಹೆಸರಿಸಿದ ಗ್ರಂಥಗಳ ವಿಷಯವಾಗಿ ಸಹೃದಯರಾದ ಹಿರಿಯ ಮಿತ್ರರೂ, ಗುರು ವರ್ಗದವರೂ, ಗುರು ಸ್ಥಾನೀಯರೂ, ಇತರ ಸನ್ಮಿತ್ರರೂ ಬರೆದ ಪತ್ರಗಳಿಂದ ಕೆಲವು ಮೆಚ್ಚುಗೆಯ ಮಾತು ಗಳನ್ನು ಇಲ್ಲಿ ಎತ್ತಿ ಹೇಳಬಹುದು. ಆದರೆ ಇತರರು ಹೇಳಿರುವ ಮಾತುಗಳೇ ಆದರೂ, ನನ್ನ ಬಾಯಿಂದ ಬಂದರೆ ಸ್ವಪ್ರಶಂಸೆಯಾಗಬಹುದು—ಎಂಬ ಭಯದಿಂದ ಸುಮ್ಮನಿರಬೇಕಾಗಿದೆ.

ಪ್ರಕಟವಾದ ನನ್ನ ಎಲ್ಲ ಗ್ರಂಥಗಳ ಬಗೆಗೂ ಪತ್ರಿಕೆಗಳಲ್ಲಿ ವಿಮರ್ಶೆಗಳು ಪ್ರಕಟವಾಗಿವೆ. ಅವುಗಳನ್ನು ವಿಮರ್ಶೆ ಎನ್ನುವುದಕ್ಕಿಂತಲೂ ಅಭಿಪ್ರಾಯಗಳು ಎಂದರೆ ಸರಿಯಾದೀತೇನೋ. ಪತ್ರಿಕೆಗಳಲ್ಲಿ ಒಂದೇ ಬಗೆಯ ಸದಭಿಪ್ರಾಯಗಳನ್ನು ಒಂದು ಕೃತಿಯ ಬಗೆಗೆ ಓದಿದಾಗ ಕೃತಿಕಾರನಿಗೆ ಸಂತೋಷವಾಗುತ್ತದೆ. ನನ್ನ 'ಭಾಗ್ಯಲಕ್ಷ್ಮಿ', "ಸೌಭಾಗ್ಯವತಿ", "ಮುಗಿಯದ ಮಾಯೆ", "ಮಾರ್ಗದರ್ಶಕ" ಮತ್ತು "ಬಿಸಿಲು–ಬೆಳುದಿಂಗಳು"–ಕಥಾಸಂಕಲನಗಳು, "ಜೀವನ ನಾಟಕ"—ಈ ಗ್ರಂಥಗಳ ಬಗೆಗೆ ವಿರುದ್ಧವಾದ ಅಭಿಪ್ರಾಯ ಪ್ರಕಟವಾದಂತೆ ತೋರುವುದಿಲ್ಲ. ಹೀಗಿರುವುದರಿಂದ ಈ ಅಭಿಪ್ರಾಯಗಳನ್ನು ಓದಿಕೊಂಡ ಗಳಿಗೆಯಲ್ಲಿ ಗ್ರಂಥ ಬರೆದದ್ದು ಸಾರ್ಥಕವಾಯಿತು ಎನ್ನಿಸಿದೆ.

ಎಲ್ಲ ಗ್ರಂಥಗಳ ವಿಚಾರವಾಗಿಯೂ ಈ ಮಾತು ಹೇಳಲು ಸಾಧ್ಯವಿಲ್ಲ. ಕೆಲವು ಕೃತಿಗಳ ವಿಷಯದಲ್ಲಿ ಹೊಗಳಿಕೆ–ತೆಗಳಿಕೆ ಎರಡೂ ಪ್ರಕಟವಾಗಿವೆ. ಸ್ವಪ್ರಚಾರ, ಸ್ವಪ್ರಶಂಸೆ, ಆಗಬಹುದೆಂಬ ಭೀತಿಯಿದ್ದರೂ, ನಾನು ಕುರಿತಿರುವ ವಿಷಯವನ್ನು ಸ್ಪಷ್ಟಪಡಿಸುವುದಕ್ಕಾಗಿ ಒಂದು ಉದಾಹರಣೆಯನ್ನು ಕೊಡುವುದು

ಅನಿವಾರ್ಯವಾಗುತ್ತದೆ. 1950ರಲ್ಲಿ ಪ್ರಕಟವಾದ "ಮಾದನ ಮಗಳು" ಕಾದಂಬರಿಯನ್ನು ಕುರಿತು, ಒಬ್ಬ ಕಾದಂಬರಿಕಾರ–ವಿಮರ್ಶಕರು "ಪ್ರಚಾರದ ಕಾದಂಬರಿ" ಎಂದು ವಿಶ್ಲೇಷಿಸಿ ಹೇಳಿದರೆ, ಇನ್ನೊಬ್ಬರು–"ಇದು ಹರಿಜನ ಸಮಸ್ಯೆಯ ಕಾದಂಬರಿ ಎಂದು ಇದು ಪ್ರಚಾರಾತ್ಮಕ ಸಾಹಿತ್ಯ ಎಂದು ತಟ್ಟನೆ ಕೆಲವರು ತೀರ್ಮಾನಮಾಡಿ ಬಿಡುವುದುಂಟು. ಆದರೆ, ಪ್ರಚಾರಕ್ಕಿಂತಲೂ ಕಲೆಗೇ ಇದರಲ್ಲಿ ಪ್ರಧಾನ ಸ್ಥಾನ ಇದೆ. "Uncle Tom's Cabin" ದಲ್ಲಿ ಅಮೇರಿಕಾದಲ್ಲಿಯ ನಿಗ್ರೋ ಸಮಸ್ಯೆ ಇರುವಂತೆ, ಇಲ್ಲಿ ಹರಿಜನ ಸಮಸ್ಯೆ ಇದೆ. ಕಾದಂಬರಿಯ ಕಥಾವಸ್ತುವನ್ನು ನಿರೂಪಿಸಿರುವ ಕಾದಂಬರಿಕಾರರ ಕಲಾಪ್ರೌಢಿಮೆಯಿಂದಲೇ, ಕೆಲವು ಕಡೆ ನೀರಸವಾಗಿ ಬಿಡಬಹುದಾಗಿದ್ದ ಸನ್ನಿವೇಶಗಳು ಸಹ, ರಸಭರಿತವಾಗಿಯೇ ಉಳಿದಿವೆ. ವಸ್ತುನಿರೂಪಣೆಗಿಂತಲೂ ನಮ್ಮ ಮನಸ್ಸನ್ನು ಸೆಳೆಯುವುದು, ಪಾತ್ರ ಪರಿಪುಷ್ಟಿ" ಎಂದು ಅಭಿಪ್ರಾಯಪಟ್ಟರು. ಮತ್ತೊಬ್ಬ ವಿಮರ್ಶಕರಿಗೆ, "ಸಮಸ್ಯೆಯನ್ನು ಅದರ ಅನೇಕ ಮುಖಗಳಲ್ಲಿ ಮಂಡಿಸುತ್ತಾರೇನೋ ಸರಿ. ಆದರೆ ಪುಸ್ತಕ ಮಾತ್ರ ಬೇಸರ ಬರಿಸುವಂತಿದೆ. ಇಡೀ ಕಾದಂಬರಿಯಲ್ಲಿ ಯಾವ ಪಾತ್ರವೂ ನಮ್ಮ ಮನಸ್ಸಿನಮೇಲೆ ವಿಶೇಷ ಪರಿಣಾಮ ಮಾಡುವುದಿಲ್ಲ" ಎಂಬಂತೆ ಕಂಡಿತು. ವಾಸ್ತವವಾಗಿ, ಅನಾರೋಗ್ಯದಲ್ಲೂ ಸುಮಾರು ಒಂದು ತಿಂಗಳ ಅವಧಿಯಲ್ಲಿ 400 ಪುಟಗಳ ಈ ಕಾದಂಬರಿಯನ್ನು ಮುಗಿಸಿದಾಗಲೇ ನನಗೆ ಪೂರ್ಣತೃಪ್ತಿಯಾಗಿತ್ತು. ಮಿಶ್ರಾಭಿಪ್ರಾಯಗಳನ್ನು ನೋಡಿದ ಮೇಲೆ ಪೂರ್ಣತೃಪ್ತಿಗೆ ಸ್ವಲ್ಪ ಕೊರತೆಯುಂಟಾಯಿತು. One man's meat is another man's poison. ಒಬ್ಬನಿಗೆ ಮಾವು ; ಇನ್ನೊಬ್ಬನಿಗೆ ಬೇವು.

ಈ ತೃಪ್ತಿಯ ವಿಚಾರವನ್ನು ಇನ್ನೂ ಒಂದು ದೃಷ್ಟಿಯಿಂದ ಪರಿಶೀಲಿಸಬೇಕು. ಕಾಲ ಕಳೆದಂತೆ, ಒಮ್ಮೆ ತೃಪ್ತಿಯನ್ನು ಕೊಟ್ಟ ಕೃತಿಯೇ, ಏನೋ ಕೊರತೆಯಿಂದ ಕೂಡಿರುವಂತೆ ಕಂಡು ಬರುತ್ತದೆ. ಒಟ್ಟು ಸಾಧನೆಯಲ್ಲಿಯೇ ಏನೋ ಒಂದು ಅತೃಪ್ತಿ ಉಂಟಾಗುತ್ತದೆ. ಇನ್ನೂ ಉತ್ತಮವಾದದ್ದನ್ನು ಸೃಷ್ಟಿಸಬೇಕೆಂಬ ಮಹತ್ವಾಕಾಂಕ್ಷೆ ಬಾಧಿಸುತ್ತದೆ. ಇದ್ದುದರಲ್ಲಿಯೇ ತೃಪ್ತಿಪಟ್ಟುಕೊಳ್ಳಬೇಕು. ನನಗಿಂತ ಚೆನ್ನಾಗಿ ಬರೆಯುವವರು ಹುಟ್ಟಿಕೊಂಡಿದ್ದಾರೆ. ಒಂದು ಕೋಗಿಲೆಯಿಂದ ವಸಂತವಾಗದು, "ಅಹಂ ಕರೋಮಿ ಇತಿ ವೃಥಾಭಿಮಾನಃ" ಎಂಬ ವಿವೇಕೋದಯವಾಗಿ, ಮನಸ್ಸಿಗೆ ನೆಮ್ಮದಿಯಾಗುತ್ತದೆ.

ಇಷ್ಟು ಹೇಳಿ, ಪೂರ್ಣತೃಪ್ತಿಯನ್ನು ಕೊಟ್ಟ ಒಂದು ಕೃತಿಯನ್ನು ನಾನು ಹೆಸರಿಸಿಲ್ಲ. ನಾಲ್ಕು ಮಕ್ಕಳ ತಾಯಿಯನ್ನು, "ಯಾರಲ್ಲಿ ನಿನಗೆ ಹೆಚ್ಚು ಪ್ರೇಮ?, ಯಾರು ಪೂರ್ಣತೃಪ್ತಿಯನ್ನು ಕೊಟ್ಟಿದ್ದಾರೆ." ಎಂದು ಕೇಳಿದರೆ, ಏನು ತಾನೆ ಹೇಳಿಯಾಳು?

ಅನೇಕ ಎಡರು–ತೊಡರುಗಳನ್ನು ಎದುರಿಸಿ, ಸಾಹಿತ್ಯ ಕ್ಷೇತ್ರದಲ್ಲಿ, ನನ್ನ ಕೈಲಾದದ್ದನ್ನು ಮಾಡಿದ್ದೇನೆ, ಮಾಡುತ್ತಿದ್ದೇನೆ. ಬರಹ ಹೇಗಾದರೂ ಇರಲಿ, ಎಲ್ಲ ಬಗೆಯ ಬರಹವನ್ನು ಬರೆಯುತ್ತಿರುವುದರಲ್ಲೇನೆ ನನಗೆ ಪೂರ್ಣತೃಪ್ತಿ. ಇಹ ಸಂಸಾರದ ತಾಪತ್ರಯವನ್ನು ನೀಗಿ ಆತ್ಮಸಂಸ್ಕಾರಕ್ಕೆ ಸಾಧಕವಾಗುವ ಸಂಜೀವಿನಿ ಸಾಹಿತ್ಯ ಓದುಗ, ಕೃತಿಕಾರ, ಇಬ್ಬರಿಗೂ ಅನ್ವಯಿಸುವ ಮಾತು ಇದು. ಅರ್ಧ ಶತಮಾನ ಕಾಲ ಈ ಸಂಜೀವಿನಿಯನ್ನು ಸೇವಿಸಿರುವ ನಾನು "ಧನ್ಯೋಽಸ್ಮಿ" ಎಂದು ನಮ್ರತೆಯಿಂದ ಹೇಳುತ್ತೇನೆ.

ಸಾಧನೆಯ ಬದುಕು

ಆರ್. ಎಸ್. ರಾಮರಾವ್

ಶ್ರೀ ಎಂ. ವಿ. ಸೀತಾರಾಮಯ್ಯ ಕನ್ನಡ ಸಾಹಿತ್ಯದ ನವೋದಯ ಕಾಲದಲ್ಲಿ ಸಾಹಿತ್ಯ ಸೃಷ್ಟಿಗೆ ತೊಡಗಿ, ಹಳೆಯ ಸಂಪ್ರದಾಯದ ಮತ್ತು ಹೊಸ ಬೆಳವಣಿಗೆಯ ಸಾಹಿತ್ಯಕ್ಕೆ ಸೇತುವೆಯಂತೆ ಕೆಲಸ ಮಾಡಿದ ನಿಷ್ಠಾವಂತ ಸಾಹಿತಿ. ಇಂಗ್ಲಿಷ್ ವಿದ್ಯಾಭ್ಯಾಸದ ಪ್ರಭಾವ ನಮ್ಮ ಜನದ ಮೇಲೆ ಏಕಪ್ರಕಾರವಾಗಿ ಬೀಳುತ್ತಿದ್ದಾಗ ಅದನ್ನು ಮರೀಚಿಕೆಯಂತೆ ಭ್ರಮಿಸದೆ, ಅದರ ನಿಜವನ್ನೂ, ಸತ್ತ್ವವನ್ನೂ, ಅದರ ಔಚಿತ್ಯಪೂರ್ಣ ಅನುಸರಣೆಯನ್ನು ಕಂಡುಕೊಂಡು ಅದನ್ನು ಬಳಸತೊಡಗಿದರು. ತಮ್ಮದೇ ಆದ ವಿಶಿಷ್ಟ ಸಾಹಿತ್ಯವನ್ನೇ ಸೃಷ್ಟಿಮಾಡಿ, ತಮ್ಮ ವ್ಯಕ್ತಿತ್ವವನ್ನು ಬೆಳಗಿಸಿದರು.

ಹುಟ್ಟು ಕವಿ ಆಗದಿದ್ದರೂ. ತಾವು ಕಂಡ, ಕೇಳಿದ, ಅಭ್ಯಾಸ ಮಾಡಿದ ಜ್ಞಾನವನ್ನೇ ರೂಢಿಸಿಕೊಂಡು, ಆದರ್ಶ ಸಾಹಿತ್ಯ ವಿದ್ಯಾರ್ಥಿ, ಪಂಡಿತ, ವಿದ್ವಾಂಸ ಆಗುವ ಕ್ರಮವನ್ನು ತೋರಿಸಿಕೊಟ್ಟರು. ಅವರ ಬದುಕು ಈ ಸಾಧನೆಯ ಮಾರ್ಗದಲ್ಲಿ ಒಂದು ದೃಷ್ಟಾಂತ, ಮೇಲ್ಪಂಕ್ತಿ. ಸತತಾಭ್ಯಾಸ, ವೃದ್ಧಸೇವಾನುರಾಗಗಳಿಂದ ಸುಪ್ತವಾಗಿದ್ದ ಪ್ರತಿಭೆಯನ್ನು ಎಚ್ಚರಗೊಳಿಸಿ ಕವಿಗಳಾದರು, ಸಾಹಿತಿಗಳಾದರು.

ಸೃಜನಶೀಲ ಸಾಹಿತ್ಯದ ಜೊತೆ–ಜೊತೆಗೇ ಸಂಶೋಧನಾತ್ಮಕ ಸಾಹಿತ್ಯವನ್ನು ಪರಿಷ್ಕಾರವಾಗಿ ಸೃಷ್ಟಿಸಿ ಒಂದು ಅಪೂರ್ವ ಸಾಧಕರಾದರು. ಅವರು ಸಾಹಿತ್ಯದ ಅನೇಕ ಪ್ರಕಾರಗಳಲ್ಲಿ ಕೈ ಆಡಿಸಿದ್ದರೂ, ಸಂಶೋಧನ ಕ್ಷೇತ್ರದಲ್ಲಿ ಅವರ ಹೆಸರು ಚಿರಸ್ಥಾಯಿಯಾಗಿ ನಿಲ್ಲುವುದರಲ್ಲಿ ಸಂದೇಹವಿಲ್ಲ. ಅವರ ಬದುಕು ಹೇಗೆ ಅನೇಕ ತಿರುವುಗಳಿಂದ ಕೂಡಿ, ಈ ಗುರಿಯತ್ತ ಸಾಗಿತು—ಎಂಬುದನ್ನು ಅವರ ಜೀವನ ಮಾರ್ಗದಿಂದ ಗುರುತಿಸಬಹುದು.

ಕನ್ನಡಿಗರ ಗೌರವಕ್ಕೂ, ಶಿಷ್ಯರ ಪ್ರೇಮಕ್ಕೂ, ಸ್ನೇಹಿತರ ವಿಶ್ವಾಸಕ್ಕೂ, ಸಹೃದಯರ ಅಭಿಮಾನಕ್ಕೂ ಪಾತ್ರರಾದ ಎಂ. ವಿ. ಸೀತಾರಾಮಯ್ಯನವರು. ತಮ್ಮ ಸ್ವಪ್ರಯತ್ನದಿಂದ, ಜೀವನದಲ್ಲಿ ಕಂಡುಕೊಂಡ ನಿಷ್ಠೆಯಿಂದ, ನಮ್ಮೆಲ್ಲರ ಗೌರವಕ್ಕೆ ಪಾತ್ರರಾಗಿದ್ದಾರೆ.

ಸೀತಾರಾಮಯ್ಯನವರ ಹುಟ್ಟೂರು ಮೈಸೂರು. ಅಲ್ಲಿ ಹಳೆಯ ಅಗ್ರಹಾರಕ್ಕೆ ಸೇರಿಕೊಂಡ, ‘ರಾಮಚಂದ್ರ ಅಗ್ರಹಾರ’ ಎಂಬುದು ಒಂದು ಬಡಾವಣೆ. ಬಡಾವಣೆಯಲ್ಲಿ ನೆಲಸಿದ್ದ ಕುಟುಂಬಗಳೆಲ್ಲ ಸ್ವಲ್ಪ ಹೆಚ್ಚು ಕಡಿಮೆ ಬಡವರೇ. ಆದರೆ ಜನ, ಸುಸಂಸ್ಕೃತರು, ಸ್ನೇಹಪರರು; ತಮ್ಮ ಅಲ್ಪ ಆದಾಯದಿಂದ ತೃಪ್ತರಾಗಿ ಜೀವನ ನಡೆಸುತ್ತಿದ್ದವರು. ಆ ಕುಟುಂಬದ ಅನೇಕರಿಗೆ ಮಕ್ಕಳನ್ನು ಶಾಲೆಗೆ ಕಳಿಸಿ ಹೆಚ್ಚಿನ ವಿದ್ಯಾಭ್ಯಾಸ ಕೊಡಿಸುವ ಸಾಮರ್ಥ್ಯವೂ ಇರಲಿಲ್ಲ. ಒಂದು–ಆರ್ಥಿಕವಾಗಿ, ಎರಡು–ವ್ಯಾವಹಾರಿಕ ವಿದ್ಯೆ ಅಷ್ಟೇ ಸಾಕು ಎಂಬ ಮನೋವೃತ್ತಿಯಿಂದಾಗಿ ಆ ಗುಂಪಿನಲ್ಲಿ ಇಬ್ಬರು, ತಾವು ಸ್ವಲ್ಪ ಓದಿಕೊಂಡಿದ್ದರಿಂದ, ವಿದ್ಯೆಯೇ ಮಕ್ಕಳ ಭವಿಷ್ಯಕ್ಕೆ ಆಧಾರ–ಎಂದು ಭಾವಿಸಿದ್ದರಿಂದ, ತಮ್ಮ ಮಕ್ಕಳಿಗೆ ಹೆಚ್ಚಿನ ವಿದ್ಯಾಭ್ಯಾಸ ಕೊಡಿಸಲು ನಿರ್ಧರಿಸಿದವರು. ತಮ್ಮ ಕಷ್ಟ ಹೇಗೂ ಇದ್ದದ್ದೇ. ತಮ್ಮ ಮಕ್ಕಳಿಗೆ ಆಸ್ತಿ–ಪಾಸ್ತಿ ದೊರಕಿಸಿಕೊಡುವ ಸವಲತ್ತಾಗಲೀ, ಸಾಮರ್ಥ್ಯವಾಗಲೀ, ವಾತಾವರಣವಾಗಲಿ, ಇಲ್ಲದ್ದರಿಂದ ಅವರು ಸಾಧಿಸಿದ್ದು ಒಂದೇ–ಅದೇ ಮಕ್ಕಳಿಗೆ ಕೊಡಿಸಿದ ವಿದ್ಯೆ. ಆಚಾರ್ಯ ಪಾಠಶಾಲೆಯ ಮೂಲಕ ಒಂದು ವಿದ್ಯಾಕೇಂದ್ರವನ್ನೇ ಸ್ಥಾಪಿಸಲು ಕಾರಣರಾದ ದಿ|| ಎನ್. ಅನಂತಾಚಾರ್ಯರ ತಂದೆಯವರಾದ ಗುಂಡಾಚಾರ್–ಅವರು ಒಬ್ಬರು: ಎಂ. ವಿ. ಸೀ. ಅವರ ತಂದೆಯವರಾದ ವೆಂಕಟದಾಸಪ್ಪನವರು—ಇನ್ನೊಬ್ಬರು.

ವೆಂಕಟದಾಸಪ್ಪನವರಿಗೆ ಒಟ್ಟು ಎಂಟು ಜನ ಮಕ್ಕಳು: ನಾಲ್ಕು ಗಂಡು ನಾಲ್ಕು ಹೆಣ್ಣು. (ಒಂದು ಗಂಡು ಮಗು ಶೈಶವದಲ್ಲಿಯೇ ಕಣ್ಣು ಮುಚ್ಚಿಕೊಂಡಿತ್ತು) ಸೀತಾರಾಮಯ್ಯನವರು ಮೂರನೆಯ ಮಗ. ಸೀತಾರಾಮಯ್ಯ ಹುಟ್ಟಿದ್ದು ಸಾಧಾರಣ ಸಂವತ್ಸರದ ಭಾದ್ರಪದ ಶುದ್ಧ ಷಷ್ಠಿಯಂದು. ಎಂದರೆ, 9–9–1910. ದೈವ, ವಿಧಿ, ಅದೃಷ್ಟ ಮೊದಲಾದ ವಿಚಾರಗಳಲ್ಲಿ ನಂಬಿಕೆಯಿಟ್ಟಿದ್ದ ತಂದೆ, ಮಗನಿಗೆ ‘ಸೀತಾರಾಮ’ ಎಂದು ನಾಮಕರಣ ಮಾಡಿದರು. ಹಿರಿಯರ ಹೆಸರಿಡಬೇಕೆಂಬ ಒಂದು ಸಂಪ್ರದಾಯ, ದೈವದ ಹೆಸರಿಡಬೇಕೆಂಬ ಒಂದು ನಂಬಿಕೆ- ಈ ನಾಮಕರಣಕ್ಕೆ ಮೂಲ ಪ್ರೇರಣೆ. ‘ಸೀತಾರಾಮು’—ಇದು ಮನೆಯವರು, ಬೀದಿಯವರು, ಕರೆಯುತ್ತಿದ್ದ ಹೆಸರಿನ ರೂಪ; ಹುಟ್ಟಿದ ಕಾಲಾವಧಿಯಲ್ಲಿ, ಮನೆಯಲ್ಲಿ, ರಾಮಾಯಣ ಪಾರಾಯಣ ನಡೆಯುತ್ತಿತ್ತು. ಆ ‘ರಾಮನ’ ಹೆಸರು ಮನೆಯವರನ್ನೆಲ್ಲ ಭಾವಾವಿಷ್ಟರನ್ನಾಗಿ ಮಾಡಿತ್ತು. ಸಹಜವಾಗಿ, ಆ ಹೆಸರು ಮೂಡಿ ಬಂದುದರಲ್ಲಿ ಆಶ್ಚರ್ಯವೇನೂ ಇಲ್ಲ. ಜೊತೆಗೆ ಅವರ ತಾತನ ಚಿಕ್ಕಪ್ಪನ ಹೆಸರೂ ಸೀತಾರಾಮನೆಂದೇ ಇದ್ದುದ್ದು, ಈ ನಾಮಕರಣಕ್ಕೆ ಪುಷ್ಟಿ ಕೊಟ್ಟಿತ್ತು. ಈ ದೈವಿಕ ಕಲ್ಪನೆ ಎಷ್ಟು ಗಾಢವಾಗಿ ಬೇರೂರಿತ್ತು ಎಂಬುದಕ್ಕೆ ಸಾಕ್ಷಿಯಾಗಿ ಹೇಳುವುದಾದರೆ, ಐದು ವರ್ಷದ ಮಗುವಾಗಿದ್ದ ಸೀತಾರಾಮು, ತನ್ನ ತಮ್ಮನಿಗೆ ‘ಲಕ್ಷ್ಮಣ’ ಎಂಬ ಹೆಸರನ್ನೇ

ಇಡಬೇಕೆಂದು ಹಟಮಾಡಿದ್ದು—ಈ ದೈವದ ನಂಬಿಕೆಯೇ ನಮ್ಮವರನ್ನು ಆಗ ಕೈ ಹಿಡಿದು ನಡೆಸುತ್ತಿತ್ತು.

ವೆಂಕಟದಾಸಪ್ಪನವರ ಮಕ್ಕಳಲ್ಲಿ ಈ ಮಗು ತುಂಬ ಪ್ರತಿಭಾವಂತ ಎಂದೇನೂ ಆಗ ಹೇಳುವಂತಿರಲಿಲ್ಲ. ತಂದೆ, ತನ್ನ ಮಕ್ಕಳ ಪೋಷಣೆಯಲ್ಲಿ ಅಂಥ ಭಿನ್ನತೆಯನ್ನೇನೂ ತೋರಿಸಲಿಲ್ಲ. ಎಲ್ಲ ಮಕ್ಕಳಂತೆ ಇವನೂ: ಉಳಿದವರ ಪಾಲನೆ ಪೋಷಣೆಯಂತೆಯೇ ಇವನದೂ ನಡೆಯಿತು. ಎಲ್ಲರನ್ನೂ ಓದಿಸಿ, ವಿದ್ಯಾವಂತರನ್ನಾಗಿ ಮಾಡಬೇಕೆಂಬ ಒಂದು ದೃಢ ನಿಲುವು ಅವರದಾಗಿತ್ತು. ಅದರಂತೆ ಓದಿಸಿದರು. ಸಾಧಾರಣ ಗುಮಾಸ್ತರಾಗಿದ್ದ ಅವರು, ಆಗಿನ ಕಾಲಕ್ಕೆ ಅವರ ಸಂಪಾದನೆಯ ದೃಷ್ಟಿಯಿಂದ, ತುಟ್ಟಿಯೇ ಆಗಿದ್ದ ವಿದ್ಯಾಭ್ಯಾಸವನ್ನು ಎಲ್ಲ ಮಕ್ಕಳಿಗೆ ಕೊಡಿಸಿದ್ದು ಅವರ ಸಾಹಸವೇ ಎಂದು ಹೇಳಬೇಕು.

ಸೀತಾರಾಮಯ್ಯನವರ ವಿದ್ಯಾರ್ಜನೆ ಮತ್ತು ಸಾಹಿತ್ಯ ಪ್ರವೃತ್ತಿಗೆ ವಂಶ ಪಾರಂಪರಿಕ ಪರಿಸರವೂ ಕಾರಣವೆನ್ನಬಹುದೇನೋ. ಅವರ ವಂಶ—ವಿದ್ವತ್ತಿನ ವಂಶ. ಹಿರಿಯರೆಲ್ಲ ದೈವಭಕ್ತರು. ಆಧ್ಯಾತ್ಮ ಸಾಧನೆ ಮಾಡಿದವರು.[1] 1750ರ ಸುಮಾರಿನಲ್ಲಿದ್ದ ವಾಸುದೇವಾರ್ಯರು ಅದ್ವೈತ ವೇದಾಂತದಲ್ಲಿ ಸಂಸ್ಕೃತ ಭಾಷೆಯಲ್ಲಿ ಪ್ರಕಾಂಡ ಪಂಡಿತರು: ಬೋಧಕರು, ಸಾಧಕರು. 'ವಾಸುದೇವ ಮನನ', 'ವಿವೇಕಸಾರ' ಎಂಬ ಎರಡು ಉತ್ಕೃಷ್ಟ ಗ್ರಂಥಗಳನ್ನು ಸಂಸ್ಕೃತದಲ್ಲಿ ರಚಿಸಿದ್ದಾರೆ. 'ವಾಸುದೇವ ಮನನ'ವನ್ನು, ದೊಡ್ಡಬೆಲೆ ನಾರಾಯಣಶಾಸ್ತ್ರಿಗಳು ಕನ್ನಡಕ್ಕೆ ಅದರ ಅನುವಾದ ಮಾಡಿದ್ದಾರೆ. ಇಂಗ್ಲಿಷ್ ಅನುವಾದ 1895ರಲ್ಲಿ ಕುಂಭಕೋಣದಲ್ಲಿ ಪ್ರಕಟವಾಗಿದೆ. ಅವರು, ಜೀವನದ ಕೊನೆಯಲ್ಲಿ ಸನ್ಯಾಸ ಸ್ವೀಕರಿಸಿ ವೃಂದಾವನಸ್ಥರಾದರು.[2]

ವಾಸುದೇವಾರ್ಯರ ಪುತ್ರ ನಾರಾಯಣ: ಇವರ ಪುತ್ರ ತಿಮ್ಮಪ್ಪದಾಸರು—ಸೀತಾರಾಮಯ್ಯನವರ ಮುತ್ತಜ್ಜ. ಸಂಸ್ಕೃತ, ಕನ್ನಡ, ತೆಲುಗು ಭಾಷೆಗಳಲ್ಲಿ ಅವರಿಗೆ ತುಂಬು ಪಾಂಡಿತ್ಯ. ಸಾಧಕರು, ಭಕ್ತರು. ಮುಮ್ಮಡಿ ಕೃಷ್ಣರಾಜ ಒಡೆಯರ ಗೌರವಕ್ಕೆ ಪಾತ್ರರಾಗಿ, ಕೋಟೆಯ ತ್ರಿನಯನೇಶ್ವರ ದೇವಾಲಯದ ಆವರಣದಲ್ಲಿ ತಮ್ಮ ಇಷ್ಟದೈವ ವೆಂಕಟರಮಣಸ್ವಾಮಿಯ ಪೂಜೆಗೆ ಅವಕಾಶ

1. ಸೀತಾರಾಮಯ್ಯನವರು ತಮ್ಮ ಪೂರ್ವಿಕರ ಚರಿತ್ರೆಯನ್ನು ತಮ್ಮ 7ನೇ ತಲೆಯವರಿಂದ ನೆನಪಿಟ್ಟುಕೊಂಡಿದ್ದಾರೆ.
2. ಚಿಕ್ಕನಾಯಕನಹಳ್ಳಿಯಲ್ಲಿ ಅವರ ವೃಂದಾವನವಿದೆ. ಅದನ್ನು ಈಚೆಗೆ ಎಂ. ವಿ. ಸೀ. ಅವರು ಜೀರ್ಣೋದ್ಧಾರ ಮಾಡಿಸಿದ್ದಾರೆ.

ಪಡೆದರು. ಆ ಪವಿತ್ರ ವಾತಾವರಣದಲ್ಲಿಯೇ ತಿಮ್ಮಪ್ಪದಾಸರು ಕೀರ್ತನೆಗಳನ್ನು ತ್ರಿಭಾಷೆಯಲ್ಲೂ ರಚಿಸಿದರು.[3]

ಎಂ. ವಿ. ಸಿ. ಅವರ ತಂದೆ ಗುಮಾಸ್ತರು. ಅದು ಜೀವನಕ್ಕಾಗಿ ಕೈಕೊಂಡ ವೃತ್ತಿ. ಅವರದು ಅವಿಭಕ್ತ ಕುಟುಂಬವಾದ್ದರಿಂದ, ಸಂಪಾದನೆ ಮುಖ್ಯವಾಗಿರಲಿಲ್ಲ. ಕುಟುಂಬ ನಿರ್ವಹಣೆ ಕರ್ತವ್ಯವಾಗಿತ್ತು. ಸೀತಾರಾಮಯ್ಯನವರು ಬೆಳೆದದ್ದು ಅವಿಭಕ್ತ ಕುಟುಂಬದಲ್ಲಿ. ನೆಲೆಸಿದ್ದು ಬಡವರ ನೆಲೆವೀಡಾದ ರಾಮಚಂದ್ರ ಅಗ್ರಹಾರದಲ್ಲಿ. ಓದಿದ್ದು ಸರ್ಕಾರಿ ಶಾಲೆಯಲ್ಲಿ.

ಹಿಂದಿನ ಸಂಪ್ರದಾಯದಂತೆ ಸೀತಾರಾಮಯ್ಯ ಚೌಲಕರ್ಮ, ಅಕ್ಷರಾಭ್ಯಾಸವಾದ ನಂತರ ಪ್ರೈಮರೀ ಶಾಲೆಗೆ ಸೇರಿದರು. ಆಗ ಅವರಿಗೆ ಐದು ವರ್ಷ. ಶಾಲೆ ಮನೆಯ ಎದುರಿಗೇ ಇತ್ತು. ಕೃಷ್ಣಯ್ಯಂಗಾರ್ಯರು ಉಪಾಧ್ಯಾಯರು. ಅವರೇ ಮುಖ್ಯೋಪಾಧ್ಯಾಯರೂ ಕೂಡ. ಈ ಶಾಲೆಯಲ್ಲಿ ಪ್ರೈಮರಿಯ ಎ. ಬಿ.–ಎಂಬ ಎರಡು ತರಗತಿಗಳು ಮಾತ್ರ ಇದ್ದುದರಿಂದ ಮುಂದಿನ ಓದಿಗೆ, ಮನೆಗೆ ಸ್ವಲ್ಪ ದೂರವಿದ್ದ ಸರ್ಕಾರಿ ಪ್ರೈಮರಿ ಶಾಲೆಗೆ ಹೋಗಬೇಕಾಯಿತು. ಎಲ್ಲ ಹುಡುಗರಂತೆ ಆ ಶಾಲೆಗೆ ಹೋಗುವುದಕ್ಕೆ ಸೀತಾರಾಮಯ್ಯನೂ ಹಟ ಮಾಡುತ್ತಿದ್ದ. ಆದರೆ ಅಣ್ಣನ ಮತ್ತು ಇತರರ ಬೆದರಿಕೆಯಿಂದ, ಶಾಲೆಗೆ ಬಲವಂತದಿಂದ ಹೋಗಲೇಬೇಕಾಯಿತು. ಶಾಲೆಯಿದ್ದ ಬೀದಿಗೆ "ಚಾವಡಿ ಬೀದಿ" ಎಂದು ಹೆಸರಿತ್ತು. 'ಚಾವಡಿ' ಎಂದರೆ ಆಗಿನ ಪೋಲಿಸ್ ಸ್ಟೇಷನ್. ಪೋಲಿಸರ ಹೆದರಿಕೆಯಿಂದ, 'ಚಾವಡಿ ಇಸ್ಕೂಲಿ'ಗೆ ಹೋಗಲು ಪ್ರತಿದಿನವೂ ತಂಟೆ. ಜವಾನನ ಹೆದರಿಕೆ ಬೇರೆ. ಆ ವೇಳೆಗೆ ಮನೆಯ ಹತ್ತಿರವೇ ಕೃಷ್ಣರಾಜ ಪ್ರೈಮರಿ ಬಾಯ್ಸ್ ಸ್ಕೂಲ್ ಸ್ಥಾಪಿತವಾಯಿತು. ಕೃಷ್ಣಾಚಾರ್ ಈ ಶಾಲೆಯ ಮುಖ್ಯ ಉಪಾಧ್ಯಾಯರು. ಅಂತೂ ಕೃಷ್ಣರಾಜ ಪ್ರೈಮರಿ ಶಾಲೆಯಲ್ಲಿ ಬಾಲಕನ ಪ್ರಾಥಮಿಕ ವಿದ್ಯಾಭ್ಯಾಸ ನಡೆಯಿತು. ಶಾಲಾ ಮುಖ್ಯೋಪಾಧ್ಯಾಯರು ಅಲ್ಲಿನ ಒಂದು ಸಹಕಾರ ಸೊಸೈಟಿಯ ಒಪ್ಪೊತ್ತಿನ ಗುಮಾಸ್ತರಾಗಿದ್ದ ಬಾಲಕನ ತಂದೆಯ ಸ್ನೇಹಿತರಾಗಿದ್ದುದರಿಂದ, ಹುಡುಗನ ಬಗ್ಗೆ ಆಸಕ್ತಿ ತೋರಿಸಿ, ಶಿಷ್ಯ ವಾತ್ಸಲ್ಯವನ್ನು ಹೊಂದಿದ್ದರು.

ಆಗಿನ ಕಾಲದ ಪಾಠಕ್ರಮ ಆಂಗ್ಲ ವಿದ್ಯಾಭ್ಯಾಸ ಪದ್ಧತಿಯ ಆರಂಭಕಾಲದ ಪದ್ಧತಿ. ನಗರಗಳಲ್ಲಂತೂ ಅದು ಅಷ್ಟರಲ್ಲಿ ರೂಢಿಗೆ ಬಂದು, ಹಳೆಯ ಪದ್ಧತಿಯಲ್ಲಿ ಅಭ್ಯಾಸ ಮಾಡಿದ ಉಪಾಧ್ಯಾಯರೂ, ಹೊಸ ಶಿಕ್ಷಣ ಕ್ರಮಕ್ಕೆ ಹೊಂದಿಕೊಂಡಿ

---

3. ಎಂ. ವಿ. ಸೀ. ಅವರು ಈಚೆಗೆ ತಿಮ್ಮಪ್ಪ ದಾಸರ ಪೂಜಾವಿಧಾನ ಕೀರ್ತನೆಗಳನ್ನು ಸಂಶೋಧಿಸಿ 'ಅರ್ಚನ' ಎಂಬ ಗ್ರಂಥವನ್ನು ಪ್ರಕಟಿಸಿದ್ದಾರೆ. ತಮ್ಮ ಸೃಜನಶೀಲತೆಗೆ ತಿಮ್ಮಪ್ಪದಾಸರ ವಂಶೀಕನಾಗಿರುವುದೇ ಒಂದು ಕಾರಣವೆಂದು ಸೀತಾರಾಮಯ್ಯನವರು ನಂಬಿದ್ದಾರೆ.

ದ್ದರು. ಪಾಠ ಪ್ರವಚನಗಳಲ್ಲಿ ತಮ್ಮ ಅನುಭವವನ್ನು ಮಕ್ಕಳ ಮೇಲೆ ಪ್ರಭಾವ ಪೂರ್ಣವಾಗಿ ಪ್ರಯೋಗಿಸುತ್ತಿದ್ದರೂ ಸುವ್ಯವಸ್ಥಿತಿಯನ್ನು ಉಳಿಸುತ್ತಿರಲಿಲ್ಲ. ಏಕೆಂದರೆ, ಶಾಲೆಯು ವಿವಿಧ ಹಂತದ ವಿದ್ಯಾಮಟ್ಟಗಳ ಪಾಠಕ್ರಮ ಹೊಸದೃಷ್ಟಿಯಲ್ಲೇ ಬಂದುಬಿಟ್ಟಿತ್ತು. ಪ್ರಾಥಮಿಕ, ಮಾಧ್ಯಮಿಕ, ಪ್ರೌಢ, ಮತ್ತು ಕಾಲೇಜು ವ್ಯಾಸಂಗ ವಿದ್ಯಾರ್ಥಿಯ ಅಭ್ಯಾಸದ ಹಂತಗಳು. ಸೀತಾರಾಮಯ್ಯ ಚಾವಡಿ ಶಾಲೆಗೆ ಸೇರಿದರು. ಅಲ್ಲಿಂದ ಸಾಹುಕಾರ್ ಡಿ. ಬನುಮಯ್ಯ ಶಾಲೆಗೆ ಒಂದು, ಎರಡು, ಮೂರನೆ ಫಾರಂಗಳ ಅಭ್ಯಾಸಕ್ಕಾಗಿ ಹೋಗಬೇಕಾಯಿತು. ಡಿ|| ಜಿ. ಪಿ. ರಾಜರತ್ನಂ ಅವರ ತಂದೆ ಗೋಪಾಲಕೃಷ್ಣ ಅಯ್ಯಂಗಾರ್ ಅವರು ಅಲ್ಲಿನ ಅಧ್ಯಾಪಕರಲ್ಲಿ ಒಬ್ಬರು.

ಶಿಕ್ಷಣಕ್ರಮದಲ್ಲಿ ದಂಡನೆಯೂ ಒಂದು ಅಂಗವಾಗಿತ್ತು. ಮಕ್ಕಳ ಚೇಷ್ಟೆಯ ಹತೋಟಿಗೆ ಬೆತ್ತದ ಶಿಕ್ಷೆ. ಪಾಠ ಕಲಿತು ಬರದಿದ್ದರೆ ನಿಲ್ಲಿಸುವುದು. ಪುನಃ ಪುನಃ ತಿದ್ದಿಸುವುದು, ಬೆಂಚಿದ್ದರೆ, ಬೆಂಚಿನ ಮೇಲೆ ನಿಲ್ಲಿಸುವುದು. ಇವು ಮೊದಲಾದವು ಸಾಮಾನ್ಯ ಶಿಕ್ಷೆಗಳು. ನಿರ್ಜೀವ ಬೆತ್ತದ, ನಿಷ್ಪಕ್ಷವಾದ ಚುರುಕು ಎಲ್ಲ ಹುಡುಗರ ಅನುಭವಕ್ಕೂ ಬರುವಂಥದೆ. ಸಾಧು, ಸಾತ್ವಿಕ ಬಾಲಕನಾಗಿದ್ದರೂ, ಉಪಾಧ್ಯಾಯರು ಬಾಲಕನ ತಂದೆಯ ಮಿತ್ರರಾಗಿದ್ದರೂ, ಸೀತಾರಾಮಯ್ಯನಿಗೆ ಬೆತ್ತದ ರಿಯಾಯಿತಿಯೇನೂ ದೊರಕುತ್ತಿರಲಿಲ್ಲ. ಹುಡುಗರನ್ನು ಹೊಡೆಯುವುದು ಮೇಷ್ಟರಿಗೆ ಶಿಕ್ಷಣ ಕ್ರಮವೇ ಹೊರತು, ಅಪ್ರೀತಿ–ರೋಷಗಳ ಫಲವಾಗಿರಲಿಲ್ಲ. 'ದಂಡಂ ದಶಗುಣಂ ಭವೇತ್' ಎಂಬುದು ಬಹುಶಃ ಅನುಭವೈಕ ಸೂತ್ರವಾಗಿದ್ದಿರಬಹುದು. ಶಾಲೆಗಳಿಗೆ, ಈಗಿನ ಹುಡುಗರು ಹೊರಲಾರದೆ ಹೊತ್ತುಕೊಂಡು ಹೋಗುವ ಪುಸ್ತಕಗಳ ರಾಶಿಯನ್ನು ಆಗಿನ ಹುಡುಗರು ಎತ್ತಿಕೊಂಡು ಹೋಗುತ್ತಿರಲಿಲ್ಲ. ಒಂದೇ ನೋಟು ಬುಕ್ಕು. ಬರೆದುಕೊಳ್ಳುವುದೆಲ್ಲ ಅದರಲ್ಲೇ. ಬೋರ್ಡ್ ಮೇಲೆ ಬರೆಯುವುದು, ಹುಡುಗರು ಓದಿ ಮನನ ಮಾಡಿಕೊಳ್ಳುವುದು. ಪರೀಕ್ಷೆ ಎಂದರೆ ಬಾಯಿ ಪರೀಕ್ಷೆಯೇ ಹೆಚ್ಚು. ಬರಹದ ಉತ್ತರಕ್ಕೆ, ಬೋರ್ಡಿನ ಮೇಲೆ ಬರೆದ ಪ್ರಶ್ನೆಪತ್ರಿಕೆ. ಹೀಗೆ, ಸೀತಾರಾಮಯ್ಯ ಮಾಧ್ಯಮಿಕ ಶಾಲಾ ವಿದ್ಯೆಯನ್ನು ಮುಗಿಸಿದರು.

ಆಗಿನ ಕಾಲಕ್ಕೆ ಹುಡುಗ ಹೈಸ್ಕೂಲಿಗೆ ಬಂದರೆ ದೊಡ್ಡ ಸಾಧನೆ ಮಾಡಿದಂತೆ ಎಸ್. ಎಸ್. ಎಲ್. ಸಿ. ಪರೀಕ್ಷೆ ವಿದ್ಯಾರ್ಥಿಯ ಜೀವನದಲ್ಲಿ ಒಂದು ಘಟ್ಟ. ವಿವಾಹಕ್ಕೂ ಅರ್ಹತೆ : ಸಂಸಾರ ಹೂಡಲು ಸಾಮರ್ಥ್ಯ ಪಡೆದಂತೆ. ಸೀತಾರಾಮು ಪ್ರೌಢಶಿಕ್ಷಣ ಪಡೆದದ್ದು ಬನುಮಯ್ಯ ಪ್ರೌಢಶಾಲೆಯಲ್ಲಿ. ಕನ್ನಡ, ಸಂಸ್ಕೃತ ಬಿಟ್ಟರೆ ಬೋಧನ ಮಾಧ್ಯಮ ಇಂಗ್ಲಿಷ್. ಭಾಷೆಯ ಕಲಿಕೆಯಲ್ಲಿ ವ್ಯಾಕರಣಕ್ಕೆ ಹೆಚ್ಚಿನ ಮಹತ್ವ. ಆ ಅಭ್ಯಾಸದಿಂದಲೇ ಸೀತಾರಾಮಯ್ಯ ಕನ್ನಡ, ಇಂಗ್ಲಿಷನ್ನು ವ್ಯಾಕರಣ

ದೋಷವಿಲ್ಲದೆ ಬರೆಯುವುದನ್ನು ಕಲಿತದ್ದು. ಆಗಿನ ಬಾಲಕರ ಭಾಷಾ ಜ್ಞಾನವೇ ಅಷ್ಟು ಶುದ್ಧ, ಅಷ್ಟು ಅಸ್ಪುಟ. ಆಂಗ್ಲ ವಿದ್ಯಾಭ್ಯಾಸ ಕ್ರಮ–ಜ್ಞಾನದ ವಿಸ್ತಾರವನ್ನೂ ಪುರಾತನ ಭಾರತೀಯ ಕ್ರಮ–ಆಳವಾದ ಜ್ಞಾನವನ್ನೂ ಕಲಿಸುತ್ತದೆ ಎಂಬುದೂ ಒಂದು ಸಾಧಾರಣ ನಂಬಿಕೆ ಮತ್ತು ಅನುಭವ. ಕನ್ನಡದ ವಿದ್ಯಾರ್ಥಿಗಳು ಇಂಗ್ಲಿಷ್ ಪುಸ್ತಕಗಳನ್ನು ಹೇರಳವಾಗಿ ಓದಬೇಕು ಎನ್ನುವುದು ಅಂದಿನ ಉಪಾಧ್ಯಾಯರುಗಳ ಸೂಚನೆ. ಅದನ್ನು ಸಂಪೂರ್ಣವಾಗಿ ಅನುಸರಿಸಿದವರು ಎಂ. ವಿ. ಸೀ. ಚಾರ್ಲ್ಸ್ ಕಿಂಗ್ಸ್ಲೀ, ಸರ್ ವಾಲ್ಟರ್ ಸ್ಕಾಟ್, ಚಾರ್ಲ್ಸ್ ಡಿಕನ್ಸ್ ಮೊದಲಾದ ಪ್ರಸಿದ್ಧ ಲೇಖಕರ ಗ್ರಂಥಗಳನ್ನು ಪ್ರೌಢಶಾಲೆಯಲ್ಲಿದ್ದಾಗಲೇ ಓದಿ ಅರ್ಥಮಾಡಿಕೊಂಡ ಈ ಪ್ರೌಢಶಾಲಾ ವಿದ್ಯಾರ್ಥಿ, ಥಾಮಸ್ ಹಾರ್ಡಿಯವರ ಕಾದಂಬರಿಗಳನ್ನು ಭಾವ ಅಣ್ಣಂದಿರ ಉತ್ತೇಜನದಿಂದ ಆಗಲೇ ಓದಿ ಮನನ ಮಾಡಿಕೊಂಡರು.

ಅಭ್ಯಾಸವನ್ನು ಮುಂದುವರಿಸಿದ ಸೀತಾರಾಮಯ್ಯ ಇಂಟರ್ ಮೀಡಿಯಟ್ ಕಾಲೇಜಿಗೂ ಅಲ್ಲಿಂದ ಮಹಾರಾಜ ಕಾಲೇಜಿಗೂ ಸೇರಿ ತಮ್ಮ ಪದವಿ ಪಡೆದರು. ಕಾಲೇಜಿನಲ್ಲಿ ಅಭ್ಯಾಸದ ಅವಧಿಯಲ್ಲಿಯೇ ಅವರಿಗೆ ಅಂದಿನ ಹಿರಿಯ ಸಾಹಿತಿಗಳ ಪರಿಚಯ ಸಂಪರ್ಕ ಸಾನ್ನಿಧ್ಯಗಳು ದೊರೆತವು. ಅವರ ಪಠ್ಯೇತರ ಚಟುವಟಿಕೆಗಳಿಗೂ ಅವಕಾಶ ಪ್ರೋತ್ಸಾಹಗಳು ಯಥೇಷ್ಟವಾಗಿದ್ದುವು. ಚರ್ಚೆ, ಭಾಷಣ, ಪ್ರಬಂಧಗಳ ರಚನೆಗಳ ಕಡೆ ಗಮನ ಹರಿದವು. ನಾಟಕಗಳಲ್ಲಿ ಪಾತ್ರವಹಿಸುವ ಅವಕಾಶವೂ ನಾ. ಕಸ್ತೂರಿಯವರ, ಎಸ್. ವಿ. ಕೃಷ್ಣಸ್ವಾಮಿ ಅಯ್ಯಂಗಾರರ ಮೇಲ್ವಿಚಾರಣೆಯಲ್ಲಿ ಉಂಟಾಯಿತು. ಅವರ 'ವರಪರೀಕ್ಷೆ'ಯಲ್ಲಿ ವಧುವಿನ ಪಾತ್ರ ಸೀತಾರಾಮಯ್ಯನದು. 'ಪುಸ್ತಕದ ಕೀಟವಾಗ'ದೆ ಹತ್ತು–ಹಲವು ಸ್ವಭಾವದ ಸಮವಯಸ್ಕರ ಹಿರಿಯರ ಸಂಪರ್ಕವನ್ನು ಬೆಳೆಸಿಕೊಂಡು, ತಮ್ಮ ಅನುಭವವನ್ನು ವಿಸ್ತರಿಸಿಕೊಳ್ಳುವ ಅವಕಾಶ ಅವರಿಗೆ ಲಭಿಸಿತು. ಮೈಸೂರಿನಲ್ಲಿ ಇದ್ದಾಗಲೇ ಕಸ್ತೂರಿಯವರ ಒತ್ತಾಸೆಯಿಂದ ಡಾ|| ಎ. ವೆಂಕಟಸುಬ್ಬಯ್ಯನಂಥ ಮಹಾವಿದ್ವಾಂಸರ ಅಧ್ಯಕ್ಷತೆಯಲ್ಲಿ ನಡೆದ ವಿದ್ಯಾರ್ಥಿ ಉಪನ್ಯಾಸ ಮಾಲಿಕೆಯಲ್ಲಿ ಬುದ್ಧನನ್ನು ಕುರಿತು ಇಂಗ್ಲಿಷ್‌ನಲ್ಲಿ ಭಾಷಣ ಮಾಡಿ ಮೆಚ್ಚಿಗೆ ಗಳಿಸಿದ್ದರು. ಭಾರತೀಯತೆಯ ಸಂಸ್ಕೃತಿಯನ್ನು ಅನುಲಕ್ಷಿಸದಿದ್ದ, ಇಂಗ್ಲಿಷ್ ವಿದ್ಯಾಭ್ಯಾಸದ ವಾತಾವರಣದಲ್ಲಿಯೂ ಪ್ರಾಚೀನ ಸಂಸ್ಕೃತಿಯಲ್ಲಿ ಒಲವಿದ್ದ ಕೆಲವು ಮಂದಿ ಪರಿಣತಮತಿಗಳಾದ ಅಧ್ಯಾಪಕರು ನೀತಿಪಾಠ ಗೀತಾಪ್ರವಚನ ದೇವರ ಸ್ತೋತ್ರ ಮುಂತಾದ ಪಠ್ಯೇತರ ಪ್ರವಚನಗಳಿಂದ ವಿದ್ಯಾರ್ಥಿಗಳಲ್ಲಿ ನಮ್ಮ ಸಂಸ್ಕೃತಿಯ ದೇಶಾಭಿಮಾನದ ಸೂತ್ರಗಳನ್ನು ಬಿತ್ತಿದರು. ಇದು ಸೀತಾರಾಮಯ್ಯನವರಲ್ಲಿಯೂ ಬೇರುಬಿಟ್ಟಿತು. ಅ[illegible] ಅಲ್ಲಿನ ರಾಮಕೃಷ್ಣಾಶ್ರಮದ ಸನ್ಯಾಸಿಗಳ ಪ್ರವಚನಗಳೂ ಅವರ ಮೇಲೆ ಪ್ರಭಾವ

ಬೀರಿದವು. ಅದಕ್ಕೆ ಅವರ ಗುರುಗಳಾದ ನಾ. ಕಸ್ತೂರಿ, ಎಸ್. ಶೇಷಗಿರಿರಾವ್ ರಾಮಕೃಷ್ಣಾಶ್ರಮದ ಭಕ್ತಕೋಟಿಗೆ ಸೇರಿದವರಾಗಿದ್ದುದೇ ಕಾರಣ. ಖಾದಿಧಾರಿಗಳಾಗಿದ್ದ, ಗಾಂಧಿಭಕ್ತರಾಗಿದ್ದ ಎಸ್. ಶೇಷಗಿರಿರಾಯರು ವಿದ್ಯಾರ್ಥಿಗಳಲ್ಲಿ ರಾಷ್ಟ್ರಾಭಿಮಾನವನ್ನು ಪ್ರಚೋದಿಸುತ್ತಿದ್ದರು. ಸೀತಾರಾಮಯ್ಯನವರಲ್ಲಿಯೂ ಸ್ವಾತಂತ್ರ್ಯ ಹೋರಾಟದ ಕಲ್ಪನೆಗೂ ದೇಶಾಭಿಮಾನಕ್ಕೂ ಆಗಲೇ ಅಂಕುರಾರ್ಪಣ.

ಮಹಾರಾಜ ಕಾಲೇಜಿನಲ್ಲಿ ಚರಿತ್ರೆ ಮತ್ತು ಇಂಗ್ಲಿಷ್‌ಗಳ ಜೊತೆಗೆ ಕನ್ನಡವನ್ನು ಐಚ್ಛಿಕವಾಗಿ ತೆಗೆದುಕೊಂಡು ಸೀತಾರಾಮಯ್ಯ ತಮ್ಮ ವ್ಯಾಸಂಗವನ್ನು ಮುಂದುವರಿಸಿದರು. ಬಿ. ಎ. ಪರೀಕ್ಷೆಗೇ ಓದು ನಿಲ್ಲಿಸಿ ಉದ್ಯೋಗಕ್ಕೆ ಸೇರಿ ಕುಟುಂಬಕ್ಕೆ ನೆರವಾಗಬೇಕು ಎಂದಿದ್ದರು. ತಂದೆಯವರ ಸಮ್ಮತಿ, ಫ್ರೀಷಿಪ್ ಕೊಡಿಸುವುದಾಗಿ ಪ್ರೊ॥ ವೆಂಕಣ್ಣಯ್ಯನವರು ನೀಡಿದ ಭರವಸೆ, ಉತ್ತೇಜನ; ತೀ. ನಂ. ಶ್ರೀ. ಅವರ ಒತ್ತಾಯ ಇವುಗಳಿಂದಾಗಿ ಕನ್ನಡ ಎಂ. ಎ. ಪದವಿಗೆ ಓದು ಮುಂದುವರಿಸುವುದು ಅವರಿಗೆ ಸಾಧ್ಯವಾಯಿತು. ಅಲ್ಲದೆ ಬಿ. ಎ. ಪರೀಕ್ಷೆಯಲ್ಲಿ ದ್ವಿತೀಯ ಭಾಷೆಯಾದ ಕನ್ನಡದಲ್ಲಿ ಗಳಿಸಿದ್ದ ಹೆಚ್ಚಿನ ಅಂಕಗಳೂ ಮತ್ತೊಂದು ಕಾರಣ.

ಸೀತಾರಾಮಯ್ಯನವರಿಗೆ ಮಾಧ್ಯಮಿಕ ವಿದ್ಯಾಭ್ಯಾಸದ ಹಂತದಿಂದಲೂ ಚರಿತ್ರೆಯ ವಿಷಯದಲ್ಲಿ ಆಸಕ್ತಿ. ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ವಿಜ್ಞಾನ ವಿಷಯಗಳಲ್ಲಿ ಹೆಚ್ಚಿನ ಅಂಕಗಳು ಬಂದಿದ್ದು, ಆಗಿನ ಪದ್ಧತಿಯಂತೆ ವಿಶ್ವವಿದ್ಯಾನಿಲಯದ ಅಧಿಕಾರಿಗಳೇ ವಿಜ್ಞಾನ ವಿಷಯಗಳ ಆಯ್ಕೆಯನ್ನು ಸೂಚಿಸಿದ್ದರು. ಆದರೆ ಮುಂದೆ ಪದವಿ ಪರೀಕ್ಷೆಯ ಹಂತದಲ್ಲಿ ಬೆಂಗಳೂರಿನಲ್ಲಿ ಕಾಲೇಜು ವ್ಯಾಸಂಗವನ್ನು ಮುಂದುವರಿಸುವುದು ಆರ್ಥಿಕಕಾರಣದಿಂದ ಅಸಾಧ್ಯವಾಗಿದ್ದುದರಿಂದ, ತಮಗೆ ಇಷ್ಟವಾಗಿದ್ದ ಚರಿತ್ರೆಯನ್ನೂ ಅದರ ಜೊತೆಗೆ ತರ್ಕಶಾಸ್ತ್ರವನ್ನೂ ಆಯ್ದುಕೊಂಡು ಇಂಟರ್ ಮೀಡಿಯಟ್ ವ್ಯಾಸಂಗವನ್ನು ಮುಂದುವರಿಸಿದರು. ಆಗಿನ ದಿನಗಳಲ್ಲಿ ಕಲಾ ವಿಷಯಗಳನ್ನು ತೆಗೆದುಕೊಂಡವರು ಪ್ರಥಮ ದರ್ಜೆಯಲ್ಲಿ ತೇರ್ಗಡೆ ಹೊಂದುವುದು ಅಪರೂಪವಾಗಿತ್ತು. ಸೀತಾರಾಮಯ್ಯನವರು ಇಂಟರ್ ಮೀಡಿಯಟ್ ಪರೀಕ್ಷೆಗೆ ಕಟ್ಟಿದ ವರ್ಷದಲ್ಲಂತೂ ಆ ವಿಭಾಗದಲ್ಲಿ ಯಾರೂ ಪ್ರಥಮದರ್ಜೆಯಲ್ಲಿ ಪಾಸಾಗಲಿಲ್ಲ. ಬಹು ಮೇಧಾವಿಗಳೆನಿಸಿದ್ದ ಕೆ. ಆರ್. ಪೂರ್ಣ, ಸಿ. ನರಸಿಂಹಮೂರ್ತಿ ಮುಂತಾದ ಕೆಲವೇ ವಿದ್ಯಾರ್ಥಿಗಳ ಜೊತೆ ಎರಡನೇ ದರ್ಜೆಯಲ್ಲಿ ತೇರ್ಗಡೆಯಾಗಿ ಐದನೇ ಸ್ಥಾನ ಪಡೆದಿದ್ದರು.

ಇಷ್ಟರಲ್ಲಿ (1929–30) ಕನ್ನಡ ಬರವಣಿಗೆಯಲ್ಲಿ ತೊಡಗಿ, ಸಣ್ಣಕಥೆ ಕವನಗಳನ್ನು ಬರೆದಿದ್ದರು. ಹಿರಿಯರ ಸಲಹೆ ಮುಖ್ಯವಾಗಿ ತೀ. ನಂ. ಶ್ರೀಯವರ ಮಾರ್ಗದರ್ಶನ ಬರವಣಿಗೆಗೆ ಬೆಂಬಲ ಕೊಟ್ಟಿತು. ಕನ್ನಡದ ಜೊತೆಗೆ

ಇಂಗ್ಲಿಷ್ ಮತ್ತು ಚರಿತ್ರೆಯನ್ನು ಪಠ್ಯವಾಗಿ ಹೊಂದಿ ತಮ್ಮ ಪದವಿ ಪರೀಕ್ಷೆಯಲ್ಲಿ ತೇರ್ಗಡೆಯಾದರು. ಕಾಲೇಜು ವ್ಯಾಸಂಗದ ಅವಧಿಯಲ್ಲಿ ದಿನಕರ ದೇಸಾಯಿ, ಕೆ. ಆರ್. ಪೂರ್ಣ, ಎಂ. ಪಿ. ಎಲ್. ಶಾಸ್ತ್ರೀ ಸಿ. ನರಸಿಂಹಮೂರ್ತಿ, ಪರ್ವತವಾಣಿ, ನಟೇಶ ಮೊದಲಿಯಾರ್ ಮೊದಲಾದ ಪ್ರತಿಭಾವಂತ ಸಮಕಾಲೀನ ವಿದ್ಯಾರ್ಥಿಗಳ ಸಂಪರ್ಕ ಸಹವಾಸಗಳು ಇವರ ಆರ್ಥಿಕ ಮುಗ್ಗಟ್ಟಿನಲ್ಲೂ ವಿದ್ಯಾರ್ಥಿ ಜೀವನ ಆದರ್ಶಮಯವಾಗಿ, ಸುಖಕರವಾಗಿ ನಡೆಯಲು ಸಹಾಯಕವಾದವು.

ಕಾಲೇಜಿನ ಪ್ರಸಿದ್ಧ ಉಪಾಧ್ಯಾಯರುಗಳಾದ ವೆಂಕಣ್ಣಯ್ಯ, ತೀ. ನಂ. ಶ್ರೀ, ಬಿ. ಎಂ. ಶ್ರೀ, ಡಿ. ಎಲ್. ಎನ್., ಮೂರ್ತಿರಾವ್, ರಾಳ್ಲಪಲ್ಲಿ, ನಾ. ಕಸ್ತೂರಿ, ಮೊದಲಾದ ಗುರುಗಳ ಕೈ ಕೆಳಗೆ ಶಿಕ್ಷಣ ಪಡೆದು ಕನ್ನಡವನ್ನು ಚೆನ್ನಾಗಿ ಅಭ್ಯಾಸ ಮಾಡಿದರು. ಅವರ ಮುಂದಿನ ವ್ಯಾಸಂಗದ ಕ್ರಮಕ್ಕೆ ಆ ಹಿರಿಯ ವಿದ್ವಾಂಸರ ಪಾಠ–ಪ್ರವಚನವೇ ತಳಪಾಯವಾಯಿತು. 'ಶ್ರೀ' ಅವರ ಪಾಠಪ್ರವಚನವಂತೂ ಯಾರನ್ನೂ ಮಂತ್ರಮುಗ್ಧರನ್ನಾಗಿ ಮಾಡುವಂಥವೇ. ಆರುಗಂಟೆಯ ಕಾಲ ಒಂದೇ ಸಮನೆ ಪಾಠ ಹೇಳುವುದೆಂದರೆ ಅದೊಂದು ದೈತ್ಯಕಲೆ, ಸಾಧನೆ. ಅಂಥವರಿಂದ ಕಲಿತ ಯಾವ ವಿದ್ಯಾರ್ಥಿಯೂ ಶ್ರದ್ಧೆ, ತಾಳ್ಮೆ, ವಿಚಾರದ ಆಳ, ಅಗಲಗಳನ್ನು ಅರಿಯಬೇಕೆಂಬ ಕುತೂಹಲ– ಈ ಗುಣಗಳನ್ನು ಖಂಡಿತವಾಗಿ ಬೆಳೆಸಿಕೊಳ್ಳದೆ ಇರಲಾರ. ಸೀತಾರಾಮಯ್ಯನವರಿಗೆ ಸಿಕ್ಕ ಒಂದು ಅಪೂರ್ವ ಅವಕಾಶ ಇಂಥದು. ಗುರುಗಳ ವಾತ್ಸಲ್ಯದ ಜೊತೆಗೆ, ತಂದೆಯವರ ಕೆಳಮಟ್ಟದ ಆರ್ಥಿಕ ಸ್ಥಿತಿಯನ್ನು ಅರಿತ ಹಿರಿಯ ಮಿತ್ರರು, ಪ್ರಾಧ್ಯಾಪಕರು, ಅಭಿಮಾನಿಗಳು ಕಾಲೇಜಿನ ಶುಲ್ಕಾದಿಗಳಿಗೆ ಮಾಡಿದ ಸಹಾಯವೂ ಅವರನ್ನು ಎಂ. ಎ. ; ಪದವೀಧರರನ್ನಾಗಿ ಮಾಡಿ ಕನ್ನಡ ಕೈಂಕರ್ಯಕ್ಕೆ ಒದಗಿಸಿಕೊಟ್ಟಿತು.

ಕಾಲೇಜು ವಿದ್ಯಾಭ್ಯಾಸದವರೆಗೂ ತಮಗೆ ದೊರೆತ ಸೌಲಭ್ಯಗಳನ್ನು ಸೀತಾರಾಮಯ್ಯ ಸದುಪಯೋಗಪಡಿಸಿಕೊಂಡು, ತಮ್ಮ ಮುಂದಿನ ವಿದ್ವತ್ ಸಂಪಾದನೆಗೆ ಗಟ್ಟಿಯಾದ ತಳಪಾಯ ಹಾಕಿಕೊಂಡರು. ಸದಭಿರುಚಿಯನ್ನೂ ಬದುಕಿನ ಗುರಿಯನ್ನೂ ರೂಢಿಸಿಕೊಂಡರು. ಉಪಾಧ್ಯಾಯರ, ಮಿತ್ರರ, ಹಿರಿಯರ ಬೋಧನೆ ಉಪದೇಶಗಳನ್ನೂ ಮೈಗೂಡಿಸಿಕೊಂಡರು ; ಜೀವನರಂಗವನ್ನು ಪ್ರವೇಶಿಸಿದಾಗ ತಮ್ಮ ಮುಂದಿನ ಉತ್ತಮ ಬದುಕಿಗೆ ಬೇಕಾದ ಸಾಮರ್ಥ್ಯವನ್ನು ಗಳಿಸಿಕೊಂಡಿದ್ದರು.

ಶಾಲಾಕಾಲೇಜುಗಳ ಕ್ರಮಬದ್ಧ ಅಭ್ಯಾಸಗಳ ಜೊತೆ ಜೊತೆಗೇ, ಇತರ ಕಲೆಗಳಭ್ಯಾಸಗಳನ್ನೂ ಸೀತಾರಾಮಯ್ಯ ಕೈಕೊಂಡಿದ್ದರು. ಅವುಗಳಲ್ಲಿ ಮೃದಂಗ ವಾದನ ಕಲೆಯೂ ಒಂದು.

ಸೀತಾರಾಮಯ್ಯ ಬೆಳೆದದ್ದು ಸಂಗೀತದ ವಾತಾವರಣದಲ್ಲಿ. ತಂದೆ ಶ್ರೀಕೃಷ್ಣ ದೇವಸ್ಥಾನದಲ್ಲಿ ಪಾರುಪತ್ತೇಗಾರರು. ಆಗ ದೇವಾಲಯದಲ್ಲಿ ಹರಿಕಥೆ, ಸಂಗೀ–

ಮನೆಯಲ್ಲಿ ಭಜನೆ, ಪೂಜೆ, ನೋಂಪಿ–ವ್ರತ–ಇವುಗಳ ವಾತಾವರಣ. ಮನಸ್ಸು ಆ ಕಡೆ, ಅಭಿರುಚಿಯೂ ಆ ಕಡೆ. ಈ ಭಜನೆ ಸ್ತೋತ್ರಗಳಲ್ಲಿ ಮನೆಯವರೂ ಪಾಲುಗೊಳ್ಳುತ್ತಿದ್ದರು. ದೇವರ ನಾಮಗಳ ಸಂಕೀರ್ತನೆಯಲ್ಲಿ ಮನೆಯವರ ಪಾತ್ರ ಕಡಿಮೆಯೆನಿಸಿರಲಿಲ್ಲ. ಹುಡುಗನ ಆಕರ್ಷಣೆ ಆಸಕ್ತಿ ಸಹಜವಾಗಿ ಅತ್ತ ತಿರುಗಿದ್ದು ಆಶ್ಚರ್ಯವೇನಲ್ಲ. ವೆಂಕಟದಾಸಪ್ಪ–ಸಂಪ್ರದಾಯಸ್ಥರಾಗಿದ್ದರೂ ವೈದಿಕಗೊಡ್ಡುಗಳಾಗಿರಲಿಲ್ಲ. ಅಂದಿನ ಪ್ರಸಿದ್ಧ ನಾಟಕ ಕಂಪನಿಗಳಾದ ವರದಾಚಾರ್ಯರ ಕಂಪನಿ, ಶಿರಹಟ್ಟಿ ಕಂಪೆನಿಗಳ ನಾಟಕಗಳಿಗೆ ತಾವೂ ಹೋಗುತ್ತಿದ್ದುದಲ್ಲದೆ ಮಕ್ಕಳನ್ನೂ ಕರೆದುಕೊಂಡು ಹೋಗುತ್ತಿದ್ದರು. ಮನೆಗೆ ಹತ್ತಿರದ ಆಗರದ ಕೇರಿಯ ಮುಂದಿನ ಬಯಲಿನಲ್ಲಿ ನಡೆಯುತ್ತಿದ್ದ ದೊಂಬಿದಾಸರ ಕುಣಿತಕ್ಕೆ (ಆಗ ಮೈಸೂರಿನಲ್ಲಿ ಬಯಲಾಟಕ್ಕೆ ಈ ಹೆಸರು.) ವಿಧವೆ ಸೋದರತ್ತೆ ಇವರನ್ನು, ಇವರ ತಮ್ಮನನ್ನೂ ಕರೆದುಕೊಂಡು ಹೋಗುತ್ತಿದ್ದರು. ಆಟದ ಹಾಡುಗಳು. ಅಭಿನಯಗಳು, ಕುಣಿತಗಳು. ನಕಲಿ ವೇಷಗಳು ಹುಡುಗನ ಮನಸ್ಸಿನಲ್ಲಿ ನೆಲೆ ನಿಂತಿದ್ದು ಸಹಜ. ಮನೆಯವರು ಆಸ್ತಿಕರಾಗಿದ್ದುದರಿಂದ. ಹರಿದಾಸರು ಪ್ರತಿ ನಿತ್ಯವೂ ಮನೆಗೆ ಬಂದು ದೇವರ ನಾಮಗಳನ್ನು ಹೇಳಿ ಹೋಗುತ್ತಿದ್ದರು. ತಾತನ ಕಾಲದ ಕೋಟೆಯ ದೇವಸ್ಥಾನದ ಮನೆ ಬಿಟ್ಟು ಅಲ್ಲಿಯೇ ಇದ್ದ ಲಾಯರ್ ಕೃಷ್ಣರಾಯರ ಮನೆಗೆ ದೊಡ್ಡಪ್ಪ ಬಾಡಿಗೆಗೆ ಹೋದಾಗ, ಅಲ್ಲಿ ಮನೆ ಯಜಮಾನರ ತಂಬೂರಿ ಶ್ರುತಿಬದ್ಧ ದಾಸರನಾಮಗಳ ಹಾಡಿಕೆ, ಇವು ಬಾಲಕನಲ್ಲಿ ಸಂಗೀತಾಭಿರುಚಿಯನ್ನು ದೃಢೀಕರಿಸಿದವು. ಸೀತಾರಾಮಯ್ಯನಿಗೆ ಸಂಗೀತಾಭಿರುಚಿ ಆನುವಂಶಿಕವಾಗಿ ಬಂದಿರುವುದೂ ಸಾಧ್ಯ. ತಂದೆ ವೆಂಕಟದಾಸಪ್ಪ, ಮುತ್ತಜ್ಜ ತಿಮ್ಮಪ್ಪದಾಸರು, ಚಿಕ್ಕತಾತ ನಾರಾಯಣದಾಸರು, ಇವರು ಹರಿದಾಸರು. ದೇವರ ನಾಮಗಳನ್ನು ರಾಗ–ತಾಳಗಳಿಗೆ ಲೋಪಬಾರದಂತೆ, ಸುಶ್ರಾವ್ಯವಾಗಿ ಹಾಡುತ್ತಿದ್ದರು. ತಂದೆಯವರು ಭಜನೆ ಮಾಡುತ್ತಿದ್ದ ಕಾಲದಲ್ಲಿ ದೇವರ ನಾಮಗಳ ಹಾಡಿಕೆಗೆ ಲಯಬದ್ಧವಾಗಿ ವಿವಿಧ ಲಯ–ಗತಿಗಳಲ್ಲಿ ತಾಳಹಾಕುವುದನ್ನು ಈ ಹುಡುಗ ಅಭ್ಯಾಸ ಮಾಡಿಕೊಳ್ಳುತ್ತಿದ್ದನು. ಆ ತಂದೆಗೆ ಮಕ್ಕಳು ಮುಂದೆ ಮನೆತನದ ಸಂಪ್ರದಾಯದ ಭಜನೆಯನ್ನು ಮುಂದುವರಿಸಿಕೊಂಡು ಹೋಗಬೇಕೆಂಬ ಅಭಿಲಾಷೆಯಾಯಿತು. ಹಿರಿಯವನಿಗೆ ಶಾಸ್ತ್ರೀಯ ಸಂಗೀತವನ್ನೂ ಸೀತಾರಾಮಯ್ಯನಿಗೆ ಮೃದಂಗವನ್ನೂ ಕಲಿಸಲು ಏರ್ಪಾಟು ಮಾಡಿದರು. ಹಿರಿಯವನಿಗೆ ಸಂಗೀತ ಹತ್ತಲಿಲ್ಲ. ಸೀತಾರಾಮಯ್ಯ ತಬಲವನ್ನೂ ಮೃದಂಗವನ್ನೂ ಒಂದು ವರ್ಷದವರೆಗೆ ಅಭ್ಯಾಸಮಾಡಿ, ಭಜನೆಗಳಲ್ಲೂ ಹರಿಕಥೆಗಳಲ್ಲೂ ಅವುಗಳನ್ನು ಬಾರಿಸುವ ಮಟ್ಟಿನ ವಿದ್ಯೆ ಕಲಿತ. ಹೀಗಾಗಿನಿಂದ ಆಗಾಗ ಬರುತ್ತಿದ್ದ ಆಹ್ವಾನಗಳಿಗೆ ತರುಣ ಬಾಲಕ ಮನ್ನಣೆ ಕೊಟ್ಟ. ಸಂಗೀತ ಹರಿಕಥೆಗಳಿಗೆ ಮೃದಂಗ ತಬಲ ವಾದನವು

ನಡೆಸಿಕೊಡುತ್ತಿದ್ದ. ಈ ಕಾರ್ಯಕ್ರಮಗಳಿಂದ ಸಭಾಕಂಪನವನ್ನು ಗೆದ್ದು, ಧೈರ್ಯವಾಗಿ ವೇದಿಕೆ ಹತ್ತುವ ಅಭ್ಯಾಸವಾಯಿತು. ಕಾಲೇಜಿನ ಯೂನಿಯನ್ ಕಾರ್ಯಕ್ರಮಗಳಲ್ಲೂ ಇವರ ಪಾತ್ರ ಪ್ರಧಾನವಾಯಿತು. ಈ ಅವಧಿಯಲ್ಲೇ ಅವರಿಗೆ ಮುಂದೆ ಪ್ರಸಿದ್ಧರಾದ ವೈಣಿಕ ವಿದ್ವಾನ್ ಎಲ್. ರಾಜಾರಾಯರ ಪರಿಚಯವಾದದ್ದು. ಅವರ ಶಾಸ್ತ್ರೀಯ ಸಂಗೀತದ ವೀಣಾವಾದನಕ್ಕೆ ಮೃದಂಗ ಬಾರಿಸುವ ಸಾಧನೆಯೂ ನಡೆಯುತ್ತಿತ್ತು. ಈ ಮೂಲಕ ವಿವಿಧ ವರಸೆಗಳನ್ನು ಕಲಿತು, ಕಾಲೇಜು ಯೂನಿಯನ್ನಿನ ವಾದ್ಯಗೋಷ್ಠಿಯ ಸಕ್ರಿಯ ಸದಸ್ಯನಾಗುವ ಅರ್ಹತೆಯನ್ನು ಸಂಪಾದಿಸಿಕೊಂಡನು. ಕ್ರಮೇಣ ಸಂಗೀತ ವಿದ್ವಾಂಸರ ತವರಾದ ಮೈಸೂರಿನಲ್ಲಿ ಪ್ರಸಿದ್ಧ ಸಂಗೀತಗಾರರ ಸಭೆಗೆ ಹೋಗುವುದೂ ಅವರ ಪರಿಚಯ ಮಾಡಿಕೊಳ್ಳುವುದೂ ಲಭ್ಯವಾದುವು. ಮೃದಂಗವಾದನ ವಿದ್ಯೆ ಕಲಿತು ಅದನ್ನೇ ವೃತ್ತಿ ಮಾಡಿಕೊಳ್ಳುವ ಮನಸ್ಸು ತರುಣನದಾಗಿರಲಿಲ್ಲ. ತಮ್ಮ ಸಂಗೀತ ಕಲಿಕೆಯನ್ನು ವಾದನಕ್ಕೆ ಮಾತ್ರ ಮೀಸಲಿಡದೆ, ಬಾಯಿ ಹಾಡುಗಾರಿಕೆಯನ್ನೂ ಕಲಿತಿದ್ದರು. ದೇವರ ನಾಮಗಳನ್ನು ಭಜನಾಕೂಟಗಳಲ್ಲಿ ಮನೆಯಲ್ಲಿ ಹೇಳಿಕೊಳ್ಳುತ್ತಿದ್ದುದರ ಜೊತೆಗೆ, ಕಾಲೇಜಿನ ನಾಟಕಗಳಲ್ಲಿ ಸ್ತ್ರೀವೇಷಧಾರಿಯಾದಾಗ ಹಾಡು ಹೇಳುತ್ತಿದ್ದುದೂ ಉಂಟು. ಅವರು ಮೃದಂಗವನ್ನು ಎಷ್ಟರ ಮಟ್ಟಿಗೆ ಕಲಿತಿದ್ದರೆಂದರೆ ಅದನ್ನು ಇನ್ನೊಬ್ಬರಿಗೆ ಹೇಳಿಕೊಡುವ ಸಾಮರ್ಥ್ಯ ತಮಗೆ ಬಂದಿದೆ ಎಂಬ ಆತ್ಮ ಭರವಸೆ ಉಳ್ಳವರಾಗಿದ್ದರು. 'ಮೃದಂಗ' ವಿದ್ಯೆಯ ಕಲಿಕೆಗೆ ಒಂದು ಪಾಠ–ಪುಸ್ತಕವನ್ನೇ ತಯಾರು ಮಾಡಬೇಕೆಂಬ ಅಪೇಕ್ಷೆ ಅವರದ್ದು. ಆದರೆ ಅದು ಇನ್ನೂ ಕೈಗೂಡಿಲ್ಲ. ಸೀತಾರಾಮಯ್ಯನವರು ಭಾವಗೀತೆಗಳಿಗೆ ಸಂಗೀತವನ್ನು ಅಳವಡಿಸುವ ಪ್ರಯೋಗವನ್ನು ಬಹುಶಃ ಮೊತ್ತಮೊದಲು ಮಾಡಿದರು. ತಮ್ಮ "ಹಕ್ಕಿ ಹಾಡು" ಸಂಕಲನದ ಕೆಲವು ಕವನಗಳಿಗೆ ರಾಜಾರಾಯರಿಂದ ಸ್ವರ ಪ್ರಸ್ತಾರ ಹಾಕಿಸಿ ಅಚ್ಚುಮಾಡಿಸಿ ಮೇಲುಸಂಕ್ತಿ ಹಾಕಿದರು.

ಸೀತಾರಾಮಯ್ಯನವರ ಸಂಗೀತಾಭ್ಯಾಸವೂ ಲಯವಿದ್ಯಾಭ್ಯಾಸವೂ ಮುಂದೆ ಅವರು ಬೆಳೆಸಿಕೊಂಡ ಸಾಹಿತ್ಯಾಭ್ಯಾಸಕ್ಕೆ ಪುಷ್ಟಿಕೊಟ್ಟಿತು ಮಾತ್ರ. ಅವು ಪ್ರಧಾನವಾಗಿ ಅವರನ್ನು ಆ ವೃತ್ತಿಗೆ, ಮಾರ್ಗಕ್ಕೆ ಎಳೆಯಲಿಲ್ಲ. ಅವರು ಆರಿಸಿಕೊಂಡ ಅಥವಾ ವಿಧಿ ಎಳೆದು ತಂದ ಕ್ಷೇತ್ರ "ವಿದ್ವತ್ತಿನ ಕ್ಷೇತ್ರ"; ಸಾಹಿತ್ಯದ ಅಂಗ, ಉಪಾಧ್ಯಾಯ ವೃತ್ತಿ, ಸಂಶೋಧನಾರಂಗ. ಆದರೆ ಸಂಗೀತ ಚಿತ್ರ–ಮೊದಲಾದ ಲಲಿತ ಕಲೆಗಳ ಅಭ್ಯಾಸಾನುಭವ ಅವರ ಸಾಹಿತ್ಯಕ್ಕೆ ಪೋಷಕವಾಗಿ, ಮೆರುಗನ್ನು ತಂದುಕೊಟ್ಟಿದೆ ಎಂದು ಹೇಳಿದರೆ ತಪ್ಪಾಗಲಾರದು.

ಕಲಾಭಿರುಚಿಯುಳ್ಳವರಿಗೆ ಎಲ್ಲ ಕಲೆಗಳಲ್ಲಿಯೂ ಆಸಕ್ತಿ ಬೆಳೆಯುವುದು ಸಹಜ. ಅವರು ಎಲ್ಲವನ್ನೂ ಬಯಸುತ್ತಾರೆ, ಕಲಿಯಲು ಯತ್ನಿಸುತ್ತಾರೆ. ಆದರೆ

ಪರಿಸರದ ಒತ್ತಡದಿಂದ ಅವು ಬದುಕಿನಲ್ಲಿ ಪ್ರಧಾನವಾಗದೇ ಹಿಂಜರಿತ ಪಡೆಯುತ್ತವೆ. ಅವುಗಳಿಂದ ರೂಪುಗೊಂಡ ಸಂಸ್ಕಾರ ಮಾತ್ರ ಬದುಕನ್ನು ಹಸನು ಮಾಡುತ್ತವೆ. ಸೀತಾರಾಮಯ್ಯ ಸಂಗೀತ ಚಿತ್ರಕಲೆಗಳಲ್ಲಿ ಕೈಯಾಡಿಸಿ ಅಭ್ಯಾಸ ಮಾಡಿದಂತೆ. ನಾಟಕಾಭಿನಯದಲ್ಲೂ ತಮ್ಮ ಕಸರತ್ತನ್ನು ನಡೆಸಿದರು. ಚಿಕ್ಕವರಾಗಿದ್ದಾಗ ನೋಡಿದ ಕಂಪೆನಿ ನಾಟಕಗಳ ಪ್ರಭಾವ ಅವರ ಮನಸ್ಸಿನಲ್ಲಿ ಊರಿತ್ತು. ಶಾಲೆಗೆ ಸೇರಿದಾಗ, ಸಹಪಾಠಿಗಳೊಡನೆ ಬೆರೆತಾಗ, ಉಪಾಧ್ಯಾಯರ ಪ್ರೋತ್ಸಾಹ ಬೆನ್ನುತಟ್ಟಿದಾಗ, ಸುಪ್ತವಾಗಿದ್ದ ಈ ಆಸೆ ಎಚ್ಚರಗೊಂಡಿತು.

ಜೂನಿಯರ್ ಇಂಟರ್‌ಮೀಡಿಯಟ್ ತರಗತಿಯಲ್ಲಿ ಓದುತ್ತಿದ್ದಾಗ ನಾ. ಕಸ್ತೂರಿ ಅವರು ಯೋಜಿಸಿದ ಶಿಶುನಾಟಕ 'ವರಪರೀಕ್ಷೆ' ನಾಟಕದಲ್ಲಿ ಎಂ. ವಿ. ಸೀ ಅವರದು ವಧುವಿನ ಪಾತ್ರ. ತಯಾರಿಕೆ ಕಸ್ತೂರಿಯವರದ್ದೇ. ಹುಡುಗನ ಬಣ್ಣ ಸ್ತ್ರೀವೇಷಕ್ಕೆ ಶತ್ರುವಾಗಿದ್ದರೂ ಬಣ್ಣ ಹಚ್ಚಿದ ಮೇಲೆ 'ಮುಖ' ಹೆಣ್ಣಿನ ಸೌಂದರ್ಯವನ್ನು ಪ್ರತಿಬಿಂಬಿಸುತ್ತಿದ್ದಿತಂತೆ! "ನನ್ನ ಬಣ್ಣ ಯಾವಾಗಲೂ ಒಂದೇ. ಕೆನ್ನೆ ತೀಡಿದರೆ ಸಾದು ಇಟ್ಟುಕೊಳ್ಳಬಹುದಾದ ಬಣ್ಣ. ಆದರೆ ನಾಟಕದ ಬಣ್ಣ ಬಳಿದುಕೊಂಡು ಹೆಣ್ಣುಪಾತ್ರ ಮಾಡಿದರೆ, ಸ್ನೇಹಿತರು ನನ್ನಲ್ಲಿ ಮೋಹಗೊಳ್ಳುತ್ತಿದ್ದರು. ಆದರೆ ನಾನು 'ತುಪ್ಪ'ನಷ್ಟು (ಬಿ ಕೃಷ್ಣಮೂರ್ತಿ) ಸುಂದರವಾಗಿ ಕಾಣುತ್ತಿರಲಿಲ್ಲ."—ಇದು ಎಂ. ವಿ. ಸೀ ಹೆಮ್ಮೆಯಿಂದ ಹೇಳಿದ ಮಾತು.

ಹೈಸ್ಕೂಲಿನಲ್ಲಿದ್ದಾಗ ಕೈಲಾಸಂ ಅವರ 'ಪೋಲಿಕಿಟ್ಟಿ' ನಾಟಕದಲ್ಲಿ 'ಮಗು'ವಿನ ಪಾತ್ರವನ್ನು ಕಾಲೇಜಿನಲ್ಲಿ ಮತ್ತೆ 'ವಧು'ವಿನ ಪಾತ್ರವನ್ನು ವಹಿಸಿ, ತಮ್ಮ ಅಭಿನಯ ಸಾಮರ್ಥ್ಯವನ್ನು ಪ್ರದರ್ಶಿಸಿದರು. ಮಹಾರಾಜ ಕಾಲೇಜಿನಲ್ಲಿ ಓದುತ್ತಿದ್ದಾಗಲೂ ಆಡಿದ ನಾಟಕಗಳಲ್ಲಿ ಒಂದಲ್ಲ ಒಂದು ಪಾತ್ರವನ್ನು ನಿರ್ವಹಿಸಿದರು. "ಅಷಾಢಭೂತಿ" ನಾಟಕದಲ್ಲಿ 'ಲಲಿತ'ನ ಪಾತ್ರ ಅವರಿಗೆ ಹೇಳಿ ಮಾಡಿಸಿದ್ದು. ನಾಟಕವನ್ನು ನೋಡಿ ಮೆಚ್ಚಿಕೊಂಡಿದ್ದ ಉಪಕುಲಪತಿ ಎನ್. ಎಸ್. ಸುಬ್ಬರಾಯರು ಇವರನ್ನು 'ಲಲಿತೂ' ಎಂದೇ ಆಮೇಲೂ ಗುರುತಿಸುತ್ತಿದ್ದರಂತೆ! ಈ ಸಂದರ್ಭದಲ್ಲಿ ಅವರಿಗೆ ದೊರಕಿದ ನಾಟಕದ ಆಜೀವ ಮಿತ್ರರೆಂದರೆ ಬಿ. ಕೃಷ್ಣ, ಸಿ. ಬಿ. ಜಯರಾವ್, ನಟೇಶ್ ಮೊದಲಿಯಾರ್, ನಾರಾಯಣ ಶಾಸ್ತ್ರಿ, ಮಾ. ನ. ಚೌಡಪ್ಪ, ಎಸ್. ನಾಗೇಶರಾವ್, ಪಿ. ನರಸಿಂಗರಾವ್ ಅರ್ಥಾತ್ ಪರ್ವತವಾಣಿ, ಮುಂತಾದವರು.

ಈ ನಾಟಕಗಳಲ್ಲಿ ಭಾಗವಹಿಸಿದ ಅನುಭವದ ಕಾರಣವೇ ಮುಂದೆ ಅವರು ಕೆಲವು ನಾಟಕಗಳನ್ನು ಬರೆಯುವುದಕ್ಕೆ ಪ್ರೇರಣೆ ನೀಡಿರಬಹುದು. ಕೆಲವು ಒಳ್ಳೆಯ ನಾಟಕಗಳನ್ನು ಬರೆದಿದ್ದರೂ, ಅವರು 'ಸಾಹಿತಿ' ಎಂದಾದರೇ ಹೊರತು "ನಾಟಕಕಾರ"ರಾಗಿ ಪ್ರಸಿದ್ಧರಾಗಲಿಲ್ಲ. ಈ ಪ್ರವೃತ್ತಿಗಳು ಅವರಲ್ಲಿ ಮನೆಮಾಡಿ

ಕೊಂಡಿದ್ದವು ಎಂಬುದನ್ನು ಸಾಕ್ಷೀಕರಿಸಲು ಈ ಘಟನೆಗಳು ಸಹಾಯಕವಾಗಿವೆ. ಒಬ್ಬ ಸಾಹಿತಿಯ ಸಾಹಿತ್ಯ ಸತ್ವಪೂರ್ಣವಾಗಿ ಬೆಳೆಯಬೇಕಾದರೆ ಅವನ ಅನುಭವ ವೈವಿಧ್ಯದ ಜೊತೆಗೆ ವಿದ್ವತ್ತಿನ ಆಳ–ಅಗಲಗಳೂ ಅನಿವಾರ್ಯ ಎಂಬುದನ್ನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಇವು ತಕ್ಕ ಪ್ರಮಾಣದಲ್ಲಿ ಲಭ್ಯವಾಗುವ ಅವಕಾಶಗಳು ಸೀತಾರಾಮಯ್ಯನವರಿಗೆ ದೊರೆತವು.

ಲಾಯರ್ ಕೃಷ್ಣರಾಯರ ಮನೆಯಲ್ಲಿದ್ದಾಗ ಅವರ ಮನೆಯಲ್ಲಿದ್ದ ಅವರಬಂಧು ಚಿತ್ರಗಾರರೊಬ್ಬರ ಪರಿಚಯವಾಯಿತು ಇವರಿಗೆ. ಆತ ಪ್ರಾಚೀನ ಕರ್ಣಾಟಕ (ಅಥವಾ ಮೈಸೂರಿನ)ಶೈಲಿಯಲ್ಲಿ ಚಿತ್ರಗಳನ್ನು ಬಹು ಮುದ್ದಾಗಿ ಬರೆಯುತ್ತಿದ್ದುದು ಸೀತಾರಾಮಯ್ಯನವರ ಮನಸ್ಸನ್ನು ಸೆಳೆಯಿತು. ಅವರು ಒಂದು ಚಿತ್ರ ಮುಗಿಸುವುದಕ್ಕೆ 2–3 ತಿಂಗಳು ತೆಗೆದುಕೊಳ್ಳುತ್ತಿದ್ದರು. ಆತನ ಕಲಾನಿಷ್ಠೆ, ತಾಳ್ಮೆ, ಚಿತ್ರರಚನೆಯಲ್ಲಿ ಆತ ತೋರುತ್ತಿದ್ದ ಕೌಶಲ್ಯ ಇವು ಹುಡುಗನಲ್ಲಿ ಕುತೂಹಲ ಕೆರಳಿಸಿ ಅವರ ಶಿಷ್ಯತ್ವವನ್ನು ಅಪ್ರತ್ಯಕ್ಷವಾಗಿ ಸ್ವೀಕರಿಸಿದ ಈ ಹುಡುಗ. ಆತ ರಚಿಸಿದ್ದ ರಾಜರಾಜೇಶ್ವರಿ ಚಿತ್ರ ಈಗಲೂ ಸೀತಾರಾಮಯ್ಯನವರ ಮನಸ್ಸಿನಲ್ಲಿ ಅಚ್ಚೊತ್ತಿದೆಯಂತೆ. ಅವರು ಚಿತ್ರ ಬರೆಯುವ ರೀತಿ, ಪ್ರಯತ್ನವನ್ನು ಕಂಡ ಹುಡುಗ ತಾನೂ ಏಕೆ ಚಿತ್ರ ಬರೆಯಬಾರದು ಎಂದು ನಿರ್ಧರಿಸಿ ಹತ್ತಿರವೇ ಇದ್ದ ಆನೆಕರೋಟಿಯ (ಕರುಹಟ್ಟಿ) ಆನೆಗಳನ್ನೇ ಪ್ರತ್ಯಕ್ಷ ಮಾದರಿಗಳನ್ನಾಗಿಟ್ಟುಕೊಂಡು ಚಿತ್ರ ಬರೆಯಲಾರಂಭಿಸಿದ. ಚಿತ್ರ ಚೆನ್ನಾಗಿಯೇ ಇರುತ್ತಿತ್ತು. ಏಕೆಂದರೆ, ಅದನ್ನು ಅಣ್ಣ ತಂದೆ ಎಲ್ಲರೂ ಮೆಚ್ಚಿಕೊಳ್ಳುತ್ತಿದ್ದರೆಂದಮೇಲೆ, ಅವರ ಕಲಾಭ್ಯಾಸಕ್ಕೆ ಮೆಚ್ಚಿಗೆಯೂ, ಪ್ರೋತ್ಸಾಹವೂ ದೊರಕಿದಂತೆ ತಾನೇ. ಕ್ರಮೇಣ ಆಂಜನೇಯನ ಚಿತ್ರ—ಇದಕ್ಕೆ ನಿಜವಾದ ಕೋತಿಯ ಮಾದರಿ, ತಮಿಳು ನಾಟಕ ಕಂಪೆನಿಯ ಸಾರಂಗಪಾಣಿಯವರ ಲಂಕಾದಹನದ ಆಂಜನೇಯನ ಪಾತ್ರಧಾರಿಯ ಮಾದರಿ—ಮನೆಯಲ್ಲಿದ್ದ ಚಿತ್ರಪಟ ರಾಮಪಟ್ಟಾಭಿಷೇಕದ ಅನುಕರಣೆಯ ಚಿತ್ರ–ಇವುಗಳು ಅವರ ಅಭ್ಯಾಸದ ಚಿತ್ರಗಳು. ಇವುಗಳಿಗೆ ಬಣ್ಣ ಹಾಕುವುದೂ ಕೂಡ ತಾವೇ ಮಾಡಿಕೊಂಡ 'ಕಡ್ಡಿ–ಹತ್ತಿಯ' ಕುಂಚದಿಂದ ; ನೀಲಿ–ಕೆಂಪು ಶಾಯಿ ವನಸ್ಪತಿಯ ಬಣ್ಣಗಳಿಂದ. ಅದೇ ಸಂದರ್ಭದಲ್ಲಿ ಪಕ್ಕದ ಮನೆಯ ಕಲಾಭ್ಯಾಸಿ ಅಮೃತರಾವ್ ಎಂಬುವರ ಡ್ರಾಯಿಂಗ್‌ಗಳ ರೇಖಾಚಿತ್ರಗಳ ಅನುಕರಣೆ, ಪ್ರತಿ ಮಾಡುವುದು ಇತ್ಯಾದಿ ಅಭ್ಯಾಸದಿಂದ ಚಿತ್ರಕಲೆಯನ್ನೇ ಕ್ರಮವಾಗಿ ಬೆಳಸಿಕೊಂಡರು. ಆ ಕಲಾಭ್ಯಾಸಿಯ ಮೂಲಕ ಸುಪ್ರಸಿದ್ಧ ಶಿಲ್ಪಸಿದ್ಧಾಂತಿ ಸಿದ್ಧಲಿಂಗಸ್ವಾಮಿಗಳ ತಮ್ಮ ಅಪ್ಪಾಜಿಯವರ ಪರಿಚಯವಾಯಿತು. ಅವರು ಬರೆದುಕೊಡುತ್ತಿದ್ದ ವಿವಿಧ ಭಂಗಿಗಳಲ್ಲಿ ಗಂಡು ಹೆಣ್ಣಿನ ಮುಖಗಳನ್ನು ಹಸ್ತಗಳನ್ನೂ ನೋಡಿ ಪ್ರತ್ಯೇಕವಾಗಿ ಬರೆದು ತೋರಿಸುವ ಅಭ್ಯಾಸದ ಮೂಲಕ, ಸೀತಾರಾಮಯ್ಯನವರ ಚಿತ್ರಕಲಾಭ್ಯಾಸ

ಮಾಡುವುದಾಯಿತು. ಅಪ್ಪ ಅವರ ಚಿತ್ರನಿರ್ಮಾಣ ಕಾರ್ಯವನ್ನು ವೀಕ್ಷಿಸುವ ಅವಕಾಶವೂ ಲಭಿಸಿತ್ತು ; ನೋಡಿ ಕಲಿತದ್ದೇ ಹೆಚ್ಚು ಈ ಕಾಲದಲ್ಲಿ. ಸ್ವತಂತ್ರವಾಗಿ ಬಣ್ಣದ ಚಿತ್ರಗಳನ್ನು ಬರೆಯುವಲ್ಲಿ ಪ್ರಯತ್ನ ಬಲಿಯಿತು. ಈ ಬಗೆಯ ತರಬೇತಿ ಶಾಲೆಯಲ್ಲಿ ಚಿತ್ರಕಲೆಯನ್ನು ಐಚ್ಛಿಕವಾಗಿ ತೆಗೆದುಕೊಂಡು ಅದನ್ನೇ ಪಠ್ಯವಾಗಿ ಅಭ್ಯಸಿಸಲು ಪ್ರೇರಕವಾಯಿತು. ಜೊತೆಗೆ ಚಾಮರಾಜೇಂದ್ರ ಟೆಕ್ನಿಕಲ್ ಇನ್ಸ್ಟಿಟ್ಯೂಟಿಗೆ ಸೇರಿ ಬೆಳಗ್ಗೆ 7–30 ರಿಂದ 9–30ರ ವರೆಗೆ ತರಗತಿಗೆ ಹೋಗಿ ಚಿತ್ರಲೇಖನದ ಮೂಲ ಶಿಕ್ಷಣವನ್ನು ಪಡೆದರು. ಇದು ಬಹಳಕಾಲ ನಡೆಯದಿದ್ದರೂ ಚಿತ್ರಕಲಾ ಕಲಿಕೆಯಲ್ಲಿ ಆಸಕ್ತಿ ಬತ್ತಿ ಹೋಗದಿರಲು ನೆರವಾಯಿತು. ಈ ಕಾಲದಲ್ಲಿ ಸ್ವತಂತ್ರವಾಗಿ ವರ್ಣಚಿತ್ರಗಳ ಪ್ರತಿಕೃತಿ ರಚನೆ, ರೇಖಾಚಿತ್ರಗಳ ಅಭ್ಯಾಸ ನಡೆದೇ ಇತ್ತು. ಈ ಕಾಲದ ಅವರ ಚಿತ್ರಗಳಲ್ಲಿ ಹೆಸರಿಸಬಹುದಾದ ಎರಡು ಚಿತ್ರಗಳೆಂದರೆ "His Majesty Drinks" (1927) ಮತ್ತು "ಕುರುಡು ಭಿಕ್ಷುಕ" (1927-29) ಇವೆರಡೂ ಈಗಲೂ ಇವೆ. ಮುಂದೆ ಅವರ ಅಭ್ಯಾಸ ರಾಜರತ್ನಂ ಕಸ್ತೂರಿ ಇವರ ಪ್ರೋತ್ಸಾಹದಿಂದ ಪುಸ್ತಕಗಳಿಗೆ ಸಂದರ್ಭಚಿತ್ರ (illustration) ಬರೆದುಕೊಡುವ ಅವಕಾಶ ದೊರೆಯಿತು. ಮುಂದೆ ಕಲಾವಿದ ವೆಂಕಟಪ್ಪನವರ ಪರಿಚಯ ಆಗಿ ಅವರಲ್ಲಿ ತಾತ್ಕಾಲಿಕ ಶಿಷ್ಯತ್ವ ಲಭಿಸಿತು. ಅವರು 'ವಿವಾಹಿತರಿಗೆ ಕಲಿಸುವುದಿಲ್ಲ' ಎಂಬ ನೇಮವಿಟ್ಟುಕೊಂಡಿದ್ದುದರಿಂದ, ಅವರ ಶಿಷ್ಯರಾಗಿ ನೇರವಾಗಿ ಕಲಿಯಲಾಗದಿದ್ದರೂ ಅವರ ಚಿತ್ರ ರಚನಾ ವಿಧಾನವನ್ನು ನೋಡಿ ಕಲಿತರು. ಅಲ್ಲದೇ ಅವರೂ ಸೀತಾರಾಮಯ್ಯನವರ ವಿಷಯದಲ್ಲಿ ವಿಶ್ವಾಸದಿಂದಲೇ ಇದ್ದರು. ಅದಕ್ಕೆ ಕಾರಣ ವೆಂಕಟಪ್ಪನವರು ಸೀತಾರಾಮಯ್ಯನವರ ಚಿತ್ರಗಳನ್ನು ದಸರಾ ವಸ್ತುಪ್ರದರ್ಶನದಲ್ಲಿ ನೋಡಿ ಮೆಚ್ಚಿಕೊಂಡಿದ್ದುದು : ವಸ್ತುಪ್ರದರ್ಶನದಲ್ಲಿ ಇವರ ಚಿತ್ರಗಳ ಪ್ರದರ್ಶನಕ್ಕೆ ಅವಕಾಶ ಕಲ್ಪಿಸಿಕೊಟ್ಟಿದ್ದವರೂ ಅವರೇ. ಈ ಚಿತ್ರಕಲಾ ವಿದ್ಯಾರ್ಥಿ ಕಾಲೇಜನ್ನು ಪ್ರವೇಶಿಸಿದಾಗ ಚಿತ್ರಕಲಾಭ್ಯಾಸ ಕುಂಠಿತವಾಯಿತು. ರಜಾಕಾಲದಲ್ಲಿ ಬಿಡುವಿನ ವೇಳೆಯಲ್ಲಿ ಮಾತ್ರ ಚಿತ್ರಗಳನ್ನು ರಚಿಸುತ್ತಿದ್ದರು. ಈ ಕಾಲದಲ್ಲಿ ರಾಜರತ್ನಂ ಅವರ ಮಕ್ಕಳ ಪುಸ್ತಕಗಳಿಗೆ ಚಿತ್ರ ಬರೆದುಕೊಟ್ಟರು.

ಎಂ. ಎ. ಪರೀಕ್ಷೆಯ ಅನಂತರ ತೀ. ನಂ. ಶ್ರೀ, ಟಿ. ಎಸ್. ವೆಂಕಣ್ಣಯ್ಯ ಅವರ ಒತ್ತಾಸೆಯಿಂದ ಚಿತ್ರಕಲಾ ಪ್ರಾವೀಣ್ಯತೆಗೆ ಶಾಂತಿನಿಕೇತನಕ್ಕೆ ಹೋಗಿ ಕಲಿಯುವ ಆಸೆ–ಪ್ರಯತ್ನಗಳು ನಡೆದವು. ಅಷ್ಟರಲ್ಲಿ ಮದುವೆ ಆಗಿ ಹೆಂಡತಿ ಮನೆಗೆ ಬಂದಿದ್ದಳು. ಮನೆಯವರಾರೂ ಅಷ್ಟು ದೂರದ ಊರಿಗೆ ಈ 'ಗೃಹಸ್ಥ'ನನ್ನು ಕಳಿಸಲು ಉತ್ಸಾಹ ತೋರಿಸಲಿಲ್ಲ. ಅಲ್ಲದೆ ಮಾಡಿದ ಪ್ರಯತ್ನಗಳು ಆರ್ಥಿಕ ಮುಗ್ಗಟ್ಟಿನಿಂದ ಸಫಲವಾಗಲಿಲ್ಲ. ಪ್ರಯಾಣದ ಸನ್ನಾಹ ನಡೆದು ಕಲ್ಕತ್ತಾಭಿಮುಖನಾಗಿ ಹೊರಟು ಮದರಾಸಿಗೆ ಬಂದು, ಅಲ್ಲಿಂದ ಊರಿಗೆ ಹಿಂದಿರುಗ

ಬೇಕಾಯಿತು. ಆ ವೇಳೆಗೆ ಅವರ ಚಿತ್ರಬಿಡಿಸುವ ಅನುಭವ ಎಷ್ಟರ ಮಟ್ಟಿಗೆ ಸಿದ್ಧಿ ಪಡೆದಿತ್ತೆಂದರೆ ಇವರ ಚಿತ್ರಗಳನ್ನು ಪರಾಂಬರಿಸಿದ ಕಲ್ಕತ್ತಾ ಕಲಾಶಾಲೆ ತನ್ನ ಐದು ವರ್ಷಗಳ ಶಿಕ್ಷಣ ಅವಧಿಯಲ್ಲಿ ಎರಡು ವರ್ಷಗಳ ಅವಧಿಯನ್ನು ಮನ್ನಾ ಮಾಡಿತ್ತು. ಏನಾದರೂ ಚಿತ್ರಕಲೆಯ ಕ್ರಮಬದ್ಧ ಅವಕಾಶ ಹಣೆಯಲ್ಲಿ ಬರೆದಿಲ್ಲ ಎಂಬುದು ಅವರ ಎಲ್ಲ ಪ್ರಯತ್ನಗಳು ವಿಫಲವಾದದ್ದರಿಂದ ಗೊತ್ತಾಯಿತಂತೆ. ಈ ಸಾಹಸ ಅಲ್ಲಿಗೇ ನಿಂತರೂ ಅವರ ಸಾಹಿತ್ಯರಚನೆಗೆ ಈ ಪೂರ್ವಭಾವಿ ಮನ ಸಂಸ್ಕಾರ, ಈ ಕಲೆಯ ಸೂತ್ರ, ಹಿನ್ನೆಲೆಯಾಗಿ ಪುಷ್ಟಿಕೊಟ್ಟಿತೆಂಬುದಂತೂ ಖಂಡಿತ. ಚಿತ್ರಕಲಾ ವಿಷಯವೇ ವಸ್ತುವಾಗಿ ಕವನ, ಕಥೆ, ನಾಟಕಗಳ ರಚನೆಗಂತೂ ಅವಕಾಶವಾಯಿತು.

ಎಂ. ಎ. ಪರೀಕ್ಷೆಮಾಡಿಕೊಂಡ ಅನಂತರ ಚಿತ್ರವಿದ್ಯೆಯ ಕಲಿಕೆಯ ಪ್ರಯತ್ನ ನಿಷ್ಫಲವಾದಾಗ, ಮದುವೆ ಆಗಿ ಹೆಂಡತಿ ಮನೆಗೆ ಬಂದಮೇಲೆ ಉಳಿದ ಒಂದೇ ಮಾರ್ಗ ಎಂದರೆ ಉದ್ಯೋಗ ಕೈಕೊಳ್ಳುವುದು. ಅವರಪ್ಪೇನೂ ಶ್ರೀಮಂತ ಮನೆತನವಲ್ಲವಾದದ್ದರಿಂದ ಸ್ವತಂತ್ರ ಜೀವನ ನಡೆಸುವುದಂತೂ ದೂರದ ಮಾತೇ ಆಗಿತ್ತು.

ಸೀತಾರಾಮಯ್ಯ ಕೆಲಸ ಹಿಡಿಯುವುದಕ್ಕೆ ಇನ್ನೊಂದು ಕಾರಣ ಮನೆಯ ಆರ್ಥಿಕ ಸ್ಥಿತಿ. ತಂದೆಯವರ ಸಂಪಾದನೆ ಬೆಳೆಯುತ್ತಿದ್ದ ಸಂಸಾರಕ್ಕೆ ಸಾಲುತ್ತಿರಲಿಲ್ಲ. ಅವರ ಧಾರಾಳತನ ದಿನದಿನಕ್ಕೆ ಬರಿಗೈ ಆಗಿಸುತ್ತಿತ್ತು. ಅಣ್ಣಂದಿರ ಸಂಪಾದನೆ ಅವರ ಸಂಸಾರ ತೂಗಿಸುವುದಕ್ಕೆ ಸರಿಹೋಗುತ್ತಿತ್ತು. ಮನೆಯಲ್ಲಿ ೧೦–೧೨ ಮಂದಿಯ ಸಂಸಾರ. ನವರಾತ್ರಿಗೆ ಬಂದು ಹೋಗುವ ಬಂಧುಗಳು. ವಾರದ ಹುಡುಗರು, ಭಿಕ್ಷಾನ್ನದವರು, ಇವರ ಪೋಷಣೆ; ಈ ಎಲ್ಲ ಪರಿಸ್ಥಿತಿ ಅವರನ್ನು ಕೆಲಸ ಕೈಕೊಳ್ಳಲು ಬಲವಂತಪಡಿಸುತ್ತಿತ್ತು. ಸಂಗೀತ ಚಿತ್ರಗಳ ವಿದ್ಯೆ ಸಂಪಾದನೆಗೆ ಸಹಾಯ ಮಾಡಲಿಲ್ಲ. ಚಿತ್ರಕಲೆ ಕಲಿಕೆಗೆ ಪ್ರವಾಸಹೊರಟು ನಿರರ್ಥಕವಾಗಿ ಕಳೆದದ್ದು ಮೂರು ತಿಂಗಳ ಕಾಲ. ಅನಂತರ 1933ರಲ್ಲಿ ಆರು ತಿಂಗಳ ನಿರುದ್ಯೋಗದ ಬವಣೆ. ಜೊತೆಯಲ್ಲಿ ಕಾಣಿಸಿಕೊಂಡ ಉದರಶೂಲೆ ಬೇರೆ. ಆಗ ವೆಂಕಣ್ಣಯ್ಯನವರ ಕೃಪೆಯಿಂದ ಡಾ|| ಎಂ. ಸಿದ್ದಲಿಂಗಯ್ಯನವರ ಡಾಕ್ಟರೇಟ್ ಪ್ರಬಂಧವನ್ನು (ಪ್ರಾಜೆಕ್ಟ್ ಶಿಕ್ಷಣ ವಿಚಾರ) ಕನ್ನಡಿಸಿಕೊಟ್ಟದ್ದರಿಂದ ತಿಂಗಳಿಗೆ 15 ರೂ. ವರಮಾನ. ಡಾ|| ಎ. ಎನ್. ನರಸಿಂಹಯ್ಯನವರ ಇಂಗ್ಲಿಷ್ ಬರಹವನ್ನು ಅನುವಾದಿಸಿಕೊಟ್ಟ ಅಲ್ಪಸಂಪಾದನೆ. ಹೀಗೆ ಚೂರು–ಪಾರು ಸಂಪಾದನೆಯಿಂದ ತಾಯಿಗೆ ಹಿಗ್ಗುಂಟುಮಾಡಿ, ಕನ್ನಡ ಸಾಹಿತ್ಯ ಪರಿಷತ್ತಿನ ಸಹಾಯಕ ಕಾರ್ಯದರ್ಶಿಯಾಗಿ 1934ರಲ್ಲಿ ಅದೇ ವೆಂಕಣ್ಣಯ್ಯನವರ ಶಿಫಾರಸ್ಸಿನಿಂದ ನೇಮಕಗೊಂಡರು.

ಮೈಸೂರು ಬಿಟ್ಟು ಬೆಂಗಳೂರಿಗೆ ಬಂದದ್ದಾಯಿತು. ಐದು ವರ್ಷ ಪರಿಷತ್ತಿನ ಸೇವೆ ನಡೆಯಿತು. ಡಿ. ವಿ. ಗುಂಡಪ್ಪನವರ ಬಿ. ಎಂ. ಶ್ರೀ ಯವರ ಉಪಾಧ್ಯಕ್ಷತೆಯ ಕಾಲ ಅದು. ಪ್ರಸಿದ್ಧ ನಾಟಕಕಾರರಾದ ಕೈವಾರ ರಾಜಾರಾಯರೂ ಪರಿಷತ್ತಿನ ಶೀಘ್ರಲಿಪಿ ಗುಮಾಸ್ತರಾಗಿ ಇವರ ಜೊತೆಯಲ್ಲಿ ಕೆಲಸ ಮಾಡುತ್ತಿದ್ದರು ಸಹಾಯಕ ಕಾರ್ಯದರ್ಶಿಯ ಕೆಲಸ ಬರಿಯ ಕಚೇರಿ ಗುಮಾಸ್ತಗಿರಿಯಾಗಿರದೆ ಸಂಸ್ಥೆ ಕಟ್ಟುವ ಮೇಸ್ತ್ರಿ ಕೆಲಸವೂ ಆಗಿತ್ತು. ಪತ್ರವ್ಯವಹಾರ, ಹಣಕಾಸಿನ ಜವಾಬ್ದಾರಿ, ಪರಿಷತ್ಪತ್ರಿಕೆಯ ಸಂಪಾದನೆಗೆ ನೆರವು; (ಆಗ ಎ. ಆರ್. ಕೃಷ್ಣಶಾಸ್ತ್ರಿಗಳು ಪತ್ರಿಕೆಯ ಸಂಪಾದಕರಾಗಿದ್ದರು) ಗ್ರಂಥ ಭಂಡಾರದ ಮೇಲ್ವಿಚಾರಣೆ, ಕಾರ್ಯಸಮಿತಿ ಸಭೆಯ ಕಾರ್ಯಕಲಾಪ ಸಿದ್ಧತೆ, ಮೊದಲಾದ ಕೆಲಸಗಳು ದಿನಕ್ಕೆ 10 ಗಂಟೆಯ ಕಾಲ ದುಡಿದರೂ ಮುಗಿಯುತ್ತಿರಲಿಲ್ಲ. ಬಿ. ಎಂ. ಶ್ರೀ ಸಂಪಾದಕರಾಗಿ ಹೊಸದಾಗಿ ಆರಂಭಿಸಿದ 'ಕನ್ನಡನುಡಿ'ಯ ಸುದ್ದಿ ಸಂಪಾದಕರೂ ಎಂ.ವಿ.ಸೀ. ಅವರೇ ಆಗಿದ್ದರು. ಕೆಲವೊಮ್ಮೆ ಸಂಪಾದಕೀಯ ಲೇಖನಗಳನ್ನೂ ಬರೆಯಬೇಕಾಗುತ್ತಿತ್ತು. ಡಿ. ವಿ. ಜಿ. —ವಿದ್ವಾಂಸರು, ಪ್ರತಿಭಾವಂತರು, ಕಾರ್ಯಸಮರ್ಥರು ನಿಜ. ಆದರೆ ಆಫೀಸು ಕೆಲಸಮಾಡುವಾಗ ಅವರು "Hard Task Master". ಅವರೂ ದುಡಿದು ಇತರರನ್ನೂ ದುಡಿಸುತ್ತಿದ್ದರು. ಅವರು ಎಷ್ಟು ಮುಂಗೋಪಿಗಳೋ ಅಷ್ಟೇ ಅನುಕಂಪಶೀಲರೂ ಆಗಿದ್ದರು. ಅವರೊಡನೆ ಕೆಲಸಮಾಡುವುದು ಒಂದು ಭಾಗ್ಯ ವಿಶೇಷವೇ ಆಗಿತ್ತು, ಸೀತಾರಾಮಯ್ಯ ಅವರಿಗೆ. ಸೀತಾರಾಮಯ್ಯನವರ ವ್ಯಕ್ತಿತ್ವವನ್ನು ಅವರಿಗೆ ಗೋಚರವಾಗದಂತೆಯೇ ರೂಪಿಸಿದವರು ಅವರು. ಈ ಸಂಗತಿಯನ್ನು ಸೀತಾರಾಮಯ್ಯ ಕೃತಜ್ಞತೆಯಿಂದ ಸ್ಮರಿಸುತ್ತಾರೆ.

ಪರಿಷತ್ತಿನ ಸೇವಾವಧಿಯಲ್ಲಿ ಜಮಖಂಡಿ ಬೊಂಬಾಯಿ ಬಳ್ಳಾರಿ ಸಮ್ಮೇಳನಗಳಲ್ಲಿ ಪರಿಷತ್ತಿನ ಉದ್ಯೋಗಿಯಾಗಿ ಭಾಗವಹಿಸಿ, ಸಾಹಿತಿಗಳ ಅಖಿಲ ಕರ್ನಾಟಕ ವಿದ್ವಾಂಸರ ಪರಿಚಯವನ್ನು ಪಡೆದು ಅವರ ಸಂಪರ್ಕವನ್ನು ರೂಢಿಸಿಕೊಂಡರು. ಅವರು ಪರಿಷತ್ತಿನ ಬರಿಯ ನೌಕರನಾಗದೆ ತರುಣ ಸಾಹಿತಿಯೂ ಆಗಿ, ಸಾಹಿತ್ಯಕ್ಷೇತ್ರದಲ್ಲೂ ಕೆಲಸ ಮಾಡುವ ವಿದ್ಯಾರ್ಥಿಯಾಗಿ ಕೀರ್ತಿಗಳಿಸಿಕೊಂಡರು. ಅವರ ಬದುಕಿನಲ್ಲಿ ಪರಿಷತ್ತಿನ ಉದ್ಯೋಗ ಒಂದು ಪರಿಣಾಮಕಾರಿಯಾದ ಘಟ್ಟ ಎನ್ನಬಹುದು. ಅಲ್ಲಿ ತಮ್ಮ ಚಿತ್ರ ಬರೆಯುವ ವಿದ್ಯೆಯ ಪ್ರದರ್ಶನಕ್ಕೆ ಒಂದೆರಡು ಅವಕಾಶಗಳೂ ದೊರಕಿದವು. ಕನ್ನಡ ನುಡಿಯ ಪರಿಷತ್ ಪತ್ರಿಕೆಯ ಮುಖಚಿತ್ರ ಕನ್ನಡ ಬಾವುಟದ ಹೊದಿಕೆ ಚಿತ್ರಗಳನ್ನು ಇವರೇ ಬರೆದುಕೊಟ್ಟರು. ಹಾಗೆಯೇ ಮೊತ್ತಮೊದಲಿಗೆ ಕನ್ನಡ ಸಾಹಿತ್ಯ ಪರಿಷತ್ತಿನ ಸಾಂಕೇತಿಕ ನಕಾಶೆಯನ್ನು (emblem) ಬಿಡಿಸಿಕೊಟ್ಟವರೂ ಸೀತಾರಾಮಯ್ಯನವರೇ.

ಪರಿಷತ್ತಿನಲ್ಲಿ ಅವರಿಗೆ ಬರುತ್ತಿದ್ದ ವೇತನ ಕೇವಲ 50 ರೂ. 1939ರಲ್ಲಿ
ಅವರ ಸೇವೆ ಇಂಗ್ಲಿಷ್–ಕನ್ನಡ ನಿಘಂಟು ಕಚೇರಿಗೆ ಸಂದಿತು. ಬಿ. ಎಂ. ಶ್ರೀ
ಅವರಿಗೆ ಇವರನ್ನು ಬಿಟ್ಟುಕೊಡಲು ಇಷ್ಟವಿಲ್ಲ. ಅವರು ನಿಘಂಟುವಿನ ಸಮಿತಿ
ಯಲ್ಲೂ ಇದ್ದರಾಗಿ, "ಪರಿಷತ್ತಿಗಾದ ನಷ್ಟ ನಿಘಂಟುವಿನ ಲಾಭ" ಎಂಬ ಸಮಾಧಾನ
ದಿಂದ ಬಿಟ್ಟುಕೊಟ್ಟರು. ಅಲ್ಲಿಯೂ ವೇತನ ಅಷ್ಟೇ. ಅಲ್ಲಿ 1946ರ ವರೆಗೆ
ದುಡಿದರು. ಎಂ. ಆರ್. ಶ್ರೀ, ಕೆ. ವಿ. ರಾಘವಾಚಾರ್, ಎಲ್. ಗುಂಡಪ್ಪ
ಇವರುಗಳ ಸಹೋದ್ಯೋಗಿಗಳಾಗಿ ಕೆಲಸ ಮಾಡಿದರು. ಪ್ರಾರಂಭದಲ್ಲಿ ನಿಘಂಟಿನ
'ಎಸ್' ಅಕ್ಷರದ ಪದಗಳ ನಿರ್ವಹಣೆಯ ಕೆಲಸ ಇವರ ಭಾಗಕ್ಕೆ ಬಂದಿತು. ಆಗ
ಮುಖ್ಯ ಸಂಪಾದಕರಾಗಿದ್ದವರು ಬೆಳ್ಳಾವೆ ವೆಂಕಟನಾರಣಪ್ಪನವರು. ಇಲ್ಲಿನ
ಕೆಲಸವೂ ಕ್ರಮಬದ್ಧ ಮತ್ತು ಕಾಲಬದ್ಧ. ದಿನಕ್ಕೆ ಆರುಗಂಟೆಯ ವಿರಾಮರಹಿತ
ಕೆಲಸ. ಸಂಪಾದಕರೂ ಜೊತೆ–ಜೊತೆಗೇ ದುಡಿಯುತ್ತಿದ್ದುದರಿಂದ ಯಾವ
ವೈಷಮ್ಯಕ್ಕೂ ಎಡೆಯೇ ಇರುತ್ತಿರಲಿಲ್ಲ. ವೆಂಕಟನಾರಣಪ್ಪನವರ ಕಛೇರಿ ಶಿಸ್ತಿನ
ಗರಡಿ !

ನಿಘಂಟು ಕಛೇರಿ ಕೆಲಸವನ್ನು ಸರ್ಕಾರಿ ಕೆಲಸವೆಂದು ಪರಿಗಣಿಸಲಿಲ್ಲ. ಅಲ್ಲಿ
ನಾಲ್ಕೆಂಟು ವರ್ಷಗಳಿಂದ ಕೆಲಸಮಾಡುತ್ತಿದ್ದವರಿಗೆ ಕೋಶ ಕಛೇರಿ ಕೆಲಸ ಮುಗಿದ
ತಕ್ಷಣ ನಿರುದ್ಯೋಗಾವಸ್ಥೆ ಸಂಭವಿಸುವ ಸಾಧ್ಯತೆ ಇದ್ದುದರಿಂದ, ವೆಂಕಟನಾರಣಪ್ಪ
ನವರು ಎಲ್ಲರಿಗೂ ವಿಶ್ವವಿದ್ಯಾನಿಲಯದಲ್ಲಿ ಕೆಲಸ ಕೊಡಿಸಲು ಬಹುವಿಧವಾಗಿ
ಪ್ರಯತ್ನಿಸಿದರು. ಎಲ್. ಗುಂಡಪ್ಪ, ರಾಘವಾಚಾರ್ಯರಿಗೆ ಉಪನ್ಯಾಸಕರ ಹುದ್ದೆ
ದೊರಕಿಸಿತು. ಅವರು ಅಲ್ಲಿ ಖಾಯಂ ಕೆಲಸ ಹೊಂದಿ ಇಲ್ಲಿ ಸೆಕೆಂಡ್ (second)
ಆಗಿ ಕೆಲಸ ಮಾಡಲಾರಂಭಿಸಿದರು ಸೀತಾರಾಮಯ್ಯನವರಿಗೆ ಆಗ ಆ ಕೆಲಸ
ಸಿಗಲಿಲ್ಲ. ಏಕೆಂದರೆ ಇಡಿಯ ಮೈಸೂರು ಸಂಸ್ಥಾನದಲ್ಲಿ ಇದ್ದ ನಾಲ್ಕು ಕಾಲೇಜು
ಗಳಲ್ಲಿ ಯಾವ ಹುದ್ದೆಯೂ ತೆರವಿರಲಿಲ್ಲ. ಬೆಳ್ಳಾವೆಯವರು ತೀರಿಕೊಂಡು
ಎಂ. ಆರ್. ಶ್ರೀ ಪ್ರಧಾನ ಸಂಪಾದಕರಾಗಿ ಮುಂದುವರಿದಾಗ ಅವರೂ ಪ್ರಯತ್ನಿ
ಸಿದರು. ಸೀತಾರಾಮಯ್ಯನವರ ಅದೃಷ್ಟ ಕೂಡಿಬಂದಿರಲಿಲ್ಲ. 1945ರಲ್ಲಿ
ನಿಘಂಟು ಕೆಲಸ ಮುಕ್ತಾಯದ ಸ್ಥಿತಿಗೆ ಬಂದಾಗ, ಶ್ರೀನಿವಾಸಮೂರ್ತಿ ರಜಾ
ಮೇಲೆ ತೆರಳಿ ಎಂ. ವಿ. ಸೀ. ಅವರನ್ನೇ ಪ್ರಧಾನ ಸಂಪಾದಕರನ್ನಾಗಿ ನೇಮಿಸಿ ಆ
ಕೆಲಸ ಪೂರ್ತಿ ಆದಮೇಲೆ ಅವರಿಗೆ ವಿಶ್ವವಿದ್ಯಾನಿಲಯದಲ್ಲಿ ನೇಮಿಸಿಕೊಳ್ಳ
ಬೇಕೆಂದು ಶಿಫಾರಸುಮಾಡಿ ಸಹಾಯಮಾಡಿದರು. ಅವರ ಅದೃಷ್ಟಕ್ಕೆ ಸರಿಯಾಗಿ
ಬೆಂಗಳೂರು ಇಂಟರ್ ಮೀಡಿಯಟ್ ಕಾಲೇಜಿನಲ್ಲಿ ತೀ. ನಂ. ಶ್ರೀ, ಅವರ ಪ್ರಯತ್ನ
ದಿಂದ ಒಂದು ಹೊಸ ಹುದ್ದೆ ನಿರ್ಮಾಣವಾಯಿತು. ಆಗಿನ ವೈಸ್ ಛಾನ್ಸಲರ್

ಆಗಿದ್ದ ಸಿಂಗಾರವೇಲು ಮೊದಲಿಯಾರ್ ಅವರ ಕೃಪೆಯಿಂದ ಸೀತಾರಾಮಯ್ಯನವರಿಗೆ ಆ ಜಾಗ ದೊರೆಯಿತು. ಎಂ. ವಿ. ಸೀತಾರಾಮಯ್ಯ ಕಾಲೇಜಿನ ಉಪನ್ಯಾಸಕರಾದರು. 1946 ರಿಂದ ನಿವೃತ್ತಿಯಾಗುವವರೆಗೂ ಎಂದರೆ 1967ರ ವರೆಗೆ ಅವ್ಯಾಹತವಾಗಿ ಇಂಟರ್ ಮೀಡಿಯಟ್ ಕಾಲೇಜಿನಲ್ಲಿ ಸೇವೆ ಸಲ್ಲಿಸಿ ಸಾವಿರಾರು ವಿದ್ಯಾರ್ಥಿಗಳ ಮೆಚ್ಚುಗೆಯನ್ನು, ಉಪಾಧ್ಯಾಯ ವಿದ್ವಾಂಸರ ಗೌರವ–ಸ್ನೇಹಗಳನ್ನು ಸಂಪಾದಿಸಿ ಅಕಳಂಕ ಸೇವೆ ಸಲ್ಲಿಸಿ, ತಮ್ಮ ಕರ್ತವ್ಯವನ್ನು ತೃಪ್ತಿಕರವಾಗಿ ನಿರ್ವಹಿಸಿ ಹೆಸರು ಗಳಿಸಿದರು. ಅವರು ಬೇರೆ–ಬೇರೆ ಕಾಲೇಜುಗಳಿಗೆ ವರ್ಗವಾಗಿ ಹೋಗಲು ಅವರ ನಿತ್ಯಶಾಯಿಲೆ ಅವರಿಗೆ ಅವಕಾಶ ಮಾಡಿಕೊಡಲಿಲ್ಲ. ಇದೊಂದು ಅವರಿಗೆ, Blessing is disguise ಆಯಿತು ಎನ್ನಬಹುದು.

ಕಾಲೇಜಿನ ಅವರ ಉದ್ಯೋಗ ಅಷ್ಟೇನೂ ವೈವಿಧ್ಯಪೂರ್ಣವಾಗಿರದಿದ್ದರೂ ನೀರಸವಾಗಿರಲಿಲ್ಲ. ಅವರು ತಮ್ಮ ಪಾಠ–ಪ್ರವಚನಗಳ ಜೊತೆಗೆ ಪಠ್ಯೇತರ ಕಾರ್ಯಕ್ರಮಗಳನ್ನೂ ನಡೆಸಲು ಉತ್ಸಾಹಿತರಾಗಿದ್ದರು. ಪ್ರಾರಂಭದಲ್ಲಿ ತಮ್ಮ ಉತ್ಸಾಹಕ್ಕೆ ಬೆಂಬಲ, ಪ್ರೋತ್ಸಾಹ ದೊರಕದಿದ್ದರೂ ಕ್ರಮೇಣ ತಾವೇ ಧೈರ್ಯ ಮಾಡಿ, ರಾಜರತ್ನಂ ಅವರು ಸ್ಥಾಪಿಸಿ, ಒಂದು ವರ್ಷ ನಡೆಸಿದ ಮೇಲೆ ನಿಂತು ಹೋಗಿದ್ದ ಕಾಲೇಜಿನ ಕರ್ನಾಟಕ ಸಂಘವನ್ನು ಪುನಃ ಸ್ಥಾಪಿಸಿ ಆ ಮೂಲಕ ಕನ್ನಡ ಸಾಹಿತ್ಯದ ಚಟುವಟಿಕೆಗಳನ್ನು ಕೈಕೊಂಡರು. ವಿದ್ಯಾರ್ಥಿಗಳಲ್ಲಿ ಕನ್ನಡದ ಬಗ್ಗೆ ಪ್ರೀತಿ ಹುಟ್ಟಿಸಿ, ಬೆಳಸಿ, ಅವರಲ್ಲಿ ಕನ್ನಡ ಭಾಷಾಪ್ರೇಮವನ್ನು ತುಂಬಿದರು. ಚರ್ಚಾ ಸ್ಪರ್ಧೆಗಳಲ್ಲಿ ವಿದ್ಯಾರ್ಥಿಗಳು ಭಾಗವಹಿಸಿ ಮುಂದೆ ಉತ್ತಮ ಭಾಷಣಕಾರರಾಗುವುದಕ್ಕೆ ಪ್ರಯತ್ನಿಸಿದರು. ಕೆ. ಪಿ. ಶಿವಲಿಂಗಯ್ಯ, ಸಿ. ವೀರಣ್ಣ ಅವರು ನಗರದ ಅನೇಕ ಕಾಲೇಜುಗಳ ಚರ್ಚಾಕೂಟಗಳಲ್ಲಿ ಭಾಗವಹಿಸಿ, ಪರ್ಯಾಯ ಪಾರಿತೋಷಕಗಳನ್ನೂ ರಜತ ಪದಕಗಳನ್ನೂ ಗೆದ್ದು, ಕಾಲೇಜಿಗೆ ಸಂಘದ ಅಧ್ಯಕ್ಷರಿಗೆ ಕೀರ್ತಿ ತಂದುಕೊಟ್ಟರು. ಸಂಘದ ಕಾರ್ಯಕ್ರಮಗಳಿಗೆ ಡಿ. ವಿ. ಜಿ., ಮಾಸ್ತಿ, ಸಿ.ಕೆ.ವಿ., ಗೊರೂರು, ತೀ. ನಂ. ಶ್ರೀ, ಉಪಾಧ್ಯೆ, ಗೋಕಾಕ್, ಇವರೇ ಮೊದಲಾದ ಶ್ರೇಷ್ಠ ಸಾಹಿತಿಗಳನ್ನೂ ವಿದ್ವಾಂಸರನ್ನೂ, ಆಹ್ವಾನಿಸಿ ಭಾಷಣಗಳನ್ನು ಏರ್ಪಡಿಸಿದ್ದುಂಟು. ಸೀತಾರಾಮಯ್ಯನವರ ಈ ಕರ್ತೃತ್ವ ಶಕ್ತಿಗೆ ಪುಷ್ಟಿ ಕೊಟ್ಟವರು ಕಾಲೇಜಿನ ಪ್ರಿನ್ಸಿಪಾಲರಾದ ನರೋನ್ಹ ಮತ್ತು ಆರ್. ಆರ್. ಉಮರ್ಜಿ ಅವರು. ವಿದ್ಯಾರ್ಥಿಗಳೂ ಕೂಡ ಹೆಮ್ಮೆಯಿಂದ ಕೆಲಸಮಾಡಿದರು. ಚರ್ಚಾಗೋಷ್ಠಿಗಳಲ್ಲಿ ಗೆಲ್ಲುತ್ತಿದ್ದ ಸಿ. ವೀರಣ್ಣ ತನ್ನ ತಾಯಿಯ ಹೆಸರಿನಲ್ಲಿ ಸಂಘ ನಡೆಸುವ ಚರ್ಚಾಕೂಟದಲ್ಲಿ ಗೆದ್ದವರಿಗೆ ನೀಡಲು ಪರ್ಯಾಯ ಪಾರಿತೋಷಕ ಫಲಕವನ್ನು ದಾನಮಾಡಿದರು. ಸಂಘದಿಂದ ವಾರ್ಷಿಕ ಪ್ರಕಟನೆಗಳು ಹೊರಬರುವಂತೆ ಮಾಡಿದ ಕೆಲಸ ಸೀತಾರಾಮಯ್ಯನವರು ವಿದ್ಯಾರ್ಥಿಗಳಲ್ಲಿ ಅಡಗಿದ್ದ ಸಾಹಿತ್ಯ

ಶಕ್ತಿಯನ್ನು ಪ್ರದರ್ಶಿಸಲು ಕೈಕೊಂಡ ಒಂದು ಕಾರ್ಯ. "ಬಿರಿ ಮೊಗ್ಗು" ಎಂಬ ಪ್ರಬಂಧ ಸಂಕಲನ, "ಸೊಡರು" ಎಂಬ ಕವನ ಸಂಕಲನಗಳ ಹೆಸರನ್ನು ಇಲ್ಲಿ ಹೇಳಬಹುದು. 1962 ರಲ್ಲಿ "ಸಮರ ಸಮಯ ಕವಿ ಸಮ್ಮೇಳನ"ವನ್ನು ಏರ್ಪಡಿಸಿ, ಅಲ್ಲಿ ಓದಿದ ಕವನಗಳ ಸಂಕಲನವೊಂದು "ಹೊಳಪು-ಝಳಪು" ಎಂಬ ಹೆಸರಿನಲ್ಲಿ ಪ್ರಕಟವಾಯಿತು. ವಿದ್ಯಾರ್ಥಿಗಳ ಬರಹಕ್ಕೆ ಒತ್ತಾಸೆ ಕೊಟ್ಟ ಇನ್ನೊಂದು ವಾರ್ಷಿಕ ಪ್ರಕಟನೆ "ವಿಕಾಸ". ಅನ್ವರ್ಥಕ ನಾಮಾಂಕಿತವುಳ್ಳ ಇದು ವಿದ್ಯಾರ್ಥಿಗಳ ವಿಕಾಸಕ್ಕೆ ಇಂಬು ಕೊಡುವ "ವಿದ್ಯಾರ್ಥಿ-ಕಾವ್ಯ-ಸಮೀಕ್ಷೆ".

ಶ್ರೀ ರಾಜರತ್ನಂ ಅವರು ನಿವೃತ್ತರಾದಾಗ ಅವರಿಗೆ ಸೀತಾರಾಮಯ್ಯನವರ ಪ್ರಯತ್ನದಿಂದ ಕರ್ನಾಟಕ ಸಂಘ ಸನ್ಮಾನ ಸಮಾರಂಭವನ್ನು ಏರ್ಪಡಿಸಿತು. ಸೀತಾರಾಮಯ್ಯನವರು ಪುನಃ ಪರಿಷ್ಕರಣ ಮಾಡಿದ ಉತ್ತಮ ಗ್ರಂಥ ಪಾಠವನ್ನೂ ಅವರ ಸಂಶೋಧನೆಯ ಫಲವಾಗಿ ದೀರ್ಘ ಪೀಠಿಕೆಯನ್ನೂ ಉಳ್ಳ "ಕವಿರಾಜಮಾರ್ಗ" ಸಂಘದ ಪ್ರಕಟನೆಯಾಗಿ ಹೊರಬಂದಿತು. ಅದರಿಂದ ಬಂದ ನಾಲ್ಕು ಸಾವಿರ ರೂಪಾಯಿಗಳ ಆದಾಯವನ್ನು ಸಂಘ ಬಲಾತ್ಕರಿಸಿದರೂ ಸೀತಾರಾಮಯ್ಯನವರು ಸ್ವೀಕರಿಸದೆ ಪ್ರಕಟನೆಗೆ ನೆರವಾದ ಸಹೋದ್ಯೋಗಿಗಳಿಗೆ ಒಂದು ಅಲ್ಪ ಭಾಗವನ್ನು ಸಂಭಾವನೆಯಾಗಿ ಕೊಟ್ಟು, ಸಂಘಕ್ಕೆ 500 ರೂ. ಉಳಿಸಿ, ಉಳಿದ 3000 ರೂ.ಗಳನ್ನು ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಎಂ. ಎ. ತರಗತಿಯಲ್ಲಿ ಸಂಸ್ಕೃತ ಮತ್ತು ಶಾಸನ ವ್ಯಾಸಂಗವನ್ನು ಅಧ್ಯಯನಮಾಡಿ ಹೆಚ್ಚಿನ ಅಂಕ ಪಡೆಯುವವರಿಗೆ "ಶ್ರೀವಿಜಯ" ಸ್ವರ್ಣಪದಕವನ್ನು ನೀಡುವುದಕ್ಕಾಗಿ ದತ್ತಿನಿಧಿಯಾಗಿ ಇಡಮಾಡಿಸಿದರು.

ಸೀತಾರಾಮಯ್ಯನವರು ವಿಶ್ವವಿದ್ಯಾನಿಲಯದ ಬೆಂಗಳೂರು ಇಂಟರ್ ಮೀಡಿಯಟ್ ಕಾಲೇಜಿನಲ್ಲಿ ಇಪ್ಪತ್ತೊಂದು ವರ್ಷಗಳ ಕಾಲ ನಿಷ್ಕಳಂಕ ಸೇವೆ ಸಲ್ಲಿಸಿ ನಿವೃತ್ತರಾದಾಗ- ಹಿಂದೆ ಯಾವ ನಿವೃತ್ತ ಅಧ್ಯಾಪಕರಿಗೂ ಸಾಮಾನ್ಯವಾಗಿ ನೀಡದ ಬೀಳ್ಕೊಡುಗೆಯ ಸಮಾರಂಭವನ್ನು ಪ್ರಿನ್ಸಿಪಾಲರೂ ವಿದ್ಯಾರ್ಥಿಗಳೂ ಉಪಾಧ್ಯಾಯರೂ ಕೂಡಿ ಕರ್ನಾಟಕ ಸಂಘದ ಆಶ್ರಯದಲ್ಲಿ ಏರ್ಪಡಿಸಿ ಗೌರವ ಸೂಚಿಸಿದರು. ತಮ್ಮ ಉಪಾಧ್ಯಾಯ ವೃತ್ತಿಯ ಕಡೆ ದಿನಗಳಲ್ಲಿ ಕೆಲವೊಮ್ಮೆ "ಇನ್‌ಛಾರ್ಜ್" ಪ್ರಿನ್ಸಿಪಾಲರ ಕೆಲಸವನ್ನೂ ನಿರ್ವಹಿಸಿ ಪ್ರಿನ್ಸಿಪಾಲರ ಮತ್ತು ಸಹೋದ್ಯೋಗಿಗಳ ಮೆಚ್ಚುಗೆಯನ್ನು ಗಳಿಸಿದರು. ಬೀಳ್ಕೊಡುಗೆಯ ಸಮಾರಂಭ ಕಾಲೇಜಿನ ಪರಿಧಿಗೆ ಮಾತ್ರ ಸೀಮಿತವಾಗದೆ ಸಾರ್ವಜನಿಕ ಸ್ವರೂಪವನ್ನು ಪಡೆದಿದ್ದಿತು. ಡಾ|| ಮಾಸ್ತಿಯವರ ಅಧ್ಯಕ್ಷತೆಯಲ್ಲಿ ಜಿ. ಪಿ. ರಾಜರತ್ನಂ, ಬಿ. ಶಿವಮೂರ್ತಿ ಶಾಸ್ತ್ರಿ, ಜಿ. ವೆಂಕಟಸುಬ್ಬಯ್ಯ, ಕೆ. ಎಸ್. ಶ್ರೀಹರಿ ಮೊದಲಾದವರು ನಿವೃತ್ತ ಅಧ್ಯಾಪಕರನ್ನು ಕುರಿತು ಗುಣಗಾನಮಾಡಿ ಮಾತನಾಡಿದರು.

ರಾಜರತ್ನಂ ಅವರು "ಇವರು Retire ಆಗುವುದಿಲ್ಲ, Re-tyre ಆಗುತ್ತಾರೆ" ಎಂಬ ಮಾತು ನಿಜವಾಗಿದೆ. ಮುಂದೆ ವಿಶ್ರಾಂತಿ ಕಾಲದಲ್ಲಿ ಊಟ–ತಿಂಡಿ ಸಮೃದ್ಧವಾಗಿರಲಿ ಎಂದು ಒಂದು ಬೆಳ್ಳಿ ತಟ್ಟೆಯನ್ನು ಉಡುಗೊರೆಯಾಗಿ ನೀಡಿದರಂತೆ ! ಈಗಲೂ ಅವರು ಅದರಲ್ಲೇ ಊಟಮಾಡುತ್ತಿರುವರಂತೆ ! "ಅನ್ನದಾತೋ ಸುಖೀಭವ" ಎನ್ನುತ್ತಿರುವರಂತೆ !!

ಸೀತಾರಾಮಯ್ಯನವರ ಬದುಕು ಸಾಹಿತ್ಯರಂಗಕ್ಕೆ ಹೆಚ್ಚಿನ ಮತ್ತು ಅಪೂರ್ವ ಸೇವೆ ಸಲ್ಲಿಸಿದೆ. ಅವರು ಸಾಧಾರಣವಾಗಿ ಲಲಿತಕಲಾ ವಿದ್ಯೆಗಳಲ್ಲೆಲ್ಲಾ ಕೈಯಾಡಿಸಿದರೂ ಪ್ರಮುಖವಾಗಿ ಸಾಹಿತ್ಯವನ್ನೇ ಜೀವನದ ಜೀವಾಳವಾಗಿ ರೂಢಿಸಿಕೊಂಡರು. ಇದಕ್ಕೆ ಕಾರಣ ಅವರಿಗೆ ಲಭಿಸಿದ ಉದ್ಯೋಗ. ಅವರು ಬಹು ಹಿಂದಿನಿಂದಲೇ ಉಬ್ಬಸರೋಗಕ್ಕೆ ಈಡಾದುದರಿಂದ ದೈಹಿಕ ಕೆಲಸಗಳಿಗೆ ಎಂದರೆ "ಎಕ್ಸಿಕ್ಯುಟಿವ್" ಕೆಲಸಗಳಿಗೆ ಹೋಗುತ್ತಿರಲಿಲ್ಲ. ಗುಮಾಸ್ತೆಯಾಗಿ ಉದ್ಯೋಗಕ್ಕೆ ಸೇರಿದರೂ ಅದು ಸಾಹಿತ್ಯದ ಗುಮಾಸ್ತಗಿರಿಗೆ ಮೀಸಲಾಗಿತ್ತೆ ಹೊರತು ಜೀವನದ ಉದ್ಯೋಗವಾಗಲಿಲ್ಲ. ಕಾಲೇಜಿನ ಉಪಾಧ್ಯಾಯ ವೃತ್ತಿ ಅವರಿಗೆ ಲಭಿಸಿತು ; ಹಿಡಿಸಿತು. ಅಲ್ಲಿ ಸುಸಜ್ಜಿತ ಗ್ರಂಥಭಂಡಾರ ಇದ್ದು, ವ್ಯಾಸಂಗಕ್ಕೆ ಸಂಶೋಧನೆಗೆ ಜ್ಞಾನಾರ್ಜನೆಗೆ ಹೆಚ್ಚಿನ ವಿರಾಮ ಸೌಕರ್ಯ ದೊರೆತವು. ಅದನ್ನು ಬಳಸಿಕೊಂಡರು. ಸದುಪಯೋಗ ಪಡಿಸಿಕೊಂಡರು ; ಕನ್ನಡ ಸಾಹಿತ್ಯಕ್ಕೆ ತಮ್ಮ ಅಮೂಲ್ಯಕಾಣಿಕೆ ನೀಡಿದರು.

ಚಿಕ್ಕಂದಿನಿಂದಲೇ ಚಿತ್ರಕಲೆಗೆ ಸಂಗೀತಕಲೆಗೆ ಹೇಗೆ ಮನಸ್ಸನ್ನು ನೀಡಿದರೋ ಹಾಗೆಯೇ ಸಾಹಿತ್ಯದ ಕಡೆಗೂ ಗಮನ ಹರಿಸಿದ್ದರು. ಈ ಗಮನವನ್ನು ಹಿಡಿದಿಟ್ಟ ಗುರುಗಳು ಆ ಕಾಲಕ್ಕೆ ಪ್ರಸಿದ್ಧರೂ ಪ್ರತಿಭಾನ್ವಿತರೂ ವಿದ್ವಾಂಸರೂ ಆಗಿದ್ದ ಟಿ. ಎಸ್. ವೆಂಕಣ್ಣಯ್ಯ, ಎ. ಆರ್. ಕೃಷ್ಣಶಾಸ್ತ್ರಿ, ತೀ. ನಂ. ಶ್ರೀ, ಮೊದಲಾದವರು ಪಾಶ್ಚಾತ್ಯಕ್ರಮದಲ್ಲಿ ವಿದ್ಯೆ ಕಲಿತಿದ್ದರೂ ಭಾರತೀಯ ವಿದ್ಯಾಸಂಸ್ಕೃತಿಗಳನ್ನು ಆಚರಣೆಗೆ ತಂದ ದೇಶಾಭಿಮಾನಿಗಳು. ಇವರೆಲ್ಲರ ಪ್ರಭಾವ ಎಂ. ವಿ. ಸೀ. ಅವರ ಮೇಲೆ ಅಗೋಚರವಾಗಿ ಹರಿದಿರಬಹುದು. ಕೆ. ವಿ. ಪುಟ್ಟಪ್ಪನವರು ಇವರ ಹಿರಿಯಣ್ಣ ಎಂ. ವಿ. ವೆಂಕಟಕೃಷ್ಣಯ್ಯ ಅವರ ಸಹಪಾಠಿ ಪುಟ್ಟಪ್ಪ ಕವನ ಬರೆಯುತ್ತಾರೆ ಎಂದು ತಿಳಿದಾಗ ಎಂ. ವಿ. ಸೀ. ಅವರ ಮನಸ್ಸಿನಲ್ಲಿಯೂ 'ನಾನೇಕೆ ಬರೆಯಬಾರದು ?' ಎನ್ನಿಸಿರಬಹುದು. ಆಗ ನಡೆಸಿದ ಪ್ರಯತ್ನಗಳೆಂದರೆ. ಪಠ್ಯ ಪುಸ್ತಕಗಳ ಇಂಗ್ಲಿಷ್ ಪದ್ಯಗಳ ಅನುವಾದ. ಭಾಮಿನಿ ಷಟ್ಪದಿ ಛಂದಸ್ಸಿನ ಪ್ರಯೋಗ. ಎಸ್ಸೆಸ್ಸೆಲ್ಸಿ ತರಗತಿಯಲ್ಲಿದ್ದಾಗ ತೀ. ನಂ. ಶ್ರೀ ಅವರಿಂದ ಲಭಿಸಿದ ಹುಟ್ಟುಹಬ್ಬದ ಕಾಣಿಕೆ, ನವೋದಯ ಆಚಾರ್ಯ ಪ್ರಮುಖರಾದ 'ಶ್ರೀ' ಅವರ 'ಇಂಗ್ಲಿಷ್ ಗೀತಗಳು'. ಇದೇ ಉಡುಗರೆ ಎಂ. ವಿ. ಸೀ. ಅವರ

‘ಕಾವ್ಯಗುರು’. ಆಗ ಅವರ ವಯಸ್ಸು ಹದಿನಾರು. ಅಲ್ಲಿಂದ ಮುಂದೆ ಎರಡು ಮೂರು ವರ್ಷಗಳ ಕಾವ್ಯಾಭ್ಯಾಸದ ರಚನೆಗಳು ಎಷ್ಟೋ ನಷ್ಟವಾಗಿವೆ. ಅಳಿದುಳಿವರಲ್ಲಿ ಎರಡು ‘ತಳಿರು’ ಸಂಕಲನದಲ್ಲೂ ಕೆಲವು ‘ಹಕ್ಕಿಹಾಡು’ ಸಂಕಲನದಲ್ಲೂ ಬೆಳಕು ಕಂಡವು*.

ಸಾಹಿತ್ಯ ಸೃಷ್ಟಿಗೂ ಬರಹಗಾರನ ಬದುಕಿಗೂ ಇರುವ ಸಂಬಂಧ ಎಂಥದು ? ಬದುಕು ಅವನ ಕೃತಿಯಲ್ಲಿ ಪ್ರತಿಬಿಂಬಿಸುತ್ತದೆಯೋ ? ಅಥವಾ ಕವಿ ಬದುಕಿನಿಂದ ದೂರ ನಿಂತು ತನ್ನ ಸೃಷ್ಟಿಯನ್ನು ನಿರ್ಮಿಸುತ್ತಾನೆಯೋ ? ಕವಿಗೂ ಕಾವ್ಯಕ್ಕೂ ಇರುವ ಅವಿನಾಶಿ ಸಂಬಂಧ ಯಾವ ಮಟ್ಟದ್ದು ?—ಮೊದಲಾದ ಪ್ರಶ್ನೆಗಳು ಸಾಹಿತ್ಯ ಪ್ರಪಂಚದಲ್ಲಿ ವಿವಾದಾತ್ಮಕ ಚರ್ಚೆಗಳಿಗೆ ದಾರಿ ಮಾಡಿಕೊಟ್ಟಿವೆ. ಸೀತಾರಾಮಯ್ಯನವರ ದೃಷ್ಟಿಯಲ್ಲಿ “ಪರಿಸರದ ಪ್ರಭಾವದಿಂದ ವ್ಯತ್ಯಾಸ ಹೊಂದುತ್ತಾ ಬೆಳೆಯುತ್ತಾ ಹೋಗುವ ಅವನ ವ್ಯಕ್ತಿತ್ವ, ಅವನ ನಿತ್ಯದ ಬದುಕು-ಇವು ಅವನ ಸಾಹಿತ್ಯ ಜೀವನದ ಮೇಲೆ ಮುದ್ರೆಯೊತ್ತುತ್ತವೆ. ನಿತ್ಯದ ಬದುಕೇ ಬರಹದ ಬದುಕು.” ಈ ದೃಷ್ಟಿಯಿಂದ ಅವರ ಸಾಹಿತ್ಯ ರಚನೆಯಲ್ಲಿ ಅವರ ಬದುಕಿನ ಪ್ರಭಾವವನ್ನು ಕಾಣಬಹುದು. ಅಥವಾ ಅವರ ಬದುಕಿನ ಹಿನ್ನೆಲೆಯ ಭಿತ್ತಿಯಲ್ಲಿ ಕಾವ್ಯ–ಸತ್ಯ, ಲೋಕಾನುಭವ, ಹೇಗೆ ಅರಳಿವೆ ಎಂಬುದನ್ನು ಗುರುತಿಸಬಹುದು.

ಎಂ. ಎ. ತರಗತಿಯಲ್ಲಿ ಓದುತ್ತಿದ್ದಾಗ, ವಿಶ್ವವಿದ್ಯಾಲಯದ ರಜತೋತ್ಸವ ಸ್ವರ್ಣಪದಕ ಕವನ ಸ್ಪರ್ಧೆಗೆ ಪ್ರಯತ್ನಿಸಿದರು. ಬೀದಿಗಳಲ್ಲಿ ಚಿತ್ರಗಳನ್ನು ಬರೆಯುತ್ತಿದ್ದ ‘ಬೇವಾರ್ಸಿ’ ಚಿತ್ರಗಾರನ ಬದುಕನ್ನೂ–ಕಲಿಕೆಯನ್ನೂ ಕಲ್ಪಿಸಿಕೊಂಡು, 150–200 ಪಂಕ್ತಿಗಳ ಪದ್ಯವನ್ನು ಸರಳರಗಳೆಯಲ್ಲಿ ಮೊದಲಿಗೆ ಬರೆದರು. ಅದನ್ನು ಗುರುಗಳಾದ ತೀ. ನಂ. ಶ್ರೀ ಅವರಿಗೆ ತೋರಿಸಿದರು. ಆದರೆ ಅವರ ವಿಮರ್ಶೆ ಉತ್ತೇಜಕವಾಗಿರಲಿಲ್ಲ. ಅಲ್ಲದೆ ಪದ್ಯದ ಪ್ರಮಾಣವೂ ನಿಯಮಕ್ಕೆ ಕಡಿಮೆಯಿತ್ತು. ಪುನಃ ಪರಿಶೀಲಿಸಿ ಅದೇ ಕವನವನ್ನು ಅರ್ಧಕ್ಕೆ ಸೀಳಿ ಅಂತ್ಯಪ್ರಾಸವನ್ನು ಜೋಡಿಸಿ ನೀಳ್ಗವನವನ್ನು ನಿರ್ಮಿಸಿದರು. ಅದನ್ನು ನೋಡಿದ ಅದೇ ಗುರುಗಳು ಪದ್ಯವನ್ನು ಮೆಚ್ಚಿಕೊಂಡರು. ಅದು ಸ್ಪರ್ಧೆಯಲ್ಲಿ ಬಹುಮಾನವನ್ನು ಗಳಿಸಿತು. ಎಂ. ವಿ. ಸೀ. ಕವಿಗಳಾದರು. ಈ ತರುಣಕವಿಯ ಪದ್ಯರಚನಾ ಸೃಷ್ಟಿ ಉತ್ಸಾಹದಿಂದ ಮುಂದುವರಿಯಿತು. ಒಂದೆರಡು ಕವನಗಳು ಕಾಲೇಜಿನ ಕರ್ನಾಟಕ ಸಂಘ ಪ್ರಕಟಿಸಿದ ‘ತಳಿರು’ ಕವನ ಸಂಕಲನದಲ್ಲಿ 1930ರಲ್ಲಿ

---

*ಅಭ್ಯಾಸಕಾಲದಲ್ಲಿ ರಚಿಸಿದ ಕವನಗಳಲ್ಲಿ ಪ್ರಕಟವಾಗದೆ ಉಳಿದಿದ್ದನ್ನು ಈಚೆಗೆ ‘ಮೊದಲ ಹೆಜ್ಜೆ’ ಎಂಬ ಸಂಕಲನದಲ್ಲಿ ದಾಖಲೆಗಾಗಿ ಹೊರಪಡಿಸಿದ್ದಾರೆ. ಎಂ. ವಿ. ಸೀ

ಪ್ರಕಟವಾದವು. ಆದರೆ ಬರಹಗಾರರಾಗಿ ಇವರು ಜನ್ಮ ತಳೆದುದು ಇದಕ್ಕೆ ನಾಲ್ಕು ವರ್ಷಗಳ ಮುಂಚೆಯೇ 1926ರಲ್ಲಿ ; ಬಿ. ಎಂ. ಶ್ರೀ. ಅವರ 'ಇಂಗ್ಲಿಷ್ ಗೀತೆಗಳ' ಪರಿಚಯ ಅಭ್ಯಾಸಗಳಿಂದ. ಅದೇ ಗುರುವಿನ ಸ್ಥಾನದಲ್ಲಿ ನಿಂತಿತು. ಇವರು 'ನವೋದಯ ಕಾವ್ಯ' ಪದ್ಧತಿಯ ಹೊಸ ಪೀಳಿಗೆಯ ತರುಣಕವಿಗಳಾಗಿ ತಮ್ಮ ಸಾಹಿತ್ಯ ಬದುಕನ್ನು ಆರಂಭಿಸಿದರು.

ಪದ್ಯರಚನೆಯನ್ನು ಅಭ್ಯಾಸಮಾಡುವಾಗ 'ಹಲಗೆ-ಬಳಪ' ಹಿಡಿದು ತಿದ್ದಿ ಬರೆದು, ಸಾರ್ಥಕ ಸ್ಥಿತಿಗೆ ಬರುವುದು ಒಂದು. ಸ್ಫೂರ್ತಿಯಿಂದ ಬಂದುದನ್ನು ಬಂದಹಾಗೆ ಚೆಲ್ಲಿಬಿಡುವುದು ಒಂದು. ಅದು ಬಹುಶಃ ಹುಟ್ಟು ಕವಿಗಳ ಪ್ರತಿಭೆಯ ಸಾಹಸವೂ ಆಗಬಹುದು. ಆದರೆ ಪ್ರತಿಯೊಬ್ಬ ಕವಿಯೂ ಹೊಸದರಲ್ಲಿ ಕಲಿಯುವಾಗ ಪುನಃ-ಪುನಃ ಪ್ರಯತ್ನಪಡಲೇ ಬೇಕಾಗುತ್ತದೆ. ಪ್ರಯತ್ನಿಸಿದ ಬರವಣಿಗೆಯನ್ನೇ ಯಾರಿಂದಲಾದರೂ ತಿದ್ದಿಸಿ ಅಥವಾ ಯಾರಿಗಾದರೂ ತೋರಿಸಿ ಅಭಿಪ್ರಾಯ ಪಡೆದು ಮುಂದುವರಿಯುವುದು ಸಹಜ. ಸೀತಾರಾಮಯ್ಯನವರೂ ಈ ಅಭ್ಯಾಸಕ್ಕೆ ಹೊರತಾಗಿರಲಿಲ್ಲ. ತಮ್ಮ ಪದ್ಯಗಳನ್ನು ಕಾಲೇಜಿನ ದಿನಗಳಲ್ಲಿ ತೀ. ನಂ. ಶ್ರೀ. ವೆಂಕಣ್ಣಯ್ಯ, ಮತ್ತು ಒಬ್ಬಿಬ್ಬರು ಆಪ್ತಮಿತ್ರರಿಗೆ ತೋರಿಸಿ, ಅವರ 'ಪ್ರಮಾಣ ಪತ್ರ' ಪಡೆದು ತಮ್ಮ ರಚನೆಯನ್ನು ರೂಢಿಸಿಕೊಳ್ಳುತ್ತಿದ್ದುದುಂಟು.

ಎಂ. ವಿ. ಸೀ. ಕಾದಂಬರಿ ಕಥೆಗಳನ್ನು ಓದುವ ಆಸಕ್ತಿಯನ್ನು ಚಿಕ್ಕಂದಿನಿಂದಲೇ ಬೆಳಸಿಕೊಂಡಿದ್ದರು. ಇವರು ಮಾಧ್ಯಮಿಕ ಶಾಲೆಯಲ್ಲಿದ್ದಾಗ, ಇವರ ಮನೆಯಲ್ಲಿಯೇ ಇದ್ದುಕೊಂಡು ಟೀಚರ್ಸ್ ಟ್ರೈನಿಂಗ್ ಪರೀಕ್ಷೆಗೆ ಓದುತ್ತಿದ್ದ ಅವರ ದೊಡ್ಡಮ್ಮನ ಮಗ ಗಳಗನಾಥರ, ವೆಂಕಟಾಚಾರ್ಯರ ಕಾದಂಬರಿಗಳನ್ನು ಮನೆಗೆ ತಂದು ಓದುತ್ತಿದ್ದರು. ಅವರ ಹವ್ಯಾಸ ಇವರಿಗೂ ಅಂಟಿಕೊಂಡು ಆ ಕಾದಂಬರಿಗಳಲ್ಲಿ ಆಸಕ್ತಿ ಕೆರಳಿಸಿತು ಈ ಕಾದಂಬರಿಗಳ ಓದು ಇವರಿಗೆ ಪ್ರೇರಕವಾಗಿ ತಾವೂ ಏಕೆ ಕಥೆ ಕಾದಂಬರಿ ಬರೆಯಬಾರದು ಎಂದೆನಿಸಿ ಸಹಪಾಠಿ ವೆಂಕಟರಾಯನ ಜೊತೆ ಸೇರಿ, ಜಂಟಿಯಾಗಿ ಒಂದು ಕಾದಂಬರಿ ಆರಂಭಿಸಿಯೇ ಬಿಟ್ಟರಂತೆ. ವಸ್ತು, ರಚನೆ, ಘಟನೆ, ಈ ಯಾವುದರ ಕಲ್ಪನೆಯೂ ಇಲ್ಲದೆ ಓದಿದ ಕಾದಂಬರಿಯ ಕೆಲವು ಮಾತುಗಳನ್ನು—'ಗಾಢಾಂಧಕಾರ' 'ಗೊಂಡಾರಣ್ಯ' 'ಭಯಾನಕಾಕಾರ' 'ಅರಣ್ಯರೋದನ'. ಹೀಗೆ ಮನಸ್ಸಿನಲ್ಲಿ ನಿಂತ ಪದಪುಂಜಗಳನ್ನು ಜೋಡಿಸಿ ಹೆಣೆದದ್ದೂ ಹೆಚ್ಚಾಯ್ತು! ಆದರೆ ಅದು ಕಥೆಯೂ ಆಗಲಿಲ್ಲ : ಕಾದಂಬರಿಯೂ ಆಗಲಿಲ್ಲ. ಅರ್ಧಕ್ಕೇ ನಿಂತುಹೋಯಿತು. ಆದರೆ ಹುಡುಗ ಬೆಳೆದ ನಂತರ ಹೀಗೆ ಸ್ವಯಂಯಾಗಿ, ಉಳಿದಿದ್ದ ಭಾವ, ಅನುಭವ ತುಂಬಿ ಬಂದಾಗ, ವಿವಿಧ ರೂಪದಲ್ಲಿ ಆಕಾರವನ್ನು ತಳೆಯಿತು. "ಮೋಹಿನಿಯ ಆಹ್ವಾನ !!" ಎಂಬ ಅವರ ಮೊದಲ ಕಥೆ 1929ರಲ್ಲಿ

ಕಾಲೇಜಿನ ಯೂನಿಯನ್ ಪತ್ರಿಕೆಯಲ್ಲಿ ಪ್ರಕಟವಾಯಿತು. ಹಾತಾರ್ನ್‌ನ ಮೂರು ಕಥೆಗಳ ಅನುವಾದ "ಶಿಲಾಮುಖಿ" ಎಂಬ ಹೆಸರಿನ ಸಂಗ್ರಹ 1936ರಲ್ಲಿ ಪ್ರಕಟವಾಗಿ ಪ್ರೌಢ-ಶಿಕ್ಷಣ ಶಾಲಾ ತರಗತಿಗಳಿಗೆ ಪಠ್ಯವೂ ಆಯಿತು. ಅನಂತರ 1940ರಲ್ಲಿ ಸೀತಾರಾಮಯ್ಯನವರ ಸ್ವತಂತ್ರ ಕಥೆಗಳು "ಮಾರ್ಗದರ್ಶಿ" ಎಂಬ ಹೆಸರಿನಿಂದ ಹೊರಬಂದಿತು. ಇದಕ್ಕೆ ಬೇಂದ್ರೆ ಮುನ್ನುಡಿ ಬರೆದು ಹರಸಿದರು. ಅದರ ಮೇಲಿನ ಬಹುತೇಕ ವಿಮರ್ಶೆಗಳು ಉತ್ತೇಜನ ಕೊಟ್ಟವು.

ಬಿ. ಎ. ತರಗತಿಯಲ್ಲಿ ಓದುತ್ತಿದ್ದಾಗ (1930–31) "ಪಕ್ಷಿಗಳು". "ಮುಗಿಲುಗಳು" ಎಂಬ ಎರಡು ಲಲಿತ ಪ್ರಬಂಧಗಳು ಯೂನಿಯನ್ ಪತ್ರಿಕೆಯಲ್ಲಿ ಪ್ರಕಟವಾದವು. "ಮುಗಿಲುಗಳು" ಅವರನ್ನು ಪ್ರಬಂಧಕಾರರನ್ನಾಗಿ ಮಾಡಿದ್ದಲ್ಲದೆ ಅನೇಕ ಸಂಕಲನಗಳಲ್ಲಿ ಇಂದಿಗೂ ಸೇರ್ಪಡೆಯಾಗುತ್ತಾ ಅವರಿಗೆ ಕೀರ್ತಿಯನ್ನೂ ಯಥೇಚ್ಛ ಲಾಭವನ್ನೂ ತಂದು ಕೊಡುತ್ತಿದೆ.

ಲೇಖಕ ತನ್ನ ಅನುಭವದ ಅಭಿವ್ಯಕ್ತಿಗೆ ಯಾವ ಮಾಧ್ಯಮವನ್ನೇ ಎಂದರೆ ಕವಿತೆ ಕಥೆ ಕಾದಂಬರಿ ನಾಟಕ ಪ್ರಬಂಧ ಬಳಸಿಕೊಳ್ಳಲಿ, ಅಲ್ಲೆಲ್ಲಾ ಅವನ ವ್ಯಕ್ತಿತ್ವ ಮತ್ತು ಬದುಕಿನ ಅನುಭವ ಒಡಮೂಡುವುದು ಅನಿವಾರ್ಯ. ಇಂಥಲ್ಲಿ ಕವಿಯ ವಯಸ್ಸಿನ ಪ್ರಮಾಣಕ್ಕಿಂತ ಕೃತಿಯ ಗುಣ ಮುಖ್ಯವಾಗಿರುತ್ತದೆ. ಅವರು ವಿದ್ಯಾರ್ಥಿಯಾಗಿದ್ದಾಗ ಬರೆದ 'ಹೂವಿನ ಆಸೆ' ನಾಟಕ ಬಾಲ ವಿಧವೆಯ ಪುನರ್ವಿವಾಹದ ವಿಷಯವನ್ನು ಕುರಿತ ವಸ್ತುವುಳ್ಳದ್ದು. ಅದರ ಖ್ಯಾತಿ, ಅದನ್ನು ಎಷ್ಟು ಜನ ಎಷ್ಟು ಸಲ ಎಷ್ಟು ಕಡೆ ಆಡಿಸರು ಎಂಬುದರ ಮೇಲೆ ನಿಂತಿದೆ. ಚಿಕ್ಕ ವಯಸ್ಸಿನಲ್ಲೇ ಬರೆದದ್ದಾದರೂ ಅದರ ವಸ್ತುವಿನ ಅರ್ಥಪೂರ್ಣ ರಸಪೂರ್ಣ ಪರಿಣಾಮಕಾರಿ ನಿರ್ವಹಣೆ ಕವಿಯ ಕಾವ್ಯ ಪ್ರತಿಭೆಯ ಸಾಕ್ಷಿಯಾಗಿದೆ. ಸಮಾಜದಲ್ಲಿ ಕಂಡು ಬಂದ ದಾರುಣ ಪ್ರಸಂಗಗಳೇ ಅವರ ನಾಟಕಗಳ ವಸ್ತುಗಳಾಗಿ, ಸೀತಾರಾಮಯ್ಯನವರ ಲೇಖನಿಯಿಂದ ಮೂಡಿಬಂದಿವೆ. "ತರೀಕೆರೆಯ ಚಿತ್ರಗಳು" "ತೊಟ್ಟಿಲು ತೂಗದ ಕೈ" ಎಂಬುವು ಅವರ ಇನ್ನೆರಡು ನಾಟಕಗಳು. "ತೊಟ್ಟಿಲು ತೂಗದ ಕೈ" ನಾಟಕದಲ್ಲಿ ಹೊಸ ತಂತ್ರ ಬಳಸಿ ಒಂದು ನೂತನ ಪ್ರಯೋಗ ನಡೆಸಿದರು. 'Unity of Action, time, and place" ಸೂತ್ರವನ್ನು "ಫ್ಲಾಶ್ ಬ್ಯಾಕ್" ತಂತ್ರದಿಂದ ಸಾಧಿಸುವ ಪ್ರಯತ್ನವದು. ಇದಕ್ಕೆ ಸರ್ಕಾರದವರು ಒಂದು ಸಾವಿರ ರೂಪಾಯಿ ಬಹುಮಾನ ನೀಡಿದ್ದಾರೆ. ಆದರೆ ಅದನ್ನು ಆಡಿದವರು ಕಡಿಮೆ. ಬೊಂಬಾಯಿ ಮೊಗವೀರ ಸಂಘದವರೊಬ್ಬರು ಪ್ರಯೋಗಿಸಿದ್ದರು. ನಾಟಕ ಪ್ರಯೋಗದ ಬಗ್ಗೆ ಒಳ್ಳೆಯ ವಿಮರ್ಶೆ ಬಂದರೂ ಅದು ಜನಪ್ರಿಯವಾಗಲಿಲ್ಲ. "ಕವಿಯ ಹೆಂಡತಿ" "ಸ್ವಯಂವರ"–ಇವು ಆಶುನಾಟಕಗಳ ಲಿಖಿತ ರೂಪ. ನಾಟಕ ಬರೆದು ಅದು ಪ್ರಯೋಗ

ವಾಗದಿದ್ದ ಮೇಲೆ ಅವನ್ನು ಬರೆಯುವ ಉತ್ಸಾಹ ಸಹಜವಾಗಿ ಕಡಿಮೆ ಆಗುತ್ತದೆ. ಎಂ. ವಿ. ಸೀ. ನಾಟಕಕಾರರಾದರೂ ಮೇಲ್ಕಂಡ ಪರಿಸ್ಥಿತಿಯಿಂದ ನಿರುತ್ಸಾಹಿತರಾಗಿ ನಾಟಕ ಬರೆಯುವುದನ್ನೇ ನಿಲ್ಲಿಸಿಬಿಟ್ಟರೆಂದು ಕಾಣುತ್ತದೆ.

ಮಾಸ್ತಿ, ಬೇಂದ್ರೆ, ಕುವೆಂಪು, ಗೋಕಾಕ್, ಮುಗಳಿ, ಪುತಿನ ಮೊದಲಾದ ಪ್ರಸಿದ್ಧ ಬರಹಗಾರರೆಲ್ಲರೂ ಸಾಹಿತ್ಯದ ಎಲ್ಲ ಪ್ರಕಾರಗಳಲ್ಲಿ ಕೈ ಆಡಿಸಿರುವಂತೆ ಎಂ. ವಿ. ಸೀ ಅವರೂ ಇತರ ಅನೇಕ ಪ್ರಕಾರಗಳಲ್ಲಿ ಕೈ ಆಡಿಸಿದ್ದಾರೆ. ಬೇಂದ್ರೆ ಕುವೆಂಪು ಪುತಿನ "ಕವಿ"ಗಳೆಂದೇ ಖ್ಯಾತಿ ಪಡೆದರು. ಆದರೆ ಸೀತಾರಾಮಯ್ಯ ಈಚಿನ ದಿನಗಳಲ್ಲಂತೂ 'ಸಂಶೋಧಕ'ರೆಂದೇ ಪ್ರಸಿದ್ಧಿಗಳಿಸಿದರು. ಇದಕ್ಕೆ ಒಂದು ಕಾರಣ ಅವರು ಜನಾಭಿಪ್ರಾಯಗಳಿಸಿದ್ದ ಅವರ ಪಾಠ ಪ್ರವಚನಗಳಿಂದ, ವಿಮರ್ಶಾತ್ಮಕ ಬರವಣಿಗೆಗಳಿಂದ, ಸಂಶೋಧನಾತ್ಮಕ ಗ್ರಂಥಗಳಿಂದ ಇರಬಹುದು. ಅವರು "ಕಾವ್ಯ" ಗಳನ್ನು ಬರೆದದ್ದು "ರಾಘವ" ಎಂಬ ಕಾವ್ಯನಾಮದಿಂದ. ಎಷ್ಟೋ ಜನಕ್ಕೆ "ಎಂ. ವಿ. ಸೀ." "ರಾಘವ" ಒಬ್ಬರೇ ವ್ಯಕ್ತಿ ಎಂಬ ವಿಷಯವೂ ಬಹುಕಾಲದ ವರೆಗೆ ತಿಳಿದಿರಲಿಲ್ಲವೇನೋ!? ಅವರ ಕವಿತೆಗಳಲ್ಲಿ ಮನಮುಟ್ಟುವ ವಸ್ತು ನಿರೂಪಣೆ ಇದೆ, ಹಾಡುವ ಗೇಯಾಂಶ ಇದೆ, ಶ್ರವ್ಯ ಗುಣವೂ ಇದೆ. ಅವರ ಅನೇಕ ಕವಿತೆಗಳು ಆಕಾಶವಾಣಿಯಲ್ಲಿ ಇಂದಿಗೂ ಕೇಳಬರುತ್ತಲೇ ಇವೆ. ಆದರೂ ಅವರು ಕವಿಯೆಂದು ಖ್ಯಾತನಾಮರಾಗಲಿಲ್ಲ. 'ಹಕ್ಕಿ ಹಾಡು' 'ಆ ಚಿತ್ರಗಳು' 'ಕಾವ್ಯಾಲಾಪ' 'ಹೂವಾಡಗಿತ್ತಿ' ಮತ್ತು 'ನಾಗ' ಇತ್ಯಾದಿ ಸಂಕಲನಗಳು ಪ್ರಕಟವಾಗಿವೆ. ಇವುಗಳಲ್ಲಿ ಪ್ರಕೃತಿ ಸೌಂದರ್ಯವೇ ಕವನಗಳ ವಸ್ತುವಾಗಿದೆ, ಜೀವನದ ಅನುಭವಗಳೂ ಕವಿಯ ಮನಸ್ಸಿನ ಅನುಕಂಪ ಆಕ್ರೋಶ ಪ್ರತಿಭಟನೆಗಳೂ ದೇಶಾಭಿಮಾನ ಸಾಹಿತ್ಯ ಸಂಸ್ಕೃತಿಯ ಬಗೆಗಿನ ಶುದ್ಧ ನಿಷ್ಕಪಟ ಭಾವನೆಗಳೂ ಮೂರ್ತಿಗೊಂಡಿವೆ. ಶ್ರೀಮಂತರ ಬಾಳು, ಬಡವನ ಬದುಕು, ಅವರ ಮನಸ್ಸನ್ನು ಕೆರಳಿಸದೆ ಇರಲಿಲ್ಲ. ಅವರ 'ಮುಗಿಯದ ಮಾಯೆ' ಕಾವ್ಯ ಜೀವನದ ಪ್ರಗತಿಯನ್ನು ಸೂಚಿಸಿದರೆ ಇತ್ತೀಚಿನ 'ಬೀಸಿಬಂದ ಗಾಳಿ' ಹೊಸತಿರುವನ್ನು ಪಡೆದಿದೆ.

ಕವಿ ರಾಘವರು ಹೆಸರುಗಳಿಸಿದ್ದು ಸಂಶೋಧಕ ವಿದ್ವಾಂಸರಾಗಿ. ಹಲವಾರು ಕವನ ಸಂಗ್ರಹಗಳು ನಾಟಕಗಳು ಕಥಾ ಸಂಕಲನಗಳು ಲಲಿತಪ್ರಬಂಧಗಳು ಇತ್ಯಾದಿ ಪ್ರಕಾರಗಳಲ್ಲಿ ವಿಸ್ತೃತವಾಗಿ, ಸೊಗಸಾದ ಕೃತಿಗಳನ್ನು ರಚಿಸಿಯೂ ಸಾಹಿತ್ಯ ಲೋಕದಲ್ಲಿ ಅವರಿಗೆ ಹೆಚ್ಚು ಪರಿಚಯದ ಗಟ್ಟಿಯಾದ ಹೆಸರನ್ನು ತಂದು ಕೊಟ್ಟದ್ದು ಅವರ ವಿಮರ್ಶನ ರಚನೆಗಳು ಮತ್ತು ಗ್ರಂಥ ಸಂಪಾದನೆ. ಅವರು ಕಾಲೇಜಿನಲ್ಲಿ ಓದುತ್ತಿದ್ದಾಗ, ಪ್ರಾಚೀನ ಕನ್ನಡ ಗ್ರಂಥಗಳ ಶುದ್ಧ ಪಾಠಗಳ ಅಭಾವ ಎಷ್ಟರ ಮಟ್ಟಿಗೆ ಇರುತ್ತದೆ ಎಂಬುದನ್ನು ಅವರ ಗುರುಗಳು ವೆಂಕಣ್ಣಯ್ಯ ಮತ್ತು ತೀ.ನಂ.ಶ್ರೀ

ಅವರಿಗೆ ತಿಳಿಸಿದ್ದರು. ವೆಂಕಣ್ಣಯ್ಯ ಪಾಠಹೇಳುವಾಗ ಅಶುದ್ಧ ಪಾಠವನ್ನು ಗುರುತಿಸುತ್ತಿದ್ದರು. ತೀ.ನಂ. ಶ್ರೀಯವರೂ ಹಾಗೆಯೇ. ಇದೇ ಪರಿಪಾಠವನ್ನು ಎಂ ವಿ.ಸೀ. ತಾವೂ ಅನುಸರಿಸಿದ್ದರು. "ಕವಿರಾಜ ಮಾರ್ಗ" ಎಂಬ ಕನ್ನಡದ ಮೊದಲ ಲಕ್ಷಣ ಗ್ರಂಥವನ್ನು ಬಿ. ಎ. ಕನ್ನಡ ಐಚ್ಛಿಕ ವಿಷಯದವರಿಗೆ ಪಾಠ ಹೇಳುವಾಗ ಅದರ ಪುನಃ ಪರಿಷ್ಕರಣದ ಅಗತ್ಯವನ್ನು ಕಂಡುಕೊಂಡರು. ಕನ್ನಡದ ಹಳೆಯ ಕಾವ್ಯಗ್ರಂಥಗಳೆಲ್ಲವೂ ಅಚ್ಚುಕಟ್ಟಾಗಿ ಸಂಪಾದಿತವಾಗಿ, ವಿದ್ಯಾರ್ಥಿಗಳಿಗೆ ಮೂಲ ಪಾಠ ಕನ್ನಡಿಗರಿಗೆ ದೊರೆತರೆ ಎಷ್ಟು ಉಪಯೋಗ ಎನ್ನಿಸಿತು. ಆ ಕೃತಿಕಾರರ ಪ್ರತಿಭೆ, ವಿದ್ವತ್ತು, ಕಾವ್ಯಶಕ್ತಿ ಎಂಥದು? ಆಗಿನ ಕನ್ನಡ ಭಾಷೆಯ ವ್ಯಾಪ್ತಿ, ಶುದ್ಧತೆ ಹೇಗಿತ್ತು? ಶಬ್ದಗಳ ಅರ್ಥ ಎಷ್ಟು ಖಚಿತವಾಗಿತ್ತು? ಎಂಬುದನ್ನು ತಿಳಿಯುವುದೇ ಅವರ ಆಶಯವಾಗಿತ್ತು.

ಸೀತಾರಾಮಯ್ಯನವರು ಪಾಂಡಿತ್ಯದ ಬಲವನ್ನು ಬೆಳಸಿಕೊಂಡದ್ದು ಅಥವಾ ರೂಪಿಸಿಕೊಂಡದ್ದು ಪರಿಷತ್ತಿನಲ್ಲಿ ಕೆಲಸಕ್ಕೆ ಸೇರಿದಾಗಿನಿಂದ ಎನ್ನಬಹುದು. ಪರಿಷತ್ ಪತ್ರಿಕೆಯ ಸಂಪಾದನೆಯ ಕಾರ್ಯದಲ್ಲಿ ಸಹಕರಿಸಲು ತೊಡಗಿದಾಗ ಮತ್ತು ನಿಘಂಟು ಕಛೇರಿಯಲ್ಲಿ ಶಬ್ದಸಂಪತ್ತನ್ನು ರೂಢಿಸಿಕೊಂಡಾಗ ಅವರ ಅಭಿರುಚಿ ಅಗೋಚರವಾಗಿ ಪಾಂಡಿತ್ಯದ ಹಾದಿಯಲ್ಲಿ ಹರಿಯಲಾರಂಭಿಸಿತು. ಆದರೆ ಜೀವನ ನಿರ್ವಹಣೆಗೆ ಅಗತ್ಯವಾದ ಹಣದ ಸಂಪಾದನೆಯ ಕಾರ್ಯ ಪ್ರಧಾನವಾದುದರಿಂದ, ಸೃಜನ ಶೀಲ ಸಾಹಿತ್ಯ ಅಲ್ಪ-ಸ್ವಲ್ಪ ಕಾಸು ಒದಗಿಸುತ್ತಿದ್ದುದರಿಂದ, ಚಿಕ್ಕಂದಿನಿಂದ ಕಥೆ ಕವನ ಪ್ರಬಂಧ ಬರೆಯುವ ಹವ್ಯಾಸ ಸ್ವಭಾವವಾಗಿ ಬಂದದ್ದರಿಂದ, ಕಥೆ ಕಾದಂಬರಿಗಳ ರಚನೆ ಹೆಚ್ಚಿನ ಕಾಲವನ್ನು ಆಕ್ರಮಿಸಿಕೊಳ್ಳುತ್ತಿತ್ತು. ವಿಮರ್ಶೆ ಸಂಶೋಧನೆಗೆ ಬೇಕಾದ ಪರಿಕರ, ಸಮಯ, ಗ್ರಂಥಾಲಯದ ನೆರವು ಒದಗಿ ಬರುವುದೂ ಕಷ್ಟಸಾಧ್ಯವಾಗಿತ್ತು. ಅಲ್ಲದೆ ಅವರ ಪಾಠಕ್ರಮಗಳು ಇಂಟರ್ ಮೀಡಿಯಟ್, ಪಿ. ಯು. ಸಿ. ತರಗತಿಗಳ ಮಟ್ಟಕ್ಕೆ ಅನಿವಾರ್ಯವಾಗಿ ಸೀಮಿತವಾಗಿದ್ದುದರಿಂದ, ಆ ನೆಪದಲ್ಲಾದರೂ ಸಂದರ್ಭಗ್ರಂಥಗಳು ಶಾಸ್ತ್ರಗ್ರಂಥಗಳ ಕ್ರಮಬದ್ಧ ಅಭ್ಯಾಸಕ್ಕೆ ಅವಕಾಶವೇ ದೊರಕದೆ ಹೋಯಿತು. ಅವರ ಆರೋಗ್ಯದ ನಿಮಿತ್ತ ಅವರನ್ನು ಉನ್ನತ ಮಟ್ಟದ ಬೋಧನೆ ಇದ್ದ ಬೇರೆ ಊರಿಗೆ ಮುಖ್ಯವಾಗಿ ಮೈಸೂರಿಗೆ ವರ್ಗಾಯಿಸುವ ಸಂಭವವೂ ಕಡಿಮೆಯಾಗಿ, ಅವರ ಸಾಹಿತ್ಯಾಭ್ಯಾಸದ ಕ್ಷೇತ್ರ ಸೀಮಿತವಾಗಿಯೇ ಉಳಿದುಕೊಂಡಿತ್ತು. ಅಂತೂ ಕಡೆಗೊಮ್ಮೆ ಅವರಿಗೆ ಆ ಅವಕಾಶ ದೊರಕಿತು. ಅವರಿಗೆ ಸಂದ ಯು.ಜಿ.ಸಿ. ಪ್ರಾಧ್ಯಾಪಕತ್ವ ಈ ಕ್ಷೇತ್ರದಲ್ಲೂ ಕೆಲಸ ಮಾಡುವ ಸುಯೋಗವನ್ನು ಒದಗಿಸಿಕೊಟ್ಟಿತು. ಈ ಅವಕಾಶ ದೊರೆತದ್ದು ಡಾ॥ ವಿ. ಕೃ. ಗೋಕಾಕರ ಕೃಪೆ ಎಂದು ಕೃತಜ್ಞತೆಯಿಂದ ಅವರ ಉಪಕಾರವನ್ನು ನೆನೆಯುತ್ತಾರೆ ಎಂ. ವಿ. ಸೀ.

ಅದಕ್ಕೆ ಮುಂಚೆ 1963ರಲ್ಲಿ [illegible] ಅನ್ನಡ [illegible] ವಿಭಾಗಕ್ಕೆ [illegible] [illegible] 'ಕಾವ್ಯಾವಲೋಕನ' [illegible] ವಿಚಾರ [illegible] [illegible] ಗ್ರಂಥ [illegible] [illegible] ಡಾ॥ [illegible] ಶ್ರೀ [illegible] [illegible] 'ಕಾವ್ಯಾಲಂಕಾರ' ಗ್ರಂಥದ [illegible] ಅಧ್ಯಯನವನ್ನು ಗ್ರಂಥ ಸಂಪಾದನೆಯ [illegible] ಈಗ ತಮ್ಮ ಗ್ರಂಥ ಸಂಪಾದನ [illegible] 'ರಸ ಮಂಜರಿ'ಯನ್ನು ಪರಿಷ್ಕರಿಸುತ್ತಿದ್ದಾರೆ.

"ಶ್ರೀ" ಯವರ ಸಂಶೋಧನ ಪ್ರವೃತ್ತಿ ಅವರಲ್ಲಿ ಬೇರೂರಿತ್ತು. [illegible] ಇದೆಯಲ್ಲವೆ ? [illegible] ಈ ಕೆಲಸ [illegible] ಫಲವತ್ತಾಗಿ ಅನೇಕ ಕನ್ನಡ ಗ್ರಂಥಗಳು [illegible] ಎಂಬ ಸಂಸ್ಥೆಯೊಂದನ್ನು [illegible] ಇಲ್ಲ. [illegible] ಪ್ರತಿಷ್ಠಾನವನ್ನು [illegible] ಕೈಗೆತ್ತಿಕೊಂಡು, ತಮ್ಮ ಗುರುಗಳ [illegible] ದ್ದಾರೆ. ಆ ಮೂಲಕ [illegible] ಗಳನ್ನು ಪರಿಷ್ಕರಿಸಿ [illegible] ಹಾಕಿ ಕೊಂಡಿದ್ದಾರೆ. ಅವರ

ಜೊತೆಗಾರ ಇನ್ನಿತರ ವಿದ್ಯಾರ್ಥಿಗಳ ಸಹಕಾರವೂ ದೊರಕಿದೆ. ಅದಕ್ಕೆ ಕಾರಣ ಅವರು ರೂಪಿಸಿಕೊಂಡ ಶಾಂತಪ್ರಕೃತಿಯ ವ್ಯಕ್ತಿತ್ವ.

ಎಂ. ವಿ. ಸೀ. ಅವರ ಜೀವನ ಮತ್ತು ಸಾಧನೆಗಳನ್ನು ಕುರಿತು ಬರೆಯುವಾಗ ಅವರ ಕುಟುಂಬದ ಎಂದರೆ ಸಂಸಾರದ ವಿವರಗಳನ್ನು ಗಮನಿಸದೆ ಹೋದರೆ ಅದು ಜೀವನ ಚಿತ್ರಕ್ಕೆ ಲೋಪವುಂಟಾದಂತೆ. ಅವರ ಸಾಧನೆಗೆ ಅನುಕೂಲವನ್ನು ಅವರ ಸಂಸಾರ ಉದ್ಯೋಗ ಮನೆತನ ಆರೋಗ್ಯ ಎಷ್ಟರ ಮಟ್ಟಿಗೆ ಒದಗಿಸಿಕೊಟ್ಟಿದೆ ಎಂದು ನೋಡಿದರೆ, ಅವರ ಜೀವಿತ ಸಾಧನೆಯ ಮಹತ್ವ ಅರಿವಾಗದೆ ಇರದು.

ಪರಿಷತ್ತಿನಲ್ಲಿ ಉದ್ಯೋಗ ಕೈಗೊಂಡಾಗ 24ರ ವಯಸ್ಸಿನ ಅವರು ವಿವಾಹಿತ ರಾಗಿದ್ದರು. ಅವರ ವಿವಾಹವು ಆಗಿನ ಮಧ್ಯಮ ವರ್ಗದ ಮನೆತನದ ಸಂಪ್ರದಾಯ ದಂತೆಯೇ ನಡೆಯಿತು. ಮಕ್ಕಳು ಬೇಗ ದೊಡ್ಡವರಾದಾಗ, ಅವರನ್ನು ಒಂದು ನೆಲೆಗೆ ನಿಲ್ಲಿಸಬೇಕೆಂಬ ಹಿರಿಯರ ಒಂದು ಸಂಪ್ರದಾಯಕ್ಕೆ ಸೀತಾರಾಮಯ್ಯನವರೇನೂ ಹೊರತಾಗಲಿಲ್ಲ. ಅವರ ತಂದೆಯೇ ಮಗನಿಗೆ ಮದುವೆ ಮಾಡಲು ನಿರ್ಧರಿಸಿದರು. ಆಗ ಸೀತಾರಾಮಯ್ಯನಿಗೆ 17ನೆಯ ವಯಸ್ಸು. ಇವರ ಅಣ್ಣ ವೆಂಕಟರಮಣಯ್ಯ ನವರ ಹೆಂಡತಿಯೂ ಇವರ ಹೆಂಡತಿಯೂ ಅಕ್ಕ-ತಂಗಿಯರು. ಸಂಪ್ರದಾಯಸ್ಥರಲ್ಲಿ ಈ ಸಂಬಂಧ ಸಾಮಾನ್ಯವಾಗಿ ಕೂಡದು. ಆದರೆ, ಇದಕ್ಕೆ ಪರಿಹಾರವನ್ನೂ ಇವರ ದೊಡ್ಡಪ್ಪ ಕಂಡುಹಿಡಿದಿದ್ದರು. ಸೀತಾರಾಮಯ್ಯನ ಅಣ್ಣ ಅವರ ದೊಡ್ಡಪ್ಪನಿಗೆ ದತ್ತು. ಆದ್ದರಿಂದ ಅವನು ಬೇರೆ ಮನೆತನಕ್ಕೆ ಸೇರಿದಂತಾಯಿತು. ಈ ಒಂದು ತರ್ಕದ ಆಧಾರದ ಮೇಲೆ ಸೀತಾರಾಮಯ್ಯನವರಿಗೆ ಅವರ ತಂದೆ ನಿಶ್ಚಯಿಸಿ, ದೊಡ್ಡಪ್ಪ ಅನುಮೋದಿಸಿದ ಹೆಣ್ಣನ್ನು ತಂದು ವಿವಾಹ ಸಮಾರಂಭವನ್ನು ನೆರವೇರಿಸಿದರು. ಎಂ. ವಿ. ಸೀ. ಅವರ ತಂದೆಯ ಉತ್ಸಾಹವೇ, ಈ ಮದುವೆ ಇಷ್ಟು ಬೇಗ ಎಂದರೆ ಅವರ 17ನೆಯ ವಯಸ್ಸಿನಲ್ಲೇ ನಡೆದುದಕ್ಕೆ ಕಾರಣ. ವಿದ್ಯಾರ್ಥಿಯಾಗಿದ್ದ ಸೀತಾರಾ ಮಯ್ಯ ಆ ವಯಸ್ಸಿಗೆ ಹತ್ತಾರು ವ್ಯಸನಗಳನ್ನಿಟ್ಟುಕೊಂಡಿದ್ದುದು, ಅವರಿಗೆ ಬೇಗ ಮದುವೆ ಮಾಡಿಬಿಡುವುದು ಲೇಸು ಎಂಬ ಭಾವನೆ ಅವರ ತಂದೆಯವರಲ್ಲಿ ಮೂಡಿದ್ದಕ್ಕೆ ಕಾರಣ. ಹೆಣ್ಣನ್ನು ಅವರಾಗಲೀ ಇವರ ತಾಯಿಯಾಗಲೀ ನೋಡಿ ಒಪ್ಪಲು ಅವಕಾಶವೇ ಇರಲಿಲ್ಲವಂತೆ! ತಂದೆಯವರೇ ನೋಡಿ 'ವರಸಾಮ್ಯ' ಸರಿ ಹೋಗುತ್ತದೆ ಎಂದು ಅವರೇ ನಿರ್ಧರಿಸಿಬಿಟ್ಟರು. ಸೀತಾರಾಮಯ್ಯನೇನೋ ಅಣ್ಣನ ಮದುವೆಯಲ್ಲಿ ಅವನ ಹೆಂಡತಿಯ ತಂಗಿಯನ್ನು ನೋಡಿದ್ದ ಮಸಕು-ಮಸಕು ನೆನಪಿನಿಂದ, ತಂದೆಯವರ ನಿಶ್ಚಯಕ್ಕೆ ಅತೃಪ್ತಿ ತೋರಿದರೂ ವಿರೋಧವೊಡ್ಡಲಿಲ್ಲ. ಆದರೆ ಮದುವೆ ಮುಹೂರ್ತವನ್ನು ಬಿ. ಎ. ಪರೀಕ್ಷೆ ಮುಗಿಯುವವರೆಗೆ ಮುಂದೂಡ ಬೇಕೆಂದು ಹಠಮಾಡಿದರು. ತಂದೆಯವರ ಹಠದ ಮುಂದೆ ಮಗನ ಹಠ ಸೋತಿತು.

ಕಡೆಗೆ ವಿದ್ಯಾಭ್ಯಾಸ ಮುಗಿಯುವವರೆಗೆ ವಿವಾಹಿತ ಕನ್ಯೆಯನ್ನು ಮನೆ ತುಂಬಿಸಿ ಕೊಳ್ಳಬಾರದೆಂದು ಹಠ ಹಿಡಿದು ಅದನ್ನೇನೋ ಸಾಧಿಸಿ ಕೊಂಡರು. ಆ ಹಠ ಮುಂದೆಯೂ ಆಕೆಯ ಮಾವನ ಮನೆಗೆ ದೀಪಾವಳಿಗೆ ಹೋಗಬೇಕಾದ ಸಂದರ್ಭ ಗಳಲ್ಲೂ ಜಗ್ಗನೆ ಎದ್ದುನಿಂತು ತನ್ನ ಬಲವನ್ನು ತೋರಿಸಿತು. ಅಭ್ಯಾಸ ಮುಗಿಯುವವರೆಗೆ ಕೈಹಿಡಿದ ಹೆಂಡತಿಯನ್ನು ದೂರವೇ ಇಟ್ಟಿದ್ದರು. ಸೀತಾರಾಮಯ್ಯ ನವರಲ್ಲಿ ಈ ಹಠದ ಸ್ವಭಾವ ಬೆಳೆದು ಬಂದದ್ದು ಹಿರಿಯರಿಂದ ಬಂದ ಆಸ್ತಿ ಎಂದು ನಗುತ್ತ ಅವರೇ ಹೇಳಿಕೊಳ್ಳುತ್ತಾರೆ. 'ಈ ಸ್ವಭಾವದಿಂದಲೇ ಸಾಹಿತ್ಯರಂಗದಲ್ಲಿ ಮತ್ತು ಗೃಹಕೃತ್ಯದಲ್ಲಿ ಜಯವನ್ನು ಸಂಪಾದಿಸಿದ್ದೇನೆ' ಎಂಬುದು ಅವರ ನಂಬಿಕೆ.

ಸೀತಾರಾಮಯ್ಯ ಕ್ರಮೇಣ ಮಾವನವರ ಸದ್ಗುಣಗಳ ಪರಿಚಯ ಮಾಡಿ ಕೊಂಡರು. ಅವರ ಜೀವನ ಕ್ರಮ, ಅವರ ಸುಸಂಸ್ಕೃತ ನಿಲುವು, ಎಂಟು ಮಕ್ಕಳು ಬಂಧು ಬಳಗದ ದೊಡ್ಡ ಸಂಸಾರ ನಿರ್ವಹಣೆಯ ಚಾತುರ್ಯ, ಅದಕ್ಕಾಗಿ ದುಡಿಮೆ, ಮೊದಲಾದ ಅವರ ಸಂಸಾರ ಕರ್ತವ್ಯ ಪ್ರಜ್ಞೆಯನ್ನು ಅರಿತುಕೊಂಡರು. ಸಾಲ ಸೋಲ ಮಾಡದೆ ಬಾಳನ್ನು ಬದುಕುವ ದೃಷ್ಟಾಂತವನ್ನು ಅವರಿಂದ ಕಲಿತರು. ಹೀಗೆ ಮಾವನಲ್ಲಿ ಬೆಳೆದ ಗೌರವ ಅವರ ಮಗಳ ವಿಷಯದಲ್ಲೂ ಪ್ರೀತಿ ಆದರಗಳು ಅಗೋಚರವಾಗಿ ಬೆಳೆಯುವುದಕ್ಕೆ ಕಾರಣವಾಯಿತು.

ಬೆಂಗಳೂರಿನಲ್ಲಿ ಪರಿಷತ್ತಿಗೆ ಬಂದು ಕೆಲಸಕ್ಕೆ ಸೇರುವ ವೇಳೆಗೆ ವಿದ್ಯಾಭ್ಯಾಸವೂ ಮುಗಿದಿತ್ತು; ಸಂಸಾರವೂ ಆರಂಭವಾಗಿತ್ತು. ಮಕ್ಕಳ ವಿದ್ಯಾಭ್ಯಾಸಕ್ಕೆ ಸಂಸಾರ ಸಾಗರೋತ್ತರಣಕ್ಕೆ ಅವರ ತಂದೆ ದುಡಿದ ರೀತಿ, ಸೀತಾರಾಮಯ್ಯನ ಮನಸ್ಸಿನ ಮೇಲೆ ತುಂಬ ಪರಿಣಾಮ ಬೀರಿತ್ತು. ಆದ್ದರಿಂದ ಸಂಪಾದನೆ ದೊರಕಿಸುವ ಉದ್ಯೋಗ ಅನಿವಾರ್ಯವಾಗಿದ್ದರಿಂದಲೂ ಸಾಲವಿಲ್ಲದೆ ಜೀವನ ನಿರ್ವಹಿಸಬೇಕೆಂಬ ಹಟ ತೊಟ್ಟಿದ್ದರಿಂದಲೂ ದೊರಕಿದ ಉದ್ಯೋಗಕ್ಕೆ ಅಂಟಿಕೊಂಡು ಸ್ವತಂತ್ರವಾಗಿ ಜೀವನ ಆರಂಭಿಸಿದರು. ಪ್ರಾರಂಭದಲ್ಲಿ ಲೇಖನ ಕೃತಿಗಳಿಂದ ಬಂದ ಅಲ್ಪ ಆದಾಯ ದಲ್ಲಿ ತೃಪ್ತಿಯಿದ್ದಿತಾದರೂ ಅದನ್ನೇ ಮುಖ್ಯ ಸಂಪಾದನೆಯನ್ನಾಗಿ ಮಾಡಿಕೊಳ್ಳು ವಂತಿರಲಿಲ್ಲ. ತಂದೆಯವರು ಬಿಟ್ಟುಹೋದ (ಈಗಿನ ಮೌಲ್ಯದಲ್ಲಿ 40-50 ಸಾವಿರ) ನಾಲ್ಕೈದು ಸಾವಿರ ರೂಪಾಯಿಗಳ ಸಾಲದ 'ಆಸ್ತಿಯನ್ನು' ತೀರಿಸುವ ಪ್ರಯತ್ನವೂ ಹಟವಾಗಿನಿಂತಿತು. ಸಂಸಾರನಿರ್ವಹಣೆಗೆ, ಮಕ್ಕಳ ಮದುವೆ-ಮುಂಜಿಗಳಿಗೆ, ದೇವರ ಕಾರ್ಯಕ್ಕೆ, ಅತಿಥಿ ಸತ್ಕಾರಕ್ಕೆ, ಬಂಧುಬಳಗದ ಆದರೋಪಚಾರಕ್ಕೆ, ಧಾರಾಳ ಸ್ವಭಾವದ ತಂದೆ ಮಾಡಿ, ತೀರಿಸಲಾರದೆ ಬಿಟ್ಟ ಪಿತೃಋಣವನ್ನು ತೀರಿಸು ವುದು ತಮ್ಮ ಕರ್ತವ್ಯ ಎಂದು ಭಾವಿಸಿದ್ದರು. ಈ ಸಂಸಾರ ನೌಕೆಯ ಸಾಗಣೆಯಲ್ಲಿ ಅವರ ಕುಟುಂಬದ ಸಹಾಯ ಸಹಕಾರಗಳು ಎಷ್ಟೆಂದು ಹೇಳುವುದು ಕಷ್ಟ. ಪತ್ನಿಯ

ಓದು-ಬರಹವಿಲ್ಲದಿದ್ದರೂ ಶ್ರೀಮತಿ ಎಂ.ವಿ.ಸೀ. ಸಂಪ್ರದಾಯಸ್ಥ ಸುಸಂಸ್ಕೃತ ಸ್ವಭಾವದವರು. ಗಂಡನಲ್ಲಿ ಮನೆತನದ ಗೌರವ ರಕ್ಷಣೆಯಲ್ಲಿ ಪ್ರೀತಿ ಭಕ್ತಿ-ಗೌರವಗಳನ್ನು ತುಂಬಿ, ಪತಿಯ ಕಾರ್ಯ ನಿರ್ವಹಣೆಯಲ್ಲಿ ಅನುಕೂಲವಾಗಿ ಜೊತೆಯಾಗಿ ನಿಂತು, ಒಂದಾಗಿ ನಡೆದುಕೊಂಡರು ಅವರ ಕುಟುಂಬ.

ಎಂ. ವಿ. ಸೀ. ಅವರು ಎಂ. ಎ. ಪದವೀಧರರಾದರು. ಕೆಲಸ ಕೈಕೊಂಡರು. ಆಗಲೇ ಅವರು ಅನಾರೋಗ್ಯವನ್ನು ಅಂಟಿಸಿಕೊಂಡರು. ಪರಿಷತ್ತಿನ ಕೆಲಸಕ್ಕೆ ಸೇರುವಾಗಲೇ ಉದರಶೂಲೆ ಆರಂಭವಾಗಿ ಉದ್ಯೋಗಕ್ಕೆ ಹಾಜರಾಗುವ ಕಾಲವನ್ನು ಮುಂದಕ್ಕೆ ತಳ್ಳಬೇಕಾಯಿತು. ಅದಕ್ಕೆ ಮುಂಚಿನಿಂದಲೂ ಅವರು ತಾನು ಅನಾರೋಗ್ಯದ ಶಿಶುವೇ ಎಂದುಕೊಳ್ಳುತ್ತಾರೆ. ಇವರು ಮೈಸೂರಿನಲ್ಲಿದ್ದಾಗ ದೇಶದ ತುಂಬ ವ್ಯಾಪಿಸಿದ್ದ ಮಲೇರಿಯಾ ಪ್ಲೇಗು ಇನ್‌ಫ್ಲೂಯೆಂಜಾ ಮೊದಲಾದ ಸಾಂಕ್ರಾಮಿಕ ಖಾಯಿಲೆಗಳು ಯಾರನ್ನೂ ಕಾಡದೆ ಬಿಡಲಿಲ್ಲ. ಇವರ ಮನೆಗೂ ಅದು ಕಾಲಿಟ್ಟಿತು. ಮನೆಯವರೆಲ್ಲ ನರಳಿದರು. ಅದರಲ್ಲೂ ಹುಡುಗ ಸೀತಾರಾಮುವನ್ನು ಮಲೇರಿಯಾ ಇನ್‌ಫ್ಲೂಯಂಜಾ ಖಾಯಿಲೆಗಳು ಎಡಬಿಡದೆ ಪೀಡಿಸಿವೆ. "ನನಗೆ ನೆನಪಿರುವ ಮಟ್ಟಿಗೆ ಔಷಧಿಗಳನ್ನು ಟಾನಿಕ್ಕುಗಳನ್ನು ಲೇಹ್ಯಗಳನ್ನು ಸೇವಿಸದೆ ಇದ್ದ ವರ್ಷವೇ ಇಲ್ಲ" ಎನ್ನುತ್ತಾರೆ. ಈಗಲೂ ಕೂಡ ಔಷಧ ಅವರ ಆಹಾರವೇ ಆಗಿಬಿಟ್ಟಿದೆ! ಆದರೆ ಅವರು ತಮಗೊದಗಬಹುದಾದ, ಶರೀರವನ್ನು ಹಿಂಸಿಸಬಹುದಾದ ಎಲ್ಲರೀತಿಯ ಖಾಯಿಲೆಗಳಿಗೂ ಸಿದ್ಧವಾದ ಔಷಧಗಳನ್ನು ಹತ್ತಿರವೇ ಇಟ್ಟುಕೊಂಡಿರುತ್ತಾರೆ! ಔಷಧ ಹೇಗೆ ಅವರಿಗೆ ಆಹಾರವೋ ಸಾಹಿತ್ಯ ಹೇಗೆ ಅವರಿಗೆ ಪ್ರವೃತ್ತಿಯೋ ತಮ್ಮ ರೋಗಕ್ಕೆ ತಾವೇ ವೈದ್ಯರೂ ಆಗಿ 'ಜೀವಂ ಭದ್ರಾಣಿ ಪಶ್ಯಂತಿ' ಎಂಬ ವಾಕ್ಯದಲ್ಲಿ ನಂಬಿಕೆ ಇಟ್ಟು ಜೀವರಕ್ಷಣೆ ನೋಡಿಕೊಳ್ಳುತ್ತಿದ್ದಾರೆ. ಅವರೇ ನಂಬಿರುವಂತೆ ಅವರ ಅನಾರೋಗ್ಯ ಅವರ ಸಾಹಿತ್ಯ ಸೃಷ್ಟಿಗೆ ತೊಡರುಕಾಲು ಹಾಕದೆ, ಒಂದು ರೀತಿಯ ಸ್ಫೂರ್ತಿಯನ್ನೂ ಅನುಕೂಲ ವಾತಾವರಣವನ್ನೂ ತಂದು ಕೊಟ್ಟಿದೆ.

ಅವರ ಮಕ್ಕಳು ವಿದ್ಯಾವಂತರಾಗಿದ್ದಾರೆ. ಬೇರೆ-ಬೇರೆ ಉದ್ಯೋಗಗಳಲ್ಲಿದ್ದಾರೆ. ಮಗಳಿಗೆ ಮದುವೆಯಾಗಿ ಸಂಸಾರಿಯಾಗಿದ್ದಾಳೆ. ಬೆಂಗಳೂರಿನಲ್ಲೇ ಇರುವ ಹಿರಿಯ ಮಗ ಕೊನೆಯ ಮಗ ತಂದೆಯ ಬಳಿಯೇ ಇದ್ದಾರೆ. ಮೊಮ್ಮಕ್ಕಳು ಅವರ ಮನಸ್ಸಿಗೆ ಆನಂದವನ್ನು ತಂದು ಕೊಟ್ಟಿವೆ.

ಸಂಸಾರದಲ್ಲಿ ಅವರು ನಿರಾತಂಕರಾಗಿ ತಮ್ಮ ನಿವೃತ್ತಿ ಕಾಲವನ್ನು "ಪ್ರತಿಷ್ಠಾನ"ದ ಪುರೋಭಿವೃದ್ಧಿಯ ಚಿಂತೆಯಿಂದ ಮಾತ್ರ ತುಂಬಿಕೊಂಡು ಕಳೆಯುತ್ತಿದ್ದಾರೆ.

ಎಂ. ವಿ. ಸೀ, ಎಂ. ವಿ. ಸೀತಾರಾಮಯ್ಯ, ವೈ. ಪಿಂ. ಸೀ, ರಾಘವ ಇವೆಲ್ಲ ಸೀತಾರಾಮಯ್ಯನವರ ಕಾವ್ಯನಾಮ, ನಿಜನಾಮಗಳು. ಅವರು ಭಿನ್ನ-ಭಿನ್ನ ನಾಮ

ಗಳಿಂದ, ತಮ್ಮ ಸಾಹಿತ್ಯ ರಚನೆಗೆ ಅಂಕಿತವನ್ನು [illegible]. "ರಾಘವ" [illegible] [illegible]. [illegible] [illegible] [illegible] [illegible] [illegible] [illegible] [illegible] [illegible] 'ರಾಘವ' [illegible] [illegible] [illegible]. [illegible] [illegible]. ಪ್ರಗತಿಶೀಲ [illegible] [illegible] [illegible] [illegible] [illegible] ಎಂ. ವಿ. ಸೀ. [illegible] [illegible] [illegible] [illegible] ಬರೆದರು; ಪ್ರಗತಿಶೀಲ [illegible] [illegible] [illegible] [illegible] ಗಳನ್ನು ಸಮರ್ಥಿಸಿಕೊಂಡರು.

ಪರಂಪರಾಗತವಾದ ನಂಬಿಕೆ ಶ್ರದ್ಧೆ [illegible] ಭಾವನೆಗಳನ್ನು ತಮ್ಮ ಆದರ್ಶವನ್ನಾಗಿಟ್ಟುಕೊಂಡು ಜೀವನದಲ್ಲಿ [illegible] [illegible] ಯನ್ನು ಬೆಳೆಸಿಕೊಳ್ಳಲಿಲ್ಲ. ಅಷ್ಟು [illegible] [illegible] [illegible] [illegible] ಅವಕ್ಕೆ ನೇತು ಹಾಕಿಕೊಳ್ಳಲಿಲ್ಲ. [illegible] [illegible] [illegible] ಅನುಸರಿಸಿದರೂ ಅವನ್ನು ಆಲೋಚಿಸಿ [illegible] [illegible] [illegible] [illegible] ಆಚರಣೆಗೆ ತರುವ ಮನೋವೃತ್ತಿಯನ್ನು [illegible] [illegible] ಅವರು. "ಋಣ" ಅನ್ನುವ ಮಾತು ಅವರಿಗೆ ಸೇರದು. [illegible] [illegible] [illegible] [illegible] ಗಾಗದ ಬದುಕು ತಮ್ಮದಾಗಬೇಕು ಎಂಬುದು ಅವರ ಜೀವನದ ಧ್ಯೇಯ. ನಮ್ಮ ಮಧ್ಯಮವರ್ಗದ ಜನಾಂಗದಲ್ಲಿ ಈ ಮಾತು [illegible] ಈ [illegible] [illegible] ಕಷ್ಟ ಎಂಬುದು ಅದನ್ನು ಅನುಭವಿಸಿದವರಿಗೇ ಗೊತ್ತು. [illegible] [illegible] ಬದುಕಬೇಕೆನ್ನುವ ಒಂದು ಸಂಸ್ಕಾರ ವಿಶೇಷವಾಗಿ [illegible] [illegible] [illegible] ಕಂಡು ಬರುತ್ತದೆ. ಅದನ್ನು [illegible] ಬಂದ [illegible] ಎಂ. ವಿ. ಸೀ. [illegible].

ವ್ಯಕ್ತಿಗತವಾಗಿ ಸೀತಾರಾಮಯ್ಯನವರದು [illegible] ವ್ಯಕ್ತಿತ್ವ. [illegible] ಅವರು [illegible]. [illegible], [illegible], [illegible] [illegible] [illegible] [illegible] ಶ್ರದ್ಧೆಯಿಂದ [illegible] ಅವರ [illegible] [illegible] [illegible] [illegible]. [illegible] [illegible] [illegible] [illegible] [illegible]. [illegible] [illegible] [illegible] [illegible] [illegible] [illegible] [illegible] [illegible] [illegible] [illegible] [illegible] [illegible] [illegible] ವ್ಯಕ್ತಿಯಾಗಿದ್ದರೆ.

ಅವರ ಆ ಸಣ್ಣ ದೇಹದಲ್ಲಿ ಎಂಥ ವಿಶಾಲ ಮನಸ್ಸು, ಎಂಥ ಚೈತನ್ಯಶಕ್ತಿ ತುಂಬಿ ಕೊಂಡಿದೆ ಎಂದು ನೋಡಬೇಕಾದರೆ, ಅದು ಶಾರೀರಿಕ ಚಟುವಟಿಕೆಗಳ ಮೂಲಕ ಅಲ್ಲ; ಅವರೊಡನೆ ಸಂಭಾಷಣೆ ಮಾಡುವುದರ ಮೂಲಕ ಅವರ ಸಾಹಿತ್ಯಾಭ್ಯಾಸದ ಮೂಲಕ ಮಾತ್ರ ಸಾಧ್ಯ.

ಶ್ರೀಯುತರು ಧರ್ಮಾಭಿಮಾನಿಗಳು. ವೈದಿಕಶ್ರದ್ಧರು. ಆಚಾರ-ಸಂಪ್ರದಾಯಗಳ ದ್ವೇಷಿಗಳಲ್ಲ. ಈಗಲೂ ಪೂಜೆ-ಪುನಸ್ಕಾರಗಳ ಬಗ್ಗೆ ಗೌರವ ಆದರಣೆಗಳನ್ನು ಹೊಂದಿದ್ದಾರೆ. ಹಬ್ಬ-ಹರಿದಿನಗಳ ಬಗ್ಗೆ ನಂಬಿಕೆ ಇಟ್ಟುಕೊಂಡಿದ್ದಾರೆ. ಆದರೆ ಶಾಸ್ತ್ರದ ಕಾನೂನಿನಂತೆ ಅಲ್ಲ. ಮನಸ್ಸಿನ ನೆಮ್ಮದಿಗೆ, ಶ್ರದ್ಧೆ-ಭಕ್ತಿಯ ಜೀವನಕ್ಕೆಂದು ಸಹಾಯಕ ಎಂದು. ಶಾಸ್ತ್ರಕ್ಕೆ ಅಷ್ಟರಮಟ್ಟಿಗೆ ಪ್ರಾಮುಖ್ಯತೆಯನ್ನು ಉಳಿಸಿಕೊಂಡು ಅದರ ಮೇರೆಯನ್ನಿಟ್ಟುಕೊಂಡಿದ್ದಾರೆ. ತಮ್ಮ ಸಂಪ್ರದಾಯದ ನೀತಿನಿಯಮಗಳನ್ನು ಮನೆ ಕುಟುಂಬದ ವಾತಾವರಣಕ್ಕೆ ಅಳವಟ್ಟಂತೆ ತಮ್ಮ ಶಾರೀರಕ ಆರೋಗ್ಯಕ್ಕೆ ಬಾಧೆ ಬರದಂತೆ ನಡೆಸಿಕೊಂಡು ಬರುತ್ತಿದ್ದಾರೆ.

ಸಂಪ್ರದಾಯ ಬದ್ಧ ಪರಿಸರದಲ್ಲಿ ಜನಿಸಿ ಅದನ್ನು ಉಳಿಸಿಕೊಂಡು ಹೊಸ ಸಾಮಾಜಿಕ ಮೌಲ್ಯಗಳಿಗೆ ಸೂಕ್ತ ಮತ್ತು ಮನ್ನಣೆಯನ್ನಿತ್ತು ಗೌರವ ಸಲ್ಲಿಸುತ್ತ ಹೊಂದಾಣಿಕೆಯ ಬದುಕನ್ನು ಬಾಳುತ್ತಿರುವ ಶ್ರೀಯುತರು ಹಿರಿಯ ನಾಗರಿಕರಾಗಿ, ಬುದ್ಧಿಯ ನಿಷ್ಠುರತೆಯವರಾಗಿ, ತಮ್ಮ ಒಂದು ವಿಶಿಷ್ಟ ವ್ಯಕ್ತಿತ್ವವನ್ನು ಬೆಳೆಸಿಕೊಂಡಿದ್ದಾರೆ. ತಮ್ಮ ಓದನ್ನು ಕಲಿಕೆಯನ್ನು ಹಲವರಿಗೆ ಹಲವಾರು ರೀತಿಯಲ್ಲಿ ಹಂಚಿದ್ದಾರೆ. ಸಂಶೋಧಕರಾಗಿ, ಬೋಧಕರಾಗಿ, ಕನ್ನಡದ ವಿದ್ಯಾರ್ಥಿಗಳಿಗೆ ಜ್ಞಾನವನ್ನು ಮೂಡಿಸಿದ್ದಾರೆ. ಹಳೆಗಾಲದ ಸಾಹಿತ್ಯಕ ಮೌಲ್ಯಗಳನ್ನು ಗುರುತಿಸಿ ಅದರ ಸತ್ವವನ್ನು ವ್ಯಾಪ್ತಿಯನ್ನು ಚಿಂತಿಸಿ ಅಧ್ಯಯಿಸಿ, ತಮ್ಮ ನಿಲುವನ್ನು ಖಚಿತ ವಾಗಿ ಸ್ಪಷ್ಟವಾಗಿ ಪ್ರತಿಪಾದಿಸಿದ್ದಾರೆ. ವಿಮರ್ಶೆಯ ತೂಕದಲ್ಲಾಗಲೀ ಸಂಶೋಧನೆಯ ಆಳದಲ್ಲಾಗಲೀ ಮುಖ್ಯವಾದ ಎತ್ತರ-ಬಿತ್ತರಗಳನ್ನು ಉದ್ದ-ಅಗಲಗಳನ್ನು ಸಂದೇಹಕ್ಕೆಡೆಗೊಡದಂತೆ ಬಿಚ್ಚು ಮನಸ್ಸಿನಿಂದ ಚಿತ್ರಿಸಿದ್ದಾರೆ. ಕನ್ನಡ ಸಾರಸ್ವತ ಲೋಕಕ್ಕೆ ತಮ್ಮದೇ ಆದ ಕಾಣಿಕೆಯನ್ನು ನೀಡಿದ್ದಾರೆ.

ನವೋದಯ ಸಾಹಿತ್ಯ ಸೃಷ್ಟಿಯ ಆರಂಭದ ಪ್ರಭಾವದಿಂದ ಪ್ರೇರಿತರಾದ ರಾಘವರು ಅಂದಿನ ನವೀನ ಮಾರ್ಗದ ಹೊಸ ಭಾವನೆಗಳಿಗೆ ಮಾರುಹೋದರೂ ಅವಕ್ಕೆ ಭ್ರಮಿಷ್ಟರಾಗಲಿಲ್ಲ. ತಮ್ಮದೇ ಒಂದು ಗಟ್ಟಿ ನಿಲುವು ಒಂದನ್ನು ಹೂಡಿಕೊಂಡರು. 'ಇಂಗ್ಲಿಷ್ ಗೀತೆಗಳು' ಅವರ ಕಾವ್ಯ ಸೃಷ್ಟಿಗೆ ಪ್ರೇರಣೆ ನೀಡಿದರೂ ಅದು ಆರಂಭದ ಕಲಿಕೆಗಾಗಿ ಮಾತ್ರ. ಅಭ್ಯಾಸ ಮುಂದುವರಿದಂತೆ ತಮ್ಮ ತನವನ್ನು ಕಾವ್ಯಸೃಷ್ಟಿಯಲ್ಲಿ ಜೋಡಿಸಿ ತಮ್ಮ ಕೃತಿಫಲವನ್ನು ಕನ್ನಡಕ್ಕೆ ನೀಡಿದರು.

ರಾಘವ ಅವರು ತಮ್ಮ ಸಾಹಿತ್ಯ ಸೃಷ್ಟಿ ಕಾರ್ಯದಲ್ಲಿ ತಮ್ಮ ಖಚಿತವಾದ ನಿಲುವನ್ನು ಕಂಡುಕೊಂಡಿದ್ದಾರೆ. ಅವರು ಸಾಹಿತ್ಯ ಸಂಗೀತ ಚಿತ್ರಕಲಾಭ್ಯಾಸದಲ್ಲಿ ತೋರಿದ ಆಸಕ್ತಿ, ಗಳಿಸಿದ ಅನುಭವ, ಇವುಗಳಿಂದ ಸುಸಂಸ್ಕೃತ ಮನಸ್ಸು ಸಾಹಿತ್ಯಕ್ಕೆ ಲೇಪಿಸಿದ ಸದಭಿರುಚಿಯ ಸಂಸ್ಕೃತಿಯನ್ನು ರೂಪಿಸಿದೆ. ಪ್ರಾರಂಭದಲ್ಲಿ ಗಳಿಕೆಗಾಗಿಯೇ ಕೆಲವು ಕಥೆ ಕಾದಂಬರಿ ಅನುವಾದಗಳನ್ನು ರಚಿಸಿದರೂ ಸಾಹಿತ್ಯದ ಮೌಲ್ಯ ಏನು ಎಂಬುದನ್ನು ಕ್ರಮೇಣ ಅರ್ಥಮಾಡಿಕೊಂಡು ಅದರ ಬೆಲೆಯರಿತು ಸಾಹಿತ್ಯ ಸೇವೆ ಸಲ್ಲಿಸಿದ್ದಾರೆ. "ನಿಮ್ಮ ಉತ್ತಮ ಕೃತಿಗಳು ಯಾವುವು?" ಎಂದು ಅವರನ್ನೇ ಕೇಳಿದರೆ "ನನ್ನ ಸಣ್ಣಕತೆಗಳು ಒಂದೊಂದು ದೃಷ್ಟಿಯಿಂದ ಒಂದೊಂದು ಮೇಲಾಗಿ ಕಂಡೀತು" ಎಂದು ಎನ್ನುತ್ತಾರೆ. ವಿಮರ್ಶಕರು ತಮ್ಮ ಕೃತಿಯನ್ನು ಚೆನ್ನ ಉತ್ತಮ ಎಂದು ಅಭಿಪ್ರಾಯಿಸಿದರೆ, ಅದು ತಮಗೂ ಉತ್ತಮವಾಗಿಯೇ ಕಾಣಿಸುತ್ತದೆ ಎನ್ನುತ್ತಾರೆ. ಎಂದರೆ ಓದುಗರಿಗೆ ಯಾವುದು ಒಪ್ಪಿತವೋ ಯಾವುದು ಸಂತೋಷದಾಯಕವೋ ಅದೇ ತಮ್ಮ ಸೃಷ್ಟಿಯಲ್ಲಿ ಉತ್ತಮವಾಗಿದೆ ಎಂದು ಒಪ್ಪಿಕೊಂಡುಬಿಡುತ್ತಾರೆ. ಅವರ ಸಣ್ಣ ಕತೆಗಳಲ್ಲಿ 'ಗೌರಿಯ ಸಾವು' 'ಕರುಣೆ' 'ಮೋದರಚೆನ್ನ' 'ಮೋಡದ ದಿಬ್ಬಣ' ಮೊದಲಾದುವನ್ನು ಓದುಗರು ವಿಮರ್ಶಕರು ಮೆಚ್ಚಿಕೊಂಡಿದ್ದಾರೆ. ಸೀತಾರಾಮಯ್ಯನವರು ತಮ್ಮ ರಚನೆಯ ಸೊಗಸನ್ನು ವಾಚಕರ ಮುಖಾಂತರ ಕಾಣುವವರು. ಹಾಗೆಯೇ 'ಮಾದನ ಮಗಳು' ಕಾದಂಬರಿ ವಿಷಯದಲ್ಲಿಯೂ ಕನ್ನಡಿಗರ ಮೆಚ್ಚುಗೆ ಗಳಿಸುವಂಥ ಗಳಿಸಬೇಕೆಂದು, ಕೃತಿ ರಚಿಸುವ ಮನಃಪ್ರವೃತ್ತಿಯುಳ್ಳವರು ಅವರು. ಅವರು ಗದ್ಯ ಮಾಧ್ಯಮದ ರಚನೆಗೆ ಆರಿಸಿಕೊಂಡ ವಸ್ತುಗಳೂ ಅಷ್ಟೆ. ಸಮಾಜದ ನೋವು-ನಲಿವು ಕಷ್ಟ-ಸುಖ, ಸಮಸ್ಯೆ-ಪ್ರಶ್ನೆಗಳೇ--ವಿಶೇಷ.

ಈ ನೆಲೆಯಲ್ಲಿ ಸಾಹಿತ್ಯದ ಬಗ್ಗೆ ಅವರು ತಮ್ಮದೇ ಆದ ವಿಶಿಷ್ಟ ಅಭಿಪ್ರಾಯವನ್ನು ಹೊಂದಿದ್ದಾರೆ. ಹಾಗೆಂದು ಸಾಹಿತ್ಯದಲ್ಲಿ 'ಮಡಿವಂತಿಕೆ' ಅಗತ್ಯ ಎಂದು ಹೇಳುವುದಿಲ್ಲ. 'ಮಡಿವಂತಿಕೆ' ಎಂಬುದರ ಅರ್ಥ, ಅವರ ಪ್ರಕಾರ 'ಸಂಪ್ರದಾಯ', 'ಸಂಪ್ರದಾಯ ಶೀಲತೆ'. ಇದು ಯಾವ ಒಂದು ಕಾವ್ಯವನ್ನೂ ಬಿಟ್ಟು ಹೋಗುವುದಿಲ್ಲ. ಒಂದು ಮಾರ್ಗ ಆರಂಭವಾಗಿ ಅದನ್ನೇ ಕೆಲವರು ಕೆಲವು ಕಾಲ ಮುಂದುವರಿಸಿದರೆ ಆ ಮೊದಲ ಮಂದಿ ಅನುಯಾಯಿಗಳಿಗೆ ಆದರ್ಶವ್ಯಕ್ತಿಗಳಾಗುತ್ತಾರೆ. ಅವರ ಸೃಷ್ಟಿ ಸಂಪ್ರದಾಯವಾಗುತ್ತದೆ. ಪಂಪನ ಮಾದರಿ ಅವನಿಗಿಂತ ಈಚಿನ ಕವಿಗಳಲ್ಲಿ ಸಂಪ್ರದಾಯವಾಗಿ ಬೆಳದು ಬಂದಿತು. ಲೌಕಿಕ ಧಾರ್ಮಿಕ ಕಾವ್ಯ ಸೃಷ್ಟಿಯ ಪರಂಪರೆ ಒಂದು ಮೇಲ್ಪಂಕ್ತಿಯಾಗಿ ಸೂತ್ರವಾಗಿ ಬೆಳೆದು ಬಂದಿತು. 'ಮಾರ್ಗ-ದೇಸಿ' ಒಂದು ನಿಯಮವಾಗಿ ಕವಿಗಳು ತಮ್ಮ ಕೃತಿರತ್ನಗಳಲ್ಲಿ ಪ್ರಯೋಗಿಸಿದರು.

ಸರ್ವೋದಯದ ಆಚಾರ್ಯ ಶ್ರೀ ಅವರ ಕೊಡುಗೆ ಸರ್ವೋದಯದ ಕವಿಗಳಿಗೆ ಮಾರ್ಗದರ್ಶವಾಗಿ ಸಂಪ್ರದಾಯವಾಯಿತು. ಇಂಥ ರಚನೆ ಕೆಲವುಕಾಲ ಮಡಿವಂತಿಕೆಯಾಗಿ ಸಂಪ್ರದಾಯವಾಗಿ ಕಂಡು ಬರಬಹುದು, ಉಳಿಯಬಹುದು.

ಕವಿ ತನ್ನ ಅನುಭವವನ್ನು ಅಭಿವ್ಯಕ್ತಿಗೊಳಿಸುವಾಗ ಇಂಥ ಒಂದು ಮಾದರಿಯನ್ನು ಬಳಸಿಕೊಂಡರೆ ಅವನನ್ನು 'ಸಂಪ್ರದಾಯನಿಷ್ಠ' ಎಂದು ತಲೆಪಟ್ಟಿ ಕಟ್ಟುವುದು ಸಹಜವೆನ್ನಿಸಲಾರದು. ಈ ದೃಷ್ಟಿಯಿಂದ ಸೀತಾರಾಮಯ್ಯನವರ ಸಾಹಿತ್ಯ ಸೇವೆಯನ್ನು ಗಮನಿಸಬೇಕು. ಸಾಹಿತ್ಯದಲ್ಲಿ ಶೀಲ-ಅಶ್ಲೀಲದ ಪ್ರಶ್ನೆಯನ್ನು ಕುರಿತ ಒಂದು ಚಳುವಳಿ ಒಂದು ಕಾಲದಲ್ಲಿ ನಡೆಯಿತು. ಅದರ ನೇತಾರರು ದಿವಂಗತ ಅ. ನ. ಕೃ. ಅವರು. ಅವರು ಇಂಥ ವಿಚಾರವನ್ನು ಸಂಕೋಚವಿಲ್ಲದೆ ತಮ್ಮ ಕಥೆ ಕಾದಂಬರಿಗಳಲ್ಲಿ ತಂದರು. ಸಾಹಿತ್ಯ ಲೋಕದಲ್ಲಿ ಹುಯಿಲೆದ್ದಿತು. ಅನೇಕ ಸಾಹಿತಿಗಳು ವಿಮರ್ಶಕರು ಅವರ ದೃಷ್ಟಿಕೋನವನ್ನು ಒಪ್ಪಿಕೊಳ್ಳಲಿಲ್ಲ. ಅ. ನ. ಕೃ. ಅವರು ತಮ್ಮ ನಿಲುವನ್ನು ಸಮರ್ಥಿಸಿಕೊಳ್ಳಲು 'ಸಾಹಿತ್ಯದಲ್ಲಿ ಕಾಮ ಪ್ರಚೋದನೆ' ಎಂಬ ಗ್ರಂಥವನ್ನು ಪ್ರಕಟಿಸಿದರು. ಅವರ ನಿಲುವನ್ನು ಒಪ್ಪದಿದ್ದವರಲ್ಲಿ ಒಬ್ಬರು ಎಂ.ವಿ.ಸೀ. ಅವರು ತಮ್ಮ ವಿಚಾರಧಾರೆಯನ್ನು 'ಕಾವ್ಯಾಲಾಪ' ಎಂಬ ನಾಮಾಂಕಿತದ ಪದ್ಯಗಳ ಮೂಲಕ ಸಾಹಿತ್ಯ ಕ್ಷೇತ್ರದಲ್ಲಿ ಮಂಡಿಸಿದರು. ಅಶ್ಲೀಲವಸ್ತುವನ್ನು ಗಂಭೀರವಾಗಿ ಹೇಳಬಹುದು, ಎನ್ನುವುದನ್ನು ತೋರಿಸುವುದಕ್ಕಾಗಿ 'ಸ್ನೇಹದ ಕಾಣಿಕೆ' ಎಂಬ ಕಾದಂಬರಿಯನ್ನು ಬರೆದರು. ಸೀತಾರಾಮಯ್ಯನವರು ಬರೆದ "ಭಾಗ್ಯಲಕ್ಷ್ಮಿ" ಎಂಬ ಕಾದಂಬರಿಯಲ್ಲಿ 'ಪ್ರಸ್ಥ' ಎಂಬ ಮಾತು ಬಂದಿದೆ. ಅದನ್ನು ಹುಡುಗರು ವಿಶೇಷವಾಗಿ ಗಮನಿಸಬಾರದು ಎಂದು ಅಭಿಪ್ರಾಯಪಟ್ಟ ಪಠ್ಯಪುಸ್ತಕ ಸಮಿತಿಯವರು, ಉದ್ದಕ್ಕೂ ಆ ಮಾತನ್ನು ತೆಗೆದುಹಾಕುವ ನಿಬಂಧನೆ ಹಾಕಿ, ಆ ಪುಸ್ತಕವನ್ನು ಪಠ್ಯಪುಸ್ತಕವಾಗಿ ನೇಮಕಮಾಡಿದರು. ಇದು ಆಗಿನ ಕಾಲದ ಸಾಹಿತ್ಯ ಕ್ಷೇತ್ರದ ಕೆಲವು ಹಿರಿಯರ ದೃಷ್ಟಿ. ಸೀತಾರಾಮಯ್ಯನವರ ದೃಷ್ಟಿಯೂ ಅದೇ. ಕನ್ನಡ ಸಾಹಿತ್ಯ ಶುದ್ಧವಾಗಿರಬೇಕೆಂಬ ಏಕೈಕ ಅಭಿಪ್ರಾಯವನ್ನು ತಾಳಿರುವ ಸೀತಾರಾಮಯ್ಯ, ನವೋದಯ ಪ್ರಗತಿಶೀಲ ನವ್ಯ ದಲಿತ-ಮೊದಲಾಗಿ ಪ್ರಚಲಿತವಿರುವ ಪ್ರಕಾರಗಳ ಬಗ್ಗೆ 'ತಮ್ಮದೇ' ಖಚಿತ ಭಾವನೆಗಳನ್ನು ಹೊಂದಿದ್ದಾರೆ.

"ಇಂದಿನ ಸಾಹಿತ್ಯದ ಕೆಲವು ಧೋರಣೆಗಳು ತುಂಬ ಪರಕೀಯವಾದವು. ಅನಾಥ ಪ್ರಜ್ಞೆ, ತಬ್ಬಲಿತನದ ನೋಗು. ಒಂಟಿತನದ ಬೇಸರ-ಇವೆಲ್ಲ ಪರಕೀಯ ಧೋರಣೆಗಳ ಅನುಕರಣ; ನಮ್ಮ ಸಂಸ್ಕೃತಿಗೆ ಒಗ್ಗದವು. ಈಚೀಚೆಗೆ ಅವತರಿಸಿದ ದಲಿತ ಪ್ಯಾಂಥರ್' ಕವಿತೆ ದಿಗಂಬರ ಕವಿತೆ ಇವೆಲ್ಲ ಆಕ್ರೋಶ ಆವೇಶದ ಕೂಗಾಟ, ಚೀರಾಟಗಳಾಗಿ ಕೇಳುತ್ತಿವೆಯೇ ಹೊರತು ಕಾವ್ಯದ ಕಹಳೆಯಾಗಿ ಅಲ್ಲ" ಎನ್ನುತ್ತಾರೆ.

ಎಂ. ವಿ. ಸೀ. ಕನ್ನಡ ಸಾಹಿತ್ಯ, ಕನ್ನಡ [illegible] ಯಂತಹ ಬದುಕಿನಿಂದ [illegible]. [illegible] ಪಾಠದ ಪ್ರತಿಭೆಯನ್ನು ಸಹಾಧ್ಯಾಯರಿಂದ, [illegible] ಪಡಿಸುತ್ತಿದ್ದರೆಂಬುದನ್ನು ಅವರ [illegible]. [illegible] ಬದುಕಿನಿಂದ, [illegible] ಸಾಹಿತ್ಯ ರಚನೆಯಿಂದ ಕನ್ನಡ [illegible] ಕನ್ನಡಿಗರ ಮೆಚ್ಚಿಗೆಗೆ ಪಾತ್ರರಾಗಿರುವ ಈ [illegible]. [illegible] ಉಪಾಧ್ಯಾಯರಾಗಿ, ಸಾಹಿತಿಗಳಿಗೆ ಮಿತ್ರರಾಗಿ, ಬಂಧುಗಳಿಗೆ ಪ್ರಿಯರಾಗಿದ್ದಾರೆ. ಸಂಶೋಧಕರಿಗೆ ಸತ್ಯ [illegible] ಮಾರ್ಗದರ್ಶಕರಾಗಿ, [illegible]. [illegible] ಕರರಾಗಿ ಸಾರ್ಥಕ್ಯದಲ್ಲಿ ಬಾಳುತ್ತಿದ್ದಾರೆ.

ರಾಘವರ ಕಾವ್ಯಾಲಾಪ-ಪಕ್ಷಪಾತ*

ಡಾ|| ಮಾಸ್ತಿ ವೆಂಕಟೇಶ ಅಯ್ಯಂಗಾರ್

"ಕಾವ್ಯಾಲಾಪಾಂಶ್ಚ ವರ್ಜಯೇತ್." ಕಾವ್ಯಾಲಾಪಗಳನ್ನು ಬಿಡತಕ್ಕದ್ದು; ಇದು ಹಿರಿಯರ ವಚನ. ಆ ವ್ಯಸನವನ್ನು ಬಿಡತಕ್ಕದ್ದು; ಈ ವ್ಯಸನವನ್ನು ಬಿಡತಕ್ಕದ್ದು; ಹಾಗೆಯೇ ಕಾವ್ಯಾಲಾಪಗಳನ್ನು ಬಿಡತಕ್ಕದ್ದು. ಅದೂ ಒಂದು ವ್ಯಸನವೇ ಎಂದೋ? ಚಟವೋ? ಏತಕ್ಕಾಗಿ ಎಂದಿದೆ. ಚಟವು ಎಂದು ಕಾಣುತ್ತದೆ. ಕಾವ್ಯಾಲಾಪದಲ್ಲಿ ಚಟವು ಬಗೆ ಬೆಳೆಯ ಬಹುದೋ, ಯಾರು ಬಲ್ಲರು? ಹಿರಿಯರು ಈ ಮಾತನ್ನು ಹಿತಕ್ಕಾಗಿಯೇ ಹೇಳಿರಬೇಕು. ಅಂತೂ ಅವರು ಸಜ್ಜನರಿಗೆಲ್ಲ ಕಾವ್ಯಾಲಾಪಗಳನ್ನು ಬಿಡುವುದು ಒಳ್ಳೆಯದೆಂದು ಎಚ್ಚರಿಕೆ ಹೇಳಿದರು.

ಹಿರಿಯರ ಎಚ್ಚರಿಕೆಯ ಮಾತಿಗೆ ಬಗೆದು ನೋಡಿದವರಿಗೆ ಎಷ್ಟು ಸಮಂಜಸವೆಂದು ಕಾಣುತ್ತದೋ ಕೇಳಿದವರಿಗೆ ಅಷ್ಟು ಸಮಂಜಸವೆಂದು ಕಾಣುವುದಿಲ್ಲ. ಸಮಂಜಸವೆಂದು ಕಂಡರೂ ಇದು ನಮ್ಮ ಕಾವ್ಯಾಲಾಪಕ್ಕೆ ಅನ್ವಯಿಸುವುದಿಲ್ಲ ಎಂಬ ಒಂದು ಕಲ್ಪನೆ ನಮ್ಮ ನಮ್ಮ ವಿಷಯಕ್ಕೆ ತೀರಾ ಉಚಿತವಾಗಿರುತ್ತದೆ. ಪೂರ್ವಿಕರ ಎಚ್ಚರಿಕೆಯ ಮಾತನ್ನು ಕೇಳಿದ ಕನ್ನಡದ ಹಿರಿಯ ಕವಿಯೊಬ್ಬನು ಆ ಮಾತು ತನಗೆ ಅನ್ವಯಿಸುವುದಿಲ್ಲವೆಂದು ಭಾವಿಸಿದನು: ತನಗೆ ಸಾಧ್ಯವಾದ, ತನಗೆ ಒಳಿತೆಂದು ತೋರಿದ, ಸಾಹಿತ್ಯವನ್ನು ನಿರ್ಮಿಸಿದನು. ಅದು ಉತ್ತಮ ಸಾಹಿತ್ಯವೆಂದು ಜನರ ಮೆಚ್ಚುಗೆಯನ್ನು ಪಡೆದುದನ್ನು ನೋಡಿದನು; ತನ್ನ ಕಾವ್ಯ ಸಾರ್ಥಕವಾಯಿತೆಂದು ತಿಳಿದನು. ಇಂದು ನಾವು ಆ ಹಿರಿಯ ಕವಿಯ ಸಾಹಿತ್ಯವನ್ನು ಓದುತ್ತೇವೆ; ಅವನ ಹೆಸರನ್ನು ಹೊಗಳಿ ಹೇಳುತ್ತೇವೆ. ಕಾವ್ಯಾಲಾಪಾಂಶ್ಚ ವರ್ಜಯೇತ್? ಏಕೆ? ವರ್ಜಿಸಬೇಕಾದದಿಲ್ಲ. ಅಥವಾ ವರ್ಜಿಸಬೇಕಾದದು ಇಂಥ ಕಾವ್ಯವನ್ನಲ್ಲ. ಲೋಕಕ್ಕೆ ಇಂಥ ಕಾವ್ಯವೂ ಇದರ ಆಲಾಪವೂ ಸರ್ವಕಾಲಕ್ಕೂ ನಿಲ್ಲಲಿ. ಸರ್ವಕಾಲಕ್ಕೂ ನಡೆಯಲಿ: ಜನಗಳ ಬಾಳನ್ನು ಬೆಳಗಲಿ.

"ಇಂಥ ಕಾವ್ಯ; ಇಂಥ ಆಲಾಪ" ಎಂದೆವು. ಆಗಬಹುದು; ಉಳಿದದ್ದು ಕೊನೆಯಾಗಬೇಕಲ್ಲವೆ? ಆದರೆ ಈ ಉಳಿದದ್ದು ಯಾವುದು? ಕಾವ್ಯವನ್ನು ರಚಿಸುವವನೇ "ಇಂಥ ಕಾವ್ಯ" ಎಂದು ನಿರ್ಧರಿಸುವುದಾದರೆ ಲೋಕದಲ್ಲಿ ಹುಟ್ಟುವ ಎಲ್ಲ ಕಾವ್ಯವೂ ಉಳಿಯ

* ಪ್ರಸಂಗ ಗ್ರಂಥದಿಂದ ಆಯ್ದ ಲೇಖನ

ತಕ್ಕದ್ದೇ. "ಯಾರು ಬದುಕು ಲೋಕಕ್ಕೆ ಪ್ರಯೋಜನವಿಲ್ಲವೋ ಅವರು ಆತ್ಮಹತ್ಯೆ ಮಾಡಿಕೊಳ್ಳಿ." ಹೀಗೆಂದು ಒಂದು ಆಜ್ಞೆ ಹೊರಟರೆ ಎಷ್ಟು ಜನ ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ? ನಾನು ಇಷ್ಟು ಲೋಕಕ್ಕೆ ಪ್ರಯೋಜನವಿಲ್ಲ ಎಂದು ಯಾರೂ ಹೇಳುವುದಿಲ್ಲ. ಕೊನೆಯ ಮಾತಿಗೆ ಬಂದರೆ, ನಾನು ಇರುವುದರಿಂದ ನನಗೆ ಪ್ರಯೋಜನವಿದೆ, ನಾನು ಸಾಯಲಾರೆ ಎಂದೇ ಮನುಷ್ಯ ಹೇಳುತ್ತಾನೆ. ಬಾಳು ಸಾರ್ಥಕವಾಗುವುದಕ್ಕೆ ಬೇರೆ ಉದ್ದೇಶ ಬೇಕಿಲ್ಲ. ಬಾಳುವೆಯ ಉದ್ದೇಶ ಬಾಳುವುದಷ್ಟೇ. ಕಾವ್ಯವೂ ಅದರ ಆಲಾಪವೂ ಅಷ್ಟೇ. ಯಾವ ಕವಿಯೇ ಆಗಲಿ, ಯಾವ ಕಾವ್ಯಾಲಾಪಿಯೇ ಆಗಲಿ ತನ್ನ ಕೃತಿ, ತನ್ನ ಆಲಾಪ ನಿಂತರೂ ನಷ್ಟವಿಲ್ಲ ಎಂದು ಹೇಳಲಾರನು. ಎಂಥ ನಿಕೃಷ್ಟ ಕಾವ್ಯವೂ, ಅದರ ಕವಿಯ ಜೀವನ ಸಾರ್ಥಕವಾಗಲು ಒಂದು ಸಾಧನ. ಅದು ಬಾರದೆ ಲೋಕದ ಜೀವನ ಸಂಪೂರ್ಣವಾಗಲಾರದು. ಅದರ ಆಲಾಪವಿಲ್ಲದೆ ಲೋಕದ ಜೀವನ ತುಂಬಲಾರದು. ಅದನ್ನು ವರ್ಜಿಸುವುದು ಒಳ್ಳೆಯದೂ ಅಲ್ಲ; ಸಾಧ್ಯವೂ ಅಲ್ಲ.

ಹಾಗಾದರೆ ಹಿರಿಯರ ವಚನ ಏನಾಯಿತು? ನನಗೆ ತೋರುತ್ತದೆ ಅವರು ಹೇಳಿದ್ದು 'ಕಾವ್ಯಾಲಾಪಾನ್ನವರ್ಜಯೇತ್', ಎಂದು. **ನ** ತಪ್ಪಿ ನಮಗೆ **ಚ** ಇಳಿದು ಬಂದಿದೆ. ಕಾವ್ಯಾಲಾಪವನ್ನು ಬಿಟ್ಟೀಯೆ, ಜೋಕೆ, ಎನ್ನುವುದೇ ಹಿರಿಯರ ಎಚ್ಚರಿಕೆಯ ಮಾತು. ಲೋಕದ ಉದ್ಯಾನದಲ್ಲಿ ಎಲ್ಲ ಹುಲ್ಲೆಸಳಿಗೂ ಅವಕಾಶವಿದೆ. ಇದರಲ್ಲಿ ಯಾವುದು ಇಲ್ಲವಾದರೂ ಜೀವನ ಅಸಮಗ್ರವಾಗುತ್ತದೆ. ಹಾಡಬೇಕೆಂದು ತೋರಿದವನು ಯಾರೂ ಹಾಡದೆ ಇರಬೇಡಿ, ಬೇರೆ ಯಾವುದನ್ನು ಬೇಕಾದರೂ ವರ್ಜಯೇತ್; **ಕಾವ್ಯಾಲಾಪಾನ್ ನ ವರ್ಜಯೇತ್.**

೨

ನಾನು ಈಗ ಈ ಮಾತು ಹೇಳುವುದಕ್ಕೆ ನನ್ನ ಪ್ರಿಯ ಮಿತ್ರರಾದ ಕವಿಮಿತ್ರರ "ಕಾವ್ಯಾಲಾಪ" ಕಾರಣ. ಕವಿ ಮಿತ್ರರು ತರುಣರು ತರುಣಜನ ಸಹಜವಾದ ಉತ್ಸಾಹದಿಂದ ಪ್ರೇರಿತರಾಗಿ ಕಾವ್ಯಸೇವೆ ಮಾಡುತ್ತಿರುವ ಧೀಮಂತರು.* "ಕಾವ್ಯ ಬೇಡ, ಇಂಥ ಕಾವ್ಯ ಬೇಡ, ಬೇರೆ ಅಂಥ ಕಾವ್ಯ ಬೇಡ," ಎನ್ನುವ ಪ್ರಾಜ್ಞಮಾನಿಗಳು ಎಲ್ಲ ಕಾಲದಲ್ಲೂ ಉಂಟು. ಹಿಂದೆ ಇಂಥ ಮಾತನ್ನು ಹೇಳಿದವರು ಯಾರೋ ನಾವು ನಿಷ್ಕರ್ಷೆಯಾಗಿ ಊಹಿಸಿಕೊಳ್ಳುವಂತಿಲ್ಲ. ಅಂದು ಲೋಕವನ್ನು ಹಳಿದವರು ನಿಜವಾದ ಜ್ಞಾನಪರಿಪಾಕದಿಂದ ನಿರೀಹಾವಾದಿಗಳಾಗಿದ್ದರೋ ಬಾಳಲಾರದೆ ಅಜೀರ್ಣದ ಫಲವಾಗಿ ಬಾಳು ಕೆಟ್ಟದೆನ್ನುತಿದ್ದರೋ ನಾವೆಂತು ಬಲ್ಲೆವು? ಇಂದು ಹೀಗೆ ಹೇಳುವವರು ಯಾರು ಎಂದು ತಿಳಿಯಲು ಸಾಧ್ಯ. ಒಬ್ಬ ದೊಡ್ಡ ಮನುಷ್ಯರು ಹೇಳುತ್ತಾರೆ: "ಕಾವ್ಯ ಎಂದರೆ ಬರಿಯ ಪದ್ಯ ಮಾತ್ರವಲ್ಲ. ಗದ್ಯವೂ ಕಾವ್ಯವಾಗಿರಬಹುದು." ಇವರು ಏಕೆ

* 1949ರಲ್ಲಿ ಬರೆದ ಲೇಖನ

ಹೀಗೆ ಹೇಳಬೇಕಾಗಿ ಬಂದಿತು? ಮತ್ತೊಬ್ಬರು ಹೇಳಿದ್ದರು: "ಬರಿಯ ವಚನ ಗ್ರಂಥವನ್ನು ಬರೆದವರು ಕವಿ ಹೇಗೆ?" ಈ ಮತ್ತೊಬ್ಬರ ತಪ್ಪು ತಿಳುವಳಿಗೆಯನ್ನು ತಿದ್ದುವುದಕ್ಕಾಗಿ ಆ ಮೊದಲನೆಯವರು ತಮ್ಮ ಮಾತನ್ನು ಹೇಳಬೇಕಾಯಿತು. ಮತ್ತೊಬ್ಬರು ಹೇಳಿದರು: "ಈ ರಾಮಾಯಣ ರಾಮಾಯಣ ಎನ್ನುವವರ ರಾಮಾಯಣ ಸಾಕಪ್ಪಾ ಸಾಕು. ಎಲ್ಲಿ ನೋಡಿದರೂ ರಾಮ ಸೀತೆ!" ಇವರು ಏಕೆ ಹೀಗೆಂದರು? ಇವರು ಹೊಸ ಕಾಲದ ಉತ್ಸಾಹಿಗಳು: ಅದಕ್ಕೆ ಹೊಂದಿಕೆಯಾಗದ ಕೆಲಸದಲ್ಲಿ ಇವರಿಗೆ ಬೇಸರ. ಸರಿ. ನ್ಯಾಯವೇ. ಇವರು ಹೇಳುವ ಮಾತಿನಲ್ಲೂ ಅರ್ಥವಿದೆ. ರಾಮಾಯಣ ಬೇಡವೇ ಬೇಡ ಎಂದು ಇವರ ಅಭಿಪ್ರಾಯವಲ್ಲ, ಬರಿಯ ಅದೇ ಬೇಡ, ಹೊಸದು ಮುಂದಾಗಲಿ, ಎಂದು ಇವರ ಬಯಕೆ. ಇನ್ನೊಬ್ಬರು ಹೇಳಿದರು: "ಪದ್ಯ ಬರೆಯುವುದು ಸುಲಭ, ಗದ್ಯ ಕಷ್ಟ. ಪ್ರಾಸವಿಟ್ಟರೆ ಪದ್ಯವಾಯಿತು; ಪ್ರಾಸವಿಲ್ಲದೆ ಸೊಗಸು ತರುವುದಲ್ಲವೇ ಕಷ್ಟ !" ಸರಿ: ಇವರು ಪದ್ಯ ಬರೆಯುವುದಿಲ್ಲ. ಗದ್ಯ ಬರೆಯುತ್ತಾರೆ, ಚೆನ್ನಾಗಿ ಬರೆಯುತ್ತಾರೆ. ಅದನ್ನು ಬರೆಯುವುದರಲ್ಲಿ ಎಷ್ಟು ಕಲೆಯಿದೆ ಎನ್ನುವುದನ್ನು ಜನಕ್ಕೆ ತಿಳಿಸುವುದಕ್ಕಾಗಿ ಈ ಮಾತನಾಡಿದಾರೆ. ಮಗುದೊಬ್ಬರು ಹೇಳುತ್ತಾರೆ: "ಈಗಿನ ಪದ್ಯಕ್ಕೆ ಪ್ರಾಸವೂ ಬೇಕಿಲ್ಲ. ಆದ್ದರಿಂದ ಅದು ಮತ್ತಷ್ಟು ಸುಲಭವಾಗಿದೆ." ಇದು ಹೇಗೆ? ಹೇಗೂ ಅಲ್ಲ; ಮಾತು ತಪ್ಪು. ಹಾಗಾದರೆ ಇಂಥ ಮಾತನ್ನು ಇವರು ಏಕೆ ಹೇಳಿದರು? ಏನೋ. ಹಾಗೆ, ಹೇಳಿದರು. ಇಲ್ಲವೇ ಪದ್ಯದ ಸಂಗತಿ ತಿಳಿಯದು. ಇಲ್ಲವೇ ಏನೋ ಬೇಸರದ ಹೊತ್ತಿನಲ್ಲಿ ಹೇಳಿದರು. ಹೇಳಿದ ಮಾತಿಗೆಲ್ಲ ಅರ್ಥ ಹುಡುಕಿದರೆ ಯಾರು ತಾನೇ ಬದುಕಬಹುದು ? ಇಂಥ ನೂರು ವಿವರಕ್ಕೆ ಕವಿ ಮಿತ್ರರು ತಮ್ಮ ಪದ್ಯಗುಚ್ಛದಲ್ಲಿ ಸಮಾಧಾನ ಹೇಳಿದ್ದಾರೆ. ಅದನ್ನು ಸುಂದರವಾಗಿ ಹೇಳಿದಾರೆ.

ಯಾರಾದರೂ, ತಮ್ಮೊಬ್ಬರ ಮಾತೇ ಮಾತು ಉಳಿದವರ ಮಾತನಾಡಬೇಡ, and when I open my lips let no dogs bark–ಎನ್ನುವರೋ:

ನಾಲ್ಕು ಗೋಡೆಯನಡುವೆಕುಳಿತು, ನೋಡದೆ ಹೊರಗೆ
ತನ್ನ ಠಾವೇ ಸರ್ವಲೋಕವೆಂದೆಣಿಸಿ,
ಲೋಕನಾಯಕ ತಾನು, ತನಗೆ ಸಮನಾರಿಲ್ಲ.
ಎಂದೆಂಬ ಬರಿ ಬಯಲು ಭ್ರಾಂತಿ ಏಕೆ?

* * *

ತಾನುನುಡಿದುದೆವೇದ, ತಾನು ನಡೆದುದೆ ಮಾರ್ಗ
ತಾನು ಕಂಡುದೆ ಸತ್ಯವೆಂಬ ಹಮ್ಮೇಕೆ ?

[illegible] ಕಲಿಯುಗದ [illegible]
ಎಂದೆಂಬ ಬಡಿವಾರ ಬಿಂಕ ಬಿಮ್ಮೇಕೆ ?

[illegible] ಬೇಡ, [illegible] ಬೇಡ ಎಂದು [illegible] ಹಳೆಯ ದನ್ನೆಲ್ಲ ಅಲ್ಲಗಳೆಯುವರೋ ?

ಹಳೆಯದೆಲ್ಲವು ಹೊಲ್ಲ, ಹಾಕು ಬೆಂಕಿಗೆ ಎಲ್ಲ.
ಹೊಸದೊಂದನಲ್ಲದೆನುವೀ ಕೂಗು ಏಕೆ ?

* * *

ಬಳಗೆ ಹೂರಣವಿರಲು ಹಳತೇನು ಹೊಸತೇನು ?
ಕಾಲಪುರುಷನಿಗಿಲ್ಲ ಆದರ ತಂಟೆ.

* *

ರಾಮಾಯಣದ [illegible], ಭಾರತದ [illegible],
ಎಂದೆನಲು ಅವು ಬರಿಯ ಹಾಳೆ ಕಟ್ಟೆ ?
ಆ ಮಹಾಕಾವ್ಯಗಳು ನಮ್ಮ ಜನ ಜೀವನದ
ಹಾಸುಹೊಕ್ಕವ ತೆಗಳೆ ಸೀನೆ ಕೆಟ್ಟೆ.

* * *

ಹೊಸಮನೆಯ ಕಟ್ಟುವೊಡೆ ಕಟ್ಟಿಕೊಳು: ಅದಕಾಗಿ
ಹಾಳುಮನೆಗಳನೆಲ್ಲ ಕುಟ್ಟಿ ಕೆಡಹು:
ಹೊಸದೆಂಬ ಮೋಹದಲಿ ಹಳೆಯ [illegible]
ಒಡೆಯದಿರು; ಕೇಳು ಅವು ನಾಡ ತೊಡವು.

[illegible] ಉಪಯೋಗಕ್ಕೆ ಬರುವ ಸಾಹಿತ್ಯ ಬೇಕು, ಬರಿಯ ಸುಖಕ್ಕೆ ಬರಿಯ ಸೌಂದರ್ಯಕ್ಕೆ [illegible] "ಕೇವಲ" ಸಾಹಿತ್ಯ ನಮಗೆ ಬೇಡವೆನ್ನುವ [illegible] ?

[illegible]
ಎಲ್ಲ ತೋಟಗಳಲ್ಲು ಬೆಳೆಯಬಹುದೆ ?
ಬಾಳಿಗೇನುಪಯೋಗ ಹೂಗಳೆಂದೆನುತೆಲ್ಲ
ಹೂಗಿಡಗಳನು ಕಿತ್ತು ಬಿಸುಡಬಹುದೆ ?

* * * *

ಹೊರಗೆ ಬಾ ಸಾಹಿತಿಯೆ; ಬಡತನವನಪ್ಪುಕೈ;
ಬಡವರೊಡನಿರು ನೀನು ಬಡವನಾಗಿ;

* * *

ಹಾಡು ನಾಟಕ ಕಥಾ ಕಾದಂಬರಿಯು ಬರೆದು
ಅವರಿಗನ್ನವ ಕೊಡುವ ಮಾತು ಲೊಟ್ಟು.

ಕವಿಮಿತ್ರರ ಮಾತು ಅಲ್ಲಲ್ಲಿ ಬಿರುಸಾಗಿದೆ. ಅಲ್ಲಲ್ಲಿ ರಸದ ಕ್ಷುರಧಾರೆಯ ಎಲ್ಲೆಯನ್ನು ದಾಟಿದ ಕಾವನ್ನು ತೋರುತ್ತಿದೆ. ಈ ಬಿರುಸು ಈ ಕಾವಿಂದ ಬಿಡಿಸಿಕೊಂಡಿದ್ದರೆ ಚೆನ್ನಾಗಿತ್ತು. ವಾದ ಕಾವ್ಯವಾಗುವುದಕ್ಕೆ ಇವು ಅಡ್ಡಿಯಾಗುತ್ತವೆ. ಇವುಗಳಿಂದ ಬಿಡಿಸಿಕೊಂಡ ಹೇಳಿ ವಾದದಲ್ಲಿ ರಸ ಜಿನಿಯುತ್ತದೆ. ಕವಿಮಿತ್ರರಿಗೆ ಕಾವ್ಯದ ರಸ ದೂರದ ವಸ್ತುವೇನಲ್ಲ. ಈ ಪದ್ಯ ಗುಚ್ಛದ ನಾಲ್ಕಾರು ಪದ್ಯಗಳಲ್ಲಿ ಇವರ ಕಾವ್ಯಹೃದಯ ರೂಪುಗೊಂಡಿದೆ.

ಓ ಪ್ರಕೃತಿದೇವಿ, ಪ್ರಪಂಚ ಪಂಚಪ್ರಾಣೆ,
ಸೃಷ್ಟ್ಯಾದಿ ಸಂಭೂತೆ, ಲೋಕಮಾತೆ,
ಓ ರುದ್ರ ರಮಣೀಯೆ, ಶಕ್ತಿಸ್ವರೂಪಿಣಿಯೆ,
ನಿತ್ಯ ನೂತನೆ ವರದೆ ನಾಶರಹಿತೆ.
ನೀಲಿ ಮೇಘವೆ ಕುರುಳು, ತಾರೆಗಳೆ ಮುಡಿಹೂವು
ಸೂರ್ಯ ಚಂದ್ರರೆ ಕಣ್ಣು, ನೆಲವೆ ಒಡಲು
ಸಾಲು ಬೆಟ್ಟಗಳೆಲ್ಲ ಕಾಲು ಕೈಗಳು ನಿನ್ನ,
ಹೊದಿಕೆ ಹಾಸುಗೆ ನಿನಗೆ ಬಾನು ಕಡಲು.

ಈ ಪದ್ಯಗಳು ಕಾವ್ಯದ ಒಂದು ಅನಿರ್ದೇಶ್ಯವಾದ ಆದರೂ ಬುದ್ಧಿಗೋಚರವಾದ ಲಕ್ಷಣದಿಂದ ಕೂಡಿವೆ. ಕವಿಮಿತ್ರರು ವಾದ ಸರಣಿಯಲ್ಲಿ ಇಂಥ ಮಾತನ್ನು ತಂದಿರುವುದರಿಂದ ಓದುವವರಿಗೆ ಇವರು ಬರಿಯ ಒಂದು ಪಕ್ಷದ ರಕ್ಷಣೆಗಾಗಿ ವಾದಿಸುತ್ತಿರುವ ವಾದಿ ಮಾತ್ರವಲ್ಲ; ಆ ಪಕ್ಷ ಯಾವುದು ಎಂಬುದನ್ನು ತಮ್ಮದೇ ಅನುಭವದಿಂದ ಬಲ್ಲ ಒಬ್ಬ ಕವಿ ಎನ್ನುವುದು ಸ್ಪಷ್ಟವಾಗುತ್ತದೆ. ಕವಿಗಳಲ್ಲದವರು ಕಾವ ಜೀವವನ್ನ ಬಹುದು. ಕವಿಗಳಾದವರಿಗೆ ಇದು ಸಾಧ್ಯವಲ್ಲ. ಕಾವ್ಯಾಲಾಪವನ್ನೂ ಬಿಡಬೇಕೆ? ನಿಜವಾಗಿ? ಹಾಗಾದರೆ ಇನ್ನು ಜೀವದಿಂದ ಇರಬೇಕೆ? ಕವಿಯಾದವನಿಗೆ ಕವನ ಜೀವಕ್ಕೆ ಉಸಿರಂತೆ. ಕವಿ ಕವಿಯೇ ಆದರೆ ಕಾವ್ಯಾಲಾಪಾನ್ ನ ವರ್ಜಯೇತ್.

೩

ಕವಿಮಿತ್ರರಂಥ ತರುಣ ಕವಿಗಳಿಗೆ ಇದು ಒಂದು question of life and death ಉಳಿವು ಅಳಿವಿನ ಸಮಸ್ಯೆ. To be or not to be, that is the question. ಬರೆಯುವುದೆ, ಬಿಡುವುದೇ? ಬಿಟ್ಟು ಉಳಿಯುವುದೆಂತು?

ಮಾವು ನೇರಿಳೆ ನಿಂಬೆ ಕಿತ್ತಳೆ ಜಕ್ಕೋತ
ದಾಳಿಂಬೆ ಚಂದೆಂಗು ಹಲಸು ಬೇಲ
ಬೇವು ಬೂರಗ ಬಸಿರಿ ಸುರಗೆ ಸಂಪಗೆ ಸಾಲ
ಆಲ ಪಣಿಯಾಲ ತಂಪಿನ ತಮಾಲ.

ಈ ಮಾತಿನ ಜೋಡಣೆಯನ್ನು ನೋಡಿ. ಮಾತನ್ನು ಹೀಗೆ ಜೋಡಿಸಬಲ್ಲವನು ಅದನ್ನು ಜೋಡಿಸದೆ ಬಾಳಲಾರನು. ಇದು ಹೊರಕ್ಕೆ ಮಾತಿನ ಜೋಡಣೆ. ಅದಕ್ಕೆ ಮೊದಲು ಅವನ ಹೃದಯದಲ್ಲಿ ಒಂದು ವಸ್ತು ಸಂಯೋಜನೆ ಆಗಿದೆ. ಅದರ ಹಿಂದೆ ಅವನ ಜೀವದಲ್ಲಿ ಆ ಸ್ವರಗಳ ಸಂಬಂಧದಿಂದ ಒಂದು ಆನಂದ ಉಂಟಾಗಿರುತ್ತದೆ. ಕಿವಿಗೆ ಇಂಪಾಗಿ ಬೆರೆಯುವ ಈ ಸ್ವರಗಳಿಂದ ಕೂಡಿದ ಆ ಪದಗಳಿಂದ ನಿರ್ದಿಷ್ಟವಾದ ವಸ್ತು ನಿಚಯ ಅದಕ್ಕೆ ಬೇರೆ ಒಂದು ಆನಂದವನ್ನು ಉಂಟು ಮಾಡಿದೆ. ಹಲಸು, ಬೇವು, ಬೇಲ, ಸಾಲ, ಆಲ, ತಮಾಲ; ಈ ಸಂಪೃಕ್ತವಾಗರ್ಥ ಈಜೀವವನ್ನು ನಲಿಸಿವೆ. ಅದರಿಂದಲೇ ಆ ಜೀವ ಈ ಮಾತುಗಳನ್ನು ನುಡಿದು ನಮ್ಮನ್ನು ನಲಿಸಬಯಸಿತು. ಆ ನಲಿವು ನಿಜವಾದದ್ದರಿಂದ ತನ್ನ ಯತ್ನದಲ್ಲಿ ಸಿದ್ಧಿಯನ್ನು ಪಡೆಯಿತು. ಇಂಥ ಉಸಿರಿಗೆ ಕವಿತೆ ಸಹಜಕರ್ಮ, ಅವಶ್ಯಕರ್ಮ.

ಈ ಸಹಜವಾದ ಅವಶ್ಯವಾದ ಕಾವ್ಯಪ್ರೇರಣೆಯ ಬಗ್ಗೆ ನಾನು ಕವಿಮಿತ್ರರನ್ನು ಅಭಿನಂದಿಸುತ್ತೇನೆ. ಇದೇ ಸಂದರ್ಭದಲ್ಲಿ ಕವಿಮಿತ್ರರ ಕಾವ್ಯಜೀವನದ ಇನ್ನೊಂದು ಫಲವನ್ನು ಕಾವ್ಯಪ್ರೇಮಿಗಳ ದೃಷ್ಟಿಗೆ ತರಲು ಬಯಸುತ್ತೇನೆ. 'ಕಾವ್ಯಾಲಾಪ'ದ ಕವಿಮಿತ್ರರು "ಹಕ್ಕಿ ಹಾಡಿ"ನ ರಾಘವರು, ನಮಗೆಲ್ಲ ಪ್ರಿಯರಾದ ಶ್ರೀ ವೈ. ಎಂ. ಸೀತಾರಾಮಯ್ಯನವರು. ಇದು ನಮ್ಮಲ್ಲಿ ಅನೇಕರಿಗೆ ತಿಳಿದಿರಬೇಕು. ಶ್ರೀ ಸೀತಾರಾಮಯ್ಯನವರು ಎಳೆತನದಿಂದ ಕಾವ್ಯದೇವಿಯ ಆರಾಧನೆ ಮಾಡಿರುವ ಸಾಧಕರು. "ಹಕ್ಕಿಹಾಡು" ಈ ಸಾಧನೆಯ ದಾರಿಯನ್ನು ಗುರುತಿಸುತ್ತದೆ; ಹಾಗೆಯೇ ಇವರ ಜೀವನದ ಹಲವಾರು ಭಾವ ಅನುಭವಕ್ಕೆ ರೂಪನ್ನು ಕೊಟ್ಟಿದೆ. ಕವಿ ತಾನೊಂದು ಕಿರುಗೊಡರು ಎಂದು ಹೇಳಿಕೊಳ್ಳುತ್ತಾನೆ. ಅದರ ಕುಡಿ ದೇವರಿಂದ ಬಂದಿದೆಯೆಂದು ಅವನು ಬಲ್ಲನು. ಈತನಿಗೆ ಕರುನಾಡು ತನ್ನ ಮನೆಯೆಂಬ ಸಂತೋಷ, ಹೆಮ್ಮೆ, ಉಂಟು.

ಹೊಂಗೆಯ ತಳಿರ ತೊಂಗಲ ತೋರಣ
ಸೌರಭ ಸೂಸುವ ಮಂದ ಸಮೀರಣ
ಕಲರವ ಕೂ ಕೂ ಕೋಕಿಲ ಗಾನ
ಸರ್ವ ಸುಖದ ಬೆಳೆ, ನೆಲೆ, ಈ ನಾಡು,
ಈ ಕರುನಾಡಿದು ನನ್ನ ಮನೆ,
ನನ್ನ ಮನೆ, ಇದು ನನ್ನ ಮನೆ.

ಅರಳಿಮರ ತಳಿತಿದೆ, ತಳಿರು ಕವಿಗೆಹೊಸಬಾಳ ಸರ್ವ ವಿಜಯಿಯಾದ ಸತ್ವದ ಗುರುತಾಗಿ ಕಾಣುತ್ತವೆ. ಚಿಟ್ಟೆಯೊಂದು. ಕವಿ ಅದರ ಓಟವನ್ನು ನೋಡಿದನು. ಯಾರಿಗೂ ಚೆನ್ನ ಈ ನೋಟ ನೋಡುವುದಕ್ಕೆ. ಕವಿಗೆ ಚಿಟ್ಟೆ ಹಾರಾಡುವ ಒಂದು ಹೂವಿನಂತೆ ಕಂಡಿತು. ತಂಗಿ ದಾಳಿಂಬೆ ಹೂವನ್ನು ಬಯಸಿದಳು. ಕವಿಗೆ ಅದನ್ನು ಕಿತ್ತುಕೊಡಲು ಮನಸ್ಸಿಲ್ಲ. ಗಿಡದಿಂದ ಕೀಳುವುದೇ ಎಂದು. ಹೂ ತಾನೇ ಉದುರಿತು. ತಂಗಿ ತೆಗೆದು ಕೊಂಡಳು, ನಲಿದು ಕುಣಿದಳು. ಹೂವನ್ನು ಕೀಳಲು ಕವಿಗೆ ಮನಸ್ಸಿಲ್ಲ. ಆ ಹೂ ತನ್ನನ್ನು ತಾನೇ ಕೊಟ್ಟು ಕೊಂಡಿತು. ಇಂಥದೇ ಇನ್ನೊಂದು ಸಂದರ್ಭ.

ನೆರೆಯ ಮನೆಯಂಗಳದ ಮಲ್ಲಿಕಾ ಕುಸುಮ ಅದು
ಅದ ಕೊಯ್ದು ಹಿಡಿಯಲೇಕೆಳಸುತಿರುವೆ?
ಇದೊ ವಸಂತದ ಗಾಳಿ ಅದರ ಕಂಪನು ಕೊಂಡು
ತಂದೀಯುತಿದೆ; ಏಕೆ ಹೂವ ಬಯಕೆ?

ಎಷ್ಟು ಒಳ್ಳೆಯ ಮಾತು? ಹೂವಷ್ಟೇಯೋ, ಮತ್ತೇನಾದರೂವೋ? ಹೇಗೋ ನಮಗೇನು? ಆಸೆ ಬೇಕು, ಅಂತೇ ಸಂಯಮ ಬೇಕು, ಎಂದು ಕವಿ ಹೇಳಿದ್ದಾನೆ. ಕವಿಯ ಗುರಿ ಬರಿಯ ಕಾವ್ಯ ಸುಖವಲ್ಲ ಜೀವನದ ಕ್ಷೇಮವೂ ಹೌದು. ಇನ್ನೊಂದು ಸಲ ಇನ್ನೊಂದು ಚಿಟ್ಟೆ; ಅಂದು ಹಾರುವ ಹೂ ಇಂದು ಮಡಿದುಬಿದ್ದಿದೆ.

ಬಿಸಿಲಿನಲಿ ಬೆಂದೆಯೋ ಯಾರಿಂದ ನೊಂದೆಯೋ,
ಮಡಿದು ಬಿದ್ದುರುಳಿರುವೆ ನೆಲದ ಮೇಲೆ:
ಕುಸುಮಗಳ ಮೃದು ತಲ್ಪದಲಿ ಮಲಗುತಿಹ ನಿನಗೆ
ಹುಡಿಮಣ್ಣು ಹಾಸುಗೆಯೆ? ಈ ಗತಿಯೆ ಕೊನೆಗೆ?

ಈ ಕನಿಕರವೂ ಕವಿಯದೆ. ಕೋಗಿಲೆ ಕರೆಯುತ್ತದೆ. ಕವಿ ಅದನ್ನು "ನನ್ನ ಹರುಷದಲಿ ಕೂಗಿ ಹರುಷ ಹೆಚ್ಚಿಸು, ನನ್ನ ಕೊರಗಿನಲ್ಲಿ ಕೂಗಿ ಕೊರಗ ನುಚ್ಚಿಸು; ನೆಚ್ಚಿನೆಡೆ ಕೆಚ್ಚುಕೊಡು ಜಡತೆ ತೊಲಗಿಸು" ಎನ್ನುತ್ತಾನೆ. ಒಂದಿರುಳು; ಬೆಳದಿಂಗಳು ಸುರಿಯುತ್ತಿದೆ; ಕವಿ

ಸುಧೆ ಸುರಿಯುವ ತಿಂಗಳ ಕಳೆ ;
ನೀಲಿಯ ತಿಳಿ ಬಾನು :
ಕೆಳಗಿದೊ ನೆರೆ ಮಲಗಿದ ಇಳೆ ;
ಒಬ್ಬನೆ ಸುಖಿ ನಾನು.
ಎನಗಮೃತವು ತಿಳಿ ಜೊನ್ನ
ನಾನದ ಕುಡಿಯುವೆನು
ಅಮರತ್ವವನಿಗೊ ಮುನ್ನ
ನಾನಿಲ್ಲಿಯೆ ಪಡೆಯುವೆನು,

ಎನ್ನುತ್ತಾನೆ. ಸಂಜೆಬಾನ ಚೆಲುವನೋಟ. ಸ್ವಪ್ನದಲ್ಲಿ ನಲಿಯುತ್ತಿದೆ. ಆದರೇನು ? ಚಣವೆ ಸಾಕು ಚೆಲುವಿನ ನೋಟ. ಎಂದು ಕೇಳುತ್ತಾರೆ. "ಬುವಿಯನು ಬಾನಿಗೆ ಬಿಗಿಯುವ ಕೊಂಡಿ : ಬಾನಿಂದಾಚೆಯ ಬೆಳಕಿನ ಕಂಡಿ" ಎಂಥ ಉತ್ಪ್ರೇಕ್ಷೆ. ಚಮತ್ಕಾರ ಹೌದು : ಆದರೆ ಬರಿಯ ಚಮತ್ಕಾರ ಅಲ್ಲ. ಈ ಕವಿ ಬರಿಯ ಸುಖದ ಕವಿ ಮಾತ್ರವಲ್ಲ. ಆ ಸತ್ತ ಚಿಟ್ಟೆಯಿಂದಲೇ ಇದು ಕಂಡಿರಬೇಕು. "ಗೋಳು" ಪದ್ಯ ಇದನ್ನು ಇನ್ನೂ ಸ್ಪಷ್ಟಮಾಡುತ್ತದೆ. "ನನ್ನ ಹಿಂದಿನ ದಿನದ ಆಸೆ ಕನಸುಗಳು ಇನ್ನೆಲ್ಲಿ ಯಾವೆಡೆಗೆ ಓಡಿಹೋಗಿಹವು ? ಚಳಿಗಾಲದಿರುಳಿನಲಿ ಮಿನುಗು ಹುಳುವೆಲ್ಲ ಸುಳಿ ಸುಳಿದು ಅಳಿವಂತೆ ಇಳೆಯ ಬಾಳೆಲ್ಲ." ಈ ಕವಿ ನೋವನ್ನೂ ಬಲ್ಲ ಕವಿಯೂ ಹೌದು. "ಒಳದನಿ" ಇದನ್ನು ಸ್ಪಷ್ಟಪಡಿಸುತ್ತದೆ. ಇವನಿಗೆ ಬಡತನದ ಬೇನೆಯು ಅರಿವಾಗಿದೆ. "ಬೀದಿಯೊಳಗಲೆಯುತಿಹಳಾರಿವಳು ?" ಹಾಗೆಯೇ,

ಕವಳ ತಾಯಿ, ಕವಳ ತಾಯಿ,
ಕವಳ ತಾಯಿ, ಕವಳ ತಾಯಿ.
ಬಂದನದೋ "ಕವಳ ತಾಯಿ."
ಎಂಜಲುಣುವ ಇರುಳ ನಾಯಿ.

"ಕವಳ ತಾಯಿ" ಹೆಸರಾಗಿರುವುದು ಆಶ್ಚರ್ಯವಲ್ಲ: ಅದನ್ನು ಕಂಡದ್ದು ಈ ಕವಿಯ ವಿಶೇಷ ಗುಣ. ಹಾಗೆಯೇ ಕವಿ ಹಣವಂತರಿಗೆ ಎಚ್ಚರಿಕೆ ಹೇಳುತ್ತಾನೆ. ಸಮಾಜದ ಇನ್ನಿತರ ಕೇಡನ್ನು ಕವಿ ಬಲ್ಲನು. ಬಾಳ ಬೇನೆ ಸಾವು ನೋವು. ಕವಿಯಾದವನ ಮನಸ್ಸನ್ನು ತಮ್ಮಲ್ಲೇ ನಿಲ್ಲಿಸಿಕೊಳ್ಳುವುದಿಲ್ಲ. ಮುಂದಕ್ಕೆ ಒಯ್ಯುತ್ತವೆ. ಈ ಕವಿಯ ಮನಸ್ಸನ್ನು ದೈವದ ಕಡೆಗೆ ಒಯ್ದಿವೆ. ಕವಿ ದೇವರನ್ನು "ನಿನ್ನನರಿಯುವ ತೆರನ ತೋರು ದೇವ" ಎಂದು ಬೇಡಿದ್ದಾನೆ. ಇದು ಇಂಥ ಸ್ವಭಾವಕ್ಕೆ ಸಹಜ. ಲೋಕದ ಸ್ಥಿತಿಗತಿಯನ್ನು ತೀವ್ರವಾಗಿ ಗ್ರಹಿಸುವ ಮನಸ್ಸು ಅಷ್ಟೇ ತೀವ್ರವಾಗಿ ಮಾನವನ ಅಸಹಾಯಕತೆಯನ್ನು ಗ್ರಹಿಸುತ್ತದೆ: ಅಷ್ಟೇ ತೀವ್ರವಾಗಿ ಅದನ್ನು

ಪಾಟೀಲು ಯತ್ನಮಾಡುತ್ತವೆ; ಬರಿ ಒಬ್ಬನ ಯತ್ನದಲ್ಲಿ, ಬರಿ ಮಾನವ ಯತ್ನದಲ್ಲಿ ಅದಕ್ಕೆ ನಿವಾರಣೆಯನ್ನು ಕಾಣದೆ ತೊಳಲುತ್ತದೆ; ಎಲ್ಲವನ್ನೂ ನಡೆಸುತ್ತಿರುವ ಶಕ್ತಿಯನ್ನು ಮೊರೆಹೊಗುತ್ತದೆ. ಇದು ಹಿಂದೆ ಎಷ್ಟೋ ಸಲ ಅನುಭವಕ್ಕೆ ಬಂದಿದೆ. ಇಂದೂ ಮುಂದೂ ಅನುಭವಕ್ಕೆ ಬರತಕ್ಕದ್ದಾಗಿದೆ.

"ಪಕ್ಷಿ ಹಾಡು" ಉದ್ದಕ್ಕೂ ಒಂದು ಮಟ್ಟದಲ್ಲಿಲ್ಲ. ಇದು ಸಾಧ್ಯವಲ್ಲ. ಅಲ್ಲಲ್ಲಿ ಮಾತು ಬೇರೆಯಾಗಿರಬಹುದಾಗಿತ್ತೆನಿಸುತ್ತದೆ. ಆದರೆ ಒಟ್ಟಿನಲ್ಲಿ ಇದು ಒಳ್ಳೆಯ ಕೃತಿ. ಕನ್ನಡಕ್ಕೆ ಇಂಥ ಕವಿತೆ ಬೇಕು. ಸಾಹಿತ್ಯ ಸದ್ಯದಸಮಸ್ಯೆಗಳಿಗೆ ನಿವಾರಣೆ ತರಬೇಕೆನ್ನುವ ಪೀರವಾದಿಗಳು ಕೂಡ ಇಂಥ ಕೃತಿ ಬೇಡವೆನ್ನಲಾರರೆಂದು ನಾನು ಭಾವಿಸುತ್ತೇನೆ. ಬಡತನ ಕೆಟ್ಟದು, ಹಸಿವು ಕೆಟ್ಟದು, ಆದರೆ ನಾಡಲ್ಲಿ ಬಡತನ ಹಸಿವು ಇವೆಯೆಂದು ಬೆಳದಿಂಗಳನ್ನು ನೋಡಲೇಬಾರದೆನ್ನಬಹುದೇ? ಅನ್ನವನ್ನು ಗಳಿಸಬೇಕು. ಹಾಗೆಯೇ ನಮ್ಮ ಬಾಳ ಎಲ್ಲ ಪ್ರವೃತ್ತಿಗಳನ್ನೂ ಗಳಿಸಬೇಕು. ಮೊದಲು ಹಣ, ಆಮೇಲೆ ಬೆಳದಿಂಗಳು, ಎನ್ನುವುದು ಬಾಳ ಸೂತ್ರವಾಗಲಾರದು. ಬೆಳದಿಂಗಳು ಹೂವು ತಂಗಾಳಿ for princes and rich men only ಎಂದೇನೂ ವಿಧಿಸಲಾಗಿಲ್ಲ. ಬಾಳು ಹಸನಾಗಬೇಕು. ಎಲ್ಲ ದಿಕ್ಕಿನಲ್ಲೂ ಹಸನಾಗಬೇಕು. ಲೋಕವನ್ನು ನೋಡುವುದು ಒಂದು ದಿಕ್ಕು. ಲೋಕದ ಚೆಲುವನ್ನು ಮಾತ್ರವಲ್ಲ? ಅಲ್ಲ: ಅದರ ಕಷ್ಟವನ್ನೂ. ಹಾಗೆಯೇ ಲೋಕದ ಕಷ್ಟವನ್ನು ಮಾತ್ರವಲ್ಲ: ಅದರ ಚೆಲುವನ್ನು ಸುಖವನ್ನು. ಜೀವನವನ್ನು ಸಮಗ್ರವಾಗಿ ನೋಡಬೇಕು; ಜೀವನವನ್ನು ಸಮಗ್ರ ಮಾಡಬೇಕು. ಇದು ಎಲ್ಲರ ಗುರಿ. ಇದನ್ನು ಕವಿ ಮೊದಲು ತಾನು ಮಾಡಬೇಕು, ಇತರರಿಗೆ ಆಮೇಲೆ ತೋರಿಸಿಕೊಡಬೇಕು. "ರಾಘವರು" ಇದನ್ನು ಯತ್ನಿಸಿದ್ದಾರೆ.

ಲೋಕಜೀವನದ ವೀಣೆ, ನಾಡುಗಳ ಜೀವನದ ವೀಣೆ, ವ್ಯಕ್ತಿಗಳ ಜೀವನದ ವೀಣೆ ಶ್ರುತಿಯಾಗುತ್ತಿವೆ, ಶ್ರುತಿ ಸಡಿಲುತ್ತಿವೆ. ಶ್ರುತಿಯಾಗುತ್ತಿರುವಂದು ಟೊಯ್ ಟೊಯ್ ಗೊಯ್ ಗೊಯ್ ಎಂದು ಅಪಸ್ವರ ಹೊರಡುತ್ತಲೇ ಇರುತ್ತದೆ. ಸ್ವರ ಸೇರಿದ ಮೇಲೆ ಸಂಗೀತ ಬರುತ್ತದೆ. ಶ್ರುತಿ ಮಾಡುತ್ತಿರುವ ಹೊತ್ತಿನಲ್ಲಿ, ಇದೇನು ಈ ಹೊಲಸು ಅಪಸ್ವರ, ಎಂದು ಬೇಸರಪಟ್ಟು ಪ್ರಯೋಜನವಿಲ್ಲ. ಕಾವ್ಯ ಇದುವರೆಗೆ ಮಾಡಿದ ಕೆಲಸ ಸಾಲದು. ಮುಂದೆ ಎಷ್ಟು ಮಾಡಿದರೂ ಸಾಲದೇ ಹೋಗಬಹುದು. ಶ್ರುತಿಯಾಗಿದೆಯೆಂದು ಕೆಲವು ವೇಳೆ, ಶ್ರುತಿಯಾಗಲಿ ಎಂದು ಕೆಲವು ವೇಳೆ ಕವಿಗಳು ದನಿಯನ್ನು ಎತ್ತಿದ್ದಾರೆ. ಯಾರನ್ನೂ ನೀವು ಹಾಡುವುದು ಬೇಡ ಎನ್ನುವುದು ಬೇಡ. ವೀಣೆ ಈಗಲೇ ಶ್ರುತಿಯಾಗಿರಬಹುದು. ಇಲ್ಲ ಮುಂದೆ ಶ್ರುತಿಯಾಗಬಹುದು. ಅದು ಹೇಗಾದರೂ ಅದರಿಂದ ಸ್ವರ ಹೊರಡುತ್ತಿರಬೇಕು. ಕವಿಗಳು ಹಾಡಲಿ; ಕವಿಮಿತ್ರರು ಕೇಳಿರಿ; ಏನನ್ನೇ ಆಗಲಿ ವರ್ಜಯೇತ್; ಕಾವ್ಯಾಲಾಪಾನ್ ಸವರ್ಜಯೇತ್.

ರಾಘವ ಅವರ ಕಾವ್ಯ - ಒಂದು ಒಟ್ಟು ನೋಟ

ಡಾ|| ರಂ.ಶ್ರೀ. ಮುಗಳಿ

ರಾಘವ ಎಂಬ ಕಾವ್ಯನಾಮದಿಂದ ಹೆಸರಾದ ಶ್ರೀ ಎಂ.ವಿ. ಸೀತಾರಾಮಯ್ಯನವರ ಕಾವ್ಯನಿರ್ಮಿತಿ ಕಳೆದ ಐವತ್ತು ವರ್ಷಗಳಿಂದ ನಡೆದು ಬಂದಿದೆ. 'ಹಕ್ಕಿಹಾಡು' ಎಂಬ ಅವರ ಮೊದಲ ಕವನ ಸಂಗ್ರಹವು 1944 ರಲ್ಲಿ ಪ್ರಕಟವಾಯಿತು. ಅದರಲ್ಲಿ ಅವರು ಹೇಳಿದಂತೆ '1929 ರಿಂದ ಮೊದಲುಗೊಂಡು ಇಂದಿನವರೆಗೆ ಆಗೊಮ್ಮೆ ಈಗೊಮ್ಮೆ ನುಡಿಗೊಂಡು ಗೀತವಾಗಿ ಹೊಮ್ಮಿದ ನನ್ನ ಎದೆಹಕ್ಕಿಯ ಉಲಿಗಳಲ್ಲಿ ಹಲವನ್ನು ಇಲ್ಲಿ ಕಾಣಬಹುದು'. ಅವರ ಇತ್ತೀಚಿನ 'ಬೀಸಿಬಂದ ಗಾಳಿ' ಎಂಬ ಕವನ ಸಂಕಲನವು 1980 ರಲ್ಲಿ ಬೆಳಕು ಕಂಡಿದೆ. ಈ ಅರ್ಧಶತಮಾನದ ಕಾಲಾವಧಿಯಲ್ಲಿ ಇತರ ಸಾಹಿತ್ಯ ರೂಪಗಳಲ್ಲಿ ಕೈಯಾಡಿಕೆಯೊಡನೆ ಸಾಹಿತ್ಯವಿಮರ್ಶೆ-ಸಂಶೋಧನೆಗಳೊಂದಿಗೆ ಅವರ ಕಾವ್ಯಪ್ರಜ್ಞೆ ತಡೆತಡೆದು ಆದರೂ ತನ್ನ ಕಾಪಾಡಿಕೊಂಡು ಬಂದಿದೆ, ತನ್ನ ನೇರದಾರಿಯಲ್ಲಿ ಸಾಗುತ್ತ ಸಾಗಿದೆ. ಅವರ ತಲೆಮಾರಿನ ಅನೇಕ ಕವಿಗಳಂತೆ ಸ್ವಂತವಾಗಿ ಪಡೆದ ನಿಸರ್ಗ-ಕುತೂಹಲ, ಜೀವನಾಸಕ್ತಿ, ದೈವಭಕ್ತಿ, ತತ್ತ್ವಜಿಜ್ಞಾಸೆ, ದೇಶಾಭಿಮಾನ, ಅಜೇಯ ಆಶಾವಾದ ಈ ಮುಂತಾದ ಗುಣಗಳು ವಾಸ್ತವ ಜೀವನದ ಕಠೋರತೆಯ ಬಿಸಿಗೆ ಹತ್ತಿಯೂ ಕೊರೆಯಾಗದೆ ಮಿಸುನಿಯಂತೆ ಮಿಸುಗುತ್ತ ಬೆಳೆದಿವೆ. ಅದೆಲ್ಲಿಯೂ ಬೇರೆ ಬೇರೆ ವಿಚಾರ ಪ್ರವಾಹಗಳ ಹಾಗೂ ಕಾವ್ಯಮಾರ್ಗಗಳ ಸೆಳವಿಗೆ ಸಿಕ್ಕು ತನ್ನದಲ್ಲದ ತಿರುವು ಪಡೆದಿಲ್ಲ, ಸ್ವಾಂತಿಕೆಗೆ ತಿರುಗಿ ಬಿದ್ದಿಲ್ಲ. 'ಬೀಸಿ ಬಂದ ಗಾಳಿ'ಗೆ ಹಾರಿಹೋಗಿಲ್ಲ. ಅದಕ್ಕೆ ಕಣ್ಣುಮುಚ್ಚಿಯೂ ಕುಳಿತಿಲ್ಲ. ಆ ಕವನವೇ ಈ ಮನೋಧರ್ಮಕ್ಕೆ ಸಾಕ್ಷಿಯಾಗಿದೆ:

ತೆರೆ ಕಿಟಕಿಯ ಬಾಗಿಲ
ಬೀಸಿ ಬರಲಿ ಗಾಳಿ
ನವಯುಗವೈತಾಳಿ
ತಿರುಗಿ ತಿರುಗಿ ದೇಶವ
ಅಲ್ಲಿನ ಸಂದೇಶವ
 ಹೊತ್ತು ತರಲಿ ಮಾರುತ
 ಹೊಸದಾರಿಯ ತೋರುತ.

ಬರಮಾಡಿಕೊ, ಬರಲಿ–
ದಿಗಂತಗಾನಕಿವ ಮುರಲಿ:
ನೂತನ ಚೇತನ ತರಲಿ
ಅತಿಥಿಯಾಗಿ ನಿಲ್ಲಲಿ

ಹೀಗೆ ಸಾಗಿದ ಈ ಕವಿತೆಯ ಕೊನೆಯ ನುಡಿಯಲ್ಲಿ 'ಏಕಿದೇನಿದೆದ್ದೇಳಿ, ಬಾಗಿಲನ್ನು ಮುಚ್ಚಿಕೊಳಿ — **ಅದನತಿಥಿ ಬಿರುಗಾಳಿ ತಡೆಯಿರವನ ದಾಳಿ**' ಎಂಬ ಮುಕ್ತಾಯ ಬಂದು ಅತಿಥಿಯಾಗಿ ಬರಲೆಂದ ಗಾಳಿ ಬಿರುಗಾಳಿಯಾಗಲು ಅವನ ದಾಳಿಯನ್ನು ತಡೆಯಿರೆಂದು ಕರೆಕೊಡುತ್ತದೆ. ಈ ಮುಕ್ತಾಯವು ರಚನೆಯ ದೃಷ್ಟಿಯಿಂದ ಗಕ್ಕನೆ ನಿಂತ ಗಾಡಿಯಂತೆ ಕುಲುಕಿದರೂ ಅತಿಥಿಯಾಗಿ ಬರಬೇಕಾದ ಗಾಳಿ ಹಾವಳಿಯನ್ನು ಮಾಡುವ ಬಿರುಗಾಳಿಯಾದರೆ ಅದರ ದಾಳಿಯನ್ನು ತಡೆಯಬೇಕೆಂಬ ಕರೆಯಿಂದ ಕವಿಯ ಆಶಯವನ್ನು ಸೂಚಿಸುತ್ತದೆ. ಅತಿಥಿಯಾಗಿ ಬಂದವರು ಯಜಮಾನರಾಗಿ ಮೆರೆಯುವುದು ನಮ್ಮ ನಾಡಿನ ಹಣೆಬರಹವಾಗಿದೆ. ಅಲ್ಲದೆ ಅವರು ನಮ್ಮದನ್ನೆಲ್ಲ ಸೂರೆಮಾಡಿ ತಮ್ಮದನ್ನು ನಮ್ಮ ಮೇಲೆ ಹೇರಿರುವುದು ಸಹ ಕಂಡುಬಂದಿದೆ. ಸಾಹಿತ್ಯ ಕ್ಷೇತ್ರದಲ್ಲಿಯೂ ಈ ಹಾವಳಿ ತಪ್ಪಿಲ್ಲ. ಇದನ್ನರಿತ ಕವಿ ತನ್ನ ಸಮತೂಕದ ಮನೋಧರ್ಮದಿಂದ ಇಲ್ಲಿ ಸೂಕ್ತವಾದ ಎಚ್ಚರಿಕೆಯನ್ನು ಕೊಟ್ಟಿದ್ದಾನೆ.

ರಾಘವ ಅವರು 'ನವೋದಯ' ಎಂಬ ಅಷ್ಟು ಸಾರ್ಥಕವಲ್ಲದ ಹೆಸರಿನಿಂದ ಕರೆಯಿಸಿಕೊಳ್ಳುತ್ತಿರುವ ಹೊಸ ಕಾವ್ಯದ ಪ್ರಥಮ ಆವಿಷ್ಕಾರದ ಹುಮ್ಮಸಿನ ಕಾಲದಿಂದ ಬರೆಯುತ್ತ ಬಂದವರು ಜೀವನಾನುಭವದಲ್ಲಿ, ಕಾವ್ಯಪ್ರಜ್ಞೆಯಲ್ಲಿ ತಮ್ಮದೇ ಆದ ಸೌಮ್ಯ, ಆದರೆ ಸತತವಾದ ಸ್ಫೂರ್ತಿಯನ್ನು ಪಡೆಯುತ್ತ ಬಂದಿದ್ದಾರೆ. ಅಂತೇ ಅವರ ಕವಿತಾರಚನೆ ಆಗಾಗ ಎಷ್ಟೇ ಕುಂಟಿದರೂ ಮೊಟಕಾದರೂ ಸ್ವಂತಿಕೆಯಿಂದ ಮೆರೆಯುತ್ತ ಮೆಚ್ಚಿ ನೆನೆಯಬಹುದಾದ ಕೆಲವು ಕವನಗಳನ್ನು ಅವರು ಕನ್ನಡ ಕಾವ್ಯ ರಸಿಕರಿಗೆ ನೀಡಿದ್ದಾರೆ. ಮೊದಮೊದಲು ತಮಗೆ ತೋರಿದ ಅಸಿಮಿಸಿಯನ್ನು ಬರಬರುತ್ತ ಕಳೆದುಕೊಂಡು ಗಟ್ಟಿಯಾಗಿ ಉಳಿದು ಬೆಳೆದಿದ್ದಾರೆ. ಉದಾಹರಣೆಗೆ, ಅವರ ಮೊದಲನೆಯ ಸಂಗ್ರಹದ ಮೊದಲನೆಯ ಕವಿತೆಯನ್ನೂ ಕೆಲವು ವರ್ಷಗಳ ತರುವಾಯ ಅದಕ್ಕೆ ಸಂವಾದಿಯಾಗಿ ಬರೆದ ಇನ್ನೊಂದು ಕವಿತೆಯನ್ನೂ ಹೋಲಿಸಿ ನೋಡಬಹುದು. 'ನಾನೊಂದು ಕಿರುಸೊಡರು' ಎಂಬುದು ಆ ಮೊದಲನೆಯ ಕವಿತೆ. ಅದರ ಮೊದಲನೆಯ ನುಡಿ ಹೀಗಿದೆ:

ಎಲೆದೇವ, ನಾನೊಂದು ಕಿರುಸೊಡರು ಮಾತ್ರ;
ಕುಡಿದೀಪವೊಂದೊಳಗೆ ಉರಿಯುತಿಹುದು;

ಮೆಲುಮೆಲನೆ ಉರಿಯುತಿದೆ, ತೇಜವಿಲ್ಲವೊ ಏನೊ,
ಮಿಣುಕಾಡುತಿದೆ, ನಂದಿಹೋಗಬಹುದು. (ಪಕ್ಷಿಕಾಶಿ)

ಇದರ ಕೊನೆಯ ಸಾಲಿಯಲ್ಲಿ ದೇವನು ಕೃಪೆತೋರಿದರೆ ಪೂರ್ಣ ಪ್ರಕಾಶದಿಂದ ಅದು ಉರಿಯಬಹುದೆಂಬ ಭರವಸೆಯಿದ್ದರೂ ಮೊದಲಿನ ಅನುಮಾನ ಹಾಗೇ ಇರುತ್ತದೆ. ಆ ಮೇಲಿನ 'ಮನೆಯದೀಪ' ಎಂಬ ಕವನದಲ್ಲಿ ಅದೇ ಪ್ರತಿಮೆ, ಅದೇ ವಸ್ತು ಇದ್ದರೂ ಅನುಮಾನವಳಿದು ಗಟ್ಟಿಯಾದ ನಿಲುವು ಮೂಡಿಬಂದಿದೆ.

ಆರಿಸದಿರು ದೀಪವ, ಮನೆಯ ದೀಪವ
ಬೀರುತಿರಲಿ ತೋರುಬೆಳಕ ಮನೆ ನಿಂತಿಹ ತನಕ.
ಸೊಡರ ದೀಪ, ಬೆಳಕಲ್ಪ ಎಂದೇತಕೆ ಕೀಳೆಣಿಕೆ?
ಮನೆಯೊಳಗನೆ ಬೆಳಗಿದರೂ ಸಾರ್ಥಕ ತಾನುರಿದುದಕೆ.
ಸೂರ್ಯನಿಷ್ಟೆ ಪ್ರಜ್ವಲಿಸಲಿ ವಿಶ್ವವನ್ನೆ ಬೆಳಗಲಿ
ಲೋಕಗತನ ಸೊಡರಪಾಲು ಗುಡಿಸಿಲ ಕತ್ತಲೆಯಲಿ.
(ಹಂಸಪಥ)

ಈ ಮನೆಯ ದೀಪದಿಂದ ಬಡದಾರಿಗ ನೆರವು ಪಡೆಯುವನು, ನೂರು ಸೊಡರು ಹೊತ್ತಿಕೊಳಬಹುದು. ಆದ್ದರಿಂದ 'ಕೆಟ್ಟಗಾಳಿ ಬೀಸದಂತೆ ಇದಕೆ ಮರೆಯನು ಒಡ್ಡು ಎಣ್ಣೆ ಮುಗಿಯೆ ಎಣ್ಣೆ ಹಾಕು' ಎಂದು ಹೇಳುತ್ತ ಕೊನೆಯಲ್ಲಿ 'ಬೀಸಿಬರಲಿ ಬಿರುಗಾಳಿ ಆರಿದರದು ಆರಲಿ: ನೀನಾಗಿಯೆ ಆರಿಸದಿರು ನಿನ್ನ ಮನೆಯ ದೀಪವ' ಎಂದು ಕವಿ ಸಮಾರೋಪ ಮಾಡುತ್ತಾನೆ. ಇಲ್ಲಿ ಮೊದಲಿನ ಕವನಕ್ಕಿಂತ ಹೆಚ್ಚಿನ ಅರ್ಥವತ್ತತೆಯಿದೆ, ಕ್ರಮಬದ್ಧತೆ ಇದೆ. ಮುಖ್ಯವಾಗಿ ಆತ್ಮವಿಶ್ವಾಸ ಮತ್ತು ವಾಸ್ತವದೃಷ್ಟಿಗಳ ಮೇಳವಿಕೆಯಿದೆ. 'ನವೋದಯ' ಕಾವ್ಯಕ್ಕೆ ಪರ್ಯಾಯ ಪದವೆಂದು ರಮ್ಯ ಅಥವ ರೊಮ್ಯಾಂಟಿಕ್ ಕಾವ್ಯ ಎಂದು ಕರೆಯುವ ರೂಢಿಯುಂಟು. ಅದರಲ್ಲಿ ನಯನ ಮನೋಹರ ನಿಸರ್ಗ, ನಾಡುನುಡಿ, ದೇವರು ಇಂಥ ಕಾವ್ಯ ವಿಷಯಗಳನ್ನೇ ಹೆಚ್ಚಾಗಿ ಕುರಿತು ನವಿರಾಗಿ ಭಾವುಕವಾಗಿ ಕವನಗಳನ್ನು ಬರೆಯಲಾಗಿದೆ ಎಂದೂ ರಮ್ಯಕವಿಗಳೆಂದರೆ ವಾಸ್ತವ ಪ್ರಪಂಚದಿಂದ ದೂರವುಳಿದ ಕನಸುಣಿಗಳೆಂದೂ ಕೆಲವು ಇಂದಿನ ವಿಮರ್ಶಕರು ಹೇಳುತ್ತ ಬಂದಿದ್ದಾರೆ. ಇದರಲ್ಲಿ ಮೇಲ್ನೋಟಕ್ಕೆ ಸತ್ಯಾಂಶವಿದೆ. ಆಧುನಿಕ ಕಾವ್ಯದ ಪ್ರಾರಂಭದಲ್ಲಿ ಯಾವ ಪರಿಸರದಲ್ಲಿ ಯಾವ ಪ್ರಭಾವಗಳಿಂದ ಹೊಸ ಹೊಮ್ಮಿತೋ ಅದರ ಮೂಲಕ ಸಹಜವಾಗಿ ಅಂಥ ವಿಷಯಗಳು ಕವಿಹೃದಯವನ್ನು ಆಕರ್ಷಿಸಿದವು. ಆದರೆ ಅವುಗಳ ಜೊತೆಯಲ್ಲಿ ಪರದಾಸ್ಯದಿಂದಲೂ ಪರಂಪರೆಯಿಂದಲೂ ಸುತ್ತುಮುತ್ತಿನ ಜೀವನದಲ್ಲಿ ಕಂಡುಬಂದ ಕಷ್ಟಕಾರ್ಪಣ್ಯಗಳಿಗೆ ಸಹ ಈ ರಮ್ಯಕವಿಗಳು ತಂತಮ್ಮ ಬಗೆಯಲ್ಲಿ ಸ್ಪಂದಿಸಿದ್ದಾರೆ, ಸ್ಪಂದಿಸುತ್ತ ಬಂದಿದ್ದಾರೆ

ಎಂಬುದನ್ನು ತಳ್ಳಿಗಳೆಯುವಂತಿಲ್ಲ. ಸರ್ವಮುಖವಾದ ಜೀವನದ ಬಗ್ಗೆ ಸ್ವಾನುಭವ, ಸ್ವತಂತ್ರವಾದ ಸ್ವಾಭಿವ್ಯಕ್ತಿ ಇವು ಆಧುನಿಕ ಕಾವ್ಯದ ಮೂಲಭೂತ ಸೂತ್ರಗಳಾಗಿವೆ. ರಾಘವ ಅವರ ಕವನಗಳಲ್ಲಿಯೂ ಇವಕ್ಕೆ ನಿದರ್ಶನಗಳಿರುತ್ತವೆ. ಅವರ ಮೊದಲನೆಯ ಸಂಗ್ರಹವಾದ 'ಪಕ್ಷಿಪಾದ' ಇದು 'ಗೋಳು, ಬೀದಿಯೊಳಗಲೆಯುತಿಹಳಾರಿವಳು, ತಿರುಕಿಯ ಮೊರೆ, ಕಮಳತಾಯಿ, ಎಚ್ಚರಿಕೆ, ಬಡವನ ಕೊಡಲಿ' ಇಂಥ ವಾಸ್ತವ ಜೀವನದ ಕಟುಸತ್ಯಗಳನ್ನು ಹೊರಗೆಡಹುವ ಕವಿತೆಗಳನ್ನು ಒಳಗೊಂಡಿವೆ. ಕಷ್ಟತರವಾದ ಪರಿಸ್ಥಿತಿಯಲ್ಲಿಯೂ ಎದೆಗೆಡದೆ ಮನುಷ್ಯನು ಪ್ರಯತ್ನಶೀಲನಾಗಿ ತನ್ನ ಗುರಿಯತ್ತ ಮುನ್ನಡೆಯಬೇಕೆಂದೂ ತನ್ನ ಬಾಳು ಎಷ್ಟೇ ಸಾಮಾನ್ಯವಾದರೂ ಅದನ್ನು ತನ್ನ ರೀತಿಯಲ್ಲಿ ಬದುಕಬೇಕೆಂದೂ ಪ್ರೇರಿಸುವ 'ಸ್ವರ್ಣದ್ವೀಪ', 'ಬಾಳಕುಲುಮೆ' ಯಂಥ ಒಳ್ಳೆಯ ಕವನಗಳು ಇದೇ ಸಂಗ್ರಹದಲ್ಲಿವೆ. ಅವುಗಳಲ್ಲಿಯ ಕೆಳಗಿನ ಸಾಲುಗಳನ್ನು ಗಮನಿಸಬೇಕು :

ಅಲ್ಲಿ ಅದೋ ಸ್ವರ್ಣ ದ್ವೀಪ!
ನುಗ್ಗಿ ಹೋಗು ಮುಂದಕೆ (ಸ್ವರ್ಣದ್ವೀಪ)

ಹಿರಿಬಾಳೊ ಕಿರಿಬಾಳೊ ಸೊಗಬಾಳೊ ತೆಗೆಬಾಳೊ,
ತನ್ನ ಬಾಳನು ತಾನು ಬದುಕುವುದೆ ಗೆಲುಮೆ
.... ಬಾಳ ಕುಲುಮೆಗೆ ಬಿದ್ದು, ಅದರಿಂದ ಮೇಲೆದ್ದು
ನಿಂತವನೆ ಹಿರಿಯಾಳು – ವಿಧಿಯವನ ತೊತ್ತು (ಬಾಳಕುಲುಮೆ)

ಅವರ ಆಮೇಲಿನ ಕವನ ಸಂಗ್ರಹಗಳಾದ 'ಹಂಸಪಥ, ಮುಗಿಯದ ಹಾಯಿ, ಬೀಸಿಬಂದ ಗಾಳಿ' ಇವುಗಳಲ್ಲಿಯೂ ಬೇರೆ ಬೇರೆ ರೀತಿಯಲ್ಲಿ ಜೀವನದ ದಾರುಣ ಮುಖದ ಚಿತ್ರಣವಿದೆ. ಉದಾಹರಣೆಗೆಂದು 'ತಾರೆಗಳ ಮರುಮಾತು, ಕುರಿಯ ಮೆರವಣಿಗೆ, ಲೋಕದಹರಿ, ಪೋಲ್ಯಾನ್, ದಾಸಿಗಳು' ಇವನ್ನು ಗಮನಿಸಬೇಕು. 'ತಾರೆಗಳ ಮರುಮಾತು' ಇದರಲ್ಲಿ ಹಿಂದಿನಿಂದಲೂ ಭೂಮಿಯ ಮೇಲಿನ ಬಾಳನ್ನು ನೋಡುತ್ತ ಬಂದ ತಾರೆಗಳು ಸಾರುತ್ತಲಿರುವ ಮಾತೆಂಬ ರೀತಿಯಲ್ಲಿ ಈ ಸಾಲುಗಳಿವೆ :

ಮೇಲೆ ಸಾಗರದಂತೆ ಗಂಭೀರ ನೋಟ,
ಸೊಗದ ಸುಗ್ಗಿಯ ಬೆಳಸು; ಒಳಗೆ ಹೊಲಸು
ಎಲ್ಲೆಲ್ಲು ಕಾದಾಟ, ಬರಿಯ ಕಾದಾಟ,
ಬಲು ಘೋರತರ ನೋಟ, ಈ ನಿಮ್ಮ ಆಟ

ಕೊನೆಯ ನುಡಿಯಲ್ಲಿ ಅವು ಮಾನವನಿಗೆ ಸಾವಿರ ನಮಸ್ಕಾರ ಹೇಳಿವೆ :

'ಎಂದು ಬರುವುದೊ ಹೇಳೊ ನಮಗೆ ನಿಮ್ಮಯ ಸಂಗ

ನಮ್ಮ ಶಾಂತಿಗೆ ಭಂಗ –
ಎಂಬ ಶಂಕೆಗೆ ಸಿಲುಕಿ ಬೆರಗುಗಣ್ ಬಿಡುತಿಹೆವು,
ಭಯದಿ ಮಿಡುಕುವೆವು !
ಸಾಕು ಮಾನವ ನಿನಗೆ ಸಾವಿರ ನಮಸ್ಕಾರ !'

'ಕುರಿಯ ಮೆರವಣಿಗೆ'ಯಲ್ಲಿ ಕಸಾಯಿಖಾನೆಯ ಕಡೆಗೆ ನಡೆವ ಕುರಿಯ ಮೆರವಣಿಗೆಯ ಪ್ರತಿಮೆಯ ಮೂಲಕ 'ನಾವೆಲ್ಲರೂ ಕುರಿ' ಎಂಬ ಸತ್ಯವನ್ನು ಪರಿಣಾಮಕಾರಿಯಾಗಿ ನಿರೂಪಿಸಲಾಗಿದೆ. 'ಕುರಿಗಳು ಸಾರ್ ನಾವು ಕುರಿಗಳು' ಎಂಬ ಶ್ರೀ ನಿಸಾರ ಅಹಮ್ಮದ್ ಅವರ ಕವಿತೆಯು [illegible]. 'ದಾಸಿಗರು' ಈ ಕವಿತೆಯಲ್ಲಿ ಇನ್ನೂ ತೀಕ್ಷ್ಣವಾದ ವಿಡಂಬನೆಯಿಂದ [illegible] ದಾಸಿಗರಾಗಿರುವ ಬಗೆಯನ್ನು ಸಮರ್ಥವಾಗಿ ಚಿತ್ರಿಸಲಾಗಿದೆ. 'ನಾವು ದಾಸಿಗರು ಮಹಾದಾಸಿಗಳು ದಣಿದ ರಾತ್ರಿಯ ಮೇಲೆ ನಿಂತ ನಾವು ಉದ್ದುದ್ದ ದಾಸಿಗರು ಉದ್ದಾಸಿಗಳು' ಹೀಗೆ ಮೊದಲಾಗುವ ಈ ಕವಿತೆ ಕೊನೆಯವರೆಗೆ ಈ ದಾಸಿಗರ ಕೈಚಳಕವನ್ನು ಚಿಕ್ಕಚಿಕ್ಕ ಸಾಲುಗಳಲ್ಲಿ ಕುಟಿಲದಿಂದ ತಿಳಿತಿಳಿದು ತೋರಿಸುತ್ತಾ ಸಾಗಿದೆ. 'ಕಾವ್ಯ'ವನ್ನು ಕುರಿತು ಬರೆದ ಇಲ್ಲಿಯ ಒಂದು ಕಾವ್ಯದಲ್ಲಿ 'ಮುಡಿಯೆ ಕುಸುಮ, ಹಿಡಿಯೆ ಕೈಯಲಿ ಖಡುಗ, ಮೊಡೆಯಲಿಕ್ಕೆ [illegible] ಘೋಷನಾದ ; ಕುಡಿಯೆ ಅಮೃತದ ಪಾನ, ನಡೆಯೆ ದಾರಿಯ ದೀಪ, ಕಡೆಯೆ ಸುಜ್ಞಾನದಿಂ ತತ್ವಬೋಧೆ' ಎಂದು ಮೊದಲಾದ ಕಾವ್ಯರಚನೆಯ ಅನೇಕ ಪ್ರಯೋಜನಗಳನ್ನು ವರ್ಣಿಸಲಾಗಿದೆ. ಕಾವ್ಯವು ಉದ್ದೇಶ್ಯ ಬದ್ಧವೇ ಆಗಬೇಕೆಂಬ ಇತ್ತೀಚಿನ [illegible] ಇದು ಸಮಾಧಾನಕರವಾದರೂ ಅದರ ಒಂದು ಪ್ರಯೋಜನಕಾರಿ [illegible] ಎಂಬುದನ್ನು ನೆನೆಯಬಹುದು. ರಮ್ಯವೆಂಬ ಪಟ್ಟಿಕಟ್ಟಿನ ಕಾವ್ಯವು [illegible] ಕೇವಲ ರಮಣೀಯ, ಮೃದು ಎಂಬ ಭ್ರಮೆಗೆ ಒಳಗಾದವರು ಅದರ ಸರ್ವಗ್ರಾಹಿತ್ವವನ್ನು ಅದರ ಪರಿಯಲ್ಲಿ ಅರಿಯಬೇಕೆಂಬುದಕ್ಕೆ ಕೊಡಬಹುದಾದ ನಿದರ್ಶನಗಳಲ್ಲಿ ಇವು ಕೆಲವಾಗಿವೆ.

ರಾಘವ ಅವರು ಹೀಗೆ ಇಡಿಯ ಜೀವನದಲ್ಲಿ ತಮ್ಮನ್ನು ತೊಡಗಿಸಿಕೊಂಡು ತಮ್ಮ ಅಂತಃಕರಣವನ್ನು ಅಲ್ಲಾಡಿಸಿದ ಹಲವು ಮುಖಗಳನ್ನು ಚಿತ್ರಿಸಿದ್ದಾರೆ. ಅಲ್ಲದೆ, ಕೆಲವು [illegible] ಕವಿತೆಗಳನ್ನೂ ಶಕ್ತಿ ಚಿತ್ರಗಳನ್ನೂ ಚುಟುಕಗಳನ್ನೂ ಬರೆದಿದ್ದಾರೆ. [illegible] ಷಟ್ಪದಿಗೆ ಮುಕ್ತಛಂದಸ್ಸಿನ. ಅವರ [illegible] ಛಂದಸ್ಸಿನ ಹಲವು ಪ್ರಯೋಗಗಳನ್ನು ಮಾಡಿದ್ದಾರೆ. ಇವರೆಗಿನ ಅವರ ಕಾವ್ಯ ಸೃಷ್ಟಿಯಲ್ಲಿ ಯಾವ ಪಂಥಕ್ಕೂ ಸಿಲುಕದ ತನ್ನ ತನವು ಎದ್ದು ಕಾಣುತ್ತದೆ. ಇದು ಬಹಳ ಮೆಚ್ಚಬೇಕಾದ ಗುಣ. ಕೃತಿರಚನೆಯಲ್ಲಿ ಗುಣಭಾವವು ಹೆಚ್ಚು ಕಾಣಿಸಿ [illegible]

ಕವಿಯಾಗಿ ಅವರು ಬೆಳೆಯುತ್ತ ಸ್ವಂತಿಕೆಯ ಗಟ್ಟಿತನವನ್ನು ಪಡೆಯುತ್ತ ಬಂದಿದ್ದಾರೆ. ಇದಕ್ಕೆ ಅವರ 'ಆದಾರಿ-ಈದಾರಿ' ಎಂಬ ಕವನವು ಒಂದು ಉತ್ತಮ ಉದಾಹರಣೆಯಾಗಿದೆ. 'ಇರಲಿ ಅವರಿಗೆ ಅವರ ದಾರಿ, ನಮ್ಮ ದಾರಿ ನಮಗೆ' ಎಂದು ಮೊದಲಾಗುವ ಈ ಕವನದಲ್ಲಿಯ ಕೆಳಗಿನ ಸಾಲುಗಳನ್ನು ಲಕ್ಷಿಸಬೇಕು :

'ಅವರದ್ದು ಮಣ್ಣಿನ ದಾರಿ, ನಮ್ಮದು ಕಣ್ಣಿನ ದಾರಿ
ಅವರದ್ದು ಹೊರಳುವ ಮರಳುವ ದಾರಿ ;
ನಮ್ಮದು ತೆರಳುವ ಮರಳುವ ಯೋಜನೆ ಇಲ್ಲದ ದಾರಿ'

ಹೀಗೆ ಸಾಗುತ್ತ ಈ ಸಾಲುಗಳಲ್ಲಿ ಕವನ ಮುಕ್ತಾಯ ಪಡೆಯುತ್ತವೆ:

'ನಮ್ಮದು .... ಸೋಹಂ ಸರೋವರದಲ್ಲಿ ಕೇಲಾಡುವ
ಹಂಸನಾವೆ ಇರುವ **ಚಿತ್‌ಕಡಲ** ಕಡೆದಾರಿ :
ನಾವೆ ನಾವಾಗುವ ದಾರಿ
ಅವರದ್ದು ಕಂಸಪಥ ; ನಮ್ಮದು ಹಂಸಪಥ'

ಈ ಕವನದ ಸಹಜವಾದ ಬೀಸು, ಚಿತ್ರಕಶಕ್ತಿ, ಮುಖ್ಯವಾಗಿ ಸ್ವಂತಿಕೆಯ ಸಮರ್ಥನೆ ಇವನ್ನು ನೋಡಿದಾಗ ಬರಬರುತ್ತ ಇವರು ಪಡೆದ ನಿಲುಮೆಯ ಗಟ್ಟಿತನವು ಗೊತ್ತಾಗುತ್ತದೆ. ಬಹುಶಃ ಎತ್ತಿ ತೋರಬಹುದಾದ ಒಂದು ನ್ಯೂನತೆಯೆಂದರೆ 'ಅವರದ್ದು **ಕಂಸಪಥ**' ಎಂಬಲ್ಲಿಯ 'ಕಂಸ' ಪದಪ್ರಯೋಗ. ಹಂಸಪಥಕ್ಕೆ ಪ್ರಾಸವಾಗಿ ಅದು ಸರಿಹೋಗುತ್ತಿದ್ದರೂ ಅವರ ದಾರಿ 'ಕಂಸಪಥ' ಎಂಬ ವರ್ಣನೆ ಸಮರ್ಪಕವಲ್ಲ ಎಂದು ತೋರುತ್ತದೆ. 'ವಿಷವೃಕ್ಷಃ ಸನಾತನಃ, ನಾಳಿನ ಭಾರತ, ಕನಸು ನನಸಾಗದೆಂದೆನಬೇಡ' ಇಂಥ ಹಲವು ಅವರ ಕವನಗಳನ್ನು ಹೆಸರಾಂತ ಕವಿಗಳೂ ಸಹೃದಯರೂ ಮೆಚ್ಚಿಕೊಂಡಿದ್ದಾರೆ. 'ಮದುವಿಗೊಂದು ಮಾತು' ಈ ಕವನವನ್ನು ದೊಡ್ಡಕ್ಷರಗಳಲ್ಲಿ ಅಚ್ಚುಹಾಕಿಸಿ ಕನ್ನಡಿಯಲ್ಲಿ ಚೌಕಟ್ಟಿಸಿ ಗಂಡಹೆಂಡಿರು ಇರುವ ಪ್ರತ್ಯೇಕ ಕನ್ನಡ ನಾಡಿನಲ್ಲಿಯ ಮನೆಯಲ್ಲಿ ತೂಗಾಡಿಸತಕ್ಕದ್ದೆಂದು ದಿವಂಗತ ಎಂ. ಗೋವಿಂದ ಪೈ ಅವರು ಕೊಂಡಾಡಿದ್ದಾರೆ. 'ಒಂದು ಬಗೆಯ ನಿಷ್ಠುರ ಯಥಾರ್ಥತೆ ಇವರ ಕವಿತಾ ಧೋರಣೆಯ ಮುಖ್ಯಲಾಂಛನ ಎನ್ನಬಹುದು' ಎಂದು ಶ್ರೀ ಎಸ್.ವಿ. ರಂಗಣ್ಣನವರು ಇಂಥ ಕವನಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಅಭಿಪ್ರಾಯ ಪಡುತ್ತ ತಮ್ಮ ಮೆಚ್ಚಿಕೆಯನ್ನು ತಿಳಿಸಿದ್ದಾರೆ.

ಸ್ವಲ್ಪ ದೀರ್ಘವಾದ ಇವರ ಸ್ವತಂತ್ರ ಕವನಗಳಲ್ಲಿ "ಹನುಮಂತ ಪ್ರಗಾಥ, ನಗರದ ದೀಪದ ಜೊತೆ ಮಾತುಕತೆ, ನಾನೂರು ವರ್ಷಗಳ ಹಿಂದೆ ನಾನಿದ್ದೆ, ದ್ರಷ್ಟುಮಿಚ್ಛಾಮಿ ತೇರೂಪಮೈಶ್ವರಂ, ವಿಷವೃಕ್ಷಃ ಸನಾತನಃ, ನಾಳಿನ ಭಾರತ, ಸೊನ್ನೆ" ಈ ಕವನಗಳು ಕವಿತಾ ಸೃಷ್ಟಿಯ ಒಂದು ಬಿತ್ತರಕ್ಕೆ, ಎತ್ತರಕ್ಕೆ ಕೈಚಾಚಿವೆ. "ಎತ್ತರಕ್ಕೇರು

"ಪ್ರೀತಿ ಬೇಕು ಪತ್ರಂ ಕೇಳಿಗೆ" ಎಂಬ ಉಕ್ತಿಗೆ ಉದಾಹರಣೆಯಾಗಿವೆ. ಇವರಿಗಿದ್ದ ಧಾರ್ಮಿಕ ಗಳಿವೆ, ಪ್ರವಚನ ಪ್ರವೃತ್ತಿಗಳಿವೆ, ಸಾತ್ವಿಕ ಸಾಧನೆಗಳವೆಯೆಂದರೂ ಇವರ ಗುಣವಾದ ಉತ್ಪ್ರೇಕ್ಷೆಯಿಲ್ಲದ ಮತ್ತು ಸಹಜ ಸ್ಫೂರ್ತಿಕತೆ ಇವರ ಸ್ವಭಾವ ಎಂಬುದನ್ನು ಅರಿಯಬೇಕು. ಇವರ ಪ್ರತಿಭೆಯ ಶಕ್ತಿ ಅನುಭವಿಷ್ಪನ್ನವಾದ ಭಾಗವೂ ಅತ್ಯುತ್ಕೃಷ್ಟವಾದ ಕೆಲವು ಕವಿತೆಗಳಲ್ಲಿ ಎದ್ದು ಕಾಣುತ್ತದೆ, ಸಹೃದಯರ ಮನಸ್ಸನ್ನು ಸೆರೆಹಿಡಿಯುತ್ತದೆ. "ಜಣಜೆ ಸಾಕು ಜೇಲಾಜಿನ ನೋಟ, ನೊಸನೀರು, ಸುಗ್ಗಿಯ ಹಾಡು; ಚೆಲುವ ತುಂಬಿದೆ ಬಾನ ತುಂಬ, ನವದಂಪತಿ, ಕಲ್ಲಿನೆದೆ ಮಲ್ಲಿಗೆಗಳೆ" ಇಂಥ ಕವನಗಳು ನೆನಪಿನಲ್ಲಿ ಅಚ್ಚೊತ್ತಿನಿಲ್ಲುತ್ತವೆ. ಈಚೆಯ ಅವರ ಕವನಸಂಕಲನಗಳಲ್ಲಿಯೂ ಇರುವ ಇಂಥ ನಿದರ್ಶನಗಳಲ್ಲಿ "ಕರೆವ್ರು ಮಾಡೀ ಮನೆಯ" ಮತ್ತು "ನಡುಗುವ ಕೈ" ಈ ಎರಡನ್ನು ವಿಶೇಷವಾಗಿ ನೆನೆಯಬೇಕು. ಈ ಎರಡರಲ್ಲಿಯೂ ಸಾಮಾನ್ಯವಾದ ಲೌಕಿಕ ವಿದ್ಯಮಾನಗಳ ಮೂಲಕ ಅಲೌಕಿಕ ಅರ್ಥಧ್ವನಿಯನ್ನು ಅತ್ಯಂತ ಸಹಜವಾಗಿ ಹೊಮ್ಮಿಸಲಾಗಿದೆ. "ಕರಾರು ಮೋಲೀ ಮನೆಗೆ ಬಾಡಿಗೆಗೆ ಬಂದಿರುವೆನೀನಾದು ಮರೆಯಬೇಡ" ಎಂಬುದಾಗಿ ಮೊದಲಾಗಿ ಮುಕ್ತ ಛಂದಸ್ಸಿನ ಹದಿನಾರು ಪಾದಗಳಲ್ಲಿ 'ಕರೆವ್ರು ಮಾಡೀ ಮನೆಯ' ಎಂಬ ಈ ಕವಿತೆ ಹರಡಿಕೊಳ್ಳುತ್ತ ವಾಚ್ಯದೊಡನೆ ಇನ್ನುಗೆಯ 'ವ್ಯಂಗ್ಯ'ವನ್ನು ಸೊಗಸಾಗಿ ವಿವರ ವಿವರದಲ್ಲಿ ಬಿಡಿಸುತ್ತ ಹೋಗುತ್ತದೆ. 'ಮುಂದಿನ ಮನೆಗೆ ಹರಾಜಾಗೀಸು' ಎಂಬ ಕಿತವಚನದಲ್ಲಿಯೂ ಅದೇ ಧ್ವನಿಯನ್ನು ಹೊರಸೂಸುತ್ತ ಮುಕ್ತಾಯವಾಗುತ್ತದೆ. 'ನಡುಗುವ ಕೈ' ಯಲ್ಲಿ ಒಂದು ಪ್ರತ್ಯಕ್ಷ ಅನುಭವವು ಸ್ವಂತ ಬಾಳಿಗೆ ಸಾಮ್ಯಕಲೆಯ ಸಹಜ ಸಂವಾದ ರೂಪದಲ್ಲಿ ಗುಂಫಿತವಾಗಿದ್ದು ಅದೇ ಬಗೆಯ ಧ್ವನಿ ಸ್ವಾರಸ್ಯವನ್ನು ಪಡೆದಿದೆ. ಇವು ಉಕ್ತಿಯಾದರೂ 'ಕಿಂಡರೊಳು ಹಿರಿದು' ಎಂಬ ಗುಣವನ್ನು ಹೊಂದಿರುವುದು ದೊಡ್ಡ ಸಂದರ್ಭ ಸಹಜ.

ಒಟ್ಟು ನೋಡಿದಲ್ಲಿ ರಾಘವ ಅವರು ತಮ್ಮ ಸುದೀರ್ಘವಾದ ಕಾವ್ಯಸಾಧನೆಯಲ್ಲಿ ಗಟ್ಟಿಯಾದ ವ್ಯಕ್ತಿತ್ವವನ್ನು ಪಡೆದುಕೊಂಡು ಆಧುನಿಕ ಕಾವ್ಯಪ್ರಪಂಚಕ್ಕೆ ಯಾವಾಗಲೂ ಸಹೃದಯರನ್ನು ಮೆಚ್ಚಿಸಬಲ್ಲ ಕೆಲವು ಒಳ್ಳೆಯ ಕವನಗಳನ್ನು ರಚಿಸಿಕೊಟ್ಟಿದ್ದಾರೆ, ಅಲ್ಲಲ್ಲಿ ಒಂದೆಂಗೆ ವಿಕೃತಿತ್ತಿದ್ದಾರೆ. ವಿಷಯ, ಶೈಲಿ, ಛಂದಸ್ಸು, ಗಾತ್ರಗಳಲ್ಲಿ ಹಲವಾರು ಪ್ರಯೋಗಗಳನ್ನು ಮಾಡಿದ್ದಾರೆ. 'ಬೇಯುಲ್ಲಪ್ಪಿ ಬಗೆಯ' ಎಂಬ ಅನುಭವದಿಂದ ತಮ್ಮ ಕವಿತೆಯ ಕೆಲಸವನ್ನು ಕನ್ನಡದ ಕಾವ್ಯದ ಪರಂಪರೆಯಲ್ಲಿ ಗುರುತಿಸಿ ಹೊರಟ ಅವರು ತಮ್ಮ ಆರೋಗ್ಯ ಅನುಭವದ ಮತ್ತು ನಗುವ ಅಭಿವೃತ್ತಿಯ ಮೂಲಕ 'ಬೇಯುವ್ವಹೋಲ್ಲಿ ಕಾಣದೂರಿ?' ಎಂಬ ಬಿನ್ನಹ ನಿವೇದನೆ ಮಾಡಿದ್ದಾರೆ.

ರಾಘವರ ಕವನಗಳ ಆಧ್ಯಾತ್ಮ ಕೋಶ

ಪ್ರೊ|| ಆರ್.ಜಿ. ಕುಲಕರ್ಣಿ

ಆಧ್ಯಾತ್ಮವೆಂದರೆ ಸ್ವ-ಭಾವ ವೆಂದು ಗೀತೆ ಹೇಳುತ್ತದೆ. ಶ್ರೀರಾಘವರ ಕವನಗಳಲ್ಲಿ ಆಧ್ಯಾತ್ಮ ಹುಡುಕುವದೆಂದರೆ ಅವರ ಸ್ವ-ಭಾವ, ಸ್ವ-ದ ಇರುವಿಕೆ ಸ್ವರೂಪಗಳನ್ನು ಗುರುತಿಸುವುದು. ಕವನಗಳಲ್ಲಿ ಕವಿಯ 'ಸ್ವ' ಗುರುತಿಸುವದೊಂದು ಮಹಾಪಾಪವೆಂಬತೆ ನವ್ಯ ಕಾವ್ಯ ನವ್ಯವಿಮರ್ಶೆ ಕಟ್ಟುಪಾಡನ್ನೇ ಹಾಕಿಬಿಟ್ಟಿದೆ. ಆದರೆ ಭಾವವುರಸವಾಗಬೇಕೆಂಬುದರ ಇನ್ನೊಂದು ಪರಿಭಾಷೆಯೇ, ಈ ನವ್ಯದ ಕಟ್ಟುಪಾಡು-ಎಂದು ತಿಳಿದರೆ, ನಾವು ಅನಗತ್ಯವಾಗಿ ಹುಟ್ಟಿಸಿಕೊಂಡ ಸಂಕೋಚದಿಂದ ಮುಕ್ತರಾಗಿ ಕವಿಗಳ-ಕಾವ್ಯದ ತಿರುಳಿನ, ಅನುಭೂತಿಗೆ ಹೆಚ್ಚಿನ ಸಾಮರ್ಥ್ಯವನ್ನೂ ವ್ಯಾಪಕತೆಯನ್ನೂ ಪಡೆದುಕೊಳ್ಳುತ್ತೇವೆ.

ಭಾವವು ರಸವಾಗಬೇಕೆಂದರೂ ಒಂದೇ, ಭಾವವು 'ಸ್ವ' ಸಹಿತವಾಗಬೇಕು ಸ್ವಾಮಿಸಹಿತವಾಗಬೇಕು, ಅನಂತವಾಗಬೇಕು, ಬೀಜವು ವೃಕ್ಷವಾಗಿ ಅರಳಿ ರಸ ಸಹಿತ ಫಲ, ಬೀಜಸಹಿತ ಫಲವಾಗಿ, ಬೃಹತ್ ಆಗಬೇಕು ಎಂದರೂ ಒಂದೆ. ಏಕೆಂದರೆ ಕವಿಯು ತನ್ನ 'ದೇಹ' ಪ್ರಾಣ, ಮನಸ್ಸುಗಳ ಆಯಾಮಗಳಿಂದ 'ಸ್ವ' ಎಂಬ ತನ್ನ ತನವನ್ನು ಬಿಡುಗಡೆ ಮಾಡಿಕೊಂಡಾಗ, ಒಂದು ಅನಂತವೂ ಶಾಶ್ವತವೂ ಆನಂದ ಪೂರ್ಣವೂ ನಿರ್ಭಯವೂ ಆದ ನೆಲೆಗೆ ಬಂದು ನಿಲ್ಲುತ್ತಾನೆ. ಶ್ರೀ ರಾಘವರು "ತಾನೇ ತಾನಾಗಿರುವುದರಲ್ಲಿ" ಅಭಯದ ನೆಲೆ ಕಂಡಿದ್ದಾರೆ:

"ಏನು ಭಯ ನಮಗ್ಯಾರ ಭಯ
ತಾನೇ ತಾನಾಗಿರುವಭಯ........" (ಏನುಭಯ ?—)

ಅಭಯಕ್ಕೂ ಆಧ್ಯಾತ್ಮಕ್ಕೂ ಬಹುನಿಕಟ ಸಂಬಂಧ. "ಆನಂದಂ ಬ್ರಹ್ಮಣೋ ವಿದ್ವಾನ್ ನ ಬಿಭೇತಿ ಕದಾಚನ"ಎಂದು ಒಳಗಿನ ಆನಂದಕ್ಕೂ ಅಭಯಕ್ಕೂ ಅವಿನಾಭಾವ ಸಂಬಂಧ ಉಂಟೆಂದು ಉಪನಿಷತ್ತಿನ ಅನುಭಾವಿಗಳು ಕಂಡಿದ್ದಾರೆ. ಆನಂದವೆಂಬುದು ಅನಂತಾನುಭವ. ಅದು ಅರಿವಿನಿಂದ ದೂರವಾದದ್ದಲ್ಲ. ವೈಚಾರಿಕತೆಗೆ ಹೊರತಾಗಿಲ್ಲ.

"ರಸವ ಹೀರಲು ಕೂಡ ಎಲ್ಲ ಅರಿತಿರಬೇಕು." (ಓಹಾಡೆ—ಗರಿ)

ಎಂದು ಬೇಂದ್ರೆಯವರು ರಸಾನುಭವಕ್ಕೂ ಅರಿವಿಗೂ "ಗರಿ"ಯ ರಚನಾ ಕಾಲಕ್ಕೇ ಅನನ್ಯ ಸಂಬಂಧ ಗುರುತಿಸಿದ್ದರು. ಆದ್ದರಿಂದ ಕಾವ್ಯದಲ್ಲಿ **ಸ್ವ+ಅನುಭವ ;**

‘ಅಭಯಯಾನುಭವ’ ‘ರಸಾನುಭವ’ ಎಂಬ ಪದಗಳು ವೈಚಾರಿಕತೆಯ ನೆಲೆಯಲ್ಲಿ ಸ್ಪಷ್ಟಗೊಳ್ಳಬೇಕಾಗಿದೆ. ಅವರ ಪಾಲಿಗೆ ಆಧ್ಯಾತ್ಮಕ ಅನುಭೂತಿಯು ಸೋಪಾನವಾಗಿದ್ದವು. ಲೌಕಿಕ ಜೀವನ ಹಾಗೂ ಪಾರಲೌಕಿಕ ಜೀವನದ ಸೇತುವೆಯಾಗಿದ್ದವು. ಹಾಗೆ ಪ್ರಸ್ತುತ ಈ ಸಮುತೋಕದ ರಸಪ್ರಜ್ಞೆಯನ್ನು ಗುರುತಿಸದಿದ್ದರೆ ಶ್ರೀರಾಘವರಂಥ ಎಲ್ಲ ಹಿರಿಯ ಕವಿಗಳನ್ನೂ ನವೋದಯದವರು ಭಾವಕರು ಆಧ್ಯಾತ್ಮ ಕವಿಗಳಾದರು” ಎಂಬ ಹಣೆ ಪಟ್ಟಿ ಹಚ್ಚಿ ದೂರ ಕೂಡಿಸಿ ಬಿಡುತ್ತೇವೆ. ಶ್ರೀರಾಘವರಂಥ, ಜೀವನಾನುಭವದಿಂದ ಪಾಗಿದ ಕವಿಗಳ ಕವನಗಳ ತಿರುಳು, ನಾಡಿನ ಜನತೆಯ ಜೀವಂತ ಸಂಸ್ಕೃತಿಯ ಭಾಗವಾಗಿರುತ್ತದೆ. ಬರಿ ವಿಮರ್ಶಕರ ಮೌಲ್ಯನಿರ್ಣಯದ ವಿಷಯವಾಗಿರುವುದಿಲ್ಲ. ಈ ದೃಷ್ಟಿಯಿಂದಲೇ ಆಧ್ಯಾತ್ಮಿಕ ಸಂಸ್ಕೃತಿಯ ಮೂಲಭೂತ ಎಳೆಗಳನ್ನು. ಅವರ ಕವನಗಳಲ್ಲಿ ಗುರುತಿಸಲು ಇಲ್ಲಿ ಪ್ರಯತ್ನಿಸಲಾಗಿದೆ.

೧

ಮೊದಲನೆಯ ಎಳೆ **ಅಭಯ** ಅಂದರೆ ಭಯವು ತೊಲಗಿ. ಭಕ್ತಿ ಹುಟ್ಟುವುದು. ಸೃಷ್ಟಿಯ ಕರ್ತೃವಿನ ವಿಷಯದಲ್ಲಿ ಎಚ್ಚರವುಂಟಾಗಿ, ತನ್ನ ದೇಹವೇ ಆ ಪರಮ ಪುರುಷನ ದೇವಾಲಯವಾಗುವಂತೆ ಬದುಕುವುದು ನೈಜ ಯೋಗದ ತಿರುಳಾಗಿದೆ. ಅಭಯವು ಆಧ್ಯಾತ್ಮದ ಪ್ರಥಮ ಹೆಜ್ಜೆ. ಶ್ರೀರಾಘವರು “ಏನುಭಯ ?” ಎಂಬ ಕವನದಲ್ಲಿ ಭಯದ ಹುಟ್ಟು ಸಾವುಗಳನ್ನು ಗುರುತಿಸಿದ್ದಾರೆ. ಈ ಪದ್ಯದ ಸಾಲುಗಳು ಬರಿ ನೀತಿಯ ನುಡಿಗಳೆನ್ನಿಸವೆ, ಅರಿವಿನ ಹೆಜ್ಜೆಗಳನ್ನು ಹುಡುಕಲು ಹೊರಟವನಿಗೆ ಆ ಹೆಜ್ಜೆ ಮೂಡಿದ ದಾರಿ “ನೈತಿಕತೆ”ಯಾಗಿ ಕಾಣುತ್ತದೆ.

“ಜನುಮದ ಹಂಗಿಗೆ ಜೋತು ಬೀಳದೆ
ಮನವ ರಾಘವನ ಮನೆಯ ಮಾಡಿದರೆ”

ಅಭಯ ತಾನೇ ತಾನಾಗಿರುವುದೆಂದು ಈ ಕವನ ಮನದಟ್ಟುಮಾಡಿಕೊಡುತ್ತದೆ. ಈ ನುಡಿಗಳಲ್ಲಿ “ರಾಘವ”ನೆಂಬ ಶಾಶ್ವತಶಕ್ತಿ–ತನ್ನ ಸ್ವರೂಪದಲ್ಲಿ “ವ್ಯಕ್ತಿತ್ವ” ಅವರ ಮನಸ್ಸಿನಲ್ಲಿ ಆಕ್ರಮಿಸಿ–ಅದನ್ನೇ ಮನೆಯನ್ನಾಗಿಸಿ ನಿಂತು ಕೊಂಡಾಗ. ಆ ಸ್ವ-ಭಾವ- ಆಧ್ಯಾತ್ಮಸ್ಥಿತಿ-ಸಹಜವಾದಾಗ, ಅಭಯವೂ ಸಹಜವಾಗಿ ಸ್ಥಿರವಾಗುತ್ತದೆ. ಇಲ್ಲಿ ತನ್ನ ತನವು ಜನುಮದ ಹಂಗಿಗೆ ಜೋತು ಬೀಳದೆ ತನ್ನ ಶಾಶ್ವತ ಸ್ವರೂಪವನ್ನು ಗುರುತಿಸಬೇಕಾಗಿದೆ: ಕಂಡುಕೊಳ್ಳಬೇಕಾಗಿದೆ. ಅವರ ಪರಮಾನುಭೂತಿ ಜನ್ಮಾಂತರ ಸಾಧನೆಯ ಸಿದ್ಧಿಯಾಗಿರಬಹುದು. ಆದರೆ ನಾನು ಜನ್ಮಗಳ ಹಂಗಿಗೆ ಬೀಳಬೇಕಿಲ್ಲ ಎಂಬ ಎಚ್ಚರ ಇದೇ ಜನ್ಮದಲ್ಲಿ ಈ ಲೌಕಿಕ ಬದುಕಿನ ಮಧ್ಯೆ ಯಲ್ಲಿಯೇ ಬರಬಹುದು. ತೃಪ್ತಿಯಾಗಿ ಹೊಳೆಯಬಹುದು. ಇದು

ಹುಡುಕಾಟದಲ್ಲಿಯೇ ಬಾಳಿನ ಬವಣೆಗಳು, ಹಿತಕರ ಅನುಭವಗಳು ಅರ್ಥಪೂರ್ಣತೆಯನ್ನು ಪಡೆದುಕೊಳ್ಳುತ್ತವೆ. ಅರ್ಥಪೂರ್ಣತೆ–ಪರಪೀಡನೆ, ಪರಸತಿ, ಪರದೂಷಣೆ, ಪರಸುಖಗಳನ್ನು ಅಲ್ಲಗಳೆವ ನಕಾರಾತ್ಮಕ ತಿಳಿವಾಗಿರಬಹುದು; ನ್ಯಾಯಮಾರ್ಗ, ಕಾಯಕ ಜೀವನ, ತ್ಯಾಗದ ಬದುಕುಗಳ ನಕಾರಾತ್ಮಕ ಸಾಧನೆಯಾಗಿರಬಹುದು. ಈ ಎಲ್ಲ ಸಾಧನೆಯಿಂದ "ಸ್ವಭಾವ"ವು ಸ್ವರೂಪವನ್ನು "ರಾಘವ" ಎಂಬ ಹೆಸರಿನ ಹಿಂದೆ ಅಡಗಿದ ಮೂಲರಾಮನ, ಆತ್ಮಾರಾಮನ ಚೈತನ್ಯವನ್ನು ಕಂಡರಿಸುತ್ತದೆ. ಈ ಸ್ವರೂಪದರ್ಶನದ ಸಾಧನೆಯಲ್ಲಿದ್ದಾಗ ಕಾಲವು ತನ್ನ ಪರಿಮಿತಿಯನ್ನು ಅವಸ್ಥಾಂತರಗಳ ಭೀತಿಯನ್ನೂ ಮುಂದು-ಹಾಕುತ್ತದೆ:

"ಆತ್ಮದರಿವು ಬೆಳಗುತಿರೆ
ಮುಪ್ಪು ಸೌಖ್ಯದಾಸರೆ
ಹಣ್ಣಾಗುತ ನೆಲಕುದಿರೆ
ಮುಗಿಯಿತಲಾ ಬಾಳ ಸೆರೆ?
ತುಂಬು ಬಾಳ ಬಾಳುವರೆ
ಮುಪ್ಪೆ ಕಡೆಯ ಉಡುಗೊರೆ!

(—ಮುಪ್ಪು)

ಇಲ್ಲಿ ಮುಪ್ಪು, ಆತ್ಮದ ಅನಂತ ಜೀವನಕ್ಕೆ ಒಂದು ಅವಸ್ಥೆಯಾಗಿ ಕಂಡಿದೆ. ಉಡುಗೊರೆಯಾಗಿ-ಸೌಖ್ಯದ ಆಸರೆಯಾಗಿ ಕಂಡಿದೆ. ಮರಣದ ಭೀತಿಯನ್ನು ಹತ್ತಿರ ಮಾಡುವ ಸ್ಥಿತಿಯಾಗಿ ಕಂಡಿಲ್ಲ. ಇದು ರಾಘವರ ಆಧ್ಯಾತ್ಮಿಕ ಪ್ರಜ್ಞೆಯ ಗಟ್ಟಿಯಾದ ಭಾಗ.

೨

ಹೇಗೆ ದೇಹ ಕೋಶದಲ್ಲಿ ಪ್ರಾಣಕೋಶವೂ ಪ್ರಾಣದಲ್ಲಿ ಮನಸ್ಸೂ ಮನದಲ್ಲಿ ವಿಜ್ಞಾನ, ವಿಜ್ಞಾನದಲ್ಲಿ ಆನಂದಮಯ ಕೋಶವೂ ಅಡಗಿರುವುದೋ ಹಾಗೆಯೇ ಶ್ರೀರಾಘವರ ಕವನ ಶರೀರದಲ್ಲಿ ಅಧ್ಯಾತ್ಮಕೋಶವು ಅಂತರ್ಯಾಮಿಯಾಗಿ ನೆಲಸಿದೆ. ಆದರಿಂದಲೇ ಎಲ್ಲ ಕವನಗಳ ಶರೀರವು ಭಾವಿತವೂ ನಿಯಂತ್ರಿತವೂ ಆಗಿದೆ.

ಈ ಆಧ್ಯಾತ್ಮ ದೃಷ್ಟಿಗೆ ವಿಶ್ವವು ಸನಾತನ ಅಶ್ವತ್ಥಮರ. ಇದರ ಚೆಲುವು, ಸೊಗಸು, ಅನುಭೂತಿಯ ಪ್ರಾಣಸ್ಪಂದನ, ಎಲ್ಲವೂ ಪರಮ ಪುರುಷನ ಆವಾಸಕೇಂದ್ರ. ಈ ಅನುಭವವನ್ನು ಕವಿಗಳು "ಆಲದ ಮರ"ದ ಕಾವ್ಯ ಪ್ರತಿಮೆಯಲ್ಲಿ ಕಂಡಿದ್ದಾರೆ. "ಏಷ ವೃಕ್ಷಸ್ಸನಾತನಃ" ಎಂಬ ಪದ್ಯ ನಿಜವಾಗಿ ಕನ್ನಡ ಕವನಗಳಲ್ಲಿ ಅನನ್ಯ ಸುಂದರ

ಮಾಡುವುದು. ರಾಘವರ ಸೌಂದರ್ಯ ಪ್ರಜ್ಞೆಗೆ, ಸೌಂದರ್ಯದ ತೋರಿಕೆಯ ಮೈಯನ್ನು ನೀಡಿ ಒಳಗಿನ ಚೈತನ್ಯದ ಸ್ಪಂದನಕ್ಕೆ, ಪ್ರತಿಸ್ಪಂದಿಸುವ ಉದಾತ್ತತೆಗೆ, ಆ ಸ್ಪಂದನದ ಆಧಾರವಾಗಿರುವ ಸನಾತನ ಬ್ರಹ್ಮವನ್ನು ಗುರುತಿಸುವ ಆಧ್ಯಾತ್ಮಿಕತೆಗೆ ಈ ಪದ್ಯವೊಂದು ಸಾಕ್ಷಿಯಾಗಿದೆ.

"ಸುತ್ತ ಬೆಳೆದ ಹುತ್ತ ತಳೆದು ತೋರಲು ವಾಲ್ಮೀಕಿಯ ತರ
ಮಹಾಮೌನ ರಸಯೋಗ ಸ್ಥಿತ ಸ್ಥಾವರ ಋಷಿ ಪ್ರವರ-
ಯಾವ ನವ್ಯೋ ನವೀನ ಕಾವ್ಯ ಸ್ಫೂರ್ತಿಯೋ ಮನ್ವಂತರ ?
ಓ ವೃಕ್ಷ ಯೋಗಿವರ,
ನಿನಗೆ ನಮಸ್ಕಾರ" — (ಏಷ ವೃಕ್ಷಸ್ಸನಾತನಃ)

ಆಲದ ಮರವು 'ವೃಕ್ಷಯೋಗಿ'ಯಾಗಿ ಕಂಡಿರುವುದು. ಇಡೀ ಜೀವನವೇ ಒಂದು ಯೋಗ – '*All life is yoga*' – ಎಂಬ ಅರಿವನ್ನು ಧ್ವನಿಸುತ್ತದೆ. ಆಗುವುದು ಆಗುತ್ತದೆ; ಹೋಗುವುದು ಹೋಗುತ್ತದೆ. ಆದರೆ ಒಳಗಿನ ಕಣ್ಣು ತೆರೆದ ರಾಘವರಂಥ ಕವಿಗಳಿಗೆ ಈ ದರ್ಶನವು ಭಯ, ಭಕ್ತಿ ಹುಟ್ಟಿಸುತ್ತಾ ಹೊಸ ಮನ್ವಂತರದ ಕಾವ್ಯ–ಜೀವನ ಉದ್ಭವವಾಗುತ್ತಿರುವುದು ಗೋಚರವಾಗುತ್ತದೆ. ಆಲದೆಲೆಯ ಮೇಲೆ ಬಾಲ ಮುಕುಂದ ಮಲಗಿದ ಪ್ರತಿಮೆ ಹಳೆಯದು. ಆದರ ಸಾಂಕೇತಿಕಮೌಲ್ಯ ನಿತ್ಯ ನೂತನ. ರಾಘವರೂ ಈ ಆಲದ ವೃಕ್ಷದ ಮೇಲೆ ಹರಡಿದ ಅನಂತ ನೀಲಿಮೆಯಲ್ಲಿ ಸುಂದರ ಶಿಶು ಕೃಷ್ಣನನ್ನೇ ಕಂಡಿದ್ದಾರೆ. ಮುಗಿಲ ಬೆಣ್ಣೆ ಮುದ್ದೆ. ಗಗನ ನೀಲಿಮೆಯ ಶೋಭೆ ಬಾಲಮುಕುಂದನ ಪೌರಾಣಿಕ ಪ್ರತಿಮೆಗೆ, ಇನ್ನೊಂದು ಪ್ರತಿಮೆಯಾಗಿ ನಿಂತಂತೆ ಕಾಣುತ್ತದೆ. ಇದರಲ್ಲಿ,

"ಭವಾಂಬುಧಿಯ ಮೇಲೆ ಮೆರೆವ ಬ್ರಹ್ಮಧಾಮ ಬಂಧುರನ.
ಆಲದೆಲೆಯ ಮೇಲಿನ
ಸುಂದರ ಶಿಶು ಕೃಷ್ಣನ"

ದರ್ಶನ ಕವಿಗಳಿಗಾಗುತ್ತದೆ. ಕವಿಗಳ ಒಳಗಿನ "ರಾಘವ" ಹೊರಗಿನ ಈ "ಸುಂದರ ಶಿಶು ಕೃಷ್ಣ" ಏಕರೂಪರಾಗಿದ್ದಾರೆ. *Escape from personality*- ವ್ಯಕ್ತಿತ್ವದಿಂದ ಮುಕ್ತನಾಗುವ ಸಾಧನೆ ಇದಕ್ಕಿಂತ ದೊಡ್ಡದುಂಟೆ? ಇದು ಕವನಗಳ ಮೂಲಕ ತನ್ನ ವ್ಯಕ್ತಿತ್ವವನ್ನು ಓದುಗರ ಮೇಲೆ ಹೇರುವುದಲ್ಲ. ಕವನದ ವಸ್ತು ಪ್ರತಿರೂಪದ ಮೂಲಕ ಒಳ ಹೊರಗೆ ಏಕ ರೂಪವಾಗಿರುವ ಪುರುಷನ ಸಂಸ್ಪರ್ಶವನ್ನು ರಸಿಕರಿಗೆ ನೀಡಿ, ಅವರೊಳಗಿನ ಶಾಶ್ವತ ಜೀವಂತಿಕೆಯನ್ನು ಉದ್ದೀಪನ ಮಾಡುವ ಸಂಸ್ಕೃತಿ ಇದು. "ನಾನು" ಎಂಬ ಅಹಂಕಾರ, ಕಾಮಕ್ರೋಧಾದಿ ವಿಕಾರ, ಸಂಕಲ್ಪ-ವಿಕಲ್ಪಾದಿ ಮಾನಸಿಕ ಸಂಸ್ಕಾರಗಳಿಗೆ ಅತೀತನಾದ ಶಾಶ್ವತ ಕವಿ 'ರಾಘವನು' ಬಿಟ್ಟದ

ಸನಾತನ ಭವಾಂಬುಧಿಯ ಮೇಲೆ ಅದರ ಸಾರವಾಗಿ ರಸಪುರುಷನಾಗಿ ತೇಲುವ ಬಾಲ ಮುಕುಂದನನ್ನು ಕಂಡು ಹಾಡುವುದು-ಅನುಭವಿಸುವುದು. ಅಧ್ಯಾತ್ಮದ ಇನ್ನೊಂದು ಸಾಧನೆ. ಇದು ವಿಭೂತಿಯೋಗ.

"ಈಶಾವಾಸ್ಯಮಿದಂ ಸರ್ವಂ" ಎಂಬ ಉಪಾಸನೆ ಈ ಯೋಗವು, ಕೇವಲ ಕವಿ ದರ್ಶನವಾಗಿ – ಕಲ್ಪನೆಯಾಗಿ ಉಳಿದಿದೆಯೋ, [illegible] ಅವರ ನೈಜ ಅನುಭವವೇ ಎಂಬುದು ಬೇರೆ ಪ್ರಶ್ನೆ. ಇಲ್ಲಿ ಉದಾತ್ತೀಕರಣಕ್ಕಿರುವ ಪ್ರಮಾಣವೇನು? ಎಂಬ ಪ್ರಶ್ನೆ ಬರುತ್ತದೆ. ಇದರಲ್ಲಿ ಸ್ವಂತದ್ದೆಷ್ಟು ? ಪರಂಪರಾಗತವಾಗಿ ಬಂದುದರ ಹೊಸರೂಪವೆಷ್ಟು? ಇದರಲ್ಲಿ ಕಾವ್ಯವಾಗಿ ದಕ್ಕಿದ್ದೆಷ್ಟು? [illegible]ಯಾಗಿ ಬಿದ್ದಿದ್ದೆಷ್ಟು? ಸಮಕಾಲೀನ ಜೀವನಕ್ಕೆ ಪ್ರಸ್ತುತ-ರಿಲೆವೆಂಟ್- ಆದದ್ದೆಷ್ಟು? ಇತ್ಯಾದಿ ಪ್ರಶ್ನೆಕೇಳಿ ಪಿಲಾತನು ಏಸುವಿಗೆ ಸತ್ಯವೆಂದರೇನೆಂದು ಕೇಳಿ, ಉತ್ತರಕ್ಕಾಗಿ ದಾರಿ ಕಾಯದೆ ಹೋದಂತೆ, ನಮ್ಮ ವಿಮರ್ಶಕರೂ ಅಧ್ಯಾತ್ಮವು ಅಪ್ರಸ್ತುತ, [illegible] ಹೇಳಿಕೆ- ಇತ್ಯಾದಿ ನಿರ್ಣಯಕ್ಕೆ ಬರುತ್ತಾರೆ. ಹೀಗಾಗಿ ಇಡೀ ನವೋದಯ ಕಾವ್ಯವೇ ಇಂದು ಅಪ್ರಸ್ತುತವೆಂಬ ಭ್ರಾಂತಿ, ಅಭಿರುಚಿ ವಿಕಾರ ಹುಟ್ಟಿದೆ.

ಆಲದೆಲೆಯ ಮೇಲೆ ಮಲಗಿದ ಕೃಷ್ಣನ ಪೌರಾಣಿಕ ಪ್ರತಿಮೆಯೇ ಒಂದು ಸುಂದರ *Archetypal* – ಮೂಲ ಮಾದರಿ ದರ್ಶಕ 'ಕಾವ್ಯವಸ್ತು'ವಾಗಿದೆ. ಅದರ ಇನ್ನೊಂದು ರೂಪವನ್ನು ಕವಿ ರಾಘವರು, ಬೃಹತ್ [illegible] ಮೇಲಿನ ನೀಲಾಕಾಶ, ಗ್ರಹನಕ್ಷತ್ರಾದಿ ಜೀವನ ಲೋಕ. [illegible]ಗಳಲ್ಲಿ ಕಂಡರೆ - ಅವನ್ನು ಕಂಡರಿಸಿದರೆ. ಆದೊಂದು ಉತ್ತಮ ಕಲ್ಪನಾಶಕ್ತಿಯ ಸಾಧ್ಯತೆಯನ್ನು ನಾವು ಒಪ್ಪಬೇಕು.

ಎರಡು ಸಂಬಂಧವಿಲ್ಲವೆಂದು ಕಾಣುವ ವಸ್ತು, ಸಂಗತಿ. ಚಿತ್ರಗಳಲ್ಲಿ ಏಕರೂಪ ತೋರುವ ರೂಪಕ ವಸ್ತು, ಕಾವ್ಯದ ಬಹು ಸಮರ್ಥ ಸಾಧನವೆಂದು ನಂಬಿದ್ದಾರೆ, ಇಲ್ಲಿ ಮಹಾ ಆಲದಮರದಲ್ಲಿ ಸನಾತನ ಅಶ್ವತ್ಥವೃಕ್ಷದ ಕಲ್ಪನೆಯನ್ನು ಪ್ರಳಯ ಜಲಧಿಯಲ್ಲಿ ತೇಲುವ ಬಾಲ ಮುಕುಂದನನ್ನು ಮಹಾ [illegible] ಹಾಕುತ್ತಿರುವ ಯೋಗೀಶ್ವರ ವಾಲ್ಮೀಕಿಯ ಚಿತ್ರವನ್ನು [illegible] ಅದ್ಭುತ ರೂಪಕವಾಗಿದೆ.

ಈ ಹೊಂದಾಣಿಕೆ [illegible] ಕವಿಗಳ ಕಾವ್ಯದ [illegible]. ಇನ್ನು ಇದು ಅಧ್ಯಾತ್ಮ-ಅನುಭಾವ, ಎನ್ನಬಹುದಾದ ಅನುಭವದ ಪ್ರತಿಮೆಯೇ? ಎಂದರೆ, ಅದರ ಪ್ರಾಮಾಣಿಕತೆಗೆ ವೈಜ್ಞಾನಿಕ ಮಾನದಂಡ ಸಾಲದಾಗುವುದಿಲ್ಲ. ಕಲ್ಪನೆಯ ಮಟ್ಟಕ್ಕೆ ಬಂದದ್ದು ಪ್ರಾಣದ ಮಟ್ಟಕ್ಕೆ. ಜೀವಾಳದ ಮಟ್ಟಕ್ಕೆ, ಇಳಿದಿದೆಯೋ-ಇಲ್ಲವೋ ಎಂಬುದು ಅನುಭವಿಸಿ ನೋಡಬೇಕಾದ ಮಾತು.

ಅಧ್ಯಾತ್ಮವೆಂದರೆ ಅತೀಂದ್ರಿಯ ಅನುಭವ ಮಾತ್ರವಲ್ಲ. ಅನುಭಾವವೆಂಬ ಶಬ್ದದಲ್ಲಿ ಅನಂತ ಗಗನ ಅನುಭವವೆಂಬ ಅರ್ಥವನ್ನು ಮಾಡಬೇಕಿಲ್ಲ. ವ್ಯಕ್ತಿ ತನ್ನನ್ನು ಇನ್ನೊಂದು ಸಮಾಜದ ಕಡೆಗೆ ಇದರ ಕಡೆಗೆ ನೋಡುವ. ಅದರಿಂದಾಗಿ ತ್ಯಾಗ ಮನೋಭಾವ, ಪ್ರೀತಿ ಗಾಢವಾದಂತಾದ ಭಾವ ಅನುಭವವೂ ಅಧ್ಯಾತ್ಮದ ಒಂದು ರೂಪವಲ್ಲವೆ. ಆ ವ್ಯಕ್ತಿಯಿಂದಲೆ ಸ್ವತಃ, ರಾಷ್ಟ್ರೀಯತೆ, ಮಾನವತಾವಾದ - ಅನುಭವದ ಮೂಲವಾಗಿ ಅಧುನಿಕ ಅನೇಕ ವಾದಗಳೂ ಅಧ್ಯಾತ್ಮಿಕತೆಯ ಸತ್ಪರಿಣಾಮಗಳಾಗುತ್ತವೆ.

ಮುಖ್ಯವಾಗಿ ಜನಸಾಮಾನ್ಯರ ದೃಷ್ಟಿಯಲ್ಲಿಯೂ ಸಹಜ ಸುಖ, ಸಹಜ ಪ್ರೀತಿ, ಸಹಜ ತ್ಯಾಗ, ಸಹಜ ಮಾನವೀಯತೆ, ಸಹಜ ಕರುಣೆ, ಅನುಭವಕ್ಕೆ ಬರುವ ಸಂಗತಿಗಳು. ಇವುಗಳಲ್ಲಿ ಭಾವೋದ್ರೇಕಗಳಿಲ್ಲ. ನಿಜವಾಗಿ 'ಭಾವ'ವೆಂದರೆ, ಇರುವುದರ ಅರಿವು; ಮನಸ್ಸಿನ ಅಂತರಾಳದಲ್ಲಿ ತನ್ನ ಅಸ್ತಿತ್ವದ ಬಗೆಗೆ, ಜೀವದ ಬಗೆಗೆ ಪ್ರಜ್ಞಾವಂತ ಅಥವಾ ಸಾಮಾನ್ಯ ಎಚ್ಚರವುಳ್ಳವನಾಗುವುದು. ರಾಘವರ ಕವನಗಳಲ್ಲಿ ಈ ಎಚ್ಚರಕ್ಕೆ ಮೂಲಭೂತವಾದ ಶ್ರದ್ಧೆ, ಇದೇ ಎಚ್ಚರದ ವಿಸ್ತಾರಕ್ಕಾಗಿ ಸಾಧನೆ, ಈ ಸಾಧನೆ ಜನ್ಮಾಂತರದಲ್ಲಿ ನಡೆಯುವುದೆಂಬ ವಿಶ್ವಾಸ, ಇಂಥ ಸಾಧನೆಯನ್ನು ನಿಯಂತ್ರಿಸುವ ಅತೀಂದ್ರಿಯ ಶಕ್ತಿಯಲ್ಲಿ ಭಕ್ತಿ ಹಾಗೂ ಆ ಶಕ್ತಿಯ ಅಲೌಕಿಕ ಕರುಣೆಯ ಸೂಕ್ಷ್ಮ ಸಂವೇದನೆ -- ಇವೆಲ್ಲ ಕಂಡುಬರುತ್ತದೆ.

ಜೀವನವನ್ನು ನಾಸ್ತಿಕ ಆಸ್ತಿಕವೆಂದು ಕಟ್ಟುನಿಟ್ಟಾಗಿ ವಿಂಗಡಿಸುವುದು ಸತ್ಯವನ್ನು ಸರಳೀಕರಿಸಿದಂತೆ. ನಮ್ಮಲ್ಲಿ ವೇದವೆಂದರೆ, "ಧರ್ಮ"ವೆಂದು ನಂಬುವವರ ಪರಂಪರೆಯುಂಟು. ವಿಜ್ಞಾನಿಗಳೂ "ನಿಯಮಗಳನ್ನು" ಹುಡುಕುತ್ತಾರಲ್ಲದೆ "ಪರಮ ಸತ್ಯ"ದಲ್ಲಿ ಆಸಕ್ತರಾಗಿಲ್ಲ. ಇನ್ನು "ವೇದಾಂತಿ"ಗಳೆಂಬುವರೂ ಪರಮಸತ್ಯ, 'ಅನಿರ್ವಚನೀಯ ಅಗಮ್ಯ' - ಎಂದೇ ಹೇಳುತ್ತಾರೆ. ಅವರೂ 'ಆನಂದಮಯತ್ವ', 'ನೈಜಸುಖ'ಗಳನ್ನು ಅತೀತಕ್ಕೂ ಈ ಲೌಕಿಕಕ್ಕೂ ಸೇತುವೆಯಾದ 'ಗುಣ'ವೆಂದು ಗುರುತಿಸುತ್ತಾರೆ. ಈ ಆನಂದದ ಅರಿವು-ಅನುಭವಗಳ ಅನ್ವೇಷಣೆ, ಅದರ ಪೂರ್ವಸಿದ್ಧತೆ, ಸಾಧನೆ, ಸಿದ್ಧಿಗಳೆಲ್ಲ "ಅಧ್ಯಾತ್ಮ" ಎಂಬ ಶಬ್ದದಲ್ಲಿಯೇ ಬಳಕೆಯಾಗುವದುಂಟು.

ಈ ಅಂಶಗಳನ್ನೆಲ್ಲ ಸಂಗ್ರಹವಾಗಿ, ತಿಳಿಸುವ "ಅಥಾತೋ ಬ್ರಹ್ಮಜಿಜ್ಞಾಸಾ" ಎಂಬ ಬ್ರಹ್ಮಸೂತ್ರವಿದೆ. ಬ್ರಹ್ಮ ಅಥವಾ ವೇದ ಅಥವಾ ದೇವರು ಎಂಬುದು 'ಜಿಜ್ಞಾಸೆ'ಯಾಗಬೇಕಾದರೆ, ತಿಳಿವಿಗೆ ಬಾನಾಗಿ ನಮ್ಮಲ್ಲಿ ಮೂಡಬೇಕಾದರೆ ಕನಿಷ್ಠ ಪವಾಡ ಸಾಧನ ಸಂಯಮ್ಯದರೂ ಬೇಕು; ಸ್ವಾಭಾವಿಕವಾದ ಅಧಿಕಾರವಾದರೂ ಬೇಕು. ಅದಕ್ಕೆ ವಿಶ್ವಾಸ ಕರುಣೆಯಿಂದ ಚಿತ್ತ ಶುದ್ಧಿಯನ್ನಾದರೂ ಸಾಧಿಸಬೇಕು.

ಅಥವಾ ಇವೆಲ್ಲವೂ ಒಟ್ಟುಗೂಡಿರಲೂ ಬಹುದು. ತದನಂತರ ನಿಷ್ಪಕ್ಷಪಾತಭಾವ ಅಥವಾ ವೈರಾಗ್ಯ, ಅನುರಕ್ತಿ ಅಥವಾ ಭಕ್ತಿ, ಉಪಾಸನೆ, ಜ್ಞಾನ ಎಂಬ ನಾಲ್ಕು ಬಗೆಯ ಸಾಧನಾ ರೂಪದ ಜಿಜ್ಞಾಸೆ ಬೇಕು. ಆಗ 'ಪ್ರತಿಮಾ ರೂಪದ ಸಾಂಕೇತಿಕ ರೂಪದ ಸತ್ಯವು – ಜಿಜ್ಞಾಸೆಗೆ ಕಾರಣವಾದ ವಸ್ತುವು – ಬ್ರಹ್ಮವು, ತನ್ನ ಧ್ವನಿತಾರ್ಥವನ್ನು – ಸ್ವರೂಪವನ್ನು ತೆರೆಯುತ್ತದೆ. ಅದು ಆನಂದಮಯವಿರುವುದರಿಂದ ಅದರಲ್ಲಿ 'ತನ್ಮಯತೆ-ಯೋಗ' ಉಂಟಾಗುತ್ತದೆ. ಸಾಮಾನ್ಯನ ಅನುಭವದಲ್ಲಿಯೇ ಕಾಲೂರಿ, ಅತೀಂದ್ರಿಯದವರೆಗೆ ತಲೆಎತ್ತುತ್ತವೆ ಈ "ಆಧ್ಯಾತ್ಮಿಕ ಸಾಧನೆ."

ಈ ದೃಷ್ಟಿಯಿಂದ ರಾಘವರ ಕವನಗಳನ್ನೆಲ್ಲ ಒಂದು ಅಖಂಡ ಆಧ್ಯಾತ್ಮಿಕ ಅನ್ವೇಷಣೆಯ ಅಭಿವ್ಯಕ್ತಿ ಎಂದೇ ಗುರುತಿಸಬಹುದು.

೩

ರಾಘವರ ಕವನಗಳಲ್ಲಿ ಬಹುದೊಡ್ಡಭಾಗ ವ್ಯಕ್ತಿಗಳಿಗೆ ಅವರು ಸಲ್ಲಿಸಿದ ಗೌರವಾರ್ಪಣೆಗಳಿಂದ ಕೂಡಿದೆ. ಗೋವಿಂದ ಪೈ, ಬಿ.ಎಂ.ಶ್ರೀ, ತೀ.ನಂ.ಶ್ರೀ. ಬೇಂದ್ರೆ ಮೊದಲಾದ ಸಮಕಾಲೀನ ಕವಿಗಳು; ಗಾಂಧೀಜಿ, ವಿವೇಕಾನಂದ, ಪರಮಹಂಸ ಮೊದಲಾದ ಅಲೌಕಿಕ ಪುರುಷರು ಇಲ್ಲಿ ಕವಿಗಳ ಗೌರವಾರ್ಪಣೆಗೆ ಪಾತ್ರರಾಗಿದ್ದಾರೆ.

ಹಿರಿಯ ವ್ಯಕ್ತಿಗಳ ಕುರಿತು ಗೌರವಾನ್ವಿತ ಕವನ ರಚನೆ, ಒಂದು ಬಗೆಯ ಪೂಜ್ಯ ಭಾವ, ಪಾವಿತ್ರ್ಯ, ಹಿರಿತನಗಳ ಉಪಾಸನೆಯ ಸಾಧನೆಯಾಗುತ್ತದೆ. ಮೂಲಭೂತವಾಗಿ 'ಅನಸೂಯಭಾವ' ಈ ಸಾಧನೆಯ ಸಹಜ ಪರಿಣಾಮವಾಗಿ ಸಂಸ್ಕಾರವಾಗಿ ನೆಲೆಗೊಳ್ಳುತ್ತದೆ. ಕವಿಯಾದವನು ಜಗದ್ವಿಭೂತಿಗಳನ್ನು ಗುರುತಿಸುತ್ತಾ ಗೌರವಿಸುತ್ತ, ತನ್ನ ವಿಭೂತಿಯನ್ನು ತನ್ನ 'ಸ್ವ' ರೂಪವನ್ನು, ಸ್ವಂತಿಕೆಯನ್ನು ಕಂಡುಕೊಳ್ಳುತ್ತಾನೆ. ವಿಭೂತಿಯೋಗದ ಮುಂದಿನ ಹೆಜ್ಜೆ ವಿಶ್ವರೂಪದರ್ಶನ. ತನ್ನ ಜೀವನವನ್ನೂ ವಿಶ್ವಜೀವನವನ್ನೂ ರೂಪಿಸುವ, ನಿಯಂತ್ರಿಸುವ, ಸಂಹರಿಸುವ ತನ್ನೊಳಗೆ ಎಳೆದುಕೊಳ್ಳುವ ವಿರಾಡ್‌ಸ್ವಾಮಿಯನ್ನು ಕಾಣುವ ಹಂಬಲ ಉಂಟಾಗುತ್ತದೆ. ಆ ವಿರಾಡ್ ಪುರುಷನ ನಿಮಿತ್ತವಾಗಿ, ಸ್ಥಿತ ಪ್ರಜ್ಞನಾದ ಕರ್ಮಯೋಗಿ

ಯಾಗಿ. ಬಾಳನ್ನೇ ಯಜ್ಞವನ್ನಾಗಿಸುವ ಅಭಿಲಾಷೆ ಮೂಡುತ್ತಾನೆ. ಈ ಹಂಬಲ ವಿಸ್ತೃದ ತಿಳುವಳಿಕೆಯು [illegible]ಯಾಗಿ, ಜ್ಞಾನವಿಜ್ಞಾನ ಸಹಿತವಾದ ಧ್ಯಾನ ಯುಕ್ತವಾದ ಭಕ್ತಿಯಾಗಿ. ಶರಣಾಗತಿ ಭಾವ ತಳೆಯಲಾಗುತ್ತದೆ,

"ದ್ರಷ್ಟುಮಿಚ್ಛಾಮಿ ತೇ ರೂಪವೈಶ್ವರಂ"

ಎಂಬ ಪ್ರಾರ್ಥನೆ ಮಾಡಿರುವ ಕವನದಲ್ಲಿ ಅಂಥದೊಂದು ಅಭಿವ್ಯಕ್ತಿ ಇದೆ.

ಕವನದ ಪ್ರಾರಂಭದಲ್ಲಿ ಬೈಬಲಿನಿಂದ ಆಯ್ದುಕೊಂಡ ವಾಕ್ಯ

God said;
'Let there be light'
And there was light.

ಎಂದಿದೆ. "ದೇವರು ಬೆಳಕಿರಲಿ ಎಂದ. ಬೆಳಕು ಇದ್ದು ಬಿಟ್ಟಿತು" ಈ ವಾಕ್ಯವನ್ನು ಕವಿಗಳು ಬಳಸಿಕೊಂಡಿದ್ದಾರೆ. ನಮ್ಮ ಸ್ವಯಂ ಪರಬ್ರಹ್ಮನ ಪರಂಜ್ಯೋತಿ ರೂಪ ಹಾಗೂ ಆತನಿಂದ ಪರಾಪ್ರಕೃತಿ. ಆದಿಮಾತೆ ಸೃಷ್ಟಿಶಕ್ತಿ ಉದಯಿಸುತ್ತಾಳೆ. ಅವಳು 'ರೂಪವತಿ-ತಾಯಿ'. ಆಕೆಯ ದಿವ್ಯರೂಪವನ್ನು "[illegible]" ಎಂದು ಕವಿಗಳ ಇಚ್ಛೆ. ಅದು ಕವನ ರೂಪತಾಳಿದೆ.

"ದ್ರಷ್ಟುಮಿಚ್ಛಾಮಿ" ಕವನದಲ್ಲಿ ಕವಿಗಳು ಪರಮ ಪುರುಷನ "ಜಾಯಿ-ಮಾಯಿ-ಪ್ರಕೃತಿ-ಅಜಿತವರ ಸುಕೃತಿ" ಯಾದ ವಿಶ್ವರೂಪಿಣಿಯನ್ನು ನೋಡಲು ಬಯಸಿದ್ದಾರೆ. ಇದು ಕಿಡಿ-ಅಗ್ನಿಯನ್ನಪ್ಪಲು ಬಂದಂತೆ. ಮಗು ತಾಯಿಯನ್ನು ಸೇರಲು ಬಂದಂತೆ. "ಚಿತ್ತಿ ಸತ್ಯ" ಎಂಬ ಕವನದಲ್ಲಿ ಪರಮ ಪುರುಷನ ಕನಸೇ ಈ ಕಾಂಬ ಸೃಷ್ಟಿ ಎಂಬ ಅನುಭವಕ್ಕೆ ತಾವು ಹೇಗೆ ಬಂದು ತಲುಪಿದೆವೆಂದು ಕವಿಗಳು ವಿವರಿಸಿದ್ದಾರೆ.

ಪ್ರಸ್ತುತ, ಆ ಪರಮ ಪುರುಷನ ಮಾಯಾಶಕ್ತಿ-ಪರಾಪ್ರಕೃತಿ-ಲಲಿತೆ, ದುರ್ಗೆ ಚಾಮುಂಡಿ ಎಂದೆಲ್ಲಾ ಹೆಸರಾದ ಶಕ್ತಿಲೀಲೆಯನ್ನು "ದ್ರಷ್ಟುಮಿಚ್ಛಾಮಿ" ಎಂಬ ಕವನದಲ್ಲಿ ವಿಸ್ತಾರವಾಗಿ ವರ್ಣಿಸಿರುವುದನ್ನು ಗಮನಿಸಬಹುದು.

ಕ್ಷಣ ಕ್ಷಣಕ್ಕೂ ಹೊಸದಹುದು, [illegible] ಈ ಶಕ್ತಿಲೀಲೆಯನ್ನು ಸಮಗ್ರವಾಗಿ ಅರಿಯಲು ಸಾಧ್ಯವಿಲ್ಲ. ಆದರೆ ಅರಿವಿನ ಹಾದಿಯಲ್ಲಿರುವಾಗ ಅರಿಯುವುದೇ ಸಾಧನವಾಗಿ, ಶರಣಾಗತಿ ಭಾವವಾಗಿ, ಆನಂದದ ಸ್ಫುರಣೆಲಿ ಗೋಚರವಾಗುತ್ತದೆ. ಅದ್ದರಿಂದಲೇ ಈ 'ಅರಿವಿನ ಸಾಧನೆ' ಮುಖ್ಯವು. ಪರಿಪೂರ್ಣವಾಗಿ ಅರಿಯುತ್ತೇನೆಂಬ ಅಹಂಕಾರವೂ ಸಲ್ಲದು. ಹಾಗೆಂದು ಅರಿಯದೇ ಮೂಢನಾಗಿರುವ ತಾಮಸಿಕತನ-ಜಡತ್ವವೂ ಸಲ್ಲದು. ಅರಿಯುತ್ತ ಅರಿಯುತ್ತ ಭಯದಿಂದ ಮುಕ್ತ

ನಾಗುತ್ತ, ತಾನು ಕಂಡುದರಲ್ಲಿ ತಾಯ್ತನದ ಕರುಣೆ, ರಕ್ಷೆಗಳನ್ನು ಕಂಡು ಸಾಧನೆ ಮುಂದುವರಿಸುತ್ತಾ ಆ ಸನಾತನ ಸಾರಥಿಯ ಮಾರ್ಗದರ್ಶನದಲ್ಲಿ ಕರ್ಮಮಾಡುತ್ತ ಸ್ವ-ಭಾವ-ಅಧ್ಯಾತ್ಮ ನೆಲೆಕಂಡು, ಅದು ಆನಂದದ ಸ್ಥಿರಧಾಮವೆಂದು ತಿಳಿದು, ಅಲ್ಲಿಯೇ ನಿಲ್ಲುವುದು ನಮ್ಮ ವೇದಾಂತದ ದಾರಿ. ಇದು ಜಿಜ್ಞಾಸೆ, ಇದು ಉಪಾಸನೆ. ಇದು ಸಾರ್ಥಕತೆಯ ನೆಲೆ.

"ದ್ರಷ್ಟುಮಿಚ್ಛಾಮಿ" ಕವನದಲ್ಲಿ ಇಂಥ ಹುಡುಕಾಟ. ಇಂಥ ರಕ್ಷಣಾ ನೆಲೆ, ನಿರ್ಭಯದ ನಿಲ್ಲುವು. ಶರಣಾಗತಿಯುಂಟು. ಅದರ ಪರಿಭಾಷೆ ಚಾಮುಂಡಿ, ಲಲಿತೆ ಲಾವಣ್ಯ ಲಕ್ಷ್ಮಿ ಎಂದೂ ಇರಬಹುದು. "ಮೃಣ್ಮಯೀ-ಚಿನ್ಮಯೀ" ಎಂದೂ ಇರಬಹುದು.

"ನಿನ್ನ ಮೋಹದ ನೃತ್ಯಲಯದ ಬಲಿ-ಸೆರೆಯಾಗಿ
ವಿಶ್ವದಣುಕಣವೆಲ್ಲ ಹುಚ್ಚು ಕುಣಿಯುವವು;
ನಿನ್ನ ಕುಣಿತದ ಕಲೆಯ ಜೇಡ ಬಲಿಗೆರೆಯಾಗಿ
ಬಳಿಸಾರಿ ತಾವಾಗಿ ಮಡಿಯ ಮಣಿಯುವವು."

ಹೀಗೆ ವಿಶ್ವದರ್ಶನ ಉಗ್ರವೂ ಮಾಯಾಮಯವೂ ಆಗಿ ಕಂಗೆಡಿಸಿದರೂ ಅದು ಮೂಲತಃ ತಾಯ್ತನದ ಪ್ರೇಮಲ ಆಕರ್ಷಣೆ. ಅದ್ದರಿಂದಲೇ ಅದಕ್ಕೆ ಶರಣಾಗುವುದು. ಆ ಪ್ರೇಮದಲ್ಲಿ ಶಾಶ್ವತ ಆನಂದದ ನೆಲೆಯುಂಟು. ಆದ್ದರಿಂದಲೇ ಈ ಶರಣಾಗತಿಯು ಪರಮ ಸಾರ್ಥಕವೆನ್ನಿಸುವುದು. ಆದ್ದರಿಂದಲೇ ಕವಿ ಬೇಡುವರು

ಓ ಪ್ರಕೃತಿ ಪಾರ್ವತಿ !
ರಾಮಣೀಯಕ ರೂಪ ದೀಪಲಕ್ಷ್ಮಿ,
ನಾದ ರೂಪಿಣಿ ವಾಣಿ,
ನಿನಗೆ ನಮನ, ನಿನಗೆ ನಮನ
ಕೊಳ್ ಎನ್ನ ತನು ಮನ,
ನಿನಗರ್ಪಣ.

ಇಲ್ಲಿರುವ ಶರಣಾಗತಿ, ಭಕ್ತಿ, ಮೋಕ್ಷದ ಅಭಿಲಾಷೆ, ಇವು ಜೀವನದ ಪರಾಙ್ಮುಖತೆಯಲ್ಲ. 'ಬೇಡಿಕೆ' ಎಂಬ ಕವನದಲ್ಲಿ ತಾವು ಬೇಡುವುದು :

"ಮೋಕ್ಷವಲ್ಲ, ಮೋಕ್ಷವಲ್ಲ
ಮೋಕ್ಷ ಶೂನ್ಯಸಾಗರ"

ಎಂದಿದ್ದಾರೆ. ಹಕ್ಕಿಯಾಗಿ ಹಾಡುವಂತೆ ಅನುಗ್ರಹಿಸಬೇಕೆಂದು ಕೇಳಿಕೊಳ್ಳುತ್ತಾರೆ. ನೆಲಮುಗಿಲುಗಳ ಚೆಲುವನ್ನು ಹೀರುತ್ತ, ಸದಾ ಹಾಡಿಗಾಗಿ ಹಾಡ ಹಾಡುತ್ತಿರುವುದೇ ಅಭಿಲಾಷೆ. ಬೇರೆಯಾರ ಮೆಚ್ಚಿಗೆಗಾಗಿಯೂ ಹಾಡುವುದಿಲ್ಲ. ಇದರಲ್ಲಿ ಗೋಳಿನ ದನಿ ತುಂಬಿರುವುದಿಲ್ಲ. ದೇವರನ್ನು ಎಂದೂ ಮರೆಯದೆ ಸದಾ ಹಾಡುತ್ತ.

"ಹಕ್ಕಿಯಾಗಿ ಹಾಡಿ ನಿನ್ನ
ವೀಣೆಯಾಗುವೆ ;
ಹಾಡಿ ಮಡಿದು ಕೊನೆಗೆ ನಿನ್ನ
ವಾಣಿಯಾಗುವೆ."

ಇದು ರಾಘವರು ದೇವರಲ್ಲಿ ಬೇಡುವ ಒಂದೇ ಒಂದು ವರ. ಇಲ್ಲಿ ಮೋಕ್ಷದ ಬಗೆಗೆ ಕವಿಗಳು "ಶೂನ್ಯಸಾಗರ"ವೆಂದು ಹೇಳಿದ ಮಾತನ್ನು ಪ್ರಧಾನವಾಗಿ ತೆಗೆದುಕೊಳ್ಳುವದಕ್ಕಿಂತ ನೆಲಮುಗಿಲುಗಳಲ್ಲಿ ಏಕಪ್ರಕಾರದ ಆನಂದಾನುಭವ ಪಡೆಯಬೇಕೆಂಬ ಅಭಿಲಾಷೆ. ದೇವನಿಗೆ ವೀಣೆಯಾಗಿ, ವಾಣಿಯಾಗಿ ಮಾರ್ಪಡುವ ಅಥವಾ ಬೆಳೆಯುವ ಸಾಂಕೇತಿಕ ಬಯಕೆ ಮುಖ್ಯವಾದುದು. ಬಾಳಿನಲ್ಲಿ ಶ್ರದ್ಧೆ ಕುರುಡು ನಂಬಿಕೆಯಲ್ಲ. ನಿಜವಾದ ಕುರುಡು ನಂಬಿಕೆ ಎಂದರೆ, ಪಶುವಿನಂತೆ ಬದುಕುತ್ತಿರುವ ಅಲ್ಪ ಜೀವನದಲ್ಲಿಯ ಆಸಕ್ತಿ.

"ಹಣದ ಆಸೆ, ಒಲುಮೆವೆಣ್ಣ
ಪಡೆವ ಹಂಬಲು
ಜನದ ಮೆಚ್ಚು ಪಡೆವ ಹುಚ್ಚು
ಮನವ ತುಂಬಲು ;
ಕಿರಿಯ ಗುರಿಯ ಸಾಧನೆಯಲಿ
ಶ್ರದ್ಧೆಯಿಟ್ಟೆನು :
ಸೋಲೊ ಗೆಲವೊ, ಮುಂದೆ ನಡೆವ
ಛಲವ ತೊಟ್ಟೆನು....................."

— (ಕೈಗೋಲು)

ಜನಸಾಮಾನ್ಯರಲ್ಲಿ, ಸ್ವಾರ್ಥದ ಮಾನವರ ಬೆನ್ನುಹತ್ತಿದ ಬುದ್ಧಿ ಜೀವಿಗಳಲ್ಲಿ, (ಇವರು ಹಳೆಯ ಕಾಲದ ಸ್ವರ್ಗ ಕಾಮುಕರಾದ–ಯಜ್ಞಮಾಡಿ ಇಂದ್ರನಾಗ ಬಯಸುವ ವೈದಿಕರಿಗಿಂತ ಬೇರೆಯಲ್ಲ) ಬುದ್ಧಿ ಜೀವಿಗಳನ್ನು ಸಮರ್ಥವಾಗಿ ಬಳಸಿಕೊಳ್ಳುವ ಪ್ರಬಲ ವ್ಯಕ್ತಿಗಳಲ್ಲಿ ಕಂಡುಬರುವ ಜೀವನದ ತೀವ್ರಾಸಕ್ತಿಯೇ ನಿಜವಾದ ಕುರುಡು ನಂಬಿಕೆ. ರಾಘವರಲ್ಲಿ ಹೊಸ ವಿಶಾಲ-ಶಾಶ್ವತ ಬದುಕಿನ ನಂಬುಗೆಯ ಕೈಗೋಲು ಬೇಕೆಂಬ ಅಭಿಲಾಷೆ ಹುಟ್ಟಿದೆ.

"ಹೊಸ ಶ್ರದ್ಧೆಯ ಕೈಗೋಲನು
ನೀಡು ದೇವನೆ
ಬೆಳೆಯಲಿ ನಿನ್ನನು ನೆಚ್ಚುವ
ದಿವ್ಯಭಾವನೆ....................". (ಕೈಗೋಲು)

೪

"ರಾಘವ ಕವನ ಕೋಶವು" 83 ಕವನಗಳ 'ಹಂಸಪಥ' ವೆಂಬ ಸಂಕಲನವನ್ನೇ ಒಳಗೊಂಡಿದೆ. ಹಂಸವು ಹಾಲು ನೀರನ್ನು ವಿಂಗಡಿಸುವ, ಕವಿ ಸಮಯದ ಪಕ್ಷಿ ಮಾತ್ರವಲ್ಲ, ವೇದಾಂತ ಪಥದಲ್ಲಿ 'ಆತ್ಮ'ದ ಸಂಕೇತ. ಈ ದೃಷ್ಟಿಯಿಂದ ಹಂಸಪಥವು ಆತ್ಮದ ದಾರಿ; ಪರಿಪೂರ್ಣತೆಯ ದಾರಿ. ಕಂಸಪಥವಲ್ಲ: ಅಪೂರ್ಣತೆಯ ದಾರಿಯಲ್ಲ. (***Bracket*** = ಕಂಸ)

"ಅವರದ್ದು-ಮಣ್ಣಿನ ದಾರಿ, ನಮ್ಮದು-ಕಣ್ಣಿನ ದಾರಿ
....
ಅವರದ್ದು
ಮಣ್ಣಿನ ವಾಸನೆ ಅಂಟುವ ದಾರಿ, ಕುಂಟುವ ದಾರಿ
ಹೆಣ್ಣಿನ ನೋಟದ, ಹೊನ್ನಿನ ಮಾಟದ
ಮೋಹದ ದಾರಿ, ದಾಹದ ದಾರಿ;
....
ನಮ್ಮದು
ಇದು, ಒಳಗೆ ಒಳಗೊಳಗೆ ಒಳಗಿಂದ ಒಳಗೆ,
ಕೊರೆದು ಕೊರೆದು ಕೊರೆದು
ತೆರೆದು ತೆರೆದು ತೆರೆದು
ಇಂದ್ರ ಕುಬೇರರ ಮರೆದು
ಗರುಡನ ಗೂಡಿಗೆ ಒಯ್ಯುವ ದಾರಿ
....
ನಾವೆ ನಾವಾಗುವ ದಾರಿ
ಸೋಹಂಸರೋವರದಲ್ಲಿ ತೇಲಾಡುವ
ಹಂಸನಾವೆ ಇರುವ
ಚಿತ್-ಕಡಲ ಕಡೆದಾರಿ. (ಆದಾರಿ–ಈದಾರಿ).

ರಾಘವ ಕವನ ಕೋಶದಲ್ಲಿ ಹಾಡುಗಳುಂಟು. ಪಿರಿಯಕ್ಕರದ ಪ್ರಯೋಗವೂ ಉಂಟು. ನವೋದಯ ಕಾಲದ ನಾನಾ ಛಂದೋಪ್ರಕಾರಗಳೂ ಉಂಟು. ಜೊತೆಗೆ ನವ್ಯದ ಸ್ವಚ್ಛಂದತೆಯೂ ಉಂಟು. ಆದರೆ ರಾಘವರ ಪಾಲಿಗೆ ನವ್ಯ ತಂತ್ರ ಮಾತ್ರವಾಗಿ ಉಳಿದಿದೆ ಎಂಬ ಮಾತು ಟೀಕೆಯ ಮಾತಾಗಬಾರದು. ನವ್ಯವು 'ತಂತ್ರ'ವಾದರೇ ಅನೇಕ ಸಾಧ್ಯತೆಗಳ ಅಭಿವ್ಯಕ್ತಿಗೆ ಮಾಧ್ಯಮವಾಗುತ್ತದೆ. ನಾಗರಿಕ ಜೀವನ, ಭ್ರಮನಿರಸನ, ವಿಡಂಬನೆ-ಇತ್ಯಾದಿ ಕೆಲವೊಂದು ಪರಿಮಿತಿಗಳಿಗೆ ಕಟ್ಟಿ

ಸಾಧ್ಯವಾದುದು. ಗದ್ಯ-ಪದ್ಯಗಳು ಕೂಡಿ ಬಾಳುವಂತೆ, ನವ್ಯ-ನವೋದಯಗಳೂ ಕೂಡಿ ಬಾಳಬೇಕು. ಅಲ್ಲವಾದರೆ ರಾಘವರು ಹೇಳುವಂತೆ :

"ಇರಲಿ ಅವರಿಗೆ ಅವರದಾರಿ
ನಮ್ಮದಾರಿ ನಮಗೆ
ಅವರ ದಾರಿಯೆ ಬೇರೆ, ಅವರ ಗುರಿಯೆ ಬೇರೆ
ನಮ್ಮದಾರಿಯೆ ಬೇರೆ, ನಮ್ಮ ಗುರಿಯೆ ಬೇರೆ"

ಹೀಗೆ ಭಾರತ-ಪಾಕಿಸ್ತಾನಗಳಂತೆ ಕನ್ನಡ ಕಾವ್ಯರಂಗದ ವಿಭಜನೆಯಾಗಬೇಕಾಗುತ್ತದೆ. ಇದು ನಿಜವಾಗಿಯೂ ಅಗತ್ಯವೇ ?

"ಇದು ಪೂರ್ವ, ಅದು ಪಶ್ಚಿಮ
ಕರಗೀತೆ ಅಂತರ, ಕೂಡೀತೆ ತರತಮ ?
ಅರಿಯ ಬಲ್ಲವನೊಬ್ಬನಾ ಪರಮಾತ್ಮ."

ಈ ನುಡಿಗಳಲ್ಲಿ ನವ್ಯನವೋದಯರು ಒಂದಾಗಿ ಎಂದೂ ಕೂಡಲಾರರಂತೆ ಕಂಡರೂ 'ಪರಮಾತ್ಮನೊಬ್ಬ' ಈ ಅಂತರ ಕರಗಿಸುವ ರಹಸ್ಯ ಬಲ್ಲನೆಂಬ ದೂರದ ನಂಬಿಕೆಯ ಧ್ವನಿ ಇದೆ. ಇದು ನಿಜವಾಗಿ ಲೌಕಿಕ-ಆಧ್ಯಾತ್ಮಗಳ ಕಂದರವೂ ಆಗಿದೆ.[1] ಆಧುನಿಕ ಜೀವನದ ಬಂಜರು ಭೂಮಿಗೆ ಹಿಮಾಲಯದ ಉತ್ತುಂಗ ಶಿಖರದಿಂದ ನೀಲಿಮೇಘವು ಕುಂಭವೃಷ್ಟಿ ಮಾಡಿ, ನೆಲವನ್ನೆಲ್ಲಾ ಹಸಿರು ಮಾಡುವ ಸಾಂಕೇತಿಕ ಆಶಾವಾದದಿಂದ ಆ ಕವನ ಮುಗಿದಿದೆ. ಕವನದ ಅನೇಕ ಕಡೆಗೆ ಬುದ್ಧನ ಸಂಯಮ, ಗೀತಾಚಾರ್ಯನ ಬೋಧ, ಕೊನೆಗೆ ಬೃಹದಾರಣ್ಯಕ ಉಪನಿಷತ್ತಿನ ದಮರು, ದತ್ತ, ದಯಧ್ವಂ, ಎಂಬ ಮಂತ್ರೋಪಾಸನೆಯೇ ನಮ್ಮ ಬಾಳನ್ನು ಸಫಲಗೊಳಿಸುವ ಸಾಧನವೆಂದು ಸಾರಿದ್ದಾರೆ.[2]

---

1. ಮೂಲತಃ ನವ್ಯಕಾವ್ಯ, ನವ್ಯವಿಮರ್ಶೆಯ ಮೂಲಪ್ರೇರಕನಾದ ಟಿ. ಎಸ್. ಎಲಿಯಟ್ ಕವಿಯೇ ಈ ಅಂತರವನ್ನು ಒಪ್ಪಿರಲಿಲ್ಲ. ತನ್ನ ಕಾವ್ಯದಲ್ಲಿ ನಿರಾಶೆ ಇಲ್ಲವೆಂದೂ ಅದು ಇದ್ದರೆ ವಿಮರ್ಶಕರ ತಲೆಯಲ್ಲಿದೆ ಎಂದೂ 1936 ರಲ್ಲಿ ಬರೆದ ಪತ್ರದಲ್ಲಿ ಸ್ಪಷ್ಟವಾಗಿ ಹೇಳಿದ್ದಾನೆ. ಆದರೂ ಹಟಮಾರಿ ವಿಮರ್ಶಕರು ಆ ಕವಿಯ "ವೇಸ್ಟ್‌ಲ್ಯಾಂಡ್" ಕವನದಲ್ಲಿ ನಿರಾಶೆ, ಭ್ರಮನಿರಸನಗಳನ್ನೇ ಕಾಣುತ್ತಾರೆ.

2. ನಮ್ಮ ಹಟಮಾರಿ ನವ್ಯವಿಮರ್ಶಕರಿಗೆ ಈ ವೈದಿಕ ದೃಷ್ಟಿ ಅಸ್ಪೃಶ್ಯವಾಗಿದೆ. ಬಹುಶಃ ಇನ್ನೊಮ್ಮೆ ಪಾಶ್ಚಿಮಾತ್ಯ ಮಹಾಕವಿಗಳ ಕೃತಿಗಳನ್ನು ವೈದಿಕ ದರ್ಶನದ ದೃಷ್ಟಿಯಿಂದ ನೋಡಿದಾಗ, ಪೂರ್ವ-ಪಶ್ಚಿಮ-ಅಂತರ ಕಡಿಮೆಯಾಗಬಹುದು. ಶ್ರೀ ರಾಘವರು "ಕಂಸ ಪಥ" ವೆಂದು ಕೃಷ್ಣವಿರೋಧಿ (ಕೃಷ್ಣ-ಪೂರ್ವ) ವಿರೋಧಿ ಪಥವೆಂದು ಕರೆದಿರುವುದು ನಿಜವಾಗಿ ಪಶ್ಚಿಮದ ಪಥ ಹೌದೋ ಅಲ್ಲವೋ. ಆದರೆ ಅವರು ಬಣ್ಣಿಸಿದ "ಪಶ್ಚಿಮಪಥ" ಮನುಷ್ಯ ವಿಕಾಸಕ್ಕೆ ವಿರೋಧಿ ಎಂಬಲ್ಲಿ ಸಂದೇಹವಿಲ್ಲ.

ರಾಘವರ ದೃಷ್ಟಿಯಲ್ಲಿ ಅವರ ದಾರಿ, "ಕಣ್ಣಿನ ದಾರಿ". "ಅಭಯ ನೀಡುವ, ಭಯವ ಕಾಣದ ದಾರಿ". ಅದು ಇಂದ್ರ ಕುಬೇರರಿಗೂ ಹ್ಯಾಟು, ಬೂಟು ತೊಡಿಸಿ, ಹೊಸಕಾಲದ ಇಂದ್ರಲೋಕದತ್ತ ಕರೆದೊಯ್ಯುವ ದಾರಿಯಲ್ಲಿ. ನಿಷ್ಕಾಮ ಕರ್ಮದ ಮಂತ್ರೋಪಾಸನೆಯ ಗರುಡ ಮಾರ್ಗ, ಶೇಷನ ಯೋಗಮಾರ್ಗ, ಸುರಂಗ, ಶ್ರೀರಂಗನ ಶ್ರೀಮಾರ್ಗವಾಗಿದೆ.

ಈ ಎಲ್ಲ ಪರಿಭಾಷೆ, ಕವನದಲ್ಲಿ ವೈದಾಳಿ ಪರಂಪರೆಯ ಅರಿವನ್ನು ನಮ್ಮ ಪ್ರಜ್ಞೆಯ ಅಂಚಿಗೂ ತಲುಪಿಸುವ ಸಾಹಸ ರಾಘವರ ಕವನದಲ್ಲಿ ಕಾಣುತ್ತದೆ. ರಾಘವರ "ಹಂಸಪಥ"ದಲ್ಲಿ ಸಾಗುವದು ಪರಮಾತ್ಮನ ಮುಗಿಯದ ಚಲುವಿನ ದಾರಿಯಲ್ಲಿ ಸಾಗಿದಂತೆ. ಈ ಸೃಷ್ಟಿಯ ಚಲ್ವಿಕೆ – ಮುಗಿಯದ ಮಾಯೆ :

"ಬಲು ಸೊಗಸು ಬಲು ಸೊಗಸು ನಿನ್ನ ಮಾಯೆ.
ಇಳೆಯೆಲ್ಲ ತುಂಬಿರುವ ನಿನ್ನ ಛಾಯೆ."

ಈ ಸೊಗಸಿನ ಸಾಕಾರ ಪ್ರಪಂಚ ದಾಟಿ, ನಿರಾಕಾರ ನಿರ್ವಯಲಿಗೆ ಓಡುವ ಆತುರದಲ್ಲಿ ಈ ಕವಿಗಳಿಲ್ಲ.

"ನೀನೆ ಕರೆವೆಯೋ ಇಲ್ಲ, ನಾನೆ ಬರಲೆಳಸುವೆನೊ
ಸಾಗಲಲ್ಲಿಯವರೆಗೆ ಪಯಣದಾಟ
ನೀನೆ ಬಾಳ್‌ಕೊಟ್ಟಿರುವೆ, ನೀನೆ ಜೀಳ್ಗೊಟ್ಟಿರುವೆ
ಕಟ್ಟಿಕೊಟ್ಟಿರುವೆ ಸವಿಬುತ್ತಿಯೂಟ."

ಇಲ್ಲಿ ಕರ್ಮಸಿದ್ಧಾಂತದ ತೀರ ಹೊಸದೊಂದು ಸಿದ್ಧಾಂತವನ್ನೇ ಕವಿಗಳು ಮುಂಡಿಸುತ್ತಿದ್ದಾರೆ. ಯಾವ ಪಾಪದ ಗಂಟನ್ನು ಹೊತ್ತು ಈ ಲೋಕಕ್ಕೆ ಬಂದಿಲ್ಲ. ಅವರು ತಂದಿರುವುದು ಸವಿಬುತ್ತಿಯೂಟ. ಅದು ಭಗವಂತ ಕಟ್ಟಿಕೊಟ್ಟ ಬುತ್ತಿ. ಈ ಲೋಕದಲ್ಲಿ ಆ 'ಸವಿ' ಅನುಭವಿಸಬೇಕು. ಇದು ಸೌಂದರ್ಯೋಪಾಸನೆ. ಇದು ಆನಂದೋಪಾಸನೆ, ಇದು ಪ್ರೇಮೋಪಾಸನೆ. ಈ ಮುಗಿಯದ ಮಾಯಾರಂಗದಲ್ಲಿ ಹಂಸದ ಹಾರಾಟ. ಅದರ ಗತಿ ಸ್ವಚ್ಛಂದ ಗತಿ, ಸ್ವಗತಿ, ಸುಗತಿ, ಆಧ್ಯಾತ್ಮಿಕ ಗತಿ.

ರಾಘವರ ಕವಿತೆಗಳಲ್ಲಿ ಪ್ರಕೃತಿ ವರ್ಣನೆ

ಎಚ್.ಎಸ್. ಪಾರ್ವತಿ.

ಕನ್ನಡದ ನವೋದಯ ಕಾವ್ಯಪರಂಪರೆಯಲ್ಲಿ ವಿಶೇಷವಾಗಿ ಕೇಳಿ ಬರುವ ಹೆಸರು ಕವಿ ರಾಘವ. ಎಂ.ವಿ. ಸೀತಾರಾಮಯ್ಯನವರ ಕಾವ್ಯನಾಮ-ರಾಘವ. ಕತೆಗಾರರಾಗಿ, ಕಾದಂಬರಿಕಾರರಾಗಿ, ಸಂಶೋಧಕರಾಗಿ ಎಂ.ವಿ. ಸೀತಾರಾಮಯ್ಯನವರು ಕನ್ನಡ ಸಾಹಿತ್ಯಕ್ಕೆ ಚಿರಪರಿಚಿತರು, ಹಾಗೆಯೇ ಕವಿರಾಘವರೂ ಕಾವ್ಯ ಪ್ರಪಂಚದಲ್ಲಿ ಹೆಸರಾಂತವರು.

ನವೋದಯ ಕಾವ್ಯದ ಒಂದು ವಿಶೇಷತೆ ಅಥವಾ ನವೋದಯ ಕಾವ್ಯದ ಒಂದು ಸಾಮಾನ್ಯ ಲಕ್ಷಣ "ಪ್ರಕೃತಿ ವರ್ಣನೆ". ಹಾಗೆ ನೋಡಿದರೆ ಎಲ್ಲ ಕಾಲದಲ್ಲೂ 'ಪ್ರಕೃತಿ', ಮಾನವನ ಮನಸ್ಸಿನ ಮೇಲೆ ಪ್ರಭಾವ ಬೀರುತ್ತಲೇ ಇದೆ; ಮಾನವನ ಮನಸ್ಸನ್ನು ಕಲಕಿದೆ, ರಂಜಿಸಿದೆ, ಚಕಿತಗೊಳಿಸಿದೆ, ಶಾಂತಿ ಸಮಾಧಾನಗಳನ್ನು ನೀಡಿದೆ. ಮಳೆ ಬಿಸಿಲುಗಳ ಮೂಲಕ ಉಪಕಾರವನ್ನು ಮಾಡುತ್ತಿದೆ. ಪ್ರಕೃತಿಯ ರುದ್ರ ಮನೋಹರ-ಸೌಂದರ್ಯಗಳೆರಡನ್ನೂ ಕಂಡು, ಮುಗ್ಧರಾದ ಪ್ರಾಚೀನ ಋಷಿಗಳು, ಪ್ರಕೃತಿಯನ್ನೇ ದೇವರೆಂದು ಪೂಜಿಸಿದರು. ವೈಜ್ಞಾನಿಕ ಮನೋಭಾವನೆ ಬೆಳೆದಂತೆ, ಪ್ರಕೃತಿಯ ಬಗ್ಗೆ ದೈವತ್ವದ ಭಾವನೆ ದೂರವಾಗಿರಬಹುದಾದರೂ ಅದರ ಆಕರ್ಷಣೆಯೇನೂ ಕಡಿಮೆಯಾಗಿಲ್ಲ. ಚಂದ್ರ – ಕಲ್ಲು ಗುಡ್ಡಗಳಿಂದ ಕೂಡಿದ ಒಂದು ಘನ ಪದಾರ್ಥ ಎಂದು ವಿಜ್ಞಾನ ಎಷ್ಟು ಸಾರಿ ಹೇಳಿದರೂ ಚಂದ್ರನಲ್ಲಿ ಸೌಂದರ್ಯವನ್ನು ಕಾಣುವ ದೃಷ್ಟಿಯನ್ನು ಬದಲಾಯಿಸಲಾರ. ಅದರ ಶೀತಲ ಬೆಳಕನ್ನು ಮನುಷ್ಯ ದೂರೀಕರಿಸಲಾರ. ಇದೇ ರೀತಿ ಪಾರವೇ ಕಾಣದ ಸಮುದ್ರ, ಜುಳು-ಜುಳುನಾದದೊಂದಿಗೆ ಹರಿಯುವ ನದಿ, ರಂಗುರಂಗಾದ ಕಾಮನ ಬಿಲ್ಲು, ಹಾಲುಸುರಿದಂತಿರುವ ಬೆಳದಿಂಗಳು – ಇವೆಲ್ಲ ಸೌಂದರ್ಯೋಪಾಸಕನ ಹೃದಯವನ್ನು ಸೆಳೆಯುತ್ತಲೇ ಇವೆ. ಅಲ್ಲದೆ ಭಾವುಕ ಹೃದಯದ ಕವಿಗಳಿಗಂತೂ 'ಪ್ರಕೃತಿ' ಸದಾ ಚೇತನದಾಯಿ. ಅಲ್ಲದೆ ಪ್ರಕೃತಿ ಕಾಲ, ದೇಶ, ಭೇದವಿಲ್ಲದೆ ಮಾನವನಿಗೆ 'ಗುರು'ವಾಗಿಯೂ ಇದ್ದಾಳೆ.

ಕವಿ ಪ್ರಕೃತಿ ಪ್ರಿಯ; ಆದುದರಿಂದಲೇ ಎಲ್ಲ ಭಾಷೆಯ ಕವಿತೆಗಳಲ್ಲೂ ಪ್ರಕೃತಿ ವರ್ಣನೆಗೆ ಅಗ್ರಸ್ಥಾನ. ಕನ್ನಡ ಸಾಹಿತ್ಯವೂ ಈ ಮಾತಿಗೆ ಹೊರತೇನಲ್ಲ. [illegible]

ಕಾವ್ಯದ ಮುಖ್ಯಲಕ್ಷಣಗಳನ್ನು ಸೂಚಿಸುವ ಹದಿನೆಂಟು ವರ್ಣಗಳಲ್ಲಿ ಪ್ರಕೃತಿ ವರ್ಣನೆಗೂ ಒಂದು ಸ್ಥಾನವಿದೆ. ಇದುಕ್ಕನುಸಾರಿಯಾಗಿ ಪ್ರಾಚೀನ ಕಾವ್ಯದಲ್ಲೂ ಪ್ರಕೃತಿ ವರ್ಣನೆಯ ಅನೇಕ ಸುಂದರ ಭಾಗಗಳು ಇರುವುದು ನಿಜವಾದರೂ ವಸ್ತು ನಿಷ್ಠ ಕಾವ್ಯಗಳಾದ ಮಹಾಕಾವ್ಯಗಳಲ್ಲಿ ಪ್ರಕೃತಿಗೆಂದೇ ಮೀಸಲಾದ ಭಾಗಗಳು ಬಹು ಅಪರೂಪ. ಕಾಳಿದಾಸನ 'ಋತು ಸಂಹಾರ' ಇದಕ್ಕೊಂದು ಅಪವಾದ.

ಪಾಶ್ಚಾತ್ಯರ ಆಡಳಿತದಿಂದಾಗಿ, ಇಂಗ್ಲಿಷ್ ಭಾಷೆಯ ಪರಿಚಯ ಪ್ರಭಾವ ಗಳಿಂದಾಗಿ, ಭಾರತೀಯ ಸಾಹಿತ್ಯದಲ್ಲಿ ಭಾವಗೀತೆಗಳ ಒಂದು ಪ್ರತ್ಯೇಕ ಪ್ರಕಾರ ಆರಂಭವಾಯಿತು, ಆಗ ಆ ಗೀತೆಗಳಲ್ಲಿ ಪ್ರಕೃತಿ ವರ್ಣನೆಗೆ ಹೆಚ್ಚಿನ ಸ್ಥಾನ ದೊರೆಯಿತು. ಕವಿಗಳು ತಮ್ಮ ಕವನಗಳ ಮೂಲಕ ತಾವು ಪ್ರಕೃತಿಯಲ್ಲಿ ಕಂಡ ನೀತಿಯನ್ನು, ಆಧ್ಯಾತ್ಮವನ್ನು ಸೌಂದರ್ಯವನ್ನು ಕವನಗಳಲ್ಲಿ ಅಭಿವ್ಯಕ್ತಿಗೊಳಿಸಿದರು. ಕನ್ನಡ 'ನವೋದಯ'ಕಾಲದ ಭಾವಗೀತೆಗಳಲ್ಲಿ ಅರ್ಧಕ್ಕಿಂತ ಹೆಚ್ಚು ಪ್ರಕೃತಿ ವರ್ಣನೆಗೆ ಮೀಸಲಾಗಿದೆ.

ಕವಿಗಳು ಪ್ರಕೃತಿಯನ್ನು ಅನೇಕ ದೃಷ್ಟಿಯಿಂದ ಕಂಡಿದ್ದಾರೆ. ಪ್ರಕೃತಿ ಸೌಂದರ್ಯವನ್ನು ನೇರವಾಗಿ ವರ್ಣಿಸಿ ಆನಂದ ಪಡುವುದು ಒಂದು ಬಗೆಯಾದರೆ ಇನ್ನು ಕೆಲವು ಸಲ ಕವಿಗೆ ಆ ಪ್ರಕೃತಿ ಏನೋ ನೀತಿಯನ್ನು ಬೋಧಿಸುತ್ತಿರುವಂತೆ ತೋರುತ್ತದೆ. ಮತ್ತೆ ಕೆಲವೊಮ್ಮೆ ಸಾಮಾನ್ಯತೆಯಿಂದ ಆಧ್ಯಾತ್ಮ ಚಿಂತನದತ್ತ ಮನಸ್ಸನ್ನು ಏರಿಸಲು 'ಪ್ರಕೃತಿ' ಕಾರಣವಾಗುತ್ತದೆ. 'ಜಡ'ವೆಂದು ಭಾವಿಸುವ ಪ್ರಕೃತಿ, ಕವಿಯ ಕಣ್ಣಿನ ಮೇಲೆ ಜೀವಂತ ವ್ಯಕ್ತಿಯಾಗಿ ಕಾಣುವುದು. ಅಥವಾ ಹಾಗೆ ಮಾನವೀಕರಣಮಾಡಿ ಪ್ರಕೃತಿಯನ್ನು ವರ್ಣಿಸುವುದು ಪ್ರಕೃತಿ ವರ್ಣನೆಯ ಒಂದು ಬಗೆ. ಇವೆಲ್ಲವುಗಳ ಜೊತೆ ಒಂದೇ ವಸ್ತು ಬೇರೆ ಬೇರೆ ಸಂದರ್ಭಗಳಲ್ಲಿ ಬೇರೆ. ಬೇರೆ ಕವಿಗಳಿಗೆ, ಬೇರೆ ಬೇರೆ ರೀತಿಯಲ್ಲಿ ಕಾಣುವುದು ಉಂಟು. ಕವಿ ರಾಘವರು ತಮ್ಮ ಪ್ರಕೃತಿ ವರ್ಣನೆಯ ಕವನಗಳಲ್ಲಿ ಈ ಎಲ್ಲಾ ರೂಪದಲ್ಲೂ ಅಭಿವ್ಯಕ್ತಿ ಗೊಂಡಿದ್ದಾರೆ.

ಮೊದಲು ಕವಿ ರಾಘವರು ಪ್ರಕೃತಿಯ ವಸ್ತುಗಳನ್ನು ನೇರವಾಗಿ ವರ್ಣಿಸಿ ಅದರ ಸೌಂದರ್ಯವನ್ನು ಸವಿದಿರುವ ಕವಿತೆಗಳನ್ನು ನೋಡೋಣ.

ತೋಟದಲ್ಲಿ ಅರಳಿದ್ದ ಬಗೆ ಬಗೆಯ ಹೂಗಳ ಮೇಲೆ ನಿಶ್ಚಿಂತೆಯಿಂದ ಹಾರಾಡು ತ್ತಿದ್ದ ಚಿಟ್ಟೆಯನ್ನು ಕಂಡ ಕವಿ ಹೃದಯವೂ ಹಾರಾಡುತ್ತದೆ.

ಅಲ್ಲಿಹ ಸುಮಗಳ ಮೇಲಡರುತ್ತ
ಉಲ್ಲಸಂದಿದಲಿ ಹಾರಾಡುತ್ತ
ಹಾರುತ ಹಾರುತ ತೋಟದಲೆಲ್ಲಾ

ಹೀರುತ ಮಧುವನು ಹೂಗಳಲೆಲ್ಲ
ಮೆರೆದವು, ನಲಿದವು.

ಆಕಾಶದಲ್ಲಿ ಪುಟ್ಟದಾದ ನಕ್ಷತ್ರವೊಂದು ಮಿನುಗುತ್ತಿದೆ. ಅದು ನಮ್ಮ ಮನಸ್ಸನ್ನು ಆಕಾಶದೊಂದಿಗೆ ಬಿಗಿಯುವ ಕೊಂಡಿಯಂತೆ, ಕವಿಗೆ ಭಾಸವಾಗುತ್ತದೆ. ಅಷ್ಟೇ ಅಲ್ಲ ಅದು ಬೆಳಕು ಬೀರುವ ಆಕಾಶದಲ್ಲಿ ಮೂಡಿರುವ ಕಂಡಿಯೂ ಹೌದು!

ಬಗೆಯನು ಬಾನಿಗೆ
ಬಿಗಿಯುವ ಕೊಂಡಿ
ಬಾನಿಂದಾಚೆಯ
ಬೆಳಕಿನ ಕಂಡಿ !

ಸೂರ್ಯ ಮುಳುಗುವಾಗ ಒಂದೇ ಒಂದು ಕ್ಷಣ ಇಡೀ ಪಶ್ಚಿಮ ವರ್ಣಮಯ ವಾಗುತ್ತದೆ. ಆಗ ಇಡೀ ಆಕಾಶ ಗುಲಾಬಿ ತೋಟದ ಹಾಗೆ ಕಾಣುತ್ತದೆ ಎನ್ನುವುದು ರಮ್ಯವಾದ ಕಲ್ಪನೆ.

ಏನು ಅಚ್ಚರಿಯದೀ ನೋಟ !
ಬಾನು ಗುಲಾಬಿಯ ಹೂ ದೋಟ !!
ಕರಿದೆರೆ ಸರಿದಿಹುದು
ಪಡುವಣ ರಂಗದಿ ಮೆರೆದಿಹುದು
ರಂಗು ರಂಗಿನಾಟ.

ಸಂಜೆಯಾಯಿತು. ಕಾರ್ತೀಕಮಾಸ, ಶುಭ್ರವಾದ ಆಕಾಶ; ಆಕಾಶದಲ್ಲಿ ಎರಡೇ ಎರಡು ನಕ್ಷತ್ರಗಳು ಹೊಳೆಯುತ್ತಿವೆ. ಅವು ಆಕಾಶಕನ್ನೆಯ ನಗೆ ಕಣ್ಣುಗಳಂತೆ ಕಾಣುತ್ತಿವೆಯಂತೆ!

ಸುತ್ತಲೆಲ್ಲಿಯುಮಿಲ್ಲ ಬೇರೊಂದು ತಾರೆ.
ನಭದ ನಗೆಗಣ್ಣೆರಡೀ ಯಮಳ ತಾರೆ.

ಪ್ರಕೃತಿ ಸೌಂದರ್ಯದ ತವರು ಮನೆಯಾದ ಇಡೀ ಕರ್ನಾಟಕವೇ 'ನನ್ನ ಮನೆ' ಎಂದು ಭಾವಿಸಿ ಕವಿ ವರ್ಣಿಸುತ್ತಾರೆ.

ನೀಲ ಗಗನದಾ ಹಂದರ ಹೊಸೆದ
ಬಾಂದಣದಂಚನು ಬಳಸಿರುವ
ಅತ್ತ ಇತ್ತ ಮುನ್ನೀರಂಗಣದ
ಸುತ್ತಮುತ್ತ ಕಡುಮಲೆ ಸಾಲ್ ಗೋಡೆಯು.
ಈ ಕರುನಾಡಿದು ನನ್ನ ಮನೆ.

ಆಕಾಶದಲ್ಲಿ ಬಿದಿಗೆಯ ಚಂದ್ರ; ಬದಿಗೆ ಒಂದು ತಾರೆ. ಸಮಯಸಂಜೆ. ಆ ಚಂದ್ರ ತಾರೆಯರು ಕವಿಯ ಕಣ್ಣಿಗೆ ಕಂಡದ್ದು ಹೀಗೆ.

ಸಂಜೆವೆಣ್ಣ ತುಟಿಯ ಮೇಲೆ
ವಜ್ರದೊಂದು ಬುಲಾಕು.
ಕೋರ ಮುತ್ತನೊಂದನಿಟ್ಟು
ಸಮೆದ ಮೂಗು ಬೊಟ್ಟು-
ಎನಲು ನೋಡದೋ ಜೋಡಿ!

ಬೆಂಗಳೂರು ಮೈಸೂರಿನ ನಡುವೆಯ ರೈಲು ಹಾದಿ. ರೈಲಿನ ಎರಡುಬದಿಗೂ ಬತ್ತದ ಗದ್ದೆ. ಫಸಲು ಬೆಳೆದು ನಿಂತು ಕಟಾವಿಗೆ ಸಿದ್ಧವಾಗಿದೆ. ನೋಡುತ್ತಿರುವ ಕವಿಗೆ, ಸುಂದರ ಪ್ರಕೃತಿಯ ದರ್ಶನವಾಗುತ್ತದೆ.

ಕಣ್ಣು ಹರಿಯುವವರೆಗೆ ಪಯಿರು ಹಬ್ಬಿದೆ, ಹಬ್ಬಿ
ತಬ್ಬಿದೆ ದಿಗಂತವನು ಹಸಿರು-ಮುತ್ತಿಟ್ಟು ;
....
ನಿಂತ ನೀರಗನ್ನಡಿಯ ಬಾನೊಡಲ ಬಿತ್ತರ
ನೆಲಕೆ ನೀಲಿಮೆಯಿತ್ತು, ಧನ್ಯವಾಗಿಹುದು
ತೆವರು-ತೆವರಿನ ಸಾಲು, ಚೌಕ-ಚೌಕಳಿಯಲ್ಲಿ
ಚದುರಂಗ-ನಡೆಯುತಿದೆ, ಕೊರಳೆತ್ತಿ ಕೊಕ್ಕರೆ
ಸುಗ್ಗಿಯೋಲೆಯಕಾರ-ತಂಡ ಗಿಳಿಗಳ ಹಿಂಡು
ನೆಲದ ನಲಿವನು ದಿವಕೆ ಒಯ್ಯುತಿಹುದು.

ಆಕಾಶದಲ್ಲಿ ಮೋಡ ಸಾಗುತ್ತಿದೆ. ಅದು ಭೂಮಿಯಿಂದ ಆಕಾಶಕ್ಕೆ-ನಮ್ಮ ಟಪಾಲನ್ನು ಒಯ್ಯುವ ಗಾಡಿಯಂತೆ ಕಾಣುತ್ತದೆಯಂತೆ!

ನೋಡದೋ ಸಂಧ್ಯಾಗಗನ ಗಂಗೆಯಲಿ
ಸಾಗಿದೆ ಮುಗಿಲ್ ದೋಣಿಯ ಸಾಲು
ಯಾರೂ ಪಯಣಿಗರೇ ಇಲ್ಲ,
ಸ್ವರ್ಗಕೆ ಭೂಮಿಯ ಚಲುವ ಟಪಾಲು!

ಎಂಥ ಸುಂದರ ಕಲ್ಪನೆ!
ಆಕಾಶದಲ್ಲೆಲ್ಲಾ ಚೆಲುವು ತುಂಬಿದೆ.

ಚುಕ್ಕಿಗಳು ಕಣ್ಣಿಕ್ಕಿ ಏನೋ
ಸನ್ನೆ ಮಾತನು ಮಿನುಗು ಗುಟ್ಟಿ
ಪಕ್ಕ ಪಕ-ಪಕನಕ್ಕ ಲಕ್ಕದ
ನಗೆಯ ಮುತ್ತುಗಳಾಗಿವೆ!

ಬಾನಂಚಿನಲ್ಲಿ ಮೂಡಿದ ಕಾಮನ ಬಿಲ್ಲು ಕವಿಯ ಕಣ್ಣಿಗೆ, ಬ್ರಹ್ಮನ ಸೃಷ್ಟಿ ವಿಲಾಸದ ಹಾಡಿನಂತೆ ಕಾಣುತ್ತದೆ. (ಕೇಳುತ್ತಿದೆ ಎನ್ನೋಣವೇ ?):

ಬಗೆಬಗೆ ಸುಮಗಳ ಬಣ್ಣವ ಸಮನಿಸಿ
ಬಾನ್ ಬಟ್ಟೆಯಲಲದ ಬರೆದಂತೆ
ಬಗೆಗೊಪ್ಪುವ ಮಣಿ ಬಿಲ್ಲನು ನೋಡು
ಬ್ರಹ್ಮನ ಸೃಷ್ಟಿ ವಿಲಾಸದ ಹಾಡು !
ಆದರೆ ಈ ಸೌಂದರ್ಯ ಕ್ಷಣ ಮಾತ್ರದ್ದು !
ಒಂದೇ ಕ್ಷಣದಲಿ ಚೆಲುವನು ಬೀರಿ
ಸೃಷ್ಟಿ ರಹಸ್ಯವ ಕಣ್ಣಿಗೆ ತೋರಿ
ಕಾಮನ ಬಿಲ್ಲದು ಕಣ್ಮರೆಯಾಯ್ತು,
ಬಾನ ಬಟ್ಟೆ ತಾ ಬರಿದಾಯ್ತು !

ಪ್ರಕೃತಿ ಆನಂದದಾಯಿನಿಯಾಗಿರುವಂತೆ ನೀತಿ ಬೋಧಕಳೂ ಹೌದು. ಕವಿ ಪ್ರಕೃತಿಯ ಸೌಂದರ್ಯವನ್ನು ಸವಿಯುವುದರ ಜೊತೆಗೆ ಅದರಿಂದ ಅನೇಕ ಪಾಠಗಳನ್ನೂ ಕಲಿಯುತ್ತಾನೆ. ಸಮರ್ಥನಾದ ಕವಿಯಲ್ಲಿ ಕವಿತೆಯ ಸೌಂದರ್ಯಕ್ಕೆ ಧಕ್ಕೆಬಾರದಂತೆ ಈ ನೀತಿ ವ್ಯಕ್ತವಾದರೆ, ಸಾಧಾರಣ ಕವಿಯಲ್ಲಿ ಹೆಚ್ಚು ಸ್ಪಷ್ಟವಾಗಿ, ಅದೇ ಪ್ರಧಾನವಾಗಿ ಕಾಣಬರುತ್ತದೆ. ಎಂ. ವಿ. ಸೀ. ಅವರ ಕವನಗಳ ನೀತಿ ಬೋಧನೆಯಲ್ಲೂ ಸೌಂದರ್ಯ ಪ್ರಜ್ಞೆಯೇ ಅಡಗಿದೆ.

ಮನುಷ್ಯನ ಜೀವನದಲ್ಲಿ ಕಷ್ಟ-ಕಾರ್ಪಣ್ಯಗಳು ಬಂದೇ ಬರುತ್ತವೆ. ಅವಕ್ಕೆ ಹೆದರಿ, ಸೋತು ಕುಳಿತರೆ ಬದುಕು ಸಾಗುವುದಾದರೂ ಹೇಗೆ? ಕವಿ ರಾಘವರ ಒಂದು ಕವನ ಇದೇ ಭಾವವನ್ನು ವ್ಯಕ್ತಗೊಳಿಸುತ್ತದೆ. ಮಳೆ ಹೊಯ್ದು, ಆಕಾಶ ಶುಭ್ರವಾಗಿದೆ ಕೋಗಿಲೆ ಕೂಗುತ್ತಿದೆ.

ಅಳಲನು ಬಿಡು, ಗೆಲುವನು ತೊಡು,
ನೀನಲಿ ನಲಿದಾಡು.
ಇಂತೊರೆಯುತ್ತಿದೆ, ಆಲಿಸು,
ಅದೊ ಕೋಗಿಲೆ ಹಾಡು !
ನೀಲಿಯ ನಭದಲಿ ಮೆರೆಯುತ
ಬಿಳಿ ಮುಗಿಲಿನ ಮಾಲೆ
ಕೇಲಾಡುತ ಕಾಲಿಡುತಿವೆ
ಏನವುಗಳ ಲೀಲೆ !

ಹೀಗೆ ಕುಣಿದಾಡುತ್ತಿರುವ ಮೋಡಗಳು ಒಂದು ಸಂದೇಶವನ್ನು ಸಾರುತ್ತಿವೆ.

ಸಂಕೇಸಗಡಲಿಂಗದ ಮೊದ-
ಲದ ಕುಡಿಯಿರಿ ಬೇಗ.

ತನ್ನ ಹಾಡಿಗೆ ತಾನು ಹಾರಾಡುತ್ತಿರುವ ಹಕ್ಕಿ "ಎಲ್ಲವನ್ನೂ ತಿದ್ದುತ್ತೇನೆ" ಎಂದು ಹೊರಡುವ ಮನುಷ್ಯನ ಅಹಂಕಾರಕ್ಕೆ ಮದ್ದಾಗಬಹುದಲ್ಲವೆ? :

'ಜಗದ ಡೊಂಕ ತಿದ್ದುವ ಹಿರಿ
ಗೃಹ ಕೇಳು ಹಕ್ಕಿಗೆ
ಏಕೆ ಎನ್ನುವ ನಿನ್ನ ಹಾಡು
ಮದ್ದು, ನನ್ನ ಸೊಕ್ಕಿಗೆ!

ಮನುಷ್ಯ ಪ್ರಯತ್ನ ಅತಿ ಮುಖ್ಯ. ಅದಿಲ್ಲದೆ ಭಗವಂತನ ಸಹಾಯವೂ ಸಿಗಲಾರದು. ಎಂತಹ ವಿಷಮ ವಾತಾವರಣದಲ್ಲೂ ಪ್ರಯತ್ನದಿಂದ, ಸಾಹಸದಿಂದ, 'ವ್ಯಕ್ತಿ', ಮೇಲೆದ್ದು ನಿಲ್ಲಬಹುದು. ಇದಕ್ಕೆ ಕಲ್ಲಿನ ಕೆಳಗಿರುವ ಹುಲ್ಲುಗರಿಕೆಯೇ ಸಾಕ್ಷಿ.

ಕಲ್ಲಡಿಯ ಹುಲ್ಲುಗರಿಕೆ :
ಅದಕಿಲ್ಲ ಹೆದರಿಕೆ
ಮೇಲೆ ಕೊಲೆಕುಳಿತ ಚಪ್ಪಡಿಯ
ಭಾರವಪ್ಪಳಿಸುತಿದೆಯೆಂದು.
ಕತ್ತಲೆಯ ಗೋರಿಗವಿ ಸಂದು ಬಾಯಿಂದ
ಹೊರಹಾಹುಕಿದು ತಲೆಯ

ಒಂದು ಸುಂದರ ವಸ್ತುವನ್ನು ಕಣ್ಣು ನೋಡುತ್ತದೆ. ಹೃದಯ ಅದರ ಸೌಂದರ್ಯವನ್ನು ಅನುಭವಿಸುತ್ತದೆ. ಆದರೆ ಬುದ್ಧಿಜೀವಿಯಾದ ಮನುಷ್ಯನ ಮನಸ್ಸು ಅಷ್ಟಕ್ಕೇ ಸುಮ್ಮನಾಗುವುದಿಲ್ಲ. ಆ ಸೌಂದರ್ಯಕ್ಕೆ ಆಧಾರವಾದ ವಸ್ತುವಿನ ಹಿಂದು-ಮುಂದುಗಳ ಬಗ್ಗೆ ಆಲೋಚಿಸತೊಡಗುತ್ತದೆ. ಅದಕ್ಕೂ ಮಾನವನ ಜೀವನಕ್ಕೂ ತಾಳೆ ಹಾಕುತ್ತದೆ. ಪ್ರಕೃತಿಯ ವಿವಿಧ ರೂಪಗಳನ್ನು ಕಂಡಾಗಲಂತೂ ಚಿಂತನೆಮಾಡುವುದು ಸಹಜವೇ.

ಕಾವ್ಯರಚನೆಯೂ 'ಮುಗಿಯದ ಪಯಣ' ಎಂಬ ಭಾವಿಸುವ ಕವಿಯಾಶಯವಾಗಿದೆ. ಪ್ರಕೃತಿಯ ಸುರೂಪ-ಕುರೂಪಗಳನ್ನು ಕಂಡಾಗ ಚಿಂತನೆ ಜಾಗೃತವಾದದ್ದು ಸ್ವಾಭಾವಿಕ.

ಮುಗಿಲನ್ನು ಮುಟ್ಟುವಂತೆ ಎತ್ತರವಾದ ಗಿರಿಗಳು ನಿಂತಿವೆ: ಕೆಳಗೆ ಹಸಿರು ಹುಲ್ಲುಗಾವಲು. ಇದನ್ನು ನೋಡಿದ ಕವಿಗೆ ಭೂಮಿ ತನ್ನ ಅಂಗೈ ಮೇಲೆ ಪುಟ್ಟ ಲಿಂಗವನ್ನು ಇಟ್ಟುಕೊಂಡು ಪೂಜಿಸುತ್ತಿರುವಂತೆ ತೋರುತ್ತದೆ. ಈ ಚಿಕ್ಕದಾದ ಕವನ ಹಿರಿದಾದ ಭಾವನೆಯಿಂದ ಯುಕ್ತವಾಗಿದೆ.

ತಿರಯಂಗ್ಗೈಯಲಿ ಪಚ್ಚೆಯಲಿಂಗ,
ಕರೆಯಲು ಮಳೆಯಭಿಷೇಕ ;
ನೋಡ ನೋಡುತಿರೆ ಈ ಪಚ್ಚೆಲಿಂಗ
ಕಣ್ಗೆ ಮನೋಹರ-ಮೃಣ್ಮಯ;
ಭಾವಿಸಿ ಬಗೆಯೊಳು ತುಂಬಿಕೊಳದೇ
ಒಳಗನು ಬೆಳಗುವ ಚಿನ್ಮಯ.

ಆಕಾಶದಲ್ಲಿ ಚಂದಿರ ಮೂಡಿದ. ಆ ಮಬ್ಬು ಬೆಳಕಿನಲ್ಲಿ ಇಡೀ ಜಗತ್ತಿನ ಮೇಲೆ ಮಾಯೆಯ ಮುಸುಕು ಹೊದಿಸಿದಂತೆ ಕಾಣುತ್ತಿದೆ:

ಈ ಮಾಯೆಗೆ ಬೆರಗಾಗಿವೆ ನಿಂತು
ನಿಶ್ಚಲ ನೀರವ ವೃಕ್ಷಗಳು—
ಮಂತ್ರಬದ್ಧ ಪ್ರೇತಚ್ಛಾಯೆಗಳೊಲು
ಚಂದ್ರನೇ ಬರೆದ ಮಸಿ ಚಿತ್ರದೊಲು.
ಚಂದ್ರನ ಈ ಜಲುನಿನ ಹೊಸ–ಹೊಸ ಕೈ ಚಳಕ.
ನೆನೆಯದ ನಿತ್ಯದ ಹಾಲಿನ ಜಳಕ
ಮುಗಿಯದ ಮಾಯೆ,
ಅಮೃತ ಕರನ ಅಮೃತಚ್ಛಾಯೆ.

ಹಸಿರು ಹುಲ್ಲುಗಾವಲು ಪಚ್ಚೆಯ ಲಿಂಗವಾಗಿ ಕಂಡ ಕವಿಗೆ ನಿಮಿಷಕ್ಕೊಂದು ರೂಪ ತಾಳುವ 'ಮೇಘ' ಲಿಂಗರೂಪವಾಗಿ ಕಂಡಿದ್ದರಲ್ಲಿ ಏನಾಶ್ಚರ್ಯ !

ನೋಡ ನೋಡತಿರೆ ಬಾನ ಬಯಲಿನಲಿ
ಮೂಡಿತೊಂದು ಲಿಂಗ;
ಕೂಡೆ ನನ್ನ ಬಗೆಯರಳಿ ಹೂವಾಗಿ
ಪೊಂದಿತದರ ಸಂಗ.

ನೋಡ ನೋಡುತ್ತಿದ್ದಂತೆಯೇ ಚಂದ್ರ ಮೂಡಿದ. ನಕ್ಷತ್ರಗಳು ಮಿನುಗಿದವು. ಅವುಗಳು ಪೂಜಾ ಸಾಮಗ್ರಿಗಳಾಗಿ ಲಿಂಗವನ್ನು ಅಲಂಕರಿಸಿದವು.

ಅಂತೆಯಾಕ್ಷಣವೆ ಬಾನುಗೆಂಪಿನೆಡೆ
ಬಾಲಚಂದ್ರ ಮೂಡಿ,
ಕಂತುಹರನೆ, ಕೆಂಜೆಡೆಯುನಡುವೆಯೆನೆ
ಲಿಂಗವನನ ಸೂಡಿ.
ಮೆರೆಯುತಿರಲು, ನಕ್ಷತ್ರನೂರರಳಿ
ಮೇಲೆ ಮಾಲೆಯಾಗಿ,

ಪರಮ ಲಿಂಗಕರ್ಚನೆಯುಗೈಯುತಿರೆ
ನಿಂತೆ ಶಿರವ ಬಾಗಿ.

ಈ ಸಾಲುಗಳನ್ನು ಓದುತ್ತಿರುವವರ ಕಣ್ಣ ಮುಂದೆಯೇ 'ಮೇಘಲಿಂಗ' ಬಂದು ನಿಂತಂತಾಗುತ್ತದೆ. ಚಿಂತನ ಪರನಾದ ಕವಿಯಂತೂ ತನ್ಮಯನಾಗುತ್ತಾನೆ:

ನಾನು ಜಾನು ನನ್ನಂಗ ಲಿಂಗತಾ—
ಮೆಲ್ಲಮೊಂದೆಯಾಗಿ,
ಧ್ಯಾನದಲ್ಲಿ ಚಿನ್ಮಯತೆ ಒಡೆದಿತ್ತು
ದ್ವೈತ ಭಾವ ನೀಗಿ !

ಚಿಟ್ಟೆ ಸಂತೋಷದಿಂದ ಹಾರಾಡುತ್ತಿದ್ದಾಗ ಸೌಂದರ್ಯ ಸಾಗರದ ತೆರೆ ಮೇಲೆದ್ದಂತೆ ಕಾಣುತ್ತಿತ್ತು. ಬಿಸಿಲಿನಿಂದ ಬೆಂದೋ ಮತ್ತಾವ ಕಾರಣಕ್ಕೋ ಅದು ಸತ್ತು ಬಿದ್ದಿತು. ಮಡಿದ ಚಿಟ್ಟೆಯನ್ನು ಕಂಡ ಕವಿಗೆ ಅನ್ನಿಸುತ್ತದೆ "ಜಗತ್ತಿನಲ್ಲಿ ಸೃಷ್ಟಿ, ಲಯ ಚಕ್ರದಂತೆ ಮರಳುತ್ತಲೇ ಇದೆ ಅಲ್ಲವೆ ?" ಎಂದು. (ಕವಿತೆ : ಮಡಿದ ಚಿಟ್ಟೆಯನ್ನು ಕುರಿತು).

ನಿತ್ಯಸೌಂದರ್ಯ ಸಾಗರದೊಳಲೆಗಳ ಮಾಲೆ
ನಿತ್ಯವೂ ಸುಳಿದಳಿವುದಿದೆ ಸೃಷ್ಟಿ–ಲಯ–ಲೀಲೆ ;
ಆ ಮಹಾಸಾಗರದೊಳಲೆಗಳಿಗೆ ಹುಟ್ಟು
ಅವುಗಳೈಕ್ಯವು ಕೊನೆಯಲಲ್ಲಿ—ಇದೇ ಗುಟ್ಟು !

ಪ್ರಕೃತಿಯನ್ನು ಕೇವಲ 'ಜಡವಾಗಿ' ಭಾವಿಸದೆ, ಅದಕ್ಕೊಂದು ವ್ಯಕ್ತಿತ್ವವನ್ನು ಕೊಟ್ಟು ವರ್ಣಿಸುವುದು ಹಿಂದಿನಿಂದಲೂ ಕಾವ್ಯಗಳಲ್ಲಿ ಕಂಡು ಬರುವ ಧೋರಣೆಯೇ. ವೇದಕಾಲದಲ್ಲಂತೂ ಪ್ರಕೃತಿಯ ಒಂದೊಂದು ಶಕ್ತಿಯೂ ಒಂದೊಂದು ದೇವತೆಯಾಗಿ ಮನುಷ್ಯನಿಂದ ಪೂಜಿಸಲ್ಪಟ್ಟಿತು. ಕವಿಗಳಂತೂ ಸ್ವಭಾವ ಧರ್ಮಕ್ಕನುಸಾರವಾಗಿ, ಒಂದೊಂದು ವಸ್ತುವಿಗೂ ಗಂಡು ಹೆಣ್ಣಿನ ರೂಪವನ್ನು ಆರೋಪಿಸುತ್ತಾ ಬಂದಿದ್ದಾರೆ. ಒಟ್ಟಿನಲ್ಲಿ, ಜಡವಸ್ತುವಿನ ಮಾನವೀಕರಣ ಅನಾದಿಕಾಲದಿಂದ ನಡೆದು ಬಂದಿದೆ. ರಾಘವರಲ್ಲೂ ಇಂತಹ ಕವನಗಳು ಅನೇಕ.

ಸಂಜೆಯ ಮಾರುತ ಮೆಲ್ಲನೆ ಬೀಸುತ್ತಿದೆ. ಅದು ಯಾರನ್ನೋ ಹುಡುಕುತ್ತ ಹೊರಟಿರುವಂತೆ ತೋರುತ್ತದೆ ಕವಿಗೆ.

ಸಂಧ್ಯಾಸಮಯ ಸಮೀರಣ
ಗಂಧಾನ್ವಿತ ಮೃದು ಚರಣ,
ಹುಡುಕುವೆ ಯಾರನ್ ?

ಎಂದು ಸಮೀರನನ್ನೇ ಪ್ರಶ್ನಿಸುತ್ತಾರೆ ಕವಿ. ಆ ಸಮೀರ, 'ತುಂಟನೂ' ಹೌದು! ಅದೇ ಕವಿಯ ಆಕ್ಷೇಪಣೆ

ಸುಂದರ ಸುಮಗಳ ಚುಂಬಿಪೆ
ಲತೆಗಳ ಕಚಗುಳಿಯಿಡುವೆ
　　ಏನಿದು ಆಟಂ ?
ನಲ್ಲಳ ನೀನ್ ಮರೆತೆಯೋ ಏನ್ ?
ಎಲ್ಲರ ಬಳಿ ಸುಳಿಯುವೆ ನೀನ್.
　　ಏನಿದು ಜೋಟಂ ?

"ಮುಟ್ಟಿದರೆ ಮುನಿ" ಅತಿ ಸೂಕ್ಷ್ಮವಾದ ಒಂದು ಸಸ್ಯ. ರಾಘವರ ಕಣ್ಣಿಗೆ ಅದು ನಾಚುವ ಮುಗ್ಧ ತರುಣಿಯಂತೆ ಭಾಸವಾಗುತ್ತದೆ.

ಸಸ್ಯ ಸಾಸಿರಕಿವಳೆ ಸೊಗಸುನಾಣಿನ ಹುಡುಗಿ,
ತನ್ನ ಪಾಡಿಗೆ ತಾನು ಗಂಭೀರೆ, ನೀರೆ;
ಗಾಳಿ ದಾಳಿಯ ನಡುದು ನೇರ್ ನಿಂತ ಧೀರೆ;
ಆದರೂ ಸುಕುಮಾರಿ
ಬರಿ ಬೆರಳ್ ಬಳಿಸಾರೆ
ತರತರನೆ ನಡುಗುವಳು
ಸರಸರನೆ ಉಡುಗುವಳು
ಮುಗ್ಗುವಳು ಕುಗ್ಗುವಳು
ತುಸು ಹೊತ್ತು : ಮತ್ತೆ ಹಿಗ್ಗುವಳು.
ಗಾಳಿ ಕೆಳೆಯಲ್ಲಿ.

*　　*　　*

ಮುನಿಸಿನಿಂ ಮುನಿಯುವಳೋ ?
ಲಜ್ಜೆಯಿಂ ಮುರಿಯುವಳೋ ?
　　ಆಹಹ ! ಇದು—
　　ವಿಜ್ಞಾನಿಗೂ ಗುಟ್ಟು !

(ಪ್ರಸಿದ್ಧ ಸಸ್ಯ ವಿಜ್ಞಾನಿ ಜಗದೀಶ ಚಂದ್ರ ಬೋಸರು "ಮುಟ್ಟಿದರೆ ಮುನಿ" ಸಸ್ಯದ ಬಗ್ಗೆ ಸಂಶೋಧನೆ ನಡೆಸಿದರು. ಆದರೆ ಈ ಸಸ್ಯ ಬೆರಳು ಸೋಕಿದ ಕೂಡಲೇ ಮುದುರುವುದಕ್ಕೆ ಅವರಿಗೂ ಕಾರಣ ತಿಳಿಯಲಿಲ್ಲ. ವಿಜ್ಞಾನಿಗೂ ಗುಟ್ಟು ಎನ್ನುವ ವಾಕ್ಯ ಇದನ್ನೇ ಸೂಚಿಸುತ್ತದೆ.)

ರಾಘವರ ಒಂದು ಸುಂದರವಾದ ಹಾಡಲು ಅನುಕೂಲವಾದ ಕವಿತೆ "ಬಾ ಬಾ ಚಂದಿರ"

ಮುಗಿಲಿನಡರುಗಳ ಮೆಟ್ಟುತೆ ಬಾಬಾ
ಪ್ರೇಮ ಚಂದ್ರಿಕೆಯ ಬೀರುತ ಬಾಬಾ
ಎನ್ನ ಮನೋಜಲನಿಧಿ ಉಕ್ಕಿಸುತ
ಹೃದಯ ಕುಸುಮವನ್ನರಳಿಸುತ.

ಎಂದು ಮನ ಮೋಹಕ ಸುಂದರವಾದ ಚಂದಿರನನ್ನು ಕಲ್ಪಿಸುತ್ತಾರೆ ಕವಿ.

ಕಾವ್ಯ ಧ್ವನಿ ಪೂರ್ಣವಾದಷ್ಟೂ ಶ್ರೇಷ್ಠಮಟ್ಟದ್ದಾಗಿರುತ್ತದೆಂಬುದು ಲಾಕ್ಷಣಿಕರ ಅಭಿಪ್ರಾಯ. ಆದ್ದರಿಂದಲೇ ಕವಿ ತನ್ನ ಮನೋಭಾವನನ್ನು ನೇರವಾಗಿ ಪ್ರಕಟಿಸಲು ಇಷ್ಟಪಡುವುದಿಲ್ಲ. ಎದುರಿಗಿರುವ ಒಂದು ವಸ್ತುವನ್ನು ವರ್ಣಿಸುವಾಗ ಕವಿಯ ಮನಸ್ಸಿನಲ್ಲಿ ಬೇರೊಂದು ವಿಚಾರವೇ ಇರುತ್ತದೆ. ಕವಿ ಹೆಚ್ಚು ಸಮರ್ಥನಾದಷ್ಟೂ ಈ ಪ್ರತಿಮಾ ವಿಧಾನವನ್ನು ಹೆಚ್ಚು ಸಫಲತಾಪೂರ್ಣವಾಗಿ ಬಳಸಿಕೊಳ್ಳುತ್ತಾನೆ.

ನೆರೆಯು ಮನೆಯಂಗಳದ ಮಲ್ಲಿಕಾ ಕುಸುಮವದು
ಅದಕೊಯ್ದು ಪಿಡಿಯಲೇಕೆಳಸುತಿರುವೆ?
ಇದೋ ವಸಂತದಗಾಳಿ, ಅದರ ಕಂಪನು ಕೊಂಡು
ತಂದೀಯುತಿದೆ, ಏಕೆ ಹೂವ ಬಯಕೆ?

ರಾಘವರ ಈ ಕವನದ ಭಾವ ಸುಲಭವಾಗಿ ಮನಸ್ಸಿಗೆ ನಾಟುತ್ತದೆ. ನೆರೆ ಮನೆಯ ಹೂವನ್ನು ಕೇಳಬೇಡ ಎನ್ನುವ ಕವಿ, ಬೇರೆಯವರ ವಸ್ತುವಿಗಾಗಿ (ಪರರ ಹೆಣ್ಣಿಗಾಗಿ) ಆಶಿಸಬೇಡ ಎಂದೇ ಹೇಳುತ್ತಿದ್ದಾರಲ್ಲವೆ?

ಹೊಸ ನೀರು ಹೊಸವಿಚಾರದ ಸಂಕೇತ. ಕಾಲಕಾಲಕ್ಕೆ ಹೊಸ ಹೊಸ ವಿಚಾರಗಳು ಬರುತ್ತಲೇ ಇರುತ್ತವೆ. 'ಹೊಸನೀರು' ಕೇವಲ 'ಒಳ್ಳೆಯದನ್ನು ಮಾತ್ರ' ತರುವುದಿಲ್ಲ; ಕಸಕಡ್ಡಿಗಳನ್ನೂ ಮೇಲೆತ್ತಿ ತರುತ್ತವೆ. ಜೊತೆಗೇ ಮುದುಡಿ ಹೋಗಿರುವ ಗಿಡಮರಕ್ಕೆ ಜೀವದಾನವನ್ನೂ ಮಾಡುತ್ತವೆ.

ಮೈನೆರೆದ ಸೊಕ್ಕಿನುಕ್ಕಿನಲಿ ಅಲ್ಲಲ್ಲಿ ಧುಮ್ಮಿಕ್ಕಿ
ಹಿಗ್ಗಿ ಹರಿಯುತ ನುಗ್ಗಿ ನುಗ್ಗಿ ನುಗ್ಗಿ
ಹೆಚ್ಚಿ ಹರಿಯುತ ಕೊಚ್ಚಿ ದಡವ, ಬಗ್ಗಡವ ಮಾಡಿ
ಹುಚ್ಚು ನೊರೆ ನಗುತ ಹೊಸ ದನಿಯ ಹಾಡಿ
ಹೊಸ ನೀರು ಬರುತಿದೆ.
ತನ್ನ ಗೈಮೆಗೆ ತಾನೆ ಸಲಿದು ಒಲಿದು,
ನಲಿವ ತಣಿವಿನ ತುಂಬು ಹೊಳೆಯಾಗಿ ತಿಳಿದು,

ತಾನಿಂತೆಯೇ ಇರುವೆನೆಂಬ ಸಂತಸ ಬಲಿದು
ತುಂಬಿ ಹರಿಯುವ ಹೊಳೆಗೆ,
ಬಂತು ಬರುತ್ತಿಹುದು ಬಹುದು
ಹಿಂದೆ ಇಂದೆಂದೆಂದು ಮುಂದು
ಹೊಸ ನೀರು ಹಳೆಯ ಹೊಳೆಗೆ—
ನಿತ್ಯ ಮುಂಬರಿವ ಇಳೆಗೆ.

ಈ ಕವನದಲ್ಲಿ ಗಮನಿಸಬೇಕಾದ ಒಂದು ಮಾತು, ಹಳೆ ಈ ಹೊಸನೀರೂ-ಹೊಸ ವಿಚಾರವೂ – ಹೇಗೋ ಹಿನಗಳ್ಳಿ ಬೆರೆಯುವಾಗುತ್ತದೆ ಎಂಬುದು.

ಒಂದೇ ವಸ್ತು ಬೇರೆ ಬೇರೆ ಕವಿಗಳಿಗೆ ಒಂದೊಂದು ಭಾವವನ್ನು ಸ್ಫುರಿಸುತ್ತದೆ. ಒಬ್ಬರಿಗೇ ಒಂದೊಂದು ಸಲ ಒಂದೊಂದು ಭಾವವನ್ನು ಕೆರಳಿಸುತ್ತದೆ. ಭಾವಜೀವಿಯಾದ ಕವಿ ವಿಚಾರವಂತನೂ ಆದಾಗ, ಅವನು ಪ್ರಕೃತಿ ಸೌಂದರ್ಯವನ್ನು ವಿಮರ್ಶಿಸುವ ಮನೋಭಾವವನ್ನು ಬೆಳೆಸಿಕೊಳ್ಳುತ್ತಾನೆ. ಆದರೆ ವಿಜ್ಞಾನವು ಅವನ ಮೇಲೆ ಪ್ರಭಾವ ಬೀರದೆ ಇರದು. ಅನೇಕ ಕವಿಗಳಿಂದ ಪುನರಾವರ್ತಿತವಾಗಿ ಹೆಚ್ಚು-ಕಡಿಮೆ ಒಂದೇ ರೀತಿಯ ವರ್ಣನೆಗಳನ್ನು ಕೇಳಿ ಕೇಳಿ ಬೇಸತ್ತ ಮನಸ್ಸಿಗೆ ಪ್ರಿಯವಾಗುತ್ತದೆ.

ಶ್ರೀ ಎಂ. ವಿ. ಸೀತಾರಾಮಯ್ಯನವರ ಕವನಗಳಲ್ಲೂ ಅನೇಕ ಸಂದರ್ಭಗಳಲ್ಲಿ ಈ ವಿಶಿಷ್ಟ ವರ್ಣನೆ ಕಾಣುತ್ತದೆ. ಸೂರ್ಯನ ದಿನಚರಿಯನ್ನು ಬಣ್ಣಿಸುವ ಈ ಕವನ ಅದಕ್ಕೊಂದು ಉತ್ತಮ ಉದಾಹರಣೆ:

ಪೂರ್ವದ ದಿಬ್ಬವನ್ನೇರಿ ಸೂರ್ಯ ಉದಯಿಸಿದ. ಸೂರ್ಯೋದಯವನ್ನು ಕಂಡು ಅದನ್ನು ವಿವಿಧ ರೀತಿಯಲ್ಲಿ ಬಣ್ಣಿಸಿದ್ದಾರೆ ನಮ್ಮ ಕವಿಗಳು. ಆದರೆ ಕವಿ ರಾಘವರ ಕಣ್ಣಿಗೆ 'ಸೂರ್ಯ' ಸುಣ್ಣ-ಬಣ್ಣ ಹೊಡೆಯುವ, ಗಾರೆ ಕೆಲಸದವನ ಹಾಗೆ ಕಾಣಿಸುತ್ತಿದ್ದಾನೆ. [ಕವಿತೆ: ಬಣ್ಣಗಾರ]. ಬೆಳಗ್ಗೆ ಸೂರ್ಯ ಚಿನ್ನದ ಪೊರಕೆ ಹಿಡಿದು, ಗೋಡೆ-ಮಾಡಿಗೆಲ್ಲ ಸುಣ್ಣ ಬಳಿದ; ಬಣ್ಣ ಬಳಿದ:

ಮೂಡ ತಿಟ್ಟನೇರಿ ಬಂದನಯ್ಯೋ ಬಣ್ಣಗಾರ!
ಹೊನ್ನ ಪೊರಕೆಯಾಡಿಸಿದ
ಗೋಡೆಯೆಲ್ಲ ಗುಡಿಸಿದ
ಮಾಡವೆಲ್ಲ ಮೊರೆಸಿದ
ಹಳದಿ ಪೂರ, ಕೆಂಪು ಹಸುರು ಬೆರಸಿ, ಮುತ್ತ ಮೂಡ ಸಾರ
ಚಾಚಿ ಕೈಯ ಚಣದಲಿ
ಪಟ್ಟೆ ಹೊಡೆದ ಬಣ್ಣದಲಿ

ಆದರೆ ಮಧ್ಯಾಹ್ನದ ಹೊತ್ತಿಗೆ ಅದೇನು ಬೇಸರವಾಯಿತೋ, "ತಾನೆ ಬಳಿದ ಬಣ್ಣವ ಅಳಿಸಿಬಿಟ್ಟನವೇ ಕೈಲಿ, ಬಳಿದು ಮೇಲೆ ಸುಣ್ಣವ". ಬಕೆಟ್ಟಿನಲ್ಲಿ ತುಂಬಿಕೊಂಡಿದ್ದ ಸುಣ್ಣವನ್ನೆಲ್ಲಾ ಒಮ್ಮೆಲೇ ಸುರಿದುಬಿಟ್ಟ. ಕುದಿಯುವ ಸುಣ್ಣ ಜಗತ್ತನ್ನೆಲ್ಲ ವ್ಯಾಪಿಸಿದಂತೆ ಬಿಸಿಲು ಚುರುಕಾಯಿತು.

ಹಸಿವ ಬಾಧೆ ತಲೆಯ ಕೆಡಸಿತೇನೋ ತಟ್ಟನೆ
ಕೈಯ ದೊಡ್ಡ ಜಂಬ್ ಬಕೆಟ್ಟ ಬೋರಲಿಟ್ಟನೆ!
ಸುರಿ ಸುರಿಯಿತು ಕುದಿದ ಸುಣ್ಣ.
ಬಣ್ಣಗಾರ, ಸುಣ್ಣಗಾರನಾಗಿ, ತೆರೆದನುರಿವ ಕಣ್ಣ

ಸಂಜೆಯ ಹೊತ್ತಿಗಂತೂ ಸೂರ್ಯನ ಪಿತ್ತವೇ ಏರಿರಬೇಕು. ತನ್ನ ಮೈಯ್ಯನ್ನು ತಾನೇ ಪರಚಿಕೊಂಡ. ಮನಸ್ಸಿಗೆ ಬಂದಂತೆ ಬಣ್ಣಗಳನ್ನು ಎರಚಾಡಿದ.

ಸುಣ್ಣ ಬಳಿದ ಪಡುವಣಗೋಡೆ ತುಂಬ ಕೆಂಪನೆರಚಿದ,
ಹುಚ್ಚುಕೆರಳಿ, ತನ್ನ ಮುಖವ ತಾನೆ, ಊರಿ ಪರಚಿದ
ಸುರಿಯೆ ಹರಿಯೆ ರಕ್ತಕೋಡಿ
'ನಾಳೆಗಾಯ್ತು ಬಣ್ಣ'ವೆಂದು
ಮಲಗಿದ, ನಿಂತಲ್ಲಿ,
ಹೊದೆದು ಕರಿಯ ಕಂಬಳಿ.
ಕನಸಿನಲ್ಲೂ ಅವನಿಗಿಲ್ಲ,
ದುಡಿಮೆಗೆ ದಿನಗೂಲಿ!

ಕೊನೆಗೆ ಸುಸ್ತಾಗಿ ಸೂರ್ಯ ಕರಿಯ ಕಂಬಳಿಯನ್ನು ಹೊದ್ದು ಮಲಗಿಬಿಟ್ಟ. ಜಗತ್ತಿಗೆ ಕತ್ತಲೆಯಾಯಿತು. ಪಾಪ! ದಿನವೆಲ್ಲ ಇಷ್ಟೊಂದು ದುಡಿದರೂ ಸೂರ್ಯನಿಗೆ ಕೂಲಿ ಕೊಡುವವರು ಮಾತ್ರ ಯಾರೂ ಇಲ್ಲವಲ್ಲ ಎನ್ನುವ ಮರುಕ–ಕವಿಗೆ.

ಆಕಾಶದಲ್ಲಿ ಬಿಳಿ ಕೊಕ್ಕರೆಗಳು ಸಾಲಾಗಿ ಹಾರುತ್ತಿವೆ. ಅದನ್ನು ಕಂಡ ರಾಘವರಿಗೆ ಅನಿಸಿದ್ದು ಹೀಗೆ ;

ಬ್ರಹ್ಮ ಸೃಷ್ಟಿಯ ಕಾರ್ಯದಲ್ಲಿ ಬಹಳ ಬೇಸತ್ತು
ವಿಶ್ರಮಿಸಿಕೊಳುತ, ಬಳಪವ ಪಿಡಿದು ಕರದೆ
ಬಾನ ಹಲಗೆಯಮೇಲೆ, ಬಳ್ಳಿಗೆರೆಯೆಳೆದನೆನೆ
ಬೆಳ್ಳೊಕ್ಕರೆಯ ಸಾಲು ಮೆರೆವುದಾಗಸದೆ.

ಕೆಲಸ ಸಾಕಾಗಿ ಬೇಸರಗೊಂಡ 'ಬ್ರಹ್ಮ', ನಿರುದ್ದೇಶದಿಂದ ಬಳಪದಿಂದ ಗೆರೆ ಎಳೆದಂತೆ ಬಿಳಿ ಕೊಕ್ಕರೆಯ ಸಾಲು ಕಂಡಿತು. ಈ ಕವನವನ್ನು ಓದುವಾಗ ಕುವೆಂಪು ಅವರ "ದೇವರು ರುಜು ಮಾಡಿದನು" ಕವನ ನೆನಪಿಗೆ ಬರುತ್ತದೆ.

ಹೂವುಗಳಿಂದ ಮಧುವನ್ನು ಹೀರುತ್ತ ಹಾರಾಡುವ ದುಂಬಿಗಳನ್ನು ಕವಿಗಳೆಲ್ಲ ಸಾಮಾನ್ಯವಾಗಿ 'ಚಂಚಲ, ಭೋಗಲೋಲುಪಿ' ಎಂದೇ ಬಣ್ಣಿಸಿದ್ದಾರೆ. ಆದರೆ ರಾಘವರಿಗೆ ಅವು ತ್ಯಾಗ-ಭೋಗಗಳ ಸಮರಸ ಜೀವನ ನಡೆಸುವ ಆದರ್ಶ ವ್ಯಕ್ತಿಯಂತೆ ಕಾಣುತ್ತವೆ.

ಹಂಚುವೆ ಲೋಕಕೆ ಸವಿಜೇನು
ಮಧುಪನಾಗಿ ಮಧುಪಾನವ ಮಾಡಿ
ಮಧುಪರ ನೆನಸಿಹೆ ಮಧುವನು ನೀಡಿ
ತ್ಯಾಗ, ಭೋಗಗಳ ಸಮರಸ ಜೀವನ
ನಿನ್ನ ಕೂಡಿ, ಕೊರೆಯಿತು ಮಾನವನ.

ಬಿದಿಗೆಯ ಚಂದ್ರ ಕಾಗದದ ದೋಣಿಯಂತೆ ಕಾಣುತ್ತಿದ್ದಾನೆ ಮಗುವಿನ ಕಣ್ಣಿಗೆ. ಚಂದ್ರನನ್ನು ತೋರಿಸುತ್ತ ಮಗುವಿನ ಅಳುವನ್ನು ಸಮಾಧಾನ ಪಡಿಸಲೆತ್ನಿಸಿರುವ, ತಾಯಿ ಹೇಳುತ್ತಾಳೆ;

ಮರೆತಿದ್ದೆ ಕಿಟ್ಟಣ್ಣ, ಇತ್ತ ಬರುತಿದೆ ತೇಲಿ,
ನಿನ್ನ ಕಾಗದದ ದೋಣಿ;
ಅಳದೆ ಆಡುವವರ ಪಾಲಿಗೆ ಕೊಂಡೊಯ್ಯು,
ಬೆಳಗುವ ಬೆಳ್ಳಿಯ ದೋಣಿ.

ರಾಘವರ ಕವನಗಳಲ್ಲಿ ಪ್ರಕೃತಿವರ್ಣನೆಗೆ ಮೀಸಲಾದ ಕವನಗಳು ನೂರಾರು. ಆ ಯಾವುದೇ ಗುಂಪಿಗೆ ಸ್ಪಷ್ಟವಾಗಿ ಸೇರದಿದ್ದರೂ ವಿಶಿಷ್ಟ ವರ್ಣನೆಯಿಂದ ಕೂಡಿದ ಇನ್ನೂ ಅನೇಕ ಕವನಗಳಿವೆ. ಅವುಗಳಲ್ಲಿ ಕೆಲವನ್ನು ನೋಡೋಣ. "ಏಷವೃಕ್ಷಸ್ಸನಾತನಃ" ಕವನದಲ್ಲಿ ಹರವಾಗಿ ಬೆಳೆದಿರುವ ಆಲದಮರವನ್ನು ದೊಡ್ಡ ಒಂದು ಸಮಷ್ಟಿ ಕುಟುಂಬಕ್ಕೆ ಹೋಲಿಸುತ್ತಾರೆ ಕವಿ.

ಈ ಹಳೆಯಾಲದ ಮರ
ಒಡೆಯದ ಸಂಸಾರ.
ನಡುವೆ ಪಿತಾಮಹ-ಬುಡ, ತನ್ನ ವಸಾರನೂ ಬಿಡ :
ಹಬ್ಬಿದ ಬಳಗವನೆಲ್ಲವ ತಬ್ಬಿ ಹಿಡಿದು ನಿಂತಿಹ :
ರೆಂಬೆ-ರೆಂಬೆ, ಕೊಂಬೆ-ಟಿಸಿಲು, ಮಕ್ಕಳು-ಮೊಮ್ಮಕ್ಕಳು-ಮರಿಮಕ್ಕಳು
ಒಂದನೊಂದು ನೆಮ್ಮಿ ನಿಂತ. ಕೂಡು ಬಾಳಿನೊಕ್ಕಲು.
ಮುಮ್ಮಡಿಕೆಯಿಂದ, ಗೆಳೆಯ ಬಳಿಲು, ನಿಟ್ಟನಟ್ಟ ನೂರಿಗೊಳಲು
ವಂಶ ಪರಂಪರೆಯು ಕಾಯ್ದು, ಸಂತಾನದ ಸಾಲು

ಆಲದ ಮರದಜ್ಜನ
ಸುತ–ಸುತ–ಸುತ ಸಜ್ಜನ.

ಮಳೆಗಿಂತ ಮುಂಚೆ ಒಸಗೆ ಸುದ್ದಿಯನ್ನು ತರುತ್ತಾನಂತೆ ಮಳೆಯ ಮಾರುತ.

ಬಂದನೋ ಬಂದನೋ ಮಾರುತ
ಘಟ್ಟವೇರುತ ನಾಡಿಗೆ
ತಂದನೋ ತಂದನೋ ಸಾರುತ
ಒಸಗೆ, ಸುದ್ದಿಯ ಮುಂದಿಗೆ.

ಅಷ್ಟೇ ಅಲ್ಲ ;

ಮಳೆರಾಯನ ಕೆಳೆಯನಿವನು
ಮುಂಗಡೆಯ ಹರಿಕಾರನು
ಕಹಳೆಯೂದುತ ಕೂಗುತಿರುವನು
ಮಿತ್ರರಾಜನ ಬರುವನು.

ಇವನ ರೂಪ ಹೇಗಿದೆ? :

ಬೆನ್ನೊಳಿದೆ ಕೋಲ್ ಮಿಂಚಿನ ಮೂಡಿಗೆ ;
ಕಾಲರುದ್ರನ ಕುಣಿತಕೆ
ತಾಳ ಹಾಕುವ ತೆರದೆ ಗುಡುಗಿನ
ತಮಟೆ ಹೊಯ್ಯುವ ಮೋದಕೆ.

ಹೂವಿನ ಮೇಲೆ ಮತ್ತೊಂದು ಹೂವಿನಂತೆ 'ಚಿಟ್ಟೆ' ಕೂತಿದೆ- ಎನ್ನುವ ಕಲ್ಪನೆ ಎಷ್ಟು ಸುಂದರವಾಗಿದೆ!— 'ಏಕಾಂಗಿ' ಕವನದ ಈ ವರ್ಣನೆಯಲ್ಲಿ.

ಬಣ್ಣದ ಚಿಟ್ಟೆ,
ಹೂವ ಮೇಲೆ ಹೂ ಕುಳಿತು ಕಣ್ಣು ಮುಚ್ಚಿ,
ರೆಕ್ಕೆಯ ಬಿಚ್ಚಿ, ಮೈಗೆ ಮೈಯ ಹಚ್ಚಿ;
ಬಂಡನುಂಡು, ತೊಂಡುಗೆಡೆದು
ಹೂಡಿದ್ದವು ಕಣ್ಣುಮುಚ್ಚಾಲೆಯಾಟ!

ಆಕಾಶದಲ್ಲಿ ಮೋಡವೊಂದು ತೆವಳುತ್ತಾ ಸಾಗಿದೆ. ಅದನ್ನು ಕಂಡ ಕವಿಕಲ್ಪನೆ ಗರಿಗೆದರುತ್ತದೆ:

ಇಲ್ಲ ಶಂಕೆ, ಇಲ್ಲ ಅಂಕೆ.
ತೆವಳುತ್ತಿದೆ, ಮತ್ತೇತಕೆ?
ನೀರು ಮೈ ಕರಗಿಹುದು ;
ಸ್ವಾತಂತ್ರ್ಯ ಮಧು ಮತ್ತ ಜಡಜ ಜಡ ನಾಯ್ತೋ ?

ಅವಕಿಲ್ಲ ಗೊತ್ತು ಗುರಿ :
ಅದಕೇನೋ ಈ ಪರಿ ! ?
ಮೋಡದ ಈ ರೀತಿಯನ್ನು ಕಂಡ ಕವಿಗೆ ಅನ್ನಿಸುತ್ತದೆ :
ತವಕು ಮೋಡವ ನೋಡೆ, ಇಂತು ತೋರುವುದು
ಕೆಲಸವಿಲ್ಲದ ಜಡತೆಗಿಂತ, ಗೈಮೆಯ ಗುಲಾಮಗಿರಿಯೆ ಮೇಲು !

ಹೀಗೆ ಕವಿ ರಾಘವರಿಗೆ 'ಪ್ರಕೃತಿ' ಒಂದು 'ಮುಗಿಯದ ಮಾಯೆ'. ಎಲ್ಲ ನವೋದಯ ಕವಿಗಳಂತೆಯೇ ಸೂರ್ಯ, ಚಂದ್ರ, ಮೋಡ, ದುಂಬಿ, ವಸಂತ, ಮಳೆ ಮೊದಲಾದ ಸಿದ್ಧ ಸಾಮಗ್ರಿಗಳೊಂದಿಗೆ ಕವನಗಳನ್ನು ಪ್ರಾರಂಭಿಸಿದರೂ ತಮ್ಮದೇ ಆದ ವಿಶಿಷ್ಟ ಜಾಣ್ಮೆ ಮತ್ತು ಕವಿಶಕ್ತಿಯನ್ನು ಸಮರ್ಥವಾಗಿ ಮೆರೆಸಿದ್ದಾರೆ.

ರಾಘವ ಅವರ ಕಾವ್ಯದಲ್ಲಿ ದೇಶಭಕ್ತಿ

ಜಿ. ಅಬ್ದುಲ್ ಬಷೀರ್

ಸಮಾಜದ ಕೇಂದ್ರ ಬಿಂದುವಿನಂತಿರುವ ಸಾಹಿತಿ ತನ್ನ ಸುತ್ತಲಿನ ಪರಿಸರದ ಜ್ವಲಂತ ಸಮಸ್ಯೆಗಳನ್ನು ಮುಕ್ತ ಮನಸ್ಸಿನಿಂದ ಗಮನಿಸಿ, ತನ್ನ ಅನುಭವಗಳನ್ನು ಅವಕ್ಕೆ ಒಡ್ಡಿಕೊಂಡು ಒಂದು ಕೃತಿಯನ್ನು ನಿರ್ಮಿಸುತ್ತಾನೆ; ಧಾರ್ಮಿಕ, ರಾಜಕೀಯ, ಜಾತಿ, ಪಾರತಂತ್ರ್ಯ, ಅಸಮಾನತೆ, ಅಂಧಶ್ರದ್ಧೆ, ಅನೈಕಮತ್ಯ, ಹಿಂಸಾಕೃತ್ಯಗಳು ಮುಂತಾದ ರಾಷ್ಟ್ರೀಯ ಸಮಸ್ಯೆಗಳಿಗೆ ಪ್ರತಿಸ್ಪಂದಿಸುತ್ತಾನೆ. ಸಾಹಿತಿ ಜಾಗೃತ ಚಿತ್ತದ, ದೇಶದ ಚೈತನ್ಯವಾಹಿನಿ. ಆತನ ಸಾಹಿತ್ಯ ಕೃತಿಯಲ್ಲಿ ದೇಶನಿಷ್ಠೆ ಹೆಚ್ಚು ಕ್ರಿಯಾಶೀಲವಾಗಿರುತ್ತದೆ. ದೇಶಭಕ್ತಿ ಕವಿತೆಗಳೂ ಸಮಕಾಲೀನ ಸಮಾಜದ ಒತ್ತಡ ಮತ್ತು ಕೃತಿಕಾರನ ಧೋರಣೆಗಳಿಂದ ಕೂಡಿರುವುದನ್ನು ಕಾಣಬಹುದು. ಇವು ಸಮಕಾಲೀನವಾಗಿರುವಂತೆ ಸಾರ್ವಕಾಲಿಕ ಮತ್ತು ಸಾರ್ವತ್ರಿಕ ಮೌಲ್ಯಗಳೂ ಎನಿಸಿ, ಕಾವ್ಯ ಮಾಧ್ಯಮದಲ್ಲಿ ಸಮರ್ಥವಾಗಿ ನಿರ್ವಹಿಸಿದ್ದರೆ ಅವು ಶ್ರೇಷ್ಠ ಕೃತಿಗಳಾಗುತ್ತವೆ. ವಸ್ತುವಿನ ಪುನರಾವರ್ತನೆಯಲ್ಲಿಯೂ ಭಾವನೆಗಳನ್ನು ಕೆರಳಿಸುವ ಮತ್ತು ಹೊಸ ಅರ್ಥವನ್ನು ಕಾಣುವ ದೃಷ್ಟಿ ಕವಿಯಲ್ಲಿರಬೇಕು. ನವೋದಯ ಮಾರ್ಗದ ಬಹುಪಾಲು 'ದೇಶಭಕ್ತಿ' ಕವಿತೆಗಳಲ್ಲಿ ವಸ್ತುವಿನ ಪುನರಾವರ್ತನೆಯಾಗಿರುವುದನ್ನು ಸ್ಪಷ್ಟವಾಗಿ ಗುರುತಿಸಬಹುದು. ಆ ಕವಿತೆಗಳಲ್ಲಿ ಉಜ್ವಲ ದೇಶಾಭಿಮಾನ ವ್ಯಕ್ತವಾಗಿರುವುದರ ಜೊತೆಗೆ ಕೆಲವು ಕವಿತೆಗಳಲ್ಲಿ ಅದು ಕಾವ್ಯತ್ವ ಪಡೆದಿರುವುದನ್ನೂ ಮನಗಾಣಬಹುದು. ಹೀಗೆ 'ದೇಶಭಕ್ತಿ'ಗೆ ಸಂಬಂಧಿಸಿದ ನವೋದಯ ಕವಿತೆಗಳು ಈ ಗುಣ-ದೋಷ-ಗಳೆರಡನ್ನೂ ಒಳಗೊಂಡಿವೆ.

ಎಂ. ವಿ. ಸೀ. ಅವರ ಕಾವ್ಯದಲ್ಲಿ 'ದೇಶಭಕ್ತಿ' ಹೇಗೆ ವ್ಯಕ್ತವಾಗಿದೆ ಎಂಬುದನ್ನು ಗುರುತಿಸುವುದು ಮಾತ್ರ ನನ್ನ ಉದ್ದೇಶವೇ ಹೊರತು ಕವಿತೆಗಳ ಸರ್ವಾಂಗ ವಿಮರ್ಶೆಯಲ್ಲ. ಗುಣ-ದೋಷಗಳಿಗೆ ಸಂಬಂಧಿಸಿದ ಒಂದೆರಡು ಮಾತುಗಳು ಅನಿವಾರ್ಯವಾಗಿ ಬಂದಿವೆ.

ಎಂ. ವಿ. ಸೀ ಅವರ 'ದೇಶಭಕ್ತಿ' ಕವಿತೆಗಳಲ್ಲಿ, ಬ್ರಿಟಿಷರ ಪಾರತಂತ್ರ್ಯದಿಂದ ಬಿಡುಗಡೆ ಪಡೆದು "ರಾಮರಾಜ್ಯ"ವನ್ನು ಕಟ್ಟಬೇಕೆಂಬ ಚಿತ್ರಣವಿದೆ. ಗಾಂಧೀಯವರ

ಕನಸೂ ಇದೇ ಆಗಿತ್ತು. ಆದರ್ಶ ಭಾರತದ ಕಲ್ಪನೆಯಿಂದ ಕೂಡಿದ ಈ ಕಾವ್ಯದಲ್ಲಿ ಅದಮ್ಯ ಉತ್ಸಾಹ–ಆವೇಶಗಳನ್ನು ಕಾಣಬಹುದು. ಎಂ. ವಿ. ಸೀ. ಅವರ 'ಅಶೋಕ ಚಕ್ರ' ಮತ್ತು 'ರಾಷ್ಟ್ರರಥ' ಕವನ ಸಂಕಲನಗಳಿಂದ ಸ್ವಾತಂತ್ರ್ಯಪೂರ್ವ ಮತ್ತು ಸ್ವಾತಂತ್ರ್ಯೋತ್ತರ ಭಾರತದ ಸಮಗ್ರ ದರ್ಶನವನ್ನು ಪಡೆಯಬಹುದು. ಅವರ ಕಾವ್ಯದಲ್ಲಿ 'ದೇಶಭಕ್ತಿ' ಹಲವಾರು ವಿಧಗಳಲ್ಲಿ ಪ್ರಕಟವಾಗಿದೆ. ದೇಶ ಪಾರತಂತ್ರ್ಯದಿಂದ ವಿಮುಕ್ತಿಯನ್ನು ಪಡೆಯಲು ಜನತೆಯಲ್ಲಿ ಮೂಡಬೇಕಾದ ಜಾಗೃತಿ, ಸ್ವಾತಂತ್ರ್ಯ ಚಳುವಳಿ, ಜನರು ಮಾಡಬೇಕಾದ ತ್ಯಾಗ–ಬಲಿದಾನಗಳು, ಗಾಂಧಿ ಸುಭಾಸ್ ಮುಂತಾದ ಸ್ವಾತಂತ್ರ್ಯ ಯೋಧರ ಬಗ್ಗೆ ವ್ಯಕ್ತಪಡಿಸಿರುವ ಮೆಚ್ಚುಗೆ ಪೂಜ್ಯಭಾವ, ಸ್ವಾತಂತ್ರ್ಯ ಲಭಿಸಿದ ಮೇಲೆ ಭಾರತೀಯರು ಸಂಕಲ್ಪ ಶಕ್ತಿ, ನೀತಿಪರತೆ ಕರ್ತವ್ಯನಿಷ್ಠೆಗಳ ಬಗ್ಗೆ ತಾಳಬೇಕಾದ ನಿಲುವು, ಪಾಕೀಸ್ತಾನ–ಚೈನಾದುರಾಕ್ರಮಣದ ಬಗ್ಗೆ ವಿರೋಧ, ಭಾರತೀಯ ಸಂಸ್ಕೃತಿಯ ಪುನರಾಲೋಚನೆ, ಕನ್ನಡನಾಡುನುಡಿ ಜನಗಳ ಗತವೈಭವ, ಸದ್ಯದ ಪರಿಸ್ಥಿತಿ, ಸತ್ಯ, ಅಹಿಂಸೆ, ಜಾತಿ ಸಮಸ್ಯೆ, ಒಟ್ಟಿನಲ್ಲಿ ಅಂದಿನ ಭಾರತದ ಮುಂದಿದ್ದ ಹಲವಾರು ಸಮಸ್ಯೆಗಳ ಚಿತ್ರಣ–ಚಿಂತನೆ–ಪ್ರತಿಕ್ರಿಯೆಗಳನ್ನು ಅವರ ಕವಿತೆಗಳಲ್ಲಿ ಕಾಣಬಹುದು.

ಎಂ. ವಿ. ಸೀ. ಅವರ 'ಅಶೋಕ ಚಕ್ರ', 'ವಿಶ್ವಜ್ಯೋತಿ ಬಾಪು', 'ರಾಷ್ಟ್ರದಿನೋತ್ಸವಗೀತೆ'–ಇವು ದೇಶಭಕ್ತಿ ಕವನಸಂಗ್ರಹಗಳು. 'ಮುಗಿಯದ ಪಯಣ' 'ಗೀತ ಭಾರತಿ,' 'ಹಂಸಪಥ', 'ಬೀಸಿಬಂದ ಗಾಳಿ' ಕವನಸಂಕಲನಗಳಲ್ಲಿಯೂ ಕೆಲವು 'ರಾಷ್ಟ್ರೀಯ ಭಾವನೆ'ಯ ಕವನಗಳಿವೆ.

'ದೇಶ ಭಕ್ತಿ' ಕವನ ಸೃಷ್ಟಿಯ ಹಿಂದಿರುವ ಪ್ರೇರಣೆಯನ್ನು ಕವಿಯ ಕವನಗಳಿಂದಲೇ ಅರಿಯಬಹುದು:

"ಹಾಡು ಕಟ್ಟುವವನು ನಾಡು ಕಟ್ಟುವನಲಾ ?
ಹಾಡಿನೊಳಡಗಿಹುದು ಮಂತ್ರ ಶಕ್ತಿ !
ನಾಡ ನಾಳಿನ ಬದುಕು ಹಾಡಿನಲಿ ಮೂಡಿಬರಿ
ಹಾಡಿನಿಂದಾಗದೇ ನಾಡ ಮುಕ್ತಿ."
"ನಾಡನೆಚ್ಚರಿಸಲ್ಕೆ ಕಹಳೆ ಕೂಗು"
"ಜನಮನವ ಮಸೆಯೆ ಮೇಲಾದ ಸಾಣೆ"
"ಬಂಕಿಮರ ಹಾಡೊಂದು ಭಾರತೀಯರಿಗಾಯ್ತು
ಬಿಡುಗಡೆಯ ಬವರಕ್ಕೆ ತೂರ್ಯ ಸ್ವನ"

(ಗೀತ ಭಾರತಿ : ಹಾಡು : ಪುಟ ೧೪)

"ನಿನ್ನ ನುಡಿಯಲಿ ಶಾಸ್ತ್ರ ಹಿಡಿಯಲಿ
ಎಚ್ಚರಿಸು ನೀ ನಾಡನು!
ಛಿನ್ನಗೈಯಲು ಛನ್ನ ಕ್ಲೈಬ್ಯದ
ಉಚ್ಚರಿಸು ಹೊಸನಾದನು"

(ಅದೇ ! ಕವಿವಾಣಿಗೆ ಸ್ವಾಗತ : ಪುಟ ೪೭)

"........ಹಿಡಿಯೆ ಕೈಯಲಿ ಖಡುಗ
ಹೊಡೆಯಲೆಚ್ಚರಗೊಳಿಪ ಭೇರೀ ನಿನಾದ ;
ಕುಡಿಯೆ ಅಮೃತದ ಪಾನ ನಡೆಯೆ ದಾರಿಯ ದೀಪ
ಕಡೆಯೆ ಸುಜ್ಞಾನದಿಂ ತತ್ತ್ವಬೋಧ"
(ಹಂಸಪಥ : ಕಾವ್ಯ : ಪುಟ ೫೩)

ಕವಿ ಕೃತಿ ಸಾಧನ ಜನತೆಯಲ್ಲಿ ಜಾಗೃತಿಯನ್ನುಂಟುಮಾಡುವುದರಿಂದ ಅದು ಮಂತ್ರ ಶಕ್ತಿಯಿದ್ದಂತೆ; ಕಹಳೆಯ ಕೂಗಿದ್ದಂತೆ; ಸಹೃದಯರಿಗೆ ಅಮೃತ ಪಾನ ಮತ್ತು ತತ್ತ್ವ ಬೋಧೆ ಮಾಡುವುದೇ ಕಾವ್ಯ ಪ್ರಯೋಜನ; ನಾಡಿನ ಜನ ಜೀವನದ ಸ್ಥಿತಿ-ಗತಿಗಳ ಚಿತ್ರವನ್ನೊಳಗೊಂಡಿರುತ್ತದೆ ಕಾವ್ಯ; ಪಾರತಂತ್ರ್ಯದಿಂದ ಬಿಡುಗಡೆ ಪಡೆಯುವುದಕ್ಕಾಗಿ ಭಾರತೀಯರು ಹೋರಾಟ ನಡೆಸಿದ್ದನ್ನೂ ಕವಿ ಇಲ್ಲಿ ಜ್ಞಾಪಿಸುತ್ತಾರೆ. "ಉಚ್ಚರಿಸು ಹೊಸನಾದನು" ಎಂಬ ಕನಸನ್ನೇನೋ ಕವಿ ಕಂಡರು. ಆದರೆ ಹಲವಾರು ಸಮಸ್ಯೆಗಳ ಬೀಡಾಗಿರುವ ಭಾರತದೇಶದಲ್ಲಿ ಇದು ಸಾಧ್ಯವೇ ಎಂಬ ಪ್ರಶ್ನೆ ಮಾತ್ರ ಕವಿಯನ್ನು ಕಾಡುವುದಿಲ್ಲ. ಕಾವ್ಯ ವಾಸ್ತವವಾಗಲು ಬಯಸಿ. ವೈಚಾರಿಕ ಪ್ರಚೋದನೆಯನ್ನು ಮುಂದಿಡುತ್ತಾ ಆವೇಶಭರಿತವಾದುದನ್ನು ಇಲ್ಲಿ ಗುರುತಿಸಬಹುದು. ಇಂಥ ಕಾವ್ಯದಿಂದ ಸಾಮಾಜಿಕ ಪರಿವರ್ತನೆಯಾಗುತ್ತದೆಂಬ ನಂಬಿಕೆ ನವೋದಯ ಕವಿಗಳಲ್ಲಿದ್ದಂತೆ ಎಂ. ಪಿ. ಸೀ. ಅವರ ಕಾವ್ಯದಲ್ಲಿಯೂ ಕಂಡುಬರುತ್ತದೆ. ರಾಷ್ಟ್ರೀಯ ಕ್ರಾಂತಿಗಾಗಿ, ಸ್ವಾತಂತ್ರ್ಯ ಸಮರದ ಕರೆಗಾಗಿ, ಸೃಷ್ಟಿಯಾದ ಸಮಯ ಸ್ಫೂರ್ತಿಯ ಕಾವ್ಯ, ಅಷ್ಟೇ ಉತ್ಸಾಹದಿಂದ ಕೂಡಿದ ಜನತೆಯೊಡನೆ ಸಜೀವ ಸಂಬಂಧ ಪಡೆದದ್ದನ್ನು ಮಾತ್ರ ಎಂದಿಗೂ ಮರೆಯಲು ಸಾಧ್ಯವಿಲ್ಲ. ಈ ತಾದಾತ್ಮ್ಯ ಐತಿಹಾಸಿಕ ದಾಖಲೆಯಾಗಿ ಉಳಿಯುವಂಥದು.

ಎಂ. ಪಿ. ಸೀ. ಅವರ ಸ್ವಾತಂತ್ರ್ಯ ಸಮರೋತ್ಸಾಹದ ಕವಿತೆಗಳಲ್ಲಿ 'ದೇಶಭಕ್ತಿ' ಉಜ್ವಲವಾಗಿ ಪ್ರಕಟವಾಗಿದೆ. ಸ್ವಾತಂತ್ರ್ಯ ಲಭಿಸಿದರೆ ಜನ್ಮಭೂಮಿಗೆ ಶುಭ: ಆದ್ದರಿಂದ ನೂರಾರು ಸಂಘಗಳ ನುಗ್ಗುನುರಿ ಮಾಡು, ಬೇರೆ ಬೇರಾದವರನ್ನೊಮ್ಮತಕೆ ಹೂಡು: ದಾರಿ ತೀರದೆ ಹೋದ ಜನಕೆ ಮತಿ ನೀಡು" (ಅಶೋಕ ಚಕ್ರ : ಬೇಡಿಕೆ) ಎಂದು ಕವಿ ರಾಷ್ಟ್ರನಾಯಕ ಗಾಂಧಿಯೊಡನೆ ಬೇಡುತ್ತಾರೆ. ಪಾರತಂತ್ರ್ಯ ಕವಿಯ

ಕರುಳನ್ನು ಹಿಂಡಿದಾಗ, ಮನಸ್ಸು ಕೆರಳ, ಜನತೆಯನ್ನು ಸ್ವಾತಂತ್ರ್ಯ ಸಮರಕ್ಕೆ ಕರೆಯಿತ್ತು, "ಸತ್ಯದ ಕುದುರೆಯನೇರಿರಿ ಕತ್ತಿ: ಹಿಡಿದು ಧೃತಿಸಿರಿ ಅಹಿಂಸೆಯ ಕತ್ತಿ; ಅವಶ್ಯ ಬಿದ್ದರೆ ಮಡಿಯೋಣ"; ('ಕೊಲ್ಲದ ಕಾಗ') "ಹೇಡಿ ಮುಖ ಬಾಳಿಗಿಂ ವೀರ ಮರಣವೆ ಮೇಲು"; "ನಾಡಿಗಾತ್ಮಾರ್ಪಣವೆ ನಿನ್ನ ಸುಕೃತ ಫಲ" (ರಾಷ್ಟ್ರರಥ: 'ಕರ್ಮವೀರನೆನಿಸಯ್ಯ') ಎಂದು ಉತ್ತೇಜನವನ್ನು ನೀಡಿ ಜನಮನವನ್ನು ಸೆಳೆದು, ಅವರ ಧ್ವನಿಯೊಡನೆ ತಮ್ಮ ಧ್ವನಿಯನ್ನು ಸೇರಿಸಿದರು. ನಾಡಿಗಾಗಿ ಪ್ರಾಣಕೊಡುವುದು ತಮ್ಮ ಪುಣ್ಯ ಎಂದು ಭಾವಿಸಿದ್ದರು.

ಭಾರತ ಏಕತೆ ಕಾಪಾಡಿಕೊಂಡು ಬರಬೇಕೆಂಬ ಕವಿಯ ಇಚ್ಛೆ ಆಕಾಂಕ್ಷೆ ಪುಡಿಪುಡಿಯಾದಾಗ "ಮನೆಯು ಪಾಲಾಯ್ತು; ಒಲೆ ಬಾಳ್ಕೆ ಹೋಳಾಯ್ತು: ಕರುಳೆರಡು ಸೀಳಾಯ್ತು: ಅಯ್ಯೋ! ಅಕಟಕಟಾ! ಎರಡಾಯ್ತು ಬಾವುಟ" (ಅಶೋಕ ಚಕ್ರ: 'ಮನೆಯು ಪಾಲಾಯಿತ್ತು') ಎಂಬ ಧರ್ಮಸಂಕಟಕ್ಕೆ ಕವಿ ಸಿಲುಕಿದರೂ "ಬೇಕಾಯ್ತು ಕಡೆಗೆಮಗೆ, ಪರರ ತೀರ್ಮಾನ; ನೋಡು ನಾಳಿನ ಬಾಳು" ಎಂದು ಸಮಾಧಾನ ನೀಡುತ್ತಾರೆ. ಆಗಾಗ ಕಾಣಿಸಿಕೊಳ್ಳುವ ಯುದ್ಧಜ್ವಾಲೆಯನ್ನು ಕಂಡ ಕವಿ "ಹಿಂದೆ ಮಾನವ ಕೋಟಿ ಗೈದ ಕರ್ಮದ ಫಲವೆ, ಮುನ್ನೂಕಿ ತಳ್ಳುತಿದೆ ಯುದ್ಧ ಪ್ರಪಾತಕ್ಕೆ" (ರಾಷ್ಟ್ರರಥ: 'ಗಾಂಧಿ ಯುಗಾದಿ') ಎಂಬ ಅಭಿಪ್ರಾಯವನ್ನು ರೂಪಿಸುತ್ತಾರೆ. ಈ ಬಗೆಯ ನಂಬಿಕೆ ಮತ್ತು ಪ್ರಾಚೀನ ಭಾರತೀಯರು ಸಹಕಾರ, ಪರೋಪಕಾರ, ನ್ಯಾಯ-ನೀತಿ, ಪ್ರಾಮಾಣಿಕತೆ ಮೊದಲಾದ ಜೀವನಮೌಲ್ಯಗಳಲ್ಲಿ ವಿಶ್ವಾಸವಿಟ್ಟು ಜೀವನ ನಡೆಸುತ್ತಿದ್ದುದರಿಂದ ಕೆಲವು ಕ್ಷೇತ್ರಗಳಲ್ಲಿ ಸಿದ್ಧಿಯನ್ನು ಪಡೆಯಲು ಸಾಧ್ಯವಾಯಿತೆಂಬ ವೈಚಾರಿಕ ಮತ್ತು ನೈತಿಕ ನಿಲುವನ್ನು ಕವಿ ತಾಳಿದ್ದಾರೆ. ಇದೊಂದು ಮುಖ್ಯವಿಚಾರವಾಗಿದೆ. ಕವಿಗಳು ದೇಶಪ್ರೇಮ ಮತ್ತು ಮಾನವ ಪ್ರೇಮವನ್ನು ವ್ಯಕ್ತಪಡಿಸುವಾಗ ಆವೇಶ ತೀವ್ರತರವಾಗಿ ಚಿಮ್ಮಿದೆ. ಆದರೆ ಕೆಲವು ಭಾವನೆಗಳು ಕಾವ್ಯತ್ವವನ್ನು ಪಡೆಯುವಾಗ ಹಿಂದೆ ಸರಿದಿವೆ. ಕವಿ ದೇಶದ ಏಕತೆ ಮತ್ತು ಭದ್ರತೆಗಳಿಗಾಗಿ ಅಚಲ ನಿರ್ಧಾರದ ತಾಳ್ಮೆಯನ್ನು ಅನೇಕ ಕವಿತೆಗಳು ವ್ಯಕ್ತಪಡಿಸುತ್ತವೆ. ಈ ಕವನಗಳು, ಆ ಕಾಲದ ಸಮಗ್ರ ಚಿತ್ರವನ್ನು ನೀಡುವ ಐತಿಹಾಸಿಕ ದಾಖಲೆಗಳಾಗಿವೆ ಎಂಬುದನ್ನು ಮರೆಯುವಂತಿಲ್ಲ.

ಭಾರತದ ಸ್ವಾತಂತ್ರ್ಯೋತ್ಸವಕ್ಕೆ ಸಂಬಂಧಿಸಿದ 'ಅಮೃತ ವರ್ಷ'ದಂತಹ ಕವಿತೆಗಳನ್ನು ರಚಿಸಿದ್ದಾರೆ – ಎಂ.ವಿ.ಸೀ. ಅವರು. ದಾಸ್ಯದಿಂದ ಬಿಡುಗಡೆ ಹೊಂದಿದ [illegible] ಆಗ ಕೆಲವು ಸಮಸ್ಯೆಗಳು ಉದ್ಭವಿಸಿದವು. ಈ ಸಂದರ್ಭದಲ್ಲಿ "[illegible] ಸವಿಯ, ಭಾಗ್ಯದ [illegible]" (ಅಶೋಕ ಚಕ್ರ: [illegible]

ಗೆಲ್ಲ ಜಯು') ಎಂಬ ಕವಿ ವಾಣಿ ಅರ್ಥಪೂರ್ಣವಾಗಿದೆ. ಬ್ರಿಟಿಷರ ಬೇಡಿಯಿಂದ ಬಿಡುಗಡೆ ಪಡೆದದ್ದು ಭಾರತೀಯರು 'ಮರುಹುಟ್ಟು' ಪಡೆದಂತೆ; 'ಹುಟ್ಟುಹಬ್ಬವನ್ನು' ಆಚರಿಸಿದಂತೆ ಎಂಬ ಭಾವನೆಯನ್ನು ಕವಿ ವ್ಯಕ್ತಪಡಿಸುತ್ತಾರೆ. "ನಂದ ಗೋಕುಲವನ್ನು ಹೋಲುವ ಭಾರತವಿದು" ಎಂದು ಕವಿ ಹೆಮ್ಮೆ ಪಡುತ್ತಾರೆ. 'ಅಮೃತ ಸ್ವಾತಂತ್ರ್ಯವೇ'ನೋ ಬಂತು! ಆದರೆ "ಜಾತಿಮತ ಪಂಥಗಳ ಭೇದಗಳನೇ ಹಿಡಿದು, ರೀತಿನೀತಿಯ ತೊರೆದು, ಗುಣಕೆ ಮನ್ನಣೆ ತಡೆದು; ಭೀತಿಯನೊಡ್ಡಿ ಜನತೆಯ ಹಕ್ಕುಗಳ ಕಡಿವ, ಸರ್ವಾಧಿಕಾರ ಬರೆ ಸ್ವಾತಂತ್ರ್ಯವೆ?" (ಅಶೋಕಚಕ್ರ: 'ಅಮೃತ ಸ್ವಾತಂತ್ರ್ಯ') ಎಂದು ಕವಿ ಹಲುಬುತ್ತಾರೆ; ವಾಸ್ತವ ಚಿತ್ರವೊಂದನ್ನು ಕೊಡುತ್ತಾರೆ. ವಿಜ್ಞಾನ ಯುಗದಲ್ಲಿದ್ದರೂ ಪ್ರಾಚೀನ ಸಂಸ್ಕೃತಿಯನ್ನು ಸುಡುವುದೂ ಕವಿಗೆ ಅನಿಷ್ಟ ವಿಚಾರವಾಗಿದೆ. ಸ್ವಾತಂತ್ರ್ಯೋತ್ತರ ಭಾರತ ಉತ್ತಮ ಭವಿಷ್ಯವನ್ನು ಹೊಂದಬೇಕಾದರೆ ರೈತ, ಕಾರ್ಮಿಕ, ವೀರಭಟ, ವಿಜ್ಞಾನಿ, ಕವಿವರ್ಯ, ನಾಯಕರು ತಮ್ಮ ಪಾಲಿನ ಕರ್ತವ್ಯಗಳನ್ನು ಶ್ರದ್ಧೆಯಿಂದ ನಿರ್ವಹಿಸಬೇಕಾಗಿದೆ; ನಾಡಿನ ಪ್ರಗತಿಗೆ ಕಾಣಿಕೆಯನ್ನರ್ಪಿಸಬೇಕಾಗಿದೆ. ಕವಿ "ಯುದ್ಧವನ್ನೆಸಗದೆ, ಯಾರನು ಕೊಲ್ಲದೆ; ಕೊಲ್ಲಬಂದವರ ರಕ್ತವ ಚೆಲ್ಲದೆ, ಅರಸರ ಹೃದಯವ ಮಾರ್ಪಡಿಸಿದ, ದಿವ್ಯಮಂತ್ರವಿದು" (ಅಶೋಕ ಚಕ್ರ: 'ಅಶೋಕ ಚಕ್ರ') ಎಂದು ಅಶೋಕ ಚಕ್ರದ ಮಹಿಮೆಯನ್ನು ಕೊಂಡಾಡುವುದರ ಮೂಲಕ ಅಹಿಂಸಾ ತತ್ವವನ್ನು ಎತ್ತಿ ಹಿಡಿಯುತ್ತಾರೆ.

ಸ್ವಾತಂತ್ರ್ಯ ಪಡೆದ ಭಾರತ ಸಿದ್ಧವಾದ ರಥವೆಂಬ ಕಲ್ಪನೆ ಕವಿಯದು. "ವೇದ ಉಪನಿಷತ್ತು ಕಾವ್ಯ, ಸಕಲ ಕಲಾ ಸಾರಸತ್ವ"ದಿಂದ "ಸಜ್ಜಾದೆ ಪುರಾಣ ಪೂತ ದಿವ್ಯರಥ" (ರಾಷ್ಟ್ರರಥ: 'ರಾಷ್ಟ್ರರಥ')ವನ್ನು ಸರ್ವರೂ ಒಂದಾಗಿ ಮಾರ್ಗ ತಪ್ಪದಿಲ್ಲದೆ – ಎಳೆಯಬೇಕೆಂಬ ಮನೋರಥ ಕವಿಯದು. ಪರಕೀಯರ ಪರಾಧೀನತೆಯನ್ನು ಮೈಕಟ್ಟಿ ಕುಳಿತ ಭಾರತೀಯರು ಮಾರ್ಗವನ್ನು ಅನಾಥವನ್ನಾಗಿ ಮಾಡಿದರೆಂಬ ಭಾವನೆ ಇಲ್ಲಿ ಸುವ್ಯಕ್ತವಾಗಿದೆ. ಋಷಿಗಳೂ, ಕವಿಗಳೂ, ಕರ್ಮವೀರರೂ, ಧರ್ಮವೀರರೂ ಪುರಾತನ ರಾಷ್ಟ್ರರಥವನ್ನು ನಡೆಸಿಕೊಂಡು ಬಂದಿದ್ದಾರೆ; ಅವರು ಪರಮ ಪೂಜ್ಯರು; ವಂದ್ಯರು. "ಭರತಮಾತೆ ಅಭಿಜಾತೆ, ಸಪ್ರೋಲ್ಲಾಸ ಸುಸ್ಮಿತೆ; ಶಾಂತಿ ಭರಿತೆ, ಅಭಯದಾತೆ; ಸಕಲ ಲೋಕವಂದಿತೆ; ವರದಹಸ್ತ ಶೋಭಿತೆ, ಭಾರತ ಹೃತ್ಕಮಲಾಸನೆ; ಸಸ್ಯಪರಿಪೂರ್ಣವಸನೆ; ಹಿಮತುಷಾರ ಮಕುಟಭೂಷೆ; ವಿವಿಧ ವಿನುತ ಮಧುರಭಾಷೆ; ಮಂಡಿಸಿಹಳು ರಥದಲಿ, ನಡೆದು ಮುಕ್ತಿಪಥದಲಿ"; "ದಾಸ ಕೂಟದ ಬಳಗ ಶಿವಶರಣ ಸಂದೋಹ, ಈ ಕವಿಗಳಿಂದಲ್ತೆ ಪೂಜ್ಯ ದೇಶ"; "ಮೇಲೆ ಹಿಮಗಿರಿ ಮಾಲೆ–ಸುತ್ತ ಕಡಲಿನ ಮೇಲೆ .... ಸರ್ವಜನರೂ ಸುಖಿಗಳಾಗಿ ಬಾಳಿರಿಯೆಂಬ

ಹಾರೈಕೆ ಹೊಮ್ಮಿತೀ ನಾಡಿನಲ್ಲಿ", ('ರಾಷ್ಟ್ರದಿನೋತ್ಸವ ಗೀತ') ಇಂಥ ದೇಶದಲ್ಲಿ ಜನ್ಮಪಡೆಯುವುದೂ 'ಪುಣ್ಯ' ಎಂಬುದು ಕವಿಯ ನಂಬಿಕೆ. 'ರಾಷ್ಟ್ರರಥ' ಮತ್ತು 'ಬಿಡುಗಡೆ ಹಾಡು' ಎಂಬ ಕವಿತೆಗಳಲ್ಲಿ ಉತ್ಸಾಹದ ನುಡಿಗಳು ತುಂಬಿವೆ. 'ಸ್ವಾತಂತ್ರ್ಯ ಲಭಿಸಿದ ಮೇಲೆ ನಾಡು ಹೀನ ಕೃತ್ಯಗಳ ಬೀಡಾದ ಬಗೆ' 'ಹುಟ್ಟುಹಬ್ಬದ ದಿನದ ಹಲುಬು ನುಡಿ' ಎಂಬ ಕವಿತೆಯಲ್ಲಿ ಸಮರ್ಥವಾಗಿ ಮೂಡಿದೆ.

"ಅಮೃತ, ಕಲ್ಪವೃಕ್ಷ, ಹಬ್ಬ, ಜಯ, ತೋರಣ, ಬೆಳ್ಳಿ, ನೊಂಪಿ, ರಾಮ ರಾಜ್ಯ, ಸ್ವರಾಜ್ಯ, ಪುರಾಣ ಸ್ತೋತ್ರ, ಮಾತೆ, ದಿವ್ಯ, ಪುಣ್ಯ, ಮಂತ್ರ, ಸನಾತನ" - ಕವಿತೆಗಳಲ್ಲಿ ಬಳಕೆಯಾಗಿರುವ ಪದಗಳು ದೇಶದ ಮೇಲೆ ಕವಿಗಿರುವ ಅಭಿಮಾನವನ್ನು ವ್ಯಕ್ತಪಡಿಸುತ್ತವೆಯಾದರೂ, ನವೋದಯ ಕಾವ್ಯದಲ್ಲಿ ಇಂಥ ಸಿದ್ಧಪ್ರತಿಕ್ರಿಯೆಗಳು ಸಾಕಷ್ಟಿದ್ದವು ಎಂಬುದು ಕಣ್ಣಿಗೆ ಹೊಳೆಯುವ ಚಿತ್ರವಾಗಿದೆ. ದೇಶದ ಸದ್ಯದ ಪರಿಸ್ಥಿತಿಯ ಘೋರತೆಯನ್ನರಿತು, ಅದಕ್ಕೆ ನಿವಾರಣೋಪಾಯಗಳನ್ನು ಕಂಡುಹಿಡಿದು ಪ್ರಜೆಗಳು ಸೇವಾ ಮನೋವೃತ್ತಿಯನ್ನು ತಾಳಿದಾಗ ಮಾತ್ರ ಭಾರತ ಉಜ್ವಲ ರಾಷ್ಟ್ರವಾಗುತ್ತದೆಂಬ ಭಾವನೆಯನ್ನು ಕವಿ ವ್ಯಕ್ತಪಡಿಸಿದ್ದಾರೆ.

'ರಾಷ್ಟ್ರ ದಿನೋತ್ಸವ ಗೀತ' ರಾಷ್ಟ್ರೀಯ ಭಾವನೆಯನ್ನು ಉದ್ದೀಪಿಸುವ, ಹಾಡಲು ಯೋಗ್ಯವಾದ, ಸಾಂದರ್ಭಿಕ ಪದ್ಯಜಾತಿಗೆ (occasional verse) ಸೇರಿದ ನೀಳ್ಗವಿತೆ. ಭಾರತವೊಂದು ಮನೆ. ಮನೆಯನ್ನೊಡೆಯಲು ಯಾರು ಬಂದರೂ ಒಮ್ಮನ ಕೋಟೆಯಂತಾಗಬೇಕು; ಹೊರಗಡೆ ನೂರು ಭೇದಗಳಿದ್ದರೂ ಒಂದು ಕರುಳಿನ ಮಕ್ಕಳಂತೆ ಹಿಂದು-ಮುಸ್ಲಿಮರು ವರ್ತಿಸಬೇಕೆಂದು ಕವಿ ಆಶಿಸಿದ್ದಾರೆ. ಭಾರತದ ಸರ್ವಸಮಾನತಾ ತತ್ತ್ವ, ರಾಮರಾಜ್ಯದ ಕಲ್ಪನೆ, ಕವಿವರೇಣ್ಯರ ನೆನಪು, ಸಾಂಸ್ಕೃತಿಕ ವಿವರಗಳ ಸಮಗ್ರಚಿತ್ರವೊಂದನ್ನು ಕವಿ ಕೊಟ್ಟಿದ್ದಾರೆ. ಕವಿ ಸ್ವಾತಂತ್ರ್ಯವೆಂಬ ಪದಕ್ಕಿರುವ ಅರ್ಥವನ್ನು – ಕರ್ತವ್ಯ, ತಿಳಿವಳಿಕೆ, ಹೊಣೆಗಾರಿಕೆ–ಮನವರಿಕೆ ಮಾಡಿಕೊಡುತ್ತಾರೆ. ಜನತೆಯಲ್ಲಿ ಪ್ರಾಮಾಣಿಕತೆ, ಮಿತ್ರತ್ವ, ನಿರ್ಭೀತ ಸ್ವಭಾವ, ನೀತಿ-ನಿಷ್ಠೆ-ನಿಯತ್ತುಗಳಿರಬೇಕು: ಜನತೆಯಲ್ಲಿರಬೇಕಾದ ಈ ಗುಣಧರ್ಮಗಳು ರಾಷ್ಟ್ರಾಭಿಮಾನದ ಕ್ರತುಶಕ್ತಿಗಳು ಎಂಬುದರ ಮನವರಿಕೆ ಮಾಡಿಕೊಡುತ್ತಾರೆ.

ಭಾರತಕ್ಕೆ ಸ್ವಾತಂತ್ರ್ಯ ದೊರಕಿಸಿ ಕೊಡುವುದರಲ್ಲಿ ಗಾಂಧಿಯವರು ಪಟ್ಟ ಶ್ರಮ ಸರ್ವವಿದಿತ. ದೇಶದ ಶಕ್ತಿ ಮತ್ತು ಸ್ಫೂರ್ತಿಯ ನೆಲೆಯಾಗಿ ಅವರು ಕಂಡಿದ್ದಾರೆ. ಅವರನ್ನು ಸ್ಮರಿಸಿಕೊಳ್ಳುವುದರ ಮೂಲಕ ಎಂ.ವಿ.ಸೀ. ಅವರು ದೇಶಭಕ್ತಿಯನ್ನು ಪ್ರಕಟಿಸಿದ್ದಾರೆ. 'ಮಹಾತ್ಮರ ಗೀತೆ', 'ಮಹಾತ್ಮರ ಶ್ರೇಯಃ ಪ್ರಾರ್ಥನೆ' (ಅಶೋಕ ಚಕ್ರ); 'ಬಾಪೂಜಿಗೆ ಬಾಷ್ಪಾಂಜಲಿ', 'ಸ್ವಾತಂತ್ರ್ಯ ಕಲ್ಪವೃಕ್ಷ', 'ಜಯ ಜಯ ಗಾಂಧಿ ಮಹಾತ್ಮ' (ರಾಷ್ಟ್ರರಥ); 'ಬಾಪೂಜಿ ಕಂಡ ಕನಸು', 'ಗಾಂಧಿ

ಜಯಂತಿ', 'ಹೆಜ್ಜೆಪೂಜೆ' (ಹಂಸಪಥ); 'ನೀನಿಂದು ಜೀವಿಸಿರಬೇಕಿತ್ತು' (ಬೀಸಿ ಬಂದ ಗಾಳಿ) – ಈ ಕವನಗಳಲ್ಲಿ ಗಾಂಧಿಯವರ ಸಮಗ್ರ ಜೀವನ ವಿವರಗಳೊಡನೆ – ಅವರು ಆಧರಿಸಿದ ಜೀವನ ಮೌಲ್ಯಗಳು – ಭಾರತದ ಸ್ಥಿತಿಗತಿಗಳ ವಿವರಗಳೂ ಸೇರಿವೆ. ಗಾಂಧಿಯವರನ್ನು ಕವಿ "ಮಹಾತ್ಮ, ಹಿತಾತ್ಮ, ಸತ್ಯವ್ರತ, ದಿವ್ಯಾತ್ಮ, ಪೂತಾತ್ಮ, ಸರ್ವತ್ಯಾಗಿ, ಅಹಿಂಸಾವೀರ, ಕರ್ಮಯೋಗಿ ಎಂದು ಮುಂತಾಗಿ ಕೊಂಡಾಡಿದ್ದಾರೆ. ಗಾಂಧಿಯವರ ಮೇಲೆ ಕವಿಗಿರುವ ಉತ್ಕಟ ಅಭಿಮಾನವಿಲ್ಲಿ ಮೂಡಿದೆ. ಕವಿ ಗಾಂಧಿಯವರ ವ್ಯಕ್ತಿತ್ವ ಆದರ್ಶಗಳೊಡನೆ ತಾದಾತ್ಮ್ಯ ಹೊಂದಿದ್ದಾರೆ. ಜಗತ್ತಿನ ಸರ್ವ ಜನಾಂಗದ ಗಮನ ಸೆಳೆದ ಮಹಾತ್ಮನನ್ನು ಭಾರತೀಯನೇ ಕೊಲೆಮಾಡಿದ್ದು ಎಂಥ ವಿಪರ್ಯಾಸ! ಭಾರತೀಯರು ತಬ್ಬಲಿಗಳಾದಾಗ ಭಾರತಮಾತೆಯನ್ನು 'ಕಣ್ಣು ಕಾಣದ ನಮಗೆ, ದಾರಿ ತೋರಮ್ಮಾ' ಎಂದು ಸಂಕಟದಿಂದ ಬೇಡುತ್ತಾರೆ. ಸ್ವಾತಂತ್ರ್ಯೋತ್ತರ ಭಾರತೀಯರ ಬದುಕು ಕ್ಲಿಷ್ಟತೆ ಮತ್ತು ನಿರಾಶೆಗಳಿಂದ ತುಂಬಿ ಹೋಗಿತ್ತು. 'ಮಹಾತ್ಮ ಗಾಂಧಿಯವರಿಗೆ ಸ್ಮಾರಕಗಳನ್ನು ನಿರ್ಮಿಸಿ, ಅವುಗಳನ್ನು ಪೂಜಿಸುವುದಕ್ಕಿಂತ ನಡೆ ನುಡಿಯಲ್ಲಿ ಅವರು ಹಾಕಿದ ದಾರಿಯಲ್ಲಿ ಕೈಲಾದ ಮಟ್ಟಿಗೆ ಅವರನ್ನು ಹಿಂಬಾಲಿಸುವುದು ಮೇಲು' ಎಂಬ ಆಶಯವನ್ನುಳ್ಳ ಒಂದು ಸುಂದರ ಕವನ "ಹೆಜ್ಜೆಪೂಜೆ". ನಾವಿಂದು ಆಚರಿಸುತ್ತಿರುವ ಎಲ್ಲ ಜಯಂತಿಗಳಿಗೂ ಈ ಮಾತು ಅನ್ವಯಿಸುತ್ತದೆ. "ನೀನಿಂದು ಜೀವಿಸಿರಬೇಕಿತ್ತು"–ಒಂದು ಸುಂದರ ಸುನೀತ. ಭಾರತೀಯರ ಬದುಕಿನಲ್ಲಿ ನಿರಾಶೆ ಕವಿದಾಗ, ಕವಿ ಗಾಂಧಿಯವರನ್ನು ಸ್ಮರಿಸಿಕೊಂಡು, ಚಿಂತಿಸಿ, ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಿದ್ದಾರೆ. "ಭಾರತಕಗತ್ಯ ನೀನಿಂದು, ನಮ್ಮ ಸಂಸ್ಕೃತಿ ವೃಕ್ಷದ ಬೇರು, ಜೀವರಸಪೂರ್ಣನಾಗಿ, ಬೇಡಿದೆ ಸುತ್ತಲೂ ಹುತ್ತ" ಎಂಬ ಭಾವ ಯಾವತ್ತಿಗೂ ಹೊಸದೇ! ಈ ಕವಿತೆಯ ಮೇಲೆ ಎಂ. ಗೋವಿಂದ ಪೈಯವರ "ಇನ್ನಿನಿಸು ಮಹಾತ್ಮ ನೀ ಬದುಕ ಬೇಕಿತ್ತು" ಎಂಬ ಕವನದ ಪ್ರಭಾವ ಬೀರುವಂತಿದ್ದರೂ ಶ್ರೇಷ್ಠ ಕವನವಾಗಿ ಮೆರೆದಿದೆ. "ಬೆಳಗಾಯಿತು" ಕವನ ಪ್ರಾರಂಭವಾಗುವುದು ಸೂರ್ಯೋದಯ ಸನ್ನಿವೇಶದ ಸುಂದರ ಚಿತ್ರಮಾಲೆಗಳಿಂದ. ವಾಚ್ಯಾರ್ಥದ ನೆಲೆಗಟ್ಟು ಕವನದ ಅಂತ್ಯಕ್ಕೆ ಬಂದಾಗ ಧ್ವನ್ಯಾರ್ಥವನ್ನು ಪಡೆಯುವುದು ಈ ಕವನದ ವಿಶೇಷ. "ದಾಸ್ಯದಿರುಳು ಕರಗಿ ನಾಡ ಬಿಡುಗಡೆ ನೇಸರು ಮೂಡೆ, ಬಿಡುಗಡೆ ತಂದ ನಾಡ ತಂದೆಗೆರಗಲು ನಾಡಿಗೆ ನಾಡೆ, ಮೂಬಣ್ಣದ ಬಾವುಟ ಬಾನಲಿ ನಲಿನಲಿದಾಡೆ, ಜಯ ಭಾರತ ಜಯಭಾರತ ಎನ್ನುತ ಜನ ಹಾಡೆ"! ಸೂರ್ಯ ಮತ್ತು ಗಾಂಧಿಯನ್ನು ಅಭೇದ ಕಲ್ಪಿಸಿ ನುಡಿದಿದ್ದಾರೆ. ದಾಸ್ಯವೆಂಬ ಕತ್ತಲೆಯನ್ನು ತೊಲಗಿಸಿದ ಗಾಂಧಿ ಸೂರ್ಯನ ದೃಶನೆಂಬ ಭಾವನೆಯನ್ನು ಕವಿ ಮೂಡಿಸಿದ್ದಾರೆ.

ಭಾರತದ ಸ್ವಾತಂತ್ರ್ಯಕ್ಕಾಗಿ ಹೋರಾಡಿ ಮಡಿದ ಗಾಂಧಿ, ಸುಭಾಸ್ ಮುಂತಾ

ವರ ಜೀವನವನ್ನು ಗಾಂಧೀಜಿ ಅವರ ತ್ಯಾಗ ಮನೋಭಾವದ ಕುರಿತಾಗಿ ವ್ಯಕ್ತವಾಗಿರುವುದು. ಹಿಂದು ಕೃತಿಗಳಂತೆ ಜನಸಾಮಾನ್ಯರೂ ನಡೆಸಿದ ತ್ಯಾಗ ಬಲಿದಾನಗಳು ಅವರ ದೇಶಭಕ್ತಿಯನ್ನು ಪ್ರಕಟಿಸುತ್ತವೆ.

ಭಾರತದ ಮೇಲಿನ ಗಾಢ ಮಮಕಾರವನ್ನು ಮತ್ತು ಭಕ್ತಿಗಾಢತೆಯನ್ನು ಸಮರ್ಥ ರೀತಿಯಲ್ಲಿ ವಿವರಿಸಿ, ಪ್ರಾಚೀನದಿಂದ ಅನಾದಿ ಭಾರತದ ಕೀರ್ತಿ, ಗೌರವ ಘನತೆ, ಸಮೃದ್ಧಿಗಳನ್ನು ಸಾಧಿಸಿದ ವೀರಯೋಧರನ್ನು ಕುರಿತು "ಸಿದ್ಧನಾಗು ನೀ ಯುದ್ಧಕೆ" (ಸಮರ ಕವನ ಸಂಕಲನ–೧) ಎಂದು ಹೋರಾಡುವ, ಕವಿ, ನಾವೆಲ್ಲರು ಸೈನಿಕರೆ, ಗೆಲ್ವೆವು, ನಾಡ ಬಾವುಟ, ಜಯಮಾಲೆ, (ಗೀತ ಭಾರತಿ) ಎಂಬ ಕವನಗಳನ್ನು ಎಂ.ವಿ.ಸೀ. ಅವರು ರಚಿಸಿದ್ದಾರೆ. ನಾಡನ್ನು ರಕ್ಷಿಸುವ ಯೋಧರನ್ನು ಹುರಿದುಂಬಿಸಲು ರಚಿತವಾದಂತಹ ಗೀತೆಗಳು. [illegible] ಅವರು "With the laudable object of inspiring tht people to endeavour their best for stepping up the war effort" ಎಂಬ ಸಂದೇಶವನ್ನು ಕಳುಹಿಸಿದ್ದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು. ಯುದ್ಧಕಾಲಕ್ಕೆ ತಕ್ಕಂತಿದ್ದರೂ ದೇಶ ರಕ್ಷಣೆಗಾಗಿ ಜನಸಾಮಾನ್ಯರೂ ಸಿದ್ಧರಿರಬೇಕೆಂದು ಕವಿಗಳು ಆಶಿಸಿದ್ದಕ್ಕೆ ಅರ್ಥವಿದೆ. ದೇಶದ, ಜನಾಂಗದ ಪ್ರತಿನಿಧಿ ಕವಿ; ಸಾಹಿತ್ಯವೊಂದು ಸಾಮಾಜಿಕ ಅಸ್ತ್ರ, ಎಂಬ ನಂಬಿಕೆಯುಳ್ಳವರು ನವೋದಯ ಕವಿಗಳು. ಸಾಹಿತ್ಯದಿಂದ ಸಮಾಜಕ್ಕಾಗುವ ಪ್ರಯೋಜನಗಳನ್ನು ಕುರಿತ ದೃಷ್ಟಿ ಅವರದು. ಆದರೆ ಸಮಾಜದಿಂದ ಸಾಹಿತ್ಯಕ್ಕಾಗಬೇಕಾದದ್ದು ಬಹಳವಿದೆ ಎಂಬುದು ಸತ್ಯಸಂಗತಿ. ಈ ಗೀತೆಗಳಲ್ಲಿ ಅನುಭವದ ಸಂಕೀರ್ಣತೆಯಿಲ್ಲ: ಭಾವಾತಿರೇಕವಿದೆ. ಕೇವಲ ದೇಶಭಕ್ತಿಪ್ರೇರಿತ ಕವನ ಕೆಲವು ಪದಗುಚ್ಛಗಳು ನಿರರ್ಗಳವಾಗಿ ಬಳಕೆಯಾಗಿವೆ. ಅಂತರಂಗದಿಂದ ಹೊಮ್ಮಿ ಕಾವ್ಯತ್ವವನ್ನು ಪಡೆಯದೆ ಬಾಹ್ಯ ಆವೇಶದಿಂದ ಹೊರಹೊಮ್ಮಿದವುಗಳಾಗಿ ಗೋಚರಿಸುತ್ತವೆ ಎಂದು ವಿಮರ್ಶಕರು ಗುರುತಿಸಿದ್ದಾರೆ. ಸಂಪಾದಕರ ಕಾವ್ಯವನ್ನು ರಚನೆಯಿಂದ ಇಂಥ ಕವನಗಳಲ್ಲಿ ಸ್ಥಳದ ಮರೆಯಾಗಿದೆ: ಇವುಗಳಿಂದ ಇಂದು ಯಾವ ಪ್ರಯೋಜನವೂ ಇಲ್ಲ ಎಂಬರ್ಥದ ಮಾತುಗಳನ್ನು ವಿಮರ್ಶಕರು ನುಡಿಯುತ್ತಾರೆ. "ರಾಜಕೀಯದಿಂದಲೂ ವ್ಯಕ್ತಿಭೇದದಿಂದಲೂ ಕಾವ್ಯದಲ್ಲಿ ಬರುವ ಮೋಹ ಒಂದು ಲಕ್ಷಣಕ್ಕೆ ಬೆಳ್ಳು ಮರೆತು ಹೋಗಬಹುದು: ಹೋಗುವುದೇ ಸಹಜ ಅಗತ್ಯವಾಗಬಹುದು. ಆದ್ದರಿಂದಲೇ ಕಾವ್ಯದ ಬಗ್ಗೆ ಈ ಹಿಂದೆ ಇದ್ದ ಹಿರಿಯ ದೃಷ್ಟಿ ಸರಿಯೇ ಇಲ್ಲ ಎನ್ನುವುದು ತಪ್ಪು. ಅದು ಈಗ ಸ್ಪಷ್ಟ ಗುಣವನ್ನು ಹೊಂದಿದೆ" (ಎಂ. ಗೋಪಾಲಕೃಷ್ಣ ಅಡಿಗ: ಮಣ್ಣಿನ ವಾಸನೆ: ಪುಟ: ೨೧) ಎಂಬ ಮಾತುಗಳು ಕೆಲವು ದೇಶಭಕ್ತಿಗೀತೆಗಳಿಗೆ ಅನ್ವಯಿಸುತ್ತವೆ. ಈ

ಮುಖ್ಯವಾದ ಮಾತುಗಳೆಂಬುದನ್ನು ನೆನಪಿನಲ್ಲಿಡಬೇಕು. ದೇಶದ ಸಮಸ್ಯೆಗಳು ಬದಲಾದ ಮೇಲೆ ವಿಮರ್ಶಕರಿಗೆ ಹೀಗನ್ನಿಸಿದ್ದು ಸಹಜವೇ ಆದರೂ 'ದೇಶಭಕ್ತಿ' ಎಂಬುದು ಯಾವ ಕಾಲಕ್ಕೂ, ಎಲ್ಲ ಜನತೆಯಲ್ಲೂ ಇರತಕ್ಕದು: ಇರಬೇಕಾದದ್ದು ಎಂಬುದನ್ನು ಮರೆಯುವಂತಿಲ್ಲ. ವಿಗ್ರಹವನ್ನು 'ಶೋಧನೆಗೆ' ಒಳಪಡಿಸುವಂಥ ಕವಿತೆಗಳನ್ನು ಎಂ. ವಿ. ಸೀ. ಅವರು ರಚಿಸಿದ್ದಾರೆ. ದೇಶಭಕ್ತಿ ಮತ್ತು ಕ್ರಾಂತಿ ಮನೋಭಾವದ ಕವಿತೆಗಳು ಜನತೆಯನ್ನು ಭಾವ ಪ್ರಚೋದನೆಗೆ ಈಡು ಮಾಡಿದವು. ಕವಿಗೆ ದೇಶದ ದುಃಖವೆಲ್ಲಾ ತನ್ನ ವೈಯಕ್ತಿಕ ದುಃಖವಾದದ್ದರಿಂದಲೇ ಕೆಲವು ಒಳ್ಳೆಯ ಕೃತಿಗಳೂ ಸೃಷ್ಟಿಯಾದವು: ದೇಶದ ಸಮಸ್ಯೆಗಳಲ್ಲಿ ಕವಿಯೂ ಒಂದಾಗಿ ಸಹಾನುಭೂತಿಯನ್ನು ತೋರಿಸಲು ಸಾಧ್ಯವಾಯಿತು. ದೇಶಭಕ್ತಿ ಕವಿತೆಗಳ ಭಾವನೆಗಳು ಇಂದಿನವರಿಗೆ ಪ್ರಾಚೀನ್ಯಗಳಾಗಿ ತೋರಿದರೆ ಅಂದು ದೇಶಭಕ್ತಿಯನ್ನು ಜಾಗೃತಗೊಳಿಸಲು ಇಂಥ ಕವಿತೆಗಳ ರಚನೆ ಅನಿವಾರ್ಯವಾಗಿತ್ತು.

'ನಾಡ ತಾಯಿಗೆ ನಮನವು', 'ಅಭೀಷ್ಟಿ' ಕವಿತೆಗಳಲ್ಲಿ ನಾಡನ್ನು ಕಟ್ಟಿದ ಮಹಾತ್ಮರ ನೆನಪೂ, ಭವ್ಯ ಪರಂಪರೆಯೂ. ಬುದ್ಧ, ರಾಮ, ಅಶೋಕ, ಅಕಬರ, ಹರ್ಷ, ವಿದ್ಯಾರಣ್ಯರ ಸಂಕಲವಾದ ನಾಡು ಸಾಮಾನ್ಯವಾದದ್ದಲ್ಲ ಮಾನ್ಯವು ಎಂಬುದರ ಚಿತ್ರವಿದೆ.

ಭಾಷೆ, ಮತ, ಪ್ರಾಂತಾಭಿಮಾನವು ದೇಶಕ್ಕೆ ಯಾವುದೇ ಅಭಿವೃದ್ಧಿಯನ್ನುಂಟು ಮಾಡುವುದಿಲ್ಲವೆಂಬುದು ಕವಿಯ ಅಭಿಪ್ರಾಯ. ನಮ್ಮ ಸಂಸ್ಕೃತಿಯ ಅಂಗಗಳಾದ ವಿನಯ, ಪರಮತ ಸಹಿಷ್ಣುತೆಗಳನ್ನೂ ಕವಿ ಸ್ಮರಿಸುತ್ತಾರೆ. ಸಾಮರಸ್ಯದ ಬದುಕು ಪ್ರಗತಿಯ ದಾರಿದೀಪವಾಗಬಲ್ಲುದು ಎಂಬುದರ ಚಿತ್ರವನ್ನು 'ಜನತೆಯೊಂದೆ' 'ಅಸ್ಪೃಶ್ಯನಾರು,' 'ಐಕ್ಯದೃಷ್ಟಿ' ಎಂಬ ಕವಿತೆಗಳು ನೀಡುತ್ತವೆ. ಇದಕ್ಕೆ ಇತಿಹಾಸದ ಅನೇಕ ನಿದರ್ಶನಗಳೂ ಉಂಟು. "ಬಾಡಿಸುವೇಕೆ ನಿನ್ನಾತ್ಮ ಕುಸುಮವ, ಬಿಡಿಸು? ನೀಡಯ್ಯ ಭಾರತಾಂಬೆಯ ಪೂಜೆ ಸಲಲಿ" ಎಂಬ ನುಡಿಗಳೊಡನೆ 'ಭಾರತೀಯರು ಕರ್ಮವೀರ'ರಾಗಬೇಕಾದ ಅಗತ್ಯವನ್ನು ಒತ್ತಿ ನುಡಿದಿದ್ದಾರೆ. ನಾಳಿನ ಭಾರತ 'ಇಂದ್ರನಂದನ'ವಾಗುತ್ತದೆಂಬ ಆಶಾಭಾವನೆಯನ್ನೂ ಕವಿ ವ್ಯಕ್ತಪಡಿಸಿದ್ದಾರೆ. ಸ್ವಾತಂತ್ರ್ಯವನ್ನು ಪಡೆದದ್ದು ಎಂದು ಅರ್ಥೈಸುವುದರಿಂದ ಯಾವ ಉದ್ದೇಶವನ್ನೂ ಸಾಧಿಸಿದಂತಾಗುವುದಿಲ್ಲ ಎಂಬುದು ಕವಿಯ ಭಾವನೆ.

ಎಂ.ವಿ.ಸೀ. ಅವರು ಕನ್ನಡನಾಡು, ನುಡಿ, ಜನತೆಗೆ ಸಂಬಂಧಿಸಿದ ಹಲವಾರು ಕವಿತೆಗಳನ್ನು ರಚಿಸಿದ್ದಾರೆ. 'ಭಾರತಾಂಬೆ ತಾಯಿ, ಕರ್ನಾಟಕ ಮಗಳು' ಎಂಬ ಕಲ್ಪನೆ ಇವರ ಕವಿತೆಗಳಲ್ಲಿಯೂ ಕಂಡುಬರುತ್ತದೆ. "ಭಾರತದ ಸ್ವಾತಂತ್ರ್ಯ, ಭಾಗ್ಯದೊಳು, ಆಸಾರ ಬಳುವಳಿಯ ತೋರಿ ನಲಿಯುತಿಹ" ಕನ್ನಡತಾಯಿಗೆ

ಮಣಿಯುತ್ತಾರೆ.' ಬಾಳು ಹಂಪೆ (ಹುಂಗಿಯಾದ ಮಾಯೆ), 'ಕನ್ನಡ ನಾಡೊಂದೆ' (ರಾಷ್ಟ್ರರಥ), 'ನವೆಂಬರು ಒಂದು'(ಹಂಸ ಪಥ) ಮುಂತಾದ ಕವಿತೆಗಳು ಕನ್ನಡಿಗರ ನೆನಪಿನಲ್ಲುಳಿಯುವಂತಹವು. ಭಾರತದಲ್ಲಿ ಅಂತರ್ಗತವಾದ, ಕರ್ನಾಟಕ ಜನತೆಯ ಐಕ್ಯದೃಷ್ಟಿಯನ್ನು ಮತ್ತು ನವೆಂಬರ್ ೧ರಂದು ಆಚರಿಸುವ ರಾಜ್ಯೋತ್ಸವದ ಮಹತ್ವವನ್ನು ವರ್ಣಿಸುತ್ತಾ, ರಾಷ್ಟ್ರೀಯತೆಗೆ ಆರೋಪಿಸಿ ನೋಡಿರುವುದು 'ನವೆಂಬರು ಒಂದು' ಕವಿತೆಯ ವಿಶೇಷ ಸಂಗತಿಯಾಗಿದೆ. "ಕನ್ನಡತನ ನಮ್ಮೊಡಲು, ಭಾರತೀಯತನ ಉಸಿರು" ಎಂಬ ಮಾತು ಅರ್ಥವತ್ತಾದುದು. "ನೈಜ ರಾಷ್ಟ್ರೀಯತೆ ರಾಜ್ಯ ಸಂಸ್ಕೃತಿಯ ಆಧಾರದ ಮೇಲೆಯೇ ರೂಪುಗೊಳ್ಳುತ್ತದೆ" ಎಂಬ ವಿ. ಕೃ. ಗೋಕಾಕರ ಮಾತು ಸಮಂಜಸವಾಗಿದೆ. ರಾಜ್ಯದ ಜನತೆಯ ಬದುಕು ಹಸನಾಗುವುದಕ್ಕೆ, ಪ್ರಗತಿಯನ್ನು ಸಾಧಿಸುವುದಕ್ಕೆ ಜನತೆಯಲ್ಲಿ ಶ್ರದ್ಧೆ, ಅಭಿಮಾನ, ಜಾಗೃತಿಗಳು ಉದಿಸುತ್ತಿರಬೇಕೆಂಬ ಅಂಶವನ್ನು ರಾಷ್ಟ್ರಕ್ಕೂ ಅನ್ವಯಿಸುವಂತೆ ನಿರೂಪಿಸಿರುವುದು ದೊಡ್ಡ ವಿಚಾರ.

ಉಜ್ವಲ ದೇಶಾಭಿಮಾನದಿಂದ ಕೂಡಿದ ಕವಿತೆಗಳ ಭಾಷಣ ಶೈಲಿಯನ್ನು 'ರಮ್ಯ ಶೈಲಿ' ಎಂದೂ, ಇದು ಗಾಂಧಿಯುಗದ ಆದರ್ಶಪ್ರಿಯತೆಯಿಂದಲೂ, ಅದಮ್ಯ ಉತ್ಸಾಹದಿಂದಲೂ ಸಂವೇದನೆಯ ಅಭಿವ್ಯಕ್ತಿಯಾಗಿ ಕಾಣಿಸಿಕೊಂಡಿದೆ ಎಂದು ವಿಮರ್ಶಕರು ನುಡಿದಿದ್ದಾರೆ. ದೇಶದಲ್ಲಿ ಹೊಗೆಯಾಡುತ್ತಿದ್ದ ಹಲವಾರು ಸಮಸ್ಯೆಗಳಿಂದ ಕೊರಗಿ, ಕ್ರುದ್ಧರಾಗಿ ಜನತೆಯನ್ನು ಎಚ್ಚರಿಸಬೇಕೆಂಬ ಪ್ರೇರಣೆ ದೇಶಭಕ್ತಿ ಕಾವ್ಯಸೃಷ್ಟಿಗೆ ಕಾರಣವಾಯಿತು. ರಾಷ್ಟ್ರೀಯ ಸಮಸ್ಯೆಗಳ ವಾಸ್ತವ ಚಿತ್ರ, ಎಂ.ವಿ.ಸೀ ಅವರ ಕವಿತೆಗಳಿಂದ ಲಭಿಸುತ್ತದೆ. ಇದು ಕೆಲವು ವೇಳೆ ಹೇಳಿಕೆಯಂತೆ, ಘೋಷಣೆಯಂತೆ ತೋರಬಹುದು. ಈ ದೋಷ ಬಹುಪಾಲು ನವೋದಯ ಮಾರ್ಗದ ದೇಶಭಕ್ತಿ ಮತ್ತು ಸಾಮಾಜಿಕ ಕವಿತೆಗಳಿಗೂ ಅನ್ವಯಿಸುತ್ತದೆ. ಕೆಲವು ಕವಿತೆಗಳು ಕಲಾತ್ಮಕ ಗೆಲುವನ್ನು ಪಡೆದಿವೆ; 'ಬಾಳುಹಂಪೆ' 'ನೀನಿಂದು ಜೀವಿಸಿರಬೇಕಿತ್ತು', 'ನವೆಂಬರು ಒಂದು, 'ಐಕ್ಯದೃಷ್ಟಿ' 'ಹೆಜ್ಜೆಪೂಜೆ', 'ರಾಷ್ಟ್ರದಿನೋತ್ಸವ ಗೀತ'. ಮುಂತಾದ ಒಳ್ಳೆಯ ಕವನಗಳನ್ನು ಪ್ರತ್ಯೇಕವಾಗಿ ಪರಿಶೀಲಿಸಬೇಕಾಗುತ್ತದೆ. ಎಂ.ವಿ.ಸೀ, ಅವರ ದೇಶಭಕ್ತಿ ಕವಿತೆಗಳ ಭಾಷೆ ಭಾವೋದ್ವೇಗದಿಂದ ಕೂಡಿದ್ದು, ವಿವರಣಾತ್ಮಕವಾಗಿದ್ದರೂ, ಸಮಕಾಲೀನ ಸಮಸ್ಯೆಗಳು ಕಾವ್ಯದ ಹಂದರದೊಳಗೆ ಪ್ರವೇಶಿಸಿ ಸಹೃದಯರ ಕಣ್ಮನಗಳನ್ನು ಸೆಳೆಯುವರೀತಿ ಎಂದಿಗೂ ಹೊಸದೆ!

ರಾಘವ ಅವರ ಕಾವ್ಯದಲ್ಲಿ ಕನ್ನಡ ಪ್ರೇಮ

ಎಚ್.ಎಂ. ರಂಗನಾಥ್

ಈ ಶತಮಾನದ ಆದಿಯಲ್ಲಿ ಆಂಗ್ಲ ಭಾಷೆಯು ಸಾರ್ವಭೌಮ ಸ್ಥಾನದಲ್ಲಿತ್ತು, ಕನ್ನಡವು ನಮ್ಮ ನಾಡಭಾಷೆಯಾದರೂ ವಿದ್ಯಾವಂತ ಜನರೂ, ಅಧಿಕಾರಿಗಳೂ ಕನ್ನಡ ಮಾತನಾಡುವುದಕ್ಕೆ ಹಿಂಜರಿಯುತ್ತಿದ್ದರು. ಕನ್ನಡ ಮಾತನಾಡುವುದು ಅಗೌರವವೆಂಬ ಭಾವನೆಯು ಅಲ್ಪ-ಸ್ವಲ್ಪ ಇಂಗ್ಲಿಷ್ ಬಲ್ಲವರಲ್ಲಿಯೂ ಬೇರೂರಿತ್ತು. ಅಂಥ ಸಮಯದಲ್ಲೂ ನಾಡಿನ, ನುಡಿಯ ಬಗ್ಗೆ ಅಭಿಮಾನವಿದ್ದ ಸಾಹಿತಿಗಳು, ಕಲಾವಿದರು ಕವಿಗಳು ಆಂಗ್ಲರ ಪುಸ್ತಕಗಳನ್ನು ಓದಿಕೊಂಡರು. ಆಂಗ್ಲರ ಭಾಷಾಭಿಮಾನ ನಾಡಿನಬಗ್ಗೆ ಗೌರವಗಳನ್ನು ಓದಿ ತಿಳಿದು, ತಾವೂ ಅಭಿಮಾನ ತಾಳಿದರು. ಇಂಗ್ಲಿಷ್ ಗೀತೆಗಳ ಭಾಷಾಂತರದಿಂದ ಆರಂಭವಾದ ಈ ಅಭಿಮಾನವು, ಭಾವಗೀತೆ, ನಾಟಕ, ಮುಂತಾದ ಸಾಹಿತ್ಯದ ಅನೇಕ ಪ್ರಕಾರಗಳಲ್ಲಿ ಕನ್ನಡತನವನ್ನು ಮೈಗೂಡಿಸಿಕೊಂಡು ಪ್ರಕಟವಾಯಿತು. ರಾಘವರ ಕನ್ನಡ ಪ್ರೇಮ ಈ ಹಿನ್ನೆಲೆಯದು.

'ಹಂಸಪಥ'ದ ಕೆಲ ಕವನಗಳನ್ನು ಓದಿದಾಗ ಇವರ ನುಡಿಯಭಿಮಾನ ನಮ್ಮಲ್ಲೂ ಚಿಮ್ಮುತ್ತದೆ.

'ನುಡಿಗುಡಿಯ ಗೊಮ್ಮಟನೆ ! ಅಡಿಗಿದೋ ನುಡಿಹೂವ
ಮುಡಿಗೇರಿಸುವೆನೆನಲು, ಕುಬ್ಜನಯ್ಯ :'
'ಸಿದ್ಧಿಯ ಸುಧಾರಸವ ಕಾವ್ಯ ಕಲಶಕೆತುಂಬಿ
ಎರೆದೆ ನಾಡಿನ ಜನಕೆ ನಲ್ನೇಮದಿ' ಎನ್ನುತ್ತಾರೆ.

'ಬಾರಯ್ಯ ಮತ್ತೊಮ್ಮೆ ಬಸವೇಶ್ವರ' ಎಂಬ ಕವನದಲ್ಲಿ

'ಒಡಲಹಣತೆಯಮಾಡಿ ನುಡಿಯ ಬತ್ತಿಯ ಹಾಕಿ
ನಡತೆ ನಿಷ್ಠೆಗಳ ನಲ್ ತೈಲವೆರೆದು............

....
ನೀಕಂಡ ಕನಸಿಗೂ ನನಸಿಗೂ ಇಹದೂರ
ನಿಸಿ ಕನ್ನಡ ಜನತೆಗಾಗಲಪ್ರಕಾಶ!'

ಎಂದು ಬರೆವಾಗ ಬಸವಣ್ಣನವರ ಒಡಲಹಣತೆಯಲ್ಲಿ ನುಡಿಯ ಬತ್ತಿಯ ಹಾಕಿ

ಜ್ಞಾನದ ಬೆಳಕು ನೀಡಿತು ಎನ್ನುತ್ತಾರೆ. ವೇದಾಂಗಗಳ, ಸಂಸ್ಕೃತದ ಅಧ್ಯಾತ್ಮ ಜ್ಞಾನ
ವನ್ನು ಸರಳ ಕನ್ನಡದಲ್ಲಿ ಜನಪದಕ್ಕೆ ತಿಳಿಯಪಡಿಸಿ ಜನಮನವನ್ನು ಬೆಳಗ
ಚಿಜ್ಜ್ಯೋತಿಯೆಂದು ಅವರ ಅಭಿಪ್ರಾಯ.

ಕನ್ನಡ ನಾಡಿನ ಹಳೆಯ ಹಾಡು ಎಂಬ ಕವಿತೆಯಲ್ಲಿ ಕವಿ ಈ ನಾಡಿನಲ್ಲಿ.
ನುಡಿಯಲ್ಲಿ ಹಿರಿಮೆ-ಗರಿಮೆಯನ್ನು ಕಾಣುತ್ತಾರೆ.

ಕನ್ನಡ ನಾಡಿನ ಮರಗಳಲೆಲ್ಲ
ಹೊಂಗೆಯ ನೆರಳದು ತಂಪು;
ಕನ್ನಡ ನಾಡೆಲ್ಲರಿಗಾಸರೆ ತಾ-
ನೆನ್ನುವ ನೆನಹಿನಲಂಪು.

ಕನ್ನಡನಾಡಿನ ಹೂಗಳಲೆಲ್ಲ
ಕಂಪಿನಮಲ್ಲಿಗೆ ಕಿರಿದು
ಉನ್ನತಿಪಡೆದೂ ವಿನಯವ ಮೆರೆಯುವ
ನಾಡಿನ ಪೆಂಪಿನ ಬಿರುದು.

ಕೆಂಗು-ಕಂಗುಗಳು ಕೈಬೀಸಿ ಕರೆಯುತ್ತಿರುವುದು, ನಮ್ಮ ಕನ್ನಡಿಗರ ಭಕ್ತಿ
ಅಕ್ಷತೆ ಬಟ್ಟಲ ಹಿಡಿದ ಫಲರಾಶಿಯಾಗಿವೆ. ಇಲ್ಲಿನ ಕಗ್ಗಲ್ಲೂ ಕಲೆಯಾಗಿ ದೇವಾಲಯ
ನೆಲೆಯಾಗಿವೆ. ಕೃಷ್ಣ, ಮಲಪ್ರಭೆ, ಕಪಿಲೆ, ಕಾವೇರಿ ತುಂಗಭದ್ರೆ ಸಂಗಮ
ನಮಗೆ ಐಸಿರಿಯಾಗಿವೆ. ಸಕಲ ಧರ್ಮಗಳ ಆಗರವಾಗಿದೆ ನಮ್ಮ ನೆಲ. ಕವಿಗೆ ನಮ್ಮ
ಜನ ನಿದ್ದೆಮಾಡುವವರೆಂಬ ಆತಂಕ. ಜನರು ಹತ್ತಾರು ದಾರಿ ತುಳಿದು ಸಾಗುವರು.
ಒಂದಾಗ ಬೇಕೆಂಬ ಬಲವಾದ ಬಯಕೆ ಕವಿಗೆ. ಜನರು ಕಲಹದ
ಬೀಯುತ್ತಿದ್ದಾರೆ, ಇದು ಕೂಡದು. ಏನೇ ಆದರೂ ಜನ ಒಂದಾಗಿ ಮುಂದೆ ಸಾಗ
ಬೇಕೆಂಬ ಕನಸು ನನಸಾಗುವ ಕಾಲಕ್ಕಾಗಿ ಕಾಯುತ್ತ ಕುಳಿತಿದ್ದಾರೆ ಕವಿ. ತನುಮನ
ಎಲ್ಲಿ ಕನ್ನಡ ಎಂಬ ಹಂಬಲ ತುಂಬಿಕೊಂಡಿದ್ದಾರೆ. ಆ ಸುದಿನಕ್ಕಾಗಿ ಕಾಯುತ್ತಿ
ದ್ದಾರೆ.

‘ಬನ್ನಿ, ನಾಡವರೆ, ಕರ್ನಾಟಕ ತಾಯಿಗೆ ನಮಿಸಿರಿ’ ಎಂಬ ಕವನದ
ಭಾರತಾಂಬೆಯೇ ಕನ್ನಡ ನಾಡಿನ ತಾಯಿಯೆಂದೂ ಆಕೆಯ ಪೂಜೆಯೇ
ಪೂಜೆಯೆಂದೂ ನುಡಿಯುತ್ತಾರೆ. ಜನರು ಜಗ್ಗತಿ ದೇಶಭಕ್ತಿಯಿಂದ
ನಿಷ್ಠೆ ಶಾಂತಿಯಾಗುತ್ತದೆ ‘ಕಾಗಿನೆಲೆ ತಾಯಿ ಗುಡಿಯ ಗುಡಿಸುವ
ಆಗಿಂದಾಗ್ಗೆ ಕಸ ಹರಡುವ ಜನರಿಗೆ ಎಚ್ಚರದ ದನಿಯೂ ಇದೆ ಇಲ್ಲಿ.

ನಾವೆಂಬರು ಒಂದು ಕವಿತೆಯಲ್ಲಿ, ೧೯೫೬ ನವೆಂಬರ್ ಒಂದರಂದು ಕರ್ನಾಟಕ
ರಾಜ್ಯೋದಯವಾಯಿತು ಎಂದು ತಿಳಿಸುತ್ತ, ನಾವ್ ಎಂಬರು ಎಂದರೆ ಕನ್ನಡಿಗರೆಂಬ

ವರು ಎಂಬ ಶ್ಲೇಷೆ ಬಳಸಿದ್ದಾರೆ. ನಾವು ಒಂದಾದರೆ, ಭಾರತೀಯರೂ ಆಗಿ ವಿಶ್ವಕ್ಕೆ ಮಾದರಿಯಾಗಬಹುದೆಂಬ ಹಂಬಲ ಕವಿಗೆ. ಕನ್ನಡ ಬಿಟ್ಟರೆ ನಮಗೆ ಬೇರೆ ಗತಿಯಿಲ್ಲ ಕನ್ನಡ ಅಳಿದರೆ ನಮ್ಮ ಅಳಿವು. ನಾವು ಒಂದಾದರೆ ಭಾರತೀಯರೊಂದು, ತನ್ಮೂಲಕ ವಿಶ್ವ ಪ್ರಜೆಗಳೆಲ್ಲ ಒಂದು ಎಂಬ ಭಾವನೆಯನ್ನು ಮೂಡಿಸುತ್ತದೆ ಈ ನವೆಂಬರ್ ಒಂದು !

ಮುಗಿಯದ ಮಾಯೆಯಲ್ಲಿ, 'ತೆರೆಯುತಿದೆ ನಾಡ ಭಾಗ್ಯದ ಬಾಗಿಲು' ಎಂಬ ಕವಿತೆಯು ನಮ್ಮ ರಾಜ್ಯೋದಯದ ದಿನವನ್ನು ನೆನಪಿಗೆ ತರುತ್ತದೆ.

ಕೀಳುತನವನು ಕೊಡಹುತೆದ್ದು ಸಿಂಹದೊಲು
'ಬಾಳಿ, ಬಾಳಿಸಿ' ರೆಂದು ತಾಯ್ ಹರಸುತಿರಲು
'ಕನ್ನಡದ ಮನೆಯೊಂದೆ, ಒಂದೆಕನ್ನಡಕುಲ'-
ಚಿನ್ನದೆಳೆ ಕಟ್ಟಿದುವೆ ನಮಗೆ ರಕ್ಷೆ ಬಲ :
ಛಿನ್ನವಾಗದೆ ಬದುಕಿ ನೂರು ಸಾವಿರಕಾಲ
ಕನ್ನಡದ ಕೀರ್ತಿಯನು ಹಬ್ಬಿಸಲು ಜಗದಗಲ

ಎಂಬ ಕವಿಯ ಹಂಬಲ ನಮ್ಮ ಜನದ ಒಗ್ಗಟ್ಟು ಹಾಗೂ ನಾಡ ಕೀರ್ತಿಯನ್ನು ಜಗದಗಲ ಹರಡುವುದು .

'ಗೆಲ್ಲು ಗೆಲ್ ಕನ್ನಡದ ನಾಡದೇವಿ' ಎಂಬ ಕವಿತೆಯಲ್ಲಿ, ಹರಿದು ಹಂಚಿ ಹೋಗಿದ್ದ ಹಾಗೂ ಇನ್ನೂ ನೆರೆ ನಾಡುಗಳಲ್ಲಿ ಉಳಿದಿರುವ ಕರ್ನಾಟಕದ ಅನೇಕ ಭಾಗಗಳನ್ನು ನೆನೆದು ದುಃಖಿಸುವ ಸೂಕ್ಷ್ಮಾಂಶವಿದ್ದರೂ ಏಕೀಕರಣವಾದ ಸಂತಸವನ್ನು ಅನುಭವಿಸುವ ಸಂತಸವಿದೆ. 'ಕ್ಷುದ್ರ ಭಾವನೆ ಭೇದಗಳು ಮರಳಿ ಈನಾಡನ್ನು ಛಿದ್ರ ಗೈಯದ ರೀತಿ, ಓ ತಾಯೆ, ಕಾಪಾಡು! ಉದ್ಧಾರವಾಗಲಿ ಕನ್ನಡ ನಾಡು-ಗೆಲ್ಗೆ'-ಎಂಬ ಮಹತ್ವಾಕಾಂಕ್ಷೆ ಕವಿಗೆ ಇದೆ.

ಗೀತ ಭಾರತಿ ಕವನ ಸಂಕಲನದಲ್ಲಿಯ 'ನಾಡತಾಯಿಗೆ ನಮಿಪೆವು' ಎಂಬ ಒಂದು ಕವಿತೆಯಿದೆ. ನಾಡತಾಯಿಯಾದ ಕನ್ನಡಾಂಬೆಯ ತಾಯಿ ಭಾರತಿಯ ಸೀರೆಯಂಚೇ ಕಡಲ ತಡಿಯಾಗಿದೆ ಇಲ್ಲಿ. ಎಲ್ಲರೂ ಸಮಾನರು, ನಾವು ಭಾರತೀಯರೇ. ನಮ್ಮ ತಾಯಿ ಭಾರತಿಯು ಉಳಿದರೆ ನಮ್ಮ ನಾಡು ಉಳಿಯುತ್ತದೆ. ಆದ್ದರಿಂದ ರಾಷ್ಟ್ರಮಾತೆಯ ಉಳಿವಿಗೆ ಭೇದವೆಣಿಸದೆ ನುಗ್ಗಿ, ಹೋರಾಡಿ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳೋಣವೆಂಬ ಹಂಬಲ ಕವಿಗೆ. ಕನ್ನಡತನವು ಭಾರತೀಯತೆಗೆ ಊನವಾಗುವುದಿಲ್ಲವೆಂಬ ಭಾವನೆಯನ್ನು ಕವಿಯಲ್ಲಿ ನಾವು ಕಾಣಬಹುದಾಗಿದೆ. ರಾಘವ ಅವರು ೧೯೫೦ ರಲ್ಲಿ ಪ್ರಕಟಿಸಿದ ಬೀಸಿಬಂದ ಗಾಳಿ ಕವನ ಸಂಕಲನದ ಕವನವೊಂದರಲ್ಲಿ ಕನ್ನಡದಸೇನೆ ರಾಷ್ಟ್ರದ ಸೇನೆಯೂ ಅಹುದು ಎನ್ನುವ ಭಾವನೆಯಿದೆ.

ನಾಡ ತಾಯಿ ಮಗಳಲ್ಲವೆ
ನುಡಿಯ ತಾಯಿ ?
ಇವಳ ಸೇವೆಯವಳ ಸೇವೆ—
ಯೆಂದು ನನ್ನ ಬಾಯಿ
ಹಾಡ ಹೊರಟಿದೆ ;
ನಾಡ ನೋವು ನಲಿವುಗಳನು
ಹಾಡ ತೊಡಗಿದೆ.
ಹಾಡ ಹೊರಟ ಕಂದನನ್ನು
ಹರಸು ತಾಯಿ,
ಚಿತ್ತವನ್ನು ಸೇವೆಯಲ್ಲಿ
ನಿಲಿಸು ತಾಯಿ,
ಓ, ನಾಡ ತಾಯಿ.

ಕವಿಯು ಕನ್ನಡತಾಯಿ ಸೇವೆಯೇ ಜೀವನದ ಪರಮ ಗುರಿ ; ಅದನ್ನು ಸಾಧಿಸಲು ಬಹುತ್ರಾಣವನ್ನು. ಧೈರ್ಯಗಳನ್ನು ನೀಡಿ ಹರಸೆಂದು ತಾಯಿಯನ್ನು ಬೇಡುತ್ತಾರೆ.

ಕನ್ನಡತನವೆಂಬ ಕವನದಲ್ಲಿ,
'ಕನ್ನಡ ತನವನು ತೊರೆದರೆ ನಾವು
ತಿಳಿಯಿರಿ, ನಮಗಂದೇ ಸಾವು.'

ಎಂಬ ಕಳಕಳಿಯಿದೆ ಎಲ್ಲಿ ಕನ್ನಡತನವನ್ನು ಮರೆತುಬಿಡುವರೋ ಎಂಬ ಭಯವಿದೆ ಕವಿಗೆ. ದುಃಖದ ಧ್ವನಿಯನ್ನು ಈ ಸಾಲುಗಳಲ್ಲಿ ನಾವು ಗುರುತಿಸಬಹುದು.

'ಅನ್ಯರ ನುಡಿಯಲ್ಲಿಹ ವ್ಯಾಮೋಹ
ತಾಯ್ನುಡಿಗಿಲ್ಲದೆ ಇಹುದಲ್ಲ' !
ಕನ್ನಡ ಬರಹಕೆ ಕನ್ನಡದೋದಿಗೆ
ಮನ್ನಣೆಕೊಡದರು ಕನ್ನಡರೆ ?
ಕನ್ನಡ ಬಸಿರಲಿ ಬಂದವರೆ ?

ಅನ್ಯಭಾಷೆಯನ್ನಾಡುವ ಹಂಬಲವುಳ್ಳವರು ಕನ್ನಡಿಗರೆ ? ಎಂಬ ಪ್ರಶ್ನೆ ಕೇಳುತ್ತಾರೆ ಕವಿ.

'ನಾಡಿನ ಕಾಣಿಕೆ' ಎಂಬ ಕವಿತೆಯಲ್ಲಿ ಕನ್ನಡ ನಾಡು ಹೀಗೇಕೆ ಬಂಧನವನ್ನು ಕಟ್ಟಿದವರು ರಾಜಕಾರಣಿಗಳೇ ? ಎಂಬ ಪ್ರಶ್ನೆಕೇಳಿ ಉತ್ತರಿಸುತ್ತಾರೆ. [illegible]

ಪುಂಜರು, ಓಜರೋಜರು ವಿದ್ಯಾರಣ್ಯ, ಅಶೋಕ, ಬಾಪು, ಅಕಬರ, ಹರ್ಷರ ಹೆಸರುಗಳನ್ನು ಹೇಳುತ್ತಾರೆ ಕವಿ.

ನಾವು ದುಡಿಯಬೇಕು, ಕನ್ನಡದ ಬಳಗ ಕಟ್ಟಬೇಕು.

‘ಬನ್ನಿ ಸೋದರ ಸೋದರಿಯರೇ ಕೇಳಿರೇ ಕಳಕಳಿ ಕರೆ
ತನ್ನಿ ಗೆಲವನು ನಾಡ ಕಟ್ಟುವ ಯೋಜನೆಗೆ ನಿಮ್ಮ ಕಾಣಿಕೆ’

ಎಂಬ ಹಂಬಲವೇ ಕವಿಗೆ ಬದುಕಿನ ಆಸರೆ.

ರಾಘವ ಅವರ ಕಥನ ಕವನಗಳು

ಬಿ.ಎಸ್. ರಾಮಪ್ರಸಾದ್

ಪ್ರಗತಿಶೀಲ ಸಾಹಿತ್ಯ ಚಳುವಳಿಯು ನೆಲೆಯೂರಿದಂದಿನಿಂದ ಬಂಡಾಯ ಸಾಹಿತ್ಯದ ಹೊಸಪಂಥವು ಉಗಮವಾಗಿರುವ ಇಂದಿನ ವರೆಗೆ, ಸುಮಾರು ನಾಲ್ಕೈದು ದಶಕಗಳ ಅವಧಿಯಲ್ಲಿ ಸಾಹಿತ್ಯದ ಸಾಮಾಜಿಕ ಜವಾಬ್ದಾರಿಯನ್ನು ಕುರಿತು ಸಾಕಷ್ಟು ವಿಚಾರ ವಿಮರ್ಶೆ ನಡೆದಿದೆ. ಆದರೆ ಈ ವಿಚಾರ ವಿಮರ್ಶೆ ಆರಂಭವಾಗುವ ಮೊದಲೆ, ಹೊಸ ಸಾಹಿತ್ಯದ ನೆಲೆ ಸುಗ್ಗಿಯಲ್ಲಿ, ನವೋದಯ ಕಾವ್ಯ ಬೆಳಗಿದ ಹಿರಿಯ ಕವಿಗಳಾದ ರಾಘವ ಅವರು ರಚಿಸಿರುವ ಆರು ಕಥನ ಕವನಗಳಲ್ಲಿ ನಾಲ್ಕು [ಗಂಡಸ ಪೂಜೆ (1931) ದಾಮಿನಿ (1930) ಡೋಲ (1939) ಜೀತದಾಳಿ (1945)] ಶೋಷಣೆಗೆ ಒಳಗಾಗುವ ವರ್ಗದವರ ಚಿತ್ರಗಳನ್ನು ನಮ್ಮ ಮುಂದಿಡುತ್ತವೆ. ಇಷ್ಟರಿಂದಲೆ ಈ ಕವನಗಳೆಲ್ಲವೂ ಉತ್ಕೃಷ್ಟ ಕವನಗಳೆಂದು ಸಾಧಿಸ ಹೊರಡುತ್ತಿಲ್ಲ. ಆಯಾ ಕವನಗಳ ಸೌಂದರ್ಯವನ್ನು ಇತಿ ಮಿತಿಯನ್ನು ಪ್ರತ್ಯೇಕವಾಗಿ ವಿಚಾರ ಮಾಡುವುದಾಗುತ್ತದೆ. ಇದೊಂದು ಅಂಶವನ್ನು ಲೇಖನದ ಮೊದಲಿಗೆ ಗುರುತಿಸುವ ಪರ ಉದ್ದೇಶ: ಸಾಹಿತ್ಯ ಪರಂಪರೆಯೊಂದನ್ನು ನವೋದಯ, ಪ್ರಗತಿಶೀಲ, ನವ್ಯ, ಬಂಡಾಯ, ಹೀಗೆ ವರ್ಗೀಕರಣ ಮಾಡಿಕೊಂಡು ಹಣೆ ಪಟ್ಟಿಗಳನ್ನು ಲಗತ್ತಿಸುವಾಗ ವಹಿಸಬೇಕಾಗುವ ಎಚ್ಚರದ ಕಡೆಗೆ ಗಮನ ಸೆಳೆಯುವುದು.

"ಕಥನ ಕವನವು ಒಟ್ಟಿನಲ್ಲಿ ಹೇಳುವುದಾದರೆ ಪದ್ಯರೂಪದಲ್ಲಿರುವ ಕತೆ. ಇಲ್ಲಿ ಕಾವ್ಯ ಗುಣ ಕತೆಗೆ ಪೋಷಕವಾಗಿ ಬರುತ್ತದೆ ಅಷ್ಟೇ. ಕತೆಯೇ ಪ್ರಧಾನ, ಉಳಿದುದೆಲ್ಲ ಗೌಣ." ಎನ್ನುತ್ತಾರೆ ಶ್ರೀ ಎಸ್. ಅನಂತನಾರಾಯಣ. ಆದರೆ ಕನ್ನಡದ ಅನೇಕ ಕಥನ ಕವನಗಳಲ್ಲಿ ಕವಿಯ ಜೀವನ ದರ್ಶನ, ಅವನ ತಾತ್ವಿಕ ನಿಲುವುಗಳ ಅಭಿವ್ಯಕ್ತಿಗೆ ನೆರವಾಗಿ ಕತೆಯ ಹಂದರ ಇರುತ್ತದೆ. ಪ್ರಧಾನ ಸ್ಥಾನವನ್ನು ಕವಿಯ ಭಾವನೆಗಳೇ ಆಕ್ರಮಿಸಿ ಕತೆಯನ್ನು ಎರಡನೆಯ ಸ್ಥಾನಕ್ಕೆ ತಳ್ಳುತ್ತವೆ. ಮಾಸ್ತಿಯವರ 'ಮದುಲಿಂಗನ ಕಣಿವೆ' 'ಸಿದ್ಧರ ಕಿನ್ನರಿ' ಕುವೆಂಪು ಅವರ 'ಕಿಂದರಿಜೋಗಿ' ಕಡೆಂಗೋಡ್ಲು ಶಂಕರಭಟ್ಟರ 'ಮಾದ್ರಿಯ ಚಿತೆ'—ಹೀಗೆ ಹೆಸರುಗಳನ್ನು ಹೇಳುತ್ತಲೇ ಹೋಗಬಹುದು. ಈ ಕವನಗಳಲ್ಲಿ ಕಥೆಯ ಅಂಶ ಸ್ವಲ್ಪ. ಅದರ ಮೇಲಿನ ಅಲಂಕಾರ

ವಡ ಭಾಗವಾಗಿ ವ್ಯಕ್ತವಾಗುವ ಜೀವನ ವಿಮರ್ಶೆ ಪ್ರಧಾನ. ರಾಘವ ಅವರ ಕಥನ ಕವನಗಳಲ್ಲಿಯೂ ದುರ್ಬಲರ ಬಗೆಗೆ ಉಕ್ಕಿಬರುವ ಅನುಕಂಪೆಗೆ ಮೊದಲಸ್ಥಾನ. ಈ ಅನುಕಂಪೆಯು ಕಲಾತ್ಮಕ ಅಭಿವ್ಯಕ್ತಿಗೆ ನೆರವಾಗಿ ಕತೆಯ ಹಂದರ.

ಆರ್ಥಿಕ ಪರಿಸ್ಥಿತಿಯ ಒತ್ತಡಗಳಿಗೆ ಸಿಲುಕಿ, ವಯಸ್ಸು ಮೀರಿದವನನ್ನು ಮದುವೆಯಾಗಿ, ವಿಧವೆಯಾಗುವ ತರುಣಿ ಶಾರದೆ. ಅವಳ ನೋವು 'ಗಂಡನ ಪೂಜೆ' ಕವನದ ವಸ್ತು. ಭೀಮನ ಅಮಾವಾಸ್ಯೆ ಹಬ್ಬದ ಆಚರಣೆಯ ಮೂರ್ತ ವಿವರಗಳ ಮೂಲಕ, ಹಬ್ಬದ ದಿನ ಅಕ್ಕನ ಉಡುಗೆ ತೊಡುಗೆಗಳನ್ನು ತೊಟ್ಟು ಮೆರೆಯುತ್ತಿರುವ ಗೌರಿಯ ಮುಗ್ಧ ಸಂತೋಷಕ್ಕೆ ವೈದೃಶ್ಯವಾಗಿ, ಶಾರದೆಯ ಏಕಾಕಿತನದ ನೋವು ಕವನದಲ್ಲಿ ಜೀವಂತವಾಗುತ್ತದೆ. ಕವನದ ಛಂದಸ್ಸು (ಗೋವಿನ ಕಥೆಯ ಧಾಟಿ) ಶಾರದೆಯ ಮನಃಸ್ಥಿತಿಯ ನಿರೂಪಣೆಗೆ ತುಂಬ ನೆರವಾಗಿದೆ. ಕವಿ ಅಲ್ಲಲ್ಲಿ ವಹಿಸುವ ಸ್ವಾತಂತ್ರ್ಯ ಕವನದ ಕಲಾತ್ಮಕ ಸೌಂದರ್ಯವನ್ನು ಹೆಚ್ಚಿಸಿದೆ. ಒಂದು ಉದಾಹರಣೆಯನ್ನು ಗಮನಿಸಬಹುದು.

ಹಿರಿಯ ಸಿರಿಯನು ಕಳೆದು ಕೊಂಡಳು
ಮರಳಿ ಮದುವೆಯ ಮಾತು, ಕನಸು
ಬರಿಯ ಸಿರಿಯೊಳು ಪರಮ ಪ್ರೇಮವ
ಪಡೆಯಬಲ್ಲಳೆ ಶಾರದೆ ?

ಎರಡನೆಯ ಸಾಲಿನ ಕೊನೆಯಲ್ಲಿ ಕಾಣಿಸುವ ಬಿಡುವು ಎಷ್ಟು ಪರಿಣಾಮಕಾರಿಯಾಗಿದೆ. ಬಡತನವೇ ಕಾರಣವಾಗಿ, ಶ್ರೀಮಂತನಾದ ವೃದ್ಧನ ಕೈಹಿಡಿದವಳು ಶಾರದೆ. ಈಗ ಬಡತನವಿಲ್ಲ. ಮುತ್ತೈದೆತನವೂ ಇಲ್ಲ, ಮರು ಮದುವೆಯಾಗುವ ಅವಕಾಶ ಕೂಡ ಇಲ್ಲ. ಈಗ ಪರಿಸ್ಥಿತಿ ಸ್ವಲ್ಪ ಬದಲಾಗಿರಬಹುದು. ಸಮಾಜದಲ್ಲಿ ಬಾಲ ವಿಧವೆಯರು ಕಾಣಿಸದಿರಬಹುದು. ಆದರೆ ಅದೇ ಆರ್ಥಿಕ ಪರಿಸ್ಥಿತಿಯ ಒತ್ತಡಗಳಿಂದಾಗಿ ಮದುವೆಯೇ ಆಗದೆ ಒಂಟಿತನದ ನೋವಿಗೆ ಗುರಿಯಾಗುವ ಅನೇಕ ಶಾರದೆಯರು ಇಂದಿನ ಸಮಾಜದಲ್ಲಿ ಕಾಣಲು ಸಿಗಬಹುದು. ಆದುದರಿಂದ ಕವಿ ಶಾರದೆಯ ಬಗೆಗೆ ವಹಿಸುವ ಸಹಾನುಭೂತಿ ಬದಲಾದ ಪರಿಸ್ಥಿತಿಯಲ್ಲಿ ವ್ಯರ್ಥವೆನ್ನುವಂತಿಲ್ಲ.

ಒಬ್ಬ ಕವಿಯ ಎಲ್ಲ ರಚನೆಗಳೂ ಏಕ ಪ್ರಕಾರವಾದ ಯಶಸ್ಸನ್ನು ಪಡೆದುಕೊಳ್ಳಬೇಕೆಂದು ನಿರೀಕ್ಷಿಸುವುದು ನ್ಯಾಯವಲ್ಲ. ರಾಘವ ಅವರ 'ಪೂಜಾರಿ' ಮತ್ತು 'ಬೀದಿಸೂಳೆ' ಕವನಗಳು ಆಶಯ ಮತ್ತು ಅಭಿವ್ಯಕ್ತಿಗಳ ನಡುವೆ ಇರುವ ಅಂತರದಿಂದಾಗಿ ಸೋತಿವೆ. ಪೂಜಾರಿ ಕವನವು ಸರಳ ರಗಳೆಯಲ್ಲಿರುವ ನೀತಿ ಬೋಧೆ. ಕವನವನ್ನು ನೀತಿ ಬೋಧನೆಗೆ ವಾಹಕವನ್ನಾಗಿ ಮಾಡಿಕೊಳ್ಳುವುದು ತಪ್ಪಲ್ಲ. ಆದರೆ

ನೀತಿ ಬೋಧನೆಯಾಗಲಿ, ಆಕ್ರೋಶವಾಗಲಿ, ಸಹಾನುಭೂತಿಯಾಗಲಿ ಕವಿಯ ವೈಯಕ್ತಿಕ ಅನುಭವದ ಭಾಗವಾಗಿ ಸುಂದರ ಕಲಾತ್ಮಕ ಅಭಿವ್ಯಕ್ತಿಯನ್ನು ಪಡೆದು ಕೊಂಡಾಗ ಮಾತ್ರ ಕವನ ವಾಗುತ್ತದೆ. ಹಣದ ದಣಿಗೆ ಬಲಿಯಾದ ಪೂಜಾರಿಗೆ ಪೂಜೆ ಕೇವಲ ಯಾಂತ್ರಿಕ ಕ್ರಿಯೆ ಆಗುವುದು. ಅಲೌಕಿಕವಾದ ಅನುಭವವೊಂದರ ಮೂಲಕ ಪೂಜಾರಿ ಪೂಜೆಯ ನಿಜವಾದ ತಿರುಳನ್ನು ಕಂಡುಕೊಳ್ಳುವುದೂ ಇಲ್ಲಿನ ವಸ್ತು. ಕವನದಲ್ಲಿ ಮಾತುಗಾರಿಕೆಯೇ ಪ್ರಧಾನ. ಬೀದಿ ಸೂಳೆಯ ಶೋಚನೀಯ ಸ್ಥಿತಿಯನ್ನು ವರ್ಣಿಸುವ ಕವನದಲ್ಲಿಯೂ ಇದೇ ದೌರ್ಬಲ್ಯದಿಂದಾಗಿ ಕವನದ ಶಿಲ್ಪ ಶಿಥಿಲವಾಗುತ್ತದೆ. ಗಂಡನ ಪೂಜೆ ಕವನದಂತೆ ಇಲ್ಲಿಯೂ ಅಸಹಾಯಕ ಹೆಣ್ಣೊಬ್ಬಳ ವೇದನೆಯನ್ನು ಚಿತ್ರಿಸುವ ಪ್ರಯತ್ನ ಕವಿಯದು. ಆದರೆ ಗಂಡನ ಪೂಜೆಯ ಶಾರದೆಯ ಯಾತನೆ ಕವಿಯ ಸಜೀವ ಅನುಭವದ ಭಾಗವಾಗಿ ಕವನದಲ್ಲಿ ರೂಪು ತಳೆಯುವುದಕ್ಕೂ ಹೆಸರಿಲ್ಲದ ಬೀದಿ ಸೂಳೆಯ ನೋವು ಸಂಕಟಗಳನ್ನು ವರ್ಣಿಸುವಾಗ ಕವಿ ಹರಿಸುವ ವಾಗ್ಧಾರೆಗೂ ಅಪಾರ ಅಂತರವಿದೆ.

'ಆ ಚಿತ್ರಗಳು' ಒಂದು ಯಶಸ್ವೀ ಕಥನ ಕವನ. ಹೆಜ್ಜೆ ಹೆಜ್ಜೆಗೂ ಸಹೃದಯನ ಕುತೂಹಲವನ್ನು ಕೆರಳಿಸುತ್ತ ಕವನವು ಬೆಳೆಯುತ್ತದೆ. ಬೀದಿಯ ಮರದಡಿಯಲ್ಲಿ ಕವಿಯನ್ನು ಮಾತನಾಡಿಸುವ ಚಿತ್ರಗಾರನ ವೇಷ ಭೂಷಣಗಳ ವರ್ಣನೆ ಕಣ್ಣಿಗೆ ಕಟ್ಟುವಂತಿದೆ.

ಅವನುಟ್ಟ ಪಂಚೆಯೋ
ಪಂಚೆಯೆಂದೆನೆ ಹರಿದು
ತುಂಡು ಬಟ್ಟೆಯ ಚೂರು
ಹರಕುಗಳೋ ನೂರಾರು.

ಆಕಸ್ಮಿಕವಾಗಿ ತನ್ನನ್ನು ಮಾತನಾಡಿಸಿದ ವ್ಯಕ್ತಿ ಭಿಕ್ಷುಕನೊ ಹುಚ್ಚನೊ ಆಗಿರಬೇಕೆಂದು ಅನುಮಾನ ಪಡುವ ಕವಿ ಅವನು ಕೊಟ್ಟ ಕಾಗದಗಳಲ್ಲಿರುವ ಚಿತ್ರಗಳ ಸೌಂದರ್ಯವನ್ನು ನೋಡಿ ದಂಗಾಗುತ್ತಾರೆ. ಆ ಚಿತ್ರಗಳಲ್ಲೆಲ್ಲಾ ಒಬ್ಬಳೇ ತರುಣಿಯದು. ಹುಚ್ಚನಂತೆ ಕಾಣುವ ಚಿತ್ರಗಾರನ ಬಾಲ್ಯದ ಒಡನಾಡಿಯದು. ಈಗ ಆ ತರುಣಿ ಚಿತ್ರಗಾರನಿಂದ ದೂರಳಾಗಿ ಬೇರೊಬ್ಬನ ಮಡದಿಯಾಗಿದ್ದಾಳೆ. ಆದರೂ ಅವನ ಮನಸ್ಸಿನಲ್ಲಿ ಜೀವಂತಳಾಗಿದ್ದಾಳೆ. ಚಿತ್ರಗಾರನ ಪತಾಕೆ ಗೆರೆಗಳಲ್ಲಿ ರೂಪ ಪಡೆದು ಕೊಳ್ಳುತ್ತಾಳೆ. ಅವಳ ಚಿತ್ರ ಬರೆಯುವುದರ ಮೂಲಕವೆ ತೃಪ್ತಿ ಪಡೆಯುತ್ತಾನೆ. ಆದರೆ, ಅವನ ಅಭಿಲಾಷೆ, ಸ್ವಗತದಲ್ಲಿ

ಒಂದು ಚಿತ್ರವ ಬರೆಯೆ
ಅವಳ ಕರೆದಂತೆ;

ಬರೆ ಬರೆಯುತವಳೊಡನೆ
ನಾನು ನೆರೆದಂತೆ.

ಆದರೆ ಅವನ ಆದರ್ಶದಲ್ಲಿ, ಸ್ಮೃತಿಪಥದಲ್ಲಿ ನೆಲೆ ನಿಂತಿರುವ ಒಂದು ಅಪೂರ್ವ ಚಿತ್ರ ಅವನ ಗೆರೆಗಳ ಹಿಡಿತಕ್ಕೆ ಸಿಗುತ್ತಿಲ್ಲ. ಅದನ್ನು ಬರೆಯುವುದೇ ಅವನ ಹಂಬಲ. ಕತೆಯನ್ನು ಕೇಳುತ್ತ ಕವಿಯಂತೆ ನಾವೂ ಮಂತ್ರ ಮುಗ್ಧರಾಗುತ್ತೇವೆ. ಹುಚ್ಚನಂತೆ ಕಾಣಿಸಿಕೊಂಡವ ಕಲಾತಪಸ್ವಿಯಾಗಿ ಕಣ್ಮರೆಯಾಗುತ್ತಾನೆ.

ಹುಚ್ಚು ಹಿಡಿದಲ್ಲದೆಯೆ
ಕಲೆಯು ಕೈಸಾರದೊಡೆ,
ಹುಚ್ಚು ಹಿಡಿದವರು ಸರಿಯೆ,
ಎನ್ನೊಳಾ ಚಿತ್ರಕಲೆ
ಚಿಗುರಿ ನೆರೆ ಮೆರೆಯೆ.

ಎಂದು ಕವಿ ಹಂಬಲಿಸುತ್ತಾರೆ. ಚಿತ್ರಗಾರನಿಗೆ ದೊರೆಯದ ಪ್ರಣಯಿನಿ; ಅವನು ಬರೆಯಲಾಗದಿರುವ ಚಿತ್ರ, ಇವು ಒಂದಕ್ಕೊಂದು ಹೊಂದಿಕೊಂಡು ಬದುಕಿನ ವಿಷಮ ಪರಿಸ್ಥಿತಿಯನ್ನು ಸೂಚಿಸುತ್ತದೆ. ಒಂದುದಿನ ಪರಿಪೂರ್ಣವಾದ ಚಿತ್ರವನ್ನು ಬರೆದೇ ಬರೆಯುತ್ತೇನೆ ಎಂಬ ಚಿತ್ರಗಾರನ ಹಟ; ತಾನು ಬದುಕಿರುವುದೇ ಅದಕ್ಕಾಗಿ ಎನ್ನುವ ಅವನ ಮಾತು, ಆ ಮಾತುಗಳನ್ನಾಡುವಾಗ ಅವನ ಮುಖದಲ್ಲಿ ಕಾಣುವ ಹೆಮ್ಮೆ, ಗೆಲುವು; ಆಗ ಉರಿಗೆಂಡದಂತೆ ಥಳ ಥಳಿಸುವ ಅವನ ಕಣ್ಣುಗಳು, ಸರ್ವಸ್ವವನ್ನೂ ಕಳೆದುಕೊಂಡ ಮೇಲೆ ಕೂಡ ಹೋರಾಟವನ್ನು ಹೂಡುವ ಜೀವದ ಚೈತನ್ಯವನ್ನು ಸೂಚಿಸುತ್ತವೆ.

'ದಾದಿರನ್ನೆ' ಸುಂದರವಾದ ಮತ್ತೊಂದು ಕವನ. ಬೆಳುದಿಂಗಳಿನಲ್ಲಿ ಆಡುತ್ತಿರುವ ಮಕ್ಕಳು, ಮಕ್ಕಳನ್ನು ಗಮನಿಸುತ್ತ ಪ್ರೀತಿ ಅಭಿಮಾನ ಸಂತೋಷಗಳಲ್ಲಿ ಮುಳುಗಿರುವ ಪನ್ನೆ. ಚಂದ್ರ, ಮೋಡಗಳ ಮರೆಯಲ್ಲಿ ಅಡಗಿದಾಗ ರಾಜಕುಮಾರನಿಗೆ ಅಪಾಯವಿದೆಯೆಂಬ ಸುದ್ದಿಯನ್ನು ತರುವ ಸೇವಕ. ಹೀಗೆ ಶಬ್ದಚಿತ್ರಗಳ ಮಾಲೆಯಲ್ಲಿ ಕವನ ಬೆಳೆಯುತ್ತದೆ. ರಾಜ್ಯದ ಹಿತ ದೃಷ್ಟಿಯಿಂದಲೂ ತನ್ನ ಒಡತಿಗೆ ಕೊಟ್ಟ ಮಾತನ್ನು ಉಳಿಸಿಕೊಳ್ಳುವ ಸಲುವಾಗಿಯೂ ಮಗನನ್ನು ಬಲಿಕೊಡಲು ಸಿದ್ಧಳಾಗಿರುವ ಪನ್ನೆಯನ್ನು ಕುರಿತು ಬನವೀರ, ರಾಜಕುಮಾರನನ್ನು ತೋರದಿದ್ದರೆ ನಿನ್ನ ಮಗನನ್ನೇ ಸಾಯಿಸುತ್ತೇನೆ ಎಂದು ಹೆದರಿಸುವಲ್ಲಿನ ವ್ಯಂಗ್ಯ ಪರಿಣಾಮಕಾರಿಯಾಗಿವೆ. ಮಗನ ಬಲಿಯಾದ ಮೇಲೆ ಆದರ್ಶಗಳು ಧ್ಯೇಯಗಳೆಲ್ಲ ಮರೆತು, ಪುತ್ರಶೋಕವೊಂದೇ ಮನಸ್ಸನ್ನು ಆವರಿಸಿ ಗೋಳಾಡುತ್ತ ಮಗನೊಂದಿಗೆ ಉರುಳುವ ಪನ್ನೆಯ ಚಿತ್ರ ಕರುಳಿರಿಯುವಂತಿದೆ. ರಕ್ತ ಸಿಕ್ತವಾದ ಖಡ್ಗವನ್ನು ನೋಡಿ ಮದ

ತಾತ್ಪರ್ಯವೊಂದನ್ನು ಸಾಧಿಸುವಂತೆ, ಓಗ್ಡನ್‌ನ ಬನಿಯನ್ ಚಿತ್ರ. ಅಧಿಕಾರದಾಹ ವ್ಯಕ್ತಿ ಏನು ಬೇಕಾದರೂ ಮಾಡಬಹುದು. ಹಸುಳೆಗಳ ಕೊಲೆಯನ್ನು ಮಾಡುವಲ್ಲಿ ಕಂಸನಂತಹ ರಾಕ್ಷಸರು ಪುರಾಣಪ್ರಪಂಚದಲ್ಲಿ ಮಾತ್ರ ಉಳಿದಿಲ್ಲವಲ್ಲ ಎಂಬ ಕಳವಳ ಕಾರಿಯಾದ ಅರಿವನ್ನು ಮನಸ್ಸಿನಲ್ಲಿ ಸ್ಥಾಪಿಸುತ್ತದೆ.

'ಡೋರ' ಇಂಗ್ಲಿಷ್ ಕವಿ ಟೆನ್ನಿಸನ್‌ನ ಕವನವೊಂದರ ಅನುವಾದ. ತಂದೆತಾಯ್ಗಳ ಅಪೇಕ್ಷೆಯಿಂದ ಪ್ರೇರಿತಳಾಗಿ ವಿಲಿಯಂನನ್ನು ಅನನ್ಯವಾಗಿ ಪ್ರೀತಿಸುವ ಡೋರ, ಅವಳನ್ನು ಉಪೇಕ್ಷಿಸುವ ವಿಲಿಯಂ. ತಂದೆ ಆಲ್ಲನ್ ಮತ್ತು ಮಗ ವಿಲಿಯಂರ ಘರ್ಷಣೆ. ಇವಿಷ್ಟು ಈ ಕವನದಲ್ಲಿ ಅಚ್ಚುಕಟ್ಟಾಗಿ ರೂಪತಳೆಯುತ್ತವೆ. ವಿಲಿಯಂ ತನ್ನನ್ನು ನಿರ್ಲಕ್ಷಿಸಿ ಮೇರಿಯನ್ನು ಮದುವೆಯಾದರೂ ಡೋರಳ ಪ್ರೀತಿ ಒಂದಿಷ್ಟೂ ಕಡಿಮೆಯಾಗುವುದಿಲ್ಲ. ವಿಲಿಯಂ ಸತ್ತನಂತರ ಅವನು ಪ್ರೀತಿಸಿದ ಮೇರಿ ಮರು ಮದುವೆಯಾಗುವುದೂ ಡೋರ ಅವನ ನೆನಪಿನಲ್ಲೇ ಉಳಿಯುವುದೂ ಮನಸೆಳೆಯುವಂತೆ ಚಿತ್ರಿತವಾಗಿದೆ.

ರಾಘವ ಅವರ ಕಥನ ಕವನಗಳಲ್ಲಿ ಕಣ್ಣು ಕುಕ್ಕುವ ಅಲಂಕಾರವಿಲ್ಲ. ಕಣ್ಮನಗಳನ್ನು ಒಮ್ಮೆಗೆ ಸೆರೆಹಿಡಿದು ನಿಲ್ಲಿಸಬಲ್ಲ ಬೆಡಗಿನ ವೈಭವವೂ ಇಲ್ಲ. ವಸ್ತುವಿನ ಆಯ್ಕೆಯಲ್ಲಿ ಎಚ್ಚರ, ನಿರೂಪಣೆಯಲ್ಲಿ ಸಂಯಮ, ಇವು ರಾಘವರ ಕವನಗಳ ವೈಶಿಷ್ಟ್ಯ. ಅಸಹಾಯಕರನ್ನು ಕುರಿತ ಸಹಾನುಭೂತಿ ಅವರ ಕಥನಕವನಗಳಲ್ಲಿ ಕಲಾತ್ಮಕ ಅಭಿವ್ಯಕ್ತಿಯನ್ನು ಪಡೆದುಕೊಳ್ಳುತ್ತದೆ. ಕನ್ನಡದ ಗಣ್ಯ ಕಥನ ಕವನಗಳ ಸಾಲಿಗೆ ರಾಘವ ಅವರ ಕವನಗಳೂ ಸೇರುತ್ತವೆ.

ರಾಘವ ಅವರ ವ್ಯಕ್ತಿಗೀತೆಗಳು

ಡಿ. ಲಿಂಗಯ್ಯ

ಕನ್ನಡದಲ್ಲಿ ಕವಿತೆ, ಕತೆ, ಕಾದಂಬರಿ, ನಾಟಕ, ಪ್ರಬಂಧ, ವಿಮರ್ಶೆ, ಗ್ರಂಥ ಸಂಪಾದನೆ ಕುರಿತು ಹಲವು ಗ್ರಂಥಗಳನ್ನು ಬರೆದಿರುವ ಎಂ.ವಿ. ಸೀತಾರಾಮಯ್ಯ (ರಾಘವ) ಅವರು ಸುಮಾರು 40 ವ್ಯಕ್ತಿಗೀತೆಗಳನ್ನು ರಚಿಸಿದ್ದಾರೆ. ತಾವು ನೋಡಿರುವ ಕೇಳಿರುವ ತಮ್ಮ ಮೇಲೆ ಪ್ರಭಾವ ಬೀರಿರುವ ವಿವಿಧ ಕ್ಷೇತ್ರದ ವ್ಯಕ್ತಿಗಳು ಇವರ ಕವಿತೆಗೆ ವಸ್ತುವಾಗಿದ್ದಾರೆ. ಹೆಚ್ಚು ಕಡಿಮೆ ಎಲ್ಲ ವ್ಯಕ್ತಿಗೀತೆಗಳಲ್ಲೂ ಆಲೋಚನಾ ಧಾಟಿ, ಮೂಲ ಧಾತು, ವಿಷಯ ಸಂಗ್ರಹಣಾಕ್ರಮ, ಉದ್ದೇಶ ಒಂದೇ ತೆರನಾಗಿದೆ. ಆದರೆ ಅಭಿವ್ಯಕ್ತಿ, ಅದಕ್ಕೆ ಬಳಸುವ ಕಾವ್ಯಬಂಧ, ವೈವಿಧ್ಯವಾಗಿದೆ. ಗುರುಹಿರಿಯರು, ಸಾಧುಸಂತರು, ಸಾಹಿತಿಸಾಧಕರು, ರಾಷ್ಟ್ರನಾಯಕರು, ಪುರಾಣ ಪ್ರಸಿದ್ಧರು ಇವರ ವ್ಯಕ್ತಿ ಚಿತ್ರಗಳಿಗೆ ಸ್ಫೂರ್ತಿಯಾಗಿದ್ದಾರೆ. ಎಂ.ವಿ.ಸೀ. ಅವರ ವ್ಯಕ್ತಿ ಗೀತೆಗಳ ಆಯ್ದ ಆಕರ್ಷಕ ಭಾಗಗಳಿಂದ ಅವರ ವ್ಯಕ್ತಿಗೀತೆ ರಚನಾ ಕೌಶಲವನ್ನು ಪರಿಚಯ ಮಾಡಿಕೊಳ್ಳುವುದು ಈ ಲೇಖನದ ಉದ್ದೇಶ.

ಕರ್ನಾಟಕದ ಪ್ರಹಸನ ಪ್ರಪಿತಾಮಹ ಟಿ.ಪಿ. ಕೈಲಾಸಂ ಕುರಿತ ವ್ಯಕ್ತಿಚಿತ್ರ 'ಧನ್ಯ ಕೈಲಾಸಂ', ಐದು ಅಷ್ಟಷಟ್ಪದಿಯುಳ್ಳ ರಚನೆಯಾಗಿದೆ. ಈ ಪದ್ಯದ ಪ್ರಾರಂಭ ಮೂಲ ನಾಟಕ ರಂಗದ ಹುಟ್ಟನ್ನು ಜ್ಞಾಪಿಸುತ್ತದೆ. 'ಕೈಲಾಸ' ಪದವನ್ನು ವಿಶೇಷವಾಗಿ ಗಮನಿಸಿ ಆ ಪದಕ್ಕೂ, ಆ ಪದವನ್ನು ಹೆಸರಾಗಿ ಉಳ್ಳ 'ಕೈಲಾಸಂ' ಗೂ ಅವಿನಾಸಂಬಂಧವನ್ನು ಕಲ್ಪಿಸಲು ಯತ್ನಿಸಿದೆ. ಕೈಲಾಸ ಶಿವನ ಆಡುಂಬೊಲ. ಜೀವನ ನಾಟಕ ರಂಗಭೂಮಿಯ ಪ್ರತೀಕ. ರಂಗ ಕೈಲಾಸ(ರಂಗಭೂಮಿ)ವನ್ನು ಪ್ರವೇಶಿಸುವುದು, ಅದರಲ್ಲಿ ಯಶಸ್ವಿಯಾಗುವುದು ಎಲ್ಲರಿಗೂ ಸಾಧ್ಯವಿಲ್ಲ. ಕೈಲಾಸಂ ಅಂಥವರಿಗೆ ಮಾತ್ರ ರಂಗಭೂಮಿಯ ಯಶಸ್ಸು ದೊರೆಯುತ್ತದೆ. ಆದ್ದರಿಂದಲೇ ಪದ್ಯದ ಕೊನೆಯ ಸಾಲುಗಳು ಕೈಲಾಸಂ ನಾಟಕ ಸಿದ್ಧಿಯ ಅಭಿವ್ಯಕ್ತಿಗೆ ಮೀಸಲಾಗಿವೆ.

ಕೈಲಾಸ ಕಂಡಾತನೊಬ್ಬನೇ : ಅವನೆ ಕೈಲಾಸಂ !
ಕಣ್ಗೆ ಕಂಡುದನಾತ್ಮ ಸುಟ್ಟುದೇ ? – ಧನ್ಯ ಕೈಲಾಸಂ !

'ಕೈಲಾಸ' ಎಂಬ ಪದವನ್ನು ಕವಿ ಅರ್ಥಪೂರ್ಣವಾಗಿ ದುಡಿಸಿಕೊಂಡಿರುವುದನ್ನು ಇಲ್ಲಿ ಕಾಣಬಹುದು.

'ಸರಸ ಸಲ್ಲಿಯ ಮೂರ್ತಿ' ಎಂ.ಆರ್. ಶ್ರೀನಿವಾಸಮೂರ್ತಿಗಳನ್ನು ಕುರಿತು ಬರೆದಿರುವ ವ್ಯಕ್ತಿಗೀತೆ. ವ್ಯಕ್ತಿಯ ಹೊರ ಮತ್ತು ಒಳ ಸ್ವರೂಪಗಳನ್ನು ಕಂಡರಿಸುವುದು ವ್ಯಕ್ತಿಗೀತೆಗಳ ಪ್ರಧಾನ ಲಕ್ಷಣ. ಇದು ಈ ಪದ್ಯದಲ್ಲಿ ಚೆನ್ನಾಗಿ ಅಭಿವ್ಯಕ್ತವಾಗಿದೆ.

ಪತ್ತಿರದ ಕೆಳೆಯುಗೆ ಸರಸ ಸಲ್ಲಿಯ 'ಮೂರ್ತಿ'
ಎತ್ತರದ ನಿಲುವಿನಿಂ ಗೆಲುವಿನಿಂ ಚೆಲುಮೂರ್ತಿ
ಉತ್ತರದ ನುಡಿಯ ಗುಡಿಯೊಳು ನಿನ್ನ ಕೃತಿ ಮೂರ್ತಿ
ಕೆತ್ತಿರುವುದು, ಮೌನ ಸೇವೆಯ ಶಾಸನದ ಕೀರ್ತಿ
ಮೌನಿ ಮಾತಿಗೆ ಮೊದಲ್: ತೊಡಗೆ ವಾಗ್ಮಿ ಪ್ರವರ
ಮನದೊಳಗ ಮೈಗರೆವ ಸುಸ್ಮಿತ ಸ್ನೇಹಪರ
ಕಲಿಸುವೆಡೆಯೊಳ್ ಗುರು. ಕಲಿಯುವೆಡೆ ಶಿಷ್ಯವರ
ಒಲುಮೆಯಿಂ ಕಾವ್ಯಸಾಧನೆಗೈವ ಬಲ್ ಚತುರ.

ಎಂ.ಆರ್.ಶ್ರೀಯವರನ್ನು ಕಣ್ಣಾರೆ ಕಂಡಿದ್ದವರಿಗೆ ಮೇಲಿನ ವರ್ಣನೆ ಉತ್ಪ್ರೇಕ್ಷೆ ಎನಿಸುವುದಿಲ್ಲ. ಈ ಪದ್ಯದ ಮುಂದಿನ ಹಾಗೂ ಕೊನೆಯ ಭಾಗ ಎಂ.ಆರ್. ಶ್ರೀಯವರು ವಚನಧರ್ಮವನ್ನು ಕುರಿತು ಮಾಡಿರುವ ಸಾಧನೆಗೆ ಮೀಸಲಾಗಿದೆ.

ದ.ರಾ. ಬೇಂದ್ರೆ ಕುರಿತ ಗೀತೆ ಬೇಂದ್ರೆಯವರ ನುಡಿಮೋಡಿ ಮತ್ತು ಅವರ 'ಗಂಗಾವತರಣ' ಪದ್ಯದ ಜನಪ್ರಿಯತೆಯ ಹಿನ್ನೆಲೆಯಲ್ಲಿ ರಚನೆಯಾಗಿದೆ. ವಿ. ಸೀತಾರಾಮಯ್ಯನವರ ಪ್ರಮುಖ ಕೃತಿಗಳ ಮೂಲಕ ಅವರ ಪರಿಚಯ ಮಾಡಿಸಲು 'ವಿಸೀ' ವ್ಯಕ್ತಿಗೀತೆಯಲ್ಲಿ ಪ್ರಯತ್ನಿಸಿದೆ. 'ಶ್ರೀ ಕುವೆಂಪುವಿಗೆ' ವ್ಯಕ್ತಿಗೀತೆಯಲ್ಲಿ ಎರಡು ಮುಖಗಳಿವೆ. ಪ್ರಕೃತಿಯ ಚೆಲುವಿನಿಂದ ಸ್ಫೂರ್ತಿ ಪಡೆದು ಹಲವು ಗ್ರಂಥಗಳನ್ನು ಬರೆದ ಕುವೆಂಪು ಒಂದು ಮುಖ. ಅವೆಲ್ಲವನ್ನು ಮೀರಿಸುವಂತೆ ಶ್ರೀರಾಮಾಯಣ ದರ್ಶನಂ ಮಹಾಕಾವ್ಯ ರಚಿಸಿದ ಕುವೆಂಪು ಇನ್ನೊಂದು ಮುಖ. ಪದ್ಯದ ಕೊನೆಯ ಆರು ಸಾಲುಗಳು ಕುವೆಂಪು ದರ್ಶನಕ್ಕೆ ನಮಸ್ಕಾರವಾಗಿವೆ.

ನಲಿವ ನವಿಲ ಚೆಲುವ ಮಯೂರ ನರ್ತನ ಸಾಕೆ
ವ್ಯೋಮ ವಿಹಾರಾಕಾಂಕ್ಷಿ ಪಕ್ಷಿ ರಾಜನಿಗೆ?
ಏನೋ ಬಾನಿಯ ಮಾನಸ ಸರೋವರದ ಹಂಸರಾಜನಿಗೆ?
ನಲಿವೆ ಹಾಡಿವರು ಹೊಸತೆನಿಸೆ ರಾಮಾಯಣಕೆ

ನವದರ್ಶನ ಸ್ವರ್ಣಸ್ಪರ್ಶವನಿತ್ತು ಕೃತಿಸಿ
ನವಭಾರತದ ಕವಿ ಪ್ರವರನಯ್ - ನಲಿವೆ ನುತಿಸಿ.

ಕುವೆಂಪು ಮಹಾಕಾವ್ಯ ನಿರ್ಮಾಣ ಹೊಗಳಿಕೆಗೆ ಕಾರಣವಾಗಿರುವುದನ್ನು ಕವಿ ಸ್ಪಷ್ಟಪಡಿಸಿದ್ದಾರೆ.

'ನಮೋಗುರುವೇ' ತೀ.ನಂ.ಶ್ರೀಯವರನ್ನು ಕುರಿತ ಪದ್ಯ. ಇದೂ ಕೂಡ ಸುನೀತದಲ್ಲಿ ರಚನೆಯಾಗಿದೆ. ಗುರುಭಕ್ತಿಯಿಂದ ಹೆಚ್ಚು ಶ್ರದ್ಧೆವಹಿಸಿ ಬರೆದಿರುವ ಈ ಪದ್ಯ ಇವರ ಇತರ ವ್ಯಕ್ತಿಗೀತೆಗಳಿಗಿಂತ ವಿಶಿಷ್ಟವಾಗಿದೆ. ತೀ.ನಂ. ಶ್ರೀಯವರ ಬೋಧನಕ್ಕೆ, ರಸಾನುಭವದ ಅಭಿವ್ಯಕ್ತಿಗೆ ಹೆಚ್ಚು ಒತ್ತುಕೊಟ್ಟಿದೆ. ಪದ್ಯ ರಚನೆ ಪುಷ್ಟವಾಗಿದೆ. ಉನ್ನತ ಹುದ್ದೆಗಳು ಸಿಗುತ್ತಿದ್ದರೂ ಅವುಗಳನ್ನು ಬಿಟ್ಟು ಅಧ್ಯಾಪಕ ವೃತ್ತಿಯನ್ನು ಒಪ್ಪಿಕೊಂಡವರು ತೀ.ನಂ.ಶ್ರೀ. ಅವರು ಹಾಗೆ ಮಾಡಿದ್ದರಿಂದ ಗುರುಪೀಠಕ್ಕೆ ಗೌರವ ಬಂತು.

ಶ್ರೀ ಪದಗಳನು ಬಿಸುಟು, ವರಿಸಿ ಕಾವ್ಯಶ್ರೀಯ
ಜ್ಞಾನದಾನದ ದೀಕ್ಷೆ ವಹಿಸಿ ಪಂಜನು ಹಿಡಿದು
ಮಿಡಿದು ಶಿಷ್ಯರ ಹೃದಯ ರಸಭಾವ ತಂತುಗಳ
ಕಾಪಿಟ್ಟೆ ಗುರುಪೀಠ ಗೌರವವ, ಗುರುವರ !

ತೀ.ನಂ.ಶ್ರೀ. ಬೋಧನೆಗೆ ಹಲವರು ಮಾರುಹೋದರು. ಅದಕ್ಕೆ ಈ ಕವಿಯೂ ಹೊರತಲ್ಲ.

ಗೋಪನೆಡೆ ವತ್ಸನಂತಂತು ನಾ ಬಳಿ ಬಂದೆ
ನಿಂದೆ ಮೊದಲಿಗನಾಗಿ ನಿನ್ನ ಬೋಧೆಯನು ಕುಡಿಯೆ
ಪಡೆಯೆ ಕವಿತಾಸ್ಫೂರ್ತಿಯನು : ಅಲ್ಲ ಬರಿ ಬೋಧೆ
ನಾ ಪಡೆದುದಂದು : ಬರು ಹೃದಯಕ್ಕೆ ಪ್ರೇಮ ಸುಧೆ.

ಕಾವ್ಯದ ಧ್ವನಿಗ್ರಹಣ, ರಸಾಸ್ವಾದನ, ಬೋಧನ, ಶಾಸ್ತ್ರ ಸಾಹಿತ್ಯ ಕಲೆ ಸಂಸ್ಕೃತಿ ಮೊದಲಾದ ವಿಷಯಗಳಿಗೆ ಸಂಬಂಧಿಸಿದಂತೆ ಹಲವರ ಮೇಲೆ ತೀ.ನಂ.ಶ್ರೀ. ಪ್ರಭಾವವಾಯಿತು. ಅದಕ್ಕೆ ಕವಿ ಹೀಗೆ ಹೇಳಿದ್ದಾರೆ :

ನಾನಿರಲಿ; ರಸತಪಸ್ವಿಯು ಫಲವ ಹಲವನಿಳೆ
ಕಂಡಿಹುದು ನಿನ್ನಿಂದ : ಕಾವ್ಯ ನಿರ್ಮಿತಿಗೈದು
ಒಯ್ದು ಕವಿ ಮಿತ್ರರನು ರಸಕವನಮಾರ್ಗದಲಿ
ಕೆಣವಿಲ್ಲದ ರಸಗ್ರಹಣ ಸೌಹಾರ್ದದಲಿ
ಪಾಂಡಿತ್ಯ ಶುಷ್ಕತೆಗೆ ಪಲ್ಲವದ ಸೊಂಪಿತ್ತು
ಎಯ್ದಿರುವೆ ರಸಲೋಕ ಸೀಮೆಯ : ನಮೋ ಗುರವೇ !

ಕೊನೆಯ ಎರಡು ಸಾಲುಗಳು ತೀ.ನಂ.ಶ್ರೀ. ಯವರ ವ್ಯಕ್ತಿತ್ವವನ್ನು ಸೊಗಸಾಗಿ ಕಂಡರಿಸಿವೆ.

'ಕಗ್ಗ'ದ ಮಂಕುತಿಮ್ಮನಿಗೆ-ಎನಿಸೇ ನಾಮಕರಣದ 'ಮಂಕುತಿಮ್ಮನ ಕಗ್ಗ' ಕಾವ್ಯದ ಡಿ.ವಿ. ಗುಂಡಪ್ಪನವರನ್ನು ಕುರಿತ ಗೀತೆ. ಇದು ಮಂಕುತಿಮ್ಮನ ಕಗ್ಗದ ಧಾಟಿಯಲ್ಲಿಯೇ ರಚನೆಯಾಗಿದೆ. ಐದು ಪದ್ಯಗಳಲ್ಲಿ ಡಿ.ವಿ.ಜಿ. ಯವರ ವ್ಯಕ್ತಿತ್ವವನ್ನು ವರ್ಣಿಸಿದೆ. ಒಂದು ಪದ್ಯ ಹೀಗಿದೆ :

ಪಡುವಣದ ವಿಜ್ಞಾನ, ಮೂಡಣಾತ್ಮಜ್ಞಾನ
ಪೊಡಗೂಡೆ ವಿಶ್ವಕಲ್ಯಾಣ ಸಾಧಕವು
ಹಿಡಿಯಿರೀ ಮಾರ್ಗವೆಂದೆಡೆಬಿಡದೆ ಬೋಧಿಸುತ
ನಡೆವೆ ನೀ ಗುರುವೆನಿಪ ಮಂಕುತಿಮ್ಮ

ಎಂ. ವಿ. ಸೀ. ಯವರ ಹೆಸರು ಹೇಳದಿದ್ದರೆ ಈ ರಚನೆ ಡಿ.ವಿ.ಜಿ. ಯವರದು ಎಂದು ಯಾರು ಬೇಕಾದರೂ ಮೋಸಹೋಗಬಹುದು. !

'ಶ್ರೀನಿವಾಸ'ನಿಗೆ—ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರನ್ನು ಕುರಿತ ಪದ್ಯ. "ನಗಿ ನಿನ್ನ ಬಿಮುಕ ಬಳಸೊರಗುಗಳ ಮರ್ಮ" ಎಂಬ ಶ್ಲೇಷಾರ್ಥದ ಸಾಲಿನೊಡಗೂಡಿದ ಈ ಸುನೀತದಲ್ಲಿ ಮಾಸ್ತಿಯವರ ಪ್ರಶಂಸೆಗೆ ಹೆಚ್ಚು ಗಮನ ಕೊಟ್ಟಿದೆ. ಪದ್ಯ ರಚನೆ ಸರಳವಾಗಿದ್ದರೂ ಕೊನೆಯ ಸಾಲು ಸಂಸ್ಕೃತ ಭೂಯಿಷ್ಠವಾಗಿ ಭಾರವಾಗಿದೆ.

'ಕಂಬನಿ ಕಾಣಿಕೆ' ಬಿ. ಎಂ. ಶ್ರೀ ಕುರಿತು ಬರೆದಿರುವ ಚರಮಗೀತೆ. 'ಶ್ರೀ' ಯವರ 'ಕನ್ನಡ ತಾಯಿ' ಪದ್ಯವನ್ನು ನೆನಪಿಸುವ ಶೈಲಿಯಲ್ಲಿ ರಚನೆಯಾಗಿದೆ. 'ಶ್ರೀ' ಯವರ ವಿಶಿಷ್ಟ ಗುಣ. ಸೇವೆಯ ಪ್ರಶಂಸೆ ಮುಖ್ಯವಾಗಿದೆ. 'ಶ್ರೀ' ಯವರ ಸಾವು ಕವಿಗೆ ಆಘಾತ ಉಂಟುಮಾಡಿದೆ ;

ಬರಿದಾಯ್ತು ಕನ್ನಡದ ಆಚಾರ್ಯಪೀಠಂ
ಮರೆಯಾಯ್ತು ಬೆಳಕೀವ ನಿನ್ನ ನೋಟಂ ;
ಕೇಳದಾಯ್ತಿನ್ನು ಕನ್ನಡದ ಕಲಕಂಠ
ಬಿಸ್ಮಿನುತ್ತಿದೆ ನಾಡನುಡಿಯ ತೋಂಟಂ,

'ಶ್ರೀ' ಯವರ ಗುಣಗಾನ ಮಾಡುತ್ತಾ ಕವಿ ಹೀಗೆ ಹೇಳುತ್ತಾರೆ.

ನಿನ್ನಂತೆ ಕೊಟ್ಟರಾರ್ ತನುಮನಧನವ ನುಡಿಗೆ
ನಿನ್ನಂತೆ ಇಟ್ಟರಾರ್ ಮಯೂರಮುಡಿ ತಾಯ ಮುಡಿಗೆ?

ಬಿ. ಎಂ. ಶ್ರೀ. ಕನ್ನಡಿಗರಿಗೆ ಎಂದೆಂದಿಗೂ ಮರೆಯದ ನೆನಪು.

'ನುಡಿಗುಡಿಯ ನೊಸಲ್ಬೊಟ್ಟು' ರಾಷ್ಟ್ರಕವಿ ಗೋವಿಂದಪೈಗೆ ಸಮರ್ಪಿತವಾದ ಪದ್ಯ. ಪಿರಿಯಾದ ಛಂದದಲ್ಲಿ ರಚನೆಯಾಗಿರುವ ಇದರಲ್ಲಿ ಗೋವಿಂದ ಪೈ ಅವರ ಸಾಧ್ಯ

ಕೃತಿಗಳ ವಿಶ್ಲೇಷಣೆ, ಅವರ ಕನ್ನಡಪ್ರೇಮ, ಸಂಶೋಧನೆಗಳಿಗೆ ಒತ್ತುಕೊಟ್ಟು ದಾಖಲಿಸಿದೆ. ಕನ್ನಡ ಸಂಶೋಧನಾ ಕ್ಷೇತ್ರಕ್ಕೆ ಗೋವಿಂದ ಪೈ[illegible] ಕಾಣಿಕೆ. ಅದರ ಉಲ್ಲೇಖವನ್ನು ಕವಿ ಹೀಗೆ ಮಾಡಿದ್ದಾರೆ:

ಕನ್ನಡದ ಹೊನ್‌ನೆಲವನಗೆದು ನೀ ತೆಗೆದು
ಒಟ್ಟಲೊಡ್ಡಿದೆ ಚಿನ್ನ ರನ್ನ ರಾಶಿಯನು
ತನ್ನ ತನದರಿವಿನಾ ಕನ್ನಡದ ಕೋಟೆಯನು
ಕಟ್ಟಿ ನೀ ಬರೆದೆ ಒಳ್ಳೆಯ ನಕಾಶೆಯನು.

ಗುರುಹಿರಿಯರಿಗೆ ಸಂಬಂಧಿಸಿದ ವ್ಯಕ್ತಿಗೀತೆಗಳನ್ನು ಬರೆಯುವಲ್ಲಿ ಕವಿಗೆ ಸಾಕಷ್ಟು ಅನುಭವವಿದೆ. ಈ ಕವಿ ಆ ವ್ಯಕ್ತಿಗಳನ್ನು ನೋಡಿದ್ದಾರೆ. ಅವರೊಡನೆ ಮಾತಾಡಿದ್ದಾರೆ, ಕೆಲವರಿಂದ ಬೋಧನೆ ಕೇಳಿದ್ದಾರೆ. ಅವರ ಕೃತಿಗಳಿಂದ ಪ್ರಭಾವಿತರಾಗಿದ್ದಾರೆ. ಮಿಗಿಲಾಗಿ ಅವರ ಸಮಕಾಲೀನರಾಗಿದ್ದಾರೆ. ಕೆಲವರು ನೇರವಾಗಿ ಗುರುಗಳು; ಕೆಲವರು ಆದರ್ಶ ಬದುಕಿನಿಂದ ವಿಶಿಷ್ಟ ಕೃತಿಗಳಿಂದ ಆಕರ್ಷಿಸಿದವರು; ಅವರ ಆದರ್ಶ ಗುಣಗಳನ್ನೇ ಕವಿ ತಮ್ಮ ಪದ್ಯಗಳಿಗೆ ಬಳಸಿಕೊಂಡಿದ್ದಾರೆ. ವಿಮರ್ಶೆ ಕಡಿಮೆ. ಘಟನೆಗಳ ದಾಖಲೆ ಹೆಚ್ಚು. ಕೆಲವೆಡೆ ಮಾತ್ರ ವ್ಯಕ್ತಿಯ ಹೊರರೂಪ ಸಹಜವಾಗಿ ಮೂಡಿದೆ. ಬಹಳ ಕಡೆ ಆ ವ್ಯಕ್ತಿಗಿಂತ ವ್ಯಕ್ತಿಯ ಸಾಹಿತ್ಯ ಕೃತಿಗಳೇ ಕವಿಗೆ ಪ್ರಭಾವ ಬೀರಿವೆ. ಅಂತ ಕಡೆ ಪುಸ್ತಕಗಳ ಪಟ್ಟಿಯಿಂದ ವ್ಯಕ್ತಿಗೀತೆ ರಚನೆಯಾಗಿದೆ. ಹೊಗಳಿಕೆ ಹೆಚ್ಚು ಸಾಲುಗಳನ್ನು ಆಕ್ರಮಿಸಿದೆ. ವ್ಯಕ್ತಿಗಳ ವ್ಯಕ್ತಿತ್ವವನ್ನು ಬಿಚ್ಚುಮನಸ್ಸಿನಿಂದ ರೇಖಿಸುವ ಬಗೆಗೆ ಹಿಂಜರಿಕೆ ಎದ್ದು ಕಾಣುತ್ತದೆ. ದೂರದಲ್ಲಿ ನಿಂತು ಗೌರವ ಭಾವನೆಯಿಂದ ವರ್ಣನೆ ಮಾಡಿರುವುದೇ ಜಾಸ್ತಿ. ಇದರಿಂದ ಸ್ಪಷ್ಟವಾದ, ಪೂರ್ಣವಾದ ವ್ಯಕ್ತಿ ಚಿತ್ರ ಮೂಡಲು ಅಡ್ಡಿಯಾಗಿದೆ. ಈ ವ್ಯಕ್ತಿ ಗೀತೆಗಳಲ್ಲಿ ಸಂಕೀರ್ಣತೆಗಿಂತ ಸರಳತೆ ಹೆಚ್ಚಾಗಿದೆ. ಹಾಗಾಗಿ ತೆಳುವಾದ ವ್ಯಕ್ತಿ ಚಿತ್ರ ಪ್ರಾಪ್ತವಾಗಿವೆ.

ಗುರುಹಿರಿಯರನ್ನು ಕುರಿತ ವ್ಯಕ್ತಿಗೀತೆಗಳು ಈ ಕವಿ ಅರ್ಪಿಸುವ ಗುರುಕಾಣಿಕೆ ಎನ್ನಬಹುದು. ಪೂಜ್ಯಭಾವನೆ ಹೆಚ್ಚಾಗಿದೆ; ಕಲಾತ್ಮಕತೆ ಕಡಿಮೆಯಾಗಿದೆ. ಗುರುಹಿರಿಯರ ಬಗೆಗೆ ಒಬ್ಬ ವಿಧೇಯ ವಿದ್ಯಾರ್ಥಿಯ ಭಾವನೆಗಳನ್ನು ಇವು ಧ್ವನಿಸುತ್ತವೆ.

ಕರ್ನಾಟಕದ ಬದುಕಿನಲ್ಲಿ ತಮ್ಮ ವಿಶಿಷ್ಟ ಸಾಧನೆಯಿಂದ ಹೆಸರಾಗಿರುವ ಪುರಂದರದಾಸ ಮತ್ತು ಬಸವೇಶ್ವರರನ್ನು ಕುರಿತ ಸಾಂದರ್ಭಿಕ ಗೀತೆಗಳನ್ನೂ ಎಂ.ಬಿ. ಸೀ. ಅವರು ಬರೆದಿದ್ದಾರೆ. ಅಲ್ಪಸ್ವಲ್ಪ ಬದಲಾವಣೆ ಇದ್ದರೂ ಜನಪ್ರಿಯ [illegible] ಧಾಟಿಯಲ್ಲೇ ಪುರಂದರದಾಸರ ವ್ಯಕ್ತಿತ್ವ "[illegible] ಪದಗಳ ಹಾಡಿ [illegible]"

ಟಿಪ್ಪಣಿಯಲ್ಲಿ ಪರ್ಯಾಪ್ತವಾಗಿದೆ. ಮತ್ತೆ ಛಂದಸ್ಸಿನಲ್ಲಿ ದೀರ್ಘವಾಗಿ ಬರೆದಿರುವಾಗ ಇರುವ ಈ ಪದ್ಯದಲ್ಲಿ ಭಾವಪೂರ್ಣವಾಗಿದೆ "ಕಾರಯ್ಯ ಮಹಿತ್ಪರ್ಯ ಬಸವೇಶ್ವರ" ವ್ಯಕ್ತಿಗೀತೆಯ ರಚನೆ ಭಾವಪೂರ್ಣವಾಗಿದೆ. ಪದ್ಯದ ಅಂತ್ಯಕ್ಕಿಂತ ಆದಿಭಾಗ ಚೆನ್ನಾಗಿದೆ. ಇತಿಹಾಸ ಹಾಗೂ ವಚನಸಾಹಿತ್ಯದಿಂದ ತಿಳಿದ ಬಸವಣ್ಣನ ಬದುಕಿನ ಸಮಗ್ರ ಚಿತ್ರ ಇದೆ. ವಚನಕಾರರ ಪಾರಿಭಾಷಿಕ ಪದಗಳ ಬಳಕೆಯಿಂದಲೇ ವ್ಯಕ್ತಿಚಿತ್ರವನ್ನು ರೇಖಿಸಿದೆ :

ಕರ್ಮಗಳ ಧಿಕ್ಕರಿಸಿ ಕಾಯಕವ ಹಿಡಿದೆತ್ತಿ
ಕರ್ಮಯೋಗಕೆ ಹೊಸತು ಕಳೆಕಟ್ಟಿದವನೆ
ಧರ್ಮಮಾರ್ಗದ ದಾರಿ ಹೂವು-ಮುಳ್ಳಿನ ಹಾದಿ
ಜಗದ ನಡೆಯಿದು ಎಂದು ಹೇಳಿಕೊಟ್ಟವನೆ

ಎಂದು ಬಸವಣ್ಣನನ್ನು ಕೊಂಡಾಡಿದ್ದಾರೆ. ಇಡೀ ಪದ್ಯ ಒಂದೇ ಸಾಲಿನಂತೆ ಸುಲಲಿತವಾಗಿ ಹರಿದಿರುವುದು ಇದರ ವಿಶೇಷವಾಗಿದೆ.

ಎಡೆಯೂರು ಶ್ರೀ ಸಿದ್ಧಲಿಂಗೇಶ್ವರ ಯತಿಗಳ 500ನೇ ಜನ್ಮ ಶತಾಬ್ದಿಯ ಸಂದರ್ಭದಲ್ಲಿ ಬರೆದಿರುವ "ಸಿದ್ಧವೃಕ್ಷದ ಸಿದ್ಧಿಕಥೆ" ಒಂದು ಸಾಂದರ್ಭಿಕ ವ್ಯಕ್ತಿಗೀತೆ. ಈ ಸಿದ್ಧವೃಕ್ಷದ ನೆರಳು ಮಣ್ಣಿನ ತಿರುಕನ ಸಿದ್ಧಿಕಥೆ ಎಂದು ನಿರೂಪಿಸಿರುವ ಈ ಪದ್ಯ ಒಂದು ಸಾಧಾರಣ ರಚನೆ.

ಕರ್ನಾಟಕದ ಕೆಲವು ವ್ಯಕ್ತಿಗಳಲ್ಲದೆ ಭಾರತದ ಮಹಾನ್ ವ್ಯಕ್ತಿಗಳೂ ಎಂ.ಪಿ.ಸಿ. ಯವರ ಕವಿತೆಗೆ ವಸ್ತುವಾಗಿದ್ದಾರೆ. ಅಧ್ಯಾತ್ಮ ಮತ್ತು ದೇಶಭಕ್ತಿಗಳನ್ನು ಒಟ್ಟೊಟ್ಟಿಗೆ ಸಾಧಿಸಿದವರಲ್ಲಿ ರಾಮಕೃಷ್ಣ ಪರಮಹಂಸ ಮತ್ತು ವಿವೇಕಾನಂದರು ಮುಖ್ಯರು. "ಪರಮಹಂಸರ ಮುಂದೆ ಪ್ರಶ್ನೆ ನಿಂತಿತ್ತು" ಪದ್ಯದಲ್ಲಿ ಶಕ್ತಿಗಳ ಮೊತ್ತವಾಗಿದ್ದ ನರೇಂದ್ರ ನಾಥನು ರಾಮಕೃಷ್ಣ ಪರಮಹಂಸರನ್ನು ದಕ್ಷಿಣೇಶ್ವರದಲ್ಲಿ ಮೊದಲು ಕಂಡ ಸಂದರ್ಭದ ವರ್ಣನೆ ಇದೆ. ಪದ್ಯದ ಪ್ರಾರಂಭದ ಮುಕ್ಕಾಲು ಭಾಗ ನರೇಂದ್ರನ ಪ್ರಶ್ನೆಯ ಪೀಠಿಕೆ. "ದೇವರನು ಕಂಡಿಹಿರಾ, ದೇವರನು ತೋರಿಸಿರಾ ?" ಎಂದು ನರೇಂದ್ರ ಕೇಳಿದ್ದಕ್ಕೆ ಗುರು ಕೊಟ್ಟ ಉತ್ತರ ಮಾರ್ಮಿಕವಾಗಿದೆ :

ಕಂಡಿಹೆನು ದೇವರನು
ನಿನ್ನನೆಂತಂತೆ ;
ತೋರುವೆನು ದೇವರನು
ನಿನ್ನನೆಂತಂತೆ

ಈ ಪದ್ಯದ ಅಂತ್ಯದ ತಿರುವು ಅರ್ಥಗರ್ಭಿತವಾಗಿದೆ ;

ಪರಮಹಂಸರ ಮುಂದೆ ಪ್ರಶ್ನೆ ಬಾಗಿತ್ತು

ಪಡೆದು ಉತ್ತರವ
ದಿವ್ಯ ವರವ

ರಾಮಕೃಷ್ಣ ಪರಮಹಂಸರ ಶಿಷ್ಯರಾದ ವಿವೇಕಾನಂದರು ತಮ್ಮ ದಿಟ್ಟ ನಿಲುವು ಆಧ್ಯಾತ್ಮಿಕ ಅರಿವು, ದೇಹಶಕ್ತಿಗಳಿಂದ ದೇಶ ವಿದೇಶಗಳಲ್ಲಿ ಭಾರತದ ಶ್ರೇಷ್ಠತೆಯನ್ನು ವಿಜೃಂಭಿಸಿದವರು. "ವಿವೇಕಾನಂದರನ್ನು ಕುರಿತು" ಬರೆದಿರುವ ಅಷ್ಟಪಟ್ಟದಿ ಪದ್ಯ ವಿವೇಕಾನಂದರ 100ನೇ ಹುಟ್ಟುಹಬ್ಬದ ನೆನಪಿನ ಕಾಣಿಕೆ. ಇದರಲ್ಲಿ ವೇದಾಂತ ಕೇಸರಿ ವಿವೇಕಾನಂದರ ಭಾರತ ಭಕ್ತಿಯ ವರ್ಣನೆ ಇದೆ. ಅವರ ಹೊರ ರೂಪದ ವಿವರವೂ ಇದೆ :

ಆ ವಿಶಾಲ ಲಲಾಟ, ಆ ತೀಕ್ಷ್ಣ ಕಣ್ನೋಟ
ಬಿಗಿದ ತುಟಿ, ಬಿಗಿದ ತಲೆಯ ರುಮಾಲು, ಬಿಗಿಹುಬ್ಬು;
ಬಿಗಿದ ಕೈಕಟ್ಟು, ಕಾವಿಯ ಅಂಗಿ, ನಡುಕಟ್ಟು -
ಬಿಗುವಿನಲ್ಲಿ ಹುಗಿದಿಟ್ಟ ಚೇತನದ ಕಡಲೊಡಲು.

ವಿವೇಕಾನಂದರ ಜನಪ್ರಿಯ ಆಕಾರವನ್ನು ಮೇಲಿನ ಸಾಲುಗಳು ಸಹಜವಾಗಿ ಕಂಡರಿಸಿವೆ

ಭಾರತದ ಸ್ವಾತಂತ್ರ್ಯ ಸಂಗ್ರಾಮ, ಅದರ ಹಿನ್ನೆಲೆ, ಸ್ವಾತಂತ್ರ್ಯೋತ್ತರ ಭಾರತದ ಸ್ಥಿತ್ಯಂತರ, ರಾಷ್ಟ್ರನಾಯಕರು ಅಧಿಕ ಪ್ರಮಾಣದಲ್ಲಿ ಎಂ.ವಿ.ಸೀ. ಯವರ ಗೀತೆಗಳ ವಸ್ತುವಾಗಿರುವುದು ಗಮನಾರ್ಹವಾಗಿದೆ. ಇವುಗಳಲ್ಲಿ ಮಹಾತ್ಮ ಗಾಂಧೀಜಿಯವರದು ಸಿಂಹಪಾಲು. ಸ್ವಾತಂತ್ರ್ಯ ಪೂರ್ವದಲ್ಲಿ ಗಾಂಧೀಜಿಯವರು ಅನೇಕ ಸಂದರ್ಭದಲ್ಲಿ ಸೆರೆಮನೆ ವಾಸಮಾಡಿದ್ದು, ಭಾರತದ ಪರಿವರ್ತನೆಗೆ ಉಪವಾಸ ಮಾಡಿದ್ದು, ಭಾರತ ಬಿಡುಗಡೆಗಾಗಿ ಏನೆಲ್ಲ ಕಷ್ಟ ಅನುಭವಿಸಿದ್ದು, ಅವರ ಕನಸು ನನಸು ಮೊದಲಾದ ಅಂಶಗಳನ್ನು ಕುರಿತು ಈ ಕವಿ ಕವನಿಸಿದ್ದಾರೆ. ಹಾಡಿನ ರೂಪದಲ್ಲಿ. ವಿವಿಧ ಧಾಟಿಯಲ್ಲಿ, ಹಲವು ಛಂದೋಬಂಧದಲ್ಲಿ ಈ ಪದ್ಯಗಳು ರೂಪದಾಳಿವೆ. ಮಹಾತ್ಮರ ಸಿರಿ. ಬಾಪೂಜಿಗೆ ಬಾಷ್ಪಾಂಜಲಿ. ಬಾಪೂಜಿ ಕಂಡ ಕನಸು, ಮಹಾತ್ಮರ ಕರುಣೆ, ಹರಿದ ಹಂಜು ಮೊದಲಾದ ಪದ್ಯಗಳಲ್ಲಿ ಗಾಂಧೀಜಿಯವರನ್ನು ಕುರಿತ ವರ್ಣನೆ ಇದೆ. ಸೋದರ ಭಾಷೆಗಳ ಅನುವಾದಗಳೂ ಇವುಗಳಲ್ಲಿ ಸೇರಿವೆ. ಈ ಗುಂಪಿನಲ್ಲಿ "ಹೆಜ್ಜೆಪೂಜೆ" ಗೀತೆ ಹೆಚ್ಚು ಲವಲವಿಕೆಯಿಂದ ಕೂಡಿದೆ. ಹಂಜೆಯವರ ಹುತ್ತರಿ ಹಾಡನ್ನು ನೆನಪಿಸುವ ಧಾಟಿ ಇದರದು. ಗಾಂಧೀಜಿಗೆ ಸ್ಮಾರಕ ಬೇಡ; ಅವರ ತತ್ವದ ಆಚರಣೆ ಬೇಕು; ಆ ಕಡೆಗೆ ನಾವು ಗಮನಕೊಡಬೇಕು ಎಂದು ಈ ಪದ್ಯ ಸಾರುತ್ತದೆ.

ಮೀರಿ ನೆಲವನು ಸಾರಿ ದಿವವನು
ಹೆಜ್ಜೆಗುರುತಿನ ಸಾಲದು

'ಜಾರ ಬೆಂಬಳಿ' ಎಂಬುದಲ್ಲವೆ
ಬೇರೆ ಪೂಜೆಯ ಕೇಳದು,

ಹೆಜ್ಜೆಯಿಡು ಬಾ ಹೆಜ್ಜೆಯಿಡು ಬಾ
ಹಿರಿಯ ಜೀವದ ಜಾಡಲಿ ;
ಹೆಜ್ಜೆ ಪೂಜೆಯ ಕೊಂಡ ಆತುಮ
ನಮಗೆ ರಕ್ಷೆಯ ನೀಡಲಿ.

ಭಾರತಾಂಬೆಯ ಮಕ್ಕಳಿಗೆ ಬಾಪು ಇಲ್ಲವಾದ್ದರಿಂದ ಪದ್ಯ ಸುಂದರವಾಗಿ ಮೂಡಿಬಂದಿದೆ. "ಹರಿದ ಪಂಜು" ಗಾಂಧೀಜಿಯವರನ್ನು ಕುರಿತ ಉತ್ತಮ ಪದ್ಯ.

[illegible]
[illegible]

ಎಂದು ಪ್ರಾರಂಭವಾಗುವ ಈ ಪದ್ಯ ಗಾಂಧೀಜಿಯವರ ಬದುಕಿನ ವ್ಯಕ್ತಿತ್ವವನ್ನು ಗಂಭೀರ ಶೈಲಿಯಲ್ಲಿ ಅಭಿವ್ಯಕ್ತಿಸಿದೆ. ಗಾಂಧೀಜಿಯವರು ವ್ಯಕ್ತಿ ಅಲ್ಲ ಅವರೊಂದು ದೇವಶಕ್ತಿ ಎಂದು ಸಾರಿದ್ದು, ಹಿಂದು ಮುಸ್ಲಿಂ ಸಾಮರಸ್ಯಕ್ಕಾಗಿ ಗಾಂಧೀಜಿ ದುಡಿದದ್ದು, ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕಾರ್ಯಕ್ರಮವನ್ನು ರೂಪಿಸಿದ ಗಾಂಧೀಜಿಯವರ ಸಾಧನೆಗಳನ್ನು ದಾಖಲಿಸಿದೆ. ಆ ಹಿರಿಯ ಚೇತನದ ಕೊನೆಯೂ ಪ್ರಸ್ತಾಪವಾಗಿದೆ :

ಬಿಡುಗಡೆಯ ಬೆನ್ನಿನಲಿ ಬಿದ್ದಿತು ಕೆಳಕ್ಕೆ
ಆ ದೀವಿಗೆಯ ಹಿರಿಪಂಜು-
ಅದ ಹಿಡಿದ ಕೈ ಹಿಡಿಯುತ ದೇವರ ಕೈಯ
ಕೊಟ್ಟಿತು ಪ್ರಾಣದ ಬೆಲೆಯ ದಾರುಣದ ರೀತಿಯ ಪ್ರಾಯಶ್ಚಿತ್ತಕ್ಕೆ.

ಸ್ವಾತಂತ್ರ್ಯೋತ್ತರ ಭಾರತದಲ್ಲಿ ಗಾಂಧೀಜಿಯವರ ಬದುಕಿನ ಅನುಕರಣೆಗಿಂತ ಗಾಂಧೀಜಿ ಹೆಸರಿನಿಂದ ಬದುಕುವವರೇ ಹೆಚ್ಚು. ಅದರ ವಿಡಂಬನೆ ಹೀಗೆ ಕವನವಾಗಿದೆ:

ಬಾಯ್ತುಂಬ ನಿನ್ನ ಹೆಸರೇ ಹೆಸರು
ಮೈಕೈಯೆಲ್ಲ ಕೆಸರೋ ಕೆಸರು!
ದುಡಿವವರ ಜೀವ ಕುಡಿದ ನೆಲದ ಕೆಸರಲ್ಲ ಬಾಪೂ
ಹುಸಿವೇಷಗಳ ಕೆಸರು
ನೆತ್ತರಿನ ಕೆಸರು

ಗಾಂಧೀಜಿ ತೋರಿಸಿದ ಬೆಳಕು ನಮ್ಮ ಮುಂದಿದ್ದರೂ ಅದನ್ನು ಬಳಸದ ದಡ್ಡ ಅವಿವೇಕಿಗಳಾಗಿದ್ದೇವೆ. ಈ ಬಗೆ ಕವಿಯೊಬ್ಬರು ಮರುಗಿದ್ದಾರೆ :

ನಮ್ಮ ಸ್ವಾರ್ಥಹಿತದ ಭೋಗಲಾಲಸೆಯ ಪಂಜು–
ನಿಜವ ಕಾಣದು ಕಣ್ಣು-ಮಂಜು ಮಂಜು
ಇದ್ದರೂ ನೀ ಕೊಟ್ಟ ಪಂಜು.

“ಗಾಂಧಿ ಜಯಂತಿ-ಪದ್ಯದಲ್ಲಿ ವಿಡಂಬನೆ ಮೊನಚಾಗಿದೆ :

ಸತ್ಯ ಅಹಿಂಸೆಯ ಮೇಲು ಪಂಕ್ತಿಯನು
ಬದುಕಿ ಬರೆದುಕೊಟ್ಟೆ
ಬರೆದೂ ಬರೆದೂ ರಾಶಿ ಹಾಕಿದೆವು
‘ಕಾಪಿ ಪುಸ್ತಕ’-ಒಲೆಗೊಟ್ಟೆ,

ಕೇವಲ ಗಾಂಧಿ ಜಯಂತಿಯ ಆಚರಣೆಯಿಂದ ಪ್ರಯೋಜನವಿಲ್ಲ: ಗಾಂಧೀಜಿಯ ಆದರ್ಶ ಬದುಕಿನ ಅನುಸರಣೆ ಮುಖ್ಯ. ಗಾಂಧೀಜಿ ಗಳಿಸಿಕೊಟ್ಟ ಸ್ವರಾಜ್ಯದ ಸ್ಥಿತಿ ಇಂದು ಗಾಂಧೀಜಿಯ ಕಲ್ಪನೆಗೆ ವಿರುದ್ಧವಾಗಿದೆ. “ಸತ್ಯವ್ರತ” ಪದ್ಯದಲ್ಲಿ ಕವಿ ಹೀಗೆ ಅಭಿಪ್ರಾಯಪಟ್ಟಿದ್ದಾರೆ :

ತಂದೆ, ಸಾಧನ ಶುದ್ಧಿಯಿಂದೆಮಗೆ ನೀ ಗಳಿಸಿದ ಗಣನೀಯ ಸ್ವಾರಾಜ್ಯವು
ಇಂದು ಸ್ವಾರ್ಥದ ಅಧಿಕಾರಮತ್ತರಿಗಾಗಿದೆ ದಿನದ ಸುಭೋಜ್ಯವು
ಎಲ್ಲಿ ಆ ತ್ಯಾಗ ಮತ್ತೆಲ್ಲಿ ಸೌಹಾರ್ದ ಗುಂಪುಗುಂಪುಗಳಾಗಿ ಒಡನಾಡ್ಯವು
ಸುಳ್ಳು ಹಿಂಸೆಗಳಿಗೆ ಸೀತ ಹಾಕಿವೆ : ಅವುಗಳೆ ಜನಕಿಂದು ಸಂಪ್ರಾಪ್ಯವು.

ಗಾಂಧೀಜಿಯನ್ನು ಕುರಿತ ಇನ್ನು ಕೆಲವು ಗೀತೆಗಳು ಬಹಳ ದುರ್ಬಲವಾಗಿವೆ.

ಮಹಾತ್ಮ ಗಾಂಧೀಜಿಯಂತೆ, ಸುಭಾಷಚಂದ್ರ ಬೋಸ್, ಜವಹರಲಾಲ್ ನೆಹರು ಲಾಲಬಹಾದೂರ್ ಶಾಸ್ತ್ರಿಗಳನ್ನು ಕುರಿತು ಎಂ.ವಿ.ಸೀ. ಯವರು ವ್ಯಕ್ತಿಗೀತೆಗಳನ್ನು ಬರೆದಿದ್ದಾರೆ. ಅವುಗಳಲ್ಲಿ “ಅಸ್ತ ಜಲಧಿಗೆ ಇಳಿಯುತಿದೆ [illegible]” ಎಂಬ [illegible] ಶಾಸ್ತ್ರಿಗಳು [illegible] “[illegible]” ಶಾಸ್ತ್ರಿಗಳು [illegible] ಎಂಬ [illegible] “[illegible]” ಎಂದು [illegible] ವಲ್ಲಿ ಯಶಸ್ವಿಯಾಗಿದೆ. ಉಳಿದವು ಸಾಧಾರಣ ರಚನೆ.

ಶ್ರೀನಿವಾಸನ ಹಾಡ, [illegible] ಪ್ರಾರ್ಥನಾ ಗೀತೆಗಳಲ್ಲಿ ವ್ಯಕ್ತಿ ಗೀತೆಗಳ ಛಾಯೆ [illegible] ಇಲ್ಲ.

ಎಂ. ವಿ. ಸೀ. ಯವರ ಎಲ್ಲ ವ್ಯಕ್ತಿಗೀತೆಗಳನ್ನು ಕೂಲಂಕಷವಾಗಿ ಅಭ್ಯಸಿಸಿದಾಗ ಈ ಅಂಶಗಳು ಮನದಟ್ಟಾಗುತ್ತವೆ. ಈ ಗೀತೆಗಳಲ್ಲಿ [illegible] ವಾಚ್ಯತೆ

ಹೆಚ್ಚು. ಬಂಡಾಯ ವಿಶ್ಲೇಷಣೆಗಳಿಂದ ಕವಿ ಘಟನೆಗಳ ದಾಖಲೆಗೆ ಹೆಚ್ಚು ಗಮನ ಕೊಡುತ್ತಾರೆ. ಇದರಿಂದಾಗಿ ಮನೋಸ್ಥಿತಿ ಬಿಂಬಿಸಬಹುದಾದ ವ್ಯಕ್ತಿಗೀತೆಗಳು ಒಂದೆರಡಕ್ಕಿಂತ ಹೆಚ್ಚಾಗಿಲ್ಲ. ಆದರೂ ಭಾಗಶಃ ನಮ್ಮನ್ನು ಆಕರ್ಷಿಸುವ, ಚಿಂತನೆಗೆ ಗುರಿಮಾಡುವ ಸಾಲುಗಳಿಗೆ, ಕಾವ್ಯಭಾಗಗಳಿಗೆ ಕೊರತೆಯಿಲ್ಲ. ಆ ಬಿಡಿ ಭಾಗಗಳಿಂದಲೇ ಕವಿಯ ಜೀವನದ ಅಭಿವ್ಯಕ್ತಿಯನ್ನು ಪಡೆದುಕೊಳ್ಳಬೇಕಾಗುತ್ತದೆ.

ಈ ಕವಿಗೆ ಗೇಯತೆ ಹೆಚ್ಚು ಪ್ರಿಯ. ಗೇಯ ಸಂಪ್ರದಾಯದೆಡೆ ಕಾವ್ಯ ಹೊರಳಿದೆ. ಅರಳಿಕೊಂಡ ವ್ಯಕ್ತಿಯ ಮೂರ್ತರೂಪ, ಪ್ರಮುಖ ಸಾಧನೆ. ಕೃತಿ ರಚನೆ, ಜನಪ್ರಿಯವಾಗಿರುವ ಅಭಿಪ್ರಾಯಗಳ ಸಮರ್ಥನೆ—ಸಾಮಾನ್ಯವಾಗಿ ಈ ಕ್ರಮದಲ್ಲಿ ವಸ್ತುಪ್ರತಿಪಾದನೆ ನಡೆದಿದೆ. ವ್ಯಕ್ತಿಯ ಬದುಕು ಕೃತಿಯ ಬಗೆಗೆ ಹೊಸದೃಷ್ಟಿ, ಬೆಳಗಿಸುವ, ಹೊಸತಭಿವ್ಯಕ್ತಿಗೆ ಮನಮಾಡುವ ಕೆಲಸ ಕಡಿಮೆ. ಈಗಾಗಲೇ ಸ್ಥಾಪಿತವಾಗಿರುವ ಅಂಶಗಳನ್ನು ಗೌರವದಿಂದ ಪ್ರತಿಪಾದಿಸುವುದೇ ಜಾಸ್ತಿ. ಇದರಿಂದ ಆಯಾ ವ್ಯಕ್ತಿಯ ವ್ಯಕ್ತಿತ್ವಕ್ಕೆ ಹೊಸ ಅಂಶ, ಹೊಸ ಚಿಂತನೆ ಕೂಡಿಕೊಳ್ಳುವುದಿಲ್ಲ.

ಎಂ.ವಿ.ಸೀ ಯವರ ವ್ಯಕ್ತಿಗೀತೆಗಳ ರಚನೆಯಲ್ಲಿ ವೈವಿಧ್ಯತೆ ಇದೆ. ಕೆಲವು ಸರಳವಾದ ರಚನೆ; ಕೆಲವುಗಳ ಬಂಧ ಬಿಗಿ. ಛಂದಸ್ಸಿನಲ್ಲೂ ವೈವಿಧ್ಯತೆ ಸಾಧಿಸಲು ಪ್ರಯತ್ನಿಸಿದೆ. ದ್ವಿಪದಿ, ಸಾಂಗತ್ಯ, ಸಿರಿಯಕ್ಕರ, ಅಷ್ಟಷಟ್ಪದಿ, ರಗಳೆ, ಮುಕ್ತ ರಚನೆ—ಹೀಗೆ ನಾನಾ ರೀತಿಯ ಪ್ರಯೋಗಗಳಿವೆ. ಪ್ರಾಸಪ್ರಿಯತೆ, ಶಬ್ದಚಮತ್ಕಾರಗಳಿಗೂ ಕೊರತೆಯಿಲ್ಲ. ಸುನೀತಗಳ ಬಳಕೆ ಹೆಚ್ಚು. ಇತರ ಪದ್ಯಗಳಿಗೆ ಹೋಲಿಸಿದರೆ ಇವೇ ಹೆಚ್ಚು ಯಶಸ್ವಿಯಾಗಿವೆ ಎನ್ನಬಹುದು.

ಒಟ್ಟಿನಲ್ಲಿ ಎಂ.ವಿ.ಸೀ. ಯವರ ವ್ಯಕ್ತಿಗೀತೆಗಳು ನಮ್ಮ ನಾಡುನುಡಿ ಸಂಸ್ಕೃತಿಗೆ ಸಂಬಂಧಿಸಿದ ಕೆಲವು ಮುಖ್ಯ ವ್ಯಕ್ತಿಗಳ ಸ್ಥೂಲ ಪರಿಚಯಕ್ಕೆ ಸಹಾಯಕವಾಗಿವೆ; ಕವಿಯ ಗುಣಗ್ರಾಹಿ ಸ್ವಭಾವದ ಅರಿವಿಗೆ ಸಾಕ್ಷಿಯಾಗಿವೆ; ನಮ್ಮ ಸಾಂಸ್ಕೃತಿಕ ದಾಖಲೆಯ ಆಕರಗಳಾಗಿವೆ.

ರಾಘವ ಅವರ ಸುನೀತಗಳು

ಚೆನ್ನವೀರಕಣವಿ

ಇಂಗ್ಲಿಷಿನಲ್ಲಿ ಹುಲುಸಾಗಿ ಬೆಳೆದ ಮುಖ್ಯ ಕಾವ್ಯಪ್ರಕಾರಗಳಲ್ಲಿ ಒಂದೆನಿಸಿದ ಸಾನೆಟ್, ಕನ್ನಡದಲ್ಲಿ 'ಚತುರ್ದಶಪದಿ'ಯಾಗಿ, 'ಅಷ್ಟಷಟ್ಪದಿ'ಯಾಗಿ, 'ಸುನೀತ'ವಾಗಿ ಕೊನೆಗೆ ವಿಶಾಲವಾದ ಸೂಚ್ಯಾರ್ಥದಲ್ಲಿ ಸಾನೆಟ್ಟೇ ಆಗಿ ತಕ್ಕ ಮಾರ್ಪಾಡುಗಳೊಂದಿಗೆ ತನ್ನ ಸ್ಥಾನವನ್ನು ಭದ್ರಗೊಳಿಸಿಕೊಂಡಿದೆ. ಪ್ರಾರಂಭದಲ್ಲಿಯೇ ಗೋವಿಂದ ಪೈ ಯವರ ಕೈಯಲ್ಲಿ ಅದು ಪ್ರಯೋಗ ನಾವೀನ್ಯವನ್ನೂ, ವಸ್ತುವೈವಿಧ್ಯವನ್ನೂ ಪಡೆದದ್ದು ಗಮನಾರ್ಹವಾಗಿದೆ.[1] ಮುಂದೆ ಈ ಛಂದೋರೂಪದಲ್ಲಿ ಹೆಚ್ಚಿನ ಸಾಧನೆಯನ್ನು ಮಾಸ್ತಿ, ಬೇಂದ್ರೆ, ಕುವೆಂಪು, ವಿನಾಯಕ ಪು.ತಿ.ನ ಮೊದಲಾದವರ ಕೃತಿಗಳ ನೂತನ ವಿನ್ಯಾಸದಲ್ಲಿ ಕಾಣಬಹುದು.[2] ಕನ್ನಡದ ಮಹತ್ವದ ಕವಿಗಳಲ್ಲಿ ಒಂದೆರಡಾದರೂ ಸಾನೆಟ್ ಬರೆಯದೆ ಇರುವ ಕವಿಗಳು ಸಿಗುವುದು ದುರ್ಲಭ. ಕನ್ನಡದ ಪ್ರತಿಭೆಗೆ ಅದು ಅಷ್ಟುಮಟ್ಟಿಗೆ ಹೊಂದಿಕೊಂಡು ಬೆಳೆದು ಬಂದಿದೆ. ಹೀಗೆ "ಇಂಗ್ಲಿಷಿನಿಂದ ಈ ರೂಪವು ಬಂದರೂ ಮೂಲ ಸ್ಫೂರ್ತಿಯನ್ನು ಮೀರುವಂತಹ ಚೈತನ್ಯವನ್ನು ಇದು ಪಡೆದಿದೆಯೆಂದು ಹೇಳಲಡ್ಡಿಯಿಲ್ಲ"[3] ಎಂದು ಎಸ್. ಅನಂತನಾರಾಯಣ ಅವರು ನುಡಿದಿರುವುದು ಸಮಂಜಸವಾಗಿದೆ.

ತಮ್ಮ ಪ್ರಥಮ ಕವನ ಸಂಗ್ರಹ 'ಹಕ್ಕಿಹಾಡಿ'ನಿಂದ ಇತ್ತೀಚಿನ 'ಬೀಸಿ ಬಂದ ಗಾಳಿ' ಸಂಗ್ರಹದವರೆಗೆ ಒಟ್ಟು ಇಪ್ಪತ್ತೆರಡು ಸುನೀತಗಳನ್ನು ಕೊಟ್ಟಿರುವ ಎಂ. ವಿ. ಸೀತಾರಾಮಯ್ಯನವರು ಈ ಕಾವ್ಯರೂಪಕ್ಕೆ ಮನಸ್ಸು ತೆತ್ತ ಕವಿಗಳಲ್ಲಿ ಒಬ್ಬರು.

---

1 "ಈ ಚೌಕಟ್ಟಿನಲ್ಲಿ ರಾಷ್ಟ್ರಕವಿ ಮಂಜೇಶ್ವರ ಗೋವಿಂದ ಪೈ ಅವರು ರಚಿಸಿದ ಸಾನೆಟ್ಟುಗಳನ್ನು ನೋಡಿದರೆ ಬಹಳಷ್ಟು ವೈವಿಧ್ಯ, ಬಗೆ-ಬಿನ್ನಾಣ, ಅಂತಸ್ಸತ್ವ-ಬಾಹ್ಯಸತ್ವಗಳು ಅಲ್ಲಿ ಕಂಡುಬರುತ್ತವೆ. ಅವರ ಸಾನೆಟ್ಟುಗಳ ಆಕರವೆಂದರೆ ಪ್ರಯೋಗ ನವೀನತೆಯ ಆಗರವಾಗಿದೆ"–'ಗೋವಿಂದ ಪೈ ಅವರ ಛಂದೋಗತಿ'–ಎಸ್. ಶಂಕರನಾರಾಯಣ ಭಟ್ಟ, ಪುಟ 56. 1980.

2 ಪ್ರಸ್ತುತ ಲೇಖಕರಿಗೂ 'ಸಾನೆಟ್ಟು' ಒಂದು ಅತ್ಯಂತ ಪ್ರಭಾವಿಯಾದ 'ಅಭಿವ್ಯಕ್ತಿ ಮಾಧ್ಯಮ'ವಾಗಿರುವುದನ್ನು ವಿಮರ್ಶಕರು ಗಮನಿಸಿದ್ದಾರೆ.

3 'ಹೊಸಗನ್ನಡ ಕವಿತೆಯ ಮೇಲೆ ಇಂಗ್ಲಿಷ್ ಕಾವ್ಯದ ಪ್ರಭಾವ–1962, ಪುಟ 220

ಈ ಸಂಕಲನದಲ್ಲಿ ಮೊದಲ ಅಲ್ಲೇಖನ ನವೋದಯದ ಹಿರಿಯ ಕವಿಗಳ ಪ್ರಯೋಗ ಗಳನ್ನು, ಅವುಗಳ ವೈವಿಧ್ಯವನ್ನು ಅವರು ಗಮನಿಸಿರುವುದು ಕಂಡುಬರುತ್ತದೆ. ಸಣ್ಣಕತೆ, ರಾಜರತ್ನಂ, ಪು.ತಿ.ನ., ಕುವೆಂಪು, ಸಾಹಿತ್ಯ ಸಮಾಜ—ಹೀಗೆ ಮುಂತಾದ ಬಗೆ ಯಲ್ಲಿ ಕನ್ನಡ ಸಾಹಿತ್ಯಕ್ಕೆ ಸೇವೆ ಸಲ್ಲಿಸಿರುವ ಎಂ.ವಿ.ಸೀ. ಅವರು ಮೂಲತಃ ಕವಿ ಎಂಬುದನ್ನು ಮರೆಯುವಂತಿಲ್ಲ. ತಮ್ಮ ಹಲವು ಕವನ ಸಂಗ್ರಹಗಳ ಮೂಲಕ ಕಾವ್ಯಕ್ಷೇತ್ರದಲ್ಲಿಯೂ ನಿರಂತರ ಕೃಷಿಯನ್ನು ನಡೆಸಿ ಹಲವು ಉತ್ತಮ ಭಾವಗೀತೆಗಳನ್ನು, ಭಕ್ತಿಗೀತೆಗಳನ್ನು ಕನ್ನಡಕ್ಕೆ ನೀಡಿದ್ದಾರೆ. "ಕಾವ್ಯರಚನೆ, ಕಾವ್ಯಾಸ್ವಾದನೆ– ಇವೆರಡೂ ಒಂದು 'ಮುಗಿಯದ ಹಾದಿ', ನಾನು ಈ ದಾರಿಯಲ್ಲಿ ಹೆಜ್ಜೆ ಇಟ್ಟು ಬಹು ವರ್ಷಗಳಾದವು. ನನ್ನ ಪಾಲಿಗಂತೂ ಅದು ಇನ್ನೂ ಮುಗಿದಿಲ್ಲ" ಎಂದು ತಮ್ಮ 'ಮುಗಿಯದ ಹಾದಿ' (೧೯೮೫) ಯ ಪೀಠಿಕೆಯಲ್ಲಿ ಹೇಳಿದ ಮಾತುಗಳು ಇಂದಿಗೂ ಅವರ ಕಾವ್ಯರಚನೆಗೆ ಅನ್ವಯಿಸತಕ್ಕ ಮಾತೇ ಆಗಿವೆ.

ಆಧುನಿಕ ಕನ್ನಡ ಕಾವ್ಯ ನಡೆದ ಹಲವಾರು ಛಂದೋರೂಪಗಳಲ್ಲಿ ಎಂ.ವಿ.ಸೀ. ಅವರ ಕಾವ್ಯ ನಡೆದು ಬಂದಿದ್ದು ಸಾನೀತದ ಬಗೆಗೂ ಅವರು ಒಲವನ್ನು ತೋರಿಸಿ ದ್ದಾರೆ. ಅವರ ಲೇಖನಿಯು ಪ್ರೌಢಿಮೆಯಿಂದ ಬೇರೆ ಬೇರೆ ಪ್ರಯೋಗಗಳನ್ನು ಮಾಡಿ ದ್ದಾರೆ. ಅವರು ಬರೆದಿರುವ ಒಟ್ಟು ಇಪ್ಪತ್ತೈದು ಸಾನೀತಗಳಲ್ಲಿ ಹೆಚ್ಚಿನವು ಅಂದರೆ ಹದಿಮೂರು ವ್ಯಕ್ತಿಚಿತ್ರಗಳನ್ನು ಒಳಗೊಂಡಿವೆ. ಅಕ್ಕಮಹಾದೇವಿ, ವಿವೇಕಾನಂದ, ಗಾಂಧಿಯಂತಹ ಮಹಾತ್ಮರ ಬಗೆಗಾಗಲಿ, ಹತ್ತಿರದಿಂದ ಕಂಡ ಹಿರಿಯರಾದ ಕೈಲಾಸಂ, ಎಂ.ಆರ್.ಶ್ರೀ, ಶ್ರೀನಿವಾಸ, ಡಿ.ವಿ.ಜಿ, ಕುವೆಂಪು, ತೀ.ನಂ.ಶ್ರೀ, ಪು.ತಿ.ನ. ಮುಂತಾದ ಲೇಖಕರನ್ನು ಕುರಿತಾಗಲಿ ಬರೆಯಲು ಅವರಿಗೆ ಸಾನೀತ ಒಳ್ಳೆ ಮಾಧ್ಯಮವೆನಿಸಿದೆ.

ಈ ಕಾವ್ಯರೂಪದಲ್ಲಿ ವ್ಯಕ್ತಿಚಿತ್ರಗಳು ಯಶಸ್ವಿಯಾಗುವುದು ಆಯಾ ವ್ಯಕ್ತಿಯ ಒಳ-ಹೊರಗು ಒಂದಕ್ಕೊಂದು ಹೊಂದಿಕೊಂಡಿರಿ ಕಾವ್ಯಕ್ಕಾಗಿ ಮೈದೋರಿದಾಗ, ಭಾವನೆ ಹದವರಿಯುವ ಹಾಗೆ ಬೆಳೆದು ಹಾಲಿನಂತೆ ಪರಿಣಮಿಸಿದಾಗ, ಚಿತ್ರಣೆ, ಕಲೆ ಗಾರಿಕೆ ಒಟ್ಟು ಸೌಂದರ್ಯವನ್ನು ಪಡೆದಾಗ. ಇವುಗಳಲ್ಲಿ ಯಾವುದೇ ಒಂದರ ಕೊರತೆ ಯಾದರೂ ಸಾನೀತ ತನ್ನ ಆಕರ್ಷಣೆಯನ್ನು ಕಳೆದುಕೊಳ್ಳುತ್ತದೆ.

ಅಕ್ಕಮಹಾದೇವಿಯನ್ನು ಕುರಿತ 'ಬಯಲ ಧ್ಯಾನ' ಪದಮಾಲಿಕೆಯ ಸಂಗತಿ ಯನ್ನು ನಿರೂಪಿಸಿದಂತಾಗಿದೆಯೇ ಹೊರತು ವ್ಯಕ್ತಿತ್ವ ಪೂರ್ಣವಾಗಿ ಕಣ್ಣಮುಂದೆ ನಿಲ್ಲುವುದಿಲ್ಲ. ಹಾಗೆಯೇ 'ನೀನಿಂದು ಬದುಕಿರಬೇಕಿತ್ತು'[1] ಎಂದು ಗಾಂಧಿಯ

1 'Milton thou shouldst be living at this hour ......' ಎಂಬ ವರ್ಡ್ಸ್‌ವರ್ಥ್ ಕವಿಯ ಸಾಲು ಇಲ್ಲಿ ನೆನಪಾಗುತ್ತದೆ.

ಬಗೆಗಿನ ಅನೇಕ ವಿಚಾರಗಳು ವಾಚ್ಯವಾಗಿಯೇ ಉಳಿಯುತ್ತವೆ. 'ಪು.ತಿ.ನ'ದಲ್ಲಿ 'ದೀಪ ಕಲಿಯಂತೆ ನಿರ್ವಾತ ನಿಲಯದಲಿ' ಎಂಬ ಸುಂದರ ಪ್ರತಿಮೆ ಜೀವನಿಗೆ ಪಡೆಯದೆ ಪ್ರತ್ಯೇಕವಾಗಿ ಉಳಿದು ಬಿಡುತ್ತದೆ. ಇದೇ ರೀತಿ 'ನಮೋ ಗುರುವೆ' (ತೀ.ನಂ.ಶ್ರೀ.) ಪದ್ಯದಲ್ಲಿಯೂ 'ಲೋಕದನಿಕ ನನ್ನನೆಂದಂದು ನಾ ಬಳಿ ಬಂದೆ. ನಿಂದೆ ಮೊದಲಿಗನಾಗಿ ನಿನ್ನ ಬೋಧೆಯ ಕುಡಿಯೆ' ಎಂಬ ಸಾಲು ಮಾತ್ರ ಗುರು-ಶಿಷ್ಯ ಸಂಬಂಧವನ್ನು ಸಾರ್ಥಕ ಚಿತ್ರದಲ್ಲಿ ಹಿಡಿಯುತ್ತದೆ.

ಇನ್ನು ಕೆಲವು ವ್ಯಕ್ತಿಚಿತ್ರಗಳು ಕಾವ್ಯಗುಣದ ದೃಷ್ಟಿಯಿಂದ ಮನಸ್ಸನ್ನು ಸೆಳೆಯುತ್ತವೆ. ಇಲ್ಲಿಯೂ ಎಂಟು ಸಾಲುಗಳ ಮೊದಲ ಭಾಗ ಮಾತ್ರ ವ್ಯಕ್ತಿತ್ವವನ್ನು ಕಣ್ಗೊಳಿಸುವಂತೆ ಮಾಡುತ್ತದೆ. 'ವಿವೇಕಾನಂದರನ್ನು ಕುರಿತು'—

ಓ ವಿವೇಕಾನಂದ ಪುರುಷಸಿಂಹ ನರೇಂದ್ರ;
ನಿನ್ನ ನೂರನೆ ಹುಟ್ಟುಹಬ್ಬದಿಂದಿನ ದಿನದಿ
ನಿನ್ನ ಎಚ್ಚರ ನುಡಿಯ ನೂರು ನೆನಪುಗಳೊಡನೆ
ನಿನ್ನ ತೇಜೋಮೂರ್ತಿಯನು ತರುವ ಕಣ್ಣೆದುರು :
ಆ ವಿಶಾಲ ಲಲಾಟ, ಆ ತೀಕ್ಷ್ಣ ಕಣ್ನೋಟ
ಬಿಗಿದ ತುಟಿ, ಬಿಗಿದ ತಲೆಯ ರುಮಾಲು, ಬಿಗಿ ಹುಬ್ಬು
ಬಿಗಿದ ಕೈಕಟ್ಟು, ಕಾವಿಯ ಅಂಗಿ, ನಡುಕಟ್ಟು—
ಬಿಗುವಿನಲಿ ಹುಗಿದಿಟ್ಟ ಚೇತನದ ಕಡಲೊಡಲು :

ಪದ್ಯ ಒಂದು ಉದ್ಗಾರದಿಂದ ಪ್ರಾರಂಭವಾದರೂ ಮುಂದೆ ಲವಲವಿಕೆಯನ್ನು ಹುಟ್ಟಿಸುತ್ತ ಕಣ್ಣೆದುರು ಆ ತೇಜೋಮೂರ್ತಿಯನ್ನು ನಿಲ್ಲಿಸುವಲ್ಲಿ ಸಫಲವಾಗಿದೆ. ಕೊನೆಯ ಮೂರು ಸಾಲುಗಳಲ್ಲಿ ಬರುವ 'ಬಿಗಿ' ಪದ ಪುನರುಚ್ಚಾರಗೊಂಡಂತೆ ಚಿತ್ರದ ಕಳೆಯನ್ನು ಹೆಚ್ಚಿಸುತ್ತ ವ್ಯಕ್ತಿಯ ಹಾಗೂ ಸ್ವಭಾವಗುಣವನ್ನು ಒಂದೇ ಎನ್ನುವಂತೆ ಬಂಧಿಸುತ್ತದೆ. ಆದರೆ ಎರಡನೆಯ ಭಾಗ ಬರಿಯ ಹೇಳಿಕೆಯಾಗಿ ನಿಲ್ಲುತ್ತದೆ. ಇದೇ ಮಾತನ್ನು 'ಧನ್ಯ ಕೈಲಾಸಂ' 'ಶ್ರೀನಿವಾಸರಿಗೆ' ಪದ್ಯಗಳಿಗೂ ಅನ್ವಯಿಸಬಹುದು. ಇದಕ್ಕೆ ವಿರೋಧವೆಂಬಂತೆ ಮೊದಲ ಭಾಗದಲ್ಲಿ ಸೋತು, ಎರಡನೆಯ ಭಾಗದಲ್ಲಿ ಮನಸ್ಸನ್ನು ಗೆದ್ದುಕೊಳ್ಳುವ ಸುನೀತಗಳೆಂದರೆ 'ಲಾಲಬಹಾದ್ದೂರಶಾಸ್ತ್ರಿ' ಹಾಗೂ 'ಹಾಸ್ಯಚಕ್ರವರ್ತಿ' ಭಾರತ-ಪಾಕಿಸ್ತಾನ ಯುದ್ಧ ಮುಕ್ತಾಯಗೊಂಡು ಶಾಂತಿ ನೆಲೆಗೊಳ್ಳುವಂತೆ ಪರಿಶ್ರಮಿಸಿ ತಾಷ್ಕೆಂಟ್ ಒಪ್ಪಂದ ಮಾಡಿಕೊಂಡು ಅಸುನೀಗಿದ ಲಾಲಬಹಾದ್ದೂರ ಶಾಸ್ತ್ರಿಯವರನ್ನು ನೆನೆದು-

ಎರಡು ನಾಡಿನ ಮೈತ್ರಿಗೆರಡು ಬಗೆಯದ ರೀತಿ
ಎರಡು ಮನಗಳು ಕೂಡಿ ಎರಡು ಕೈಗಳು ಲಡಿ

ನಟ್ಟಗಡದಲಿ ಮೊಗವನಿಟ್ಟ ಮೊಗ್ಗನು ನೋಡಿ
ನಲಿದು, ನೀರೆರೆಯೆ, ಕಟ್ಟುತ್ತ ನಿಟ್ಟುಸಿರ ಹಾಕಿ
ರಾಜ್ಯ, ನಡುವೆ ಹಾಸಿದಳೆ ನಿರೀಕ್ಷಣಾತೀತರ
ಆನಂದಜಲವನೆರೆಯಲರಳಿ ಮೊಗ್ಗು ಹಸಿರಾದುದು.

ಪರಸ್ಪರ ಹಗೆತನವನ್ನು ಮರೆತು ಎರಡು ರಾಷ್ಟ್ರಗಳು ಸಹೋದರ ಭಾವದಿಂದ ಕೂಡಿದಾಗ ಮೂಡಿದ ಮನೋಭಾವ, ಶಾಂತಿಯ ಹಸಿ ಮೊಗ್ಗು ಅರಳಿದು ಸಫಲಗೊಂಡುದನ್ನು ಕ್ರಿಯಾತ್ಮಕವಾಗಿ ಈ ಸಾಲುಗಳು ಮನೋಜ್ಞವಾಗಿ ಚಿತ್ರಿಸುತ್ತವೆ. 'ಎರಡು' ಎಂಬ ಪದ ಪ್ರಯೋಗಗೊಂಡಷ್ಟು ಸಲ ಅರ್ಥಪೂರ್ಣವಾಗುತ್ತ ಹೋಗುತ್ತದೆ. ಕೊನೆಯ ಪ್ರಕೃತಿ ಅನೇಕಾರ್ಥದ ಛಾಯೆಯಿಂದಾಗಿ ಅಲ್ಲದೆ, 'ಮೊಗ್ಗು ಹಸಿರಾದುದು' ಇಂತಹ ಪ್ರತಿಮೆಯಲ್ಲಿ ಕಾವ್ಯದ ಕೊನೆಯ ಗೆಲುವಿನ ಸಾರ್ಥಕತೆಯೊಂದಿಗೆ ('ಆನಂದ ಜಲವನೆರೆಯಲು') ಇಡೀ ಪದ್ಯಕ್ಕೆ ಅತ್ಯಂತ ಪರಿಣಾಮಕಾರಿಯಾದ ಮುಕ್ತಾಯವನ್ನು ನೀಡಿವೆ. ಇದೇ ಬಗೆ 'ಹಾಸ್ಯಚಕ್ರವರ್ತಿ' (ಚಾರ್ಲಿ)ಯಲ್ಲಿಯೂ ಪರಿಣಮಿಸಿದೆ. ಮೊದಲ ಭಾಗ ನೀರಸ ವಿವರಗಳಲ್ಲಿ ಸಾಗಿ ಹೋಗಿ, ಎರಡನೆಯ ಭಾಗದಲ್ಲಿ ಚಾರ್ಲಿ ಜೀವತಳೆದು ತನ್ನ ನಿಜವಾದ ವೇಷದಲ್ಲಿ ಕಾಣಿಸಿಕೊಳ್ಳುತ್ತಾನೆ:

ನಿನ್ನ ಬೇದಿ ಛಕಾರ ವೇಷದ ಸೊಗಸೇ ಸೊಗಸು :
ಕೊಳಗ ಟೋಪಿ, ದೊಗಲೆ ಷರಾಯಿ, ಬಳುಕುವ ಬೆತ್ತ
ಕೆಳ ಮೂಗ ನೊಣ ಮೀಸೆ, ಕಿಸಿ ಬಾಯಿ, ಲೊಡಲೊಡ ಬೂಟ್ಸು
ನನ್ನಂಥ ಕೋಟಿ ಶತಕೋಟಿ ನೋಟಕರನ್ನು
ಹಾಸ್ಯದ ಹಡಗಿನಲ್ಲಿ ಕರೆದೊಯ್ದು ನಗೆಗಡಲ
ಪೋಲಿ ಅಳುವಿನಲೆಗಳ ನಡುವೆ—ಇನ್ನೆಲ್ಲಿ ಆ ಕಾಲ !

'ಇನ್ನೆಲ್ಲಿ ಆ ಕಾಲ' ಎಂಬ ಸಣ್ಣ ಮಾತು ಮೆಚ್ಚುಗೆ ವಿಷಾದಗಳೆರಡನ್ನೂ ಬೆರೆಸಿ ಒಂದು ವೈಶಿಷ್ಟ್ಯಪೂರ್ಣ ಜೀವನಾನುಭವದ ಅವಲೋಕನಕ್ಕೆ ಎಡೆಗೊಡುತ್ತದೆ.

ಕೊನೆಯ ಸಶಕ್ತವಾದ ಸಾಲೊಂದನ್ನು ಹೊರತುಪಡಿಸಿದರೆ 'ಶ್ರೀ ಕುವೆಂಪುವಿಗೆ' ಕವನ ಅವರ ಕಾವ್ಯವ್ಯಕ್ತಿತ್ವವನ್ನು ಚೈತನ್ಯಪೂರ್ಣವಾಗಿ ಚಿತ್ರಿಸುತ್ತದೆ. 'ಸರಸನಲ್ಮೆಯ ಮೂರ್ತಿ' (ಎಂ. ಆರ್. ಶ್ರೀ) ಆದಿಪ್ರಾಸ ಹಾಗೂ ಅಂತ್ಯಪ್ರಾಸಗಳನ್ನು ಒಳಗೊಂಡು ಸುಟಿಯಾಗಿರುವುದು ಈ ಸುನೀತದ ವಿಶೇಷ. ಮೊದಲ ಮೂರು ಚೌಪದಿ ಹಾಗೂ ಕೊನೆಯ ದ್ವಿಪದಿಯಲ್ಲದರಲ್ಲಿಯೂ ಇದನ್ನು ಪಾಲಿಸಲಾಗಿದೆ. ಹಿಂದೆ ಈ ರೂಪವನ್ನು ಪು. ತಿ. ನ. ಅವರು ಬಹುಶಃ ಕನ್ನಡದಲ್ಲಿ ಪ್ರಥಮವಾಗಿ ಪ್ರಯೋಗಿಸಿದ್ದರು. ಆದರೆ ಆದ್ಯಂತಪ್ರಾಸದ ಬದಲು ಬರೀ ಅಂತ್ಯಪ್ರಾಸವೇ ನಿಯಮಿತವಾಗಿರುವುದರಿಂದ ಲಲಿತರಗಳೆಯ ಧಾಟಿಯನ್ನೇ ಹಿಡಿದು ಸಾನೆಟ್ಟಿನ ಸಾಕಟ್ಟನ್ನು ಇದು ಕಳೆದುಕೊಳ್ಳುತ್ತದೆಂದು ಅನಿಸುತ್ತದೆ. ಈ ಬಗ್ಗೆ ಇನ್ನಿಷ್ಟು ಆಲೋಚಿಸಬೇಕಾದೀತು.

ಇಲ್ಲಿಯ ಸಾನೆಟ್ಟುಗಳಲ್ಲಿ 'ವಿ. ಸೀ.' ಅತ್ಯಂತ ಯಶಸ್ವಿಯಾದ ರಚನೆ. ಬಹಿರಂಗ-ಅಂತರಂಗ ವ್ಯಕ್ತಿತ್ವಗಳೆರಡೂ ಇಲ್ಲಿ ಪರಸ್ಪರ ಸ್ಫುರಣಗೊಂಡು ಖಚಿತವಾದ ರೀತಿ ಚೇತೋಹಾರಿಯಾಗಿದೆ. ಹಬ್ಬಿಪಸರಿಸುವ ಬಳ್ಳಿಯ ಕೋಮಲ ಸ್ವಭಾವ. ವಿವಿಧ ಕಲೆಗಳಲ್ಲಿ ವಿ. ಸೀ. ಅವರಿಗಿರುವ ತೀವ್ರ ಆಸಕ್ತಿ, ನಡೆ-ನುಡಿಗಳಲ್ಲಿ ಅದರ ಲಯ. ಮೃದುಹಾಸ, ಸ್ನೇಹದ ಸರಗುಂಪು, ಪೌರ್ವಾತ್ಯ, ಪಾಶ್ಚಾತ್ಯ ಸಾಹಿತ್ಯ ಕಲೆಗಳನ್ನು ಸವಿದುಂಡ ವಿಶಾಲ ಭಾವನೆ, ಇಹದಲ್ಲಿ ಬೇರು ಬಿಟ್ಟು ಸ್ವರ್ಗಕ್ಕೆ ಬೆಳೆದು ಎಲ್ಲವನ್ನು ಸ್ವೀಕರಿಸುವ ಮನೋಧರ್ಮ, ನೋವಿನಲ್ಲಿ ನಲಿವನ್ನು ವಿರಸದಲ್ಲಿ ಸರಸವನ್ನು ಕಾಣುವ ಹೃದಯದ ಸ್ನಿಗ್ಧತೆ— ಇವೆಲ್ಲವೂ ಭಾಷೆಯಲ್ಲಿ ಸಮರ್ಥಗೊಂಡು ಪಡಿಮೂಡಿವೆ. 'ಅರಿವು ಕೆಡಿಸೋಂಕೆ ಬೇಗವೆ ನಂದಿದ ದೀಪಗಳು' 'ಹೊಸ ಹುಟ್ಟಿನಲಿ ಬೆಳೆವ ಚಿಮ್ಮಿದವು ಗೀತೆಗಳು'—ಇಂಥ ಪದಾವಳಿಗಳು ಅವರ ಕೃತಿಗಳ ಮೂಲ ಸ್ಫೂರ್ತಿಯನ್ನು ಮನಸ್ಸಿಗೆ ತಾಗಿಸುತ್ತವೆ.

'ಧರ್ಮಚಕ್ರ'ದಲ್ಲಿ ವ್ಯಕ್ತಿ-ಸಂಗತಿಗಳೆರಡನ್ನು ಸೂಕ್ತವಾಗಿ ಬೆಸೆಯಲಾಗಿದೆ. 'ಯುಗ ಯುಗಾಂತರದಿಂದ ತಿರುಗುವ' ಚಕ್ರದ ಗತಿಗೆ ಹಳಗನ್ನಡ ಭಾಷೆಯ ಶೈಲಿ ಹೊಂದಿಕೊಂಡಿದೆ. ತಮ್ಮ ಕಾವ್ಯ ರಚನೆಯ ಪ್ರಾರಂಭದಿಂದಲೂ ಇವರು ಸಾನೆಟ್ ಪ್ರಕಾರಕ್ಕೆ ಒಲಿದಿರುವುದನ್ನು 'ಚಿತ್ರಕಲೆಗೆ' (1933) 'ಶಾರದಾದಾಸಿಲಯ' (1940) 'ತಣಿವು-ನಲಿವು-ಗೆಲುವು' (1940) 'ಹೊಸಕಲಿಕೆ' (1953) 'ಬಾಳು ಹಂಪೆ' (1953) ಈ ಪದ್ಯಗಳು ಅವರ ಪ್ರಯೋಗಪ್ರಿಯತೆಯನ್ನೂ ಅವುಗಳ ಪ್ರಾಸಂಗಿಕತೆಯನ್ನೂ ಮೀರಿ ಎತ್ತಿ ತೋರಿಸುತ್ತವೆ. ಪ್ರಾರಂಭದ ಈ ಕವಿತೆಗಳಲ್ಲಿ 'ಸೊಗಸಿನ ಸಂಜೆ' (1940) ತುಂಬ ಸೊಗಸಾದದ್ದು ಹಾಗೂ ಸಹಜವಾಗಿ ಮೂಡಿದ್ದು.

ಗವಿಪುರದ ಗುಡ್ಡ ನೆತ್ತಿಯ ಮೇಲೆ ಸರಸದಲಿ,
ಗೆಳೆಯ ಮೂರ್ತಿಯ ಕೂಡಿ ಕುಳಿತಿರಲು ನಾ ಕಂಡೆ
ಬುವಿ ಬಾನು ಮುತ್ತಿಟ್ಟು ಜಗುಳ್ದ ರಾಗದ ಉಂಡೆ
ಎನೆ ಮನಕೆ ಹೊಳೆದ ಮುಳುಗುವ ಹೊತ್ತ ; ಹರುಷದಲಿ
ಹೃದಯವುಬ್ಬಿತು, ಪ್ರಶ್ನೆ ಮೂಡಿ ಕಾಡಿದುದೆನ್ನ ;
ಈ ಎಡೆಯಲೆಂತೆನಿತು ಸಂಜೆಗಳ ನೋಡಿಲ್ಲ?
ಆದರೀ ಹರುಷವೇಕೊಮ್ಮೆಯೂ ಮೂಡಿಲ್ಲ ?
ಸುತ್ತಮುತ್ತಣ ನೋಟವೆಲ್ಲದಿದುವೇ ಮುನ್ನ?
ಉತ್ತರವನರಸುತ್ತ ಕತ್ತಲಾಗುತ ಬಂತು ;
ಮೂಡಿದಾ ಪ್ರಶ್ನೆಗುಸಿರಿತ್ತು ಗೆಳೆಯನಿಗಿತ್ತೆ ;
'ನಿಜದಿಂದ ನಾವೆ ಗೆಳೆಯರಾದುದೀ ಹೊತ್ತೆ ;

ಅದರಿಂದ ಸಂಜೆಗೆಂಡಿಲ್ಲದಾ ಸೊಗಸಿಂತು :
ಅಲ್ಲವೇ' ಎಂದೆನ್ನ ಗೆಳೆಯನೆನೆ, ಅಹುದೆಂದೆ.
ಅಹುದೆಂದ ಮೂಡಿ ಬಡಿಗೆಯ ಚಂದ್ರ ಮುಂದೆ.

ನಿಸರ್ಗದೊಡನೆ ಮನುಷ್ಯನ ಭಾವ ಸಂಬಂಧವನ್ನು, ಪರಸ್ಪರ ವೈಚಿತ್ರ್ಯದ ಕೊಡು—ಕೊಡುಗೆಯೊಂದಿಗೆ ಇಲ್ಲಿ ಚಿತ್ರಿಸಲಾಗಿದೆ. ಕವಿ ಒಂದು [illegible] ಸಂಜೆಗೆಂಪನ್ನು ನೋಡಿದ್ದರೂ [illegible] ಬಗ್ಗೆ [illegible] ಎಂಬ ಪ್ರಶ್ನೆ ಮೂಡುತ್ತದೆ. ಒಟ್ಟಿನಲ್ಲಿ ನಿಸರ್ಗ ಸೌಂದರ್ಯವನ್ನು [illegible] ಸಮಾನ ಹೃದಯದ ಜೊತೆಗೆ [illegible] ಅನುಭವಿಸಬೇಕೆನ್ನುವ [illegible]. 'ನಿಜವಾಗಿ ತಾವು ಗೆಳೆಯರಾದುದು ಈ ಜೊತೆ [illegible] ಅದರಿಂದ ಈ ಸಂಜೆಗೆಂಡಿಲ್ಲದ ಸೊಗಸು' ಎಂಬ ಗೆಳೆಯನ ಉತ್ತರ ಚಮತ್ಕಾರದ ಮಾತಾಗಿರದೆ ಪ್ರಕೃತಿಯ ಸೌಂದರ್ಯೋಪಾಸನೆಯಿಂದ ಒದಗಿದ ಸಂಸ್ಕಾರ ಫಲವನ್ನು ಸೂಕ್ಷ್ಮವಾಗಿ ಸೂಚಿಸುತ್ತದೆ. 'ಅಹುದೆಂದ ಮೂಡಿಬಡಿಗೆಯ ಚಂದ್ರ ಮುಂದೆ' ಎಂಬ ನಿಸರ್ಗ ಚಿತ್ರದೊಂದಿಗೆ ಕೊನೆಯ ಸಾಲು ಈ ಸಾನೆಟ್ಟಿಗೆ ಸಹಜ ಸುಂದರವಾದ ಮುಕ್ತಾಯವನ್ನು ಒದಗಿಸಿದೆ. [illegible] ಹಾಗೂ ಮನಸ್ಥಿತಿ ನಾಜೂಕಿನಿಂದ ಬೇರೆ ಬೇರೊಂದು ಅರ್ಥವನ್ನು ಹೊಳೆಯಿಸುವದಲ್ಲದೆ ಬಿದಿಗೆಯ ಚಂದ್ರನ ಪ್ರತಿಮೆಯಲ್ಲಿ ಕೊನೆಯ ಸಾಲು ಒಂದು [illegible]ಯಾಗಿ ನಿಲ್ಲುತ್ತದೆ. ಪ್ರಕೃತಿ ಚಿತ್ರದ ಒಂದು ಪಾರ್ಶ್ವದಲ್ಲಿ [illegible] ಮನುಷ್ಯ ಭಾವಪ್ರಪಂಚವನ್ನು [illegible].

'[illegible]', '[illegible] ರಂಗು' [illegible] ಅನುವಾದಗಳಾಗಿ [illegible]. [illegible] 'ಪಶ್ಚಿಮದ ರಂಗು' [illegible] ಯಶಸ್ವಿಯಾದ ಅನುವಾದವಾಗಿದೆ.

ಸಾನೆಟ್ [illegible] ಪ್ರಯೋಗಗಳನ್ನು [illegible] ಶ್ರೀ ಎಂ. [illegible] ಮೇಲಿನ [illegible].

ರಾಘವ ಅವರ ಕವನಗಳ ಭಾಷೆ ಮತ್ತು ಛಂದಸ್ಸು

ಟಿ. ಕೇಶವಭಟ್ಟ

'ರಾಘವ' ಎಂಬ ಕಾವ್ಯನಾಮದಿಂದ ಕನ್ನಡಿಗರಿಗೆ ಸುಪರಿಚಿತರಾಗಿರುವ ಪ್ರೊ||ಎಂ.ವಿ. ಸೀತಾರಾಮಯ್ಯನವರು ಗದ್ಯ ಪದ್ಯೋಭಯ ರೂಪದ ಬಹುಮುಖ ಸಾಹಿತ್ಯವನ್ನು ರಚಿಸಿದ್ದಾರೆ. ಪ್ರಕೃತ ಅವರ ಕಾವ್ಯ-ಕವಿತೆಗಳು ಈ ಲೇಖನಕ್ಕೆ ಲಕ್ಷ್ಯವಾಗಿವೆ. ಅವರ ಭಾವಾತ್ಮಕ ರಚನೆಗಳು ಗೀತಬಂಧಗಳು. ಶಬ್ದಾಲಂಕಾರದ ಹಾಗೂ ಛಂದೋಬದ್ಧತೆಯ ಸೊಬಗು ಅವುಗಳಲ್ಲಿದೆ. ಆದುದರಿಂದ ಉಚ್ಚಾರಣೆಗೆ ಸವಿಯಾಗಿ ಕೇಳುವ ರೀತಿಗಿಂತ. ಅರ್ಥ-ಭಾವ ವಿಚಾರಗಳನ್ನು ಮನೋಗತ ಮಾಡಿಕೊಂಡಲ್ಲಿ ಅವು ತಪ್ತಮನದ ಬೇಸಗೆಗೆ ಸುಭಗಸಲಿಲಾವಗಾಹದ ತಂಪನ್ನೀಯುತ್ತವೆ. ಅವರ ರಚನೆಗಳ ರಸಭಾವ ಮನದ ಒಳಪದರಗಳನ್ನು ಭೇದಿಸಿಕೊಂಡು ಸಾಗಿ ನೆಲೆ ನಿಲ್ಲುವಲ್ಲಿ ಸಮರ್ಥವಾಗುತ್ತದೆ. ಉತ್ತಮ ಕಾವ್ಯಶ್ರವಣದಿಂದ ಏನಾಗುವುದೆಂದು ಹರಿಹರ ಕವಿ ಹೇಳಿರುವನಲ್ಲವೆ?—

ಕೇಳಲೊಡಂ ಕಿವಿ ಸವಿಯೊಳ
ಗಾಳದೊಡಂ ತನ್ಮನಂ ಮುಳುಂಗದೊಡಂ ಸ
ಬ್ಯಾಳಂಬಯಿಸಿಪ ಚಿತ್ತಂ
ಕೇಳಿದೊಡೇವಾಗಮಿರದೊಡದು ಸತ್ಕೃತಿಯೇ ?[1]

ಈ ಮೂರು ಗುಣಗಳು ರಾಘವ ಅವರ ಕವನಗಳಲ್ಲಿ ಕಾಣಸಿಗುವುದರಿಂದ ಅವು ಸತ್ಕೃತಿಗಳೆಂಬುದು ಸಮ್ಮತ.

ಕಾವ್ಯಪ್ರಕಾರಗಳಲ್ಲಿ ಒಂದು ಪ್ರಭೇದ "ಭಾವಗೀತ"ವೆನಿಸುತ್ತದೆ. ಪ್ರಾಚೀನ ಕಾಲದ ಕನ್ನಡದ ಚಂಪೂ, ರಗಳೆ, ಷಟ್ಪದಿ, ಸಾಂಗತ್ಯ ರೂಪದ ಕಾವ್ಯಗಳಲ್ಲಿ ವರ್ಣನೆಗಳು ಬಂದಾಗ, ಅಲಂಕಾರಿಕನಿರೂಪಣೆಯಾದಾಗ, ರಸೋತ್ಪತ್ತಿಯಾದಾಗ ಕವಿಪ್ರತಿಭೆ ಪುಟಗೊಂಡು ಭಾವವಿಸ್ತಾರ ಅನಾವೃತಗೊಳ್ಳುತ್ತಿತ್ತು. ಅಂತಹ ಸಂದರ್ಭದ ಪದ್ಯಗಳು ಒಟ್ಟುಗೊಂಡು ಭಾವಗೀತದ ಸೊಬಗನ್ನು ಕಾಣುತ್ತಿದ್ದವು. ಆ ಸಂದರ್ಭಕ್ಕೆ ಸ್ವತಂತ್ರ ಅಸ್ತಿತ್ವವಿದ್ದಿಲ್ಲ; ಅದು ಕಾವ್ಯಾಂಗವಾಗಿತ್ತು. ಮುಂದೆ ದೇವರ ದಾಸಿಮಯ್ಯ,

1. ಹರಿಹರ-ಗಿರಿಜಾಕಲ್ಯಾಣ ೧-೨೧

ಬಸವ, ಅಲ್ಲಮ, ಅಕ್ಕಮಹಾದೇವಿ— ಮುಂತಾದ ಶರಣಶರಣೆಯರ ವಚನರೂಪದ ಅಭಿವ್ಯಕ್ತಿ ಒಂದೊಂದು ಭಾವಗೀತದಂತೆಯೇ ತೋರಿ ಬಂದಿದೆ. ಇವರ ವಚನಗಳು ವೈರಾಗ್ಯ, ಭಕ್ತಿ, ನೀತಿ, ತತ್ವಪ್ರತಿಪಾದಕಗಳಾಗಿದ್ದುವು. ಇವು ಕವಿತೆಯಿಂದ, ಭಾವಗೀತವೆಂದು ನಾಮಾಂಕಿತಗೊಳ್ಳಲಿಲ್ಲ. ನಂತರ ಮಧ್ಯಯುಗದವರು, ಹರಿದಾಸಸಂಘದವರು ರಚಿಸಿದ ಭಕ್ತಿ, ನೀತಿ, ತತ್ವಪ್ರತಿಪಾದಕ ಕೀರ್ತನೆಗಳಲ್ಲಿ ಭಾವ ಗೀತದ ಲಕ್ಷಣಗಳಿವೆ. ದೈವಲೀಲೆ, ಸ್ತುತಿ, ಭಕ್ತಿ, ನೀತಿ ಪ್ರಧಾನವಾದ ಇವನ್ನು ಕೀರ್ತನೆಗಳೆಂದು ಕರೆದರಲ್ಲದೆ, ಭಾವಗೀತಗಳೆಂಬ ಹೆಸರು ಇವಕ್ಕೆ ಬರಲಿಲ್ಲ. ಇಪ್ಪತ್ತನೆಯ ಶತಮಾನದಿಂದ ಪ್ರಾರಂಭವಾದ ಹೊಸಗನ್ನಡದ ಬಿಡಿಪದ್ಯಗಳು ಭಾವಪ್ರಧಾನವಾಗಿ ಹಾಡಲು ಒಪ್ಪುವವಾಗಿ ಭಾವಗೀತಗಳೆನಿಸಿದುವು. ಇವನ್ನು 'ನವೋದಯ ಕಾವ್ಯ' ಎಂದು ವರ್ಗೀಕರಿಸಲಾಯಿತು. ಈ ನವೋದಯ ಕಾವ್ಯದ ಕವಿಗಳಲ್ಲಿ ರಾಘವ-ಅವರ ಹೆಸರು ಉಜ್ವಲವಾಗಿ ನಿಲ್ಲುವಂತಹುದಾಗಿದೆ.

ಈ ಬಗೆಯ ಕೃತಿರಚನೆಯ ಪ್ರಾರಂಭಕಾಲದ ಕವಿಗಳಾದ ಎಸ್. ಜಿ. ನರಸಿಂಹಾಚಾರ್ಯರು, ಪಂಜೆ ಮಂಗೇಶರಾಯರು, ಹ. ನಾರಾಯಣರಾಯರು ಮುಂತಾದವರು 'ಕನ್ನಡಕ್ಕೆ ಸತತಂ ಪ್ರಾಸಂ' ಎಂದಿರುವ ಕವಿರಾಜಮಾರ್ಗದ ನೀತಿಗನುಗುಣವಾಗಿ ದ್ವಿತೀಯಾಕ್ಷರ ಪ್ರಾಸಬದ್ಧವಾಗಿ ಕವಿತೆಗಳನ್ನು ರಚಿಸಿದ್ದಾರೆ. ಆ ಮೇಲಿನವರಲ್ಲಿ ಕೆಲವರು ಪ್ರಾಸವನ್ನು ಇಟ್ಟೂ ಬಿಟ್ಟೂ ರಚಿಸಿದ್ದರೆ, ಈಚೆಗಂತೂ ಅದನ್ನು ಬಿಟ್ಟೇ ರಚಿಸುವುದು ರೂಢಿಗತವಾಗಿದೆ. ಆದರೆ ರಾಘವ ಅವರು ಹಳತನ-ಹೊಸತನಗಳೆರಡರ ತಾನದ ಮೀಟುತಂತಿಯಾಗಿ ಕೃತಿರಚನೆ ಮಾಡಿದ್ದಾರೆ. ಪ್ರಾಸಬದ್ಧವಾಗಿ ಬರೆದರೆಂದರೆ ಇವರು ಪ್ರಾಸಕ್ಕಾಗಿ ತಡಕಾಡಿದಂತೆ ಕಾಣಿಸುವುದಿಲ್ಲ. ಆದುದರಿಂದ ಶಬ್ದಸಂಪತ್ತುಳ್ಳ ಕವಿಗಳವರೆಂದು ಹೇಳಬಹುದು. ಭಾವಕ್ಕೊಪ್ಪುವ ಭಾಷಾ ಪ್ರಯೋಗದಲ್ಲಿ ಇವರು ಯಶಸ್ವಿಯಾಗಿದ್ದಾರೆ.

ಹೊಸಗನ್ನಡದಲ್ಲಿ ಕಾವ್ಯ-ಕವನ ಬರೆಯುವವರು ತಮ್ಮ ಕೈಪ್ರೊಕ್ಕ ನಿಧಿಯನ್ನಾಗಿ ಹಳಗನ್ನಡವನ್ನು ಬಳಸುತ್ತಿರುವುದು ಎಲ್ಲೆಡೆ ಕಂಡುಬರುತ್ತದೆ. ಸಂಸ್ಕೃತವನ್ನು ಧಾರಾಳ ವಾಗಿ ಪ್ರಯೋಗಿಸುತ್ತಾರೆ. ಇದರಿಂದಾಗಿ ಕವನಗಳಲ್ಲಿ ಒಂದೊಂದು ಪಾಂಡಿತ್ಯ ಘಾಟೆಯೆನಿಸುತ್ತದೆ. ಹಿಂದೆಯೂ ಹೊಸಗನ್ನಡದಲ್ಲಿ ಬರೆಯುವೆನೆಂದು ಭಾವಿಸಿ ಕೊಂಡವರು ಉಜ್ವಲವಲ್ಲದ ಸಂಸ್ಕೃತವನ್ನು ಪ್ರಯೋಗಿಸಿ ನಗೆಗೀಡಾದುದುಂಟು. ಪ್ರಸ್ತುತ ಎಂ. ವಿ. ಸೀ. ಅವರು ತಮ್ಮ ಕಾವ್ಯಭಾಷೆ ಜನಭಾಷೆಗೆ ಹತ್ತಿರವಾಗ ಬೇಕೆಂಬ ಉದ್ದೇಶವಿಟ್ಟೇ ಕವಿತೆಗಳನ್ನು ಹೆಚ್ಚಾಗಿ ಬರೆದುದು ಕಂಡುಬರುತ್ತದೆ. ಆದ ದರಿಂದಲೆ ಪ್ರಚಲಿತವಿರುವ ದೇಶಿ, ಅನ್ಯದೇಶಿ, ಹಾಗೂ ಸಂಸ್ಕೃತಗಳನ್ನು ಬಳಸಿ ಕೊಂಡಿದ್ದಾರೆ. ಕಾವ್ಯವನ್ನು 'ಮಾತನಾಡಿದ ಪೊಲ್ ಅಂದವನಾಳ್ವರೆ' ನಿರೂಪಿ

ಸುವುದು ಶ್ರೇಷ್ಠ ಕವಿಯ ಲಕ್ಷಣ ಎಂದಿರುವ ಆಂಡಯ್ಯನ ಅಭಿಪ್ರಾಯವು ರಾಘವ ಅವರಿಗೆ ಸಾಕಾರವಾದಂತೆ ಕಂಡು ಬರುತ್ತದೆ. 'ಭಾವಕ್ಕೆ ತಕ್ಕ ಭಾಷೆ' ಎಂಬುದಕ್ಕೆ 'ತೆರವು ಮಾಡೀ ಮನೆಯ' ಎಂಬ ಕವಿತೆಯ ಪಂಕ್ತಿಗಳನ್ನು ಉದಾಹರಿಸಬಹುದು-

ಕರಾರು ಮೇಲೀ ಮನೆಗೆ ಬಾಡಿಗೆಗೆ ಬಂದಿರುವೆ
ನೀನಿದನು ಮರೆಯ ಬೇಡ:
ಕ್ಷಣಕ್ಷಣಕ್ಕೂ ಪ್ರತಿದಿನ ಪ್ರತಿವರ್ಷವರ್ಷವೂ
ಈ ಮನೆ ನಿನ್ನದಲ್ಲ
ಇದಕೆ ಬೇರೊಬ್ಬ ಮಾಲೀಕನಿರುವನು
ಎನುವುದನು ಮರೆಯದಿರು ಮಿತ್ರ[2]

ಈ ಕವನದಲ್ಲಿ ಕರಾರು, ನೋಟೀಸು, ರಿಕಾಮಿ, ಮಾಲೀಕ-ಎಂಬ ಅನ್ಯದೇಶಿ ಶಬ್ದಗಳು ಈ ಕಾಲದಲ್ಲಿ ಅತಿಪ್ರಚಲಿತವಾದುವು. ಬಂದಿವೆ-'ಎಂಜಲುಣಿ' ಎಂಬುದು ರೂಢಿಗತವಲ್ಲದಿದ್ದರೂ ಸ್ವಲ್ಪಮಟ್ಟಿಗೆ ಕನ್ನಡದ ವ್ಯಾಕರಣಾಭ್ಯಾಸ ಮಾಡಿದವರಿಗೆ ಗೊತ್ತಿರುವ ಶಬ್ದವೇ ಆಗಿದೆ. ಬಾಡಿಗೆದಾರನು ಕೊಡುವ ತೊಂದರೆ, ಆಗ ಅವನಿಗೆ ಕೊಡುವ ಎಚ್ಚರಿಕೆ-ಇವು ಕವನದಲ್ಲಿ ಬಂದಿವೆ. ಅಷ್ಟೇ ಅಲ್ಲ, 'ಮನೆ ನಿನ್ನ ಅಪ್ಪನ ವೇನು ?' ಎಂದು ಕ್ರೋಧ ಭಾವ ತಡೆಯದಷ್ಟು ಉಕ್ಕಿದಾಗ ಮನೆಮಾಲಿಕನು ತಾನೆ ಕೇಳುವುದರಲ್ಲಿ ಆತನ ಪ್ರತ್ತಾಪ ಈ ಸಂಭಾಷಣೆಗೆ ನೈಜತೆಯನ್ನು ತಂದಿದೆ. ಹಾಗೆಯೇ 'ಎಂಜಲುಣಿ ನಾಯಂತೆ, ಗೆದ್ದಲಗೂಡ ಠಾವುಮಾಡಿಕೊಂಡಂತೆ ಹಾವು' ಎಂಬ ಉಪಮೆಗಳು ಭಾವಪೋಷಕವಾಗಿರುವುದನ್ನು ಕಾಣಬಹುದು.

ರಾಘವರು ಶಿಷ್ಟಭಾಷೆಯೊಂದಿಗೆ, ಆಯಾ ಸಂದರ್ಭೋಚಿತವಾಗಿ ಗ್ರಾಮ್ಯವನ್ನೂ ಬಳಸುತ್ತಾರೆ. 'ನಡೆಸುವ ಕೈ' ಎಂಬ ಕವನದಲ್ಲಿ ಇದಕ್ಕೆ ಉದಾಹರಣವನ್ನು ಕಾಣಬಹುದು. ಅನುಭವಚಿತ್ರಣವೂ ಆಗಿರುವ ಕವಿತೆಯಿದು. ಕತ್ತಲೆ ಹೊತ್ತು ರಿಕ್ಷಾ ಹಿಡಿದು ಮನೆಗೆ ಬಂದ ಕವಿಗಳು ರಿಕ್ಷಾದವನಿಗೆ ಬಾಡಿಗೆ ದುಡ್ಡು ಕೊಡುವ ಸಂವಾದ ಇದರಲ್ಲಿದೆ. ಕೆಲವು ಮಾತುಗಳನ್ನು ಉದಾಹರಿಸಬಹುದು- (ವಕ್ತೃವಿನ ಉಲ್ಲೇಖ ನಮ್ಮದು).

ಕವಿ- ದುಡ್ಡೆಷ್ಟು ಕೊಡಬೇಕು ಹೇಳಪ್ಪ ?
ರಿಕ್ಷಾದವ- ಎರಡು ರೂಪಾಯಿ ಮೇಲೈವತ್ತು ಪೈಸೆ
ಕವಿ- ಕತ್ತಲೆ ಹೊತ್ತು ಮುದಕ ನನ್ನನ್ನ
ಕೈಲಾಗದವನನ್ನ ಮನೆ ಮುಟ್ಟಿಸಿದ್ದಕ್ಕೆ
ತಗೆಮುಕೋ ಅಣ್ಣಾ ಮೂರು ರೂಪಾಯಿ.

---

2 ಬೀಸಿ ಬಂದ ಗಾಳಿ, ಪುಟ ೨೭, ತೆರವುಮಾಡೀಮನೆಯ

೦. [illegible] ಕೊಗ್ಗೋರ್ ದವಟ [illegible]
ಮೂರು ಪೈಸಾದೂ ಬೇಡಿ ಹ್ಯಾವಿರೇ–[3]

ಕವನವಿದು [illegible] ದೀರ್ಘವಾಗಿದೆ; ಇದು [illegible] ಹಾಗೂ ಕವಿಯನ್ನು 'ನಡಾವ ಕೈ' ಎಂದೇ [illegible]. ಮಾಡಿರುತ್ತದೆ [illegible] ಸಂವಾದಾತ್ಮಕವಾಗಿ ನಿರೂಪಣೆ ನಡೆದಿರುತ್ತದೆ. ಕೃತಕವಲ್ಲದ ಮಾತಿನ ಮೋಡಿ ಇಲ್ಲಿ ಸೊಗಸಾಗಿದೆ. ಇನ್ನೊಂದೆಡೆ, [illegible] ಸಮರ್ಥಿಸುವ [illegible] ಸರಳವಾದ ಕವಿತೆಯಾಗಿ ರೂಪುಗೊಂಡುದು ಹೀಗಿದೆ–

ಬುದ್ಧಿಯು [illegible] | ಕೇಳುವೇನಪ್ಪ ಶಿವಯ
ಬದ್ಧಳಾಗಿ [illegible] | ಚಿಂತಿಸದೇನಪ್ಪ ಶಿವಯ |
ಗಂಡ [illegible] | [illegible] ಶಿವಯ
[illegible] | [illegible] ಶಿವಯ ॥
ಗಂಡು ಒಬ್ಬ [illegible] | [illegible] ಶಿವಯ
[illegible] | [illegible] ಶಿವಯ
[illegible] | [illegible] ಶಿವಯ
[illegible] ॥ [illegible] ಶಿವಯ ॥[4]

ಇನ್ನೊಂದು ನುಡಿಗಳಲ್ಲಿ ಈ ಕವಿತೆ ನೇರವೂ ಸ್ಪಷ್ಟವೂ ಆದ ನಿರೂಪಣೆಯುಳ್ಳ ಅದು [illegible] ತಾಳಿದೆ. ಅದು [illegible] ಉಪನ್ಯಾಸದಂತಾಗಿ [illegible] ಇನ್ನೊಂದು ಉದಾಹರಣೆಯನ್ನು '[illegible]' ಎಂಬ ಕವಿತೆಯೊಂದು ಕವನದಲ್ಲಿ ಕಾಣಬಹುದು. ಅದರ ಆರಂಭದ ನುಡಿಗಳಲ್ಲಿ ಒಂದೆರಡು ನುಡಿಗಳಿವು–

ಇರಲಿ ಬಿಡು ಹರುಕಸೀರೆ
ಹರುಕಿಲ್ಲದು ದಾವುದು ?
ಕೊರಗಬೇಡ ಪೈಕಂಡರೆ
ಹಬ್ಬ ನನ್ನ ಕಣ್ಣಿಗದು ॥

ಮೇಲೆ ನೋಡು ಗಗನಾಂಗನೆ
ಉಟ್ಟಸೀರೆ ಹರುಹರುಕು
ನೀಲಾಂಬರಿಯುವಳಿಗದೇ
ಶ್ವೇತಾಂಬರ ಬಲು ಸೊಗಸು ॥[5]

---

3 ಆದರ್ಶ್ಲೀ– ಪುಟ ೩೪ ನಡಾವ ಕೈ
4 ಆದರ್ಶ್ಲೀ ಪುಟ ೪೨– ಬುದ್ಧಿಯು ಪರಾಕು
5 ಹಂಸಪಥ, ಪುಟ ೧೨.

‘ವೆಂಕಟಪತಿ-ಸುಪ್ರಭಾತ’ ಎಂಬ ಇನ್ನೊಂದು ಕವಿತೆ ಬಡತನದ ಬವಣೆಯಲ್ಲಿರುವ ಒಂದು ಕುಟುಂಬದ ವಿಡಂಬನಾತ್ಮಕ ಚಿತ್ರಣ. ಈ ಬಗೆಯ ಗೋಳಿನ ಬಡತನ ಪ್ರಿಯವಲ್ಲದಿದ್ದರೂ ಅದರ ಚಿತ್ರಣ ಓದುಗರಿಗೆ ಪ್ರಿಯವಾಗುತ್ತದೆ. ಬಳಸಿದ ಭಾಷೆ ಆಡುಮಾತಿನಂತೆ ಸೊಗಸು. ಈ ಕವಿತೆಯಲ್ಲಿ ಬೆಳಗ್ಗೆ ಪತಿಯನ್ನು ಪತ್ನಿ ಕರೆದೆಬ್ಬಿಸುತ್ತಾಳೆ–

ಏಳೀರಿ ಮಹರಾಯ್ರೆ ಕಾಫಿಪುಡಿಯೇ ಇಲ್ಲ
ಏಳು ಏಳಾಯ್ತು ಗಂಟೆ
ಏಳಿ ನಮ್ಮ ಕುಮಾರ ‘ಇಸ್ಕೂಲಿಗ್ಹೋಗಲ್ಲ’
ಅಂತ ಮಾಡ್ತಿದ್ದಾನೆ ತುಂಬ ತಂಟೆ
　　ನಾನು ಪದ್ಮಾವತಿ, ನೀವು ವೆಂಕಟಪತಿ
　　ಕೇಳಿ, ನೆರೆಮನೆಯ ರೇಡಿಯೊ ಸುಪ್ರಭಾತ
　　ಭಾನು ಮಹಡಿಯ ಮನೆಯ ಮೇಲೆ ಬಲೆಹಾಕಿದನು
　　ವಾಕಿಂಗು ಹೊರಟರದೊ ಬೀದಿ ತಾತ
ಇರುವೆರಡು ಕೋಲು ಹಸಿ; ಆಗಿಲ್ಲ ನೀರು ಬಿಸಿ
ನಮಗೆ ದೊರೆಯೋದಿಲ್ಲ ಸೌದೆ ಸಾಲ
ಕಡದೆ ಹೋದರೆ ಸೌದೆ, ನಮ್ಮ ಸ್ನಾನಕ್ಕೆಂದು
ನಿಮ್ಮ ಗೋಳ್ಕವಿತೆಯೇ ಗಂಗಾಜಲ
ಕವಿಯೆಂದು ಕೈಹಿಡಿದೆ–ಹೆಸರಿಗೇ ಮರುಳಾದೆ
ಹೇಯ ಹೇಯಲ್ಲಂತ ಭ್ರಾಂತಳಾದೆ
ಕವಿತೆಗೋ ಕಾಸಿಲ್ಲ ಬೋರ್ಡಿಗೋ ಬೆಲೆಯಿಲ್ಲ
ಬೆಳಗಾದ ಕೂಡಲೇ ಸಾಲದ ತಗಾದೆ[೬]

ಈ ಕವಿತೆಯಲ್ಲಿ ಒಡನುಡಿಗಳಿವೆ. ಇವೆಲ್ಲವನ್ನೂ ಹಾಸ್ಯಪಾಕ ಮಾಡಿ ಉಣಬಡಿಸುತ್ತದೆ–ಓದುಗರಿಗೆ. ಅದಕ್ಕೆ ಈ ನಿರೂಪಣೆಯ ಭಾಷೆ, ನುಡಿಗಟ್ಟುಗಳ ಬಳಕೆಯೇ ಮುಖ್ಯಕಾರಣ. ಇದೇರೀತಿ ಜನಜೀವನದಲ್ಲಿ ಅಂಥಾ ವ್ಯಕ್ತಿಗೊಪ್ಪುವ ಭಾವ-ಭಾಷೆಗಳಿಂದ ರಚಿತವಾದ ಕವನಗಳಾಗಿ ‘ಪರಟೆಯ ಒಡೆಯಲು ಸ್ನೇಹಿತರಿಲ್ಲ’ (ಹಂಸಪಥ, ಪುಟ ೨೧), ‘ವ ಹಡಿಗೊಂದು ಮಾತು’ (ಮುಗಿಯದ ಮಾಯೆ, ಪುಟ [illegible]), ನವದಂಪತಿ (ಅದರಲ್ಲೆ ಪುಟ ೩[illegible]), ಗೊತ್ತಿರಲಿಲ್ಲ, ಪಾಪ (ಬೀಸಿಬಂದಗಾಳಿ, ಪುಟ ೬೨), ಅಂದಿನ ಪಾಠ (ಹಂಸಪಥ, ಪುಟ ೨೪) ಇವನ್ನು ಪರಿಶೀಲಿಸಬಹುದು. ಕೆಲವು

---

೬ ಹಂಸಪಥ, ಪುಟ ೩೧-೩೨

ಕವನಗಳಿಗೆ ಇವರು ಜಾನಪದಭಾಷೆಯನ್ನು ಯಶಸ್ವಿಯಾಗಿ ಬಳಸಿದ್ದಾರೆ. ಉದಾಹರಣೆಗಾಗಿ ಒಂದೆರಡು ಸಾಲುಗಳಿವು–

ಕಾವ್ಯ ಜನ್ಮೋದ್ ಕನ್ನಡಿ ಸ್ವಾಮಿ
ಲಾಗಾಯಿತ್ತಿಂದ್ ಇರೋದು;
ಯಾರ್ ಹಾಗ್ ನನ್‌ಮುಖ ನೋಡ್ತೀರಿ?
ಕನ್ನಡಿ ನೋಡಿ; ನಿಮ್ಮುಖ ನೋಡ್ಕೊಂಭೋದು.[7]

ಹಳಗನ್ನಡ ಹಾಗೂ ಪೂರ್ವದ ಹೊಸಗನ್ನಡ ಪದರೂಪಗಳನ್ನು ಬಳಸಿಯೂ ರಚಿಸಿದ ಕವನಗಳನ್ನು ಇವರ ಕೃತಿಗಳಲ್ಲಿ ಕಾಣುತ್ತೇವೆ. 'ಅಣುಶಕ್ತಿ' ಎಂಬ ಕವನದ ಕೆಲವು ಸಾಲುಗಳಿವು –

ಅಂದು - ಋಷಿಗಳ್ ಯೋಗಿಗಳ್ ಪರಮ ದಾರ್ಶನಿಕರ್
ಭಕ್ತರ್ ವಿರಕ್ತರ್ ಕವೀಂದ್ರರ್
ದಿವ್ಯ ಚಕ್ಷುವಿನಿಂ
ಅಣುವ ನೋಡಿದರ್
....
ಪರಮ ತೇಜಸ್ವಿಯನ್
ಅಣುವಿಗಣುವಾದನನ್
ಮಹತೋ ಮಹೀಯನನ್[8]

ಈ ಕವನಗಳಲ್ಲಿ ಯೋಗಿಗಳ್, ಭಕ್ತರ್, ಅದ್ಭುತಮಂ – ಎಂಬ ರೂಪದ ಹಳಗನ್ನಡದ ವಿಭಕ್ತ್ಯಂತಗಳನ್ನೂ ತೇಜಸ್ವಿಯನ್ (ತೇಜಸ್ವಿಯಂ ಎಂದಿದ್ದರೆ ಹಳಗನ್ನಡ) ಎಂಬಲ್ಲಿ ಪೂರ್ವದ ಹೊಸಗನ್ನಡದ ದ್ವಿತೀಯಾ ವಿಭಕ್ತಿ ರೂಪವನ್ನೂ ಕಾಣುತ್ತೇವೆ.

ಛಂದಸ್ಸು

ಪದ್ಯ ಯಾವುದೇ ಇರಲಿ, ಒಂದಲ್ಲೊಂದು ಬಗೆಯ ಛಂದಸ್ಸಿನಿಂದಲೇ ಅದು ಪ್ರಕಟವಾಗುತ್ತದೆ. ಶ್ರೀ ಎಂ. ವಿ. ಸೀ. ಇವರು ಛಂದಸ್ಸಿನ ವಿವಿಧ ಪ್ರಯೋಗಗಳ ಪರಿಣತಿಯನ್ನು ತಮ್ಮ ಕವಿತೆಗಳಲ್ಲಿ ತೋರ್ಪಡಿಸಿದ್ದಾರೆ. ಪ್ರಾರಂಭದಶೆಯಲ್ಲಿ ಇವರು ಕಂದ - ಷಟ್ಪದಿ ರೂಪಗಳಲ್ಲಿ ಪದ್ಯರಚನೆ ಮಾಡುತ್ತಿದ್ದರು. ಕುಮಾರವ್ಯಾಸ ಕವಿಯನ್ನು ಕುರಿತು ಸುಮಾರು ೧೯೩೦ ರ ಹೊತ್ತಿಗೆ ಇವರು ಭಾಮಿನಿ ಷಟ್ಪದಿಗಳಲ್ಲಿ ಬರೆದಿದ್ದ ಕವನದ ಒಂದು ಪದ್ಯವನ್ನು ಇಲ್ಲಿ ಉದಾಹರಿಸುತ್ತೇನೆ—

7 ಅದರಲ್ಲಿ, ಪುಟ ೫೪ - 'ಒಡೆಯದ ಕನ್ನಡಿ'
8 ಅದರಲ್ಲಿ, ಪುಟ ೧೩೪

ಅಳಿಸಿ ರೇಗಿಸಿ ದ್ರುಪದ ಸುತೆಯನು
ಮುಳಿಸಿ ಕಲಿಭೀಮನನು ರೋಷದಿ
ನಲಿವ ಕೃಷ್ಣನನೊಲಿಸಿ ಪಾಂಚಾಲಿಯನು ಅವ ಪೊರೆಯೆ
ಒಲಿದ ವಿದುರನ ಸಲಹಿದಾತನು
ಸುಲಭನೋ ಹರಿ ಭಕ್ತರನು ಅರೆ
ಗಳಿಗೆ ಬಿಡದಿಹನೆಂದು ತೋರಿವೆ ವೀರನಾರಾಯಣ ||

ಈ ರಚನೆಯಲ್ಲಿ ಎರಡು ಕಡೆ ವಿಸಂಧಿದೋಷವಿದೆಯಾದರೂ ಭಾಮಿನಿಷಟ್ಪದಿಯ ಲಯವಿನ್ಯಾಸವು ಆಗಲೇ ಇವರಿಗೆ ಸಿದ್ಧಿಸಿತ್ತೆಂಬುದಕ್ಕೆ ಇದು ಉದಾಹರಣವಾಗಿದೆ.

ಪ್ರಸ್ತುತದಲ್ಲಿ ಈ ಕವಿವರರ ನಾಲ್ಕೈದು ಕವನಸಂಕಲನಗಳನ್ನು ಆಧಾರವಾಗಿಟ್ಟು ಇವರು ಪ್ರಯೋಗಿಸಿರುವ ಛಂದೋಲಾಲಿಮೆಯನ್ನು ಅವಲೋಕಿಸುವುದವಶ್ಯ. ಇವರ ಕವಿತೆಗಳಲ್ಲಿ ಹಲವು ವಿವಿಧ ರಗಳೆಗಳ ಜಾತಿಗೆ ಸರಿಹೋಗುತ್ತವೆ. ನಿಶ್ಚಿತ ಮಾತ್ರಾಗಣ ನಿಬದ್ಧವಾಗಿ ಹಲವಿವೆ. ಕೆಲವು ಮಿಶ್ರಮಾತ್ರಾಗಣ ಘಟಿತವಾಗಿವೆ. ಕೆಲವಂತೂ ಸ್ಪಷ್ಟವಾಗಿ ಅಂಶಗಣಗಳಿಂದ ಕೂಡಿದ ಸಾಂಗತ್ಯ, ಪಿರಿಯಕ್ಕರ, ಸೊಬಗಿನ ಸೋನೆಯ ವರ್ಗದವು. ಇನ್ನು ಕೆಲವು ಅಂಶಗಣ-ಮಾತ್ರಾಗಣಗಳೆರಡರ ಬೆರಕೆಯವು. ಹಲವು ಪದ್ಯಗಳು ವಿನ್ಯಾಸದಲ್ಲಿ ನವ್ಯದಂತೆ, ಗದ್ಯದಂತೆ ಕಾಣಿಸುತ್ತವೆ. ಆದರೂ ಅವು ಅಂಶಗಣಘಟಿತವಾಗಿವೆ; ತೋರಿಕೆಗೆ ಛಂದೋಮುಕ್ತವಾದುವು, ಪರಿಶೀಲನೆಗೆ ಛಂದೋಬದ್ಧವಾಗಿ ಗೋಚರಿಸುತ್ತವೆ-ಇದು ಇವರದೊಂದು ರಚನಾ ವೈಶಿಷ್ಟ್ಯ. ಸಾನೀತ ಅಥವಾ ಅಷ್ಟಷಟ್ಪದಿ, ದ್ವಿಪದಿ, ಚೌಪದಿ, ವೀರಚೌಪದಿ, ಕೀರ್ತನೆಗಳ ರೂಪದ ರಚನೆಗಳು ಇವೆ.

ಕನ್ನಡ ಸಾಹಿತ್ಯದಲ್ಲಿ ಮಾತ್ರಾಛಂದಸ್ಸನ್ನು ಬಳಸಿ ರಚಿಸಲಾದ ಪದ್ಯಗಳಿಗೆಲ್ಲ ಮೂಲ-ಮೂರು, ನಾಲ್ಕು, ಐದು ಮಾತ್ರೆಗಳ ಗಣಗಳು. ಈ ಮೂರು ಬಗೆಯ ಗಣಗಳಿಂದ ಉತ್ಸಾಹ, ಮಂದಾನಿಲ, ಲಲಿತ ಎಂಬ ಮೂರು ಬಗೆಯ ರಗಳೆಗಳು ಹುಟ್ಟಿವೆ. ಪ್ರಚಲಿತವಿದ್ದ ಮಾತ್ರಾಗಣಗಳು ಈ ಮೂರೇ ಆದರೂ ಹಿಂದಿನ ಕೀರ್ತನಕಾರರು, ಯಕ್ಷಗಾನ ಕವಿಗಳು ಹಾಗೂ ಸಂಪ್ರದಾಯದ ಹಾಡುಗಳ ಕವಿಗಳು ಈ ಗಣಗಳಲ್ಲಿ ಎರಡೆರಡನ್ನು ಕೆಲವು ಕಡೆ ಜೊತೆಗೊಳಿಸಿ ಒಳಪಂಗಡಣೆ ಮಾಡಿಕೊಂಡದ್ದುಂಟು. ಉದಾಹರಣೆಗಾಗಿ ೪+೪ (ನಾಲ್ಕುಮಾತ್ರೆಗಳ ಎರಡುಗಣ, ಒಟ್ಟಿಗೆ ಎಂಟು ಮಾತ್ರೆಗಳು) ಎಂಬುದನ್ನು ೩+೩+೨ ಅಥವಾ ೩+೨+೩ ಎಂದು ರೂಪಿಸಿಕೊಂಡುದುಂಟು. ನಾಲ್ಕು ಮಾತ್ರೆಗಳ ಗಣವಾಗಿ ಜಗಣವನ್ನು ಬಳಸಿದ್ದೂ ಉಂಟು. ನವೋದಯದ ಕವಿಗಳು ಈ ಒಳವಿಭಾಗವನ್ನು ಬಳಸಿಕೊಂಡಿದ್ದಾರೆ. ಯಗಣ-ಜಗಣಗಳನ್ನೂ ಉಪಯೋಗಿಸಿದ್ದಾರೆ. ಈ ಗಣಗಳ ಅಂತರ್ವಿಭಾಗದಿಂದ

'ರಾಘವ' ಇವರ ಹಲವು ಕವಿತಾರಚನೆಗಳಿಗೆ ಗಮಕ ಗತ್ತುಗಳನ್ನು ಅಲ್ಲಲ್ಲಿ ಮೂಡಿಸಿ ಕೊಂಡಿದ್ದಾರೆ. ಈ ರಹಸ್ಯವನ್ನರಿಯಲಾರದ ಸಮೀಕ್ಷಕರಿಗೆ ಇವರ ರಚನೆಯ ಎಷ್ಟೋ ಪದ್ಯಗಳು ಮಾತ್ರಾಗಣಗಳ ಗಣನೆಯಲ್ಲಿ ಅನಿಯಮವಾಗಿ ತೋರಬಹುದು. ಮಾತ್ರಾಗಣಯುಕ್ತವಾಗಿ ತೊಡಗಿದ ಕವಿತೆಯನ್ನು ಕೆಲವೆಡೆ ಇವರು ಅಂಶಗಣಗಳಿಂದ ಮುಗಿಸಿದ್ದುಂಟು. ಅಂಶಗಣ ಬದ್ಧವೆಂದು ಕರೆಯತಕ್ಕದಾದ ರಚನೆಯಲ್ಲಿ ಕೆಲವೆಡೆ ಅಂಶಗಣಗಳು ಮಾತ್ರಾಗಣಗಳಾಗಿ ರೂಪಗೊಂಡದ್ದುಂಟು. ರೂಪಕ ಗಣನಿಯಮ ಪೂರ್ವಕ 'ಮಾತ್ರಾ ಲಂಕೆ ಅಂದ'ವಾಗಿ ರಚಿಸಿದ್ದೆಂದು ತೋರಬಹುದಾದ ಪದ್ಯಪಾದಗಳು ಅಂಶಗಣಾತ್ಮಕವಾಗಿಯೇ ಇರುವುದುಂಟು. ಇದರಿಂದ, ಸಾಮಾನ್ಯರಿಗೆ ಇವರ ಛಂದೋಗತಿ ಸ್ಪಷ್ಟವಾಗದಾಗಿಯೇ ತೋರುವುದು ಅಸಹಜವೇನೂ ಅಲ್ಲ. ಇದಿಷ್ಟು ಹಿನ್ನೆಲೆಯಿಂದ ಇವರ ರಚನೆಗಳ ಛಂದೋವೈಶಿಷ್ಟ್ಯವನ್ನು ಸಮೀಕ್ಷಿಸಬೇಕಾಗುತ್ತದೆ.

ಮಾತ್ರಾಛಂದಸ್ಸು

'ಮಂದಾನಿಲ ರಗಳೆ' ಎಂದು ನಾವು ಕರೆಯಬಹುದಾದ ಇವರ ರಚನೆಯ ಹದಿನಾರು ಸಾಲುಗಳಲ್ಲಿ ಪ್ರಾರಂಭವಾದ ನಾಲ್ಕು ಸಾಲುಗಳು ಹೀಗಿವೆ—

ಓ ಭಾ।ರತಿ ಬ್ರ।ಹ್ಮನ ಮಾ।ರಾಣಿ।
ಬಹು ಭಾ।ಷಾತ್ಮ್ಯೆ। ವೀಣಾ।ಪಾಣಿ।
ಭಾವ ಮ।ಯೂರ ಮ।ನೋಹರ।ವಾಹನೆ।
ಸಾರ।ಸ್ವತ ಸರ।ಸಿಜ ದಿ।ವ್ಯಾಸನೆ।[9]

ಈ ಪದ್ಯಪಾದಗಳಲ್ಲಿ ಮೊದಲೆರಡರ ಕೊನೆಯ ಗಣ 'ರಾಣಿ', 'ಪಾಣಿ'-ಎಂದು ಮೂರು ಮಾತ್ರೆಗಳುಳ್ಳವಾದರೂ ಅವನ್ನು ಪಾದಾಂತ್ಯವೆಂದು ಗಣಿಸಿ, 'ರಾಣೀ', 'ಪಾಣೀ' ಎಂದು ಉಚ್ಚರಿಸಿ ನಾಲ್ಕು ಮಾತ್ರೆಗಳ ಗಣವಾಗಿ ಪರಿಗಣಿಸಬಹುದಾಗಿದೆ. ರಾಘವಾಂಕ ಕವಿಯು 'ಹರಿಶ್ಚಂದ್ರ ಚಾರಿತ್ರ'ದಲ್ಲಿ ಚಂದ್ರಮತೀವಿಲಾಪ ರೂಪದ ಮಂದಾನಿಲರಗಳೆಯಲ್ಲಿ ಕೆಲವು ಪಾದಾಂತಗಣಗಳು ಹೀಗಿರುವುದು ಲಕ್ಷ್ಯಾರ್ಹವಾಗಿದೆ. ಮೇಲೆ ಕಾಣಿಸಿದ ಗೀತದ ಒಂದು ಪಾದ 'ಸರಸ್ವತೀ ಭಗವತೀ ವಾಗ್ದೇವಿ' ಎಂದು ಬಂದಿದೆ. ಈ ಪಾದದ ಆದಿಗಣ (ಸರಸ್ವ-ಎಂಬುದು) ಜಗಣವಾಗಿರುವುದು ಗಮನಾರ್ಹ.

ಲಲಿತ ರಗಳೆಯನ್ನು ಬಳಸುವಲ್ಲಿಯೂ ಇವರು ಒಂದೊಂದೆಡೆ ಬೇರೆಂತಲೇ ಗಣವನ್ನು ಹಾಗೂ ಮಾತ್ರಾಸಂಖ್ಯೆಯನ್ನು ವ್ಯತ್ಯಸ್ತಗೊಳಿಸಿದ್ದಾರೆ. ಉದಾಹರಣೆ—

ಈ ದಿನಂ। ನವ್ಯಭಾ।ರತ ರೂಪು।ಗೊಂಡ ಸುದಿ।ನಂ
ಸ್ವಾತಂತ್ರ್ಯ।ನಿರ್ಘೋಷ। ಮೊದಲು ಮೊಳ।ಗಿದ ದಿನಂ।[10]

9 ರಾಷ್ಟ್ರಸ್ತೋತ್ರವಾಗೀಶ, ಪುಟ ೫
10 ಅದರಲ್ಲೇ, ಪುಟ ೬

ಹೀಗೆಯೇ ಮುನ್ನಡೆವ ಲಲಿತ ರಗಳೆಯ ಪಾದಗಳಲ್ಲಿ ಮೇಲೆ ಕಾಣಿಸಿದ ಮೊದಲ ಪಾದದ ಕೊನೆಯ ಪಂಚಮಾತ್ರಾಗಣವಾದ ಮೇಲೆ 'ನಂ' ಎಂಬ ದ್ವಿಮಾತ್ರಾಕ್ಷರ ಅಧಿಕವಾಗಿದೆ. ಇದನ್ನು 'ರೂಪುಗೊಂಡದಿನ' ಎಂದಿಟ್ಟದ್ದರೆ ಮಾತ್ರೆ ಮತ್ತು ಗಣದ ಲೆಕ್ಕ ಸರಿಹೋಗುತ್ತಿತ್ತು. ಹಾಗೆಯೇ ಈ ಬಂಧದ ಕೊನೆಯ ಸಾಲಿನಲ್ಲಿ ಕೂಡ 'ನಂ' ಎಂಬೊಂದು ಅಕ್ಷರವು ಛಂದೋದೃಷ್ಟಿಯಿಂದ ಅಧಿಕವಾಗಿಯೇ ನಿಲ್ಲುತ್ತದೆ. ಇದನ್ನು 'ಲಲಿತರಗಳೆ' ಎಂದು ಕವಿಗಳು ಕರೆದಿಲ್ಲ; ನಾವು ಹೋಲಿಕೆ ಮಾಡಿದಾಗ ತಿಳಿದು ಬರುವ ಅಂಶವಿದು. ಇದೇಕೆ ಹೀಗಾಗಿದೆ? ಇದಕ್ಕೆ ಪ್ರೇರಣೆಯೆಲ್ಲಿ? ಇದು ಮಹಾಕವಿ ಕುವೆಂಪು ಅವರ 'ರಾಮಾಯಣ ದರ್ಶನಂ' ಕಾವ್ಯದ ಮಹಾಛಂದಸ್ಸಿನ ಪ್ರಭಾವವಿರಬಹುದು.

ಉತ್ಸಾಹ ರಗಳೆಯ ಲಯವನ್ನು ಬಳಸಿಕೊಂಡು ಚಿಕ್ಕ ಪಾದಗಳ ಕವಿತೆ ಹೆಣೆಯುವಲ್ಲಿಯೂ ಇವರು ಮಾಡಿಕೊಂಡ ವ್ಯತ್ಯಾಸ ಲಕ್ಷ್ಯಾರ್ಹವಾಗಿದೆ—

ನಮ್ಮ ಮನೆಗೆ ತುಸ ಎದುರು
ಕಾಂಬುದದೋ ಪುಷ್ಪತರು
ತಿಲಕ ಪುಷ್ಪವೆಂಬರದನು
ಅಹುದೊ ಏನೊ ಕಾಣೆ ಹದನು[11]

ಉದಾಹೃತ ಪಾದಗಳಲ್ಲಿ ಮೂರು ಕಡೆಗೆ ವಿಶೇಷ ಲಕ್ಷ್ಯ ಹರಿಸಬೇಕಾಗಿದೆ. 'ತುಸ' ಎಂಬುದನ್ನು 'ತುಸಾ' ಎಂದು. 'ತರು' ಎಂಬುದನ್ನು 'ತರೂ' ಎಂದು ಧಾಟಿಗಾಗಿ ಉಚ್ಚರಿಸಬೇಕಾಗುತ್ತದೆ. ಆಗ ಮಾತ್ರಾಸಂಖ್ಯೆ ಸರಿಹೋಗುವುದು. ಮೊದಲನೆಯ ಅಕ್ಷರ ಲಘುವಾಗಿರುವ ತ್ರಿಮಾತ್ರಾಗಣ ಹಿಂದಿನವರಿಗೆ ವ್ಯಾವಹಾರ್ಯವಾಗಿದ್ದಿಲ್ಲ. ನವೋದಯ ಕವಿಗಳು ಅಂಥವನ್ನು ಬಳಸಿಕೊಳ್ಳುವುದರಲ್ಲಿ ಸೊಗಸನ್ನು ಕಂಡಿದ್ದಾರೆ.

ಈ ಕೆಳಗಿನ ಪದ್ಯಗಳು ನಾಲ್ಕು ಮಾತ್ರೆಯ ಗಣಗಳ ವಿನ್ಯಾಸವುಳ್ಳವು. ಮಾತ್ರಾಸಂಖ್ಯೆಯಲ್ಲಿ ಸಮನಾದರೂ ಗಣದೊಳಗಣ ಗುರುಲಘುವಿನ್ಯಾಸದಲ್ಲಿ ಏರುಪೇರುಗಳಿವೆ. ಇದೊಂದು ಬಗೆಯ ಶರಷಟ್ಪದಿ—

ಶರತ್ ಕಾಲದಲಿ। ನಭದ ನಿ।ಲಯದಲಿ।
ಮಣಿದೀ।ಪದ ಗಡ।ಣ
ಅಶ್ರುತ।ಗಾನದ। ಸ್ವರಸೋ।ಪಾನದ।
ಕಾಣುವ। ಬೆಳಕಿನ। ತನನ।

---

11 ಮುಗಿಯದ ಮಾಯೆ, ಪುಟ ೧೦.

ಸುರಗಾ|ಯಕಿ ಕಾ|ನಲ್ಲಿ ನಾಯಕಿ|
ಗಂಧರ್ವಗಾನ ವೃಂದಕ್ಕೆ
ಸುಸ್ವರಾ|ಲೋಚನ| ಪ್ರೇರಣಾ|ವರೋಚನ|
ಬಾನ್ ಕೇ|ರಿಗೆ ಆ|ನಂದ|ಕ್ಕೆ[12]

ಮೇಲೆ ಉದಾಹರಿಸಿದ ಸಾಲುಗಳಲ್ಲಿ ಎರಡನೆಯ ನುಡಿಯ ಉತ್ತರಾರ್ಧ ಮಾತ್ರ ಶರಷಟ್ಪದಿಯ ಸರಿಯಾದ ಪದ್ಯಾರ್ಧ. ಉಳಿದವುಗಳಲ್ಲಿ ಗಣಗಳು ಚೆಲ್ಲಾಟವಾಡಿವೆ. ಇದರಿಂದ ಪದ್ಯದ ನಡೆ ಭಾವಾಭಿವ್ಯಕ್ತಿಗೆ ಕಳೆಗೊಟ್ಟಿರುವುದು ನಿಜ. ನಮ್ಮ ದೃಷ್ಟಿ ಇಲ್ಲಿ ಛಂದಸ್ಸಿನ ಬಗ್ಗೆ; ಅರ್ಥದ ಭಾವದ ಬಗ್ಗೆ ಅಲ್ಲ. 'ಶರತ್ಕಾಲದಲಿ' ಎಂಬಲ್ಲಿ ಒಟ್ಟಿಗೆ ಎಂಟು ಮಾತ್ರೆಗಳು; ಇಲ್ಲಿ ನಾಲ್ಕು ಮಾತ್ರೆಗಳ ಎರಡು ಗಣಗಳನ್ನು ಕಾಣಲಿಕ್ಕಾಗುವುದಿಲ್ಲ. ಏಕೆಂದರೆ ಯಗಣದಿಂದ ಇದು ಪ್ರಾರಂಭಗೊಂಡಿದೆ. ಹಾಗೆಯೇ 'ಕಾಣುವ ಬೆಳಕಿನ ತನನ' ಎಂಬಲ್ಲಿ ಶರಷಟ್ಪದಿಯ ಪಾದಾಂತ್ಯಕ್ಕೆ ಎರಡು ಮಾತ್ರೆಗಳು ಸಂಖ್ಯೆಯಲ್ಲಿ ಕಡಿಮೆಯಾಗಿವೆ. ಎರಡನೆಯ ನುಡಿಯಲ್ಲಿ 'ನಾಯಕಿ' ಎಂಬುದರ ಅಂತ್ಯಾಕ್ಷರವನ್ನು 'ಕೀ' ಎಂದು ದೀರ್ಘವಾಗಿ ಪರಿಗಣಿಸಬೇಕಾಗುತ್ತದೆ. ಅಷ್ಟೇ ಅಲ್ಲ 'ನಲ್ಲಿನಾಯಕೀ' ಎನ್ನುವಾಗ ನಾಲ್ಕುಮಾತ್ರೆಗಳ ಎರಡು ಗಣಗಳಾಗುವ ಬದಲಾಗಿ 'ಮೂರು-ಮೂರು-ಎರಡು' ಎಂಬ ಮಾತ್ರಾಸಂಖ್ಯೆ ಬರುತ್ತದೆ. 'ಗಂಧರ್ವಗಾನವೃಂದಕ್ಕೆ' ಎಂಬಲ್ಲಿಯೂ ಒಟ್ಟು ಮಾತ್ರಾ ಸಂಖ್ಯೆ ಸಹಜವಾಗಿ ಹದಿನಾಲ್ಕು. ಇದರಲ್ಲಿ [illegible] ಸ್ಪಷ್ಟವಾಗಿರುತ್ತದೆ.

ಭಾಮಿನೀ ಷಟ್ಪದಿಯಲ್ಲಿ ಬರುವ ಮೂರು ಮತ್ತು ನಾಲ್ಕು ಮಾತ್ರೆಗಳ ಗಣವಿನ್ಯಾಸವನ್ನಿಟ್ಟು, ದ್ವಿತೀಯಾಕ್ಷರ ಪ್ರಾಸಬದ್ಧವಾಗಿ ರಚಿತವಾದ ದ್ವಿಪದಿಗೆ ಈ ಕೆಳಗಿನದೊಂದು ಉದಾಹರಣೆ (ಅದರ ಎರಡು ಸಾಲುಗಳನ್ನಿಲ್ಲಿ ಒಂದಾಗಿ ಜೋಡಿಸಿದೆ)

ಭಾರತದ ಮನೆಯಲ್ಲಿ|ಭಾರತರೆಲ್ಲ|ರೊಂದೇ|ಮನೆತನ
ಯಾರೆ|ಮನೆಯ|ನೊಡೆಯ|ಬಂದರು|ಕೋಟೆ.ಯಾಗಲಿ|ಒಮ್ಮ|ನ[13]

ಇಲ್ಲಿ [illegible] ಸರಳವಾಗಿ ನಾದಪೂರಕವಾಗಿ ಅನುಚಿತ ಅನ್ವಯಗಳಿಲ್ಲ. [illegible] ಅರ್ಥವಾದರೂ ಇಂಬಾಗಿದೆ; ಕವಿಯ ಸರಳ ರಚನಾಸಾಮರ್ಥ್ಯಕ್ಕೆ ಒರೆಗಲ್ಲಾಗಿದೆ.

ಅಂಶಛಂದಸ್ಸು

ಕವಿತೆಯಲ್ಲಿ ಗೇಯಗುಣಕ್ಕೂ ಭಾವಪ್ರಕಾಶನಕ್ಕೂ ಹೆಚ್ಚು ಸಹಕಾರಿಯಾಗುವಂತಹದ್ದು, ಅಂಶಲಯ ವಿನ್ಯಾಸಗಳು. ಆದುದರಿಂದಲೇ ರಾಘವ ಅವರು ಅಂಶಗಣಘಟಿತವಾಗಿ ಅನೇಕ ಕವನಗಳನ್ನು ರಚಿಸಿದ್ದಾರೆ. ಶುದ್ಧವಾಗಿ ಅಂಶಗಣಗಳಿಂದಲೇ

12 ಗೀತಭಾರತಿ ಪುಟ ೨೬.

13 ಅದರಲ್ಲೇ, ಪುಟ ೫೪.

ರಚಿತವಾದ ಸಾಂಗತ್ಯ-ಪಿರಿಯಕ್ಕರಗಳೂ ಇತರ ರಚನೆಗಳೂ ಇವೆ. ಕೆಲವೆಡೆ ಸಾಂಗತ್ಯವೆಂದು, ಸೊಬಗಿನ ಸೋನೆಯೆಂದು ಹೆಸರಿಟ್ಟುಕೊಳ್ಳದೆಯೂ ಆ ಛಂದಸ್ಸಿನಲ್ಲಿ ಕೃತಿ ರಚನೆಯನ್ನು ಕಾಣಿಸಿದ್ದಾರೆ. 'ಒಂದು ಹಕ್ಕಿಯ ಹೇಳಿಕೆ' ಎಂಬ ಕವನವಿದು—

ಚಕ್ಕಳ ಮೂಳೆಯ ಪಂಜರದೊಳಗೆ
ಸೋಹಂ ಪಕ್ಷಿಯು ನಾನಲ್ಲ;
ಕಾಳಿನಾಸೆಗೆ ಕಣಿ ಬೇಟಿಯೆತ್ತುವ
ಗೂಡಿನ ಗಿಳಿಯೂ ನಾನಲ್ಲ.[14]

ಹಾಡುವ ಮಟ್ಟುಗನುಗುಣವಾಗಿ ಪದ್ಯವಿದು ಸಾಂಗತ್ಯವೂ ಆಗಬಲ್ಲುದು. 'ಸೊಬಗಿನ ಸೋನೆ'ಯ ಛಂದಸ್ಸೂ ಎನಿಸಬಲ್ಲುದು. ಸೋಹಂ, ಕಾಳಿ. ಗಿಳಿಯೂ- ಎಂಬ ಗಣಾಕ್ಷರಗಳನ್ನು ವಿಷ್ಣುಗಣ ಸ್ಥಾನದಲ್ಲಿ ಬಂದ ಬ್ರಹ್ಮಗಣಗಳೆಂದು ತಿಳಿದುಕೊಂಡರೆ ಇದು 'ಸೊಬಗಿನ ಸೋನೆ' (ಏಳು ವಿಷ್ಣುಗಣಗಳುಳ್ಳ ಪದ್ಯಾರ್ಧ) ಎಂಬ ಛಂದಸ್ಸಾಗುತ್ತದೆ. 'ಕಾಳಿ' ಎಂಬುದನ್ನು ಮಾತ್ರವೆ ವಿಷ್ಣುಗಣ ಸ್ಥಾನದ ಬ್ರಹ್ಮಗಣವಾಗಿ ಗಣಿಸಿಕೊಂಡು ಓದಿದರೆ ಸಾಂಗತ್ಯವಾಗುವುದು.

ಉದಾ: ಸಾಂಗತ್ಯದ ಗಣ ವಿಭಾಗ—

ಚಕ್ಕಳ| ಮೂಳೆಯ| ಪಂಜರ|ದೊಳಗೆ
ಸೋಹಂ ಪ|ಕ್ಷಿಯು ನಾ|ನಲ್ಲ|
ಕಾಳಿ|ನಾಸೆಗೆ| ಕಣಿಬೇಟಿ|ಯೆತ್ತುವ
ಗೂಡಿನ|ಗಿಳಿಯೂ ನಾ|ನಲ್ಲ|

ಸೊಬಗಿನ ಸೋನೆಯ ಗಣವಿಭಾಗ—

ಚಕ್ಕಳ| ಮೂಳೆಯ| ಪಂಜರ|ದೊಳಗೆ
ಸೋಹಂ| ಪಕ್ಷಿಯು| ನಾನಲ್ಲ|
ಕಾಳಿ|ನಾಸೆಗೆ| ಕಣಿ ಬೇಟಿ|ಯೆತ್ತುವ
ಗೂಡಿನ|ಗಿಳಿಯೂ|ನಾನಲ್ಲ|

ಇದೇ ಕವನದ ಎರಡನೆಯ ನುಡಿಯಲ್ಲಿ ಪೂರ್ವಾರ್ಧವು ಸಾಂಗತ್ಯವಾಗಿದೆ. ಉತ್ತರಾರ್ಧವು 'ಸೊಬಗಿನ ಸೋನೆ' ಯದಾಗಿದೆ. ಕೊನೆಯ ನುಡಿಯಲ್ಲಿ ಎರಡುಕಡೆ ಅಂಶಗಣವು ಮಾತ್ರಾಗಣವಾಗಿ ಮಾರ್ಪಟ್ಟಿರುದು ಕಂಡುಬರುತ್ತದೆ. ಹಿಂದೆ ಉದಾಹರಿಸಲಾದ 'ನಡಸುವ ಕೈ' (ಬೀಸಿ ಬಂದ ಗಾಳಿ, ಪುಟ ೩೬) ಇದು ಕೇವಲ ಗದ್ಯದ ಸಂಭಾಷಣೆಯಂತಿದ್ದರೂ ಅಂಶಲಯವುಳ್ಳದಾಗಿ ಪದ್ಯದ ಛಾಯೆಯಿಂದ ಥಾಟ

---

14 ಬೀಸಿ ಬಂದಗಾಳಿ, ಪುಟ ೩೬

ಕೊಡುವುದೆಂಬುದು ಪರೀಕ್ಷೆಯಿಂದ ಕಂಡುಬರುವ ಅಂಶ. ಅಂಶ ವಿನ್ಯಾಸ (ಬೀಸಿಬಂದ ಗಾಳಿ, ಪುಟ ೩೭), ಸೊನ್ನೆ (ಅದಲ್ಲೀ. ಪುಟ ೭೮), ಮಲ್ಲಿಗೆ ಹೊಳದಾಗೆ (ಹಂಸಪಥ, ಪುಟ ೧೩) ಇವುಗಳಲ್ಲೆಲ್ಲ ಅಂಶಲಯವನ್ನು ಚೆನ್ನಾಗಿ ಗುರುತಿಸಬಹುದು. ಇದೊಂದು ಒಂಟಿ ಪದ (ವಾಕ್ಯ) ತಾನು ಸೇರಿಸಿಕೊಳ್ಳುವಂತೆ ಸಾಂಗತ್ಯವಾಗಿ ಕುಳಿತಿದೆ—

ನನನರ|ಕ್ತದ ರುಚಿ| ಕಂಡ ಹು|ಲಿಯುದೊಮ್ಮೆ|
ನರನ ಬೇ|ಟೆಯ ನೆಂದೂ| ಬಿಡದು|
ಪರಮಾಥ|ಕಾರದ|ರುಚಿ ಕಂಡ| ಮೇಲೊಮ್ಮೆ|
ವರಯತಿ|ಯಾದರೂ| ಬಿಡನು|[15]

‘ಎಲ್ಲಿತ್ತು ಮೊದಲು’[16] ಎಂಬ ಕವನ ಛಂದೋವೃತ್ತಿಯಿಂದ ವೈಶಿಷ್ಟ್ಯವನ್ನುಳ್ಳದು. ಐದುಮಾತ್ರೆಗಳ ಗಣಗಳನ್ನಾಗಿ ಗಣಿಸಿದಾಗ ಅದೊಂದು ವೀರಚೌಪದಿಯಾಗುತ್ತದೆ. ಅಂಶ ಘಟಕವಾಗಿಯೂ ಅದನ್ನೋದಲು ಬರುತ್ತದೆ. ಆಗ ಒಂದೆರಡೆಡೆ ವಿಷ್ಣುಗಣಗಳು ರುದ್ರರೂಪ ತಾಳಿದುದು ಕಾಣಸಬಹುದು.

‘ಸೊನ್ನೆ’ ಎಂಬ ಕವಿತೆಯೊಂದು ಮೇಲುನೋಟಕ್ಕೆ ಪದ್ಯ ಪಾದರೂಪವನ್ನಿತ್ತು ರಚಿಸಿದ ಗದ್ಯವಾಗಿ ಕಾಣಿಸುತ್ತದೆ. ಅದರ ಛಂದಸ್ಸಿನ ಒಳಗಟ್ಟನ್ನರಿತರೆ ಸ್ವಾರಸ್ಯವೆನಿಸುತ್ತದೆ. ಅದೊಂದು ಅಂಶಲಯವನ್ನುಳ್ಳ ರಚನೆಯೇ ಸರಿ. ಕೆಲವು ಸಾಲುಗಳನ್ನಿಲ್ಲಿ ಕಾಣಿಸಿ ಗಣಗಳನ್ನು ವಿಭಜಿಸಿ ತೋರಿಸಲಾಗಿದೆ—

ನಾನೀಗ|ಮುದುಕ| ನನಗೂ| ಗೊತ್ತು|
ಹತ್ತಿರ|ಹತ್ತಿರ| ಮೂರು ಇ| ಪ್ಪತ್ತು|
ಮೇಲೊಂದು| ಹತ್ತು| ಮುಳುಗುವ| ಹೊತ್ತು|
ಸರ್ ಎಂಬ| ಬಿರುದೇ|ಮುಜುಮಾನ್ಯ| ಬಂದಿದೆ|
ತಾತನ| ಪದವಿಗೆ| ವೀಳ್ಯವ|ನೆತ್ತಿದೆ|
ಪಯಣದ|ಕೊನೆಗಿ|ನ್ನೂ ತುಸ| ಹೊತ್ತಿದೆ|[17]

ಈ ಕವನ ಹೀಗೆ ಅಂಶಲಯದಿಂದ ಓದಿದಂತೆ ಓದುವುದು ಇದರದೊಂದು ಬಗೆ.

ಕವಿಗಳು [illegible] ಚೆನ್ನಾಗಿ ನೋಡಿ, ಸಮಕಾಲೀನವನ್ನು [illegible], [illegible] ವ್ಯಕ್ತಪಡಿಸಿ [illegible]

15 ಹಂಸಪಥ, ಪುಟ ೨೦ ‘ರುಚಿ’
16 ಗೀತ ಭಾರತಿ, ಪುಟ ೩೯
17 ಬೀಸಿಬಂದ ಗಾಳಿ, ಪುಟ ೭೮

ಕಾವ್ಯರಚನೆಗಳಿಂದ ತೋರಿಸಿಕೊಟ್ಟಿದ್ದಾರೆ. ಹಿಂದಿನವರು ಪ್ರಯೋಗಿಸಿದ ಛಂದಸ್ಸನ್ನೇ ಇವರು ಬಳಸಿದರೂ ಅದರಲ್ಲೇ ಇದು ಹೊಸ ಛಂದಸ್ಸೆಂಬಂತೆ ಕಾಣಿಸುವುದರಲ್ಲಿ ಸಫಲರಾಗಿದ್ದಾರೆ. ಸಕಲ ಲಕ್ಷಣಕ್ಕಾಗಿ ಬಂಧವನ್ನು ಬಿಗುಪುಮಾಡುವ ಅತ್ತಣ ಪ್ರಾಚೀನರನ್ನು ಹಿಂಬಾಲಿಸದೆ, ಇತ್ತಣ ನವ್ಯದ ಗಮ್ಯಾರ್ಥ ಪ್ರತಿಮೆಗಳ ನೆಗತವನ್ನಾಲಿಸದೆ, ಗಟ್ಟಿನೆಲದ ನವೋದಯದ ಕವಿಗಳ ಸಾಲಿನಲ್ಲಿ ನಿಂತಿದ್ದಾರೆ. ಅದರೂ ಅವರೆಲ್ಲ ದ್ವಿತೀಯಾಕ್ಷರ ಪ್ರಾಸವನ್ನು ಹೇಯವಾಗಿ ಗಣಿಸಿದರೆ, ಇವರು ಉಪಾದೇಯವೆಂದು ಹಲವು ಕಡೆ ಸಹಜವಾಗಿ ಅದನ್ನಿಟ್ಟು ತೋರಿಸಿದ್ದಾರೆ. ಎಷ್ಟೋ ಕಡೆಗಳಲ್ಲಿ ಅನುಪ್ರಾಸ-ಅಂತ್ಯಪ್ರಾಸಗಳನ್ನಿಟ್ಟು ರಚನೆಯನ್ನು ಶ್ರಾವ್ಯಗೊಳಿಸಿದ್ದಾರೆ. ಪಾದರಚನೆಯಲ್ಲಿ ವೈಶಿಷ್ಟ್ಯವನ್ನನುಸರಿಸಿದ್ದಾರೆ. ಇವುಗಳಿಂದ ಇವರ ಕವನಗಳ ಛಂದಃಪ್ರಯೋಗ ವೈಶಿಷ್ಟ್ಯಮಯವೆನಿಸುತ್ತದೆ.

ಎಂ. ವಿ. ಸೀ ಅವರ ಭಾವ ಪ್ರಬಂಧಗಳು

ಪ್ರೊ|| ಜಿ. ವೆಂಕಟಸುಬ್ಬಯ್ಯ

'ಕನ್ನಡದಲ್ಲಿ ಭಾವ ಪ್ರಬಂಧ'[1]ಗಳೆಂಬ ಸಾಹಿತ್ಯ ಪ್ರಕಾರವು ಹೆಚ್ಚು ಬೆಳೆದಿಲ್ಲ. ಭಾವ ಪ್ರಬಂಧಗಳ ರಚನೆಯೂ ಅಷ್ಟೇನೂ ಸುಲಭವಲ್ಲ: ಭಾವಗೀತೆಯು ಅಚ್ಚುಕಟ್ಟು ಕಷ್ಟಸಾಧ್ಯವಾಗಿರುವಂತೆಯೇ ಇದೂ ಕಷ್ಟ. ಕಾದಂಬರಿ ಕಥೆ ಹೇಳಿದರೆ, ಕಾವ್ಯ ಉದಾತ್ತ ಜೀವನದ ಧ್ಯೇಯವನ್ನು ಪ್ರತಿಪಾದಿಸಿದರೆ, ಭಾವಪ್ರಬಂಧವು ಲೇಖಕನ ವ್ಯಕ್ತಿತ್ವವನ್ನೂ ಅವನ ಅಂತರಂಗದ ಆಲೋಚನೆಗಳನ್ನೂ ಚಿತ್ರಿಸುತ್ತದೆ. ಭಾವಪ್ರಬಂಧಗಳ ಮೂಲಕ ಓದುಗನಿಗೆ ಲೇಖಕನು ಹೇಗೋ ಪರಿಚಿತನಾಗಿ ಬಿಡುತ್ತಾನೆ. ತನ್ನ ವಿಚಾರವನ್ನೇ ಹೇಳದ ಫ್ರಾನ್ಸಿಸ್ ಬೇಕನ್ (Francis Bacon: 1561-1626) ಅಂಥವನು ಕೂಡ ತನಗೆ ಗೊತ್ತಿಲ್ಲದೆಯೆ ತನ್ನ ವ್ಯಕ್ತಿತ್ವದ ಪರಿಚಯ ಮಾಡಿಕೊಡುತ್ತಾನೆ. ಫ್ರಾನ್ಸ್‌ದೇಶದ ಮಾಂಟೇನನ (Montaigne: 1533-1592) ಭಾವ ಪ್ರಬಂಧಗಳು 1603 ರಲ್ಲಿ ಇಂಗ್ಲೆಂಡಿನಲ್ಲಿ ಅನುವಾದಗೊಂಡಮೇಲೆ[2] ಅಲ್ಲಿ ಈ ಸಾಹಿತ್ಯ ಸ್ವರೂಪ ಹೆಚ್ಚು ಜನಪ್ರಿಯವಾಯಿತು. ಅಲ್ಲಿಂದಲೇ ಇದು ನಮಗೆ ಪರಿಚಯವಾದುದು. ಈ ಸ್ವರೂಪಕ್ಕೆ ಮಾಂಟೇನನೇ ಜನಕನಾಗಿರುವುದರಿಂದ ಅವನ ಅಭಿಪ್ರಾಯವನ್ನು ನಾವು ಗಮನಿಸಿದರೆ ಈ ಸಾಹಿತ್ಯಸ್ವರೂಪವನ್ನು ಅರ್ಥಮಾಡಿಕೊಳ್ಳಲು ಸಹಾಯವಾಗುತ್ತದೆ. ಅವನ ಅಭಿಪ್ರಾಯದಲ್ಲಿ ತನ್ನ ಅಂತರಂಗವನ್ನು ದಾಕ್ಷಿಣ್ಯವು ವೇಷಭೂಷಣಗಳಿಲ್ಲದೆ, ತಿರುಚುಮುರಿಚಿಲ್ಲದೆ. ಪ್ರಾಮಾಣಿಕವಾಗಿ ಚಿತ್ರಿಸುವುದೇ ಪ್ರಬಂಧಕಾರನ ದೃಷ್ಟಿ.

---

1 ಇಂಗ್ಲಿಷಿನ The Essay ಎಂಬ ಸಾಹಿತ್ಯರೂಪಕ್ಕೆ, ಕನ್ನಡದಲ್ಲಿ ಸರ್ವಗ್ರಾಹ್ಯವಾಗಿರುವ ಹೊಸದೊಂದು ಪದ ಇನ್ನೂ ರೂಪಗೊಂಡಿಲ್ಲ. ಪ್ರಬಂಧ, ಲಘು ಪ್ರಬಂಧ, ಹರಟೆ, ಗದ್ಯಚಿತ್ರ, ನಿಬಂಧ, ನ್ಯಾಸ ಮುಂತಾದವುಗಳಿಗಿಂತ 'ಭಾವಪ್ರಬಂಧ' ಎಂಬುದು ಹೆಚ್ಚು ಉಚಿತ ಎಂದು ನನ್ನ ಅಭಿಪ್ರಾಯ.

2 John Florio ಎಂಬಾತನು ಮೊದಲು ಅನುವಾದ ಮಾಡಿದ್ದಾನೆ.

"I desire therein to be delineated in mine own genuine, Simple and ordinarie fashion, without Contention, art or Study ; for it is my selfe I pourtray."

ಮಾಂಟೇನನ ಈ ನಿರ್ಧಾರವನ್ನು ಈಚಿನವರೆಲ್ಲರೂ ಅನುಸರಿಸಿದ್ದಾರೆ – ಒಪ್ಪಿಯೋ, ಒಪ್ಪದೆಯೋ. ಆದುದರಿಂದ, ಭಾವ ಪ್ರಬಂಧಗಳಲ್ಲಿ ಪ್ರಮುಖವಾಗಿ ಲೇಖಕನ ವ್ಯಕ್ತಿತ್ವನಿರೂಪಣವಿರುತ್ತದೆಂದು ನಾವು ನಿರ್ಧರಿಸಬಹುದು.

ಈ ವ್ಯಕ್ತಿತ್ವ ನಿರೂಪಣಕ್ಕೆ ಯಾವೊಂದು ಮಾರ್ಗವೂ ನಿಶ್ಚಿತವಾಗಿಲ್ಲ. ಶ್ರೇಷ್ಠವಾದ ಭಾವಪ್ರಬಂಧಗಳ ಶಬ್ದಯವನಿಕೆ ಅತಿಸೂಕ್ಷ್ಮ, ಬಹುಪಾರದರ್ಶಕ. ಯಾವ ಮಾರ್ಗವಾದರೂ ಸರಿಯೆ, ತನ್ಮೂಲಕವೇ ಲೇಖಕ ಪರಿಚಿತನಾಗುತ್ತಾನೆ.

ಭಾವ ಪ್ರಬಂಧಗಳು ಒಂದು ವಿಷಯವನ್ನು ಕುರಿತ ಸಕಲ ವಿಚಾರ ಪೂರ್ಣ ವಿವರಣೆಯಲ್ಲ; ಲೇಖಕನ ಮನಸ್ಸಿನ ಮೇಲೆ ಒಂದು ವಸ್ತು ಆಯಾ ಸಂದರ್ಭದಲ್ಲಿ ಮಾಡಿದ ಪರಿಣಾಮದ ನಿರೂಪಣೆ. ಆದುದರಿಂದ ಭಾವಪ್ರಬಂಧಗಳಲ್ಲಿ ಈ ಸ್ವವಿಷಯ ಸಂಬಂಧವೇ ಪ್ರಧಾನವಾದುದು. ಮಾಂಟೇನನು ತನಗೆ ತಾನೊಬ್ಬನೇ ಸಂಪೂರ್ಣ ಪರಿಚಿತನೆಂದೂ ಆದುದರಿಂದ ತನ್ನನ್ನು ಮಾತ್ರ ಸತ್ಯಪೂರ್ಣವಾಗಿ ವಿವರಿಸಲು ಸಾಧ್ಯವೆಂದೂ ಹೇಳುವುದು ಇದಕ್ಕಾಗಿಯೇ. ಈ ಸ್ವಪ್ರಾಧಾನ್ಯದಲ್ಲಿ ಸ್ವಪ್ರತಿಷ್ಠೆಯೇನೂ ಇಲ್ಲ. "I Speak unto paper as unto the first man I meet" ಎಂಬುದು ಮಾಂಟೇನನ ಮತ್ತೊಂದು ಮಾತು.

ಓದುಗನೂ ಕೂಡ ಸಜ್ಜನರ ದೃಷ್ಟಿಯಿಂದ ಭಾವಪ್ರಬಂಧಗಳನ್ನು ಓದಬೇಕು. ಹೊಸವ್ಯಕ್ತಿಯನ್ನು ಅರ್ಥಮಾಡಿಕೊಳ್ಳುವ ಆಸಕ್ತಿಯಿರಬೇಕೇ ಹೊರತು, ಹೊಂಚು ಹಾಕಿ ರಂಧ್ರಾನ್ವೇಷಣೆ ಮಾಡುವ ಕುತೂಹಲವಿರಬಾರದು ಅವನಿಗೆ. ಈ ದೃಷ್ಟಿಯಿದ್ದರೆ ಭಾವಪ್ರಬಂಧಗಳು ಲೇಖಕನ ಜೀವನ ಚರಿತ್ರೆಯ ತುಣುಕುಗಳಾಗಿ ಕಾಣುತ್ತವೆ.

ಬಹುಬೇಗ ಓದಿ ಪೂರೈಸುವಂತಿರಬೇಕಾದುದು ಭಾವ ಪ್ರಬಂಧಗಳ ಮತ್ತೊಂದು ಗುಣ. ಅದರಲ್ಲಿ ತರ್ಕಬದ್ಧವಾದ ದೀರ್ಘ ವಾದಸರಣಿಯಾಗಲಿ, ಸಿದ್ಧಾಂತ ಪ್ರತಿಪಾದನೆಯಾಗಲಿ ಇರುವುದಿಲ್ಲ. ಅದೊಂದು ಚಿತ್ರವೇ ಹೊರತು ಕಥನವೂ ಅಲ್ಲ, ತತ್ವಪ್ರತಿಪಾದನೆಯೂ ಅಲ್ಲ. ಒಂದು ಭಾವದ ಕಲಾಪೂರ್ಣವಾದ ವಿಕಾಸ ಅದರಲ್ಲಿ ಕಂಡುಬರುತ್ತದೆ. "ಭೃಂಗದ ಬೆನ್ನೇರಿ ಬರುವ ಕಲ್ಪನಾವಿಲಾಸ"ಕ್ಕೆ ತತ್ವದ ಭಾರ ಜೋತುಬಿದ್ದರೆ, ಭೃಂಗವೇ ಭಂಗಕ್ಕೆ ಒಳಗಾಗುತ್ತದೆ.

ಸವಿಯಾದ, ತಿಳಿಯಾದ ಹಾಸ್ಯ ಭಾವಪ್ರಬಂಧಗಳ ಇನ್ನೊಂದು ಗುಣ. ಭಾವಗೀತೆಯಂತೆ ಭಾವ ಪ್ರಬಂಧವೂ ಹೃದಯಸ್ಪರ್ಶಿ, ಬುದ್ಧಿಗಮ್ಯವಲ್ಲ. ಲೇಖನ ಕ್ರಮದಲ್ಲಿ ಪ್ರಭಾವ ಅಯಾಚಿತವಾಗಿ, ಅಪ್ರಯಾಸವಾಗಿ ಪರಿಣಾಮಗೊಳ್ಳುತ್ತದೆ.

ಈ ಕಾರ್ಯದಲ್ಲಿ ಉಪಮಾ, ರೂಪಕ - ಮುಂತಾದ ಅಲಂಕಾರ ಪ್ರತಿಮೆಗಳ ಸಹಾಯವನ್ನು ಲೇಖಕರು ಪಡೆಯುವರು. ಆದರೆ ಅವುಗಳ ಪ್ರಯೋಗದಲ್ಲಿ 'ಬಿಗಿಪಟ್ಟು' ಕಾಣಬಾರದು; ಅನಾಯಾಸದ ಸೌಲಭ್ಯ ಕಾಣಿಸುತ್ತಿರಬೇಕು. ಬರಹವನ್ನು ಓದುಗನ ಮನಸ್ಸು ಅನುಭವಿಸಲಿ. ಓದುಗನಲ್ಲಿ ಸಹೃದಯ ಸವಿಯನ್ನು ಕಾಣಲಿ. ಹೃದಯದಲ್ಲಿ ಆನಂದದ ಅಮೃತವನ್ನು ಸುರಿಸುವುದರಲ್ಲಿ-ಸಂತೋಷ ಅನುಭವಿಸಿ, ಆಸ್ವಾದಿಸಬಲ್ಲವ ದಿವ್ಯ ಚಿನ್ಮಯಲೋಕದ ಭಾವ ಪ್ರಬಂಧವು ಜನ್ಮತಳೆಯುತ್ತದೆ. ಅದರ ಕಾರ್ಯ ಆನಂದ ದಾನ; ಪರಿಣಾಮ ಸುಖಾನುಭವ.

ಭಾವ ಪ್ರಬಂಧದ ಪ್ರಾರಂಭಕ್ಕಿಂತ ಹೆಚ್ಚಾಗಿ ಅದರ ಮುಕ್ತಾಯದಲ್ಲಿ ರಮಣೀಯತೆಯಿರಬೇಕು. ಆ ಸಮಾಪ್ತಿ ರಮಣೀಯತೆ ಭಾವ ದೇಗುಲದ ಕಲಶ. ಅದನ್ನು ಇಟ್ಟಮೇಲೆ ತಾನೆ ನಿರ್ಮಾಣ ಸಂಪೂರ್ಣವಾಗುವುದು ?

ಎಂ.ವಿ. ಸೀತಾರಾಮಯ್ಯನವರ ಪ್ರಾತಿನಿಧಿಕ ಭಾವಪ್ರಬಂಧಗಳಲ್ಲಿ ಭಾವವು ರೂಪುಗೊಳ್ಳುವ ಕ್ರಮವನ್ನು ನಿರೂಪಿಸಿ, ಅವುಗಳಲ್ಲಿ ನಾನು ಕಂಡ ಸವಿಯನ್ನು ಚಿತ್ರಿಸಿದ್ದೇನೆ. ಆ ಭಾವ ಪ್ರಬಂಧಗಳ ಆಸ್ವಾದನೆಗೆ ಇದು ಕೈಗಂಬವಾಗಬಹುದು.

* * *

ಡೊಂಬರು ಪ್ರಬಂಧ ವಿಲಿಯಂ ಹ್ಯಾಸ್‌ಲಿಟ್ (William Hazlitt) ಬರೆದಿರುವ "The Indian Jugglers" ಎಂಬುದರಿಂದ ಪ್ರೇರಿತವಾದ ಭಾವ ಪ್ರಬಂಧ. ಆಂಗ್ಲ ಭಾವಪ್ರಬಂಧ ಲೇಖಕರಲ್ಲಿ Hazlittನಿಗೆ ಪ್ರಮುಖಸ್ಥಾನವಿದೆ. ಈ ಲೇಖಕರ ಲೇಖನ ಪ್ರಯುಕ್ತಕ್ಕೂ ಕ್ರಮಕ್ಕೂ Hazlitt ತುಂಬ ಪ್ರಭಾವವನ್ನು ಬೀರಿದ್ದಾನೆ. ಈ ಭಾವ ಪ್ರಬಂಧದಲ್ಲಿ ಮೂಲಲೇಖನದ ಕೆಲವು ವಾಕ್ಯಗಳು ಕೂಡ ನೇರವಾಗಿ ಅನುವಾದಗೊಂಡಿವೆ. ಆದರೂ ಇತರ ಕೆಲವು ವಿಷಯಗಳು ಹೊಸದಾಗಿ ಸೇರಿಕೊಂಡು 'ಡೊಂಬರು' ಒಂದು ಸ್ವತಂತ್ರ ಕೃತಿಯ ಸ್ವರೂಪವನ್ನು ಪಡೆದಿದೆ.

ಇಲ್ಲಿ ಭಾವವು ರೂಪಗೊಳ್ಳುವ ಕ್ರಮವನ್ನು ಪರಿಶೀಲಿಸೋಣ. ಲೇಖಕರು ಮೊದಲು ಡೊಂಬರ ವೇಷಭೂಷಣಗಳ ಕಡೆಗೆ ನಮ್ಮ ಗಮನವನ್ನು ಸೆಳೆದು, ಆ ಬಳಿಕ ಡೊಂಬರ ಮುಖ್ಯಸ್ಥನ ಕೈಚಳಕದ ವಿವರಣೆಯನ್ನು ಕೊಡುತ್ತಾರೆ. "ಕಷ್ಟ ಪರಂಪರೆಯಿಂದ ಸಾಧ್ಯವಾದ ಕಾಠಿಣ್ಯದ ಗೆಲವೇ ಸೌಂದರ್ಯ" ವಾಗುತ್ತದೆಂಬುದನ್ನು ವಿವರಿಸುತ್ತಾ, "ಸ್ವಲ್ಪ ಕೈತಪ್ಪಿದರೆ ಆಟವೆಲ್ಲಾ ಆಯಿತು" ಎನ್ನುತ್ತಾರೆ. ಕೆಲವು ಅಸಾಧಾರಣವಾದ ಆಟಗಳನ್ನು ವಿವರಿಸಿ, ಕೆಲವು ಅಪ್ರಯೋಜಕವಾದ ಆಟಗಳನ್ನು ಹೇಗೆ ನಿರ್ವಹಿಸಬೇಕೆಂಬುದನ್ನು ತಿಳಿಸಿ, ಈ ವೃತ್ತಿಯವರಿಗೂ ಇತರರಿಗೂ ಇರುವ ಅಂತರವನ್ನು ಸ್ಪಷ್ಟಪಡಿಸುತ್ತಾರೆ. ಇತರ ವೃತ್ತಿಗಳಲ್ಲಿ ಪರಿಪೂರ್ಣವೆಂದು ಹೇಳಿ

ಕೊಳ್ಳಬಲ್ಲ ಯಾವೊಂದು ಕೃತಿಯೂ ದೊರೆಯುವುದಿಲ್ಲ. ಅತ್ತ ತಪ್ಪುಗಳಾಗಬಹುದು. ಆದರೆ ಡೊಂಬರಾತನ ಆಟದಲ್ಲಿ ಸ್ವಲ್ಪ ತಪ್ಪಾದರೂ, "ಆಟವಾಡುವವನ ಆಟವಾದ ಹಾಗೆಯೇ!" "ಒಟ್ಟಿನಲ್ಲಿ ಡೊಂಬನು ತನ್ನನ್ನು ತಾನು ಗೆಲ್ಲಲು ಪ್ರಯತ್ನಪಡುತ್ತಾನೆ, ಇನ್ನೊಬ್ಬನಿಗೆ ಸಮಾನನಾಗಬೇಕೆಂದಲ್ಲ."

ಇಷ್ಟು ಹೇಳಿದಮೇಲೆ ಲೇಖಕರಿಗೆ, ಚಿತ್ರಗಾರನವೃತ್ತಿ, ಕವಿಯ ನೆನಪಿಗೆ ಬಂದು ಡೊಂಬರಿಗೂ ಇವರಿಗೂ ಇರುವ ವ್ಯತ್ಯಾಸವನ್ನು ಒಂದು ಸುಂದರವಾದ ವಾಕ್ಯದಲ್ಲಿ ಕೇಂದ್ರೀಕರಿಸುತ್ತಾರೆ: "...ಕಲಾಕೌಶಲ್ಯದ ಎಲ್ಲೆಯನ್ನು ಮೀರಿ ಅನುಕರಿಸುವುದೇ ಚಿತ್ರಕಲೆಯ ಮೊದಲ ಹಂತ— ಕೈಗೆಲಸದ ಕೊನೆಯ ಹಂತ." ಈ ಮಾತು ಹೇಳಿದಮೇಲೆ, ಕಲೆಯ ವಿಚಾರವಾಗಿ ಇನ್ನೆರಡು ಮಾತು ಹೇಳಬೇಕೆನ್ನಿಸುತ್ತದೆ: "ಚಿತ್ರಕಾರನು ಬಣ್ಣಗಳ ಕವಿ; ಕವಿ ನುಡಿಗಳ ಚಿತ್ರಕಾರ" ಎಂದು ಸೂಕ್ಷ್ಮವಾಗಿ ನುಡಿದು, ಹೇಗೆ ಪ್ರತಿಭೆಗೆ ಯಾಂತ್ರಿಕವಾದ ಡೊಂಬನ ಅಭ್ಯಾಸದ ಬಲ ಸಾಲದು, ಅದಕ್ಕೆ ದೈವ ಬಲವೇ ಬೇಕು ಎಂಬುದನ್ನು ವಿಸ್ತರಿಸುತ್ತಾರೆ. "ಕಲ್ಪನಾ ಸಾಮ್ರಾಜ್ಯವನ್ನಾಳುವುದು ಬಲು ಕಷ್ಟ. ಅದರಲ್ಲಿ ಜಯ ಹೊಂದಿದವರು ಅತಿವಿರಳ. ಮಾರುತಿಯಂತೆ ಸಮುದ್ರವನ್ನಾದರೂ ಲಂಘಿಸಬಹುದು; ಕಲ್ಪನೆಯ ಕಡಲನ್ನು ದಾಟಿ ಪಾರಾಗಿ ಮೆರೆಯುವುದು ಕಷ್ಟ."

ಲೇಖಕರ ಭಾವನೆ ಮತ್ತೆ ಮುಂದೆ ನುಗ್ಗುತ್ತದೆ. ಕಲ್ಪನಾ ಕುಶಲತೆಯಿಂದ ಮಹತ್ವದ ಕಡೆಗೆ ಅವರ ಗಮನ ಹರಿಯುತ್ತದೆ. ಮಾಹಾತ್ಮ್ಯ ಯಾವುದು? "ಮಹತ್ವವೇ ಪ್ರತಿಭೆ. ಪ್ರತಿಭೆ ಅಮೃತ ಶಿಲೆ; ಮಹತ್ವವು ಅದರಿಂದ ನಿರ್ಮಿತವಾದ ಅಮರ ವಿಗ್ರಹ. ಪ್ರತಿಭಾಶಾಲಿಯ ಅಮರ ಕೀರ್ತಿ ನಿಲ್ಲುವುದು ಅವನ ಅಮರ ಕೃತಿಯಿಂದ. ಅವನ ಮಹತ್ವಕ್ಕೆ ಲಕ್ಷ್ಯ ಅವನ ಮಹತ್ವದ ಕೃತಿ." "ಒಂದು ಕೆಲಸವು ತನ್ನಲ್ಲೇ ಪರ್ಯವಸಾನವಾದರೆ ಅದು ಮಹಿಮೆಯುಳ್ಳದ್ದೆನಿಸಿಕೊಳ್ಳುವುದಿಲ್ಲ."

ಹೀಗೆ ಇಲ್ಲಿಯ ಭಾವನೆ ಯಾಂತ್ರಿಕ ಕೈಚಳಕದ ಸೌಂದರ್ಯದಿಂದ ಮಹತ್ವದ ಕಡೆಗೆ ಪ್ರಯಾಣಮಾಡಿ "ಯೋವೈ ಭೂಮಾ ತತ್ಸುಖಂ" ಎಂಬ ಉಪನಿಷದ್ವಾಕ್ಯವನ್ನು ನೆನೆದುಕೊಳ್ಳುತ್ತದೆ—ಬಾಯಿಯಲ್ಲಿ ಹೇಳುವುದಿಲ್ಲ.

ಭಾವನೆಯ ವಿಕಾಸದಲ್ಲಿ ಒಂದು ನಿರ್ದಿಷ್ಟ ಗುರಿಯಿರುವುದೂ, ಆ ಗುರಿಯ ಕಡೆ ಮುನ್ನಡೆಯುವಾಗ ಯಾವ ತಾರ್ಕಿಕ ಚಾತುರ್ಯವೂ ಇಲ್ಲದೆ ಓದುಗರನ್ನೂ ಕರದೊಯ್ಯುವುದೂ ಈ ಭಾವಪ್ರಬಂಧದ ಕೌಶಲ. ಕೆಲವು ವೇಳೆ ಭಾವನೆಯ ಪ್ರಗತಿಯಲ್ಲಿ ದೊಡ್ಡ ಪ್ರತಿಬಂಧಕಗಳು ಬಂದುಬಿಡುತ್ತವೆ. ಅವುಗಳನ್ನು ದಾಟುವುದರಲ್ಲಿಯೂ ಭಾವ ಪ್ರಬಂಧಕಾರನು ಜಾಣತನವನ್ನು ತೋರಿಸಬೇಕು. ಉದಾಹರಣೆಗೆ, ಈ ಭಾವಪ್ರಬಂಧದಲ್ಲಿ ಬರುವ ಈ ಭಾಗವನ್ನು ನೋಡಿ: "ಹಾಗಾದರೆ, ಒಬ್ಬ ನಟನು

ಮಾರಾಟವಾಗುವುದಿಲ್ಲವೆ? ತನ್ನ ಪತ್ನಿಯಿಂದ [illegible] ತನ್ನ ಒಂದು 'ಪ್ರತಿ'ಯನ್ನು ಇಡದೆ ಹೋದ ಪಾತ್ರಕ್ಕೆ ಅವನು ಮಾರಾಟವಾಗುತ್ತಾನೆಯೆ? ಇಲ್ಲವೆಂದು ನನಗೆ ತೋರುತ್ತದೆ. ಆದರೆ ಕಟುಕ ಟೀಕಾಕಾರರಾದ ಎ. ವಿ. ವರದಾಚಾರ್ಯರಿಗೆ ಈ ಮಾತುಗಳನ್ನು ಅನ್ವಯಿಸಬಾರದು; ಅವರು ಮಾರಾಟವಾಗುವುದಿಲ್ಲವೆಂದು ಹೇಳುವುದಕ್ಕಿಂತಲೂ, ಮಹತ್ವದ ವಿಷಯವಾಗಿ ವಾದಿಸುವುದನ್ನೇ [illegible]." ಹೀಗೆ ಬರೆಯುವುದರಲ್ಲಿ ಲೇಖಕರು ವರದಾಚಾರ್ಯರಿಗೆ ಗೌರವತೋರಿಸಿದ್ದೂ ಆಯಿತು; ತಮ್ಮ ಭಾವನೆಯನ್ನು ಮಂಡಿಸಿದಂತೆ ಆಯಿತು. ಇದು ಚಾತುರ್ಯ. ಆದರೆ ಕೇವಲ ಚಾತುರ್ಯದಿಂದ ಉತ್ತಮ ಭಾವ ಪ್ರಬಂಧಗಳು ಬರುವುದಿಲ್ಲ. ಈ ಲೇಖನದಲ್ಲಿ ಇತರ ಗುಣಗಳೂ ಸೇರಿವೆ.

ಭಾವ ಪ್ರಬಂಧಕ್ಕೆ ಇನ್ನೊಂದು ಒಳ್ಳೆಯ ಉದಾಹರಣೆ.

ಎಂ. ವಿ. ಸೀ. ಅವರ ಭಾವ ಪ್ರಬಂಧಗಳಲ್ಲೆಲ್ಲಾ ಹೆಚ್ಚು ಮೆಚ್ಚುಗೆಯಾಗುವ ಭಾವ ಪ್ರಬಂಧ, ಮುಗಿಲುಗಳು.

ಮುಗಿಲುಗಳಿಗೆ ಮನ ಸೋಲದ ಭಾವಜೀವಿ ಯಾರಿದ್ದಾರೆ?[3] "I change, but I cannot die" ಎನ್ನುವ ಸ್ವಾತಂತ್ರ್ಯ ಪ್ರೇಮಿಗಳು, ಸಾಹಸಿಗಳು ಈ ಮೋಡಗಳು. ನಮ್ಮ ಪೂರ್ವಕವಿಗಳು ಈ ಮುಗಿಲುಗಳ ವಿಚಾರದಲ್ಲಿ ಇನ್ನೆಷ್ಟು ಬಗೆ ವರ್ಣಿಸಿದ್ದಾರೆಯೋ! [illegible] ವೈಭವದ ಬಣ್ಣನೆಯಲ್ಲಿ ಕವಿಕಲ್ಪನೆಯ ವೈಭವವೆಲ್ಲ [illegible]ವಾಗಿದೆ. ಹೆಸರುಗಳಿಂದ ಹಿಡಿದು ಪ್ರತಿಭಾಶಾಲಿಯಾದ [illegible] ಹೋಗುವ ವರೆಗೆ ಇವುಗಳ ಪ್ರಭಾವ ಹರಡಿದೆ. ಅಂತಹವಸ್ತುವನ್ನು ಕುರಿತ ಭಾವ ಪ್ರಬಂಧವಿದು.

ಇದರಲ್ಲಿ ಲೇಖಕರು ಮೊದಲು ಆ ಮುಗಿಲುಗಳು ಎಲ್ಲಿಂದ ಬಂದವು, ಎಲ್ಲಿಗೆ ಹೋದವು ಎಂದು ಆಶ್ಚರ್ಯ ಪಡುತ್ತಾರೆ. ವರ್ಷ ವರ್ಷ ಬರುವ ಈ ಮುಗಿಲುಗಳು "ನೀವು ಎಲ್ಲಿಂದ ಬಂದಿರಿ—ಎಲ್ಲಿಗೆ ಹೋಗುತ್ತೀರಿ ಎಂಬ ತತ್ತ್ವ ವಿಚಾರವು ಎಷ್ಟು ಗಹನವಾದುದೋ, ಮುಗಿಲುಗಳು ಎಲ್ಲಿಂದ ಬರುವುವು, ಎಲ್ಲಿಗೆ ಹೋಗುತ್ತವೆ ಎಂಬ ಸಾಮಾನ್ಯ ವಿಚಾರವೂ ಅಷ್ಟೇ ಗಹನವಾದುದೆಂದು" ಅವರಿಗೆ ತೋರಿಸಿಕೊಡುತ್ತದೆ.

ಈ ಮುಗಿಲುಗಳ ಮೇಲಿನ ಕವಿತೆಗಳ [illegible]ಗಳನ್ನು ಕೊಡಬೇಕಾದುದೇನೂ ಇಲ್ಲ. ಆದರೆ ಲೇಖಕರಿಗೆ ಅವುಗಳ ನೋಟದೊಂದಿಗೆ ಹಿಂದಿನ ನೆನಪು [illegible]. ಬಾಲ್ಯದಲ್ಲಿ [illegible]

3. Shelley ಯ "The cloud", [illegible] ಭಾವನೆ [illegible] ಅನುಭವಿಸಬಹುದು.

ಆಕಾರಗಳನ್ನು—ಬೆಟ್ಟಗುಡ್ಡಗಳು, ಪಕ್ಷಿಗಳು, ಆನೆ—ಇನ್ನೆಷ್ಟೋ, ನೋಡಿ ನಲಿದದ್ದೂ ನಲಿದದ್ದೇ. ಈ ಭಾಗದಲ್ಲಿ ಬರುವ ತನ್ಮಯತೆಯ ವರ್ಣನೆ ಭಾವಪೂರ್ಣವಾಗಿ ಕಾವ್ಯಮಯವಾಗಿದೆ.

ಇನ್ನು ಆಕಾಶದ ಗಜ ಪಂಕ್ತಿ, ಕರಿ ಮೋಡಗಳ ತಂಡದಿಂದ ಬರುವ ಭಯ, ಹಾಗೆಯೇ ಪುರಾಣ ಇತಿಹಾಸ ಪ್ರಪಂಚಗಳಿಗೆ ನುಗ್ಗಿ ಕರಿಮೋಡಗಳ ತಂಡವನ್ನು ವಾನರ ಸೈನ್ಯವೆಂದೂ ಮಧ್ಯದಲ್ಲಿರುವ ದೊಡ್ಡ ಮುಗಿಲನ್ನು ಕುಂಭಕರ್ಣನೆಂದೂ ಕಲ್ಪಿಸಿಕೊಳ್ಳುವ ಮನಸ್ಸಿನ ಸ್ವಪ್ನಗಳ ಚಿತ್ರ. ಇದೆಲ್ಲ ನಡೆದದ್ದು ಬಾಲ್ಯದಲ್ಲಿ.

ಆದರೆ ಯೌವನದಲ್ಲಿಯೂ ಮುಗಿಲು ಭಾವನೆಯ ರಸಕ್ಕೆ ಸೂತನಾಗದೆ ಇಲ್ಲ. ಆಗ ಮುಗಿಲುಗಳು ಲೇಖಕರ ಅಂತರಂಗದ ಆಲೋಚನೆಗಳಲ್ಲಿ ಆತ್ಮೀಯವಾಗಿ ಭಾಗವಹಿಸುತ್ತವೆ. "ನಾನು ನಕ್ಕಾಗ ನಕ್ಕು, ಅತ್ತಾಗ ಅತ್ತು; ನಾನು ಕಂಬನಿಗರೆದಾಗ ತಾವೂ ಅಶ್ರುಧಾರಾವರ್ಷವನ್ನು ಸುರಿಸಿ, ನಾನು ಕೋಪಗೊಂಡಾಗ ತಾವೂ ಕೋಪದ ಮಿಂಚನ್ನೆಸೆದು" ಅವರೊಡನೆ ಸಹಾನುಭೂತಿಯನ್ನು ತೋರಿಸುತ್ತವೆ. "ಎಷ್ಟೋ ಮಾನವರಿಗಿಂತ ಮೇಲು ಈ ಮುಗಿಲುಗಳು." ಈ ಮಾತುಗಳನ್ನು ಹೇಳಿ ಲೇಖಕರು ತುಂಬ ಅರ್ಥವತ್ತಾದ ಒಂದು ವಾಕ್ಯದಿಂದ ಆ ವಾಕ್ಯವೃಂದವನ್ನು ಕೊನೆಗಾಣಿಸುತ್ತಾರೆ: "ನೊಂದ ಹೃದಯ ಉಳ್ಳವರು ಸಹಾನುಭೂತಿಗಾಗಿ ಸುತ್ತ ನೋಡಬೇಡಿ; ಕತ್ತೆತ್ತಿ ಮೇಲೆ ನೋಡಿ!" ಈ ವಾಕ್ಯ ಈ ಭಾವಪ್ರಬಂಧದ ಹೃದಯ. ಇದರ ಸುತ್ತ ಆವರಿಸಿಕೊಂಡಿದೆ ಲೇಖಕರ ಭಾವವಿಲಾಸ. ಮತ್ತೆ "ನಾನು ಮುಗಿಲಾದರೆ ಎಂದಿಗೂ ಮುಗಿಲೆ" ಎಂಬ ವಾಕ್ಯದಲ್ಲಿ ಮೇಲಿನ ವಾಕ್ಯದ ಸಮರ್ಥನೆ ದೊರಕುತ್ತದೆ. ಕತ್ತೆತ್ತಿ ಮೇಲೆ ನೋಡಿ, ಮಿತ್ರರ ಸಹಾನುಭೂತಿಯನ್ನು ಪಡೆದು ಮುಗಿಲಿನಂತೆ ಭಾವ ಪ್ರಧಾನವಾಗಿ ಜೀವಿಸುವ ಶಕ್ತಿಯನ್ನು ಪಡೆದರೆ ಎಂದೆಂದಿಗೂ ಉತ್ತಮಸ್ಥಿತಿಯೇ ತನಗಿರುತ್ತದೆಂಬ ಊರ್ಧ್ವಗನ ಲೇಖಕನ ಅಪೇಕ್ಷೆಯಲ್ಲಿ ಇದು ಕೊನೆಗಾಣುತ್ತದೆ: "ಇಲ್ಲಿನ ಬದುಕು ಮುಗಿದು ನಾನು ಮಡಿದ ಮೇಲೆ ಮುಗಿಲಾಗಿ ಅಮರನಾಗಿರುತ್ತೇನೆ."

ಇದು ಬಹುಸುಂದರವಾದ ಭಾವಪ್ರಬಂಧ. ಇದರಲ್ಲಿ ಒಂದು ಐಕ್ಯ, ವಸ್ತುವಿಗೆ ತಕ್ಕ ಶೈಲಿ, ಭಾವನಾವಿಲಾಸವನ್ನು ಮುಂದುವರಿಸುವುದಕ್ಕೆ ಇರುವ ಪ್ರೋತ್ಸಾಹ, ಆಧ್ಯಾತ್ಮಿಕ ದೃಷ್ಟಿ—ಇವೆಲ್ಲ ಇದನ್ನು ಉತ್ತಮ ಕೃತಿಯನ್ನಾಗಿಸಿವೆ.

ರಸಿಕತ್ವವೇನೆಂಬುದರ ಬಗ್ಗೆ ವಿದ್ವಾನ್ ರಾಳ್ಳಪಳ್ಳಿ ಅನಂತಕೃಷ್ಣ ಶರ್ಮರ ವಿವರಣೆಯೊಂದಿಗೆ 'ರಸಿಕತೆ' ಭಾವ ಪ್ರಬಂಧವು ಪ್ರಾರಂಭವಾಗಿದೆ.

ರಾಳ್ಳಪಳ್ಳಿಯವರು ಕನ್ನಡನಾಡಿನ ಪ್ರಸಿದ್ಧ ವಿದ್ವಾಂಸರು. ಸ್ವತಃ ರಸಿಕರು. ಅವರ ಬಳಿ ಪಾಠ ಕಲಿಯುವ ಸದವಕಾಶವೂ ಪುಣ್ಯವೂ ಇದ್ದ ನಮ್ಮ ಕೆಲವರಿಗೆ

ಪ್ರೀತಿಯು ಅರ್ಥ ಮಾರ್ಮಿಕವಾಗಿ ತಿಳಿಯಿತು. ಅವರ ಶಿಷ್ಯರಾದ ಎಂ. ವಿ. ಸೀತಾರಾಮಯ್ಯನವರು ಅವರ ಮಾತನ್ನು ಟಿಪ್ಪಣಿ ಮಾಡಿಕೊಂಡಿದ್ದಾರೆ. ಒಂದು ದೃಷ್ಟಿಯಿಂದ ನೋಡಿದರೆ, ಈ ಭಾವ ಪ್ರಬಂಧವೆಲ್ಲ ಅವರ ಮಾತುಗಳ ಸೋದಾಹರಣವಾದ ವಿವರಣೆ.

ಲೇಖಕರು 'ರಸಿಕತೆ'ಯನ್ನು ವಿವರಿಸುತ್ತಾ, "ರಸಿಕನ ಊಟ, ಉಡಿಗೆ, ತೊಡಿಗೆ, ಮಾತುಕತೆ, ನಡೆನುಡಿ-ಮುಂತಾದವುಗಳಲ್ಲಿ ತೋರಿಬರುವ ಅವನ ಸ್ವಭಾವವೇ ಮನೋಧರ್ಮವೇ, ನಯನಾಜೂಕೇ ರಸಿಕತೆ" ಎನ್ನುತ್ತಾರೆ. ಇದರ ದೃಷ್ಟಾಂತವಾಗಿ ಹಿಂದಿನ ಕಾಲದ ರಸಿಕರು, ನಶ್ಯ ಹಾಕುತ್ತಿದ್ದ ವೈಭವದ ಸುಂದರ ಚಿತ್ರವನ್ನು ಕೊಡುತ್ತಾರೆ. ಈಗಿನ ಕಾಲದ ಕಾಫಿಯನ್ನು ಹೆಸರಿಸಿ, ಅದರ ವಿವರಣೆಯನ್ನು ನಮ್ಮ ಊಹೆಗೆ ಬಿಡುತ್ತಾರೆ. "ಯೌವನದ ಹೊಸ್ತಿಲನ್ನು ದಾಟಿದ ಮೇಲೆಯೇ ನಿಜವಾದ ರಸಿಕತೆ ರೂಪುಗೊಳ್ಳಬೇಕಾದದ್ದು" ಎಂದು ಹೇಳಿ, ಒಬ್ಬ ರಸಿಕ ಶಿಖಾಮಣಿಗಳ ಸಮನ್ವಯ ಗುಣಗಳನ್ನು ಒಂದೊಂದಾಗಿ ದೀರ್ಘವಾಗಿ ನಿರೂಪಿಸಿದ್ದಾರೆ. ಹಿಂದಿನ ಪರಂಪರೆಯ ಈ ರಸಿಕಾಗ್ರಣಿಗಳ ಚಿತ್ರಣದಲ್ಲಿ ಸ್ವಲ್ಪ ಉತ್ಪ್ರೇಕ್ಷೆ ಇರುವಂತೆ ಈಗಿನ ಕಾಲದವರಿಗೆ ಕಂಡು ಬಂದರೂ ಈ ವ್ಯಕ್ತಿಯ ಬಾಯಲ್ಲಿ ಬರುವ ಮಾತುಗಳು ನಿಜವಾದ ರಸಿಕನ ಮಾತುಗಳು.[4] "ಗಂಡಸಿನ ಶೃಂಗಾರ ಗಾಂಭೀರ್ಯ, ಹೆಂಗಸಿನ ಶೃಂಗಾರ ಹಾವಭಾವ," "ಮೈಯ ರೋಗಕ್ಕೆ ಪರಂಗಿ ಔಷಧಿ, ಒಳಗಿನ ರೋಗಕ್ಕೆ ನಾಟಿಕ್ರಿಯೆ ಮದ್ದು" ಎಂಬುವು ಅವರ ಅನುಭವವಾಕ್ಯಗಳು. ಅಂತರಂಗದ ಆರೋಗ್ಯ, ಸಮನ್ವಯದ ದೃಷ್ಟಿ, ಹೊರಗಿನ ಥಳಥಳ್ಯವನ್ನು ಬಿಟ್ಟು ಒಳಗಿನ ಸಾರಕ್ಕೆ ಪ್ರಯತ್ನಿಸುವ ಬಯಕೆ—ಇವೆಲ್ಲಾ ರಸಿಕತೆಯ ಪಕ್ವಾನ್ನಕ್ಕೆ ಬೇಕಲೇ ಬೇಕಾದ ಸಂಸ್ಕಾರ ಪರಿಕರಗಳು.

ಈಗಿನ ಕಾಲದಲ್ಲಿ ರಸಿಕತೆ ಕಡಿಮೆಯಾಗಿರುವುದಕ್ಕೆ ಹಣದ ಅಭಾವವೇ ಕಾರಣವೆಂಬುದು ಸ್ವಲ್ಪಮಟ್ಟಿಗೆ ನಿಜ. ರಸಿಕನ ಸತ್ವ ಸಂಪನ್ನತೆ, ಅವನ ಮಧುರಹಾಸ್ಯ, ಸ್ನೇಹಪೂರ್ಣವಾದ ಆದರೆ ಮನನೋಯಿಸದ ಮಾತು, ಧರ್ಮದೃಷ್ಟಿ, 'ವಿಷಯ' ಬಲ್ಲಿರುವುದು—ಇವುಗಳ ವಿವರಣೆಯೂ ಚೆನ್ನಾಗಿದೆ.

ಈ ಭಾವ ಪ್ರಬಂಧದ ಆದಿ ಮಧ್ಯಗಳು ಚೆನ್ನಾಗಿರುವ ಮಟ್ಟಿಗೆ ಅಂತ್ಯ ಸೊಗಸಾಗಿಲ್ಲ. ಏಕೋ ಅವಸರದ ನಿಬಂಧಕ್ಕೆ ಸಿಲುಕಿ ಕೊನೆಗೊಂಡಂತೆ ಕಾಣುತ್ತದೆ ಲೇಖನ. ಈ ಉದಾಹರಣೆಯಿಂದ, ಭಾವ ಪ್ರಬಂಧಗಳ ಅಂತ್ಯದ ವಿಚಾರದಲ್ಲಿ ಹೆಚ್ಚು ಎಚ್ಚರಿಕೆ ವಹಿಸಬೇಕೆಂಬ ದೃಷ್ಟಿ ತಾನಾಗಿಯೇ ಹೊಳೆಯುತ್ತದೆ.

---

4 ಈ ಭಾವನೆಗಳ ನಿರೂಪಣೆಯು ಮಾನವನಲ್ಲಿ ಮಾತ್ರ ಮಿಲ್ಟನ್ (Milton) ಕವಿಯ - Allegro ಕವನದ ಸಾಮ್ಯ ಕಾಣುತ್ತದೆ.

"ನಾನು ಈಜು ಕಲಿತದ್ದು"

ನಿಜವಾಗಿ ಇದೊಂದು ಭಾವ ಪ್ರಬಂಧವಲ್ಲ; ಇದು ಒಂದು ಚಿತ್ರ (Sketch). ವಿನೋದ ಪ್ರಧಾನವಾದ ಈ ಲೇಖನದಲ್ಲಿ ಲೇಖನದ ಹೆಸರಿಗೂ ಕನಸಿನ ವಸ್ತುವಿಗೂ ಇರುವ ವೈಪರೀತ್ಯವೇ ಮುಖ್ಯ. ಈಜು ಕಲಿಯಬೇಕೆಂಬ ಆಸೆಗೆ ಯಾವುದೋ ಅಡ್ಡಿ ಬಂದಾಗ ಆ ಆಸೆ ಹೇಗೆ ಕನಸಿನಲ್ಲಿ ಫಲವನ್ನು ಅಪೇಕ್ಷಿಸಿತು ಎಂಬುದರ ಚಿತ್ರ ಇಲ್ಲಿದೆ. ಇಲ್ಲಿ ಬರುವ ಆದಿಶೇಷನ ದರ್ಬಾರಿನ ಚಿತ್ರ ಇನ್ನಷ್ಟು ವಿಸ್ತಾರವಾಗಿದ್ದು ಹೆಚ್ಚು ವಿವರಗಳಿಂದ ಕೂಡಿದ್ದರೆ ಓದುಗರ ಮೇಲೆ ತುಂಬ ಪರಿಣಾಮಕಾರಿಯಾಗಿರುತ್ತಿತ್ತು. ಭಾವ ಪ್ರಬಂಧಗಳನ್ನು ಪ್ರೋಕ್ರಸ್ಟಿಯನ್ (Procrustean) ಹಾಸಿಗೆಗೆ ಸಿಕ್ಕಿಸಿದರೆ ಆಗುವ ಫಲ ಇದು. ಇಲ್ಲಿ ತೂತು ಬಿದ್ದ ಸೋರೆಯ ಬುರುಡೆಯ ಪ್ರಯೋಜನವೇನೋ ಉಚಿತವಾಗಿದೆ. ನಾಗಕನ್ನಿಕೆಯನ್ನು ಬಿಟ್ಟು ಕಿರೀಟವನ್ನು ತಬ್ಬಿಕೊಂಡ, ಪ್ರಬಂಧದ ಯುವಕ ನಿಜವಾಗಿಯೂ ಹಗಲು ಕನಸು ಕಾಣಲು ಯೋಗ್ಯ.

ಹಾಸ್ಯಮಯವಾದ ಭಾವ ಪ್ರಬಂಧಗಳ ಬೆಲೂನಿಗೆ ವಿಚಾರದ ಸೂಜಿಯನ್ನು ಚುಚ್ಚಬಾರದೆಂಬುದಕ್ಕೆ ಇದು ಒಳ್ಳೆಯ ಉದಾಹರಣೆ.

ಬಾಡಿಗೆ, ಬಾಡಿಗೆಯ ಮನೆ, ಅದರ ಮಾಲೀಕ, ಅದರಲ್ಲಿ ವಾಸಮಾಡುವವ, ಬಾಡಿಗೆಯ 'ವಸೂಲಿ' — ಇವು ಅನೇಕರ ಮನಸ್ಸನ್ನು ಕಲಕಿವೆ. ಬಹುಶಃ 'ಕೆಂಪು' ದೇಶಗಳನ್ನು ಬಿಟ್ಟರೆ ಮಿಕ್ಕ ಎಲ್ಲ ಕಡೆಯಲ್ಲಿಯೂ ಈ ವಿಷಯಗಳು ಜೀವನದಲ್ಲಿ ಪ್ರಧಾನವಾಗಿಯೇ ಇವೆ. ರಷ್ಯಾದೇಶದ ಚೆಕಾವ್ (Anton Chekov) ಕೂಡ ಬಾಡಿಗೆಯನ್ನೇ ವಸ್ತುವಾಗುಳ್ಳ ಒಂದು ನಾಟಕವನ್ನು ಬರೆದಿದ್ದಾನೆ. ಕನ್ನಡದಲ್ಲಿ ಪ್ರಸ್ತುತ ಲೇಖನವಲ್ಲದೆ ಇತರ ಒಂದೆರಡು ಲೇಖನಗಳಿವೆ. ಒಬ್ಬೊಬ್ಬ ಲೇಖಕನೂ ಒಂದೊಂದು ಬಗೆಯ ಸ್ವಾರಸ್ಯವನ್ನು ತಂದಿದ್ದಾನೆ. ಈ ಲೇಖನದಲ್ಲಿ ಹಿಮ್ಮನೆ, ಅರಮನೆ, ಒಳಮನೆ, ಮೂಲೆಮನೆ, ಪಾತಾಳಮನೆ. ಗವಿಮನೆಗಳ ವಾಸದ ವಿವರಣೆಯಿಲ್ಲದಿದ್ದರೂ ಸೂಚನೆಯಿದೆ. ಬಾಡಿಗೆಯ ಮನೆಯಲ್ಲಿಯೇ ವಾಸಮಾಡಲು ಲೇಖಕರ ಆಸಕ್ತಿಯನ್ನು ಅವರೇ ವಿವರಿಸಿದ್ದಾರೆ. ಒಂದೇ ಮನೆಯಲ್ಲಿ ಅನೇಕ ವರ್ಷಗಳಿಂದ ಇದ್ದರೂ "ಬಾಡಿಗೆಗೆ ಮನೆಯಿದೆ" ಎಂದರೆ ಅಲ್ಲಿ ನುಗ್ಗುವುದು ಅಭ್ಯಾಸವಂತೆ! ಇವರ ಅಪಾರವಾದ ಅನುಭವದಿಂದ ಬೋರ್ಡು ನೋಡಿದೊಡನೆ, ಅದರ ಅಕ್ಷರ, ಬರೆಯಲು ಉಪಯೋಗಿಸಿರುವ ಪದಾರ್ಥ, ರೀತಿ, ಇವುಗಳಿಂದ ಮನೆಯ ಮತ್ತು ಮಾಲೀಕರ ಗುಣಗಳನ್ನು ಕಂಡುಹಿಡಿಯುವ ಕೌಶಲ ಹಸ್ತಸಾಮುದ್ರಿಕೆಯಂತೆ ಇವರಿಗೆ ಹಸ್ತಗತವಾಗಿದೆಯಂತೆ. ಇದೆಲ್ಲ ವಿನೋದ ಪೂರ್ಣವಾದ ವಿವರಣೆಯಿಂದ ಕೂಡಿದೆ. ಮಗನಿಗೆ ಬೇರೆ ಮನೆ ಹುಡುಕಲು ಪ್ರಯತ್ನಪಟ್ಟ, ಇಂಗ್ಲಿಷ್ ಬಾರದ ಇವರ ತಂದೆಯ ಅನುಭವವೂ ವಿನೋದಕರವೆ.

ಮುಂದಿನ ಮನೆಗಳವರಿಗೂ ಹಿಮ್ಮನೆಗಳವರಿಗೂ ಇರುವ ಸಂಘರ್ಷದ ಚಿತ್ರ ಬಹು ರಮ್ಯವಾಗಿದೆ. ಅಲ್ಲಿಂದ ಮುಂದೆ ತಮ್ಮ ಮನೆಗೆ ಸಮ್ಮನ್ಸ್ ಕರಿ ಹೊಯ್ಯುವಾಗ ಕಾಣುವ ಆತ್ಮೀಯತೆಯ ಚಿತ್ರವೂ ಸೂಕ್ಷ್ಮವಾಗಿದೆ. ಕೆಲವು ವಾಕ್ಯಗಳಂತೂ ನೇರವಾಗಿ ಹೃದಯಕ್ಕೆ ಹೋಗಿ ತಾಗುತ್ತವೆ. "ಭಿಕ್ಷುಕರಿಗೆ ಮುಮ್ಮನೆಗಳಲ್ಲಿ ಸಿಕ್ಕುವುದು ಬೈಗುಳು ಮಾತ್ರ, ಭಿಕ್ಷೆ ಸಿಕ್ಕಬೇಕಾದರೆ ಹಿಮ್ಮನೆಗಳಲ್ಲೇ". "ಹಿಮ್ಮನೆಯವರು ಸರ್ವದಾ ಮುಮ್ಮನೆಯವರನ್ನು ಆಶ್ರಯಿಸಿಕೊಂಡೇ ಇರಬೇಕು. ಅಷ್ಟು ಆಶ್ರಯಿಸಿಕೊಂಡಿದ್ದರೂ ಹಿಮ್ಮನೆಯ ಹೆಂಗಸು ಪ್ರಸವ ಕಾಲಕ್ಕೆ ಪಕ್ಕದ ಹಿಮ್ಮನೆಗಳಿಗೇ ಹೋಗಬೇಕು."

ಇಂಥ ಕಟುವಾದ ಅನುಭವವನ್ನು ವಾಕ್ಯದಲ್ಲಿ ತುಂಬಿದ ಸಹನೆ ಧೋರಣೆಯಲ್ಲಿ ಒಂದು ಆಶಾವಾದದ ಸೂಚನೆಯಿದೆ. ಮುಮ್ಮನೆಯಲ್ಲಿ ವಾಸಿಸುವ ಅವಕಾಶ ಸಿಕ್ಕಿದಾಗ ಆ ಅನುಭವವನ್ನು ಬೇರೆ ಬರೆಯುತ್ತಾರಂತೆ. ಈ 'ಬಾಡಿಗೆ ಮನೆಗಳು' ಪ್ರಬಂಧದಲ್ಲಿ ಎಲ್ಲಿಯೂ ಹಾಸ್ಯವು ಅಪಹಾಸ್ಯಕ್ಕೆ ಇಳಿಯದೆ ಅನುಕಂಪೆಯನ್ನು ತಾನಾಗಿಯೇ ಉತ್ಪತ್ತಿಮಾಡುತ್ತದೆ. ಒಳ್ಳೆಯ ಬರಹಕ್ಕೆ ಇದು ಇರಲೇಬೇಕಾದ ಗುಣ.

ಎಂ. ಪಿ. ಕೆ. ಅವರ ಒಂದು ವಿನೋದ ಪರವಾದ ಸೃಷ್ಟಿ ಲೇಖನ "ಸಂಗೀತ ಸಭೆಯ ಸ್ವಾರಸ್ಯ" ಇದು ಸಂಗೀತದ ಸ್ವಾರಸ್ಯವನ್ನು ಕುರಿತ ವಿವರಣೆಯಲ್ಲ. ಸಂಗೀತ ಸಭೆಗಳ ಸ್ವಾರಸ್ಯದ ವಿವರಣೆ. ಅವುಗಳಿಗೆ ಬರುವ ಜನರ ವಿವಿಧ ವರ್ತನೆಗಳನ್ನು ಹೇಳುವುದೇ ಇಲ್ಲಿಯ ದೃಷ್ಟಿ.

ಈ ಲೇಖನದ ಎರಡನೆಯ ವಾಕ್ಯವೃಂದದ ಶೈಲಿಯಲ್ಲಿ ಒಂದು ಸೊಗಸಿದೆ. ಸಂಗೀತಗಾರನ ಎದುರು ಗೂಟ ಬಡಿದಂತೆ ಕುಳಿತು ಅವನ ಮನೋಧೈರ್ಯವನ್ನು ಕೆಡಿಸಬೇಕೆಂದು ಸಂಕಲ್ಪಿಸಿದ ಸಂಗೀತಜ್ಞರ ನಡೆವಳಿಕೆ ನಮಗೆ ಸೂಚಿತವಾಗುತ್ತದೆ. ರಸಾಸ್ವಾದನೆಗಾಗಿ ಹೋಗಬೇಕಾದ ಕಡೆಗೆ ರಸಪ್ರತಿಬಂಧಕಾತುರರಾಗಿ ಹೋಗುವ ಈ ಜನ ಒಂದು ಬಗೆಯ "Picketing" ಸ್ವಭಾವದ ಜನ. ಅಸೂಯಾಪರರಾದ ಸಂಗೀತಗಾರರ ನಡೆವಳಿಕೆ ಇಲ್ಲಿ ಚೆನ್ನಾಗಿ ಚಿತ್ರಿತವಾಗಿದೆ. "ಮುಂದೆ ಕುಳಿತಿರುವ ಸಂಗೀತಜ್ಞರು ಕೂಡ. ತಾವು ಸಂಗೀತಜ್ಞರೆಂಬುದನ್ನು ಮರೆತು, ಸಂಗೀತ-ಅಜ್ಞರಂತೆ ವರ್ತಿಸುತ್ತಾರೆ. ಇದರಲ್ಲಿ ತಪ್ಪಿಲ್ಲ, ಆಶ್ಚರ್ಯವೂ ಇಲ್ಲ". ಇಲ್ಲಿ ದಪ್ಪಕ್ಷರಗಳಲ್ಲಿ ಅಚ್ಚುಮಾಡಿರುವ ಪದಗಳ ಹಿಂದೆ ಲೇಖಕರ ಮನಸ್ಸಿನ ನೋವಿರುವುದು ಸುಲಭ ವೇದ್ಯ. ಆ ಬಳಿಕ, ತಪ್ಪು ತಾಳ ಹಾಕುವವರು, ಆಗಾಗ ಎದ್ದು ಹೋಗಿ ಬರುವ ಚಂಚಲಿಗಳು ವೃತ್ತ ಪತ್ರಿಕೆಗಳನ್ನು ಓದುವ ಜನ-ಇವರಿಂದ ಸಭೆಗೆ ಕಟ್ಟುವ ಕಳೆ ವರ್ಣಿತವಾಗಿದೆ. ಎಲ್ಲಕ್ಕಿಂತ ಹೆಚ್ಚಾಗಿ ಆ ಸಭೆಗೆ ಬರುವ ಮಹಿಳೆಯರನ್ನು ನೋಡಲು ಬರುವ ಸಂಗೀತ ಕುಶಲಿಗಳ ಪ್ರಸ್ತಾಪವಿದೆ. "ಸಂಗೀತಗಾರರು ಹಾಡುವ ಕಲ್ಯಾಣಿ.

ಲಲಿತ, ದೇಶಮನೋಹರಿ, ವಸಂತ–ಇವೇ ಮೊದಲಾದ ರಾಗಗಳು ರೂಪತಳೆದು 'ರಾಗಿಣಿ'ಯರಾಗಿ ಅವರಿಗೆ ಪ್ರತ್ಯಕ್ಷವಾಗಿರುತ್ತವೆ. ಅವರು ಸಂಗೀತವನ್ನು ನೋಡಿದ್ದೂ ನೋಡಿದ್ದೆ !”

ಇದನ್ನು ಬರೆಯುವಾಗ ಲೇಖಕರಿಗೆ ಹಾಸ್ಯಕ್ಕಿಂತ ಅದರ ಹಿಂದಿರುವ ನೋವೇ ಪ್ರಧಾನ. ಆದುದರಿಂದಲೇ ಕೊನೆಗೆ “ಸಂಗೀತದ ಸ್ವಾರಸ್ಯ ಬೇಕಾದರೆ ಕಣ್ಣು ಮುಚ್ಚಿ ಕಿವಿತೆರೆದಿರಬೇಕು; ಸಂಗೀತ ಸಭೆಯ ಸ್ವಾರಸ್ಯ ಬೇಕಾದರೆ, ಕಿವಿಮುಚ್ಚಿ ಕಣ್ಣು ತೆರೆದಿರಬೇಕು” ಎಂದು ಘೋಷಿಸುತ್ತಾರೆ. ಆದರೆ, ಉದ್ದಕ್ಕೂ ಹಾಸ್ಯದ ಹಿನ್ನೆಲೆಯಲ್ಲಿರುವ ನೋವಿನ ನರಳಾಟ ಎದೆ ಚುಚ್ಚುತ್ತದೆ.[6]

“ಸುಖಾನುಭವ” “ಆನಂದಾನುಭವ” ಎಂಬ ಪದಗಳಂತೆಯೇ ಸುಪ್ರಸಿದ್ಧವೂ ಸಾಮಾನ್ಯವಾಗಿ ಉಪಯೋಗ ಹೊಂದದ ಪದ “ರೋಗಾನುಭವ.” ರೋಗದಲ್ಲಿ ನರಳುವುದು ಸಾಮಾನ್ಯ, ಕೊರಗುವುದು ಜನ ಜನಿತ. ಕುಗ್ಗುವುದು ಸರ್ವವಿದಿತ! ಆದರೆ ರೋಗಾನುಭವವನ್ನು ಹೀಗೆ ಸುಖಪ್ರದವನ್ನಾಗಿ ಮಾಡಿಕೊಂಡು ಲೇಖನ ಬರೆಯುವುದು ಬಹು ಅಪೂರ್ವ.

“ನಾನು ಹುಟ್ಟು ರೋಗಿ” ಎಂಬುದು ಪ್ರಬಂಧದ ಸೊಗಸಾದ ಆರಂಭ. ಆಯುಸ್ಸಿಗೂ ರೋಗಗಳಿಗೂ ಯಾವ ಸಂಬಂಧವೂ ಇಲ್ಲವೆಂಬುದು ಇವರ ಅನುಭವ ಜನ್ಯವಾದ ಸತ್ಯ. ರೋಗಿಗೆ ಬೇಕಾದುದು ‘ಭರವಸೆಯ ವಚನ, ಪ್ರೋತ್ಸಾಹದ ನುಡಿ.’ ಆದುದರಿಂದ. ‘ರೋಗಿಗಳ ಗೆಳೆಯನಾಗಿ’, ‘ನನಗೆ ನಾನೇ ಧೈರ್ಯ ಹೇಳಿಕೊಳ್ಳುವ ಒಂದು ವಿನೋದ’ವನ್ನು ಹೂಡಿದ್ದಾರೆ.

ಲೇಖನ ಕಲೆಯಲ್ಲಿ ತಮ್ಮ ದೃಷ್ಟಿಯನ್ನು ಬಚ್ಚಿಡುವುದೇ ಹೆಚ್ಚು. ಅನೇಕ ಸಂದರ್ಭಗಳಲ್ಲಿ ಆ ದೃಷ್ಟಿ ಲೇಖನದ ಸಮಾಪ್ತಿಯಲ್ಲಿ ತಕ್ಷಣ ಹೊಳೆದು ಬಿಟ್ಟು ಪ್ರಬಂಧಕ್ಕೆ ಕಳೆ ಕೊಡುವುದೂ ಉಂಟು. ಆದರೆ ಇಲ್ಲಿ ಈ ಲೇಖಕರು ಪ್ರಾರಂಭದಲ್ಲೇ ಈ ರೋಗಿನ ಪ್ರದರ್ಶನ ಮಾಡಿಬಿಟ್ಟಿದ್ದಾರೆ. ಇದೊಂದು ಸಾಹಸ. ಆದರೂ ಇಲ್ಲಿ ಇದರಿಂದ ಒಂದು ವಿನೋದ ಅಕಾರಣವಾಗಿ ಸೃಷ್ಟಿಯಾಗಿದೆ.

ರೋಗಗಳ ಆಕ್ರಮಣಶೀಲ (ಅಥವಾ ಆಕ್ರಮಣದ ಕಾರ್ಯ ವಿಧಾನ: Modus Operandi) ಏನು ಎನ್ನುವ ಚಿತ್ರ ಮನಮುಟ್ಟುತ್ತದೆ. ಆ ಮೇಲೆ ಬರುವ ರೋಗದ ಸೂತ್ರವೂ ಅಷ್ಟೇ ಹಾಸ್ಯಮಯವಾಗಿದೆ. ರೋಗಿಗಳಾಗದವರು ಯಾರೂ ಇಲ್ಲ. ನಾವೆಲ್ಲ ‘ಭವರೋಗಿ’ಗಳೇ ತಾನೆ! ನಮಗೆ ಬರುವ ಇತರ ರೋಗಗಳು ನಿಜವಾಗಿ ‘ಉಪರೋಗ’ ಗಳಂತೆ! ಹೀಗಿದೇ ವಾದ ಸಾಗಿ ಕೊನೆಗೆ, “ದೇಹ

6 ಶ್ರೀನಿವಾಸರ ‘ಮಾಪುಸಿ’ ಹರಿಕಥೆಯನ್ನು [illegible] ನೋಡಿದರೆ ಈ ಲೇಖಕರ ದೃಷ್ಟಿಗೆ ಅದರಲ್ಲಿ ಪುಷ್ಟಿ ದೊರೆಯುತ್ತದೆ.

ಚಿತ್ರದ ಬಾಡಿಗೆಯ ಮನೆ ಎಂದು ತಿಳಿಯಬೇಕು" ಎಂಬ ಉದಾತ್ತ ತತ್ತ್ವಕ್ಕೆ ದಾರಿ ಮಾಡುತ್ತದೆ.

ರೋಗಗಳಿಂದ ಅನೇಕ ಪ್ರಯೋಜನಗಳಿವೆ. "ಮಹಾನ ವೇದಾಂತ ಗ್ರಂಥಗಳ ಪಾರಾಯಣವು ಇಲ್ಲದೆ ಆತ್ಮಜ್ಞಾನ ಲಭಿಸುತ್ತದೆ. ಆರೋಗ್ಯದ ಸುಖವೇನೆಂದು ತಿಳಿಯುತ್ತದೆ. ಓದಲು ಬರೆಯಲು ಅವಕಾಶ ಸಿಕ್ಕುತ್ತದೆ. ಇತರರಲ್ಲಿ ದಯಾದ ನಿಜವಾದ ಸ್ನೇಹಿತರೆಂಬುದು ಗೋಚರವಾಗುತ್ತದೆ. ಹೆಂಡತಿಯ ಸೇವೆ, ಮಿತ್ರರ ಉಪಚಾರಗಳು ಸತತವಾಗಿ ದೊರೆಯುತ್ತವೆ. "ವಿದ್ಯಾಚಾರ್ಯರ ವೈದ್ಯನಿಗೆ ತನ್ನ ವಿದ್ಯೆಗೆ ಕಡಿವಾಣ ಹಾಕುವ ಸಾಮರ್ಥ್ಯ ಅವನಿಗೆ ಲಭಿಸುತ್ತದೆ." ಕ್ರಮೇಣ ಕೆಲಸ ಕಡಿಮೆಯಾಗಿ ವಿಧಿಯ ವಿಷಯದಲ್ಲಿ ನಂಬಿಕೆ ಬರುತ್ತದೆ.

ಒಟ್ಟಿನಲ್ಲಿ ರೋಗ ದುರಾಸೆಗಳ ಮೂಲಕ ಬರುವುದೆಂಬ ಸೂಚನೆ ಮಾಡುತ್ತದೆ. "ರೋಗವನ್ನು ಶತ್ರುವಿನಂತೆ ಎದುರಿಸಿದರೂ ಮಿತ್ರನಂತೆ ಕಾಣುವುದೇ ವಿವೇಕ"ವೆಂಬ ದೃಢನಿರ್ಧಾರಕ್ಕೆ ಕೊನೆಗೆ ಮುಟ್ಟಿಬಿಡುತ್ತೇವೆ.

ಇದೊಂದು ಹಾಸ್ಯಯುತವಾದ ಉತ್ತಮ ಭಾವ ಪ್ರಬಂಧ.

"ನಿಜವಾದ ವಿದ್ಯಾರ್ಥಿ ಸಾಯುವವರೆಗೂ ವಿದ್ಯಾರ್ಥಿಯೇ" ಎಂಬ ದೃಷ್ಟಿಯನ್ನು ಪ್ರಕಟಪಡಿಸುವ ಲೇಖನ "ಜ್ಞಾನಬುತ್ತಿ". ವಿದ್ಯಾರ್ಥಿದಶೆಯು ಕೊನೆಗಾಣದು. ಅದು ಹೇಗೆ ಸವಿದ ಬುತ್ತಿ, ಈ ಬುತ್ತಿಯನ್ನು ಹೇಗೆ ದೊರಕಿಸಿಕೊಳ್ಳಬಹುದು ಎಂಬುದನ್ನಿಲ್ಲಿ ಸೂಕ್ಷ್ಮವಾಗಿ ವಿವರಿಸಿ, ಕೊನೆಗೆ ಈ ನಿರ್ಧಾರಕ್ಕೆ ಬರುತ್ತಾರೆ: "ನಿಜವಾದ ಗುರುವೆಂದರೆ ಪುಸ್ತಕ; ನಿಜವಾದ ವಿದ್ಯಾಪ್ರವೃತ್ತಿ ಎಂದರೆ ಪುಸ್ತಕವಾಚನ." "ಪುಸ್ತಕ ಜ್ಞಾನ ಭಂಡಾರದ ಬೀಗದ ಕೈ."

ಮಾನವನಲ್ಲಿರುವ ಸ್ನೇಹಿತರು, ಪರಿಚಿತರು, ಅಪರಿಚಿತರು, ಎಲ್ಲರೂ ಕಾಲ ಕಳೆದಂತೆ ವ್ಯತ್ಯಾಸಹೊಂದುತ್ತಾರೆ. ಆದರೆ 'ಜ್ಞಾನ ಗೆಳೆಯನೆಂದರೆ ಒಳ್ಳೆಯ ಪುಸ್ತಕ. ಗೆಳೆಯ ಮಾತ್ರವಲ್ಲ; ಗೆಳೆಯನಿಗಿಂತ ಹೆಚ್ಚು.' ಈ ಅರ್ಥವನ್ನು ನಿರೂಪಿಸುವ ವಾಕ್ಯವೃಂದ ಬಹುಸುಂದರವಾಗಿದೆ. ಶೈಲಿ ಸುಭದ್ರವಾಗಿ ಮನ ಮುಟ್ಟುತ್ತದೆ.

ಪುಸ್ತಕ ಸಂಗ್ರಹದ ವಿಚಾರವಾಗಿ ಹೇಳುವ ಮಾತುಗಳಲ್ಲಿಯೂ ಸತ್ಯವಿದೆ.[7] ಪುಸ್ತಕ ವಾಚನದ ಫಲವನ್ನು ವಿವರಿಸುತ್ತಾ, ಪುಸ್ತಕದ ಸ್ನೇಹ, ಸ್ನೇಹಿತರ ಸ್ನೇಹ, ಪ್ರಕೃತಿ ದೇವಿಯೊಂದಿಗೆ ಬೆಳೆಸುವ ಸ್ನೇಹ-ಇವೆಲ್ಲದರ ಅಪಾರವಾದ ಆನಂದವನ್ನು ವಿವರಿಸಿದ್ದಾರೆ ಲೇಖಕರು. ಪ್ರಕೃತಿಯ ಸ್ನೇಹಕ್ಕೆ ಅತ್ಯಂತ ಬೇಕೆಂದೇ ಪ್ರಾಧಾನ್ಯವನ್ನು

---

7 Augustine Birrel ಬರೆದಿರುವ "Book-buying" ಎಂಬ ಪ್ರಬಂಧವನ್ನು ಈ ಪ್ರಬಂಧ ಆಧಾರವಾಗಿ [illegible]

ತೋರಿಸಿದ್ದಾರೆ. ಬರಿಯ ಓದು ಓದೇ ಅಲ್ಲ. "ಕೇವಲ ಪುಸ್ತಕದ ಓದು ತಲೆ ಕೆಡಿಸುತ್ತದೆ... ಶೀಲ ಸಂಪಾದನೆ ವಿದ್ಯೆಯಲ್ಲದ ಮೇಲೆ ಇನ್ನು ಯಾವುದು ವಿದ್ಯೆ?" ಈ ವಿದ್ಯೆ, ಓದು ಸ್ನೇಹ ಪ್ರಕೃತಿ ಪ್ರೇಮ-ಇವುಗಳ ಸಮ್ಮೇಳನದಿಂದ ಒದಗುವ ಬುತ್ತಿ. "ನೀವು ವಿದ್ಯಾರ್ಥಿಗಳಾಗಿದ್ದರೆ ನನ್ನ ಮಾತು ಕೇಳಿ : ಶಕ್ತಿ ಮೀರಿ ದೊಡ್ಡ ಬುತ್ತಿ ಕಟ್ಟಿಕೊಳ್ಳಿ : ಮುಂದಿನ ಕಷ್ಟದ ದಿನಗಳಲ್ಲಿ ಅದು ನಿಮಗೆ ಒದಗಿಬರುತ್ತದೆ."

ಈ ಪ್ರಬಂಧದಲ್ಲಿ ಭಾವದ ವಿಲಾಸಕ್ಕಿಂತ, ಉಪದೇಶ ಬುದ್ಧಿ ಹೆಚ್ಚು ಪ್ರಾಧಾನ್ಯ ಹೊಂದಿಬಿಟ್ಟಂತೆ ಕಾಣುತ್ತದೆ. ಆದುದರಿಂದ ಭಾವಪ್ರಬಂಧವಾಗಿ ಇದರ ಪ್ರಾಧಾನ್ಯ ಕಡಿಮೆಯಾಗುತ್ತದೆ. ಆದರೆ ಲೇಖನದಲ್ಲಿರುವ ಅಭಿಪ್ರಾಯಗಳ ಶ್ರೇಷ್ಠತೆಗೇನೂ ಕುಂದುಬರುವುದಿಲ್ಲ.

ಭಾವ ಪ್ರಬಂಧಗಳಿಗೆ ಇಂಥದೇ ವಸ್ತುವೆಂದು ನಿರ್ಬಂಧವಿಲ್ಲ–ಕಾವ್ಯಗಳ ಹಾಗೆಯೇ ಯಾವ ವಸ್ತು ಮನ ಸೆಳೆದರೆ ಭಾವವನ್ನು ಉದ್ಬೋಧಗೊಳಿಸಿದರೆ, ಅದೇ ಸದ್ವಸ್ತು. "ತುಂಬೆಯ ಹೂ" ಅಂಥ ವಸ್ತು. ಇಂಗ್ಲೆಂಡಿನಲ್ಲಿ ಬೆಳೆಯುವ ಸೆಲಂಡೈನ್ (Celandine) ಅಂಥದೇ ಹೂ. ವರ್ಡ್ಸ್‌ವರ್ತ್ ಕವಿ ಈ ಹೂವನ್ನು ಕುರಿತು ಮೂರು ಕವನಗಳನ್ನು ಬರೆದಿದ್ದಾನೆ. ಆ ಕವನಗಳ ಭಾವಗಳು ತುಂಬ ನವಿರಾಗಿವೆ. ಅವುಗಳಲ್ಲಿ ಒಂದರ ಭಾವಗಳ ಅನುವಾದ ಸಂಗ್ರಹವನ್ನು ಕೊಟ್ಟು ಲೇಖಕರು ತುಂಬೆಯ ಹೂವಿನ ವಿಚಾರವಾಗಿ ತಮ್ಮ ಭಾವಧಾರೆಯನ್ನು ಹರಿಸಿದ್ದಾರೆ. ಇಲ್ಲಿ ವರ್ಡ್ಸ್‌ವರ್ತನ ಕವನವನ್ನೇ ಕೊಟ್ಟಿದ್ದರೂ ಚೆನ್ನಾಗಿತ್ತು. ಇದರೂ ಅನುವಾದದಲ್ಲಿ. 'Prophet of delight and mirth' ಎನ್ನುವುದನ್ನು 'ಆನಂದಯೋಗಿ' ಎಂದೂ 'Herald of mighty band of Joyous train ensuing' ಎಂಬುದನ್ನು 'ಮುಂಬರುವ ಸುಗ್ಗಿಯ ಹಿಗ್ಗಿನ ಪುಷ್ಪಕೋಟಿಯ ಪರಿಕಾರ' ಎಂದೂ ಅನುವಾದ ಮಾಡಿರುವಲ್ಲಿ ಮೂಲ ಕವನದ ಭಾವ ಸ್ಪಷ್ಟಗೊಂಡಿದೆ.

ಈ ಪೀಠಿಕೆಯನ್ನು ಹಾಕಿ ಲೇಖಕರು ಕವಿಗಳು ತುಂಬೆಯ ಹೂವನ್ನು ಹೊಗಳದೆ ಇರುವುದಕ್ಕೆ ಕಾರಣಗಳನ್ನು ಊಹಿಸುತ್ತಾರೆ. ಮಾನವ ಸಮಾಜದಲ್ಲಿ ಹೊಗಳಿಕೆಯೂ ಅಷ್ಟೆ, ತೆಗಳಿಕೆಯೂ ಅಷ್ಟೆ, ಎಷ್ಟೋ ವೇಳೆ ನಿರಾಧಾರವಾದುದು, ಅಪಾತ್ರನಿಷ್ಠವಾದುದು ಎಂಬುದು ಅವರ ಗಮನಕ್ಕೆ ಬರುತ್ತದೆ. ತುಂಬೆಯ ಹೂವಿಗೆ "ಆರತಿಯಕ್ಷತೆಗೆ ಕರೆಯದೆ ಬರುವ ಬಡ ಮುತ್ತೈದೆಯ ಹಾಗೆ" ನಮ್ರತೆಯಿದೆ. ಆದರೂ ಅದನ್ನು ಯಾರೂ ಲೆಕ್ಕಿಸುವುದಿಲ್ಲ. ತರುಣಿಯರ ಜಡೆಯನ್ನು ಅದು ಅಲಂಕರಿಸುವುದಿಲ್ಲ. ಪರಿಮಳವಿಲ್ಲ, ಸುವಾಸನೆಯಿಲ್ಲ, ಆಕೃತಿಯಿಲ್ಲ. ಲಾಲ್‌ಬಾಗಿನಂಥ ವನಸ್ಪತಿ ಪ್ರದರ್ಶನದ ಉದ್ಯಾನದಲ್ಲಿ ತುಂಬೆಗೆ ಸ್ಥಾನವಿಲ್ಲ. ಇದೆಲ್ಲ ಲೇಖಕರಿಗೆ ತುಂಬ ಸಂಕಟವನ್ನು ತಂದಿದೆ.

[illegible] ಮಾತ್ತಾರೆ.

[illegible] ವಾಗಿಯೇ ಉಳಿಯುತ್ತದೆ.

[illegible] ದೇವನ ಉನ್ಮತ್ತನೃತ್ಯವದು.”

[illegible]

ಪ್ರದರ್ಶನಕ್ಕೆ ಎಂದೂ ಧೂಮದ ಹಿನ್ನೆಲೆ ಅಗತ್ಯ. ಆದರೆ ಅಗ್ನಿ ಪ್ರಸುಪ್ತನಾಗಿದ್ದಾಗ ಧೂಮಕ್ಕೆ ತನ್ನ ಲೀಲಾವಿಲಾಸಕ್ಕೆ ಅವಕಾಶ ಸಿಕ್ಕಿಬಿಡುತ್ತದೆ.

ಧೂಮಪಾನ ಮಾಡುವವರ ಲೀಲೆಯಲ್ಲಾ ಧೂಮದೊಂದಿಗೇ. ಬಾಯಿಯಲ್ಲಿ ಹೊಗೆ ತುಂಬಿಕೊಂಡು ಉಂಗುರ-ಉಂಗುರವಾಗಿ ಹೊರಕ್ಕೆ ಕಳುಹಿಸುವ ಕಲೆ ಯಾರ ಮನಸ್ಸನ್ನಾದರೂ ಸೆಳೆಯುತ್ತದೆ.

ಪ್ರಬಂಧಕಾರರಿಗೆ ಈ ಅಭಿಪ್ರಾಯಗಳು ಹೊಳೆಯುತ್ತಿದ್ದಾಗಲೇ ಅವರ ಉಪಾಧ್ಯಾಯರು ಹೇಳಿದ್ದ ಒಂದು ಕಥೆ ನೆನಪಿಗೆ ಬರುತ್ತದೆ. ರಾಮಪಟ್ಟಾಭಿಷೇಕವಾದಾಗ ಕಪಿಗಳೆಲ್ಲ ಹೊಗೆಯೊಡನೆ ಸ್ಪರ್ಧೆ ಹೂಡಿ ನೆಗೆದದ್ದು ಆ ಕಥೆ. ಅಲ್ಲಿಂದ ಮುಂದೆ ಊದಿನ ಕಡ್ಡಿಯ ಧೂಮಲೀಲೆ ಅವರ ಮನವನ್ನು ಸೆಳೆಯುತ್ತದೆ. ಈ ಧೂಮಲೀಲೆಯನ್ನು ವರ್ಣಿಸುವಾಗ ಪ್ರಬಂಧಕಾರರು ಕವಿಗಳಾಗಿಬಿಡುತ್ತಾರೆ. ಶೃಂಗಾರ, ಪೂರ್ವಕಥೆ, ಪ್ರಕೃತಿ ಚಿತ್ರಗಳೆಲ್ಲ ಗುಂಪಾಗಿ ಬಂದು ಆ ವಾಕ್ಯವೃಂದವನ್ನು ಸೊಗಸುಗೊಳಿಸುತ್ತವೆ. ಊದಿನ ಕಡ್ಡಿಯ ಹೊಗೆ. "ಪರಿಮಳಿತ ಧೂಮಲತೆ" ಯಾಗುತ್ತದೆ. ಉದಿನ ಕಡ್ಡಿ "ಧೂಮಜೀವಿ" ಯಾಗುತ್ತದೆ. ಕಡ್ಡಿ ಉರಿದರೂ ಪರಿಮಳ ಮಾತ್ರ ಕೋಣೆಯನ್ನು ತುಂಬಿರುತ್ತದೆ "ಕವಿ ಕಣ್ಮರೆಯಾದಮೇಲೆಯೂ ಉಳಿಯುವ ಅವನ ಕೀರ್ತಿಯಂತೆ."

ಇಲ್ಲಿಂದ ಮುಂದೆ ಲೇಖಕರ ದೃಷ್ಟಿಗೆ ವಿಶ್ವವೇ ಒಂದು ಧೂಮಲೀಲೆಯಾಗಿ ಗೋಚರಿಸುತ್ತದೆ. ದೈವಲೀಲೆ ಧೂಮಲೀಲೆ-ಎರಡೂ ಒಂದೇ ಎಂಬ ಅರಿವು ಬರುತ್ತದೆ. ಆದರೆ ಅದು ಬಿಡಿಸಲಾರದ 'ಬ್ರಹ್ಮಗಂಟು'. ಹಾಗೆಯೇ ಯೋಚಿಸುತ್ತಾ ಲೇಖಕರು ವಾಲ್ಮೀಕಿ, ಪಂಪ, ಕುವೆಂಪು ಅವರ ಕಾವ್ಯಗಳಲ್ಲಿ ಬರುವ ಒಂದೊಂದು ಧೂಮಲೀಲಾ ಚಿತ್ರಗಳನ್ನು ಕೊಟ್ಟು ಕೊನೆಗೆ ,"ಭಾವ ಧೂಪ ಮುಗಿಯುತ್ತ ಬರುತ್ತಿದೆ, ಆದ್ದರಿಂದ ಈ ಲೇಖನ ಧೂಮವೂ ಇನ್ನು ವಿಶ್ರಾಂತವಾಗುವುದು ಅನಿವಾರ್ಯ ಮಾತ್ರವಲ್ಲ, ಸಹಜವೂ ಆಗಿದೆ" ಎಂದು ಎಲ್ಲ ಭಾವಪ್ರಬಂಧಗಳೂ ಕೊನೆಗಾಣುವ ಸಹಜ ಮಾರ್ಗವನ್ನು ನಿರೂಪಿಸುತ್ತಾರೆ.

ಇದು ಬಹು ಸುಂದರವಾದ ಭಾವ ಪ್ರಬಂಧ. ಇದರಲ್ಲಿ ಕವಿಕಲ್ಪನೆಯೂ ಕಾವ್ಯಮಯವಾದ ಶೈಲಿಯೂ ಹೊಂದಿಕೊಂಡು ಇದಕ್ಕೆ ಮೆರುಗನ್ನು ತಂದಿವೆ. ಇಲ್ಲಿ ಕೊಟ್ಟಿರುವ ಮೂರು ಕವಿಗಳ ಕಾವ್ಯ ಭಾಗಗಳನ್ನು ಪ್ರಬಂಧದ ಕಡೆಯಲ್ಲಿ ಉದ್ಧಾರ ಮಾಡುವುದಕ್ಕಿಂತ ಮಧ್ಯದಲ್ಲಿ ಎಲ್ಲಿಯಾದರೂ ಉಪಯೋಗಿಸಿದ್ದರೆ ಸೂಕ್ತವಾಗುತ್ತಿತ್ತು. ಆಗ ಭಾವ ಪ್ರಬಂಧದಲ್ಲಿರಬೇಕಾದ ಮುಖ್ಯ ಗುಣವೊಂದನ್ನು ಉಳಿಸಿಕೊಳ್ಳಬಹುದಾಗಿತ್ತು. ಲೇಖಕರ ಭಾವಗಳ ಮೇಲೆಯೇ ಓದುಗನ ಗಮನ ಕೇಂದ್ರೀಕೃತವಾಗಿ ಅವನ ಮನಸ್ಸಿನ ಮೇಲೆ ಹೆಚ್ಚು ಪರಿಣಾಮವುಂಟಾಗುತ್ತಿತ್ತು.

ಎಂ. ವಿ. ಸೀತಾರಾಮಯ್ಯನವರ ಭಾವ ಪ್ರಬಂಧಗಳ ಮತ್ತು ಲಕ್ಷಣಗಳನ್ನು ಕಾಣಬಹುದು ಇಷ್ಟು ಕಂಡಿದ್ದೇನೆ. ಕೃತಿಯಲ್ಲಿ ಪ್ರಾಚೀನ ಶಬ್ದಗಳ ಬಳಕೆಯನ್ನು ಆಗಿಂದಾಗ ಪ್ರಯೋಗ ಮಾಡುವುದು ಕಂಡುಬರುತ್ತದೆ. ಅಲ್ಲದೆ ಶ್ರೇಷ್ಠ ಕವಿಗಳ ಕಾವ್ಯಗಳಿಂದ ವಾಕ್ಯಗಳೂ ದೃಷ್ಟಾಂತಗಳೂ ಉದ್ಧೃತವಾಗುತ್ತವೆ. ಈ ಸ್ವಭಾವ ಕೃತ್ರಿಮವಾಗದಿರುವುದರಿಂದ ಅದರಲ್ಲಿ ಸೊಗಸಿದೆ.

ಅಲ್ಲಲ್ಲಿ ಬರುವ ಕೆಲವು ಪಾತ್ರಗಳ ಚಿತ್ರಗಳು ಸ್ವಯಂಪೂರ್ಣವಾಗಿವೆ. ಉತ್ಪ್ರೇಕ್ಷೆ ಇವರ ಮೆಚ್ಚಿನ ಅಲಂಕಾರ. ಪ್ರಬಂಧಗಳಲ್ಲಿ ಅಲ್ಲಲ್ಲಿ ಹೊಳೆಯುವ ತಿಳಿಹಾಸ್ಯ, ದಿಟ್ಟ ಅರಿವು, ಅನುಕಂಪ ಅಳವು ಎಂಬ ಮಾನವ ಗುಣಗಳೂ ಕಾಣಿಸಿಕೊಂಡಿವೆ. ಕೆಲವು ಕಡೆ ಶಬ್ದಪ್ರಯೋಗಗಳಲ್ಲಿ ಚಮತ್ಕಾರವು ನಡೆದಿದೆ. ಶ್ಲೇಷೆಯು ಒಂದೆರಡೆಡೆಗೆ ನುಗ್ಗಿ ಬಂದಿದೆ. ಉತ್ತಮವಾದ ಕೆಲವು ಉಪಮಾನಗಳು. ವಿಷಯದಲ್ಲಿ ಬದ್ಧತೆ ತೋರಿಸುವ ವೈಚಿತ್ರ್ಯ, ಆಗಾಗ ತಮ್ಮನ್ನೇ ಹಾಸ್ಯ ಮಾಡಿಕೊಳ್ಳುವ ನಗುವ ಮನೋವೃತ್ತಿ, ಹಾಸ್ಯದ ಹಿಂದಿರುವ ಕರುಣೆ- ಇವೆಲ್ಲ ಇಲ್ಲಿಯ ಆಕರ್ಷಣೆಗಳು.

ಈ ಅವಲೋಕನಕ್ಕೆ 'To look for beauties and not for defects,' ಎಂಬ Charles Lambನ ದೃಷ್ಟಿಯೇ ನಿದರ್ಶನ. ಅದೇ ಇಲ್ಲಿ ಸಾಹಿತ್ಯ ಕೃತಿಗಳ ಆಸ್ವಾದನೆಗೆ ಹೆಚ್ಚು ಸಹಾಯಕವೆಂದು ನನ್ನ ಸಂಪೂರ್ಣ ನಂಬಿಕೆ.

ಎಂ. ವಿ. ಸೀ ಅವರ ಕಾದಂಬರಿಗಳು

ಕೈನಾರ ವಾಮನರಾವ್

ಎಂ. ವಿ. ಸೀತಾರಾಮಯ್ಯ ಅವರ ಕಾದಂಬರಿಗಳು ಸಂಖ್ಯೆಯ ದೃಷ್ಟಿಯಲ್ಲಿ ಕಿರಿದಾಗಿ ಕಂಡರೂ ಸತ್ವದ ದೃಷ್ಟಿಯಲ್ಲಿ ಹಿರಿದಾಗಿವೆ. ಕಾದಂಬರಿಯ ಸಂಖ್ಯೆ ಕಡಿಮೆಯಾಗಿರಲು ಕಾರಣ, ಗ್ರಂಥ ಸಂಪಾದನೆ ಪ್ರಬಂಧ ಕವಿತೆ ನಾಟಕ ಸಣ್ಣ ಕಥೆ–ಹೀಗೆ ಸಾಹಿತ್ಯದ ಅನೇಕ ಪ್ರಕಾರಗಳಲ್ಲಿ ಅವರ ಪ್ರತಿಭೆ ಹಂಚಿಹೋಗಿರುವುದು. ಸಂಖ್ಯೆ ಕಿರಿದಾದರೂ ಹಳೆಕಾಲದ ಕಾದಂಬರಿಗಳ ಸಮೀಕ್ಷಿಸುವವರಿಗೆ ಅವರ ಎಲ್ಲ ಕಾದಂಬರಿಗಳೂ ಆದರಣೀಯವೇ ಆಗಿವೆ.

"ಗಂಡನನ್ನು ಗೆದ್ದವರು" ಕಾದಂಬರಿ ಮೊದಲು ಎರಡು ಕಿರು ಕಾದಂಬರಿಗಳಾಗಿ ಬೆಳಕು ಕಂಡಿದೆ. ೧೯೪೩ರಲ್ಲಿ ಪ್ರಕಟವಾದ "ಭಾಗ್ಯಲಕ್ಷ್ಮಿ" ಮತ್ತು ೧೯೪೫ರಲ್ಲಿ ಇದರ ಉತ್ತರ ಕತೆಯಾಗಿ ಪ್ರಕಟವಾದ "ಸೌಭಾಗ್ಯವತಿ" ಇವೇ ಆ ಎರಡು ಕಾದಂಬರಿಗಳು. "ಗಂಡನನ್ನು ಗೆದ್ದವರು" ಯುಗಳ ಕಾದಂಬರಿಯಾಗಿ ಹೊಸ ಹೆಸರಿನಿಂದ ೧೯೭೪ರಲ್ಲಿ ಪ್ರಕಟಗೊಂಡಿದೆ.

ಮೊದಲನೇ ಭಾಗದಲ್ಲಿ (ಭಾಗ್ಯಲಕ್ಷ್ಮಿ) ನಾರಾಯಣ ಮೂರ್ತಿ ಕಾದಂಬರಿಯ ನಾಯಕನಾಗಿ, ಈತನ ಹೆಂಡತಿ ಜಯಲಕ್ಷ್ಮಿ ನಾಯಕಿಯಾಗಿ ಕಾಣಿಸಿಕೊಳ್ಳುತ್ತಾರೆ. ಬಡತನದಲ್ಲಿ ಬಾಲ್ಯವನ್ನು ಕಳೆದ ನಾರಾಯಣಮೂರ್ತಿ [illegible] ಹುಡುಗ. ಸಿರಿವಂತ ಮನೆಯ ಕಪ್ಪು ಹೆಣ್ಣನ್ನು ಮೋಸಹೋಗಿ ಮದುವೆಯಾಗುತ್ತಾನೆ. ಅನಂತರ ಹೆಣ್ಣು ಕಪ್ಪು ಎಂದು ತಿರಸ್ಕರಿಸುತ್ತಾನೆ. ಮಾವ ತೋರಿಸಿದ ಐಶ್ವರ್ಯದ ಬಲೆಗೂ ಮನೆಯವರ ಒತ್ತಾಯಕ್ಕೂ ಮಣಿಯುವುದಿಲ್ಲ. ಹೆಂಡತಿಯನ್ನು ವರ್ಷಾನುಗಟ್ಟಲೆ ತೌರಿನಲ್ಲೇ ಕೊಳೆಯುವಂತೆ ಮಾಡುತ್ತಾನೆ ನಾರಾಯಣಮೂರ್ತಿ. ಅಕ್ಕ ಗೌರಿಯ (ಬಾಲ ವಿಧವೆ) ಸಹಾಯದಿಂದ ಹಾಗೂ ಸಹಕಾರದಿಂದ ಜಯಲಕ್ಷ್ಮಿ ಗಂಡನ ಮನೆಗೆ ಒಬ್ಬಂಟಿಗಳಾಗಿ ಬಂದು ಸೇರುತ್ತಾಳೆ: ತೊತ್ತಾಗಿಯಾದರೂ ಗಂಡನ ಮನೆಯಲ್ಲಿ ಬಾಳಬೇಕೆಂದು. ಮುಂದೆ ನಾರಾಯಣಮೂರ್ತಿ ಎಲ್ಲ ರೀತಿಯಲ್ಲೂ ಅಭಿವೃದ್ಧಿ ಹೊಂದುತ್ತಾನೆ. ಅದಕ್ಕೆ ಜಯಲಕ್ಷ್ಮಿಯೇ ಕಾರಣಳೆಂದು ನಾರಾಯಣ ಮೂರ್ತಿಯ ತಾಯಿ ವೆಂಕಮ್ಮ ಮತ್ತು ಗೌರಿ ಸಮಯ ದೊರೆತಾಗಲೆಲ್ಲಾ ನಾರಾಯಣ ಮೂರ್ತಿಗೆ ತಿಳಿಸುತ್ತಲೇ ಇರುತ್ತಾರೆ. ಕಡೆಗೆ ನಾರಾಯಣಮೂರ್ತಿಯ ಮನ-

ಪರಿವರ್ತನೆಯಾಗಿ. ಜಯಲಕ್ಷ್ಮಿಯ ಕುರಿತು [illegible] ; ಹೆಣ್ಣಾಗಿ ನೋಡದೆ ಮದುವೆಯಾಗಿ ಅವಳನ್ನು ದೂರಮಾಡುವುದು ಸರಿಯಲ್ಲವೆಂದು ತೀರ್ಮಾನಿಸುತ್ತಾನೆ. ಮುಂದೆ ಸಂಸಾರ ಚೆನ್ನಾಗಿ ಅನ್ಯೋನ್ಯವಾಗಿ ನಡೆಯುತ್ತದೆ. ಮಕ್ಕಳನ್ನು ಪಡೆದು ಮಡದಿಯನ್ನೂ ಮಕ್ಕಳನ್ನೂ ಅಕ್ಕರೆಯಿಂದ [illegible]ತ್ತಾನೆ. ಹಿಂದೆ [illegible] ಅಸಭ್ಯವಾಗಿ ಅನಾಗರಿಕನಾಗಿ ನಡೆದುಕೊಂಡಿದ್ದಕ್ಕಾಗಿ [illegible] ಮಡದಿಯ ಕ್ಷಮೆ ಯಾಚಿಸುತ್ತಾನೆ. ಈ ಭಾಗದ ಕಾದಂಬರಿ ನಾರಾಯಣ [illegible] ಭಾಗ್ಯಲಕ್ಷ್ಮಿಯ ಮದುವೆಯೊಂದಿಗೆ ಮುಗಿಯುತ್ತದೆ.

ಕಾದಂಬರಿಕಾರರು ಸೂಚಿಸುವಂತೆ ಕಾದಂಬರಿಯ ಮುಖ್ಯ ಘಟನೆ ನೈಜವಾಗಿ ನಡೆದದ್ದಾಗಿದೆ. ಆ ಘಟನೆಗೆ ತಕ್ಕ ಪಾತ್ರ, ವಾತಾವರಣ, ಸನ್ನಿವೇಶ ಇವುಗಳನ್ನು ನಿರ್ಮಿಸಿ ಕಾದಂಬರಿ ರಚಿಸಿದ್ದಾರೆ.

ಕಾದಂಬರಿಯ ಎರಡನೆಯ ಭಾಗ(ಸೌಭಾಗ್ಯವತಿ)ದಲ್ಲಿ ನಾರಾಯಣಮೂರ್ತಿಯ [illegible] ಮಗಳು ಭಾಗ್ಯಲಕ್ಷ್ಮಿ ಗಂಡನಿಂದ ತ್ಯಜ್ಯಳಾಗಿ, ಹಲವಾರು [illegible] ಯಾತನೆ ಅನುಭವಿಸಿ, ಕೂಡಿಕೊಂಡವಳೊಡನೆ ದೂರದ ಊರಲ್ಲಿ ಬಾಳುತ್ತಿದ್ದ ಗಂಡನನ್ನು ಗೆದ್ದ ಸಾಹಸ ಇಲ್ಲಿಯ ಕಥಾ ವಸ್ತು. ಕಾದಂಬರಿಯ ಪ್ರಥಮ ಭಾಗದಲ್ಲಿ ನಾರಾಯಣ ಮೂರ್ತಿ ಹೆಣ್ಣನ್ನು ಸರಿಯಾಗಿ ನೋಡದೆ, ಕಪ್ಪು ಹೆಣ್ಣನ್ನು ಮೋಸದಿಂದ ಮದುವೆಯಾಗಿ ಆ ಹೆಣ್ಣಿಗೆ ನೋವನ್ನುಂಟುಮಾಡಿದರೆ, ಇಲ್ಲಿ ರಘುವನ್ನು ಚೆನ್ನಾಗಿ ಪರೀಕ್ಷಿಸಿ ಒಪ್ಪಿ, ಮದುವೆಯಾಗಿ ಅನಂತರ ಅವಳ ಬಾಳನ್ನು ಕಣ್ಣೀರ ಕತೆಯನ್ನಾಗಿ ಮಾಡಿದ ಚಿತ್ರಣ ಇದೆ. ಕ್ಷುಲ್ಲಕ ಬಾಹ್ಯ ಥಳಕಿಗಾಗಿ ಗಂಡು ಮಾರುಹೋದ್ದರಿಂದ, ಒಂದು ಹೆಣ್ಣು ಏನೇನು ಕಷ್ಟ ಅನುಭವಿಸಬೇಕಾಯಿತು ಎನ್ನುವುದನ್ನು ಕಾದಂಬರಿಕಾರರು ಹೃದಯಸ್ಪರ್ಶಿಯಾಗಿ ಚಿತ್ರಿಸಿದ್ದಾರೆ. ಹೆಣ್ಣು ಸಹನೆ, ಸಮಾಧಾನ, ನಿರ್ಧಾರ ಇವುಗಳಿಂದ ಏನನ್ನಾದರೂ ಸಾಧಿಸಬಹುದೆಂಬುದಕ್ಕೆ ಈ ಕಾದಂಬರಿ ಪ್ರತೀಕವಾಗಿ ನಿಲ್ಲುತ್ತದೆ. ಕಾದಂಬರಿಯಲ್ಲಿ ಹಲವಾರು ಹೃದಯಸ್ಪರ್ಶಿ ಘಟನೆಗಳು ನಮ್ಮ ಅಂತಃಕರಣವನ್ನು ಕಲಕುತ್ತದೆ.

ವಿಧವೆ ತಾಯಿ ವೆಂಕಮ್ಮ, ಅನಾಥಾಲಯದಲ್ಲಿ [illegible] ಮನೆಗೆ ಬಂದ ಮಗನನ್ನು ಕುರಿತು "ಮಗೂ ಇದುವರೆಗೂ [illegible] ಮಾಡಿ ಕಾಲಕ್ಷೇಪ ಮಾಡಿದೆ; [illegible] ಎಷ್ಟು ದಿನ [illegible] ಬರೆದಿದೆಯೋ [illegible] ? ಈಗ [illegible] ಸಿಕ್ಕಿದ[illegible]. [illegible] ಯಾಕೆ ವ್ಯಥೆ ಪಡುತ್ತೀಯ ? [illegible] ಸಿಕ್ಕಿದ್ದರೇನೋ [illegible] . [illegible] ತಪ್ಪಿ [illegible] ಕಡೆ [illegible] [illegible]" [illegible] ಹೇಗೆ [illegible] !" [illegible]

ನಾತಿನಲ್ಲಿ ಸಂಸಾರದ ಬಡತನ, ಆ ಬಡತನದಲ್ಲೂ ಮಗ ಓದಿ ಮುಂದಕ್ಕೆ ಬರಬೇಕೆಂಬ ಹಂಬಲ. ಪರರ ಹಂಗಿನಲ್ಲಿ ಮಗ ವಿದ್ಯಾಭ್ಯಾಸ ಮಾಡಬೇಕಾಗಿ ಬಂದ ಸಂದರ್ಭಕ್ಕಾಗಿ ಯಾತನೆ. ಭವಿಷ್ಯದ ಒಳಿತಿಗಾಗಿ ತಾತ್ಕಾಲಿಕ ದುಃಖ, ಕಷ್ಟಗಳನ್ನು ನುಂಗುವ ಹಾಗೂ ಸಹಿಸುವ ಮನೋಭಾವ ಎಲ್ಲವೂ ವ್ಯಕ್ತವಾಗಿವೆ.

ಹಲವಾರು ಗಂಡುಗಳಿಂದ ತಿರಸ್ಕೃತಳಾದ ಕರಿ ಕನ್ಯೆಯನ್ನು ಹೇಗಾದರೂ ದಾಟಿಸಬೇಕೆಂಬ ಉದ್ದೇಶದಿಂದ ಮದುಗಿಯಂತೆ ನಾಗಪ್ಪ. ರಾಹುಕಾಲ ಕಳೆದನಂತರ ಸಂಜೆಗತ್ತಲಿನಲ್ಲಿ ವಧುಪರೀಕ್ಷೆ ಏರ್ಪಡಿಸುತ್ತಾರೆ. ಹಳ್ಳಿಯಾದ್ದರಿಂದ ಇಡೀ ಗ್ರಾಮಕ್ಕೆ ಇದ್ದ ಒಂದೇ ಗ್ಯಾಸ್ ಲೈಟ್ "ಯಾರೋ ಬೇರೆಯವರು ತೆಗೆದುಕೊಂಡು ಹೋಗಿದ್ದಾರೆ. ನಮಗೆ ಸಿಗಲಿಲ್ಲ" ಎಂದು ಎಲ್ಲರಿಗೂ ಕೇಳಿಸುವಂತೆ ಹೇಳಾಡುತ್ತಾರೆ. **ನಾಟಕ** ಆಡುತ್ತಾರೆ. ಮುಂಚೆಯೇ ಮಂದ ಪ್ರಕಾಶ ಬೀರುತ್ತಿದ್ದ ತೂಗುದೀಪವನ್ನು ಸ್ವಲ್ಪ ದೊಡ್ಡದು ಮಾಡಿದರು. ದೀಪ ಹೊಗೆ ಸುತ್ತಿಕೊಂಡು ಅದರ ಪ್ರಕಾಶ ಇನ್ನೂ ಸ್ವಲ್ಪ ಕಡಿಮೆಯಾಯಿತು. ಇಂಥ ಮಂದ ಬೆಳಕಿನಲ್ಲಿ ಹೆಣ್ಣನ್ನು ತೋರಿಸುವ, ಹೇಗಾದರೂ ಗಂಡನ್ನು ಒಪ್ಪಿಸಬೇಕೆಂಬ ಆಕಾಂಕ್ಷೆಯು. ಇದುವರೆವಿಗೂ ಶತ ಪ್ರಯತ್ನ ಪಟ್ಟರೂ ಮಗಳಿಗೆ ಗಂಡು ಗೊತ್ತುಮಾಡುವುದು ಅಸಾಧ್ಯವಾದ ಒಬ್ಬ ತಂದೆಯ ದಾರುಣ ಚಿತ್ರಣವನ್ನು ಇಲ್ಲಿ ಕಾದಂಬರಿಕಾರರು ಚೆನ್ನಾಗಿ ಚಿತ್ರಿಸಿದ್ದಾರೆ.

ಮನೆಗೆ ಸೊಸೆಯಾಗಿ ಬರುವ ಹೆಣ್ಣಿನಲ್ಲಿ ಒಬ್ಬ ತಾಯಿ ಅಪೇಕ್ಷಿಸುವುದು. ನಿರೀಕ್ಷಿಸುವುದು "ಮಗ ಮದುಗಿಯನ್ನು ಒಪ್ಪಿಕೊಂಡು ಬಂದಮೇಲೆ ಕುರೂಪಿಯಾಗಿ ಹೋಗಿದ್ದರೇನು? ಮದುಗಿಯು ಅಂದ ಚಂದ ಕಟ್ಟಿಕೊಂಡು ನಮಗೇನು? ಅವಳು ನಡೆವಂತಳಾಗಿ, ಒಳ್ಳೆಯ ಸೊಸೆಯಾಗಿ, ಮನೆತನದ ಹೆಸರನ್ನು ಮುಂದಕ್ಕೆ ತರುವ ಗೃಹಿಣಿಯಾಗಿ ಬಾಳಿದರೆ ಸಾಕು" ಎಂದು. ವೆಂಕಮ್ಮನವರ ಈ ಮಾತು ಎಲ್ಲ ತಾಯಂದಿರ ಮಾತೇ ಆಗಿದೆ.

ಮದುವೆಯ ಸಮಾರಂಭ ಅತ್ಯಂತ ವಿಜೃಂಭಣೆಯಿಂದ ನಡೆಯುತ್ತದೆ. ಅಂತಃಪಟದ ಹಿಂದೆ ಗಂಡು-ಹೆಣ್ಣು ಒಂದೊಂದು ಪಕ್ಕದಲ್ಲಿ ನಿಂತಿದ್ದಾರೆ. ಜೀರಿಗೆ ಬೆಲ್ಲ ಲಗ್ನದಲ್ಲಿ ಹಾಕಿಸಲು ಇಬ್ಬರಿಗೂ ಆತುರ. ವರ ತನ್ನ ವಧುವನ್ನು ಕಣ್ ತುಂಬ ನೋಡಿ, ಅವಳ ಮುಖ ಕಮಲದ ಮೇಲೆ ದುಂಬಿಯಂತೆ ಎರಗಿ, ಅಲ್ಲಿ ಕ್ರೀಡಿಸಲು ಕಾತರನಾಗಿದ್ದಾನೆ. ಅಂತಃಪಟ ಸರಿಯುತ್ತದೆ. ಹೆಣ್ಣಿನ ಬಣ್ಣವನ್ನು ನೋಡಿ [illegible]ನಾಗುತ್ತಾನೆ. ಹೆಣ್ಣು ಗಂಡಿನ ಮೇಲೆ ಜೀರಿಗೆ ಬೆಲ್ಲ ಸುರಿಯುತ್ತಾಳೆ. [illegible] ಕೈ ಹಿಡಿದು ಜಗ್ಗುತ್ತಿದ್ದ ಜೋಯಿಸರ ಕೈಯನ್ನು ಕೊಡವಿ, ಕೊಠಡಿಯನ್ನು ಸೇರಿ, ತಾಯಿ ಅಕ್ಕ ಸ್ನೇಹಿತ ಯಾರು ಮುಂದೆ ನೋಡ ಬೇಡವೆಂದು ಕಣ್ಣೀರಿಟ್ಟು ಗೋಳಾಡುತ್ತಾನೆ. ಆಗ ಅಕ್ಕಿಗೆ ಬಂದ ನಾಗಪ್ಪ

ನವರು ನಾರಾಯಣಮೂರ್ತಿಯ ಕಾಲನ್ನು ಹಿಡಿದುಕೊಂಡು ಮಂಡ ನಮಸ್ಕಾರ ಮಾಡುತ್ತಾರೆ. ಅಂಥ ಸಮಯದಲ್ಲೂ ನಾರಾಯಣಮೂರ್ತಿಯವರೇ "ಬೀಗರು ಹೀಗೆ ಮಾಡುವುದುಂಟೇ?" ಎನ್ನಬೇಕಾಗುತ್ತದೆ. ಅಂಥ ಪರಿಸ್ಥಿತಿ ಯಾರ ಬಾಳಿಗೂ ಬರಬಾರದು. ಈ ಸಂದರ್ಭ ಓದುಗರ ಮನಸ್ಸನ್ನು ಕಲಕುತ್ತದೆ. ಸನ್ನಿವೇಶ ಚಿತ್ರಣ ಚೆನ್ನಾಗಿ ಮೂಡಿಬಂದಿದೆ.

ಗೌರಿಯ ಸೌಖ್ಯ ಪತ್ರದಂತೆ ಗಂಡನ ಮನೆಯ ಬಾಗಿಲನ್ನು ಸೇರಿದ ಜಯಲಕ್ಷ್ಮಿಯನ್ನು ಅಪರಿಮಿತ ಆತ್ಮೀಯತೆಯಿಂದ ಗೌರಿ ಬರಮಾಡಿಕೊಳ್ಳುತ್ತಾಳೆ. ಅದಕ್ಕೆ ಜಯಲಕ್ಷ್ಮಿ:

"...ನೀವು ಬರೆದದ್ದು ನನಗೆ ಬಹಳ ಗೆಲುವಾಯಿತು. ನನ್ನ ಯಜಮಾನರ ಮನೆಗೆ ಬರುವುದಕ್ಕೆ ನನಗೆ ಯಾರ ಅಪ್ಪಣೆಯೇನು? ಯಾರ ಆಕ್ಷೇಪಣೆಯೇನು? ಯಾರು ಆಡಿಕೊಂಡರೆ ನನಗೇನು?— ಅನ್ನಿಸಿತು. ಆದದ್ದು ಆಗಿ ಹೋಗಲಿ. ನಾನು ಅಲ್ಲಿಗೆ ಹೋಗುವುದೇ ಖಂಡಿತ. ನನ್ನನ್ನು ಕಳುಹಿಸಿಕೊಟ್ಟುಬಿಡಿ. ಅಂತ ಹಟ ಹಿಡಿದೆ. ನನಗೆ ನಿಜವಾಗಿಯೂ ಅಲ್ಲಿಗೆ ಬಂದು ಇರಬೇಕು ಅಂತ ಒಂದೇ ಒಂದು ಆಸೆ ಉಂಟಾಯಿತು. ನಮ್ಮ ತಂದೆ ಮೊದಲು ನನ್ನ ಮಾತಿಗೆ ಕಿವಿಗೊಡಲಿಲ್ಲ. ನಾನು ಅನ್ನ-ನೀರು ಬಿಟ್ಟು ಕುಳಿತೆ. "ನಿನ್ನ ಹಣೆಯಲ್ಲಿ ಬರೆದಿದ್ದಂತೆ ಆಗಲಿ" ಅಂತ ಕರೆದು ಕೊಂಡು ಬಂದು ಬಿಟ್ಟರು: ಅತ್ತಿಗೆಮ್ಮ. ಇನ್ನು ನನ್ನ ಸುಖ-ದುಃಖ ಎಲ್ಲ ನಿಮ್ಮ ಕೈಗೆ ಸೇರಿದ್ದು. ನೀವು ಹೇಳಿದ ಹಾಗೆ ನಾನು ಧೈರ್ಯಮಾಡಿ ಬಂದಿದ್ದೇನೆ. ಎಂದು ಸಮರ್ಪಣ ಭಾವವನ್ನು ವ್ಯಕ್ತ ಪಡಿಸುತ್ತಾಳೆ ಅಲ್ಲಿ ಬದಲಾವಣೆಯನ್ನು ಮಾಡಿಕೊಂಡು ಬೆಳೆದ ಸ್ವಭಾವ ಇದು. ಈ ಕಾದಂಬರಿಯ ಕತೆಯ ಕಾಲ, ಕಾದಂಬರಿಕಾರರು ಸೂಚಿಸುವಂತೆ ಸ್ವಾತಂತ್ರ್ಯಪೂರ್ವಯುಗಕ್ಕೆ ಸೇರಿದ್ದು. ಆಗಿನ ಸಾಮಾಜಿಕ ಮೌಲ್ಯಗಳಿಗೂ ಈಗಿನವಕ್ಕೂ ಬಹಳಷ್ಟು ಭೇದವಿದೆ. ಪತಿಯೇ ಪರದೈವವೆಂದು ಬಗೆದಿದ್ದ ಕಾಲಕ್ಕೆ ಸಂಬಂಧಪಟ್ಟ ಈ ಕಾದಂಬರಿಯನ್ನು ಆ ದೃಷ್ಟಿಯಿಂದಲೇ ನಾವಿಲ್ಲಿ ಪರಿಶೀಲಿಸಬೇಕು. ಜಯಲಕ್ಷ್ಮಿ ಕೊನೆಯಗಾಲದಲ್ಲಿ ಗಂಡನ ಮನೆ ಸೇರಬೇಕೆಂಬ ಹಂಬಲ ಹೊತ್ತ ಹೆಣ್ಣು. ಅದಕ್ಕೆ ಒತ್ತಾಸೆಯಾಗಿ ನಿಂತದ್ದು ಗೌರಿ ಮತ್ತು ಆಕೆಯ ಪತ್ರ. ಗಂಡನಮನೆಯಲ್ಲಿ ಕೊನೆತನಕ ಬಾಳದಿದ್ದರೂ ಸರಿಯೇ ತೌರಿನ ಹಂಗಿನ ಕೂಳು ಗಂಟಲಿಗೆ ಇಳಿಯದಿದ್ದುದನ್ನು ನಾವು ಇಲ್ಲಿ ಕಾಣುತ್ತೇವೆ. ತನ್ನ ನಯ, ವಿನಯ, ನಾಜೂಕು, ಮತ್ತು ಶಾಂತಗುಣಗಳಿಂದ ಅತ್ತೆ-ನಾದಿನಿಯರನ್ನು ಗೆಲ್ಲುವುದೇ ಅಲ್ಲದೆ "ಕರಿಮೋರೆ" ಎಂದು ದೂರೀಕರಿಸಿದ್ದ ಗಂಡನ ಮನವನ್ನು ಗೆದ್ದ ಹೆಣ್ಣಿನ ಕತೆ ಈ ಕಾದಂಬರಿ. ಬದುಕಿದ್ದರೆ ಗಂಡನೊಟ್ಟಿಗಿರಬೇಕು; ಗಂಡನಿದ್ದರೆ ಬದುಕಿರಬೇಕು. ಎಂಬುದು ಮೌಢ್ಯದ ಹೆಣ್ಣನ್ನು ಪಡೆಯುವುದು

ಅಪರೂಪ. ಅಷ್ಟೇ ಅಲ್ಲ, ಹೆಂಗಸರೆಲ್ಲರೂ "ಕರಿಯ ಗಂಡ"-ಬೇಡವೆಂದರೆ? ಈ ತತ್ವಗಳನ್ನು ಪ್ರತಿಪಾದಿಸುತ್ತದೆ. ಕಾದಂಬರಿಯ ಈ ಭಾಗ.

ಕಾದಂಬರಿಯ ಸೌಭಾಗ್ಯವತಿಯ ಭಾಗದಲ್ಲಿ ಮೊದಲನೆ ಭಾಗದಲ್ಲಿ ಬಂದ ನಾರಾಯಣ ಮೂರ್ತಿಯ ಸಂಸಾರದ ವ್ಯಕ್ತಿಗಳೇ ಇಲ್ಲಿಯೂ ... ಮುಂಚೆಯೇ ಸಿದ್ಧವಾದ ಕೆಲವು ವ್ಯಕ್ತಿಗಳಿವರು. ಇವರಿಂದಲೇ ... ಭಾಗ ಬೆಳೆದಿದೆ. ಈ ಭಾಗ ಪೂರ್ಣವಾಗಿ ಕಲ್ಪಿತವೆಂದು ಕಾದಂಬರಿಕಾರರು ಬಿನ್ನಹದಲ್ಲಿ ಸೂಚಿಸಿದ್ದಾರೆ.

ನಾರಾಯಣ ಮೂರ್ತಿಯ ಅಳಿಯ ಕೃಷ್ಣಸ್ವಾಮಿ ಬಡ ವಿದ್ಯಾರ್ಥಿ. ಮಾವನಂತೆ ಅಳಿಯನೂ ಅನಾಥಾಲಯದಲ್ಲಿ ವ್ಯಾಸಂಗ ಮಾಡಿದವನು. ... ಮೆಚ್ಚಿ ಮದುವೆಯಾದ ಗಂಡು. ಭಾಗ್ಯಲಕ್ಷ್ಮಿ ಥಳಕಿನ ಹೆಣ್ಣಲ್ಲ. ಸಂಸ್ಕಾರ...ರಷ್ಟು ಗೃಹಿಣಿಯ ಗುಣವನ್ನು ಹೊಂದಿದವಳು. ಆದರೆ ಕೃಷ್ಣಸ್ವಾಮಿ ಆಧುನಿಕ ತಳಕಿಗೆ ಮಾರುಹೋದವನು. ತಬ್ಬಲಿಯಾದ ತನ್ನನ್ನು ವಿದ್ಯಾವಂತನಾಗಲು ಕಾರಣರಾದ ಸೋದರ ಮಾವ ಲಿಂಗಣ್ಣನವರನ್ನು ತೃಣೀಕರಿಸಿದವನು. ಅನಂತರವೂ ಲಿಂಗಣ್ಣನವರ ಮಗಳು ರುಕ್ಮಿಣಿಯ ಮೇಲಿನ ಮೋಹವನ್ನು ಬಿಡದವನು. ರುಕ್ಮಿಣಿಗೆ ಮದುವೆಯಾಗಿ ಗಂಡನ ಮನೆಯಲ್ಲಿದ್ದರೂ ಅವಳ ಮೇಲಿನ ಆಸೆಯನ್ನು ಬಿಡದೆ ಪತ್ರ ಬರೆದವನು. ಅವಳು ನಕ್ಕದೆ ಅವಳ ಗಂಡನ ಕೈಕೆಳಗೆ ಕೆಲಸಮಾಡಬೇಕಾಗಿ ಬಂದಾಗ ಉದ್ಯೋಗಕ್ಕೆ ರಾಜೀನಾಮೆ ಕೊಟ್ಟು ಮುಂದೆ ಮದ್ರಾಸಿನಲ್ಲಿ ವಕೀಲಿ ಓದಲು ಹೋಗಿ ಅಲ್ಲಿ ಒಂದು ಬೀದಿ ಹೆಣ್ಣಿನ ರೂಪಕ್ಕೆ ಮಾರುಹೋಗಿ ಅಲ್ಲಿಯೇ ಸಂಸಾರ ಹೂಡಿ ತನ್ನ ಹೆಂಡತಿ ಮಕ್ಕಳನ್ನು ಮರೆತ. ಆದರೆ ವಿದ್ಯಾಭ್ಯಾಸಕ್ಕೆಂದು ಮಾವ ಕಳುಹಿಸುತ್ತಿದ್ದ ಹಣವನ್ನು ನಾಚಿಕೆಯಿಲ್ಲದೆ ತೆಗೆದುಕೊಳ್ಳುತ್ತಿದ್ದ ಭಂಡಗಂಡು ಈತ.

ಭಾಗ್ಯಲಕ್ಷ್ಮಿ ಗಂಡನಿಂದ ಸುಮಾರು ಹತ್ತು ವರ್ಷ ದೂರವಿರುತ್ತಾಳೆ. ಶ್ಯಾಮಸುಂದರ ಮಗನಾಗಿ ಅವಳ ಬಾಳಿನ ಬೆಳಕಾಗಿ ಬೆಳೆಯುತ್ತಾನೆ. ಈ ಕಾಲದಲ್ಲಿ ಭಾಗ್ಯಲಕ್ಷ್ಮಿ ನೋವನ್ನು ಮರೆಯುವುದಕ್ಕೆ ಸಾಹಿತ್ಯವಾಚನ, ಸಂಗೀತಾಭ್ಯಾಸ, ಚರಕ ಇವುಗಳ ಮೊರೆ ಹೋಗುತ್ತಾಳೆ. ಆ ಮೂಲಕ ವಿಶ್ವಾಸಿಯಾಗುತ್ತಾಳೆ. ದಾರಿ ತಪ್ಪಿದ ಗಂಡನನ್ನು ಅವನು 'ಯಾವುದನ್ನು ಸಂಸಾರದ ಸಾರ' ಎಂದು ತಿಳಿದಿದ್ದನೋ ಅದೇ ಬಲೆಯನ್ನು ಬೀಸಿ, ತ್ಯಾಗವನ್ನು ಬೆಳಗಿಸಿ, ಮತ್ತೆ ಸಂಸಾರದಲ್ಲಿ ಸಂತಸವನ್ನು ತರುವ ಸಾಹಸಿ ಹೆಣ್ಣಾಗಿ ಆದರ್ಶಗೃಹಿಣಿಯಾಗಿ ಕಂಗೊಳಿಸುತ್ತಾಳೆ.

ಭಾಗ್ಯಲಕ್ಷ್ಮಿಯ ಮುಂದುವರಿದ ಕಥಾಭಾಗವಾದರೂ ಸೌಭಾಗ್ಯವತಿ, ಸ್ವತಂತ್ರ ಕಾದಂಬರಿಯ ಎಲ್ಲ ಗುಣಗಳನ್ನೂ ಮೈಗೂಡಿಸಿಕೊಂಡಿದೆ. ಹಳೇಕಾಲದ

ಮೌಲ್ಯಗಳನ್ನು ಹಿಂದೂ ಸಂಸ್ಕೃತಿಯನ್ನು ಸ್ತ್ರೀ ಸಹಜ ಗುಣವನ್ನು ಎತ್ತಿ ಹಿಡಿಯುವುದರಲ್ಲಿ ಕಾದಂಬರಿಕಾರರು ತಮ್ಮ ಒಲವನ್ನು ತೋರಿದ್ದಾರೆ. ಹಿಂದೂ ಸ್ತ್ರೀಗೆ ಗಂಡನ ಮನೆಯೇ ದೇವಾಲಯ, ಆತನ ಸಾನ್ನಿಧ್ಯವೇ ಜೀವನದ ಸರ್ವಸ್ವ ಎಂಬುದನ್ನು ಕಾದಂಬರಿಯ ಉದ್ದಕ್ಕೂ ಸ್ಪಷ್ಟಪಡಿಸಲಾಗಿದೆ. ಎಲ್ಲ ಸಂಸಾರಗಳಲ್ಲೂ ಸಮಸ್ಯೆಗಳು ತಲೆದೋರುತ್ತವೆ. ಹಾಗೆಯೇ ಇಲ್ಲೂ. ಅದಕ್ಕೆ ಯೋಗ್ಯ ಮತ್ತು ಸಕಾರಣವಾದ ಪರಿಹಾರವನ್ನು ನಾವು ಇಲ್ಲಿ ಕಾಣುತ್ತೇವೆ. ಈ ಹಿರಿಯರ ಸನ್ನಿವೇಶ ಮತ್ತು ಪಾತ್ರಗಳ ಸೃಷ್ಟಿ ಕಲೆಗಾರಿಕೆಯಿಂದ ಕೂಡಿದೆ. ಮಾನವೀಯ ಗುಣಗಳನ್ನು ಎತ್ತಿ ಹಿಡಿಯುವುದರಲ್ಲಿ ಕಾದಂಬರಿಕಾರರು ಪೂರ್ಣ ಯಶಸ್ವಿಯಾಗಿದ್ದಾರೆ.

"ಮಾದನ ಮಗಳು"–ಸೀತಾರಾಮಯ್ಯನವರ ಕಾದಂಬರಿಗಳಲ್ಲಿಯೇ ದೊಡ್ಡದು. 400 ಪುಟಗಳ ಕಾದಂಬರಿ. ಗಾತ್ರದಲ್ಲಲ್ಲದೆ ಸತ್ವದಲ್ಲಿಯೂ ಉನ್ನತ ಸ್ಥಾನವನ್ನು ಹೊಂದಿದೆ. ಈ ಕಾದಂಬರಿಯ ಮುಖ್ಯ ವಿಷಯ ಹರಿಜನ ಸಮಸ್ಯೆಯಾಗಿದೆ. ಕಾದಂಬರಿಗೆ ಸಾಮಗ್ರಿ: ಹರಿಜನ ಪತ್ರಿಕೆ. ಅಸ್ಪೃಶ್ಯತೆಯ ಕಳಂಕ. ಕಾಂಗ್ರೆಸ್ಸಿನ ಇತಿಹಾಸ. ಮೆರವಣಿಗೆ-ಇವುಗಳೆಂದು 'ಬಿನ್ನಹ'ದಲ್ಲಿ ಸ್ಮರಿಸಿದ್ದಾರೆ. ಹರಿಜನ ಸಮಸ್ಯೆಯನ್ನು ಪ್ರಮುಖವಾಗಿ ಪ್ರಸ್ತಾಪಿಸಿದ್ದರೂ ಕಾದಂಬರಿಯುದ್ದಕ್ಕೂ ಸ್ವಾತಂತ್ರ್ಯ ಚಳುವಳಿಯ ಹೋರಾಟದ ಚಿತ್ರಣ ಹಾಸು-ಹೊಕ್ಕಾಗಿ ಸೇರಿ ಹೋಗಿದೆ. ಕಾದಂಬರಿ ಸ್ವಾತಂತ್ರ್ಯ ಹೋರಾಟಯುಗದಲ್ಲಿ ಪ್ರಾರಂಭವಾಗಿ, ಸ್ವಾತಂತ್ರ್ಯ ಬಂದ ಕಾಲಕ್ಕೆ ಮುಗಿಯುತ್ತದೆ.

ಕಥಾನಾಯಕ ಸುಂದರಮೂರ್ತಿ ಕಾಲೇಜ್ ವಿದ್ಯಾರ್ಥಿ. ಸುಪ್ರಸಿದ್ಧ ವಿಜ್ಞಾನಿ ಪ್ರಫುಲ್ಲಚಂದ್ರರಾಯ್ ಅವರಿಂದ ಪ್ರಭಾವಿತನಾಗಿ, ಹರಿಜನೋದ್ಧಾರಕ್ಕಾಗಿ ತನ್ನ ಜೀವನವನ್ನು ಮುಡಿಪಾಗಿಟ್ಟವನು. "ಅಸ್ಪೃಶ್ಯತೆಯ ನಿವಾರಣೆಯಾಗದೆ ಭಾರತಕ್ಕೆ ಮೋಕ್ಷವಿಲ್ಲ" ಎಂಬುದನ್ನು ಕಾಯಾ ವಾಚಾ ಮನಸಾ ನಂಬಿದವನು. ಕಾಲೇಜಿನಲ್ಲಿ ಚರ್ಚಾಕೂಟವೇರ್ಪಡಿಸಿ "ಹರಿಜನರ ಏಳ್ಗೆಯಾಗಬೇಕು" ಎಂದು ವಾದಿಸಿ ಗೆದ್ದವನು. ಅಂದಿನಿಂದ ಆ ದಿಶೆಯಲ್ಲಿ ತನ್ನನ್ನು ತೊಡಗಿಸಿಕೊಂಡವನು.

ವಿಶ್ವನಾಥಶಾಸ್ತ್ರಿ ಸುಂದರಮೂರ್ತಿಯ ಸಹಪಾಠಿ. ಒಂದೇ ಊರಿನವರು. ಆಪ್ತ ಸ್ನೇಹಿತರು. ಹರಿಜನರ ಸಮಸ್ಯೆಯ ವಿಚಾರದಲ್ಲಿ ಉತ್ತರ ಧ್ರುವ-ದಕ್ಷಿಣ ಧ್ರುವವಾದವರು. ಅಂದಿನಿಂದ ಸುಂದರಮೂರ್ತಿಯ ವ್ಯಕ್ತಿತ್ವವನ್ನು ಕೆಡಿಸಲೇ ಬೇಕೆಂಬ ಹಂಬಲ ಹೊತ್ತವನು. ಹರಿಜನರೆಂದರೆ ಮಾರು ದೂರದ ವ್ಯಕ್ತಿ. ಮಾದನ ಮಗಳ ರೂಪಿಗೆ ಮನಸೋತು ಮರುಳಾದವನು. ಸುಂದರಮೂರ್ತಿಗೆ ಒಲಿದಿದ್ದ ಗೋದಾ ಮಾದನ ಮಗಳು ಕಮಲೆಯನ್ನು ಮದುವೆಯಾಗಿ, ಅವಳ ಬಾಳನ್ನು ಕಣ್ಣೀರ ಕತೆಯನ್ನಾಗಿ ಮಾಡಿದ ಮಹಾ ನೀಚ. ಒಂದು ಮಾತಿನಲ್ಲಿ ಹೇಳುವುದಾದರೆ ಗೋಮುಖವ್ಯಾಘ್ರ.

... ರಾಜಪ್ಪ, ಸುಂದರ ಮೂರ್ತಿಯ ಕಾಲೇಜ್ ಸ್ನೇಹಿತ. ಆದಿಕರ್ನಾಟಕ ಕುಲಸ್ಥ. ಕಾಲೇಜ್ ದಿನಗಳಲ್ಲಿ ಪರಿಸರದಿಂದ ನೊಂದವನು, ಅವಮಾನಿತನಾದವನು. ವಿದ್ಯಾವಂತನಾಗಿ, ಕುಲೀನರಿಗಿಂತ ಉನ್ನತ ಹುದ್ದೆ ಪಡೆದು ಮೆರೆಯಬೇಕೆಂಬ ಆಕಾಂಕ್ಷೆ ಉಳ್ಳವನು. ಸ್ವಕುಲಬಾಂಧವರನ್ನು ಉದ್ಧರಿಸಬೇಕೆಂಬ ಅಪೇಕ್ಷೆ ಇಲ್ಲದವನು. ಕಾಲೇಜ್ ಚರ್ಚಾಕೂಟದಲ್ಲಿ ಭಾಗವಹಿಸಿ ಹರಿಜನರ ಉದ್ಧಾರಕ್ಕಾಗಿ ನೂರುದ್ದ ಭಾಷಣ ಮಾಡಿದ ಈ ವ್ಯಕ್ತಿಗೆ "ಮಾದನ ಮಗಳನ್ನು ಮದುವೆಯಾಗು" ಎಂದು ಸುಂದರ ಮೂರ್ತಿ ಕೇಳಿದಾಗ, "ಅಲ್ಲ, ಹುಡುಗಿಯ ತಂದೆ ಮಾದಿಗ ಎಂದಿರಿ. ನಾವು ಹೊಲೆಯರು. ನಮಗೂ ಅವರಿಗೂ ಕೊಟ್ಟು, ತರುವುದು ಇಲ್ಲ"–ಎಂದು ಹೇಳುತ್ತಾನೆ. ಹಿರಿಯರು ಒಪ್ಪುವುದಿಲ್ಲವೆಂದು ಹಿಂಜರಿಯುತ್ತಾನೆ. ಸವರ್ಣೀಯರು ನಮ್ಮನ್ನು ಹಿಂದಕ್ಕೆ ತಳ್ಳಿದ್ದು ಅವರೇ ಮುಂದಕ್ಕೆ ತರಬೇಕು. ಆ ಹೊಣೆ ಅವರದೇ ನನ್ನದೇನಿಲ್ಲ ಎನ್ನುವಂಥ ಧೋರಣೆಯುಳ್ಳ ವ್ಯಕ್ತಿ. ಬಯಸಿದಂತೆ ಮೇಲೇರಿ, ಪದವಿ ಸುಖ ಕಂಡುಕೊಳ್ಳುವ ವ್ಯಕ್ತಿ.

ಕಾದಂಬರಿಯ ಹೆಸರನ್ನು ಹೊತ್ತ ಮಾದನ ಮಗಳು-ಚೆನ್ನಿ. ಮಾದನ ಸಾಕು ಮಗಳು. ಮಾದ ತಾನು ಭೋಗ್ ಕೃಷ್ಣಪ್ಪನವರ ತೋಟವನ್ನು ನೋಡಿಕೊಳ್ಳುವ ಕಾವಲುಗಾರ ಹಾಗೂ ಕೂಲಿ. ಸೂರಪ್ಪ ಕೃಷ್ಣಪ್ಪನವರ ತಮ್ಮ. ಪ್ಲೇಗ್ ಮಾರಿಗೆ ಹೆಂಡತಿಯನ್ನು ಬಲಿಕೊಟ್ಟವನು. ಹೆಂಡತಿ ಸತ್ತನಂತರ ವಿಧವೆ ಓಬಮ್ಮನೊಡನೆ ಸಂಬಂಧಬೆಳೆಸಿ ಅವಳಿಂದ ಒಂದು ಮಗುವನ್ನು ಪಡೆಯುತ್ತಾನೆ. ಆ ಹೆಣ್ಣು ಮಗುವೇ ಈ ಚೆನ್ನಿ. ಈ ವಿಚಾರ ಸೂರಪ್ಪ ಮತ್ತು ಕೃಷ್ಣಪ್ಪ ಇಬ್ಬರಿಗೇ ತಿಳಿದ ಸತ್ಯ. ಮಾದನಿಗೂ ತಿಳಿಯದು. ಸೂರಪ್ಪ ತನ್ನ ತಪ್ಪನ್ನು ಅಣ್ಣನ ಮುಂದೆ ಒಪ್ಪಿಕೊಂಡು, ಊರು ಬಿಟ್ಟು ದೇಶಾಂತರ ಹೊರಟು ಹೋಗುತ್ತಾನೆ. ಕೃಷ್ಣಪ್ಪನವರು ತುಂಬಾ ಸಾಧುಪ್ರಾಣಿ. ಚೆನ್ನಿಯನ್ನು ಮಾದನಬಳಿಯೇ ಬೆಳೆಯಲು ಅನುವು ಮಾಡಿಕೊಡುತ್ತಾರೆ. ಅವಳ ಒಳಿತು-ಕೆಡಕುಗಳನ್ನು ಗಮನಿಸುತ್ತಾರೆ. ಚೆನ್ನಿ ಚಿಕ್ಕಂದಿನಲ್ಲಿ ಸುಂದರಮೂರ್ತಿಯೊಡನೆ ಆಡಿ ಬೆಳೆಯುತ್ತಾಳೆ. ಸುಂದರಮೂರ್ತಿ ತಿಳಿಯದೇ ತಂಗಿಯಂತೆ ಮಮತೆ ತೋರುತ್ತಾನೆ. ಮಾದಮುಪ್ಪಿನಿಂದ ತೀರಿಕೊಂಡಾಗ ಚೆನ್ನಿ ಕೃಷ್ಣಪ್ಪನವರಿಗೆ ಸಮಸ್ಯೆಯಾಗುತ್ತಾಳೆ. ಮಗಳೆಂದು ಒಪ್ಪಿ-ಅಪ್ಪಿ ಪ್ರೀತಿಯಿಂದ ಮನೆಗೆ ಕರೆದುಕೊಂಡು ಹೋಗಲು ಸಿದ್ಧ. ಆದರೆ ಸಮಾಜಕ್ಕೆ ಹೆದರಿ ಹಿಂಜರಿಯುತ್ತಾರೆ. ಬೈರಾಗಿ ವೇಷದಲ್ಲಿ ಬಂದ ಸೂರಪ್ಪ ಚೆನ್ನಿಯ ಹೋಟೆಯನ್ನು ಹೊತ್ತುಬಂದು ತಾಳಿ ಮಂಟಪದಲ್ಲಿ ಅವಳನ್ನು ಕಾಪಾಡುತ್ತಾನೆ. ಚೆನ್ನಿಗೆ ಈ ಬೈರಾಗಿಯೇ ತನಗೆ ಜನ್ಮಕೊಟ್ಟ ತಂದೆ ಎಂದು ತಿಳಿಯದು. ಚೆನ್ನಿ ಈಗ ವಯಸ್ಸಿಗೆ ಬಂದ ಹೆಣ್ಣು. ಬೈರಾಗಿ ಹೇಳಿದ್ದನ್ನು ಭಯ–ಭಕ್ತಿಗಳಿಂದ ಆಚರಿಸುತ್ತಾಳೆ. ಅವಿದ್ಯಾವಂತಳಾದ ಚೆನ್ನಿ ಬೈರಾಗಿಯ ಮತ್ತು

ಸುಂದರಮೂರ್ತಿಯ ಸಹವಾಸದಿಂದ ಮತ್ತು ಸತತ ಸಾಧನೆಯಿಂದ ವಿದ್ಯಾವಂತಳಾಗುತ್ತಾಳೆ. ಸುಂದರಮೂರ್ತಿ ಬೈರಾಗಿ ಇಬ್ಬರೂ ಚೆನ್ನಿಯಲ್ಲಾದ ಬದಲಾವಣೆ ಮತ್ತು ಅವಳ ಪ್ರೇಮವನ್ನು ಕಂಡು "ಸಾಧನಾ" ಎಂದು ಹೆಸರಿಡುತ್ತಾರೆ. ಕಮಲೆ ತಪ್ಪಿಹೋದ ನಂತರ ಸುಂದರಮೂರ್ತಿಯ ಮನಸ್ಸು ಸಾಧನಾಳ ಕಡೆಗೆ ವಾಲುತ್ತದೆ. ಇದನ್ನು ಗಮನಿಸಿದ ಬೈರಾಗಿ ಸತ್ಯಸ್ಥಿತಿಯನ್ನು ತಿಳಿಸುತ್ತಾನೆ. ಮುಂದೆ ತನ್ನ ಗೆಳೆಯ ಶ್ರೀಧರಮೂರ್ತಿಗೆ ಸಾಧನಾಳನ್ನು ಕೊಟ್ಟು ಕನ್ಯಾಪಿತೃ ಸ್ಥಾನದಲ್ಲಿ ನಿಂತು ಸುಂದರಮೂರ್ತಿ ಧಾರೆಯೆರೆದು ಕೊಡುತ್ತಾನೆ. ಸುಂದರಮೂರ್ತಿಯಿಂದ ಗಾಂಧಿ ತತ್ವಗಳನ್ನು ಅಪ್ಪಿಕೊಂಡು ಅರಿತಿದ್ದ ಸಾಧನಾ ಕಮ್ಯೂನಿಸ್ಟ್ ತತ್ವಗಳಿಗೆ ಮಾರುಹೋಗಿದ್ದ ಶ್ರೀಧರನ ಧ್ಯೇಯಾನುವರ್ತಿಯಾಗಿ ಬಾಳಿನಲ್ಲಿ ಸುಖಕಾಣುತ್ತಾಳೆ.

ಕಾದಂಬರಿಯ ನಾಯಕ ಸುಂದರಮೂರ್ತಿಯ ವ್ಯಕ್ತಿತ್ವ ಮಹಾಮಾನವೀಯವಾಗಿದೆ. ತಾನು ನಂಬಿದ ಧ್ಯೇಯಕ್ಕೆ ಕಡೆಯವರೆಗೂ ಅಂಟಿ ಕೊಂಡಿದ್ದು, ಪರಜನರ ಸೇವೆಗಾಗಿ ತನ್ನ ಎಲ್ಲಾ ಸುಖ ಸೌಲಭ್ಯಗಳನ್ನೂ ತ್ಯಾಗ ಮಾಡುತ್ತಾನೆ. ಊರಿನ ಹಿರಿಯರ, ಕುಲಸ್ಥರ, ನೆಂಟರ-ಬಹಿಷ್ಕಾರದ ಬೆದರಿಕೆಗೆ ಜಗ್ಗುವುದಿಲ್ಲ. ತಾನು ಪ್ರೀತಿಸಿದ ಹೆಣ್ಣು ಕೈತಪ್ಪಿ ಹೋದರೂ ನಂಬಿದ ತತ್ವಗಳನ್ನು ಬಿಟ್ಟು ಕೊಡುವುದಿಲ್ಲ. ಸಾಬರಮತಿ ಆಶ್ರಮದಲ್ಲಿದ್ದು ಗಾಂಧಿಯವರ ನಡೆ ನುಡಿಗಳನ್ನು ಹತ್ತಿರದಿಂದ ಕಂಡು, ಅರಿತು, ತನ್ನ ಬಾಳನ್ನು ತಿದ್ದಿಕೊಳ್ಳುತ್ತಾನೆ. ಸ್ವಾತಂತ್ರ್ಯ ಚಳವಳಿಯಲ್ಲಿ ಧುಮುಕಿ ಸೆರೆವಾಸ ಅನುಭವಿಸುತ್ತಾನೆ. ಕಡೆಯಲ್ಲಿ ತನ್ನ ಊರು ಕೊಳಲೂರಿನಲ್ಲೇ ನಿಂತು ಹರಿಜನರ ಸೇವೆಯಲ್ಲಿ ನಿರತನಾಗುತ್ತಾನೆ. "ಹರಿಜನ ಸೇವಕ ಸಂಘ" ಪ್ರಾರಂಭಿಸುತ್ತಾನೆ. ಊರಿನ ವರ್ತಕ ರಾಮಯ್ಯ ರಾವಣ ಬುದ್ಧಿಯವನು. ಪ್ರತಿಯೊಂದರಲ್ಲೂ ಪ್ರಯೋಜನ ಪಡೆಯಬೇಕೆಂಬ ಸಮಾಜ ದ್ರೋಹಿ. ಈತನ ನಯವಾದ ಮಾತುಗಳನ್ನು ನಂಬಿ, ತನ್ನ ಜಮೀನನ್ನು ಆಶ್ರಮಕ್ಕೆ ಕೊಡುತ್ತಾನೆ. ಹರಿಜನ ಸೋಗ, ಹಾಕಿದ ರಾಮಯ್ಯ, ಸುಂದರ ಸದ್ದರಿ ತನ್ನ ಕಾಳಸ್ವಪ್ನದಾರಕ್ಕೆ ಕೊಂಡರೆ ಬೆಂದು ಬಗೆದು, ಆಶ್ರಮ ಬಿಡುವಂತೆ ಮಾಡುವುದರಲ್ಲಿ ಯಶಸ್ವಿಯಾಗುತ್ತಾನೆ. ಹರಿಜನೋದ್ಧಾರ ಕಾರ್ಯ ತನ್ನೊಬ್ಬನಿಂದ ಸಾಧ್ಯವಿಲ್ಲ ಇಡೀ ಸಮಾಜವೇ ಅದಕ್ಕಾಗಿ ಶ್ರಮಿಸಬೇಕೆಂಬ ಸತ್ಯವನ್ನು ಸುಂದರ ಕಂಡುಕೊಳ್ಳುತ್ತಾನೆ.

ಹರಿಜನ ಸಮಸ್ಯೆಯನ್ನು ಪ್ರಧಾನವಾಗಿಟ್ಟುಕೊಂಡು, ನಾಡನ್ನು ಆಳವಾಗಿ ಕಾದಂಬರಿಕಾರರು ಚಿತ್ರಿಸಿದ್ದಾರೆ. ಅಸ್ಪೃಶ್ಯತೆಯ ನಿವಾರಣೆ ಕೇವಲ ಸರ್ಕಾರಿ ಕಾನೂನುಗಳಿಂದ ಸಾಧ್ಯವಿಲ್ಲ. ಅಂಥ ಕಾನೂನುಗಳನ್ನು ತಮ್ಮ ಸ್ವಾರ್ಥಕ್ಕೆ ಬಳಸಿಕೊಂಡು, ಕೆಲವೇ ಮಂದಿ ಶ್ರೀಮಂತರಾಗುತ್ತಾರೆ. ರಾಜಕೀಯ ವ್ಯಕ್ತಿಗಳು, ತಮ್ಮ ಸ್ವಂತ ಅನುಕೂಲಕ್ಕೆ ಯಾವ ಮಾರ್ಗವನ್ನಾದರೂ ಅನುಸರಿಸುತ್ತಾರೆ ಎನ್ನು

ವುದಕ್ಕೆ ಸಂಕೇತವಾಗಿ ರಾಮಯ್ಯ ನಿಲ್ಲುತ್ತಾನೆ. ಇಡೀ ಸಮಾಜ 'ಹರಿಜನರೂ ನಮ್ಮವರೆ' ಎಂದು ತಿಳಿದು, ಅವರನ್ನು ಆತ್ಮೀಯತೆಯಿಂದ ಆಲಂಗಿಸಿಕೊಳ್ಳಬೇಕು. ಅವರೊಡನೆ ಬೆರೆತು, ಅವರನ್ನೂ ನಮ್ಮವರಲ್ಲೊಬ್ಬರನ್ನಾಗಿ ಮಾಡಿಕೊಳ್ಳಬೇಕು. ಅಲ್ಲಿಯವರೆಗೆ ಈ ಸಮಸ್ಯೆ ಹೀಗೆಯೇ ಮುಂದುವರಿಯುತ್ತದೆ ಎಂಬುದನ್ನು ಕಾದಂಬರಿ ಪ್ರತಿಪಾದಿಸುತ್ತದೆ. ಸಮಾಜದಲ್ಲಿ ಒಂದು ಒಳ್ಳೇಕಾರ್ಯ ಮಾಡಬೇಕಾದರೆ ಎಷ್ಟೊಂದು ಎಡರು ತೊಡರುಗಳನ್ನು ಎದುರಿಸಬೇಕಾಗುತ್ತದೆ ಎಂಬುದಕ್ಕೆ ನಿದರ್ಶನ ಈ ಕಾದಂಬರಿ ಯನಾಯಕ. ಗಾಂಧೀತತ್ವದಲ್ಲಿ ಅಪಾರನಂಬಿಕೆ ಹೊಂದಿರುವ ಲೇಖಕರು ಸಮಸ್ಯೆ ಯನ್ನು ಎಲ್ಲ ದೃಷ್ಟಿಗಳಿಂದಲೂ ನೋಡಿದ್ದಾರೆ.

ಸುಂದರಮೂರ್ತಿ ಕಾಲೇಜಿನ ಚರ್ಚಾಕೂಟದಲ್ಲಿ ಅಸ್ಪೃಶ್ಯತೆಯ ಬಗ್ಗೆ ಆಡಿದ ಮಾತುಗಳು :

" .... ವರ್ಣಾಶ್ರಮ ಧರ್ಮಗಳು ಸಮಾಜದ ಎಲ್ಲ ವ್ಯಕ್ತಿಗಳ ಕೆಲಸ ಕಾರ್ಯದ ಹಂಚಿಕೆಯ ಸೌಕರ್ಯಕ್ಕಾಗಿ ಏರ್ಪಟ್ಟದ್ದು. ಯಾರೂ ಮಾಡಲೊಪ್ಪದೆ ಉಳಿದ, ಆದರೂ ಸಮಾಜದ ಸುಸ್ಥಿತಿಗೆ ಅತ್ಯಗತ್ಯವಾದ, ಕೀಳೆನಿಸಿದ ಕೆಲಸವನ್ನು ಮಾಡಿದ ಮಾತ್ರಕ್ಕೆ ಅವರು ಕೀಳಾದರೆ ? ಅವರು ಮದ್ಯಪಾನ ಮಾಂಸ ಭಕ್ಷಣ ಮಾಡುತ್ತಿರ ಬಹುದು ನಿಜ. ವರ್ಣಾಶ್ರಮಕ್ಕೆ ಸೇರಿದವರು ಎಷ್ಟು ಜನ ಮದ್ಯಪಾನ ಮಾಡುವು ದಿಲ್ಲ ? ಮಾಂಸ ತಿನ್ನುವುದಿಲ್ಲ ? ಅವರನ್ನು ನಾವು ಸಮಾಜಬಾಹಿರರನ್ನಾಗಿ ಮಾಡಿದ್ದೇವೆಯೆ ? ಮಾಂಸಾಹಾರಿಗಳಾದ ಕ್ರೈಸ್ತ ಮತೀಯರನ್ನು ಮುಸಲ್ಮಾನ ರನ್ನೂ ಪುರಸ್ಕರಿಸಿ, ಇವರನ್ನು ತಿರಸ್ಕರಿಸಲು ಇವರು ಮಾಡಿದ ಪಾಪವೇನು ? ಕೆಲವು ಕಡೆ ಬ್ರಾಹ್ಮಣರು ಮೀನು ತಿನ್ನುತ್ತಾರೆ. ಬಂಗಾಲದಲ್ಲಿ ಅವರು ಮಾಂಸವನ್ನೂ ತಿನ್ನುತ್ತಾರಂತೆ. ಪಂಚಮರಿಗೆ ವಿದ್ಯೆಯ ಬೆಳಕನ್ನು ಕೊಡದೆ ಅಜ್ಞಾನಾಂಧಕಾರದಲ್ಲಿ ಅವರು ತೊಳಲುತ್ತಿರಬೇಕಾದರೆ ಅದಕ್ಕೆ ಹೊಣೆ ಯಾರು ? ನಾವೇ ಅಲ್ಲವೆ ? ಇವರನ್ನು ನಾವು ಹೀಗೆ ಕಡೆಗಣಿಸುತ್ತಿರುವುದರಿಂದಲೇ ಅಲ್ಲವೆ ನಮ್ಮ ದೇಶದಲ್ಲಿ ದೇಶೀಯ ಕ್ರಿಶ್ಚಿಯನ್ನರ ಸಂಖ್ಯೆ ದಿನದಿನಕ್ಕೂ ಬೆಳೆಯುತ್ತಾ ಬಂದು ಹಿಂದೂ ಸಮಾಜ ಬಲಹೀನವಾಗುತ್ತಿದ್ದು ಪ್ರಪಂಚದ ದೃಷ್ಟಿಯಲ್ಲಿ ನಗೆಗೀಡಾಗಿರುವುದು ? ...."

ಸುಂದರಮೂರ್ತಿಯ ಈ ಮಾತುಗಳಲ್ಲಿ ಹರಿಜನರನ್ನು ದೂರವಿಟ್ಟರೆ ದೇಶಕ್ಕೆ ಆಗುವ ಅಪಾಯ ಅನಾಹುತ ಚೆನ್ನಾಗಿ ವ್ಯಕ್ತವಾಗಿದೆ. ಸಮಸ್ಯೆಯ ಗಂಭೀರತೆ ಯನ್ನು ಲೇಖಕರು ಸಾಕಷ್ಟು ಹಿಂದೆಯೇ ಗುರುತಿಸಿ ಸಮಾಜದ ಮುಂದಿಟ್ಟಿದ್ದಾರೆ. ಸುಂದರಮೂರ್ತಿಯ ತಂದೆ ಕೃಷ್ಣಪ್ಪನವರೂ ಮಗನಂತೆಯೇ ತಮ್ಮ ಸುತ್ತಮುತ್ತಲಿನ ಸಮಾಜವನ್ನು ಆರೋಗ್ಯ ದೃಷ್ಟಿಯಿಂದ ಕಾಣುವ ಗುಣವನ್ನು ಬೆಳಸಿಕೊಂಡವರು. ತಮ್ಮ ತೋಟದ ಆಳು ಮಾದ ಖಾಯಿಲೆ ಬಿದ್ದಾಗ ಸ್ವತಃ ತಾವೇ ಶುಶ್ರೂಷೆ ಮಾಡಿದ

ವರು. ಕೃಷ್ಣಪ್ಪನವರೇನು ಹಿಂದಿನಿಂದ ಬಂದ ಆಚಾರ ವ್ಯವಹಾರಗಳನ್ನು ಬಿಟ್ಟವರಲ್ಲ. ಆದರೆ ಮಾನವತ್ವಕ್ಕೆ ಮೀರಿದ್ದಲ್ಲ ಈ ಆಚಾರ ಎಂಬುದನ್ನು ತಿಳಿದವರು.

ನಾಡಿಗೆ ಸ್ವಾತಂತ್ರ್ಯ ಬಂದ ಮೇಲೆ ಆದದ್ದಾದರೂ ಏನು? ಹೊಟ್ಟೆ ಹೊರೆಯಾದವನಿಗೆ ಉರಿಯುವಷ್ಟು ಐಶ್ವರ್ಯ. ಆದರೆ ಹರಿಜನರ ಸಮಸ್ಯೆ. ದೀನ-ದಲಿತರ ನೋವು, ಸಂಕಟ ಎಲ್ಲವೂ ಹಾಗೆಯೇ ಉಳಿಯಿತು. "........ಜನರಲ್ಲಿ ನಿಜವಾದ ದೈವಭಕ್ತಿ ಎಲ್ಲೆಲ್ಲಿಯೂ ಇಳಿಮುಖವಾಗುತ್ತಿತ್ತು. ಕಾಳಸಂತೆಯಲ್ಲಿ ಕೋಟಿ ಸಂಪಾದನೆ ಮಾಡಿದ ಸಾಹುಕಾರರ ದೈವಭಕ್ತಿ ಮಾತ್ರ ಸಮುದ್ರ ಭರದಂತೆ ಉಕ್ಕಿ ಹೊಸ ಹೊಸ ದೇವಾಲಯಗಳನ್ನು ಕಟ್ಟಿಸ ತೊಡಗಿದ್ದರು. ಗೋಪುರಗಳಿಗೆ ಚಿನ್ನದ ಕಲಶ ಹಾಕಿಸುತ್ತಿದ್ದರು. ಕೋಮುವಾರು ಹಾಸ್ಟೆಲ್ಲುಗಳ ಸ್ಕಾಲರ್ ಷಿಪ್‌ಗಳ ಸಂಖ್ಯೆಯನ್ನು ಹೆಚ್ಚಿಸುತ್ತಿದ್ದರು; ಸಣ್ಣಪುಟ್ಟ ಸಾಹುಕಾರರು ಸತ್ಯನಾರಾಯಣ ಪೂಜೆ. ದೇವಸ್ಥಾನಗಳಲ್ಲಿ ವಿಶೇಷ ಪೂಜೆಗಳು, ಪಲ್ಲಕಿ ಉತ್ಸವಗಳು ಮುಂತಾದ ಕೈಂಕರ್ಯಗಳನ್ನು ನಡೆಸುತ್ತಿದ್ದರು. ಬಡವರು ಯಾವ ದೇವರನ್ನೂ ಕಾಣದೆ ಅನ್ನದೇವರ ಸಾಕ್ಷಾತ್ಕಾರಕ್ಕಾಗಿ ಪರಿತಪಿಸುತ್ತಿದ್ದರು. ಒಟ್ಟಿನಲ್ಲಿ ದೈವಭಕ್ತಿ ಜನಕ್ಕೆ ಕಡಿಮೆಯಾಗಿತ್ತು; ಸ್ವಾರ್ಥ ಸಾಧಕರು ಭಕ್ತರಾಗಿ ಪರಿಣಮಿಸಿದ್ದರು. ಈ ಹೆಚ್ಚು ತಗ್ಗುಗಳಿಂದ ಭಕ್ತರ ಸಂಖ್ಯೆಯೇನೋ ಸರಿದೂಗಿತ್ತು" ಎನ್ನುವ ಕಾದಂಬರಿಕಾರರು, ಸಮಾಜವನ್ನು ನಿಕಟವಾಗಿ ಪರಿಶೀಲಿಸಿದ್ದಾರೆ.

"ಸ್ನೇಹದ ಕಾಣಿಕೆ" ಒಂದು ಕಾದಂಬರಿ ಎಂಬುದಕ್ಕಿಂತ ಒಂದು ನೀಳ್ಗತೆ ಎನ್ನಬಹುದು. ಇಲ್ಲಿ ಪ್ರಧಾನವಾದ ಪಾತ್ರಗಳು ಮೂರೇ. ವೆಂಕಟೇಶಯ್ಯ, ಸುಶೀಲೆ ಮತ್ತು ಸುಬ್ಬರಾಯ.

ಹೈಸ್ಕೂಲ್ ಶಿಕ್ಷಕ ವೆಂಕಟೇಶಯ್ಯನವರದು ಚಿಕ್ಕ ಸಂಸಾರ. ಸುಶೀಲೆ ಅವರಿಗೆ ತಕ್ಕ ಹೆಂಡತಿ. ಅವರ ಬದುಕಿನಲ್ಲಿ ಒಂದೇ ಕೊರತೆಯೆಂದರೆ ಮದುವೆಯಾಗಿ ಎಷ್ಟೋ ವರ್ಷಗಳು ಆಗಿದ್ದರೂ ಮಕ್ಕಳಿರಲಿಲ್ಲ. ಕೆಲಸವನ್ನೂ ಹೆಂಡತಿಯನ್ನೂ ಕಳೆದುಕೊಂಡು ನೆಲೆಯಿಲ್ಲದ ವ್ಯಕ್ತಿ ಸುಬ್ಬರಾಯನಿಗೆ ವೆಂಕಟೇಶಯ್ಯ ತನ್ನ ಮನೆಯಲ್ಲಿಯೇ ಆಶ್ರಯ ನೀಡಿದ. ಸುಬ್ಬರಾಯ ಸಂಸಾರದ ಒಬ್ಬ ಸದಸ್ಯನಂತೆ ಹೊಂದಿಕೊಂಡ. ತನ್ನ ತಾಯ್ತನದ ಬಯಕೆಯಲ್ಲಿ ಸುಶೀಲೆ ಸುಬ್ಬರಾಯನ ಕಡೆ ಮನಸ್ಸು ಹರಿಸಿದಳು. ಹೆಂಡತಿ ಗರ್ಭಿಣಿಯಾದಳೆಂದು ವೆಂಕಟೇಶಯ್ಯನಿಗೆ ಸಂಭ್ರಮ. ಆದರೆ ನಿರ್ಮಲ ಮನಸ್ಸಿನ ಮಮತೆಯ ಮೂರ್ತಿಯಂತಹ ಪತಿಗೆ ತಾನು ದ್ರೋಹ ಮಾಡಿದೆನೆಂಬ ಪಾಪಪ್ರಜ್ಞೆಯಿಂದ ಸುಶೀಲೆ ಮನೆಯಿಂದ ಹೊರಬಿದ್ದಳು. ಆಸ್ಪತ್ರೆಯಲ್ಲಿ ಮಗುವಿಗೆ ಜನ್ಮನೀಡಿ ಗಂಡನಿಗೊಂದು ಕಾಗದ ಬರೆದು ಕಣ್ಮುಚ್ಚಿದಳು. ತನ್ನದಲ್ಲದ ಮಗುವನ್ನು "ಸ್ನೇಹದ ಕಾಣಿಕೆ" ಎಂದು ವೆಂಕಟೇಶಯ್ಯ ಸ್ವೀಕರಿಸಿದ.

ಇಂಥ ಸೂಕ್ಷ್ಮ ವಿಷಯವನ್ನು ವಿಶ್ಲೇಷಿಸುವಾಗ ಎಲ್ಲಿಯೂ ಅಶ್ಲೀಲಕ್ಕೆ ಅವಕಾಶವಿಲ್ಲದಂತೆ ಲೇಖಕರು ನಿರೂಪಿಸಿದ್ದಾರೆ. ಸುಶೀಲೆಯ ವರ್ತನೆಯು ಎಷ್ಟರ ಮಟ್ಟಿಗೆ ಸಮರ್ಥನೀಯ ಎಂಬ ಪ್ರಶ್ನೆಯನ್ನು ಈ ಕಾದಂಬರಿ ಒಡ್ಡುತ್ತದೆ. ಪ್ರಕೃತಿದತ್ತವಾದ ತನ್ನ ತಾಯ್ತನದ ಬಯಕೆಯನ್ನು ತುಂಬುವುದು ಸಾಧ್ಯವಿಲ್ಲವೆಂದು ಅರಿವಿಗೆ ಬಂದ ಮೇಲೆ ಅವಳ ಮನಸ್ಸು ಹೊರಳಿದ್ದರಲ್ಲಿ ತಪ್ಪೇನು? ಎನಿಸಿದರೂ ಪಾಪಪ್ರಜ್ಞೆ ಮಾನಸೀಯ ಅಂಶಗಳ ತಾಕಲಾಟ ಆಕೆಯನ್ನು ಬಿಡಲಾಗದೆ ತನ್ನ ತಪ್ಪಿಗೆ ಸಾವೇ ಪ್ರಾಯಶ್ಚಿತ್ತವೆಂದು ತೀರ್ಮಾನಿಸುತ್ತಾಳೆ.

ವೆಂಕಟೇಶಯ್ಯ ವಿದ್ಯಾವಂತ. ಹೆಂಡತಿಯ ತಪ್ಪು ತಿಳಿದ ಮೇಲೂ ಅವಳ ಮನಸ್ಸನ್ನು ನೋಯಿಸಬಾರದೆಂದು ಭಾವಿಸಿದವನು. ತನ್ನ ನಿಷ್ಕಪಟ ಸ್ವಭಾವದ ದುರುಪಯೋಗ ನಡೆದಿರುವುದನ್ನು ಅರಿತೂ ಶಾಂತನಾಗಿಯೇ ಇದ್ದ. ಕೊನೆಗೆ ಸ್ಥಿತಪ್ರಜ್ಞನಂತೆ ತನ್ನದಲ್ಲದ 'ಸ್ನೇಹಿತನ ಕಾಣಿಕೆ'ಯನ್ನು ಆತ್ಮೀಯವಾಗಿ ಸ್ವೀಕರಿಸಿದ. ಇಂಥ ಉದಾತ್ತ ಜೀವಿಗಳೂ ಉಂಟೆ? ಎಂಬುದು ಕಾದಂಬರಿ ಓದುಗರನ್ನು ಕಾಡುವ ಪ್ರಶ್ನೆ.

"ತಾಯ ಬಯಕೆ" ಕಾದಂಬರಿ ಒಂದು ನೈಜ ಘಟನೆಯಿಂದ ರೂಪಗೊಂಡಿದ್ದೆಂದೂ ಬಿನ್ನಪದಲ್ಲಿ ಕಾದಂಬರಿಕಾರರು ಸೂಚಿಸಿದ್ದಾರೆ. ನಡೆದ ಸಣ್ಣ ಘಟನೆಗೆ ಕಾಲ್ಪನಿಕ ಅಂಶಗಳು ಸೇರಿವೆ.

ಸುಂದರಮ್ಮ ವಿಧವೆ. ಆಕೆಗೆ ಇಬ್ಬರು ಗಂಡುಮಕ್ಕಳು. ಹಿರಿಯವ ಶಾಮಣ್ಣ, ರಾಜು ಕಿರಿಯವ. ನಾಗರತ್ನ ಸುಂದರಮ್ಮನವರ ಅಣ್ಣನ ಮಗಳು. ತಬ್ಬಲಿಯಾಗಿ ಸೋದರತ್ತೆಯ ಆಶ್ರಯ ಸೇರಿದವಳು. ಡಾ|| ರಘುರಾಂ ಈ ಕುಟುಂಬದ ವೈದ್ಯರು ಹಾಗೂ ಹಿತೈಷಿ. ಇವರು ಕಾದಂಬರಿಯಲ್ಲಿ ಮೊದಲಿನಿಂದ ಕಡೆಯವರೆವಿಗೂ ಕತೆಯಲ್ಲಿ ಕೊಂಡಿಯಂತೆ ಸೇರಿಹೋಗಿದ್ದಾರೆ. ಸುಂದರಮ್ಮನವರ ಪತಿ ಚೆನ್ನಕೇಶವಯ್ಯ ಸಾಮಾನ್ಯ ದರ್ಜೆ ಮನುಷ್ಯ. ದ್ವಿತೀಯ ಮಹಾಸಮರದಲ್ಲಿ ಹೇರುವ್ಯಾಪಾರದಲ್ಲಿ ಆಕಸ್ಮಿಕವಾಗಿ ದೊರೆತ ಐಶ್ವರ್ಯದಿಂದ ಒಂದು ನೆಲೆಗೆ ಬಂದವರು. ಸುಬ್ಬರಾಯ ಎಂಬ ಮಿತ್ರನಿಂದ ವಂಚಿತರಾಗಿ ಅದೇ ಕೊರಗಿನಲ್ಲಿ ಸಾವನಪ್ಪಿದವರು. ಆದರೆ ತಾವು ತೀರಿಕೊಂಡ ಮೇಲೆ ಸಂಸಾರ ಬಿರುಗಾಳಿಗೆ ಸಿಕ್ಕ ನೌಕೆಯಂತಾಗದಂತೆ ಜೀವನೋಪಾಯಕ್ಕೆ ಮಾರ್ಗಮಾಡಿ ಸ್ವರ್ಗವಾಸಿಯಾದವರು. ಸುಂದರಮ್ಮನವರ ಕುರುಡು ಬಯಕೆಗೆ ಬಲಿಯಾದ ಸಂಸಾರದ ಚಿತ್ರಣ-ಈ ಕಾದಂಬರಿ.

ಶಾಮಣ್ಣ ಓದಿನಲ್ಲಿ ಮುಂದು. ವಿದೇಶಕ್ಕೆ ಹೋಗಿ ಉನ್ನತ ವ್ಯಾಸಂಗ ಮಾಡಿ ಬರಬೇಕೆಂಬ ಮಹತ್ವಾಕಾಂಕ್ಷೆ ಹೊತ್ತವನು. ತಾಯ ಬಲವಂತಕ್ಕೆ ರತ್ನಳನ್ನು ಮದುವೆಯಾಗಿ ಸಂಸಾರದಲ್ಲಿ ಕಹಿ ಉಂಡವನು. ಬಾಹ್ಯದಲ್ಲಿ ಕುರೂಪಿಯಾದರೂ

ಸುಂದರವಾದ ಅಂತರಂಗವುಳ್ಳವನು. ತಮ್ಮನೇ ದ್ರೋಹ ಬಗೆದರೂ ಅವನ ಬಗ್ಗೆ ಕಿಂಚಿತ್ತೂ ಕೋಪಗೊಳ್ಳದಂಥ ವ್ಯಕ್ತಿತ್ವ ಉಳ್ಳವನು. ಮಗು ತನ್ನದಲ್ಲವೆಂದು ತಿಳಿದಾಗಲೂ ಅದರ ಆರೈಕೆಯ ಭಾರವನ್ನು ಹೊತ್ತಂಥ ಉದಾರಗುಣವುಳ್ಳವನು.

ರಾಜು ಹೆಸರಿಗೆ ತಕ್ಕಂತೆ ರಾಜನೆ........ ಸಾಮಾನ್ಯ ದರ್ಜೆ ವಿದ್ಯಾರ್ಥಿ. ಸದಾ ಸಿನಿಮಾ ಗುಂಗಿನಲ್ಲಿ ಮುಳುಗಿರುತ್ತಿದ್ದವನು. ಅಷ್ಟೇ ಸಾಲದೆಂಬಂತೆ ರತ್ನಳ ಜೊತೆಗಾತಿಯರ ಬೆನ್ನ ಹಿಂದೆ ಬಿದ್ದಿರುತ್ತಿದ್ದ ರಸಿಕರಾಜ ಇವನು. ರತ್ನ ಇವನ ಸಮವಯಸ್ಕಳು. ಮೊದಲಿನಿಂದ ಸಲಿಗೆಯೊಡನೆ ಬೆಳೆದವರು. ಅಣ್ಣ ಶಾಮಣ್ಣನಿಗೆ ರತ್ನಳೊಡನೆ ವಿವಾಹವಾದಮೇಲೂ ರತ್ನಳ ಮೇಲಿನ ಮೋಹವನ್ನು ಬಿಡದೆ ತಾಯಿ ಸಮಾನಳಾದ ಅತ್ತಿಗೆಯನ್ನು ಕೂಡಿದವನು. ಇದರಲ್ಲಿ ರತ್ನಳು ಅಷ್ಟೇ ನಿಂದಾರ್ಹಳಾದರೂ ರಾಜು ಅಕ್ಷಮ್ಯ ಅಪರಾಧದಿಂದ ಬಿಡುಗಡೆ ಪಡೆಯಲು ಸಾಧ್ಯವಿಲ್ಲದವನು. ತನ್ನ ಹೀನ ನಡುವಳಿಕೆಯ ಮೂಲಕ ಇಡೀ ಸಂಸಾರವನ್ನು ಹಾಳುಗೆಡಹಿದವನು.

ರತ್ನ ಬಾಲ್ಯದಲ್ಲಿ ಬಡತನದಲ್ಲಿ ಬೆಳೆದು ಅದರ ಕಹಿ ಉಂಡವಳು. ಅನಂತರ ಸೋದರತ್ತೆಯ ಆಶ್ರಯದಲ್ಲಿ ಬೆಳೆದು ಒಲ್ಲದ ಗಂಡನ ಕೈ ಹಿಡಿದವಳು. ಸಾಕಿದ ಅತ್ತೆಗೆ ಎದುರಾಡಿ ನೋವನ್ನು ಉಂಟುಮಾಡಬಾರದೆಂಬ ಉದ್ದೇಶದಿಂದ ಶಾಮಣ್ಣನನ್ನು ಮದುವೆಯಾಗಿ ಮನವನ್ನೂ ಮೈಯನ್ನೂ ಮೈದುನ ರಾಜುವಿಗೆ ಅರ್ಪಿಸಿ, ಕಾದಂಬರಿಯಲ್ಲಿ ದುರಂತನಾಯಕಿಯಾಗಿ ಕಾಣಿಸಿಕೊಳ್ಳುವವಳು. ವಿಧಿ ಎನ್ನಬಹುದು ಅಥವಾ ಕಾಣದ ಕೈ ಎನ್ನಬಹುದು ಯಾವುದಕ್ಕೋ ಸಿಕ್ಕಿ ಸಾವನ್ನಪ್ಪಿದವಳು. ಬೆಳೆದು ಹೆಮ್ಮರವಾಗಬೇಕಾದ್ದು, ಫಲ ನೀಡಿ ಧರೆಗುರುಳಿದಂಥ ಬಾಳು ಇವಳದು. ಹಿರಿಯರ ಮಾತಿಗೆ ಕಟ್ಟುಬಿದ್ದು ಆತ್ಮವಂಚನೆ ಮಾಡಿಕೊಂಡವಳು.

ಸುಂದರಮ್ಮನವರಿಗೆ ಸೋದರಸೊಸೆ ನಾಗರತ್ನಳನ್ನು ಶಾಮಣ್ಣನಿಗೆ ತಂದುಕೊಂಡು ಮನೆ ತುಂಬಿಸಿಕೊಳ್ಳಬೇಕೆಂಬುದು ಬಯಕೆ. ಅದೇ "ತಾಯಿ ಬಯಕೆ". ರತ್ನಳ ತಂದೆ ಸುಂದರಮ್ಮನವರ ಸೋದರ ನಾರಾಯಣರಾಯರ ಹೆಬ್ಬಯಕೆಯೂ ಅದೇ. ಆದರೆ ರತ್ನಳಿಗೆ ಸರಸಿಯಾದ ರಾಜುವಿನ ಮೇಲೆ ಮೋಹ. ಶಾಮಣ್ಣ ಮದುವೆಯ ಅನಂತರವೂ ವಿದ್ಯಾಭ್ಯಾಸದ ಕಡೆಗೆ ಗಮನ ಹರಿಸಲು ಹೆಂಡತಿಯನ್ನು ದೂರವಿಟ್ಟ. ಈ ದಂಪತಿಗಳನ್ನು ಸನಿಹಕ್ಕೆ ತರಲು ಸುಂದರಮ್ಮನವರ ಪ್ರಯತ್ನ ವ್ಯರ್ಥವಾಗುತ್ತದೆ. ಯೌವ್ವನದ ಉನ್ಮಾದಾವಸ್ಥೆಯಲ್ಲಿದ್ದ ರತ್ನ ಗಂಡನನ್ನು ಒಲಿಸಿಕೊಳ್ಳಲು, ಸುಖ ಪಡೆಯಲು ಪಟ್ಟ ಪ್ರಯತ್ನವೂ ವ್ಯರ್ಥವಾಗುತ್ತದೆ. ಕಾಮಾತುರಳಾದ ಈ ಹೆಣ್ಣು ಮೊದಲೇ ತನ್ನ ಮನಸ್ಸನ್ನು ಒಪ್ಪಿಸಿದ್ದ ರಾಜುವಿಗೆ ಮೈಯನ್ನೂ ಒಪ್ಪಿಸಿ ಬಸುರಾಗುತ್ತಾಳೆ. ಮುಂದೆ ಕಾದಂಬರಿ ಅಸಂಗತದ ತಿರುವನ್ನು ಪಡೆದು ದುರಂತದೊಂದಿಗೆ ಮುಗಿಯುತ್ತದೆ.

ತಾಯಿ ಸುಂದರಮ್ಮ ತಮ್ಮ ಬಯಕೆಯನ್ನು ಈಡೇರಿಸಿಕೊಳ್ಳಲು ಹಲವಾರು ಮಾರ್ಗ ಅನುಸರಿಸುತ್ತಾಳೆ. ಇದೇ ಸಂಸಾರ ದುರಂತವನ್ನಪ್ಪಲು ಕಾರಣವಾಗುತ್ತದೆ. 'ನಾನು ರತ್ನಳನ್ನು ಮದುವೆಯಾಗುತ್ತೇನೆ' ಎಂದು ರಾಜು ಕೇಳಿದರೂ ಜಾತಕ ಕೂಡಿಬರುವುದಿಲ್ಲವೆಂದು ಹೇಳಿ ತಪ್ಪಿಸುತ್ತಾರೆ. ಶಾಮಣ್ಣ ಸ್ವಲ್ಪ ಕುರೂಪಿ. ಅವನಿಗೆ ಚಲುವೆಯಾದ ರತ್ನಳನ್ನು ತಂದುಕೊಳ್ಳುವ ಬಯಕೆ. ರತ್ನಳ ಇಂಗಿತವನ್ನೇ ತಿಳಿಯುವ ಪ್ರಯತ್ನವನ್ನೇ ಮಾಡುವುದಿಲ್ಲ. ತಮ್ಮ ನಿರ್ಧಾರವನ್ನು ಅವಳ ಮೇಲೆ ಹೇರುತ್ತಾರೆ. ಸಂಸಾರದ ಎಲ್ಲ ವಿಚಾರಗಳಲ್ಲೂ ಭಾಗಿಯಾದಂತೆ ಡಾ|| ರಘುರಾಂ ಇದರಲ್ಲೂ ಭಾಗಿಯೇ. ಆದರೆ ರಾಜು-ರತ್ನಳ ಮದುವೆ ಮಾಡಿರೆಂದು ಡಾ|| ರಘುರಾಂ ಹೇಳಿದಾಗ ಶಾಮಣ್ಣನಿಗೆ ಒಳ್ಳೆ ಹೆಣ್ಣು ಸಿಕ್ಕುವುದಿಲ್ಲವೆಂದೂ ರಾಜು ರೂಪವಂತ ಯಾರಾದರೂ ಒಳ್ಳೆಯ ಹೆಣ್ಣು ಕೊಡುತ್ತಾರೆಂದೂ ಆ ಸಲಹೆಯನ್ನು ಸುಂದರಮ್ಮ ತಳ್ಳಿಹಾಕುತ್ತಾರೆ. ಇದೇ ದುರಂತಕ್ಕೆ ನಾಂದಿಯಾಗುತ್ತದೆ.

ಕಾದಂಬರಿ ಹಲವಾರು ಸಮಸ್ಯೆಗಳನ್ನು ತಂದೊಡ್ಡುತ್ತದೆ. ಹಿರಿಯರು ಕಿರಿಯರ ಇಂಗಿತವನ್ನು ತಿಳಿದುಕೊಳ್ಳಲು ಅದರಂತೆ ನಡೆಯಲು ಸಿದ್ಧರಿರುವುದಿಲ್ಲ. ಕಾಲವಶನಾದ ಒಬ್ಬ ವ್ಯಕ್ತಿಗೆ ಮಾತು ಕೊಟ್ಟಿದ್ದೇವೆ ಎಂಬ ಕಾರಣದಿಂದ ಕಿರಿಯರ ಬಾಳನ್ನು ಹಾಳುಗೆಡಹುವುದು ಸರಿಯಲ್ಲ. ಇಲ್ಲಿಗೆ ಗಂಡ-ಹೆಂಡಿರಾಗುವ ಶಾಮಣ್ಣ ರತ್ನ ಇಬ್ಬರೂ ಒಬ್ಬರನ್ನೊಬ್ಬರು ಒಪ್ಪಿಲ್ಲ. ಹಿರಿಯರ ಮಾತಿನಂತೆ ಸಂದರ್ಭದ ಒತ್ತಡಕ್ಕೆ ಸಿಕ್ಕಿ ಮದುವೆಯಾಗುತ್ತಾರೆ. ತಾಯಿಯ ಬಯಕೆಯನ್ನು ಶಾಮಣ್ಣನೂ ಅತ್ತೆಯ ಅಪೇಕ್ಷೆಯನ್ನು ರತ್ನಳೂ ಮನಸ್ಸಿಲ್ಲದಿದ್ದರೂ ಒಪ್ಪುತ್ತಾರೆ. ಇಲ್ಲಿ ತಾಯಿಯ ಬಯಕೆ ಒಂದು ರೀತಿಯಲ್ಲಿ ಹಠವಾಗಿ ಮಾರ್ಪಟ್ಟಿದೆ. ಆ ತಾಯಿಯ ಬಯಕೆಯಂತೆ ಶಾಮಣ್ಣ ರತ್ನ ಗಂಡ-ಹೆಂಡಿರಾಗುವುದೇನೋ ಈಡೇರುತ್ತದೆ. ಆದರೆ ಅದರ ಫಲ ಮಾತ್ರ ಮಹಾ ಘೋರತರದ್ದಾಗಿರುತ್ತದೆ. ಇನ್ನೊಬ್ಬ ತಾಯಿ ರತ್ನಳ ಬಯಕೆಯೂ ಇಲ್ಲಿ ಓದುಗರ ಗಮನವನ್ನು ಸೆಳೆಯುತ್ತದೆ. "ತಾನು ಪಾಪಿ. ಮಾಡಬಾರದ ಅಪರಾಧವನ್ನು ಮಾಡಿದೆ. ಆದ್ದರಿಂದ ತಾನು ಬದುಕಿರಬಾರದು" ಎಂಬುದು ಈ ತಾಯಿಯ ಬಯಕೆ ಸಂಕಲ್ಪ. ಇದೂ ಈಡೇರುತ್ತದೆ. ರತ್ನ ಮಗುವಿಗೆ ಜನ್ಮವಿತ್ತು ಗಂಡನಲ್ಲಿ ಕ್ಷಮಾಪಣೆ ಕೇಳಿ, ಮಗುವಿಗೆ ಆಶ್ರಯ ಕೊಡಬೇಕೆಂದು ಪ್ರಾರ್ಥಿಸಿ ಸಾವನ್ನಪ್ಪುತ್ತಾಳೆ. ಮಗುವಿಗೆ ಜನ್ಮ ಕೊಡಬೇಕು, ತತ್‌ಕ್ಷಣ ಅಸುನೀಗಬೇಕೆಂಬ ಈ ತಾಯಿಯ ಹಿರಿಯ ಬಯಕೆ ಆಶ್ಚರ್ಯಕರವಾಗಿ ಕಾರ್ಯಗತವಾಗುತ್ತದೆ. ಈ ತಾಯಿಯ ಬಯಕೆ ಗೆಲ್ಲುತ್ತದೆ. ಹೆಂಡತಿಯಾಗಿ ಅಧರ್ಮ ಮಾಡಿದರೂ ಹೆಣ್ಣಿನ ಧರ್ಮವನ್ನು ಪಾಲಿಸಿ ಮಗುವಿಗೆ ಜನ್ಮಕೊಟ್ಟು ಕಣ್ಮುಚ್ಚುತ್ತಾಳೆ.

ಈ ಕಾದಂಬರಿಯ ಕಾಮಣ್ಣ ಕೊನೆಯ ಹಂತದಲ್ಲಿ 'ಸ್ನೇಹದ ಕಾಣಿಕೆ'ಯ ವೆಂಕಟೇಶಯ್ಯನಂತೆಯೇ ಸ್ಥಿತಪ್ರಜ್ಞನಾಗುತ್ತಾನೆ. ತನ್ನದಲ್ಲದ ಮಗುವನ್ನು ತಾನೇ ಲಾಲನೆ-ಪಾಲನೆ ಮಾಡಬೇಕಾಗಿ ಬಂದಾಗ ಬದುಕಿನ ಕಹಿಯನ್ನೆಲ್ಲ ಉಂಡ ಕಾಮಣ್ಣ ವೆಂಕಟೇಶಯ್ಯನಂತೆಯೇ ಬದುಕನ್ನು ಮೀರಿ ಬೆಳೆದ ವೇದಾಂತಿಯಂತೆ ಕಾಣುತ್ತಾನೆ. ಅವನ ಬಗ್ಗೆ ಆಶ್ಚರ್ಯ ಗೌರವ ಎರಡೂ ಉಂಟಾಗುತ್ತವೆ. ಆದರೆ ಲೌಕಿಕ ವ್ಯವಹಾರಕ್ಕೆ ಅತ ಕೊನೆಯವರೆಗೂ ಕುರುಡಾಗಿಯೇ ಉಳಿದುದನ್ನು ನೆನೆಸಿಕೊಂಡರೆ ಈ ಅಸಹ್ಯ ಬೆಳವಣಿಗೆಗೆ ಅವನೇ ಮುಖ್ಯ ಪಾಲುದಾರ ಎನ್ನಿಸುತ್ತೆ.

ಸೋದರಿಕೆಯ ಸಂಬಂಧದಲ್ಲಿ ಗಂಡು ಹೆಣ್ಣು ಹುಟ್ಟಿದ ಕೂಡಲೇ ಗಂಡ ಹೆಂಡತಿ ಎಂದು ಗಂಭೀರವಾಗಿ ನಿರ್ಧರಿಸಿ ಬಿಡುವುದು ಎಷ್ಟೋ ವೇಳೆ ಮುಜುಗರದ ವಿಷಯವಾಗಿ ಅನಾಹುತಕ್ಕೆಡೆಯಾಗುತ್ತದೆ. ದಾಂಪತ್ಯ ಜೀವನದಲ್ಲಿ ತ್ಯಾಗದ ಮನೋಧರ್ಮದ ಸಾಮರಸ್ಯ ಅಗತ್ಯ. ದಾಕ್ಷಿಣ್ಯದಿಂದ ಕೂಡಿದ ಮದುವೆ ಜೀವನದಲ್ಲಿ ಕೊನೆಗೆ ದುರಂತದಲ್ಲಿ ಪರ್ಯವಸಾನಗೊಳ್ಳುತ್ತದೆ. ಹಿರಿಯರಾದವರು ತಮ್ಮ ನಿರ್ಧಾರಗಳನ್ನು ಮದುವೆಯಂತಹ ಒಂದು ವಿಷಯದಲ್ಲಿ ಬಲವಂತವಾಗಿ ಹೇರಿದಾಗ ಏನೆಲ್ಲ ವೈಪರೀತ್ಯಗಳು ಇಣುಕಿಹಾಕಬಹುದು ಎಂಬುದನ್ನು ಕಾದಂಬರಿಕಾರರು ತೆರೆದ ಮನಸ್ಸಿನಿಂದ ವಿಶ್ಲೇಷಿಸಿದ್ದಾರೆ.

ಇದೇ ಸಮಸ್ಯೆಯ ಮತ್ತೊಂದು ಮುಖ 'ಸಂಜೆಯ ಸವಿ'. 'ಸಂಜೆಯ ಸವಿ' ಒಂದು ಮುರಿದ ಮದುವೆಯ ಕತೆ. ಸಮಾಜದ ಕಟ್ಟುನಿಟ್ಟುಗಳಿಗೆ ಹಿರಿಯರ ಶಾಸ್ತ್ರ ಸಂಪ್ರದಾಯಗಳ ಬದ್ಧತೆಗೆ ಸಿಕ್ಕಿಬಿದ್ದ ಗಂಡು-ಹೆಣ್ಣುಗಳ ಬದುಕೇ ಅಸಂಗತವಾಗುತ್ತದೆ.

ಕೇಶವ ಮತ್ತು ಶಾರದ ತಾವು ಬಾಳ ಸಂಗಾತಿಗಳೆಂದು ಒಪ್ಪಿಕೊಂಡರೂ ವರದಕ್ಷಿಣೆ ಅವರ ಒಕ್ಕೂಟಕ್ಕೆ ಕ್ಷುದ್ರ ತಡೆಯಾಗಿ ನಿಲ್ಲುತ್ತದೆ. ಹಣವೇ ಪರಮ ಪ್ರಧಾನವೆಂಬ ಪಾಪಮ್ಮ, ಧರ್ಮಜ್ಞ ರಾಮಾಶಾಸ್ತ್ರಿ, ಲೋಕವನ್ನೇ ನಂಬಿದ ಶ್ರೀಕಂಠಯ್ಯ, ಮದುವೆಯ ದಳ್ಳಾಳಿ ತಮ್ಮಯ್ಯ .. ಇವರೆಲ್ಲರಿಂದಾಗಿ ಶಾರದೆ ತಾನೊಲ್ಲದ ಗಂಡನೊಂದಿಗೆ ಬಾಳುವಂತಾಗುತ್ತದೆ. ಕೇಶವ ಭಗ್ನಪ್ರಣಯಿಯಾಗುತ್ತಾನೆ. ಶಾಸ್ತ್ರ, ಸಮಾಜ, ಲೋಕ – ಶಾರದೆಯನ್ನು ಶಿವರಾಮಯ್ಯನ ಧರ್ಮಪತ್ನಿಯೆಂದೇ ಸಾರಿತು. ಆದರೆ ಶಾರದೆ ಮಾತ್ರ ತಾನು ಕೇಶವನ ಮಡದಿಯೆಂದೇ ಭಾವಿಸುತ್ತಾಳೆ. ಒಲವಿಗಿಂತ ಧರ್ಮವೇ ಹೆಚ್ಚು ಎಂಬ ನಿಲುವನ್ನು ತಾಳುತ್ತಾಳೆ. ಅವಳಿಗೂ ಹೃದಯವಿದೆ. ಸ್ವತಂತ್ರ ಅಭಿಪ್ರಾಯವಿದೆ ಎಂಬುದನ್ನು ಯಾರೂ ಗಮನಿಸುವುದಿಲ್ಲ. ಈ ಪ್ರೇಮಿಗಳು ಜನಕ್ಕೆ ಲೋಕಕ್ಕೆ ಹೆದರಿ ಬದುಕುವ ಸನ್ನಿವೇಶಕ್ಕೆ ಒಳಗಾಗುತ್ತಾರೆ.

ಕಥಾನಾಯಕ ಕೇಶವ ಸ್ವಲ್ಪಮಟ್ಟಿಗೆ ಪ್ರಗತಿ ಪರವಾದ ಮನೋಭಾವ ಉಳ್ಳವನು. ಸಮಾಜದ ಕಟ್ಟಳೆಗಳನ್ನು ಪ್ರತಿಭಟಿಸಿ 'ಕ್ರಾಂತಿ ಪುರುಷ'ನಾಗಬೇಕೆಂಬ ಹಂಬಲ ಉಳ್ಳವನು. ಆದರೆ ಪರಂಪರೆಯಿಂದ ಬಂದ ಸಂಪ್ರದಾಯಗಳು ಅವನನ್ನು ಹಿಂದಕ್ಕೆ ಜಗ್ಗುತ್ತವೆ. ಕೊನೆಗೆ ಜನರ ಬಡತನ ನಿವಾರಿಸುವ ಸಮಾಜ ಸೇವಕನಾಗ ಬಯಸುತ್ತಾನೆ.

ಶಾಸ್ತ್ರ-ಸಂಪ್ರದಾಯಗಳಿಗೆ ಬಲಿಬಿದ್ದ ಗಂಡು-ಹೆಣ್ಣುಗಳ ಮನೋವ್ಯಾಪಾರವನ್ನು ಲೇಖಕರು ವಿವರವಾಗಿ ನಿರೂಪಿಸುತ್ತಾರೆ. ಕಾದಂಬರಿಯ ಕೊನೆಯಲ್ಲಿ 'ನಮ್ಮ ಸಮಾಜದಲ್ಲಾಗುತ್ತಿರುವ ಎಲ್ಲ ಅನರ್ಥಗಳಿಗೂ ಬಡತನವೇ ಕಾರಣ' ಎಂದು ಕೇಶವ ಹೇಳುತ್ತಾನೆ. ಅದಕ್ಕಿಂತ ಹೆಚ್ಚಾಗಿ ಸಮಾಜದಲ್ಲಿ ಬೇರೂರಿರುವ ಅಸಂಗತ ಸಂಪ್ರದಾಯಗಳು ಮತ್ತು ಅವ್ಯವಸ್ಥೆಗಳು ಅನರ್ಥಗಳನ್ನು ಅಧಿಕಗೊಳಿಸುತ್ತಿವೆ-ಎಂಬುದು ಪಾತ್ರಗಳ ಸನ್ನಿವೇಶಗಳ ಮೂಲಕ ಅಭಿವ್ಯಕ್ತವಾಗಿದೆ.

ಎಂ.ವಿ.ಸೀ. ಅವರ ಎಲ್ಲ ಕಾದಂಬರಿಗಳಲ್ಲೂ ಸಾಮಾನ್ಯವಾಗಿ ಗುರುತಿಸಬಹುದಾದ್ದು-ಅವರ ಕಥನ ಕಲೆಯ ವೈಶಿಷ್ಟ್ಯ. ಅವರ ಕಾದಂಬರಿಗಳಲ್ಲಿ ಪಾತ್ರಗಳ ಸಂಖ್ಯೆ ತೀರ ಕಡಿಮೆ. ಆದರೆ ಅವರು ಕತೆಯನ್ನು ಬೆಳಸಿಕೊಂಡು ಹೋಗುವ ರೀತಿಯಲ್ಲಿ ಅದು ನಮ್ಮ ಅರಿವಿಗೆ ಬರುವುದೇ ಇಲ್ಲ. ಕಾದಂಬರಿಗಳ ಪ್ರತಿಯೊಂದು ಪಾತ್ರವೂ ಸ್ಫುಟವಾಗಿ ರೂಪಗೊಳ್ಳುತ್ತವೆ. ಪಾತ್ರಗಳ ಬಗ್ಗೆ ಓದುಗರಲ್ಲಿ ಮೆಚ್ಚುಗೆ, ಸಹಾನುಭೂತಿ ಮೂಡುತ್ತವೆ. ಇದಕ್ಕೆ ಮುಖ್ಯ ಕಾರಣ ಕಾದಂಬರಿಯ ವಸ್ತು ಎಷ್ಟೇ ಜಟಿಲವಾಗಿರಲಿ ಸೂಕ್ಷ್ಮವಾಗಿರಲಿ ಮಾನವೀಯ ಅಂಶಕ್ಕೆ ಎಂ.ವಿ.ಸೀ. ಅವರು ಹೆಚ್ಚು ಒತ್ತು ಕೊಡುತ್ತಾರೆ.

ಎಂ. ವಿ. ಸೀ ಅವರ ಕಾದಂಬರಿಗಳಲ್ಲಿ ಚಿತ್ರಿಸಿರುವ ಪರಿಸರ

ಡಾ॥ ಎನ್.ವಿ. ವಿಮಲ

ಹೊಸಗನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಎಂ.ವಿ.ಸೀ. ಅವರು ಕವಿಯಾಗಿ. ವಿಮರ್ಶಕರಾಗಿ, ಸಂಶೋಧಕರಾಗಿ ಹೆಚ್ಚಾಗಿ ಗುರುತಿಸಲ್ಪಡುತ್ತಾರೆ. ಅವರ ಕಾವ್ಯ. ವಿಮರ್ಶೆ. ಸಂಶೋಧನೆ- ಕ್ಷೇತ್ರಗಳಲ್ಲಿ ಕೈಯಾಡಿಸಿದಂತೆ ಸಣ್ಣಕತೆ, ನಾಟಕ, ಕಾದಂಬರಿ-ಮೊದಲಾದ ಸೃಜನಶೀಲ ಸಾಹಿತ್ಯ ಪ್ರಕಾರಗಳಲ್ಲಿಯೂ ಕೈಯಾಡಿಸಿದ್ದಾರೆಂಬುದು ಬಹುಶಃ ಬಹುಮಂದಿಗೆ ತಿಳಿದಿರಲಿಕ್ಕಿಲ್ಲ. ಸದ್ದುಗದ್ದಲವಿಲ್ಲದೆ ಈ ಇಳಿವಯಸ್ಸಿನಲ್ಲಿಯೂ ಸದಾ ಚುರುಕಾಗಿ ಕಿರಿಯರೊಡನೆ ಕಿರಿಯರಾಗಿ ಬೆರೆತು ಅವರು ತಮ್ಮ ಬಹುಮುಖಿವಾದ ಸಾಹಿತ್ಯ ಸೇವೆಯನ್ನು ಮಾಡುತ್ತಿರುವುದನ್ನು ನೋಡಿದರೆ ಆಶ್ಚರ್ಯವಾಗುತ್ತದೆ.

ಎಂ.ವಿ.ಸೀ. ಅವರು ಸ್ವಾತಂತ್ರ್ಯ ಪೂರ್ವದಲ್ಲಿ ತಮ್ಮ ಮೊದಲ ಕಾದಂಬರಿಯನ್ನು ಪ್ರಕಟಿಸಿದ ನಂತರ 1950 ರಿಂದ 1959 ರವರೆಗೆ ಏಳು ಕಾದಂಬರಿಗಳನ್ನು ರಚಿಸಿದ್ದಾರೆ. ಅವರು ಬರೆದ ಸ್ವತಂತ್ರ ಕಾದಂಬರಿಗಳು ಎಂಟು. ಅವು : ಭಾಗ್ಯಲಕ್ಷ್ಮಿ (1942); ಮಾದನ ಮಗಳು (1950); ಸೌಭಾಗ್ಯವತಿ (1951); ಸಂಜಿನ ಸವಿ (1952): ಸ್ನೇಹದ ಕಾಣಿಕೆ(1953); ತಾಯ ಬಯಕೆ(1954): ಕುಂಕುಮ ಭಾಗ್ಯ(1955) ಮತ್ತು ಜೀವನದ ಜೊತೆಗಾತಿ(1959). ಸ್ವಾತಂತ್ರ್ಯ ಪೂರ್ವ ಮತ್ತು ಸ್ವಾತಂತ್ರ್ಯೋತ್ತರ ಕಾಲದಲ್ಲಿ ರಚಿತವಾದ ಅವರ ಕಾದಂಬರಿಗಳಲ್ಲಿ ಅಂದಿನ ಬಹುತೇಕ ಕಾದಂಬರಿಗಳಲ್ಲಿ ಕಂಡು ಬರುವಂತೆ ಅಂದು ಪ್ರಚಲಿತವಾಗಿದ್ದ ಸಾಮಾಜಿಕ ಸಮಸ್ಯೆಗಳಿಗೆ ಹೆಚ್ಚು ಒತ್ತು ಬಿದ್ದಿದೆ. ಹೆಣ್ಣಿನ ಸ್ಥಾನ ಮಾನ, ವೈವಾಹಿಕ ಸಮಸ್ಯೆಗಳು. ವರದಕ್ಷಿಣೆಯ ಹಾವಳಿ, ತಾಯ್ತನದ ಬಯಕೆ, ವಿಧವಾ ಸಮಸ್ಯೆ, ಅವರ ಜೀವನ, ವಿಧವಾ ವಿವಾಹ. ವಿದ್ಯಾಭ್ಯಾಸ, ಹರಿಜನೋದ್ಧಾರ, ಗ್ರಾಮೋದ್ಧಾರ - ಇವೇ ಮೊದಲಾದುವು ಅವರ ಕಾದಂಬರಿಗಳ ವಸ್ತುವಾಗಿವೆ. ಅಂದಿನ ಸಾಮಾಜಿಕ ಹಾಗೂ ರಾಜಕೀಯ ಪರಿಸರಗಳ ಹಿನ್ನೆಲೆಯಲ್ಲಿ ರಚಿತವಾಗಿರುವ ಮೇಲಿನ ಕಾದಂಬರಿಗಳು ಸರಳವಾಗಿ, ನಿರರ್ಗಳವಾಗಿ ಓದಿಸಿಕೊಳ್ಳುತ್ತವೆ.

ಎಂ.ವಿ.ಸೀ. ಅವರ ಕಾದಂಬರಿಗಳಲ್ಲಿ ಚಿತ್ರಿತವಾಗಿರುವ ಪರಿಸರವನ್ನು ಸ್ಥಳ, ಕಾಲ, ಸಾಮಾಜಿಕ ಹಾಗೂ ರಾಜಕೀಯ ದೃಷ್ಟಿ ಕೋನಗಳಿಂದ ಪರಿಶೀಲಿಸಬಹುದು.

ಮೊದಲನೆಯದಾಗಿ ಅವರ ಕಾದಂಬರಿಗಳ ಕತೆಯ ಮುಖ್ಯ ಘಟನೆಗಳು ನಡೆಯುವ ಸ್ಥಳಗಳು ಲೇಖಕರಿಗೆ ಚಿರಪರಿಚಿತವಾದುದರಿಂದ ವಾಸ್ತವತೆಗೆ ಹತ್ತಿರವಾಗಿವೆ. ಅವರ ಹಿರಿಯರಿದ್ದ ಹಾಗೂ ಅವರು ಹುಟ್ಟಿ, ಬೆಳೆದು, ವಿದ್ಯಾಭ್ಯಾಸ ನಡೆಸಿ ಅವರ ಬದುಕಿನ ಬಹುಭಾಗವನ್ನು ಕಳೆದ ಸ್ಥಳಗಳನ್ನೇ ತಮ್ಮ ಕೃತಿಯಲ್ಲಿ ಪರಿಚಯ ಮಾಡಿ ಕೊಟ್ಟಿದ್ದಾರೆ. ಹಾಸನ ಜಿಲ್ಲೆ, ಅದರ ಸುತ್ತಮುತ್ತಲ ಗ್ರಾಮಗಳು, ಮುಖ್ಯವಾಗಿ ಕೊಳಲೂರು ಅದು ಈಗಿನ ಕೋಣನೂರು ಆಗಿರಬಹುದು. ಮೈಸೂರು, ಬೆಂಗಳೂರು, ಹೊಳೆನರಸೀಪುರ, ಮೈಸೂರಿನ ಹತ್ತಿರವಿರುವ ಬೂವನಕೆರೆ ಗ್ರಾಮ – ಈ ಸ್ಥಳಗಳಲ್ಲಿ ಅವರ ಕಾದಂಬರಿಗಳ ಮುಖ್ಯಘಟನೆಗಳು ನಡೆಯುತ್ತವೆ. ಇಲ್ಲಿನ ಪಾತ್ರಗಳು ಈ ಸ್ಥಳಗಳ ಮಣ್ಣಿನಲ್ಲಿ ಒಂದಾಗಿ ಬೆರೆತವರು. ಹೊಲೆಯರ ಸಮಸ್ಯೆಯನ್ನು ನೇರವಾಗಿ ಚಿತ್ರಿಸುವ ಅವರ 'ಮಾದನ ಮಗಳು' ಕಾದಂಬರಿಯ ಬಹುಮುಖ್ಯ ಕಾರ್ಯಕ್ಷೇತ್ರ ಕೊಳಲೂರು ಗ್ರಾಮ. ಮಹಾತ್ಮ ಗಾಂಧಿಯವರ ಹರಿಜನೋದ್ಧಾರದ ಚಳುವಳಿಯ ಗಾಳಿ ಕೊಳಲೂರಿನಂತಹ ಗ್ರಾಮದಲ್ಲಿಯೂ ಪಸರಿಸಿ ಅಲ್ಲಿನ ವಾತಾವರಣವನ್ನು ಕಲಕುವ ಅಲ್ಲಿನ ಜನರ ಜೀವನದ ಮೇಲೆ ಅದು ಬೀರುವ ಪರಿಣಾಮದ ಚಿತ್ರಣವನ್ನು ಈ ಕೃತಿ ನೀಡುತ್ತದೆ. ಇಡೀ ದೇಶದಲ್ಲೆದ್ದ ರಾಜಕೀಯ ಆಂದೋಲನ ವ್ಯಕ್ತಿಯ, ಗ್ರಾಮದ ಬದುಕನ್ನು ಯಾವರೀತಿ ಅಲ್ಲಾಡಿಸಿತೆಂಬುದರ ಚಿತ್ರಣ ಇಲ್ಲಿದೆ. ಹೊಲೆಯರ-ಮಾದಿಗರ ಬದುಕಿನ ಬವಣೆಗೆ ಅಲ್ಲಿನ ಪರಿಸರ ಯಾವರೀತಿ ನೆರವಾಯಿತೆಂಬುದನ್ನು ಇಲ್ಲಿ ಅರಿಯಬಹುದು. ಒಟ್ಟಿನಲ್ಲಿ ಹೊಲೆಯರ ವಿಸ್ತೃತ ಬದುಕಿನ ಬಗೆಗೆ ಈ ಕೃತಿ ಮಾಹಿತಿ ಒದಗಿಸುತ್ತದೆ. 'ಕುಂಕುಮ ಭಾಗ್ಯ'ದಲ್ಲಿಯೂ ಕೊಳಲೂರು ಪ್ರಧಾನವಾದ ಪಾತ್ರವಹಿಸುತ್ತದೆ.

'ಜೀವನದ ಜೊತೆಗಾತಿ'ಯಲ್ಲಿ ಶಂಕರನೆಂಬ ಆದರ್ಶ ವೈದ್ಯನೊಬ್ಬನು ತಾನು ಹುಟ್ಟಿದ ಹಳ್ಳಿಯಲ್ಲಿ ನೆಲೆಸಿ ಹಳ್ಳಿಯ ಸೇವೆ ಮಾಡ ಬೇಕೆಂಬ ಉನ್ನತ ಆದರ್ಶವನ್ನಿಟ್ಟುಕೊಂಡು ಅದರಲ್ಲಿ ಪ್ರಯತ್ನಶೀಲನಾಗುವ ಚಿತ್ರವಿದೆ. ಅಲ್ಲಿ ಬರುವ ಹಳ್ಳಿಯ ವಾತಾವರಣದ ಚಿತ್ರಣ ಕಥೆಯ ಚೌಕಟ್ಟಿಗೆ, ಕಥೆಯ ಮುನ್ನಡೆಗೆ ಹಿತಮಿತವಾಗಿ ಹೊಂದಿಕೊಳ್ಳುತ್ತದೆ. ಶಂಕರ ಮೈಸೂರಿನಿಂದ ತನ್ನ ಹುಟ್ಟೂರಾದ ಬೂವನಕೆರೆ ಗ್ರಾಮಕ್ಕೆ ಹೋಗಲು ರೈಲು, ಬಸ್ಸು, ಎತ್ತಿನಗಾಡಿ ಹಾಗೂ ಕಾಲುನಡಿಗೆಯ ಪ್ರಯಾಣದ ವಿವರ ವೈವಿಧ್ಯ ಪೂರ್ಣವಾಗಿದೆ. 'ಕುಂಕುಮ ಭಾಗ್ಯ'ದಲ್ಲಿ ಹಾಸನ ಜಿಲ್ಲೆಯಲ್ಲಿನ ಒಂದು ಕಾಲ್ಪನಿಕ ಗ್ರಾಮವಾಗಿರುವ ಕೊಳಲೂರು 'ಮಾದನ ಮಗಳು'ವಿನಲ್ಲಿ ಸಂಪೂರ್ಣವಾದ ಭೌಗೋಳಿಕ ವಿವರಗಳನ್ನೊಳಗೊಂಡಿದೆ. ಹೀಗೆ ಒಂದೇ ಸ್ಥಳದ ಪರಿಚಯದಲ್ಲಿ

ಕಾಲ್ಪನಿಕ ಹಾಗೂ ವಾಸ್ತವ ಸಂಗತಿಗಳೆರಡನ್ನೂ ಕಾಣಬಹುದಾಗಿದೆ. ಸ್ವಾತಂತ್ರ್ಯ ಪೂರ್ವದ ಹಾಗೂ ಸ್ವಾತಂತ್ರ್ಯಾನಂತರದ ಕೆಲವು ವರ್ಷಗಳ ನಡುವಿನ ಮೈಸೂರು, ಬೆಂಗಳೂರು, ಮದ್ರಾಸ್ ಹಾಗೂ ಬೊಂಬಾಯಿ - ಈ ಸ್ಥಳಗಳು ಇವರ ಕಾದಂಬರಿಗಳಲ್ಲಿ ಚಿತ್ರಿತವಾಗಿವೆ. ಒಟ್ಟಿನಲ್ಲಿ ಲೇಖಕರು ತಮಗೆ ಬಹುಮಟ್ಟಿಗೆ ಪರಿಚಿತವಾದ ಸ್ಥಳಗಳನ್ನು ಆಯ್ದು ಅಲ್ಲಿನ ವಾತಾವರಣದ ಹಿನ್ನೆಲೆಯಲ್ಲಿ ತಮ್ಮ ಕೃತಿಗಳಿಗೆ ರೂಪ ಕೊಟ್ಟಿರುವುದರಿಂದ ಅವು ಓದುಗರಿಗೆ ಆತ್ಮೀಯವಾಗಿ ಸಹಜತೆಯನ್ನು ಕಾಯ್ದು ಕೊಳ್ಳುತ್ತವೆ.

ಎರಡನೆಯದಾಗಿ, ಸ್ವಾತಂತ್ರ್ಯ ಪೂರ್ವದ ತಲೆಮಾರಿನ ಚಿತ್ರಣ ಇವರ ಕಾದಂಬರಿಗಳಲ್ಲಿ ಕಾಣಿಸಿಕೊಂಡಿದೆ. ಸ್ವಾತಂತ್ರ್ಯ ಪೂರ್ವಕಾಲದ ಪರಿವರ್ತನಶೀಲ ಸಮಾಜದ ಬಹುಮುಖವನ್ನು ಕುಂಕುಮ ಭಾಗ್ಯ, ನಂಜಿನ ಸವಿ, ಮಾವನ ಮಗಳು, ಭಾಗ್ಯಲಕ್ಷ್ಮಿ ಮತ್ತು ಸೌಭಾಗ್ಯವತಿ - ಕಾದಂಬರಿಗಳು ಚಿತ್ರಿಸುತ್ತವೆ. ಎರಡು ತಲೆಮಾರಿನ ಅಂತರದ ಏರು ಪೇರುಗಳನ್ನು ಭಾಗ್ಯಲಕ್ಷ್ಮಿ ಮತ್ತು ಸೌಭಾಗ್ಯವತಿ ಕಾದಂಬರಿಗಳು ಚಿತ್ರಿಸಿವೆ. ಆದರ್ಶವಾದಿಗಳಾದ ತಾಯಿ-ಮಗಳು ತಮ್ಮ ಛಲ, ಸಂಯಮ, ಭಯ ಭಕ್ತಿ, ಪತಿಪ್ರೇಮ, ಗುಣ, ಶೀಲಗಳಿಂದ ತಮ್ಮ ತಮ್ಮ ಗಂಡಂದಿರನ್ನು ಗೆದ್ದು ಕೊಂಡದು ಇಲ್ಲಿಯ ವಸ್ತು. ಮಾವನಿಗೆ ಹೆಂಡತಿಯನ್ನು ಕೀಳಾಗಿ ಬಿಡಲು ಅವಳು ಕಪ್ಪು ಎಂಬ ಏಕೈಕ ಕಾರಣವಿದ್ದರೆ, ಅಳಿಯನಿಗೆ ಕಪ್ಪಿಲ್ಲದ ಸುಂದರ ಹಾಗೂ ಗುಣವತಿಯಾದ ಹೆಂಡತಿಯನ್ನು ಬಿಡಲು ಹಲವಾರು ಕಾರಣಗಳಿವೆ. ಮಾವನ ಕಾಲಕ್ಕೂ ಅಳಿಯನ ಕಾಲಕ್ಕೂ ಇರುವ ಜೀವನದ, ಸುತ್ತಲಿನ ಪರಿಸರದ ಸಂಕೀರ್ಣತೆಯನ್ನು ಈ ಕೃತಿಗಳು ಚೆನ್ನಾಗಿ ಗುರುತಿಸಿವೆ. ಓದುವ ನೆಪದಿಂದ ಮದ್ರಾಸಿಗೆ ಹೋದ ಅಳಿಯ ಟೋಳಿಗೆ ಬಿದ್ದು ಅಡ್ಡದಾರಿ ಹಿಡಿದು ವೇಶ್ಯೆಯ ಸಹವಾಸ ಮಾಡುತ್ತಾನೆ. ಅವನಿಗೆ ಮಜಾ ಮಾಡಲು ಮಾವನ ಹಣ ಬೇಕು ಆದರೆ ಮಾವನ ಮಗಳು ಮಾತ್ರ ಬೇಡ. ಈ ಪರಿಸ್ಥಿತಿ ಇಂದಿಗೂ ಬದಲಾಗಿಲ್ಲ. 'ಕುಂಕುಮ ಭಾಗ್ಯ', 'ನಂಜಿನ ಸವಿ', 'ಮಾವನ ಮಗಳು' – ಈ ಕೃತಿಗಳಲ್ಲಿ ಸ್ವಾತಂತ್ರ್ಯ ಪೂರ್ವಸಮಾಜದ ವಾತಾವರಣದ ದಟ್ಟ ಚಿತ್ರಣವಿದೆ.

ಮೂರನೆಯದಾಗಿ, ಸಂಪ್ರದಾಯವು ಆಧುನಿಕ ಆಚಾರ ವಿಚಾರಗಳ ಕಡೆಗೆ ತಿರುಗುತ್ತಿರುವ ಸಂಧಿಕಾಲದ ಸಾಮಾಜಿಕ ಪರಿಸರದ ಚಿತ್ರಣ ಇವರ ಕೃತಿಗಳಲ್ಲಿ ಪ್ರಮುಖವಾಗಿದೆ. 'ಕುಂಕುಮ ಭಾಗ್ಯ'ದಲ್ಲಿ ಬಾಲ್ಯದಲ್ಲಿಯೇ ಕುಂಕುಮ ಭಾಗ್ಯವನ್ನು ಕಳೆದು ಕೊಂಡು ದುರ್ದೈವಿಗಳಾದ ಸೀತೆ ಮತ್ತು ಗೌರಿಯರು ಸಮಾಜದ ಒಂದೇ ಪರಿಸರದಲ್ಲಿ ಬದುಕಿದವರು. ಆದರೆ ಅವರ ವಿಭಿನ್ನ ಸ್ವಭಾವ, ವಿಭಿನ್ನ ಪ್ರವೃತ್ತಿ, ಮನೋಧರ್ಮ ಮತ್ತು ಅವರ ಕೌಟುಂಬಿಕ ಹಿನ್ನೆಲೆಯ ಕಾರಣಗಳಿಂದಾಗಿ ಅವರ ದಾರಿ ಬೇರೆ

ಜೀರೆಯಾಗುತ್ತದೆ. 'ಜೀವನದ ಜೊತೆಗಾತಿ'ಯಲ್ಲಿ ಬರುವ ಬಾಲವಿಧವೆ ಕಾಮಾಕ್ಷಿಯೂ ಸೀತೆಯಂತೆ ಧೈರ್ಯವಾಗಿ ಜೀವನವನ್ನು ಎದುರಿಸುತ್ತಾಳೆ.

ಒಪ್ಪತ್ತು ಊಟ, ಅರಳು-ಅವಲಕ್ಕಿ ಫಳಾಹಾರ, ಹೂ ಬತ್ತಿ ಹೊಸೆಯುವುದು ಪುರಾಣ ಕೇಳುವುದು ಮತ್ತು ಮಡಿಹೆಂಗಸರ ಸಭೆಯಲ್ಲಿ ಕಾಡು ಹರಟೆ ಹೊಡೆದು ಬಾಯಿ ಚಪಲ ತೀರಿಸಿ ಕೊಂಡು ಇಡೀಬಾಳನ್ನು ದುರ್ಭರವಾಗಿ ನೂಕಬೇಕಾಗಿದ್ದ ಪರಿಸರದಲ್ಲಿದ್ದು ಕೊಂಡೂ ಬಾಲ ವಿಧವೆಯರಾದ ಸೀತೆ, ಕಾಮಾಕ್ಷಿಯರು ಆಶಾವಾದಿಗಳಾಗಿ ತಮಗಿದ್ದ ಸೀಮಿತ ಅವಕಾಶದಲ್ಲಿಯೇ ವೈದ್ಯಕೀಯ ವಿದ್ಯಾಭ್ಯಾಸ ಪೂರೈಸಿ ತಮ್ಮ ಕಾಲ ಮೇಲೆ ನಿಂತುಕೊಂಡು ಧೈರ್ಯಗುಂದದೆ ಬಾಳನ್ನು ಎದುರಿಸುತ್ತಾರೆ. ಸೀತೆಯಂತೂ ಮತ್ತೊಬ್ಬ ಬಾಲ ವಿಧವೆ ಪದ್ಮಾವತಿಗೆ ಮರು ವಿವಾಹವನ್ನು ಮಾಡಿಸಲು ಮುಂದಾಗಿ ಆ ಕಾಲಕ್ಕೆ ಕ್ರಾಂತಿಕಾರಿಯೆನಿಸುತ್ತಾಳೆ. ಬಹುಕಾಲ ಅಗಲಿದ ಪತಿ-ಪತ್ನಿಯರನ್ನು ತನ್ನ ಜಾಣತನದಿಂದ ಒಂದು ಗೂಡಿಸಿದ ಕಾಮಾಕ್ಷಿಯೂ ಪ್ರಮುಖ ವ್ಯಕ್ತಿಯೆನಿಸುತ್ತಾಳೆ. ಇದೇ ಸಾಮಾಜಿಕ ಪರಿಸರದಲ್ಲಿ ಬೆಳೆದ ಮತ್ತೊಬ್ಬ ಬಾಲ ವಿಧವೆ ಗೌರಿಯದು ಸಮಸ್ಯೆಗಳಿಲ್ಲದ ಏಕಮುಖ ಬದುಕು. ಪರರ ಸೇವೆಯಲ್ಲಿ ಗಂಧದಂತೆ ಜೀವತೇಯುವ, ಪರರ ಆನಂದವೇ, ಸುಖವೇ ತನ್ನದೆಂದು ತೃಪ್ತಿಪಡುವ ಸಂಯಮ ಶೀಲ, ತೃಪ್ತ ಜೀವ ಗೌರಿಯದು. ವಯಸ್ಸಿಗೆ ಮೀರಿದ ಅನುಭವದಿಂದ ಕಲಿತ ಬಾಳಿನ ತತ್ವವೊಂದಕ್ಕೆ ಹೊಂದಿಕೊಂಡು, ಬದುಕು ತನಗೆ ಏನು ಕೊಟ್ಟರೂ ಅದನ್ನು ಸಂತೋಷದಿಂದ ಸ್ವೀಕರಿಸುವ ಜೀವ ಗೌರಿಯದಾದರೆ, ಸೀತೆಯದು ಬಾಳಿನಲ್ಲಿ ತನಗೆ ದೊರಕದ ಸುಖಕ್ಕಾಗಿ ಸದಾ ಜಡಪಡಿಸುವ ಅತೃಪ್ತ ಜೀವ.

'ಮಾದನ ಮಗಳು' ಕಾದಂಬರಿಯಲ್ಲಿ ತಾನು ಕಾಲೇಜು ವಿದ್ಯಾರ್ಥಿಯಾಗಿದ್ದಾಗ ವಿಜ್ಞಾನಿ ಪ್ರಫುಲ್ಲ ಚಂದ್ರರಾಯ್ ಅವರು ಅಸ್ಪೃಶ್ಯತೆಯ ಮೇಲೆ ಮಾಡಿದ ಸ್ಫೂರ್ತಿದಾಯಕ ಭಾಷಣದಿಂದ ಉತ್ತೇಜಿತನಾಗಿ ಕ್ರಾಂತಿಯನ್ನು ಮಾಡ ಬೇಕೆಂಬ ಹಿರಿಯ ಆಸೆಯನ್ನು ಹೊತ್ತು ತನ್ನ ಹುಟ್ಟೂರಿಗೆ ಹಿಂತಿರುಗಿದ ಸುಂದರ ಹರಿಜನೋದ್ಧಾರ ಕಾರ್ಯದಲ್ಲಿ ನಿರತನಾಗುತ್ತಾನೆ. ಸಹಜವಾಗಿಯೇ ಅಗ್ರಹಾರದ ಜನಗಳ ಹಾಗೂ ಮಿತ್ರನಾದ ವಿಶ್ವನಾಥಶಾಸ್ತ್ರಿಯ ವಿರೋಧವನ್ನು ಸುಂದರ ಎದುರಿಸಬೇಕಾಗುತ್ತದೆ. ವೈದಿಕ ಶಿಷ್ಟಸಮಾಜದ ಪರಿಸರದಲ್ಲಿ ಬೆಳೆದ ವಿಶ್ವನಾಥ ಗೋಮುಖ ವ್ಯಾಘ್ರನಾಗಿ ಚಿತ್ರಿತವಾಗಿದ್ದಾನೆ.

ಚೆನ್ನಿ ಹುಟ್ಟನಿಂದ ಮಾದಿಗಳಲ್ಲದಿದ್ದರೂ ಮಾದಿಗನಾದ ಮಾದನ ಮಗಳಾಗಿ ಅನಿವಾರ್ಯವಾಗಿ ಬೆಳೆಯ ಬೇಕಾದುದರಿಂದ ಮಾದನ ಮಗಳೆನಿಸಿ ಸಮಾಜದ ಕ್ರೂರ ದೃಷ್ಟಿಯನ್ನು ಎದುರಿಸಬೇಕಾಯಿತು. ನಿರಪರಾಧಿಯಾದ ಚೆನ್ನಿಯ ಈ ಸ್ಥಿತಿಗೆ ಶಿಷ್ಟಸಮಾಜದ ವ್ಯಕ್ತಿಗಳೇ ಹೊಣೆಗಾರರು.

ಹರಿಜನರ ಸ್ವಚ್ಛತೆಯ ಬಗ್ಗೆ ಒಮ್ಮೆ ಮಾತನಾಡುತ್ತಿದ್ದ ಸುಂದರ ಹರಿಜನರನ್ನು ಕುರಿತು ನೀವೇಕೆ ಹೊಳೆಯಲ್ಲಿ ದಿನಾ ಸ್ನಾನಮಾಡುವುದಿಲ್ಲವೆಂದು ಕೇಳುತ್ತಾನೆ. ಅದಕ್ಕೆ ಮೂಡಲಗಿರಿ ಎಂಬ ಹರಿಜನ ಮುದುಕ ಹೀಗೆ ಉತ್ತರಿಸುತ್ತಾನೆ. "ಬುದ್ಧಿ, ನಾ ಚಿಕ್ಕವನಾಗಿದ್ದಾಗ ಈಜಾಡ ಬೇಕು ಅಂದರೆ ಬಲಿಕುಸಿ. ಹೊಳೇಲಿ ಒಂದಪ ಈಜು ಬಿದ್ದೆ. ಅದನ್ನ ಹೊಲಿ ಮಾಡ್ತಾ ಇದ್ದ ರೈತರು, ಹೊಲಿ ಮಾಡಸ್ತಾ ಇದ್ದ ನಮ್ಮ ಧಣಿಗಳೂ ಕಂಡರು. ಲೋ ಮೂಡಲಗಿರಿ, ಹೊಳೆ ನಿಮ್ಮ ಕಡೆಯಿಂದ ಊರ ಕಡೆಗೆ ಹರಿದು ಬರುತ್ತಿದೆ. ನೀನು ಮುಳುಗಿದ ನೀರನ್ನು ಊರಿನ ಜನ ಹೇಗೆ ಬಳಸೋದು? ಇನ್ನೊಂದು ದಿನ ನೀನು ಹೊಳೆಗೆ ಬಂದರೆ ನಿನ್ನ ತಲೆ ಒಡೆದು ಹಾಕಿ ಬಿಡುತ್ತೇನೆ. ಹುಷಾರ್! ಎಂದು ಬೋಧ್ನೆ ಮಾಡಿದರು." (ಪು. 353) ಅಂದು ಇದ್ದ ಹರಿಜನರ ಇಂತಹ ಪರಿಸ್ಥಿತಿ ಇವತ್ತಿಗೂ ಅನೇಕ ಹಳ್ಳಿಗಳಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಹೀಗೇ ಇದೆ ಎನ್ನಬೇಕು. ರಾಜಕೀಯವಾಗಿ ಎಷ್ಟೇ ಕಾನೂನು ಬಂದರೂ ಜನ ಜಾಗೃತಿಯಾಗುವವರೆಗೆ, ಸಾಮಾಜಿಕ ದೃಷ್ಟಿಯಿಂದ ಅವರ ಸಮಸ್ಯೆಯ ಪರಿಹಾರ ಪ್ರಶ್ನಾರ್ಥಕವಾಗಿಯೇ ಉಳಿಯುವ ಸಂಭವ ಹೆಚ್ಚಾಗಿದೆ. ಹರಿಜನರ ಆರ್ಥಿಕ ಪರಿಸ್ಥಿತಿ ಸುಧಾರಿಸುವವರೆಗೆ, ಅವರಲ್ಲಿ ಸಾಕ್ಷರತೆ ಜ್ಞಾನ ಉಂಟಾಗುವವರೆಗೆ, ಅವರಲ್ಲಿ ತಿಳುವಳಿಕೆ ಮೂಡುವವರೆಗೆ ಅವರ ಉದ್ಧಾರ ಬರೀ ಪ್ರಚಾರ, ಭಾಷಣಗಳ ಮಟ್ಟದಲ್ಲಿಯೇ ಇದ್ದು ಅದು ರಾಜಕೀಯ, ಸಾಮಾಜಿಕ ಸೋಗಾಗಿ ಮಾತ್ರ ಉಳಿಯುತ್ತದೆಯೇ ಹೊರತು ಅವರ ನಿಜವಾದ ಉದ್ಧಾರವಾಗಲಾರದು. 'ಹರಿಜನರ ಬಹಿರಂಗದ ಬಾಳ್ವೆ ಉದ್ಧಾರವಾಗ ಬೇಕಾದರೆ ಇತರರ ಅಂತರಂಗದ ಬಾಳ್ವೆ ಉದ್ಧಾರವಾಗಬೇಕು' ಎನ್ನುವ ಸುಂದರನ ಮಾತು ಸಮಂಜಸವೆನಿಸುತ್ತದೆ. ತನ್ನ ಸುತ್ತ ಮುತ್ತಲಿನವರ ವಿರೋಧದ ಮಧ್ಯದಲ್ಲಿಯೂ ತನ್ನ ಸ್ವಹಿತ ಲೆಕ್ಕಿಸದ ಸುಂದರ ಹರಿಜನೋದ್ಧಾರ ಕಾರ್ಯಕ್ಕೆ ಕಂಕಣ ಬದ್ಧನಾಗುತ್ತಾನೆ. ತನ್ನ ಸ್ವಂತ ಪರಿಶ್ರಮ, ನಿಸ್ವಾರ್ಥ ಸೇವೆ, ಏಕೈಕ ಧ್ಯೇಯದಿಂದ 'ಹರಿಜನ ಸೇವಕ ಸಂಘ'ವನ್ನು ಸ್ಥಾಪಿಸುತ್ತಾನೆ ಮತ್ತು ಮಾದನ ಮಗಳು ಚೆನ್ನಿಯ ಬಾಳನ್ನು ಹಸನಾಗಿ ಮಾಡುತ್ತಾನೆ. ಕಡೆಗೆ ಜನರ ಸ್ವಾರ್ಥ, ವಂಚನೆ, ಹಣದಾಸೆಗೆ ಬೇಸತ್ತ ಸುಂದರ ವೈರಾಗಿ ಆಗಿ ಕೋಳಲೂರಿನಿಂದ ಕಣ್ಮರೆಯಾಗುತ್ತಾನೆ.

ಸುಂದರನ ಸ್ನೇಹಿತ ಮತ್ತು ಸಹಪಾಠಿಯಾದ ಹರಿಜನ ಯುವಕ ರಾಚಪ್ಪನಿಗೆ ಅವನು ಪಡೆದು ಕೊಂಡ ವಿದ್ಯಾಭ್ಯಾಸದಿಂದಾಗಿ ಹೊಲೆಯರ ಸ್ಥಿತಿಯ ಅರಿವುಂಟಾಗಿದೆ ಆರ್ಥಿಕ ಸಮಾನತೆ ಇದ್ದು ವಿದ್ಯಾವಂತನಾದ ರಾಚಪ್ಪ ತನ್ನ ಪಾಡನ್ನು ತಾನು ನೋಡಿ ಕೊಂಡು ತಮ್ಮವರ ಸುಧಾರಣೆಯ ಬಗ್ಗೆ ನಿರ್ಲಿಪ್ತನಾಗಿರುತ್ತಾನೆ. ಹಿಂದೆ ಬ್ರಾಹ್ಮಣರೇ ನಮ್ಮನ್ನು ತುಳಿದವರು ಈಗ ಸುಂದರನಂತಹ ಬ್ರಾಹ್ಮಣರೇ ನಮ್ಮವರ ಉದ್ಧಾರಕ್ಕೆ ಶ್ರಮಿಸುತ್ತಿರುವರೆಂದು ಅವನಿಗೆ ಒಳಗೊಳಗೇ ಖುಷಿಯಾಗುತ್ತದೆ.

ಹರಿಜನ ಸಮಾಜದ ಬೇರೆ ಬೇರೆ ಮುಖಗಳನ್ನು ಈ ಕಾದಂಬರಿ ಚಿತ್ರಿಸುತ್ತದೆ. ಪಂಚಮ ಸ್ತ್ರೀಯರಿಗೆ ಸಿದ್ಧಿಸಿರುವ ಮಾರಾಟಕಲೆ, ಜಾಣ್ಮೆಯನ್ನು ವಿವರಿಸುವ ವೀಳೆಯದೆಲೆ ಮಾರುವ ಪ್ರಸಂಗ ಪರಿಸರ ನಿರ್ಮಾಣಕ್ಕೆ ಒಂದು ಒಳ್ಳೆಯ ನಿದರ್ಶನವಾಗುತ್ತದೆ. ವ್ಯಾಪಾರ ಮಾಡುವ ಪಂಚಮ ಸ್ತ್ರೀಯರ ನಿಷ್ಕಲ್ಮಷವಾದ ತಿಳಿಹಾಸ್ಯದ, ವಿಶ್ವಾಸದ ಮಾತಿನ ಮೋಡಿಗೆ ಕೊಳ್ಳುಗ ಬಲಿಯಾಗುವುದರಲ್ಲಿ ಯಾವ ಅಚ್ಚರಿಯೂ ಇಲ್ಲ. ಹೊಲೆಯರನ್ನು ಅಸ್ಪೃಶ್ಯರೆಂದು ದೂರವಿಟ್ಟ ಜನ ವೀಳೆಯದೆಲೆ ಕೊಳ್ಳುವಾಗ ಹೊಲೆಯ ಹೆಂಗಸರೊಡನೆ ಸರಸವಾಗಿ ಮಾತಾಡುತ್ತಾ ಅವರನ್ನು ಮುಟ್ಟಿಸಿ ಕೊಂಡು ವ್ಯಾಪಾರ ಮಾಡುವ ಪಟ್ಟಣಿಗರದು ಎಂತಹ ಆಷಾಢಭೂತಿತನ, ಬೂಟಾಟಿಕೆ ಎನ್ನುವುದನ್ನು ಈ ವೀಳೆಯದೆಲೆ ಮಾರುವ ಪ್ರಸಂಗ ಚೆನ್ನಾಗಿ ತೋರಿಸುತ್ತದೆ.

ಇಲ್ಲಿ ಬರುವ ಮಾರಮ್ಮನ ಜಾತ್ರೆಯ ವಿವರಣೆ ಆ ಜನಾಂಗದ ಸಂಸ್ಕೃತಿ, ಧಾರ್ಮಿಕ ಆಚರಣೆಯ ವಿಕೃತ ಸ್ವರೂಪಕ್ಕೆ ಒಳ್ಳೆಯ ಉದಾಹರಣೆಯಾಗುತ್ತದೆ. ಮಾರಿಯ ಜಾತ್ರೆಯಲ್ಲಿ ನಡೆಯುವ ಪ್ರಾಣಿಬಲಿ, ಸಾಯಲಿರುವ ಪ್ರಾಣಿಗಳ ಚೀತ್ಕಾರ, ರಕ್ತದಕೋಡಿ, ಹಿಂಸಾತ್ಮಕ ಆಚರಣೆ, ವಿಚಿತ್ರ ಮಿಶ್ರಣದ ಸದ್ದು ಗದ್ದಲ, ಹರೆಯ ಸದ್ದು ಇವೇ ಮೊದಲಾದ ಭೀಭತ್ಸ, ಭಯಾನಕ ದೃಶ್ಯಗಳ ನಡುವೆ ಮಾರಿ ಜಾತ್ರೆ ಮುಗಿಯುತ್ತದೆ. ಇವೇ ಅವರ ಬಾಳಿನ ನಲಿವು, ನಂಬಿಕೆ, ಶ್ರದ್ಧೆ. ಹೀಗೆ ಈ ಕೃತಿಯು ಹರಿಜನರ ಬದುಕಿನ, ಬವಣೆಯ ವಿಸ್ತೃತ ಮುಖಗಳನ್ನು ಪರಿಚಯಿಸುವಲ್ಲಿ ಹಾಗೂ ದಟ್ಟವಾದ ಸಾಮಾಜಿಕ ಪರಿಸರವನ್ನು ನಿರ್ಮಿಸುವುದರಲ್ಲಿ ಸಫಲವಾಗಿದೆ.

ಹಿರಿಯರ ಹಠ, ಒಣ ಪ್ರತಿಷ್ಠೆ, ಮನೆತನದ ಗೌರವ ವರದಕ್ಷಿಣೆಯ ಹಾವಳಿ– ಇವುಗಳಿಂದಾಗಿ ಕಿರಿಯರ ಬಾಳು ಎಂತಹ ದುರಂತವಾಗುತ್ತದೆ ಎಂಬುದನ್ನು 'ನಂಜನ ಸನಿ', 'ತಾಯಬಯಕೆ' ಕಾದಂಬರಿಗಳು ಚಿತ್ರಿಸುತ್ತವೆ.

ಕಡೆಯದಾಗಿ, ಅಂದಿನ ರಾಜಕೀಯ ಆಂದೋಳನದ ಗಾಳಿ ಇವರ ಕೃತಿಗಳಲ್ಲೂ ಬೀಸಿರುವುದು ಸಹಜವಾಗಿದೆ. ಖಾದಿ ಪ್ರಚಾರ, ಹರಿಜನೋದ್ಧಾರ, ಸ್ವಾತಂತ್ರ್ಯ ಹೋರಾಟದಲ್ಲಿ ಧುಮುಕಿದ ವಿದ್ಯಾರ್ಥಿಗಳ ತಂಡ, ಸ್ವದೇಶಿ ಚಳುವಳಿ – ಇವೇ ಮೊದಲಾದ ರಾಜಕೀಯ ಪರಿಸರದ ಹಿನ್ನೆಲೆಯಲ್ಲಿ ಇವರ ಕೆಲವು ಕಾದಂಬರಿಗಳು ರೂಪಗೊಂಡಿವೆ. ಸ್ವಾತಂತ್ರ್ಯ ಪೂರ್ವದಲ್ಲಿ ರಾಜಕೀಯವಾಗಿ ಬಹುಮಟ್ಟಿಗೆ ಜನರ ಮನಸ್ಸಿನ ಮೇಲೆ ಪ್ರಭಾವ ಬೀರಿದ ಮತ್ತು ಅವರಿಗೆ ದೇಶದ ಸ್ಥಿತಿಗತಿಗಳ ಬಗ್ಗೆ ಅರಿವು ಮೂಡಿಸಿದ ಪ್ರಮುಖ ಪತ್ರಿಕೆಗಳ ಪಾತ್ರವೂ ಹಿರಿದಾದುದು. ಇವೂ ಕೂಡ ಅಂದಿನ ಕೃತಿಗಳಲ್ಲಿ ಪ್ರಧಾನ ಪಾತ್ರವಹಿಸಿವೆ. ಸಬರಮತಿ ಆಶ್ರಮವಾಸಿಯಾಗಿದ್ದ ಸುಂದರನ ಸ್ನೇಹಿತ ಶ್ರೀಧರ ಕಡೆಗೆ ಕಮ್ಯುನಿಸಂ ತತ್ವಕ್ಕೆ ಮಾರುಹೋಗಿ ಕಮ್ಯುನಿಸ್ಟ್ ಆಗುತ್ತಾನೆ.

'ಸಾಧನಾ' ಆಗಿ ಮಾರ್ಪಟ್ಟು ಮಾದನ ಮಗಳು ಚೆನ್ನಿಯನ್ನು ಶ್ರೀಧರ ಮದುವೆಯಾಗಿ ಸ್ನೇಹಿತನ ಇಚ್ಛೆಯನ್ನು ಪೂರೈಸುತ್ತಾನೆ.

ಗಾಂಧೀಯುಗದ ಸತ್ಯಾಗ್ರಹ, ಅವರ ಉಪವಾಸದ ವಿವರ, ಕರನಿರಾಕರಣೆ, ಸಬರಮತಿ ಆಶ್ರಮದ ವಿವರ - ಇವೆಲ್ಲ ಕೆಲವು ಕಡೆ ಅತಿ ದೀರ್ಘವಾಗಿದ್ದು ಅವೇ ಒಂದು ಉಪನ್ಯಾಸ, ಭಾಷಣವಾಗುತ್ತದೆ. ಲೇಖಕರು ಇದನ್ನು ಮಿತವಾಗಿ ಬಳಸಿಕೊಂಡಿದ್ದರೆ ಉಚಿತವಾಗುತ್ತಿತ್ತು.

ಇವರ ಕಾದಂಬರಿಗಳಲ್ಲಿ ಆರ್ಥಿಕವಾಗಿ ಮಧ್ಯಮ ವರ್ಗದವರ ಹಾಗೂ ಬಡವರ ಕುಟುಂಬಗಳ ಪರಿಸರದ ಚಿತ್ರಣ ಸಹಜವಾಗಿ ಬಂದಿದೆ. ಈ ಎಲ್ಲ ಕೃತಿಗಳ ರಚನೆಯ ಹಿನ್ನೆಲೆಯಲ್ಲಿ ಸದಭಿರುಚಿಯಾದ ಸಂಸ್ಕಾರವಂತ ಮನಸ್ಸು ಕೆಲಸ ಮಾಡಿರುವುದನ್ನು ಓದುಗರು ಗಮನಿಸಬಬುದು.

ಎಂ.ವಿ.ಸೀ. ಅವರ ಕಾದಂಬರಿಗಳಲ್ಲಿ ಚಿತ್ರಿತವಾಗಿರುವ ಸಾಮಾಜಿಕ, ರಾಜಕೀಯ, ಕೌಟುಂಬಿಕ ಪರಿಸರವು ಕಾಲ, ಸ್ಥಳಗಳಿಗೆ ಹೊಂದಿಕೊಂಡು ಕೃತಿಯ ಉದ್ದೇಶ ಸಾಧನೆಗೆ ಯಾವ ರೀತಿ ನೆರವಾಗಿವೆ ಎಂಬುದನ್ನು ಇದುವರೆಗಿನ ಸಮೀಕ್ಷೆಯಿಂದ ಅರಿಯಬಹುದು.

ಎಂ.ವಿ.ಸೀ. ಅವರ ಕಥೆಗಳು

ಎಲ್.ಎಸ್. ಶೇಷಗಿರಿರಾವ್

ಕನ್ನಡ ನವೋದಯದ ಎರಡನೆಯ ಪೀಳಿಗೆಯ ಕಥೆಗಾರರು ಶ್ರೀ ಎಂ. ವಿ. ಸೀತಾರಾಮಯ್ಯನವರು. (ಮಾಸ್ತಿ, ಎ.ಆರ್. ಕೃಷ್ಣಶಾಸ್ತ್ರಿಗಳು ಮೊದಲಾದವರು ಮೊದಲ ಪೀಳಿಗೆ) ಅನುವಾದಗಳನ್ನು ಬಿಟ್ಟರೆ ಆರು ಕಥಾಸಂಕಲನಗಳನ್ನು ಪ್ರಕಟಿಸಿದ್ದಾರೆ.

ಆ ಯುಗದ ಕಥೆಗಾರರ ಮೇಲೂ ಮಾಸ್ತಿಯವರದು ಗಾಢವಾದ ಪ್ರಭಾವ. (ಕೃಷ್ಣಶಾಸ್ತ್ರಿಗಳಂತಹ ಕೆಲವೇ ಕೆಲವರು ಅದನ್ನು ತಪ್ಪಿಸಿಕೊಂಡರು.) ಕಥೆಯನ್ನು, ಒಬ್ಬರು ಇನ್ನೊಬ್ಬರಿಗೆ ಹೇಳಿದಂತೆ ನಿರೂಪಿಸಿ ಒಂದು ಚೌಕಟ್ಟನ್ನು ಒದಗಿಸುವುದು, ಒಂದು ಘಟನೆಯ ಸುತ್ತ ಕಥೆಯನ್ನು ಸೃಷ್ಟಿಸುವುದು, ಬಡವರು ಮೂಲೆಯಲ್ಲಿ ಹೇಗೋ ಬದುಕುತ್ತಿರುವವರು ಇಂತಹವರಲ್ಲಿ ಬೆಳಗುವ ಸಂಸ್ಕೃತಿ ಮತ್ತು ಸಜ್ಜನಿಕೆಯನ್ನು ಸ್ಪಷ್ಟಗೊಳಿಸುವುದು, ಹಿಂದಿನ ಮೈಸೂರಿನ ವಿದ್ಯಾವಂತ ಮಧ್ಯಮ ವರ್ಗದ ಕನ್ನಡದ ಬಳಕೆ – ಇವೆಲ್ಲ ಮಾಸ್ತಿಯವರಿಂದ ಬಂದವು. ಎಂ.ವಿ.ಸೀ. ಅವರ ಕಥಾಸಾಹಿತ್ಯದಲ್ಲೂ ಮಾಸ್ತಿಯವರ ಪ್ರಭಾವದ ಈ ಅಂಶಗಳು ಕಾಣುತ್ತವೆ. ಮಾಸ್ತಿಯವರ ಕಥೆಗಳು ಅವರ ಮೊದಲ ಸಂಕಲನದಿಂದಲೇ ಮೆಚ್ಚಿಗೆಯನ್ನು ಗಳಿಸಿದರೂ ಅವುಗಳ ವಿಮರ್ಶಾತ್ಮಕ ಅಧ್ಯಯನ ಆದದ್ದು ತಡವಾಗಿ. ಅವರ ಕಥೆಯ ಚೌಕಟ್ಟು ಹೇಗೆ ಕಥೆಯ ವಸ್ತುವಿಗೆ ಅಗತ್ಯವಾದ ದೂರವನ್ನು ಒದಗಿಸುತ್ತದೆ, ಕಥೆಯ ಪ್ರಸಂಗ ಹೇಗೆ ತನ್ನಾಚೆಯ ಒಂದು ಜೀವನ ದರ್ಶನವನ್ನು ಧ್ವನಿಸುತ್ತದೆ ಇವೆಲ್ಲ ಸ್ಪಷ್ಟವಾದದ್ದು ಅವರ ನಾಲ್ಕಾರು ಸಂಕಲನಗಳು ಪ್ರಕಟವಾದ ಮೇಲೆ.

ಎಂ.ವಿ.ಸೀ. ಅವರ ಕಥೆಗಳ ಉದ್ದೇಶ ಬಹುಮಟ್ಟಿಗೆ ನವೋದಯದ ಬರಹಗಾರರ ಪ್ರಮುಖ ಉದ್ದೇಶಗಳಲ್ಲೊಂದಾದ ಸಜ್ಜನಿಕೆಯ ದರ್ಶನ ಎನ್ನಬಹುದು. ಅವರ ಅನೇಕ ಕಥೆಗಳು ಒಂದು ಸ್ವಾರಸ್ಯವಾದ ತಮಾಷೆಯ ಪ್ರಸಂಗವನ್ನು ನಿರೂಪಿಸುತ್ತವೆ. ಓದುವಾಗ ಸಂತೋಷ ಕೊಡುವುದೇ ಅವುಗಳ ಸಾರ್ಥಕ್ಯ. (ಇದು ಅಪರಾಧವೇನೂ ಅಲ್ಲ.) 'ಹಸ್ತಪರಿಗ್ರಹಣ' ಇಂಥದೊಂದು ಕಥೆ. ಭಾವ-ಭಾವಮೈದ ಚಲನಚಿತ್ರ ನೋಡಲು ಹೋಗಿ, ಮಧ್ಯೆ ಕುಳಿತ ಸುಂದರಿಯ ಕೈ ಎಂದು ಪರಸ್ಪರರ ಕೈಹಿಡಿದುಕೊಂಡು ಕುಳಿತುಕೊಂಡಿದ್ದು ಸಿನಿಮಾ ಮುಗಿದು ದೀಪ ಬಂದಾಗ ನಿರಾಶ

ತಿಳಿಯುತ್ತಾರೆ. ಹೀಗೆ ಅವರು ಕುಳಿತಿದ್ದಾಗಲೇ ಸಿಪಾಯಿಯೊಬ್ಬ ಭಾವನಿಗೆ ಅರಿವಾಗದಂತೆ ಅವನ ಜುಟ್ಟನ್ನು ಕತ್ತರಿಸಿಬಿಟ್ಟಿರುತ್ತಾನೆ. ಇಂಥ ಮತ್ತೊಂದು ಕಥೆ 'ಹಾದಿಯ ಚೆಲುವೆ'. ಕಥೆ ಹೇಳುವವನು ರಸ್ತೆಯಲ್ಲಿ ಹೋಗುತ್ತಿರುವಾಗ ಅವನ ಗೆಳೆಯ ನಾಣಾಳ್ ವಾಗೀಶಾಚಾರ್ಯ ಅವನನ್ನು ಕಂಡು ಸೈಕಲ್ಲಿನಿಂದ ಇಳಿಯುತ್ತಾನೆ. ಮುಂದೆ ಹೋಗುತ್ತಿರುವ ಹೆಂಗಸೊಬ್ಬಳನ್ನು ಕುರಿತು ಬಾಯಿಗೆ ಬಂದಂತೆ (ಆದರೆ ಇದರಲ್ಲಿ ಅಶ್ಲೀಲವಿಲ್ಲ) ಹರಟುತ್ತಾನೆ. ತುಂಬ ಸುಂದರಿ ಇರಬೇಕು ಎನ್ನುತ್ತಾನೆ. ಅವಳ ಉಡುಪು, ಆಭರಣ, ಅಂಗಸೌಷ್ಠವ ಎಲ್ಲ ಹೊಗಳುತ್ತಾನೆ. ಅವಳು ಎಡಕ್ಕೆ ತಿರುಗಿದಾಗ ತನ್ನ ಗೆಳೆಯನೂ ಎಡಕ್ಕೆ ತಿರುಗಿದುದನ್ನು ಕಂಡು, 'ಇದು ಹೆಂಗಸರಾಸ್ಪತ್ರೆ. ಸಾಕು ಹಿಂಬಾಲಿಸಿದ್ದು. ನನ್ನ ಜೊತೆ ಬಾ ಸುಮ್ಮನೆ. ನೋಡು ಇದು ಚೆನ್ನಲ್ಲ. ಯಾರ ಹೆಂಡತಿಯೋ ಏನೋ' ಎಂದು ಬುದ್ಧಿ ಹೇಳುತ್ತಾನೆ. ಆವರೆಗೆ ಅವನ ಮಾತನ್ನೆಲ್ಲ ಕೇಳುತ್ತಿದ್ದ ಕಥೆ ಹೇಳುವವನು, "ನನ್ನ ಹೆಂಡತಿಯೇ ಕಣಯ್ಯ, ವಾಗೀಶ" ಎಂದು ಹೇಳುತ್ತಾನೆ. "ನನ್ನ ಮಾತು ಮುಗಿಯುವುದರೊಳಗೆ, ಕಣ್ಣುಮುಚ್ಚಿ ಬಿಡುವಷ್ಟರಲ್ಲಿ, ವಾಗೀಶಾಚಾರ್ಯ ತನ್ನ ವಾಹನವನ್ನೇರಿ ಮಾಯವಾಗಿಬಿಟ್ಟಿದ್ದ. ತಪ್ಪು ಏನಾಗಿದ್ದರೂ ಅವನದಲ್ಲ, ಮೌನವಾಗಿದ್ದುದು ನನ್ನ ತಪ್ಪು."

ಇಂತಹ ಕಥೆಗಳನ್ನು ಶ್ರೇಷ್ಠ ಕೃತಿಗಳು ಎನ್ನಲಾಗದಿದ್ದರೂ, ಓದುವಾಗ ಸಂತೋಷ ಕೊಡುತ್ತವೆ ಎನ್ನುವುದು ನಿಜ. ದುಷ್ಟತನವಲ್ಲದ ಚಪಲದ ಲೀಲೆ ಇವುಗಳಲ್ಲಿ ಸಾಮಾನ್ಯವಾಗಿ ಕಾಣುವುದು. ಇವುಗಳಲ್ಲಿನ ಹಾಸ್ಯ ಸ್ನೇಹದ ರೀತಿಯದು. ಕಟು ವಿಡಂಬನೆ ಇಲ್ಲ. ಇನ್ನು ಕೆಲವು ಕಥೆಗಳಲ್ಲಿ ಆಕಸ್ಮಿಕಗಳು, ತಪ್ಪುವ್ಯಾಖ್ಯಾನಗಳು ಪಾತ್ರ ವಹಿಸುತ್ತವೆ. ಇವುಗಳ ಪರಿಣಾಮ ಸಾಕಷ್ಟು ಗಂಭೀರತೆ, ಆದರೆ ದುರಂತದ ಹಾದಿಯನ್ನು ಹಿಡಿಯುವುದಿಲ್ಲ. 'ಪ್ರಣಯ ಗೀತ'ದಲ್ಲಿ ಕತೆ ಹೇಳುವವನು ಬರೆದ ಪ್ರೇಮ ಕವನವನ್ನು ಗಂಭೀರವಾಗಿ ಗ್ರಹಿಸಿ ಅವನಿಗೆ ತನ್ನಲ್ಲಿ ಪ್ರೇಮವಿಲ್ಲ ಎಂದು ಕಳವಳಿಸಿದ ಹೆಂಡತಿಗೆ ಗಂಡನ ಗೆಳೆಯನ ಬುದ್ಧಿವಂತಿಕೆಯಿಂದ ಮತ್ತೆ ನೆಮ್ಮದಿ ದೊರೆಯುತ್ತದೆ. 'ಸೀಲಿಯ ಕವರ್'ನಲ್ಲಿ ಸ್ನೇಹಿತ ತನ್ನ ಹೆಂಡತಿಗೆ ಬರೆದ ಕಾಗದವನ್ನು ಆಕಸ್ಮಾತ್ ಸ್ನೇಹಿತನಿಗೆ ಕಳುಹಿಸಿ ಬಿಡುತ್ತಾನೆ, ಈ ಪ್ರಮಾದದಿಂದ ಸ್ನೇಹಿತನಿಗೆ ಹೆಂಡತಿಯ ಶೀಲದಲ್ಲಿ ಸಂಶಯವಾಗುತ್ತದೆ, ಏಕೆಂದರೆ ಅವಳ ಹೆಸರೂ ಅದೇ: ಸ್ನೇಹಿತನಿಂದ ಮತ್ತೆ ಕಾಗದ ಬಂದ ಮೇಲೆ ಕಪ್ಪು ಮೋಡಗಳು ಚದುರುತ್ತವೆ. 'ಮದುವೆಯ ಉಡುಗೊರೆ'ಯಂತಹ ಕಥೆಯನ್ನು ಓದುಗರ ಆಸಕ್ತಿಯನ್ನು ಕೆರಳಿಸುವ ಪ್ರಯತ್ನ ಅತಿಯಾಗಿ, ಮುಕ್ತಾಯ ಬೆರಗುಗೊಳಿಸುವ ಬದಲು ತೀರ ಹಾಸ್ಯಾಸ್ಪದವಾಗುತ್ತದೆ. ಎಂ.ವಿ.ಸೀ. ಅವರ ಹಲವು ಕಥೆಗಳಲ್ಲಿ (ಉದಾ: ಕೊಳ್ಳಿದೆವ್ವ) ಈ ಅನುಭವ ಆಗುತ್ತದೆ. ಅವರು ಓದುಗನನ್ನು ಒಂದು ಕ್ಷಣವೂ ಮರೆಯಲಾರರು, ಅವನ ಕುತೂಹಲ

ವನ್ನು ಉಳಿಸಿಕೊಂಡು ಬೆಳೆಸುವ ಪ್ರಯತ್ನದಲ್ಲಿ ಮುಳುಗಿದ್ದಾರೆನ್ನಿಸುತ್ತದೆ. ಹೀಗಾಗಿ ಕಥೆ ಯಾವ ಅರ್ಥವನ್ನೂ ತುಂಬಿಕೊಳ್ಳುವುದಿಲ್ಲ. ಒಂದಿಷ್ಟು ಕುತೂಹಲವನ್ನುಂಟು ಮಾಡಿ, ಮನಸ್ಸಿನ ಮೇಲೆ ಹೆಚ್ಚು ಪರಿಣಾಮ ಬೀರದೆ ಮುಗಿದು ಹೋಗುತ್ತದೆ. (ಮಾಸ್ತಿಯವರು 'ಅನಿರೀಕ್ಷಿತ ಮುಕ್ತಾಯ'ಕ್ಕೆ ಪ್ರಯತ್ನಿಸುವುದೂ ಇಲ್ಲ, ಓದುಗರಿಂದ ಯಾವುದಾದರೂ ಮುಖ್ಯ ಅಂಶವನ್ನು ಮರೆಮಾಡಿ ಕತೆಯ ಪರಿಣಾಮವನ್ನು ಸಾಧಿಸಲು ಪ್ರಯತ್ನಿಸುವುದೂ ಇಲ್ಲ ಎಂಬುದು ಗಮನಾರ್ಹ ಸಂಗತಿ.)

ಎಂ.ವಿ.ಸೀ. ಅವರ ಹಲವು ಕಥೆಗಳ ಉದ್ದೇಶ ಜೀವನದಲ್ಲಿರುವ ಕಷ್ಟ, ಯಾತನೆಗಳತ್ತ ಗಮನ ಸೆಳೆಯುವುದು, ಹೀಗೆ ಮನಸ್ಸನ್ನು ಮೃದುಗೊಳಿಸುವುದು. ಸರ್ವೋದಯ ಸಾಹಿತ್ಯ ಮೀಮಾಂಸೆ ಸಾಹಿತ್ಯದ ಈ ಶಕ್ತಿಯನ್ನು ಮುಖ್ಯ ಎಂದು ಪರಿಗಣಿಸಿತ್ತು. ಸ್ವಭಾವತಃ ಮನುಷ್ಯನಲ್ಲಿ ಸ್ವಾರ್ಥವಿರುತ್ತದೆ. ಸಾಹಿತ್ಯ ಮನಸ್ಸನ್ನು ಮೃದುಗೊಳಿಸುತ್ತದೆ. ಇತರರತ್ತ ಅದನ್ನು ತಿರುಗಿಸಿ, ಇತರರ ಕಷ್ಟ ಸುಖಗಳಲ್ಲಿ ಅದನ್ನು ತಲ್ಲೀನಗೊಳಿಸಿ, ಮನುಷ್ಯ ಇತರರಲ್ಲಿ ಅನುಕಂಪ ತೋರುವಂತೆ ಮಾಡುತ್ತದೆ. ಇದು ಸರ್ವೋದಯದ ವಿಚಾರ ರೀತಿ. ದೀನ ಜೀವನ ನಡೆಸುವವರು ಎಷ್ಟು ಬಾರಿ ನಮಗೆ ಅರಿಯದಂತೆ ಕೆಂಡದ ಹಾದಿಯನ್ನು ತುಳಿಯುತ್ತಾರೆ ಎಂಬುದನ್ನು ಮನವರಿಕೆ ಮಾಡಿಕೊಡುವ ಅನೇಕ ಕಥೆಗಳನ್ನು ಎಂ.ವಿ.ಸೀ. ಬರೆದಿದ್ದಾರೆ. 'ಪೆಪ್ಪರಮೆಂಟು' ಇಂತಹ ಕಥೆ. ಮಕ್ಕಳ ಹಸಿವಿನ ಗೋಳನ್ನು ನೋಡಲಾರದೆ ಕುಳ್ಳಯ್ಯ ಭಿಕ್ಷೆ ಬೇಡುತ್ತಾನೆ, ಏನೂ ಸಿಕ್ಕುವುದಿಲ್ಲ. ಕಳ್ಳತನಕ್ಕಿಳಿದು, ಮೊದಲ ರಾತ್ರಿಯೇ ಸಿಕ್ಕಿ ಬೀಳುತ್ತಾನೆ. ಒದೆಗಳು ಬೀಳುತ್ತವೆ. ಕರುಣಾಳುವಾದ ಮನೆಯ ಯಜಮಾನರು ಅವನನ್ನು ಪೋಲೀಸರಿಗೆ ಹಿಡಿದುಕೊಡದೆ ಬಿಟ್ಟುಬಿಡುತ್ತಾರೆ. ಕುಳ್ಳಯ್ಯ ಹೆಂಡತಿ ಮಕ್ಕಳನ್ನು ಸಾಯಿಸಿ ತಾನು ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ. ಹಲವೊಮ್ಮೆ ಇಂತಹ ಕಥೆಗಳಿಗೆ ಕಥೆಗಾರರು ಪರಿಣಾಮಕ್ಕೋಸ್ಕರ ದುರಂತದ ತಿರುವು ಕೊಡುತ್ತಾರೆ. ಈ ದುರಂತ ಕಥಾವಸ್ತುವಿನ ಬೆಳವಣಿಗೆಯಿಂದ ಅನಿವಾರ್ಯವಾಗಿ ಮೂಡಿಬಂದದ್ದಲ್ಲ ಎನ್ನಿಸುತ್ತದೆ. 'ಬಾಚಿ ತಬ್ಬಿಕೊಂಡಳು' ಒಂದು ಉದಾಹರಣೆ. ಸ್ವಂತ ಮಕ್ಕಳಿಲ್ಲದ ಬಡ ಮುದುಕಿ ತನ್ನಲ್ಲಿ ಕಳ್ಳೆಯಕಾಯಿ ಕೊಳ್ಳಲು ಬರುವ ಮಕ್ಕಳನ್ನೆಲ್ಲ ಪ್ರೀತಿಸಿ ತನ್ನ ಮೊಮ್ಮಕ್ಕಳ ಹಾಗೆ ನೋಡಿಕೊಳ್ಳುತ್ತಾಳೆ. ಕಡೆಯಲ್ಲಿ ಮಗುವೊಂದನ್ನು ಲಾರಿಯಿಂದ ಉಳಿಸಿ ತಾನೇ ಆಹುತಿಯಾಗುತ್ತಾಳೆ. ಕಥೆಯ ಕೊನೆಯ ವಾಕ್ಯ: 'ಸಾಯುವುದಕ್ಕೆ ಮುನ್ನ, ಬಾಚಿ ತಬ್ಬಿಕೊಂಡಳು ತನ್ನ ಮಗುವನ್ನ.' ಈ ವಾಕ್ಯಕ್ಕಾಗಿಯೇ ಕಥೆಯ ಮುಕ್ತಾಯವನ್ನು ಜೋಡಿಸಿದಂತಾಗಿದೆ. 'ಕಡಲೆಪುರಿಯ ಕೆಂಪಮ್ಮ' ಕಥೆಯಲ್ಲಿ ಕೆಂಪಮ್ಮನ ಸಾವೂ ಇಂತಹದೇ. ಅವಳದು ಸದ್ಗುಣ, ಚಿಕ್ಕ ವಯಸ್ಸಿನ ಸರಸಿಯಾದ ಅವಳಿಗೆ ಮಧ್ಯ ವಯಸ್ಸಿನ ಅರಸಿಕ ಗಂಡನೇ ಗಂಟಾಗಿದ್ದರೂ

ಶುದ್ಧ ಚಾರಿತ್ರ್ಯ ಉಳಿಸಿಕೊಂಡವಳು ಇಂತಹ ಚಿತ್ರವನ್ನು ಕಥೆ ನೀಡುತ್ತದೆ. ಇವಳು ಬಸಿರಾಗಿ ಮಗು ಹೆತ್ತರೆ, ತಾಯಿ ಮಗು ಇಬ್ಬರೂ ಸಾಯಬೇಕೇಕೆ?

ಈ ಕಥೆಗಳಲ್ಲಾಗಲಿ ಎಂ.ವಿ.ಸೀ. ಅವರ ಇತರ ಕಥೆಗಳಲ್ಲಾಗಲಿ ಮುಖ್ಯವಾಗಿ ಕಾಣುವುದು ಸಜ್ಜನಿಕೆಯ ದರ್ಶನ. ಮನುಷ್ಯನ ಒಳ್ಳೆಯತನದ ಸಾಧ್ಯತೆ ಅವರ ಮೂಲವಸ್ತು ಎನ್ನಬಹುದು. ಇದರ ಹಿಂದೆ ಇರುವುದು ಮನುಷ್ಯ ಸ್ವಭಾವ ಮೂಲತಃ ಒಳ್ಳೆಯದು, ಮನುಷ್ಯನ ಅನುಭೂತಿಗಳು ಉದಾತ್ತವಾದವು ಎಂಬ ನಂಬಿಕೆ. ಮನುಷ್ಯ ಸ್ವಭಾವವನ್ನು ಎರಡು ದೃಷ್ಟಿಗಳಿಂದ ಕಾಣಬಹುದು. ಮನುಷ್ಯನದು ಮೂಲತಃ ಪಶುಸ್ವಭಾವ, ರೂಕ್ಷ ಸ್ವಭಾವ: ಸ್ವೈರಿಯಿಂದ. ನಾಗರಿಕ ಸಮಾಜದ ಸಂಸ್ಥೆಗಳು, ಕಟ್ಟಳೆಗಳು ಇವುಗಳ ಪ್ರಭಾವದಿಂದ ಇದನ್ನು ತಿದ್ದಿ ಅವನನ್ನು ಯೋಗ್ಯ ಪ್ರಜೆಯನ್ನಾಗಿ ಮಾಡಬಹುದು ಎನ್ನುವುದು ಒಂದು ದೃಷ್ಟಿ. ಮನುಷ್ಯನದು ಮೂಲತಃ ಮೃದು ಸ್ವಭಾವ, ಅಂತಃಕರಣದ ಸ್ವಭಾವ. ಶಿಕ್ಷಣಕ್ಕೂ ಇದಕ್ಕೂ ಸಂಬಂಧವಿಲ್ಲ ಎನ್ನುವುದು ಮತ್ತೊಂದು ದೃಷ್ಟಿ. (ರೂಸೊ ಅಂತಹವರು ಇನ್ನೂ ಮುಂದೆ ಹೋಗಿ, ಶಿಕ್ಷಣವು ಮಾನವನ ಮೂಲ ಸಜ್ಜನಿಕೆಯನ್ನು ವಕ್ರಗೊಳಿಸುತ್ತದೆ, ಕೆಡಿಸುತ್ತದೆ ಎಂದೂ ಹೇಳುತ್ತಾರೆ.) ಎಂ.ವಿ.ಸೀ. ಅವರದು (ನವೋದಯದ ಬಹುಮಂದಿ ಕಥೆಗಾರರಂತೆ) ಎರಡನೆಯ ದೃಷ್ಟಿ. (ಇದು ಹಲವು ಪ್ರಶ್ನೆಗಳಿಗೆ ಎಡೆ ಮಾಡಿಕೊಡುತ್ತದೆ. ಮನುಷ್ಯನ ಸ್ವಭಾವ ಸಹಜವಾಗಿ ಒಳ್ಳೆಯದಾದರೆ, ದುಷ್ಟತನದ ಪ್ರವೇಶ ಹೇಗಾಯಿತು? Goodness is normal, wickedness is abnormal ಎನ್ನಬಹುದೆ? ಸಜ್ಜನಿಕೆ ಪರಿಪೂರ್ಣವಾಗಬೇಕಾದರೆ ದುಷ್ಟತನದ ಇರವು ಅನಿವಾರ್ಯವೆ! ಆದರೆ ಇಂತಹ ತಾತ್ವಿಕ ಪ್ರಶ್ನೆಗಳು ಎಂ.ವಿ.ಸೀ. ಅವರ ಕಥೆಗಳಲ್ಲಿ ಧ್ವನಿತವಾಗುವುದಿಲ್ಲ. ಅವರಲ್ಲಿ ಒಳ್ಳೆಯತನ-ದುಷ್ಟತನಗಳು ಮುಖಾಮುಖಿಯಾಗುವುದು ವಿರಳ.) ಇತರ ರೀತಿಗಳಲ್ಲಿ ಅತೃಪ್ತಿ ಮಾಡುವ ಹಲವು ಕಥೆಗಳಲ್ಲೂ – 'ಹೆಪ್ಪರಮೆಂಟು', 'ಬಾಚಿ ತಬ್ಬಿಕೊಂಡಳು'. 'ಕಪಲಿಪ್ಪುರಿಯ ಕೆಂಪನು' ಇಂತಹ ಕಥೆಗಳಲ್ಲೂ – ಮನುಷ್ಯನ ಮೂಲಭೂತ ಉದಾತ್ತತೆಯ ದರ್ಶನವಾಗುತ್ತದೆ. ಇಂತಹ ಉದಾತ್ತ ಪಾತ್ರಗಳಲ್ಲಿ ಬಹು ಸಂಖ್ಯೆಯವು ಅಕ್ಷರಾಭ್ಯಾಸ ಕಾಣದವು. ಅವುಗಳ ಒಳ್ಳೆಯತನ ಹುಟ್ಟಿನಿಂದ ಬಂದದ್ದು, ಶಿಕ್ಷಣದ ವರವಲ್ಲ. 'ಹೆತ್ತವರ ಪುಣ್ಯ'ದಲ್ಲಿ ಆಫೀಸಿನ ಜವಾನ ನಾಡಯ್ಯ ಮಗನನ್ನು ಓದಿಸುತ್ತಿದ್ದಾನೆ. ಮಗ ಪರೀಕ್ಷೆಯ ಫೀಸು ಕಟ್ಟಬೇಕು. ತಂದೆಯ ಕೈಯಲ್ಲಿ ಕಾಸಿಲ್ಲ. ಇರುವ ಮಾರ್ಗ ಒಂದೇ - ಹೆಂಡತಿಯ ಓಲೆ ಮಾರಬೇಕು. ಅವಳನ್ನು ಓಲೆ ಕೇಳಿದರೆ ಗಂಡ ಜಗಳಾಡುತ್ತಾನೊ, ಹಾದರ ಮಾಡುತ್ತಾನೊ ಎಂದು ಅನುಮಾನ ಬಂದೀತು ಎಂದು ತನ್ನ ಕಚೇರಿಯ ಶ್ರೀಕಂಠಯ್ಯನವರನ್ನು ಕರೆದುಕೊಂಡು ಹೋಗುತ್ತಾನೆ. ಶ್ರೀಕಂಠಯ್ಯ

ಅವನ ಹೆಂಡತಿಗೆ ವಿಷಯ ತಿಳಿಸುತ್ತಲೇ ಅವಳು "ನನ್ನ ಗಂಡನಿಗೆ ಒಸಿ ಬುದ್ಧಿ ಹೇಳಿ ಸನ್ನೊಡೆಯಾ. ಈಟೊಂದು ಅಪನಂಬಿಕೆ ಆದರೆ ಹ್ಯಾಗೆ? ಅವನ್ನ ಕೇಳಿದ್ರೆ ನಾನು ಕೊಡ್ತಾ ಇರಲಿಲ್ವ? ಓಲೆ ಅಲ್ಲ, ಕಿವಿ ಕುಯ್ದು ಕೊಡು ಅಂದಿದ್ರೂ ಕೊಡ್ತಾ ಇದ್ದೆ. ನಮಗೋಸ್ರ ಅವರು ಜೀವ ತೇಯ್ತಾ ಇಲ್ವ?" ಎನ್ನುತ್ತಾಳೆ. ಶ್ರೀಕಂಠಯ್ಯನವರು ಹೇಳುತ್ತಾರೆ: 'ಯಾವ ಜಾತಿಯವರಲ್ಲೀ ಆಗಲಿ, ಎಷ್ಟು ಜನ ಹೆಂಡಿರು ಈ ಮಾತು ಹೇಳುವವರು ಎಂದು ಆಶ್ಚರ್ಯವಾಯಿತು.' 'ನೂರನಲವತ್ತೆರಡ'ರಲ್ಲಿ ಈ ಒಳ್ಳೆಯತನವನ್ನು ನಾವು ಕಾಣುವುದು ಒಬ್ಬ ಬಡ ಜಟಕಾ ಸಾಹೇಬನಲ್ಲಿ. ಕಥೆ ಹೇಳುವವನು ಅವನ ಗಾಡಿಯಲ್ಲಿ ಕುಳಿತು ಬಂದುಬಿಟ್ಟಿದ್ದಾನೆ. ಎರಡು ಆಣೆ ಕೊಡಬೇಕು. ಜೇಬಿನಲ್ಲಿ ಮೂರು ಕಾಸಿಲ್ಲ. ತುಂಬ ಸಂಕೋಚದಿಂದ, 'ನೋಡಿ ಸಾಹೇಬರೆ, ಕೋಟು ಬದಲಾಯಿಸಿ ಹಾಕಿಕೊಳ್ಳುವ ಕಾಟದಲ್ಲಿ ಪರ್ಸನ್ನು ತೆಗೆದು ಕೊಂಡು ಜೇಬಿಗೆ ಹಾಕಿಕೊಳ್ಳುವುದನ್ನು ಮರೆತುಬಿಟ್ಟೆ,' ಎಂದು ವಿವರಣೆ ಹೇಳಿ, ಪುಸ್ತಕವನ್ನೋ ಪೆನ್ನನ್ನೋ ತೆಗೆದುಕೊಳ್ಳಿ, ಅಥವಾ ನನ್ನನ್ನು ಮನೆಗೆ ಹಿಂದಕ್ಕೆ ಕರೆದು ಕೊಂಡು ಹೋಗಿ, ಹಣ ಕೊಡುತ್ತೇನೆ ಎನ್ನುತ್ತಾನೆ. ಸಾಬಿ, 'ನಿಮಗೇನು ಬುದ್ಧಿ ಗಿದ್ಧಿ ಐತೋ ಇಲ್ಲವೋ ಸ್ವಾಮಿ?' ಎಂದು ಪ್ರಾರಂಭಿಸಿದಾಗ, ಇನ್ನು ಬೈಗುಳ ಮಳೆ ಪ್ರಾರಂಭ ಎಂದು ಬೆದರುತ್ತಾನೆ. ಸಾಬಿ, "ನನಗೆ ಬರಬೇಕಾದದ್ದು ಎರಡಾಣೆ, ಅದಕ್ಕೆ ನಿಮ್ಮ ಕೋಟು, ಪೆನ್ನು ತೆಗೆದುಕೊಳ್ಳೋದು ನ್ಯಾಯ ಅಲ್ಲ. ನನ್ನ ಪ್ರಾಣಾನೆ ತಗೋ ಅಂತೀರಿ. ಎರಡಾಣೆ ಮೇಲೆ ಒಂದು ಕಾಸು ತೆಗೆದುಕೊಂಡರೆ ಅಲ್ಲಾ ನನ್ನ ಮನೆ ಸುಟ್ಟು ಬೂದಿ ಮಾಡ್ತಾನು" ಎನ್ನುತ್ತಾನೆ. ನನ್ನ ಹಣ ಇನ್ನು ಎಂದಾದರೂ ಕೊಡಿ ಎನ್ನುತ್ತಾನೆ. ತನ್ನ ವಿಳಾಸವನ್ನೂ ಕೊಡಲೊಲ್ಲ. 'ನಾನು ಸಿಕ್ಕದೇ ಹೋದರೆ ಆ ಹಣದಲ್ಲಿ ನನ್ನ ಹೆಸರು ಹೇಳಿ ಯಾವುದಾದರೂ ದೇವರಿಗೆ ಹಣ್ಣುಕಾಯಿ ಮಾಡಿಸಿ' ಎನ್ನುತ್ತಾನೆ. (ಮುಸಲ್ಮಾನನಾಗಿ ಅಲ್ಲಾನಲ್ಲಿ ಭಕ್ತಿ ಇರುವವನ ಬಾಯಿಯಲ್ಲಿ ಬರುವ ಈ ಮಾತಿನ ಔದಾರ್ಯವನ್ನು ಗಮನಿಸಬೇಕು.) 'ಆ ಜೋಟುದ್ದ ಹುಡುಗ' ಕಥೆಯಲ್ಲಿ ಬಡವರು ಒಬ್ಬರಿಗೊಬ್ಬರು ನೆರವಾಗುವ ದೃಶ್ಯ ಇದೆ. 'ಕಲಾಪುತ್ರ'ನಲ್ಲಿ ಜಾತಿಯ ಅಹಂಕಾರದಿಂದ ನರಳುವಾತ, ಸಂಗೀತ ಕೇಳಲು ಹೋಗಿ ಪಕ್ಕದಲ್ಲಿ ಕುಳಿತ ಹಜಾಮನನ್ನು ಅಲ್ಲಿಂದ ಓಡಿಸಿದ ಮೇಲೆ, ಅಮೋಘವಾದ ಸಂಗೀತ ಸುಧೆಯನ್ನು ಹರಿಸಿದ ಹುಡುಗ ಹಜಾಮನ ಮಗನೇ ಎಂದು ತಿಳಿದು, ಕಣ್ಣೀರು ಬಿಡುತ್ತಾನೆ.

ಈ ದೃಷ್ಟಿಯಿಂದ ಎಂ.ವಿ.ಸೀ. ಅವರ 'ಜೀವನ ನಾಟಕ' ಗಮನಾರ್ಹ ಸಂಕಲನ. ಇದು ನಿಜವಾಗಿ ಕಥಾಸಂಕಲನವಲ್ಲ, ವ್ಯಕ್ತಿ ಚಿತ್ರಗಳ ಸಂಕಲನ. ಇಲ್ಲಿ ಒಂಬತ್ತು ವ್ಯಕ್ತಿಗಳ ಚಿತ್ರಗಳಿವೆ – ಗುಮಾಸ್ತೆ ಗುಂಡಪ್ಪ, ನಾಟಕದ ಸುಬ್ಬಣ್ಣ,

ಅರಮನೆ ರಾಮರಾಯರು, ಛತ್ರಾನ್ನದ ಭಾಗೀರಥಮ್ಮ, ಜಗಲಿ ಜೋಯಿಸರು, ಹಾಲಿನ ಹನುಮಕ್ಕ, ಕೊಟ್ಟಣದ ಸೀಲಮ್ಮ, ಆನೇಕಲ್ಲು ರಾಮರಾಯರು ಮತ್ತು ಒಂಟಿ ಸಂಜೀವ. ಇವರೆಲ್ಲ ಎಲ್ಲಿಯೋ ಹೇಗೋ ಬದುಕಿ ಜೀವನ ಸವೆಸಿ ನಡೆದವರು. ಪ್ರಸಿದ್ಧರಲ್ಲ, ಹಣವಂತರಲ್ಲ. ಒಂದು ರೀತಿಯಲ್ಲಿ ಇವರು ಮನುಷ್ಯ ಸ್ವಭಾವದ ವೈಚಿತ್ರ್ಯಗಳನ್ನು ತೋರಿಸುವವರು ; ಮತ್ತೊಂದು ರೀತಿಯಲ್ಲಿ ಮುಗ್ಧತನದಿಂದ ಒಳ್ಳೆಯವರಾಗಿ ಬಾಳಿದವರು. ಜಡಸ್ವಭಾವದವನೆನ್ನಿಸಿಕೊಂಡ ಗುಂಡಪ್ಪ ಮಾಡುವಷ್ಟು ಕೆಲಸವನ್ನು ನಿಜವಾಗಿ ಮನೆಯಲ್ಲಿ ಬೇರೆ ಯಾರೂ ಮಾಡುವುದಿಲ್ಲ. ಮನೆಯ ಯಜಮಾನಿ ಗಂಡನಿಗೆ, 'ನಿಮಗಾದರೆ ಗುಂಡಪ್ಪ ಪಂಚೆ ಒಗೆದು ಕೊಡುತ್ತಾನೆ .... ನನಗೂ ಸೀರೆ ಒಗೆದು ಕೊಡುವುದಕ್ಕೆ ಯಾರಾದರೂ ಇದ್ದರೆ ಹೊತ್ತಿಗೆ ಸರಿಯಾಗಿ ಅಡಿಗೆ ಮಾಡಬಹುದಾಗಿತ್ತು' ಎಂದು ಕೊಂಕು ನುಡಿದರೆಂದು, ಮರುದಿನ ಗುಂಡಪ್ಪ ಎರಡು ಸೀರೆ ಒಗೆದು ಹಿಂಡಿ ಸುತ್ತಿ ಕಲ್ಲಮೇಲಿಡುತ್ತಾನೆ. ಇದರಲ್ಲಿ ಅವನಿಗೆ ಯಾವ ಬೇಸರವಾಗಲಿ ಕಹಿಯಾಗಲಿ ಇಲ್ಲ. ಮನೆಯಾಕೆ ಪಶ್ಚಾತ್ತಾಪ ಪಟ್ಟರೆ ಗುಂಡಪ್ಪ ಯಾವ ಕೊಂಕೂ ಇಲ್ಲದೆ 'ನೀನು ಇಂಥ ಅಲ್ಪ ವಿಚಾರಕ್ಕೆಲ್ಲ ಶೋಕಪಟ್ಟರೆ ಹೇಗೆ?... ನೀನು ನನ್ನ ಅತ್ತಿಗೆಯ ಸಮಾನ' ಎಂದು ಬಿಡುತ್ತಾನೆ. ಹಾಲಿನ ಹನುಮಕ್ಕನ ಗಂಡ ಓಡಿಹೋಗಿದ್ದಾನೆ, ಅವಳು ಮೈ ತುಂಬ ಒಡವೆ ಹಾಕಿಕೊಂಡು ಓಡಾಡುತ್ತಾಳೆ. ಜನ ಕೆಟ್ಟಮಾತು ಆಡುತ್ತಾರೆ ಎಂದರೆ; "ಹಾಗೆ ಅನ್ನೋ ಜನ ಒಡವೆ ತೆಗೆದು ಕೊಟ್ಟಾರೋ ? ಇಲ್ಲ. ಇನ್ನು ಜನಕ್ಕೆ ಯಾಕೆ ಹೆದರಬೇಕು. ನಮ್ಮ ಮನಸು ಶುದ್ಧವಾಗಿದ್ದರೆ ಸರಿ" ಎನ್ನುತ್ತಾಳೆ.

ಎಂ.ವಿ.ಸೀ. ಅವರ ಹಲವು ಕಥೆಗಳು ಪಾತ್ರಗಳ ಕಷ್ಟದಲ್ಲಿ ಮುಗಿಯುತ್ತವೆ. ಪರಿಹಾರ ದೊರೆತಾಗ, ಬಹುಮಟ್ಟಿಗೆ ಅದು ಇತರ ಪಾತ್ರಗಳ ಒಳ್ಳೆಯತನದಿಂದಲೇ. ('ನಿಲ್ದಾಣಗಳ ನಡುವೆ'ಯಂತಹ ಕಥೆಗಳಲ್ಲಿ ಆಕಸ್ಮಿಕದ ಬಳಕೆ ಇದೆ. ಇದನ್ನು ಕಥೆಗಾರರು ಸಹಜವೆನ್ನುವಂತೆ ಮಾಡಲು ಎಷ್ಟೇ ಪ್ರಯತ್ನಿಸಿದ್ದರೂ ಕಥೆಯ ಗತಿ ತೀರ ಕೃತಕ, ಕಥೆಗಾರರು ತಿರುಚುತ್ತಿದ್ದಾರೆ ಎನ್ನಿಸುತ್ತದೆ.) 'ಅಳು'ವಿನಲ್ಲಿ ಹೆಣ್ಣೊಬ್ಬಳು ಬಲಾತ್ಕಾರಕ್ಕೆ ಒಳಗಾಗಿ ಶೀಲವನ್ನು ಕಳೆದುಕೊಂಡಿದ್ದಾಳೆ. ಅನಂತರ ಮದುವೆಯಾಗಿದೆ. ಆದರೆ ತನ್ನದು ಎಂಜಲು ಮೈ ಎಂಬ ಭಾವ. ಗಂಡನಿಗೆ ಮೋಸ ಮಾಡುತ್ತಿದ್ದೇನೆ ಎಂಬ ಸಂಕಟ. ಅವಳ ಪಾಲಿಗೆ ಹಗಲು ರಾತ್ರಿ ಎಲ್ಲ ಅಳುವಿಗಾಗಿಯೇ ಇರುವುದು. 'ಅಳು, ಅಳು, ಅಳು!' ಎಂದೇ ಕಥೆ ಪ್ರಾರಂಭವಾಗುತ್ತದೆ. ಕಡೆಗೆ ಕಾಗದ ಬರೆದಿಟ್ಟು ಗಂಡನಿಗೆ ನಿಜಾಂಶ ತಿಳಿಸುತ್ತಾಳೆ. ಗಂಡ, 'ನೀನಿರುವಂತೆಯೇ ಸ್ವೀಕರಿಸಲು ಸಿದ್ಧ' ಎಂದು ತಿಳಿಸುತ್ತಾನೆ. "ಒಂದು ವರ್ಷವಾದ ಮೇಲೆ ರಮೇಶನಿಗೆ ಮತ್ತೆ ಅಳು ಕೇಳಿಬಂದಿತು. ರೋಹಿಣಿಯದಲ್ಲ: ಅವಳು ಹೆತ್ತ

ತನ್ನ ಮಗುವಿನದು". 'ಮುರಿದ ಅಗಣಿ' ಪಾಕಿಸ್ತಾನದ ಹುಟ್ಟಿನ ಸ್ವಲ್ಪ ಮೊದಲು ಭಾರತದಲ್ಲಿ ನಡೆದ ನೆತ್ತರು ಸ್ನಾನದ ಸಂದರ್ಭದಲ್ಲಿ ನಡೆದ ಪ್ರಸಂಗವನ್ನು ನಿರೂಪಿಸುತ್ತದೆ; ಅಥವಾ ಎರಡು ಪ್ರಸಂಗಗಳನ್ನು ನಿರೂಪಿಸುತ್ತದೆ. ಒಂದು ಮತ್ತೊಂದರ ಶಿಶು. ಬಡ ಜಟಕಾ ಸಾಹೇಬ, ಹತ್ತಿ ಉರಿಯುತ್ತಿರುವ ದ್ವೇಷಾಗ್ನಿಯ ಮಧ್ಯೆ, ತನ್ನ ಯಜಮಾನನ ಮಗಳನ್ನು ಸಂರಕ್ಷಿಸಿ ತನ್ನ ಪರಿಚಯದ ಒಬ್ಬರ ಮನೆಗೆ ರಾತ್ರಿ ಮುಟ್ಟಿಸುತ್ತಾನೆ. ಕೃತಜ್ಞತೆ ತುಂಬಿದ ಹೆಣ್ಣು, ಮನೆಯ ಯಜಮಾನನಿಗೆ 'ಇಂದು ನಾನು ನಿಮ್ಮ ವಸ್ತು. ನನ್ನ ಗಂಡ ತೀರಿಹೋಗಿದ್ದಾರೆ' ಎನ್ನುತ್ತಾಳೆ. ಅವಳ ಆಕರ್ಷಣೆಯನ್ನು ಅನುಭವಿಸಿದ ಆತನೂ ಸಂಯಮ ತಂದುಕೊಳ್ಳುತ್ತಾನೆ. ಮನೆಗೆ ಬಂದ ತರುಣಿ ಅವನ ಮಗಳಂತೆ ಸುರಕ್ಷಿತವಾಗಿ ಅಲ್ಲಿಂದ ನಡೆಯುತ್ತಾಳೆ. ಇದು ಎಂ.ವಿ.ಸೀ. ಅವರ ಒಳ್ಳೆಯ ಕಥೆಗಳಲ್ಲಿ ಒಂದು. ಮುದುಕ ತರುಣಿಯ ಸಂಪತ್ತಿನ ಪ್ರಲೋಭನವನ್ನು ಗೆಲ್ಲುತ್ತಾನೆ. ಮನೆಯೊಡೆಯ ಅವಳ ಲಾವಣ್ಯದ ಆಕರ್ಷಣೆಯನ್ನು ಗೆಲ್ಲುತ್ತಾನೆ. ಇದರೊಡನೆ, ಹಿಂದೂ-ಮುಸ್ಲಿಂ ದ್ವೇಷದ ಕ್ರೂರ ಅಗ್ನಿಯ ನಡುವೆ ಈ ಹಿಂದೂ-ಮುಸ್ಲಿಮರ ಮಾನವತ್ವ ಬೆಳಗುತ್ತದೆ.

ನವೋದಯದ ಬಹು ಮಂದಿ ಕಥೆಗಾರರು ಜೀವನದ ಕಷ್ಟ ನೋವುಗಳ ಪರಿಹಾರವನ್ನು ಸಜ್ಜನರ ಒಳ್ಳೆಯತನದಲ್ಲಿ, ದುಷ್ಟರ ಹೃದಯ ಪರಿವರ್ತನೆಯಲ್ಲಿ ಕಂಡರು. ಇವರು ಶೋಷಣೆ, ಕ್ರೌರ್ಯ ಇವುಗಳಿಗೆ ಕುರುಡರೇನೂ ಅಲ್ಲ. ಆದರೆ ಸಮಾಜ ಎನ್ನುವುದು ವ್ಯಕ್ತಿಗಳ ಸಮುದಾಯವಾದದ್ದರಿಂದ ಇವರು ಸಾಮಾಜಿಕ ಸಮಸ್ಯೆಗಳಿಗೂ ಪರಿಹಾರವನ್ನು ವ್ಯಕ್ತಿಗಳ ಸ್ವಭಾವದ ಸುಧಾರಣೆಯಲ್ಲಿ ಕಂಡರು. ಸಾಮಾಜಿಕ ವ್ಯವಸ್ಥೆ, ಅದರ ನಿಯಮಗಳತ್ತ ಇವರು ಹೆಚ್ಚಾಗಿ ಗಮನ ಹರಿಸಲಿಲ್ಲ. ಎಂ.ವಿ.ಸೀ. ಅವರಾದರೂ ವ್ಯಕ್ತಿಯ ಅನುಕಂಪ, ಔದಾರ್ಯ ಇವುಗಳನ್ನೇ ಪ್ರಧಾನವಾಗಿ ಗಣಿಸಿದರು. ಇದರಿಂದ ಅವರ ಕಥೆಗಳಲ್ಲಿ ಒಂದು ಬಗೆಯ ಸರಳತೆ ಅನಿವಾರ್ಯವಾಯಿತು. ಸರಳತೆಯೇ ಕಥೆಯ ಸಾಧನೆಗೆ ಬೇಲಿ ಕಟ್ಟಸಬೇಕಾಗಿಲ್ಲ, ಸರಳವಾದ ಕಥೆಯೂ ಒಳ್ಳೆಯ ಕಥೆಯಾಗಬಹುದು ಎನ್ನುವುದನ್ನು ಮಾಸ್ತಿಯವರ ಕಥೆಗಳು ತೋರಿಸಿಕೊಟ್ಟಿವೆ. ಎಂ.ವಿ.ಸೀ. ಅವರ ಕಥೆಗಳಲ್ಲಿ ಆಗಾಗ ಕಿರಿಕಿರಿಯನ್ನು ಮಾಡುವುದು, ಓದುಗರ ಆಸಕ್ತಿಯನ್ನು ಸೆಳೆದು ಉಳಿಸಿಕೊಳ್ಳಲು ಮಾಡುವ ಮಿತಿಮೀರಿದ ಪ್ರಯತ್ನ. ('ಹಾದಿಯ ಚೆಲುವೆ', 'ಊಹೆ ನಿಜವಾದರೆ?', 'ಆ ಜೋಟುದ್ದ ಹುಡುಗ,' 'ಕೊಳ್ಳಿ ದೆವ್ವ' ಇಂತಹ ಕಥೆಗಳಲ್ಲಿ ಇದು ಓದುವವರ ತಾಳ್ಮೆಯನ್ನು ಪರೀಕ್ಷಿಸುವ ಮಟ್ಟಿಗೆ ಹೋಗುತ್ತದೆ.) ಎರಡನೆಯ ಮಿತಿ ಎಂದರೆ ಅತಿಭಾವುಕತೆ. ಮರುಕದ ಸೃಷ್ಟಿಯೇ ಕಥೆಯ ಮುಖ್ಯ ಆಶಯವಾಗಿಬಿಡುತ್ತದೆ. 'ಅಮರ ಕಲೆ', 'ತಾಯೊಬ್ಬಳೇ ನನಗೆ ಗೊತ್ತಿರುವುದು' 'ಪುಷ್ಪರಗಳೆ' 'ತಂತಿ ಕಿತ್ತ ಪಿಟೀಲು' ಇಂತಹ

ಕಥೆಗಳಲ್ಲಿ ಇದನ್ನು ಕಾಣಬಹುದು. ಒಮ್ಮೊಮ್ಮೆ ಜಟಿಲವಾದ ಸಮಸ್ಯೆಗಳಿಗೆ ಅತಿ ಭಾವುಕತೆಯೇ ಪರಿಹಾರವನ್ನು ನಿರ್ಧರಿಸಿಬಿಡುತ್ತದೆ. 'ಪರಿಹಾರ'ದಲ್ಲಿ ಇದನ್ನು ಕಾಣಬಹುದು. ಅಕ್ಕನ ಮಗು ತಬ್ಬಲಿಯಾಗಬಾರದೆಂಬ ಅನುಕಂಪದಿಂದ ತರುಣಿ ಭಾವನ ಕೈಹಿಡಿಯುತ್ತಾಳೆ. ಆದರೆ ಈ ಮದುವೆಯಿಂದ ಪ್ರೈಮನಸ್ಸುಗಳಿಗೆ ಹಿಂಸೆಯೇ ಆದಾಗ, ತನ್ನ ನೆಚ್ಚಿನ ಕಥೆಗಾರನಿಗೆ ಪತ್ರ ಬರೆಯುತ್ತಾಳೆ. (ಅವನು ತಾನು ಹೋಗದೆ ತನ್ನ ಸ್ನೇಹಿತನನ್ನು ಕಳಿಸುವುದು, ಅವನೇ ಕಥೆಗಾರ ಎಂದು ಭಾವಿಸಿ ಅವಳು "ನಿಮ್ಮ ಕಪಿವಾಣೆಯಲ್ಲಿ ನನಗೆ ಸಂಪೂರ್ಣವಾಗಿ ಭರವಸೆಯುಂಟು. ಸಮಾಜಕ್ಕೆ ಗುರುವಾಗಬಲ್ಲ ನೀವು ನನಗೂ ಗುರುವಾಗ" ಬೇಕೆಂದು ಬೇಡುವುದು, ಅನಂತರ ಕಥೆಗಾರನೇ ಹೋಗುವುದು ಅನಗತ್ಯ ಗೊಂದಲ.) ಅವನೇ ಅವಳ ಕೈಹಿಡಿಯಲು ಒಪ್ಪುತ್ತಾನೆ. ಹೀಗೆ ಸಮಸ್ಯೆ ಸುಲಭವಾಗಿ ಪರಿಹಾರವಾಗುತ್ತದೆ.

ಬಹು ಕುತೂಹಲಕಾರಿಯಾದ ಕಥೆಯನ್ನು ಬರೆಯಬೇಕೆಂಬ ಪ್ರಜ್ಞಾಪೂರ್ವಕ ಪ್ರಯತ್ನ ಮತ್ತು ಅತಿಭಾವುಕತೆ ಇವುಗಳಿಂದ ಪಾರಾದ ಹಲವು ಕಥೆಗಳು ಶ್ರೀ ಎಂ. ವಿ. ಸೀ. ಅವರ ಕಥಾಸಾಹಿತ್ಯದ ಶ್ರೀಮಂತ ಕೊಡುಗೆ. ಇವುಗಳಲ್ಲಿ ಎರಡನ್ನು ನಿದರ್ಶನಗಳನ್ನಾಗಿ, ತೆಗೆದುಕೊಳ್ಳುತ್ತಿದ್ದೇನೆ. 1953ರಲ್ಲಿ ಪ್ರಕಟವಾದ ಅವರ 'ಕರುಣೆ' ('ಕರುಣಾಲಹರಿ' ಸಂಕಲನ) ಮನುಷ್ಯರಲ್ಲಿ ಸಹಜವಾಗಿ ಇರುವ ಕರುಣೆಯ ಹಲವು ಅಂತಸ್ತುಗಳನ್ನು ಒಂದು ಸಾಮಾನ್ಯ ಪ್ರಸಂಗದಲ್ಲಿ ಗುರುತಿಸುತ್ತದೆ. ಕಥೆಯಲ್ಲಿ ನಾವು ಕಾಣುವುದು ಇಬ್ಬರು ತಬ್ಬಲಿಗಳನ್ನು. ಕಥೆಯ ಪ್ರಾರಂಭದಲ್ಲಿ ಕಾಣುವುದು ಯಾರಿಂದಲೋ ಕಲ್ಲೇಟು ತಿಂದು ರಕ್ತ ಸುರಿಸಿಕೊಳ್ಳುತ್ತಿರುವ ನಾಯಿಯ ಮರಿಯನ್ನು. ಕಥೆಯ ಕಡೆಯಲ್ಲಿ ಕಾಣುವುದು ಯಾರೋ ಒಂದು ತಿಪ್ಪೆಯ ರಾಶಿಯ ಬಳಿ ಇರಿಸಿಹೋದ ಎಳೆಯ ಮಗುವನ್ನು. (ಈ ನಾಯಿಮರಿಯೇ ತನ್ನ ಒಡೆಯನನ್ನು ಎಳೆಯ ಮಗುವಿನ ಬಳಿಗೆ ಕೊಂಡೊಯ್ಯುವುದು ಅರ್ಥವತ್ತಾಗಿದೆ.) ಈ ಎರಡು ಸಂದರ್ಭಗಳಲ್ಲೂ ಹಲವರ ಕರುಣೆ ಸ್ಪಂದಿಸುತ್ತದೆ. ಆದರೆ ಮೊದಲ ಸಂದರ್ಭದಲ್ಲಿ ಕರುಣೆ ಕಾರ್ಯಪ್ರವೃತ್ತವಾಗುವುದು ಚಿಕ್ಕ ಹುಡುಗ ರಾಮುವಿನಲ್ಲಿ. ಅವನ ತಂದೆ ಕೃಷ್ಣಪ್ಪ, ತಾಯಿ ಶಾರದಮ್ಮ ಯಾರೂ ನಿಷ್ಕರುಣಿಗಳಲ್ಲ. ಆದರೆ ನಾಯಿಯನ್ನು ತರುವ ಸಂಭ್ರಮದಲ್ಲಿ ಮಗ ಟಿಫಿನ್ ಕ್ಯಾರಿಯರ್ ಕಳೆದುಕೊಂಡ ಎಂದು ಅವರಿಬ್ಬರಿಗೂ ಕೋಪ. ಪಕ್ಕದ ಮನೆಯ ಸುಂದರಮ್ಮನೂ ಒಳ್ಳೆಯಾಕೆಯೇ, ಆದರೆ ಅವಳಿಗೂ ನಾಯಿಯನ್ನು ಸಾಕುವ ಮನಸ್ಸು ಅಷ್ಟಾಗಿ ಇಲ್ಲ. ರಾಮುವಿನ ಧರ್ಮಸಂಕಟ ಪಕ್ಕದ ಮನೆಯ ರಾಯರ ಕರುಣೆಯನ್ನು ಮುಟ್ಟುತ್ತದೆ. ನಾಯಿಗೆ ಆಶ್ರಯ ದೊರೆಯುತ್ತದೆ ಮಗು ಸಿಕ್ಕಾಗ, ರಾಮುವೇ ಅವರ ಬಳಿಗೆ ಧಾವಿಸಿ ಬಟ್ಟೆ ಸರಿಸಿ ಸಂಭ್ರಮಪಡುತ್ತಾನೆ. ಮನುಷ್ಯರ ಈ ಮಗುವಿನ ಸ್ಥಿತಿ ನಾಯಿಮರಿಯ ಸ್ಥಿತಿಗಿಂತ ಕೇಡು. ಅದನ್ನು

ರಾಮು ಮುಟ್ಟಿದ ಎಂದು ತಾಯಿ ತಂದೆ ಸಿಡಕುತ್ತಾರೆ.* ನಾಯಿಮರಿಯನ್ನು ಸಾಕಿಕೊಂಡ ವೃದ್ಧ ದಂಪತಿಗಳು ಈಗ ಮೂಕರು. ರಾಮು "ನೀವು ಸಾಕಿಕೊಂಡು ಬಿಡಿ ಮಾವಯ್ಯ" ಎಂದರೆ ಎಲ್ಲರಿಗೂ ನಗು, ಅಷ್ಟ. ಅದನ್ನು ಸಾಕಿಕೊಳ್ಳಲು ಮುಂದೆ ಬರುವವಳು 'ಹೀನವೃತ್ತಿಯ'. 'ಕೀಳ್ಜಾತಿಯ' ಮಾದಿಗರ ನರಸಿ. ರಾಮುವಿನ ನಾಯಿಮರಿ 'ಹೊಸ ತಾಯಿ' ಮಕ್ಕಳನ್ನು ಹಿಂಬಾಲಿಸುತ್ತದೆ.

'ಮೋದರ ಜೆನ್ನಿ' ಸೀತಾರಾಮಯ್ಯನವರ ಇತ್ತೀಚಿನ ಸಂಕಲನ. 'ಸಿಲ್ಬಾಣಗಳ ನಡುವೆ'ಯಲ್ಲಿ ಪ್ರಕಟವಾಗಿದೆ. ಇದು ತೊಟ್ಟಿಲು ಮಾರುವ ಹೆಣ್ಣೊಂದು ಮನೆಯೊಂದರ ಯಜಮಾನನನ್ನು ಕೇಳುವ 'ತೊಟ್ಲು ಬೇಕೇ ಸ್ವಾಮಿ, ತೊಟ್ಲು ?' ಎಂಬ ಪ್ರಶ್ನೆಯಿಂದ ಪ್ರಾರಂಭವಾಗುತ್ತದೆ. ಪರಸ್ಪರ ಅನ್ಯೋನ್ಯರಾಗಿರುವ ದಂಪತಿಗಳು ಮನೆಯವರು. ತೊಟ್ಟಿಲು ಕಟ್ಟುವ ಭಾಗ್ಯವೂ ಅವರಿಗೆ ಪ್ರಾಪ್ತವಾಗುವುದರಲ್ಲಿದೆ. ತೊಟ್ಟಿಲು ಮಾರಲು ಬಂದ ಸುಂದರ ಹೆಣ್ಣು ತನಗಿಂತ ವಯಸ್ಸಾದ, ಮಕ್ಕಳನ್ನು ಕೊಡಲಾರದ ಗಂಡಿನ ಕೈಹಿಡಿದವಳು. ಗಂಡನೇ ಮಕ್ಕಳು ಬೇಕೆಂದು ಹಂಬಲಿಸಿದಾಗ ಹಿಂದೆ ತನ್ನನ್ನು ಬಯಸಿದ ತರುಣನಿಗೆ ತನ್ನನ್ನು ಅರ್ಪಿಸಿಕೊಂಡು ಬಸಿರಾಗಿದ್ದಾಳೆ. ಗಂಡನಿಗೆ ಸಂಭ್ರಮ. 'ಯಾರಿಗಾದರೂ ತೊಟ್ಟಿಲು ಕೊಟ್ಟು ಅವರ ಮಗು ಬೆಳೆದ ಮೇಲೆ ತೊಟ್ಟಿಲನ್ನು ತೆಗೆದುಕೊಂಡು ಬಾ, ಅದರಲ್ಲಿ ನಮ್ಮ ಮಗು ಬೆಳೆಯಲಿ' ಎನ್ನುತ್ತಾನೆ. ಹೀಗೆ ಮಾಡಿದರೆ ಮಗುವಿಗೆ ಶ್ರೇಯಸ್ಸು ಎಂದು ಅವನ ನಂಬಿಕೆ. ಅವಳು ತೊಟ್ಟಿಲನ್ನು ಹಣ ತೆಗೆದುಕೊಳ್ಳದೆ ಕೊಡಲು ಬಯಸುತ್ತಾಳೆ. ತೆಗೆದು ಕೊಳ್ಳುವವರು ಒಪ್ಪದಿದ್ದಾಗ ಒಂದು ರುಪಾಯಿಗೆ ಮಾರುತ್ತಾಳೆ. ಅವಳು ಮಗುವನ್ನು ಹಡೆಯುತ್ತಾಳೆ. ಮಗುವು ಚನ್ನಾಗಿ ಬೆಳೆಯುತ್ತದೆ. ಆದರೆ ಗಂಡನಿಗೆ ಮೋಸಮಾಡಿದೆ ಎಂಬ ಕೊರಗು ಅವಳಿಗೆ, ಒಂದು ದಿನ ಮಗುವನ್ನು ಗಂಡನ ಪಕ್ಕದಲ್ಲಿ ಮಲಗಿಸಿ ತಾನು ಮಾಯವಾಗುತ್ತಾಳೆ. ಇಲ್ಲಿ, ಕಥೆಯ ಸಮಸ್ಯೆಗೆ ಒಂದು ರೀತಿಯ ಸಾಮಾಜಿಕ ವ್ಯವಸ್ಥೆಗೆ ಸಂಬಂಧ ಕಲ್ಪಿಸಬಹುದಾದರೂ ಮುಖ್ಯವಾಗಿ ಅದು ವ್ಯಕ್ತಿಗತವಾದ ಸಮಸ್ಯೆ ಅಂತಃಕರಣ ಮತ್ತು ಮಾನವ ಸಂಬಂಧಗಳಲ್ಲಿ ನಿಷ್ಠೆಯ ಸಮಸ್ಯೆ. ಜೆನ್ನಿಯೇ ಕಾರ್ಯಪ್ರವೃತ್ತಳಾಗಿ ಎರಡು ಬಾರಿಯೂ ತನ್ನ ಸಮಸ್ಯೆಗಳನ್ನು ಬಿಡಿಸಿಕೊಳ್ಳುತ್ತಾಳೆ. ಅವಳ ಸನ್ನಿವೇಶ ಅವಳ ಸ್ವಭಾವ ಇವುಗಳನ್ನು ಗಮನಿಸಿದಾಗ ಎರಡು ಬಾರಿಯೂ ಅವಳು ಆರಿಸುವ ಪರಿಹಾರ ಅನಿವಾರ್ಯ ಎಂದೇ ಎನ್ನಿಸುತ್ತದೆ. ಕಥೆ ಹಾಸ್ಯದಿಂದ ಪ್ರಾರಂಭ

*ಹಿಂದೆ ಕಥೆ ಪ್ರಕಟವಾದಾಗ, ''ಈ ಮಗುವಿಗೆ ಯಾರೂ ಗತಿ ಇಲ್ಲವೆ ? ಈ ವಿಶಾಲ ಜಗತ್ತಿನಲ್ಲಿ ಈಗತಾನೇ ಕಣ್ಣುಬಿಡುತ್ತಿರುವ ಈ ಹಸುಳೆಗೆ ಇಂಬುಕೊಡುವ ಕರುಣೆಯ ತೊಟ್ಟಿಲಿಲ್ಲವೆ? ಎಂದು ಮರುಗಿ ಕೇಳುವ ರೀತಿಯಲ್ಲಿ ನಾಯಿ ಬಗುಳಿತೆಂಬ ವರ್ಣನೆಯಿತ್ತು. ತೀರ ವಾಚ್ಯವೂ, ಭಾವಾತಿರೇಕದ ಅಭಿವ್ಯಕ್ತಿಯೂ ಆದ ಈ ಭಾಗವನ್ನು ಕಥೆ ಮತ್ತೆ ಪ್ರಕಟವಾದಾಗ ಬಿಡಲಾಯಿತು.

ವಾಗಿ ಹಗುರವಾದ ದನಿಯಲ್ಲಿ ಮುಂದುವರಿದು ಕ್ರಮೇಣ ಗಂಭೀರವಾಗುತ್ತದೆ. ಮಾಸ್ತಿಯವರ 'ಕೃಷ್ಣಮೂರ್ತಿಯ ಹೆಂಡತಿ' ಯಲ್ಲಿನಂತೆ ಇಲ್ಲಿಯೂ ಕಥೆಯು ಬಾಳನ್ನು ನಿರ್ಮಿಸುವ ವ್ಯಕ್ತಿಗಳ ಜೀವನದ ಉಲ್ಲಾಸ, ಅವರ ಒಳ್ಳೆಯತನ ನಮಗೆ ಪ್ರಪಂಚದಲ್ಲಿ ವಿವರಣೆಗೆ ಸಿಲುಕದ ಕಷ್ಟವಿರುವಂತೆಯೇ ವಿವರಣೆಗೆ ಸಿಲುಕದ ಸುಖವಿದೆ ಎಂಬುದನ್ನು ನೆನಪು ಮಾಡಿಕೊಟ್ಟು ಒಂದು ಬಗೆಯ ಸಮತೋಲನವನ್ನು ಸಾಧಿಸಿದೆ.

ಎಂ. ವಿ. ಸೀ. ಅವರ ಕಥೆಗಳು ಅಂತಃಕರಣ, ಕರುಣೆ, ಸ್ನೇಹ, ದಾಂಪತ್ಯದಲ್ಲಿ ನಿಷ್ಠೆ ಇವುಗಳ ಮೌಲ್ಯಗಳನ್ನು ಎತ್ತಿ ಸಾರುವ ಕೃತಿಗಳು. ಇಂಗ್ಲಿಷಿನಲ್ಲಿ ಒಂದು ಪದ ಬೃಂದವಿದೆ: of joy in widest commonalty spread. ಎಂ. ವಿ. ಸೀ. ಅವರ ಕಥೆಗಳು ನಮಗೆ ನೆನಪು ಮಾಡಿಕೊಡುವುದು: goodness in widest commonalty spread. ಈ ಸಜ್ಜನಿಕೆಯನ್ನು ಗುರುತಿಸುವುದರಿಂದ, ಸ್ವಾರ್ಥದ ಕಟ್ಟನ್ನು ಬಿಚ್ಚಿ ಒಗೆದು ಹೃದಯವಂತಿಕೆಯನ್ನು ಬೆಳಸಿಕೊಳ್ಳುದರಿಂದ ಬಾಳಿಗೆ ಬರುವ ಸಂತೋಷ, ಶ್ರೀಮಂತಿಕೆಗಳು ಈ ಕಥೆಗಳ ಕೇಂದ್ರದಲ್ಲಿ ಪುಟಿಯುತ್ತವೆ.

ಎಂ. ವಿ. ಸೀ ಅವರ ಮಕ್ಕಳ ಸಾಹಿತ್ಯ

ಈಶ್ವರಚಂದ್ರ

ಸಂಶೋಧಕರೆಂದೂ ಖ್ಯಾತ ವಿದ್ವಾಂಸರೆಂದೂ ಹೆಸರಾದ ರಾಘವ ಅವರು ಕಾದಂಬರಿಗಳನ್ನೂ ಸಣ್ಣಕಥೆಗಳನ್ನೂ ಪದ್ಯಗಳನ್ನೂ ಬರೆದಿದ್ದಾರೆ. ಮಕ್ಕಳಿಗಾಗಿ ಅವರು ರಚನೆ ಮಾಡಿರುವ ಕೃತಿಗಳ ಸಂಖ್ಯೆ ಹತ್ತು. ಅವುಗಳಲ್ಲಿ ಪದ್ಯಸಂಕಲನಗಳು ಮೂರು – 'ಹೂವಾಡಿಗಿತ್ತಿ', 'ಹಾವಾಡಿಗ' ಮತ್ತು 'ಕೋಡಂಗಿ'. ಪದ್ಯಕಥೆ ಒಂದು – 'ದಾದಿರನ್ನೆ'. ನಾಟಕಗಳು ಮೂರು – 'ಕೈಕೋಲು', 'ಕುಮಾರ ಗೌತಮ' ಮತ್ತು 'ಕರುಣೆಯ ಕುಡಿ'. ಪಾತ್ರಕಥೆ ಒಂದು – 'ಯುಧಿಷ್ಠಿರ'. ಜೀವನ ವೃತ್ತಾಂತ ಒಂದು – 'ಕವಿರನ್ನ'. ಪರಿಷತ್ ಪರಿಚಯ ಕೃತಿ ಒಂದು – 'ಕನ್ನಡದ ಕಥೆ'. ಇಷ್ಟಲ್ಲದೆ ಮಕ್ಕಳಿಗಾಗಿ 'ರಾಬಿನ್‌ಸನ್ ಕ್ರೂಸೊ' ಕಥೆಯನ್ನು ಕಾದಂಬರಿ ರೂಪದಲ್ಲಿ ಬರೆದಿದ್ದಾರೆ.

ಅವರ ಮೊದಲ ಮಕ್ಕಳ ಸಾಹಿತ್ಯ ಕೃತಿ – 'ಹೂವಾಡಿಗಿತ್ತಿ' ಪ್ರಕಟವಾದದ್ದು 1945 ರಷ್ಟು ಹಿಂದೆ ಎಂದರೆ ಅದರ ಮಹತ್ವದ ಅರಿವಾಗುತ್ತದೆ. ಆಗಿನ್ನೂ ಮಕ್ಕಳ ಸಾಹಿತ್ಯದಲ್ಲಿ ಹೆಚ್ಚಿನ ಕೃಷಿ ಆಗಿರಲಿಲ್ಲ. ಬರೆಯುತ್ತಿದ್ದ ಕೆಲವೇ ಜನ ಗಣ್ಯರು ಪ್ರಕಟಿಸಿದ್ದ ಕೃತಿಗಳು ಪ್ರಚಾರದಲ್ಲಿದ್ದವು. ಆ ಕಾಲಘಟ್ಟದಲ್ಲಿ ರಾಘವ ಅವರ 'ಹೂವಾಡಿಗಿತ್ತಿ' ಅನೇಕರ ಗಮನ ಸೆಳೆಯಿತು. 'ಹೂವನು ಮಾರುತ ಹೂವಾಡಿಗಿತ್ತಿ ಹಾಡುತ ಬರುತಿಹಳು' ಎಂಬ ನುಡಿ ಮಕ್ಕಳ ನಾಲಗೆಯ ಮೇಲೆ ನಲಿದಾಡತೊಡಗಿತು. ಮಕ್ಕಳಿಗೆ ಕವಿಯ ಹೆಸರು ನೆನಪಿನಲ್ಲಿ ಉಳಿಯದಿದ್ದರೂ ಪದ್ಯಮಾತ್ರ ಚೆನ್ನಾಗಿ ಬಾಯಿಪಾಠವಾಯಿತು. 'ಹೂವಾಡಿಗಿತ್ತಿ'ಯ ಮೊದಲ ಮುದ್ರಣದಲ್ಲಿ ಹದಿನಾರು ಪದ್ಯಗಳು ಇದ್ದವು. 1958 ರಲ್ಲಿ ವಿಸ್ತೃತ ಮುದ್ರಣ ಪ್ರಕಟವಾದಾಗ ಮತ್ತೆ ಹನ್ನೊಂದು ಪದ್ಯಗಳನ್ನು ಅದಕ್ಕೆ ಸೇರಿಸಿದರು. ಹೀಗೆ ಹೂವಾಡಿಗಿತ್ತಿಯ ಹೂ ಬುಟ್ಟಿಯಲ್ಲಿ ಬಗೆಬಗೆಯ ಬಣ್ಣಗಳ, ಕಂಪಿನ 27 ಕವನಗಳು ಸೇರಿದವು. ಸಂಕಲನದ ಶೀರ್ಷಿಕಾಪದ್ಯ 'ಹೂವಾಡಿಗಿತ್ತಿ' ಒಂದು ಚೆಲುವಾದ ಹಾಡು. ಮಕ್ಕಳಿಗೆ ಬಗೆಬಗೆಯ ಬಣ್ಣದ, ಕಂಪಿನ ಹೂಗಳನ್ನು ಪರಿಚಯಿಸುವ ಈ ಹಾಡು ಓದಿದ ಕೂಡಲೇ ಪ್ರಿಯವಾಗುವುದರಲ್ಲಿ ಸಂಶಯವಿಲ್ಲ. ಹಾಗೆಯೇ 'ಬಾತು ಕೋಳಿ ಕುಣಿತ' ಎಂಬ ಪದ್ಯ

ತನ್ನ ಅನುಕರಣ ಶಬ್ದಗಳಿಂದ ಮಕ್ಕಳನ್ನು ಕುಣಿಸುತ್ತದೆ. 'ಮುತ್ತಿನಸರ' ಎಂಬ ಪದ್ಯ ಪ್ರಶ್ನೆ-ಉತ್ತರಗಳ ಮಾಲೆ. ಮಕ್ಕಳ ನೆನಪಿನ ಶಕ್ತಿಯನ್ನೂ ಯೋಚನೆಯ ಶಕ್ತಿಯನ್ನೂ ಪರೋಕ್ಷವಾಗಿ ವರ್ಧಿಸುವಂಥ ವಾಕ್ಯಮಾಲೆ. 'ಇಲಿಯ ಬಾಲ', 'ಹಾವು', 'ಗಂಟೆ' – ಈ ಪದ್ಯಗಳನ್ನು ಆಯಾ ಶೀರ್ಷಿಕೆಯ ಅರ್ಥವನ್ನು ಚಿತ್ರರೂಪದಲ್ಲಿ ತೋರಿಸುವಂತೆ ಅಕ್ಷರದ ಮೊಳೆಗಳನ್ನು ಜೋಡಿಸಿ ಅಚ್ಚಿಸಿದ್ದಾರೆ.

'ಹೂವಾಡಿಗಿತ್ತಿ' ಪ್ರಕಟವಾದ ಹದಿಮೂರು ವರ್ಷಗಳ ನಂತರ ಪ್ರಕಟವಾದ ಪದ್ಯಸಂಕಲನ 'ಹಾವಾಡಿಗ'. ಇದರಲ್ಲಿ ಶೀರ್ಷಿಕಾ ಪದ್ಯದಲ್ಲಿ ಹಾವಾಡಿಗನ ವೇಷ ಭೂಷಣವನ್ನೂ ಅವನು ಹಾವಾಡಿಸುವುದನ್ನೂ, ಸಣ್ಣಪುಟ್ಟ ಚಮತ್ಕಾರಗಳನ್ನು ಮಾಡುವುದನ್ನೂ ಮಕ್ಕಳಿಗೆ ಸ್ವಾರಸ್ಯವಾಗಿ ನಿರೂಪಿಸಿದ್ದಾರೆ. ಈ ಸಂಕಲನದಲ್ಲಿ 'ಹೂವಾಡಿಗಿತ್ತಿ'ಗಿಂತ ಸ್ವಲ್ಪ ಪ್ರೌಢವಾದ ಕವನಗಳಿವೆ. 'ಬಾರಯ್ಯ ಬಾ ಗಾಳಿ', 'ಪಂಜರದ ಗಿಣಿ', 'ಮರಿಯ ಮುದ್ದಿನ ತಾಯಿ', 'ಜೋಗದ ಜಲಪಾತ', 'ನವ ಭಾರತ ರತ್ನ ಜವಹರ್' – ಈ ಪದ್ಯಗಳನ್ನು ಉದಾಹರಿಸಬಹುದು.

ಮೂರನೆಯ ಪದ್ಯಸಂಕಲನ 'ಕೋಡಂಗಿ' 1979 ರಲ್ಲಿ ಪ್ರಕಟವಾಯಿತು. ಇದರಲ್ಲಿ ಕೆಲವು ಚಿಕ್ಕ ಕವನಗಳೂ ಕೆಲವು ದೊಡ್ಡ ಕವನಗಳೂ ಸಂಗ್ರಹವಾಗಿವೆ. ಅಲ್ಲಲ್ಲಿ ಚುಟುಕಗಳೂ ಇವೆ. 'ಹಲ್ಲಿ' ಎಂಬ ಪದ್ಯದಲ್ಲಿ ರಾಘವ ಅವರ ಸಂಶೋಧಕ ಪ್ರಜ್ಞೆ ತಲೆಹಾಕಿ "'ಹಲ್' ಇಲ್ಲದ 'ಹಲ್-ಇಲಿ', 'ಹಲ್ಲಿ'-'ಹಲ್ಲಿ' ಆಯ್ತು ಕೇಳಿ: 'ಇಲಿ' ಎಂದರೆ 'ಇಲ್ಲದ್ದು':। ಹಲ್ಲಿಲಿ ಹಲ್ಲಿಲ್ಲದ್ದು." ಎಂದು ಹಲ್ಲಿಯ ವ್ಯುತ್ಪತ್ತಿಯನ್ನು ವಿವರಿಸ ಹೊರಟಿದೆ. ಅಂತೆಯೇ 'ಋತುಗಳ ರೀತಿ' ಪದ್ಯದಲ್ಲಿ ಆರು ಋತುಗಳಲ್ಲಿ ಪ್ರಕೃತಿ ಹೇಗಿರುವುದೆಂದು ಸರಳ ಮಾತುಗಳಲ್ಲಿ ಹಿಡಿದಿಟ್ಟಿರುವ ರಾಘವ ಅವರ ಪ್ರಯತ್ನ ಶ್ಲಾಘನೀಯ. 'ಹಸು ಸಾಕಬೇಕು – ದೇಶ ಕಟ್ಟಬೇಕು' ಎಂಬ ಕೋಲಾಟದ ಪದ ತನ್ನ ಅರ್ಥದ ಕೊಂಡಿಗಳನ್ನು ಹೆಣೆಯುತ್ತಾ ಮಕ್ಕಳನ್ನು ರಂಜಿಸುತ್ತದೆ. 'ಅಳಿಲು ಸೇವೆ' ಪದ್ಯದಲ್ಲಿ ರಾಮಾಯಣದ ಕಥೆಯೇ ಸರಳವಾಗಿ ಹುಟ್ಟಿಕೊಳ್ಳುತ್ತದೆ. 'ತಬ್ಬಲಿ ಕಮಲೆ' ಎಂಬ ನೀಳ್ಗವನ ವರ್ಡ್ಸ್‌ವರ್ತ್ ಕವಿಯ 'ಲೂಸಿಗ್ರೇ' ಎಂಬ ಪದ್ಯಮಾದರಿಯಲ್ಲಿ ಬರೆದದ್ದು ಎಂದು ಕವಿ ಹೇಳಿಕೊಂಡಿದ್ದಾರೆ. ಕಮಲೆ ಎಂಬ ಪುಟ್ಟ ಹುಡುಗಿಯ ದುರಂತ ಕಥೆ ಇದರ ವಸ್ತು. ಮಕ್ಕಳ ಮನ ತಟ್ಟುವಂತಿದೆ.

'ದಾದಿಪನ್ನ' ಮಕ್ಕಳಿಗಾಗಿ ಬರೆದ ಕಥನ ಕವನ. ರಾಜಕುಮಾರ ಉದಯ ಸಿಂಹನನ್ನು ಕ್ರೂರ ಬನವೀರನಿಂದ ರಕ್ಷಿಸುವುದಕ್ಕಾಗಿ ತನ್ನ ಮಗನನ್ನೇ ಬಲಿನೀಡಿದ ವೀರಧಾತ್ರಿ ಪನ್ನೆಯ ಹೃದಯ ಮಿಡಿಸುವ ಕಥೆ. ಸತ್ತ ಮಗನನ್ನು ಕಳೆದುಕೊಂಡ ಮೇಲೆ ತಾಯಿ ವಿಲಾಪಿಸುವುದು –

"ಎನ್ನ ಬಾಳಿನ ಬೆಳಕು ನಂದಿತೆ,
ಎನ್ನ ಕಣ್ಣಿನ ಹಾಪೆ ಸಿಡಿಯಿತೆ,
ಎನ್ನ ನೆತ್ತರು ತಣ್ಣಗಾದುದೆ
ಮಣ್ಣುಗೂಡುತಲಿ!
ಇನ್ನು ಯಾರಿಗೆ ಬದುಕಿರಲಿ, ನಾ–
ನಿನ್ನು ಯಾರನು ಕಂಡನೆನ್ನಲಿ?
ಚಿನ್ನ ಭಾಳನು ಹೋದನೇ, ಹಾ!"

– ಕಣ್ಣೀರು ಸುರಿಸುತ್ತದೆ. ಪನ್ನೆಯ ತ್ಯಾಗವನ್ನೂ ದೇಶಭಕ್ತಿಯನ್ನೂ ಉಚಿತವಾಗಿ ಮಕ್ಕಳ ಮನದಲ್ಲಿ ಸ್ಥಾಪಿಸುವಲ್ಲಿ ರಾಘವರು ಯಶಸ್ವಿಯಾಗಿದ್ದಾರೆ.

'ಕುಮಾರ ಗೌತಮ' ಮಕ್ಕಳಿಗಾಗಿ ಬರೆದ ನಾಟಕ. ಭಗವಾನ್ ಬುದ್ಧ, ಬಾಲಕ ಗೌತಮನಾಗಿದ್ದಾಗ ನಡೆದ ಕೆಲವು ಸಂಗತಿಗಳು ಈ ನಾಟಕದ ವಸ್ತು. ಪರಮ ಕಾರುಣ್ಯಕ್ಕೆ ಹೆಸರಾದ ಬುದ್ಧನಲ್ಲಿ ಆ ಗುಣ ಬಾಲ್ಯದಲ್ಲೇ ಹೇಗೆ ಮೊಳಕೆಯೊಡೆಯುತ್ತಿತ್ತು ಎನ್ನುವುದನ್ನು ಚಿತ್ರಿಸುತ್ತದೆ ಈ ನಾಟಕ. ಸಂಭಾಷಣೆಗಳು ಸರಳವಾಗಿವೆ. ಮಕ್ಕಳೇ ಪಾತ್ರವಹಿಸಿ ನಿರ್ವಹಿಸಬಹುದಾದ ಈ ನಾಟಕ, ಮಕ್ಕಳಲ್ಲಿ ಕರುಣೆಯಸ್ರೋತವನ್ನು ಹರಿಯಿಸುವುದರಲ್ಲಿ ಸಂಶಯವಿಲ್ಲ.

'ಕರುಣೆಯ ಕುಡಿ' ಮೇಲಿನ ನಾಟಕದ ವಸ್ತುವನ್ನೇ ಇಟ್ಟುಕೊಂಡು ಸರಳ ರಗಳೆಯಲ್ಲಿ ಬರೆದ ನಾಟಕ. ಇಷ್ಟು ಬಿಟ್ಟರೆ ವಸ್ತುವಿನಲ್ಲಾಗಲಿ, ನಿರೂಪಣೆಯಲ್ಲಾಗಲಿ, ಪಾತ್ರ ಪೋಷಣೆಯಲ್ಲಾಗಲಿ ಬೇರೆ ವ್ಯತ್ಯಾಸಗಳಿಲ್ಲ.

'ಕೈಕೋಲು' ಎಂಬ ಇನ್ನೊಂದು ನಾಟಕದಲ್ಲಿ ಕರುಣೆಯನ್ನೇ ಬೇರೊಂದು ದೃಷ್ಟಾಂತದಿಂದ ಚಿತ್ರಿಸಿದ್ದಾರೆ. ಕಾಮನ ಹಬ್ಬಕ್ಕೆ ಭಿಕ್ಷುಕಿಯೊಬ್ಬಳ ಕೈಕೋಲನ್ನೇ ಕಿತ್ತುಕೊಂಡು ಬರುವ ಹುಡುಗರ ತಂಡ ಒಂದು ಕಡೆ: ಅದೇ ತಂಡದವನಾಗಿದ್ದು, ಮುದುಕಿಯ ಮೇಲಿನ ಅನುಕಂಪದಿಂದ ತನ್ನ ಅಜ್ಜನ ಕೈಕೋಲನ್ನೇ ತಂದುಕೊಡುವ ಸೋಮು ಇನ್ನೊಂದು ಕಡೆ. ಹೀಗೆ ರಾಘವರು ಮಕ್ಕಳ ಎದುರಿಗೆ ಗುಣಗಳನ್ನು ಕಡೆದು ನಿಲ್ಲಿಸುತ್ತಾರೆ. ಮುಪ್ಪಿನಲ್ಲಿ ಮಕ್ಕಳು ತಂದೆತಾಯಿಯರಿಗೆ ಕೈಕೋಲು ಆಗಬೇಕು ಎಂಬ ನೀತಿಯ ಮಾತನ್ನು ಕೊನೆಯಲ್ಲಿ ಇಟ್ಟಿದ್ದಾರೆ.

ಅಂತರರಾಷ್ಟ್ರೀಯ ಮಕ್ಕಳ ವರ್ಷದ ಸಂದರ್ಭದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿದ ಮಕ್ಕಳ ಪುಸ್ತಕಗಳ ಮಾಲಿಕೆಗೆ ಶ್ರೀ ಎಂ.ವಿ. ಸೀತಾರಾಮಯ್ಯನವರು ಬರೆದ ಪುಸ್ತಕ 'ಕನ್ನಡದ ಕತೆ'. ಶಾಲೆಯ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳ ನಡುವೆ ನಡೆದ ಸಂಭಾಷಣೆಯ ರೂಪದಲ್ಲಿ ಇಲ್ಲಿನ ನಿರೂಪಣೆ ಸಾಗಿದೆ. ಹದಿನಾರೇ ಪುಟದ ಪುಟ್ಟಪುಸ್ತಕ. ದಪ್ಪಕ್ಷರದಲ್ಲಿ ಅಚ್ಚಾಗಿದೆ. ಆದುದರಿಂದ ಹೆಚ್ಚು ವಿಷಯ

ವನ್ನು ಹೇಳಲು ಅವಕಾಶವಾಗಿಲ್ಲ. ಅಲ್ಲದೆ ಸಂಭಾಷಣೆಯ ರೂಪದಲ್ಲಿರುವುದರಿಂದ ನಿರೂಪಣೆ ಕೆಲವುಸಲ ಹಿಂದೆ ಮುಂದೆ ತೊನೆದಾಡುತ್ತದೆ. ವಿದ್ಯಾರ್ಥಿಯೊಬ್ಬ ತಮ್ಮನ್ನು 'ಸರ್' ಎಂದು ಕರೆದದ್ದಕ್ಕೆ ಆಕ್ಷೇಪಿಸಿ ಭಾಷಣವನ್ನೇ ಮಾಡುವ ಅಧ್ಯಾಪಕರು ಮುಂದೆ (ಪುಟ 10) ಶಿಷ್ಯೆಯೊಬ್ಬಳನ್ನು 'ಮೇಡಮ್' ಎಂದು ಸಂಬೋಧಿಸುವುದು ವಿಪರ್ಯಾಸವಾಗಿ ಕಾಣುತ್ತದೆ. ಪುಸ್ತಕದ ಉದ್ದಕ್ಕೂ ಮುದ್ರಣ ದೋಷಗಳಿವೆ. ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿರುವ ಈ ಪುಸ್ತಕದಲ್ಲಿ 'ಗಧಾಯುದ್ಧ' ಎಂದು ಅಚ್ಚಾಗಿರುವುದನ್ನು ನೋಡಿ, ಎಂ.ವಿ.ಸೀ. ಅವರು ಎಷ್ಟು ನೊಂದುಕೊಂಡಿದ್ದಾರೋ.

'ಯುಧಿಷ್ಠಿರ' ಮತ್ತು 'ರನ್ನ' – ಭಾರತ ಭಾರತಿ ಪುಸ್ತಕ ಸಂಪದ ಮಾಲಿಗಾಗಿ ಬರೆದ ಕೃತಿಗಳು. ಮೊದಲ ಪುಸ್ತಕದಲ್ಲಿ ಧರ್ಮರಾಯನ ವ್ಯಕ್ತಿಚಿತ್ರಣ ಚೆನ್ನಾಗಿ ಬಂದಿದೆ. ಯಕ್ಷಪ್ರಶ್ನೆಯ ಪ್ರಸಂಗ ಮತ್ತು ಸ್ವರ್ಗಾರೋಹಣ ಪ್ರಸಂಗವನ್ನು ಮಕ್ಕಳಿಗೆ ಪ್ರಿಯವಾಗುವಂತೆ ಚಿತ್ರಿಸಿದ್ದಾರೆ. ಧರ್ಮರಾಯನ ಬದುಕಿನಲ್ಲಿ ಮೂರು ದೊಡ್ಡ ಕುಂದಕಗಳೆಂದರೆ ದ್ಯೂತವ್ಯಸನ, ಅಭಿಮನ್ಯುವನ್ನು ಚಕ್ರವ್ಯೂಹ ಭೇದನೆಗೆ ಕಳುಹಿಸಿದ್ದು ಹಾಗೂ 'ಅಶ್ವತ್ಥಾಮೋ ಹತಃ ಕುಂಜರಃ' ಎಂದು ತಿಳಿದೂ ತಿಳಿದೂ ರಣರಂಗದಲ್ಲಿ ಘೋಷಿಸಿದ್ದು. ಮೊದಲನೆಯದಕ್ಕೆ ಕ್ಷತ್ರಿಯ ಧರ್ಮದ ಸಮಜಾಯಿಷಿಯಾಯಿತು. ಆದರೆ ಅನಂತರದ ಎರಡು ಪ್ರಸಂಗಗಳನ್ನು ಲೇಖಕರು ಪ್ರಸ್ತಾಪಿಸಿಯೇ ಇಲ್ಲ.

ಕವಿ ರನ್ನನ ಜೀವನ ಮತ್ತು ಕೃತಿಪರಿಚಯ ಮಾಡಿಕೊಡುವ ಪುಸ್ತಕ 'ರನ್ನ'. ರನ್ನನ ಕಾಲದ ಜನಜೀವನ, 'ಅಜಿತ ಪುರಾಣ' ಮತ್ತು 'ಸಾಹಸಭೀಮ ವಿಜಯ' ಕಾವ್ಯಗಳ ಸಂಕ್ಷಿಪ್ತ ಪರಿಚಯ ಈ ಪುಸ್ತಕದಲ್ಲಿ ದೊರೆಯುತ್ತದೆ. ಈ ಪುಟ್ಟ ಪುಸ್ತಕವನ್ನು ಓದಿದ ಮಕ್ಕಳಿಗೆ ರನ್ನನ ಮೂಲ ಕಾವ್ಯಗಳನ್ನು ತಾವು ದೊಡ್ಡವರಾದ ಮೇಲೆ ಓದಬೇಕು ಎಂಬ ಆಸೆ ಹುಟ್ಟಿದರೆ ಆಶ್ಚರ್ಯವಿಲ್ಲ. ಈ ನಿಟ್ಟಿನಲ್ಲಿ ಕೃತಿ ಸಾರ್ಥಕ.

ಹೀಗೆ ರಾಘವರು ಮಕ್ಕಳಿಗೆ ಬರೆದದ್ದು ಕೆಲವೇ ಕೃತಿಗಳಾದರೂ ವಿವಿಧ ಮಜಲುಗಳಲ್ಲಿ ಮಕ್ಕಳ ಮನ ತಟ್ಟುವ, ಬುದ್ಧಿಯನ್ನು ಮುಟ್ಟುವ ಗುಣ ಅವುಗಳಲ್ಲಿವೆ. ಅವರ ಕೆಲವು ಪದ್ಯಗಳು ಇಂದಿಗೂ ಚಲಾವಣೆಯಲ್ಲಿರಲು ಅರ್ಹವಾಗಿವೆ.

ಎಂ.ವಿ.ಸೀ. ಅವರ ಬಾನುಲಿಯ ಬರಹಗಳು

ಬಿ. ಎ. ರಂಗನಾಥ

ಬಾನುಲಿಯ ಬರಹಗಳು ಸಂಕ್ಷಿಪ್ತವಾಗಿ, ಅಲ್ಪಕಾಲದಲ್ಲಿ ಜನಸಾಮಾನ್ಯರಿಗಾಗಿ ರಚಿಸಿದ ರಚನೆಗಳು. ಇಲ್ಲಿ ಬಳಸುವ ಭಾಷೆಯು ಸರಳವಾದ್ದು. ಬದುಕಿನ ಹಲವುಸ್ತರಗಳನ್ನು ಸುಲಭವಾಗಿ ಪರಿಚಯಮಾಡಿಕೊಡುವುದು ಬಾನುಲಿಯ ಬರಹದ ಉದ್ದೇಶ. ಬಾನುಲಿಯತಂತ್ರ ಮತ್ತು ಆಯ್ಕೆಯ ವಿಷಯವು ಸ್ವಯಂಪೂರ್ಣತೆಯನ್ನು ಸಾಧಿಸುವ ಸಾರ್ಥಕತೆ ಈ ಮಾಧ್ಯಮದಲ್ಲಿ ಒಂದು ಅಗತ್ಯ ಅಂಶವಾಗುತ್ತದೆ. ಕಡಿಮೆ ಎಂದರೆ ಐದು ನಿಮಿಷ, ಅತಿ ಹೆಚ್ಚು ಅಂದರೆ ಒಂದು ಘಂಟೆಯ ಕಾಲ ಮಿತಿಯಲ್ಲಿ ಅನೇಕ ವಿಷಯಗಳ ಬಗ್ಗೆ 'ಪ್ರಸಾರ'ವಾಗುವ ಕಾರ್ಯಕ್ರಮಕ್ಕೆ ಲೇಖನವನ್ನು ಸಿದ್ಧಪಡಿಸುವಾಗ ಲೇಖಕನ ಸ್ವಂತಿಕೆ ಮತ್ತು ಸ್ವಾಭಾವಿಕತೆಗಳು ಏನೇ ಆಗಿರಲಿ ವೈಜ್ಞಾನಿಕ ದೃಷ್ಟಿ, ಲೋಕದ ರೀತಿ-ನೀತಿಗಳು, "ಜನ ಬದುಕಬೇಕೆಂಬ" ಆಶಯ, ಈ ಕೃತಿಗಳಲ್ಲಿ ಮೂಡಿಬರಬೇಕು. ಧ್ವನಿಯ ಹಲವು ಬಗೆಯ ಬಳಕೆಯೇ ಬಾನುಲಿಯ ಸಂಪರ್ಕ ಸಾಧನವಾಗಿರುವಾಗ ಅಂತಹ ಧ್ವನಿ ವೈವಿಧ್ಯತೆಯ ಬಳಕೆಯ ಸಾಧ್ಯತೆ ಬರಹಗಳಲ್ಲಿ ಕೂಡಿರಬೇಕು.

ಶ್ರೀ ಎಂ. ವಿ. ಸೀ. ಅವರು ನಾಟಕ, ರೂಪಕ, ಸಂಭಾಷಣೆ, ಸಣ್ಣಕತೆ, ಕವನ, ಚಿಂತನ ಮುಂತಾದ ಬಾನುಲಿಯ ಬರಹಗಳಲ್ಲಿ ಪಳಗಿದವರು. ನಿತ್ಯಜೀವನದಲ್ಲಿ ಅವರೆಷ್ಟು ಸರಳರೋ ಅಷ್ಟೇ ಸರಳವಾಗಿ ಕನ್ನಡ ಭಾಷೆಯನ್ನು ಶ್ರೀಸಾಮಾನ್ಯನಿಂದ ಹಿಡಿದು ಪಂಡಿತೋತ್ತಮ ಪ್ರೌಢರಿಗೂ ಹಿಡಿಸುವಂತೆ ರಚಿಸಿದ್ದಾರೆ. ಅರ್ಥವಂತಿಕೆಯ ಆಳ ವಿಶಾಲತೆಗಳು ಹೃದಯಸ್ಪರ್ಶಿಯಾಗಿ ಅವರ ಲೇಖನಗಳಲ್ಲಿ ಕಂಡುಬಂದಿವೆ. ಸಾಮಾನ್ಯ ವಿಷಯದಿಂದ ಹಿಡಿದು ಆಧ್ಯಾತ್ಮಿಕ ವಿಚಾರದ ವರೆಗೆ ಯಾವುದೇ ವಿಷಯವನ್ನಾದರೂ ಸರಳವಾಗಿ, ಸ್ಪಷ್ಟವಾಗಿ, ಅರ್ಥವಾಗುವಂತೆ ಹೇಳುವ 'ಕಲೆ' ಇವರ ಬರಹಗಳ 'ಸಿದ್ಧಿ'ಯಾಗಿದೆ.

ಬಾನುಲಿಯ ನಾಟಕಗಳು ರೂಪಗಳು ಸಂಭಾಷಣೆ, ಪ್ರತಿನಿತ್ಯದ ಕಾರ್ಯಕ್ರಮದಲ್ಲಿ ಕಾಣುವ ಸಾಹಿತ್ಯಕ ಪ್ರಭೇದ. ಈ ಮೂರು ರೂಪಗಳೂ "ಸಂಭಾಷಣೆ"ಯನ್ನೇ ಮೂಲಧನವನ್ನಾಗ ಉಳ್ಳದ್ದಾದರೂ ತಾಂತ್ರಿಕತೆಯಲ್ಲಿ 'ನಾಟಕ' 'ರೂಪಕ'ಗಳು ಪ್ರಭಾವ ಬೀರುವಷ್ಟು 'ಸಂಭಾಷಣೆ' ಬೀರಲಾರದು. ಆದರೆ ಶ್ರೀ ಎಂ. ವಿ. ಸೀ.

ಈ ಮೂರು ಪ್ರಭೇದಗಳ ತಮ್ಮ ರಚನೆಗಳಲ್ಲಿ ಬಾನುಲಿಯ ತಂತ್ರವನ್ನು ಅರಿತ ನುರಿತ ಪಕ್ವಗೊಂಡ ತಮ್ಮದೇ ಆದ "ಶೈಲಿ"ಯನ್ನು ನಿರ್ಮಿಸಿದ್ದಾರೆ.

"ಹೋರಾಟ" ಎಂಬ ಒಂದು ನಾಟಕ ರೇಡಿಯೋ ತಂತ್ರವನ್ನು ಸಂಪೂರ್ಣವಾಗಿ ಬಳಸಿಕೊಳ್ಳುವ ನಿರ್ದೇಶಕನ ಪ್ರತಿಭೆಯನ್ನು ಪರೀಕ್ಷಿಸುವ ರಚನೆ. ಗಂಡು-ಹೆಣ್ಣುಗಳಲ್ಲಿ ಉಂಟಾಗುವ ವಿಚಾರ ಭೇದ, ಲೌಕಿಕ ದೃಷ್ಟಿ, ತಿಳಿದು ಮಾಡುವ ತಪ್ಪು. ತಿಳಿಯದೇ ಉಂಟಾಗುವ ದೋಷ, ಮಾನವ ವ್ಯಕ್ತಿಗೆ ಅಸಹಾಯಕತೆಯ ಸಂದರ್ಭ ಉಂಟಾಗುವ ಸನ್ನಿವೇಶಗಳನ್ನು ಒಳಗೊಂಡಿದೆ. "ಬದುಕೆಂಬುದೇ ಒಂದು ಹೋರಾಟ" ಎಂಬ ಮಾತಿನೊಂದಿಗೆ ಸಹಜವಾಗಿ ಕೊನೆಗೊಳ್ಳುವಲ್ಲಿ ಮಾನವ ಜೀವನದ ಸುಖ-ದುಃಖ ಸಮತ್ವಭಾವದ ಆಗತ್ಯತೆಯನ್ನು ಪರಿಚಯಮಾಡಿಕೊಡುತ್ತದೆ. ಸಂತಾನದ ಅಭಿಲಾಷೆ, ತಾಯಿತನದ ಬಯಕೆ. ನಿರಾಶೆ, ತಪ್ಪು ತಿಳುವಳಿಕೆ ಅಸಹಾಯಕತೆಯ ಹಲವು ಮಜಲುಗಳು. ಎಲ್ಲ ಕಾಲದ ಮಾನವೀಯ ದೌರ್ಬಲ್ಯವನ್ನೂ ಪ್ರಾತಿನಿಧಿಕವಾಗಿ ಚಿತ್ರಿಸುತ್ತದೆ.

"ಸ್ವಪ್ನ-ರಕ್ತ" ಎಂಬ ಬಾನುಲಿಯ ನಾಟಕ ಎರಡನೇ ವಿವಾಹವಾದ ಸ್ತ್ರೀಯ ಮಾನಸಿಕ ತುಮುಲವನ್ನು ಪರಿಚಯ ಮಾಡಿಕೊಡುತ್ತದೆ. ಸಂತಾನದ ಅಭಿಲಾಷೆಯಿಂದಲೋ ಮನೆತನದ ಹಿರಿಯರ ಆಕಾಂಕ್ಷೆಯಿಂದಲೋ ಗಂಡಿಗೆ ಇರಬಹುದಾದ ವಿವಾಹದ' ಸೌಲಭ್ಯಗಳು ಹೆಣ್ಣಿಗೆ ದೊರೆಯದು ವಿಧವಾ ವಿವಾಹದಲ್ಲಿ ಎರಡನೇ ಪತ್ನಿಯಾಗಬಹುದಾದ ಸನ್ನಿವೇಶದಲ್ಲಿ ಹೆಣ್ಣಿನ ಮನೋಭಾವ ಮುಂತಾದ ವಿಚಾರಗಳನ್ನು ಪಾಶ್ಚಿಮಾತ್ಯ ಪೌರ್ವಾತ್ಯಗಳ ಸಂಪ್ರದಾಯ ಭೇದಗಳ ಸಂಕ್ರಮಣ ಸ್ಥಿತಿಯನ್ನು ನಾಟಕ ವಿವರಿಸುತ್ತದೆ. ಸ್ವಪ್ನ ಸದೃಶವಾದ ಜೀವನದ 'ಸ್ವಪ್ನ ಸ್ವಜಕತೆ'ಯ (dream & reality) ಆಳವನ್ನು ಬಹಳ ಅರ್ಥವತ್ತಾಗಿ ನಿರೂಪಿಸುತ್ತದೆ. ಸಂಪ್ರದಾಯವಾದಿಗಳಿಂದ ಭಾರತೀಯ ಹೆಣ್ಣಿಗೆ ಉಂಟಾಗಿರುವ 'ಅನ್ಯಾಯದ ಜ್ವಾಲಾಮುಖಿ'ಯ ಹಲವು ಕಾವುಗಳನ್ನು ಈ ರೇಡಿಯೋ ನಾಟಕದಲ್ಲಿ ಕಾಣಬಹುದುದಾಗಿದೆ. ನಾಯಿಯ ಬಗಳುವಿಕೆ, ಇಲಿಯ ಓಡಾಟದ ಸರ-ಸರಶಬ್ದ, ಹೆಣ್ಣು-ಗಂಡಿನ ಅನಿಸಿಕೆಗಳಲ್ಲಿನ ಹಲವು ವಿಧದ 'ನಗು', ವಿಚಾರ ಬದಲಾವಣೆಯಾಗುವಾಗ ಬಳಸುವ ವೀಣಾನಾದ ಇವು ಮಾನಸಿಕ ಸಂವೇದನೆಯ ತುಡಿತಗಳನ್ನು ಪರಿಚಯ ಮಾಡಿಕೊಡುತ್ತವೆ. ಮನೋವಿಶ್ಲೇಷಣಾತ್ಮಕ ನಾಟಕಗಳನ್ನು ಎಂ. ವಿ. ಸೀ. ಕಲಾತ್ಮಕವಾಗಿ ಸರಳವಾಗಿ ಹೃದಯಸ್ಪರ್ಶಿಯಾಗಿ ರಚಿಸಬಲ್ಲರು ಎಂಬುದಕ್ಕೆ ಈ ನಾಟಕ ಸಾಕ್ಷಿಯಾಗಿದೆ.

"ಮುರಿದ ಜೋಲ್ಟು" ಎಂಬ ನಾಟಕ 'ಮುರಿದ ಅಗಗೆ' ಎಂಬ ಅವರ ಕಥೆಯನ್ನು ಅವರೇ ರೇಡಿಯೋ ತಂತ್ರಕ್ಕೆ ಅಳವಡಿಸಿರುವ ರೂಪಕ. ಬೆಂಗಳೂರಿನಲ್ಲಿ

1947ರಲ್ಲಿ ನಡೆದ ಕೋಮುವಾರು ಘಟನೆಯನ್ನು ಮೂಲವಸ್ತುವನ್ನಾಗಿ ಹೊಂದಿದೆ. ಜಾತೀಯತೆಯ ದ್ವೇಷ ರಾಜಕೀಯವು ಉಂಟುಮಾಡಬಹುದಾದ ಕೋಲಾಹಲ, ಅಶಾಂತಿ ಮತ್ತು ಹೆಣ್ಣಿನ ಬಗ್ಗೆ ಇರಬಹುದಾದ ಕಾಮಾತುರತೆಗಳನ್ನು ಪರಿಚಯಿಸುತ್ತದೆ. ಸಂಯಮದ ವಿಶಾಲ ಮನೋಭಾವದ ಅಗತ್ಯತೆಯನ್ನು ಒತ್ತಿ ಹೇಳುತ್ತದೆ. ಕಟ-ಕಟ ಬೋಲ್ಟು ಮುರಿವ ಶಬ್ದದಿಂದ ಆರಂಭವಾಗುವ ನಾಟಕ ಪ್ರತಿವ್ಯಕ್ತಿಯೂ ಸಿಡಾಕಿಗೊಳ್ಳುವ ರೀತಿ, ಜೇಡಿಂಗೇನ ಬಳಕೆ, ಗೊರಕೆಯ ಸದ್ದು, ಇವು ವಿಷಯದ ವಿಶೇಷ "ಧ್ವನಿ"ಯನ್ನು ಅದರಲ್ಲೂ "ಶೀಲ"ದ ಬಗ್ಗೆ ಹೊಸ ಆಯಾಮವನ್ನು ಸೃಷ್ಟಿಸುತ್ತದೆ. ಈ ನಾಟಕದ ನಾಯಕ ಅನಂತಯ್ಯ ದಾವೂದು ಬಾನುಬೇಗಂ ಎಲ್ಲಾ ಕಾಲದ "ರತಿಯ" (*Sex*) ಸಂಕೇತವಾಗಿದ್ದಾರೆ. ಮತೀಯ ಗಲಭೆಗಳಿಗೆ ಮುಖ್ಯ ಕಾರಣ ವ್ಯಕ್ತಿ ವ್ಯಕ್ತಿಗಳಲ್ಲಿ ಕಂಡುಬರುವ ಸ್ವಪ್ರತಿಷ್ಠೆ ಅವಿವೇಕ ಮತ್ತು ಹಿಂಸೆ: ಮಾನ ಅಪಮಾನ ಗೌರವ ಇತ್ಯಾದಿ. ಪ್ರತಿವ್ಯಕ್ತಿಗಳ ಮನಸ್ಸಿನ ಭಾವನೆಗಳನ್ನೂ ಸ್ಪಷ್ಟವಾಗಿ ಕ್ಷ-ಕಿರಣಗಳನ್ನು ಬಿಟ್ಟು ಎಂ. ವಿ. ಸೀ. ಅವರು ರೂಪಿಸುತ್ತಾರೆ. ಬೆಂಗಳೂರು ಇದ್ದ ಒಂದು ಕಾಲದ ಸಹಜ ಚಿತ್ರಣವನ್ನು ಇಲ್ಲಿ ಕಾಣಬಹುದು. ದಾವೂದನ ವಾಣಿ ಮಾನವೀಯತೆಯ ಅಂತರ್ವಾಣಿಯಾಗುತ್ತದೆ: "ಸ್ವಾಮೀ, ಹುಟ್ಟೋವಾಗ ನಾವೆಲ್ಲ ಯಾವ ಜಾತಿ ಅಂಗಿ ತೊಟ್ಟಿದ್ದೀವಿ?" ಎಂಬ ಪ್ರಶ್ನೆ ಸಾರ್ವಕಾಲಿಕವಾದ ಪ್ರಶ್ನೆಯಾಗಿ ಬಿಡುತ್ತದೆ.

"ಕರೀಮುದ್ದು-ಬಿಳೀಹಾವು": ಇಲ್ಲಿ ಒಂದು ತಪ್ಪು ತಿಳಿವಳಿಕೆ ಅನೇಕ ತಪ್ಪುಗಳ ಸರಪಳಿಯನ್ನು ಸೃಷ್ಟಿಸುತ್ತಾ ಮಾನವ ದೌರ್ಬಲ್ಯದ ಪರಿಚಯವನ್ನು ಮಾಡಿಕೊಡುತ್ತದೆ. ಅಲ್ಲಲ್ಲಿ ಲಘು ಹಾಸ್ಯ ಮಿಂಚುತ್ತದೆ. ವ್ಯಕ್ತಿಗಳ ಮಾತುಗಾರಿಕೆಯಿಂದಲೇ ನಾಟಕದ ಸ್ವಾರಸ್ಯ ತಿಳಿಯ ಬೇಕಾಗುತ್ತದೆ.

ಮಕ್ಕಳ ರೇಡಿಯೋ ನಾಟಕ "**ಕೈಕೋಲು**". ಮಕ್ಕಳಲ್ಲಿ ಕಂಡು ಬರುವ ಅನುಕಂಪ, ನಿಜ ಹೇಳುವ ಪ್ರವೃತ್ತಿ, ಕಾಮುದಹನದ ಸನ್ನಿವೇಶ-ಇವು ಇಲ್ಲಿ ಸಹಜವಾಗಿ ಚಿತ್ರಿತವಾಗಿವೆ. ಸತ್ಯ ದಯೆ ಪರೋಪಕಾರ ಬುದ್ಧಿ ಇವು ಮನುಷ್ಯನಿಗೆ ಆಧಾರವಾದ "**ಕೈಕೋಲು**". ಮಕ್ಕಳು ಬಾಳಿನ ಹಿರಿಯ ಗುಣಗಳಾದ ಅನುಕಂಪ ದಯೆ ಉದಾರಮನೋಭಾವಗಳನ್ನು ಬೆಳಸಿಕೊಳ್ಳಬೇಕು ಎಂಬ ಸತ್ಯವನ್ನು ನಿರೂಪಿಸುತ್ತದೆ.

ರೇಡಿಯೋ ರೂಪಕಗಳು (Features and musical features) ನಾಟಕಗಳಿಗಿಂತ ಸ್ವಲ್ಪ ಭಿನ್ನ ಅಷ್ಟೆ. ಸರಳ ಸಂಭಾಷಣೆಯ ಜೊತೆಗೆ, ಗಮಕ ಹಾಡುಗಾರಿಕೆ ನೃತ್ಯ ಮೊದಲಾದ ಸಾಹಿತ್ಯಕ ಪರಿಕರಗಳನ್ನು ಬಳಸಿ ರಂಜನೀಯ ವಾಗುವ ಒಂದು

ಪಾಕ. ಕಾಲ್ಪನಿಕತೆಯ ಜೊತೆ ಜೊತೆಯಾಗಿ ಚಾರಿತ್ರಿಕಾಂಶಗಳೂ ಆಧ್ಯಾತ್ಮಿಕ ನಂಬಿಕೆಗಳೂ ಸತ್ಯ ಸಂಶೋಧನೆ ಈ ಗುಣಗಳು ಪ್ರಕಟವಾಗುತ್ತವೆ.

"ಕನ್ನಡ ಸಾಹಿತ್ಯದಲ್ಲಿ ಮಾನವ ಭ್ರಾತೃತ್ವ ಕಲ್ಪನೆ" ಎಂಬ ರೂಪಕದಲ್ಲಿ ಸಮತೆಯ ಹಿರಿಮೆಯಿದೆ. ಕುಲದ ಬಗ್ಗೆ ತೋರುವ ಸಂಕುಚಿತ ಮನೋಭಾವ ಸರಿಯಲ್ಲ. ಮಾನವ ಕುಲಕ್ಕೆಲ್ಲಾ ಒಬ್ಬಳೇ ತಾಯಿ ಪ್ರಕೃತಿಮಾತೆ: ಒಬ್ಬನೇ ತಂದೆ ಪರಮಾತ್ಮ, ಜಗದೀಶ್ವರ: ದೇವನೊಬ್ಬ ನಾಮ ಹಲವು, ಸರ್ವ ಧರ್ಮಗಳೂ ಸಮಾನ. "ಜಾತಿ ಮತಗಳ ಹೊದಿಕೆಯನು ತೆಗೆದು ಹರಿದು, ಕುಲಗೋತ್ರವೆಂಬ ಹುಸಿ ಹೆಸರ ಕಿತ್ತೊಗೆದು ಬಾಳು ಧರ್ಮದಲಿ" ಎಂಬ ಕವಿವಾಣಿ ಮೊಳಗಿದೆ. ಅನ್ನವನು ಇಕ್ಕುವನು ಉನ್ನತಿಯ ಪಡೆಯುವನು, ಕಾಯಕವೇ ಕೈಲಾಸ, ಕೊಟ್ಟು ಬದುಕು ಎಂಬ ಸರ್ವೋದಯ ತತ್ವ; ಅಸಮದಲಿ ಸಮತೆಯನು, ವಿಷಮದಲಿ ಮೈತ್ರಿಯನು, ಅಸಮಂಜಸದಿ ಸಮನ್ವಯ ಸೂತ್ರನಯವ, ವ್ಯಸನಮಯ ಸಂಸಾರದಲಿ ವಿನೋದದ ಕಾಣ್ಬರಸಿಕತೆಯೆ ಯೋಗವೆಲೋ-ಮಂಕುತಿಮ್ಮ – ಈ ವಿಷಯವನ್ನು ಶಾಸನಾಧಾರಗಳಿಂದ ಸಂಶೋಧನಾ ಮನೋಭಾವದಿಂದ ಪರಿಚಯ ಮಾಡಿಕೊಡುತ್ತದೆ.

"ಜನ್ನನ ಯಶೋಧರ ಚರಿತೆ" ಕಾವ್ಯರೂಪಕವಾಗಿ ಮಾರಿದತ್ತನು ಪರಿವರ್ತನೆ ಹೊಂದಿದ ಸನ್ನಿವೇಶವನ್ನು ಚಿತ್ರಿಸುತ್ತದೆ. ಭವಾವಳಿಯನ್ನು ಬಿಟ್ಟು ಹಿಂದಿನ ನೆನಪನ್ನು ರೂಪಿಸುವ ತಂತ್ರವನ್ನು (Flash back-Technique) ಬಳಸಿಕೊಂಡು ಕವಿಕಾವ್ಯ ಪರಿಚಯ, ಜೀವನ ದರ್ಶನ. ವಸಂತದ ವರ್ಣನೆ, ಮಾರಿಗುಡಿಯಲ್ಲಿ ಮಾರಿದತ್ತ, ಕಾಮನ ಚೆಲ್ಲಾಟ, ಪ್ರೇಮದ ಸಲ್ಲಾಪ ಈ ಸನ್ನಿವೇಶಗಳನ್ನು ಕವಿಯ ಪದ್ಯಗಳ ಆಧಾರದಿಂದ ಸರಳ ಸಂಭಾಷಣೆಯಿಂದ ಮನೋಜ್ಞವಾಗಿ ಚಿತ್ರಿಸುತ್ತದೆ.

"ಮೋಹನ ಮುರಳಿ" – ಕೃಷ್ಣ ಜನ್ಮಾಷ್ಟಮಿಯ ಹಿರಿಮೆಯನ್ನೂ ರಾಧಾ ಮಾಧವ ವಿಲಾಸವನ್ನೂ ಸ್ವಪ್ನರೂಪದಲ್ಲಿ ನವದಂಪತಿಗಳು ಕಾಣುವ ಕಾರ್ಯದಲ್ಲಿ ವಿವರಿಸಲಾಗಿದೆ. ಪಿಳ್ಳಂಗೋವಿಯ ನಾದ, ಗೋಪಿಯರ ವಿರಹದ ಗೀತೆ, 'ಕೊಳಲ ನೂದುವನಾರೇ! ಗೆಳತಿ! ಬೇಗ ಬಾರೇ ಅವನ ತೋರೆ' 'ವೇಣುನಾದವ ಮಾಡಿದ ಗೋಪಾಲಕೃಷ್ಣ', 'ನನ್ನನು ನಿನ್ನಯ ಕೊಳಲನು ಮಾಡು': ಇವು ರೂಪಕದ ಸೊಗಸನ್ನು ಹೆಚ್ಚಿಸುತ್ತವೆ. ಕಾಲಮಿತಿಯನ್ನು ಗಮನದಲ್ಲಿಟ್ಟುಕೊಂಡು ಸರಳವಾಗಿ 'ಕೃಷ್ಣಲೀಲೆ'ಯ ಭಕ್ತಿಪ್ರೇಮಗಳ ಪರಿಚಯವನ್ನು ಎಂ.ವಿ.ಸೀ. ಮಾಡಿಕೊಡುತ್ತಾರೆ. ದಾಂಪತ್ಯದ ತರುಣದಲ್ಲಿ ಕಾಣುವ ಆಕರ್ಷಣೆಯ 'ಕಾಮ' 'ಪ್ರೇಮ'ವಾಗಬೇಕು. ಸತಿ-ಪತಿಗಳ ಮಧುರ ಬಂಧುರತೆ 'ನೆಮ್ಮದಿಯ ಬಾಳಾಗಬೇಕು' ಎಂದು ಆಶಿಸುತ್ತಾರೆ.

“ದಂಡಿಗೆ ಬೆತ್ತ ಹಿಡಿಸಿದಳಯ್ಯ” ಪುರಂದರ ದಾಸರ ಜೀವನವನ್ನು ಪರಿಚಯ ಮಾಡಿಕೊಡುವ ಸಂಗೀತ ರೂಪಕ. ‘ಅಂಜಿಕಿನ್ಯಾತಕಯ್ಯಾ’, ‘ಪುಲಿಗೆ ಪಾಡಿದರೆ ಕುಳಿತು ಕೇಳುವನು’, ‘ಕೇಳನೋ ಹರಿ ತಾಳನೋ’, ‘ಆದದ್ದೆಲ್ಲಾ ಒಳಿತೇ ಆಯಿತು’, ‘ಗುರುವಿನ ಗುಲಾಮನಾಗುವ ತನಕ’, ‘ತಾಳಬೇಕು ತಕ್ಕಮೇಳ ಬೇಕು’, ‘ಇಂದಿನ ದಿನವೇ ಶುಭದಿನವು’ – ಮುಂತಾದ ಕೆಲವು ಆಯ್ದ ಕೀರ್ತನೆಗಳನ್ನು ಆಧರಿಸಿ ರಚಿಸಲಾಗಿದೆ. ಉದರ ವೈರಾಗ್ಯದ ಖಂಡನೆ, ಹೊರಗಿನ ಮಡಿಭಾವನೆಯ ಖಂಡನೆ, ಅಂತರಂಗದ ಮಡಿ, ಹೊಲೆಯನು ಯಾರು?, ಮಾನವ ಜನ್ಮದ ಹಿರಿಮೆ ಎಂತಹುದು – ಎಂಬ ವಿಚಾರಗಳು ಇಲ್ಲಿವೆ. ಪುರಂದರ ದಾಸರು ‘ಬೀದಿಯ ದಾಸರಲ್ಲ ಬೋಧೆಯ ದಾಸರು’. ಹರಿಭಕ್ತಿಯ ಪ್ರಚಾರ, ನೀತಿ ಬೋಧೆಯ ಮೂಲಕ ಸಮಾಜ ಸುಧಾರಣೆ ನಡೆಸಿದ್ದು, ಸಂಗೀತ ಪ್ರಪಂಚಕ್ಕೆ ದಾಸರ ಕಾಣಿಕೆ – ಇವು ಪ್ರಸ್ತಾಪವಾದ ವಿಚಾರಗಳು. ಶಾಸನಾಧಾರದಿಂದ ‘ಪುರಂದರಗಡ’, ಶಿವಮೊಗ್ಗ ಜಿಲ್ಲೆಯ “ಪುರಂದರ ಪುರ” ಎಂಬ ಅಂಶವೂ ನಾರದರ ಅವತಾರ ‘ಪುರಂದರರು’ ಎಂಬ ನಂಬಿಕೆಯನ್ನು ಪ್ರತಿಪಾದಿಸುವ ರೀತಿ ಬಹಳ ಜಾಣ್ಮೆಯಿಂದ ಕೂಡಿದುದಾಗಿದೆ.

“ಯುಗವಾಣಿ” ಎಂಬ ಗೇಯ ರೂಪಕ “ಯುಗ” ಎಂಬ ಪದದ ಅರ್ಥ, ಮಾನವ ವಿಕಾಸದ ಹಂತಗಳು, ಮಾನವ ಧರ್ಮ, ಎಲ್ಲ ಧರ್ಮಗಳಿಗೂ ಭಾರತ ಆಶ್ರಯ ಸ್ಥಾನ, ಸರ್ವಧರ್ಮ ಸಮಭಾವ, ಮಾನವ ಭ್ರಾತೃತ್ವ ಕಲ್ಪನೆ, ಕರ್ನಾಟಕದ ರಾಜರ ವಿಶಾಲ ಮನೋಭಾವ, ಆದರ್ಶ ಮಾನವ ಹೇಗಿರಬೇಕು ಈ ವಿಚಾರಗಳನ್ನು ಕುರಿತದ್ದು. ಆದಿಕವಿ ಪಂಪನಿಂದ ಹಿಡಿದು ಕುವೆಂಪುರವರೆವಿಗೆ ಇರುವ ಪ್ರಸಿದ್ಧ ಕವನಗಳನ್ನು ಆಧರಿಸಿ ರಚಿಸಲಾಗಿದೆ. ಈ ರೂಪಕದಲ್ಲಿ ಬೌದ್ಧಿಕಾಂಶಗಳು ಕಾವ್ಯಾಂಶದಲ್ಲಿ ಬೆರೆತು ಹೊಸ ಆಯಾಮವೊಂದನ್ನು ಸೃಷ್ಟಿಸುತ್ತದೆ.

“ವಿಜಯದಶಮಿ” ರೂಪಕ ದಸರಾ ಹಬ್ಬದ ವೈಶಿಷ್ಟ್ಯವನ್ನೂ ದುರ್ಗಾದೇವಿಯ ಬಗ್ಗೆ ಇರುವ ಪೌರಾಣಿಕ ಕಲ್ಪನೆಗಳು. ಶ್ರೀರಾಮನಿಗೂ ವಿಜಯದಶಮಿಗೂ ಇರುವ ಸಂಬಂಧ. ಮಹಾಭಾರತದಲ್ಲಿ ‘ಶಮಿ’ಯ ಕಲ್ಪನೆ, ಮೈಸೂರರಸರ ಜಂಬೂಸವಾರಿ, ಅರಮನೆಯಲ್ಲಿ ನವರಾತ್ರಿಯ ಆಚರಣೆ, ಕನ್ನಡಿಗರ ನಾಡಹಬ್ಬ – ಈ ವಿಷಯಗಳ ಬಗ್ಗೆ ಬೆಳಕನ್ನು ಚೆಲ್ಲುತ್ತದೆ. “ನವರಾತ್ರಿ ವಿಜಯದಶಮಿ” ಭಾರತೀಯ ಸಂಸ್ಕೃತಿಯನ್ನು ಮೆರೆಯುವ ಹಿರಿಯ ಹಬ್ಬ. ದೈವೀ ಶಕ್ತಿ ಆಸುರೀ ಶಕ್ತಿಯನ್ನು ಮೆಟ್ಟಿ ವಿಜಯ ಪಡೆದಿದ್ದರ ನೆನಪು ಕೊಡುವ ಗುರುತು” ಎಂಬ ಅಂಶವನ್ನು ಸ್ಪಷ್ಟೀಕರಿಸುತ್ತದೆ.

ಆಕಾಶವಾಣಿಯ ಕಾರ್ಯಕ್ರಮಗಳಲ್ಲಿ ‘ಗ್ರಾಮಸ್ಥರಿಗಾಗಿ’ ಎಂಬ ಕಾರ್ಯಕ್ರಮ ಬಹಳ ಸರಳವಾದ ಸಂಭಾಷಣೆಯಿಂದ ಕೂಡಿದ ಕಾರ್ಯಕ್ರಮ. ಪ್ರಶ್ನೋತ್ತರ

ಮಾಲಿಕೆ ಈ ಕಾರ್ಯಕ್ರಮದಲ್ಲಿ ಅನುಸರಿಸುವ ತಂತ್ರ. ಮಹಾಶಿವರಾತ್ರಿಯ ಹಿರಿಮೆಯನ್ನು ಪರಿಚಯ ಮಾಡಿಕೊಡುವ 'ಮಹಾಶಿವರಾತ್ರಿ' ಷಡಕ್ಷರ ದೇವನ ಮಂಗಳ ಶ್ಲೋಕದಿಂದ ಆರಂಭವಾಗಿ ನಮ್ಮ ಕನ್ನಡನಾಡು ಎಲ್ಲ ಮತ-ಪಂಥಗಳ ಕೂಡಲ ಸಂಗಮ ಎಂಬ ಅಂಶವನ್ನೂ "ನಾನು ಮಾಡುವ ಕೆಲಸವೆಲ್ಲ ನಿನ್ನ ಆರಾಧನೆ ಶಂಭು" ಎಂಬ ವಿಚಾರವನ್ನು ಸ್ವಾರಸ್ಯಕರವಾಗಿ ತಿಳಿಸುತ್ತದೆ. ಸಂಭಾಷಣೆಯಲ್ಲಿ ನಾಟಕೀಯತೆ ಮತ್ತು ಗಮಕದ ಬಳಕೆ ಬಂದಿರುವುದರಿಂದ ಇದೊಂದು ರೂಪಕದ ಪ್ರಭಾವವನ್ನೇ ಆತ್ಮೀಯತೆಯಲ್ಲಿ ಉಂಟು ಮಾಡುತ್ತದೆ.

"ಕಾರ್ತಿಕೇಯ" ಎನ್ನುವ ಸಂಭಾಷಣೆ ಕಾರ್ತಿಕಮಾಸ ಕಾರ್ತಿಕೇಯನ ಸಂಬಂಧ ತಾರಕಾಸುರನ ಕಥೆ ದಕ್ಷ ಬ್ರಹ್ಮನ ಕಥೆ, ಅರುಂಧತಿಯ ಕತೆ. ಈ ವಿಷಯಗಳನ್ನೊಳಗೊಂಡ ಕಥಾ ಗುಚ್ಛ. ಸಂಭಾಷಣೆಯ ಮಧ್ಯೆ ಕತೆಯನ್ನು ತರುವಲ್ಲಿ ನಾಟಕದಂತೆ ನಿರೂಪಿಸುವ ವಿಧಾನ ಕಾರ್ಯಕ್ರಮದ ಸೊಗಸನ್ನು ಹೆಚ್ಚಿಸುತ್ತದೆ. ಪೌರಾಣಿಕ ಸತ್ಯಕ್ಕೂ ಜೀವನ ಸತ್ಯಕ್ಕೂ ಇರುವ "ಸ್ಪಷ್ಟ ಸದೃಢವಾದ ಸಂಪರ್ಕಗಳ ಬಗ್ಗೆ" ಲೇಖಕರು ನಡೆಸುವ ಜಿಜ್ಞಾಸೆ ಸರಳವಾಗಿ ಸ್ವಾಭಾವಿಕವಾಗಿ ಅರ್ಥವಾಗುವಂತೆ ನಿರೂಪಿತವಾಗಿದೆ.

"ಸತ್ಯವೇ ದೇವರು" ಎಂಬ ಸಂಭಾಷಣೆ "ಸತ್ಯಮೇವ ಜಯತೇ ನಾನೃತಂ" ಎಂಬ ಅಂಶದ ಬಗ್ಗೆ ಒತ್ತುಕೊಡುತ್ತದೆ. ಉಪನಿಷತ್ತು ರಾಮಾಯಣ ಕರ್ಣ ಹರಿಶ್ಚಂದ್ರ ಗೋವಿನ ಕತೆ, ಸರ್ವಜ್ಞನ ಪದಗಳನ್ನು ಆಧರಿಸಿ ರಚಿಸಲಾಗಿದೆ. ಸತ್ಯವಂತನೇ ದೇವರು ಸತ್ಯವೇ ದೇವರು ಅಂದಮೇಲೆ. ಸತ್ಯವಂತ ಯಾಕೆ ದೇವರಾಗಬಾರದು?" ಎಂದು ನಡೆಸುವ ಚರ್ಚೆ ಗಾಂಧೀಜಯಂತಿಯ ಮಹತ್ವವನ್ನೂ ತಿಳಿಸುತ್ತದೆ. 'ಸತ್ಯ'ದ ಸೂಕ್ಷ್ಮತೆ ಹರಹು ಜೀವನದಲ್ಲಿ ಅದರ ಸ್ಥಾನ ಹಿರಿಮೆ ಇವುಗಳ ಪರಿಚಯವನ್ನು ಮಾಡಿಕೊಡುತ್ತದೆ.

"ಸಂಭಾಷಣೆ" ಎಂದು ಕರೆಸಿಕೊಂಡರೂ ಕಥನ ಕಲೆ ನಾಟಕೀಯಾಂಶ ಸಾಧ್ಯವಿದ್ದಷ್ಟು ಗಮಕ ಮತ್ತು ಹಾಡಿನ ಬಳಕೆಯಿಂದ ಬಹಳ ಜಟಿಲವಾದ ಅಂಶಗಳನ್ನೂ ಎಂ. ವಿ. ಸೀ. ಆತ್ಮೀಯ ಮನೋಭಾವದಿಂದ ರಚಿಸುತ್ತಾರೆ. ಕ್ಲಿಷ್ಟ ವಿಚಾರಗಳೂ ಸರಳವಾಗಿ ಹಾಸ್ಯರಸದ ಲೇಪನದಲ್ಲಿ 'ಆತ್ಮೀಯತೆ'ಯನ್ನು ಸಾಧಿಸುತ್ತದೆ.

ಆಕಾಶವಾಣಿಗಾಗಿಯೇ ಬರೆದ ಒಂದು ಲೇಖನ "ಜೀರ್ಣೋದ್ಧಾರ". ಇದು ಸಣ್ಣ ಕತೆ. ಹೆಗ್ಗೆರೆ ಗ್ರಾಮದಲ್ಲಿ ನಡೆದ ಘಟನೆಯನ್ನು ನಿರೂಪಿಸುತ್ತದೆ. ಹರಿಜನ ಸಮಸ್ಯೆಯನ್ನು ಬಿಡಿಸುವರೀತಿ, ಇಲ್ಲಿಯ ವಸ್ತು. ಅನ್ಯಾಯಾರ್ಜಿತ ವಿತ್ತ ಅಪವಿತ್ರ: ದೇವರಿಗೆ ಸಲ್ಲದು,' 'ಹರಿ ಒಲಿದ ಜನ ಹರಿಜನ' ಎಂಬ ವಿಚಾರಗಳಿಗೆ ಇಲ್ಲಿ ಹೆಚ್ಚು ಒತ್ತು ಕೊಡಲಾಗಿದೆ. ಗ್ರಾಮ್ಯ ಜೀವನದ ಆಸೆ ಆಕಾಂಕ್ಷೆ ದ್ವೇಷ ಸ್ವಾರ್ಥ, ಪ್ರೀತಿ

ಯತೆ ಸ್ವಾರ್ಥಕ್ಕಾಗಿ ದೇವರನೆನಪು ಈ ಮಾನವನ ದೌರ್ಬಲ್ಯಗಳ ಪರಿಚಯವನ್ನು ಮಾಡಿಕೊಡುತ್ತದೆ.

"ಜೇಂಗೊಡ" ಎಂಬ ಕಾರ್ಯಕ್ರಮ ಆಕಾಶವಾಣಿಯಲ್ಲಿ ಪುಸ್ತಕ, ಕವನಗಳ ಪರಿಚಯವನ್ನು ಮಾಡಿಕೊಡುವ ಒಂದು ಕಾರ್ಯಕ್ರಮ. 'ಬೆಟ್ಟದಿಂದ ಬಟ್ಟಲಿಗೆ,' 'ಹುಲಿಯ ಹಾಲಿನ ಮೇವು', 'ದ್ವಾಸುಪರ್ಣಾ' ಎಂಬ ಗ್ರಂಥಗಳನ್ನೂ, ಶ್ರೀನಿವಾಸರ 'ತೆಂಗಾಳಿ' ಮುಂತಾದುವನ್ನು ಎಂ. ವಿ. ಸೀ. ಪರಿಚಯ ಮಾಡಿ ಕೊಟ್ಟಿರುತ್ತಾರೆ. ಪುಸ್ತಕಗಳ ಕಿರು ಪರಿಚಯ ವಿಮರ್ಶೆ ಮತ್ತು ಹಿತ-ಮಿತವಾದ ಸ್ವಾರಸ್ಯಗಳನ್ನು ತಿಳಿಯಾದ ಭಾಷೆಯಲ್ಲಿ ಹೇಳುವ ಕಾರ್ಯಕ್ರಮ ಇದು. ರಚನೆಯ ಹೃದಯಸ್ಥಾನವನ್ನು ಹಿಡಿದು ಕೃತಿಯ ಸಾರವನ್ನು ಸಾರವತ್ತಾಗಿ ಸಂಗ್ರಹಿಸುವ ಸಹೃದಯ ಮನೋಭಾವವನ್ನು ಇಲ್ಲಿ ಕಾಣಬಹುದು.

ಆಕಾಶವಾಣಿಯ ಕಾರ್ಯಕ್ರಮದಲ್ಲಿ, ದಿನದ ಆರಂಭದಲ್ಲಿ ಸುಪ್ರಭಾತವಾದೊಡನೆ ಕೇಳಿಬರುವ 'ವಾಣಿ ಚಿಂತನ'. ಕನ್ನಡ ನಾಡಿನ ಸುಪ್ರಸಿದ್ಧ ಕವಿಗಳೂ ಚಿಂತನಕಾರರೂ ದಾರ್ಶನಿಕರೂ ತಮ್ಮ ಅನಿಸಿಕೆಗಳನ್ನು ಇಲ್ಲಿ ತಿಳಿಸುವರು. ಶ್ರೀಸಾಮಾನ್ಯನ ದೃಷ್ಟಿಯಲ್ಲಿ ಈ ಚಿಂತನ, ಜೀವನಕ್ಕೆ ಸ್ಫೂರ್ತಿಕೊಡುವಂತಹುದು; ಚೇತನ ತರುವಂತಹುದು. ಶ್ರೀ ಎಂ. ವಿ. ಸೀ. ಇಂತಹ ಕಾರ್ಯಕ್ರಮಕ್ಕೆ ಬರೆದು ವಾಚಿಸಿದ ಕೆಲವು ಚಿಂತನಗಳಲ್ಲಿ ಅವರ ಕಾಣ್ಕೆಯನ್ನು ಪರಿಚಯಮಾಡಿಕೊಳ್ಳೋಣ:

೧

"ಯೋಗಃ ಕರ್ಮಸು ಕೌಶಲಂ" ಎಂಬುದು ಭಗವದ್ಗೀತೆಯ ಮಾತು. ಕಸುಬಿನಲ್ಲೂ ಕರ್ಮದಲ್ಲೂ ಕರ್ತವ್ಯಪಾಲನೆ ಮಾಡದೆ ಮೋಸ ಮಾಡಲು ಅವಕಾಶವಿದೆ; ಮೋಸ ಮಾಡುವವರು ದಂಡಿಯಾಗಿದ್ದಾರೆ. ಮನಸ್ಸಿನ ಸಮಸ್ಥಿತಿಯನ್ನು ಬೆಳೆಸಿಕೊಳ್ಳಬೇಕು. ಆದರೆ ಜನಜೀವನದ ಕರ್ಮಮಾತ್ರ "ಎಲ್ಲಾರೂ ಮಾಡುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ" ಅದು ತಪ್ಪಿ "ಸಮತ್ವಂ ಯೋಗಮುಚ್ಯತೇ" ಆಗಬೇಕು; ಇಂತಹ ಜೀವನವನ್ನೇ "ಅನಾಸಕ್ತಿಯೋಗ" ಎಂದು ಗಾಂಧಿ ಕರೆದದ್ದು. ಶ್ರೀಕೃಷ್ಣ ಬಾಳಿ ಬದುಕಿ ತೋರಿಸಿದ್ದು. ಇದೇ ಬದುಕುವ ತಾನೂ ಬಾಳಿ ಇತರರನ್ನೂ ಬಾಳಿಸುವ ಮಾರ್ಗ.

೨

'ಭಾಷೆ' ಒಡೆಯುವ ಆಯುಧವಾಗಬಾರದು; ಒಂದುಗೂಡಿಸುವ ರೇಷಿಮೆಯ ಎಳೆ ಆಗಬೇಕು. ಉಚ್ಚಾರಣೆಯ ಭೇದದಿಂದ ಬೇರೆ ಬೇರೆ ಲಕ್ಷಣಗಳನ್ನು 'ಭಾಷೆ' ಪಡೆಯುತ್ತದೆ.

೩

ಜಾತಿಗಳಿಂದ ತೊಂದರೆ ಇಲ್ಲ; ಜಾತೀಯ ಭಾವನೆಯಿಂದ ತೊಂದರೆ. ಭಾರತದ ಪ್ರಪಂಚದ ಜಾತಿ: "ಉಳ್ಳವರ ಜಾತಿ, ಇಲ್ಲದವರ ಜಾತಿ." ಉಳ್ಳವರು ಇಲ್ಲದವರಿಗೆ ಕೊಡೋಣ. ಕೊಟ್ಟು ಬದುಕೋಣ.

೪

ಮನುಷ್ಯ ಸ್ವಭಾವದಲ್ಲಿಯೇ ಬದಲಾವಣೆಯಾಗಬೇಕು. ಅಲ್ಪತೃಪ್ತಿ. ಸರಳ ಜೀವನ, ನ್ಯಾಯ ಮಾರ್ಗದಲ್ಲಿ ಸಂಪಾದನೆ ಈ ಜೀವನ ವಿಧಾನದಲ್ಲಿ ನಿಷ್ಠೆಯನ್ನೂ ಪ್ರೀತಿಯನ್ನೂ ಬೆಳೆಸಬೇಕು. ಜನತೆಯ ಸ್ವಭಾವ ಎಲ್ಲ ಕಾಲದಲ್ಲೂ ಒಂದೇ. ಲಂಚ, ಜನರ ವಿಕಾರ ಮನೋಭಾವಕ್ಕೆ ಹಿಡಿದ ಕನ್ನಡಿ. ಸಾಹಿತ್ಯ ಜನ ಜೀವನದ ಕನ್ನಡಿ. "ಸ್ವ್ರದಿಲಿಯು, ಶಿವನಲ್ಲಿಗೆ ಐಯ್ದುಲ್ಪ ಬಗೆದಡೆ: ಒಯ್ದೊಡೆ ಪಸಂ ಲಂಚವೀವೆ" ಎಂದು ಸಾತ್ವಿಕ ಲಂಚವನ್ನು ವಿಡಂಬನಾತ್ಮಕವಾಗಿ. ಹರಿಹರ ಕೇಳಿದರೆ: ಕರಗುಪಿತ ಲೋಲುಪರು, ಲಂಚದ ಹಣವು ಜೀವನಜ್ಞಾಣರು ಎಂದು ಕುಮಾರವ್ಯಾಸ ತನ್ನ ಕಾಲದ ಹಾಗೂ ಕೌರವನ ಆಸ್ಥಾನದ ಕರಣಿಕರನ್ನು ವರ್ಣಿಸುತ್ತಾನೆ. ಮಂತ್ರಿಯ ಮಹಾಗುಣಗಳಲ್ಲಿ ಒಂದು ಲಂಚಕ್ಕೆ ಕೈನೀಡದಂ ಎಂದಿದ್ದಾನೆ ಸೋಮೇಶ್ವರ ಇದೊಂದು ವಿಷವೃಕ್ಷ. ಇದರ ನಿರ್ಮೂಲನವಾದರೆ ಜೀವನ ಆಹ್ಲಾದದಾಯಿ.

ಈ ಕೆಲವು ಉಕ್ತಿಗಳು, ಎಂ. ವಿ. ಸೀ. ಅವರು ನಡೆಸಿದ ಆಕಾಶವಾಣಿ ಚಿಂತನ ಕಾರ್ಯಕ್ರಮದಿಂದ ಸಂಗ್ರಹಿಸಿದ್ದು. ಮಾನವ, ಧರ್ಮ, ಸ್ವತಂತ್ರ, ಸಮಾಜ, ಕರ್ತವ್ಯ, ದೇಶ, ರಾಷ್ಟ್ರ, ಪಾಪ, ಪುಣ್ಯ ಮುಂತಾದ ವಿಷಯಗಳ ಬಗ್ಗೆ ಸಾಮಾನ್ಯ ಜನಕ್ಕೆ ಅರ್ಥವಾಗುವಂತೆ ಸರಳವಾಗಿ ವಿವರವಾಗಿ ಚರ್ಚಿಸುತ್ತಾರೆ. ಇವರ ಚಿಂತನಗಳಲ್ಲಿ ಒಂದು ಲಯ ಸಿದ್ಧವಾಗಿದೆ. ತಿಂದು, ಉಂಡು, ಹೋಗುವ ‹ಕಷ್ಟದ ಹಾದಿ' ಗಳಾಗದೆ ‹ಮಾನವನ ಜನ್ಮ ದೊಡ್ಡದು, ಅದು ಸಾರ್ಥಕವಾಗಬೇಕು' ಎಂಬ ಭಾವ ವಾಣಿಯು ಹಾಸು ಹೊಕ್ಕಾಗಿ ಬಂದಿದೆ. ಭಗವದ್ಗೀತೆ, ಉಪನಿಷತ್ತಿನಿಂದ ಉದಾಹರಣೆಗಳೂ. ಇಂಗ್ಲಿಷ್ ಸ್ವಭಾವೋಕ್ತಿಗಳೂ ಚಿಂತನೆಯ ಲಯದ ಮಾಧುರ್ಯವನ್ನು ಇಮ್ಮಡಿಸುತ್ತದೆ.

ಎಂ. ವಿ. ಸೀ. ಅವರು, ಆಕಾಶವಾಣಿಯ ಭಾಷಣಗಳು "ಸಿದ್ಧ ಭಾಷಣ" (Prepared Speech) ಗಳಾದ ಕಾರಣ, ಸ್ವಲ್ಪ ಪ್ರೌಢವಾಗಿವೆ. ವಿಷಯನ್ನು ತಾರ್ಕಿಕವಾದ ಸಾಮರಸ್ಯತೆ ಕಂಡು ಬರುತ್ತದೆ. "ಹಸ್ತ ಪ್ರತಿಗಳ ಸಂಗ್ರಹಣ ಮತ್ತು ಸಂಸ್ಕರಣ" ಎಂಬ ಭಾಷಣದಲ್ಲಿ ಪ್ರಾಚ್ಯವಸ್ತುಗಳ ಹಿರಿಮೆಯನ್ನೂ ಅವನ್ನು ರಕ್ಷ

ಬೇಕಾದ ಅಗತ್ಯವನ್ನೂ ವಿವರಿಸಿದ್ದಾರೆ. ಭಾರತದಲ್ಲಿ ಪಾಶ್ಚಾತ್ಯರಾದ ರೈಸ್ ಮುಂತಾದವರು ಕೈಗೊಂಡ ಗ್ರಂಥಸಂಪಾದನಾ ಕಾರ್ಯದ ಪರಿಚಯವನ್ನು ಮಾಡಿ ಕೊಡುತ್ತಾ ಭಾರತೀಯರಲ್ಲಿ ಬೆಳೆದು ಬಂದಿರುವ 'ಆಲಸ್ಯ ಮನೋಭಾವದ' ಬಗ್ಗೆ ರೋಷಗೊಂಡು 'ಸಂಸ್ಕೃತಿಯ' ಹಿರಿಮೆ ಗರಿಮೆಗಳಿಗೆ ಉಂಟಾಗುವ ಧಕ್ಕೆಯನ್ನು ಖೇದದಿಂದ ವಿನಂತಿಸಿಕೊಳ್ಳುವರು. 'ಅನ್ಯಮತೀಯ ದ್ವೇಷ' ಉಂಟುಮಾಡುವ ದುರಂತಗಳನ್ನು ವಿವರಿಸಿ, ಅದನ್ನು ತಡೆಗಟ್ಟುವ ಮಾರ್ಗವನ್ನು ವಿವರಿಸುತ್ತಾರೆ.

"ಸಾಹಿತ್ಯದ ಮೌಲ್ಯಗಳು" ಎಂಬ ಭಾಷಣದಲ್ಲಿ, ಸಾಮಾನ್ಯ ಕೃತಿ ಮಹಾಕಾವ್ಯಗಳ ಅಂತರವನ್ನು ವಿವರಿಸುತ್ತಾ ಒಂದು ಕಾವ್ಯಕ್ಕೆ ಧಾರ್ಮಿಕ ಮೌಲ್ಯ. ತಾತ್ವಿಕ ಮೌಲ್ಯ. ವೈಚಾರಿಕ ಮೌಲ್ಯ, ಆಧ್ಯಾತ್ಮಿಕ ಮೌಲ್ಯ, ಪ್ರಸಾರ ಮೌಲ್ಯ, ಸಾಮಾಜಿಕ ಮೌಲ್ಯ ಇವು ಅಗತ್ಯವೆನ್ನುತ್ತಾರೆ. ಪಂಪ ಭಾರತ, ಆದಿ ಪುರಾಣ ಮುಂತಾದ ಗ್ರಂಥಗಳ ಆಧಾರದಿಂದ ಚರ್ಚಿಸುತ್ತಾರೆ. "ಮಾನವನಿಗೆ ಹಿತಕಾರಿಯಾದ ಅನೇಕ ಜೀವನದ ಮೌಲ್ಯಗಳು ಸಹಿತವಾಗಿರುವ ಬರಹವೇ 'ಸಾಹಿತ್ಯ' ಎಂಬ ಸತ್ಯವನು ಪೃಥಕ್ಕರಿಸುತ್ತಾರೆ.

"ಅಯೋಧ್ಯೆಯ ಅರಸು" ಎಂಬ ಶೀರ್ಷಿಕೆ ಉಳ್ಳ ಭಾಷಣವು ವಾಲ್ಮೀಕಿ ರಾಮಾಯಣದ ಅಯೋಧ್ಯಾಕಾಂಡವನ್ನು ಆಧರಿಸಿ ಬರೆದದ್ದು. ಅಯೋಧ್ಯೆಯ ಆಳ್ವಿಕೆಯ ವಿಷಯ. ದಶರಥನ ಕುಟುಂಬವನ್ನು ಒಡೆಯಿತು; ಕುಟುಂಬಕ್ಕೆ ಸೇರಿದವರ ನೈಜ ಸ್ವಭಾವಗಳನ್ನು ಹೊರಕ್ಕೆಳೆದು ಎತ್ತಿ ಕಾಣಿಸಿತು. ಅಷ್ಟೇ ಅಲ್ಲ. ಸಾರ್ವಕಾಲಿಕ ಮೌಲ್ಯಗಳನ್ನೂ ಪಡೆಯಿತು. ದಮ್ಮತೆಯ ಹಾದಿಯಾವುದು? 'ತಾತ್ವಿಕತೆ' ಎಂದರೇನು? ಸಾಮಾನ್ಯನು ಅಸಾಮಾನ್ಯನಾಗುವ ಬಗೆಯಾವುದು? ಎಂಬೆಲ್ಲ ವಿಚಾರಗಳನ್ನು ಬಹಳ ಮಾರ್ಮಿಕವಾಗಿ ಚಿತ್ರಿಸುತ್ತಾರೆ.

ಎಂ. ವಿ. ಸೀ. ಅವರ ಎಲ್ಲ ಬಾನುಲಿ ಬರಹಗಳನ್ನು ಇಲ್ಲಿ ಚರ್ಚಿಸಲಾಗಿಲ್ಲ. ಯಾವುದೇ ರಚನೆಯ ವಿಚಾರವಾಗಲಿ ಪಾತ್ರಗಳೇ ಆಗಲಿ ಚಿಂತನೆಯೇ ಆಗಲಿ ಅಲ್ಲಿ ಸ್ವಂತಿಕೆ ಎನ್ನುವುದು ಕಂಡುಬರುತ್ತದೆ. ಎಂ. ವಿ. ಸೀ. ಅವರ ಸಾಹಿತ್ಯ ಪ್ರಪಂಚ ಒಂದು ಭ್ರಮೆಯಲ್ಲ : ಅದೊಂದು ವೈವಿಧ್ಯಮಯವಾದ ಅನೇಕತೆಯಲ್ಲಿ ಏಕತೆಯನ್ನು ಕಾಣುವ ಕಾಣ್ಕೆ. ಯಾವುದೇ ವಿಷಯವನ್ನು ಆಯ್ದುಕೊಂಡರೂ ಆ ವಿಷಯದ ಬಗ್ಗೆ ನಡೆಸುವ ಸಂಶೋಧನೆ ಸತ್ಯವನ್ನು ಕಾಣುವ 'ರೀತಿ' ಆಹ್ಲಾದವನ್ನೂ, ಹೃದಯ ಪರಿವರ್ತನೆಯನ್ನೂ ಮನೋವಿಕಾಸವನ್ನೂ ಸಾಧಿಸಿ ಆಪ್ಯಾಯಮಾನವಾಗಿ ಓದುತ್ತದೆ. "ವಿಪರೀತ ಮತಿಯನುಳಿದು, ವಿಪುಲಾಶ್ರಯವನೀವ ಸುಫಲ, ಸುಮಭರಿತ ಪಾದಪದಂತೆ" ಅವರ ವ್ಯಕ್ತಿತ್ವ ಹೇಗಿದೆಯೋ ಹಾಗೆಯೇ ಅವರ ರಚನೆಗಳೂ "ಮೌನದಿಂದ ಬಿರಿದು, ತಮ್ಮ ಸಾರ ಸೌರಭವನ್ನು" ಪಸರಿಸುತ್ತವೆ.

ಎಂ.ವಿ.ಸೀ. ಅವರ ಸಂಪಾದಿತ ಸಂಚಿಕೆಗಳು

ಎಂ.ಜಿ. ನಾಗರಾಜ್

ಸ್ಮರಣ ಸಂಚಿಕೆಗಳ ಸಂಪಾದನೆ ಶಾಸ್ತ್ರೀಯ ಗ್ರಂಥ ಸಂಪಾದನೆಗಿಂತ ಭಿನ್ನವಾಗಿರುವುದು. ಅವುಗಳ ಉದ್ದೇಶಕ್ಕನುಗುಣವಾಗಿ ಇತಿಮಿತಿಗಳನ್ನು ಹೊಂದಿರುವುದುಂಟು. ಆಹ್ವಾನಿತ ಲೇಖನಗಳಾದ ಕಾರಣ ಗಾತ್ರ ಕುಗ್ಗಿಸುವಲ್ಲಿ ಟಿಪ್ಪಣಿ ಬರೆಯುವಲ್ಲಿ ಮಾಹಿತಿಗಳ ಕೊರತೆಗೆ ಪೋಷಕ ಮಾಹಿತಿಗಳನ್ನೊದಗಿಸುವಲ್ಲಿ ಸಂಪಾದಕರ ವ್ಯಕ್ತಿತ್ವ ನಿಕಷ ತೋರಿಸಿಕೊಳ್ಳಬೇಕಾಗುತ್ತದೆ. ಕೆಲವು ವೇಳೆ ಸಂಪಾದಕರ ಒಲವಿಗೇ ಹೆಚ್ಚು ತಾಗುವಂತಹ ವಿಷಯಗಳು ಲೇಖನದಲ್ಲಿ ದಟ್ಟವಾಗಿರುವ ಸಂದರ್ಭಗಳಲ್ಲಿ. ಮುಖ ಟಿಪ್ಪಣಿಯಲ್ಲಿ ಹೆಚ್ಚು ವಿಸ್ತಾರವಾಗಿ ಪ್ರಸ್ತಾಪಿಸುವ ಅಪಾಯವೂ ಉಂಟು. ಈ ಎಲ್ಲ ಸಂದರ್ಭಗಳಲ್ಲಿ "ನಿಸ್ಸಂಗತ್ವ"ದಿಂದ ನೋಡುವ ದೃಷ್ಟಿ, ಸಂಪಾದಕರಲ್ಲಿದ್ದಷ್ಟೂ ಸಂಚಿಕೆಯ ಮಹತ್ವ ಅರ್ಥ ಉತ್ಪನ್ನವಾಗಿ ಎದ್ದು ಬರುತ್ತದೆ. ಇಲ್ಲಿ ಪಾಠಾಂತರಗಳ ಸಮಸ್ಯೆ ಇಲ್ಲ. ಆದರೆ ವಿಷಯಾಂತರ ಸಮಸ್ಯೆ: ಪುಟಗಳ ಮಿತಿಮೀರಿ ಬಂದ ದೀರ್ಘ ಲೇಖನಗಳ ಸಮಸ್ಯೆ; ಸಕಾಲಕ್ಕೆ ಬರದ ಲೇಖನಗಳಿಂದಾಗಿ ಕೊರತೆ. ಇವನ್ನು ತುಂಬಲು ಸಂಪಾದಕರೇ ಬದ್ಧರಾಗಿ ಲೇಖನ ಬರೆಯಬೇಕಾದ ಸಂದರ್ಭಗಳುಂಟು.

ಲೇಖಕರ ಅಭಿಪ್ರಾಯಗಳಿಗೆ ಹೊಣೆಯಲ್ಲದಿದ್ದರೂ ಲೇಖನದ ಸತ್ವವನ್ನು ಎತ್ತಿ ತೋರುವ, ಅಕಸ್ಮಾತ್ ಲೇಖಕರು ಬಿಟ್ಟ ಮುಖ್ಯ ವಿಷಯವನ್ನು ಟಿಪ್ಪಣಿಯಲ್ಲಿ ಸೂಚಿಸುವ ಕಾರ್ಯ ಸಂಪಾದಕರ ಪಾಲಿನದೇ. ಲೇಖನಗಳಿಗೆ ಸಂಪಾದಕನ ಮುಖ ಟಿಪ್ಪಣಿಗಳು ಮುನ್ನುಡಿಯ ಅವತಾರಗಳೂ ಹೌದು: ಲಘು ವ್ಯಾಖ್ಯಾನಗಳೂ ಹೌದು: ಸಮಾಲೋಕನವೂ ಹೌದು.

ಓದುಗ ಅದರಿಂದ ಸ್ಫೂರ್ತಿ ಪಡೆದೋ ಪ್ರೇರಣೆ ಪಡೆದೋ ಲೇಖನವನ್ನು ಪ್ರೀತಿ ಓದುವಂತಾಗಬೇಕು. ಕೆಲವು ವೇಳೆ ಲೇಖನದ ಮುಖ್ಯ ಸಾಲುಗಳನ್ನೇ ಸಂಪಾದಕರು ಎತ್ತಿ ತೋರಿಸುವಾಗ ಓದುಗನ ಕುತೂಹಲ ಕೆರಳುತ್ತದೆ. ಆಸಕ್ತರ ತನ್ಮಯತೆ ವೃದ್ಧಿಯಾಗುತ್ತದೆ. ಈ ಕಾರಣ ಲೇಖನದಿಂದ ಆರಿಸುವ ಸಾಲುಗಳು ಸಂಪಾದಕನ ನಿಶಿತ ಮತಿಗೆ ಒಂದು ಸವಾಲು.

ಓದುಗರೂ ತಜ್ಞರಾದರೆ, ಲೇಖನದ ವಿಷಯಗಳ ಬಗ್ಗೆ ತೌಲನಿಕ ಸಮೀಕ್ಷೆಗೆ ತಯಾರಾಗುತ್ತಾರೆ. ಸೂಕ್ತವಿದ್ದರೆ ಸಂಗ್ರಹಯೋಗ್ಯ ಸಂಚಿಕೆ ಎಂದು ಜೋಪಾನ ಮಾಡುತ್ತಾರೆ. ಬರಹಗಾರರಾಗಿದ್ದರೆ ತಮ್ಮ ಲೇಖನಗಳಲ್ಲಿ ಸಾಂದರ್ಭಿಕವಾಗಿ ಉದ್ಧರಿಸುತ್ತಾರೆ. ಮುಂದಿನ ಪೀಳಿಗೆಗೆ ವಿಷಯ ವರ್ಗಾವಣೆಯ ವಾಹಕವಾಗುತ್ತಾರೆ. ಇಂತಹ ಕಾರ್ಯ ಸ್ಮರಣ ಸಂಚಿಕೆಯ ಸಂಪಾದಕನ ಹೊಣೆಗಾರಿಕೆಯಲ್ಲಿ ಎದ್ದು ಕಾಣಬೇಕು.

ಒಂದು ಗ್ರಂಥದ ಸಂಪಾದನ ಕಾರ್ಯ ಬೇರೆ: ಸಂಚಿಕೆಯ ಸಂಪಾದನ ಕಾರ್ಯ ಬೇರೆ. ಒಂದರಲ್ಲಿ ಲಭ್ಯ ಪ್ರತಿಗಳ ತೋಲನ; ವಿವಿಧ ಆಧಾರಗಳು ಹಾಗೂ ಊಹೆಗಳು ಸಂಪಾದಕನ ವ್ಯುತ್ಪತ್ತಿಯನ್ನು ಪಾಂಡಿತ್ಯವನ್ನು ಅವಲಂಬಿಸಿರುತ್ತದೆ. ಪತ್ರಿಕಾ ಸಂಪಾದನೆಯಾದರೋ ಒಂದು ರೀತಿಯ ಸರಳೀಕರಣ. ಆದರೆ ಇವೆರಡರ ನಡುವೆ ಸ್ಮರಣ ಸಂಚಿಕೆಯ ಪಾತ್ರ ಜನಪ್ರಿಯತೆಯನ್ನು ಕಾಯ್ದುಕೊಳ್ಳುವುದು, ಪಾಂಡಿತ್ಯವೂ ಮಸುಕಾಗದಂತೆ ನೋಡಿಕೊಳ್ಳುವುದು.

ಈ ಹಿನ್ನಲೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಸುವರ್ಣ ಮಹೋತ್ಸವ ಸವಿನೆನಪಿನ ಸಂಪುಟ (1015-1970) 'ಚಿನ್ನದ ಬೆಳಸು' ಹಾಗೂ ವಜ್ರಮಹೋತ್ಸವದ ಸ್ಮರಣ ಸಂಪುಟ(1915-75)'ಕೌಸ್ತುಭ' ಕನ್ನಡ ಆವೃತ್ತಿಗಳ ಸಂಪಾದನೆ ಕುರಿತಾಗಿ ಇಲ್ಲಿ ವಿವೇಚಿಸಿದೆ. ಈ ಸ್ಮರಣ ಸಂಪುಟಗಳ ಸಂಪಾದಕರಾಗಿ ಸಾಹಿತ್ಯಕ ಬಹುಶ್ರುತರೂ ಅವಧಾನಿಗಳೂ ಆದ ಶ್ರೀ ಎಂ. ವಿ. ಸೀತಾರಾಮಯ್ಯನವರ ಪಾತ್ರ ಸೂಕ್ತದಲ್ಲಿ ಬಹುಸೂಕ್ತ.

ವಿಶ್ಲೇಷಿಸಿ ಹೇಳುವುದಾದರೆ 'ಚಿನ್ನದ ಬೆಳಸು'ವಿನ ಕಾಂತಿಗಿಂತ 'ಕೌಸ್ತುಭ'ದ ಕಾಂತಿ ಪ್ರಖರ. ಸಂಪಾದಕರು ಬೆಳೆದ ಎತ್ತರವೂ ಶಿಖರ.

'ಚಿನ್ನದ ಬೆಳಸು'ವಿನಲ್ಲಿ ಲೇಖಕರ ಕಿರುವೃತ್ತವನ್ನು ಲೇಖನದ ಹೆಸರಿನಡಿಯಲ್ಲಿ ಕೊಟ್ಟಿರುವುದು ಕಣ್ಣಿಗೆ ಢಾಳವಾಗಿ ಕಾಣುತ್ತದೆ. 'ಕೌಸ್ತುಭ'ದಲ್ಲಿ ಆ ಬಗ್ಗೆ ಸರಳವಾಗಿದೆ. ಕೊನೆಯಲ್ಲಿ ಲೇಖಕರ ವಿಳಾಸಗಳಿವೆ. ಲೇಖನವೇ ಅವರ ಸಾಹಿತ್ಯಕ ಪರಿಚಯವನ್ನು ನೀಡುವ ಕಾರಣ ಕಿರು ಇತಿವೃತ್ತ ಕೈಬಿಟ್ಟದ್ದು ಸಮುಚಿತ.

'ಬೆಳಸು'ವಿನಲ್ಲಿ ಕರ್ಣಾಟಕ ಬೆಳೆದು ಬಂದದಾರಿ, ಅದರ ವಿವಿಧ ಅಂಗಗಳು ಕಂಡು ಬಂದರೆ, 'ಕೌಸ್ತುಭ'ದಲ್ಲಿ ವರ್ತಮಾನದ ವಿಷಯಗಳಿಗೆ ಒತ್ತು ಬಂದಿದೆ. ಕಲೆ, ವಿಮರ್ಶೆ, ಶಾಸ್ತ್ರ, ಸಂಶೋಧನೆಗಳ ಪ್ರತ್ಯೇಕ ಭಾಗಗಳು 'ಕೌಸ್ತುಭ'ದಲ್ಲಿ ಅರ್ಥವತ್ತಾಗಿ ಸಂಘಟನೆಯಾದರೆ, 'ಬೆಳಸು'ವಿನಲ್ಲಿ ಒಂದೊಂದೇ ಲೇಖನಗಳ ವ್ಯಾಪ್ತಿಯಲ್ಲಿ ಅಡ್ಡಾಡಿದಂತೆ ಕಾಣುತ್ತದೆ. ಹಾಕಿಕೊಂಡ ಗುರಿಯೂ ತುಸು ಕಾರಣವಾಗಿರಬೇಕು.

ಬೆಳಸುವಿನಲ್ಲಿ ಒಂದು ವೈಶಿಷ್ಟ್ಯವೆಂದರೆ ಲೇಖನಾನುಗುಣವಾಗಿ ಸಮ್ಮೇಳನಾಧ್ಯಕ್ಷರ ಭಾಷಣಗಳಿಂದ ಆಯ್ದ ಭಾಗಗಳನ್ನು ಲೇಖನ ಮುಗಿದುಳಿದ ಜಾಗದಲ್ಲಿ

ತುಂಬಿರುವುದು. 'ಚಿನ್ನದ ಬೆಳಸು'ವಿನಲ್ಲಿ ಕಥಾ ಸಾಹಿತ್ಯ ನಾಟಕ ಸಾಹಿತ್ಯ ಸಂಬಂಧದ ಲೇಖನಗಳಲ್ಲಿ ವರ್ತಮಾನದವರೆಗೆ ಪಡೆದುಕೊಂಡ ಬೆಳವಣಿಗೆಗಳ ವಿವರಗಳನ್ನು ಸಂಪಾದಕರು ಮುಖ ಟಿಪ್ಪಣಿಯಲ್ಲಿ ಎತ್ತಿಹೇಳಿರುವುದು ತನ್ಮಯವಾಗಿ ಓದಲು ನೆರವಾಗಿದೆ. ಪ್ರಬಂಧ, ಹರಟೆ, ವ್ಯಾಕರಣದ ಲೇಖನದಲ್ಲಿ ಹೊಸಪ್ರಜ್ಞೆಗಳ ಜಾಡನ್ನು ಓದುಗರು ಗಮನಿಸ ಬಹುದಾದರೂ ವಿಚಾರ ಪ್ರಧಾನವಾಗುತ್ತದೆ. ಪ್ರವಾಸ ಸಾಹಿತ್ಯ ಸರದಿಯಾಗುವುದೇ ಮಾಮೂಲು-ಎನ್ನುವುದಕ್ಕೆ ಅಪವಾದವಾಗಿರುವ ಸಿ.ಪಿ.ಕೆ., ಕಾರಂತರ ಕೃತಿಗಳನ್ನು ವಿಶ್ಲೇಷಿಸುವ ಲೇಖನವನ್ನೂ 'ಚಿನ್ನದ ಬೆಳಸು'ವಿನಲ್ಲಿ ಅಳವಡಿಸಿರುವುದು ಸಮುಚಿತ.

'ಬೆಳಸು'ವಿನಲ್ಲಿ ವಚನ ಸಾಹಿತ್ಯ ಪ್ರಕಾರದಲ್ಲಿ ನಡೆಯುತ್ತಿರುವ ಗಂಭೀರ ಕೃಷಿಯ ವಿವರದ ಲೇಖನ ಅಳವಡಿಸಲಾಗಿದೆ. ಕನ್ನಡ ಸಾಹಿತ್ಯಕ್ಕೆ 'ಮುಸಲ್ಮಾನರ ಕೊಡುಗೆ' ಎಂಬ ವಿಷಯ ಒಂದು ಅತೀ ಚಲಾವಣೆಯ ಸರಕಾಗಿದೆ ಎನ್ನುವುದು ಸಾಮಾನ್ಯ. ಆದರೆ ಆಧುನಿಕ ಪ್ರಯತ್ನಗಳಲ್ಲಿ ಗಣ್ಯಕೃತಿಯಾದ ಶ್ರೀಮತಿ ಜಯದೇವಿ ತಾಯಿ ಲಿಗಾಡೆಯವರ 'ಸಿದ್ಧರಾಮ ಪುರಾಣ' ಕುರಿತು ಸಂಪಾದಕರ ಟಿಪ್ಪಣಿ ನ್ಯಾಯವೆನ್ನಿಸಿದೆ.

ಧಾರ್ಮಿಕ ಸಾಹಿತ್ಯ ಕುರಿತ ಲೇಖನದಲ್ಲಿ ವಿಷಯ ಪ್ರತಿಪಾದನೆಯಿಂದ ದೂರವೆನಿಸಿ ಲಭ್ಯ ಪುಸ್ತಕ ಪಟ್ಟಿಯೇ ಹೆಚ್ಚು ಅವಕಾಶ ತೆಗೆದುಕೊಂಡಿದೆ. ಸಂಪಾದಕರು ಇದರ ಕೊರತೆ ಮರೆಯಾಗುವಂತೆ ಆಧ್ಯಾತ್ಮಿಕ ಸಾಹಿತ್ಯದ ನೆಲೆಯನ್ನು ಬಿಡಿಸಿರುವುದು ಒಂದು ಕೌಶಲದ ಮಾತು.

ಕನ್ನಡದಲ್ಲಿ 'ಗಾಂಧೀ ಸಾಹಿತ್ಯ' ಎಂಬ ಲೇಖನದಲ್ಲಿ ಎ.ಆರ್.ಕೃ. ಅವರ 'ಸರಳತೆಯೇ ಅಲಂಕಾರಗಳಲ್ಲೆಲ್ಲಾ ಶ್ರೇಷ್ಠ' ಎಂಬ ಮಾತು ಉದ್ಧರಣವಾಗಿದೆ. ಅದಕ್ಕೆ ಸಂಪಾದಕರು ಕಾವ್ಯಮೀಮಾಂಸೆಯ ಭಾಷೆಯಲ್ಲಿ ಇದನ್ನೇ 'ಸ್ವಭಾವೋಕ್ತಿ' ಎನ್ನುವರು ಎಂಬ ಟಿಪ್ಪಣಿ ಬರೆದಿದ್ದಾರೆ. ಇದಲ್ಲವೆ ಸಂಪಾದಕರ ಪ್ರವೃತ್ತಿ!

ಆಧುನಿಕ ಕನ್ನಡ ಸಾಹಿತ್ಯ ಮತ್ತು ರಾಷ್ಟ್ರೀಯತ್ವ ಲೇಖನವನ್ನು ರಾಷ್ಟ್ರೀಯ ಚಳುವಳಿಯಲ್ಲಿ ಸಕ್ರಿಯವಾಗಿ ಪಾಲುಗೊಂಡವರಿಂದಲೇ ಬರೆಸಿರುವುದು ಸಂಪಾದಕರ ಸಾಮಾಜಿಕ ಪ್ರಜ್ಞೆಯ ದ್ಯೋತಕ. 'ಕನ್ನಡ ಜನಪದ ಸಾಹಿತ್ಯ'ಕ್ಕೆ ಬರೆದ 18 ಸಾಲಿನ ಮುಖ ಟಿಪ್ಪಣಿ ಒಂದು ಸತ್ವಯುತ ಕಿರುಲೇಖನವೇ ಆಗಿದೆ.

ಪತ್ರಸಾಹಿತ್ಯ ಸಂಬಂಧದ ಲೇಖನಕ್ಕೆ ಪ್ರವೇಶ ಟಿಪ್ಪಣಿ ಬರೆಯುತ್ತಾ ಸಾಹಿತ್ಯದ ಪ್ರಥಮ ಪತ್ರ ಕಾಳಿದಾಸನ ಶಾಕುಂತಲದಲ್ಲಿ ಆರಂಭವಾಗಿ ಬಾಣನ ಕಾದಂಬರಿಯಲ್ಲಿ ಮೈದೋರಿ ಮೈಸೂರು ಅರಸರ ಕಾಲಕ್ಕೆ ಓಲೆಯಕಾರರ ಸಂಬಂಧವಾದ ಬಗ್ಗೆ ಹೇಳಿದ್ದಾರೆ. ಇದು ಲೇಖನಕ್ಕೆ ಪೋಷಕವಾಗಿದೆ.

ಕನ್ನಡ ಕವಿಕ್ಷೇತ್ರಗಳು 'ಲೇಖನದಲ್ಲಿ' ಪಾಶ್ಚಿಮಾತ್ಯರಲ್ಲಿ ಜನತೆಯ ಯಾತ್ರಾ ಸ್ಥಳ ಕವಿಕ್ಷೇತ್ರಗಳಾಗಿವೆ ಎಂಬುದು ಸರಿ. ಆದರೆ ಕನ್ನಡದ ಮಹಾ ಕವಿಗಳಲ್ಲಿ ಒಂದಿಬ್ಬರ ಬಗ್ಗೆ ವಿವರ ನೀಡಿ, ಉಳಿದವರನ್ನು ಬೇಕಾಬಿಟ್ಟಿ ಹೆಸರಿಸಿರುವ ಲೇಖನಕ್ಕೆ ಮುಖಟಿಪ್ಪಣಿಯಲ್ಲಿಯೂ ಆ ಬಗ್ಗೆ ಮಾಹಿತಿಯನ್ನು ತಿಳಿಸದಿರುವಲ್ಲಿ ಸಂಪಾದಕರು ತೂಕಡಿಸಿದರು ಎನ್ನಬೇಕೆ ?

ಶಿಕ್ಷಣ ಮಾಧ್ಯಮದ ಅಗತ್ಯತೆ ಕುರಿತು ಬರೆಯಲೊಪ್ಪಿದ ಲೇಖನ ಲೇಖಕರಿಂದ ಬರದಿದ್ದಾಗ ಸಂಪಾದಕರೇ ವಿಚಾರದ ಮುಖ್ಯ ಸ್ತಂಭ ಬೀಳದಂತೆ ಮುತುವರ್ಜಿ ವಹಿಸಿ ಲೇಖನ ಬರೆದಿರುವುದು ಸಾಮರ್ಥ್ಯದ ಸೌಷ್ಠವ. ಸಮಯೋಚಿತವಾಗಿ 1929ರ ಬೆಳಗಾವಿ ಸಮ್ಮೇಳನಾಧ್ಯಕ್ಷರ ಭಾಷಣ ಉದ್ಧರಣವಾಗಿರುವುದೂ ತುಂಬ ಅರ್ಥವತ್ತಾಗಿದೆ.

'ಚಿನ್ನದ ಬೆಳಸು'ವಿನಲ್ಲಿ ಪರಿಷತ್ತಿನ ಉಗಮದ ಸಮಯದಿಂದ ಹಿಡಿದು ಹೆಚ್ಚು-ಕಡಿಮೆ ಸಂಪುಟದ ತತ್ಕಾಲೀನ ಸಮಯದ ಅಧ್ಯಕ್ಷರವರೆವಿಗೂ ಹೆಸರುಗಳು, ಸಮ್ಮೇಳನಾಧ್ಯಕ್ಷರು (1967ರ ವರೆಗೆ), ಪರಿಷತ್ತಿನ ಲಾಂಛನದ ಕರ್ತೃ, ಉಪಾಧ್ಯಕ್ಷರು, ಕಾರ್ಯದರ್ಶಿಗಳು, ಸಮ್ಮೇಳನಗಳು ನಡೆದ ಸ್ಥಳ, ಪರಿಷತ್ತಿನ ಪ್ರಕಟನೆಗಳು, ಪ್ರತಿನಿಧಿಗಳ ವಿವರಗಳನ್ನು ಅನುಬಂಧವಾಗಿ ಕೊಟ್ಟಿರುವರು. ಜಾಹಿರಾತಿನ ಅನುಕ್ರಮ ಪಟ್ಟಿ ಮುಂತಾದುವೆಲ್ಲವನ್ನು ಅಳವಡಿಸಿರುವುದು ಸಂಚಿಕೆಯ ವ್ಯವಸ್ಥೆಗೆ ದ್ಯೋತಕ. ಸಂಪಾದಕರು ಬಿನ್ನಹದಲ್ಲಿ 50-55 ವರ್ಷಗಳ ಅವಧಿಯಲ್ಲಿ ಸಾಗಿಬಂದ 'ಕನ್ನಡದ ಸರ್ವಾಂಗೀಣ ವಿದ್ಯಮಾನದ ಸಮೀಕ್ಷೆ ಎಂದಿರುವುದು ಉತ್ಪ್ರೇಕ್ಷೆ ಎನಿಸಲ್ಲ.

ಪರಿಷತ್ತಿನ ಇತಿಹಾಸ ಸಂಗ್ರಹವಾಗಿ 'ಬೆಳಸು'ವಿನಲ್ಲಿದ್ದರೆ, ಸಾಧನೆಯ ಮಜಲುಗಳನ್ನು ಐತಿಹಾಸಿಕ ಹಿನ್ನೆಲೆಯಲ್ಲಿ ಮೇಳೈಸಿ ಅಧಿಕೃತವಾಗಿ ಮೂಡಿಸಿರುವುದು 'ಕೌಸ್ತುಭ'ದಲ್ಲಿದೆ. 'ಕೌಸ್ತುಭದಲ್ಲಿ' ಗೊಂದಲವಿಲ್ಲ, ಗಲಿಬಿಲಿಯಿಲ್ಲ. ಆಧುನಿಕ ಸ್ಪಂದನಕ್ಕೆ ನಿಖರತೆಗೆ ವೇದಿಕೆ ಮುಡಿಪು. ಕನ್ನಡ ಸಾಹಿತ್ಯ ಮತ್ತು ಸಾಮಾಜಿಕ ಪರಿವರ್ತನೆಯಲ್ಲಿ ವಚನ ಸಾಹಿತ್ಯ, ದಾಸಸಾಹಿತ್ಯ, ಜೈನಸಾಹಿತ್ಯ, ತಾತ್ವಿಕ-ನೈತಿಕ ಕೃತಿಗಳು ಎಂದಾಗಿ ಆಧುನಿಕ ಸಾಹಿತ್ಯದವರೆವಿಗೆ ನಡೆಯಿದೆ.

ಕೌಸ್ತುಭದ ಲೇಖನಗಳು ವಿಭಾಗಗಳ ಚೌಕಟ್ಟಿನಲ್ಲಿ ಅಡಕವಾಗಿವೆ. ಒಟ್ಟಾರೆ ಮುಖ ಟಿಪ್ಪಣಿಗಳು ವಿಭಾಗಗಳಿಗನುಗುಣವಾಗಿ ಮಹತ್ವಪೂರ್ಣವಾಗಿವೆ. ವಿಭಾಗದ ಪ್ರತಿ ಲೇಖನಗಳಿಗೂ ಅನುಗುಣ ಮುಖ ಟಿಪ್ಪಣಿಗಳು, ಉಪ ಟಿಪ್ಪಣಿಗಳು, ವಿಷಯದತ್ತ ಪ್ರಬುದ್ಧ ಆಸಕ್ತಿಯನ್ನು ಕುದುರಿಸುತ್ತವೆ. ಆದರೂ ಅಲ್ಲಲ್ಲಿ ಸಂಪಾದಕರ ಗಮನ ನುಸುಳಿ ಹೋಗಿರುವುದುಂಟು.

ಭಾಷಾ ಬಾಂಧವ್ಯದ ಅಂಗವಾಗಿ ಬಂದ 'ಕನ್ನಡ ತಮಿಳು' ಲೇಖನದಲ್ಲಿ ಹಿಂದೆ ಭಾರತದ ಮೂಲ ತಮಿಳಿನ "ಶಿಷ್ಟ ಪ್ರತ್ಯಾರ ಭಾರತದಲ್ಲಿದೆ." ಹಾಗೆಯೇ ಹರಿಹರನ ರಗಳೆ ಛಂದಸ್ಸು ತಮಿಳಿನ 'ಅಗವಲ್' ಛಂದಸ್ಸಿನ ಪ್ರತಿಬಿಂಬ. ಹರಿಹರ ತಮಿಳು ಮೂಲಗಳಿಂದ ವಿಷಯ ಮಾತ್ರ ಸಂಗ್ರಹಿಸಿದ್ದಾನೋ, ವರ್ಣನೆ-ನಿರೂಪಣೆ-ಮೊದಲಾದ ವಿವರಗಳನ್ನು ಭಾಷಾಂತರಿಸಿದ್ದಾನೋ ಎಂಬುದನ್ನು ಇನ್ನು ಮೇಲೆ ವಿಮರ್ಶಿಸಿ ಒರೆ ಹಚ್ಚಬೇಕಾಗಿದೆ – ಎಂಬ ಮಾತುಗಳುಂಟು. ಈ ಅನುಮಾನದ ಮೇಲೆ 'ಸಂಪಾದಕರ ಟಿಪ್ಪಣಿ' ಅಗತ್ಯವಿತ್ತು. ಕಾರಣ, ಸೂಕ್ಷ್ಮ ಓದುಗನಿಗೆ ಹರಿಹರ ಕೇವಲ ಭಾಷಾಂತರ ಕವಿ ಅಥವಾ ಛಾಯಾಕವಿ – ಎಂಬ ಭಾವನೆ ಮೂಡುವ ಅಪಾಯವೇ ಹೆಚ್ಚು. ಎಂ.ವಿ.ಸೀ. ಅವರ ಸಂಪಾದಕೀಯ ಟಿಪ್ಪಣಿಗಳು ಹೇಗೆ ವಿಚಾರ ಪೂರಿತವಾಗಿವೆ ಎಂಬುದಕ್ಕೆ ಒಂದೆರಡು ಉದಾಹರಣೆಗಳನ್ನು ಇಲ್ಲಿ ಗಮನಿಸಬಹುದು :

'ಕನ್ನಡ-ಹಿಂದಿ' ಲೇಖನಕ್ಕೆ ಮುಖ ಟಿಪ್ಪಣಿಯಲ್ಲಿ "ಆಕಾಶವಾಣಿ ಕನ್ನಡಿಗರಿಗೆ ಹಿಂದಿ ಪಾಠಗಳನ್ನು ಕಲಿಸುತ್ತಿರುವಂತೆ ಹಿಂದೀ ಜನಕ್ಕೆ ಕನ್ನಡ ಪಾಠವನ್ನು, ಇತರ ಭಾರತೀಯ ಭಾಷೆಗಳ ಪಾಠವನ್ನು ಕಲಿಸುವ ಏರ್ಪಾಡು ಮಾಡಬೇಕಲ್ಲವೆ? ತ್ರಿಭಾಷಾ ಸೂತ್ರವೇನೋ ಒಳ್ಳೆಯದೆ. ಆದರೆ ಹಿಂದಿ ಪ್ರಾಂತಗಳಲ್ಲಿ ಅದನ್ನು ಏಕ ಭಾಷಾ ಸೂತ್ರವಾಗಿ ಅನುಷ್ಠಾನದಲ್ಲಿಟ್ಟುಕೊಂಡಿರುವುದು ದುರದೃಷ್ಟಕರ" ಎಂದಿದ್ದಾರೆ.

'ಕನ್ನಡ-ಉರ್ದು' ಲೇಖನದ ಪ್ರವೇಶ ಟಿಪ್ಪಣಿಯಲ್ಲಿ ಹಳಗನ್ನಡ ವ್ಯಾಕರಣದಲ್ಲಿ ಹೇಳುವ ಜಿಹ್ವಾ ಮೂಲೀಯ ಉಪಾಧ್ಮಾನೀಯಗಳಲ್ಲಿ ಜಿಹ್ವಾ ಮೂಲೀಯದ ಸ್ವರೂಪವನ್ನು ಅರಿಯಬೇಕಾದರೆ ಕೆಲವು ಉರ್ದು ಪದಗಳ ಉಚ್ಚಾರಣೆಯನ್ನು ಗಮನಿಸಬೇಕು .... ಈ ಉಚ್ಚಾರಣೆಯ ಕೆಲವು ಶಬ್ದಗಳು ಕನ್ನಡಕ್ಕೂ ಬಂದಿರಬಹುದಲ್ಲವೆ? – ಎಂದು ಅನುಮಾನ ವ್ಯಕ್ತಪಡಿಸಿದ್ದಾರೆ.

ಆಧುನಿಕ ಸಂವೇದನೆಯ ಪರಿಚಯ ನೀಡಲು ಸಂಪಾದಕರು ಉದ್ಧರಿಸಿರುವ 'ಸೃಜನಶೀಲ ಬರೆಹಗಾರ ಮತ್ತು ಅಭಿವ್ಯಕ್ತಿ', 'ಪ್ರಾಚೀನ ಕಾವ್ಯಗಳಲ್ಲಿ ಜನಾಭಿಮುಖ ದೃಷ್ಟಿ', 'ಆಧುನಿಕ ಸಾಹಿತ್ಯ ಸಂವಹನ' — ಲೇಖನಗಳ ಮುಖ ಟಿಪ್ಪಣಿಯಲ್ಲಿ ಕೆದಕಿರುವ ಅಂಶಗಳು ಸ್ವಾರಸ್ಯವಾಗಿವೆ.

'ಕರ್ನಾಟಕ ಸಂಗೀತ' ಲೇಖನದ ಮುಖ ಟಿಪ್ಪಣಿಯಲ್ಲಿ ಬರೆದ ಮಾತು: ಕರ್ನಾಟಕ ಸಂಗೀತ ಪಿತಾಮಹರೆಂದು ಪ್ರಸಿದ್ಧರಾದ ಪುರಂದರ ದಾಸಾದಿ ಹರಿದಾಸರುಗಳು ಈ ವಿಜಯನಗರ ಪ್ರಭಾವಕ್ಕೆ ಒಳಗಾಗಿದ್ದುದು ಹೇಗೆ ನಮ್ಮ ಪ್ರಶ್ನೆಯೋ ಸೋಜಿಗದ ಸಂಗತಿಯೋ ಹಾಗೆ 20 ನೆಯ ಶತಮಾನದ ಕನ್ನಡಿಗರಾದ ವಾಸುದೇವಾ

ಚಾರ್ಯರು ತೆಲುಗಿನ ಪ್ರಭಾವ ವಲಯಕ್ಕೆ ಸಿಲುಕಿಕೊಂಡಿದ್ದು ಕನ್ನಡದ ದೌರ್ಭಾಗ್ಯ- ಅಷ್ಟೇ ಸೋಜಿಗದ ಸಂಗತಿ. ಪುರಂದರ ದಾಸಾದಿ ಕನ್ನಡ ವಾಗ್ಗೇಯಕಾರರ ಪದ ಗಳು ಸ್ವರ ಪ್ರಸ್ತಾರವಿಲ್ಲದೆ ಬಳಕೆಗೆ ಬಂದದ್ದು ಇನ್ನೊಂದು ನಷ್ಟದ ಸಂಗತಿ. ಈ ಕೊರತೆಯನ್ನು ಇಂದಿನ ಪೀಳಿಗೆಯವರು ತುಂಬಬೇಕು ಎನ್ನುವಲ್ಲಿ ತಮ್ಮ ಆಶಯ ವನ್ನು ಮುಕ್ತವಾಗಿ ನಿರೂಪಿಸಿದ್ದಾರೆ.

* * * *

"ರಂಗಭೂಮಿ" ಕುರಿತಾದ ಲೇಖನಗಳಲ್ಲಿ ಯಕ್ಷಗಾನ-ಬಯಲಾಟ, ಯಕ್ಷಗಾನ ಪರಂಪರೆ ಪ್ರಯೋಗ, ಯಕ್ಷರಂಗದ-ಯಕ್ಷಗಾನ ಸಮೀಕರಣ: ದಶಕದ ಸಾಹಿತ್ಯ ವಿಭಾಗದಲ್ಲಿ ನಾಟಕ, ಸಣ್ಣಕತೆ, ಮಕ್ಕಳ ಸಾಹಿತ್ಯ, ವಿಜ್ಞಾನ ಸಾಹಿತ್ಯ. ಶಾಸ್ತ್ರ ಗ್ರಂಥ, ಮಹಾಪ್ರಬಂಧ, ಗ್ರಂಥ ಸಂಪಾದನೆ ಕುರಿತ ಸಮರ್ಥ ಲೇಖನಗಳನ್ನು ಸಂಪಾ ದಕರು ಅಳವಡಿಸಿ, ಆಕರ್ಷಣೀಯವನ್ನಾಗಿ ಮಾಡಿದ್ದಾರೆ.

ಹಾಸ್ಯ ಸಾಹಿತ್ಯ, ಹಾಗೂ ಜನಪ್ರಿಯ ವೈದ್ಯಕೀಯ ಸಾಹಿತ್ಯಕುರಿತಂತೆ ಲೇಖನ ಇಲ್ಲದಿರುವುದು "ಕೌಸ್ತುಭ"ದ ಕೊರತೆ.

ಈ ಸಂಪುಟಗಳು ಪ್ರೊ. ಎಂ. ವಿ. ಸೀ. ಅವರ ಸಂಪಾದನೆಯ ನಿಕಷಕ್ಕೆ ಸ್ಪಷ್ಟ ಗೌರವದ ಸಂಕೇತಗಳಾಗಿವೆ. ದೃಷ್ಟಿ, ವಿದ್ಯೆ; ತೂಕ-ಪಾಕ: ಆಳ-ಅಗಲ; ಈ ಅಂಶಗಳೆಲ್ಲದರ 'ಸಮುದಾಯ ಶೋಭೆ' ಯಾಗಿ ಸಂಘಟನೆಯಾಗಿ ಈ ಕೃತಿಗಳು ಹೊರಬಂದಿವೆ.*

---

*'ಕೌಸ್ತುಭ' 'ಚಿನ್ನದ ಬೆಳಸು' ಇವುಗಳಲ್ಲದೆ 'ಬರಿ ಹೊಗ್ಗು' (ವಿದ್ಯಾರ್ಥಿಗಳ ಬರಹ)' 'ಸೋಪಾನ' (ವಿದ್ಯಾರ್ಥಿಗಳ ಕವನ ಸಂಕಲನ) 'ಹೊಳಪು-ಥಳುಕು' (ಯುದ್ಧಗೀತೆಗಳ ಸಂಕಲನ) 'ವಿಕಾಸ' (ವಿದ್ಯಾರ್ಥಿ ಪ್ರಬಂಧಗಳು) ಇವುಗಳನ್ನು ಎಂ. ವಿ. ಸೀ. ಅವರು-ಸಂಪಾದಿಸಿದ್ದಾರೆ. ಇವೆಲ್ಲ ಅವರು ಬೆಂಗಳೂರಿನ ಸರ್ಕಾರಿ ಕಾಲೇಜಿನಲ್ಲಿದ್ದಾಗ ಕರ್ನಾಟಕ ಸಂಘದ ಮೂಲಕ ಪ್ರಕಟವಾದ ಸಂಚಿಕೆಗಳು.

ಕನ್ನಡ ಗ್ರಂಥ ಸಂಪಾದನೆಗೆ
ಎಂ. ವಿ. ಸೀ ಅವರ ಕೊಡುಗೆ

ಎನ್. ಬಸವಾರಾಧ್ಯ

ಪ್ರೊ|| ಎಂ. ವಿ. ಸೀತಾರಾಮಯ್ಯನವರು ಕನ್ನಡ ಸಾರಸ್ವತ ಲೋಕದ ಅಜಾತ ಶತ್ರುವೆನಿಸಿದ್ದಾರೆ. ಕಳೆದ ನಾಲ್ಕೈದು ದಶಕಗಳಿಂದ ನಿರಂತರವಾಗಿ ಸಾಹಿತ್ಯ ಸಂವರ್ಧನೆಯ ಕಾರ್ಯದಲ್ಲೇ ಮಗ್ನರಾಗಿರುವ ಶ್ರೀಯುತರು ಕರ್ಮಯೋಗಿ ಎನಿಸಿದ್ದಾರೆ. ಕನ್ನಡ ಸಾಹಿತ್ಯ ಪ್ರಪಂಚಕ್ಕೆ ಎಂ. ವಿ. ಸೀ. ಅವರು ಸಲ್ಲಿಸುತ್ತಿರುವ ಸೇವೆ ಬಹುಮುಖವಾದುದು; ಬಹುಕಾಲ ನಿಲ್ಲುವಂತಹುದು. ಕಥೆ, ಕವನ, ಕಾದಂಬರಿ, ಗ್ರಂಥಸಂಪಾದನೆ, ಅನುವಾದ ಸಾಹಿತ್ಯ-ಈ ಮೊದಲಾದ ಪ್ರಕಾರಗಳಲ್ಲಿ ನಿಷ್ಠೆಯಿಂದ ದುಡಿಯುತ್ತಾ ಬಂದಿದ್ದಾರೆ. ಪ್ರಸ್ತುತ ಶ್ರೀಯುತರು ಸಂಪಾದನಕ್ಷೇತ್ರಕ್ಕೆ ಸಲ್ಲಿಸಿರುವ ಸೇವೆ ಏನೆಂಬುದನ್ನು ಎಷ್ಟೆಂಬುದನ್ನು ಸ್ಥೂಲವಾಗಿ ಗುರುತಿಸಲು ಇಲ್ಲಿ ಪ್ರಯತ್ನಿಸಲಾಗಿದೆ.

ಎಂ. ವಿ. ಸೀತಾರಾಮಯ್ಯನವರು ಕವಿರಾಜಮಾರ್ಗ, ಉದಯಾದಿತ್ಯಾಲಂಕಾರ ಅರ್ಜುನ, ಕೀರ್ತನ ಕುಸುಮಾಂಜಲಿ ಎಂಬ ಕೃತಿಗಳನ್ನು ಸಂಪಾದಿಸುವುದರ ಜೊತೆಗೆ ಎರಡನೆಯ ನಾಗವರ್ಮನ ಕಾಲವಿಚಾರ, ಕನ್ನಡ ಗ್ರಂಥಸಂಪಾದನೆಗೆ ಶೀನಂಶ್ರೀಯವರ ಕೊಡುಗೆ, ಉದಯಾದಿತ್ಯಾಲಂಕಾರ; ಕರ್ತೃವಿಚಾರ, ಅನ್ವಯ ಟೀಕೆಗೆ ಪ್ರತಿಕ್ರಿಯೆ, ಸರ್ವಜ್ಞನ ತ್ರಿಪದಿಗಳು ಪುನಃ ಪರಿಷ್ಕರಣದ ಅಗತ್ಯ, ಕವಿರಾಜಮಾರ್ಗದ ಮೇಲೆ ಉದಟನ ಪ್ರಭಾವ, ಶ್ರೀ ವಿಜಯರ ಕವಿಮಾರ್ಗಂ-ಒಂದು ವಿವರಣೆ, ಕವಿರಾಜಮಾರ್ಗದ ವೈಶಿಷ್ಟ್ಯ ಇವೇ ಮೊದಲಾದ ಬಿಡಿಲೇಖನಗಳನ್ನೂ ಬರೆದಿದ್ದಾರೆ. ಸದ್ಯದಲ್ಲಿ ಕವಿರಾಜಮಾರ್ಗ ಉದಯಾದಿತ್ಯಾಲಂಕಾರ ಮತ್ತು ಇತರಲೇಖನಗಳಿಗೆ ಸಂಬಂಧಿಸಿದಂತೆ ಈ ಪ್ರಬಂಧವನ್ನು ಸೀಮಿತಗೊಳಿಸಲಾಗಿದೆ.

ಗ್ರಂಥಸಂಪಾದನೆ ಒಂದು ನಿಯಮಬದ್ಧವಾದ ಶಾಸ್ತ್ರ. ಕನ್ನಡದಲ್ಲಿ ಈ ಶಾಸ್ತ್ರ ಹಿಂದಿನಿಂದಲೇ ಬೆಳೆದುಕೊಂಡು ಬಂದಿದೆ. ಪ್ರಾಚೀನ ಕಾವ್ಯಗಳನ್ನು ಶಾಸ್ತ್ರೀಯವಾಗಿ ಸಂಪಾದಿಸುವುದು ಕಷ್ಟವೂ ಕ್ಲಿಷ್ಟವೂ ಆದ ಕಾರ್ಯ. ಇದಕ್ಕೆ ಹಲವಾರು ಶಾಸ್ತ್ರಗಳ ಪರಿಚಯವೂ ಆಳವಾದ ಪಾಂಡಿತ್ಯವೂ ಬಹುಶ್ರುತತ್ವವೂ ಅವಶ್ಯಕವೆಂಬುದು ಈ ಕಾರ್ಯದಲ್ಲಿ ನಿರತರಾಗಿರುವವರಿಗೆಲ್ಲ ತಿಳಿದಿರುವ ಸಂಗತಿ. ಸಾಹಿತ್ಯವೆಂಬ ಗಣಿಯನ್ನು

ಪ್ರವೇಶಿಸಿ ಮಣ್ಣಿನಿಂದ ಲೋಹವನ್ನು ಬೇರ್ಪಡಿಸಿ ಸುವರ್ಣವನ್ನು ಹೊರ ತರುವಂತಹ ಕಾರ್ಯ ಇದು. ಕವಿಯ ಮೂಲಪಾಠವನ್ನು ಕಂಡುಹಿಡಿಯುವುದೇ ಸಂಪಾದಕನ-ಪರಮೋದ್ದೇಶ. ಇದಕ್ಕಾಗಿ ಆತನು ಅನುಸರಿಸುವ ವಿಧಿವಿಧಾನಗಳೇ ಗ್ರಂಥಸಂಪಾದನೆಯ ಉದ್ದೇಶವಾಗಿದೆ.

ಹಸ್ತಪ್ರತಿಗಳನ್ನು ಓದುವುದು ಒಂದು ಕಲೆ. ಹಸ್ತಪ್ರತಿಗಳಲ್ಲಿನ ಲಿಪಿ ಭಾಷೆ ಇವುಗಳನ್ನು ಓದಲು ಸಾಕಷ್ಟು ಪರಿಶ್ರಮ ಬೇಕಾಗುತ್ತದೆ. ಹಸ್ತಪ್ರತಿಗಳನ್ನು ತಪ್ಪಾಗಿ ಓದಿದರೆ ಆಗುವ ಅಪಾರ್ಥ ಅನರ್ಥಗಳನ್ನು ಊಹಿಸಲೂ ಬರುವಂತಿಲ್ಲ. ಪ್ರತಿಕಾರ ವ್ಯುತ್ಪನ್ನಮತಿಯಾದರೆ ಅಕ್ಷರ ಮತ್ತು ಭಾಷಾಸ್ಖಾಲಿತ್ಯಗಳು ಗಣನೀಯವಾಗಿ ಕಡಿಮೆಯಾಗುತ್ತವೆ. ಹಸ್ತಪ್ರತಿಯಿಂದ ಪ್ರತಿಮಾಡುವುದರಿಂದ ಹಿಡಿದು ಪಾಠಾಂತರಗಳನ್ನು ಗುರುತಿಸಿಕೊಂಡು ಕವಿಯ ಪಾಠವನ್ನು ಕಂಡುಹಿಡಿಯುವುದು ಅತ್ಯಂತ ದುಸ್ತರವಾದ ಕಾರ್ಯ. ಸಂಪಾದಕನು ಈ ಎಲ್ಲ ಪರೀಷಹಗಳನ್ನೂ ಗೆದ್ದುಕೊಂಡ ಬಂದಾಗಲೇ ಕವಿಯ ಮೂಲಪಾಠವನ್ನು ಕಂಡುಹಿಡಿಯುವಲ್ಲಿ ಜಯಶೀಲನಾಗಬಹುದು. ಗ್ರಂಥಸಂಪಾದನಾಕಾರ್ಯ ಅತ್ಯಂತ ಕಠಿಣತರವಾದುದು.

ಕವಿರಾಜಮಾರ್ಗ ಕನ್ನಡ ಸಾಹಿತ್ಯದ ಪ್ರಥಮ ಲಕ್ಷಣಗ್ರಂಥ. ಈ ಗ್ರಂಥ ಎರಡು ಪರಿಷ್ಕರಣಗಳು ಎಂ. ವಿ. ಸೀ. ಅವರು ಸಂಪಾದಿಸುವುದಕ್ಕೆ ಮೊದಲೇ ಹೊರಬಂದಿದ್ದುವು. ಕೆ. ಬಿ. ಪಾಠಕ್ ಅವರು 1898ರಲ್ಲಿ ಹೊರತಂದದ್ದು ಒಂದು. ಮುದರಾಸಿನ ಎ. ವೆಂಕಟರಾವ್, ಎಚ್. ಶೇಷಅಯ್ಯಂಗಾರ್ ಅವರು 1930ರಲ್ಲಿ ಸಂಪಾದಿಸಿದ್ದು ಮತ್ತೊಂದು. ಈ ಎರಡು ಮುದ್ರಿತ ಪ್ರತಿಗಳ ಜೊತೆಗೆ ಮತ್ತೆರಡು ಹಸ್ತಪ್ರತಿಗಳನ್ನೂ ಎಂ. ವಿ. ಸೀ. ಅವರು ಪರಿಷ್ಕರಣಕ್ಕೆ ಉಪಯೋಗಿಸಿಕೊಂಡಿದ್ದಾರೆ. ಪಾಠಾಂತರಗಳನ್ನು ಅಡಿಟಿಪ್ಪಣಿಯಲ್ಲಿ ಕೊಡದೆ ಕೊನೆಯಲ್ಲಿ ಪ್ರತ್ಯೇಕವಾಗಿ ಕೊಟ್ಟಿದ್ದಾರೆ. ಈ ಎಲ್ಲ ಹಸ್ತಪ್ರತಿಗಳಿಂದಲೂ ಪಾಠಸಮಸ್ಯೆಗಳು ಬಗೆಹರಿಯದಿದ್ದಾಗ ಸ್ವೀಕೃತಪಾಠಗಳನ್ನೂ ಸೂಚಿತಪಾಠಗಳನ್ನೂ ಕೊಟ್ಟಿದ್ದಾರೆ. ಕವಿರಾಜಮಾರ್ಗದ ಮತ್ತೆ ಕೆಲವು ಶುದ್ಧ ಪ್ರತಿಗಳು ಲಭ್ಯವಾದಾಗ ಈ ಸ್ವೀಕೃತಪಾಠಗಳು ಅವುಗಳಲ್ಲಿ ಕಂಡುಬರುವುದು ಸಂಭವನೀಯ. ಈ ಕೃತಿಯ ಸಂಪಾದಕರು ಸೂಚಿಸಿರುವ ಸ್ವೀಕೃತ ಪಾಠಗಳು ಎಷ್ಟು ಸಮುಚಿತವಾಗಿವೆ ಎಂಬುದಕ್ಕೆ : ಪರಿಚ್ಛೇದ ೧–೩ : ೧–೧೨೮ ಪರಿಚ್ಛೇದ ೨–೧೧೩, ೨–೧೫೭ ಪರಿಚ್ಛೇದ ೩–೨೪, ೩–೧೫೦ ಈ ಪದ್ಯಗಳನ್ನು ನೋಡಬಹುದು. ಈ ಪಾಠಗಳು ಸಂಪಾದಕರ ಪಾಂಡಿತ್ಯದ ಬಗೆಗೆ ಬೆಳಕು ಚೆಲ್ಲುತ್ತವೆ. ಅವರ ಬಹುಶ್ರುತತ್ವಕ್ಕೆ ನಿದರ್ಶನವಾಗಿವೆ.

ಈ ಕಾವ್ಯಕ್ಕೆ ಬರೆದಿರುವ ವಿಸ್ತಾರವಾದ ಪೀಠಿಕೆಯಲ್ಲಿ ಕವಿಕಾವ್ಯವಿಷಯವನ್ನು ವಿಶೇಷವಾಗಿ ಪ್ರಸ್ತಾಪಿಸಲಾಗಿದೆ. ವಿದ್ವಾಂಸರಲ್ಲಿ ಈವರೆಗೆ ನಡೆದಿದ್ದ ವಾದವಿವಾದಗಳ

ಎಲ್ಲ ಮಾಹಿತಿಯನ್ನೂ ಸಮೀಕರಿಸಿದ್ದಾರೆ ಸಂಪಾದಕರು. ಶ್ರೀ ವಿಜಯನೇ ಕವಿರಾಜಮಾರ್ಗದ ಕರ್ತೃವೆಂಬುದನ್ನು ಸಾಧಿಸಿ ತೋರಿಸಿದ್ದಾರೆ. ಈ ಪರಿಷ್ಕರಣದಲ್ಲಿ ಕೊಟ್ಟಿರುವ ಟಿಪ್ಪಣಿಗಳು ಸಂಪಾದಕರ ಅಪಾರ ವಿದ್ವತ್ತಿಗೂ ದೀರ್ಘ ಪರಿಶ್ರಮಕ್ಕೂ ದ್ಯೋತಕವಾಗಿವೆ. ವಿದ್ಯಾರ್ಥಿಗಳಿಂದ ಹಿಡಿದು ವಿದ್ವಾಂಸರವರೆಗೆ ಇವು ಅತ್ಯಂತ ಪ್ರಯೋಜನಕಾರಿಯಾಗಿವೆ. ಈ ಕಾವ್ಯಕ್ಕೆ ಸಂಬಂಧಿಸಿದ ಯಾವ ಅಂಶಗಳೂ ತಪ್ಪಿ ಹೋಗದಂತೆ ನೋಡಿಕೊಂಡಿದ್ದಾರೆ ಸಂಪಾದಕರು. ಒಟ್ಟಿನಲ್ಲಿ ಗ್ರಂಥ ಸಂಪಾದನಾ ನಿಯಮಗಳಿಗನುಸಾರವಾಗಿ ಸಂಪಾದಿತವಾಗಿರುವ ಕವಿರಾಜಮಾರ್ಗ ಒಂದು ಕೈಗನ್ನಡಿಯಂತಿದೆ.

ಉದಯಾದಿತ್ಯಾಲಂಕಾರ ಎಪ್ಪತ್ತಾರು ಪದ್ಯಗಳುಳ್ಳ ಒಂದು ಲಘುಕೃತಿ. ಇದರ ಹೆಸರೇ ಸೂಚಿಸುವಂತೆ ಇದು ಒಂದು ಅಲಂಕಾರ ಗ್ರಂಥ. ಕರ್ಣಾಟಕ ಕಾವ್ಯಮಂಜರಿ ಗ್ರಂಥಮಾಲೆಯಲ್ಲಿ ಇದು 1894 ರಲ್ಲಿ ಪ್ರಕಟವಾಗಿದೆ. ಪ್ರಸ್ತುತ ಪರಿಷ್ಕರಣವನ್ನು ಈ ಮುದ್ರಿತ ಪ್ರತಿಯಲ್ಲದೆ ಮತ್ತೆ ಮೂರು ಹಸ್ತಪ್ರತಿಗಳಿಂದ ಸಂಸ್ಕರಿಸಲಾಗಿದೆ. ಇವುಗಳಲ್ಲಿ ಎರಡು ಪ್ರತಿಗಳು ಒಂದು ಮತ್ತೊಂದರ ನಕಲು ಪ್ರತಿಯಾಗಿವೆ. ಹೀಗಾಗಿ ಈ ಕಾವ್ಯದ ಪರಿಷ್ಕರಣಕ್ಕೆ ವಿಶಿಷ್ಟ ಪ್ರತಿಗಳೇನೂ ಲಭ್ಯವಾದಂತಿಲ್ಲ. ಉಪಲಬ್ಧ ಪ್ರತಿಗಳಿಂದಲೇ ಸಂಪಾದಕರು ಒಂದು ಅಧಿಕೃತ ಸಂಸ್ಕರಣವನ್ನು ಹೊರತಂದಿದ್ದಾರೆ.

ಈ ಲಘುಕೃತಿಗೆ ವಿಸ್ತಾರವಾದ ಪೀಠಿಕೆಯನ್ನೂ ವಿವರವಾದ ಟಿಪ್ಪಣಿಯನ್ನೂ ಒದಗಿಸಿರುವುದು ವಿಶಿಷ್ಟ ಸಂಗತಿಯಾಗಿದೆ. ಕವಿ, ಕೃತಿ, ಕಾಲ ವಿಚಾರಗಳನ್ನು ದೀರ್ಘವಾಗಿ ಪ್ರಸ್ತಾಪಿಸಿದ್ದಾರೆ. ಈವರೆಗೆ ಪ್ರಚಲಿತವಾಗಿದ್ದ ಉದಯಾದಿತ್ಯನೇ ಉದಯಾದಿತ್ಯಾಲಂಕಾರದ ಕರ್ತೃ ಎಂಬ ಪ್ರತೀತಿಯನ್ನೇ ಅಲುಗಾಡಿಸಿದ್ದಾರೆ. ಈ ಕೃತಿಯ ಕರ್ತೃ ಬೇರೊಬ್ಬನಿರಬೇಕು ಎಂಬುದನ್ನು ಸಾಧಿಸಲು ಅನೇಕ ಅಂಕಿ ಅಂಶಗಳನ್ನೂ ಆಧಾರಗಳನ್ನೂ ಸಂಗ್ರಹಿಸಿದ್ದಾರೆ. ಇದರ ಕಾಲವನ್ನು ಬಹಳ ಹಿಂದಕ್ಕೆ ಒಯ್ಯುವ ಸಾಹಸವನ್ನೂ ಮಾಡಿದ್ದಾರೆ. ಸಂಪಾದಕರ ಅಭಿಪ್ರಾಯಗಳನ್ನು ಒಪ್ಪುವುದು ಬಿಡುವುದು ವಿದ್ವಜ್ಜನಕ್ಕೆ ಸೇರಿದುದಾದರೂ ಅವರ ವಾದಸರಣಿಯನ್ನು ಸುಲಭವಾಗಿ ತಳ್ಳಿಹಾಕುವಂತಿಲ್ಲ.

ಪಾಠಪರಿಷ್ಕರಣದಲ್ಲಿ ಸಂಪಾದಕರು ತಮ್ಮ ಪಾಂಡಿತ್ಯವನ್ನು ಮೆರೆದಿದ್ದಾರೆ. ಅಲಂಕಾರ ಗ್ರಂಥಗಳನ್ನು ಸಂಪಾದಿಸುವಲ್ಲಿ ಪ್ರಾಚೀನ ಸಂಸ್ಕೃತ ಕನ್ನಡ ಲಾಕ್ಷಣಿಕ ಗ್ರಂಥಗಳನ್ನು ಅವಲೋಕಿಸುವುದು, ಅಭ್ಯಸಿಸುವುದು, ಅರ್ಥೈಸುವುದು ಅವಶ್ಯವಷ್ಟೇ ಅಲ್ಲ, ಅನಿವಾರ್ಯವೂ ಹೌದು. ಪ್ರಕೃತ ಗ್ರಂಥ ಸಂಪಾದಕರು ಈ ಕಾರ್ಯವನ್ನು ಸಮರ್ಪಕವಾಗಿ ಮಾಡಿ ಶುದ್ಧಪಾಠಗಳನ್ನು ಕಂಡುಹಿಡಿಯಲು ಯತ್ನಿಸಿದ್ದಾರೆ. ಸಂಪಾದಕೀಯ ಪಾಠಗಳನ್ನು ಯಥೋಚಿತವಾಗಿ ಬಳಸಿದ್ದಾರೆ.

ಈ ಪರಿಷ್ಕರಣಕ್ಕೆ ಕೊಟ್ಟಿರುವ ಟಿಪ್ಪಣಿಗಳು ಅತ್ಯಂತ ಉಪಯುಕ್ತವಾದವು. ಸಂಪಾದಕರ ಅಪಾರ ಪಾಂಡಿತ್ಯಕ್ಕೆ ಇವು ನಿಕಷವಿಟ್ಟಂತಿವೆ. ಈ ಗ್ರಂಥದಲ್ಲಿನ ಎಪ್ಪತ್ತಾರು ಪದ್ಯಗಳಿಗೂ ವಿವರವಾದ ವಿಶ್ಲೇಷಣೆಯನ್ನು ಮಾಡಿದ್ದಾರೆ. ಅಲ್ಲದೆ ಒಂದು ತೌಲನಿಕ ಅಧ್ಯಯನವನ್ನೇ ನಡೆಸಲಾಗಿದೆ. ಎಂ.ವಿ. ಸೀತಾರಾಮಯ್ಯನವರ ಪ್ರಗಲ್ಭ ಪಾಂಡಿತ್ಯಕ್ಕೆ ಈ ಟಿಪ್ಪಣಿಗಳು ಜ್ವಲಂತ ನಿದರ್ಶನವಾಗಿವೆ. ಓದುಗರಿಗೆ ಇದರಿಂದಾಗುವ ಪ್ರಯೋಜನ ವರ್ಣನಾತೀತ. ಈ ಗ್ರಂಥದ ಕಡೆಯಲ್ಲಿ ಕೊಟ್ಟಿರುವ 'ಅಲಂಕಾರಪಟ್ಟಿಕೆ', 'ಪಾರಿಭಾಷಿಕ ಪದಸೂಚಿ' ಸಂಶೋಧಕರ ದೃಷ್ಟಿಯಿಂದ ಅತ್ಯಂತ ಉಪಯುಕ್ತವಾಗಿವೆ. ಒಂದು ಗ್ರಂಥವನ್ನು ಶಾಸ್ತ್ರೀಯವಾಗಿ ಹೇಗೆ ಸಂಪಾದಿಸಬೇಕು. ಅದಕ್ಕೆ ಯಾವ ಯಾವ ಪರಿಕರಗಳನ್ನು ಒದಗಿಸಬೇಕು ಎಂಬುದಕ್ಕೆ ಉದಯಾದಿತ್ಯಾಲಂಕಾರ ಒಂದು ಮಾದರಿಯಾಗಿದೆ. ಆಳವಾದ ಅಧ್ಯಯನದಿಂದ ಮಾತ್ರ ಈ ತೆರನ ಕೃತಿಗಳನ್ನು ಸಂಪಾದಿಸಲು ಸಾಧ್ಯ ಎಂಬುದನ್ನು ಈ ಲಘುಕೃತಿ ಸಾರಿ ತೋರುತ್ತಿದೆ.

ಎಂ.ವಿ. ಸೀತಾರಾಮಯ್ಯನವರ ಕೆಲವು ಬಿಡಿಲೇಖನಗಳು ಗ್ರಂಥ ಸಂಪಾದನಾ ದೃಷ್ಟಿಯಿಂದ ಉಪಯುಕ್ತವಾಗಿವೆ.

ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆಯಲ್ಲಿ ಪ್ರಕಟವಾಗಿರುವ ಎರಡನೆಯ ನಾಗವರ್ಮನ ಕಾಲವಿಚಾರ: ಈ ಲೇಖನ ಪರಿಗಣನಾರ್ಹವಾಗಿದೆ. ಎರಡನೆಯ ನಾಗವರ್ಮನ ವರ್ಧಮಾನ ಪುರಾಣದ ಕಾಲಸೂಚೀ ಪದ್ಯ: "ವಸುವರ್ಗಾಂಕಮಿದXತಿತಳಕ ಭೂಭೃದ್ವತ್ಸರಂ" ಎಂದು ದುಷ್ಟಘಟಿತವಾಗಿರುವುದನ್ನು "ವಸುವರ್ಗಾಂಕಮಿದ[ವ್ಯ]ತೀತ[ಶ]ಕ ಭೂಭೃದ್ವತ್ಸರಂ" ಎಂದು ಸುಲಲಿತವಾಗಿ ಪರಿಷ್ಕರಿಸಿದ್ದಾರೆ. ವರ್ಧಮಾನ ಪುರಾಣದ ಸಂಪಾದಕರಿಂದ ಬಗೆಹರಿಯದುದನ್ನು ಸಮುಚಿತವಾಗಿ ಬಗೆಹರಿಸಿದ್ದಾರೆ. ಈ ಪರಿಷ್ಕರಣ ವಿಧಾನ ಗ್ರಂಥ ಸಂಪಾದನಾ ದೃಷ್ಟಿಯಿಂದ ಅನುಸರಣೀಯವಾದುದು ಎಂದು ಭಾವಿಸಬಹುದಾಗಿದೆ. ಎಂ. ವಿ. ಸೀತಾರಾಮಯ್ಯನವರ ತೀಕ್ಷ್ಣಮತಿಯನ್ನೂ ಗಮನಿಸಬಹುದಾಗಿದೆ.

"ಗ್ರಂಥ ಸಂಪಾದನೆಗೆ ತೀ.ನಂ. ಶ್ರೀಯವರ ಕೊಡುಗೆ": "ಶ್ರೀಕಂಠತೀರ್ಥ"ದಲ್ಲಿ ಪ್ರಕಟವಾಗಿರುವ ಲೇಖನ. ಇದು ಪಾಠ ಪರಿಷ್ಕರಣಕ್ಕೆ ಸಂಬಂಧಿಸಿದ ಅನೇಕ ವಿಷಯಗಳ ಮೇಲೆ ಬೆಳಕನ್ನು ಚೆಲ್ಲುವಂತಹುದು. ಡಾ|| ತೀ.ನಂ.ಶ್ರೀ ಅವರು ಅನಂತನಾಥ ಪುರಾಣ, ರಸರತ್ನಾಕರ ಕೃತಿಗಳ ಕೆಲವು ಪಾಠಗ್ರಂಥಿಗಳನ್ನು ಬಿಡಿಸಿರುವ ವಿಧಾನವನ್ನು ದೃಷ್ಟಾಂತಗಳೊಂದಿಗೆ ಸಮರ್ಥಿಸಲಾಗಿದೆ. ಹಾಗೆಯೇ ತೀ.ನಂ.ಶ್ರೀ ಅವರು ಸಂಪಾದಿಸಿರುವ ಹೆಣ್ಣುಮಕ್ಕಳ ಪದಗಳು, ನಂಬಿಯಣ್ಣನ ರಗಳೆ, ಗದಾಯುದ್ಧ ಸಂಗ್ರಹಂ ಕೃತಿಗಳ ಪರಿಷ್ಕರಣದ ಬಗ್ಗೆಯೂ ವಿವರವಾಗಿ ವಿಶ್ಲೇಷಿಸಿದ್ದಾರೆ. ಶಬ್ದಮಣಿ ದರ್ಪಣದ "ಎನಿತ್ತೆ ಸಿತ್ತಂಬುಜ ಪತ್ರನೇತ್ರಯಾ" ಎಂಬ ಪದ್ಯದ ಸರಿಯಾದ

ಪಾಠವನ್ನೂ ಅದರಿಂದಾಗುವ ಅರ್ಥಸ್ವಾರಸ್ಯವನ್ನು ವಿವರಿಸಿದ್ದಾರೆ. ಗ್ರಂಥ ಸಂಪಾದನಾ ದೃಷ್ಟಿಯಿಂದ ಇದು ಒಂದು ಬೋಧಪ್ರದವಾದ ಲೇಖನ.

ಉದಯಾದಿತ್ಯಾಲಂಕಾರದ ಒಂದು ಪದ್ಯದ ಪಾಠಪರಿಷ್ಕರಣದ ಬಗೆಗೆ ಎತ್ತಿದ್ದ ಪ್ರಶ್ನೆಗಳಿಗೆ ಸಮಂಜಸವಾದ ಉತ್ತರವನ್ನು ಅನ್ಯರು ಕೊಟ್ಟಾಗ ಪ್ರತಿಕ್ರಿಯೆ ಈ ಲೇಖನದಲ್ಲಿ ಸೂಚಿಸಲಾಗಿದೆ. ತಾವು ಗ್ರಂಥದಲ್ಲಿ ಕೊಟ್ಟಿರುವ ಪಾಠವನ್ನು ಸಾಧಾರಣವಾಗಿ ಸಮರ್ಥಿಸಿಕೊಂಡಿರುವ ಈ ಪುಟ್ಟಲೇಖನ ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆಯಲ್ಲಿ ಅಚ್ಚಾಗಿದೆ. ಸಂಪಾದಕ ಸದಾ ಎಚ್ಚರದಿಂದಿರಬೇಕು ಎಂಬುದಕ್ಕೆ ಈ ಲೇಖನ ಸಾಕ್ಷಿಯಂತಿದೆ.

ಅತ್ಯಂತ ಜನಪ್ರಿಯವಾದ ಸರ್ವಜ್ಞನ ವಚನಗಳು ಗ್ರಂಥ ಸಂಪಾದಕರಿಗೆ ಒಂದು ಸವಾಲಾಗಿ ನಿಂತಿವೆ. ಈ ವಚನಗಳ ಒಂದೊಂದು ಪರಿಷ್ಕರಣವೂ ಒಂದೊಂದು ಪಾಠವನ್ನು ಹೊಂದಿರುವುದನ್ನು ಈ ಲೇಖನದಲ್ಲಿ ಎತ್ತಿ ತೋರಿಸಲಾಗಿದೆ. ಲೋಕ ಪ್ರಸಿದ್ಧವಾದ ಸರ್ವಜ್ಞ ವಚನ: "ಸಾಲಿಗನು ಕೊಂಬಾಗ ಹಾಲೋಗರುಂಡಂತೆ। ಸಾಲಿಗನು ಬಂದು ಎಳೆವಾಗ ಕಿಬ್ಬದಿಯ। ಕೀಲು ಮುರಿದಂತೆ ಸರ್ವಜ್ಞ" ಇದಕ್ಕೆ ಇರುವ ಪಾಠಾಂತರಗಳಾದರೂ ಎಷ್ಟು! ಯಾವ ಪಾಠ ಶುದ್ಧವಾದುದು! ಸರ್ವಜ್ಞ ವಚನಗಳ ಅಂಕಿತ "ಸರ್ವಜ್ಞ" ಎಂದೋ? "ಪರಮಾರ್ಥ" ಎಂದೋ? ಇವೆಲ್ಲ ಜೀವಂತವಾದ ಪ್ರಶ್ನೆಗಳು. "ಈಗಿರುವ ರೂಪದಲ್ಲೇ ಪದ್ಯಗಳನ್ನು ಪುನರ್ಮುದ್ರಣ ಮಾಡುತ್ತ ಹೋದರೆ ಅಪಪಾಠಗಳಿಗೆ ಆಯುಷ್ಯವನ್ನು ದಾನಮಾಡಿ ಸರ್ವಜ್ಞನಿಗೆ ಅನ್ಯಾಯ ಮಾಡಿದಂತಾಗುತ್ತದೆ" ಎಂಬ ಎಂ.ವಿ.ಸೀ. ಅವರ ಹೇಳಿಕೆ ಯಥಾರ್ಥವಾದುದು. ಸರ್ವಜ್ಞ ವಚನಗಳ ಪುನಃಪರಿಷ್ಕರಣ ಅಗತ್ಯವಷ್ಟೇ ಅಲ್ಲ ಅನಿವಾರ್ಯವೂ ಹೌದು. 'ಸರ್ವಜ್ಞನ ತ್ರಿಪದಿಗಳ ಪುನಃ ಪರಿಷ್ಕರಣದ ಅಗತ್ಯ'ದ ಬಗ್ಗೆ ಇದು ಎಂ.ವಿ.ಸೀ. ಅವರ ನಿಲುವು.

ಕನ್ನಡ ಸಾಹಿತ್ಯಕ್ಕೆ ಅದರಲ್ಲೂ ಗ್ರಂಥ ಸಂಪಾದನ ಕ್ಷೇತ್ರಕ್ಕೆ ಎಂ.ವಿ. ಸೀತಾರಾಮಯ್ಯನವರ ಕೊಡುಗೆ ಗಣನೀಯವಾದುದು. ಪ್ರಾಚೀನ ಲಾಕ್ಷಣಿಕ ಗ್ರಂಥಗಳನ್ನು ಶಾಸ್ತ್ರೀಯವಾಗಿ ಸಂಪಾದಿಸಿ ವಿಸ್ತಾರವಾದ ಪೀಠಿಕೆ ಸಮಗ್ರವಾದ ಟಿಪ್ಪಣಿಗಳನ್ನು ಬರೆದಿರುವ ಎಂ.ವಿ. ಸೀತಾರಾಮಯ್ಯನವರು ತಮ್ಮ ಶಾಸ್ತ್ರನಿಷ್ಠೆ ಪ್ರತಿಭೆ ಪಾಂಡಿತ್ಯಗಳನ್ನು ಪ್ರದರ್ಶಿಸಿದ್ದಾರೆ. ಯಾವುದೊಂದು ವಾದ ವಿವಾದಗಳ ಸೋಗಿಗೆ ಸಿಕ್ಕದೆ ನಿರಂತರವಾಗಿ ನಿರಪೇಕ್ಷೆಯಿಂದ ದುಡಿಯುತ್ತಿರುವ ಪ್ರೊ॥ ಎಂ.ವಿ. ಸೀತಾರಾಮಯ್ಯನವರ ಸಾಹಿತ್ಯಸೇವೆ ಸಾರ್ಥಕವಾದುದು; ಶಾಶ್ವತವಾಗಿ ನಿಲ್ಲುವಂತಹುದು. ಅವರು ಶಾಸ್ತ್ರೀಯವಾಗಿ ಸಂಪಾದಿಸಿರುವ ಕೃತಿಗಳು ಕನ್ನಡ ವಿದ್ವತ್ ಲೋಕಕ್ಕೆ ಅಪೂರ್ವ ಕೊಡುಗೆಗಳಾಗಿವೆ.

ಗ್ರಂಥ ಸಂಪಾದನೆಗೆ ಎಂ.ವಿ.ಸೀ. ಅವರ ಕೊಡುಗೆ

ಡಾ॥ ಟಿ.ಎನ್. ನಾಗರತ್ನ

ಸಾಮಾನ್ಯವಾಗಿ 'ಹರಿದಾಸರು' ಎಂದಕೂಡಲೇ ಮಾಧ್ವ ವೈಷ್ಣವ ಪಂಗಡದ ಹರಿದಾಸರುಗಳಾದ ಪುರಂದರ, ಕನಕದಾಸರುಗಳೇ ನಮ್ಮ ಮನಸ್ಸಿಗೆ ಬರುವವರು. ಅದು ಬಿಟ್ಟರೆ ಶ್ರೀಪಾದರಾಜರು, ವ್ಯಾಸರಾಯರು, ವಾದಿರಾಜರುಗಳನ್ನು ಕೇಳಿ ಬಲ್ಲೆವು. ಈ ಒಂದು ಹರಿದಾಸ ಪರಂಪರೆಯನ್ನು ಬಿಟ್ಟು, ಅದ್ವೈತ ಪಂಗಡದವ ರಲ್ಲೂ ಇವರಂತೆಯೇ ಕೀರ್ತನೆಗಳನ್ನು ರಚಿಸಿದ 'ಹರಿದಾಸರು' ಇದ್ದಾರೆ ಎಂಬುದೂ ಅವರ ಕೀರ್ತನೆಗಳೂ ಅಪಾರ ಸಂಖ್ಯೆಯಲ್ಲಿವೆಯೆಂಬುದೂ ಹೊಸ ವಿಷಯ. ಅದ್ವೈತಕ್ಕೆ ಅವಿರೋಧವಾದ ಭಾಗವತ ಧರ್ಮಾನುಯಾಯಿಗಳಾದ ತಿಮ್ಮಪ್ಪದಾಸರು ಹಾಗೂ ಅವರ ಮಕ್ಕಳಾದ ನಾರಾಯಣದಾಸರು ರಚಿಸಿರುವ ಹಲವು ಕೀರ್ತನೆಗಳನ್ನು ಶ್ರೀ ಎಂ.ವಿ. ಸೀತಾರಾಮಯ್ಯನವರು ಸಂಪಾದಿಸಿ ಕೊಟ್ಟಿದ್ದಾರೆ. ಅವುಗಳಲ್ಲಿ ತಿಮ್ಮಪ್ಪದಾಸರ ೧೦೮ ಪೂಜಾವಿಧಾನದ ಕೀರ್ತನೆಗಳನ್ನು 'ಅರ್ಚನ' ಎಂಬ ಹೆಸರಿನಲ್ಲೂ ನಾರಾಯಣದಾಸರ ೨೭ ಕೀರ್ತನೆಗಳನ್ನು 'ಕೀರ್ತನ ಕುಸುಮಾಂಜಲಿ' ಎಂಬ ಹೆಸರಿನಲ್ಲೂ ಸಂಗ್ರಹಿಸಲಾಗಿದೆ. ಅನುಪಲ್ಲವಿ ಇಲ್ಲದಿರುವುದು ಇಲ್ಲಿಯ ಕೀರ್ತನೆಗಳಲ್ಲಿ ಗಮನಾರ್ಹವಾದ ಅಂಶ.

1. ಭಗವಂತನ ಪೂಜೆಯ ಕ್ರಮವನ್ನು ತಿಳಿಸುವ ತಿಮ್ಮಪ್ಪದಾಸರ ೧೦೮ ಕೀರ್ತನೆಗಳನ್ನು 'ಅರ್ಚನ' ಎಂಬ ಹೆಸರಿನಿಂದ ಕರೆದಿರುವುದು ಸಂಪಾದಕರ ಔಚಿತ್ಯ ಪ್ರಜ್ಞೆಯ ಸಂಕೇತವಾಗಿದೆ. ಕವಿಯ ಹೆಸರು, ಸ್ಥಳ, ಕಾಲ, ಮತ, ಧರ್ಮ, ಕೃತಿಗಳನ್ನು ಕುರಿತು ವಿವರವಾದ ವಿಶ್ಲೇಷಣೆಯನ್ನೊಳಗೊಂಡ ಕೃತಿಯ ವಿಸ್ತಾರವಾದ ಪೀಠಿಕೆಯಲ್ಲಿ ಒಬ್ಬ ಗ್ರಂಥ ಸಂಪಾದಕನಿಗಿರಬೇಕಾದ ಸತ್ಯನಿಷ್ಠೆ, ಶ್ರದ್ಧೆ, ಅಚ್ಚುಕಟ್ಟುತನಗಳು ಓದುಗರ ಮನಸ್ಸಿಗೆ ಬರುತ್ತವೆ. ಸಂಪಾದಕರು ತಾವು ಕೆಲಸಮಾಡಿರುವ ರೀತಿಯನ್ನು ಕಣ್ಣಿಗೆ ಕಟ್ಟುವಂತೆ ಬಿಚ್ಚಿಟ್ಟಿರುವುದು ಅನುಕರಣೀಯ. ಅವರೇ ಹೇಳಿಕೊಂಡಿರುವಂತೆ ಪ್ರಸ್ತುತ ಗ್ರಂಥಕ್ಕೆ (ಬಹುಶಃ) ಲೇಖಕನ ಕೈಬರಹದ ಪ್ರತಿಯೇ ಮೂಲವಾಗಿ ಸಿಕ್ಕಿರುವುದರಿಂದ ಸಂಪಾದಕರ ಹೊಣೆ ಕಡಿಮೆಯಾದರೂ, ಪ್ರಸ್ತುತ

ಗ್ರಂಥವನ್ನು ಸಿದ್ಧಪಡಿಸುವಲ್ಲಿ ಸಂಪಾದಕರು ವಹಿಸಿರುವ ಎಚ್ಚರ ಗಮನಾರ್ಹ. ಆದರೆ
ತಮಗೆ ದೊರೆತಿರುವುದು ಲೇಖಕನ ಕೈಬರಹದ ಪ್ರತಿಯೇ ಎಂದು ಸಂಪಾದಕರು ನಿರ್ಧ
ರಿಸುವಲ್ಲಿ ಅವರು ಗಮನಿಸಿ ಹೇಳಿರುವ ಕಾರಣಗಳು ಎರಡು :

(1) 'ಕ' ಮತ್ತು 'ಗ' ಪ್ರತಿಗಳು ಒಂದೇ ಕೈಬರಹದಲ್ಲಿರುವುದು.

(2) 'ಕ' ಪ್ರತಿಗಿಂತ 'ಗ' ಪ್ರತಿಯಲ್ಲಿನ ತಿದ್ದಿದ ಪಾಠಗಳು ಉತ್ತಮವಾಗಿದ್ದು
ಕ್ರಮಗೊಳಿಸಿದ 'ಕೃಷ್ಣಾಷ್ಟೋತ್ತರ ಶತನಾಮಘಟಾರ್ಕಸ್ತುಷ್ಟ್ಯ'ಗಳಿರುವುದು. ಅಂದರೆ,
ಸಂಪಾದಕರು ಈ ನಿರ್ಧಾರಕ್ಕೆ ಬರಬೇಕಾದರೆ ಮೂಲತಃ 'ಕ' ಪ್ರತಿ ಸ್ವತಃ ಕವಿಯ
ಹಸ್ತಾಕ್ಷರದಲ್ಲಿದೆ ಎಂಬುದು ಅವರಿಗೆ ಗೊತ್ತಿರಬೇಕು. 19ನೆಯ ಶ.ದ ಹಸ್ತಪ್ರತಿ
ಯಾದ್ದರಿಂದ ಕವಿಯ ಮೊಮ್ಮಕ್ಕಳೋ ಮರಿಮಕ್ಕಳೋ ಅದನ್ನು ಸಂಪಾದಕರಿಗೆ
ಸ್ಪಷ್ಟವಾಗಿ ತಿಳಿಸಿರುವ ಸಾಧ್ಯತೆಯಿದೆ. ಅಥವಾ ಕವಿಯೇ ಬರೆದಿದ್ದ ಕಾಗದ ಪತ್ರ
ಗಳಲ್ಲಿರುವ ಹಸ್ತಾಕ್ಷರದ ಪರಿಚಯ ಸಂಪಾದಕರಿಗಿರಬೇಕು. ಹಾಗಿದ್ದಲ್ಲಿ ಮಾತ್ರ
ಸಂಪಾದಕರ ಈ 'ಊಹೆ' ಸರಿಯಾಗುತ್ತದೆ. ಆದರೆ, ಪೀಠಿಕೆಯಲ್ಲಿ ಸಂಪಾದಕರು
ನಮಗೆ, ಓದುಗರಿಗೆ, ಆ ಬಗ್ಗೆ ಯಾವ ಮಾಹಿತಿಯನ್ನೂ ಕೊಟ್ಟಂತಿಲ್ಲ ಜೊತೆಗೆ 'ಕ'
ಪ್ರತಿಯಲ್ಲಿಲ್ಲದ ಅನೇಕ ಕಂದಪದ್ಯಗಳು 'ಗ' ಪ್ರತಿಯಲ್ಲಿವೆ. ಅವುಗಳನ್ನೂ ಕವಿ
ಅನಂತರ ಬರೆದು ಸೇರಿಸಿದ್ದೆ? - ಒಪ್ಪುವುದು ಕಷ್ಟ. ಮತ್ತು ಕವಿಯೇ ಎರಡು
ಪ್ರತಿಗಳನ್ನು ಬರೆದಿರುವ ವಿಷಯವೂ ಸಂದೇಹಾಸ್ಪದವಾದದ್ದೇ.

'ಕವಿಪಾಠನಿರ್ಣಯದ ಪ್ರಶ್ನೆಯೇ ಇಲ್ಲ'ದ ಈ ಸಂಪಾದಿತ ಕೃತಿಯಲ್ಲಿ ಸಂಪಾ
ದಕರು (ಕ.ಗ.) ಪ್ರತಿಗಳ ಬರವಣಿಗೆಯಲ್ಲಿ ಕಂಡುಬರುವ ಕೆಲವು ವೈಲಕ್ಷಣ್ಯಗಳನ್ನು
ಮಾತ್ರ ಪರಿಷ್ಕಾರ ಮಾಡಿರುವುದಾಗಿ ಸೂಚಿಸಿರುವರು. ಸಂಪಾದಿತ ಕೃತಿಗಳನ್ನು
ಒಟ್ಟಾಗಿ ನೋಡಿದಾಗ ಶಬ್ದಗಳ ದೃಷ್ಟಿಯಿಂದ, ಅರ್ಥದ ದೃಷ್ಟಿಯಿಂದ, ಬಂಧದ
ದೃಷ್ಟಿಯಿಂದ ಕೃತಿಗಳು ತುಂಬ ಅಚ್ಚುಕಟ್ಟಾಗಿವೆ. ಆದರೆ ಕೆಲವು ಸೂಚನೆಗಳು,
ಸಂಕೇತಗಳ ನಿರ್ದೇಶನದಲ್ಲಿ ನಿರ್ದುಷ್ಟತೆ ಕಂಡುಬರುತ್ತಿಲ್ಲ. ಮೊದಲನೆಯದಾಗಿ,
ರಾಗ-ತಾಳಗಳ ನಿರ್ದೇಶನಕ್ಕೆ ಸಂಬಂಧಿಸಿದಂತೆ, ಸಂಪಾದಕೀಯ ತಿದ್ದುಪಾಟುಗಳನ್ನು
ಚೌಕಕಂಸಗಳಲ್ಲಿ ನಿರ್ದೇಶಿಸುವುದು ಸಾಮಾನ್ಯ ಕ್ರಮ. ಇಲ್ಲಿ ಅವು ಸಾಮಾನ್ಯ
ಕಂಸಗಳಲ್ಲಿವೆ. (ಕೀರ್ತನ ಕುಸುಮಾಂಜಲಿಯಲ್ಲಿ ಚೌಕಕಂಸಗಳನ್ನೇ ಬಳಸಲಾಗಿದೆ.)
ಎರಡನೆಯದಾಗಿ, ಸಂಪಾದಕರು ಮೊದಲೇ ಹೇಳಿರುವಂತೆ (ಪೀಠಿಕೆ.
ಪು. *xxiii* ರಲ್ಲಿ) ರಾಗ, ತಾಳ ನಿರ್ದೇಶಗಳು ಹಸ್ತಪ್ರತಿಯಲ್ಲಿ ಇಲ್ಲದ ಕಡೆಗಳಲ್ಲಿ
ಸಂಗೀತವಿದ್ವಾಂಸರ ಸಲಹೆ ಪಡೆದು ಕಂಸಗಳಲ್ಲಿ ಸೂಚಿಸಲಾಗಿದೆ. ಆದರೆ, ಕೀ.
ಪು. ೧೬ ರಲ್ಲಿ ರಾಗ॥ (ನಾಟಿ)* ಎಂದಿದ್ದು, ಅದೇ ಪುಟದ ಅಡಿ ಟಿಪ್ಪಣಿಯಲ್ಲಿ ('ಕ'
ಪ್ರತಿಯಲ್ಲಿ ಮಾತ್ರ ರಾಗ ನಿರ್ದೇಶ) ಎಂದಿದೆ. ಅಂದರೆ 'ನಾಟಿ' ಎಂಬುದ 'ಕ'

ಪ್ರತಿಯ ರಾಗ ನಿರ್ದೇಶವೋ ಅಥವಾ ಕಂಸಗಳಲ್ಲಿರುವುದರಿಂದ ಸಂಗೀತ ವಿದ್ವಾಂಸರ ನಿರ್ದೇಶವೋ ಸ್ಪಷ್ಟವಾಗುತ್ತಿಲ್ಲ. ಅಂತೆಯೆ ಕೀ. ೧೯, ಪು. ೩೩ರಲ್ಲೂ ಗಮನಿಸ ಬಹುದು.

ಹಾಗೆಯೇ ಪು. ೨೩, ೫೨ ಇತ್ಯಾದಿಗಳಲ್ಲಿ ಚೌಕ ಕಂಸಗಳಲ್ಲಿರುವ [ಈ],[ಇ], [ಗೆ], [ಡೆ] ಇವುಗಳಿಗೆ ಬದಲಾಗಿ ಹಸ್ತಪ್ರತಿಯಲ್ಲಿ ಯಾವ ಅಕ್ಷರಗಳಿವೆ? ಅಥವಾ ಈ ಅಕ್ಷರಗಳು ಮೂಲಪ್ರತಿಗಳಲ್ಲಿ ಇಲ್ಲವೇ ಇಲ್ಲವೋ – ಅನುಮಾನ ಬರುತ್ತದೆ.

ಪುಟ ೪೫ರ ಪಡೆ– ಪಡ್ಡೆ, ೪೭ರ ಶ್ರು—ಶೃ, ೮೧ರ ಜ್ರಂ- ಜ್ರುಂ ಈ ಲಿಪಿ ಸ್ಖಾಲಿತ್ಯಗಳನ್ನು ಪಾಠಾಂತರಗಳೆಂದು ಅಡಿಯಲ್ಲಿಕೊಡುವ ಅಗತ್ಯವಿರಲಿಲ್ಲ. ಕೀ. ೭೦, ಪು. ೯೫ರ ೨ನೇ ನುಡಿಯ ೧[ಯ]೧ ಎಂಬುದಕ್ಕೆ ಅಡಿಟಿಪ್ಪಣಿಯಲ್ಲಿ 'ಯ (ಕ.ಗ)' ಎಂದೇ ಪಾಠವನ್ನು ತೋರಿಸಲಾಗಿದೆ. ಅಂತೆಯೇ ತಾಳದ ಹೆಸರನ್ನು ಸೂಚಿಸುವಲ್ಲಿ 'ಜಂಪೆ' (ಪು.೧೦೪), 'ಝಂಪೆ' ಎರಡು ರೂಪಗಳನ್ನೂ ಸ್ವೀಕರಿಸ ಲಾಗಿದೆ. ರಾಗದ ಸೂಚನೆಯಲ್ಲಿ 'ಕಾಂಬೋದಿ' (ಪು. ೧೪೬, ೧೪೯), 'ಕಾಂಭೋಜಿ' ಎರಡು ರೂಪಗಳನ್ನೂ ಕಾಣುತ್ತೇವೆ. ಇವುಗಳಲ್ಲಿ ಒಂದೊಂದು ರೂಪವನ್ನು ನಿಯತವಾಗಿ ಬಳಸಬಹುದಾಗಿತ್ತು,

ಪು. ೧೪೭ರ ಅಡಿಟಿಪ್ಪಣಿಯಲ್ಲಿನ ವಿಶೇಷ ಟಿಪ್ಪಣಿಯನ್ನು ಗ್ರಂಥದ ಪ್ರಾರಂಭ ದಲ್ಲೇ ಕೊಟ್ಟಿದ್ದಿದ್ದರೆ ಇಷ್ಟೊಂದು ಸಂಖ್ಯೆಯಲ್ಲಿ ಪಾಠಾಂತರಗಳನ್ನು ಸೂಚಿಸಬೇ ಕಾಗುತ್ತಿರಲಿಲ್ಲ.

ತಿಮ್ಮಪ್ಪದಾಸರ ಜ್ಯೇಷ್ಠಪುತ್ರರಾದ ನಾರಾಯಣದಾಸರು ರಚಿಸಿರುವ ೩೭ ಕೀರ್ತನೆಗಳನ್ನು ಸಂಪಾದಿಸಿ 'ಕೀರ್ತನ ಕುಸುಮಾಂಜಲಿ' ಎಂಬ ಹೆಸರಿನಿಂದ ಅಚ್ಚು ಮಾಡಲಾಗಿದೆ. ಇಲ್ಲಿಯೂ ಸಂಪಾದಕರು ನಾರಾಯಣದಾಸರ ಸ್ವಹಸ್ತಾಕ್ಷರ ದಲ್ಲಿಯೇ ಈ ೩೭ ಕೀರ್ತನೆಗಳೂ ಲಿಖಿತವಾಗಿವೆಯೆಂದು ಅಭಿಪ್ರಾಯ ಪಟ್ಟಿದ್ದಾರೆ. ಆದರೆ ಕವಿಯ ಸ್ವಹಸ್ತಾಕ್ಷರ ಪ್ರತಿಯೇ ಅಂದೆಂಬುದು ತಮಗೆ ಯಾವ ಮೂಲದಿಂದ ಖಾತ್ರಿಯಾಯಿತೆನ್ನುವುದನ್ನು ಅವರು ಓದುಗರಿಗೆ ತಿಳಿಸಿಲ್ಲ.

ಪ್ರಸ್ತುತ ಹಸ್ತಪ್ರತಿ ಏಕೈಕ ಹಸ್ತಪ್ರತಿಯಾದ್ದರಿಂದ ಪಾಠಾಂತರಗಳು ಯಾವುವೂ ಇಲ್ಲವಾದರೂ ಆ ಕಾಲದ ಬರವಣಿಗೆಯಲ್ಲಿ ಕಾಣುವ ವೈಲಕ್ಷಣ್ಯಗಳನ್ನು ಪೀಠಿಕೆಯಲ್ಲಿ (ಪು. *vi*) ಪಟ್ಟಿ ಮಾಡಿಕೊಡಲಾಗಿದೆ. ಮತ್ತು 'ಇಂಥ ಎಲ್ಲ ವೈಲಕ್ಷಣ್ಯಗಳನ್ನೂ ಸರಿಪಡಿಸಿ, ಕೀರ್ತನೆಗಳನ್ನು ಪ್ರತಿಮಾಡಲಾಗಿದೆ. ಇಂಥ ಸರಿಪಡಿಕೆಗಳನ್ನು ಅಡಿ ಟಿಪ್ಪಣಿಯಲ್ಲಿ ಕಾಣಿಸಿಲ್ಲ; ಗಮನಾರ್ಹವಾದ ತಿದ್ದುಪಾಟುಗಳ ಸಂಬಂಧದಲ್ಲಿ ಮೂಲ ಪಾಠವನ್ನು ಪುಟದಡಿಯಲ್ಲಿ ಕಾಣಿಸಿದೆ' (ಪು. *vii*) ಎಂದು ಪೀಠಿಕೆಯಲ್ಲೇ ಸ್ಪಷ್ಟವಾಗಿ ಸೂಚಿಸಿದ್ದರೂ ಪುನಃ ಯು-ಎ, ಯುಂ-ಎಂ, ಯಿಂ-ಇಂ, ಧರಣೀಜಾ-ಧರಣಿಜಾ –

ಇಂತಹ ತಿದ್ದುಪಡಿಗಳನ್ನು ಅಡಿಟಿಪ್ಪಣಿಗಳಲ್ಲಿ ಸೂಚಿಸಿರುವ ಔಚಿತ್ಯ ತಿಳಿಯಲಿಲ್ಲ; ಮತ್ತು ಎಲ್ಲ ಪುಟದ ಅಡಿಯಲ್ಲೂ ಕಂಸಗಳಲ್ಲಿ (ಮೂ.ಪಾ.) ಎಂಬ ಸೂಚನೆಯ ಅಗತ್ಯವಿರಲಿಲ್ಲ. ಕೆಲವು ಕಡೆಗಳಲ್ಲಿ ಅಕ್ಷರ ಸ್ಖಾಲಿತ್ಯಗಳಿಗೂ ಪಾಠಾಂತರಗಳ ಬೆಲೆಯನ್ನು ಕೊಡಲಾಗಿದೆ. – ಪು.೨೦೮ [ಹೆಸರ]-ಪ್ಯಸರ [ಸೆಳೆದು]-ಶಳದೂ. ಪು.೩೦೮ ಕಾಮನಯ್ಯ-ಕಾಮನ್ನೈಯ್ಯ-ಇತ್ಯಾದಿ.

೧೭ನೆಯ ಪುಟದಲ್ಲಿ ಮೂಲದಲ್ಲಿಲ್ಲದ ಪಾಠದ ಸೇರ್ಪಡೆಯನ್ನು ಸೂಚಿಸಲು ಬಳಸಿರುವ ಚೌಕಕಂಸಗಳನ್ನು ಅಲ್ಲಿಂದಾಚೆಗೆ ಪಾಠವ್ಯತ್ಯಾಸದ ಸೂಚನೆಗೇ ಬಳಸಿರುವಂತಿದೆ. ಈ ಪುಸ್ತಕದಲ್ಲಿಯೂ 'ಕಾಂಬೋದಿ' (ಕೀ.೮) 'ಕಾಂಭೋದಿ' (ಕೀ.೨೩) ಎರಡು ರೂಪಗಳ ಬಳಕೆಯೂ ಇದೆ.

ಇಂತಹ ಕೆಲವು ಸಣ್ಣಪುಟ್ಟ ಅರೆ-ಕೊರೆಗಳನ್ನು ಬಿಟ್ಟರೆ ಸಂಪಾದಕರು ತಮ್ಮ ಕೆಲಸವನ್ನು ತುಂಬ ಅಚ್ಚುಕಟ್ಟಾಗಿ, ಶ್ರದ್ಧೆಯಿಂದ ನಿರ್ವಹಿಸಿದ್ದಾರೆ.

ಗ್ರಂಥಗಳಲ್ಲಿ ಅನುಬಂಧಗಳು ಓದುಗರಿಗೆ ತುಂಬ ಸಹಾಯಕವಾಗಿವೆ. ಒಂದು ಸಂಪಾದಿತ ಕೃತಿಯ ಟಿಪ್ಪಣಿ ಹೇಗಿರಬೇಕು ಎನ್ನುವುದಕ್ಕೆ ಇಲ್ಲಿನ ಟಿಪ್ಪಣಿಗಳು ಮಾದರಿಯಾಗಿವೆ. ಆದರೆ, ಕೀ. ೧೩೮ (ಅರ್ಜುನ) ಟಿಪ್ಪಣಿಯಲ್ಲಿ (೧೩-೪)'ಅರ್ಘ್ಯ' ಎಂಬ ಮಾತಿಗೆ, ಸಂದರ್ಭಾನುಸಾರವಾಗಿ 'ದೇವರಿಗೆ, ಪೂಜ್ಯರಿಗೆ ಕೈತೊಳೆಯಲು ಕೊಡುವ ನೀರು' ಎನ್ನುವ ಅರ್ಥ ಗ್ರಾಹ್ಯವೆನ್ನಿಸುತ್ತದೆ. ಅಂತೆಯೇ ಕೀ. ೯೧೮ ಟಿಪ್ಪಣಿಯನ್ನು ಗಮನಿಸಿದಲ್ಲಿ ಸಂಪಾದಕರು ಪೌರಾಣಿಕ ಬುದ್ಧನೂ ಚಾರಿತ್ರಿಕ ಬುದ್ಧನೂ ಒಂದೇ ಎಂದು ಭಾವಿಸಿದಂತಿದೆ. ಪೌರಾಣಿಕ ಬುದ್ಧನು ಅಸುರರ ವೈದಿಕ ಶ್ರದ್ಧೆಯನ್ನು ನಾಶಮಾಡಿ ಅವರಿಗ ಪಾಷಂಡ ಧರ್ಮವನ್ನು ಉಪದೇಶಿಸುವ ಸಲುವಾಗಿ ಕೀಟಕದೇಶದಲ್ಲಿ ಜಿನಪುತ್ರನಾಗಿ ಹುಟ್ಟುವನು. (ಭಾಗವತ: ಸ್ಕಂ. ೧ – ಅ.೩; ಸ್ಕಂ. ೨ – ಅ. ೭) ಚಾರಿತ್ರಿಕಬುದ್ಧನು ಕಪಿಲ ವಸ್ತುವಿನ ಶುದ್ಧೋದನ ಮಹಾರಾಜನ ಪುತ್ರ. ಜನರ ಕಷ್ಟ ಕಾರ್ಪಣ್ಯ, ರೋಗರುಜಿನಗಳ ಪರಿಹಾರಮಾರ್ಗವನ್ನು ಹುಡುಕಿ ಹೊರಟವನು. ಬಹುಶಃ ತ್ರಿಪುರಾಸುರರ ಹೆಂಡತಿಯರ ಪತಿವ್ರತಾ ನಿಯಮಗಳನ್ನು ಭಂಗಪಡಿಸಲು ವಿಷ್ಣು ಬೌದ್ಧಾವತಾರದಲ್ಲಿ ಬೆತ್ತಲೆಯಾಗಿ ಅವರಿಗೆ ಕಾಣಿಸಿಕೊಂಡನೆಂಬುದು ವಿಷ್ಣುಪಂಥೀಯರ ಒಂದು ನಂಬಿಕೆ. ಆ ಮೂಲಕ ತ್ರಿಪುರಾಸುರರ ಶಕ್ತಿಯನ್ನು ಕುಂದಿಸುವುದೇ ಇಲ್ಲಿ ವಿಷ್ಣುವಿನ ಮೂಲ ಉದ್ದೇಶ. ಮಾಧ್ವ, ವೈಷ್ಣವ ಪರಿದಾಸರಲ್ಲಿ ಮೇಲಿಂದ ಮೇಲೆ ಈ ವಿಷಯದ ಪ್ರಸ್ತಾಪವಿದೆ: ಸಂಪಾದಕರು ಟಿಪ್ಪಣಿಯಲ್ಲಿ ಉದ್ಧೃತ ಸಂದರ್ಭಗಳಿಗೆ ಆಕರಗ್ರಂಥಗಳನ್ನು ಉದಾಹರಿಸಿ ಅರ್ಥವನ್ನು ಸ್ಪಷ್ಟಪಡಿಸಿರುವರೀತಿ ಅನುಕರಣೀಯ. ಇದುವರೆಗೂ ಕತ್ತಲಲ್ಲಿದ್ದ ಈ 135 ಕೀರ್ತನೆಗಳನ್ನು ಅಚ್ಚುಕಟ್ಟಾಗಿ ಸಂಪಾದಿಸಿಕೊಟ್ಟಿರುವ ಶ್ರೀ ಎಂ. ಪಿ. ಸೀತಾರಾಮಯ್ಯನವರು ನಿಜಕ್ಕೂ ಅಭಿನಂದನಾರ್ಹರು.

ಕನ್ನಡ ಛಂದಸ್ಸು: ಎಂ.ವಿ.ಸೀ. ಅವರ ಶೋಧನೆಗಳು

ಡಾ॥ ಟಿ. ವಿ. ವೆಂಕಟಾಚಲ ಶಾಸ್ತ್ರೀ

ಶ್ರೀಮಾನ್ ಎಂ. ವಿ. ಸೀತಾರಾಮಯ್ಯನವರು, ಕನ್ನಡ ಭಾಷೆಯ ಶಾಸ್ತ್ರ ಸಾಹಿತ್ಯದ ಶೋಧನೆ ಬೆಳವಣಿಗೆಗಳಲ್ಲಿ ಬಹುವಾಗಿ ಆಸಕ್ತಿವಹಿಸಿ, ಪರಿಶ್ರಮಪಡುತ್ತಿರುವವರು ; ಅಗ್ರಪಂಕ್ತಿಯಲ್ಲಿರುವವರು. ಅವರು ಈ ದಿಕ್ಕಿನಲ್ಲಿ ಕೆಲಸಮಾಡಿ ಬರೆದಿರುವ ಲೇಖನಗಳೂ ಗ್ರಂಥಗಳೂ ವಿದ್ವಾಂಸರ ಗಮನ ಸೆಳೆಯದಿರುವುದು ಸಾಧ್ಯವಿಲ್ಲ ಎನ್ನುವುದೇ ಅವರ ಪರಿಶ್ರಮಕ್ಕೆ ಸಾಕ್ಷ್ಯ ಎನ್ನಬಹುದು. ಕನ್ನಡ ಛಂದಸ್ಸಿನ ಕ್ಷೇತ್ರದಲ್ಲಿ ಅವರ ಸಾಧನೆಗಳನ್ನು ಗುರುತಿಸುವುದು ಈ ಲೇಖನದ ಉದ್ದೇಶವಾಗಿದೆ.

ಎಂ.ವಿ.ಸೀ. ಅವರ ಛಂದೋವಿಷಯಕವಾದ ಮುಖ್ಯ ಲೇಖನಗಳು ಎಂದರೆ : (*i*) ಕನ್ನಡ ಹಾಡಿನ ವಿಕಾಸ ಮತ್ತು ಲಯಸ್ವರೂಪ ('ಚಿನ್ನದ ಬೆಳಸು' ಕನ್ನಡ ಸಾಹಿತ್ಯ ಪರಿಷತ್ತು, 1970). (*ii*) ಪಳೆಯ ಸ್ವರೂಪ ('ಚಿಂತನಾ', ಕನ್ನಡ ಸಂಘ, ಆರ್. ಸಿ. ವಾಣಿಜ್ಯ ಕಾಲೇಜು, ಬೆಂಗಳೂರು 1971-72) (*iii*) ಉದ್ದಂಡ ಷಟ್ಪದಿಯ ಸಮಸ್ಯೆ (ಪ್ರಬುದ್ಧ ಕರ್ನಾಟಕ, 54-1, 1972). (*iv*) ರಾಘವಾಂಕನು ಷಟ್ಪದಿಯ ನಿರ್ಮಾಪಕನೆ ? ('ಜೇಕ್ಕಿ ಶಾರದೆ', ಶಾರದಾಮಂದಿರ, ಮೈಸೂರು, 1973) (*v*) ಛಂದಸ್ಸು ('ಶಾಸ್ತ್ರ ಸಾಹಿತ್ಯ', ಬೆಂಗಳೂರು ವಿಶ್ವವಿದ್ಯಾಲಯ. 1975, ಪು. 111-49) (*vi*) ಗೀತಿಕೆ, ಮದನವತಿ, ಅಕ್ಕರಿಕೆ, ಚೌಪದಿ (ಗೆ), ಉತ್ಸಾಹ, ಛಂದೋವತಂಸ : ಲಕ್ಷಣ, ಪ್ರಯೋಗ (ಕನ್ನಡ ಅಧ್ಯಯನ ಸಂಸ್ಥೆಯ ಕನ್ನಡ ಛಂದಸ್ಸಿನ ಚರಿತ್ರೆ', ಸಂಪುಟ 2, ಮೈಸೂರು ವಿಶ್ವವಿದ್ಯಾನಿಲಯ, 1980).

ಈ ಪಟ್ಟಿ ಪ್ರಾಯಶಃ ಅಸಮಗ್ರವಾದ್ದು. ಮೇಲಿನ ಪಟ್ಟಿಯಂತೆ ನೋಡಿದರೆ, ಅವರಿಂದ ವಿಶೇಷ ಪರಿಶೀಲನೆಗೆ ಒಳಗಾಗಿರುವುದು ಎಂದರೆ, ಅಚ್ಚಕನ್ನಡ ಛಂದಸ್ಸು ಯಮತ್ತು ಮಾತ್ರಾ ಛಂದಸ್ಸು. ಛಂದೋಗ್ರಂಥಗಳ ಪರಿಚಯ, ಛಂದಸ್ಸಿನ ಸಾಮಾನ್ಯ ಸ್ವರೂಪ, ಬಿಡಿಮಟ್ಟುಗಳ ಲಕ್ಷಣ ಮತ್ತು ಪ್ರಯೋಗ ಇವುಗಳ ಒಟ್ಟು ವಿವೇಚನೆ ಕೆಲ್ಲಿ ಪರಿಚಯದ ಭಾಗವಿದೆ; ಕುತೂಹಲಕರ ಸಮಸ್ಯೆಗಳ ವಿಶ್ಲೇಷಣೆಯ ಭಾಗವೂ ಇದೆ. ಛಂದಸ್ಸಿನ ವಿವಿಧಮುಖಗಳ ವ್ಯಾಪಕವಾದ ಅಧ್ಯಯನ ಇಲ್ಲಿ ವಿಷಯವಾಗಿ ಇರದಿದ್ದರೂ, ಕಾಡುತ್ತಿರುವ ಸಮಸ್ಯೆಗಳನ್ನು ಬೆದಕಿ ಬಿಡಿಸುವ ಪ್ರಾಮಾಣಿಕವಾದ

ಪ್ರಯತ್ನವಂತೂ ಸ್ಫುಟವಾಗಿ ತೋರಿದೆ. ಆ ಪ್ರಯತ್ನದ ಸ್ವರೂಪ, ಸೋಲು ಗೆಲವುಗಳನ್ನು ಮುಂದೆ ನೋಡೋಣ.

ಮೊದಲ ಲೇಖನ, ಕನ್ನಡ ಹಾಡಿನ ವಿಕಾಸ ಮತ್ತು ಲಯಸ್ವರೂಪ ಎಂಬುದಾಗಿದೆ. ಇದೊಂದು ವಿಚಾರ ಪ್ರಚೋದಕವಾದ ಲೇಖನ. ಇದರಲ್ಲಿ "ಪ್ರಾಚೀನ ಕಾಲದಿಂದ ಇಂದಿನವರೆಗೆ ಕನ್ನಡ ಕಾವ್ಯದ ದೇಸೀ ಛಂದಸ್ಸಿನ ಪ್ರಕಾರಗಳು ಕನ್ನಡ ಹಾಡಿನ ಸ್ವರೂಪವನ್ನು ನಿರ್ಧರಿಸಿ, ಬಹುಶಃ ಕರ್ನಾಟಕ ಸಂಗೀತಕ್ಕೆ ಹೇಗೆ ಆಧಾರಭೂತವಾಗಿವೆ" ಎಂಬುದರ ವಿವೇಚನೆ ನಡೆಸಿದೆ. ಈ ವಿವೇಚನೆಯ ಫಲವಾಗಿ ಅವರ ಸೂಚನೆಗಳು ಬಹುಮಟ್ಟಿಗೆ ಈ ಪ್ರಕಾರವಾಗಿವೆ: (1) ಕನ್ನಡ ಗೇಯಪರಂಪರೆ ಹರಿದಾಸ ಸಾಹಿತ್ಯಕ್ಕಿಂತ ಎಷ್ಟೋ ಹಿಂದಿನದು. ಅದು ರೂಪುಗೊಳ್ಳುವಲ್ಲಿ ದೇಸಿ ಮಟ್ಟುಗಳಾದ ಏಳೆ ತ್ರಿಪದಿ ಷಟ್ಪದಿ ಚೌಪದಿ ಮೊದಲಾದುವು ವಹಿಸಿರುವ ಪಾತ್ರ ಗಣ್ಯವಾದುದು. (2) ಪ್ರಾಚೀನವಾದ ಕನ್ನಡ ಸಂಸ್ಕೃತ ಲಕ್ಷಣಗ್ರಂಥಗಳಲ್ಲಿ ನಿರೂಪಿತವಾಗಿರುವ ಅಂಥ ಕೆಲವು ಮಟ್ಟುಗಳ ಛಂದೋರೂಪಗಳನ್ನು, ಹಾಗೆಯೇ ಆ ಮಟ್ಟುಗಳ 'ಪ್ರಬಂಧ'ಗಳೆಂದಿರುವ ಗೇಯರೂಪಗಳನ್ನು ಪರಿಶೀಲಿಸಿದರೆ ಮೇಲೆ ಹೇಳಿದಂತೆ ತಿಳಿಯಲು ಅವಕಾಶವಾಗುತ್ತದೆ. (3) 'ಕವಿರಾಜಮಾರ್ಗ'ದಲ್ಲಿ ಹೇಳಿರುವ ಚತ್ತಾಣ ಬೆದಂಡೆಗಳೆಂಬ ಕಾವ್ಯಪ್ರಕಾರಗಳೂ 'ಕಾವ್ಯಾವಲೋಕನ'ದಲ್ಲಿ ಹೇಳಿರುವ ಪದ, ಮೆಲ್ವಾಡು, ಪಾಡು ಎಂಬುವೂ ಪಾಡುಗಬ್ಬ, ಬೆದಂಡೆಗಬ್ಬಗಳೆಂಬುವೂ ಹಾಡುಗಬ್ಬವನ್ನು ಸೂಚಿಸುವ ವರ್ಣಕವೆಂಬುದೂ ಪ್ರಾಚೀನ ಗೇಯರೂಪಗಳನ್ನು ಸೂಚಿಸುತ್ತವೆ. (4) ಜೈನಪುರಾಣಗಳ 'ಏಕ್ಕಲಗಾಣ' ಯಕ್ಷಗಾನಕ್ಕೆ ಸಂಬಂಧಿಸಿದ ಮಾತು. ಈಚಿನ ಕಾಲದ ಯಕ್ಷಗಾನಗಳ ಗೇಯವಾದ ದೇಸಿ ಛಂದಸ್ಸಿನ ಪದ್ಯಪ್ರಕಾರಗಳು ಅದನ್ನು ಸಮರ್ಥಿಸುತ್ತವೆ. (5) ತಮಿಳು ಕುಱಳ್‌ವೆಣ್ಬಾ, ತೆಲುಗು ಯಾಲಪದ, ಕನ್ನಡ ಏಳೆ, ಸಂಸ್ಕೃತ ವಿಲಾಭೇದಗಳು ಒಟ್ಟಿಗೆ ಹೋಲಿಸಬಹುದಾದವು. ಇವುಗಳಲ್ಲಿ ಕನ್ನಡ ಏಳೆ ಹಳಗಾಲದ ಜಾನಪದ ಹಾಡಿನ ಮಟ್ಟು. (6) ವರ್ಣ, ವರ್ಣಕ, ವರ್ಣಮಟ್ಟು, ಪದ, ಗೀತ ಇವೆಲ್ಲ ಗೇಯವಾದ್ದನ್ನು ಹೇಳುವ ಮಾತುಗಳು. (7) ಶಿವಶರಣರೂ ಹರಿದಾಸರೂ ಅಂಶ ಮತ್ತು ಮಾತ್ರಾಗಣಗಳನ್ನು ಬಳಸಿದ ಗೇಯಪದ್ಯಗಳನ್ನು ರೂಪಿಸಿದರು. ತಾಳ ಲಯಗಳಲ್ಲಿ ಇವನ್ನು ಹಾಡಬಹುದು. ಇಂದಿನ ಭಾವಗೀತೆಗಳೂ ಗೀತರೂಪಕಗಳೊಳಗಿನ ಗೀತಗಳೂ ಸಹ ಹೀಗೆಯೇ ಪರಂಪರೆಯ ಮುನ್ನಡೆಯೇ ಆಗಿದೆ.

ಹೀಗೆ ಎಂ.ವಿ.ಸೀ. ನಿರೂಪಿಸಿ, ಕನ್ನಡ ಛಂದಸ್ಸು ಹಾಗೂ ಕನ್ನಡ ಹಾಡಿನ ಮಟ್ಟುಗಳ ಲಯ ಒಂದೇ ಎಂಬ ನಿರ್ಣಯಕ್ಕೆ ಮುಟ್ಟಿ, ಇನ್ನೂ ಸಂಶೋಧನೆ ನಡೆಯಬೇಕೆಂದು ಸಲಹೆ ಮಾಡಿದ್ದಾರೆ. ಈ ಮೇಲಿನ ಅಂಶಗಳಲ್ಲಿ, ಕನ್ನಡ

ಛಂಧಸ್ಸು, ಹಾಡು ಎಂಬುವನ್ನು 'ಕರ್ನಾಟಕ ಸಂಗೀತ' ಎಂಬುದರಿಂದ ಬೇರೆಯಾಗಿ ಕ್ಷೇಮವಾಗಿ ಬೇರ್ಪಡಿಸಿಕೊಂಡು, ಆ ಕನ್ನಡ ಛಂದಸ್ಸು, ಹಾಡು ಎಂಬವಕ್ಕೆ ಸು. 8–9 ನೆಯ ಶತಮಾನಗಳಿಂದ ತೊಡಗಿ ಒಂದು ಅವ್ಯವಚ್ಛಿನ್ನ ಪರಂಪರೆಯಿದೆಯೆಂಬುದನ್ನು ಲಕ್ಷಣ ಮತ್ತು ಕಾವ್ಯಗ್ರಂಥಗಳ ಆಧಾರಗಳಿಂದ ವಿಶದ ಪಡಿಸಲು ಯತ್ನಿಸಿರುವುದು ಕಾಣುತ್ತದೆ. "ಕನ್ನಡ ಕಾವ್ಯದ ಛಂದಸ್ಸೇ ಕನ್ನಡ ಹಾಡಿನ ಲಯಕ್ಕೆ ನಿರ್ಧಾರಕಸೂತ್ರವಾಗಿದೆ" ಎಂಬುದನ್ನು ಇಲ್ಲಿ ಯಶಸ್ವಿಯಾಗಿ ಸಿದ್ಧಪಡಿಸಿದ್ದರೂ, "ಸಂಗೀತದ ತಾಳವೈವಿಧ್ಯಕ್ಕೆ ಜನ್ಮಕೊಟ್ಟಿದೆ" ಎಂಬುದನ್ನು ಅವರಿಗೆ ಸಮರ್ಥವಾಗಿ ಪ್ರತಿಪಾದಿಸಲು ಸಾಧ್ಯವಾಗಿದೆಯೆಂದು ತೋರುವುದಿಲ್ಲ; ಆದರೆ ಈ ಸೂಚನೆಯನ್ನೆತ್ತಿಕೊಂಡು ಗೇಯವಿದರಾದ ವಿದ್ವಾಂಸರು ವಿಚಾರ ವಿಮರ್ಶೆಯನ್ನು ನಡೆಸುವುದರಿಂದ ಪ್ರಯೋಜನವಿದೆಯೆಂದು ತೋರುತ್ತದೆ. "ಕರ್ನಾಟಕ ಸಂಗೀತದ ಕೃತಿರೂಪದಲ್ಲಿ ಕಾಣುವ ಪಲ್ಲವಿ, ಚರಣ, ತಾಳ, ಯತಿ, ಪ್ರಾಸಾನುಪ್ರಾಸ ಮುಂತಾದ ಲಕ್ಷಣಗಳೆಲ್ಲ ಕನ್ನಡ ಗೇಯರೂಪದ ಬಳುವಳಿ ಎಂದು ಖಂಡಿತವಾಗಿ ಹೇಳಲಾಗದಿದ್ದರೂ ಅದರ ಬೆಳವಣಿಗೆಯಲ್ಲಿ ಗೋಚರಿಸುತ್ತವೆ" ಎಂಬುದನ್ನು ಸಹ, ಅವರೇ ಭಾವಿಸಿರುವಂತೆ ಇನ್ನೂ ಸ್ಪಷ್ಟಪಡಿಸಬೇಕಾಗಿದೆ.

ಏಳೆ–ವಿಲಾಗಳ ಪರಸ್ಪರ ಸಂಬಂಧ ವಿಸಂಬಂಧಗಳು ಈಗ ತಿಳಿದಿರುವಂತೆ ಅಲ್ಲದೆ ಇನ್ನೂ ಗಾಢತೋಲನೆಯಿಂದ ನಿರ್ಣಯವಾಗಬೇಕಾಗಿದೆ. 'ಬೃಹದ್ದೇಶಿ'ಯ ಪ್ರಬಂಧಾಧ್ಯಾಯದಲ್ಲಿ ಪ್ರಶ್ನೋತ್ತರ ಸಂವಾದಶೈಲಿಯ 'ಶುಕಸಾರಿತ', 'ಶುಕಶಾರಿಕ'ಗಳ ಲಕ್ಷಣವನ್ನೆತ್ತಿ ಏಳೆಯ ಲಕ್ಷ್ಯಪದ್ಯಗಳೊಂದಿಗೆ ಅದನ್ನು ಹೋಲಿಸಿರುವುದೂ ಎರಡು ಸಾಲಿನ ಏಳೆ ಕರ್ನಾಟಕ ಸಂಗೀತ ಕೃತಿಯ ಪಲ್ಲವಿಯಾಗಿ ರೂಪಾಂತರಗೊಂಡಿರಬಹುದೇ ಎಂದು ತರ್ಕಿಸಿರುವುದೂ ಎಂ.ವಿ.ಸೀ. ಯವರ ಶ್ಲಾಘ್ಯವಾದ ಸೂಚನೆಗಳಾಗಿವೆ. ಈ ಹಿಂದೆಯೇ ಬಿ. ರಾಮಸ್ವಾಮಿಗಳು ಸಹ "ಹರಿದಾಸರ ಅನೇಕ ಕೃತಿಗಳಲ್ಲಿ ಪಲ್ಲವಿಗಳು ಏಳೆಗಳು, ಚರಣಗಳು ಏಳೆಯ ವಿಸ್ತೃತರೂಪಗಳು" ಎಂದು ತರ್ಕಿಸಿದ್ದನ್ನು (ತಾವರೆ, ಉಸ್ಮಾನಿಯ ವಿ.ವಿ.ದ. ಕನ್ನಡ ವಾರ್ಷಿಕ, 1961, ಪು. 43) ಇಲ್ಲಿ ನೆನೆಯಬಹುದು. ಇಷ್ಟಾಗಿ "ಮುಕ್ತಛಂದಸ್ಸು ಕನ್ನಡ ಹಾಡಿನ ಮುಂದುವರಿಕೆಗೆ ವಿರುದ್ಧ ಶಕ್ತಿಯಾಗಿ ಪರಿಣಮಿಸೀತು ಎಂಬ ಶಂಕೆಗೆ ಕಾರಣವಿಲ್ಲವೆಂದು ತೋರುತ್ತದೆ. ವಚನಸಾಹಿತ್ಯದ ಪ್ರಕಾರ ದಾಸರ ಪದಗಳ ಬೆಳವಣಿಗೆಯನ್ನು ತಡೆಯಲಿಲ್ಲ" ಎಂಬ ಇನ್ನೊಂದು ಎಂ.ವಿ.ಸೀ. ಅವರ ಸೂಚನೆ ಖಂಡಿತವಾಗಿ ವಿವಾದಾಸ್ಪದವಾದ್ದು. ಹಾಗೆಯೇ ಯಾಬಿರ್ (*ಏಬಿರ್ ?) ವಾದ್ಯವಾದನ ಸಮನ್ವಿತವಾದ ಗೀತಕ್ಕೆ ಏಳೆ ಎಂಬ ಹೆಸರು ರೂಢಿಗೆ ಬಂದಿರಬಹುದು ಎನ್ನುವುದೂ ಸಮರ್ಥನೀಯವಾಗುವುದು ಕಷ್ಟವೇ.

‘ಏಳೆಯ ಸ್ವರೂಪ’ ಎಂಬುದು ಎರಡನೆಯ ಬರಹ. ಈ ಬರಹದಲ್ಲಿ, ಕನ್ನಡ ಏಳೆಯ ಲಕ್ಷಣವನ್ನೂ ಆ ಪದ್ಯದ ಲಕ್ಷಣ ತಿಳಿಸುವ ‘ಛಂದೋಂಬುಧಿ’ಯ ಪಾಠವನ್ನೂ ನಿರ್ಣಯಿಸಿ, ‘ಏಳೆ’ ಪದವು ಯಾೞ್ (ತ) ಎಂಬ ವಾದ್ಯವಿಶೇಷದೊಂದಿಗೆ ಸಂಬಂಧವುಳ್ಳದೆಂದು ಊಹಿಸಿ, ಅವಕ್ಕೆ ಅನುಗುಣವಾಗಿ ಕೆಲವು ಸಂಗತಿಗಳನ್ನು ನಿರೂಪಿಸಿದೆ. ಈ ನಿರೂಪಣೆಗೆ ಪೀಠಿಕೆಯಾಗಿ ಸಂಸ್ಕೃತ ಏಲಾಭೇದಗಳ ಸ್ವರೂಪವನ್ನು ಪ್ರಸ್ತಾಪಿಸಿದೆ. ಈ ಮೊದಲೇ ಕುರಿತಿರುವಂತೆ ಕನ್ನಡ ಏಳೆ, ಸಂಸ್ಕೃತ ಏಲಾಭೇದಗಳ ಸಂಬಂಧ ಯಾವ ರೀತಿಯದು ಎನ್ನುವುದು ಮತ್ತೆ ಇಲ್ಲಿ ಎಂ.ವಿ.ಸೀ. ಅವರ ಲಕ್ಷ್ಯವನ್ನು ಸೆಳೆದಿದೆ. “ಯಾವ ಸಂಬಂಧವೂ ಇರುವಂತೆ ತೋರುವುದಿಲ್ಲ” ಎಂದು ಹೇಳಿದ ಡಿ. ಎಲ್. ನರಸಿಂಹಾಚಾರ್ಯರ ಆ ಮೊದಲಿನ ಅಭಿಪ್ರಾಯವನ್ನು ಉಲ್ಲೇಖಿಸುತ್ತ, ಅವರು ಹೀಗೆ ಕುತೂಹಲವನ್ನು ಕೆರಳಿಸುವ ಮಾತನ್ನಾಡಿದ್ದಾರೆ:

“ಬಹುಶಃ....ಸಂಗೀತಶಾಸ್ತ್ರಕಾರರು ಬೇರೆ ಬೇರೆ ಪ್ರದೇಶಗಳಲ್ಲಿ ಬಳಕೆಯಲ್ಲಿದ್ದ, ಬಹುಮಟ್ಟಿಗೆ ಸಮಾನಗೇಯಬಂಧವನ್ನು ಹೊಂದಿದ್ದ, ದಕ್ಷಿಣದೇಶದಲ್ಲಿ ಏಳೆ ಎಂಬ ಹೆಸರನ್ನು ಪಡೆದಿದ್ದ, ವೃತ್ತಪ್ರಭೇದದ ಲಕ್ಷಣಗಳನ್ನು ಸಂಗೀತಶಾಸ್ತ್ರದ ಚೌಕಟ್ಟಿನಲ್ಲಿ ಅಡಕಮಾಡಿ ಸೂತ್ರೀಕರಿಸ ಹೊರಟಹಾಗೆ ಕಾಣುತ್ತದೆ. ಒಂದು ವೇಳೆ ಇವರು ನಾಗವರ್ಮ ಜಯಕೀರ್ತಿಗಳ ಗ್ರಂಥಗಳನ್ನು ನೋಡಿದ್ದರೂ, ಛಂದಶ್ಶಾಸ್ತ್ರದ ತಾಳರಾಗನಿಷ್ಠವಲ್ಲದ ಏಕದೇಶೀಯವಾದ ನಿಯಮವನ್ನು ಹಾಡಿನ ಮಟ್ಟು ಒಂದಕ್ಕೆ ಅನ್ವಯಿಸುವುದು ಇವರಿಗೆ ಸಮ್ಮತವಾಗದೆ ಹೋಗಿದ್ದಿರಬಹುದು. ನಾಗವರ್ಮ ಜಯಕೀರ್ತಿಗಳ ಏಳೆಗೂ ಇವರು ನಿರೂಪಿಸಿರುವ ಏಲಾ ಪ್ರಬಂಧಕ್ಕೂ ಸಂಬಂಧ ಕಾಣದಿರುವುದಕ್ಕೆ ಬಹುಶಃ ಈ ದೃಷ್ಟಿಭೇದವೇ ಕಾರಣ. ಹೀಗಿದ್ದ ಪಕ್ಷ, ತ್ರಿಪದಿ ಷಟ್ಪದಿಗಳಿಗೆ ಏಕೆ ಗಮನ ಹರಿಸಿದರು ಎಂಬ ಪ್ರಶ್ನೆ ಏಳುತ್ತದೆ. ಅಂತೂ ಈ ದಿಕ್ಕಿನಲ್ಲಿ ಸಂಶೋಧನೆ ಮುಂದುವರಿಯಬೇಕು.”

ನಿಜವಾದ ಸಮಸ್ಯೆಯನ್ನು ಎಂ.ವಿ.ಸೀ. ಗುರುತಿಸಿದ್ದಾರೆ. ಇದು ಸಂಶೋಧನೆಗೆ ವಿಷಯ. ನನಗೆ ತಿಳಿದ ಮಟ್ಟಿಗೆ, ಈಗ ತೋರುತ್ತಿರುವಂತೆ ಮಾತ್ರಾಗಣಾತ್ಮಕ ಮುಂತಾದ ಗಣರಚನೆಯ, ಸಂಸ್ಕೃತ ಭಾಷೆಯ, ಹಾಗೂ ಸಂಗೀತಶಾಸ್ತ್ರ ಪರಿಧಿಯ ಏಲಾಪ್ರಭೇದಗಳಿಗೆ, ಕನ್ನಡ ಭಾಷೆಯ ಹಾಗೂ ಅಂಶಗಣಾತ್ಮಕವಾದ ಏಳೆಯೇ ಮೂಲವಾಗಿರುವುದು ಸಾಧ್ಯ. ಅದರ ಬೆಳವಣಿಗೆಯಲ್ಲಿ ವೈವಿಧ್ಯ ವೈಚಿತ್ರ್ಯಗಳು ಅನಂತರದಲ್ಲಿ ಮೈಗೂಡಿರುವುದು ಸಂಭಾವ್ಯ. ಏಲಾ ಸಾಮಾನ್ಯಲಕ್ಷಣವನ್ನು ಕುರಿತ ಮೇಲೆ, ಅದನ್ನು ಹಾಡುವ ವಿಧಾನವನ್ನು ಶಾರ್ಙ್ಗದೇವ ವಿವರಿಸಿರುವ “ಅಂಘ್ರಿಖಂಡದ್ವಯಂ....ಪ್ಲೇಸ್ತೇ ವಿಲಂಬಿತೇ ತತ್ರ ತೃತೀಯಂ ದ್ರುತಮಾನತಃ” ಎಂಬ ಲಕ್ಷಣಭಾಗದಿಂದ ಈ ಗ್ರಹಿಕೆಗೆ ಸಮರ್ಥನೆ ದೊರೆಯುವಂತೆ ತೋರುತ್ತದೆ.

ಇನ್ನು ಏಳೆಯನ್ನು ಕುರಿತ 'ಛಂದೋಂಬುಧಿ'ಯ ಪದ್ಯಪಾಠವನ್ನು ಎಂ.ವಿ.ಸೀ ಶ್ರಮವಹಿಸಿ ಪರಿಷ್ಕರಿಸಿರುವುದು ಸರಿಯಾಗಿದೆ. ನನಗೆ ತಿಳಿದ ಮಟ್ಟಿಗೆ ಶುದ್ಧಪಾಠವನ್ನು, ಈ ಸಂಬಂಧದಲ್ಲಿ ಮೊದಲು ಸೂಚಿಸಿದವರು ಜಿ. ರಾಮಸ್ವಾಮಿಯವರು ('ತಾವರೆ' ಹೈದರಾಬಾದು, 1971). ಇನ್ನು 'ಏಳೆ' ಶಬ್ದದ ನಿಷ್ಪತ್ತಿ ವಿಚಾರದಲ್ಲಿ ಎಂ.ವಿ.ಸೀ. ಅವರ ಊಹೆ ನಿಲ್ಲುವುದು ಕಷ್ಟ. (ಸಂಸ್ಕೃತ) ಏಲಾ> (ಕನ್ನಡ) ಏಳೆ ಆಗಿರುವುದೇ ಸಂಭಾವ್ಯ. ತಮಿಳುನಾಡಿನ ವಾದ್ಯವೊಂದರ ಸಂಬಂಧವನ್ನಿಲ್ಲಿ ಕೂಡಿಸುವುದು ಅನಾವಶ್ಯಕವೆಂದೇ ಹೇಳಬೇಕು.

'ಉದ್ದಂಡ ಷಟ್ಪದಿಯ ಸಮಸ್ಯೆ' ಮೂರನೆಯ ಲೇಖನ. ಕುತೂಹಲಕರ ಉದ್ದಂಡ ಷಟ್ಪದೀ ಛಂದಸ್ಸಿನ ಲಕ್ಷಣ ಹಲವರು ವಿದ್ವಾಂಸರ ವಿಚಾರವಿಮರ್ಶೆಗಳಿಗೆ ಗುರಿಯಾಗಿದೆ. ಎಂ.ವಿ.ಸೀ. ಆ ವಿದ್ವಾಂಸರಲ್ಲಿ ಕೆಲವರ ಅಭಿಪ್ರಾಯಗಳನ್ನು ಮೊದಲು ಸಂಗ್ರಹಿಸಿಕೊಟ್ಟು, ಆ ಬಳಿಕ ತಮ್ಮದನ್ನು ಪ್ರತ್ಯೇಕವಾಗಿ ಮಂಡಿಸಿದ್ದಾರೆ.

"ಮಾತ್ರಾಸಂಖ್ಯಾದೃಷ್ಟಿಯಿಂದ ಉದ್ದಂಡಷಟ್ಪದಿಯ ಕಟ್ಟುಪಾಡನ್ನು ಹೋಲುವ ವಾರ್ಧಕಷಟ್ಪದಿಯನ್ನೂ ಉದ್ದಂಡಷಟ್ಪದಿಯೆಂದು ಕರೆಯುವ ಒಂದು ಸಂಪ್ರದಾಯ ಕೆಲವು ಕಡೆ ರೂಢಿಯಲ್ಲಿದ್ದಿರಬೇಕು. ಕಾಲಕ್ರಮದಲ್ಲಿ ಪಂಚಮಾತ್ರಾಗಣ ವಿವಕ್ಷೆಯುಳ್ಳ ಷಟ್ಪದಿಗೆ ವಾರ್ಧಕ ಎಂಬ ಹೆಸರು ಸ್ಥಿರವಾಗಿ ನಿಂತಿರಬೇಕು." ಇದು ಎಂ.ವಿ.ಸಿ.ಅವರ ಮೊದಲ ಗ್ರಹಿಕೆ. ಇದರ ತಥ್ಯವೇನು? "ವಾರ್ಧಕ, ಉದ್ದಂಡಗಳೆಂಬ ಹೆಸರುಗಳು ಪಂಚಮಾತ್ರಾಲಯದ ಚತುರ್ಗಣಗಳ ಒಂದೇ ಷಟ್ಪದೀ ಛಂದಸ್ಸಿಗೆ ಪರ್ಯಾಯವಾಗಿ ಬಳಕೆಯಾಗುತ್ತಿದ್ದುದು ನಿಜ; ಅದು ಏಕೆ ಎಂಬುದನ್ನು ನಿಷ್ಕೃಷ್ಟವಾಗಿ ತಿಳಿಯುವುದು ಕಷ್ಟವೇ. ಆದರೂ, ಕಾಲಕ್ರಮದಲ್ಲಿ ಚತುರ್ಮಾತ್ರಾಲಯದ ಪಂಚಗಣಗಳ ವಿವಕ್ಷೆಯುಳ್ಳ ಷಟ್ಪದಿಗೆ ಮಾತ್ರ ಉದ್ದಂಡವೆಂಬ ಹೆಸರು ಸ್ಥಿರವಾಗಿ ನಿಂತಿರಬೇಕು" ಎಂದು ತಿಳಿಯುವುದು ಸೂಕ್ತವಾದೀತು.

ಮುಂದೆ ಉದ್ದಂಡವನ್ನು ಷಟ್ಪದಿಯ ಪಟ್ಟಿಗೆ ಸೇರಿಸದಿರುವುದೇ ಒಳಿತೆಂಬ ಒಂದು ಹಿಂದಿನ ಅಭಿಪ್ರಾಯವನ್ನು ಎತ್ತಿಕೊಂಡು, ಗಣವ್ಯವಸ್ಥೆ ಏನೇ ಇರಲಿ, ಅಲ್ಲಿ6 ಸಾಲುಗಳಲ್ಲಿ ಸ್ಪಷ್ಟವಾಗಿ ಕಂಡುಬರುವ ಆದಿಪ್ರಾಸಲಕ್ಷಣಪಾಲನೆಯಿಂದಾಗಿ ಷಟ್ಪದಿಯಲ್ಲೇ ಇದನ್ನೂ ಗಣಿಸಬೇಕು ಎಂದು ಶ್ರೀಯುತರು ಗ್ರಹಿಸಿರುವುದು, 3 ಮತ್ತು 6ನೆಯ ಪಾದಗಳ ದೀರ್ಘತೆ ಹಾಗೂ ಸಮತೆಗಳಿಂದಲೂ ಸಮರ್ಥನೀಯವೇ ಆಗಿದೆ. ಇಲ್ಲಿಂದ ಮುಂದೆ ಗಣವ್ಯವಸ್ಥೆ ಚತುರ್ಮಾತ್ರೆಗಳದು, ಇಲ್ಲವೆ ಚತುರ್ಮಾತ್ರೆ-ಷಣ್ಮಾತ್ರೆಗಳ ಅನುಪೂರ್ವಿಯದು, ಇಲ್ಲವೆ "ಷಣ್ಮಾತ್ರಾಲಯ ಪ್ರಚುರವಾದ ಚತುರ್ಮಾತ್ರಾಗಣವ್ಯವಸ್ಥೆಯದು" ಎಂಬ ಸೂಚನೆಗಳನ್ನೆತ್ತಿಕೊಂಡು ಮೊದಲೆರಡು ಸೂಚನೆಗಳನ್ನು "ಅರ್ಥಪ್ರತೀತಿಗೆ ಸಾಧಕವಾದ ಸಹಜಯತಿ" ಪಾಲನೆಯ ದೃಷ್ಟಿಯಿಂದ

ತಳ್ಳಿಹಾಕಿದ್ದಾರೆ: ತಮ್ಮದೇ ಆದ ಮೂರನೆಯ ಸೂಚನೆಯನ್ನು ಸ್ಪಷ್ಟಪಡಿಸಿ “ಷಣ್ಮಾತ್ರಾವಿನ್ಯಾಸವೇ ಉದ್ದಂಡಷಟ್ಪದಿಯ ಸಮಸ್ಯೆಗೆ ಎಲ್ಲ ದೃಷ್ಟಿಗಳಿಂದಲೂ ಸಮಂಜಸವಾದ ಪರಿಹಾರ” ಎಂಬ ಫಲಿತಾಂಶಕ್ಕೆ ಸಹಕಾರಿಯಾಗುವ ಪ್ರಸ್ತಾರಕ್ರಮವನ್ನು ತೋರಿಸಿದ್ದಾರೆ. ಅವರ ಈ ಸಂಚಿಕೆಗೆ 1-2ನೆಯ ಪಾದಗಳು 3ನೆಯದರವರೆಗೆ ಲಯಗ್ರಾಹಿಯಾಗಿ, ಧಾರಾವಾಹಿಯಾಗಿ, ‘ದಂಡಕಕಲ್ಪ’ವಾಗಿ ಮುನ್ನಡೆಯುವುದೂ, ಪ್ರಾಕೃತ ‘ಛಪ್ಪಅ’ (ಷಟ್ಪದ) ಹಾಗೂ ಪ್ರಾಕೃತ ಕನ್ನಡಗಳ ‘ಧವಲಾ’ಗಳಲ್ಲಿ ಸಹ ಷಣ್ಮಾತ್ರಾಲಯಗತಿಯುಂಟು ಎಂಬುದೂ ಪೋಷಕಲಕ್ಷಣಗಳಾಗಿ ತೋರಿವೆ.

ಉದ್ದಂಡ ಷಟ್ಪದಿಯ ಸಮಸ್ಯಾತ್ಮಕ ಗಣವ್ಯವಸ್ಥೆಯನ್ನು ಕುರಿತ ಹಾಗೆ ಎಂ.ವಿ.ಸೀ. ಅವರು ಮಾಡಿರುವ ಹೊಸ ಸಲಹೆಗಳು ನಿಜವಾಗಿ ಮೆಚ್ಚತಕ್ಕವಾಗಿವೆ; ಆದರೆ ನಿಲ್ಲತಕ್ಕವೇ ಎನ್ನುವ ವಿಷಯದಲ್ಲಿ ಇನ್ನೂ ಸಂಶಯಕ್ಕೆ ಅವಕಾಶವಿದೆ. ಇದೇ ಸಂದರ್ಭದಲ್ಲಿ ಕವಿ, ಕೃತಿ ಒಂದೂ ವಿದಿತವಲ್ಲದ ‘ದೀರ್ಘದಂಡ ಷಟ್ಪದಿ’ ಎಂಬುದರ ಪ್ರಸ್ತಾವವನ್ನು ಅವರು ಮಾಡಿರುವುದು ಸ್ವಾರಸ್ಯಕರವಾಗಿದೆ. ಷಟ್ಪದಿಯ ಪ್ರಭೇದಗಳಲ್ಲಿ ಇದೂ ಸೇರ್ಪಡೆಯಾಗಬಹುದಾದ್ದು. ಇದರ ಲಕ್ಷಣವನ್ನು ಆ ಪದ್ಯ ದೊರೆತ ಹಾಳೆಯಲ್ಲೇ, ಚತುರ್ಮಾತ್ರಾಗಣವ್ಯವಸ್ಥೆಗೆ ಅನುಗುಣವಾಗಿ ಗುರುತಿಸಿದೆ; ಆದರೆ ಎಂ.ವಿ.ಸೀ. ಅದನ್ನು ನಿರಾಕರಿಸಿ, ಷಣ್ಮಾತ್ರಾಗಣ ವ್ಯವಸ್ಥೆಯನ್ನು ಇಲ್ಲಿಯೂ ಪರಿಗ್ರಹಿಸಿದ್ದಾರೆ. ಇದು ಅನಾವಶ್ಯಕವಾಗಿತ್ತು. ಈ ಪದ್ಯ, ಇದರ ಲಕ್ಷಣ ಕುರಿತು ಹಸ್ತಪ್ರತಿಯಲ್ಲಿ ದೊರೆತ ಸೂಚನೆ ಎರಡೂ, ‘ವೀರೇಶಚರಿತೆ’ದ ಉದ್ದಂಡಷಟ್ಪದಿಯ ಲಯ ಚತುರ್ಮಾತ್ರಕವೆಂದು ಸೂಚಿಸುವ ಸಾಕ್ಷ್ಯಗಳೆಂದೇ ತಿಳಿಯಲು ಪರೋಕ್ಷವಾಗಿ ಸಹಾಯವಾಗಿದೆ ಎನ್ನಬೇಕು.

‘ರಾಘವಾಂಕನು ಷಟ್ಪದಿಯ ನಿರ್ಮಾಪಕನೆ?’–ಇದು ಮುಂದಿನ ಬರೆಹ. ‘ರಾಘವಾಂಕ ಚಾರಿತ್ರ’ದ ಒಂದು ಉಲ್ಲೇಖದ ಆಧಾರದ ಮೇಲೆ ಆರ್. ನರಸಿಂಹಾಚಾರ್ಯರೂ ಇತರ ಕೆಲವರು ವಿದ್ವಾಂಸರೂ ‘ರಾಘವಾಂಕನೇ ಷಟ್ಪದಿಯ ನಿರ್ಮಾಪಕ’ ಎಂದು ಅಭಿಪ್ರಾಯವಾಗುವ ಮಾತುಗಳನ್ನು ಬರೆದಿರುವರು. ಆದರೆ ಅದು ಹಾಗಿಲ್ಲ. ಅವನಿಗೆ ಮೊದಲು ಷಟ್ಪದಿಯ ಕೆಲವು ಪ್ರಕಾರಗಳು ನಿರ್ಮಾಣವಾಗಿದ್ದುವು, ಬಿಡಿ ಪದ್ಯರಚನೆಗಾಗಿಯೂ ಕಾವ್ಯರಚನೆಗಾಗಿಯೂ ಅವು ಪ್ರಯುಕ್ತವಾಗಿದ್ದುವು–ಎಂಬುದಾಗಿ ಎಂ.ವಿ.ಸೀ. ಈ ಬರೆಹದಲ್ಲಿ ಮೊದಲು ಸ್ಪಷ್ಟಪಡಿಸಲು ಯತ್ನಿಸಿದ್ದಾರೆ. ಆನಂತರ ರಾಘವಾಂಕನನ್ನು “ಷಟ್ಪದಿಯ ನಿರ್ಮಾಪಕ” ಎಂದು ತಿಳಿಯಬಾರದು. ಅವನು “ಉದ್ದಂಡ ಷಟ್ಪದಿಯ ನಿರ್ಮಾಪಕ” ಎಂಬುದೇ ಸಿದ್ಧಸಂಜೀವನ ಉಲ್ಲೇಖದ ಆಶಯವೆಂದು ಸರಿಯಾಗಿ ಗಮನಿಸಿದರೆ ತಿಳಿಯುತ್ತದೆ–ಎಂಬುದಾಗಿ ತಿಳಿಸಿ, ಒಂದು

ತಪ್ಪು ಗ್ರಹಿಕೆಯನ್ನು ಸರಿಪಡಿಸಲು ಯತ್ನಿಸಿದ್ದಾರೆ. ಈ ನಿಲುವು ಒಂದು ದೃಷ್ಟಿಯಿಂದ ಸರಿ.

ರಾಘವಾಂಕನಿಗೆ ಮೊದಲು ಮೂಲ ಷಟ್ಪದಿ ಮತ್ತು ಕೆಲವಾದರೂ ಮಾತ್ರಾ ಷಟ್ಪದಿಯ ಪ್ರಕಾರಗಳು ರಚನೆಯ ರೂಢಿಯಲ್ಲಿ ಇದ್ದುವೆಂದು ತಿಳಿಯುವುದಕ್ಕೆ ಆಧಾರಗಳಿವೆ. ಇವುಗಳಲ್ಲಿ ಪೂರ್ಣಪ್ರಮಾಣದ ಕಾವ್ಯಗಳು ರಚನೆಯಾಗಿದ್ದುವೇ ಎನ್ನುವುದನ್ನು ತಿಳಿಯಲು ಎಂ.ವಿ.ಸೀ. ಅವರೂ ಇತರರೂ ಕೊಡುವ ಎಲ್ಲ ಆಧಾರಗಳೂ ಗಟ್ಟಿ ಆಧಾರಗಳು ಎಂದು ಹೇಳಲಾಗದು. ಅವುಗಳಲ್ಲಿ ಹೆಚ್ಚಿನವನ್ನು ಹೊಡೆದು ಹಾಕುವುದು ಶಕ್ಯ. ಈಗಿನ ಮಟ್ಟಿಗೆ ಪೋಲಾಳ್ವನ 'ಹರಿಚಾರಿತ್ರ'ದ ಸಾಕ್ಷ್ಯವೊಂದೇ ಗಟ್ಟಿಯಾದ್ದು. ಈತ ರಾಘವಾಂಕನಿಗೆ ಸಮಕಾಲೀನನೆಂದೇ ತೋರುತ್ತದೆ. ಈ ಇಬ್ಬರ ಪೌರ್ವಾಪರ್ಯ ನಿರ್ಣಯವಾಗುವವರೆಗೆ, ಇಲ್ಲವೆ 'ಹರಿಚಾರಿತ್ರ'ವೇ ಸಿಕ್ಕುವವರೆಗೆ. ಆರಂಭದ ಗಣ್ಯ ಷಟ್ಪದೀ ಕವಿಯ ಪಟ್ಟ ರಾಘವಾಂಕನದಾಗಿರುತ್ತದೆ ಎನ್ನುವುದರಲ್ಲಿ ಅನುಮಾನವಿಲ್ಲ; ಪ್ರಸಿದ್ಧಿಗಂತೂ ಕೊರತೆಯಿಲ್ಲ. "ಸಿದ್ಧನಂಜೇಶನ ಹೇಳಿಕೆಯ ಆಧಾರದ ಮೇಲೆ ರಾಘವಾಂಕನು ಉದ್ದಂಡ ಷಟ್ಪದಿಯ ನಿರ್ಮಾಪಕ ಎಂದು ಹೇಳಬಹುದೇ ಹೊರತು. ಸಾಮಾನ್ಯತಃ ಷಟ್ಪದಿಯ ನಿರ್ಮಾಪಕ ಎಂದು ಹೇಳಲು ಅವಕಾಶವಿಲ್ಲ" ಎಂಬ ಎಂ.ವಿ.ಸೀ. ಅವರ ನಿಲುವು, ಒಟ್ಟಿನಲ್ಲಿ ಸರಿಯಾದ ನಿಲವು. ಆದರೆ ಒಬ್ಬಿಬ್ಬರ ಹೊರತು ಉಳಿದ ಹಿಂದಿನ ವಿದ್ವಾಂಸರ ಆಶಯವಾದರೂ ಇದಕ್ಕಿಂತ ಭಿನ್ನವಾದುದೇನೂ ಅಲ್ಲ. ಷಟ್ಪದೀಛಂದಸ್ಸನ್ನು ಬಳಸಿ ಕಾವ್ಯಗಳನ್ನು ಕಟ್ಟಿದವರಲ್ಲಿ ರಾಘವಾಂಕನೇ ಮೊದಲಿಗನೆಂದೂ ಈಗಿನ ಸಾಕ್ಷ್ಯಾಧಾರಗಳಿಂದ ತಿಳಿಯುವುದರಲ್ಲಿ ಪ್ರಾಯಃ ತಪ್ಪೇನೂ ಇಲ್ಲ.

'ಶಾಸ್ತ್ರಸಾಹಿತ್ಯ'ದಲ್ಲಿ ಛಂದಸ್ಸುಗಳ ಸ್ವರೂಪದ ಸಾಮಾನ್ಯ ಹಿನ್ನೆಲೆಯೊಂದಿಗೆ ಉಪಯುಕ್ತ ಸಂಸ್ಕೃತ ಛಂದೋಗ್ರಂಥಗಳ, ಹಾಗೂ ಪ್ರಾಚೀನ ಮತ್ತು ಆಧುನಿಕ ಛಂದೋಗ್ರಂಥಗಳ ಪರಿಚಯವನ್ನು ಒದಗಿಸಿದೆ. ಎರಡನೆಯ ಗುಂಪಿನ ಗ್ರಂಥಗಳ ಪರಿಚಯ ಸಾಕಷ್ಟು ವಿವರವಾಗಿದೆ. ಕನ್ನಡ ಛಂದೋಗ್ರಂಥಗಳ ಕರ್ತೃಗಳ ಪರಿಚಯ ಹಾಗೂ ಅವರ ಗ್ರಂಥಗಳ ವಸ್ತುವಿನ್ಯಾಸದ ಸಮೀಕ್ಷೆ ಇವುಗಳ ವಿಚಾರಕ್ಕೆ ಪ್ರಾಶಸ್ತ್ಯ ಕೊಟ್ಟಿದ್ದರೂ, ಅಲ್ಲಲ್ಲಿ ವಿಚಾರಯೋಗ್ಯವಾಗಿ ತೋರಿದ ಸಂಗತಿಗಳ ಸೂಕ್ಷ್ಮವಾದ ವಿಮರ್ಶೆಯನ್ನೂ ನಡೆಸಿರುವುದು ಮೆಚ್ಚತಕ್ಕುದಾಗಿದೆ. ಆರಂಭದ 'ಹಿನ್ನೆಲೆ' ತುಂಬ ಸಂಕ್ಷೇಪವಾಗಿದ್ದರೂ, ವಿಷಯಪ್ರತೀಕವನ್ನು ಅದು ಸೊಗಸಾಗಿ ಮಾಡಿಕೊಡುತ್ತದೆ. ಜಯಕೀರ್ತಿ-ನಾಗವರ್ಮರ ಕಾಲಹಾಗೂ ಪೌರ್ವಾಪರ್ಯದ ವಿಚಾರದಲ್ಲಿ ಎಂ.ವಿ.ಸೀ. ಅವರ ನಿಲವು ಗ್ರಾಹ್ಯವಾಗಿದೆ; ಆದರೆ ಮುಂದುವರಿದು 'ಪೂರ್ವಂ ಕರ್ಣಾಟಚ್ಛಂದೋಮತೇ "ಎಂಬ ಜಯಕೀರ್ತಿಯ ಉಲ್ಲೇಖ ಇಮ್ಮಡಿ ನಾಗವರ್ಮನ 'ಛಂದೋ

ವಿಚಿತಿ'ಯನ್ನು ಇಲ್ಲವೆ 'ಛಂದೋಂಬುಧಿ'ಗೆ ಪೂರ್ವದ ಬೇರೊಂದು ಛಂದೋಗ್ರಂಥವನ್ನು ಉದ್ದೇಶಿಸಬಹುದು ಎಂದು ಅವರು ಭಾವಿಸಿರುವುದು, ವಸ್ತುವನ್ನು ಬಿಟ್ಟು ನೆರಳನ್ನು ಹಿಡಿದಂತೆ ಆಗಿದೆ.

ಇನ್ನು ಛಂದಸ್ಸಿನ ವಿವರಗಳಿಗೆ ಸಂಬಂಧಿಸಿದಂತೆ, ಜಯಕೀರ್ತಿ-ನಾಗವರ್ಮರ ಪಿಲಾ-ಪಳಿಗಳ ಲಕ್ಷಣ ಪರಸ್ಪರ ಭಿನ್ನವೆಂದು ತಿಳಿದಿರುವುದೂ, ಗೀತಿಕೆ ಸಾಂಗತ್ಯವಾಗಿ ಮಾರ್ಪಟ್ಟಿತೇನೋ ಎಂದು ಊಹಿಸಿರುವುದೂ ಸರಿಯಲ್ಲವೆಂದು ತೋರುತ್ತದೆ. ಆದರೆ ತಕ್ಕಮಟ್ಟಿನ ವಿಸ್ತಾರದಲ್ಲಿ ಕನ್ನಡ ಛಂದೋಗ್ರಂಥಗಳ ಸಂಕ್ಷಿಪ್ತ ಪರಿಚಯವನ್ನು ಚೊಕ್ಕವಾಗಿ ಮಾಡಿಕೊಟ್ಟಿರುವ ಎಂ.ವಿ.ಸೀ. ಅವರ ಪ್ರಯತ್ನ ಸ್ತುತ್ಯವಾದ್ದು; ವಿಷಯ ಪರಿಪುಷ್ಟವಾದ್ದು, ನಿರ್ದುಷ್ಟವಾದ್ದು.

ಎಂ.ವಿ.ಸೀ. ಅವರ ಈಚೆಯ ಛಂದೋವಿಷಯಕ ಲೇಖನ ಎಂದರೆ 'ಗೀತಿಕೆ, ಮದನವತಿ, ಅಕ್ಕರಿಕೆ ಚೌಪದಿ(ಗೆ), ಉತ್ಸಾಹ, ಛಂದೋವತಂಸ: ಲಕ್ಷಣ, ಪ್ರಯೋಗ' ಎಂಬುದು ಪೂರ್ವೋಕ್ತವಾದ ಒಂದೊಂದೂ ಕನ್ನಡ ಮಟ್ಟಿನ ಲಕ್ಷಣವನ್ನೂ ಇತಿಹಾಸವನ್ನೂ ಕುರಿತ ಹಾಗೆ ಈವರೆಗೆ ಪ್ರಕಟವಾಗಿರುವ ಮಾಹಿತಿಯನ್ನೆಲ್ಲ ತಾಳ್ಮೆ ಶ್ರದ್ಧೆಗಳಿಂದ ಪರಿಶೀಲಿಸಿ, ತಮ್ಮದಾಗಿ ಹೇಳಬಹುದಾದನ್ನು ಕೊನೆ ವಿಶದಪಡಿಸಿದ್ದಾರೆ, ಲೇಖಕರು. ಈ ಒಂದೊಂದೂ ಬಂಧದ ಸಂಬಂಧದಲ್ಲಿರುವ ಸಮಸ್ಯೆ ಪರಿಚಯ ಅವರಿಗೆ ಉಂಟು; ಅವನ್ನು ಪರಿಷ್ಕಾರಗೊಳಿಸಲು, ಅವರು ಪ್ರಾಮಾಣಿಕ ಯತ್ನವನ್ನು ನಡಸಿದ್ದಾರೆ.

ಗೀತಿಕೆಯ ಲಕ್ಷಣ-ಲಕ್ಷ್ಯ ಸಮನ್ವಯ, ಈಗ ವಿದ್ವಾಂಸರಿಗೆಲ್ಲ ತಿಳಿದಿರುವಂತೆ ತುಂಬ ಜಟಿಲವಾದುದು, ಈ ಸಂದರ್ಭದಲ್ಲಿ ಎಂ.ವಿ.ಸೀ. ಲಕ್ಷಣವಿವೇಚನೆ ನಡಸುತ್ತ ಕುಕ್ಕಿಲ ಕೃಷ್ಣಭಟ್ಟರ 'ಛಂದೋಂಬುಧಿ'ಯ ಪರಿಷ್ಕರಣದಲ್ಲಿ ಕೊಟ್ಟಿರುವ ಗೀತಿಕೆಯ ಲಕ್ಷಣ-ಲಕ್ಷ್ಯಸಮೀಕೃತ ಪದ್ಯ ಪಾಠವನ್ನು ಒಪ್ಪಿದ್ದಾರೆ. ಇದಕ್ಕೆ ಏನು ಆಧಾರ ? ಆ ಪರಿಷ್ಕೃತಪಾಠಕ್ಕೆ ಹಸ್ತಪ್ರತಿಗಳ ಪಾಠಭೇದಗಳ ಬಲ ಬೆಂಬಲಗಳುಂಟೇ? ಇದನ್ನು ಅವರು ಎಚ್ಚರವಹಿಸಿ ಗಮನಿಸಬೇಕಾಗಿತ್ತು. ಕೃಷ್ಣಭಟ್ಟರು ಸ್ವೇಚ್ಛೆಯಿಂದ ಪಾಠಗಳನ್ನು ತಿದ್ದಿದ್ದಾರೆ; ಅವರ ಪರಿಷ್ಕರಣ ದೂಷ್ಯವಾದ್ದು ಎಂದು ಇಲ್ಲಿ ಹೇಳದೆ ಗತ್ಯಂತರವಿಲ್ಲ.

ಇನ್ನು ಲಕ್ಷ್ಯ-ಲಕ್ಷಣ ಸಮನ್ವಯ ವಿಚಾರ: ಎಂ.ವಿ.ಸೀ. ಅವರು, ಈ ವಿಷಯದಲ್ಲಿ ಈ ಹಿಂದೆ ವಿಚಾರಮಾಡಿದ್ದ ಎ. ವೆಂಕಟಸುಬ್ಬಯ್ಯನವರ ಕೆಲವು ಸಲಹೆ ಸೂಚನೆಗಳನ್ನು ಸುದೀರ್ಘವಾಗಿ ಪರಿಶೀಲಿಸಿ, "ಪ್ರಾಕೃತ ಸಂಸ್ಕೃತಗಳ ಮೇಲೆ ಕನ್ನಡ ಛಂದಸ್ಸು ಪ್ರಭಾವ ಬೀರಿರಬಹುದು. ಈ ಸಂದರ್ಭದಲ್ಲಿ, ಅಂಥ ಒಂದು ಕನ್ನಡ ಗೀತಿಕೆಯ ಲಕ್ಷ್ಯಗಳನ್ನು ಅನುಸರಿಸಿ ಸಂಸ್ಕೃತಕವಿಗಳು ಅಂಶಗಣನಿಬದ್ಧ ಗೀತಿಕೆ

ಗಳನ್ನು ರಚಿಸಿರುವ ಸಾಧ್ಯತೆಯಿದೆ. ಆದ್ದರಿಂದ, ವೆಂಕಟಸುಬ್ಬಯ್ಯನವರ ಶೋಧನೆ
ಯನ್ನು ಅಪಸಿದ್ಧಾಂತ ಎಂದು ತಳ್ಳಿಹಾಕುವಂತಿಲ್ಲ." ಎಂಬುದಾಗಿ ತಿಳಿಸಿದ್ದಾರೆ. ಈ
ನಿಲವನ್ನು ಒಪ್ಪಿಕೊಳ್ಳುವುದರಲ್ಲಿ ಹಲವು ತೊಡಕುಗಳಿವೆ. ಇದನ್ನು ನಾನು ಅನ್ಯತ್ರ
ವಿವೇಚಿಸಿದ್ದೇನೆ. ಗೀತಿಕೆಯ ಲಕ್ಷಣವನ್ನು ನಿರ್ಧರಿಸಲು ಯತ್ನಿಸಿರುವ ಬೇರೆ ಬೇರೆ
ವಿದ್ವಾಂಸರ ಅಭಿಪ್ರಾಯಗಳ ವಿಷಯದಲ್ಲಿ ಅವರು ಯಾವ ಸಂಕೋಚಗಳನ್ನೂ
ಸಂಶಯಗಳನ್ನೂ ವ್ಯಕ್ತಮಾಡಿರುವರೋ ಅವೆಲ್ಲ ಸಮುಚಿತವೇ ಇವೆ. ಆದರೆ
ಕವಿರಾಜಮಾರ್ಗದ ಗೀತಿಕೆ, ಲಾಕ್ಷಣಿಕರು ಹೇಳುವಂತೆ ಅರ್ಧಸಮ ಚತುಷ್ಪದಿಯಲ್ಲ
ಸಮಚತುಷ್ಪದಿ ಎಂಬುದಾಗಿ ಅವರು ತಿಳಿದಿರುವುದು ಎಷ್ಟರಮಟ್ಟಿಗೆ ಸರಿ? ಈ ಬಗೆ
ಗೀತಿಕೆಯಲ್ಲಿ ಎರಡು ಬಗೆಗಳನ್ನೂ ಅವಕ್ಕೆ ಪ್ರತ್ಯೇಕ ಲಕ್ಷಣವನ್ನೂ ಗ್ರಹಿಸುವುದೇ
ಸೂಕ್ತವೆಂದು ನನಗೆ ತೋರಿದ ಒಂದು ಪರಿಹಾರವನ್ನು ನಾನು ಅನ್ಯತ್ರ ನಿರೂಪಿಸಿ
ದ್ದೇನೆ. ಎಂ.ವಿ.ಸೀ. ಅವರೂ ಇದನ್ನು ಒಂದು ಘಟ್ಟದಲ್ಲಿ ಸ್ವತಂತ್ರವಾದ ವಿವೇಚನೆ
ಯಿಂದ ಸಮ್ಮತಿಸಿರುವುದು ನನಗೆ ಎಷ್ಟೋ ಧೈರ್ಯವನ್ನು ಕೊಟ್ಟಿದೆ, ಆಗ ಪ್ರಾಯಶಃ
"....ಪಾದಾಂತ್ಯದಲ್ಲಿ ಒಂದು ಗುರ್ವಂಶವನ್ನು ಪ್ರತ್ಯೇಕಿಸಿ, ಅದನ್ನು ಬ್ರಹ್ಮಗಣದಂತೆ
ಭಾವಿಸಬೇಕಾಗುತ್ತದೆ" ಎಂಬ ಸಂದರ್ಭವನ್ನು ಕಲ್ಪಿಸಿಕೊಳ್ಳುವುದು ತಪ್ಪಬಹುದು.

ಗಣವಿವಕ್ಷೆ ಏನೇ ದಾರಿಯಲ್ಲಿರಲಿ, "ಗೀತಿಕೆಯ ಹುಟ್ಟಿಗೆ ಸಂಸ್ಕೃತಭಾಷೆಯ
ಆರ್ಯಾಗೀತಿ ಅಥವಾ ಗೀತಿ ಪ್ರೇರಕವಾಗಿರಬಹುದು" ಎಂದು ಎಂ.ವಿ.ಸೀ. ತಿಳಿದಿರು
ವುದರಲ್ಲಿ ಕೆಲಮಟ್ಟಿನ ತಥ್ಯವಿದೆ. ಇದನ್ನು ನಾನೂ ಅನ್ಯತ್ರ ಸೂಚಿಸಿದ್ದೇನೆ.
ಗೀತಿಕೆಯ ವಿವೇಚನೆಯಲ್ಲಿ ತೆಲುಗು ಜಾತಿಛಂದಸ್ಸಿನ ಗೀತಿಭೇದಗಳನ್ನು ಅವರು
ನೆನೆದಿರುವುದು ಗಮನಿಸಬಹುದಾಗಿದೆ. ಈ ಮೊದಲೇ ಕುಕ್ಕಿಲ ಕೃಷ್ಣಭಟ್ಟರು ಸಹ
ತಮ್ಮ ಛಂದೋಂಬುಧಿಯ ಪರಿಷ್ಕರಣದಲ್ಲಿ, ತೆಲುಗು ಗೀತಿಭೇದಗಳನ್ನು ಹೋಲಿಕೆಗೆ
ಹತ್ತಿರ ತಂದು, ಆದರೂ ಗಾಢವಾಗಿ ಹೋಲಿಕೆಯನ್ನೇನೂ ಕೈಕೊಳ್ಳದೆ, "ತೆಲುಗು
'ಜಾತಿ'ಗಳಲ್ಲಿ ಹಲವು ತರದ ಗೀತಿಕೆಗಳಿರುತ್ತವೆ. ಆದರೆ ಕನ್ನಡದ ಈ ಗೀತಿಕೆಗೆ ಸದೃಶ
ವಾದುದು ನಾವು ತಿಳಿದಂತೆ ಇರುವುದಿಲ್ಲ" ಎಂಬ ನಿರ್ಣಯವನ್ನು ಕೊಟ್ಟಿದ್ದಾರೆ.
ತೆಲುಗು ಗೀತಿಭೇದಗಳ ಲಕ್ಷಣ-ಲಕ್ಷ್ಯಗಳ ಬೆಳಕಿನಲ್ಲಿ, ಜಯಕೀರ್ತಿ ನಾಗವರ್ಮರ
ಲಕ್ಷಣ-ಲಕ್ಷ್ಯಗಳ ಬೆಳಕಿನಲ್ಲಿ, ಜಯಕೀರ್ತಿ ನಾಗವರ್ಮರ ಲಕ್ಷಣ-ಲಕ್ಷ್ಯ ಸಮೀಕ್ಷಿತ
ಪದ್ಯಗಳ ಹಾಗೂ 'ಕವಿರಾಜಮಾರ್ಗ' 'ಕಾವ್ಯಾವಲೋಕನ'ಗಳೊಳಗಿನ ಲಕ್ಷ್ಯಪದ್ಯ
ಗಳ ಸ್ವರೂಪವನ್ನು ಗಾಢವಾಗಿ ವಿಮರ್ಶಿಸಿದರೆ, ಏನಾದರೂ ಪ್ರಯೋಜನವಾಗ
ಬಹುದೇ? ನೋಡಬೇಕಾಗಿದೆ. ಮಟ್ಟುಗಳ ಹರಹನ್ನು ಗಮನಿಸಿದರೆ ತೆಲುಗು
ತೇಟಗೀತಿ, ಆಟವೆಲದಿ ಈ ಒಂದೆರಡು ಬಂಧಗಳೊಂದಿಗೆ ಕೆಲವಕ್ಕೆ ಸಾದೃಶ್ಯವೇನೋ
ತೋರುತ್ತದೆ; ಆದರೆ ಗಣರಚನೆಯಲ್ಲಿ ಭಿನ್ನತೆ, ವಿಷಮಗಣದ (U-) ಆಡಿತಡೆ

ಗಳಿಂದ ಪ್ರಸ್ತಾರದ ಕ್ಲಿಷ್ಟತೆ ಇವು ಎದುರಾಗುವಂತೆಯೂ ಸಂದರ್ಭಗಳಿವೆ. ಇನ್ನೂ ಈ ಪರೀಶೀಲನೆಯು ಗಾಢವಾಗಿ ನಡೆಯಬೇಕಾಗಿದೆ. ಅಲ್ಲಿಯವರೆಗೆ "ಕವಿರಾಜ ಮಾರ್ಗದ ಗೀತಿಕೆಯೇ ನಿಜವಾದ ಗೀತಿಕೆ" ಎಂದು ತಿಳಿಯುವುದಕ್ಕಿಂತ, "ಕವಿರಾಜ ಮಾರ್ಗದ ಗೀತಿಕೆಯೂ, ಒಂದು ಬಗೆಯ ಗೀತಿಕೆಯೇ" ಎಂದು ಮಾತ್ರ ತಿಳಿಯುವುದು ಲೇಸು: ಅದರಲ್ಲಿ "ಕನಿಷ್ಠ ಎರಡು ಪ್ರಭೇದಗಳಾದರೂ ಇವೆ" ಎಂದು ತಿಳಿದಿರುವುದು ಸಹ ಒಳ್ಳೆಯದೇ.

ಈಗ ಮದನವತಿಯ ಬಗೆಗೆ ನೋಡೋಣ. ಈ ಬಂಧದಲ್ಲಿ ಮಾತ್ರಾಗಣ ವಿನ್ಯಾಸವನ್ನು ಕಾಣುವುದು ಎಂ.ವಿ.ಸೀ. ಅವರ ಅಪೇಕ್ಷೆ. ಇದು ನಾಗವರ್ಮ ತೋರಿಸಿರುವ ಮೂರು ವಿಧವಾದ ಅಂಶಗಣವಿನ್ಯಾಸದಿಂದ ಬೇರೆಯಾದ್ದು. ಆದರೆ ಇದು ಅವಶ್ಯವೇ, ಲಯಾನುಗಾಮಿಯೆ? ಆಧುನಿಕ ಕವಿತೆಗಳಲ್ಲಿ ಕೆಲವೆಡೆ ಕಂಡುಬರುವ ಹಾಗೂ ಉದ್ದಂಡ ಷಟ್ಪದಿಯಲ್ಲಿ ಕಾಣುವುದೆಂದು ತಾವು ಭಾವಿಸಿರುವ ಮಾತ್ರಾ ಲಯವನ್ನು ಇಲ್ಲಿಯೂ ಇರುವುದೆಂದು ತಿಳಿಯ ಬೇಕಾದರೆ ಸುಭಗವಾದ ಲಯಗತಿ ಅಲ್ಲಿ ತೋರುವಂತಿರಬೇಕು ತಾನೇ? ಉತ್ತರ, ಬಹುಶಃ ತೋರದು ಎಂದೇ.

ಅಕ್ಕರಿಕೆ ಮುಂದಿನದು. ಆದಿಯಲ್ಲಿ ಒಂದು ಹೆಚ್ಚಿನ ಬ್ರಹ್ಮಗಣ ಸೇರಿದರೆ ಬ್ರಹ್ಮಗಳನ್ನು ವಿಷ್ಣು ಮಾಡಿದರೆ, ಇದು ಪಿರಿಯಕ್ಕರವೇ ಎಂದು ಅವರು ಹೇಳಿ, ಅಕ್ಕರ-ಅಕ್ಕರಿಕೆಗಳ ಬಾಂಧವ್ಯಕ್ಕೆ ಬೆಸುಗೆಹಾಕಿರುವುದು ನಿಜವಾಗಿ ಚೆನ್ನಾಗಿದೆ. "ಬ್ರಹ್ಮವನ್ನು ವಿಷ್ಣು ಮಾನಕ್ಕೆ ಎಳೆದು ಉಚ್ಚರಿಸಬೇಕಾಗಿರುವುದರಿಂದ ಅಂಶಗಣದ ಲಯದ ದೃಷ್ಟಿಯಿಂದ ಎರಡಕ್ಕೂ ಹೆಚ್ಚಿನ ವ್ಯತ್ಯಾಸವಿಲ್ಲ" ಎನ್ನುವುದು, ಪಿರಿಯಕ್ಕರದ "ಪದದೊಳೆರಡೆಂಬ ಸಂಖ್ಯೆಯೊಳ್ ನಾಲ್ಕು ರೊಳಜಗಣಂ ಸಮನಾಯುಮುಪ್ಪುಡಕ್ಕುಂ" ಎಂಬ, 'ಕಾಮೇ ಹ್ಯಹ ರತಿರ್ವಾಗ್ದ್ವಿತೀಯೋ ತುರ್ಯೋ ಚ ಸ್ಥಾನೇ" ಎಂಬ ಲಾಕ್ಷಣಿಕರ ವಿಶೇಷ ಲಕ್ಷಣಾಂಶದ ಪ್ರಸ್ತಾವದಿಂದಲೂ ಸಮರ್ಥನೀಯವಾಗಬಹುದಾಗಿದೆ. ಆದ್ದರಿಂದ, ಬಿ. ಎಂ. ಶ್ರೀ. ಸ್ಥೂಲವಾಗಿ ಸೂಚಿಸುವಂತೆ. ಅಕ್ಕರಿಕೆಯೂ ಅಕ್ಕರದ ಪ್ರಸ್ತಾರದೊಳಗೇ ಸೇರುತ್ತದೆ ಎಂದು ತಿಳಿಯುವುದು ತಪ್ಪೇನಾಗದು.

ಚೌಪದಿಯನ್ನು ಕುರಿತು ಚರ್ಚಿಸುವಾಗ, ಆ ಹೆಸರನ್ನು ಮಾತ್ರಾ ಚೌಪದಿಗೆ ಮೀಸಲಿಟ್ಟು, ಅಂಶಗಣಾತ್ಮಕವಾದುದಕ್ಕೆ ನಾಗವರ್ಮನು ಲಕ್ಷಣ-ಲಕ್ಷ್ಯ ಪದ್ಯದಲ್ಲಿ ಹೆಸರಿಸುವಂತೆ 'ಚೌಪದಿಗೆ' ಎಂಬುದಾಗಿ ಕರೆಯಬಹುದೆಂದು ಎಂ.ವಿ.ಸೀ. ಸಲಹೆ ಮಾಡಿದ್ದಾರೆ. ಪದ್ಯಾಂತದಲ್ಲಿಯ 'ಚೌಪದಿಗೆ' ಎಂಬ ಮಾತು ವಿಭಕ್ತ್ಯಂತಪದವಲ್ಲ ಎನ್ನುವುದು ನಿಶ್ಚಯವಾದರೆ, ಅವರ ಸಲಹೆ ಗ್ರಾಹ್ಯವಾಗಲು ನಿಜವಾಗಿ ಯೋಗ್ಯವಾಗಿದೆ. ಇಲ್ಲಿಯೂ ಎಂ.ವಿ.ಸೀ. ಮಾತ್ರಾಲಯವನ್ನು, ಏಕಖಂಡವಾದ ಪದ್ಯವಾಚನವನ್ನು ಪ್ರಸ್ತಾಪಿಸಿದ್ದಾರೆ. ಆದರೆ ಇದು ಅವಶ್ಯವೆಂದೇನೂ ತೋರುವುದಿಲ್ಲ; ಬೇಕಾದರೆ ವಿ+ವಿ+ಗ ಎಂದಾಗಬಹುದು.

'ಉತ್ಸಾಹ'ದ ವಿಚಾರ. ಇಲ್ಲಿ ನಾಗವರ್ಮ-ಜಯಕೀರ್ತಿಗಳ ಪದ್ಯಗಳ ತುಲನೆಯಿದೆ. "ನಾಗವರ್ಮನ ಉತ್ಸಾಹವೃತ್ತದ ಅಂಶಲಯದಲ್ಲಿ ನೆಲೆಸಿದ್ದ ಅನಿಯತತೆಯನ್ನು ನಿಯತಗೊಳಿಸಿದ್ದರ ಪರಿಣಾಮವಾಗಿ, ಜಯಕೀರ್ತಿಯ ವೃತ್ತವು ಪ್ರಧಾನವಾಗಿ ಮಾತ್ರಾವೃತ್ತವಾಯಿತು" ಎಂಬುದಾಗಿ ಎಂ.ವಿ.ಸೀ. ಗ್ರಹಿಸಿದ್ದಾರೆ. ಆದರೆ ಇಬ್ಬರದೂ ಮಾತ್ರಾಲಯವೇ ಎನ್ನುವುದರಲ್ಲಿ ಸಂಶಯವಿಲ್ಲ. ಈ ಬಂಧವನ್ನು ಬೇರೆ ಪ್ರಕರಣದಲ್ಲಿ ಜಯಕೀರ್ತಿ ಕುರಿತಿರುವುದರ ಕಾರಣವನ್ನು ನಾನು ಅನ್ಯತ್ರ ವಿವೇಚಿಸಿದ್ದೇನೆ; ಅಲ್ಲಿಯೇ ಉತ್ಸಾಹ ಪ್ರಭೇದಗಳ ವಿಚಾರವೂ ಬಂದಿದೆ. ಇಷ್ಟಾಗಿ, ಎಂ.ವಿ.ಸೀ. 'ಲಯಗ್ರಾಹಿ' ಎಂಬ ನಾಗವರ್ಮನ ಒಂದು ಮಾತಿನ ಆಶಯವನ್ನು ವಿವರಿಸಿರುವುದರಲ್ಲಿ, ಜಯಕೀರ್ತಿಯು 'ಗೋಗ್ರಹಾದಿ' ಎಂದಿರುವುದಕ್ಕೆ ಹೊಸರೀತಿಯಾಗಿ ಅರ್ಥವನ್ನು ಕಲ್ಪಿಸಿರುವುದರಲ್ಲಿ ಖಂಡಿತವಾಗಿ ಶ್ಲಾಘ್ಯವಾದ ಚಿಂತನೆಯಿದೆ. ಹಾಗಾದರೆ, ಇತರರು ಈಗಾಗಲೇ ಭಾವಿಸಿರುವುದು 'ಗೋಗ್ರಹ' (= ಗೋಗ್ರಹಣ) ಎಂಬುದು, ಕೃತಿವಾಚಕ ಶಬ್ದ ಎನ್ನುವುದು ಸರಿಯಲ್ಲವೆ? ಸಂಸ್ಕೃತಜ್ಞರು ನಿರ್ಣಯಿಸಬೇಕು. ಇನ್ನು 'ಅನಾಗತ' ಎಂಬ ಸಂಜ್ಞೆಯ ಬಳಕೆ ಸರಿಯಲ್ಲ, 'ಅತೀತಗ್ರಹ' ಎಂಬ ಸಂಜ್ಞೆಯಿಂದ 'ತಾಳವನ್ನೆತ್ತಿಕೊಡುವ ಅಕ್ಷರ'ವನ್ನು ಕರೆಯಬೇಕು ಎಂದು ಎಂ ವಿ.ಸೀ ಮಾಡಿರುವ ಸೂಚನೆ: ಈಗಾಗಲೇ ವಿದ್ವಾಂಸರ ವಲಯದಲ್ಲಿ, ಆ ತಪ್ಪಿನ ಅರಿವು ಮೂಡಿದೆ; ಹೊಸ ಸಂಜ್ಞೆ, ಇನ್ನೂ ರೂಢಿಗೆ ಬರಬೇಕಾಗಿದೆ.

ಉತ್ಸಾಹ ದಂಡಕದ ವಿಷಯದಲ್ಲಿ ಕೆಲವು ಸಮಸ್ಯೆಗಳಿವೆ. ನಾಗವರ್ಮನ ಲಕ್ಷಣಪದ್ಯದಿಂದ ಆ ಸಮಸ್ಯೆಗಳು ಪರಿಹಾರವಾಗುವಂತಿಲ್ಲ. ಲಕ್ಷ್ಯಗಳಂತೂ ಸಿಕ್ಕುವ ಹಾಗಿಲ್ಲ. ಪ್ರಾಯಶಃ ನಗಣದ್ವಯ ಪೂರ್ವಕವಾಗಿ, ಅನಿರ್ದಿಷ್ಟಸಂಖ್ಯೆಯ 'ನಾಕಿ' ಪ್ರಸ್ತಾರದ ಬ್ರಹ್ಮಗಣಗಳು ಬರುವುದು ಇದರ ಲಕ್ಷಣವಿದ್ದರೂ ಇರಬಹುದು. ಲಯೋತ್ತರದ ಲಕ್ಷಣ, ಪ್ರಭೇದಗಳು ಈಗಾಗಲೇ ವಿದ್ವಾಂಸರ ವಿಶೇಷ ಚರ್ಚೆಗೆ ಗುರಿಯಾಗಿದ್ದು, ಒಂದು ಘಟ್ಟದವರೆಗೆ ಇದರ ರಹಸ್ಯವನ್ನು ಭೇದಿಸಿ ಆಗಿದೆ ಎನ್ನಬಹುದು. ಈ ಬಂಧದ ಪ್ರಭೇದಗಳಲ್ಲಿ 'ಪಂಪಭಾರತ'ದ 1-58ರ ಹಾಗೂ 'ಲೀಲಾವತಿ'ಯ 7-23ರ ಪದ್ಯಗಳೂ ಸಹಜವಾಗಿಯೇ ಸೇರುತ್ತವೆ.

ಛಂದೋವತಂಸದ ಲಕ್ಷಣವನ್ನು ತಿಳಿಯುವುದರಲ್ಲಿ ನಾಗವರ್ಮ-ಜಯಕೀರ್ತಿಗಳ ಪದ್ಯಗಳಲ್ಲಿ ಏಕಾಭಿಪ್ರಾಯ ತೋರುತ್ತಿಲ್ಲವೆಂಬುದು ವಿದಿತವೇ. ಜಯಕೀರ್ತಿಯ ಲಕ್ಷಣ-ಲಕ್ಷ್ಯ ಸಮೀಕೃತ ಪದ್ಯಕ್ಕೆ ಅನುಸಾರವಾಗಿಯೇ 'ಛಂದೋಂಬುಧಿ'ಯಲ್ಲಿ ನಾಗವರ್ಮನು ಲಕ್ಷಣ-ಲಕ್ಷ್ಯ ಸಮೀಕೃತ ಪದ್ಯವನ್ನು ಮೂಲತಃ ರಚಿಸಿದ್ದು, ಅನಂತರದಲ್ಲಿ ಬೇರೆಯ ಲಕ್ಷಣಜ್ಞರ ಕೈವಾಡದಿಂದ ಈಗ ಕಂಡುಬರುತ್ತಿರುವಂತೆ ಪಾಠ ಬದಲಾವಣೆಯಾಗಿರಬೇಕೆಂದು ಎಂ.ವಿ.ಸೀ. ಭಾವಿಸಿದ್ದಾರೆ. ಇದನ್ನು ಒಪ್ಪುವುದು,

ಕಷ್ಟ; ಒಪ್ಪದಿರುವುದೂ ಕಷ್ಟವೇ. ಆದರೆ ದೊರೆಯುವ ಲಕ್ಷ್ಯಗಳು ಕಿಟ್ಟೆಲ್ ಪರಿಷ್ಕರಣದ 'ಛಂದೋಂಬುಧಿ'ಯಲ್ಲಿ ತೋರುವಂತೆ 3 ವಿ+1ಬ್ರ ಎಂಬ ಪ್ರಸ್ತಾರವನ್ನು ಪೋಷಿಸುವಂಥವೇ ಆಗಿವೆ ಎನ್ನುವುದನ್ನು ಮರೆಯುವ ಹಾಗಿಲ್ಲ.

ಉಪಸಂಹಾರವೆಂಬ ಭಾಗದಲ್ಲಿ ಎಂ.ವಿ.ಸೀ. ಅವರು ಏಳು ಗಣಗಳ ರಚನೆಯ ಬಂಧಗಳನ್ನೆಲ್ಲ ಒಗ್ಗೂಡಿಸಿ "ಏಳೆ ಕನ್ನಡ ಛಂದಸ್ಸಿನ ತಲಕಾವೇರಿ" ಎಂಬುದಾಗಿ ನಿಗಮನ ಮಾಡಿದ್ದಾರೆ: ಏಳೆ> ತ್ರಿಪದಿ> ಗೀತಿಕೆ> ಅಕ್ಕರ ಎಂಬುದಾಗಿ ಕ್ರಮಿಕ ಬೆಳವಣಿಗೆಯನ್ನು ಗುರುತಿಸಿದ್ದಾರೆ. ಹೀಗೆ ಮಾಡಿಯೂ, ತಕ್ಕ ಸಾಕ್ಷ್ಯಾಧಾರಗಳ ಅಭಾವವನ್ನು ಬಲ್ಲವರಾಗಿ, "ನಾವು ಏನು ಹೇಳಿದರೂ ಎಲ್ಲವೂ ಊಹಾಪ್ರಪಂಚದ ಕಲ್ಪನಾವಿಲಾಸಗಳಾಗಿಯೇ ಉಳಿಯುತ್ತವೆ. ಒಂದು ಊಹೆಗಿಂತ ಇನ್ನೊಂದು ಹೆಚ್ಚು ಸಂಭಾವ್ಯ ಎನ್ನಿಸಬಹುದು, ಅಷ್ಟೆ. ನಿರ್ವಿವಾದವಾದ ಸಾಕ್ಷ್ಯಾಧಾರಗಳು ದೊರೆಯುವ ತನಕ ಕೊನೆಯ ಮಾತನ್ನು ಹೇಳುವುದು ಸುಲಭವಲ್ಲ." ಎಂದು ವಿನಯದ ಮಾತನ್ನು ನುಡಿದಿದ್ದಾರೆ. ಅವರ ಸೂಚನೆ, ಸಲಹೆ, ಊಹೆಗಳ ಬಹ್ವಂಶದಲ್ಲಿ ಗಾಢಚಿಂತನೆ, ತರ್ಕಬದ್ಧತೆ, ಗ್ರಾಹ್ಯವಾಗಬಲ್ಲ ನಿರ್ಣಯ ಕಂಡುಬರುವುದರಿಂದ ಅವನ್ನು "ಊಹಾಪ್ರಪಂಚದ ಕಲ್ಪನಾವಿಲಾಸ"ವೆಂದು, ತಿಳಿದವರು ಯಾರೂ ಹೇಳಲಾರರು ಎಂದೇ ನಾನು ಭಾವಿಸುತ್ತೇನೆ; ಈ ಕಾರಣಕ್ಕಾಗಿಯೇ ಅವರ ಪ್ರತಿಭಾಸ್ನಾಪಿತವಾದ ಪಾಂಡಿತ್ಯವನ್ನು ಗೌರವಿಸುತ್ತೇನೆ.

ಕನ್ನಡ ವ್ಯಾಕರಣ ಮತ್ತು ಭಾಷಾಶಾಸ್ತ್ರಗಳಿಗೆ ಎಂ. ವಿ. ಸೀ ಅವರ ಕೊಡುಗೆ

ಡಾ|| ಜಿ. ವರದರಾಜರಾವ್

ಎಂ. ವಿ. ಸೀತಾರಾಮಯ್ಯನವರು ಹೊಸಗನ್ನಡದ ಸರ್ವೋದಯ ಕಾಲದಿಂದಲೂ ತಮ್ಮ ಕತೆ, ಕವಿತೆ, ಕಾದಂಬರಿ, ಲಲಿತ ಪ್ರಬಂಧ ಮತ್ತು ವಿಮರ್ಶೆಗಳ ಮೂಲಕ ಕನ್ನಡಿಗರಿಗೆ ಪರಿಚಿತರಾಗಿರುತ್ತಾರೆ. 1968 ರಲ್ಲಿ ಅವರು "ಕವಿರಾಜಮಾರ್ಗ"ವನ್ನು ವಿಸ್ತೃತವಾದ ಪೀಠಿಕೆ ಮತ್ತು ಉಪಯುಕ್ತವಾದ ಟಿಪ್ಪಣಿಗಳೊಂದಿಗೆ ಪ್ರಕಟಿಸಿದಂದಿನಿಂದ ಅವರಲ್ಲಿ ಅವರೆಗೆ ಸುಪ್ತವಾಗಿದ್ದ ಶಾಸ್ತ್ರಜ್ಞಾನ ತಾನೇ ತಾನಾಗಿ ವಿರಾಜಿಸತೊಡಗಿತು ಎನ್ನಬಹುದು. ಈ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಶ್ರೀಯುತರು ಬರೆದಿರುವ ಲೇಖನಗಳು ಮತ್ತು ಪುಸ್ತಕಗಳನ್ನು ಪರಿಶೀಲಿಸಿದರೆ, ಎಂ. ವಿ. ಸೀತಾರಾಮಯ್ಯನವರು ತಾವು ಆರಿಸಿಕೊಂಡ ವಿಷಯವನ್ನು ಎಷ್ಟು ಕೂಲಂಕಷವಾಗಿ ವಿವೇಚಿಸಿ, ತಮ್ಮ ಅಭಿಪ್ರಾಯಗಳನ್ನು ಎಷ್ಟು ಸ್ಪಷ್ಟವಾಗಿ ನಿರೂಪಿಸಿರುವರೆನ್ನುವುದನ್ನು ಗಮನಿಸಬಹುದು. ಪ್ರಕೃತ ಪ್ರಬಂಧದಲ್ಲಿ ಮೊದಲು ಅವರ ಬಿಡಿ ಬಿಡಿಯಾದ ಲೇಖನಗಳನ್ನು ಅವಲೋಕಿಸಿ ಅನಂತರ ಅವರು ಬರೆದಿರುವ ಪುಸ್ತಕಗಳನ್ನು ಪರಿಚಯ ಮಾಡಿಕೊಡಲಾಗುವುದು.

"ಬಾಳಿನ ಬುತ್ತಿ" (1957) ಎಂಬ ಪ್ರಬಂಧ ಸಂಕಲನದಲ್ಲಿ ಬರೆದಿರುವ "ಕನ್ನಡ ನುಡಿಯ ಅಳಿವು-ಉಳಿವು" (ಪುಟ : 116-130) ಎಂಬ ವಿಚಾರ ಪ್ರಬಂಧವನ್ನು ಕಂಡರೆ, ಲೇಖಕರು ತಮ್ಮ ವಿದ್ಯಾರ್ಥಿಗಳಿಗೆ ಪಾಠ ಹೇಳಿಕೊಡುವ ಸಂದರ್ಭದಲ್ಲಿ ತಾವು ಮಾಡಿಕೊಂಡ ಟಿಪ್ಪಣಿಗಳನ್ನೆಲ್ಲ ಒಂದು ಪ್ರಬಂಧ ರೂಪದಲ್ಲಿ ಬರೆದಿರುವಂತಿದೆ. ಕನ್ನಡ ಭಾಷೆಯ ಚರಿತ್ರೆಯನ್ನು ಅಧ್ಯಯನ ಮಾಡುವಲ್ಲಿ, ಅದರಲ್ಲಿನ ಶಬ್ದಕೋಶ ಕಾಲ ಕಾಲಕ್ಕೆ ಹೇಗೆ ವ್ಯತ್ಯಾಸವಾಗುತ್ತದೆ ಎನ್ನುವ ಅಂಶ ಒಂದು ಪ್ರಮುಖವಾದ ಸಂಗತಿ. ಶಬ್ದಗಳು ಆಂತರಿಕ ಕಾರಣಗಳಿಂದ ಹೇಗೆ ಬದಲಾಯಿಸುವುವೋ ಅದೇ ರೀತಿ ಬಾಹ್ಯ ಕಾರಣಗಳಿಂದಹೆಚ್ಚು ಕಡಿಮೆಯಾಗುವುದೂ ಸಹಜ. ಪ್ರಕೃತ ಲೇಖನದಲ್ಲಿ ಉಚ್ಚಾರಣಾ ವೈಪರೀತ್ಯದಿಂದ ಕೆಲವು ಹಳಗನ್ನಡ ಶಬ್ದಗಳು ಹೇಗೆ ರೂಪಾಂತರವಾಗಿದೆ ಯೆಂಬುದನ್ನು ಪ್ರಸ್ತಾಪಿಸುತ್ತಾ ಪೊಸಂತಿಲ್ > ಹೊಸಲು ; ತಣ್ಗುಳ್-ತಂಗಳು ; ಅಲರ್ > ಅರಲ್ > ಅರಳು-ಎಂಬ ಉದಾಹರಣೆ

ಗಳನ್ನು ಕೊಟ್ಟಿರುವರು. ಕೆಲವು ಹೇಳಿ ಶಬ್ದದ ಮೂಲಾರ್ಥ ಹೇಗೆ ವಿಸ್ತೃತವಾಗುವುದೆನ್ನುವುದಕ್ಕೆ ಎಣ್ಣೆ, ಕಂಪು, ಕವಳ, ಅಮ್ಮ-ಮೊದಲಾದ ಸುಪ್ರಸಿದ್ಧ ದೃಷ್ಟಾಂತಗಳನ್ನು ಕೊಟ್ಟಿರುವರು. ಅನ್ಯ ಭಾಷಾ ಸಂಸರ್ಗದಿಂದ ಕನ್ನಡದ ಕೆಲವು ಪ್ರಾಚೀನ ಶಬ್ದಗಳು ಬಳಕೆ ತಪ್ಪುವುದಲ್ಲದೆ, ಹೊಸ-ಹೊಸ ಶಬ್ದಗಳು ಹೇಗೆ ಪ್ರಬಲವಾಗುವುವು ಎನ್ನುವುದನ್ನು ನಿದರ್ಶನ ಪೂರ್ವಕವಾಗಿ ಪರಿಚಯ ಮಾಡಿಕೊಟ್ಟಿರುವರು. ಶಾಸ್ತ್ರ ವಿಚಾರವನ್ನು ಸ್ವಾರಸ್ಯವಾಗಿ ನಿರೂಪಿಸುವುದು ಒಂದು ನೈಪುಣ್ಯವೇ ಸರಿ. ಪ್ರಕೃತ ಲೇಖಕರು ಈ ಕಲೆಯನ್ನು ಹೇಗೆ ಸಾಧಿಸಿರುವರು ಎನ್ನುವುದಕ್ಕೆ, ಪ್ರಕೃತ ಪ್ರಬಂಧದಿಂದ ಒಂದೆರಡು ಸಂಗತಿಗಳನ್ನು ಇಲ್ಲಿ ಉದಾಹರಿಸಬಹುದು :

"ನಿತ್ಯವೂ ಮೂಡಿ ನಮ್ಮೆದುರು ಬೆಳಗುವ 'ನೇಸರ್', 'ಸೂರ್ಯ' ನಾದ: ನೇಸರನ್ನು ನಾವಿಂದು ಕಾಣಬೇಕಾದರೆ ಕನ್ನಡ ನುಡಿಗಳನ್ನು ನಮಗಾಗಿ ಕಾದಿಟ್ಟ ಹಿಂದಿನ ಕವಿಗಳ ಕಾವ್ಯ ಪ್ರಪಂಚಕ್ಕೆ ಹೋಗಬೇಕು. ಇಂದಿನ ಕಾವ್ಯದ ಬರವಣಿಗೆಯಲ್ಲಿ ಕೂಡ ಈ ಮಾತನ್ನು ಬಳಸಲು ಹಿಂಜರಿಯುವಂತಾಗಿದೆ ....(ಪು 118)

"ಕನ್ನಡ ಸೂರ್ಯನಿಗೇ ಈ ಗತಿಯಾದ ಮೇಲೆ ಚಂದ್ರನೇನು! 'ಪೆರೆ'-'ತಿಂಗಳ್' ಕನ್ನಡ ಬಾನಿನಲ್ಲಿ ಇನ್ನು ಬೆಳಗಲಾಗದಂತೆ ಮುಳುಗಿಯೇ ಹೋಯಿತು ಅದರೆಡೆಯಲ್ಲಿ ಚಂದ್ರ ಪ್ರಕಾಶಿಸ ತೊಡಗಿದ: ಕನ್ನಡ ತಾಯಿ ಕನ್ನಡ ಹಸುಳೆಗೆ: 'ಚಂದ್ರ' ನನ್ನೇ ತೋರಬೇಕಾಯಿತು: 'ತಿಂಗಳ ಮಾಮ'ನು 'ಚಂದಮಾಮ'ನಾದ.... (ಪು118)

"ಸಾ"ಯುವುದೂ 'ಮಡಿ'ಯುವುದೂ ಸಾಮಾನ್ಯರನ್ನು ಕುರಿತು ಹೇಳುವ ಮಾತು: ಮೇಲುಮಟ್ಟದ ಜನ 'ದಿವಂಗತ'ರೋ 'ನಿಧನ'ರೋ ಆಗುತ್ತಾರೆ....(ಪು. 119)

ಸಂಸ್ಕೃತದ ಪ್ರಭಾವದಿಂದ ಎಷ್ಟೋ ಅಚ್ಚಗನ್ನಡ ಶಬ್ದಗಳು ಹೀಗೆ ಕಣ್ಮರೆಯಾದರೆ, ಆಡಳಿತ ಭಾಷೆಗಳೆನ್ನಿಸಿಕೊಂಡ ಹಿಂದೂಸ್ತಾನಿ ಮತ್ತು ಇಂಗ್ಲಿಷ್ ಮೂಲಕ ಹಳೆಯ ಶಬ್ದಗಳ ಉಚ್ಚಾಟನೆ ಮತ್ತು ಹೊಸ ಶಬ್ದಗಳ ಪ್ರವೇಶಗಳ ಸಂಖ್ಯೆಗಂತೂ ಇತಿಮಿತಿಯೇ ಇಲ್ಲ. ಲೇಖಕರ ಗಮನ ಈ ಕಡೆಯೂ ಹರಿದಿದೆ.

"ನಾವು ಹಾಕುತ್ತಿದ್ದ 'ಕೆರ', 'ಮೆಟ್ಟು', 'ಪಕ್ಕಡ' (?), 'ಚಪ್ಪಲಿ'ಯ ಆಕ್ರಮಣದ ಎದುರು ಕ್ರಮ ಕ್ರಮವಾಗಿ ಹಿಮ್ಮೆಟ್ಟುತ್ತಿರುವುದನ್ನು ಗಮನಿಸಬೇಕು : ನಾಗರಿಕರ ಪಾಲಿಗೆ ಈ ಮಾತುಗಳು ಆಗಲೇ ಹಳಗನ್ನಡವೋ, ಹಳ್ಳಿಯ ಮಾತುಗಳೋ ಆಗಿವೆ! ನಮ್ಮ ಹೆಣ್ಣುಮಕ್ಕಳ 'ರವಿಕೆ (?)', 'ಕುಪ್ಪಸ'(< ಪಾರ್ಸ)ಗಳು 'ಬ್ಲೌಸು'ಗಳೂ, 'ಜಾಕೆಟ್ಟು'ಗಳೂ, 'ಚೋಲಿ'

ಆಗಿವೆ. 'ತಟ್ಟೆ'ಗಳು, ಗಳೂ 'ಪ್ಲೇಟು'ಗಳಾಗಿವೆ. 'ಬಟ್ಟಲು'ಗಳು 'ಕಪ್ಪು' ಗಳಾಗಿವೆ....(ಪು. 121)

ಪ್ರಬಂಧಕಾರರೇ ಹೇಳುವಂತೆ "ಹೀಗೆಯೇ ಅನೇಕ ಪುಟಗಳು ತುಂಬುವಷ್ಟು ಉದಾಹರಣೆಗಳನ್ನು ಕೊಡುತ್ತ ಹೋಗಬಹುದು" ಎನ್ನುವ ಅಭಿಪ್ರಾಯ ಒಪ್ಪತಕ್ಕದ್ದು. ಜೀವಂತ ಭಾಷೆಯಲ್ಲಿ ಈ ಬಗೆಯಾದ ಬದಲಾವಣೆಗಳನ್ನು ಅಡ್ಡಗಟ್ಟುವುದು ಸಾಧ್ಯವಾಗದ ಕಾರ್ಯವಾದರೂ ಪರಸ್ಪರ ಭಾಷೆಗಳಲ್ಲಿ ಯಾವ ರೀತಿ ವಿನಿಮಯವಾಗಬೇಕೆಂಬುದನ್ನು ಕೆಲವು ಸೂತ್ರಗಳ ಮೂಲಕ ತಿಳಿಸಿ, ಪ್ರಕೃತ ವಿಷಯವನ್ನು ಮುಕ್ತಾಯ ಮಾಡುವರು. ಭಾಷಾ ಚರಿತ್ರೆಯನ್ನು ಈ ರೀತಿ ಬರೆದಿದ್ದೇ ಆದರೆ, ಇಲ್ಲವೇ ಕಲಿಸಿಕೊಟ್ಟದ್ದೇ ಆದರೆ, ಅದರಲ್ಲಿ ಯಾರಿಗಾದರೂ ಅಭಿರುಚಿಯನ್ನು ಉಂಟು ಮಾಡಬಹುದಲ್ಲವೆ? "ರೀತಿರಾತ್ಮಾ ಕಾವ್ಯಸ್ಯ" ಎಂಬ ವಾಮನನ ಮಾತು ಕಾವ್ಯಕ್ಕೆ ಮಾತ್ರ ಅನ್ವಯಿಸುವುದಿಲ್ಲ. ಅದು ಭಾಷಾಶಾಸ್ತ್ರದಂತಹ ಇತರ ಪ್ರಕಾರಗಳಿಗೂ ಅನ್ವಯಿಸುವುದು ಎನ್ನುವುದಕ್ಕೆ ಎಂ.ವಿ. ಸೀತಾರಾಮಯ್ಯನವರು ಬರೆದಿರುವ ಈ ಸಣ್ಣ ಲೇಖನ ತೋರುಗಂಬದಂತಿದೆ ಎನ್ನಬಹುದು.

"ಹೊಸ ಕನ್ನಡ ಸಾಹಿತ್ಯ ಮತ್ತು ಇತರ ಲೇಖನಗಳು" (1958) ಎಂಬ ಪ್ರಬಂಧ ಸಂಕಲನದಲ್ಲಿರುವ "ಕೆಲವು ಅಕ್ಷರಗಳ ಅನುನಾಸಿಕೋಚ್ಚಾರ" (ಪು 146–156) ಎಂಬ ಲೇಖನದಲ್ಲಿ ಕೇಶಿರಾಜನು 'ಯ.ವ.ಲ' ಗಳನ್ನು ಅನುನಾಸಿಕ ಮತ್ತು ಅನನುನಾಸಿಕಗಳೆಂದು ಕರೆದಿರುವುದರ ವೈಚಿತ್ರ್ಯವೇನೆಂಬುದನ್ನು ಸಕಾರಣವಾಗಿ ಚರ್ಚಿಸಿದೆ. ಕೇಶಿರಾಜನು ಕೊಟ್ಟಿರುವ ಉದಾಹರಣೆಗಳನ್ನೇ ಅವಲಂಬಿಸಿ, ಆತನ ಸೂಚಿಸಿರುವ ಶಬ್ದ ರಚನೆಯನ್ನು ವಿಶ್ಲೇಷಿಸಿ, ಈ ವರ್ಣಗಳು ಅನುನಾಸಿಕ ವರ್ಣಗಳ ಸಾಹಚರ್ಯದಿಂದಲೋ (ಉದಾ: ಮೇಯಿಸಿದಂ, ಮಯಣಂ ಮಾಯಂ) ಇಲ್ಲವೇ ಆಯಾ ಶಬ್ದಗಳಲ್ಲಿ ಮೊದಲಿದ್ದ ಅನುನಾಸಿಕ ವರ್ಣಕ್ಕೆ ಆದೇಶವಾಗಿ ಬಂದ ಕಾರಣದಿಂದಲೋ ಹೀಗಾಗಿರಬಹುದೆಂದು ಸಾಕಷ್ಟು ವಿವರವಾಗಿ ಸಮರ್ಥಿಸಿರುತ್ತಾರೆ. 'ಕನ್ನಡ ಕೈಪಿಡಿ'ಯಲ್ಲಿ ಉಕ್ತವಾಗಿರುವ 'ರ' ಮತ್ತು 'ಳ' ಕಾರಗಳನ್ನೂ ಈ ಪಟ್ಟಿಯಲ್ಲಿ ಅಳವಡಿಸಬಹುದೆಂದು ಸಕಾರಣವಾಗಿ ತೋರಿಸಿಕೊಟ್ಟಿರುತ್ತಾರೆ. ಪ್ರಕೃತ ಲೇಖಕರ ಪರಿಶೀಲನೆಯಲ್ಲಿ ಆಧುನಿಕ ಭಾಷಾ ವಿಜ್ಞಾನಿಗಳ ವೈಚಾರಿಕ ದೃಷ್ಟಿಯನ್ನು ಪಂಕ್ತಿ-ಪಂಕ್ತಿಯಲ್ಲಿಯೂ ಕಾಣಬಹುದು. ಕೇಶೀರಾಜನು ಹಳಗನ್ನಡದ ಸ್ವರೂಪವನ್ನು ನಿರ್ದೇಶಿಸುವಲ್ಲಿ ಆಗಿಂದಾಗ್ಗೆ ಆತನ ಕಾಲಕ್ಕೆ ಸೇರಿದ ನಡುಗನ್ನಡ ಭಾಷಾರೂಪಗಳನ್ನು ಅಶುದ್ಧಗಳೆಂದು ಹೇಳಿರುವನಷ್ಟೆ. ಅದೇ ರೀತಿ, ಕೆಲವೆಡೆಗಳಲ್ಲಿ ವ್ಯಾವಹಾರಿಕ ಭಾಷೆಯ ಪ್ರಯೋಗಗಳನ್ನೂ ಲಕ್ಷಿಸಿರುವುದು ಅವನ ಸ್ವತಂತ್ರ ವಿಚಾರ ಶಕ್ತಿಯ ಸಂಕೇತ. ಪ್ರಕೃತ ಯ, ವ, ಲ ಗಳು ಅಂಥ ನಿದರ್ಶನಗಳಲ್ಲಿ ಒಂದು. ಆಧುನಿಕ

ಭಾಷಾ ವಿಜ್ಞಾನದ ಮೇರೆಗೆ ಇವುಗಳನ್ನು 'ಅನುನಾಸಿಕೀಕರಣ' (Nasalisation) ಎಂದು ಕರೆಯುವುದುಂಟು. ಇಂದಿಗೂ ಈ ಬಗೆಯಾದ ಅನುನಾಸಿಕೀಕರಣೋಚ್ಚಾರಣೆ, ಕೆಲವು ವೇಳೆ ವ್ಯಕ್ತಿಗತವಾಗಿಯೋ ಇಲ್ಲವೇ ಪ್ರಾದೇಶಿಕವಾಗಿಯೋ ರೂಢಿಯಲ್ಲಿದೆ. (ಉದಾ: ಅಸಷ್ಟು ~ ಅಸಯ್ಯು (ಅಸಯ್ಯು). ನಮ್ಮ ಪ್ರಾಚೀನ ವ್ಯಾಕರಣಗಳನ್ನು ಆಧುನಿಕ ಭಾಷಾ ವಿಜ್ಞಾನದ ತತ್ವಗಳಿಗನುಸಾರವಾಗಿ ವಿಶ್ಲೇಷಿಸಿದರೆ, ವ್ಯಾಕರಣದ ವ್ಯಾಸಂಗ ಎಷ್ಟು ಸ್ವಾರಸ್ಯವಾಗಿರುತ್ತದೆ ಎನ್ನುವುದಕ್ಕೆ ಎಂ. ವಿ. ಸೀತಾರಾಮಯ್ಯನವರ ಈ ಲೇಖನ ಒಂದು ಉತ್ತಮ ಉದಾಹರಣೆ.(''....Nasalised froms of three of the Semivowels *y, l, v,* are also attested as junctional features in Vedic Sanskrit and duly noted by the Phoneticians'' ಎಂಬ ಡಬ್ಲ್ಯು. ಎಸ್. ಅಲೆನ್ ಅವರ ಹೇಳಿಕೆಯನ್ನು ಇಲ್ಲಿ ಪ್ರಾಸಂಗಿಕವಾಗಿ ನೆನೆಯಬಹುದು. ಉದಾ: ಸಮ್ + ಯುಧಿ = ಸಂಯ್ ಯುಧಿ: ಸುವರ್‌ಗಮ್ + ಲೋಕಮ್ = ಸುವರ್‌ಗಲ್ ಲೋಕಮ್: ಯಜ್ಞಮ್ + ವಷ್ಟು = ಯಜ್ಞವ್ ವಷ್ಟು – W. S Allen : Phonetics in Ancient India (1961) P. 39. ಈ ಸಂಸ್ಕೃತ ಉದಾಹರಣೆಗಳಲ್ಲಿಯೂ ಅನುನಾಸಿಕ ನಾದ ಚರ್ಯದಿಂದ. ಯ, ವ, ಲ–ಗಳು ಸಂಧಿಯಾಗುವಾಗ ಅನುನಾಸಿಕೀಕರಣವಾಗಿರುವುದನ್ನು ಗಮನಿಸಬಹುದು.)

ಅಣ್ಣಾಮಲೈ ವಿಶ್ವವಿದ್ಯಾನಿಲಯದವರು ಮೈಸೂರಿನಲ್ಲಿ ನಡೆಸಿದ್ದ ಕನ್ನಡ ವ್ಯಾಕರಣಗಳನ್ನು ಕುರಿತ ವ್ಯಾಸಂಗಗೋಷ್ಠಿಗಾಗಿ ಇಂಗ್ಲಿಷಿನಲ್ಲಿ ಬರೆದಿರುವ "The Case System of Kannada" (ಕನ್ನಡದ ವಿಭಕ್ತಿ ಪದ್ಧತಿ) ಎಂಬ ಲೇಖನ, ಕನ್ನಡ ವಿಭಕ್ತಿ ಪ್ರತ್ಯಯಗಳ ಚರಿತ್ರೆಯನ್ನು ಸಾಕಷ್ಟು ಶಾಸ್ತ್ರೀಯವಾಗಿ ಪರಿಚಯ ಮಾಡಿಕೊಡುವಂತಿದೆ. ಪ್ರಕೃತ ಪ್ರಬಂಧದಲ್ಲಿ ಲೇಖಕರು ಕನ್ನಡ ಶಾಸನಗಳಿಂದ ಮೊದಲ್ಗೊಂಡು, ಇಂದಿನ ಪ್ರಾದೇಶಿಕ ಕನ್ನಡ ರೂಪಗಳವರೆಗೆ ಪ್ರತಿಯೊಂದು ವಿಭಕ್ತಿ ಪ್ರತ್ಯಯವೂ ಕಾಲ-ಕಾಲಕ್ಕೆ ಹೇಗೆ ರೂಪಾಂತರ ಪಡೆದಿದೆಯೆನ್ನುವುದನ್ನು ಕೂಲಂಕಷವಾಗಿ ವಿವೇಚಿಸಿರುತ್ತಾರೆ. ತೃತೀಯಾ ವಿಭಕ್ತಿ ಪ್ರತ್ಯಯದ ಸ್ವರೂಪವನ್ನು ಪರಿಶೀಲಿಸುವಲ್ಲಿ 'ಕೈಲಿ'. 'ಕೈಯಿಂದ' ಎಂಬ ಪ್ರಯೋಗಗಳ ಮೂಲಕ ತೃತೀಯಾ ವಿಭಕ್ತ್ಯರ್ಥವನ್ನು ವ್ಯಕ್ತಪಡಿಸುವುದರ ಕಡೆಗೆ ನಮ್ಮ ಗಮನವನ್ನು ಸೆಳೆದಿರುವುದು ಗಮನಾರ್ಹವಾದುದು. [ಉದಾ : ಎತ್ತಿನ ಕೈಲಿ ಗಾಡಿ ಎಳೆಯೋದಕ್ಕೆ ಆಗೋದಿಲ್ಲ ವಿಷದ ಕೈಯಿಂದ ಮಡಿದನ್ (ರಾಘವಾಂಕನ ಹರಿಶ್ಚಂದ್ರ ಕಾವ್ಯ 12·10)]. ಪಂಚಮೀ ವಿಭಕ್ತಿ ಪ್ರತ್ಯಯದ ವೈಚಿತ್ರ್ಯವನ್ನು ಪ್ರಸ್ತಾಪಿಸುವಲ್ಲಿ '**ಕಣ್ಣಿಂದ ನೀರು ಬಂತು**' ಮತ್ತು "**ಕಣ್ಣಿಂದ ನೋಡು**" ಎಂಬ ಉದಾಹರಣೆಗಳನ್ನು ಕೊಟ್ಟು,

ಇವುಗಳಲ್ಲಿ ಪ್ರಯೋಗವಾಗಿರುವ “ಇಂದ” ಎಂಬ ಒಂದೇ ಪ್ರತ್ಯಯ ಸಂದರ್ಭೋಚಿತವಾಗಿ, ಮತ್ತು ಅನುಕ್ರಮವಾಗಿ ಹೇಗೆ ತೃತೀಯಾ ಮತ್ತು ಪಂಚಮ್ಯರ್ಥಗಳನ್ನು ವ್ಯಕ್ತಪಡಿಸುತ್ತವೆ ಎನ್ನುವುದನ್ನು ವಿಶದಪಡಿಸಿರುವುದು ಗಮನಾರ್ಹವಾದುದು. ನಮ್ಮ ವೈಯಾಕರಣರು ಸಂಸ್ಕೃತದ ನಿಯಮಕ್ಕೆ ಕಟ್ಟುಬಿದ್ದು, ಪಂಚಮೀವಿಭಕ್ತಿಗಾಗಿಯೇ ಪ್ರತ್ಯೇಕವಾದ ಒಂದು ಪ್ರತ್ಯಯವನ್ನು ವಿಧಿಸಿರುವುದು ಎಷ್ಟು ಕೃತಕವಾದುದೆನ್ನುವುದನ್ನು ಈಗಾಗಲೇ ಆಧುನಿಕ ಭಾಷಾವಿಜ್ಞಾನಿಗಳು ತೋರಿಸಿಕೊಟ್ಟಿರುತ್ತಾರೆ. ಪ್ರಕೃತ ಲೇಖಕರು ಈ ಪ್ರಬಂಧದೊಂದಿಗೆ ಕೊಟ್ಟಿರುವ ವಿಭಕ್ತಿ ಪ್ರತ್ಯಯಗಳ ಪಟ್ಟಿಯನ್ನು ನೋಡಿದ ಕೂಡಲೇ ಕ್ರಿ. ಶ. 6ರಿಂದ 10ರ ವರೆಗಿನ ಕನ್ನಡ ಶಾಸನಗಳಲ್ಲಿ ಯಾವುದರಲ್ಲಿಯೂ ಪಂಚಮೀ ವಿಭಕ್ತ್ಯರ್ಥವನ್ನು ವ್ಯಕ್ತಪಡಿಸಲು ಪ್ರತ್ಯೇಕವಾದ ಪ್ರತ್ಯಯವಿಲ್ಲದಿರುವುದನ್ನು ಕಂಡರೆ ಈ ಬಗ್ಗೆ ಆಧುನಿಕರ ಆಕ್ಷೇಪಣೆ ಎಷ್ಟರಮಟ್ಟಿಗೆ ಸಿಂಧುವಾದುದೆನ್ನುವುದು ಸ್ಪಷ್ಟವಾಗುತ್ತದೆ. ಡಾ। ಕಾಲ್ಡ್‌ವೆಲ್ ಸೂಚಿಸುವ ಸಹಯೋಗ ವಿಭಕ್ತಿ ಪ್ರತ್ಯಯವೆನ್ನುವುದನ್ನು (Conjunative or Social case) ಕುರಿತಂತೆ, ಭಟ್ಟಾಕಳಂಕನ ಶಬ್ದಾನುಶಾಸನದಲ್ಲಿ ಸೂಚನೆ ಕಂಡು ಬರುವುದೆಂದು ಲೇಖಕರು ತೋರಿಸಿ ಕೊಟ್ಟಿರುವುದು ಸ್ತುತ್ಯವಾದ ಸಂಗತಿ. ‘ಒಡನೆ’ ಎನ್ನುವುದು ಸ್ವತಂತ್ರಶಬ್ದವೆನ್ನಿಸಿದರೂ ಅದು ಸಹಯೋಗಾರ್ಥದಲ್ಲಿ ಹೇಗೆ ಕಂಡುಬರುವುದೆನ್ನುವುದನ್ನು ಈ ಮೊದಲೇ ಕನ್ನಡ ವೈಯಾಕರಣರು ಗಮನಿಸಿರುವುದು ಯಾರಿಗಾದರೂ ಕುತೂಹಲಕಾರಿಯಾದ ವಿಷಯ. ಆತನು “ಸಹಾರ್ಥೇನ ಪ್ರಧಾನೇ” ಎಂಬುದಕ್ಕೆ ಕೊಟ್ಟಿರುವ “ಮಗನಿಂ ಕೂಡಿ ಬಂದಂ ತಂದೆ” ಉದಾಹರಣೆಯೂ (ಸೂತ್ರ 211). ಈ ಅಂಶವನ್ನೇ ಪುಷ್ಟೀಕರಿಸುತ್ತದೆ. ಪ್ರಾಚೀನ ವೈಯಾಕರಣನೊಬ್ಬನ ಸೂಚನೆಗೂ ಆಧುನಿಕ ಭಾಷಾವಿಜ್ಞಾನಿಯೊಬ್ಬನ ವಿವೇಚನೆಗೂ ಇರುವ ಈ ಸಾದೃಶ್ಯವನ್ನು ತೋರಿಸಿಕೊಟ್ಟಿರುವ ಲೇಖಕರ ಈ ಪ್ರಯತ್ನ ಶ್ಲಾಘನೀಯವಾದುದು.

ವಿಭಕ್ತಿ ಪ್ರತ್ಯಯಗಳ ಚರಿತ್ರೆಯನ್ನು ಸಮಗ್ರವಾಗಿ ಪರಿಶೀಲಿಸಿರುವ ಈ ಪ್ರಬಂಧದಲ್ಲಿ “ವಿಭಕ್ತಿ ಪಲ್ಲಟದ” ಬಗ್ಗೆ, ಲೇಖಕರ ಗಮನ ಸಾಕಷ್ಟು ಹರಿಯದಿರುವುದು ಸೋಜಿಗವಾದ ಸಂಗತಿ. ‘‘It is usual for our ancient grammarians to describe in detail what is known as ‘‘Vibhakti Pallata’’ or use of one case in the sense of another. The grammarians had to frame rules in this regard, because Poets had perpetrated those grammatical gymnastics, which have practically no relevancy in the natural use of our language’’. (Kannada Studies, Vol. II, No. 2. July 1966-pp. 14–15) ಎಂಬುದಾಗಿ ಲೇಖಕರು

ವ್ಯಕ್ತಪಡಿಸಿರುವ ಅಭಿಪ್ರಾಯ ಚರ್ಚಾಸ್ಪದವಾದುದು. ಆಯಾ ವಿಭಕ್ತಿ ಪ್ರತ್ಯಯದ ಚರಿತ್ರೆಯನ್ನು ವಿಶ್ಲೇಷಿಸುವಾಗ ಲೇಖಕರು ವ್ಯಾವಹಾರಿಕ ರೂಪಗಳನ್ನೂ ಪರಿಗಣಿಸಿರುವಲ್ಲಿ ವಿಭಕ್ತಿ ಪಲ್ಲಟಕ್ರಿಯೆಗೂ ಭಾಷೆಯನ್ನು ಸ್ವಾಭಾವಿಕ ಬಳಸುವ ರೂಢಿಗೂ ಯಾವ ಸಂಬಂಧವೂ ಇಲ್ಲವೆಂದೂ ಇದು ಕೇವಲ ಕವಿಗಳು ಕೈಕೊಂಡ ವ್ಯಾಕರಣದ ಕಸರತ್ತೆಂದೂ (grammatical gymnastics) ಆಕ್ಷೇಪಿಸಿರುವುದು ಸಾಧುವಲ್ಲವೆಂದು ಹೇಳಬೇಕಾಗುತ್ತದೆ. ಏಕೆಂದರೆ, ಕೇಶಿರಾಜನು ವಿಭಕ್ತಿಪ್ರತ್ಯಯಗಳ ಸ್ವರೂಪ ಮತ್ತು ವಿಭಕ್ತ್ಯರ್ಥಗಳನ್ನೆಲ್ಲಾ ವಿಸ್ತಾರವಾಗಿ ವಿವೇಚಿಸಿದ ತರುವಾಯ "ಇಂತೀ ಪೇಳ್ದ ವಿಭಕ್ತಿಗಳೆಂತುಂ ಪಲ್ಲಟಿಸುಗುಂ ಯಥೇಷ್ಟಂ" ಎಂದು ಬಹು ಸ್ವಾರಸ್ಯವಾಗಿ ಪೀಠಿಕೆಹಾಕಿ "ಕಡೆಗೆ **ಇಂತು ನುಡಿವ ಬಿನ್ನಣದಿಂ ಕಾರಕಮ್ ನಿಯತಾರ್ಥಮೆಂಪಜ್‌ವುದು**" (ಡಿ. ಎಲ್. ಎನ್. ಸಂಪಾದಿತ ಮುದ್ರಣ, 1959, ಪು. 119) ಎಂದು ಹೇಳಿರುವ ವಾಕ್ಯದಲ್ಲಿ, ಈ ತೆರನಾದ ವಿಭಕ್ತಿ ಪಲ್ಲಟಕ್ಕೆ ವ್ಯಾವಹಾರಿಕ ಭಾಷಾ ಪದ್ಧತಿಯೇ ಮುಖ್ಯ ಕಾರಣವೆಂದು ತಿಳಿಸಿರುವುದನ್ನು ನಾವು ಮರೆಯುವಂತಿಲ್ಲ. ಈ ವಾಕ್ಯದಲ್ಲಿ ಪಾಠ ಭೇದವಿದ್ದುದರಿಂದ ಇದಕ್ಕೆ ಈವರೆಗೆ ಹೆಚ್ಚು ಬೆಲೆ ಬಂದಿರಲಿಲ್ಲ. ಡಿ. ಎಲ್. ನರಸಿಂಹಾಚಾರ್ಯರು ಈ ಕ್ಲೇಶವನ್ನು ಪರಿಹರಿಸಿದ ಮೇಲೆ ವಿಭಕ್ತಿ ಪಲ್ಲಟದ ತತ್ವದ ಮೇಲೆ ಹೊಸ ಬೆಳಕನ್ನು ಬೀರಿದಂತಾಯಿತು. ಈ ಹಿನ್ನಲೆಯಲ್ಲಿ ವಿಭಕ್ತಿ ಪಲ್ಲಟವನ್ನು ಕುರಿತಂತೆ ಪ್ರಬಂಧಕಾರರು ವ್ಯಕ್ತಪಡಿಸಿರುವ ಅಭಿಪ್ರಾಯವನ್ನು ಪರಿಶೀಲಿಸಿದರೆ, ಅದು ಸಾಧುವಲ್ಲವೆಂದು ಸ್ವವಿದಿತವಾಗುತ್ತದೆ. ಶಾಸನಗಳು, ಕಾವ್ಯಗಳು ಮತ್ತು ವ್ಯಾವಹಾರಿಕ ಭಾಷೆಯ ಪ್ರಭೇದಗಳನ್ನು ಪರ್ಯಾಲೋಚಿಸಿದರೆ, ವಿಭಕ್ತಿ ಪಲ್ಲಟಕ್ರಿಯೆ ಎಷ್ಟು ಸಹಜವಾದುದೆನ್ನುವುದು ಮನವರಿಕೆಯಾಗುತ್ತದೆ. ದ್ರಾವಿಡ ಭಾಷೆಗಳನ್ನು ಪರಸ್ಪರವಾಗಿ ಹೋಲಿಸಿ ನೋಡಿದಾಗಲೂ ಈ ವ್ಯಾಕರಣ ಕ್ರಿಯೆಯಲ್ಲಿ ಕಂಡು ಬರುವ ಸಾದೃಶ್ಯ ಮತ್ತು ವೈದೃಶ್ಯಗಳು ತುಂಬ ಗಮನಾರ್ಹವಾದುವು.

"ಕವಿರಾಜಮಾರ್ಗದಲ್ಲಿ ಕಾರಕ ವಿಚಾರ" (ಸಾಧನೆ *iv-iii*, ಪು. 146-155) ಎಂಬ ಲೇಖನವು, ಶ್ರೀಯುತರೇ ತಿಳಿಸಿರುವಂತೆ ಡಾ|| ಪಿ. ಕೃಷ್ಣಸ್ವಾಮಯ್ಯಂಗಾರರು ಈ ಬಗ್ಗೆ ಎತ್ತಿರುವ ಆಕ್ಷೇಪಣೆಗಳಿಗೆ ನೀಡಿರುವ ಒಂದು ವಿವರಣೆ. ಕವಿರಾಜಮಾರ್ಗವನ್ನು ಪರಿಷ್ಕರಿಸಿ, ಅದಕ್ಕೆ ವಿಸ್ತೃತವಾದ ಟಿಪ್ಪಣಿಗಳನ್ನು ಬರೆಯುವಲ್ಲಿ ಎಂ.ವಿ.ಸೀ. ಅವರು ಅಲ್ಲಿ ಉಕ್ತವಾಗಿರುವ 'ಕಾರಕಮಾಟಿ ಕರ್ಮಕರಣಾದಿಕದಿಂ ಪ್ರಥಮಾದಿ ಭೇದ ನಿರ್ಧಾರದಿಂಪದಂ ಪಿಡಿದು ನಿಲ್ಕು ವಿಭಕ್ತಿಗಳೇೞ್ನಿಕಾಯಂ' ಎಂಬ ಹೇಳಿಕೆಯಲ್ಲಿ ವ್ಯಕ್ತವಾಗುವ ಅಸಾಂಗತ್ಯವನ್ನು ಕುರಿತು ಸಾಕಷ್ಟು ದೀರ್ಘವಾಗಿ ಪ್ರಸ್ತಾಪಿಸಿರುತ್ತಾರೆ ಈ ಮೊದಲು ಈ ವಿಚಾರವನ್ನು ಕುರಿತು ಪರ್ಯಾಲೋಚಿಸಿರುವ ಮುದರಾಸಿನ

ಮುದ್ರಣದ ಸಂಪಾದಕರು ದಿ॥ ವಿದ್ವಾನ್ ಮುಳಿಯ ತಿಮ್ಮಪ್ಪಯ್ಯ ಮೊದಲಾದವರ ಅಭಿಪ್ರಾಯಗಳನ್ನೆಲ್ಲ ಆಮೂಲಾಗ್ರವಾಗಿ ಪೃಥಕ್ಕರಿಸಿರುತ್ತಾರೆ. ಕಡೆಗೆ "ಪ್ರಕೃತಿಯೇ ಪ್ರಥಮಾರ್ಥದಲ್ಲಿ ಪ್ರಯೋಗವಾಗಿರುವುದರಿಂದ, ಅದಕ್ಕೆ ಪ್ರತ್ಯಯದ ಅಗತ್ಯತೆ ಇಲ್ಲ ವೆಂಬ ಆಧುನಿಕ ಭಾಷಾ ಶಾಸ್ತ್ರ ಸಮ್ಮತವಾದ ಅಭಿಪ್ರಾಯ ಮಾರ್ಗಕಾರನಿಗಿದ್ದಿತೇ ಎಂಬುದು ವಿಚಾರಣೀಯ" (ಕವಿರಾಜಮಾರ್ಗಂ-1968, ಟಿಪ್ಪಣಿಗಳು ; ಪು. 172-173) ಎಂಬ ಪ್ರಶ್ನೆಯನ್ನು ನಮ್ಮ ಮುಂದೆ ಇಟ್ಟಿರುತ್ತಾರೆ. ಡಾ| ಕೃಷ್ಣಸ್ವಾಮಯ್ಯಂಗಾರರು "ಕರ್ತೃಕಾರಕವಲ್ಲ ಎಂದೂ, ಸಂಬಂಧಕಾರಕ ಎಂದೂ ಹೇಳಲು ಆಧಾರ ತೋರಿಸಬೇಕಾದದು ಈ ವಾದವನ್ನು ಮಂಡಿಸಿದವರ ಕರ್ತವ್ಯ" ಎಂದು, ಈ ವಿಚಾರ ವನ್ನು ಕುರಿತವರ ಮೇಲೆ ಹೊಣೆಯನ್ನು ಹೊರಿಸಿರುವುದರಿಂದ ಅದನ್ನು ಪರಿಹರಿಸಲು ಈ ಪ್ರಬಂಧದಲ್ಲಿ ತಕ್ಕಮಟ್ಟಿಗೆ ಮಾಡಿರುತ್ತಾರೆ.

ಎಂ.ವಿ. ಸೀತಾರಾಮಯ್ಯನವರು "ಕರ್ಮ ಕರಣಾದಿ ಕಾರಕಗಳಿಗೆ ಅಧೀನಗ ಳಾದ ನಾಮ ಪ್ರಕೃತಿಗಳು ಅಸ್ವತಂತ್ರಗಳು : ಕಾರಕ ಸೂಚಕ ವಿಭಕ್ತಿ ಪ್ರತ್ಯಯಗಳು ಅವುಗಳಿಗೆ ಅತ್ಯಗತ್ಯ. (ಕನ್ನಡದಲ್ಲಿ ಈ ಸಂದರ್ಭಗಳಿಗೂ ಅಪವಾದಗಳುಂಟು. ಉದಾ: "ನೀನೆನ್ನನ್ ಕೊಂದಯ್" ಎಂದಿರಬೇಕಾದಲ್ಲಿ "ನೀನೆನ್ನ ಕೊಂದಯ್" ಎಂಬ ಪ್ರಯೋಗ), ಕರ್ತೃವಿನ ವಿಷಯ ಹಾಗಲ್ಲ. ಅದು ಸ್ವತಂತ್ರ ಕನ್ನಡದಲ್ಲಿ ಅದಕ್ಕೆಕಾರಕ ತ್ವದ ಪ್ರತ್ಯಯ ಇಲ್ಲವೂ ಇಲ್ಲ, ಬೇಕೂಇಲ್ಲ. ಕರ್ತೃ ಎನ್ನುವ ಮಾತಿನಲ್ಲಿಯೇ, ಕಾರ ಕತ್ವ ಘೋಷಿತವಾಗುತ್ತಿರುವಲ್ಲಿ. ಅದನ್ನು ಕಾರಕ ಎಂದು ಪ್ರತ್ಯೇಕವಾಗಿ ಹೇಳ ಬೇಕಾಗಿಲ್ಲ. ಇದು ಸ್ವಯಂ ಸ್ಪಷ್ಟ. ಬಹುಶಃ ಈ ಕಾರಣಕ್ಕಾಗಿ ಮಾರ್ಗಕಾರ ಕರ್ತೃವನ್ನು ಕಾರಕ ಎಂದು ಹೇಳದೆ ಬಿಟ್ಟಿದ್ದಾನೆ ಎಂದು ಕಾಣುತ್ತದೆ. "ಅವನು ಕರ್ತೃವನ್ನು ಕಾರಕವೆಂದು ಒಪ್ಪಿಲ್ಲ" ಅಥವಾ "ಅವನ ದೃಷ್ಟಿಯಲ್ಲಿ ಕರ್ತೃವೂ ಕಾರಕ" ಎಂದು ಹಾಗೋ ಹೀಗೋ ಘೋಷಿಸುವುದರಿಂದ ಏನೂ ಪ್ರಯೋಜನವಿಲ್ಲ. ಕರ್ತೃ ವನ್ನು ಬಿಟ್ಟು ಕರ್ಮಕರಣಾದಿಯಿಂದ ಷಟ್ಕಾರಕವನ್ನು ಏಕೆ ನಿರ್ದೇಶಿಸಿದ ಎನ್ನುವು ದಕ್ಕೆ ಸಮಾಧಾನ ಹೇಳುವದಷ್ಟೆ ನಮ್ಮ ಮುಂದಿನ ಪ್ರಶ್ನೆ. ಕವಿರಾಜಮಾರ್ಗದಲ್ಲಿ "ಕರ್ತೃವನ್ನು "ಅನುಕ್ತಕಾರಕ" ಎನ್ನುವುದರಿಂದ ಸಮಸ್ಯೆ ಬಗೆ ಹರಿಯುವುದಾದರೆ ಅದಕ್ಕೆ ನಮ್ಮ ಆಕ್ಷೇಪವಿಲ್ಲ". (ಪ್ರಥಮಾವಿಭಕ್ತಿ ಪ್ರತ್ಯಯವನ್ನು ನಿರ್ದೇಶಿಸುವಲ್ಲಿ ಕೇಶಿರಾಜನು 'ಬಿಂದುವದಂತಕ್ಕುೞಿದೆಡೆಗೆಂದುಂ ಪ್ರಥಮೈಕ ವಚನದೊಳ್ ಲೋಪಂ' ಎಂದು ಹೇಳಿರುವುದನ್ನು ಗಮನಿಸಿದರೆ, ಪ್ರಥಮಾವಿಭಕ್ತಿ ಪ್ರತ್ಯಯ ಎಷ್ಟು ಸೀಮಿತ ವಾದುದೆಂದು ವ್ಯಕ್ತವಾಗುತ್ತದೆ. ಅದು ಅಕಾರಾಂತ ಪ್ರಕೃತಿಗಳಲ್ಲಿ ಮಾತ್ರ ನಿತ್ಯ ವೆಂಬೂ ಉಳಿದೆಡೆಗಳಲ್ಲಿ ಅದು ಲೋಪವಾಗುವುದೆಂದೂ ಹೇಳಿರುವುದನ್ನು ಕಂಡರೆ, ಇದು ಉಳಿದ ಪ್ರತ್ಯಯಗಳಷ್ಟು ಖಚಿತವೂ ನಿತ್ಯವೂ ಅಲ್ಲವೆನ್ನುವುದು ವಿದಿತವಾಗು

ತ್ತದೆ. ಅದ್ದರಿಂದ ಪ್ರಥಮಾವಿಭಕ್ತಿ ಪ್ರತ್ಯಯ ಎಷ್ಟರ ಮಟ್ಟಿಗೆ ಅನಿರ್ದಿಷ್ಟವೋ ಹಾಗೆಯೇ ಅದಕ್ಕೆ ಸಂಬಂಧಿಸಿದ ಕರ್ತೃಕಾರಕದ ಸ್ವರೂಪವೂ ಸಹ ಸಂದಿಗ್ಧವಾದು ದೆಂದು ಹೇಳುವುದರಲ್ಲಿ ತಪ್ಪಾಗಲಾರದು. ಈ ಹಿನ್ನೆಲೆಯಲ್ಲಿ ಕವಿರಾಜಮಾರ್ಗ ಕಾರನು ಕರ್ತೃಕಾರಕವನ್ನು ಬಿಟ್ಟಿರುವುದರ ಔಚಿತ್ಯವನ್ನು ಪರಿಶೀಲಿಸಿದರೆ ಅವನ ಇಂಗಿತವೇನಿರಬಹುದೆನ್ನುವುದನ್ನು ಊಹಿಸಬಹುದಾಗಿದೆ.)

ಇನ್ನು ಷಷ್ಠಿ ಕಾರಕತ್ವದ ವಿಚಾರ. ಎಂ.ಪಿ. ಸೀತಾರಾಮಯ್ಯನವರು ಈ ತೊಡಕನ್ನು ಹೇಗೆ ಬಿಡಿಸಿರುವರೆನ್ನುವುದನ್ನು ನೋಡಬಹುದು. "ಕೆಲವು ಸಂದರ್ಭ ಗಳಲ್ಲಿ ಷಷ್ಠಿಗೂ ಕಾರಕತ್ವ ಉಂಟೆಂಬ ಬಗೆಗೆ ಪೂರ್ವ ಶಾಸ್ತ್ರಕಾರರ ಉಕ್ತಿಗಳೇ ಇವೆ. ಷಷ್ಠಿ ಸಂಬಂಧಾರ್ಥದಲ್ಲಿ ಎಂಬುದು ಪ್ರಸಿದ್ಧವಷ್ಟೆ.

ಸಂಬಂಧಃ ಕಾರಕೇಭ್ಯೋಽನ್ಯಃ ಕ್ರಿಯಾಕಾರಕ ಪೂರ್ವಕಃ
ತತ್ರಾಭಿಧೀಯಮಾನಶ್ಚ ಪ್ರಧಾನೇಽಪ್ಯುಪಚರ್ಯತೇ

ಎಂಬ ವಚನದಲ್ಲಿ ಷಷ್ಠಿ ಕಾರಕವಲ್ಲದಿದ್ದರೂ ಕ್ರಿಯಾ ಮೂಲಕವೇ ಸಂಬಂಧ ಉಂಟಾ ಗುತ್ತದೆ ಎಂಬ ಅಭಿಪ್ರಾಯ ಸ್ಪಷ್ಟವಾಗುತ್ತದೆ."ಎಂಬ ಹೇಳಿಕೆಯೊಂದನ್ನು ಉದ್ಧರಿಸಿ ನಮ್ಮ ವೈಯ್ಯಾಕರಣರ ಅಭಿಪ್ರಾಯಗಳನ್ನು ವಿಶ್ಲೇಷಿಸಿರುತ್ತಾರೆ. ನಾಗವರ್ಮನ ಭಾಷಾಭೂಷಣದಲ್ಲಿ "ಕರ್ತೃಕರ್ಮಕರಣ ಸಂಪ್ರದಾನಾಪಾದಾನ ಸ್ವಾಮ್ಯಧಿ ಕರಣಾಖ್ಯಂ ಕಾರಕಂ ಯಥಾಕ್ರಮಂ"ಎಂಬ ವೃತ್ತಿವಾಕ್ಯದಲ್ಲಿ ಸ್ವಾಮಿ ಸಂಬಂಧದ ಷಷ್ಠಿ ಕಾರಕವನ್ನು ಉಲ್ಲೇಖಿಸಿದ್ದಾನೆ; ಶಬ್ದಸ್ಮೃತಿಯಲ್ಲಿ ಮಾತ್ರ ಷಷ್ಠಿಯನ್ನು ಬಿಟ್ಟು ಆರು ಕಾರಕಗಳನ್ನೇ ಹೇಳಿದ್ದರೂ "ವಿಭಕ್ತಿಗಳದರ್ಕೆ ಕಾರಕವಶದಿಂ"ಎಂದು ಹೇಳು ವಲ್ಲಿ ಏಳು ವಿಭಕ್ತಿಗಳನ್ನೂ ಉಲ್ಲೇಖಿಸಿರುವುದರಿಂದ ಷಷ್ಠಿಗೂ ಕಾರಕವನ್ನು ಸೂಚಿಸಿ ದಂತೆಯೇ ಆಯಿತು. ಕೇಶಿರಾಜನು ಕೂಡ ಏಳು ನಾಮ ವಿಭಕ್ತಿಗಳೂ "ಕಾರಕ ವಶದಿಂ ಪತ್ತುಗುಂ"ಎಂದೇ ಹೇಳಿದ್ದಾನೆ. ಮಾರ್ಗಕಾರನ ಲಕ್ಷ್ಯಪದ್ಯದ (*i*-115) 'ಕಾರಕಯುಕ್ತ ವಿಭಕ್ತ್ಯನು ಕ್ರಮಂ'ಎಂಬ ಮಾತಿಗೂ ಏಳು ವಿಭಕ್ತಿಗಳೂ ಕಾರಕಾ ಧೀನವಾಗಿ ಹತ್ತುವುವು ಎಂದೇ ಅರ್ಥ"ಎನ್ನುವರು. ಪ್ರಕೃತ ಕವಿರಾಜಮಾರ್ಗಕಾರ ನಲ್ಲಿ ಕಂಡು ಬರುವ ಅಸಾಂಗತ್ಯವನ್ನು ಪರಿಹರಿಸಲು, ಕರ್ತೃಕಾರಕವನ್ನು 'ಅನುಕ್ತ ಕಾರಕ'ವೆಂದು ಗ್ರಹಿಸುವಂತೆ, ಷಷ್ಠೀಕಾರಕತ್ವವನ್ನೂ ಅವನು ಅಂಗೀಕರಿಸಿದ್ದಾನೆಂದು ತಿಳಿಯುವುದರಿಂದ ಮಾತ್ರವೇ ಸಾಧ್ಯವೆಂದು ಇತ್ಯರ್ಥ ಮಾಡುವರು. ಷಷ್ಠೀಕಾರ ಕತ್ವವು ಕ್ರಿಯೆಯೊಂದಿಗೆ ನೇರವಾಗಿ ವ್ಯವಹರಿಸದಿದ್ದರೂ ಪರೋಕ್ಷವಾಗಿ ಅದ ಯಾವ ನಾಮ ಪ್ರಕೃತಿಗೆ ವಿಶೇಷಣವಾಗಿವರ್ತಿಸುವುದೋ ಆ ಮೂಲಕ ತನ್ನ ಸಂಬಂಧ ವನ್ನು ಪಡೆಯುವುದು ಎಂದು ಹೇಳಬೇಕಾಗುತ್ತದೆ. 'ಅಧೀಶ್ವರನ ದಯೆ ಸಾಲ್ಗುಂ' ಎಂಬ ಮಾರ್ಗಕಾರನ ನಿದರ್ಶನದಲ್ಲಿ 'ಅಧೀಶ್ವರ' ಮತ್ತು 'ದಯೆ' ಎಂಬ ಎರಡು

ಪ್ರಕೃತಿಗಳೂ ಷಷ್ಠಿಯ ಮೂಲಕ ಜೆಸೆದಿರುವುದರಿಂದ,ಇಲ್ಲಿನ ಷಷ್ಠಿಗೆ ಕಾರಕತ್ವ ಪ್ರಾಪ್ತವಾಗಿರುವುದೆಂದು ಗ್ರಹಿಸಬೇಕಾಗುತ್ತದೆ. ಈ ವಿಶಿಷ್ಟವಾದ ಅಂಶವನ್ನೇ ಗಮನಿಸಿ ಕೇಶಿರಾಜನು ತನ್ನ ವೃತ್ತಿಯಲ್ಲಿ ಸಹಜಕಾರಕಗಳು ಆರೆಂದು ಹೇಳಿ (ಷಡ್ವಿಧ ಮಾಗಿರ್ಪುದು), 'ಷಷ್ಠಿಯೆಂದು ಸಂಬಂಧಾರ್ಥಂ'ಎಂದು ಅದಕ್ಕೆಪ್ರತ್ಯೇಕವಾದ ಸ್ಥಾನವನ್ನು ಕೊಟ್ಟಿರುವನು. ಎಂ.ವಿ.ಸೀ. ಅವರು ಹೇಳಿರುವಂತೆ ಅವರು ಮಾಡಿರುವ ಪ್ರಯತ್ನ ಕವಿರಾಜಮಾರ್ಗಕಾರನಲ್ಲಿ ಕಂಡುಬರುವ 'ಅಸಾಂಗತ್ಯ ಅಥವಾ ವಿರೋಧಾಭಾಸ'ವನ್ನು (ವಿರೋಧವನ್ನಲ್ಲ) ಪರಿಹರಿಸುವ ಒಂದು ಯುಕ್ತಿ ಯುಕ್ತವಾದ ರೀತಿಯೇ ವಿನಾ ಅದು ಸಿದ್ಧಾಂತವಲ್ಲ. ಕವಿರಾಜಮಾರ್ಗಕಾರನ ಆಧಾರವಿಲ್ಲದೆ ಪಾಠವನ್ನೇ ತಿದ್ದುವುದಕ್ಕೆ ಬದಲಾಗಿ, ಈ ಸಮನ್ವಯ ಕ್ರಮ ಸ್ವಾಗತಾರ್ಹವೆನ್ನುವುದರಲ್ಲಿ ಸಂಶಯವಿಲ್ಲ. ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳು ತೋರಿಬರುವುದು ಸಹಜ. ಅಂಥ ಸಂದರ್ಭಗಳಲ್ಲಿ ವಿದ್ವಾಂಸರು ಎಷ್ಟರಮಟ್ಟಿಗೆ ವಸ್ತುನಿಷ್ಠವಾಗಿ ತಮ್ಮ ಮುಂದಿರುವ ಸಮಸ್ಯೆಯನ್ನು ಬಿಡಿಸುವುದರಲ್ಲಿ ಯಾವ ರೀತಿಯ ಸೌಜನ್ಯವನ್ನು ಅನುಸರಿಸಬಹುದೆನ್ನುವುದಕ್ಕೆ ಮೇಲ್ಕಂಡ ಪ್ರಬಂಧ ಒಂದು ಉತ್ತಮ ನಿದರ್ಶನ.

"ಕನ್ನಡದ ತದ್ಧಿತ ಪ್ರತ್ಯಯಗಳು"ಎಂಬ ಲೇಖನ(ಅಧ್ಯಯನ-ಪು: 646-662) ದಲ್ಲಿ ಶ್ರೀಯುತರು ಈ ವಿಷಯವನ್ನು ಕುರಿತು ಈಗಾಗಲೇ ಲೇಖನಗಳನ್ನು ಬರೆದಿರುವ ಡಾ॥ ಶಂ. ಬಾ. ಜೋಶಿ ಮತ್ತು ಡಾ॥ ಎಚ್.ಎಸ್. ಅನಂತನಾರಾಯಣ ಅವರ ಅಭಿಪ್ರಾಯಗಳನ್ನು ಸಮೀಕ್ಷಿಸಿ, ತಮ್ಮ ವಿಚಾರಗಳನ್ನು ಮುಂದೆ ಇಟ್ಟಿರುತ್ತಾರೆ. "(೧) ನಿಯೋಗಾರ್ಥದ 'ವಳ್ಳ' (ವಳ) ಪ್ರತ್ಯಯವು, (೨)ವಳ್ಳ (ವಳ)-ವಾಲ-ವಾಲ-ಪ್ರತ್ಯಯ ವಿಚಾರ (ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ -26-1·2 ಜೂನ್ ಮತ್ತು ಡಿಸೆಂಬರ್ 1941) ಎಂಬ ಲೇಖನಗಳಲ್ಲಿ ಶಂ.ಬಾ. ಜೋಶಿಯವರು ವ್ಯಕ್ತಪಡಿಸಿರುವ ಅಭಿಪ್ರಾಯಗಳ ಸಾರಾಂಶವನ್ನು ಮೊದಲು ಕೊಟ್ಟಿರುತ್ತಾರೆ. 'ವಾಲ'ಎಂಬುದೇ 'ವಳ್ಳ' ವಾಗಿರಬೇಕು ಎಂದು ನನ್ನ ಗ್ರಹಿಕೆ"ಎಂಬ ಅವರ ತೀರ್ಮಾನವನ್ನೂ, 'ವಾಲಾ'ಎನ್ನುವುದು 'ಪಾಲಾ'ಎನ್ನುವುದರಿಂದ ನಿಷ್ಪನ್ನವಾಗಿರಬೇಕೆಂಬ ಡಾ॥ ಚಟರ್ಜಿಯವರ ಸೂಚನೆಯನ್ನೂ ಅವಲಂಬಿಸಿ 'ಪ್ರಾಕೃತ ಭಾಷೆಯ ಪ್ರಮುಖ ವ್ಯಾಕರಣಕಾರರು ಯಾರೂ ಇದನ್ನು ಉಲ್ಲೇಖಿಸುವುದೇ ಇಲ್ಲ. ಆದುದರಿಂದ ಇದು ಹೊರಗಿನಿಂದ ಎಂದರೆ ಕನ್ನಡದಿಂದ ಪ್ರಾಕೃತದಲ್ಲಿ ಸೇರಿದ ಪ್ರತ್ಯಯವಾಗಿರಬಹುದೆಂದು ಕಲ್ಪಿಸಲು ಎಡೆಯಿದೆ. ಇದು ನಿಜವಿದ್ದರೆ 'ವಾಲಾ'ಎಂಬ ರೂಪದಲ್ಲಿ ಮತ್ತೆ ಹಿಂದಿಯಿಂದ ಈ ಪ್ರತ್ಯಯವು ಕನ್ನಡದಲ್ಲಿ ಬಂದು (ಟಾಂಗಾವಾಲಾ, ಮೋಟಾರ್ ವಾಲಾ, ಟೋಪಿವಾಲಾ—ಮುಂ.) ಕಡವು ತೀರಿದಂತಾಯ್ತೆಂದು ಹೇಳುವುದಾಗಿದೆ"ಎಂಬ ಅಭಿಪ್ರಾಯವನ್ನು ಪುನರ್ವಿಮರ್ಶಿಸುತ್ತಾರೆ. ಎಂ.ವಿ.ಸೀ. ಅವರ ಹೇಳಿಕೆ ಇಂತಿದೆ :

"ಕನ್ನಡ 'ವಳ್ಳ'ದಿಂದ ಹಿಂದಿಯ 'ವಾಲಾ'ಆಗಿರಬಹುದು. ಆದರೆ ಈ ಸಂಗತಿ ಅಷ್ಟು ನಮಗೆ ಬೇಕಾದುದಲ್ಲ. -ವಳ (-ವಳ್ಳ) ಹೀಗೆ ಬಂದಿರಬಹುದೆಂಬುದೇ ಮುಖ್ಯವಾದ ಸಂಗತಿ. ತದ್ಭವ ಪ್ರಕರಣದಲ್ಲಿ ಇದರ ಸುಳಿವು ಸಿಗುತ್ತದೆ ಎಂಬ ಜೋಶಿಯವರ ಸೂಚನೆ ಒಟ್ಟಿನಲ್ಲಿ ಗ್ರಾಹ್ಯವಾಗಿ ಕಂಡು ಬರುತ್ತದೆ. ಆದರೆ '-ವಳ' ಸಂಸ್ಕೃತದ 'ಪಾಲಾ'ದಿಂದ ನೇರವಾಗಿ ಬಂದಿರುವಂತೆ ಕಾಣುವುದಿಲ್ಲ. ಕೇಶಿರಾಜ 'ಪದಮಧ್ಯದ ದೀರ್ಘಕ್ಕಪ್ಪುದು ಹ್ರಸ್ವಂ'(ಸೂ.287) ಎಂದಿರುವಲ್ಲಿ ಇಡಿಯ ಪದವನ್ನು ಉದ್ದೇಶಿಸಿರುವುದನ್ನು ಗಮನಿಸಬೇಕು. -ವಳ, -ವಳ್ಳ, ಈ ಎರಡು ರೂಪ ಗಳಲ್ಲಿ -ವಳ, ಮೂಲರೂಪವೆಂದು ಜೋಶಿಯವರ ಅಭಿಪ್ರಾಯ. ಕಾವ್ಯ ಪ್ರಯೋಗ ಗಳಲ್ಲಿ-'ವಳ್ಳ' ಪ್ರತ್ಯಯ ಹೆಚ್ಚು ಸಲ ಪ್ರಯೋಗವಾಗಿದ್ದ ಮಾತ್ರಕ್ಕೆ ಅದೇ ಮೂಲರೂಪ ಎನ್ನಲಾಗದು. ಪದ್ಯರಚನೆಯಲ್ಲಿ ಛಂದಸ್ಸಿನ ಅಗತ್ಯಕ್ಕಾಗಿ ವಳ>ವಳ್ಳ ಆಗಿದ್ದೀತು. ತದ್ಭವ ಪ್ರಕರಣದಲ್ಲಿ ಕೇಶಿರಾಜ 'ಗೋಪಾಲ' (>ಗೋವಳ) ಶಬ್ದವನ್ನು ಮಾತ್ರ ಹೇಳಿದ್ದಾನೆ. (ಭಟ್ಟಾಕಳಂಕನೂ ಅಷ್ಟೆ). ಇಂಥ ಇನ್ನೊಂದು ಶಬ್ದ (ದಿಕ್ಪಾಲ ದಿಶಾ) > ದೆಸೆವಳ. ಈ ಮತ್ತು ಇಂಥ ಇತರ ಶಬ್ದಗಳು ರೂಢಿಗೆ ಬಂದಮೇಲೆ, ಕವಿಗಳು '-ವಳ' ಶಬ್ದ ಭಾಗವನ್ನು ಪ್ರತ್ಯಯವಾಗಿ ಗ್ರಹಿಸಿ, ಇತರ ನಾಮ ಪ್ರಕೃತಿಗಳಿಗೂ, ಅದನ್ನು ಹತ್ತಿಸಿ, ತದ್ಧಿತಗಳನ್ನು ರೂಪಿಸಿಕೊಂಡಿರಬೇಕೆಂದು ತೋರುತ್ತದೆ. ಕೇಶಿರಾಜ (ಸೂ. 209), ಭಟ್ಟಾಕಳಂಕರು (426) ವಳ, ವಳ್ಳ ಎಂಬ ಅನುಕ್ರಮದಲ್ಲಿಯೇ ಪ್ರತ್ಯಯಗಳನ್ನು, ಪ್ರಯೋಗಗಳನ್ನೂ ಕೊಟ್ಟಿರುತ್ತಾರೆ. 'ವಳ'ವೇ ಮೂಲ ರೂಪ, ಅದರಿಂದ 'ವಳ್ಳ', 'ವಾಳ' ಆಗಿವೆ ಎನ್ನುವುದು ಹೆಚ್ಚು ಸಮಂಜಸ".

ಎಂ.ವಿ.ಸೀ. ಅವರು ಕನ್ನಡ ವೈಯ್ಯಾಕರಣರನ್ನೇ ಅನುಸರಿಸಿ, 'ವಳ' ಪ್ರತ್ಯಯ, ಶಬ್ದ ಭಾಗದಿಂದ ರೂಪತಾಳಿರಬಹುದೆಂಬ ನಿಲುವು ಸಕಾರಣವಾಗಿದೆ. ಪ್ರತ್ಯಯ ನಿರ್ಮಾಣದಲ್ಲಿ ಈ ತೆರನಾದ ಪ್ರಕ್ರಿಯೆ ಸಾಧಾರಣ. ಕನ್ನಡದಲ್ಲಿ, '-ಗಿತ್ತಿ' ಎನ್ನುವುದು ಇದಕ್ಕೆ ಬಹಳ ಉತ್ತಮ ನಿದರ್ಶನ. ಹೂವಾಡಿಗ, ಹಾವಾಡಿಗ, ಕವಾಡಿಗ ಎಂಬ ಪುಲ್ಲಿಂಗ ರೂಪಗಳಿಗೆ '-ಇತ್ತಿ' ಎಂಬ ಸ್ತ್ರೀಲಿಂಗ ಸೂಚಕ ಪ್ರತ್ಯಯ ಹತ್ತಿ, ಹೂವಾಡಿಗಿತ್ತಿ, ಹಾವಾಡಿಗಿತ್ತಿ, ಕವಾಡಿಗಿತ್ತಿ-ಎಂಬ ರೂಪಗಳಾಗಿರುವುದು ಸಹಜ. ಆದರೆ, ಅಗಸಗಿತ್ತಿ, ಸೂಲಗಿತ್ತಿ, ಕೆಲಸಗಿತ್ತಿ-ಎಂಬ ಪದಗಳನ್ನು ಪರಿಶೀಲಿಸಿದರೆ, ಇಲ್ಲಿ- '-ಗಿತ್ತಿ' ಎಂಬ ಪ್ರತ್ಯಯ ರೂಪ ಪ್ರತ್ಯೇಕವಾಗಿ ನಿಲ್ಲುತ್ತದೆಯೇ ಹೊರತು, ಈ ಸ್ತ್ರೀಲಿಂಗ ರೂಪಗಳಿಗೆ ಸಂವಾದಿಯಾದ ಪುಲ್ಲಿಂಗ ರೂಪಗಳು ಬಳಕೆಯಲ್ಲಿಲ್ಲ. ಆದ್ದರಿಂದ ಈ ತೆರನಾದ ಪ್ರತ್ಯಯಗಳನ್ನು ಭ್ರಾಂತಿರೂಪಗಳೆಂದು ಹೇಳುವುದುಂಟು. '-ವಳ-

ವಳ್ಳ–ವಾಳ' ಎಂಬ ಪ್ರತ್ಯಯಗಳು 'ಪಾಲ' ಎನ್ನುವುದರಿಂದ ನೇರವಾಗಿ ನಿಷ್ಪನ್ನವಾಗಿಲ್ಲವೆಂದು ಒಪ್ಪಿಕೊಂಡರೂ ಅವು ಮೂಲಾರ್ಥವನ್ನು ಉಳಿಸಿ ಕೊಂಡಿರುವುದನ್ನು ಗಮನಿಸತಕ್ಕದ್ದು. ಕೇಶಿರಾಜನು ಕೊಟ್ಟಿರುವ ಉದಾಹರಣೆಗಳಲ್ಲಿ ಈ ಪ್ರತ್ಯಯಗಳು ಪುಲ್ಲಿಂಗ ಸೂಚಕವಾಗಿಯೇ ವರ್ತಿಸುವುದನ್ನೂ ನೋಡಬಹುದು. (ಈ ಬಗೆಯಾದ ಪ್ರತ್ಯಯಗಳು ಕೆಲವು ಸಂದರ್ಭಗಳಲ್ಲಿ ಪದ ಚ್ಛೇದ ದೋಷದಿಂದ ಆಗುವುವೆಂದು ಆಟೋಎಸ್ಪರ್ಸನ್(Otto Jesperson) ಅಭಿಪ್ರಾಯ ಪಟ್ಟು ಈ ಪ್ರಕ್ರಿಯೆಯನ್ನು "Secretion theory" ಎಂದು ನಿರ್ದೇಶಿಸಿರುವನು. "Secretion thus is Consequence of a metanalysis; it Shows its full force when the element thus secretred comes to be added to other words not originally processing the element. (P–384, Language–its nature, development and origin, 1954. '—ಗಿತ್ತಿ' ಎಂಬ ಪ್ರತ್ಯಯ ಇದಕ್ಕೆ ಒಳ್ಳೆಯ ದೃಷ್ಟಾಂತ.)

ನಮ್ಮ ವೈಯಾಕರಣರು ತದ್ಧಿತ ಮತ್ತು ಕೃದಂತ ಪ್ರತ್ಯಯಗಳ ಮೂಲವನ್ನು ಕುರಿತು ವಿಚಾರ ಮಾಡದೆ ಇರುವುದರಿಂದ ಆಧುನಿಕ ಭಾಷಾ ವಿಜ್ಞಾನಿಗಳಿಗೆ ಈ ಬಗ್ಗೆ ಪರ್ಯಾಲೋಚಿಸಲು ಒಳ್ಳೆಯ ಅವಕಾಶವಿದೆ. ಡಾ|| ಡಿ. ಎಲ್. ಎನ್. ಅವರು 'ಕನ್ನಡದಲ್ಲಿ ಶಬ್ದರಚನೆ' ಎಂಬ ತಮ್ಮ ಲೇಖನದಲ್ಲಿ ಈ ವಿಚಾರವನ್ನು ಸಾಕಷ್ಟು ಸಮೀಕ್ಷಿಸಿರುತ್ತಾರೆ. (ಪೀಠಿಕೆಗಳು, ಲೇಖನಗಳು ಪು. 790–804) ಈ ಪ್ರತ್ಯಯಗಳು ಯಾವುದು ದೇಶ್ಯ, ಯಾವುದು ಅನ್ಯದೇಶ್ಯ ಎಂಬ ವಿವೇಚನೆಯ ಕಡೆ ಅವರ ಗಮನ ಹರಿದಿದೆ. ಪ್ರಕೃತದಲ್ಲಿ ಎಂ.ವಿ.ಸೀ. ಅವರು ಕನ್ನಡದ ಕೆಲವು ತದ್ಧಿತ ಪ್ರತ್ಯಯಗಳು ಸಂಸ್ಕೃತದಿಂದ ನಿಷ್ಪನ್ನವಾದುವೆಂದು ಡಾ|| ಎಚ್. ಎಸ್. ಅನಂತ ನಾರಾಯಣ ಅವರು ಲೇಖನವೊಂದರಲ್ಲಿ ಪ್ರಸ್ತಾಪಿಸಿರುವುದನ್ನು ಮಾತ್ರ ಗಮನದಲ್ಲಿಟ್ಟುಕೊಂಡು, ಅವರ ದೃಷ್ಟಿಯ ಔಚಿತ್ಯವನ್ನು ಇಲ್ಲಿ ಪರಿಶೀಲಿಸಿರುವರು.

(1)—ಇಕ: ವೈದಿಕ, ಲೌಕಿಕ, ಧಾರ್ಮಿಕ, ಆಸ್ತಿಕ ಮೊದಲಾದ ಸಂಸ್ಕೃತ ಶಬ್ದಗಳಲ್ಲಿ ವಿಧಿತವಾಗುವ '–ಇಕ' ಎಂಬ ಪ್ರತ್ಯಯವೇ, ಕನ್ನಡ ಶಬ್ದಗಳಾದ ಕನ್ನಡಿಗ, ಸಾಲಿಗ, ಬಾಣಸಿಗ, ಕಬ್ಬಿಗ ಮೊದಲಾದವುಗಳಲ್ಲಿ ಕಂಡುಬರುವುದೆಂದು ಡಾ|| ಎಚ್. ಎಸ್. ಅನಂತನಾರಾಯಣ ಅವರ ವಾದ. ಎಂ.ವಿ.ಸೀ. ಅವರು ಕೇಶಿರಾಜನಸೂತ್ರವನ್ನು (214) ಅವಲಂಬಿಸಿ 'ಇಕ' ಪ್ರತ್ಯಯ 'ಶೀಲಾದಿ ವಿಶ್ರುತಾರ್ಥದೊಳ್' ಬರುವುದರ ಕಡೆಗೆ ನಮ್ಮ ಗಮನವನ್ನು ಸೆಳೆದಿರುತ್ತಾರೆ. ಅವನು '—ಇಗ' ಎಂಬ ಪ್ರತ್ಯಯವನ್ನು ಪ್ರತ್ಯೇಕವಾಗಿ ಹೇಳದಿರುವುದರಿಂದ ಇವು ಒಂದೇ ಪ್ರತ್ಯಯದ ಪರ್ಯಾಯ ರೂಪಗಳೇ

ಅಥವಾ ಬೇರೆ-ಬೇರೆಯಾದ ಸ್ವತಂತ್ರ ಪ್ರತ್ಯಯಗಳೇ ಎನ್ನುವುದನ್ನು ವಿಚಾರ ಮಾಡತಕ್ಕದೆಂದು ಅಭಿಪ್ರಾಯ ಪಡುವರು. ಇದೇ ಸಂದರ್ಭದಲ್ಲಿ 'ಸಾಲಿಗ' (ಸಾಲಕೊಡುವವನು) 'ಸಾಲಗಾರ' (ಸಾಲತೆಗೆದುಕೊಂಡವನು) ಎಂಬ ಶಬ್ದಗಳಲ್ಲಿ ಇರುವ ಅರ್ಥವ್ಯತ್ಯಾಸವನ್ನು ಸರ್ವಜ್ಞನ ದೃಷ್ಟಾಂತದ ಮೂಲಕ ಸ್ಪಷ್ಟಪಡಿಸುವರು. (ಡಾ|| ಎಚ್. ಎಸ್. ಅನಂತನಾರಾಯಣ ಅವರು ಈ ಪ್ರತ್ಯಯ ಸಂಸ್ಕೃತ ನಾಮ ಪ್ರಕೃತಿಯ ಮೇಲೆ ಸೇರುವಲ್ಲಿ ಆದಿಸ್ವರದೀರ್ಘ ವಾಗುವುದೆಂದು ಹೇಳುವರಷ್ಟೆ. ಪ್ರಕೃತದಲ್ಲಿ ಕೇಶಿರಾಜನು ಉದಾಹರಿಸಿರುವ ಸಂಸ್ಕೃತದ 'ರಸಿಕಂ' ಎಂಬಲ್ಲಿ ಈ ಲಕ್ಷಣ ಕಂಡುಬರುವುದಿಲ್ಲ. ಉಳಿದ ಕನ್ನಡ ಪ್ರಕೃತಿಗಳ ಮೇಲಂತೂ ಈ ಪರಿವರ್ತನೆಯ ಸೊಲ್ಲೇ ಇಲ್ಲ. ಸಂಸ್ಕೃತದಲ್ಲಿ ನಿಷ್ಪನ್ನ ರೂಪಗಳು ಗುಣವಾಚಕ ಗಳಾದರೆ, ಕನ್ನಡದಲ್ಲಿ ಅವು ನಾಮ ಪ್ರಕೃತಿಯಾಗಿಯೇ ಉಳಿಯುತ್ತವೆ. ಹಲಕೆಲವು ಅಂತರಗಳನ್ನು ಗಮನಿಸಿದಲ್ಲಿ ಸಂಸ್ಕೃತದ '—ಇಕ್' ಪ್ರತ್ಯಯವನ್ನೂ, ಕನ್ನಡದ 'ಇಕ' ಪ್ರತ್ಯಯವನ್ನು ಸಮಾನವೆಂದು ಭಾವಿಸಬಹುದೆ ಎಂಬ ಸಂದೇಹ ಉಳಿಯುತ್ತದೆ. ಎಂ.ಪಿ.ಸೀ. ಅವರು ಈ ಮುಖ್ಯಾಂಶವನ್ನು ಹೇಳದೆ ಬಿಟ್ಟಿರುವುದು ಸೋಜಿಗವೇ ಸರಿ.)

(2) — ಕಾರ/ಗಾರ (= ಗಾಱ): ಸಂಸ್ಕೃತದಲ್ಲಿ '—ಕಾರ' ಎನುವುದು 'ಕೃ' ಧಾತುವಿನಿಂದ ನಿಷ್ಪನ್ನವಾದ ನಾಮಪ್ರಕೃತಿಯೆಂದೂ ಅದು ಕನ್ನಡ ದಲ್ಲಿ ಪ್ರತ್ಯಯದಂತೆ ಬಳಸಲಾಗುವುದೆಂದೂ ಡಾ|| ಎಚ್. ಎಸ್. ಅನಂತ ನಾರಾಯಣ ಅವರು ಅಭಿಪ್ರಾಯ ಪಟ್ಟರೆ, ಎಂ.ಪಿ.ಸೀ. ಅವರು ಕೇಶಿರಾಜ ನನ್ನು ಅವಲಂಬಿಸಿ (ಸೂ. 210) ಕನ್ನಡದಲ್ಲಿ '–ಕಾರ', '–ಗಾರ' ಎಂಬುವು ಪ್ರತ್ಯೇಕವಾದ ಅರ್ಥದಲ್ಲಿ ಪ್ರಯೋಗವಾಗುವ ಭಿನ್ನಪ್ರತ್ಯಯಗಳೆಂದೂ ಉದಾ: ನಡೆವಳಿಕಾಱ, ಬೇಹುಕಾಱ, ಮೊದಲಾದವು— ಅಲ್ಲದೆ ಇವು ಶಕಟರೇಫಯುಕ್ತವಾಗಿರುವುವೆಂದೂ ವಿಶದ ಪಡಿಸಿ, ಇವು ಕನ್ನಡ ಪ್ರತ್ಯಯ ಗಳೇ ಇರಬಹುದೆಂದು ಸೂಚಿಸುವರು.

ಡಾ|| ಡಿ. ಎಲ್. ಎನ್. ಅವರು ಈ ಪ್ರತ್ಯಯಗಳ ಸ್ವರೂಪವನ್ನು ವಿವರಿಸುವಲ್ಲಿ "ಇವೆರಡೂ ಸಂಸ್ಕೃತದ 'ಕೃ' ಎಂಬ ಧಾತುವಿನಿಂದ ನಿಷ್ಪನ್ನವಾಗಿರುವ 'ಕಾರ' ಎಂಬ ಶಬ್ದದ ರೂಪಾಂತರಗಳೆಂದು ಕಾಣುತ್ತದೆ. ಈ ಕನ್ನಡ ಪ್ರತ್ಯಯಗಳಲ್ಲಿ ಕಾಣುವ ಱಕಾರ ಹೇಗೆ ಬಂತೆಂಬುದಕ್ಕೆ ಕಾರಣ ಹೇಳುವುದು ಕಷ್ಟ." ಕೆಲವೆಡೆಗಳಲ್ಲಿ ಈ ರ–ಱ ಕಾರಗಳ ಪಲ್ಲಟವಿರುವುದೆಂದು ತಿಳಿಸಿ, "ತಮಿಳಿನಲ್ಲಿ ಈ ಪ್ರತ್ಯಯಗಳನ್ನು ಬಳಸುವಾಗ ಱಕಾರಕ್ಕೆ ಬದಲಾಗಿ ರೇಫವಿರುವುದು ಕಾಣುತ್ತದೆ: ವೇಲೈಕ್ಕಾರನ್, ಪಣಕ್ಕಾರನ್ ಆದ್ದರಿಂದ, ಈ ಪ್ರತ್ಯಯಗಳು ಮೂಲತಃ ಸಂಸ್ಕೃತವಾಗಿದ್ದು, ರೇಫವನ್ನೊಳಕೊಂಡಿರ

ಬೇಕೆಂದೂ ಅದು ಯಾವ ಕಾರಣದಿಂದಲೋ ಶಕಟ ರೇಫವಾಯಿತೆಂದೂ ಹೇಳ ಬೇಕಾಗಿದೆ." (ಸೀರಿಕೆಗಳು–ಲೇಖನಗಳು–ಪು.801) ಎಂದು ಅಭಿಪ್ರಾಯಪಡುವರು. ಈ ಪ್ರತ್ಯಯಗಳ ರೂಪನಿಷ್ಕರ್ಷೆಯಲ್ಲಿ ದ್ರಾವಿಡ ಭಾಷೆಗಳ ತೌಲನಿಕ ಸಮಾಲೋಚನೆಯೂ ಅಗತ್ಯವೆಂದು ವ್ಯಕ್ತವಾಗುತ್ತದೆ. ಇದೇ ಸಂದರ್ಭದಲ್ಲಿ ಎಂ.ವಿ.ಸೀ. ಅವರು, ಕಮ್ಮಾರ, ಕುಂಬಾರ – ಎಂಬ ಶಬ್ದಗಳಲ್ಲಿ ಕಂಡುಬರುವ ಪ್ರತ್ಯಯ ಕೇಶಿರಾಜ ಮತ್ತು ಭಟ್ಟಾಕಳಂಕರು ತಿಳಿಸುವಂತೆ '-ರ' ಆಗಿರಲಾರದೆಂದೂ ಅದು ಸಂಸ್ಕೃತ ಶಬ್ದಗಳ ತದ್ಭವಗಳಾಗಿ ಬಳಕೆಗೆ ಬಂದು, ಬಳಿಕ ರೇಫಕ್ಕೆ ಬದಲಾಗಿ ಶಕಟ ರೇಫ ಬಂದಿರಬಹುದೆಂದೂ ವಿಚಾರಿಸಿರುವರು. [ಕರ್ಮಕಾರ >ಕಮ್ಮಾರ > ಕಮ್ಮರ (ಱ); ಕುಂಭಕಾರ > ಕುಂಬಾರ > ಕುಂಬರ (ಱ)]. ಡಾ॥ ಜಿ.ಎಸ್. ಕುಳ್ಳಿಯವರು ರಸೂಚಿಸುವಂತೆ ಇಲ್ಲಿ ಸೇರುವ ಪ್ರತ್ಯಯ '-ಅಱ' ಎಂಬುದಿರಬಹುದೆ ಎನ್ನುವುದು ವಿಚಾರಾರ್ಹವೆಂದು ಸಲಹೆ ಮಾಡಿರುವರು.

(3)—ತ:"ಸಂಸ್ಕೃತದಲ್ಲಿ ಧಾತುವಿಗೆ ಸೇರಿ ಭೂತಕಾಲದ ಕೃದಂತ ರೂಪಗಳನ್ನು ಕೊಡುವ -ತ ಪ್ರತ್ಯಯವು (ಉದಾ: ಪತಿತ, ನಿಂದಿತ, ಭೂತ) ಕನ್ನಡದಲ್ಲೂ ಧಾತುಗಳಿಗೆ ಸೇರಿಸಲ್ಪಟ್ಟು ನಾಮಪದಗಳಾಗಿರುವುದನ್ನು ಕುಣಿತ, ಕಡಿತ ಬಿಗಿತ ಮುಂತಾದ ಪದಗಳಲ್ಲಿ ಕಾಣಬಹುದು – ಎಂದು ಡಾ॥ ಎಚ್. ಎಸ್. ಅನಂತನಾರಾಯಣ ಅವರ ಅಭಿಪ್ರಾಯ. ಎಂ. ವಿ. ಸೀ. ಅವರಾದರೋ ಕೇಶಿರಾಜ ಮತ್ತು ಭಟ್ಟಾಕಳಂಕರ ಅಭಿಪ್ರಾಯಗಳನ್ನು ಉದಾಹರಿಸಿ ಈ-ತ ಪ್ರತ್ಯಯ ಇ-ಕಾರಾಂತ, ಉ-ಕಾರಾಂತ, ಎ-ಕಾರಾಂತ ಧಾತುಗಳಿಗೆ ಮಾತ್ರ ಹತ್ತುತ್ತದೆ. '-ತ' ಪ್ರತ್ಯಯವನ್ನು ಇತರ ಕನ್ನಡ ಪ್ರತ್ಯಯಗಳ ಜೊತೆಯಲ್ಲೇ ಹೇಳಿರುವುದರಿಂದ, ಅದು ಸಂಸ್ಕೃತದಿಂದ ಬಂದಿದ್ದು ಎಂದು ಭಾವಿಸಬೇಕಾಗಿಲ್ಲ – ಎಂದು ಸ್ಪಷ್ಟಪಡಿಸುವರು.

(4)—ತನ: ಋಗ್ವೇದದಲ್ಲಿ ಕಂಡುಬರುವ ಕವಿತ್ವನ, ಪತಿತ್ವನ, ಸಖಿತ್ವನ ರೂಪಗಳಲ್ಲಿನ -ತ್ವನ ಪ್ರತ್ಯಯವು (ಸಂಸ್ಕೃತದ '-ತ್ವ') ಪ್ರಾಕೃತ ಭಾಷೆಗಳಲ್ಲಿ '-ತಣ' ರೂಪವಾಗಿ ಮಾರ್ಪಟ್ಟಿತೆಂದು ವಿದ್ವಾಂಸರ ಅಭಿಪ್ರಾಯ. ಕನ್ನಡದಲ್ಲಿ ಈ ಪ್ರತ್ಯಯ'-ತನ' ಎಂದಾಗಿದೆ. ಕನ್ನಡದಲ್ಲಿ ಉಪಯೋಗವಾಗುವ ಸಂಸ್ಕೃತದ ಪದಗಳೊಂದಿಗೆ ಮಾತ್ರವಲ್ಲದೆ (ಉದಾ: ಪುರುಷತನ, ವೀರತನ, ಶೂರತನ) ಕನ್ನಡದವೇ ಆದ ಪದಗಳೊಂದಿಗೆ ಕೂಡ ಉಪಯೋಗವಾಗುತ್ತದೆ. (ಉದಾ: ಬಡತನ, ಜಾಣತನ, ಗೆಳೆತನ – ಇತ್ಯಾದಿ). ಸಂಸ್ಕೃತದಲ್ಲಿಯಂತೆಯೇ ಕನ್ನಡದಲ್ಲೂ ಕೂಡ ಈ ಪ್ರತ್ಯಯ ನಾಮವಾಚಕ, ಮತ್ತು ಗುಣವಾಚಕ ಪದಗಳಿಗೆ ಸೇರಿ ಭಾವ ನಾಮಗಳನ್ನು ಕೊಡುತ್ತದೆ. ತೆಲುಗಿನಲ್ಲಿ ಈ ಪ್ರತ್ಯಯ

‘-ತನಂ’ ಎಂಬ ರೂಪವಷ್ಟಿದೆ. (ಉದಾ: ಪೆದ್ದ ತನಂ, ಮಂಚಿತನಂ: ಪೆದ್ದ ತನಮು, ಮಂಚಿತನಮು).

ಡಾ॥ ಎಚ್.ಎಸ್. ಅನಂತನಾರಾಯಣ ಅವರ ಈ ಅಭಿಪ್ರಾಯಕ್ಕೆ ಪುಷ್ಟಿ ಕೊಡುವಂತಹ ಎಂ. ವಿ. ಚಿತ್ರಲಿಂಗಯ್ಯ ಅವರ ಅಭಿಪ್ರಾಯವನ್ನು ಎಂ.ವಿ.ಸೀ. ಅವರು ನಿರ್ದೇಶಿಸುತ್ತಾ "ಈ -‘ತನ’ ಪ್ರತ್ಯಯವನ್ನು ಕನ್ನಡವು ಪಾಳಿ ಮತ್ತು ಅರ್ಧಮಾಗಧಿಯಿಂದ ಸ್ವೀಕರಿಸಿದೆಯೆಂದೂ ಹಾಗಿಲ್ಲವೋ ಧಡ್ಡತ್ತಣಮ್, ರಂಡತ್ತಣು, ಪಿಸುಣತ್ತಣು ಮುಂತಾದ ಅಸಂಖ್ಯಾತ ಪದಗಳನ್ನುಳ್ಳ ಅಪಭ್ರಂಶದಿಂದ ಸ್ವೀಕರಿಸಿರಬಹುದೆಂದೂ ಅಭಿಪ್ರಾಯಪಟ್ಟಿದ್ದಾರೆ" ಎನ್ನುವರು.

"-ತನ" ಪ್ರತ್ಯಯದ ಬಗ್ಗೆ ಸಾಕಷ್ಟು ಕುತೂಹಲವುಂಟಾಗುವುದು ಸಹಜ. ಏಕೆಂದರೆ, ಕೇಶಿರಾಜನು, ಈ ಪ್ರತ್ಯಯವನ್ನು ಸಂಸ್ಕೃತ ಶಬ್ದದೊಂದಿಗೆ ಬಳಸಬಾರದೆಂದು ನಿಷೇಧಿಸಿರುವುದಲ್ಲದೆ, ಜನ್ನನ ‘ಅನಂತನಾಥ ಪುರಾಣ’ದಿಂದ ಅಶುದ್ಧ ಪ್ರಯೋಗಕ್ಕೆ ಉದಾಹರಣೆಯನ್ನೂ ಕೊಟ್ಟಿರುತ್ತಾನೆ. (ತನ ಪ್ರತ್ಯಯಮಂ ಸಂಸ್ಕೃತದೊಳ್ ಪತ್ತಿಸಲಾಗದು: ವಾಹಕತನಂ, ಆರೋಹಕತನಂ ಎಂಬಿವಬದ್ಧಂಗಳ್ - ಸೂ. 222ರ ಪ್ರಯೋಗಭಾಗ). ಭಟ್ಟಾಕಳಂಕನಾದರೋ ಇದನ್ನು ಅಂಗೀಕರಿಸಿರುತ್ತಾನೆ. ಎಂ.ವಿ.ಸೀ. ಅವರೂ ಈ ಅಂಶಗಳನ್ನು ಮಾತ್ರ ಹೇಳಿ, ತಾವು ಉಲ್ಲೇಖಿಸಿರುವ ವಿದ್ವಾಂಸರ ಅಭಿಪ್ರಾಯಗಳ ಬಗ್ಗೆ ಏನೂ ಹೇಳಿರುವುದಿಲ್ಲ. "ಮೌನಂ ಸಮ್ಮತಿ ಲಕ್ಷಣಂ" ಎಂಬಂತೆ ಅವರೂ ಸಹ ಈ ಬಗ್ಗೆ ತದಾಭಿಪ್ರಾಯವನ್ನೇ ಉಳ್ಳವರಾಗಿರಬಹುದು. ಡಾ॥ ಡಿ.ಎಲ್.ಎನ್. ಅವರು ಈ ಪ್ರತ್ಯಯದ ಬಗ್ಗೆ ಪ್ರಸ್ತಾಪಿಸುವಲ್ಲಿ ಸಂಸ್ಕೃತದ ‘-ತನ’ ಪ್ರತ್ಯಯವು ಕಾಲಸೂಚಕ ಕ್ರಿಯಾವಿಶೇಷಣಗಳನ್ನು ರಚಿಸಿಕೊಳ್ಳಲಿಕ್ಕಾಗಿ ನೆರವಾಗುವ ಪ್ರತ್ಯಯವೆಂದೂ, ಕನ್ನಡದಲ್ಲಿ ಇದರ ವ್ಯಾಪ್ತಿ ಹೆಚ್ಚಾಗಿರುವುದರಿಂದ, "ಕನ್ನಡದ -ತನ ಪ್ರತ್ಯಯಕ್ಕೆ, ಸಂಸ್ಕೃತದ -ತನ ಪ್ರತ್ಯಯ ಮೂಲ ಎಂದು ಹೇಳುವುದು ಕಷ್ಟವಾಗುತ್ತದೆ." (ಪೀಠಿಕೆಗಳು, ಲೇಖನಗಳು - ಪು.799) ಎಂದು ಕನ್ನಡದ ಪರವಾಗಿ ಹೇಳಬಹುದಾದ ಅಂಶಗಳನ್ನೆಲ್ಲಾ ಸಂಗ್ರಹಿಸಿ ಕೊಟ್ಟಿರುವರು. ಆದರೆ ಅವರ ಗಮನವೂ ಸಹ ಪ್ರಾಕೃತದ ಪ್ರಯೋಗಗಳತ್ತ ಹರಿದು, ಕಡೆಗೆ "ಅಪಭ್ರಂಶದ ಈ -ತ್ತಣ ಪ್ರತ್ಯಯ ಕನ್ನಡದಲ್ಲಿ -ತನವಾಗಿ ಪರಿಣಮಿಸಿರಬಹುದು; ಇದರ ಮೂಲ ಸಂಸ್ಕೃತದ ತ್ವ, ತ್ವನ ಗಳಾಗಿರಬಹುದು" ಎಂದು ತಮ್ಮ ಮೊದಲಿನ ನಿಲುವನ್ನು ಬದಲಾಯಿಸಿರುವರು. ಇಂಥ ‘ಕೊಳ್-ಕೊಡೆ’ ಗಳನ್ನು ವಿಚಾರಿಸುವಲ್ಲಿ ಪರಸ್ಪರ ಭಾಷೆಗಳ ವಿನಿಮಯದ ಸಾಧ್ಯತೆಯನ್ನು ಸಮಾಲೋಚಿಸುವುದು ಅಗತ್ಯವೆನಿಸುತ್ತದೆ. ಕನ್ನಡ ವೈಯಾಕರಣರಲ್ಲಿಯೇ ಕಂಡುಬರುವ ಈ ಭಿನ್ನ ಅಭಿಪ್ರಾಯಗಳಿಗೆ ಕನ್ನಡ ಕವಿಗಳ ಪ್ರಯೋಗವೊಂದೇ ಕಾರಣವೇ ಇಲ್ಲವೇ

ಭಟ್ಟಾಕಳಂಕನಿಗೆ ಪ್ರಾಕೃತ ಪ್ರಯೋಗದ ಪರಿಚಯವೇನಾದರೂ ಇದ್ದಿರಬಹುದೆ – ಎಂಬ ಸಂಗತಿಯೂ ವಿಚಾರಾರ್ಹವಾದುದು. ಅಂತೂ ಕನ್ನಡದ '-ತನ' ಪ್ರತ್ಯಯವೂ ನಮ್ಮ ಕೈಬಿಟ್ಟು ಹೋಗುವ ಪರಿಸ್ಥಿತಿ ಉಂಟಾಗಿರುವುದಕ್ಕೆ ನಾವು ಮರುಗಬೇಕಾಗಿದೆ.

ಡಾ॥ ಎಚ್.ಎಸ್. ಅನಂತನಾರಾಯಣ ಅವರು ಪ್ರಸ್ತಾಪಿಸಿರುವ "-ಇತಿ, ಇತ್ತಿ; -ವಂತ" ತದ್ಧಿತ ಪ್ರತ್ಯಯಗಳು ಸಂಸ್ಕೃತದ ಮೂಲದಿಂದ ಕನ್ನಡಕ್ಕೆ ಬಂದುವೆಂಬುದು ಈಗಾಗಲೇ ಅಂಗೀಕೃತವಾದ ಸಂಗತಿಯಾಗಿರುವುದರಿಂದ, ಈ ವಿಚಾರವನ್ನು ಕುರಿತು ಎಂ.ವಿ.ಸೀ. ಅವರು ನೀಡಿರುವ ಇತರ ವಿಶೇಷ ಸಂಗತಿಗಳು ಮಾನ್ಯವಾಗಿದೆ.

ಕಡೆಯದಾಗಿ ಎಂ.ವಿ.ಸೀ. ಅವರು ನೀಡಿರುವ ಸಲಹೆ ತುಂಬ ಗಮನಾರ್ಹವಾದುದು.

> "ಈವರೆಗಿನ ವಿಚಾರ ವಿಮರ್ಶೆಯಿಂದ, ಈ ಭಾಷೆಗಳಿಂದ (ಸಂಸ್ಕೃತ, ಪ್ರಾಕೃತ) ಅನೇಕ ತದ್ಧಿತ ಪ್ರತ್ಯಯಗಳು ಕನ್ನಡಕ್ಕೆ ಸಹಜವಾಗಿ, ಕನ್ನಡದವೆಯೋ ಎಂದು ಹೇಳುವ ಮಟ್ಟಿಗೆ ಸಮ್ಮತವಾಗಿ ಬಂದು ಸೇರಿಕೊಂಡು, ಕನ್ನಡದ ಶಬ್ದಸಂಪತ್ತು ಬೆಳೆಯುವುದಕ್ಕೆ ಹೇಗೆ ಕಾರಣವಾಗಿದೆ ಎಂಬ ಸಂಗತಿ ಸ್ಪಷ್ಟವಾಗಿದೆ. ಈ ಸಂದರ್ಭದಲ್ಲಿ ಪ್ರತ್ಯಯ ರೂಪಗಳಲ್ಲಿ ಮಾತ್ರವಲ್ಲದೆ, ಶಬ್ದ ರೂಪದಲ್ಲೂ ಪ್ರಾಕೃತ ಮುಂತಾದ ಶಬ್ದಗಳಿಗೂ ಕನ್ನಡ ಶಬ್ದಗಳಿಗೂ ಸಾಮ್ಯವಿದ್ದಾಗ ಮಾತ್ರ ಆ ಪ್ರತ್ಯಯಗಳು ಆ ಭಾಷೆಗಳಿಂದ ಬಂದಿವೆ ಎಂದು ಹೇಳಬಹುದು. ಹಾಗಿಲ್ಲದೆ ಕೇವಲ ಪ್ರತ್ಯಯಗಳಲ್ಲಿ ಮಾತ್ರ ಸಾಮ್ಯವಿದ್ದಾಗ, ತದ್ಧಿತ ಪ್ರತ್ಯಯಗಳು ನೇರವಾಗಿ ಸಂಸ್ಕೃತದಿಂದ ಆ ಭಾಷೆಗಳಿಗೂ ಕನ್ನಡಕ್ಕೂ ಏಕಮೂಲೀಯವಾಗಿ ಬಂದಿರಬಹುದೆಂದು ತೋರುತ್ತದೆ. ಈ ವಿಚಾರ ಶೋಧನೆಯಲ್ಲಿ ಕಾವ್ಯ ಪ್ರಯೋಗಗಳಿಗಿಂತ ಹೆಚ್ಚಾಗಿ ಶಾಸನಗಳ ಪ್ರಯೋಗಗಳಿಂದ ಹೆಚ್ಚು ಮಾರ್ಗದರ್ಶನವಾದ ಸುಳಿವುಗಳು ಸಿಕ್ಕಬಹುದೆಂದು ತೋರುತ್ತದೆ. ಈ ಕ್ಷೇತ್ರದಲ್ಲಿ ಇನ್ನೂ ಪರಿಶೋಧನೆಯಾಗಬೇಕಾಗಿದೆ."
>
> "ಹೀಗೆಯೇ, ಎಲ್ಲ ದ್ರಾವಿಡ ಭಾಷೆಗಳಲ್ಲಿ ಸಮಾನವಾಗಿರುವ ತದ್ಧಿತಗಳನ್ನು ಗುರುತು ಹಚ್ಚುವ ಪ್ರಯತ್ನವೂ ಆಗಬೇಕಾಗಿದೆ."

ಎಂ.ವಿ.ಸೀ. ಅವರ ಈ ಉಪಯುಕ್ತವಾದ ಸಲಹೆಗಳಂತೆಯೇ ಅವರು ಈ ಲೇಖನದ ಕಡೆಯಲ್ಲಿ ಕೊಟ್ಟಿರುವ ಹೊಸಗನ್ನಡದಲ್ಲಿ ಬಳಕೆಯಲ್ಲಿರುವ ಕೆಲವು ಹೊಸ ತದ್ಧಿತ ಪ್ರತ್ಯಯಗಳ ಪಟ್ಟಿಯೂ ಮತ್ತು ಕನ್ನಡ ತದ್ಧಿತ ಪ್ರತ್ಯಯಗಳನ್ನು ಕುರಿತ ರೇಖಾ ನಕ್ಷೆಯೂ ಸ್ವಾಗತಾರ್ಹವಾಗಿದೆ.

ಡಾ|| ಎಚ್.ಎಸ್. ಅನಂತನಾರಾಯಣ ಅವರ ವಿಚಾರ ಪ್ರಚೋದಕವಾದ ಲೇಖನದಲ್ಲಿ ಕನ್ನಡ ವೈಯಾಕರಣರ ಅಭಿಪ್ರಾಯಗಳ ಉಲ್ಲೇಖನವಿಲ್ಲದಿರುವುದು ಒಂದು ಕೊರತೆಯೆನ್ನಿಸಿದರೆ, ಎಂ.ವಿ.ಸೀ. ಅವರ ಪ್ರಬಂಧದಲ್ಲಿ ಅವರೇ ಹೇಳಿರುವಂತೆ ದ್ರಾವಿಡ ಭಾಷೆಗಳ ಪರಸ್ಪರ ಸಾದೃಶ್ಯದ ಹಿನ್ನೆಲೆಯಲ್ಲಿ ಈ ಪ್ರತ್ಯಯಗಳ ಸ್ವರೂಪವನ್ನು ಪರಿಶೀಲಿಸದೆ ಇರುವುದು ಒಂದು ನಷ್ಟವೆನ್ನಿಸುತ್ತದೆ.

ಎಂ.ವಿ.ಸೀ. ಅವರು ಬರೆದಿರುವ "Relevance of Grammar in the Study of Poetics" (Proceedings of the Third All India Conference of Dravidian Linguists—Dharwar, 1976, p. 293-300) ಎಂಬ ಇಂಗ್ಲಿಷ್ ಪ್ರಬಂಧದಲ್ಲಿ ಕಾವ್ಯ ಮೀಮಾಂಸೆಯ ಅಧ್ಯಯನದಲ್ಲಿ ವ್ಯಾಕರಣದ ಸ್ಥಾನವೇನು ಎನ್ನುವುದನ್ನು ಬಹಳ ಅರ್ಥವತ್ತಾಗಿ ಪ್ರಸ್ತಾಪಿಸಿರುತ್ತಾರೆ. ಭಾಮಹನಂತಹ ಸಂಸ್ಕೃತ ಆಲಂಕಾರಿಕನೂ ಕನ್ನಡದ ಕವಿರಾಜಮಾರ್ಗಕಾರನೂ ತಮ್ಮ ತಮ್ಮ ಲಕ್ಷಣ ಗ್ರಂಥದಲ್ಲಿ ವ್ಯಾಕರಣ ದೋಷಗಳನ್ನು ಕುರಿತು ವಿವೇಚಿಸಿರುವುದರ ಔಚಿತ್ಯವೇನು - ಎನ್ನುವುದನ್ನು ಸಂದರ್ಭೋಚಿತವಾಗಿ ಸಮಾಲೋಚಿಸಿರುತ್ತಾರೆ.

ಬೆಂಗಳೂರು ವಿಶ್ವವಿದ್ಯಾನಿಲಯದವರು ಪ್ರಕಟಿಸಿರುವ 'ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ' ಎಂಬ ಮಾಲೆಯಲ್ಲಿ ಎಂ.ವಿ.ಸೀ. ಅವರು "ಶಾಸ್ತ್ರ ಸಾಹಿತ್ಯ" ಎಂಬ ಪುಸ್ತಕವನ್ನು ಬರೆದಿರುತ್ತಾರೆ. ಈ ಸಣ್ಣ ಪುಸ್ತಕದಲ್ಲಿ "ವ್ಯಾಕರಣ-ನಿಘಂಟು-ಜ್ಞಾನಕೋಶ" ಎಂಬ ಅಧ್ಯಾಯದಲ್ಲಿ ವ್ಯಾಕರಣವನ್ನು ಕುರಿತಂತೆ ಬರೆದಿರುವ ಭಾಗ ಚಿಕ್ಕದಾದರೂ ತುಂಬ ಉಪಯುಕ್ತವಾಗಿದೆ. ಕನ್ನಡ ವ್ಯಾಕರಣಾಂಶಗಳನ್ನು ಒಳಗೊಂಡ 'ಕವಿರಾಜಮಾರ್ಗ'ವನ್ನು ಸ್ಥೂಲವಾಗಿ ಪರಿಚಯ ಮಾಡಿಕೊಟ್ಟು ಅದನ್ನು "ಕನ್ನಡ ಪ್ರಥಮ ಪ್ರಾಯೋಗಿಕ ವ್ಯಾಕರಣ" ಎಂದು ಕರೆದರೆ ತಪ್ಪಾಗದು (ಪು. 158) ಎಂಬ ಅವರ ಅಭಿಪ್ರಾಯ ಅಂಗೀಕಾರಾರ್ಹವಾಗಿದೆ. ಅನಂತರ ನಾಗವರ್ಮನ "ಶಬ್ದಸ್ಮೃತಿ" ಮತ್ತು "ಭಾಷಾ ಭೂಷಣ", ಕೇಶಿರಾಜನ 'ಶಬ್ದಮಣಿದರ್ಪಣ' ಮತ್ತು ಭಟ್ಟಾಕಲಂಕನ "ಶಬ್ದಾನುಶಾಸನ" ಎಂಬ ಹಳಗನ್ನಡ ವ್ಯಾಕರಣಗಳ ವೈಶಿಷ್ಟ್ಯವನ್ನು ಅತ್ಯಂತ ಸಮರ್ಥವಾಗಿ ಸಂಕ್ಷಿಪ್ತವಾಗಿ ಸಮಾಲೋಚಿಸಿರುತ್ತಾರೆ. ಈ ತೆರನಾದ ತೌಲನಿಕ ವಿವೇಚನೆ ಎಂ.ವಿ.ಸೀ. ಅವರು ಮುಂದೆ ರಚಿಸಿದ "ಪ್ರಾಚೀನ ಕನ್ನಡ ವ್ಯಾಕರಣಗಳು" ಎಂಬ ಪುಸ್ತಕಕ್ಕೆ ಪ್ರಮುಖ ಪ್ರೇರಕ ಶಕ್ತಿಯಾಗಿ ನೆರವಾಯಿತು ಎನ್ನಬಹುದು.

ಹಳಗನ್ನಡ ವ್ಯಾಕರಣಗಳನ್ನು ಅಧ್ಯಯನ ಮಾಡುವವರು ಸಾಧಾರಣವಾಗಿ ಕೇಶಿರಾಜನ 'ಶಬ್ದಮಣಿದರ್ಪಣ'ವನ್ನೋ, ಇಲ್ಲವೇ ಭಟ್ಟಾಕಲಂಕನ 'ಕರ್ನಾಟಕ ಶಬ್ದಾನುಶಾಸನ'ವನ್ನೋ ವ್ಯಾಸಂಗ ಮಾಡುವುದು ಪದ್ಧತಿ. ಕನ್ನಡದಲ್ಲಿ ವ್ಯಾಕರ

ಣಾಂಶಗಳು ಬೆಳೆದು ಬಂದ ಬಗೆಯನ್ನಾಗಲೀ ಪ್ರಮುಖ ವ್ಯಾಕರಣಗಳ ತೌಲನಿಕ ವ್ಯಾಸಂಗವನ್ನಾಗಲೀ ಕೈಕೊಂಡವರು ಬಹು ವಿರಳ. 'ಕನ್ನಡ ಕೈಪಿಡಿಕಾರರು' ಪ್ರಥಮ ಸಂಪುಟದ 'ಹಳಗನ್ನಡ ವ್ಯಾಕರಣ' ಎಂಬ ಮೊದಲನೆಯ ವಿಭಾಗದಲ್ಲಿ ನಾಗವರ್ಮ, ಕೇಶಿರಾಜ ಮತ್ತು ಭಟ್ಟಾಕಲಂಕರ ಪರಿಚಯವನ್ನು ಮಾಡಿಕೊಟ್ಟು, ಈ ವಿಭಾಗದ ಕಡೆಯಲ್ಲಿ ನಿಮಿತ್ತ ಮಾತ್ರಕ್ಕೆ ಈ ವ್ಯಾಕರಣದ ಪರಿಚಯವನ್ನು ಮಾಡಿಕೊಟ್ಟಿರುತ್ತಾರೆ. ಕನ್ನಡ ಭಾಷೆಯ ಅಧ್ಯಯನ ನಾನಾಮುಖವಾಗಿ ಆಗುತ್ತಿರುವ ಇತ್ತೀಚಿನ ದಿನಗಳಲ್ಲಿ ಈ ಕೃತಿಗಳ ತೌಲನಿಕ ಅಧ್ಯಯನದ ಅಗತ್ಯ ವಿಶೇಷವಾಗಿತ್ತು. ಈ ದೊಡ್ಡ ಕೊರತೆಯನ್ನು ಎಂ.ವಿ.ಸೀ. ಅವರು ಪ್ರಾಚೀನ ಕನ್ನಡ ವ್ಯಾಕರಣಗಳು' ಎಂಬ ತಮ್ಮ ಪುಸ್ತಕದಲ್ಲಿ ಸಾಕಷ್ಟು ವಿದ್ವತ್ಪೂರ್ಣವಾಗಿ ನಿರ್ವಹಿಸಿರುವರು ಎನ್ನುವುದರಲ್ಲಿ ಸಂದೇಹವಿಲ್ಲ. (ನನ್ನ ವಿದ್ಯಾರ್ಥಿ ಮಿತ್ರರಾದ ಶ್ರೀ ದೊಡ್ಡಸ್ವಾಮಿಯವರು 'ಹಳಗನ್ನಡ ವ್ಯಾಕರಣಗಳ ತೌಲನಿಕ ವಿಶ್ಲೇಷಣೆ' (1981) ಎಂಬ ತಮ್ಮ ಕೃತಿಯಲ್ಲಿ ಇಂಥ ಒಂದು ನಮ್ರ ಪ್ರಯತ್ನವನ್ನು ಮಾಡಿರುವುದು ಸ್ತುತ್ಯವಾದದು. ಶ್ರೀಯುತರು ಹಳಗನ್ನಡವ್ಯಾಕರಣವನ್ನು ಪರಸ್ಪರ ಹೋಲಿಸಿ, ಅವುಗಳಲ್ಲಿ ವಿದಿತವಾಗುವ ಸಾದೃಶ್ಯ ಮತ್ತು ವೈದೃಶ್ಯಗಳನ್ನು ಸಂಕ್ಷಿಪ್ತವಾಗಿ ಸಮಾಲೋಚಿಸಿರುತ್ತಾರೆ. ಈ ಕೃತಿಗೆ ಮೈಸೂರು ವಿಶ್ವವಿದ್ಯಾನಿಲಯದವರು ತೀ. ನಂ. ಶ್ರೀ ಸ್ಮಾರಕ ಬಹುಮಾನವಿತ್ತು ಪುರಸ್ಕರಿಸಿರುವುದು ಅಭಿನಂದನಾರ್ಹವಾದುದು.)

1979 ರಲ್ಲಿ ಪ್ರಕಟವಾಗಿರುವ ಎಂ. ವಿ. ಸೀ. ಅವರ "ಪ್ರಾಚೀನ ಕನ್ನಡ ವ್ಯಾಕರಣಗಳು" ಎಂಬ ಗ್ರಂಥ ಈ ಕ್ಷೇತ್ರದಲ್ಲಿಯೇ ಅತ್ಯಂತ ಅಮೂಲ್ಯವಾದ ಆದಿ ಗ್ರಂಥವೆನ್ನಬಹುದು. ಲೇಖಕರು ಕನ್ನಡ ವೈಯಾಕರಣರಿಗೆ ಮೂಲಭೂತವಾದ ಸಂಸ್ಕೃತ ವೈಯಾಕರಣರ ಕೃತಿಗಳನ್ನೂ ಪರಿಚಯ ಮಾಡಿಕೊಡುವ ನೆಪದಲ್ಲಿ ಸಂಸ್ಕೃತ ವ್ಯಾಕರಣಕಾರರ ಕಾರ್ಯದ ಸಮಗ್ರ ಪರಿಶೀಲನೆಯನ್ನೇ ಮಾಡಿರುವುದು ಈ ಪುಸ್ತಕಕ್ಕೆ ಅತ್ಯಂತ ಉಪಯುಕ್ತವಾದ ಉಪೋದ್ಘಾತದಂತಿದೆ ಎನ್ನಬಹುದು. (ಈ ವಿಷಯಕ್ಕಾಗಿ ಗ್ರಂಥದ ಹನ್ನೆರಡು ಅಧ್ಯಾಯಗಳನ್ನು ಮೀಸಲಾಗಿಟ್ಟಿರುವುದು ಈ ಹಿನ್ನೆಲೆಯ ಮಹತ್ವವನ್ನು ವ್ಯಕ್ತಪಡಿಸುತ್ತದೆ. ಅನಂತರ ಹದಿಮೂರನೆಯ ಅಧ್ಯಾಯದಲ್ಲಿ ಕನ್ನಡವ್ಯಾಕರಣ ಶಾಸ್ತ್ರದ ಪ್ರಾರಂಭದೆಸೆಯನ್ನು ರೇಖಿಸಿ, ಹದಿನಾಲ್ಕನೆಯ ಅಧ್ಯಾಯದಿಂದ ಹದಿನೇಳನೆಯ ಅಧ್ಯಾಯ ಪೂರ್ತಿಯಾಗಿ ಕನ್ನಡ ವ್ಯಾಕರಣಕಾರರ ವ್ಯಕ್ತಿ ಮತ್ತು ಕೃತಿಪರಿಚಯಗಳನ್ನು ಮಾಡಿಕೊಟ್ಟಿರುತ್ತಾರೆ. ಅನಂತರ ಹದಿನೆಂಟರಿಂದ ಮೊದಲ್ಗೊಂಡು ಇಪ್ಪತ್ತೊಂಭತ್ತು ಅಧ್ಯಾಯಪೂರ್ತಿಯಾಗಿ ಈ ಹಳಗನ್ನಡ ವ್ಯಾಕರಣಗಳನ್ನು ತೌಲನಿಕವಾಗಿ ಪರಿಶೀಲಿಸಿರುತ್ತಾರೆ. ಕಟ್ಟ ಕಡೆಯಲ್ಲಿ ಕನ್ನಡದ ವೈಶಿಷ್ಟ್ಯಗಳನ್ನು ಕುರಿತ ಒಂದು ಅಧ್ಯಾಯವೂ ಇದೆ. ಇಂಥ ಶಾಸ್ತ್ರಗ್ರಂಥಕ್ಕೆ ಉಚಿತ

ವಾದಂತೆ ಸಹಕಾರಿಯಾದ ಅನುಬಂಧಗಳೂ ಇವೆ. ಹಳಗನ್ನಡ ವ್ಯಾಕರಣಗಳನ್ನು ಈ ರೀತಿ ಪ್ರಾಚೀನ ಮತ್ತು ನವೀನ ದೃಷ್ಟಿಗಳಿಗೆ ಅನುಸಾರವಾಗಿ ಅಧ್ಯಯನವನ್ನು ನಡೆಸಿದ ಪ್ರಪ್ರಥಮ ಪ್ರಯತ್ನದ ಪ್ರಶಸ್ತಿ ಎಂ.ವಿ.ಸೀ. ಅವರಿಗೆ ಸೇರಿದ್ದು.

ಹಲ್ಮಿಡಿ ಶಾಸನಕ್ಕೆ ಪೂರ್ವದಲ್ಲಿಯೇ ಕನ್ನಡ ಭಾಷೆ ಪ್ರಚಲಿತವಾಗಿರಬೇಕೆಂದು ವಿದ್ವಾಂಸರು ಹೇಗೆ ಊಹಿಸಿರುವರೋ ಅದೇ ರೀತಿಯಲ್ಲಿ ಎಂ.ವಿ.ಸೀ. ಅವರು "ಹಲ್ಮಿಡಿಯ ಶಾಸನಕ್ಕೂ 'ಕವಿರಾಜಮಾರ್ಗ'ಕ್ಕೂ ನಡುವಣ ಕಾಲದಲ್ಲಿ ಗ್ರಂಥರಚನೆಯಾಗುತ್ತಿದ್ದಿರಬೇಕು ಎಂದು ಹೇಳಿದರೆ ಹಾರುಗುದುರೆಯ ಊಹೆಯಾಗದು" ಎಂದು ಸೂಚಿಸಿ. ಅದಕ್ಕೆ ನಿದರ್ಶನಾರ್ಥವಾಗಿ 'ಕವಿರಾಜಮಾರ್ಗ' ವೆಂಬ ಅಲಂಕಾರಗ್ರಂಥದಲ್ಲಿ ಪ್ರಾಸಂಗಿಕವಾಗಿ ಪ್ರಸ್ತಾಪಿಸಿರುವ ಸಂಗತಿಗಳನ್ನು ಉಲ್ಲೇಖಿಸಿರುವರು. ಗ್ರಂಥಕಾರರು ಮುಂದುವರಿದು "ಕವಿರಾಜಮಾರ್ಗ" ಪೂರ್ವದ ಶಾಸನ ಸಾಹಿತ್ಯ ಮತ್ತು ಕವಿರಾಜಮಾರ್ಗಗಳ ಆಧಾರದ ಮೇಲೆ ಪ್ರಮಾಣಭೂತ ಕನ್ನಡ ವ್ಯಾಕರಣ ಗ್ರಂಥವೊಂದು ಇದ್ದಿತು ಎಂದು ನಿಶ್ಚಿತವಾಗಿ ಹೇಳಲು ಸಾಧ್ಯವಿಲ್ಲದಿದ್ದರೂ ಕನ್ನಡ ವ್ಯಾಕರಣ ಸಂಪ್ರದಾಯವೊಂದು ನೆಲೆನಿಂತಿತ್ತು. ವ್ಯಾಕರಣದ ಚೌಕಟ್ಟು ಮತ್ತು ಪರಿಭಾಷೆಯ ವಿಷಯದಲ್ಲಿ ಅದು ಸಂಸ್ಕೃತ (ಮತ್ತು ಪ್ರಾಕೃತ) ವ್ಯಾಕರಣದ ಮಾದರಿಯಲ್ಲಿಯೇ ರೂಪುಗೊಳ್ಳುತ್ತಿತ್ತು ಎಂದು ಧಾರಾಳವಾಗಿ ಊಹಿಸಬಹುದು (ಪು. 3)" ಎಂದು ಸ್ಪಷ್ಟಪಡಿಸುತ್ತಾರೆ. ಗ್ರಂಥಕರ್ತರ ಮೊದಲನೆಯ ಹೇಳಿಕೆಗಿಂತ ಎರಡನೆಯ ಹೇಳಿಕೆಯೇ ಸಮಂಜಸವಾದುದು ಎಂದು ತೋರುತ್ತದೆ. 'ಕವಿರಾಜಮಾರ್ಗಕ್ಕೆ' ಪೂರ್ವದಲ್ಲಿ ಗದ್ಯ ಮತ್ತು ಪದ್ಯ ಕವಿಗಳು ಇದ್ದರು ಎನ್ನುವುದಕ್ಕೆ ಕವಿರಾಜಮಾರ್ಗಕಾರನ ಹೇಳಿಕೆಯೇ ಪರಮಪ್ರಮಾಣವಾಗಿದೆ. ಸಾಹಿತ್ಯಸೃಷ್ಟಿ ಕ್ರಮ ಕ್ರಮವಾಗಿ ಸಾಗುತ್ತಿರುವ ಈ ಕಾಲದಲ್ಲಿ ತನಗೆ ಕಂಡುಬಂದ ಲೋಪ-ದೋಷಗಳನ್ನು ಕವಿರಾಜಮಾರ್ಗಕಾರನು ಪ್ರಸ್ತಾಪಿಸಿರುವುದರಿಂದ, ಆತನ ಕೃತಿಯೇ ಈ ದಿಕ್ಕಿನಲ್ಲಿ ಕನ್ನಡದ ಮೊಟ್ಟಮೊದಲ ರಚನೆಯಾಗಿರಬೇಕು. ಕನ್ನಡ ಕವಿಗಳಿಗೆ ಸಂಸ್ಕೃತವೇ ಮೇಲುಪಂಕ್ತಿಯಾಗಿದ್ದುದರಿಂದ ಅವರ ಪಾಲಿಗೆ ಈ ವ್ಯಾಕರಣದ ಕೊರತೆ ಎಷ್ಟರ ಮಟ್ಟಿಗೆ ಕಂಡು ಬಂದಿತೋ ಹೇಳಲು ಸಾಧ್ಯವಿಲ್ಲ. ಆದರೆ ಕವಿರಾಜಮಾರ್ಗಕಾರನು ಪ್ರಸ್ತಾಪಿಸಿರುವ ವ್ಯಾಕರಣಾಂಶಗಳನ್ನು ಪರಿಶೀಲಿಸಿದರೆ, ಅವನು ಸಂಸ್ಕೃತ ಮಾರ್ಗಾನುಯಾಯಿಗಳಾದ ಕನ್ನಡ ಕವಿಗಳು ಹೇಗೆ ವ್ಯವಹರಿಸಬೇಕೆನ್ನುವುದನ್ನು ಎಚ್ಚರಿಸಿದಂತಿದೆ. ಈ ಪ್ರಾರಂಭದೆಸೆ ಹೇಗೇ ಇರಲಿ. ನಾಗವರ್ಮಾದಿಗಳಂತೂ ಸಂಸ್ಕೃತದ ವ್ಯಾಕರಣಗಳ ಜಾಡಿನಲ್ಲಿಯೇ ಮುಂದೆ ಸಾಗಿ ಸಂದರ್ಭೋಚಿತವಾಗಿ ಕನ್ನಡದ ಪ್ರಕ್ರಿಯೆಯನ್ನು ಪ್ರಕಟಿಸಿರುವುದಕ್ಕೆ ಹಲವಾರು ದೃಷ್ಟಾಂತಗಳು ಕಂಡುಬರುತ್ತವೆ. "ಕನ್ನಡ ವ್ಯಾಕರಣ ಪರಂಪರೆಯು ಮೇಲೆ ಸಂಸ್ಕೃತ

ವ್ಯಾಕರಣದ ಪ್ರಭಾವ ಎಷ್ಟು ಎಂಬುದನ್ನು ಬಿಡಿಸಿ ಹೇಳಬೇಕಾಗಿಲ್ಲ. ರೂಪ ರಚನೆಯಲ್ಲಿ ಕನ್ನಡ ವ್ಯಾಕರಣ ಸಂಸ್ಕೃತ ವ್ಯಾಕರಣದ ಪಡಿನೆಳಲಾಯಿತು" (ಪು. 8) ಎಂಬ ಗ್ರಂಥಕರ್ತರ ನಿರ್ಧಾರ ನಿಸ್ಸಂದೇಹವೆನ್ನಬಹುದು. ಕನ್ನಡ ವೈಯಾಕರಣರ ಮೇಲೆ ಪಾಣಿನಿಯ ವ್ಯಾಕರಣ ಮತ್ತು ಪಾಣಿನೀಯ ಪದ್ಧತಿಯಿಂದ ಭಿನ್ನವಾದ ಇತರ ವ್ಯಾಕರಣಗ್ರಂಥಗಳು ಹೇಗೆ ಪ್ರಭಾವ ಬೀರಿವೆಯೆಂಬ ಸಮಾಲೋಚನೆ ಸೂಕ್ತವಾದ ಕ್ರಮವೇ ಸರಿ. ಇದೇ ಸಂದರ್ಭದಲ್ಲಿ ಗ್ರಂಥ ಕರ್ತೃಗಳು ಇತರ ದ್ರಾವಿಡ ಭಾಷೆಗಳ ವ್ಯಾಕರಣಗಳ ವಿಚಾರವನ್ನು ವಿವೇಚಿಸುತ್ತ "ಕನ್ನಡ ವ್ಯಾಕರಣ ಕರ್ತರು ತಂತಮ್ಮ ಕಾಲದವರೆಗೆ ರಚಿತವಾಗಿದ್ದ ಸೋದರ ಭಾಷೆಗಳ ವ್ಯಾಕರಣ ಸ್ವರೂಪಗಳನ್ನು ಅರಿಯಲು ಪ್ರಯತ್ನಪಡಲಿಲ್ಲ." (ಪು. 9) ಎಂಬ ಹೇಳಿಕೆ ಗಮನಾರ್ಹವಾದುದು. ತಮಿಳು ವ್ಯಾಕರಣವನ್ನು ಹೊರತು ಉಳಿದ ಭಾಷೆಗಳಾದ ತೆಲುಗು, ಮಲಯಾಳ ಭಾಷೆಗಳ ವ್ಯಾಕರಣಗಳೂ ಸಂಸ್ಕೃತದ ಗಾಢಪ್ರಭಾವಕ್ಕೆ ಹೇಗೆ ಒಳಗಾಗಿವೆಯೆಂಬ ಅಂಶವೂ ಸಹಜವಾದುದು. "ಸಂಸ್ಕೃತ ವ್ಯಾಕರಣ ಸಂಪ್ರದಾಯಗಳು" ಎಂಬ ಅಧ್ಯಾಯ ಆಮೂಲಾಗ್ರವಾಗಿ ಹಲವಾರು ಸಂಗತಿಗಳನ್ನು ತಿಳಿಸುವುದಲ್ಲದೆ, ಕನ್ನಡ ವ್ಯಾಕರಣಗಳ ವ್ಯಾಸಂಗಕ್ಕೆ ಅತ್ಯಂತ ಉಪಯುಕ್ತವಾದ ಹಿನ್ನೆಲೆಯಂತಿದೆ.

"ಕವಿರಾಜಮಾರ್ಗ"ದಲ್ಲಿ ಉಕ್ತವಾಗಿರುವ ವ್ಯಾಕರಣಾಂಶಗಳನ್ನು ತಿಳಿಯ ಹೇಳಿ, ನಾಗವರ್ಮನಿಗೆ ಪೂರ್ವಭಾವಿಯಾಗಿ ನಯಸೇನನೆಂಬ ಒಬ್ಬ ವೈಯ್ಯಾಕರಣನು ಇದ್ದಿರಬೇಕೆಂದು ಪ್ರಕೃತ ಗ್ರಂಥಕರ್ತರೂ ಊಹಿಸಿರುವುದು ಸಮಂಜಸವಾಗಿದೆ. ಎರಡನೆಯ ನಾಗವರ್ಮನಿಂದ ಈಚಿನ ವೈಯ್ಯಾಕರಣರು ಕವಿರಾಜಮಾರ್ಗಕಾರನಿಗೆ ಎಷ್ಟರ ಮಟ್ಟಿಗೆ ಋಣಿಯಾಗಿದ್ದಾರೆ ಎಂಬ ಸಮೀಕ್ಷೆ ಸ್ವಾಗತಾರ್ಹವಾಗಿದೆ. ಈ ಮೂಲಕ ಕವಿರಾಜಮಾರ್ಗಕಾರನು ಕೇವಲ ದಂಡಿಯ 'ಕಾವ್ಯಾದರ್ಶದ' ಅನುವಾದಕನಾಗಿ ಮಾತ್ರ ಉಳಿಯದೆ. ಕನ್ನಡ ಭಾಷೆಯ ಸ್ವರೂಪದ ಬಗ್ಗೆಯೂ ಎಷ್ಟು ಆಸಕ್ತನಾಗಿದ್ದನೆಂಬುದು ವ್ಯಕ್ತವಾಗುತ್ತದೆ.

ಹಳಗನ್ನಡದ ಪ್ರಪ್ರಥಮ ವೈಯಾಕರಣನಾದ ನಾಗವರ್ಮ ಮತ್ತು ಅವನ ಕೃತಿಗಳಾದ 'ಕರ್ಣಾಟಕ ಭಾಷಾ ಭೂಷಣ' ಮತ್ತು 'ಶಬ್ದಸ್ಮೃತಿ'ಗಳ ಬಗ್ಗೆ ಗ್ರಂಥ ಕರ್ತರು ಸಾಕಷ್ಟು ವಿಷಯಗಳನ್ನು ಸಂಗ್ರಹಿಸಿರುವುದಲ್ಲದೆ, ಅತ್ಯಂತ ಸಮರ್ಥವಾಗಿ ವಿದ್ವಾಂಸರ ಭಿನ್ನಾಭಿಪ್ರಾಯಗಳನೆಲ್ಲಾ ಸಂಕ್ಷಿಪ್ತವಾಗಿ ವಿಶ್ಲೇಷಿಸಿ ಈ ಎರಡೂ ಕೃತಿಗಳ ಕರ್ತೃ ಒಬ್ಬನೇ ಎಂದೂ, 'ಕರ್ಣಾಟಕ ಭಾಷಾ ಭೂಷಣ'ವೇ 'ಕಾವ್ಯಾವಲೋಕನಕ್ಕಿಂತ ಮುಂಚಿತವಾಗಿ ರಚನೆಯಾದುದೆಂದೂ ತಿಳಿಸಿರುವರು. ನಾಗವರ್ಮ ವಿರಚಿತ 'ವರ್ಧಮಾನಪುರಾಣ' ದೊರೆತಂದಿನಿಂದ ಈಚೆಗೆ ನಾಗವರ್ಮನ ಕಾಲ ಮತ್ತು ಆತನ ಕೃತಿಗಳ ಅನುಕ್ರಮದ ಬಗ್ಗೆ ಇರುವ ಅಭಿಪ್ರಾಯಭೇದವನ್ನು ಸೂಚಿಸಿ,

"ಭಾಷಾಭೂಷಣ" ನಾಗವರ್ಮನ ಮೊದಲನೆಯ ಕೃತಿಯೆಂದೂ, 'ವರ್ಧಮಾನ ಪುರಾಣ' ಎರಡನೆಯ ಕೃತಿಯೆಂದೂ, ಆ ಬಳಿಕ 'ಕಾವ್ಯಾವಲೋಕನ' ಮತ್ತು 'ವಸ್ತು ಕೋಶ'ಗಳು ರಚನೆಯಾದುವೆಂದೂ ಸಕಾರಣವಾಗಿ ನಿರ್ಣಯಿಸಿರುವರು. 'ಭಾಷಾ ಭೂಷಣ' ಮತ್ತು 'ಶಬ್ದ ಸ್ಮೃತಿ'ಗಳ ಸ್ವರೂಪವನ್ನು ಸಂಕ್ಷಿಪ್ತವಾಗಿ ಪರಾಡಿ ಕೊಟ್ಟಿರುವರು. ಮಲಯಾಳದ 'ಲೀಲಾತಿಲಕ' ಕೃತಿಯ ಮೇಲೆ ನಾಗವರ್ಮನ ಪ್ರಭಾವ ಬಿದ್ದಿರಬಹುದೆಂಬ ಹೊಸ ವಿಚಾರವನ್ನು ಇಲ್ಲಿಯೇ ಸೂಚಿಸಿರುವರು. ಕೇಶಿರಾಜ ಮತ್ತು ಆತನ ಕೃತಿಯಾದ 'ಶಬ್ದಮಣಿದರ್ಪಣ'ದ ಬಗ್ಗೆಯೂ ಗ್ರಂಥಕರ್ತರು ಮಾಡಿರುವ ಸಮಾಲೋಚನೆ ಸಾಕಷ್ಟು ವಿಷಯಗಳನ್ನು ಒಳಗೊಂಡಿದೆ. ಕೇಶಿರಾಜನು ತನ್ನ ಪೂರ್ವದಲ್ಲಿದ್ದ ವೈಯ್ಯಾಕರಣರಿಗೆ ಎಷ್ಟು ಋಣಿಯಾಗಿರುವನೆಂದು ತಿಳಿಸಿರುವುದಲ್ಲದೆ, ಅವನ ಸ್ವತಂತ್ರ ದೃಷ್ಟಿಯನ್ನು ತೋರಿಸಿಕೊಟ್ಟಿರುವರು. ಪ್ರಾಸಂಗಿಕವಾಗಿ ಕಾತಂತ್ರ, ಭಾಷಾಭೂಷಣ, ಶಬ್ದಸ್ಮೃತಿ ಮತ್ತು ಶಬ್ದಮಣಿದರ್ಪಣಗಳಲ್ಲಿ ವಿದಿತವಾಗುವ ಸಾಮ್ಯಗಳನ್ನು ತೋರಿಸಿಕೊಟ್ಟು ನಮ್ಮ ವೈಯಾಕರಣರ ವೈದುಷ್ಯದ ವಿಸ್ತಾರವೇನು? ಎನ್ನುವುದನ್ನು ಪರಿಚಯ ಮಾಡಿಕೊಡುವ ವಿಧಾನ ಸ್ತುತ್ಯವಾಗಿದೆ. ಕೇಶಿರಾಜನ 'ಶಬ್ದಮಣಿದರ್ಪಣ'ದ ವ್ಯಾಖ್ಯಾನಕಾರರ ಕಾಲವನ್ನು ನಿರ್ದೇಶಿಸುವಲ್ಲಿ ಡಿ. ಕೆ. ಭೀಮಸೇನರಾಯರಿಂದ ಸಂಪಾದಿತವಾದ ಹೊಸ ಪ್ರತಿಯ ವ್ಯಾಖ್ಯಾನಕಾರನ ಕಾಲವನ್ನು 17ನೆಯ ಶತಮಾನವಿರಬಹುದೆಂದು ಸೋದಾಹರಣವಾಗಿ ನಿಶ್ಚಯಿಸಿರುವ ಪ್ರಯತ್ನ ಪ್ರಶಂಸನೀಯವಾದುದು. ಭಟ್ಟಾಕಳಂಕ ಮತ್ತು ಆತನ ಬೃಹತ್ ಕೃತಿಯಾದ 'ಕರ್ಣಾಟಕ ಶಬ್ದಾನುಶಾಸನ'ದ ವಿಚಾರಗಳನ್ನು ಸಂಗ್ರಹಿಸುವಲ್ಲಿಯೂ ಗ್ರಂಥಕರ್ತರ ಪ್ರೌಢಿಮೆ ವ್ಯಕ್ತವಾಗುತ್ತದೆ. ಭಟ್ಟಾಕಳಂಕನ ಕೃತಿ ನಾಗವರ್ಮನ 'ಭಾಷಾ ಭೂಷಣ'ದ ಅನುಕರಣ ಅಥವಾ ಅನುಸರಣವಲ್ಲ (ಪು. 102), 'ವಿಷಯ ನಿರೂಪಣೆಯಲ್ಲಿ ಪೂರ್ವವ್ಯಾಕರಣಗಳಿಗಿಂತ ಇದು ಹೆಚ್ಚು ಕ್ರಮಬದ್ಧ; ಹೆಚ್ಚು ಶಾಸ್ತ್ರೀಯ (ಪು. 103). "ಸಂಸ್ಕೃತಕ್ಕೆ 'ಅಷ್ಟಾಧ್ಯಾಯಿ' ಹೇಗೋ, ಕನ್ನಡಕ್ಕೆ 'ಶಬ್ದಾನುಶಾಸನ' ಹಾಗೆ (ಪು. 103) ಎಂಬ ಹೇಳಿಕೆಗಳು, ಭಟ್ಟಾಕಳಂಕನ ಶಬ್ದಾನುಶಾಸನದತ್ತ ಇತರರ ಗಮನವನ್ನು ಸೆಳೆಯುವಂತಿವೆ. ಶಬ್ದಾನುಶಾಸನದ ಸೂತ್ರ-ವೃತ್ತಿ-ವ್ಯಾಖ್ಯಾನಗಳು ಏಕ ಕರ್ತೃಕವೋ ಇಲ್ಲವೇ ಭಿನ್ನಕರ್ತೃಕವೋ ಎಂಬುದನ್ನು ಕುರಿತಂತೆ ಈವರೆಗೆ ನಡೆದಿರುವ ವಿದ್ವಾಂಸರ ಅಭಿಪ್ರಾಯಗಳನ್ನೆಲ್ಲ ಕ್ರೋಡೀಕರಿಸಿ, ಅವುಗಳು ಏಕ ಕರ್ತೃಕವೆಂಬ ನಿಲುವು ಸಮರ್ಥನೀಯವಾಗಿ ತೋರಿದರೂ ಸಂದೇಹಕ್ಕೆ ಅವಕಾಶವಿದ್ದೇ ಇದೆ' ಎಂದು ಹೇಳಿರುವರು. ಇತ್ತೀಚಿಗೆ ಪಿ. ರಾಮಭಟ್ ಎಂಬವರು ಈ ಸಮಸ್ಯೆಯನ್ನು ಸಾಧಾರವಾಗಿ ಪುನರ್ವಿಮರ್ಶಿಸಿ 'ಕರ್ಣಾಟಕ ಶಬ್ದಾನುಶಾಸನ'ವೆಂಬ ವ್ಯಾಕರಣದ

ಸೂತ್ರ ಮತ್ತು ವೃತ್ತಿಗಳನ್ನು ಬರೆದವನೊಬ್ಬ. ಅವನು ಭಟ್ಟಾಕಳಂಕನ ಗುರುವಾದ ಅಕಲಂಕನಿರಬೇಕು. ಈ ವ್ಯಾಕರಣದ ವ್ಯಾಖ್ಯಾನ 'ಮಂಜರೀಮಕರಂದ'ವನ್ನು ಬರೆದ ಸೂತ್ರ-ವೃತ್ತಿಗಳಕರ್ತೃವಿಗಿಂತ ಭಿನ್ನನಾಗಿರುವ ಭಟ್ಟಾಕಳಂಕ' (ಕರ್ನಾಟಕ ಭಾರತಿ ; ಸಂ. X-೪, ಅಕ್ಷಯ ತೃತೀಯಸಂಚಿಕೆ, 1978) ಎಂದು ವ್ಯಕ್ತಪಡಿಸಿರುವ ಅಭಿಪ್ರಾಯವನ್ನು ಅನುಮೋದಿಸಿರುವುದನ್ನು 'ಅಡಿಟಿಪ್ಪಣಿ' (ಪು. 105-106)ರಲ್ಲಿ ಕಾಣಬಹುದು. ಇದೇ ವಿಚಾರವನ್ನು ಪ್ರಸ್ತಾಪಿಸಿರುವ ಟಿ. ಎಸ್. ಶಾಮರಾಯರೂ ಸಹ ಪೂರ್ವವಿದ್ವಾಂಸರ ಅಭಿಪ್ರಾಯಗಳನ್ನು ಉಲ್ಲೇಖಿಸಿ, "ಒಟ್ಟಿನಲ್ಲಿ ಏಕಕರ್ತೃತ್ವ ವಿಷಯದಲ್ಲಿ ಬಹಳ ಸಂದೇಹಗಳು ಮೂಡುತ್ತವೆ. ವ್ಯಾಖ್ಯಾನಕಾರನು ದೊಡ್ಡ ವಿದ್ವಾಂಸನೆಂಬುದರಲ್ಲಿ ಯಾವ ಸಂದೇಹವೂ ಇರುವುದಿಲ್ಲ. ಆದರೆ ತಾನು ಪ್ರಕಾಶಕ್ಕೆ ಬರಲು ಮತ್ತೊಬ್ಬನ ಸ್ವತ್ತನ್ನು ವಿನಿಯೋಗಿಸಿಕೊಂಡಿರುವಂತೆ ವಿಮರ್ಶಕರಿಗೆ ಅನಿಸ ದಿರಲಾರದು. ಇಷ್ಟೆಲ್ಲ ಹೇಳಿದರೂ ನಾವು "ಇದಮಿತ್ಥಂ" ಎಂಬ ಯಾವ ಸಿದ್ಧಾಂತಕ್ಕೂ ಬರಲು ಇಷ್ಟಪಡುವುದಿಲ್ಲ* ಎಂದು ಹೇಳಿರುತ್ತಾರೆ. ಕೃತಿ ಕರ್ತೃ ಮತ್ತು ಕೃತಿ ವಿಚಾರಗಳನ್ನು ಪರಿಚಯ ಮಾಡಿದಬಳಿಕ, ಕೃತಿಯ ರೂಪರಚನೆಯನ್ನು ಸ್ಥೂಲ ವಾಗಿ ಕೊಟ್ಟಿರುವುದರಿಂದ ಅಧ್ಯಯನ ಮಾಡುವವರಿಗೆ ಹೆಚ್ಚು ಉಪಕಾರಿಯಾಗಿವೆ ಯೆನ್ನಬಹುದು.

ಪ್ರಕೃತ ಗ್ರಂಥದ ಪ್ರಮುಖ ಭಾಗ ಹದಿನೆಂಟನೆಯ ಅಧ್ಯಾಯದಿಂದ ಮೊದಲಾಗಿ ಮೂವತ್ತನೆಯ ಅಧ್ಯಾಯ ಪೂರ್ತಿಯಾಗಿ ವ್ಯಾಪಿಸಿದೆ. ಈ ಮೊದಲು ನಿರ್ದೇಶಿಸಿದ ಸಂಗತಿಗಳನ್ನು ಈ ಪುಸ್ತಕದ ಎರಡು ಪ್ರಧಾನ ಭಾಗಗಳೆಂದು ಪರಿಗಣಿಸಿದರೆ, ಪ್ರಕೃತ ಭಾಗ ಮೂರನೆಯದಾಗುತ್ತದೆ. ಗ್ರಂಥಕರ್ತೃಗಳು ಭಾಷೆಯ ವಿವಿಧ ಅಂಗಗಳಾದ ವರ್ಣಮಾಲೆ, ಸಂಧಿ ಪ್ರಕರಣ, ನಾಮಪ್ರಕರಣ, ವಿಭಕ್ತಿ ವ್ಯವಸ್ಥೆ. ಸರ್ವನಾಮ ಗಳು, ಅಕ್ಷರ ಪರಿಣಾಮ, ಸಮಾಸಪ್ರಕರಣ, ತದ್ಧಿತ ಪ್ರಕರಣ, ಅಪಭ್ರಂಶ ಪ್ರಕರಣ ಆಖ್ಯಾತ ಪ್ರಕರಣ, ಧಾತು ಪ್ರಕರಣ, ಅವ್ಯಯಗಳು ಮತ್ತು ಕನ್ನಡ ವೈಶಿಷ್ಟ್ಯಗಳು ಎಂಬ ಉಪವಿಭಾಗಗಳಲ್ಲಿ ಕನ್ನಡ ವೈಯಾಕರಣರ ನಿರೂಪಣೆಗಳನ್ನು ತೌಲನಿಕವಾಗಿ ವಿಶ್ಲೇಷಿಸಿರುವರು.

ವರ್ಣ ಸಮಾರೋಪವನ್ನು ಕುರಿತಂತೆ 'ಭಾಷಾಭೂಷಣ', 'ಶಬ್ದಸ್ಮೃತಿ' 'ಶಬ್ದಮಣಿ ದರ್ಪಣ' ಮತ್ತು 'ಶಬ್ದಾನುಶಾಸನ'ಗಳಲ್ಲಿ ಉಕ್ತವಾಗಿರುವ ಪ್ರಮು ಖಾಂಶಗಳನ್ನೆಲ್ಲ ತಿಳಿಸಿ, ಆಯಾ ವ್ಯಾಕರಣಕಾರರ ದೃಷ್ಟಿಯೇನು ? ಎನ್ನುವುದನ್ನು ಸ್ಪಷ್ಟಪಡಿಸಲಾಗಿದೆ. ಈ ಸಂದರ್ಭದಲ್ಲಿ ಱ, ೞ, ಕ್ಷಳಗಳನ್ನು ಕುರಿತ ವಿವೇಚನೆ

---

*(ಕರ್ನಾಟಕ ಶಬ್ದಾನುಶಾಸನಂ (1975). ಪ್ರ: ಕರ್ನಾಟಕ ಸರ್ಕಾರ ಪಠ್ಯಪುಸ್ತಕಗಳ ಇಲಾಖೆ-(ಪೀಠಿಕೆ)-ಪು: xxxl.)

ಗಮನಾರ್ಹವಾಗಿದೆ. 'ಸಂಸ್ಕೃತ ವ್ಯಾಕರಣಗಳಲ್ಲಾಗಲೀ ನಾಗವರ್ಮನ ವ್ಯಾಕರಣಗಳಲ್ಲಾಗಲೀ ಉಕ್ತವಾಗಿಲ್ಲದ 'ಕ್ಷಳ'ದ ಳಕಾರವನ್ನು ಕೇಶಿರಾಜನು ಬಳಕೆ ಪಡಿಸಿರುವುದನ್ನಿಲ್ಲಿ ಹೇಳಿ, ಕುಳಕ್ಕೂ ಕ್ಷಳಕ್ಕೂ ಉಚ್ಚಾರಣೆಯಲ್ಲಿಯಾವ ಭೇದವೂ ಇಲ್ಲ. ಕೇಶಿರಾಜನು ಕ್ಷಳವನ್ನು ಒಂದು ವರ್ಣವೆಂದೂ ಪರಿಗಣಿಸಿಲ್ಲ (ಪು. 110) ಕ್ಷಳವನ್ನು ಒಂದು ವರ್ಣವೆಂದು ಅವನು ಪರಿಗಣಿಸಿಲ್ಲ' (ಪು. 128) ಎಂದು ಅಭಿಪ್ರಾಯ ಪಡುವರು. ಕೇಶಿರಾಜ ಕನ್ನಡದ ವರ್ಣಮಾಲೆಯನ್ನು ನಿಷ್ಕರ್ಷಿಸುವ ಕ್ರಮ ತುಂಬ ತೊಡಕಾದುದು. ಮೊದಲು ಸಂಸ್ಕೃತದ ವರ್ಣಮಾಲೆಯನ್ನು ಉಲ್ಲೇಖಿಸುವನು. ಈ ಸಂದರ್ಭದಲ್ಲಿ ಉದ್ಗ್ರಾಂಥಿಕ ಸಂಸ್ಕೃತದಲ್ಲಿ(Classical Sanskrit) ಬಳಕೆಯಲ್ಲಿಲ್ಲದ 'ಳ' ಕಾರವನ್ನು ನಿರ್ದೇಶಿಸಿ, ಇದು ಸಂಸ್ಕೃತದ 'ಲ' ಕಾರಕ್ಕೆ ಸಂದರ್ಭೋಚಿತವಾಗಿ ಬಳಸುವ 'ಕ್ಷಳ' ಕಾರ ವೆಂದು ತಿಳಿಸುವನು. (ಈ ಪಾರಿಭಾಷಿಕ ಶಬ್ದ ಹರಿಹರನ ವೇಳೆಗಾಗಲೇ ಬಳಕೆಯಲ್ಲಿ ಬಂದಿತ್ತೆಂಬುದು, ಅವನು ರಳ, ಕುಳ, ಕ್ಷಳಗಳ ನಿಯಮವನ್ನು ಪಾಲಿಸುವುದಿಲ್ಲವೆಂದು ಹೇಳುವ ಕಂದ ಪದ್ಯದ ಮೂಲಕ ಮನವರಿಕೆಯಾಗುತ್ತದೆ.) ತಾನು ನೀಡಿರುವ ಸಂಸ್ಕೃತ ವರ್ಣಮಾಲೆಯ 52 ಅಕ್ಷರಗಳಿಗೆ, ದೇಶೀಯವಾದ ಐದು ವರ್ಣಗಳನ್ನು (ಎ, ಒ, ಱ, ೞ, ಳ) ಸೇರಿಸಿದರೆ ಒಟ್ಟು 57 ವರ್ಣಗಳಾಗುತ್ತವೆ. ಇವುಗಳಲ್ಲಿ ಸಂಸ್ಕೃತ ವರ್ಣಗಳಾದ "ಋ, ೠ, ವರ್ಣ; ಶ, ಷ, ವಿಸರ್ಗ, ೱ, ೲ ಕ್ಷಳನಂ" ಕಳೆದರೆ, "ನಾಲ್ವತ್ತೇೞಕ್ಕರಮ್ಮಕ್ಕೆ ಸುದ್ದಗೆಯಚ್ಚಗನ್ನಡಕ್ಕೀಕ್ರಮದಿಂ" ಎಂದು ನಿರ್ಣಯಿಸುವನು (ಸೂ. 43) ಎಂದ ಬಳಿಕ ಕೇಶಿರಾಜನು ಕ್ಷಳವನ್ನು ಪ್ರತ್ಯೇಕ ವರ್ಣವೆಂದು ಪರಿಗಣಿಸಿಲ್ಲವೆಂದು ಹೇಳುವುದಾದರೂ ಹೇಗೆ? ಕುಳ ಮತ್ತು ಕ್ಷಳಗಳಲ್ಲಿ ಒಂದು ಅಚ್ಚಗನ್ನಡದ ಳಕಾರವೆಂದೂ, ಇನ್ನೊಂದು ಸಂಸ್ಕೃತ ಲಕಾರಕ್ಕೆ ಪ್ರತಿಯಾಗಿ ಬಳಸುವ 'ಳ' ಕಾರವೆಂದೂ ಹೇಳಬಹುದೇ ಹೊರತು. ಕುಳ ಮತ್ತು ಕ್ಷಳಗಳೆರಡೂ ಒಂದೇ ಎಂದು ಹೇಳುವಲ್ಲಿ ಕೇಶಿರಾಜನ ಮೂಲ ಅಭಿಪ್ರಾಯಕ್ಕೆ ನ್ಯೂನತೆಯುಂಟಾಗುತ್ತದೆ. ಭಟ್ಟಾಕಳಂಕನ ಕಾಲಕ್ಕೆ ಈ ಎರಡು ವರ್ಣಗಳ ಅಂತರವೇ ಅಳಿಸಿ ಹೋಗಿದ್ದುದರಿಂದ ಅವನು ಉಚ್ಚಾರಣಾದೃಷ್ಟಿಯಿಂದ ೞ, ಕುಳ, ಕ್ಷಳಗಳಿಗೆ ಅಭೇದವನ್ನು ಹೇಳಿರುವುದು ಸಮಂಜಸವಾಗಿದೆ. ಭಟ್ಟಾಕಳಂಕನು ಸ್ವರಗಳಲ್ಲಿ ಹ್ರಸ್ವ ಮತ್ತು ದೀರ್ಘಗಳೊಂದಿಗೆ ಪ್ಲುತವನ್ನೂ ಸೇರಿಸಿರುವುದು ಕುತೂಹಲ ಕಾರಿಯಾದುದೇ ಸರಿ. ಆದರೆ ಪ್ಲುತಕ್ಕೆ ಪ್ರತ್ಯೇಕವಾದ ವರ್ಣದ ಅಸ್ತಿತ್ವವಿಲ್ಲವೆಂದು ಗಮನಿಸಿದರೆ, ಈ ವಿಭಜನೆಯ ಔಚಿತ್ಯವೇನೆಂಬುದು ಅರ್ಥವಾಗುವುದಿಲ್ಲ. ಸಂಸ್ಕೃತ ವ್ಯಾಕರಣ ಪ್ರಿಯನಾದ ಭಟ್ಟಾಕಳಂಕನು ಅಲ್ಲಿನ ಸಾರಸ್ವತ ಮತ್ತು ಕಾತಂತ್ರ ವ್ಯಾಕರಣಗಳ ಮೇಲುಪಂಕ್ತಿಯನ್ನೇ ಅನುಸರಿಸಿ, ಕನ್ನಡದಲ್ಲಿಯೂ 64 ವರ್ಣಗಳಿವೆಯೆಂದು ಹೇಳಿರುವನೆಂಬುದರ ಕಡೆ ಗ್ರಂಥಕರ್ತರು

ನಮ್ಮ ಗಮನವನ್ನು ಸೆಳೆದಿರುವುದು ಶ್ಲಾಘನೀಯವಾದುದು. (ಪು. 124). ನಾಮಿ, ಸಂಧ್ಯಕ್ಷರ, ಬಿಂದು, ವಿಸರ್ಗ, ಮತ್ತು ಯೋಗವಾಹಗಳನ್ನು ಕುರಿತ ಟಿಪ್ಪಣಿಗಳು ಉಪಯುಕ್ತವಾಗಿವೆ. ಯ, ವ, ಲ-ಗಳನ್ನು ಕುರಿತ ನಾಗವರ್ಮನ ಹೇಳಿಕೆಯನ್ನು (ಜನೋಕ್ತಿಯಿಂದರೆವುದವಱ ವಿಷಯಾಂತರಮುಂ) ಗಮನಿಸಿದರೆ, ಅದು ಆಡು ನುಡಿಗೆ ಅನ್ವಯಿಸುವುದೆಂದು ವಿದಿತವಾಗುತ್ತದೆ. ಕೇಶಿರಾಜನಾದರೋ ಇದನ್ನು ಬಾಯಿಬಿಟ್ಟು ಹೇಳದಿದ್ದರೂ ಅವನು ಕೊಟ್ಟಿರುವ ಉದಾಹರಣೆಗಳ ಮೂಲಕ ಊಹಿಸಿಕೊಳ್ಳಬಹುದು. ಈ ಅಭಿಪ್ರಾಯ ಸೂಚನೆ "ಯವಲಾಸ್ತುನಾನುನಾಸಿಕ ನಿರನುನಾಸಿಕ ಭೇದಾತ್ದ್ವೇಧಾ" ಎಂಬ (ಗ್ರಂಥ ಕರ್ತರದಾಗಲೇ ಉದ್ಧೃತವಾಗಿದೆ ಪು. 124) ಸಂಸ್ಕೃತ ವೈಯ್ಯಾಕರಣರಿಂದಲೇ ಪ್ರೇರಣೆಯಾಗಿರಬಹುದೇ ಎಂಬ ಸಂದೇಹ ಬಾರದಿರದು. ವೈದಿಕ ಸಂಸ್ಕೃತದಲ್ಲಿ ಸಂಧಿ ಕಾರ್ಯಗಳಲ್ಲಿ ಈ ಲಕ್ಷಣ ಕಂಡು ಬರುವುದನ್ನು ಡಬ್ಲ್ಯು. ಎಸ್. ಅಲೆನ್ (W. S. Allen) ಅವರು ತೋರಿಸಿಕೊಟ್ಟಿರುತ್ತಾರೆ. ಗ್ರಂಥಕರ್ತರು ಸೂಚಿಸುವಂತೆ 'ಯ, ವ, ಲ' ಗಳನ್ನು ಅನುನಾಸಿಕಗಳೆಂದು ನಿರ್ದೇಶಿಸುವುದಕ್ಕಿಂತಲೂ ಅವು ಪರಿಸರಾನುಗುಣವಾಗಿ ಅನುನಾಸಿಕೋಚ್ಚಾರಣೆಯನ್ನು ತಳೆಯುವುವೆಂದು ಹೇಳುವುದೇ ಸಮರ್ಪಕ. ಈ ಪ್ರಕ್ರಿಯೆಯನ್ನು ಭಾಷಾವಿಜ್ಞಾನಿಗಳು ಅನುನಾಸಿಕೀಕರಣ (Nasalisation) ವೆಂದು ಕರೆದಿರುವುದು ಸಾಧುವಾದುದು. 'ಱ'ದ ಉಳಿವಿಗಾಗಿ ಕೇಶಿರಾಜ ಪಟ್ಟ ಶ್ರಮವನ್ನು ಯಾರಾದರೂ ಮೆಚ್ಚಬೇಕಾದುದೇ. ಪ್ರಾಸಂಗಿಕವಾಗಿ ಅವನ ಗಮನ ವ್ಯಾವಹಾರಿಕ ಭಾಷೆಯ ಕಡೆಗೂ ಹೇಗೆ ಹರಿಯುತ್ತಿತ್ತು ಎನ್ನುವುದಕ್ಕೆ ಲಾಂತಗಳುಳ್ಳ ಶಬ್ದಗಳನ್ನು ಳಾಂತಗಳಾಗಿ ಉಚ್ಚರಿಸಬಾರದೆನ್ನುವುದು ಒಂದು ಜ್ವಲಂತ ನಿದರ್ಶನ. ಕನ್ನಡದ ಇತರ ವೈಯ್ಯಾಕರಣರಾಗಲೀ, ಸಂಸ್ಕೃತ ವೈಯ್ಯಾಕರಣರಾಗಲೀ, ಪ್ರಸ್ತಾಪಿಸದ 'ಶಿಥಿಲ ದ್ವಿತ್ವ' ವನ್ನು ಕುರಿತಂತೆ ಕೇಶಿರಾಜನು ರಚಿಸಿರುವ ನಾಲ್ಕು ಸೂತ್ರಗಳೂ (ಸಂಧಿ ಪ್ರಕರಣಂ ಸೂ. 52–55) ಬಹಳ ಪ್ರಶಂಸನೀಯವಾದುವು. ಈ ಶಿಥಿಲದ್ವಿತ್ವಗಳು, ವಿದಿತವಾಗುವ ಶಬ್ದಗಳ ರಚನೆಯನ್ನು ನಿರೂಪಿಸಿರುವ ಕೇಶಿರಾಜನ ಪ್ರಜ್ಞೆಯನ್ನು ಮೆಚ್ಚಬೇಕಾದದು. ಇದು ಛಂದಸ್ಸಿಗೆ ಸಂಬಂಧಿಸಿದ ವಿಷಯವೂ ಹೌದು-ಐಚ್ಛಿಕ ಲಕ್ಷಣವನ್ನೂ ಉಳ್ಳದ್ದು. ಗ್ರಂಥಕರ್ತರು ಜನರ ಉಚ್ಚಾರಣೆಯಲ್ಲೇನಾದರೂ ಇದರ ಸೂಚನೆಯನ್ನು ಕಂಡು ಕೇಶಿರಾಜನು ಈ ಸೂತ್ರಗಳನ್ನು ಬರೆದಿರಬಹುದೆಂಬ ಊಹೆ ಮಾನ್ಯವಾದುದು. ಇದಲ್ಲದೆ ಈ ಶಬ್ದಗಳಲ್ಲಿ ಹಲವು ನಡುಗನ್ನಡವಾಗುವಲ್ಲಿ ಸಹಜವಾಗಿಯೇ ಸ್ವರಭಕ್ತಿಯ ಮೂಲಕ ವಿರಳವಾಗುವುದುಂಟು. (ಎಸಳ್ಗಳ್ > ಎಸಳುಗಳು, ಮುಗುಳ್ಗಳ್ > ಮುಗುಳುಗಳು, ಎಸಳ್ಗೆ > ಎಸಳಿಗೆ, ನುಸುಳ್ದಂ > ನುಸುಳಿದಂ, ಮುಗುಳ್ದಂ > ಮುಗುಳಿದಂ) ಹಳಗನ್ನಡ ಕಾವ್ಯಗಳಲ್ಲಿ ಇಂಥ ನಡು

ಗನ್ನಡದ ರೂಪಗಳು ನುಸುಳದಿರಲೆಂದು ಕೇಶಿರಾಜನ ಎಚ್ಚರಿಕೆಯೂ ಇರಬಹುದು! ನಾನು ವಿಚಾರಿಸಿ ನೋಡಿದಲ್ಲಿ ನಮ್ಮ ನೆರೆಯ ಭಾಷೆಗಳಾದ ತಮಿಳು, ತೆಲುಗುಗಳಲ್ಲಿಯೂ ಈ ತೆರನಾದ ವ್ಯಾಕರಣ ಪ್ರಕ್ರಿಯೆಯಿಲ್ಲವೆಂದು ತಿಳಿದು ಬರುತ್ತದೆ ಎಂದ ಬಳಿಕ ಇದು ಕೇಶಿರಾಜನ ಸ್ವತಂತ್ರ ಸೃಷ್ಟಿಗೆ ಪ್ರಮಾಣವಾದ ನಿದರ್ಶನ. ಇತರ ದ್ರಾವಿಡ ಭಾಷೆಗಳ ವೈಯಾಕರಣರು ಈ ಅಂಶವನ್ನು ಪ್ರಸ್ತಾಪಿಸಿಲ್ಲವೆಂದು ತಿಳಿದು ಬರುವಂತೆಯೇ ಈ ಶಿಥಿಲೋಚ್ಚಾರಣೆಯೂ ಕಂಡುಬರುವುದಿಲ್ಲವೆಂದು ಇತ್ಯರ್ಥವಾದರೆ, ಆಗ ಇದನ್ನು ಕೇಶಿರಾಜನು ಹೇಳಿರುವಂತೆ ಕನ್ನಡದ ವೈಶಿಷ್ಟ್ಯವೆಂದು ನಿಸ್ಸಂದೇಹವಾಗಿ ಒಪ್ಪಿಕೊಳ್ಳಬಹುದು.

ಸಂಧಿ ಪ್ರಕರಣವೆಂಬ ಅಧ್ಯಾಯದಲ್ಲಿ ನಾಲ್ಕು ವ್ಯಾಕರಣಗಳನ್ನು ತೌಲನಿಕವಾಗಿ ಪರಿಶೀಲಿಸುವಲ್ಲಿ ಗ್ರಂಥಕರ್ತರು ಕೇಶಿರಾಜನಲ್ಲಿ ಕಂಡು ಬರುವ ಅಧಿಕಾಂಶಗಳನ್ನು ಸೂಕ್ತವಾಗಿ ತೋರಿಸಿಕೊಟ್ಟಿರುತ್ತಾರೆ. ಉದಾ: "ನಾಮರೂಪಿಯಿಳಿಯುವ ಪಕ್ಷಕ್ಕೆ ಲೋಪವಾಗುತ್ತದೆ–ಎಂಬ ಅರ್ಥಕೊಡುವ ಕೇಶಿರಾಜನ ಸೂತ್ರ ವ್ಯಾಪಕವಾಗಿದೆ. (ಪು. 134)". ನಾಗವರ್ಮನು ಪ್ರಸ್ತಾಪಿಸಿದ ಸಂಧಿದೋಷವನ್ನು ತೋರಿಸಿಕೊಟ್ಟ ಕೇಶಿರಾಜನನ್ನು ಒಂದು ಕಡೆ ಕೊಂಡಾಡಿದರೆ, ಅದು ವ್ಯಾಕರಣ ವಿಷಯಕ್ಕಿಂತಲೂ ಕವಿತಾವಿಷಯವೆಂದು ವಿವರಿಸಿರುವ ಭಟ್ಟಾಕಲಂಕನ ಅಭಿಪ್ರಾಯವನ್ನು ಗ್ರಂಥಕರ್ತರು ಅನುಮೋದಿಸುತ್ತಾರೆ. ಪ್ರತಿ ಸಪ್ತ ಸಂಧಿಗಾಗಿ ಕೇಶಿರಾಜನು ಹೇಳಿರುವ ಉದಾಹರಣೆಗಳನ್ನು ಅನುಲಕ್ಷಿಸಿ. "ಇಲ್ಲಿ ಸಂಧಿ ಎಂಬ ಮಾತನ್ನು ಲೋಪ ಆಗಮ ಆದೇಶ ಎಂಬ ಅರ್ಥಗಳಲ್ಲಿ ಗ್ರಹಿಸದೆ, ಒಂದು ವಿಶೇಷಾರ್ಥದಲ್ಲಿ ಗ್ರಹಿಸಬೇಕು. ಪ್ರಸಕ್ತವಾದ ಪದಾಂತ ಮತ್ತು ಪದಾದಿ ವರ್ಣಗಳನ್ನು ಉಚ್ಚಾರಣ ಕಾಲದಲ್ಲಿ ವಿರಾಮ ರಹಿತವಾಗಿ ಕೂಡಿಸಿಕೊಂಡು ಹೇಳುವುದು ಎಂದು ತಿಳಿಯ ಬೇಕು" (ಪು. 138) ಎಂಬ ವಿವರಣೆ ಮಾನ್ಯವಾಗಿದೆ.

"ನಾಮ ಪ್ರಕರಣ" ಎಂಬ ಅಧ್ಯಾಯದಲ್ಲಿ, ಕನ್ನಡ ವೈಯಾಕರಣತ್ರಯರ ಸಮಾನಾಭಿಪ್ರಾಯಗಳನ್ನು ಸಮಾಲೋಚಿಸಿರುವುದಲ್ಲದೆ, ಅವರ ವಿಶ್ಲೇಷಣೆಗಳಲ್ಲಿ ವ್ಯಕ್ತವಾಗುವ ಭಿನ್ನಾಭಿಪ್ರಾಯಗಳನ್ನು ಪರಿಶೀಲಿಸಿದೆ. ಲಿಂಗ ಪ್ರಕಾರಗಳನ್ನು ವಿವರವಾಗಿ ತಿಳಿಸಿರುವ ಕೇಶಿರಾಜನ ಕೌಶಲವನ್ನು ಮೆಚ್ಚಿ ಗ್ರಂಥಕರ್ತರು "ಲಿಂಗವಿಧಾನದಲ್ಲಿ ಭಟ್ಟಾಕಳಂಕನು ಸ್ಥೂಲವಾಗಿ ಕೇಶಿರಾಜನನ್ನೇ ಅನುಸರಿಸಿ, ತನ್ನ ಸೂತ್ರವನ್ನು ಶಾಸ್ತ್ರದೃಷ್ಟಿಯಿಂದ ನಿರ್ದುಷ್ಟವಾಗಿ ಮಾಡಿಕೊಂಡಿದ್ದರೂ ಕೇಶಿರಾಜನ ಸೂಕ್ತಿಯಲ್ಲಿ ಕಂಡು ಬರುವ ಹಾಸು-ಬೀಸುಗಳು, ಸೂಕ್ಷ್ಮವಾದ ಪರಿಶೀಲನೆ, ಇವನಲ್ಲಿ ಕಂಡುಬರುವುದಿಲ್ಲ. ಕೇಶಿರಾಜನು ಪ್ರಯೋಗ ಪ್ರಪಂಚದ ಮೂಲೆ ಮುಡುಕುಗಳಲ್ಲಿ ಕಣ್ಣು ಹಾಯಿಸಿ, ಅಪೂರ್ವ ಪ್ರಯೋಗಗಳನ್ನು ಹೆಕ್ಕಿ-ತೆಗೆದು, ನಮ್ಮ ಮುಂದಿ

ಡುತ್ತಾನೆ" (ಪು. 140) ಎಂಬುದಾಗಿ ವ್ಯಕ್ತಪಡಿಸಿರುವ ಅಭಿಪ್ರಾಯ ಗಮನಾರ್ಹ ವಾದುದು. "ಕ್ರಿಯಾತ್ಮಕಗಳಾದ ಸಂಸ್ಕೃತದ ಭಾವವಚನಗಳಲ್ಲಿ ಕೆಲವಕ್ಕೆ ಇಸು ಪ್ರತ್ಯಯವನ್ನು ಹತ್ತಿಸಿ ಕೃಲ್ಲಿಂಗವನ್ನು ಮಾಡುವ ವಿಚಾರವು ನಾಗವರ್ಮನಲ್ಲಿ ಕಂಡು ಬರುವುದಿಲ್ಲ. ಭಟ್ಟಾಕಳಂಕನೂ ಈ ಬಗ್ಗೆಯ ಕೃಲ್ಲಿಂಗ ಸಾಧನೆಯನ್ನು ತಿಳಿಸಿಲ್ಲ. (ಪು. 140)" ಎಂಬ ಹೇಳಿಕೆಯೂ ಕೇಶಿರಾಜನ ಸ್ವತಂತ್ರ ವಿಚಾರದೃಷ್ಟಿಯ ಮೇಲೆ ಬೆಳಕು ಬೀರುತ್ತದೆ. ಸಮಸಂಸ್ಕೃತದ ಹೆಸರು ಮತ್ತು ಸ್ವರೂಪ ನಿಷ್ಕರ್ಷೆಯಲ್ಲಿ ಕೇಶಿರಾಜನು ಕವಿರಾಜಮಾರ್ಗಕಾರನಿಗೆ ಎಷ್ಟು ಋಣಿಯಾಗಿದ್ದಾನೆ ಎನ್ನುವ ಸಂಗತಿಯೂ ಸಂದರ್ಭೋಚಿತವಾದ ಒಳ್ಳೆಯ ಸೂಚನೆ. ಭಟ್ಟಾಕಳಂಕನು ಪಾಂಡಿತ್ಯಾತಿರೇಕದಿಂದ ಧಾತುಗಳನ್ನು ಲಿಂಗ ಸಂಜ್ಞೆಗೆ ಒಳಪಡಿಸಿ, ಕಡೆಗೆ ಅವು ಸುಬಂತಕ್ಕೇ ವಿಶೇಷವಾಗಿ ಅನ್ವಯಿಸುವುವೆಂಬ ಅವನ ತೀರ್ಮಾನವನ್ನು ಕುರಿತು "ಹೀಗೆ, ಕೊಂಕಣ ಸುತ್ತಿ ಮೈಲಾರಕ್ಕೆ ಬಂದಂತೆ, ಶಾಸ್ತ್ರ ಮರ್ಯಾದೆಗೋಸ್ಕರ ಲಿಂಗ ಸಂಜ್ಞೆಯ ಸಂಸ್ಕಾರದಲ್ಲಿ ಧಾತುವಿಗೂ ಮಣೆಹಾಕಿ, ಕೇಶಿರಾಜನ ನಿಲುವಿಗೆ ಬರುತ್ತಾನೆ". (ಪು. 143) ಎಂಬ ಅಭಿಪ್ರಾಯ ಸ್ವಾರಸ್ಯವಾಗಿದೆ. ಆದರೆ ಭಟ್ಟಾಕಳಂಕ ತತ್ಸಮ, ತದ್ಭವ ಮತ್ತು ದೇಶ್ಯಗಳನ್ನು ಕುರಿತು ಈಗ ನಮ್ಮಲ್ಲಿ ರೂಢಿಯಲ್ಲಿರುವ ಅಭಿಪ್ರಾಯವನ್ನು ವ್ಯಕ್ತಪಡಿಸಿರುವುದನ್ನು ಶ್ಲಾಘಿಸಿ, ಈ ವಿಭಜನೆಯನ್ನು ತಿಳಿಸಿರುವ ಪ್ರಾಚೀನ ವೈಯ್ಯಾಕರಣರಲ್ಲಿ ಅವನೇ ಮೊದಲಿಗನೆಂದು ಸ್ಪಷ್ಟಪಡಿಸಿರುವುದರ ಕಡೆಗೆ ನಮ್ಮ ಗಮನವನ್ನು ಸೆಳೆಯಲಾಗಿದೆ. ಕೇಶಿರಾಜನು ಅವ್ಯಯ ಲಿಂಗವನ್ನು ಸಾಧಿಸುವುದರಲ್ಲಿ ತೋರಿರುವ ವ್ಯಾಕರಣಾತಿರೇಕ ಮತ್ತು ಸಂಸ್ಕೃತ ಸೂತ್ರದ ವಿಪರೀತಾರ್ಥಗಳನ್ನು ವಿಶದಪಡಿಸಿ, "ಭಟ್ಟಾಕಳಂಕನು ಅವ್ಯಯಲಿಂಗ ವಿಚಾರವನ್ನು ಹೇಳದೆ ಬಿಟ್ಟಿರುವುದೇ ಸರಿಯೇನೋ ಎಂದು ತೋರುತ್ತದೆ" (ಪು. 146) ಎಂಬ ಗ್ರಂಥಕರ್ತರ ನಿಲುವು ಸೂಕ್ತವೆನ್ನಿಸುತ್ತದೆ.

"ವಿಭಕ್ತಿ ವ್ಯವಸ್ಥೆ"ಯನ್ನು ಕುರಿತ ಅಧ್ಯಾಯದಲ್ಲಿ ಗ್ರಂಥಕರ್ತರು ಒಂದೊಂದು ವಿಭಕ್ತಿಯ ಸ್ವರೂಪವನ್ನೂ ನಮ್ಮ ವೈಯ್ಯಾಕರಣರ ಅಭಿಪ್ರಾಯಗಳನ್ನು ಅವಲಂಬಿಸಿ ಅವಲೋಕಿಸಿರುವುದು ಸಾಕಷ್ಟು ಸಮಗ್ರವಾಗಿದೆ. ಈ ಪ್ರಕರಣದಲ್ಲಿ "ವಿಭಕ್ತಿ ಪಲ್ಲಟಕ್ಕೆ" ಸಂಬಂಧಿಸಿದಂತೆ ಹೇಳಿರುವ ಸಂಗತಿಗಳು ಈ ಮೊದಲು ಲೇಖಕರು ವ್ಯಕ್ತಪಡಿಸಿದ ಅಭಿಪ್ರಾಯಕ್ಕಿಂತ ಭಿನ್ನವಾಗಿ ಮನಸೆಳೆಯುವಾಗಿದೆ. ಈ ವಿಚಾರವನ್ನು ಮುಗಿಸುವಲ್ಲಿ "ಒಟ್ಟಿನ ಮೇಲೆ ಈ ವಿಭಕ್ತಿ ಪಲ್ಲಟ ಪ್ರಕ್ರಿಯೆ, ಕನ್ನಡಕ್ಕೆ ವಿಶಿಷ್ಟವಾದದ್ದು. ಇತರ ದ್ರಾವಿಡ ಭಾಷೆಗಳಲ್ಲಿಯೂ ಈ ಪ್ರಕ್ರಿಯೆ ಹೇಗೆ ವರ್ತಿಸುತ್ತದೆ ಎಂಬುದನ್ನು ಗಮನಿಸಿ, ಈ ವಿಷಯದಲ್ಲಿ ಹೆಚ್ಚಿನ ಪರಿಶೋಧನೆಗೆ ಅವಕಾಶವಿದೆಯೆಂದು ಇಲ್ಲಿ ಸೂಚಿಸಬಹುದು." (ಪು. 157) ಎಂದು ಸಲಹೆ ಮಾಡಿರುತ್ತಾರೆ.

ಈ ವಿಚಾರ ಕುತೂಹಲಕಾರಿಯಾದುದೇನೋ ಹೌದು. ಆದರೆ ಇದು ಕನ್ನಡಕ್ಕೆ ಮಾತ್ರವೇ ವಿಶಿಷ್ಟವಾದುದು ಎಂದು ಹೇಳುವಂತಿಲ್ಲ. ಏಕೆಂದರೆ ಈ ವಿಧವಾದ ವಿಭಕ್ತಿ "ವ್ಯತ್ಯಯ" ಋಗ್ವೇದದ, ಸಂಸ್ಕೃತದಲ್ಲಿ ಕಂಡುಬರುವುದೆಂದು ಗ್ರಾಂಥಿಕ ಸಂಸ್ಕೃತದ ಮೇಳಿಗೆ ಇದು ಕಡಿಮೆಯಾಗುತ್ತಾ ಬಂದಿತೆಂದೂ ಸಂಸ್ಕೃತದ ಗಣ್ಯ ವಿದ್ವಾಂಸರ ಮೂಲಕ ನಾನು ಕೇಳಿ ತಿಳಿದಿರುತ್ತೇನೆ. ಕನ್ನಡವನ್ನೇ ಗಮನಿಸಿದಲ್ಲಿ ವಿಶಿಷ್ಟವಾದ ಈ ವ್ಯಾಕರಣ ವೈಪರೀತ್ಯ. ಶಾಸನಗಳ ಕಾಲದಿಂದಲೂ ಕಂಡುಬರುವುದನ್ನು ಡಾ|| ಎ. ಎನ್. ನರಸಿಂಹಯ್ಯನವರೂ ಮತ್ತು ಡಾ|| ಜಿ. ಎಸ್. ಗಾಯಿಯವರೂ ತೋರಿಸಿಕೊಟ್ಟಿರುತ್ತಾರೆ.* ತೆಲುಗಿನ ಶಾಸನಗಳ ಅಧ್ಯಯನವನ್ನು ಮಾಡುವಲ್ಲಿ ಡಾ|| ಕೆ. ಮಹದೇವಶಾಸ್ತ್ರಿಗಳೂ ಈ ವಿಶಿಷ್ಟ ಲಕ್ಷಣದ ಕಡೆಗೆ ತಮ್ಮ ಗಮನವನ್ನು ಹರಿಸಿರುತ್ತಾರೆ.

ಈ ನಿಟ್ಟಿನಲ್ಲಿ ವಿಚಾರಮಾಡಿ ನೋಡಿದಲ್ಲಿ ಕವಿರಾಜಮಾರ್ಗಕಾರನ ದೃಷ್ಟಿ ಈ ಬಗ್ಗೆ ಎಷ್ಟೆಷ್ಟು ಕಟ್ಟುನಿಟ್ಟಾಗಿ ಕಂಡುಬರುವುದೋ ಉಳಿದ ವೈಯಾಕರಣರ ದೃಷ್ಟಿ ಅಷ್ಟಷ್ಟು ಉದಾರವಾಗಿ ತೋರಿಬರುತ್ತದೆ. ನಾಗವರ್ಮನ ಸೂಚನೆಯನ್ನು ಗ್ರಹಿಸಿ ಕೇಶಿರಾಜನು ಈ ಸಂಗತಿಯನ್ನು ತುಂಬ ವಿವರವಾಗಿಯೇ ವಿವೇಚಿಸಿರುವನು. ಅಷ್ಟೇ ಅಲ್ಲ: "ಇಂತು ನುಡಿವ ಜನ್ನಣದಿಂಕಾರಕಮನಿಯತಾರ್ಥಮೆಂದರಿವುದು" ಎಂಬ ಡಿ. ಎಲ್. ಎನ್. ಅವರ ಪರಿಷ್ಕೃತ ಪಾಠವನ್ನು ಪರಿಗಣಿಸಿದರೆ, ಅವನು ಇದಕ್ಕೆ ಕಾರಣವೇನು ಎನ್ನುವುದನ್ನು ಕುರಿತು ಆಲೋಚಿಸಿರುವಂತೆಯೂ ಸ್ಪಷ್ಟವಾಗುತ್ತದೆ. ಗ್ರಾಂಥಿಕ ಭಾಷೆಯ ಮೇಲೆ ವ್ಯಾವಹಾರಿಕ ಭಾಷೆ ಎಂಥ ಪ್ರಭಾವವನ್ನು ಬೀರಬಲ್ಲದೆನ್ನುವುದನ್ನು ವಿಚಾರ ಪರನಾದ ಕೇಶಿರಾಜ ಗಮನಿಸಿರುವುದು ತುಂಬ ಸ್ವಾರಸ್ಯವಾದದು. ಒಂದು ದೃಷ್ಟಿಯಿಂದ ಇದನ್ನು "ಭಾಷೆಯ ನುಡಿಗಟ್ಟು" ಎಂದರೂ ಸಲ್ಲುತ್ತದೆ. ಪ್ರಕೃತ ಗ್ರಂಥಕರ್ತರು ಇತರ ವಿಭಕ್ತಿ ಪಲ್ಲಟಗಳನ್ನೆಲ್ಲಾ ವೈಯಾಕರಣರ ಅಭಿಪ್ರಾಯದ ಮೇರೆಗೆ ಅಂಗೀಕರಿಸಿ "ದ್ವಿತೀಯೆಗೆ ಷಷ್ಠಿಯನ್ನು ಕೇಶಿರಾಜ ಭಟ್ಟಾಕಳಂಕರಿಬ್ಬರೂ ಹೇಳಿದ್ದಾರೆ." ....ಇಲ್ಲಿ ಇಬ್ಬರೂ ಎಡವಿದ್ದಾರೆ. ದ್ವಿತೀಯೆಯ ಪ್ರತ್ಯಯಂ 'ಅಂ' (ಅನ್) ಲೋಪವಾಗಿರುವುದನ್ನು ಗ್ರಹಿಸದೆ, ದ್ವಿತೀಯೆಗೆ ಷಷ್ಠಿ ಎಂದು ಹೇಳಿದ್ದಾರೆ. (ಪು. 156) ಎಂದು ಆಕ್ಷೇಪಿಸಿರುವರು. ಆದರೆ ಹಳಗನ್ನಡದ ಲಕ್ಷಣಕ್ಕೆ ಅನುಸಾರವಾಗಿ ನೋಡಿದ್ದೇ ಆದರೆ, ಇಲ್ಲಿ

---

*'The use of ca:es': A grammar of the Oldest Kanarese Inscriptions (1241): PP 157–163: by Dr. A. N. Narasimhia And Functional Syncretisms: Historical Grammar of Old Kannada (1946) p. 63: by Dr. G. S. Gai.

ವೈಯ್ಯಾಕರಣರ ಅಭಿಪ್ರಾಯವೇ ಸರಿ ಎಂದು ತೋರುತ್ತದೆ. "…. ಶಂಕಿಸಾಡಮಾರಿಯಲ್ಕಿನ್ನಾಂ ಮನಂ ಬರ್ಕುಮೆ" ಎಂಬ ಪಂಪನ ಪ್ರಯೋಗವನ್ನೂ ಕೇಶಿರಾಜನು ಉದಾಹರಿಸಿರುವುದನ್ನು ಮರೆಯುವಂತಿಲ್ಲ. ಗ್ರಂಥಕರ್ತರ ಅಭಿಪ್ರಾಯ ಹಳಗನ್ನಡ ನಡುಗನ್ನಡವಾಗಿ ಮಾರ್ಪಡುವ ಒಂದು ಸ್ಥಿತಿಯೆಂದು ಬೇಕಾದರೆ ಇಟ್ಟುಕೊಳ್ಳಬಹುದು. (ಈ ತೆರನಾದ ಪ್ರಯೋಗ ಇಂದಿಗೂ ದಕ್ಷಿಣ ಕನ್ನಡದವರ ಆಡುನುಡಿಯಲ್ಲಿಯೂ ಬರಹದಲ್ಲಿಯೂ ಕಂಡು ಬರುತ್ತದೆ. (ಉದಾ: ನ್ಯಾಯದರ್ಶನದ ಕುರಿತಾದ ಮೂಲಗ್ರಂಥವು ಮಹರ್ಷಿ ಗೌತಮರಿಂದ ಬರೆಯಲ್ಪಟ್ಟು, ಪ್ರಸಿದ್ಧವಾಗಿರುವ 'ನ್ಯಾಯಸೂತ್ರ' ವಾಗಿರುತ್ತದೆ. ಹಿಂದೂ ಧರ್ಮದ ಪರಿಚಯ (1971) ಪು. 91: ಲೇ: ಎಡುರ್ಕಳ ಕೆ. ಶಂಕರನಾರಾಯಣ ಭಟ್) ಈ ವಿಭಕ್ತಿ ಪಲ್ಲಟಕ್ರಿಯೆಯನ್ನು ಗ್ರಂಥಕರ್ತರು ಒಂದು ಪಟ್ಟಿಯ ರೂಪದಲ್ಲಿ ಕೊಟ್ಟಿದ್ದರೆ ವಿಷಯವನ್ನು ಗ್ರಹಿಸಲು ತುಂಬ ನೆರವಾಗುತ್ತಿತ್ತು. ತಮಿಳು, ಕನ್ನಡ, ತೆಲುಗು, ಮತ್ತು ಮಲೆಯಾಳ ಭಾಷೆಗಳಲ್ಲಿ ಕಂಡು ಬರುವ ಕೆಲವು ಉದಾಹರಣೆಗಳನ್ನು ಡಾ| ಪಿ. ಎಸ್. ಸುಬ್ರಹ್ಮಣ್ಯಶಾಸ್ತ್ರಿ ಅವರು ತಮ್ಮ "Comparative Grammar of the Tamil Language (1974)ಎಂಬ ಗ್ರಂಥದಲ್ಲಿ ಕೊಟ್ಟಿರುತ್ತಾರೆ. (vide: Functional Syncretism, P.P. 219-222) ಕನ್ನಡ ಶಾಸನಗಳು ಮತ್ತು ಕನ್ನಡ ವ್ಯಾಕರಣಗಳಲ್ಲಿ ಉಕ್ತವಾಗಿರುವ ಈ ಸಂಗತಿಗಳನ್ನು ಸಂಗ್ರಹಿಸಿ ನಾನು ಈಗಾಗಲೇ ಒಂದು ಪ್ರಬಂಧವನ್ನು ಪ್ರಕಟಿಸಿರುತ್ತೇನೆ.* ವಿಭಕ್ತಿ ಪಲ್ಲಟದ ಕ್ರಿಯೆಯನ್ನು ವಿಶ್ಲೇಷಿಸಿದರೆ ಪ್ರಧಾನ ವಿಭಕ್ತಿ ಪ್ರತ್ಯಯಗಳು ಯಾವುವು-ಎಂಬುದೂ ಕಾಲಕ್ರಮದಲ್ಲಿ ಅವುಗಳ ಸಂಖ್ಯೆ ಹೇಗೆ ಬೆಳೆದು ಬಂದಿರಬಹುದು ಎಂಬುದನ್ನೂ ಮನಗಾಣಬಹುದು. ನಾನು ಮಾಡಿರುವ ಪರಿಶೀಲನೆಗೆ ಅನುಗುಣವಾಗಿ, ಪ್ರಥಮಾ, ದ್ವಿತೀಯಾ, ತೃತೀಯಾ, ಚತುರ್ಥೀ ಮತ್ತು ಷಷ್ಠೀ ವಿಭಕ್ತಿಗಳು ಹೆಚ್ಚು ವ್ಯಾಪಕವಾಗಿರುವಂತೆ ವಿದಿತವಾಗುತ್ತದೆ. (ಕರ್ಣಾಟಕ ಶಬ್ದಾನುಶಾಸನ ಪ್ರಕಾಶಿಕೆಯಲ್ಲಿರುವ ಕನ್ನಡ ವ್ಯಾಖ್ಯಾನದಲ್ಲಿ "ವಸ್ತುತಃ ಈ ಭಾಷೆಯಲ್ಲಿ (ಕನ್ನಡದಲ್ಲಿ) ಪ್ರಥಮೆ, ದ್ವಿತೀಯೆ, ತೃತೀಯೆ, ಚತುರ್ಥಿ, ಷಷ್ಠಿ-ಎಂದು ಐದೇ ವಿಭಕ್ತಿಗಳಿಂದ ಸರ್ವವ್ಯಾಪಾರವೂ ಉಪಪನ್ನವಾಗುವುದು. (ಪು. 351)" ಎಂದು ವ್ಯಕ್ತಪಡಿಸಿರುವ ಅಭಿಪ್ರಾಯವೂ ನನ್ನ ನಿರ್ಣಯಕ್ಕೆ ಪೋಷಕವಾಗಿದೆ.) ಸಂಬೋಧನಾ ವಿಭಕ್ತಿಯಲ್ಲಿ ಅಕಾರಾಂತ ಶಬ್ದಗಳ ಪ್ರಥಮೈಕವಚನದ ಲೋಪವನ್ನು (ಎಂದರೆ ಅಲ್ಲಿ ಪ್ರಯೋಗವಾಗುವ ಬಿಂದುವನ್ನು) ಮೂವರು

---

*A note on Vibhaktipallata in Kannada: Proceedings of the First Conference on Dravidian Linguists–Trivandrum 1972, PP 262–270.

ವೈಯಾಕರಣರು ನಿರ್ದೇಶಿಸಿರುವುದರಿಂದ ಅವರು ಪ್ರಥಮಾವಿಭಕ್ತಿ ಪ್ರತ್ಯಯ ರಹಿತ ರೂಪವನ್ನು ಪ್ರಕೃತಿಯೆಂದು ಅಂಗೀಕರಿಸಿದಂತಾಯಿತೆಂಬ ಗ್ರಂಥಕರ್ತರ ಕಲ್ಪನೆ ಚರ್ಚಾಸ್ಪದವಾಗಿಯೇ ಉಳಿಯುತ್ತದೆ. ನೋಡಿ: "ಎಂದ ಮೇಲೆ ಅಣ್ಣನ್, ಅಕ್ಕನ್-ಇತ್ಯಾದಿಗಳು ಪ್ರಕೃತಿಗಳಲ್ಲವೆಂದಾಯಿತು. ಆದ್ದರಿಂದ 'ಅಕ್ಕ' ಮುಂತಾದ ಶಬ್ದಗಳನ್ನು ದ್ವಿತೀಯಾದಿ ವಿಭಕ್ತಿಗಳಲ್ಲಿ ನಡೆಸಿದಾಗ "ನ್" ಆಗಮವಾಗುತ್ತದೆ ಎಂದು ತಿಳಿಯುವುದು ಉಚಿತ ಎಂದು ತೋರುತ್ತದೆ." ಪು.158). ವಾಸ್ತವಿಕವಾಗಿ ಅಕಾರಾಂತ ಪ್ರಕೃತಿಗಳ ಸಂಬೋಧನಾ ವಿಭಕ್ತಿ ರೂಪದಲ್ಲಿ ಬಿಂದು (ನ್ ಅಥವಾ ನ್) ಬಾರದಿರುವುದನ್ನು ಗಮನಿಸಿಯೇ ಈ ಎರಡು ವಿಭಕ್ತಿ ಪ್ರಯೋಗಗಳ ಅಂತರವನ್ನು ವಿಶದಪಡಿಸಲು ನಮ್ಮ ವೈಯಾಕರಣರು ಅನಗತ್ಯವಾಗಿ ಪ್ರಥಮೈಕ ವಚನ ರೂಪದಲ್ಲಿ ಬಿಂದು ಬರುವುದೆಂದು ಹೇಳಿದರೆಂದು ತೋರುತ್ತದೆ. ಒಂದು ಪಕ್ಷ, ಅಕಾರಾಂತ ಶಬ್ದಗಳು ಸಹಜವಾಗಿಯೇ ಪ್ರಕೃತಿಗಳಾಗುತ್ತವೆಯೆಂಬ ಸ್ಪಷ್ಟ ಕಲ್ಪನೆ ಅವರಿಗೆ ಇದ್ದಿದ್ದರೆ, ಆಗ ಸಂಬೋಧನೆಯಲ್ಲಿ ಪ್ರಕೃತಿ ರೂಪವೇ ಪ್ರಯೋಗವಾಗುತ್ತದೆ ಎಂದೇ ಹೇಳಬಹುದಾಗಿತ್ತು. ("ವರ್ಣವಿಸರ್ಗಂ ಪ್ರಕೃತಿ ಸ್ವರೂಪದಿಂ ಪ್ರಥಮೈಕ ವಚನಂ ವಿಧಿಯೊಳ್"- ಎಂಬ ಕೇಶಿರಾಜನ ಹೇಳಿಕೆಯೇ ಇದಕ್ಕೆ ನಿದರ್ಶನ.)

ವಾಕ್ಯರಚನೆಯ ಸ್ವರೂಪವನ್ನು ಕುರಿತಂತೆ ಕೇಶಿರಾಜನು ಹೇಳಿರುವ ವಿಶೇಷ ಸಂಗತಿಗಳ ಕಡೆಗೂ ಕವಿರಾಜಮಾರ್ಗಕಾರನು ಪ್ರಸ್ತಾಪಿಸಿರುವ ನೇಯುವ ದೋಷಗಳನ್ನು ಮತ್ತಷ್ಟು ವಿವರಿಸಿರುವ ಕಡೆಗೂ ನಮ್ಮ ಗಮನವನ್ನು ಸೆಳೆದಿರುವುದು ಸೂಕ್ತವಾಗಿದೆ. "ಸರ್ವನಾಮಗಳು" ಎಂಬ ಅಧ್ಯಾಯದಲ್ಲಿ ಮೂವರೂ ವೈಯಾಕರಣರು ಹೇಳಿರುವ ಅಭಿಪ್ರಾಯಗಳನ್ನೆಲ್ಲಾ ಕ್ರೋಢೀಕರಿಸುವುದರೊಂದಿಗೆ, ನಾಗವರ್ಮ ಮತ್ತು ಕೇಶಿರಾಜರು ಉಲ್ಲೇಖಿಸದಿರುವ "ನಾನ್, ನಾವ್" ಎಂಬ ರೂಪಗಳನ್ನು ಭಟ್ಟಾಕಳಂಕನು ಸೂಚಿಸಿರುವುದನ್ನು ಪ್ರಸ್ತಾಪಿಸಿರುವುದು ಸ್ವಾಗತಾರ್ಹವಾದುದು. ಹೀಗೆಯೇ ಭಟ್ಟಾಕಳಂಕ "ಪನ್" ಎಂಬ ಪ್ರಕೃತಿಗೆ ಬದಲಾಗಿ 'ಪತು' ಎಂದು ಹೇಳಿರುವುದರ ಕಡೆಗೂ, ಇದಕ್ಕೂ ತೆಲುಗಿನ 'ಪದಿ' ಎಂಬ ರೂಪಕ್ಕೂ ಇರುವ ಹೋಲಿಕೆಯನ್ನು ಗಮನಿಸಿರುವುದು ಸ್ತುತ್ಯವಾದುದು. 'ಅಕ್ಷರ ಪರಿಣಾಮ' ಎಂಬ ಅಧ್ಯಾಯದಲ್ಲಿ 'ಪಮುಹವ ಭೇದ' ಎಂಬಲ್ಲಿ ಪ್ರಯೋಗವಾಗಿರುವ 'ಭೇದ' ಶಬ್ದದ ಅರ್ಥ ಪರಿವರ್ತನೆಯೆಂಬ ಅಭಿಪ್ರಾಯ ಗ್ರಾಹ್ಯವೆನಿಸುತ್ತದೆ.

"ಸಮಾಸ ಪ್ರಕರಣ" ಎಂಬ ಅಧ್ಯಾಯದಲ್ಲಿ ಕನ್ನಡ ವೈಯಾಕರಣರು ಸಮಾಸಗಳ ಸ್ವರೂಪವನ್ನು ಕುರಿತು ಹೇಳಿರುವ ಸಂಗತಿಗಳನ್ನೆಲ್ಲಾ ಗ್ರಂಥಕರ್ತರು ಬಹಳ ಅಚ್ಚುಕಟ್ಟಾಗಿ ಸಂಗ್ರಹಿಸಿಕೊಟ್ಟಿರುವುದಲ್ಲದೆ, ತಮ್ಮ ಅಭಿಪ್ರಾಯವನ್ನು ಪ್ರಾಸಂಗಿಕವಾಗಿ ವ್ಯಕ್ತಪಡಿಸಿರುತ್ತಾರೆ. ಈ ಸಂದರ್ಭದಲ್ಲಿ ಸಮಾಸ ಸೂತ್ರಗಳನ್ನು

ಕುರಿತಂತೆ ತಯಾರಿಸಿರುವ ಪಟ್ಟಿ ಉಪಯುಕ್ತವಾಗಿದೆ. ನಾಗವರ್ಮ ಮತ್ತು ಕೇಶಿರಾಜರಿಗಿಂತ ಭಟ್ಟಾಕಳಂಕನ ವಿವೇಚನೆ ಎಷ್ಟು ವಿಶಿಷ್ಟವಾದುದೆನ್ನುವ ಪರಿಶೀಲನೆ ಮನವೊಪ್ಪುವಂತಿದೆ. ಭಟ್ಟಾಕಳಂಕ ತನಗಿಂತ ಪೂರ್ವದ ವೈಯ್ಯಾಕರಣರ ಲಕ್ಷಣಗಳನ್ನು ಅಂಗೀಕರಿಸಿದರೂ, ಅವುಗಳ ಹೆಸರುಗಳನ್ನು ಹೇಳುವುದರಲ್ಲಿ ಮತ್ತಷ್ಟು ವಿಶದತೆಯ ಕಡೆಗೆ ಗಮನವಿತ್ತಿರುವುದು ವಿಶೇಷಾಂಶವೇಸರಿ. ಇದಲ್ಲದೆ, ಕೇಶಿರಾಜನು ಪ್ರಸ್ತಾವಿಸುವ ಗಮಕಸಮಾಸದ ಲಕ್ಷಣಗಳನ್ನು ಮಾತ್ರವೇ ಅಂಗೀಕರಿಸಿ, ಸಮಾಸದ ಹೆಸರನ್ನು ಮಾತ್ರ ಹೇಳದೆ ಇರುವುದನ್ನು ಕಂಡರೆ, ಈ ಬಗ್ಗೆ ಅವನು ತನ್ನದೇ ಆದ ಒಂದು ನಿಲುವನ್ನು ಅನುಸರಿಸಿರುವನು ಎನ್ನಬಹುದು. (ಈ ಸಂದರ್ಭವನ್ನು ಪ್ರಸ್ತಾವಿಸುವಲ್ಲಿ ಗ್ರಂಥಕರ್ತರು ನಾನು ಬರೆದ ಲೇಖನವೊಂದನ್ನು ಉಲ್ಲೇಖಿಸಿ, ಭಟ್ಟಾಕಳಂಕನು ಇದನ್ನು ಗಮನಿಸಿಲ್ಲವೆಂಬ ನನ್ನ ಅಭಿಪ್ರಾಯದಲ್ಲಿನ ಲೋಪವನ್ನು ತೋರಿಸಿ ಕೊಟ್ಟಿದ್ದಕ್ಕಾಗಿ ಅವರಿಗೆ ನಾನು ಕೃತಜ್ಞನಾಗಿದ್ದೇನೆ. ಆದರೆ ಭಟ್ಟಾಕಳಂಕ ಇದರ ಹೆಸರನ್ನು ಹೇಳಿಲ್ಲದಿರುವುದನ್ನು ಕಂಡರೆ ನನ್ನ ಹೇಳಿಕೆ ಅಂಶತಃ ಸರಿಯಾಗಿದೆಯೆಂದು ನನಗೆ ಅಲ್ಪ ಸಮಾಧಾನ.) ಕನ್ನಡದಲ್ಲಿ ಬಳಕೆಯಲ್ಲಿರುವ ಸಮಾಸಗಳು ಬಹುಮಟ್ಟಿಗೆ ಸಂಸ್ಕೃತದ ಮೇಲು ಪಂಕ್ತಿಯನ್ನೇ ಅನುಸರಿಸಿರುವುದರಿಂದ, ಅವುಗಳನ್ನು ಬಿಟ್ಟು, ಗಮಕ ಸಮಾಸವೊಂದನ್ನು ಕುರಿತು ವಿಸ್ತಾರವಾಗಿ ವಿಶ್ಲೇಷಿಸಿರುವುದು ಸಮಂಜಸವಾಗಿದೆ.

"ತದ್ಧಿತ ಪ್ರಕರಣ" ಮತ್ತು "ಅಪಭ್ರಂಶ (ತದ್ಭವ)" ಪ್ರಕರಣಗಳಲ್ಲಿ ಗ್ರಂಥಕರ್ತರು ಅಮೂಲ್ಯವಾದ ಕೆಲವು ಸೂಚನೆಗಳನ್ನು ನೀಡಿರುತ್ತಾರೆ. ತದ್ಧಿತ ಪ್ರತ್ಯಯಗಳಲ್ಲಿ ಯಾವುದು ದೇಶ್ಯ ಮತ್ತು ಯಾವುದು ಅನ್ಯದೇಶ್ಯ ಎಂಬುವುಗಳನ್ನು ಸಕಾರಣವಾಗಿ ವಿಶದ ಪಡಿಸಿರುತ್ತಾರೆ. ಈ ವಿಚಾರವನ್ನು ಪರಿಶೀಲಿಸುವಲ್ಲಿ ಇತರ ವಿದ್ವಾಂಸರ ಅಭಿಪ್ರಾಯಗಳನ್ನೆಲ್ಲ ಗಮನಿಸಿರುವ ಗ್ರಂಥಕರ್ತರು, ಡಿ.ಎಲ್. ನರಸಿಂಹಾಚಾರ್ಯರು ಬರೆದಿರುವ "ಕನ್ನಡ ಶಬ್ದರಚನೆ" ಎಂಬ ಲೇಖನದಲ್ಲಿ ಅಡಕವಾಗಿರುವ ಪ್ರಕೃತ ವಿಚಾರವನ್ನು ಗಮನಿಸದಿರುವುದು ಸೋಜಿಗವೇ ಸರಿ. ["ಕನ್ನಡ ಶಬ್ದರಚನೆ" ಪು. 767-829 : ಪೀಠಿಕೆಗಳು. ಲೇಖನಗಳು (1971)]. "ಅಪಭ್ರಂಶ ಪ್ರಕರಣದ ವಿಭಾಗದಲ್ಲಿ "ತದ್ಭವ ರೂಪಗಳನ್ನು ವಿವರಿಸುವಲ್ಲಿ ಕೇಶಿರಾಜನು ಪ್ರಾಕೃತ ವ್ಯಾಕರಣ ಸೂತ್ರಗಳನ್ನು ಗಮನಿಸಿದ್ದಾನೆ." (194) ಎಂದು ಹೇಳಿ, ಮುಂದಿನ ವಾಕ್ಯವೃಂದ (Paragraph) ದ ಮೊತ್ತಮೊದಲ ವಾಕ್ಯದಲ್ಲಿಯೇ "ಕೇಶಿರಾಜನು ಎಲ್ಲ ತದ್ಭವ ನಿಯಮಗಳನ್ನೂ ಪ್ರಾಕೃತ ಶಿಕ್ಷಾಸೂತ್ರಗಳನ್ನು ಅನುಸರಿಸಿ, ಇಲ್ಲವೆ ದೃಷ್ಟಿಯಲ್ಲಿಟ್ಟುಕೊಂಡು ರೂಪಿಸಿದ್ದಾನೆ ಎನ್ನುವಂತಿಲ್ಲ" (ಪು. 195) ಎಂದು ತಿಳಿಸಿರುವುದು ಪರಸ್ಪರ ವ್ಯತಿರಿಕ್ತವಾದ ಅಭಿಪ್ರಾಯಕ್ಕೆ ಎಡೆಕೊಡುವಂತಿದೆ. ಅಲ್ಲದೆ ಮೊದಲನೆಯ ಹೇಳಿಕೆಗೆ ನೀಡಿರುವ ಸಮರ್ಥನೆಯೂ ಸಾಲದು ಎನ್ನಿಸುತ್ತದೆ.

"ಆಖ್ಯಾತ ಪ್ರಕರಣ"ದಲ್ಲಿ ಗ್ರಂಥಕರ್ತೃಗಳು ಅನೇಕ ಸಂಗತಿಗಳನ್ನು ಅದನ್ನು ಅಡಕವಾಗಿ, ಹೇಳಲು ಹೊರಟಿರುವುದರಿಂದ, ಕ್ರಿಯಾಪದದ ಸ್ಪಷ್ಟ ಕಲ್ಪನೆಯಾಗುವುದು ಸ್ವಲ್ಪ ಕ್ಲೇಶವೆನ್ನಿಸುತ್ತದೆ. ಕೇಶಿರಾಜನು ಧಾತು ಸ್ವರೂಪವನ್ನು ತಿಳಿಯಿಸಲು ಹೇಳುವ ಸೂತ್ರದ ಬಗೆಗಾದರೆಯನ್ನು ಆಗ್ರಹಿಸಿರುವುದೇನೋ ಒಪ್ಪತಕ್ಕದ್ದೇ. "ಅದರಿಂದ ಈ ಸೂತ್ರ ಸ್ವಯಂ ಪೂರ್ಣವಾಗಿದೆ ಎನ್ನುವುದು ಕಷ್ಟ ಎನ್ನಬೇಕಾಗುತ್ತದೆ" ಎಂದು ಟೀಕಿಸಿ, "ಕೇಶಿರಾಜನ ಅನೇಕ ಸೂತ್ರಗಳು ಹೀಗೆಯೇ" (ಪು. 203) ಎಂದು ಸಾರ್ವತ್ರಿಕವಾಗಿ ಹೇಳಿರುವ ವಾಕ್ಯ ಕಟುವೆನ್ನಿಸುತ್ತದೆ. "ಆಖ್ಯಾತ ಪ್ರಕರಣ"ದಲ್ಲಿ ಹೇಳಿರುವ ಸಂಗತಿಗಳನ್ನು ಆಯಾ ಕ್ರಿಯಾಪದದ ಸ್ವರೂಪಕ್ಕೆ ಅನುಗುಣವಾಗಿ (ಎಂದರೆ ಸಾಮಾನ್ಯಾರ್ಥಕ ಕ್ರಿಯಾಪದ, ವಿಧ್ಯರ್ಥಕ ಕ್ರಿಯಾಪದ, ನಿಷೇಧಾರ್ಥಕ ಕ್ರಿಯಾಪದ ಮತ್ತು ಪ್ರೇರಣಾರ್ಥಕ ಕ್ರಿಯಾಪದ ಎಂಬ ಉಪವಿಭಾಗಗಳಲ್ಲಿ) ವಿಂಗಡಿಸಿ, ವಿಶ್ಲೇಷಿಸಿದ್ದರೆ ಈ ಬಗ್ಗೆ ನಮ್ಮ ವೈಯಾಕರಣರ ಅಭಿಪ್ರಾಯಗಳ ಸಾಮ್ಯವೈಷಮ್ಯಗಳನ್ನು ಸ್ಪಷ್ಟವಾಗಿ ಗ್ರಹಿಸಬಹುದಾಗಿತ್ತು. ಆಖ್ಯಾತ ಪ್ರಕರಣದಲ್ಲಿ ಕುಂ ಗುಂ ಪ್ರತ್ಯಯಗಳ ಪ್ರಯೋಗಗಳನ್ನು ಕುರಿತ ಸೂತ್ರದ (ಸೂ. 240) ವಿವರಣೆಯನ್ನು ಮತ್ತಷ್ಟು ವಿವರ ಪಡಿಸಬಹುದಾಗಿತ್ತು. ಈ ಪ್ರತ್ಯಯಗಳು ಧಾತುಗಳಿಗೆ ಸೇರುವಲ್ಲಿ ಲಿಂಗತ್ರಯ, ವಚನದ್ವಯ ಮತ್ತು ಕಾಲತ್ರಯಗಳಲ್ಲಿ ಹೇಗೆ ವರ್ತಿಸುತ್ತವೆ ಎನ್ನುವುದು ಭಾಷಾಶಾಸ್ತ್ರದ ದೃಷ್ಟಿಯಿಂದಲೂ ಗಮನಾರ್ಹವಾದುದು. ಈ ಬಗ್ಗೆ ಎಂ. ಮರಿಯಪ್ಪಭಟ್ಟರು ನೀಡಿರುವ ಕೆಲವು ಸೂಚನೆಗಳು ಪರಿಶೀಲನಾರ್ಹವಾಗಿವೆ. (ನೋಡಿ: ಪ್ರಾಚೀನ ಹಳಗನ್ನಡದಲ್ಲಿ ಲಿಂಗವ್ಯವಸ್ಥೆ : ಕನ್ನಡ ಸಂಸ್ಕೃತಿ ಮತ್ತು ಇತರ ಲೇಖನಗಳು (1967) ಪುಟ: 313–317). ಕ್ರಿಯಾಪದದ ರಚನೆಯಲ್ಲಿ ಪುರುಷವಾಚಕ ಪ್ರತ್ಯಯಗಳು ಪಾತ್ರವಹಿಸುವುದಕ್ಕೆ ಪೂರ್ವದಲ್ಲಿ ಅದು ಹೇಗಿದ್ದಿರಬಹುದೆಂಬುದರ ಸೂಚನೆ ಈ ರೂಪುಗಳೆಂಬ ಸಂಗತಿ ನೋಡಿದಾಗ ಮಲೆಯಾಳ ಭಾಷೆಯಲ್ಲಿನ ಕ್ರಿಯಾಪದದ ಸ್ವರೂಪದೊಂದಿಗೆ ಇದರ ಹೋಲಿಕೆಯಿರುವುದು ಮತ್ತೊಂದು ಮಹತ್ವದ ಸಂಗತಿ. "ಸತಿ ಸಪ್ತಮಿ" ಎಂಬ ಸಂಸ್ಕೃತ ಪಾರಿಭಾಷಿಕ ಶಬ್ದವನ್ನು ಕೇಶಿರಾಜನು ಸ್ವೀಕರಿಸಿದರೂ, ಕನ್ನಡ ಭಾಷೆಗೆ ಅನ್ವಯಿಸುವಂತೆ ಅದರ ನಿಯಮವನ್ನು ಹೇಗೆ ನಿರ್ವಹಿಸಿಕೊಂಡಿರುವನೆಂಬುದನ್ನು ಸಾಕಷ್ಟು ವಿವರವಾಗಿಯೇ ಪರಿಶೀಲಿಸಿದೆ. ಕೇಶಿರಾಜ. ಸತಿ ಸಪ್ತಮಿಗೆ ಪರ್ಯಾಯವಾಗಿ 'ಅಸ್ತ್ಯರ್ಥ' ಎಂಬ ಶಬ್ದವನ್ನು ಬಳಸಿರುವುದುಂಟು. (ಸೂ. 257) ಅದನ್ನೇ ಅವರು ಮೂಲದಲ್ಲಿ ಅಂಗೀಕರಿಸಿದ್ದರೆ, ಈಗ ಆಗಬಹುದಾದ ಭ್ರಮೆಗೆ ಅವಕಾಶವಿರುತ್ತಿರಲಿಲ್ಲವೇನೋ! ಕರ್ಮಣಿ ಪ್ರಯೋಗವನ್ನು ಕುರಿತಂತೆ "ಪ್ರಾಚೀನರು ಸಂಸ್ಕೃತದ ಮಾದರಿಯನ್ನನುಸರಿಸಿ ಕರ್ಮಣಿ ಪ್ರಯೋಗ ಮಾಡಿದ್ದಾರೆ. ಹೊಸಗನ್ನಡದಲ್ಲಿ ಇಂಗ್ಲಿಷ್ ಭಾಷೆಯ Passive Voice

ನ ಪ್ರಾಚುರ್ಯದ ಪ್ರಭಾವದಿಂದ ಈ ಪ್ರಯೋಗ ಬೇರೂರಿರುವಂತೆ ಕಾಣುತ್ತದೆ. ಹೀಗಿರುವುದರಿಂದ ಕನ್ನಡದಲ್ಲಿ ಕರ್ಮಣಿಪ್ರಯೋಗ ಅಸಹಜ ಎನ್ನಬಹುದೇ ಹೊರತು ಅಸಾಧು ಎನ್ನಲಾಗದು" (ಪು. 211) ಎಂಬ ಗ್ರಂಥಕರ್ತರ ಅಭಿಪ್ರಾಯ ಸಾಧುವಾಗಿದೆ.

ಸಂಸ್ಕೃತದ ಮೇಲು ಪಂಕ್ತಿಯನ್ನೇ ಅನುಸರಿಸಿ ಕನ್ನಡಕ್ಕೆ 'ಧಾತು ಪ್ರಕರಣ' ವೊಂದನ್ನು ಸಿದ್ಧಪಡಿಸಿಕೊಟ್ಟ ಕೇಶಿರಾಜನನ್ನು ಎಷ್ಟು ಅಭಿನಂದಿಸಿದರೂ ಸಾಲದು. ಇದೇ ಮಾತು ಅವನು ಅಣಿಮಾಡಿರುವ 'ಪ್ರಯೋಗಸಾರಕ್ಕೂ' ಅನ್ವಯಿಸುತ್ತದೆ. ಗ್ರಂಥಕರ್ತರು ಅಭಿಪ್ರಾಯಪಟ್ಟಿರುವಂತೆ ಇದು ವ್ಯಾಕರಣದ ಚೌಕಟ್ಟಿಗೆ ಅಳವಡದಿದ್ದರೂ ಹಳಗನ್ನಡ ಭಾಷೆಯ ಅಧ್ಯಯನಕ್ಕೆ ನೆರವಾಗುವುದರಿಂದ ಕೇಶಿರಾಜನ ಸ್ವತಂತ್ರ ಪ್ರಜ್ಞೆಯನ್ನು ಮೆಚ್ಚುವಂತಹುದು.

"ಅವ್ಯಯಗಳು" ಎಂಬ ವಿಭಾಗದಲ್ಲಿ ಮೂವರು ವೈಯಾಕರಣರ ನಿಲುವನ್ನು ಪರಿಚಯ ಮಾಡಿಕೊಟ್ಟು, ಕೇಶಿರಾಜನು ಅಗಳ್, ಈಗಳ್ ಮೊದಲಾದ ಕಾಲಸೂಚಕ ಅವ್ಯಯಗಳು ಹೇಗೆ ಲಿಂಗಗಳಂತೆ ವರ್ತಿಸುತ್ತವೆ ಎಂದು ಹೇಳಿರುವುದರ ಕಡೆ ನಮ್ಮ ಗಮನವನ್ನು ಸೆಳೆದಿರುತ್ತಾರೆ.

"ಶಬ್ದಮಣಿದರ್ಪಣ"ದ ಸಮಾಪ್ತಿ ವಾಕ್ಯಗಳಲ್ಲಿ ಉಕ್ತವಾಗಿರುವ ಕನ್ನಡದ ಅಸಾಧಾರಣ ಲಕ್ಷಣಗಳನ್ನು ಪ್ರಸ್ತಾಪಿಸುವಲ್ಲಿ, ಇಲ್ಲಿ ಕೇಶಿರಾಜನು ಕನ್ನಡ, ಸಂಸ್ಕೃತದಿಂದ ಹೇಗೆ ಭಿನ್ನವಾಗಿದೆ ಎನ್ನುವುದನ್ನು ಉದ್ದೇಶಿಸಿರುವನೆಂಬ ಸೂಚನೆಯೇ ಸಮಂಜಸವಾದುದು. ತನ್ನ ಗ್ರಂಥದ ಉದ್ದಕ್ಕೂ ಅವಕಾಶ ಒದಗಿದಾಗಲೆಲ್ಲಾ, ಕನ್ನಡ ಸಂಸ್ಕೃತಗಳ ಅಂತರವನ್ನು ಪರಿಶೀಲಿಸಿರುವನೇ ವಿನಾ ಇತರ ದ್ರಾವಿಡ ಭಾಷೆಗಳಬಗ್ಗೆ ಅವನು ಏನೂ ಹೇಳಿಲ್ಲ. ಮದರಾಸಿನ ವಿಶ್ವವಿದ್ಯಾಲಯದವರು ಪ್ರಕಟಿಸಿರುವ ಲಿಂಗಣಾರಾಧ್ಯ ವೃತ್ತಿಯುಕ್ತವಾದ 'ಶಬ್ದಮಣಿದರ್ಪಣ'ದ ಸಂಪಾದಕರು, ತಮ್ಮ ವಿಸ್ತೃತವಾದ ಅವತರಣಿಕೆಯಲ್ಲಿ ಈ ಲಕ್ಷಣಗಳ ದೃಷ್ಟಿಯಿಂದ ಕನ್ನಡವು ಇತರ ದ್ರಾವಿಡ ಭಾಷೆಗಳಿಂದ ಹೇಗೆ ಭಿನ್ನವಾಗಿದೆ ಎಂದು ತೋರಿಸಿಕೊಡಲು ಮಾಡಿರುವ ಪ್ರಯತ್ನ ಪ್ರಶಂಸನೀಯವೇ ಹೊರತು, ಅದು ಕೇಶಿರಾಜನ ಇಂಗಿತವೆಂದು ಒಪ್ಪಿಕೊಳ್ಳಲು ಗ್ರಂಥಸ್ಥವಾಗಿ ಯಾವ ಪ್ರಮಾಣವೂ ದೊರಕುವುದಿಲ್ಲ. ಈ ವೃತ್ತಿ ಕೇಶಿರಾಜ ಕೃತವೆಂದು ನಿರ್ಧಾರವಾಗಿ ಹೇಳಬರುವಂತಿಲ್ಲವೆಂಬ ಆ ಪರಿಷ್ಕರಣದ ಸಂಪಾದಕರ ಅಭಿಪ್ರಾಯ ಹಸ್ತಪ್ರತಿಗಳ ಆಧಾರದಿಂದ ಇತ್ಯರ್ಥವಾಗುವವರೆಗೆ ಅದನ್ನು ಅಂಗೀಕರಿಸುವುದರಲ್ಲಿ ಯಾವ ಬಾಧಕವೂ ಇಲ್ಲ.

ಎಂ. ವಿ. ಸೀತಾರಾಮಯ್ಯನವರು ಬರೆದಿರುವ 'ಪ್ರಾಚೀನ ಕನ್ನಡ ವ್ಯಾಕರಣಗಳು' ಎಂಬ ಪುಸ್ತಕವನ್ನು ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿಯವರು 1979

ನೆಯ ವರ್ಷದಲ್ಲಿ ರಚಿತವಾದ ಉತ್ತಮವಾದ ಶಾಸ್ತ್ರಗ್ರಂಥವೆಂದು ಪರಿಗಣಿಸಿ. ಅದಕ್ಕೆ ವಿಶೇಷ ಬಹುಮಾನವನ್ನಿತ್ತು ಪುರಸ್ಕರಿಸಿರುವುದು ಅಭಿನಂದನಾರ್ಹವಾದುದು. ಕನ್ನಡ ವ್ಯಾಕರಣಗಳನ್ನು ಕುರಿತಂತೆ ಈ ತೆರನಾದ ತೌಲನಿಕ ವ್ಯಾಸಂಗ ಕ್ರಮವನ್ನು ಒಳಗೊಂಡ ಕೃತಿಯೊಂದು ಅತ್ಯಗತ್ಯವಾಗಿತ್ತು. ಪ್ರಕೃತ ಗ್ರಂಥದಲ್ಲಿ ನೀಡಿರುವ ಅನುಬಂಧಗಳೂ ಸಹ ಇಂತಹ ವಿದ್ವತ್ಪೂರ್ಣವಾದ ಗ್ರಂಥಕ್ಕೆ ಅನುಗುಣವಾಗಿವೆ. ಕನ್ನಡ ವ್ಯಾಕರಣಗಳ ಅಧ್ಯಯನಕ್ಕೆ ಈ ಕೃತಿ ಒಂದು ಪ್ರಮಾಣ ಗ್ರಂಥವಾಗಿದೆಯೆಂದು ಹೇಳುವುದರಲ್ಲಿ ಯಾವ ಸಂದೇಹವೂ ಇಲ್ಲ.

ಈ ವರೆಗೆ ಸಮೀಕ್ಷಿಸಿರುವ ಎಂ. ವಿ. ಸೀ. ಅವರ ಲೇಖನಗಳು ಮತ್ತು ಪುಸ್ತಕಗಳನ್ನು ಗಮನಿಸಿದರೆ ಶ್ರೀಯುತರು ಈ ಶಾಸ್ತ್ರಕ್ಷೇತ್ರದಲ್ಲಿ ಎಷ್ಟು ಶ್ರದ್ಧೆಯಿಂದ ಕೆಲಸ ಮಾಡಿರುವರೆಂಬುದು ವ್ಯಕ್ತವಾಗುತ್ತದೆ. ಶಾಸ್ತ್ರವಿಚಾರಗಳನ್ನು ಕುರಿತು ಲೇಖನವನ್ನೇ ಆಗಲೀ ಗ್ರಂಥವನ್ನೇ ಆಗಲೀ ಬರೆಯ ತೊಡಗುವವರು, ಈ ಮೊದಲು ಆ ವಿಷಯಕ್ಕೆ ಸಂಬಂಧಿಸಿದಂತೆ ಏನು ಕೆಲಸ ನಡೆದಿದೆಯೆನ್ನುವುದನ್ನೆಲ್ಲ ಅವಲೋಕಿಸಬೇಕಾಗುತ್ತದೆ. ವಿದ್ವಾಂಸರಲ್ಲಿ ಭಿನ್ನ ಅಭಿಪ್ರಾಯಗಳಿರುವುದು ಸಹಜ. ಆ ಭಿನ್ನಾಭಿಪ್ರಾಯಗಳನ್ನು ಪರಿಶೀಲಿಸುವಲ್ಲಿ ಲೇಖಕನಲ್ಲಿ ಎಷ್ಟು ಸೌಜನ್ಯವಿದ್ದರೂ ಸಾಲದು. ಯಾವ ಸಂಗತಿಯನ್ನೇ ಆಗಲಿ, ವಸ್ತುನಿಷ್ಠ ದೃಷ್ಟಿಯಿಂದ ವಿಶ್ಲೇಷಿಸಬೇಕಾಗುತ್ತದೆ. ಸಂಶೋಧಕನಿಗೆ ಅತ್ಯಗತ್ಯವಾದ ವಿಷಯ ಪರಿಶ್ರಮ, ಕಾರ್ಯಶ್ರದ್ಧೆ, ಸತ್ಯ ನಿಷ್ಠೆ, ಸ್ಪಷ್ಟ ಶೈಲಿಗಳು ಒಂದು ದೊಡ್ಡ ಸಾಧನೆಯೇ ಸರಿ. ಎಂ.ವಿ.ಸೀ. ಅವರ ಬರಹಗಳಲ್ಲಿ ಈ ಎಲ್ಲ ಗುಣಗಳೂ ಸಹಜವಾಗಿಯೇ ತೋರಿಬರುತ್ತವೆ. ಅವರ ಮನಸ್ಸು ಸದಾ ಜಾಗೃತವಾಗಿರುತ್ತದೆ. ಹೊಸ ವಿಚಾರ, ವಿಮರ್ಶೆಗಳನ್ನು ಅವರು ತೆರದ ಹೃದಯದಿಂದ ಸ್ವಾಗತಿಸುವರು. ಅವರು ಎತ್ತುವ ಆಕ್ಷೇಪಣೆಗಳು ಆದರಪೂರ್ವಕವಾದುವು. ಅವರು ನೀಡುವ ಸಮಾಧಾನಗಳು ಪರಿಶ್ರಮ ಪೂರ್ವಕವಾದುವು. ಅವರು ನಮ್ಮ ಮುಂದೆ ಇಡುವ ಪ್ರಶ್ನೆಗಳು ವಿಚಾರ ಪ್ರಚೋದಕವಾದುವು.

ಎಂ.ವಿ.ಸೀ. ಅವರ ಒಂದು ವಿಶಿಷ್ಟಕೃತಿ

ಕೊರಟಿ ಶ್ರೀನಿವಾಸರಾವ್

೧

ಶ್ರೀ ಎಂ.ವಿ. ಸೀತಾರಾಮಯ್ಯನವರ "ಹಿಡಿಹೂವು" ಒಂದು ವೈಶಿಷ್ಟ್ಯಪೂರ್ಣವಾದ ಕೃತಿ. ಇದು ಕನ್ನಡದ ಕಣ್ವರೆಂದು ಪ್ರಖ್ಯಾತರಾಗಿದ್ದ ಆಚಾರ್ಯ ಬಿ. ಎಂ. ಶ್ರೀ ಅವರಿಗೆ ಅರ್ಪಿತವಾದ ಲೇಖಕರ ನೆನಪಿನ ಕಿರುಕಾಣಿಕೆ.

"ಕನ್ನಡದ ಆಚಾರ್ಯಪುರುಷರಾದ ದಿವಂಗತ "ಶ್ರೀ" ಯವರಿಗೆ ನಾನು ಮಾತ್ರವೇನು, ಕನ್ನಡಲೋಕವೇ ಚಿರಋಣಿಯಾಗಿದೆ. ನಾವು ಸ್ಮಾರಕಗಳನ್ನು ಮಾಡಲಿ ಬಿಡಲಿ, ಅವರ ಹೆಸರು ಚಿರಕಾಲ ನಿಲ್ಲತಕ್ಕದ್ದು. ಆದರೂ ಹಿರಿಯರ ಹೆಸರಿನಲ್ಲಿ ಯಾವುದಾದರೂ ಒಳ್ಳೆಯ ಕಾರ್ಯಮಾಡುವುದು ಸಂಪ್ರದಾಯ. ಆದ್ದರಿಂದ ನನ್ನ ಗುರುವರೇಣ್ಯರಾಗಿದ್ದ, ನಾಡಿನ ಹಿರಿಯರು ದಿವಂಗತ ಶ್ರೀಯವರ ನೆನಪಿಗಾಗಿ ಅದರಲ್ಲೂ ನನಗಿರುವ ಭಕ್ತಿಯ ಕಿರುಕುರುಹಾಗಿ ಈ ಸಂಕಲನ 'ಹಿಡಿಹೂವು' ಅರ್ಪಿತವಾಗಿದೆ" ಎಂಬುದಾಗಿ ಲೇಖಕರು ತಮ್ಮ ಬಿನ್ನಹದಲ್ಲಿ ನುಡಿದಿದ್ದಾರೆ.

೨

ಈ ಸಂಕಲನದಲ್ಲಿ ಕಂಬನಿಕಾಣಿಕೆ, ಶ್ರೀಯವರ ಜೀವನ ಪರಿಚಯ, ಕನ್ನಡಮ್ಮನ ಕೊರಗು, ಕವಿಯಬಾಳು, ವಜ್ರದೇಹಿ, ನಾಯಿಗಳಿವೆ ಎಚ್ಚರಿಕೆ, ಹೂದೋಟದಲ್ಲಿ, ಕಿರುಹಕ್ಕಿಯ ಹಾಡು, ಸಂಗ್ರಾಮ–ಹೀಗೆ ಒಂಭತ್ತು ಲೇಖನಗಳಿವೆ. ಇವುಗಳಲ್ಲಿ ಕಂಬನಿಕಾಣಿಕೆಯು 'ಶ್ರೀ' ಅವರಿಗೆ ಕವಿ ಅರ್ಪಿಸಿದ ಶ್ರದ್ಧಾಂಜಲಿ: ಅಶ್ರುಕಾಣಿಕೆ.

ಕನ್ನಡಮ್ಮನ ಕೊರಗು ಎಂಬ ಶೀರ್ಷಿಕೆಯ ಅಡಿಯಲ್ಲಿ ನಾಡತಾಯಿಯು ಬಿಟ್ಟ ಹನ್ನೆರಡು ಉಸಿರು–ನಿಟ್ಟುಸಿರಿನ ನುಡಿ ಚಿತ್ರಗಳು ಇವೆ. ಕವಿಯ ಬಾಳು ಎಂಬಲ್ಲಿ ಕವಿಯೊಬ್ಬನ ಯಾತನೆಯ ಹಳು ಹೀಳುನೋಟಗಳೂ, ಸನ್ಮಿತ್ರನ ದುರಂತ ಮರಣವನ್ನು ಕುರಿತ–'ವಜ್ರದೇಹಿ' ಕಹಿನೆನಪಿನ ಚಿತ್ರಣವೂ, ನಾಯಿಗಳಿವೆ ಎಚ್ಚರಿಕೆ ಎಂಬ ವಿಡಂಬನೆಯೂ, ಹೂದೋಟದಲ್ಲಿ, ಕಿರುಹಕ್ಕಿಯ ಹಾಡು–ಎಂಬ ಎರಡು ವಚನ ಕವನಗಳೂ ಸಂಗ್ರಾಮವನ್ನು ಕುರಿತ ಚಿಂತನವೂ ಇಲ್ಲಿ ಸೇರಿವೆ. ಈ ವೇಳೆಗೆ ಸಣ್ಣಕಥೆ, ಕವಿತೆ, ನಾಟಕ, ಕಾದಂಬರಿ, ಪ್ರಬಂಧಗಳನ್ನೂ ಶಿಶುಸಾಹಿತ್ಯವನ್ನೂ ನೀಡಿದ್ದ ಲೇಖಕರು ಈ ಕೃತಿಯಲ್ಲಿ ವಿಭಿನ್ನಬಗೆಯ ಸಾಹಿತ್ಯವನ್ನು

ನೀಡಿದ್ದಾರೆ. ಕ್ರಿ.ಶ. ೧೯೪೬ರ ಜೂನ್ ತಿಂಗಳಲ್ಲಿ ಪ್ರಕಟವಾದ ಈ ಕಿರು ಹೊತ್ತಿಗೆ ಮತ್ತೆ ಪ್ರಕಟವಾಗಲಿಲ್ಲ. ಭಾರತಕ್ಕೆ ಸ್ವಾತಂತ್ರ್ಯ, ಕರ್ನಾಟಕದ ಏಕೀಕರಣಗಳ ಕನಸು ಇನ್ನೂ ನನಸಾಗದಿದ್ದ ದಿನಗಳಲ್ಲಿ, ದ್ವಿತೀಯ ಮಹಾಯುದ್ಧ ಮುಗಿದಿದ್ದರೂ ಆ ಯುದ್ಧದ ಬೇಗೆಯಿಂದ ರಾಷ್ಟ್ರವು ಆರ್ಥಿಕವಾಗಿ ಕಂಗೆಟ್ಟಿದ್ದ ಆ ದುರ್ದಿನಗಳಲ್ಲಿ ಲೇಖಕರು ತಮ್ಮ ದುಃಖವನ್ನು ಈ ಕಿರುಗ್ರಂಥದಲ್ಲಿ ಮಾರ್ಮಿಕವಾಗಿ ತೋಡಿಕೊಂಡಿದ್ದಾರೆ. ಇಂದಿಗೆ ಈ ಗ್ರಂಥ ಪ್ರಕಟವಾಗಿ ಸುಮಾರು ಮೂವತ್ತಾರು ವರ್ಷಗಳು ಕಳೆದಿದ್ದರೂ ಅಂದು ಲೇಖಕರು ನಾಡು ನುಡಿಗಳ ಬಗೆಗೆ ವ್ಯಕ್ತಪಡಿಸಿರುವ ಅಭಿಪ್ರಾಯಗಳು ಈ ಹೊತ್ತಿಗೂ ಚಿಂತನಕ್ಕೆ ಯೋಗ್ಯವಾಗಿವೆ ಎಂದಮೇಲೆ ಈ ಕೃತಿಯ ಮೌಲ್ಯವನ್ನು ನಾವು ಮನಗಾಣಬಹುದು. ಬಿ. ಎಂ. ಶ್ರೀ ಅವರಂಥ ಮಹನೀಯರು ಧಾರೆಯೆರೆದ ತಪಸ್ಸಿನ, ತ್ಯಾಗದ ಫಲವಾಗಿ ಇಂದು ಕರ್ನಾಟಕವು ನಿರ್ಮಾಣವಾಗಿದೆ. ಭಾರತವೂ ಬಂಧಮುಕ್ತವಾಗಿ ಜಗತ್ತಿನ ರಾಷ್ಟ್ರಗಳ ಸಾಲಿನಲ್ಲಿ ತಲೆಎತ್ತಿ ನಿಲ್ಲುವಂತೆ ಆಗಿದೆ. ದಿಟ. ಆದರೆ ನಮ್ಮ ಸಮಾಜ ಜೀವನದಲ್ಲಿ ಕನ್ನಡಕ್ಕೆ ದೊರೆತಿರುವ ಸ್ಥಿತಿ ಎಷ್ಟು ಶೋಚನೆಯದಾಗಿದೆಎಂದರೆ, ಎಂ.ವಿ.ಸೀ. ಅಂಥ ಲೇಖಕರೂ ಕನ್ನಡದ ಉಳಿವಿಗಾಗಿ ಬೀದಿಗೆ ಇಳಿದು ಚಳುವಳಿ ಮಾಡಬೇಕಾಯಿತು. ಎಂಥ ದೌರ್ಭಾಗ್ಯ!

೨

ಬಿ. ಎಂ. ಶ್ರೀ ಅವರು ನಾಡುನುಡಿಗಳಿಗೆ ಮಾಡಿದ ಸೇವೆ ದೊಡ್ಡದು. ಅಂದಿನ ದಿನಗಳಲ್ಲಿ ಕನ್ನಡ ಅನಾಥವಾಗಿತ್ತು. ಕನ್ನಡದಲ್ಲಿ ಮಾತನಾಡುವುದು, ಬರೆಯುವುದು ಅಪಮಾನದ ಸಂಗತಿಯಾಗಿತ್ತು. ಕನ್ನಡದಲ್ಲಿ ಸಂಭಾಷಿಸುವುದು ಸುಸಂಸ್ಕೃತರ ಲಕ್ಷಣವಾಗಿರಲಿಲ್ಲ. ವಿದ್ಯಾವಂತರು ಕನ್ನಡದಲ್ಲಿ ಓದಬೇಕಾದುದು ಏನಿದೆ? ತಿಳಿಯಬೇಕಾದುದು ಏನಿದೆ ? ಎಂದು ಮೂಗುಮುರಿಯುತ್ತಿದ್ದರು. ಕನ್ನಡ ಸಾಹಿತ್ಯವನ್ನೂ ಭಾಷೆಯನ್ನೂ ಬಹಿರಂಗವಾಗಿ ಹೀಯಾಳಿಸುತ್ತಿದ್ದರು. ಎಲ್ಲೆಲ್ಲೂ ಇಂಗ್ಲಿಷಿನ ಪ್ರಭಾವ ಎದ್ದು ಕಾಣುತ್ತಿತ್ತು. ಮನೆಯ ಹೊರಗೆ ಕನ್ನಡ ಕಂಗಾಲಾಗಿತ್ತು : ಮನೆಯ ಒಳಗೆ ಮೂಲೆ ಹಿಡಿದಿತ್ತು. ಕನ್ನಡಿಗರೇ ಕನ್ನಡವನ್ನು ಕಾಲಕಸದಂತೆ ನೋಡುತ್ತಿದ್ದ ಕಾಲ ಅದು.

ಇಂಥ ಕಾಲದಲ್ಲೂ ಶ್ರೀ ಅವರು ತಮ್ಮ ಪ್ರೌಢ ವಿದ್ಯಾಭ್ಯಾಸಕ್ಕೆಂದು ಮದರಾಸಿಗೆ ಹೋದರು. ಅಲ್ಲಿ ಇಂಗ್ಲಿಷ್ ಭಾಷಾ ಸಾಹಿತ್ಯದಲ್ಲಿ **ಎಂ. ಎ.** ಪದವಿಯನ್ನೂ ಕಾನೂನಿನಲ್ಲಿ ಬಿ.ಎಲ್. ಪದವಿಯನ್ನೂ ಗಳಿಸಿ ಮಹಾರಾಜಾ ಕಾಲೇಜಿನಲ್ಲಿ ಇಂಗ್ಲಿಷ್ ಅಧ್ಯಾಪಕರಾಗಿ ನೌಕರಿಗೆ ಸೇರಿದರು. ಮದರಾಸಿನಲ್ಲಿದ್ದಾಗ ಆ ಜನರ ಭಾಷಾಭಿಮಾನ ನೋಡಿ ಮೈಮರೆತರು. ಕನ್ನಡವನ್ನು ಚೆನ್ನಾಗಿ ಕಲಿತು ಪ್ರಾಚೀನ ಕಾವ್ಯ

ಗಳ ಸೊಗಸಿಗೆ ಮಾರುಹೋದರು. ತಮಿಳನ್ನೂ ಆಳವಾಗಿ ಅಭ್ಯಾಸಮಾಡಿದರು. ಕರ್ಣಾಟಕದ ಗತವೈಭವವನ್ನೂ ಭಾಷಾ ಸೌಂದರ್ಯ ಸತ್ವಗಳನ್ನೂ ಕಣ್ಣಮುಂದೆ ತಂದುಕೊಂಡರು. ಕನ್ನಡ ಮಾತೆ ಸಾಮ್ರಾಜ್ಞಿಯಾಗಿ ಮೆರೆದ ಕಾಲವನ್ನು ಸ್ಮರಿಸಿ ಕಂಬನಿ ಸುರಿಸಿದರು. ಈ ನುಡಿವೆಣ್ಣನ್ನು ಮತ್ತೆ ಸಾಮ್ರಾಜ್ಞಿ ಪಟ್ಟಕ್ಕೆ ಏರಿಸಬೇಕು: ಇಂಗ್ಲಿಷಿನ ಸತ್ವ ಸೊಬಗುಗಳನ್ನು ಕನ್ನಡ ನುಡಿಯಲ್ಲೂ ತಂದು ನಾಡಿನ ಮಕ್ಕಳಿಗೆ ಉಣಿಸಬೇಕು–ಎಂದು ಸಂಕಲ್ಪಿಸಿ ಮೈಸೂರಿಗೆ ಬಂದಿದ್ದರು.

ಅವರು ೧೯೧೧ ರಲ್ಲಿ ಧಾರವಾಡದ ವಿದ್ಯಾವರ್ಧಕ ಸಂಘದ ಆಶ್ರಯದಲ್ಲಿ "ಕನ್ನಡ ಮಾತು ತಲೆಯೆತ್ತುವ ಬಗೆ"ಯನ್ನು ಕುರಿತು ಉಪನ್ಯಾಸಮಾಡಿದರು. ಮುಂದೆ ಇಂಥ ಉಪನ್ಯಾಸಗಳನ್ನು ಸೇರಿಸಿ ಗ್ರಂಥವಾಗಿ ಪ್ರಕಟಿಸಿದರು. ೧೯೨೬ರಲ್ಲಿ ತಾವು ಬರೆದಿದ್ದ ಅನುವಾದಿತ ಕವನಗಳನ್ನು "ಇಂಗ್ಲಿಷ್ ಗೀತಗಳು" ಎಂಬ ಹೆಸರಿನಿಂದ ಪ್ರಕಟಿಸಿ, ಆ ಮೂಲಕ ಭಾಷೆ, ಭಾವ, ಛಂದಸ್ಸುಗಳಲ್ಲಿ ಪ್ರಯೋಗ ನಡೆಸಿ, ನೂತನ ಕಾವ್ಯಕ್ಕೆ ಮಾರ್ಗದರ್ಶಕರಾದರು. ಅವರಿಂದ ಸ್ಫೂರ್ತಿ ಪಡೆದು ಅನೇಕ ಕವಿಗಳು ಕಾವ್ಯವನ್ನು ರಚಿಸಿ, ನವೋದಯ ಸಾಹಿತ್ಯಕ್ಕೆ ಬೆಲೆಯುಳ್ಳ ಕೊಡುಗೆ ನೀಡಿದರು. ಗದಾಯುದ್ಧ ನಾಟಕವನ್ನು ರನ್ನನ ಸಾಹಸ ಭೀಮವಿಜಯದ ಆಧಾರದ ಮೇಲೂ ಸೊಪೋಕ್ಲೀಸನ ಏಜಾಕ್ಸ್ ನಾಟಕವನ್ನು ಅಶ್ವತ್ಥಾಮನ್ ಎಂಬ ಹೆಸರಿನಲ್ಲಿ, ಈಸ್ಕಿಲಿಸನ ಒಂದು ನಾಟಕವನ್ನು ಪಾರಸೀಕರು ಎಂಬುದಾಗಿಯೂ ಕನ್ನಡಕ್ಕೆ ರೂಪಾಂತರಿಸಿ ಕನ್ನಡಿಗರಿಗೆ ಪ್ರಾಚೀನ ಗ್ರೀಕ್ ಸಾಹಿತ್ಯದ ದುರಂತ ನಾಟಕಗಳ ಪರಿಚಯ ಮಾಡಿಸಿಕೊಟ್ಟರು. ಕನ್ನಡ ಕೈಪಿಡಿಗೆ ಬರೆದ ಛಂದಸ್ಸನ್ನು ಕುರಿತ ಇವರ ಅಭ್ಯಾಸಪೂರ್ಣ ಲೇಖನ, ಕನ್ನಡ ಕಾವ್ಯದಿಂದ ಆರಿಸಿದ ಕನ್ನಡ ಬಾವುಟ ಕಾವ್ಯ ಸಂಕಲನ, ರಜತಮಹೋತ್ಸವ ಪ್ರಗಾಥ, ಶುಕ್ರಗೀತೆ ಕಾವ್ಯಗಳು ಕನ್ನಡ ಸಾಹಿತ್ಯದ ನವೋದಯಕ್ಕೆ ಶ್ರೀಕಾರ ಹಾಕಿದವು. ಇವುಗಳಲ್ಲಿ ಇವರು ೧೯೩೬ ರಲ್ಲಿ ರಚಿಸಿದ ಕನ್ನಡ ತಾಯಿಯನೋಟ ಎಂಬ ಕವಿತೆ ತಿಲಕಪ್ರಾಯವಾಗಿದೆ. ಇದನ್ನು ಶ್ರೀ ಅವರು ಹಂಪೆಯಲ್ಲಿ ನಡೆದ ವಿಜಯನಗರ ಸಾಮ್ರಾಜ್ಯದ ಆರನೂರನೆ ಸ್ಮಾರಕ ಮಹೋತ್ಸವದಲ್ಲಿ ಭಾಗವಹಿಸಿದಾಗ ಬರೆದರೆಂದು ಹೇಳುತ್ತಾರೆ. ಈ ಕವನದಲ್ಲಿ ಬಿ. ಎಂ. ಶ್ರೀ ಅವರು ಅಂದಿನ ಕನ್ನಡ ತಾಯಿಯ ದುಸ್ಥಿತಿಯನ್ನು ಕುರಿತು ಮನಕರಗುವಂತೆ ವರ್ಣಿಸಿದ್ದರಲ್ಲದೆ, ಈ ತಾಯಿಗೆ ಮೊದಲಿನ ವೈಭವದ ದಿನಗಳು ಬರಲು ಕನ್ನಡಿಗರು ಮಾಡಬೇಕಾಗಿರುವ ಕರ್ತವ್ಯದ ಕಡೆಗೆ ಅವರ ಗಮನ ಸೆಳೆದಿದ್ದರು. ಈ ಕೃತಿ ಕನ್ನಡಿಗರ ಕಣ್ಣು ತೆರೆಸಿತ್ತು. ಇಂಥ ಬಿ. ಎಂ. ಶ್ರೀ ಅವರ ಸಾರಸ್ವತ ಕೃತಿಗಳಿಂದ ತಮ್ಮ ಚೈತನ್ಯವನ್ನು ತುಂಬಿಕೊಂಡು ನಾಡು-ನುಡಿಗಳ ಸೇವಾದೀಕ್ಷೆ ಸ್ವೀಕರಿಸಿದ್ದ ಎಂ.ವಿ.ಸೀ. ಅಂತಹವರಿಗೆ, ಕನ್ನಡ ನಾಡು ಒಂದಾಗುವುದನ್ನು ನೋಡುವ ಮೊದಲೇ

ಬಿ. ಎಂ. ಶ್ರೀ ಕಣ್ಮರೆಯಾದುದು ಒಂದು ಆಘಾತವೆನಿಸಿತು. ಈ ಸಮಯದಲ್ಲಿ ತಮಗಾದ ನೋವು, ವಿಯೋಗ, ವಿರಹಗಳನ್ನು ಎಂ.ವಿ.ಸೀ. ಕಂಬನಿ ಕಾಣಿಕೆಯಾಗಿ. ಅಶ್ರುತರ್ಪಣವಾಗಿ ನೀಡಿದ್ದಾರೆ.

೬

ಕಂಬನಿ ಕಾಣಿಕೆಯಲ್ಲಿ ಮೂರು ಖಂಡಗಳಿವೆ. ಮೊದಲನೆಯ ಖಂಡದಲ್ಲಿ ಕನ್ನಡದ ನೆಲ, ಹೊಲ, ಬಾನು, ಮುಗಿಲು, ಎಲರು, ಕನ್ನಡವಕ್ಕಿಗಳಂಥ ಜಡ ಚೇತನರಮೇಲೆ ಬಿ. ಎಂ. ಶ್ರೀ ಅವರ ಮರಣದಿಂದ ಉಂಟಾದ ಆಘಾತವನ್ನೂ ಎರಡನೆಯ ಖಂಡದಲ್ಲಿ ತನ್ನ ಹಿರಿಯ ಮಗನ ಮರಣದಿಂದ ಕನ್ನಡತಾಯಿಗಾದ ದುಃಖವನ್ನೂ ಮೂರನೆಯ ಖಂಡದಲ್ಲಿ ತಮಗೆ ಗುರುವಾಗಿದ್ದ ಕನ್ನಡದಕಲ್ಪತರು. ಶ್ರೀ ಅವರ ಸಾಹಿತ್ಯವನ್ನೂ ಅವರು ಮಾಡಿದ ನಾಡು ನುಡಿಗಳ ಸೇವೆಯನ್ನೂ ಮುಕ್ತಕಂಠದಿಂದ ಹೊಗಳಿ, ಕನ್ನಡಿಗರನ್ನು ಸ್ವರ್ಗಲೋಕದಿಂದಲೇ ಹರಸಬೇಕೆಂದು ಪ್ರಾರ್ಥಿಸಿದ್ದಾರೆ. ಸುಮಾರು ಅರವತ್ತು ಸಾಲಿನ ಈ ಶೋಕಗೀತೆ ಜನತೆಯ ಶೋಕಕ್ಕೆ ಕನ್ನಡಿ ಹಿಡಿದಂತೆ ಇದೆ. ಸುಸಂಸ್ಕೃತ ಸಮಾಜದ ವಾಣಿಗೆ ಎಂ. ವಿ. ಸೀ. ಮಾತಿನ ಶಿಲ್ಪ ರಚಿಸಿದ್ದಾರೆ.

ಬಿ. ಎಂ. ಶ್ರೀ ಅವರ ಆಕಸ್ಮಿಕ ಮರಣ ಕವಿಯನ್ನು ದಿಙ್ಮೂಢಗೊಳಿಸಿತು. ತನಗೊದಗಿದ ನಷ್ಟಕ್ಕಿಂತಲೂ ತಾಯಿಯಾದ ಕನ್ನಡಮ್ಮನಿಗೆ ಆದ ನಷ್ಟ ಹಿರಿದೆನ್ನುತ್ತಾನೆ ಕವಿ. ವರಪುತ್ರನ ವಿಯೋಗದಿಂದ ನಿನ್ನ ಅಳಲು ಹೆಚ್ಚಿನದು ಎನ್ನುತ್ತಾನೆ.

ಅಮ್ಮ, ಕನ್ನಡ ತಾಯೆ,
ನಿನ್ನಳಲ್ ಪಿರಿದಲ್ತೆ
ಎಮ್ಮಳಲ್ಗಿಂ:
ನಿನ್ನ ಶ್ರೀಕಂಠಮೋ
ಪೋಯ್ತು ತಾಯೆ
ಕಳಿಯೆ ಶ್ರೀಕಂಠನ್

ಶ್ರೀ ಅವರು ಕನ್ನಡತಾಂಬೆಯ ಮಕ್ಕಳಲ್ಲೆಲ್ಲಾ ವರಪುತ್ರ, ಪ್ರೇಮಪುತ್ರ

ನಿನ್ನೆಲ್ಲ ಮಕ್ಕಳೊಳಮವನೆ ಧನ್ಯನ್
ನಿನ್ನೆಲ್ಲ ಮಕ್ಕಳೊಳಮವನೆ ಸನ್ಮಾನ್ಯನ್
ನಿನ್ನ ಸೇವೆಯೊಳವನೆ ಅಗ್ರಗಣ್ಯನ್
ನಿನಗುಸಿರ ಮುಡುಪಿಟ್ಟ ಕನ್ನಡ ವರೇಣ್ಯನ್.

ಆಚಾರ್ಯ ಶ್ರೀಯವರ ವಿಯೋಗ ಅವರ ಪಾಲಿಗೆ ಕಾವಳ ಮುಚ್ಚಿದಂತಾಯ್ತು. ನೆಂಟರಿಷ್ಟರಿಗೆ ಮಾತ್ರವಲ್ಲ. ಇಡೀ ನಾಡಿಗೇ ಕತ್ತಲು ಕವಿಯಿತು–ಎನ್ನುತ್ತಾರೆ ಕವಿ.

ಬರಿದಾಯ್ತು ಕನ್ನಡದ ಆಚಾರ್ಯಪೀಠಂ ;
ಮರೆಯಾಯ್ತು ಬೆಳಕೀವ ನಿನ್ನ ನೋಟಂ ;
ಕೇಳದಾಯ್ತಿನ್ನು ಕನ್ನಡದ ಕಲಕಂಠಂ ;
ಬಿಮ್ಮೆನ್ನುತಿದೆ ನಾಡ ನುಡಿಯ ತೋಂಟಂ.

ಅವರ ನೆನಪೇ ಈಗ ನಮಗೆ ದಾರಿ ದೀಪ. ಅವರು ತಮ್ಮ ಜೀವಿತದ ಅವಧಿಯಲ್ಲಿ ಮಾಡಿದ ಕಾರ್ಯಗಳ ಸ್ಮರಣೆಯೇಸ್ಫೂರ್ತಿಯ ಚಿಲುಮೆ. ಅವರು ಮಾಡಿದ ಕಾರ್ಯ ಒಂದೆರಡಲ್ಲ.

ಕನ್ನಡದ ಕಲ್ಮೆಯಂ ಬೀರಿದಯ್ ಗುರುವೆ
ಕನ್ನಡದ ನಯನಲ್ಮೆ ಸಾರಿದಯ್ ಗುರುವೆ
ನಾಡುನುಡಿಯೊಕ್ಕಟಕೊರ್‌ದಾರಿ ತೋರಿಸಿದೆ
ಕುರಿಪಾಗಿ, ಕನ್ನಡದ ಬಾವುಟವ ಹಾರಿಸಿದೆ.
ನಿನ್ನಂತೆ ಕೊಟ್ಟರಾರ್ ತನುಮನ ಧನವ ನುಡಿಗೆ,
ನಿನ್ನಂತೆ ಇಟ್ಟರಾರ್ ವಯಿರಮುಡಿ ತಾಯ ಮುಡಿಗೆ ?

ಅವರನ್ನು ಅಡಿಗಡಿಗೆ ನೆನೆದ ಕವಿ ಹೀಗೆ ಪ್ರಾರ್ಥಿಸುತ್ತಾನೆ. ಕನ್ನಡದ ತೇಜ, ಕನ್ನಡದೋಜ, ಪರಸಯ್ :

ಸಗ್ಗದಾ ನಾಡಿಂದ
ಬಾನವರ ಬೀಡಿಂದ
ಕನ್ನಡಕೆ ಶುಭವ ಹರಸಯ್.
ನೀನ್ ಕಂಡ ಹೊಂಗನಸು
ಅಕ್ಕೆನಾಳಿನ ನನಸು !
ನಿನ್ನ ಕಡೆ ಹಾರೈಕೆ ಸಲ್ಗೆ, ಸಲ್ಗೆ !
'ಸಿರಿಗನ್ನಡಂ ಗೆಲ್ಗೆ, ಕನ್ನಡ ತಾಯ್ ಬಾಳ್ಗೆ'!
ಸಂತತಂ ಶ್ರೀ ಪೆಸರ್ ನಿಲ್ಗೆ, ನಿಲ್ಗೆ !

ಬಿ. ಎಂ. ಶ್ರೀ ಅವರು ತಮ್ಮ ಬಾಳನ್ನೇ ತೈಲವಾಗಿ ಎರೆದು ಕನ್ನಡದ ದೀಪವು ಆರಿಹೋಗದಂತೆ ನೋಡಿಕೊಂಡರು. ಅವರು ಹಚ್ಚಿಟ್ಟ ಕನ್ನಡ ದೀಪದಿಂದ ತಮ್ಮ ಬಾಳನ್ನು ಬೆಳಗಿಸಿಕೊಂಡವರು ಅದೆಷ್ಟೋಮಂದಿ. ಇಂಥವರಲ್ಲಿ ಎಂ.ಪಿ.ಸೀ. ಒಬ್ಬರು. ಶ್ರೀ ಅವರಿಂದ ಕನ್ನಡದ ದೀಕ್ಷೆ ಸ್ವೀಕರಿಸಿದ್ದ ಅವರು ಕನ್ನಡಮ್ಮನ ಕೊರಗನ್ನು ಹನ್ನೊಂದು ಉಸಿರುಗಳಲ್ಲಿ ಮಾರ್ಮಿಕವಾಗಿ ಚಿತ್ರಿಸಿದ್ದಾರೆ.

ಕಾವ್ಯವನದ ಕುಟೀರ ಬಿಟ್ಟು ನಾಡತಾಯಿಯು ಊರಮಕ್ಕಳ ನೋವು ನಲಿವು, ಆಟಪಾಟಗಳನ್ನು ನೋಡಿಬರಲು ಸಜ್ಜಾದತ್ತ ಹೊರಟಳು. ಅವಳ ಅನುಭವಗಳು ನಮ್ಮನ್ನು ಚಿಂತನಶೀಲರನ್ನಾಗಿ ಮಾಡುತ್ತವೆ. ಆಕೆ ಹಳೆಯ ಕಾಲದ ಮುತ್ತೈದೆ. ಬಿ. ಎಂ. ಶ್ರೀ ಮಾತುಗಳಲ್ಲಿ ಕನ್ನಡ ತಾಯಿನೋಟದಿಂದ ಆರಿಸಿದ ಭಾಗವನ್ನು ಕವಿ ತಮ್ಮ ಹನ್ನೆರಡನೆಯ ಉಸಿರಿನಲ್ಲಿ ಕೊಟ್ಟಿದ್ದಾರೆ.

ಕನ್ನಡದ ಅಧಿದೇವಿ ಹಿಂದೆಂದೂ ಈಗಿನಂತೆ ಅನಾದರ ಅಗೌರವಗಳಿಗೆ ಪಾತ್ರಳಾಗಿರಲಿಲ್ಲ. ಈ ಕರ್ನಾಟಕ ಮಾತೆ ಇತಿಹಾಸದಲ್ಲಿ ಸಾಮ್ರಾಜ್ಞಿಯಾಗಿ, ರಾಜರಾಜೇಶ್ವರಿಯಾಗಿ ಬಾಳಿದ್ದವಳು. ಅಂದಿನ ಆ ವೈಭವದ ಚಿತ್ರ ಹೀಗಿದೆ.

"ಕನ್ನಡ ನಾಡಿನ ರಾಜ ರಾಜರೆಲ್ಲರೂ ಕನ್ನಡಾಂಬೆಯನ್ನು ಕನಕ ಪೀಠದಲ್ಲಿ ಕುಳ್ಳಿರಿಸಿ ಮೆರೆಸಿದ್ದಾರೆ. ಈಗಲೂ ಆಕೆ ಸಿಂಹಾಸನದಲ್ಲಿ ರಾಣಿಯಾಗಿ ಕುಳಿತು ನಮ್ಮನ್ನೆಲ್ಲಾ ಆಳುತ್ತಿದ್ದಾಳೆ. ಅವಳ ದಿವ್ಯ ಮೂರ್ತಿಯನ್ನು ನೋಡಿ! ನೃಪತುಂಗ ಇಟ್ಟ ಕಿರೀಟ ನೋಡಿ! ಪಂಪ ರನ್ನ ಕುಮಾರವ್ಯಾಸ ಲಕ್ಷ್ಮೀಶಾದಿಗಳು ಅವಳಿಗೆ ತೊಡಿಸಿದ ದಿವ್ಯಾಭರಣಗಳನ್ನು ನೋಡಿ! ರಾಜಾಧಿರಾಜರುಗಳು ಆಕೆಯ ಮುಂದೆ ಸುರಿದಿರುವ ಕಪ್ಪ ಕಾಣಿಕೆಗಳನ್ನು ಅವಲೋಕಿಸಿ! ಕರ್ಣಾಟಕದ ಇತಿಹಾಸ, ಸಂಸ್ಕೃತಿ ವಾಸ್ತು ಶಿಲ್ಪ, ಸಂಗೀತ, ಕಲೆ–ಇವೆಲ್ಲವೂ ಕರ್ಣಾಟಕ ಮಾತೆಯ ಕೀರ್ತಿ ಕಿರಣಗಳು ....".

ಇಂಥವಳಿಗೆ ಇಂದು ಎಂಥ ದುರ್ದೆಶೆ? ತನ್ನ ಮಕ್ಕಳೇ ಈಗ ಅವಳನ್ನು ಆದರಿಸುತ್ತಿಲ್ಲ; ಗೌರವಿಸುತ್ತಿಲ್ಲ. ಇನ್ನು ಪರರ ವಿಷಯ ಹೇಗೆ? ಅಂದಿನ ಅವಳ ಚಿಂತಾಜನಕಸ್ಥಿತಿಗೆ, ದುರ್ದೆಶೆಗೆ ಕಾರಣಗಳು ಹಲವು. ಮುಖ್ಯವಾಗಿ ತಮ್ಮ ತಾಯಿಯ ಬಗ್ಗೆ, ನುಡಿಯ ಬಗ್ಗೆ ಕನ್ನಡ ಕುವರರ ನಿರ್ಲಕ್ಷ್ಯ, ನಿರಭಿಮಾನ ಅನಾದರ ಬಿ. ಎಂ. ಶ್ರೀ ಹೇಳಿದಂತೆ "ಏನು ಕವಿಯಿತೋ ಮಂಕು, ಮಕ್ಕಳಿಗೆ! ಯಾರೆರಚಿದರೋ ಬೂದಿ, ಕಾಣೆ, ನನ್ನನೊಲ್ಲರು ನನ್ನ ಮಕ್ಕಳೇ! ತಾವ್ ಬಾಳಿ, ತಾಯಬಾಳಿಸರು. ಪರರನುಡಿ, ಪರರನಡೆ, ಪರರಕೂಗೇಕೂಗು, ಪರರದೇ ಹೆಮ್ಮೆ, ನನ್ನ ನುಡಿ ಹಾಳು! ನನ್ನನುಡಿ ಬೀಳು !"

೬

ಎಂ. ವಿ. ಸೀ. ಅವರು ಕನ್ನಡಮ್ಮನ ಕೊರಗಿನಲ್ಲಿ ಹೃದಯವಿದ್ರಾವಕ ಸನ್ನಿವೇಶಗಳನ್ನು ತಾಯಿ ಕಂಡಂತೆ ಚಿತ್ರಿಸಿದ್ದಾರೆ.

ಒಂದು ನಗರ, ಪೇಟೆಯ ಬೀದಿಯಲ್ಲಿ, ಧೂಳಿನಲ್ಲಿ ಚೆಲುವ ಮಗುವೊಂದು ಅಳುತ್ತಿತ್ತು. ಹಾದಿಯಲ್ಲಿ ಹೋಗುತ್ತಿದ್ದ ಹಸುವೊಂದು ಅಳುತ್ತಿದ್ದ ಮಗುವಿನ ಕಡೆ

ತಿರುಗಿ ಸರ್ರನೆ ತಿವಿಯ ಹೋಯಿತು. ಅದನ್ನು ದೂರದಿಂದ ನೋಡಿದ ತಾಯಿ "ಅಯ್ಯೋ ನನ್ನ ಕಂದಾ" ಎಂದು ಮಿಂಚಿನಲ್ಲಿ ಅದರ ರಕ್ಷಣೆಗೆ ಹೋದಳು. ಅಲ್ಲಿದ್ದ ಕನ್ನಡಮ್ಮನನ್ನು ಕುರಿತು "ನಿನ್ನ ಪುಣ್ಯದಿಂದ ನನ್ನ ಜೀವಿಗೆ ಏನೂ ಆಗಲಿಲ್ಲ"- ಎಂದು ಹಿಗ್ಗಿನಿಂದ ಹೇಳಿದಳು. ಈ ಮಾತು ಕೇಳಿ ಕನ್ನಡಮ್ಮ ಉದ್ಗಾರತೆಗೆದಳು-

"ಕನ್ನಡ ಕಂದಗಳು ಜೀವಗಳಾಗುವ ಕಾಲಬಂತೆ! ಕನ್ನಡ ಕಂದಗಳಿಗೆ ತಾಯ ಹಾಲು ತಪ್ಪಿಹೋಗುವ ಹಾಗಾಯಿತೆ! ಅಯ್ಯೋ, ನನ್ನ ನಾಡ ಮಕ್ಕಳು ಯಾವ ವಿಷದ ಗಾಳಿ ಕುಡಿದರೋ-ನಾಡುಸಿರು, ನನ್ನುಸಿರು, ವಿಷಗೊಳ್ಳುತ್ತಿದೆಯಲ್ಲಾ, ಎಂದು ನನಗೆ ಕೊರಗು"

"ಏನೋ ಎಂದಿದ್ದೆ. ಇಷ್ಟೇತಾನೇ" ಎಂದು ಆ ಹೆಣ್ಣುಮಗಳು ಏನೂ ನಡೆಯಲಿಲ್ಲವೆಂಬಂತೆ ಮನೆಯನ್ನು ಸೇರಿದಳಂತೆ.

ಮತ್ತೊಂದು ನೋಟ. ಕನ್ನಡಮ್ಮ ಶಿಸ್ತಾಗಿ ನಿಂತ ಕನ್ನಡ ಮಕ್ಕಳನ್ನು ನೋಡಿದಳು. "ಆಹಾ, ಎಂಥ ಹಿಗ್ಗಿನ ನೋಟವಿದು! ಈ ಹುಡುಗರು, ಕನ್ನಡದ ಕುಡಿಗಳು, ಸಾಲಿಟ್ಟು ಹೇಗೆ ಕಂಗೊಳಿಸುತ್ತಿದ್ದಾರೆ. ಕನ್ನಡ ನಾಡು ಕಾಯಲು, ಕನ್ನಡ ಕೋಟೆ ಕಟ್ಟಲು, ಒಡೆದ ನಾಡನ್ನು ಒಗ್ಗೂಡಿಸಲು, ನಾಡಿನ ಊರೂರಿನಲ್ಲಿ ಮನೆಮನೆಯಮೇಲೆ ಕನ್ನಡ ಬಾವುಟವನ್ನು ಹಾರಿಸಲು ಈ ಪರಿಯ ಕನ್ನಡ ಮಕ್ಕಳ ನೂರಾರುಪಡೆ, ಸಾವಿರಾರು ಪಡೆ, ಸಿದ್ದವಾಗಬೇಕು ಸಿದ್ಧವಾದೀತು" ಎಂದುಕೊಂಡು ಹುಡುಗರ ಪಡೆಯ ಬಳಿ ಸಾರಿದಳು. ಆದರೆ ಅಲ್ಲಿ ಕೇಳಿದ್ದೇನು? ಹುಡುಗರು ವಾದ್ಯಕ್ಕೆ ತಕ್ಕಂತೆ ಹೆಜ್ಜೆ ಇಟ್ಟು ನಡೆಯುತ್ತಿದ್ದರು. ಶಿಕ್ಷಕರು "ಏಕ್, ದೋ, ತೀನ್ ಚಾರ್" ಎಂದು ಎಣಿಕೆಗೊಡುತ್ತಿದ್ದರು. ಈ ದೃಶ್ಯನೋಡಿ ಕನ್ನಡಮ್ಮನಿಗೆ ಕರುಳು ಹಿಂಡಿದಂತೆ ಆಯಿತು. ಕಿವಿಮುಚ್ಚಿಕೊಂಡು ಮುಂದೆ ನಡೆದಳು "ನನ್ನ ನಾಡೇ ಒಡೆದು ಚೂರಾಗಿದೆ; ಇನ್ನು ನನ್ನ ಕನಸೊಡೆದು ಚೂರಾದರೇನು ?" ಎಂದು ನಿಟ್ಟುಸಿರು ಬಿಟ್ಟಳು !

ಕನ್ನಡಮ್ಮ ಒಮ್ಮೆ ನಗರದ ಶೃಂಗಾರ ತೋಟಕ್ಕೆ ಬಂದಳು. ಅಲ್ಲಿ ಅವಳು ಕಂಡದ್ದೇನು ? ಒಂದಾದರೂ ಕನ್ನಡ ನಾಡಿನ ಗಿಡಮರಗಳಿಲ್ಲ. ಅವಳೆಂದುಕೊಂಡಳಂತೆ. "ಕನ್ನಡದ ಕಂಪು, ಕನ್ನಡದಿಂಚರ, ನಗರಿಗರಿಗೆ ತಲೆಶೂಲೆ!" ಅವಳು ಅಲ್ಲಿದ್ದ ಹಸುರು ಹುಲ್ಲಿನ ಮೇಲೆ ಪವಡಿಸಿದಳು. ಆಗ ಕವಿ ಹೇಳುತ್ತಾರೆ-

"ಕನ್ನಡಮ್ಮನ ಕಣ್ಣಿಂದ ಜಗುಳಿದ ಕಂಬನಿಯೆರಡು ಹಸುರು ಗರಿಕೆಯೊಂದರ ಮೇಲೆ ನೆಲಸಿ ಮುತ್ತಿನಂತೆ ಮೆರೆದವು. ಅಷ್ಟೆ, ಕನ್ನಡಮ್ಮನಸಿರಿ, ಆ ಕಣ್ಣೀರ್ ಮುತ್ತು."

ಅವಳು ಆ ನಗರದ ಸಿರಿವಂತರ ಪರಬಿಗೆ ಬಂದಾಗ ಒಂದು ಬಯಲನ್ನು ನೋಡಿದಳು. ಅಲ್ಲಿ ಒಂದು ಉಪವನ ಮಾಡುವ ಪ್ರಯತ್ನ ನಡೆದಿತ್ತು.

ಆ ಮಾರ್ಗವಾಗಿ ಹೋಗುತ್ತಿದ್ದ ಹಳ್ಳಿಯವರು ಅಲ್ಲಿದ್ದ ಒಂದು ನಾಮಫಲಕವನ್ನು ನೋಡಿದರು. ಓದಲು, ಬರೆಯಲು ಬಾರದ ಅವರು ತಮ್ಮ ಸೌಕರ್ಯಕ್ಕಾಗಿ ಈ ಫಲಕ ಇರುವುದೆಂದು ಭಾವಿಸಿದರು. ಅವರು ಹುಲ್ಲಿನ ಮೇಲೆ ನಡೆದಾಗ, ಅಲ್ಲಿದ್ದ ಕಾವಲುಗಾರ ಬಂದು ಅಬ್ಬರಿಸಿದ.

"ಮಕ್ಕಳ ಆಟದ ಬಯಲು, ಬೆಳೆಯುವಹುಲ್ಲು, ಹುಲ್ಲಿನ ಮೇಲೆ ತಿರುಗಬೇಡಿ" ಎಂಬುದಾಗಿ ಇಂಗ್ಲಿಷಿನಲ್ಲಿ ತಿಳಿಸು ಹಲಿಗೆಯಮೇಲೆ ಬರೆದಿರುವುದರತ್ತ ಅವರ ಗಮನ ಸೆಳೆದ. ಆಗ ಕನ್ನಡಮ್ಮ ಮಿಡುಕಿದಳು—

"ಅಯ್ಯೋ ತಾಯ್ನುಡಿಯೇ ಬಾರದು ಇವರಿಗೆ: ಇನ್ನು ಪರ ನುಡಿ ತಿಳಿಯುವ ಬಗೆ ಹೇಗೆ! ನಾಡಿನಲ್ಲಿ ಇನ್ನೆಷ್ಟು ಜನ ಹೀಗೆ ಅಕ್ಷರ ಬಾರದವರಿರುವರೋ! ಕನ್ನಡದ ಒಕ್ಕಲಿಗೆ ಕನ್ನಡ ಓದು ಬರಹ ಬಾರದಿದ್ದಲ್ಲಿ ಅವರು ಒಕ್ಕಲವಾಗುವುದೆಂದು? ಕನ್ನಡದ ಸೊಂಪು, ಇಂಪು, ನಾಡಜನಕ್ಕೆ ತಿಳಿಯುವುದೆಂತು? ಅವರ ಬಾಳು ಸಯವಾಗುವುದೆಂತು? ಕನ್ನಡದ ಕಂಪು ಇಳೆಗೆಲ್ಲ ಹರಡುವುದೆಂದು? ಕನ್ನಡ ನಾಡ ಮಕ್ಕಳು ಒಕ್ಕಲು ಅಕ್ಕತಂಗಿಯರೆಲ್ಲ ನಾಡುನುಡಿಯ ಕಲಿಯುವವರೆಗೂ, ಅವರು ಓದುಗರಾಗುವವರೆಗೂ ಇದೆಲ್ಲ ಕನಸು!"

ಇದು ಅವಳ ಕೋಪದ ಮಾತಲ್ಲ, ಕಡುಕೊರಗಿನಿಂದ ಕಾದು ಹೊರಬಂದ ಎದೆಯ ತಾಪ; ಎದೆಯ ಬೇಗುದಿ, ಬಿಸುಸುಯ್ಲು!

ಅದೇ ನಗರದ ಒಂದು ಭವ್ಯ ಬಂಗಲೆ. ಆ ಮನೆಯ ಮುಂದೆ ಬಂದಾಗ ನಾಯಿಯೊಂದು ಬಗುಳಿತು. ಮನೆಯಿಂದ ಕನ್ನಡಿಗಳಾದ ಒಡತಿ ಹೊರಬಂದಳು; "ಕೀಪ್ ಕ್ವೈಟ್" ನಾಯಿಯೊಂದಿಗೆ ಮಾತನಾಡಲೂ ಕನ್ನಡದ ಸೊಲ್ಲಿಲ್ಲ! ಅಲ್ಲಿ ಕನ್ನಡಮ್ಮ ಒಂದು ಗಿಳಿ-ಕನ್ನಡವಕ್ಕಿಯನ್ನು ನೋಡಿದಳು. ಅದು ಒದರುತ್ತಿತ್ತು. "ಜಾವ್, ಜಾರೆ, ಗೆಟ್ ಅವೆ...." ಅದನ್ನು ಕಂಡ ಕನ್ನಡಮ್ಮನಿಗೆ ವ್ಯಥೆ ತುಂಬಿ ಬಂದಿತು.

"ಅಯ್ಯೋ, ನಿರ್ಭಾಗ್ಯ ಕನ್ನಡವಕ್ಕಿ! ಪಂಜರದಲ್ಲಿ ಸೆರೆಯಾಗಿ ಪರರ ಸಂಗಕೆ ಸಿಲುಕಿ, ಹೆರರನುಡಿಯ ಮೋಹಕ್ಕೆ ಒಳಗಾಗಿ ನಿನ್ನ ನಲ್ ನುಡಿಯನ್ನು ಮರೆಯುತ್ತಿರುವೆ. ನಿನ್ನ ಬಿಡುಗಡೆ ಎಂದು? ನೀನು ಮನ ಬಂದಂತೆ ನಾಡಿನಲ್ಲೆಲ್ಲಾ ಹಾರಾಡುತ್ತ ಕನ್ನಡ ಪಂಡಿತ ಪಕ್ಕಿಯಾಗಿ ನಾಡಮಕ್ಕಳಿಗೆಲ್ಲ ನುಡಿ ಕಲಿಸುವುದೆಂದು?" ಕನ್ನಡಮ್ಮ ಉದ್ಗಾರ ತೆಗೆದಳು.

ಕನ್ನಡ ಮಕ್ಕಳು ಹಿಂದೊಮ್ಮೆ "ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತಮತಿ"ಗಳಾಗಿದ್ದರು. ಈಗ ಅವರಿಗೆ ಕನ್ನಡವೇ ಅರ್ಥವಾಗದ ಭಾಷೆ. ವೇಷ

ಭೂಷಣದಲ್ಲೂ ಅಷ್ಟೇ, ಎಲ್ಲವೂ ಪರಕೀಯ. ಯುವಕ ಯುವತಿಯರನ್ನು ಕನ್ನಡಮ್ಮ ಒಮ್ಮೆ ಕಂಡಳು, ಯುವಕನ ಹ್ಯಾಟು, ಬೂಟು, ಕೋಟು, ಬಾಯ ಸಿಗರೇಟು: ಯುವತಿಯ ಕವಲು ಹೆರಳು. ಕೆದರಿದ ರುಳು. ಅರಿಸಿನಕ್ಕೆ ಬದಲು ಬೂದಿಯಂತೆ ಖಚೂರ್ಣ ಬಳಿದ ಮುಖ! ಕುಂಕುಮವಿಲ್ಲದ ಬರಿ ಹಣೆ; ಕೃತಕವಾಗಿ ತಿದ್ದಿದ ಹುಬ್ಬು; ಕಣ್ಣಿನ ಬಿಸಿಲು ಕನ್ನಡಕ; ಒಂದು ಕೈಯ ಬಳೆ, ಇನ್ನೊಂದು ಕೈ ಗಡಿಯಾರ: ಒಂದು ಕೈಲಿ ತೊಗಲು ಕೈ ಚೀಲ, ಇನ್ನೊಂದು ಕೈಲಿ ನೋಟು ಕೊಡೆ; ಕಾಲಿಗೆ ಎತ್ತರದ ಹಿಮ್ಮಡಿ ಜೋಡು! ಇವೆಲ್ಲ ಪ್ರಸಾಧನದ ಪರಾಕಾಷ್ಠೆಯಾಗಿ ಮೈಯೆಲ್ಲವನ್ನೂ ಮುಸುಕು ಮುಸುಕಾಗಿ ಕಾಣಿಸುವ ನವಿರು ಬಟ್ಟೆಯ ಸೀರೆ; ತೋಳಿಲ್ಲದ ಕುಪ್ಪಸ! ಅವಳನ್ನು ನೋಡಿ ಕನ್ನಡಮ್ಮ ಸಿಟ್ಟುಸಿರಿಟ್ಟು ತಲೆ ತಗ್ಗಿಸಿ ನುಡಿದಳು—ನನ್ನ ನಾಡಿನ ಹೊಸಕಾಲದ ಮುತ್ತೈದೆಯಿವಳು!

ಅವರ ಪ್ರೀತಿಯ ಸಂಬೋಧನೆ ಕಿವಿಗೆ ಬಿತ್ತು. 'ಮೈ ಲವ್, ಸ್ವೀಟ್‌ಹಾರ್ಟ್ ಮೈ ಡಿಯರ್....' ಆಗ ಅವಳು ಮುದ್ದಣನ ರಾಮಾಶ್ವಮೇಧ ಓದುತ್ತಿದ್ದ ಹುಡುಗನನ್ನು ಕುರಿತು ಉದ್ಗಾರ ತೆಗೆದಳು "ಹೊರಗೆ ಕನ್ನಡ ತನವಿಲ್ಲ, ಒಳಗಿಲ್ಲ. ನಡೆಯಲ್ಲಿಲ್ಲ, ನುಡಿಯಲ್ಲಿಲ್ಲ. ಮುದ್ದಣ ಮನೋರಮೆಯರ ಸರಸಸಲ್ಲಾಪದ ಸವಿನುಡಿ ಕೇಳಿದ ಕಿವಿ ಒಡನೆಯೆ ಈ ಕೃತಕ ಕರ್ಕಶವಾದ ಮಾತುಗಳನ್ನು ಕೇಳ ಬೇಕಾಯಿತೆ?

ಒಬ್ಬ ಹುಡುಗ ಕನ್ನಡಮ್ಮನಲ್ಲಿ ತನ್ನ ಅಳಲುತೋಡಿಕೊಂಡ. ತನ್ನ ತಂದೆಯು ತನ್ನ ಇಚ್ಛೆಯ ವಿರುದ್ಧ ಇಂಗ್ಲಿಷ್ ಮಾಧ್ಯಮದಲ್ಲಿ ಕಲಿಯಲು ಒತ್ತಾಯಿಸುತ್ತಿರುವುದಾಗಿ ಹೇಳಿಕೊಂಡು ಅತ್ತ. ತಂದೆಗೆ ತಿಳುವಳಿಕೆ ನೀಡಲು ಆಕೆ ಹೋಗಿ ಬೋರೆಗಲ್ಲ ಮೇಲೆ ಮಳೆಗರೆದಂತೆ ಆಯ್ತು. ಆಗ ಕನ್ನಡಮ್ಮ ತನ್ನಲ್ಲೇ ಉದ್ಗಾರ ತೆಗೆದಳು- "ನಾಡಿನ ಮನೆ ಮನೆಯಲ್ಲೂ ಕನ್ನಡದ ಹಣತೆ ಪ್ರಜ್ವಲಿಸುವವರೆಗೂ ನನ್ನ ನಾಡು ಬೆಳಗದು, ನುಡಿ ಬೆಳಗದು."

ಒಂದು ಮದುವೆಯ ಮನೆ. ಅಲ್ಲೂ ಕನ್ನಡದ ಹಾಡಿಲ್ಲ – ಹಸೆ ಇಲ್ಲ. ಮದುವೆ ಮಂಟಪದಲ್ಲಿ ಚಲನಚಿತ್ರದ ಹಾಡಿಗೆ, ಹಿಂದಿ ಹಾಡಿಗೆ ಪುರಸ್ಕಾರ ದೊರೆತದನ್ನು ನೋಡಿ ಕನ್ನಡಮ್ಮ ಮಿಡುಕಿದಳು.

"ಉತ್ತರದ ಹೆಣ್ಣಿಗೆ ಮರುಳಾದರೆ ನನಗೆ ಕೊರಗಿಲ್ಲ. ನನಗೆ ಒಂದಿನಿತು ಗೌರವ ಕೊಟ್ಟು ಸೊಸೆಯಾಗಿ ಮನೆ ಬೆಳಗಲಿ. ನನ್ನ ತಂಗಿಯನ್ನು ಪ್ರೀತಿಯಿಂದ ಕಂಡರೆ ನನಗೆ ಕರುಬಿಲ್ಲ; ಚಿಕ್ಕಮ್ಮನನ್ನು ಆದರಿಸುವಂದು ಅಮ್ಮನನ್ನು ಮರೆಯದಿದ್ದರೆ ಸರಿ. ಆದರೆ ಎಲ್ಲರೂ ಮುತ್ತಜ್ಜಿಯನ್ನು ಮರತಂತೆಯೇ ಕಾಣುತ್ತದೆ. ಇದೇ ನನ್ನ ಕೊರಗು."

ಕನ್ನಡನಾಡಿನಲ್ಲಿ ಕನ್ನಡಕ್ಕೆ ಮನ್ನಣೆಯಿಲ್ಲ. ಹೊರಗಿನವರು ಈ ನುಡಿಗೆ ಹೇಗೆ ಬೆಲೆ ಕೊಟ್ಟಾರು? ಇದು ಕನ್ನಡಮ್ಮನ ಕೊರಗು.

ಕನ್ನಡ ನಾಡಿನಲ್ಲಿ ಕನ್ನಡ ತಾಯಿಗೆ ಸಲ್ಲಬೇಕಾದ ಮನ್ನಣೆ ದೊರಕಿಸಿಕೊಡುವ ಸಲುವಾಗಿ ನಾಡಿನಲ್ಲೆಲ್ಲಾ ಚಳುವಳಿ ಹಬ್ಬಿಸುವುದಕ್ಕಾಗಿ ಒಂದು ದೊಡ್ಡ ಸಭೆ ಸೇರಿತ್ತು. ಭಾಷಣಗಳಾದವು ಕರ್ನಾಟಕ ಮಾತೆಗೆ ಜೈಕಾರಗಳು ಮುಗಿದವು. "ಗೆಲ್ ಕನ್ನಡ ತಾಯ್"ಎಂದು ಯಾರೋ ಕೂಗಿದರು. ಈ ಮಾತು ಯಾರ ಲಕ್ಷ್ಯಕ್ಕೂ ಬಾರದೆ ಮೂಲೆಗುಂಪಾಯಿತು. ಅವಳಿಗೆ ನಗು ಒಂದು ಕಡೆ; ಬೆರಗು ಮತ್ತೊಂದು ಕಡೆ. ಅವಳು ಅಲ್ಲಿಂದ ಹೊರಟು ಮಾತಿನ ಮೀರಾಮೇರಕ್ಕೆ ತನ್ನಲ್ಲೇ ನಕ್ಕಳು.

ರಾಜ ಬೀದಿಯ ಅಂಚು. ಕನ್ನಡಮ್ಮ ಒಂದು ಮರದಡಿಯಲ್ಲಿ ಕುಳಿತು ಒಡೆದ ಕನ್ನಡಿಯ ಚೂರನ್ನು ಕೂಡಿಸುತ್ತಿದ್ದಳು. ಅದರಲ್ಲಿ ತನ್ನ ಮುಖ ನೋಡಿಕೊಳ್ಳುವ ವ್ಯರ್ಥ ಸಾಹಸ ಅದು. ಯಾವ ಚೂರಿನಲ್ಲೂ ಮುಖ ಪೂರ್ತಿಯಾಗಿ ಕಾಣುತ್ತಿರಲಿಲ್ಲ: ಒಟ್ಟಿಗೆ ಕೂಡಿಸಿ ನೋಡಿದರೂ ಮುಖ ವಿಕಾರವಾಗಿ ಕಾಣುತ್ತಿತ್ತು. ಕರ್ನಾಟಕದ ಅಂದಿನ ಪರಿಸ್ಥಿತಿಗೂ ಇದು ಸಂಕೇತ. ನಾಡು ನುಡಿ ಅಂದು ಹರಿದು ಹಂಚಿಹೋಗಿತ್ತು. ಮದರಾಸು, ಬೊಂಬಾಯಿ, ನೈಜಾಮ ರಾಜ್ಯಗಳಲ್ಲೂ ಕೊಡಗು, ಮೈಸೂರು ಪ್ರದೇಶಗಳಲ್ಲೂ ಕನ್ನಡವು ಒಡೆದ ಕನ್ನಡಿಯಂತೆ ತುಂಡು ತುಂಡಾಗಿ ಬಿದ್ದಿತ್ತು. ತಮ್ಮ ಸ್ವಸ್ವರೂಪಜ್ಞಾನ ಅವರಿಗೆ ಅಂದು ಇರಲಿಲ್ಲ; ನೋಡುವ ಕನ್ನಡಿ ತುಂಡಾಗಿತ್ತು. ಜನ ಒಡೆದಿದ್ದರು: ಮನ ಒಡೆದಿತ್ತು. ಅದೊಂದು ಒಡೆದ ಕನ್ನಡಿಯಾಗಿತ್ತು. ಅದನ್ನು ಕೈಲಿ ತೆಗೆದು ಕೊಳ್ಳುತ್ತಾ ನಾಡ ದೇವಿ ನುಡಿದಳು – "ನನ್ನ ಮಕ್ಕಳು ತಮ್ಮ ಹೊಸ ನಲ್ ಬಾಳನ್ನು ನಾಡುನುಡಿಗನ್ನಡಿಯಲ್ಲಿ ಮತ್ತೆ ಕಾಣುವುದೆಂದೋ?"

ಕನ್ನಡಮ್ಮ ಹಂಬಲಿಸುತ್ತಿದ್ದ ಆದಿನ ಭಾರತ ಸ್ವಾತಂತ್ರ್ಯ ಪಡೆದ ಮರುಗಳಿಗೆಯಲ್ಲೂ ಬರಲಿಲ್ಲ. ಭಾಷಾತತ್ವದ ಆಧಾರದ ಮೇಲೆ ರಾಜ್ಯಗಳ ಪುನರ್ವಿಂಗಡಣೆಯ ಮಾತು ಗಾಂಧೀಜಿ ಒಪ್ಪಿಕೊಂಡಿದ್ದರೂ ಕಾಂಗ್ರೆಸ್ಸುಪಕ್ಷ ಒಪ್ಪಿಕೊಂಡಿದ್ದರೂ 1957ರ ವರೆಗೂ ಸುಮಾರು ಹತ್ತು ವರ್ಷಗಳ ಕಾಲ ಕಾಯಬೇಕಾಯಿತು. ಮುಂದೆ ಕನ್ನಡಮ್ಮನ ಬಹುದಿನದ ಕನಸು ಭೌಗೋಲಿಕವಾಗಿ ಕನ್ನಡ ನಾಡು ಒಂದಾಯಿತು. ಅದರ ಐತಿಹಾಸಿಕ ಹೆಸರು ಕರ್ನಾಟಕವೆಂದು ಉದ್ಘೋಷಿಸಲು ಒಂದು ದಶಕದ ಕಾಲ ಕಾಯಬೇಕಾಯಿತು. ಸ್ವಾತಂತ್ರ್ಯ ಪಡೆದ ಕಾಲು ಶತಮಾನವಾದ ಮೇಲೂ ಕನ್ನಡವು ರಾಜ್ಯಭಾಷೆಯಾಗಲಿಲ್ಲ, ಶಿಕ್ಷಣ ಮಾಧ್ಯಮವಾಗಲಿಲ್ಲ. ಕನ್ನಡಕ್ಕೆ ಕನ್ನಡನಾಡಿನಲ್ಲಿ ಅಗ್ರಮಾನ್ಯಸ್ಥಾನ ದೊರಕಿಸಿ ಕೊಡಲು ಹೋರಾಟ ನಡೆಸಬೇಕಾಯಿತು. ಗೋಕಾಕ್ ವರದಿಯ ಅನುಷ್ಠಾನಕ್ಕಾಗಿ, ಸಾಹಿತಿಗಳೂ ಕಲಾವಿದರೂ ಚಳುವಳಿ ಮಾಡಬೇಕಾಗಿ ಬಂದುದು ಕನ್ನಡಿಗರ ದುರ್ದೈವ. ಅಂದಿನ ಕನ್ನಡಮ್ಮನ ಕೊರಗು ಇಂದೂ ಮುನ್ನಡೆದಿದೆ.

೭

ಈ ಸಂಕಲನದಲ್ಲಿ ಕನ್ನಡಮ್ಮನ ಕೊರಗು ಬಿಟ್ಟರೆ ಪ್ರಮುಖಸ್ಥಾನ ಆಕ್ರಮಿಸಿ ಕೊಂಡಿರುವ ಲೇಖನಮಾಲೆ ಕವಿಯ ಬಾಳು. ಕವಿಯ ಬಾಳಿನ ಹಲವು ಪಟಲಗಳನ್ನು ಇಲ್ಲಿ ಎಂ. ವಿ. ಸೀ. ಅವರು ತೆರೆದು ನಮ್ಮ ಮುಂದೆ ಇರಿಸಿದ್ದಾರೆ. ಕವಿಯೂ ನಮ್ಮಂತೆ ಒಬ್ಬ ಮನುಷ್ಯ. ಅವನು ಭಾವಜೀವಿಯಾದರೆ ಸಾಲದು. ವಾಸ್ತವಾಂಶವನ್ನು ಅರಿತು ವ್ಯವಹಾರಕುಶಲನಾಗಿ ಬಾಳಬೇಕು. ಆಗ ಅವನು ಬದುಕಲು ಸಾಧ್ಯವೆಂಬ ನಿಷ್ಠುರ ಸತ್ಯವನ್ನು ಲೇಖಕರು ಈ ಲೇಖನಮಾಲೆಯಿಂದ ತಿಳಿಸುತ್ತಾರೆ. ಇಲ್ಲಿನ ಏಳು ನೋಟಗಳೂ ಕವಿಯ, ಸಾಹಿತಿಯ, ಕಲಾವಿದನ ಬಾಳಿನ ಏಳು ಬೀಳು ನೋಟಗಳೇ ಆಗಿವೆ.

ತಿಮ್ಮಪ್ಪಯ್ಯ ಕವಿಯಾಗಲು ಹಂಬಲಿಸಿದ ಒಬ್ಬ ಯುವಕ. ಗೆಳೆಯರ ಸಲಹೆಯಂತೆ ತಾರಾರಮಣನೆಂಬ ಕಾವ್ಯ ನಾಮದಿಂದ ಪ್ರಸಿದ್ಧಿಗೆ ಬಂದನು. ಆದರೆ ಕವಿತೆ ಬರೆದು ಬದುಕಲು ಸಾಧ್ಯವೆ? ಎಲ್ಲರೂ ಕಥೆ ಕಾದಂಬರಿಗಳನ್ನು ಬಯಸುವವರೇ. ಬೇಡಿಕೆ, ಪೇಟೆ, ಓದುಗರು ಇರುವುದು ಅವುಗಳಿಗೆಮಾತ್ರ. ಹಕ್ಕಿಯು ತನಗಾಗಿ ಹಾಡಿಕೊಳ್ಳುವಂತೆ ಕವಿಯೂ ಆತ್ಮ ಸಂತೋಷಕ್ಕೆಂದು ಕಾವ್ಯ ಬರೆಯುವನು. ವಸ್ತುಸ್ಥಿತಿಯನ್ನು ಒಪ್ಪಿ ಅವನು ಒಂದೆಡೆ ಕಾರಕೂನನಾಗಿ ಕೆಲಸಕ್ಕೆ ಸೇರಬೇಕಾಯಿತು. ಪ್ರಕಾಶಕರು ಮಾರಾಟಗೊಳ್ಳಬಲ್ಲ ಸಾಹಿತ್ಯ ಬೇಡಿದರೆ, ಸಾಹಿತ್ಯ ಪ್ರೇಮಿ ಶಿವಶಂಕರ ರಾಯರು, ಕವಿಯ ಭೆಟ್ಟಿಗೆಂದು ಅವನ ಮನೆಗೆ ಬಂದವರು—ಅಡಿಗೆ ಭಟ್ಟನ ವೇಷದಲ್ಲಿದ್ದ ಕವಿಯನ್ನು ನೋಡಿ ಅಭಿಮಾನ ಶೂನ್ಯರಾಗಿ ಹಿಂತಿರುಗಿದರು! ಸುಪ್ರಸಿದ್ಧ ಕವಿ ಕಮಲಾ ಕಾಂತರು ಹೊರಗೆ ಸಮಾಜವಾದ ಬಡತನದ ನಿರ್ಮೂಲದ ಮಾತಾಡಿ ಮನೆಯಲ್ಲಿ ವೈಭವದ ಜೀವನ ನಡೆಸುವರು. ಇನ್ನೊಬ್ಬ ಸಾಹಿತಿ ಸಂಜೀವಯ್ಯ ಕವಿಗಳ ಮಾತಿಗೂ ಕೃತಿಗೂ ಇರುವ ವ್ಯತ್ಯಾಸವನ್ನು ಗುರುತಿಸಿ, ಮನಸ್ತ್ರಕನಾದ. "ಕನ್ನಡ ನಾಡಿನಲ್ಲಿ ಸದ್ಯಕ್ಕೆ ಪಿತ್ರಾರ್ಜಿತ ಆಸ್ತಿ, ಹೆಂಡತಿ ಕಡೆಯ ಆಸ್ತಿ, ಭಾರಿ ನೌಕರಿ. ಯಾವುದೂ ಇಲ್ಲದ ಕವಿಯ ಬಾಳು ಬರಿಯಗೋಳು" ಎಂಬ ಸತ್ಯ ಅವನಿಗೆ ಅರಿವಾಗಿತ್ತು. ಈ ಮಾತು ಇಂದಿಗೂ ಸತ್ಯವೆಂದರೆ ಯಾರೂ ಆಶ್ಚರ್ಯ ಪಡಬೇಕಾಗಿಲ್ಲ!

ನಮ್ಮ ಸಮಾಜದಲ್ಲಿ ಗಣ್ಯರೆನಿಸಿಕೊಂಡವರ 'ನಾಯಿತನ' ನಾಯಿಗಳಿವೆ ಎಚ್ಚರಿಕೆಯಲ್ಲಿ ಮಾರ್ಮಿಕವಾಗಿ ಚಿತ್ರಿಸಲ್ಪಟ್ಟಿದೆ, ವಜ್ರದೇಹಿ ವಿಧಿವಿಲಾಸದ ಕರುಣ ಕಥೆಯಾಗಿದೆ. ಜಿ. ಪಿ. ರಾಜರತ್ನಂ ಅವರ ಹನಿಗಳನ್ನು ನೆನೆಪಿಗೆ ತರುವ ಭಾವಪೂರ್ಣ ಗದ್ಯ ರಚನೆಗಳು ಹೂತೋಟದಲ್ಲಿ ಮತ್ತು ಕಿರುಹಕ್ಕಿಯ ಹಾಡು. ಯುಗಯುಗಗಳಲ್ಲಿ ದುಷ್ಟಶಕ್ತಿ ಹಾಗೂ ಶಿಷ್ಟ ಶಕ್ತಿಗಳ ನಡುವೆ, ಮೇಲು ಕೀಳುಗಳ ನಡುವೆ ವರ್ಗವರ್ಗಗಳ ನಡೆದುಬಂದಿರುವ ಹೋರಾಟ ಸಂಗ್ರಾಮದ ವಸ್ತು.

ಹೀಗೆ ಹಿಡಿಹೂವು ಚಿರಂತನ ಸಾಹಿತ್ಯ ಮೌಲ್ಯಗಳಿಂದ ಕೂಡಿದ್ದು ಎಂ.ವಿ.ಸೀ. ಸಾಹಿತ್ಯದಲ್ಲಿ ಎದ್ದುನಿಲ್ಲುವ ಕೃತಿಯಾಗಿದೆ.

ಎಂ. ವಿ. ಸೀ. ಅವರ ಅಪ್ರಕಟಿತ ಬರಹಗಳು

ವಿ. ವೆಂಕಟರಾವ್

ಶ್ರೀ ಎಂ.ವಿ. ಸೀತಾರಾಮಯ್ಯನವರ ಅಪ್ರಕಟಿತ ಬರಹಗಳಲ್ಲಿ ಒಂದಾದ 'ಕಾವ್ಯಾಲಾಪ' ಡಿ.ವಿ.ಜಿ.ಯವರ ಮಂಕುತಿಮ್ಮನ ಕಗ್ಗವನ್ನು ನೆನಪಿಗೆ ತಂದರೂ ಅದನ್ನು ಅನುಕರಿಸಿ ಬರೆದುದಲ್ಲ. 'ಕಗ್ಗ' ಪ್ರಕಟವಾಗುವ ಮುನ್ನವೇ ಇದು ಹೊರ ಬಂದಿದೆ. ಪದ್ಯಬಂಧದಲ್ಲೂ ಇದು ಭಿನ್ನ. 'ಕಗ್ಗ'ದಂತೆ ಇದು ಯಾವುದೇ ಮುದ್ರಿಕೆಯನ್ನು ಹೊಂದಿಲ್ಲ. ಈ ಪದ್ಯಗುಚ್ಛದ 46 ಪದ್ಯಗಳು **ಕವಿಮಿತ್ರ** ಎಂಬ ಕಾವ್ಯನಾಮದಿಂದ 1944ರಲ್ಲಿ ಒಂದು ಕಿರುಹೊತ್ತಿಗೆಯಾಗಿ ಪ್ರಕಟವಾಯಿತು. ಪ್ರಗತಿಶೀಲ ಚಳುವಳಿ ಬಿರುಸಾಗಿದ್ದ ಕಾಲದಲ್ಲಿ ಅದರ ಧ್ಯೇಯಧೋರಣೆಗಳನ್ನು ವಿಡಂಬಿಸಿ ಬರೆದ ಪದ್ಯಗುಚ್ಛವಾದರೂ ಕಾವ್ಯಮೀಮಾಂಸೆಯ ಕೆಲವು ತತ್ವಗಳನ್ನು ಪದ್ಯದಾಟಿಯಲ್ಲಿ ಪ್ರತಿಪಾದಿಸುವುದರಿಂದ ಸಾರ್ವಕಾಲಿಕ ಮೌಲ್ಯವುಳ್ಳವಾಗಿವೆ. ಆದರೂ ತತ್ಕಾಲದ ಸಮಸ್ಯೆಯನ್ನು ಗಮನದಲ್ಲಿರಿಸಿಕೊಂಡು ಬರೆದವಾದ್ದರಿಂದ ಕೆಲವಂಶದಲ್ಲಿ Polemic ಆಗಿ ಉಳಿಯುತ್ತದೆ: ಅಷ್ಟರಮಟ್ಟಿಗೆ ಇದರ ಬೆಲೆ ಕುಗ್ಗುತ್ತದೆ.

ಆದರೆ ಕಾವ್ಯಾಲಾಪಕ್ಕೆ ಸೇರಿಕೊಂಡು ಅದನ್ನು ಸುಮಾರು 300 ಪದ್ಯಗಳ ಪ್ರಮಾಣಕ್ಕೆ ಏರಿಸಿರುವ ಈಚಿನ ಪದ್ಯಗಳು ಖಂಡನಮಂಡನ ವ್ಯೂಹದಿಂದ ಹೊರಬಂದು ವಿಷಯದ ದೃಷ್ಟಿಯಿಂದ ವಿಶಾಲವಾದ ಹರವನ್ನು ಪಡೆದುಕೊಂಡಿದೆ. ಸಂಖ್ಯಾದೃಷ್ಟಿಯಿಂದ ನೋಡಿದಾಗ, ಸುಮಾರು ನಾಲ್ಕು ದಶಕಗಳ ದೀರ್ಘಕಾಲಾವಧಿಯಲ್ಲಿ ಬರೆದವಾದರೂ, ರಚನೆಯ ಪ್ರಮಾಣ ಅಲ್ಪವೆನ್ನಬೇಕು. ಸಂಖ್ಯೆಯನ್ನು ಬೆಳೆಸುವ ದೃಷ್ಟಿ ಕವಿಗೆ ಇಲ್ಲ. ಒಂದುಭಾವ ಹೊಳೆದಾಗ ಅದನ್ನು ಒಂದು ಪದ್ಯದಲ್ಲಿ ಸೆರೆಹಿಡಿದಿದ್ದಾರೆ ಎನಿಸುತ್ತದೆ. ಇದರಿಂದ ಪ್ರತಿಯೊಂದು ಪದ್ಯವೂ ಒಂದಲ್ಲ ಒಂದು ರೀತಿಯಲ್ಲಿ ಗಮನಾರ್ಹವೆನಿಸುತ್ತದೆ. ಸರಳವಾಗಿ ಓದಿಸಿಕೊಂಡು ಹೋಗುವ ಈ ಪದ್ಯಗಳಲ್ಲಿ ಅಂತ್ಯಪ್ರಾಸದ ನಿಯಮವನ್ನು ಕಟ್ಟುನಿಟ್ಟಾಗಿ ಪಾಲಿಸಲಾಗಿದೆ. ಇದರಿಂದಾಗಿ ಕಾವ್ಯಗುಣವೇನೂ ಕಮ್ಮಿಯಾಗಿಲ್ಲ. ಈ ಮಾತನ್ನು ನಾನು ಯಾಕೆ ಹೇಳಿದೆನೆಂದರೆ ಕೆಲವು ಕವಿಗಳು ಛಂದಸ್ಸಿನ ನಿಯಮವನ್ನು ಚಾಚೂತಪ್ಪದೆ ಅನುಸರಿಸಿ ಕಾವ್ಯಗುಣಕ್ಕೆ ಮಸಿ ಬಳಿದಿದ್ದಾರೆ. ಆದರೆ 'ರಾಘವ'ರಲ್ಲಿ ಈ ದೋಷ ದೂರವಾಗಿದೆ. ಅವರು ತಮ್ಮ ಕಾವ್ಯಗಳಲ್ಲಿ ಛಂದಸ್ಸಿನ ನಿಯಮಗಳನ್ನು ಅನುಸರಿಸಿದರೂ ಕಾವ್ಯಗುಣ ಮಿಗಿಲಾಗುವಂತೆ ಎಚ್ಚರವಹಿಸುತ್ತಾರೆ. ಇದು 'ರಾಘವ'ರ ವೈಶಿಷ್ಟ್ಯ. ಸಂಪ್ರದಾಯದಲ್ಲಿ

ನಂಬಿಕೆಯುಳ್ಳ ಕವಿಗೆ ಕಾವ್ಯರಚನೆ ಮಂಗಳಕಾರ್ಯ, ಆದಕ್ಕೆ ದೈವಕೃಪೆ ಬೇಕು ಕಾವ್ಯ ರಚಿಸಬಯಸುವವರಿಗೆ ಕವಿ "ಕಾವ್ಯದೇವಿಯ ಮುಂದೆ ಕಯ್ಯ ಜೋಡಿಸಿ ನಿಂತು ನಾ ಬಡವನೆಂದು ನೀ ಬೇಡಿಕೊಳ್ಳೊ" ಎಂದು ಕಿವಿಮಾತು ಹೇಳುತ್ತಾರೆ. ಆಕೆ ಒಲಿದರೆ ಸರಿ. ಇಲ್ಲದಿದ್ದಲ್ಲಿ ಪರರ ಕೃತಿಗಳನ್ನು ಕದ್ದು ತನ್ನದೆಂದು ಹೇಳಿಕೊಳ್ಳುವ ಹೀನ ಪ್ರವೃತ್ತಿ ಖಂಡಿತಾ ಬೇಡವೆಂದು ಬುದ್ಧಿವಾದ ಹೇಳುತ್ತಾರೆ. ಲೇಖಕರೆಂದು ಕರೆಸಿಕೊಂಡು ಸುಲಭವಾಗಿ ಹಣ, ಕೀರ್ತಿಗಳನ್ನು ಗಳಿಸಬೇಕೆಂಬ ಇಂದಿನ ಬಹುತೇಕ ಮಂದಿಗೆ ಈ ಮಾತುಗಳು ಎಚ್ಚರಿಕೆಯ ನುಡಿಗಳಾಗಿವೆ.

ಜಗತ್ತಿನಲ್ಲಿ ಹೊಗಳಿಕೆಗೆ ಮರುಳಾಗದವರಾರು? ಕವಿಗಳಿಗೆ ಅದು ನಿತ್ಯದ ಆಹಾರ, ಉಳಿದವರಿಗೆ ಕೊರಲ ಪೂಹಾರ. ಹೊಗಳಿಕೆಯಿಂದ ಈ ಬಾಳು 'ಸುಮನೋಹರ' ವೆಂದು ಕವಿ ಭಾವಿಸಿದರೂ ಹೊಗಳಿಕೆಗೆ ಮರುಳಾಗಬಾರದೆನ್ನುತ್ತಾರೆ. ಅಂತೆಯೇ ತೆಗಳಿಕೆಗೂ ಕುಗ್ಗಬಾರದು. ಅಪ್ರಿಯವಾದ ಸತ್ಯವನ್ನು ನುಡಿಯುವವರನ್ನು ಕವಿ ದ್ವೇಷಿಸುತ್ತಾರೆ.

ನುಡಿಗಿಂತ ನಡೆಗೆ ಪ್ರಾಮುಖ್ಯ ಕೊಡಬೇಕೆಂಬುದು ಕವಿಯ ನಿಲುವು. 'ಪಲ್ಲ ನುಡಿಗಿಂತ ಪಾವಾಚರಣೆ ಮೇಲು' ಎನ್ನುವ ಕವಿಯ ದೃಷ್ಟಿಯಲ್ಲಿ ನುಡಿದಂತೆ ನಡೆಯದವ ಅಪ್ರಾಮಾಣಿಕ. ಸಾಗರದಷ್ಟು ಮಾತಾಡುವವನು ಸಾಸಿವೆಯಷ್ಟಾದರೂ ಕಾರ್ಯ ಸಾಧಿಸಬೇಕು.

ಕಾವ್ಯರಚಿಸುವವನ ನಡತೆ ಚೆನ್ನಾಗಿರಬೇಕು. ಒಳ್ಳೆಯ ನಡತೆ ಇಲ್ಲದವರಿಂದ ಒಳ್ಳೆಯ ಕಾವ್ಯ ಮೂಡಿಬರುವುದಿಲ್ಲವೆಂದು ಕವಿಯ ಅಭಿಪ್ರಾಯ. ಆದರೆ ಇದು ಚರ್ಚಾಸ್ಪದ. ಇಂದು ಹೆಸರು ಗಳಿಸಿರುವ ಅನೇಕ ಸಾಹಿತಿಗಳ, ಸಂಗೀತಗಾರರ ಆಂತರಿಕ ಬದುಕನ್ನು ಗಮನಿಸಿದಲ್ಲಿ ಈ ಅಭಿಪ್ರಾಯ ಪೂರ್ಣಸತ್ಯವಲ್ಲವೆಂದು ಸ್ಪಷ್ಟವಾಗುತ್ತದೆ. ಕವಿಯ ದೃಷ್ಟಿಯಲ್ಲಿ ಒಳ್ಳೆಯ ಕಾವ್ಯ ಎಂದರೆ ಸತ್ಪ್ರೇರಣಾವ ಬೀರುವ ಕಾವ್ಯವೆಂದು ಇರಬಹುದು.

ಹಾಡಿನಲ್ಲಿ ಮಂತ್ರಶಕ್ತಿ ಅಡಗಿದೆ ಎಂದು ಕವಿ ನಂಬುತ್ತಾರೆ. ದೈವ ಸಾಕ್ಷಾತ್ಕಾರಕ್ಕೆ ಹಾಡು ಹೂವಿನ ಸೋಪಾನ. ಹಾಡು ಕಟ್ಟಬಲ್ಲವ ನಾಡು ಕಟ್ಟಬಲ್ಲ. ಪುರಂದರದಾಸರು, ಕನಕದಾಸರು, ಸರ್ವಜ್ಞ ಮುಂತಾದ ಸಂತಕವಿಗಳು ಹಾಡಿನಿಂದಲೆ ಪರಮಾತ್ಮನ ಸ್ವರೂಪವನ್ನು ಕಂಡುಕೊಂಡರಲ್ಲದೆ ಕನ್ನಡದ ತಿರುಳನ್ನು ಹಾಡುಗಳಲ್ಲಿ ಅಡಗಿಸಿದರು. ಬಂಕಿಮ ಚಂದ್ರರ 'ವಂದೇ ಮಾತರಂ' ಹಾಡು ದಾಸ್ಯದಲ್ಲಿದ್ದ ಭಾರತದ ವಿಮೋಚನೆಯ ಹೋರಾಟಕ್ಕೆ ನಾಂದಿಯಾಯಿತು. ಆದ್ದರಿಂದ ಇಹ ಪರ ಸಾಧನೆಗಳಿಗೆ ಹಾಡು ಮುಖ್ಯ ಎಂದು ಕವಿಯ ಭಾವನೆ. ಈಭಾವನೆಯಿಂದ ಪ್ರೇರಿತರಾದವರು ಕವಿಯ ಹಾಡಿಗೆ ಇಂದಲ್ಲ ನಾಳೆ ಬೆಲೆ ಬಂದೇ ಬರುವುದೆಂದು ನಂಬುತಾಳದಗೆ

ಹಿರಿತನ ಪ್ರಾಪ್ತವಾಗುವುದು ವಯಸ್ಸಿನಿಂದಲ್ಲ. ನಡತೆಯಿಂದ. ಮನುಷ್ಯನಿಗೆ ಮುಖ್ಯ ಆಭರಣ ಗುಣ. ಹಿರಿಯನಾಗಲಿ, ಕಿರಿಯನಾಗಲಿ ಸತ್ಕಾರ್ಯ ಮಾಡಿದವನೇ ಪರಮ ಪೂಜ್ಯ. ಈ ಪೂಜ್ಯತೆಯನ್ನು ಎಲ್ಲರೂ ಪಡೆಯಲೆಂದು ಕವಿಯ ಆಶಯ.

ಮುಂದೆ ಬರುವುದನ್ನು ಈಗಲೇ ತಿಳಿಯುವ ತವಕ ಕೆಲವರಿಗೆ ಅದಕ್ಕಾಗಿ ನಾನಾ ಜನರೊಡನೆ ಸಂಪರ್ಕ. ಯಂತ್ರ ಮಂತ್ರಗಳ ಸಾಧನೆ. ಫಲ ಕಾಣದಿದ್ದಾಗ ನಿರಾಶೆ. ಇದೆಲ್ಲಾ ಮೂಢರ ಪರಿ. ಭವಿಷ್ಯದ ತೆರೆಯ ಹಿಂದೆ ಏನಾದರೂ ಅಡಗಿರಲಿ. ಅದರ ಚಿಂತೆಬಿಟ್ಟು ಅಂದಂದು ಬರುವ ಕಹಿಸಿಹಿಗಳನ್ನುಂಡು ಬದುಕುವುದು ಒಳ್ಳೆಯ ಮಾರ್ಗ.

ಬುವಿಯ ಬದುಕಿನ ಬಗ್ಗೆ ಕವಿ ಸರಳವಾಗಿ, ಸುಂದರವಾಗಿ ಬರೆದಿದ್ದಾರೆ. ಬಾಳು ಕಬ್ಬಿನ ಕೋಲು. ಬಾಳಿನ ಸವಿಯ ಸೊಗಸನ್ನು ಅರಿಯಬೇಕಾದರೆ ಸ್ವಲ್ಪ ಕಷ್ಟ ಪಡಬೇಕು. ಬಾಳೆಂಬ ಕಬ್ಬಿನಲ್ಲಿ ದುಃಖ, ನಿರಾಶೆ ಇತ್ಯಾದಿ ಸಿಪ್ಪೆ, ಕಸಗಳಿರುತ್ತವೆ. ಅವನ್ನೆಲ್ಲ ದೂರಸರಿಸಿ 'ಸಂತೃಪ್ತಿ' ರಸವನ್ನು ಹೀರಬೇಕು. ಪಲಾಯನ ವಾದ ಕೂಡದು. ಇದರಿಂದ ಬಾಳಿನಲ್ಲಿ ಸೊಗಸು ಮೂಡುತ್ತದೆ. ಆಸಕ್ತಿ ಕೆರಳುತ್ತದೆ. ನಿಷ್ಠೆ, ಪ್ರಾಮಾಣಿಕತೆ, ಸತ್ಯಗಳನ್ನು ಬದುಕಿನಲ್ಲಿ ಮೈಗೂಡಿಸಿಕೊಳ್ಳಬೇಕು. ಈ ಬಾಳಿನಲ್ಲಿ ನಮ್ಮ ಪಾತ್ರವೇನೆಂಬುದನ್ನು ಕವಿವಾಣಿಯಲ್ಲೇ ಕೇಳಿ.

ಬಾಳಿನುದ್ಯಾನದಲಿ ತೋಟಗಾರರು ನಾವು :
ಬೆಳೆದುಂಬ ಭಾಗ್ಯವದು ಒಡೆಯನಿಚ್ಛೆ ;
ಕೇಳದೆಯೆ ಕೊಡುವನವ, ನಮ್ಮ ದುಡಿಮೆಯ ನಿಷ್ಠೆ
ಅವನಿಗೊಪ್ಪಿತವಾಗೆ ; ಬೇಕಿಲ್ಲ ಭಿಕ್ಷೆ.

ಸೃಷ್ಟಿ, ಸ್ಥಿತಿ, ಲಯಗಳ ವಿಚಾರವನ್ನು ಸರಳವಾಗಿ ಆದರೆ ಕಾವ್ಯಮಯವಾಗಿ ಹೇಳಿದ್ದಾರೆ. ಜಗತ್ತಿನಲ್ಲಿ ಯಾವುದೂ ಸ್ಥಿರವಲ್ಲ, ಯಾವುದೂ ಅಸ್ಥಿರವಲ್ಲ. ಸ್ಥಿರ, ಅಸ್ಥಿರದ ಚಲನೆಯೆ ಸೃಷ್ಟಿಕಾರ್ಯ. ಸಾವಿನಲ್ಲಿ ಹುಟ್ಟಡಗಿದೆ. ಹುಟ್ಟು ಸಾವನ್ನು ಮುಟ್ಟುತ್ತವೆ. ಹೀಗೆ ಕಾಲಚಕ್ರ ಉರುಳುತ್ತಿದೆ. "ಕಣ್ಣು ಕಾಣುತಿಹ ಈ ಚೋದ್ಯ ಘಟನೆಯ ಹಿಂದೆ ಕಣ್ಣಾಗಿ ಕರೆಯುತಿದೆ ಕೊನೆಯ ತತ್ವ".

ಲೌಕಿಕ ವ್ಯವಹಾರದ ಬಗ್ಗೆ ಕೆಲವು ಪದ್ಯಗಳಿವೆ. ಇವು ಉತ್ತಮ ಬದುಕನ್ನು ನಡೆಸಬಯಸುವವರಿಗೆ ಹಿತನುಡಿಗಳಾಗುತ್ತವೆ. ತಂದೆ ಮಗನನ್ನು ಶಿಕ್ಷಿಸುತ್ತಾನೆ. ಆ ಶಿಕ್ಷೆಯ ಹಿಂದೆ ಶುಭದ ಹಾರೈಕೆ ಇರುತ್ತದೆ. ಅಂತೆಯೆ ದೈವ ನರರನ್ನು ಶಿಕ್ಷಿಸಿದಲ್ಲಿ ಅದೂ ಶುಭದ ಹಾರೈಕೆಯ ಸಂಕೇತವೆಂದು ಕವಿಯ ಭಾವನೆ. ನಿಷ್ಠುರದ ನುಡಿಗಳಲ್ಲಿ ಪ್ರೀತಿ ಅಡಗಿರುತ್ತದೆ. ಹಿತವೆಂದು ತೋರುವ ಮಾತುಗಳ ಹಿಂದೆ ವಿಷವಿರುತ್ತದೆ. ಈ ಬಗ್ಗೆ ಮಾನವ ಎಚ್ಚರವಹಿಸ ಬೇಕು.

ಈ ಕೆಳಗಿನ ಪದ್ಯದಲ್ಲಿ ಮನುಷ್ಯ ಸ್ವಭಾವದ ಸ್ವಾರಸ್ಯಕರ ವರ್ಣನೆಯಿದೆ:

ನಿನ್ನ ಕೈಯಲಿ ಕರಡಿ ನಿನ್ನ ಮೆಯ್ಯಲಿ ಹುಲಿ
ಮನದಲ್ಲಿ ಮರ-ಕುಣಿವ ಮುದಿ ಮರ್ಕಟ
ನಿನ್ನುದರದಲಿ ತೋಳ ಎದೆಯಲ್ಲಿ ರಣಹದ್ದು
ನೆಲಸಿರಲು ನೀ ಮನುಜನೆಂತೊ, ಅಕಟ.

ಕೆಲವರಿಗೆ 'ಕರ್ಮ' ಮಾಡಿದ ಕೂಡಲೆ ಫಲದ ಮೇಲೆ ಆಸೆ. ಅಂಥಹವರಿಗೆ ಇಲ್ಲಿ ಹಿತೋಕ್ತಿ ಇದೆ. ಬೀಜ ಬಿತ್ತಿದ ತಕ್ಷಣ ನೆಲವನ್ನು ಕೆದಕಿದಲ್ಲಿ ಮೊಳಕೆ ಕಾಣದು. ಮೊಳಕೆ ಮೇಲೆರಲು ಕಾಯಬೇಕು. ಬೀಜ ಬಿತ್ತಿದಮೇಲೆ ಪಾತಿ ಕಟ್ಟಿ ನೀರೆರೆಯಬೇಕು ಇದರಂತೆ ಫಲದ ಆಶೆ ತ್ಯಜಿಸಿ ನಮ್ಮ ಕೆಲಸಗಳನ್ನು ನಾವು ಶ್ರದ್ಧೆಯಿಂದ ಮಾಡಬೇಕು. ಹೀಗೆ ಮಾಡುವುದರಿಂದ ಇಂದಲ್ಲ ನಾಳೆ ಫಲ ದೊರೆಯುತ್ತದೆ.

ಕವಿ ಕರ್ಮದ ಮರ್ಮವು ಕಾವ್ಯಮಯವಾಗಿ ಹಲವಾರು ಪದ್ಯಗಳಲ್ಲಿ ಮೂಡಿದೆ ರವಿ ಕಾಣದ್ದನ್ನು ಕವಿ ಕಾಣುತ್ತಾನೆ, ಕವಿ ಕುರುಡನಾದರೂ ಅವನ ಒಳಗಣ್ಣು ಅಗೋಚರ ದೃಶ್ಯಗಳನ್ನು ಕಾಣುತ್ತದೆ. ಸ್ವರ್ಗಲೋಕದ ಕಥೆಯಾಗಲಿ, ನರಕಲೋಕದ ವ್ಯಥೆಯಾಗಲಿ, ಮನುಜಲೋಕದ ಕೋಟಿ ಕೋಟಿ ಸಂಗತಿಗಳೇ ಇರಲಿ ಕವಿ ಕಾಣಬಲ್ಲನು. ಭೂತ, ಭವಿಷ್ಯತ್, ವರ್ತಮಾನಗಳನ್ನು ಕಾಣುವ ಕವಿಯ ದರ್ಶನಕ್ಕೆ ಯಾವುದು ಸಾಟಿ? ಈ ಬಗ್ಗೆ ಇಲ್ಲಿನ ಒಂದು ಪದ್ಯವನ್ನು ಉಲ್ಲೇಖಿಸಬಹುದು.

ಹೃದಯಸಾಗರದಲ್ಲಿ ಚಿಂತನದ ಚಿಪ್ಪಿನಲಿ
ಭಾವವಾವಿರ್ಭವಿಸಿ ನವ ಮೌಕ್ತಿಕ
ಉದಯ ವಾಗಿರಲವನು ತುಂಬಿ ಮೇಲಕೆ ತಹನು
ನುಡಿಯ ಕಿರುನಾವೆಯಲಿ ಕವಿನಾವಿಕ

ಕಾವ್ಯದಲ್ಲಿ ದೋಷಗಳನ್ನು ಅಷ್ಟಾಗಿ ಗಮನಿಸದೆ ಗುಣಕ್ಕೆ ಗಣನೀಯ ಪ್ರಮಾಣದ ಗಮನ ಕೊಡಬೇಕು. ತೋಚಿದ್ದನ್ನು ಗೀಚಿದವೆಲ್ಲ ಪದ್ಯಗಳಲ್ಲ. ಪದ್ಯಗಳನ್ನು ಬರೆದವರೆಲ್ಲಾ ಕವಿಗಳಲ್ಲ. ಸತ್ವಪೂರ್ಣ ಕಾವ್ಯರಚಿಸುವವನೇ ನಿಜವಾದ ಕವಿ. ಬೆಳಗು, ಬೈಗುಗಳನ್ನು ವರ್ಣಿಸುವ ಕವಿಗಳೇ ಉರಿ ಬಿಸಿಲನ್ನೂ ಬಣ್ಣಿಸುತ್ತಾರೆ. ಆದರೆ ಕವಿ ಬಣ್ಣನೆಯ ಬಿಸಿಲು ಓದುಗನನ್ನು ಬೇಯಿಸದು, ಬಾಯಾರಿಸದು. ಕವಿ ಸೃಷ್ಟಿಯ ಬಿಸಿಲು ಬೆಳದಿಂಗಳಿನಂತೆ ಓದುಗನಿಗೆ ಹಿತವಾಗಿರಬೇಕು. ಇದು ನಿಜವಾದ ಕಾವ್ಯ. ನವ್ಯ, ಭವ್ಯವೆಂಬ ಭೇದವಲ್ಲ. ನೈಜಕಾವ್ಯ ನಿತ್ಯನವ್ಯ. ಇಂದಿನ ಸಮಾಜದಲ್ಲಿನ ಲೇಖಕನ ಸ್ಥಿತಿಗೆ ಈ ಕೆಳಗಿನ ಪದ್ಯಗಳು ಕನ್ನಡಿ ಹಿಡಿಯುತ್ತವೆ:

ಪುಸ್ತಕವ ಬರೆದದನು ಅಚ್ಚು ಹಾಕಿಸಿ ಪರರ
ಹಸ್ತಕ್ಕೊಪ್ಪಿಸಿ, ಹಲವ ಗೆಳೆಯರಿಗೆ ಹಂಚಿ,

ಸುಸ್ತಿ ಬಡ್ಡಿಯ ಸಹಿತ ಸಾಲವನು ತೀರಿಸಿಯೆ
ಸುಸ್ತು ಬೀಳುವನವನು ಲೇಖಕ-ವಿರಿಂಚಿ!
ಕರೆದು ಹಸುವನು ಹಿಂಡಿ ತೋರಿ ಕರುವಿಗೆ ಮೊಲೆಯ
ಹೊಟ್ಟೆ ತುಂಬಿಸಿಕೊಳುವ ಗೋಪಾಲಕ;
ಕರೆದು ವರ ಸಾಹಿತಿಗಳನ್ನಿತ್ತು ಪುಡಿಗಾಸು
ಥೈಲಿಗಳನೆಣಿಸುವನು ಗ್ರಂಥ ಪ್ರಕಾಶಕ.

ಕಾವ್ಯಾಲಾಪದಲ್ಲಿ ಪದ್ಯಗಳನ್ನು ಕವಿಯೇ ವರ್ಗೀಕರಿಸಿದ್ದಾರೆ. ಹಿಂದು-ಇಂದು ಭವಿಷ್ಯ, ಬಾಳು, ತತ್ವ, ನೀತಿ, ನಿಸರ್ಗ ಇತ್ಯಾದಿ ಶೀರ್ಷಿಕೆಗಳಡಿಯಲ್ಲಿನ ಹಲವಾರು ಪದ್ಯಗಳನ್ನು ಪರಿಚಯ ಮಾಡಿಕೊಟ್ಟಿದ್ದೇನೆ. ಒಂದು ವಿಷಯದ ಬಗ್ಗೆ ಒಂದೇ ಪದ್ಯ ಬರೆದ ಪ್ರಸಂಗಗಳೂ ಉಂಟು. ಕಾವ್ಯ ಸೃಷ್ಟಿಯನ್ನು ಕುರಿತು ಬರೆದ ಪದ್ಯವಿದು

ಕಾವ್ಯ ಸೃಷ್ಟಿಯೆನ್ನಲೇನು
ತನ್ನ ತಾನೇ ಕೊಡುವುದು
ಅಕ್ಷರ ನಿರ್ವಯಲಿನಲ್ಲಿ
ತನ್ನ ಮುದ್ರೆ ಬಿಡುವುದು.

ಮೇಲಾಧಿಕಾರಿಗಳಲ್ಲಿ ವರ್ತನೆ ಹೇಗಿದ್ದರೆ ಕೈಕೆಳಗಿನವರು 'ಬಚಾವು' ಆಗುತ್ತಾರೆಂಬುದರ ವರ್ಣನೆ ಈ ಪದ್ಯದಲ್ಲಿದೆ.

ಮಾಡು ಕಂಡಾಗ ಕಂಡಲ್ಲಿ ಅಧಿಕಾರಿಗೆ
ಸೊಂಟ ಬಗ್ಗಿಸಿ ಮೂರು ಸಲ ಸಲಾಮು
ನಿನ್ನ ತಪ್ಪುಗಳೆಷ್ಟೊ ಬಲ್ಲೆಯಾ ನೀನು? ಅವನ
ಕೋಪಶಮನಕ್ಕದೇ ಒಳ್ಳೆಯ ಮುಲಾಮು.

ಒಟ್ಟಿನಲ್ಲಿ ಹೇಳುವುದಾದರೆ ಕಾವ್ಯಾಲಾಪದಲ್ಲಿನ ಪದ್ಯಗಳು ಓದುಗನ "ಹೃದಯಕ್ಕೆ ಹಿತಕಾರಿಯಾಗಿವೆ. ಮನಕ್ಕೆ ಮುದ್ದಾಗಿವೆ." ಕಾವ್ಯದ ಹೆಸರಿನಲ್ಲಿ ಎಷ್ಟೋ ಜಳ್ಳು ಕೃತಿಗಳು ಪ್ರಕಟವಾಗಿ, ಕೆಲವೊಮ್ಮೆ ಪಠ್ಯಪುಸ್ತಕಗಳಾಗಿ ಮೆರೆಯುವ ಈ ಕಾಲದಲ್ಲಿ 'ಕಾವ್ಯಾಲಾಪ'ದಂಥ ಸತ್ವಯುತ ಕೃತಿಗಳು ಇನ್ನೂ ಅಜ್ಞಾತದಲ್ಲಿರುವುದು ನಮ್ಮನಾಡಿನ ಉತ್ತಮ ಲೇಖಕರ ಸ್ಥಿತಿಗತಿಯನ್ನು ನಿರ್ದೇಶಿಸುತ್ತದೆ.

ಶ್ರೀ ಎಂ. ವಿ. ಸೀ. ಯವರ ಮತ್ತೊಂದು ಅಪ್ರಕಟಿತ ಕವಿತೆ 'ಪುರಾತನ ನಾವಿಕ' ಇದು ಕೋಲ್‌ರಿಜ್ ಕವಿಯ Ancient Mariner ಕಥನ ಕವನದ ಭಾವಾನುವಾದ. ನಾವಿಕನೊಬ್ಬ ತನ್ನ ಹಡಗಿಗೆ ಹಾರಿ ಬಂದ ಮುಗ್ಧ ಹಕ್ಕಿಯೊಂದನ್ನು ನಿಷ್ಕಾರಣ ಕೊಲ್ಲುತ್ತಾನೆ. ತತ್ಫಲವಾಗಿ 'ಸಾವು ಬದುಕು'ಗಳ ಆಟದ ಬೊಂಬೆಯಾಗಿ ಪಡಬಾರದ ಕಷ್ಟಗಳನ್ನು ಪಟ್ಟು, ಕೊನೆಗೆ ಭಗವತ್ಕೃಪೆಯಿಂದಲೂ ತನ್ನಲ್ಲುದಿಸಿದ ಭೂತದಯೆಯಿಂದಲೂ ಪುನೀತನಾಗುತ್ತಾನೆ. ಈ ವಸ್ತುವುಳ್ಳ Ancient Mariner

ಕವಿತೆಯನ್ನು ಎಂ. ವಿ. ಸೀ ಯವರು ಕನ್ನಡಕ್ಕೆ ತಂದಿದ್ದರೂ ಅದು ಓದುಗನ ಕೈ ಸೇರಿಲ್ಲ. 'ಪುರಾತನ ನಾವಿಕ'ನಿಗೆ ಇನ್ನೂ ಪರಿಷ್ಕಾರ ಅಗತ್ಯವೆಂದು ಕವಿಯೇ ಭಾವಿಸಿದ್ದಾರೆ. ಅಪ್ರಕಟಿತವಾಗಿ ಉಳಿಯಲು ಇದೂ ಒಂದು ಕಾರಣ. ಓದುಗರಿಗೆ ಅನುವಾದದ ಸ್ವರೂಪ ಪರಿಚಯವಾಗಲೆಂದು ಮೂಲ ಪದ್ಯಗಳೊಂದಿಗೆ ಒಂದೆರಡು ಅನುವಾದ ಪದ್ಯಗಳನ್ನೂ ಕೆಳಗೆ ಕೊಟ್ಟಿದೆ. ಅನುವಾದಿತ ಪದ್ಯಗಳು ಸಾಂಗತ್ಯಧಾಟಿಗೆ ಸಮೀಪವಾಗಿವೆ.

The ice was here the ice was there
The ice was all around ;
It cracked and growled and roared and howled
Like noises in a swound !

ಇಲ್ಲಿಯೂ ನೀರ್ಗಲ್ಲು ಅಲ್ಲಿಯೂ ನೀರ್ಗಲ್ಲು
ಸುತ್ತಲೂ ನೀರ್ಗಲ್ಲ ಸಂತೆ :
ಬಿರಿದು ಬೊಬ್ಬಿರಿಯಿತು ಮೊರೆಯಿತು ಮೊಳಗಿತು
ಬವಳಿಯಲ್ಲಿನ ಗುಲ್ಲಿನಂತೆ

ಅನುವಾದಿತ ಪದ್ಯದ ಎರಡನೆಯ ಸಾಲಿನ ಕೊನೆಯ ಪದ 'ಸಂತೆ' ಅನಾವಶ್ಯಕ ಎಂದು ಅನುವಾದಕರೇ ಭಾವಿಸಿದ್ದಾರೆ. ಮೂರನೆಯ ಸಾಲು ಸಮರ್ಪಕ ಅನುವಾದ. ಮೂಲದ ಭಾವ ಸೊಗಸಾಗಿ ಮೂಡಿದೆ. Like noises in a swound (ಬವಳಿಯಲ್ಲಿನ ಗುಲ್ಲಿನಂತೆ) ವಾಕ್ಯದ ಅನುವಾದ ಸರಿಯೆಂದು ಲೇಖಕರೂ ಭಾವಿಸಿಲ್ಲ.

Water water every where
And all the boards did shrink ;
Water water every where
Nor any drop to drink

ನೀರು, ನೀರು, ನೀರು ಎಲ್ಲೆಲ್ಲಿಯೂ ನೀರು
ಕುಗ್ಗಿತು ಹಡಗಿನ ಹಲಗೆ
ನೀರು, ನೀರು, ನೀರು ಎಲ್ಲೆಲ್ಲಿಯೂ ನೀರು
ಕುಡಿಯಲಿಲ್ಲ ಒಂದು ತೊಟ್ಟು

ಈ ಪದ್ಯವೂ ಪರಿಷ್ಕಾರ ಯೋಗ್ಯವೆಂದು ಅನುವಾದಕರೂ ಭಾವಿಸಿದ್ದಾರೆ. ಸಮರ್ಥ ಅನುವಾದಕ್ಕೆ ಒಂದು ಉದಾಹರಣೆ :

Alone, alone all all alone
Alone on a wide wide sea !
And never a saint took pity on
My soul in agony

ಒಬ್ಬನೆ, ಒಬ್ಬನೆ, ಒಂಟಿ ನಾನೊಬ್ಬನೆ
ಚಾಚಿದ ಕಡಲಿನ ಮೇಲೆ
ಒಬ್ಬ ಸಂತನಿಗೂ ಕರುಣೆಯಿಲ್ಲೆನ್ನಸಂ-
ತಪಿಸುವ ಆತ್ಮದ ಮೇಲೆ

ಈ ಪದ್ಯದಲ್ಲಿ ಅನುವಾದಕರ ಸ್ವಂತಿಕೆ ಮೆರೆದಿದೆ. ಆದರೆ Wide ಪದಕ್ಕೆ ಚಾಚಿದ ಎಂಬ ಅನುವಾದ ಸರಿಯಲ್ಲವೆಂದು ನನ್ನ ಭಾವನೆ.

ಶಂಕರಾಚಾರ್ಯರ 'ಸೌಂದರ್ಯ ಲಹರಿ'ಯನ್ನು ಈಗಾಗಲೇ ಮೋವ್ವಂಡಿ ಮಲ್ಲಾರಿ ಸಿ. ಪಿ. ಕೆ. ಮುಂತಾದವರು ಕನ್ನಡಕ್ಕೆ ಅನುವಾದಿಸಿದ್ದಾರೆ. ಎಂ.ವಿ.ಸೀ ಯವರೂ ವಾರ್ಧಕ ಷಟ್ಪದಿಯಲ್ಲಿ 'ಸೌಂದರ್ಯ ಲಹರಿ'ಯನ್ನು ಅನುವಾದಿಸಿದ್ದಾರೆ. ಒಂದು ಭಾಷೆಯಲ್ಲಿನ ಉತ್ತಮ ಕೃತಿಯನ್ನು ಮತ್ತೊಂದು ಭಾಷೆಗೆ ಎಷ್ಟು ಜನ ಬೇಕಾದರೂ ಅನುವಾದಿಸಬಹುದು. ಅನುವಾದಿತ ಕೃತಿ ಸತ್ವಯುತವಾಗುವುದು ಅನುವಾದಕರ ಪ್ರತಿಭೆ, ಅನುಭವ, ಉಭಯ ಭಾಷಾ ಸಾಮರ್ಥ್ಯದ ಮೇಲೆ. ಈ ದೃಷ್ಟಿಯನ್ನಿಟ್ಟುಕೊಂಡು ಮೂಲ ಸಂಸ್ಕೃತ ಪದ್ಯಗಳನ್ನೂ ಅವುಗಳ ಜತೆಗೆ ಎಂ. ವಿ. ಸೀ ಯವರ ಅಪ್ರಕಟಿತ ಅನುವಾದ ಪದ್ಯಗಳನ್ನೂ, ಸಿ. ಪಿ. ಕೆ. ಯವರ ಪ್ರಕಟಿತ ಅನುವಾದಿತ ಪದ್ಯಗಳನ್ನೂ ಕೆಳಗೆ ಕೊಟ್ಟಿದ್ದೇನೆ (ಮೋವ್ವಂಡಿ ಮಲ್ಲಾರಿಯವರ ಪುಸ್ತಕ ನನಗೆ ದೊರೆಯಲಿಲ್ಲವಾದ್ದರಿಂದ ಅದನ್ನು ಸೇರಿಸಲಾಗಿಲ್ಲ. 'ಸೌಂದರ್ಯ ಲಹರಿ'ಯ ಉಳಿದ ಅನುವಾದಿತ ಕೃತಿಗಳು ಗದ್ಯ ರೂಪದಲ್ಲಿರುವುದರಿಂದ ಅವುಗಳನ್ನು ಕೈಬಿಡಲಾಗಿದೆ).

ನೂರು ಪದ್ಯಗಳುಳ್ಳ 'ಸೌಂದರ್ಯ ಲಹರಿ'ಯಲ್ಲಿ ಆನಂದಲಹರಿ ಮತ್ತು ಸೌಂದರ್ಯ ಲಹರಿ ಎಂಬ ಎರಡು ಭಾಗಗಳಿವೆ. ಆನಂದ ಲಹರಿಯಲ್ಲಿ ತಂತ್ರ ವಿಷಯಕ್ಕೆ ಹೆಚ್ಚು ಪ್ರಾಧಾನ್ಯ. ಸೌಂದರ್ಯಲಹರಿಯಲ್ಲಿ ಕಾವ್ಯಗುಣ ಮಿಗಿಲಾಗಿದೆ. ಸಿ.ಪಿ.ಕೆ ಯವರು ಆನಂದಲಹರಿಯ ಹನ್ನೊಂದು ಪದ್ಯಗಳನ್ನು ಅನುವಾದ ಮಾಡಲು 'ದುಷ್ಕರ'ವೆಂದು ಭಾವಿಸಿ ಕೈಬಿಟ್ಟಿದ್ದಾರೆ. ಸೀತಾರಾಮಯ್ಯನವರು ಎಲ್ಲಾ ಪದ್ಯಗಳನ್ನೂ ಅನುವಾದಿಸಿದ್ದಾರೆ. ಸಿ. ಪಿ. ಕೆ. ಅನುವಾದಿಸದ ತಾಂತ್ರಿಕ ವಿಷಯಕ್ಕೆ ಸಂಬಂಧಿಸಿದ ಎಂ. ವೀ. ಸೀ ಯವರ ಅನುವಾದಿತ ಪದ್ಯವನ್ನು ಮೂಲದೊಂದಿಗೆ ಕೆಳಗೆ ಕೊಟ್ಟಿದೆ:

ಕ್ಷಿತೌ ಷಟ್ಪಂಚಾಶದ್ದ್ವಿಸಮಧಿಕಪಂಚಾಶದುದಕೇ
ಹುತಾಶೇ ದ್ವಾಷಷ್ಟಿಶ್ಚತುರಧಿಕಪಂಚಾಶದನಿಲೇ
ದಿವಿ ದ್ವಿಃಷಟ್ತ್ರಿಂಶನ್ಮನಸಿ ಚ ಚತುಃಷಷ್ಟಿರಿತಿ ಯೇ
ಮಯೂಖಾಸ್ತೇಷಾಮಪ್ಯುಪರಿ ತವ ಪಾದಾಂಬುಜಯುಗಮ್ ||
ಐವತ್ತು ಮೇಲಾರು ಭೂಮಿಷ್ಠ ಚಕ್ರದಲಿ
ಐವತ್ತು ಮೇಲೆರಡು ಜಲಯುಕ್ತ ಚಕ್ರದಲಿ
ಅಗ್ನಿ ಚಕ್ರದಲಾರು ಹತ್ತು ಮೇಲೆರಡನಿಲದಲ್ಲಿ ಐವತ್ತು ನಾಲ್ಕು

ಆಕಾಶಚಕ್ರದಲ್ಲೆಪ್ಪತ್ತು ಮೇಲೆರಡು
ಮಾನಸದ ಚಕ್ರದಲ್ಲರುವತ್ತು ನಾಲ್ಕಿಂತು
ಮುನ್ನೂರರರುವತ್ತು ಕಿರಣಗಳ ಮೇಲ್ನಿನ್ನಡಿದಾವರೆಗಳ ಜೋಡಿ

ಕ್ಲಿಷ್ಟವಾದ ತಾಂತ್ರಿಕ ವಿಷಯವನ್ನು ಹೇಗೆ ಅನುವಾದದಲ್ಲಿ ಯಶಸ್ವಿಯಾಗಿ ನಿರ್ವಹಿಸಿದ್ದಾರೆ ಎನ್ನುವುದನ್ನು ಕನ್ನಡ, ಸಂಸ್ಕೃತಗಳನ್ನು ಚೆನ್ನಾಗಿ ಬಲ್ಲ ಕೋವಿದರ ಮೇಲಿನ ಪದ್ಯದಿಂದ ಅರಿಯಬಹುದು. ಮೂಲ ಶ್ಲೋಕಗಳು ಕನ್ನಡಕ್ಕೆ ಹೇಗೆ ಬಿಂಬ ಪ್ರತಿಬಿಂಬ ರೀತಿಯಲ್ಲಿ ಪ್ರತಿಫಲಿತವಾಗಿದೆ ಎನ್ನುವುದಕ್ಕೆ ಒಂದೆರಡು ಉದಾಹರಣೆಗಳು :

ಭವಾನಿ ತ್ವಂ ದಾಸೇ ಮಯಿ ವಿತರ ದೃಷ್ಟಿಂ ಸಕರುಣಾ-
ಮಿತಿ ಸ್ತೋತುಂ ವಾಂಛನ್ ಕಥಯತಿ ಭವಾನಿ ತ್ವಮಿತಿ ಯಃ
ತದೈವ ತ್ವಂ ತಸ್ಮೈ ದಿಶಸಿ ನಿಜಸಾಯುಜ್ಯಪದವೀಂ
ಮುಕುಂದ ಬ್ರಹ್ಮೇಂದ್ರಸ್ಫುಟಮಕುಟನೀರಾಜಿತಪದಾಮ್
'ಎಲೆ ಭವಾನಿ, ನಾ ನಿನ್ನ ದಾಸ-ಕೃಪೆಯಿಂದ ನನ್ನ ನೋಡು'
ಎಂದು ಸ್ತೋತ್ರಿಸಲು ಬಯಸುವಂಥವನು 'ಎಲೆ ಭವಾನಿ' ಎಂದು
ನುಡಿಯುವಷ್ಟರೊಳೆ ಆ ಮುಕುಂದ ಬ್ರಹ್ಮೇಂದ್ರ ಮಕುಟಚಯದ
ಆರತಿಯ ಕೊಳುವ ನಿನ್ನ ಸಾಯುಜ್ಯಪದವ ಕೊಡುವೆಯಲ್ಲ!

[ಸಿ. ಪಿ. ಕೆ]

'ಹೇ ಭವಾನಿ, ತ್ವಂ ದಾಸನಾದೆನ್ನಲ್ಲಿ
ನಿನ್ನ ಕರುಣಾಪೂರ್ಣದೃಷ್ಟಿಯನ್ನಿರಿಸೆಂ'ದು
ಸಂಪ್ರಾರ್ಥಿಸಲ್ಬಿಚ್ಛಿಸುತ 'ಭವಾನಿತ್ವಂ' ಎನುತ ನುಡಿಯುವನಿತರಲ್ಲಿ
ಅವನಿಗಾಗಲೆ ನೀನು ಬ್ರಹ್ಮೇಂದ್ರ ವಿಷ್ಣುಗಳ
ತೊಳಗುವ ಕಿರೀಟಗಳು ಬೆಳಗುವಾರತಿಯಿಂದ
ಪೊಳೆವ ನಿನ್ನಡಿಗಳೆಡೆಯಲ್ಲಿ ಸಾಯುಜ್ಯಪದವಿಯನು
ದಯೆಗೈವೆಮುದದಿ

ಸೌಂದರ್ಯಲಹರಿಯಲ್ಲಿ ಕಾವ್ಯಗುಣ ಮಡುಗಟ್ಟಿರುವುದು ತ್ರಿಪುರಸುಂದರಿಯ ಸೌಂದರ್ಯ ವರ್ಣನೆಯಲ್ಲಿ. ಆಚಾರ್ಯರು ಆ ಜಗನ್ಮಾತೆಯನ್ನು ಅಡಿಯಿಂದ ಮುಡಿಯವರೆಗೂ ವರ್ಣಿಸುತ್ತಾರೆ. ಆ ವರ್ಣನೆಯಲ್ಲಿ ದೇವಿಯ ಕುಚಯುಗ ವರ್ಣನೆ 'ಅತ್ಯುತ್ಕೃಷ್ಟ'ವೆಂದು ವಿದ್ವಾಂಸರ ಒಟ್ಟಾರೆ ಅಭಿಪ್ರಾಯ. ಆ ಭಾಗದ ಒಂದು ಪದ್ಯ :

ಅಮೂ ತೇ ವಕ್ಷೋಜಾವಮೃತರಸಮಾಣಿಕ್ಯಕುತುಪೌ
ನ ಸಂದೇಹಸ್ಪಂದೋ ನಗಪತಿ ಪತಾಕೇ ಮನಸಿ ನಃ।

ಪಿಬಂತೌ ತೌ ಯಸ್ಯಾಮೃತಮುದಿತವಧೂ ಸಂಗರಸಿಕೌ
ಕುಮಾರಾವದ್ಯಾಪಿ ದ್ವಿರದವದನ ಕ್ರೌಂಚದಲನೌ

ನಿನ್ನ ಮೊಲೆಗಳವು ಅಮೃತರಸದ ಮಾಣಿಕ್ಯ ಕುಂಭಗಳೆಂದು
ತಿಳಿವೆನಗರಾಜಧ್ವಜವೆ, ಇದರೊಳೇನಿಲ್ಲ ಶಂಕೆಯಿನಿಸು :
ಉಂಟುತವನು ಆ ದ್ವಿರದವದನ ಷಣ್ಮುಖರು ಇಂದಿಗೂನು
ಹೆಣ್ಣ ಕೂಟವರಿಯದ ಕುಮಾರರಾಗಿಯೇ ಉಳಿದಿರುವರು !

[ಸಿ.ಪಿ.ಕೆ.]

ತಾಯೆ, ಹಿಮವಂತ ಪರ್ವತ ಪತಾಕೇ, ನಿನ್ನ
ಈ ಸ್ತನದ್ವಯವಮೃತ ರಸವ ನೆರೆ ತುಂಬಿರುವ
ಮಾಣಿಕ್ಯ ಕಲಶವೆಂದೆನ್ನ ನುಡಿ ನಮಗಿಲ್ಲ ಸಂದೇಹವಿನಿತು ಸವಿದ
ಅದರಿಂದಲ್ಲವೆಯಿಂದಿಗೂ ಗಣಪ ಷಣ್ಮುಖರು
ನವವಧೂಸಂಗರಾಸಿಕ್ಯವನ್ನರಿಯದರು
ತಾಯಮೊಲೆ ಹಾಲ್ಕುಡಿಯುತುಳಿದಿರುವರು ಕೌಮಾರ ಭಾವದಲಿ
ನಲಿನಲಿಯುತ

ಇಬ್ಬರು ವಿದ್ವಾಂಸರ ಅನುವಾದಿತ ಪದ್ಯಗಳನ್ನು ಓದುಗರ ಮುಂದಿಡಲಾಗಿದೆ. ಇವುಗಳಲ್ಲಿ ಯಾವುದು ಮೂಲಕ್ಕೆ ಸಮೀಪವಾಗಿದೆ, ಯಾವುದರಲ್ಲಿ ಹೆಚ್ಚು ಕಾವ್ಯಗುಣ ಅಡಗಿದೆ ಎಂಬುದನ್ನು ವಿವರಿಸುವ ಅಗತ್ಯವಿಲ್ಲ.

ಸುಮಾರು 1936ರಲ್ಲಿ ಬರೆದ 'ತಿರುಕನ ಕನಸು' ಎಂಬ ರಂಗನಾಟಕವು ಎಂ.ವಿ.ಸೀ. ಯವರ ಮತ್ತೊಂದು ಅಪ್ರಕಟಿತ ಕೃತಿ. ಸಾಮಾಜಿಕ ನಾಟಕ ಸಾಮಾನ್ಯರಿಗೆ ರುಚಿಸಬೇಕಾದರೆ ಹಾಡು, ಪದ್ಯ, ಭಾವುಕ ಸಂಭಾಷಣೆಗಳು ಅನಿವಾರ್ಯವೆಂದು ನಾಟಕಕಾರರು ಭಾವಿಸಿದ್ದರಿಂದ ಈ ನಾಟಕ ಗದ್ಯ ಪದ್ಯ ಮಿಶ್ರಿತವಾಗಿದೆ. ನಾಟಕದ ಪದ್ಯಗಳು ಸರಳ ರಗಳೆಯಲ್ಲಿವೆ. ಸಂಭಾಷಣೆಯಲ್ಲಿ ವ್ಯವಹಾರದ ಭಾಷೆ ಸರಳವಾಗಿದೆ. ತೀ. ನಂ. ಶ್ರೀ ಯವರು ಈ ನಾಟಕದ ಮೊದಲ ಕರಡನ್ನು (ಇದು ಈಗ ಮೈಸೂರು ವಿಶ್ವವಿದ್ಯಾನಿಲಯದ ಜಾನಪದ ಸಂಗ್ರಹಾಲಯದಲ್ಲಿದೆ) ಪರಿಶೀಲಿಸಿ "ಬರವಣಿಗೆ ಕಾವ್ಯಮಯವಾಗಿದೆ, ಪಾತ್ರಚಿತ್ರಣದಲ್ಲಿ ಸಹಜತೆ ಇಲ್ಲ...." ಎಂದು ತಮ್ಮ ಅಭಿಪ್ರಾಯ ಸೂಚಿಸಿದರಂತೆ. ಈ ಅಭಿಪ್ರಾಯದ ಮೇರೆಗೆ ಮತ್ತೊಂದು ಬಾರಿ ಪರಿಷ್ಕರಿಸಿ ಬರೆದರು.

ಹವ್ಯಾಸಿ ರಂಗದ ನಾಟಕಕ್ಕೂ ವೃತ್ತಿರಂಗಭೂಮಿಯ ನಾಟಕಕ್ಕೂ ವ್ಯತ್ಯಸ್ತವಾಗಿ ಸಾಹಿತ್ಯಿಕ ಮೌಲ್ಯವುಳ್ಳ ನಾಟಕ ರಚಿಸಬೇಕೆಂದು ಎಂ.ವಿ.ಸೀ. ಅವರ ಇಚ್ಛೆ,

ವಾಗಿತ್ತು. ಈ ಉದ್ದೇಶದಿಂದ ಇಂತಹ ನಾಟಕ ರಚನೆಯಲ್ಲಿ ಒಲವಿಲ್ಲದಿದ್ದರೂ ಪ್ರಯೋಗದ ದೃಷ್ಟಿಯಿಂದ ಇದನ್ನು ಬರೆದರು. 1940ರಲ್ಲಿ ರಾಣೆಬೆನ್ನೂರಿನ ಕರ್ನಾಟಕ ಸಂಘ, ಬೆಂಗಳೂರಿನ United Artists ಸಂಸ್ಥೆಗಳು ಈ ನಾಟಕವನ್ನು ಆಡಬೇಕೆಂದು ಪ್ರಯತ್ನಿಸಿದರಂತೆ. ಆದರೆ ನಾಟಕದಲ್ಲಿ ಪಾತ್ರಗಳ ಸಂಖ್ಯೆ ಅಧಿಕವಿದ್ದುದರಿಂದಲೋ ಏನೋ, ಈ ನಾಟಕ ರಂಗದ ಮೇಲೆ ಪ್ರಯೋಗವಾಗಲಿಲ್ಲ. ಅಂತರ್ಜಾತೀಯ ವಿವಾಹ, ಭಿಕ್ಷುಕ ಸಮಸ್ಯೆಗಳು ನಾಟಕದ ಮೂಲ ಸಾಮಗ್ರಿಗಳಾಗಿವೆ. ನಾಟಕದ ನಾಯಕ ಕೊನೆಯಲ್ಲಿ ತಾನು ಪ್ರೀತಿಸಿದ ಕ್ರೈಸ್ತಕನ್ಯೆಯ ಕೈ ಹಿಡಿದು ಭಿಕ್ಷುಕರಿಗಾಗಿ ಒಂದು ಆಶ್ರಮ ಸ್ಥಾಪಿಸುತ್ತಾನೆ. ಈ ಆಶ್ರಮದ ಭಿಕ್ಷುಕರು ಕೂತು ಉಣ್ಣುವವರಲ್ಲ. ದುಡಿದು ತಿನ್ನುವವರು. ಕೈಕಾಲು ನೆಟ್ಟಗಿದ್ದು ಸೋಮಾರಿತನದಿಂದ ಭಿಕ್ಷುಕ ವೇಷಧರಿಸಿದವರಿಗೆ ಇಲ್ಲಿ ಪ್ರವೇಶವಿಲ್ಲ.

ಈ ನಾಟಕ ಅಚ್ಚಾಗಿದ್ದರೆ ಬಹುಶಃ ವಿಮರ್ಶಕರ ಮೆಚ್ಚಿಗೆಗೆ ಪಾತ್ರವಾಗುತ್ತಿರಲಿಲ್ಲವೇನೋ, ಇದು ಲೇಖಕರ ಅಭಿಪ್ರಾಯವೂ ಆಗಿದೆ. ಆದರೆ ರಂಗದ ಮೇಲೆ ಪ್ರಾಮಾಣಿಕ ಪ್ರಯತ್ನಗಳಿಂದ ಪ್ರದರ್ಶಿತವಾಗಿದ್ದರೆ ಶ್ರೀಸಾಮಾನ್ಯನಿಗೆ ಪರಿಣಾಮಕಾರಿಯಾಗಿ ತಲುಪುವ ಶಕ್ಯತೆ ಈ ನಾಟಕ ಹೊಂದಿದೆ ಎಂಬುದು ಅವರ ನಂಬಿಕೆ. ಪರಿಷ್ಕೃತ ರೂಪದ ಹಸ್ತಪ್ರತಿ ನಷ್ಟವಾಗಿ ಮೊದಲ ಕರಡಿನ ನಕಲು ಮಾತ್ರ ಉಳಿದಿದೆ.

ಆಸ್ವಾದ ಭಾಗ – ೨

ಹಲ್ಮಿಡಿ ಶಾಸನ - ಒಂದು ಅಧ್ಯಯನ

ದೇವರಕೊಂಡಾರೆಡ್ಡಿ

ಕನ್ನಡ ಪ್ರಾಚೀನ ಶಾಸನವೆಂದು ಕರೆಯಿಸಿಕೊಳ್ಳುತ್ತಿರುವ ಹಲ್ಮಿಡಿ ಶಾಸನವು ಅನೇಕ ದೃಷ್ಟಿಗಳಲ್ಲಿ ವಿದ್ವಾಂಸರ ಮತ್ತು ಆಸಕ್ತರ ಗಮನವನ್ನು ಸೆಳೆದಿದೆ. ಶಾಸನದ ಭಾಷೆ, ವ್ಯಾಕರಣ, ಪದಪ್ರಯೋಗ ಈ ಮೂರು ದಿಸೆಗಳಲ್ಲಿ ಬಹಳಷ್ಟು ಬೆಳಕನ್ನು ಚೆಲ್ಲಿದೆ.

ಈ ಶಾಸನವನ್ನು ಹಳಗನ್ನಡ ಬಲ್ಲ ವಿದ್ಯಾರ್ಥಿಗಳ ಎದುರಿಗಾಗಲೀ ಅಥವಾ ವಿದ್ವಾಂಸರ ಎದುರಿಗಾಗಲೀ ಓದಿದರೆ ಕನ್ನಡದ ಸೊಗಡಿಗಿಂತ ಸಂಸ್ಕೃತದ ಸೊಗಡಿನ ವಾಸನೆ ಹೆಚ್ಚಿಗೆ ಬೀರುತ್ತದೆ. ಈ ಶಾಸನದಲ್ಲಿ ಕಾಣುವಷ್ಟು ಭಾಷಾ ಕೃತಕತೆ ಬೇರಾವ ಶಾಸನದಲ್ಲೂ ಕಾಣುವುದಿಲ್ಲ. ಇದೊಂದು ಹಿಂದಿನ ಕಾಲದ ಶಾನುಭೋಗರ ಭಾಷೆಯೆನ್ನದೆ ವಿಧಿಯಿಲ್ಲ. ಸಂಸ್ಕೃತದಲ್ಲಿ ಯೋಚಿಸಿ ಕನ್ನಡದಲ್ಲಿ ಬರೆದಿರುವಂತೆ ಕಾಣುತ್ತದೆ. (ಈಗಿನವರು ಇಂಗ್ಲಿಷಿನಲ್ಲಿ ಯೋಚಿಸಿ ಕನ್ನಡದಲ್ಲಿ ಬರೆಯುವಂತೆ) ಹೀಗಾಗಿ ಈ ಶಾಸನ ಭಾಷೆಯಲ್ಲಿ ಸಂಸ್ಕೃತದ ಪ್ರಭಾವ ಎದ್ದು ಕಾಣುತ್ತದೆ. ಸಂಸ್ಕೃತದ ಅನೇಕ ಪದ ಪುಂಜಗಳನ್ನು ಹಾಗೆಯೇ ಕೆಲವೊಮ್ಮೆ ಕನ್ನಡೀಕರಿಸಿ, ಕೆಲವೊಮ್ಮೆ ಸಮಾನಾರ್ಥ ಪದಗಳನ್ನು ಬಳಸಿರುವುದನ್ನು ಕಾಣುತ್ತೇವೆ. ಸಂಸ್ಕೃತ ಪದಗಳಿಗೆ ಕನ್ನಡದ ಸಮಾನ ಪದ ದೊರೆಯದಿದ್ದಾಗ ಹೇಗೋ ಒಂದು ಸಮಾಸಪದ ಮಾಡಿ ಬಳಸಿರುತ್ತಾನೆ. ಇದಕ್ಕೆ ಪತ್ತೊನ್ಧಿ ನಿದರ್ಶನ.

ಈ ದಿಸೆಯಲ್ಲಿ ಈ ಶಾಸನದ ಮೇಲೆ ಪ್ರಭಾವ ಬೀರಿರಬಹುದಾದ ಶಾಸನವಾವುದೆಂದು ಯೋಚಿಸುತ್ತಿದ್ದಾಗ ತಾಳಗುಂದದ ಪ್ರಣವೇಶ್ವರ ದೇವಾಲಯದ ಬಾಗಿಲಲ್ಲಿರುವ ಶಾಸನ ಗಮನ ಸೆಳೆಯಿತು.[1] ಅದರ ರಚನೆ ಪದಪುಂಜಗಳು ಹಲ್ಮಿಡಿ ಶಾಸನದಲ್ಲಿ ಕಾಣಿಸಿಕೊಂಡಿರುವುದು ಗಮನಕ್ಕೆ ಬಂತು. ಆ ಶಾಸನದಲ್ಲಿ ಬರುವ ಕೆಲವು ಪದ ಪುಂಜಗಳನ್ನು ಇಲ್ಲಿ ನೀಡುತ್ತಿದ್ದೇನೆ.

1. ಪಶುಪತಿರಿತಿ ಯಸ್ಯ ನಾಮದಾನೇ ದಿಶಿಸಿದಿತಂ.
2. ಸಮರೇಚ ದಕ್ಷಿಣಸ್ಯಾಮ್.
3. ಕಾಕುಸ್ಥೇನ ಭಟಾರಿ ವಜ್ಞ ತಿಲಕೇನ

---

1 EC vii & viii Supp. 325

4. 'ತೇನಾನೇಕ ಮಹಾಧ್ವರೇಷು'

5. ಕದಮ್ಬ್ಯ ವಜ್ಞಭವಯಾ ....

ಮತ್ತು ಪಶುಪತಿ ಎಂಬ ಪದವನ್ನು ನಾನಾ ಅರ್ಥ ಬರುವಂತೆ ಬಳಸಿರುವುದು.

ಬಹುಶಃ ತಾಳಗುಂದದ ಪ್ರಣವೇಶ್ವರ ದೇವಾಲಯದ ಈ ಪಶುಪತಿ ಶಾಸನವನ್ನು ರಚಿಸಿದವನೇ ಹಲ್ಮಿಡಿ ಶಾಸನವನ್ನು ರಚಿಸಿರಬಹುದು. ತಾಳಗುಂದದ ಪಶುಪತಿ ಶಾಸನದಲ್ಲಿ ಬರುವ ಕಾಕುಸ್ಥ ಮತ್ತು ಹಲ್ಮಿಡಿ ಶಾಸನದ ಕಕುಸ್ಥ ಭಟ್ಟೋರ ಬೇರೆ ಬೇರೆ ಎಂದು ತಿಳಿದು ಬರುತ್ತದೆ. ಪಶುಪತಿ ಶಾಸನದ ಕಾಕುಸ್ಥಭಟ್ಟಾರಿ ಮತ್ತು ಕದಂಬ ವಂಶದ ಲಕ್ಷ್ಮಿಯ ಮಗನೇ ಪಶುಪತಿ. ಈ ಪಶುಪತಿಯೇ ಹಲ್ಮಿಡಿ ಶಾಸನದಲ್ಲಿ ಉಕ್ತನಾಗಿರುವ ಪಶುಪತಿ. ಇವನು ಕದಂಬ ಚಕ್ರವರ್ತಿ ಕಾಕುಸ್ಥವರ್ಮನ ಮೊಮ್ಮಗ. ಹಲ್ಮಿಡಿ ಶಾಸನದ ಕಕುಸ್ಥ ಭಟ್ಟೋರ ಕದಂಬ ಕಾಕುಸ್ಥವರ್ಮ.

ಹಲ್ಮಿಡಿ ಶಾಸನದಲ್ಲಿ ಭಟ್ಟೋರ, ಭಟರಿ, ಭಟ, ಬಟರಿ, ಬಟಾರಿ, ಭಟ ಎಂಬ ಪದಗಳು ದೊರೆಯುತ್ತವೆ. ಬಟರಿ, ಭಟರಿ ಎಂಬ ಪದಗಳು ವಂಶ, ವಂಶದವನು ಎಂಬರ್ಥದಲ್ಲಿಯೂ 'ಭಟ' ಎಂಬ ಶಬ್ದವು ವೀರ ಎಂಬ ಅರ್ಥದಲ್ಲಿಯೂ ಭಟ್ಟ ಎಂಬುದು ಸ್ಥಾನಿಕ, ವೇದ ಪಾರಂಗತನಾದ ಬ್ರಾಹ್ಮಣ ಎಂಬರ್ಥದಲ್ಲಿಯೂ ಭಟ್ಟೋರ ಎಂಬುದು ಭಟ್ಟಾರಕ ಎಂಬ ಅರ್ಥದಲ್ಲಿಯೂ ಪ್ರಯೋಗವಾಗಿವೆ.

ಭಟಾರಿ ವಂಶ ಬಹುಶಃ ಆಳುಪ ಎಂಬ ವಂಶಕ್ಕಿದ್ದ ಇನ್ನೊಂದು ಹೆಸರಿರಬೇಕು. [ಭಟ-ಆಳು, ಭಟರಿ-ಆಳುಪ-ಆಳುಪ] ಪಶುಪತಿ ತನ್ನನ್ನು ಆಳಪ ಗಣದ ಒಡೆಯನೆಂದೂ ಆಳ್ಕದಂಬನೆಂದೂ ಕರೆದು ಕೊಂಡಿರುತ್ತಾನೆ. ಕಾಕುಸ್ಥನು ತಾನು ಗುಪ್ತರೇ ಮೊದಲಾದವರೊಂದಿಗೆ ಬೆಳೆಸಿದ್ದ ಸಂಬಂಧವನ್ನು ಹೆಚ್ಚುಗಾರಿಕೆಯಿಂದ ಹೇಳಿಕೊಂಡಿರುವಂತೆ ಈ ಪಶುಪತಿಯೂ ತನ್ನನ್ನು ಆಳ್ಕದಮ್ಬವಂಶದವನೆಂದು ಹೇಳಿಕೊಂಡಿದ್ದಾನೆ. ಶಾಸನದ ಪ್ರಾರಂಭದಲ್ಲಿ ಬರುವ ಶ್ಲೋಕ ಕದಂಬರ ಇತರ ಶಾಸನಗಳಲ್ಲಿ ಕಾಣದಿದ್ದರೂ ವಿಷ್ಣುವನ್ನು ಬೇರೆ ಬೇರೆ ರೀತಿಯಲ್ಲಿ ಸ್ತೋತ್ರ ಮಾಡುವ ಶ್ಲೋಕಗಳು ಕದಮ್ಬರ ತಾಮ್ರ ಶಾಸನಗಳಲ್ಲಿ ಕಾಣಸಿಗುತ್ತವೆ.

ಹಲ್ಮಿಡಿ ಶಾಸನದ ಪಾಠ ಮುಖ್ಯವಾಗಿ ಮೂರು ಭಾಗವಾಗಿದೆ.

1) ಪಶುಪತಿ-ಕೇಕೇಯ ಪಲ್ಲವರನ್ನು ಗೆದ್ದ ವಿಜಅರಸನ ಪರಾಕ್ರಮಕ್ಕೆ ಮೆಚ್ಚಿ ಪಲ್ಮಿಡಿಯನ್ನು ಮೂಳಿವಳ್ಳಿಯನ್ನು ದಾನವಾಗಿ ನೀಡುವುದು.
2) ಸಂಬ್ಬಗಡವರಾದ ಮೃಗೇಶನಾಗರಿಬ್ಬರೂ ಮತ್ತು ವಿಜ ಅರಸ ಸೇರಿ ಪಲ್ಮಿಡಿಗೆ ಕುಱುಮ್ಬಿಡಿ ಬಿಡುವುದು.
3) ವಿಜ ಅರಸ ತನಗೆ ಬಾಳ್ಗಳ್ಚಾಗಿ ಬಂದಿದ್ದ ಪಲ್ಮಿಡಿಯ ಭಟ್ಟರ ಗದ್ದೆಗೆ ಪತ್ತೊಂದಿಯನ್ನು ಬಿಟ್ಟು ಅದನ್ನು ಅಕರವನ್ನಾಗಿ ಮಾಡಿದ್ದು.

ಶಾಸನದಲ್ಲಿ ಬರುವ ಕದಂಬ ಪಸ್ ತ್ಯಾಗ ಸಂಪನ್ನನ್ ಕಲಭೋರನಾ ಅರಿ ಈ ವಿಶೇಷಣಗಳು ಕದಂಬರ ಕಾಕುಸ್ಥನಿಗೇ ಅನ್ವಯಿಸಬೇಕಾಗುತ್ತದೆ. ಕೆಲ ವಿದ್ವಾಂಸರು ಈ ಕಕುಸ್ಥನನ್ನು ಪಶುಪತಿಯ ತಂದೆ ಎಂದು ತಾಳಗುಂದದ ಬಾಗಿಲ ಶಾಸನದ ಆಧಾರದ ಮೇಲೆ ವಿವರಿಸಲು ಪ್ರಯತ್ನಿಸಿರುವುದುಂಟು. ಆದರೆ ಶಾಸನದಲ್ಲಿ ಸ್ಪಷ್ಟವಾಗಿ ಕದಂಬಪಸ್ ಎಂಬ ಉಲ್ಲೇಖವಿದೆ. ಈ ಪಶುಪತಿಯು ಆಳಕದಂಬ ವಂಶದವನು. ಕಲಭೋರ ಯಾರೆಂದು ಸ್ಪಷ್ಟವಾಗಿಲ್ಲ. ವಿದ್ವಾಂಸರು ಕಳಭ್ರರೆಂದು ಹೇಳಿದರೂ ಆಧಾರಗಳು ಸ್ಪಷ್ಟವಾಗಿಲ್ಲ. ಹಲ್ಮಿಡಿ ಶಾಸನ ಕಾಲಕ್ಕೆ ಈ ಕಾಕುಸ್ಥ ರಾಜನಾಗಿದ್ದ. ಹೀಗಾಗಿ ಹಲ್ಮಿಡಿ ಶಾಸನವನ್ನು ಅವನ ಆಳ್ವಿಕೆಯ ಅಂತ್ಯಕಾಲವೆಂದು ನಿರ್ಧರಿಸುವುದು ಸೂಕ್ತ, ಸರಿಸುಮಾರು ಕ್ರಿ.ಶ. ಸು. 460 ರ ಒಳಗೆ ರಚಿತವಾಗಿರಬೇಕು.

ಕದಂಬ ಕಾಕುಸ್ಥ ವರ್ಮನ ಕಾಲದಲ್ಲಿ ನರಿದಾವಿಳೆ ನಾಡಿನಲ್ಲಿ ಮೃಗೇಶ ಮತ್ತು ನಾಗ ಎಂಬ ಇಬ್ಬರು ಪ್ರಖ್ಯಾತ ಶೂರರಿದ್ದರು. ಇಲ್ಲಿ ಈ ಮೃಗೇಶ ಮತ್ತು ನಾಗೇಂದ್ರ ಎಂಬ ಪದಗಳನ್ನು ಶಾಸನ ರಚಕ ಶ್ಲೇಷೆಯಾಗಿಯೂ ಬಳಸಿರುತ್ತಾನೆ[2] ಮೃಗೇಶ ಎಂದರೆ ಶಿವ ಅಥವಾ ಸಿಂಹ ಎಂದೂ ನಾಗೇಂದ್ರ ಎಂದರೆ ಆನೆ ಅಥವಾ ಸರ್ಪ ವೆಂದೂ ಅರ್ಥಬರುತ್ತದೆ. ಆದರೆ ಈ ವಾಕ್ಯಕ್ಕೆ ಸಮರ್ಪಕವಾಗಿರುವ ಅರ್ಥವೆಂದರೆ ಮೃಗೇಶ ಸಿಂಹದಂತೆ (ಪರಾಕ್ರಮಿಗಳೂ) ನಾಗೇಂದ್ರ = ಆನೆಯಂತೆ (ಬಲಶಾಲಿಗಳೂ) ಎಂದು ಅರ್ಥೈಸಬೇಕು. ಅ ಭೀಳ ಭಟಹರ್ ಎಂಬುದನ್ನು ಅರ್ಥೈಸುವಾಗ ಭಯಂಕರರಾದ[3] ಉಗ್ರರಾದ ಎಂದು ಅರ್ಥೈಸುತ್ತಾರೆ. ಮೃಗೇಶ ಮತ್ತು ನಾಗರು ರಾಕ್ಷಸರಾಗಿದ್ದರೆ ಈ ಅರ್ಥಗಳು ಅನ್ವಯವಾಗುತ್ತಿತ್ತು. ಆದರೆ ಅವರಿಬ್ಬರೂ ಕದಂಬ ರಾಜ್ಯದ ಅಧಿಕಾರಿಗಳು. ಆದ್ದರಿಂದ ನಿಘಂಟುವಿನ ಸೀಮಿತ ಅರ್ಥದಿಂದ ಹೊರಗೆ ಬಂದು ಯೋಚಿಸಬೇಕು. ಪರಾಕ್ರಮಿಗಳು, ಶೂರರು ಎಂಬ ಸಾಮಾನ್ಯಾರ್ಥವೇ ಸಾಕೆನಿಸುತ್ತದೆ. ಅಪ್ಪೊರ್ ಎಂಬುದಕ್ಕೆ ಇದ್ದರು ಎಂದು ಅರ್ಥ. ಒಟ್ಟಾರೆ ಅರ್ಥ ಸಿಂಹದಂತೆ ಪರಾಕ್ರಮಿಗಳೂ ಆನೆಯಂತೆ ಬಲಶಾಲಿಗಳಾದ ಮೃಗೇಶ ಮತ್ತು ನಾಗ ಎಂಬ ವೀರರಿಬ್ಬರಿದ್ದರು. ಹೀಗೆ ವಾಕ್ಯ ಪೂರ್ಣಗೊಂಡಿದೆ.

ಇಲ್ಲಿಂದಾಚೆಗೆ ಪಶುಪತಿಯ ವರ್ಣನೆ ಬರುತ್ತದೆ. ಈತನನ್ನು ಬಟಾರಿ ಕುಲಾಮಲವ್ಯೋಮ ತಾರಾಧಿನಾಥನೆಂದು ವರ್ಣಿಸುತ್ತದೆ. 'ಅಳಪಗಣ ಪಶುಪತಿ'ಯೆಂದೂ, ದಕ್ಷಿಣದಲ್ಲಿ ನಡೆದ ಬಹುಶತ ಹವನಾಹವದೊಳ್ ಪಶುಪ್ರದಾನ ಶೌರ್ಯೋದ್ಯಮ ಭರಿತೋನ್ ದಾನಪಶುಪತಿಯೆಂದು ಪೊಗೞ್ತೆ ಪ್ರೊಟ್ಟಣ ಪಶುಪತಿ ನಾಮಧೇಯನ್

---

2 ಕದಂಬರ ಶಾಸನಗಳಲ್ಲಿ ಬರುವ ಕೆಲವು ಶ್ಲೇಷೆಯ ಪದ ಪುಂಜಕ್ಕೆ ಉದಾ:....ಮೃಗೇಶಸ್ತಸ್ಯ ತನಯೋ ಮೃಗೇಶ್ವರ ಪರಾಕ್ರಮಃ E. I. xxxii P. 90.

3 ಟಿ. ವಿ. ವೆಂಕಟಾಚಲ ಶಾಸ್ತ್ರಿ–ಶಬ್ದಾರ್ಥವಿಹಾರ ಪು. 4

ಎಂದಿದೆ. ಸಾಮಾನ್ಯವಾಗಿ ಎಲ್ಲರೂ ಈ ಭಾಗವನ್ನು ಅರ್ಥೈಸುವುದು ಬಟಾರಿ ನಂದಿ ವೆಂಬ ಆಕಾಶಕ್ಕೆ ಚಂದ್ರನಂತಿರುವವನೂ, ಆಳುಪರ ಒಡೆಯನೂ ದಕ್ಷಿಣದಲ್ಲಿ ನಡೆದ ಅನೇಕ ನೂರು ಯುದ್ಧಗಳೆಂಬ ಯಜ್ಞಗಳಲ್ಲಿ ತನ್ನ ಶೌರ್ಯವನ್ನು ತೋರಿದವನೂ ದಾನ ಪಶುಪತಿಯೆಂದು ಹೊಗಳಲ್ಪಟ್ಟವನೂ ಪಶುಪತಿ ಎಂಬ ಹೆಸರನ್ನು ಪಡೆದವನು ಇತ್ಯಾದಿ. ಆದರೆ ಈ ಪಶುಪತಿ ವಾಸ್ತವವಾಗಿ ಯಾವುದೇ ಯುದ್ಧದಲ್ಲಿ ಭಾಗವಹಿಸಿಲ್ಲ. ಶಾಸನದಲ್ಲಿ ಸ್ಪಷ್ಟವಾಗಿ ಅದಕ್ಷಿಣಾಪಥಬಹು ಶತ ಹವನಾಹವ ಹೊಳ್ ಪಶು ಪ್ರದಾನ ಶೌರ್ಯೋರ್ಜಿನದ್ಭವು ಭರಿತೋನ್ ಎಂದಿದೆ. ಅಂದರೆ ಆ ದಕ್ಷಿಣಾ ಪಥದಲ್ಲಿ ನಡೆದ ಅನೇಕ ನೂರು ಯಜ್ಞಗಳೆಂಬ ಯುದ್ಧದಲ್ಲಿ ಪಶುಪ್ರದಾನ ಅನೇಕ ಗೋವುಗಳನ್ನು ದಾನ ಮಾಡುವುದರ ಮೂಲಕ ದಾನಪಶುಪತಿ ಎಂದು ಹೊಗಳಿಸಿ ಕೊಂಡವನೂ ಪಶುಪತಿ ಯೆಂಬ ಹೆಸರನ್ನು ಪಡೆದಿದ್ದವನಾದ. ಇಲ್ಲಿ ಪಶುಪತಿ ಎಂಬ ಪದವನ್ನು ಬೇರೆ ಬೇರೆ ಅರ್ಥಬರುವಂತೆ ಬಳಸಿರುವುದನ್ನು ಗಮನಿಸುತ್ತೇವೆ. ಅಂದರೆ ಈ ಪಶುಪತಿ ನಾಮ ಧೇಯನು ಯುದ್ಧಗಳಲ್ಲಿ ಭಾಗವಹಿಸದೆ ಯಜ್ಞವೆಂಬ ಯುದ್ಧಗಳನ್ನು ಮಾಡಿಸುತ್ತ ಪಶುವೇ ಮುಖ್ಯವಾದ ದಾನಗಳನ್ನು ಮಾಡುತ್ತಾ ದಾನ ಮಾಡುವುದರಲ್ಲಿ ಪಶುಪತಿ ಸಮಾನನೆಂಬ ಪ್ರಖ್ಯಾತಿಯನ್ನು ಪಡೆದಿದ್ದನು. ಇದಕ್ಕೆ ಆಧಾರವಾಗಿ ತಾಳಗುಂದದ ಶಾಸನ ನಮ್ಮ ಸಹಾಯಕ್ಕೆ ಬರುತ್ತದೆ. ಅನೇಕ ಯಜ್ಞಗಳಲ್ಲಿ ಭಾಗವಹಿಸಿ ಬ್ರಾಹ್ಮಣ ರಿಂದ ಅಕ್ಷತೆಯನ್ನು ಹಾಕಿಸಿಕೊಳ್ಳುತ್ತಿದ್ದಂತೆ ಹೇಳಿಕೊಂಡಿದ್ದಾನೆ. (ವಿಪ್ರೈರಕ್ಷತ ತಣ್ಡುಲೈಃ ರಹರಹ ಸ್ಸ್ವಜ್ಞಂತಿರೋ ವಿಭೃತಾ) ಸರಕ್ಕೆಲ್ಲ ಭಟರಿ ಎಂಬುದನ್ನು ಪಶು ಪತಿಯ ಇನ್ನೊಂದು ಹೆಸರೆಂದು ನಾವು ಪರಿಗಣಿಸಬೇಕು. ಕೆಲ್ಲ ಎಂದು ಅಂತ್ಯವಾ ಗುವ ನಾಮ ಪದಗಳು ನಮಗೆ ಅನೇಕ ಪ್ರಾಚೀನ ಶಾಸಗಳಲ್ಲಿ ದೊರೆಯುತ್ತವೆ. ಗಂಗರ, ಆಳುಪರ ಮತ್ತು ಭೋಜರ ಶಾಸನಗಳಲ್ಲಿ ಅರಕೆಲ್ಲ, ಸಿಯಗೆಲ್ಲ, ಸಿಯಕೆಲ್ಲ, ಮಾಧವಗೆಲ್ಲ[4] ಚಾರಕ್ಕಿ, ಮುರಸಕೆಲ್ಲ[5] ಎಲಕೆಲ್ಲ ಮುಂತಾದ ಪದಗಳು ಉಲ್ಲೇಖ ಬರುತ್ತದೆ. ಕೆಲ್ಲ ಎಂಬುದು ಮೇಲಿನ ನಾಮಪದಗಳನ್ನು ಗಮನಿಸಿದಾಗ ವ್ಯಕ್ತಿನಾಮ ಕ್ಕಂಟಿ ಕೊಂಡೇ ಬಂದಿದೆ. ಇದರಿಂದ ಪಶುಪತಿಗೆ ಸರಕೆಲ್ಲ ಭಟರಿ ಎಂಬ ಹೆಸರು ಇತ್ತೆಂದು ತಿಳಿಯುತ್ತದೆ. ಈ ಸರಕ್ಕೆಲ್ಲ ಎಂಬುದರ ಸಹಿತ ರೂಪವೇ ಅರಕೆಲ್ಲ ಎಂಬ ವಾದವೂ ಇದೆ.[6]

ಆ ಸರಕ್ಕೆಲ್ಲ ಭಟರಿಯ ಪ್ರೇಮಾಲಯ ಸುತನ್ಗೆ ಎಂಬಲ್ಲಿ ಪ್ರೇಮಾಲಯಸುತ ಎಂಬ ಪದಕ್ಕೆ ಮನೆಮಗ ಎಂಬ ಪದ ಸಾಧುವಾಗಿ ಸಮೀಪಾರ್ಥದ ಪದವಾಗಿ ಕಾಣ

4 ಪ್ರಜಾವಾಣಿ 19-2-1978 ಮತ್ತು 19-3-1978

5 ಎಂ. ಎ. ಆರ್. 1915 ಪು. 40

6 ಅಧ್ಯಯನ ಪು. 359 ಕಲಬುರ್ಗಿ, ಎಂ. ಎಂ.

ಸುತ್ತದೆ. ಆದರೂ ಕರ್ತವ್ಯದ ರೀತಿಯಲ್ಲಿ ವ್ಯತ್ಯಾಸವಿದೆ. ಮುಂದಿನ ಶಾಸನಗಳಲ್ಲಿ ಮನೆಮಗನ್ ಎಂಬ ಉಲ್ಲೇಖ ಬಂದಿರುವೆಡೆಯಲ್ಲೆಲ್ಲಾ ಅವರ ಸಾವಿನ ವಿಷಯ ತಿಳಿಸುತ್ತದೆ. ಬಹುಶಃ ಹಲ್ಮಿಡಿ ಶಾಸನಕಾಲಕ್ಕೂ, ಬೇಗೂರು, ದೊಡ್ಡಹುಂಡಿ ಶಾಸನಗಳ ಕಾಲಕ್ಕೂ ಸುಮಾರು 400 ವರ್ಷಗಳ ಅಂತರ ಬರುವುದರಿಂದ ಅರ್ಥದಲ್ಲಿಯೂ ಆಚರಣೆಯಲ್ಲಿಯೂ ವ್ಯತ್ಯಾಸ ಕಾಣಿಸಿಕೊಂಡಿರಬೇಕು. ಕಲ್ಬುರ್ಗಿಯವರು ಜೋಳವಾಳಿಯ ಕಾರ್ಯವನ್ನು ನಿರ್ವಹಿಸಿದ ವೇಳೆವಾಳಿ ಎಂದಿರುತ್ತಾರೆ[7] ಆದರೆ ಈತ ವೇಳೆವಾಳಿಯೂ ಅಲ್ಲ. ಮನೆಮಗನೂ ಅಲ್ಲ. ಇಲ್ಲಿ ಸಂಬಂಧ ಸೂಚಿಸಿರುವುದು ಸರಕೆಲ್ಲ ಭಟರಿಗೆ ಮತ್ತು ವಿಜಅರಸನಿಗೆ. ಮುಂದಿನ ಶಾಸನಗಳಲ್ಲಿ ತನ್ನ ಮಗನಿಗೂ ಮನೆ ಮಗನಿಗೂ ವ್ಯತ್ಯಾಸ ತಿಳಿಸಲು ನಿಜಸುತ, ನಿಜಪುತ್ರ ಎಂಬ ಪದವನ್ನು ಬಳಸಿರುತ್ತಾರೆ. ಪ್ರೇಮಾಲಯಸುತ ಎಂಬ ಪದಕ್ಕೆ ಸುಮಾರು 600-700 ವರ್ಷಗಳ ತರುವಾಯ ಹುಟ್ಟಿದ ಅರ್ಜುನ ವಾಡದ ಶಾಸನದ 'ಪ್ರಿಯಸುತ' ಎಂಬ ಪದವನ್ನು ಹೋಲಿಸುವುದು ಅಸಂಗತವಾಗುತ್ತದೆ. ವೀರಶೈವ ಧರ್ಮದ ಪ್ರಭಾವ ವಲಯದಲ್ಲಿ 'ಪ್ರಿಯಸುತ' ಎಂದರೆ ಶಿಷ್ಯ ಅಥವಾ ಮಗನೆಂದೇ ಅರ್ಥ. ಆದ್ದರಿಂದ ಇದಕ್ಕೆ ಇಲ್ಲದ ಅರ್ಥವನ್ನು ಹಚ್ಚಿ ದೈವಭಕ್ತಿ ಆವರಣ, ರಾಜಭಕ್ತಿ ಆವರಣ, ಎಂದು ಹೇಳುವುದು ಅಸಂಗತವಾಗುತ್ತದೆ 'ಪ್ರೇಮಾಲಯಸುತ' ನಮಗೆ ಸಿಕ್ಕಿರುವ ಏಕೈಕ ಪ್ರಯೋಗ. ಆದರೆ ಪ್ರಿಯಸುತ ಎಂಬ ಅನೇಕ ಪ್ರಯೋಗಗಳು ದೊರಕುತ್ತವೆ. ಕದಂಬರ ಹಲಸಿಗೆ ಶಾಸನದಲ್ಲಿ ಹರಿವರ್ಮನು ತಾನು ರವಿವರ್ಮನ 'ಪ್ರಿಯತನಯ'ನೆಂದು[8] ಹೇಳಿಕೊಂಡಿರುತ್ತಾನೆ.

ಮುಂದೆ ವಿಜ ಅರಸ ಕೇಕೇಯ ಪಲ್ಲವರ ಮೇಲೆ ನಡೆದ ಯುದ್ಧದಲ್ಲಿ ತೋರಿದ ಶೌರ್ಯಕ್ಕಾಗಿ ಪಶುಪತಿ ಪಲ್ಮಿಡಿಯನ್ನು ಮೂಱುವಳ್ಳಿಯನ್ನು 'ಬಾಳ್ಗಚ್ಚಾ'ಗಿ ನೀಡುತ್ತಾನೆ. ಬಾಳ್ಗಚ್ಚು ಎಂಬ ಪದದ ಬಗ್ಗೆ ಅನೇಕ ವಿವರಣೆಗಳಿದ್ದರೂ ಎಲ್ಲ ವಿವರಗಳಿಗಿಂತ 'ಕತ್ತಿಯನ್ನು ತೊಳೆದ ಮರ್ಯಾದೆ' ಎಂಬ ಅರ್ಥವೇ ಸರಿ. ಏಕೆಂದರೆ ಸಂಸ್ಕೃತದ ಛಾಯೆಯಲ್ಲಿ ಮೂಡಿ ಬಂದಿರುವ ಈ ಶಾಸನದಲ್ಲಿ ಸಂಸ್ಕೃತದ 'ಖಡ್ಗ ಧಾರಾಂಬಸ್' ಎಂಬ ಪದಕ್ಕೆ ಬಾಳ್ಗಚ್ಚು ಎಂಬ ಸಮಾಸಪದ ಅರ್ಥ ಪೂರ್ಣವೂ ಆಗಿದೆ.

'ಇರ್ವ್ವರುಂ ಸಬ್ಬಂಗದರ್'-ಇಲ್ಲಿ ಸಬ್ಬಂಗದರ್ ಎಂಬ ಪದಕ್ಕೆ ಅರ್ಥವಿವರಣೆ ಪಡೆಯುವುದಕ್ಕೆ ಮೊದಲು ಇರ್ವರುಂ ಎಂಬುದಕ್ಕೆ ವಿವರಣೆ ಪಡೆಯಬೇಕು. ಶಾಸನಗಳನ್ನು ನಾವು ಪರಿಶೀಲಿಸುತ್ತಿದ್ದರೆ ರಾಜ, ದಾನ–ನೀಡಿದ ನಂತರ ಉಳಿದವರು ದಾನ ನೀಡುತ್ತಿದ್ದುದು. ಇಲ್ಲಿ ರಾಜ ಪ್ರತಿನಿಧಿ (ಸಂಬಂಧಿಕ) ಪಶುಪತಿ ವಿಜಅರಸನಿಗೆ

---

7 ಅಧ್ಯಯನ ಪು. 359 ಕಲಬುರ್ಗಿ, ಎಂ. ಎಂ.

8 I. A. VI P. 32 ಮತ್ತು ಸವಿನೆನಪು. ಪುಟ–794.

ಬಾಕ್ಕಟ್ಟು ನೀಡುತ್ತಾನೆ. ಅನಂತರ ಇರ್ವ್ವರುಂ ಸಬ್ಬಂಗದರ್ ಎಂಬ ವಾಕ್ಯ ಬರುತ್ತದೆ. ಇರ್ವ್ವರುಂ ಎಂಬುದು ಜಂಟಿಯಾಗಿ ಮೃಗೇಶ-ನಾಗರಿಗೆ ಈ ಬಿರುದೆ ಅನ್ವಯಿಸಲಾಗಿದೆ. [ಮೃಗೇಶ ನಾಗಾಹ್ವಯ ರಿರ್ವ್ವರ್] ನಿರ್ದಾಕ್ಷಿಣ್ಯವಾದಿಸ ರಕ್ಷಿಸುವ ಭಾರವನ್ನು ಹೊತ್ತಿದ್ದ ಅಧಿಕಾರಿಗಳಿರಬೇಕು. ಶಾಸನದಲ್ಲಿ ಇವರಿಗೆ ಅಭೀಳಭಟರ್ ಎಂಬ ವಿಶೇಷಣವಿದೆ. ಅಂದರೆ ಪರಾಕ್ರಮ ಶಾಲಿಗಳಾದ ಭಟರು ಎಂದರ್ಥ. 'ಇರ್ವ್ವರುಂ' ಎಂಬ ಪದದಲ್ಲಿ ಬಂದಿರುವ 'ಉಂ' ಎಂಬ ಸಮುಚ್ಚಯ 'ಸಬ್ಬಂಗದರ್' ಎಂಬ ಶಬ್ದದ ಮೇಲೆ ಬೀಳುತ್ತದೆ. ಆದ್ದರಿಂದ ಸಬ್ಬಂಗದರ್ ಇರ್ವ್ವರುಂ ಎಂದು ಅನ್ವಯಿಸಬೇಕು. ಸಬ್ಬಂಗದರ್ ಎಂಬುದಕ್ಕೆ ವಿದ್ವಾಂಸರು ಅನೇಕ ಅರ್ಥಗಳನ್ನು ಹೇಳಿರುತ್ತಾರೆ ಸರ್ವಾಂಗದವರು[9] ಸಕಳಂಗದವರು[10] ಸಮಂಗದವರು[11] ಶರಭಂಗದವರು[12] ಎಂದು. ಆದರೆ ಈ ಎಲ್ಲಾ ಅರ್ಥಗಳಿಗಿಂತ ಶ್ರೀ ಎಸ್. ನಾಗರಾಜ್ ಅವರು ಹೇಳುವಂತೆ[13] ಶರಭಂಗ ಎಂಬ ಪದದಿಂದ ನಿಷ್ಪತ್ತಿಸುವುದೇ ಸರಿ. ಏಕೆಂದರೆ 'ಅಭೀಳಭಟರಪ್ಪರ್' ಎಂಬ ಪದವನ್ನು ಮತ್ತು ಪ್ರಯೋಗವಾಗಿರುವ ಸನ್ನಿವೇಶವನ್ನು ಗಮನಿಸಬೇಕು. ಆದ್ದರಿಂದ ಅರ್ಥ ದೃಷ್ಟಿಯಿಂದಲೂ ಶರಭಂಗ ಎಂಬುದೇ ಸರಿ ಎನ್ನಿಸುತ್ತದೆ. ವಿದ್ವಾಂಸರು ಈ ಪದಕ್ಕೆ ಸ್ತ್ರೀಯ ಮುಖಂಡ[14] ಎಂಬ ಅರ್ಥವನ್ನು ನೀಡುತ್ತಾರೆ. ಈ ಮುಖಂಡರಿಬ್ಬರೂ ಮತ್ತು ವಿಜಅರಸರೂ ಕೂಡಿ ಪಲ್ಮಿಡಿಗೆ ಕುಱುಮ್ಬಡಿ ಬಿಟ್ಟರು 'ಕುಱುಮ್ಬಡಿ' ಎಂಬುದಕ್ಕೆ ಅರ್ಥ ಸ್ಪಷ್ಟವಿಲ್ಲ. ಸಣ್ಣ ತೆರಿಗೆಯೆಂಬ ಅರ್ಥವಿರಬಹುದು.

ಅನಂತರ ವಿಜ ಅರಸರು ಪಲ್ಮಿಡಿಯ ಭಟ್ಟರಿಗೆ ಗದ್ದೆಯ ಉತ್ಪಾದನೆಯಲ್ಲಿ ಪತ್ತೊನ್ದಿ ಬಿಡುತ್ತಾರೆ ಪತ್ತೊಂದಿ ಎಂಬ ಪದಕ್ಕೆ ಹತ್ತನೆಯ ಒಂದು ಭಾಗ ($\frac{1}{10}$)ವೆಂದು ಅರ್ಥೈಸಿದ್ದಾರೆ. ಸಂಸ್ಕೃತದಲ್ಲಿ ಇದಕ್ಕೆ ಸಮಾನ ಪದ ದಶವಂಧ[15] ಎಂಬುದು. ಕೋಶಕಾರರು ಇದಕ್ಕೆ $\frac{1}{10}$ ಎಂದು ಅರ್ಥೈಸಿದ್ದರೂ ಆ ಅರ್ಥ ಸರಿಯಲ್ಲವೆನಿಸುತ್ತದೆ. ಏಕೆಂದರೆ 'ದಶ' ಎಂದರೆ 'ಹತ್ತು'. 'ವಂಧ' ಎಂಬುದಕ್ಕೆ ಅರ್ಥ ಸ್ಪಷ್ಟವಿಲ್ಲ. ಶಾಸನ ಕಾರನಿಗೆ ಅರ್ಥ ಸ್ಪಷ್ಟವಾಗದೆ ಅವನು ಅದನ್ನು 'ವಂದಿ' ಎಂದೇ ಬರೆಸಿರುತ್ತಾನೆ. ಈ ಪದ ಪ್ರಯೋಗವಾಗಿರುವ ಸನ್ನಿವೇಶಗಳನ್ನು ಗಮನಿಸಿದಾಗ ಇದೊಂದು ನೀರಾವರಿ ತೆರಿಗೆ ಎಂಬುದು ಸ್ಪಷ್ಟವಾಗುತ್ತದೆ. ಈ ತೆರಿಗೆ ರಾಜನಿಗೆ ನೇರವಾಗಿ ಸಲ್ಲುತ್ತಿದ್ದಿರಬೇಕು.

---

9 ಡಾ॥ ಎಂ. ಚಿದಾನಂದಮೂರ್ತಿ, ಪ್ರಬುದ್ಧ ಕರ್ನಾಟಕ ಸಂ. 47 ಸಂಚಿಕೆ 4.

10 ಶ್ರೀ ಶಿವರಾಮ ಐತಾಳ ಮತ್ತು ಕೆ.ವಿ. ರಮೇಶ್, ಪ್ರ.ಕ. ಸಂಪುಟ 50 ಸಂಚಿಕೆ 4.

11 ಹನುಮಂತರಾವ್, ಪ್ರ. ಕ. 52 ಸಂಚಿಕೆ 3

12 – ಎಸ್. ನಾಗರಾಜು, ಪ್ರ. ಕ. 13 ಅದೇ.......

14 ಎಪಿಗ್ರಾಫಿಕಲ್ ಗ್ಲಾಸರಿ. ಡಿ. ಸಿ. ಸರ್ಕಾರ್. ಪು. 300

15 E. C. V Bl. 245, ಕ. ಶಾ. ಸಾಂ. ಅ. ಪುಟ 369. ಡಾ॥ ಎಂ. ಚಿದಾನಂದಮೂರ್ತಿ

ತೆಲುಗು ಶಾಸನಗಳಲ್ಲಿ[16] ಈ ಪದ ಬಂದಿರುವುದು ನೀರಾವರಿಗೆ ಸಂಬಂಧಿಸಿದಂತೆ. ಆದ್ದರಿಂದ $\frac{1}{10}$ನೇ ಭಾಗವೆನ್ನುವುದಕ್ಕಿಂತ ನೀರಾವರಿ ತೆರಿಗೆ ಎನ್ನುವುದೇ ಸೂಕ್ತ. ಆಳುಪರ ಶಾಸನಗಳಲ್ಲಿ ಈ ಪದ ಕಾಣಿಸುತ್ತದೆ. (ತು. ಶಾ. ಸಂ.1. 10) ಆದ್ದರಿಂದ ಪತ್ತೊನ್ದಿ ಎಂಬುದು ಅರಿಸಮಾಸಪದ. ಪತ್ತು + ವನ್ದ (ವನ್ದಿ)

ಮೇಲೆ ರಾಜನಿಗೆ ಸಲ್ಲುತ್ತಿದ್ದ ನೀರ ತೆರಿಗೆ ಎಂದು ಹೇಳಿದ್ದೇನೆ. ನನ್ನ ಈ ಹೇಳಿಕೆಗೆ ಆಧಾರ ಹಲ್ಮಿಡಿ ಶಾಸನದಲ್ಲಿ ಬರುವ ಆ ಪತ್ತೊನ್ದಿ ಎಂಬ ಪದ. ಇಲ್ಲಿ ಬರುವ ಆ ಎಂಬ ಸರ್ವನಾಮಕ್ಕೆ ನಾವು 'ರಾಜ ಭಾಗ'ವೆಂಬ ಅರ್ಥವನ್ನು ಮಾಡಬೇಕು. ಏಕೆಂದರೆ ಕೃಷ್ಣವರ್ಮನ ಬೆಣ್ಣೂರು ಶಾಸನದಲ್ಲಿ[17] 'ರಾಜಭಾಗ ದಶವನ್ದಂ'ಎಂಬ ಪದ ಬರುತ್ತದೆ. ಈ ರಾಜಭಾಗ ವೆಂಬ ಪದವನ್ನು ಹಲ್ಮಿಡಿಶಾಸನದಲ್ಲಿ 'ಆ' ಎಂಬ ಶಬ್ದದಿಂದ ಹೇಳಿದೆ. ಹಲ್ಮಿಡಿಯ ಭಟ್ಟರಿಗೆ ವಿಜಅರಸ ರಾಜಭಾಗವಾಗಿ ನೀಡಬೇಕಾಗಿದ್ದ ಪತ್ತೊನ್ದಿಯನ್ನು ಬಿಟ್ಟ. ಈ ವಾಕ್ಯದಲ್ಲಿಯೇ ಭಟ್ಟರ್ಗ್ಗೆ ಎಂಬ ಪದ ಬರುತ್ತದೆ. ಇಲ್ಲಿ ಭಟ್ಟರ್ಗ್ಗೆ ಎಂದಾಗ ಬ್ರಾಹ್ಮಣ ಎಂಬ ಅರ್ಥವನ್ನೇ ಮಾಡದೆ ಇನ್ನೂ ವಿಶಾಲವಾದ ಅರ್ಥವನ್ನು ಮಾಡುವುದು ಉತ್ತಮ. ಆ ಊರಿನ ದೇವಾಲಯದ ಸ್ಥಾನಿಕ ಅಥವಾ ವೇದ ಪಾರಂಗತನಾದ ಬ್ರಾಹ್ಮಣ ಎಂದು ಅರ್ಥೈಸುವುದು ಸೂಕ್ತ. ಈ ಗೞ್ದೆ ಒಡ್ಡಲಿ ಎಂಬಲ್ಲಿ 'ಈ' ಎಂಬ ಶಬ್ದಕ್ಕೆ ನೀವು ಅನುಭವಿಸುತ್ತಿರುವ, ಅಥವಾ ನಿಮಗೆ ಬಿಟ್ಟಿರುವ ಎಂಬ ಅರ್ಥವನ್ನು ಮಾಡಬೇಕು. 'ಗೞ್ದೆ ಒಡ್ಡಲಿ,[18] ಎಂದಾಗ ಗದ್ದೆಯಲ್ಲಿ ಬರುವ ಉತ್ಪಾದನೆ ಎಂದರ್ಥ. ಅಕರ ಎಂಬ ಪದಕ್ಕೆ ತೆರಿಗೆ ಇಲ್ಲ ಎಂದರ್ಥ. ಬಹುಶಃ ರಾಜಭಾಗವಾದ ಪತ್ತೊನ್ದಿ ಎಲ್ಲರೂ ಕೊಡಬೇಕಿತ್ತು. ಆದರೆ ವಿಜ ಅರಸ ಪತ್ತೊನ್ದಿಯಿಂದ ವಿನಾಯತಿ ನೀಡುತ್ತಾನೆ. ಇತರ ತೆರಿಗೆಗಳಿಂದ ಮುಕ್ತಗೊಳಿಸಿದ ಉಲ್ಲೇಖವಿಲ್ಲ. ಇತರ ತೆರಿಗೆಗಳನ್ನು ಆತನೂ ನೀಡಬೇಕಿತ್ತು. ಇದೇರೀತಿ ಅರ್ಥ ಕೊಡುವ ಶಾಸನ ವಾಕ್ಯಗಳನ್ನು ಗಮನಿಸಿ. ಅಕರ, ಅಭಟ ಪ್ರವೇಶ, ಅಲವಣಂ, ಅಪುತ್ರಕ ಸ್ರೋರಳು ಎಂಬ ಪ್ರಯೋಗಗಳು ಕನ್ನಡ ಶಾಸನಗಳಲ್ಲಿಯೂ ಕೆಲವು ಪದಗಳು ಸಂಸ್ಕೃತ ಶಾಸನಗಳಲ್ಲಿಯೂ ಕಾಣಿಸುತ್ತವೆ.

ಶಾಸನದ ಅನ್ವಯಪಾಠ

ನಮಃ ಶ್ರೀಮತ್ಕದಂಬಪನ್, ತ್ಯಾಗಸಂಪನ್ನನ್, ಕಲಭೋರನಾ ಅರಿ ಕಕುಸ್ಥ

16 E. C. x Bg. 32. ಕ್ರಿ.ಶ. 1690. ಮತ್ತು ಎಪಿಗ್ರಫಿಕಲ್ ಗ್ಲೋಸರಿ ಆಫ್ ಆಂಧ್ರಪ್ರದೇಶ್. ಪುಟ 138, 139

17 EC V Bl 245

18 ಒಡ್ಡು ಎಂಬ ಪದಕ್ಕೆ ಉಡ್ಡೆ, ರಾಶಿ, ಉತ್ಪತ್ತಿ ಮುಂತಾದ ಅರ್ಥಗಳಿವೆ.

ಭಟ್ಟೋರ್ಕರನ್ ಆಳೆ ನರಿದಾವಿಳೆ ನಾಡೊಳ್ ಮೃಗೇಶ ನಾಗೇನ್ದ್ರಾಭೀಳ ಭಟರ್ ಮೃಗೇಶ ನಾಗಾಹ್ವಯರ್ ಇರ್ವ್ವರ್ ಅಪ್ಪೋರ್.

ಬಟರಿ ಕುಲಾಮಲ ವ್ಯೋಮ ತಾರಾಧಿನಾಥನ್, ಅಳಪಗಣ ಪಶುಪತಿ. ದಕ್ಷಿಣಾಪಥ ಬಹುಶತ ಹವನಾಹವದುಳ್ ಪಶು ಪ್ರದಾನ ಶೌರ್ಯೋದ್ಯಮ ಭರಿತೋನ್, ದಾನಪಶುಪತಿ ಎಂದು ಪೊಗಱೆಪ್ಪೊಟ್ಟಣ ಪಶುಪತಿನಾಮಧೇಯನ್.

ಆ ಸರಕ್ಕೆಲ್ಲ ಭಟಾರಿಯಾ ಪ್ರೇಮಾಲಯ ಸುತನ್ಗೆ ಸೇನ್ದ್ರಕಬಣ ಉಭಯ ದೇಶದ ಆ ವೀರ ಪುರುಷ ಸಮಕ್ಷದೆ ಕೇಕೇಯ ಪಲ್ಲವರಂ ಕಾದಿ ಎಱಿದು ಪೆತ್ತ ಜಯನ್ ಆ ವಿಜ ಅರಸನ್ಗೆ ಪಲ್ಮಿಡಿಉಂ,[19] ಮೂಳಿವಳ್ಳಿಉಂ[20] ಬಾಳ್ಗಚ್ಚು ಕೊಟ್ಟಾರ್.

ಬಟರಿ ಕುಲದೋನ್ ಆಳಕದಮ್ಬನ್. ಕಳ್ದೋನ್ ಮಹಾ ಪಾತಕನ್.

ಸಳ್ಬಂಗದರ್ ಇರ್ವ್ವರುಂ-ವಿಜ ಅರಸರುಂ ಪಲ್ಮಿಡಿಗೆ ಕುಱುಮ್ಬಿಡಿ ವಿಟ್ಟಾರ್. ಅದಾನ್ ಅೞಿವೊನ್ಗೆ ಮಹಾಪಾತಕಮ್.

ಸ್ವಸ್ತಿ, ಭಟ್ಟರ್ಗ್ಗೆ ಈ ಗಱ್ದಿ ಒಡ್ಡಲಿ ಆ ಪತ್ತೊನ್ದಿ ಅಕರ ವಿಟ್ಟಾರ್-

ಸ್ವಸ್ತಿ. ಕದಂಬ ವಂಶದವನೂ, ತ್ಯಾಗ ಸಂಪನ್ನನೂ, ಕಲಭೋರನ ವೈರಿಯೂ ಆದ ಕಕುಸ್ಥ ಭಟ್ಟಾರಕನು ಆಳುತ್ತಿದ್ದಾಗ, ನರಿದಾವಿಳೆ ನಾಡಿನಲ್ಲಿ ಸಿಂಹದಂತೆ ಪರಾಕ್ರಮಿಗಳೂ ಆನೆಯಂತೆ ಬಲಶಾಲಿಗಳೂ ಆದ ಮೃಗೇಶ ಮತ್ತು ನಾಗ ಎಂಬ ಪ್ರಖ್ಯಾತ ವೀರರಿಬ್ಬರಿದ್ದರು.

ಬಟಾರಿವಂಶವೆಂಬ ನಿರ್ಮಲವಾದ ಆಕಾಶಕ್ಕೆ ಚಂದ್ರನಂತಿದ್ದವನೂ, ಆಳುಪ ಕುಲದ ಒಡೆಯನೂ ಆ ದಕ್ಷಿಣಾಪಥದಲ್ಲಿ ಅನೇಕ ನೂರು ಯಜ್ಞಗಳೆಂಬ ಯುದ್ಧಗಳಲ್ಲಿ ಭಾಗವಹಿಸಿ ಗೋ ಮುಂತಾದ ಮುಖ್ಯ ದಾನಗಳನ್ನು ನೀಡಿ ತನ್ನ (ದಾನ) ಶೂರತ್ವವನ್ನು ಮೆರೆದವನೂ, ದಾನ ನೀಡುವುದರಲ್ಲಿ ಶಿವನಿಗೆ ಸಮಾನನಾದವನೆಂದು ಹೊಗಳಿಸಿಕೊಂಡು ಪಶುಪತಿ ಎಂಬ ಹೆಸರನ್ನು ಪಡೆದಿದ್ದವನಾದ. ಆ ಸರಕ್ಕೆಲ್ಲ ಬಟಾರಿಯ ಮನೆ ಮಗನಾದ ಸೇನ್ದ್ರಕ, ಬಾಣರೇ ಮೊದಲಾದ ಉಭಯ ದೇಶಗಳ ವೀರಪುರುಷರ ಎದುರಿನಲ್ಲಿ ಕೇಕೇಯ-ಪಲ್ಲವರ ಜೊತೆ ಯುದ್ಧಮಾಡಿ ಕೊಂದು ಜಯವನ್ನು ಪಡೆದ - ಆ ವಿಜ ಅರಸನಿಗೆ ಪಲ್ಮಿಡಿಯನ್ನು ಮೂಳಿವಳ್ಳಿಯನ್ನು ಬಾಳ್ಗಚ್ಚಾಗಿ ನೀಡುತ್ತಾನೆ.

(ದಾನ ನೀಡಿದವನು) ಬಟಾರಿ ಕುಲದವನಾದ ಆಳುಪ-ಕದಂಬನು (ಈ ದಾನವನ್ನು) ಕದ್ದವನು ಮಹಾಪಾತಕನು.

---

19 ಹಲ್ಮಿಡಿಗೆ ಹತ್ತಿರ [illegible] E C VI Cm. 3. 42.

20 ಈಗಿನ ಮೂಂಗವಳ್ಳಿ E C VI Cm 129.

(ನರಿದಾವಿಳೆನಾಡಿನ) ಅಧಿಕಾರಿಗಳಿಬ್ಬರೂ ಮತ್ತು ವಿಜ ಅರಸನೂ ಪಲ್ಮಿಡಿಗೆ ಕುಱುಮ್ಬಿಡಿಯನ್ನು ಬಿಡುತ್ತಾರೆ. (ಈ ಶಾಸವನ್ನು) ನಾಶಮಾಡಿದವನಿಗೆ ಮಹಾ ಪಾತಕ ಬರುತ್ತದೆ.

(ವಿಜ ಅರಸರು) ಪಲ್ಮಿಡಿಯ ಭಟ್ಟರಿಗೆ ಅವರ ಗದ್ದೆಯ ಉತ್ಪಾದನೆಯಲ್ಲಿ ರಾಜ ಭಾಗವಾಗಿ ಕೊಡಬೇಕಾಗಿದ್ದ ಪತ್ತೊಂದಿಯೆಂಬ ತೆರಿಗೆಯನ್ನು ಬಿಟ್ಟರು.

ಹಲ್ಮಿಡಿಯ ಶಾಸನ ಎಲ್ಲರೂ ತಿಳಿದಿರುವಂತೆ ಬಹಳ ಕಠಿಣವಾದ ಶಾಸನವೇನಲ್ಲ. ಅನ್ವಯಾರ್ಥ ಬಿಡಿಸುವುದರಲ್ಲಿ ತೊಡಕು ಕಾಣಿಸಿದ್ದುದರಿಂದ ಪಾಠದ ಅರ್ಥ ಹೀಗಾಗಿತ್ತು. ಷಡಕ್ಷರಿಯ ಪದ್ಯಗಳಿಗಿಂತ ಕಠಿಣವೇನಲ್ಲ. ಈ ಶಾಸನವನ್ನು ಅಧ್ಯಯನ ಮಾಡುವುದಕ್ಕೆ ಮೊದಲು ಕರ್ನಾಟಕದಲ್ಲಿ ಕಾಲದಿಂದ ಕಾಲಕ್ಕೆ ಬೀರಿದ ಭಾಷಾ ಪ್ರಭಾವವನ್ನು ನೆನಪಿನಲ್ಲಿಟ್ಟುಕೊಂಡಿರುತ್ತೇನೆ. ಕದಂಬ ಕಾಕುಸ್ಥವರ್ಮನವರೆಗೆ ಸಂಸ್ಕೃತ ಭಾಷೆಯ ಶಾಸನಗಳು ಸಿಕ್ಕುವುದಿಲ್ಲ. ಸಿಕ್ಕುವ ಶಾಸನಗಳೆಲ್ಲವೂ ಪ್ರಾಕೃತದಲ್ಲಿವೆ. ಮಯೂರನ ಚಂದ್ರವಳ್ಳಿ ಶಾಸನ, ಕದಂಬ ರಾಜನ ಮಳವಳ್ಳಿ ಶಾಸನಗಳೆಲ್ಲಾ ಪ್ರಾಕೃತದಲ್ಲಿವೆ. ಅಂದರೆ ಪ್ರಾಕೃತ ಆ ಕಾಲದವರೆಗೆ ಸಾರ್ವತ್ರಿಕವಾಗಿತ್ತು. ಕರ್ನಾಟಕದಲ್ಲಿ ಕ್ರಿ.ಶ. 400ರ ನಂತರ ಸಂಸ್ಕೃತ ಬಳಸಿರುತ್ತಾರೆ. ಮುಕ್ಕಣ್ಣ ಕದಂಬನ ಕಾಲದಲ್ಲಿ ಉತ್ತರದ ಅಹಿಚ್ಛತ್ರದಿಂದ ಅನೇಕ ಬ್ರಾಹ್ಮಣ ಸಂಸಾರಗಳು ಬಂದು ತಾಳಗುಂದದಲ್ಲಿ ನೆಲಸಿದರೆಂದು ಒಂದು ಶಾಸನದಲ್ಲಿ ಉಲ್ಲೇಖವಾಗುತ್ತದೆ. ಕದಂಬ ಕಾಕುಸ್ಥವರ್ಮನು ಗುಪ್ತರೇ ಮೊದಲಾದ ರಾಜರೊಂದಿಗೆ ವೈವಾಹಿಕ ಸಂಬಂಧ ಬೆಳೆಸಿದಂತೆ ಹೇಳಿಕೊಳ್ಳುತ್ತಾನೆ. ಈ ಕಾಲಕ್ಕೆ ಉತ್ತರದಲ್ಲಿ ಸಂಸ್ಕೃತ ಬಲವಾಗಿ ಬೇರೂರಿತ್ತು. ಆದ್ದರಿಂದ ಅಹಿಚ್ಛತ್ರದಿಂದ ಬ್ರಾಹ್ಮಣರು ಬಂದರೆನ್ನುವುದಕ್ಕಿಂತ ಕಾಕುಸ್ಥನು ಬೆಳೆಸಿದ ವೈವಾಹಿಕ ಸಂಬಂಧವೇ ಸರಿಯಾದ ಕಾರಣವೆನ್ನಬಹುದು. ಹೀಗೆ ಉತ್ತರದವರ ಪ್ರಭಾವವಲಯಕ್ಕೆ ಸಿಕ್ಕಿದ ಅನಂತರ ಕರ್ನಾಟಕದಲ್ಲಿ ಪೆಟ್ಟಿಗೆಯಾಕಾರದ ಲಿಪಿ ಮತ್ತು ಸಂಸ್ಕೃತ ಭಾಷೆಯ ಶಾಸನಗಳು ಪ್ರಾರಂಭವಾಗುತ್ತವೆ. ಹೀಗಾಗಿ ಕನ್ನಡದ ಪ್ರಾಚೀನ ಶಾಸನವೆಂದು ಕರೆಯಿಸಿಕೊಳ್ಳುವ ಹಲ್ಮಿಡಿ ಶಾಸನದಲ್ಲಿ ಸಂಸ್ಕೃತದ ಪ್ರಭಾವ ಬೀಳಲು ಕಾರಣವಾಯಿತು. ಏಕೆಂದರೆ ನೈಜವಾತಾವರಣದಲ್ಲಿ ಹಲ್ಮಿಡಿ ಶಾಸನ ಸೃಷ್ಟಿಯಾಗಿದ್ದರೆ ಅದರ ಮೇಲೆ ಪಾಕೃತ ಭಾಷೆಯ ಪ್ರಭಾವ ಬೀಳಬೇಕಿತ್ತು. ಉತ್ತರದಿಂದ ಬಂದ ಸಂಸ್ಕೃತ ವಿದ್ವಾಂಸರಿಂದಲೇ ತಾಳಗುಂದ, ಗುಡ್ನಾಪುರದಂತಹ ಶಾಸನಗಳು ಸೃಷ್ಟಿಯಾದದ್ದು. ಇದೇ ಪಂಡಿತರ ಕಾರಣದಿಂದ ಹಲ್ಮಿಡಿ ಶಾಸನ ಸಂಸ್ಕೃತ ಭೂಯಿಷ್ಠವಾಗಿ ಮೆರೆಯಿತು. ಹಲ್ಮಿಡಿ ಶಾಸನದ ರಚಕ ನಿಸ್ಸಂಶಯವಾಗಿ ಕನ್ನಡ ಭಾಷೆ ಬಲ್ಲ ಸಂಸ್ಕೃತ ವಿದ್ವಾಂಸ.

ಕವಿರಾಜಮಾರ್ಗ-ಕೆಲವು ಸಂದೇಹಗಳು

ಕೆ. ನಾಗರಾಜ

ಈ ವರೆಗೆ ದೊರೆತಿರುವ ಕನ್ನಡದ ಪ್ರಾಚೀನ ಸಾಹಿತ್ಯ ಕೃತಿಗಳಲ್ಲಿ ಮೊದಲನೆಯದು "ಕವಿರಾಜಮಾರ್ಗ". "ಕಾವ್ಯಶಾಸ್ತ್ರ ನಿರೂಪಿಸುವ ಸ್ವತಂತ್ರ ದೃಷ್ಟಿಯ ಲಕ್ಷಣ ಗ್ರಂಥ" ಎಂದು ಬಹುಮಂದಿ ಒಪ್ಪಿರುವ 'ಕವಿರಾಜಮಾರ್ಗ' ಕರ್ನಾಟಕದ ಸಾಹಿತ್ಯ ಚರಿತ್ರೆಯ ಕತ್ತಲು ಯುಗಕ್ಕೆ ಪ್ರವೇಶ ಪಡೆಯಲು ದಾರಿ ದೀಪವಾಗಿದೆ- ಎಂಬ ಉಕ್ತಿ ನಿತ್ಯ ಸತ್ಯ.

ಆಚಾರ್ಯ ಶ್ರೀ.ನಂ.ಶ್ರೀಕಂಠಯ್ಯನವರು ಹೇಳಿರುವಂತೆ ಚಾಲುಕ್ಯರ ಕಾಲಾನಂತರ ಆನೆಯ ಹಿಂಡಿನಂತೆ (ಕನ್ನಡ) ಕೃತಿಗಳು ಸಾಗಿಹೋಗಿದ್ದರೂ ಅವುಗಳ ನೆನಪಾಗಿ ಅಲ್ಲಲ್ಲಿ ಕೆಲವು ಸೂಚನೆಗಳು ದೊರಕುತ್ತವೆಯೇ ಹೊರತು. ಯಾವ ಕೃತಿಯೂ ಲಭ್ಯವಾಗಿಲ್ಲ: ಆನೆ ಹೆಜ್ಜೆಗಳಂತೆ ಕಲಸಿಕೊಂಡಿರುವ ಆ ಗುರುತುಗಳನ್ನು ವಿಂಗಡಿಸಿ ತೆಗೆಯಲು 'ಕವಿರಾಜಮಾರ್ಗ' ಸಹಕಾರಿ. 'ಕವಿರಾಜಮಾರ್ಗ'ರಚಿತವಾದ ರಾಷ್ಟ್ರಕೂಟ ಅಮೋಘವರ್ಷ ನೃಪತುಂಗನ ಕಾಲಕ್ಕೆ (ಕ್ರಿ.ಶ. 814 877 ?) ಕನ್ನಡ ಸಾಹಿತ್ಯ ಒಂದು ಮೇಲ್ಮಟ್ಟವನ್ನು ಖಂಡಿತ ಮುಟ್ಟಿದ್ದಿತು ಎಂಬುದಕ್ಕೆ ಗ್ರಂಥಸ್ಥ ಆಧಾರಗಳ ಜೊತೆಗೆ ಇತರ ಚಾರಿತ್ರಿಕ ಆಧಾರಗಳೂ ವಿಪುಲವಾಗಿ ದೊರೆಯುತ್ತವೆ ಎಂಬುದನ್ನು 1898ರಲ್ಲಿ ಮೊದಲು ಸಂಪಾದಿಸಿದ ಕೆ.ಬಿ. ಪಾಠಕರಿಂದ ಮೊದಲುಗೊಂಡು ಈವರೆಗಿನ ವಿದ್ವನ್ಮಣಿಗಳು ಆಧಾರ ಸಮೇತ ಸ್ಪಷ್ಟಪಡಿಸಿದ್ದಾರೆ.

ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ಕೋರುಗಂಬವಾಗಿರುವ ಈ ಕೃತಿಯ ಕರ್ತೃ ಯಾರು ? ನೃಪತುಂಗನೆ ?, ಅವನ ಸಭಾಸದರಲ್ಲಿ ಒಬ್ಬನಾಗಿದ್ದಿರಬಹುದಾದ ಶ್ರೀವಿಜಯನೇ ?. ಕವೀಶ್ವರನೇ ?. ಬಿ.ಎಲ್. ರೈಸ್, ಕೆ.ಬಿ. ಪಾಠಕ್, ಆರ್. ನರಸಿಂಹಾಚಾರ್. ನಾ. ಶ್ರೀ. ರಾಜಪುರೋಹಿತ. ಬಿ.ಎಂ.ಶ್ರೀ.. ಡಿ.ಕೆ. ಭೀಮಸೇನ ರಾವ್, ಡಾ|| ಎಸ್.ಸಿ. ನಂದೀಮಠ, ಡಾ|| ಕೆ. ಕೃಷ್ಣಮೂರ್ತಿ. ಭೀಮರಾವ್ ಚಿಟಗುಪ್ಪಿ, ಮೊದಲಾದವರು 'ನೃಪತುಂಗ' ರಚಿಸಿದನೆಂದೂ; ಡಾ|| ಫ್ಲೀಟ್. ಎ. ವೆಂಕಟರಾವ್, ಎಚ್. ಶೇಷಯ್ಯಂಗಾರ್ ಅವರು 'ಕವೀಶ್ವರ' ರಚಿಸಿದನೆಂದೂ ಟಿ.ಎಸ್. ವೆಂಕಣ್ಣಯ್ಯ, ಎ.ಆರ್. ಕೃಷ್ಣಶಾಸ್ತ್ರಿ. ರಂ.ಶ್ರೀ. ಮುಗಳಿ. ಮುಳಿಯ

ತಿಮ್ಮಪ್ಪಯ್ಯ, ತೀ.ನಂ.ಶ್ರೀ., ಕೆ. ವೆಂಕಟರಾಯಾಚಾರ್, ಡಾ|| ಚಿದಾನಂದ ಮೂರ್ತಿ, ಡಾ|| ಎಂ.ಎಂ. ಕಲಬುರ್ಗಿ ಮೊದಲಾದವರು ನೃಪತುಂಗನ ಸಭಾಸದನಾದ 'ಶ್ರೀವಿಜಯ' ತನ್ನ ಆಶ್ರಯದಾತನಾದ ನೃಪತುಂಗನ ಅಭಿಮತಾನುಸಾರವಾಗಿ ಈ ಕೃತಿ ರಚನೆ ಮಾಡಿದನೆಂದೂ ಪ್ರತಿಪಾದಿಸಿದ್ದಾರೆ. "ಶ್ರೀವಿಜಯ ಕರ್ತೃತ್ವ" ವಾದಗಳನ್ನು ಮಂಡಿಸಿರುವವರಲ್ಲಿ ಪ್ರಮುಖರಾದ ಎಂ. ವಿ. ಸೀತಾರಾಮಯ್ಯನವರು 1968ರಲ್ಲಿ ಸಂಪಾದಿಸಿ, ಸುದೀರ್ಘ ಮುನ್ನುಡಿಯೊಡನೆ ಪ್ರಕಟಿಸಿದ ಕೃತಿ 'ಕವಿರಾಜಮಾರ್ಗ' ಈ ದಿಸೆಯಲ್ಲಿ ಮೈಲುಗಲ್ಲಾಗಿದೆ. ಬಹುಮಂದಿ ವಿದ್ವಾಂಸರು 'ಶ್ರೀವಿಜಯ ಕರ್ತೃತ್ವ'ವನ್ನೇ ಒಪ್ಪಿರುವುದರಿಂದ ಸದ್ಯಕ್ಕೆ ಇದೇ ಸರ್ವಸಮ್ಮತ ನಿರ್ಣಯವಾಗಿದೆ ಎನ್ನಬಹುದು.

ಈ ಎಲ್ಲ ವಾದ ವಿವಾದಗಳನ್ನೂ ಅವಲೋಕಿಸಿದಲ್ಲಿ ಮತ್ತು 'ಕವಿರಾಜಮಾರ್ಗ'ದಲ್ಲಿ ಅಲ್ಲಲ್ಲಿ ಬರುವ "ನೃಪತುಂಗ ದೇವಮಾರ್ಗ". "ಅತಿಶಯ ಧವಳೋಕ್ತ ಕ್ರಮದೆ" "ಅತಿಶಯ ಧವಳೋರ್ವಿ ಪ್ರೋದಿ ತಾಳ್ಗೆ ಕೃತಿ ಮತಿ". "ಎಂದನ್ ಅತಿಶಯ ಧವಳನ್" "ಅತಿಶಯ ಧವಳೋಕ್ತಿ ಕ್ರಮದಿನರಿಪ್ಪುದೆಂ ತದ್ವಮೋಳ್". "ಅತಿಶಯ ಧವಳ ಧರಾಧಿಪ ಮತದಿಂ.... ...", "ಅತಿಶಯ ಧವಳೋಪದೇಶ ಮಾರ್ಗದಿಂ........", "ನೃಪತುಂಗಾನುಮತ........". ಮೊದಲಾದ ಉಕ್ತಿಗಳನ್ನು ಕೂಲಂಕಷವಾಗಿ ಪರೀಕ್ಷಿಸಿದಲ್ಲಿ ಈಗ ನಮ್ಮ ಮುಂದಿರುವ ಕವಿರಾಜಮಾರ್ಗವು ಅತಿಶಯಧವಳ ಬಿರುದಾಂಕಿತನಾದ ಅಮೋಘವರ್ಷ ನೃಪತುಂಗನಿಂದ ಉಕ್ತವಾದ, ಇಲ್ಲವೇ ಆತನೇ ಸ್ವತಃ ರಚಿಸಿದ ಕೃತಿಯ ಆಧಾರದ ಮೇಲೆ ನೃಪತುಂಗನ ಅನಂತರ ಆತನ ಸಭಾಸದರಲ್ಲಿದ್ದಿರಬಹುದಾದ ಕವೀಶ್ವರನೋ ಶ್ರೀವಿಜಯನೋ ರಚಿಸಿದ ಕೃತಿಯಾಗಿರಬಹುದೆಂದು ಭಾವಿಸಲು ಕಾರಣಗಳಿವೆ.

ನೃಪತುಂಗನ ಕಾಲದಲ್ಲಿ ಕಾವೇರಿಯಿಂದ ಗೋದಾವರಿವರೆಗೆ ವ್ಯಾಪಿಸಿದ್ದ ಕನ್ನಡ ನಾಡಿನ ಆ ನಾಡವರ ಸಾಹಿತ್ಯರಾಶಿಯ ಸಿಂಹಾವಲೋಕನ ಮಾಡುವ ಪ್ರಥಮ ಪರಿಚ್ಛೇದದಲ್ಲಿ, ದೋಷ ಪ್ರಕರಣಗಳಿಗೆ ನೀಡಿರುವ ಪ್ರಾಮುಖ್ಯತೆಯನ್ನೂ ಅನಂತರದ ಎರಡು ಪರಿಚ್ಛೇದಗಳಲ್ಲಿ ಬರುವ ಲಕ್ಷ್ಯ, ಲಕ್ಷಣ ನಿರೂಪಣೆಗಳನ್ನೂ ಪರಾಮರ್ಶಿಸಿದರೆ ಇದು ಸ್ಪಷ್ಟವಾಗುತ್ತದೆ.

ಪ್ರಥಮ ಪರಿಚ್ಛೇದದಲ್ಲಿ ಕನ್ನಡದಲ್ಲಿ ಇದ್ದಿರಬಹುದಾದ "ಚಿರಂತನಾಚಾರ್ಯ"ರು ಬಳಕೆಗೆ ತಂದಿದ್ದ ಸಾಹಿತ್ಯ ಪದ್ಧತಿ, ದೇಸಿ-ಛಂದಸ್ಸುಗಳನ್ನು ಉಲ್ಲೇಖಿಸುವ ಕೃತಿಕಾರ, ಮುಂದಿನ ಪರಿಚ್ಛೇದಗಳಲ್ಲಿ ಬಹುವಾಗಿ ದಂಡಿ ಭಾಮಹರ ಲಕ್ಷ್ಯ, ಲಕ್ಷಣಗಳನ್ನು ಅನುವಾದ ಮಾಡುವ ಇಲ್ಲವೆ ಅನುಕರಿಸುವ ಅಗತ್ಯವೇನಿದ್ದಿತು ? ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತಮತಿಗಳಾಗಿದ್ದ ಆಗಿನ ಕಾಲದ ಕನ್ನಡಿಗರು

ಮತ್ತವರ ಕಾವ್ಯಪ್ರಜ್ಞೆ ವಿಷಯ ಪರಿಣತಿಗಳನ್ನು ಮನಸಾರೆ ಕೊಂಡಾಡುವ ಕೃತಿಕಾರ, ತನ್ನ ಕೃತಿಯ ಅರ್ಧಕ್ಕರ್ಧ ಭಾಗ ರಚಿಸಲು ಸಂಸ್ಕೃತ ಲಾಕ್ಷಣಿಕರ ಕೃತಿಗಳಿಂದ ಎರವಲಾಗಿ ಪಡೆಯುವ ಅಂಥ ಅನಿವಾರ್ಯ ಪ್ರಸಂಗ ಏನಿದ್ದಿತು? ಅಂದರೆ ಪ್ರಸಕ್ತ 'ಕವಿರಾಜಮಾರ್ಗ'ದ ಕರ್ತೃವಿಗೆ ನೃಪತುಂಗನ ಕಾಲದ, ಪರಿಸರದ, ಸಾಹಿತ್ಯದ ಯಥಾರ್ಥ ಪರಿಚಯವಿರಲಿಲ್ಲವೆ?: ಇದ್ದಿದ್ದರೆ ಸಮಕಾಲೀನ ಕನ್ನಡ ಸಾಹಿತ್ಯದ ಲಕ್ಷ್ಯ-ಲಕ್ಷಣಗಳನ್ನು ಸಾಕಷ್ಟು ಪ್ರಮಾಣದಲ್ಲಿ ಉದಾಹರಿಸಬಹುದಿತ್ತಲ್ಲ, ಅಲ್ಲವೆ? ಆ ಕಾಲದ ತೋರುದೀಪಗಳಂತಹ ಸಾಹಿತ್ಯ ಕೃತಿಗಳನ್ನು ದಂಡಿ ಭಾಮಹರ (ಕವಿರಾಜಮಾರ್ಗದ ಸುಮಾರು 536 ಪದ್ಯಗಳಲ್ಲಿ 45ಕ್ಕೆ ಭಾಮಹನ ಕಾವ್ಯಾಲಂಕಾರವೂ, 230ಕ್ಕೂ ಹೆಚ್ಚು ಪದ್ಯಗಳಿಗೆ ದಂಡಿಯ ಕಾವ್ಯಾದರ್ಶವೂ ಆಕರಗಳಾಗಿವೆ) ಕೃತಿಗಳನ್ನು ಆಧರಿಸಿ ಒರೆಹಚ್ಚಲು ನಡೆಸಿರುವ ಪ್ರಯತ್ನವು. ಈ 'ಕವಿರಾಜಮಾರ್ಗ'ವು ನೃಪತುಂಗನ ಇಲ್ಲವೇ ಆ ಕಾಲದ, ಕನ್ನಡ ಲಕ್ಷಣ ಗ್ರಂಥಗಳ ಆಧಾರದ ಮೇಲೆ ದಂಡಿ-ಭಾಮಹರ ಎರವಲಿನಿಂದ ಹೊಸೆದಿರಬಹುದಾದ ಕೃತಿಯೋ? -ಎಂಬ ಸಂದೇಹವನ್ನೂ ಮೂಡಿಸುವುದು.

“ಕವಿರಾಜಮಾರ್ಗ”ದ ಮೊದಲ ಪರಿಚ್ಛೇದದಲ್ಲೇ ಕಾವ್ಯ-ಮೀಮಾಂಸೆಗೆ ಸಂಬಂಧಪಟ್ಟಂತೆ ಕಾವ್ಯ ಲಕ್ಷಣ, ಕವಿವರ್ಗ, ಕಾವ್ಯ ದೋಷಗಳು, ಮಾರ್ಗ ಪ್ರಭೇದಗಳನ್ನು ಪ್ರಸ್ತಾಪಿಸಿ ಅದೇ ಸಮಯದಲ್ಲಿ ಕನ್ನಡ ನಾಡು, ಕನ್ನಡಿಗರು, ಆಗಿನ ಕನ್ನಡ ಭಾಷೆಯ ಸ್ಥಿತಿ, ಪೂರ್ವ ಕವಿ-ಕಾವ್ಯ ವಿಚಾರಗಳನ್ನು ತಿಳಿಸಲಾಗಿದೆ.

'ಕವಿರಾಜಮಾರ್ಗ' ಕರ್ತೃವಿಗೆ ನೃಪತುಂಗನ ಕಾಲದ ಕನ್ನಡ ನಾಡು-ನುಡಿ ಮತ್ತು ಆಗಿನ ಸಾಹಿತ್ಯದ ಬಗೆಗೆ ಸ್ಥೂಲ ಪರಿಚಯ, ಅಭಿಮಾನ ಇದ್ದಿತೆಂಬುದೂ ನಿಜ. ಕಾವೇರಿಯಿಂದ ಗೋದಾವರಿವರೆಗೆ ಹರಡಿದ್ದ ಕನ್ನಡ ನಾಡಿನಲ್ಲಿ ಶಿಷ್ಟ ಭಾಷೆಯ ಪ್ರದೇಶ ಯಾವುದು? - ಎಂಬುದನ್ನು ಕುರಿತು ಕೃತಿಯ ಕರ್ತೃ ಹೇಳುವ ಮಾತು ಗಮನಾರ್ಹ.

ಸ್ವತಃ ಆದಿಶೇಷಕೂಡ ಎಣಿಸಲಾರದಷ್ಟು ದೋಷಗಳು ಇದ್ದ 'ಕನ್ನಡಂಗಳೊಳ್' ತಿರುಳ್ ಕನ್ನಡದ ನಾಡನ್ನು ಗುರುತಿಸುವ ಈ 'ಕವಿರಾಜಮಾರ್ಗ'ದ ಕರ್ತೃ ತಿರುಳ್ಗನ್ನಡ ಬಿಟ್ಟು ಉಳಿದ ಕನ್ನಡಗಳ ಲಕ್ಷಣಗಳ ಬಗೆಗೆ ಸ್ಪಷ್ಟವಾಗಿ ಹೇಳದಿರುವುದೂ, ಉದಾಹರಣೆಗಳನ್ನು ಸಾಕಷ್ಟು ನೀಡದಿರುವುದೂ ಪರಿಶೀಲಿಸಬೇಕಾದ ಅಂಶ. “ಕವಿರಾಜಮಾರ್ಗಕಾರನ” ಪ್ರಕಾರ, ಬಾದಾಮಿ ಚಾಲುಕ್ಯರ ಕಾಲದಿಂದ ಬಹು ಮುಂದುವರೆದಿದ್ದ ಪ್ರದೇಶವಾದ ಪುಲಿಗೆರೆ, ಕೊಪಣ, ಕಿಸುವೊಳಲ್, ಒಂಕುಂದಗಳ ಮಧ್ಯದ ಪ್ರದೇಶವೇ 'ತಿರುಳ್ಗನ್ನಡನಾಡು'. ಈ 'ಕವಿರಾಜಮಾರ್ಗ'ವೂ ಈ ಪ್ರದೇಶದಲ್ಲೇ ರಚನೆಗೊಂಡ ಕೃತಿಯಾಗಿರಬೇಕು. ಇದೇ 'ಕವಿ

ರಾಜಮಾರ್ಗ'ಕಾರನ ತಿರುಳ್ಗನ್ನಡನಾಡೆಂಬುದನ್ನು ಪಂಪ ರನ್ನರ ಕೃತಿಗಳು ಸಮರ್ಥಿಸುತ್ತವೆ; ಸಿಜ. ಆದರೆ ಈ ಪ್ರದೇಶ ಬಿಟ್ಟು ಕಾವೇರಿಯಿಂದ ಗೋದಾವರಿವರೆಗೆ ಇದ್ದ ಕನ್ನಡ ನಾಡಿನಲ್ಲಿ ಶಿಷ್ಟ ಭಾಷೆ, ಕೃತಿಗಳೇ ಇರಲಿಲ್ಲವೆ? ಹೋಗಲಿ, ಇದ್ದಿರಬಹುದಾದ ತಿರುಳ್ಗನ್ನಡವಲ್ಲದ, ಆ 'ಕನ್ನಡಂಗಳ್' ಯಾವುವು? ಆ ಕನ್ನಡಗಳಲ್ಲಿ ಕೃತಿಗಳೇ ರಚನೆಯಾಗಿರಲಿಲ್ಲವೆ? ಹಾಗೆ ರಚನೆಯೇ ಆಗಿರದಿದ್ದರೆ, ಅವುಗಳ ದೋಷಗಳನ್ನು ಮಾತ್ರ ಸಾರುವ ಕರ್ತೃ ಅಕೃತಿಗಳ ಲಕ್ಷಣ ಇತ್ಯಾದಿ ಕುರಿತು ಸ್ಥೂಲ ಪರಿಚಯವನ್ನಾದರೂ ಮಾಡಿಕೊಡಲಿಲ್ಲವೇಕೆ? ಪ್ರಸಕ್ತ 'ಕವಿರಾಜಮಾರ್ಗ'ದ ಸತ್ವವನ್ನೇ ಪರೀಕ್ಷಿಸುವ ಪ್ರಶ್ನೆಗಳು ಇವು. ಈ ಪ್ರಶ್ನೆಗಳಿಗೆ ಉತ್ತರ ದೊರೆಯದೆ? "ಕವಿರಾಜಮಾರ್ಗ" ಉತ್ತರ ನೀಡದಿದ್ದರೂ ಆಗಿನ ಕಾಲದ ಪರಿಸರವನ್ನು ನಿರೂಪಿಸುವ ಆಧಾರಗಳನ್ನು ನಿಷ್ಪಕ್ಷಪಾತವಾಗಿ ಪರಿಶೀಲಿಸಿದರೆ ಸಮಾಧಾನ ದೊರೆಯುವುದು.

'ಕವಿರಾಜಮಾರ್ಗ' ಮತ್ತು ಅದಕ್ಕೂ ಹಿಂದಿದ್ದಿರಬಹುದಾದ ಕನ್ನಡ ಸಾಹಿತ್ಯದ ಬಗೆಗೆ ಸ್ಥೂಲ ಪರಿಚಯ ಮಾಡಿಕೊಡುವ ಪ್ರಾಮಾಣಿಕ ಪ್ರಯತ್ನಗಳು ಈ ಶತಮಾನದ ಆರಂಭದಿಂದಲೇ ನಡೆದಿದೆ. ಈ ದಿಸೆಯಲ್ಲಿ ಮುಂದಿನ ಪೀಳಿಗೆಗೆ ನಿಚ್ಚಳ ಬೆಳಕು ತೋರಿದ ಕನ್ನಡ ವಿದ್ವಾಂಸರಲ್ಲಿ ದಿವಂಗತ ಮಂಜೇಶ್ವರ ಗೋವಿಂದಪೈ ಅವರಿಗೆ ಅಗ್ರಸ್ಥಾನ ಸಲ್ಲಬೇಕಾದುದು ನ್ಯಾಯೋಚಿತ. (ಮೂರು ಉಪನ್ಯಾಸಗಳು – ಕನ್ನಡ ಸಾಹಿತ್ಯದ ಪ್ರಾಚೀನತೆ–1940). ಅನಂತರ 1948 ರಲ್ಲಿ ಪ್ರಕಟವಾದ ದಿವಂಗತ ಮುಳಿಯ ತಿಮ್ಮಪ್ಪಯ್ಯನವರ 'ಕವಿರಾಜಮಾರ್ಗ ವಿವೇಕ' ಈ ದಿಸೆಯಲ್ಲಿ ಇರಿಸಿದ ಮತ್ತೊಂದು ದಿಟ್ಟಹೆಜ್ಜೆ. ಮುಳಿಯ ತಿಮ್ಮಪ್ಪಯ್ಯನವರು ರಾಷ್ಟ್ರಕೂಟರ ಚರಿತ್ರೆ, ಉತ್ತರ-ದಕ್ಷಿಣ ಮಾರ್ಗ (ತೆಂಕಣ-ಬಡಗಣ) ಪ್ರಭೇದಗಳಿಗೆ ಪ್ರಾಶಸ್ತ್ಯ ನೀಡಿದ್ದಾರೆ. 1968ರಲ್ಲಿ ಪ್ರಾಧ್ಯಾಪಕ ಎಂ.ವಿ. ಸೀತಾರಾಮಯ್ಯನವರು 'ಕವಿರಾಜಮಾರ್ಗ'ವನ್ನು ಸಂಪಾದಿಸಿ ಸಂಶೋಧನಾತ್ಮಕವಾದ ಸುದೀರ್ಘ ಮುನ್ನುಡಿಯೊಡನೆ ಪ್ರಕಟಿಸಿ, ಕೃತಿಯ ಕರ್ತೃತ್ವ ವಿಷಯ ಪ್ರತಿಪಾದನೆಗೆ ಹೆಚ್ಚು ಪ್ರಾಧಾನ್ಯ ನೀಡಿರುವರು. ಪರಿಣಾಮತಃ ಉಳಿದ ಮೂಲಭೂತ ಅಂಶಗಳು ಅವರ ಸಂಶೋಧಕನ ಚಿಕಿತ್ಸಕ ದೃಷ್ಟಿಯಿಂದ ನುಸುಳಿಹೋಗಿದೆಯೆಂದನ್ನಿಸುತ್ತದೆ. 1973 ರಲ್ಲಿ ಪ್ರಕಟವಾದ ಐ.ಬಿ.ಹೆಚ್. ಸಂಸ್ಥೆಯ ಕವಿ-ಕಾವ್ಯ-ಪರಂಪರೆ ಮಾಲಿಕೆಯ ಮೊದಲ ಕುಸುಮವಾದ 'ಕವಿರಾಜಮಾರ್ಗ'ದಲ್ಲಿ ಪ್ರಕಟವಾಗಿರುವ ಡಾ|| ಎಂ. ಚಿದಾನಂದ ಮೂರ್ತಿ ಅವರ ಲೇಖನ ಮತ್ತು ಡಾ|| ಎಂ.ಎಂ. ಕಲಬುರ್ಗಿ ಅವರ 'ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ' ಮುಖ್ಯವಾದುವು. ಡಾ|| ಚಿದಾನಂದಮೂರ್ತಿ, ಡಾ|| ಕಲಬುರ್ಗಿ ಅವರುಗಳು ಕೆಲವು ಹೊಸ ಆಧಾರ, ನೆಲೆ, ನಿಲುವುಗಳನ್ನು ಆಶ್ರ

ಬಳಸಿ ಅದೇ ದೇಸಿಯ ನಾಡಿನಲ್ಲೇ ಮುಂದುವರಿದ್ದರು. 'ಕವಿರಾಜಮಾರ್ಗ'ದ ಅಧ್ಯಯನಕ್ಕೆ ಹೊಸ ದಿಶೆಗಳನ್ನೂ ಆಯಾಮಗಳನ್ನೂ ತೆರೆದಿಟ್ಟಿವೆ.

ನೃಪತುಂಗನ ಕಾಲಕ್ಕೂ ಹಿಂದೆ ಕಾವೇರಿಯಿಂದ ಗೋದಾವರಿವರೆಗೆ ಇದ್ದ ವಿಶಾಲವಾದ ಈ ಕನ್ನಡ ನಾಡಿನಲ್ಲಿ ವಿಪುಲ ಸಾಹಿತ್ಯ ರಚನೆಯಾಗಿದ್ದಿತು. ಕವಿಗಳೂ ಗದ್ಯಕಥಾ ಲೇಖಕರೂ ಇದ್ದರೆಂಬುದನ್ನು ಎಲ್ಲ ಕನ್ನಡ ಸಾಹಿತ್ಯ ಚರಿತ್ರಕಾರರೂ ವಿವರಿಸಿದ್ದಾರೆ. ಡಾ|| ಕಲಬುರ್ಗಿ ಅವರು ಆ ಕಾಲದಲ್ಲಿ ಇದ್ದಿರಬಹುದಾದ ಪರಿಸರ, ಕನ್ನಡ ಸಾಹಿತ್ಯ, ಕವಿಗಳ ಬಗೆಗೂ ಹಾಗೆಯೇ ದೇಸಿ ಛಂದಸ್ಸು, ಅದಕ್ಕಿಂತ ಮಿಗಿಲಾಗಿ ನೃಪತುಂಗನ ಕಾಲದಲ್ಲಿ ರಚಿತವಾದ (ಮತ್ತು ಈಗ ಪ್ರಕಟವಾಗಿರುವ) ಸಂಸ್ಕೃತ-ಪ್ರಾಕೃತ ಮಿಶ್ರಭಾಷೆಯ (ಮಣಿಪ್ರವಾಳ) ಕೃತಿಗಳ ಬಗೆಗೂ ಪರಿಶೀಲಿಸಿದ್ದಾರೆ.

ಬೆಂಗಳೂರು ವಿಶ್ವವಿದ್ಯಾನಿಲಯ ಪ್ರಕಟಿಸಿರುವ ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ – ಸಂಪುಟ ಒಂದರಲ್ಲಿ (1974) ಟಿ. ಕೇಶವಭಟ್ಟರು ನೃಪತುಂಗನಿಗೂ ಹಿಂದಣ ಸಾಹಿತ್ಯದ ಸಮೀಕ್ಷೆ ನಡೆಸಿದ್ದರೂ ಆ ಕಾಲದ ಪರಿಸರದಲ್ಲಿ ನಿರ್ಮಾಣಗೊಂಡಿರಬಹುದಾದ ಸಾಹಿತ್ಯದ ಆಳ-ವಿಸ್ತಾರ ಅಳೆಯಲು ಸಂಶೋಧನೆಯ ಪಾತಳಿಯನ್ನು ಆಳವಾಗಿ ಇಳಿಸಿಲ್ಲ. (ಪ್ರಾಯಶಃ ಸ್ಥಳ ಸಂಕೋಚ ಕಾರಣವಾಗಿರಬಹುದು) ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆ ಪ್ರಕಟಿಸಿರುವ 'ಕನ್ನಡ ಸಾಹಿತ್ಯ ಚರಿತ್ರೆಯ' ಎರಡನೇ ಸಂಪುಟದಲ್ಲಿ ನೃಪತುಂಗನ ಕಾಲದಲ್ಲಿ ಸಂಸ್ಕೃತ-ಪ್ರಾಕೃತ ಭಾಷೆಗಳಲ್ಲಿ ರಚಿತವಾದ ಜೈನಧರ್ಮಕ್ಕೆ ಸಂಬಂಧಿಸಿದ ವ್ಯಾಖ್ಯಾನ ಗ್ರಂಥಗಳ ಪರಿಚಯ ಮಾಡಿಕೊಟ್ಟಿದ್ದಾರೆ. ಆದರೆ 'ಕವಿರಾಜ ಮಾರ್ಗದ' ಹಿನ್ನೆಲೆಯಲ್ಲಿ ಅವುಗಳ ಅಧ್ಯಯನಕ್ಕೆ ಪ್ರಾಶಸ್ತ್ಯ ನೀಡದಿರುವುದು ಮುಖ್ಯ ಕೊರತೆಯಾಗಿದೆ.

ನೃಪತುಂಗನ ಕಾಲದಲ್ಲಿ ಸಾಹಿತ್ಯ ಕ್ಷೇತ್ರದಲ್ಲಿ ಸಂಸ್ಕೃತ-ಪ್ರಾಕೃತ ಮಿಶ್ರಭಾಷೆಯಲ್ಲಿ (ಮಣಿಪ್ರವಾಳ) ಅಪಾರ ಸಾಹಿತ್ಯ ನಿರ್ಮಾಣವಾಯಿತೆಂಬುದು ಸುಸ್ಪಷ್ಟ. ಆ ಕೃತಿಗಳೂ ಪ್ರಕಟವಾಗಿವೆ. ಹಾಗೆಯೇ ಆ ಕಾಲದಲ್ಲಿ ಸಂಸ್ಕೃತದ ಮಿತಿಮೀರಿದ ಬಳಕೆಯಿಂದಾಗಿ ಅದರ ಬಗೆಗೆ ಕೆಲವು ನಿಯಮಗಳನ್ನು ವಿಧಿಸಬೇಕಾಯಿತೇನೋ. (ಆದರೆ ಈ "ಕವಿರಾಜ ಮಾರ್ಗಕಾರ" ಇದಕ್ಕೆ ತದ್ವಿರುದ್ಧವಾಗಿ ಸಂಸ್ಕೃತ ಲಾಕ್ಷಣಿಕರನ್ನೇ ಅನುಸರಿಸಿರುವುದು, ಕನ್ನಡ ಕೃತಿಗಳನ್ನು ಸಂಸ್ಕೃತ ಕಾವ್ಯಲಕ್ಷಣದ ಚೌಕಟ್ಟಿಗೆ ಹಚ್ಚಲು ಯತ್ನಿಸಿರುವುದು ತೀರ ವಿಚಿತ್ರ ಅನಿಸಿದರೆ ತಪ್ಪಲ್ಲ.) 'ಕವಿರಾಜ ಮಾರ್ಗಕಾರ' ಸಂಸ್ಕೃತದ ಜೊತೆ ಕನ್ನಡವನ್ನೂ ಬೆರೆಸಿ ಸಮಾಸ ಮಾಡುವುದು "ಆಗಮ ಕೋವಿದ ನಿಗದಿತ ಮಾರ್ಗ"ವೆಂದೂ ಹೇಳುತ್ತಾನೆ.

"ಕವಿರಾಜಮಾರ್ಗ"ದಲ್ಲಿ ಪೂರ್ವಕಾಲದ ಗದ್ಯ-ಪದ್ಯ ಕೃತಿಗಳನ್ನು ರಚಿಸಿದವರ ಉಲ್ಲೇಖಗಳೂ ಇವೆ. ಕವಿ ವೃಷಭ, ವಿಮಲೋದಯ, ನಾಗಾರ್ಜುನ, ಜಯಬಂಧು, ಮೊದಲಾದವರ ಉಲ್ಲೇಖವಿದೆ. ಇವರಿಗೂ ಹಿಂದೆ ಶ್ರೀವರ್ಧದೇವ, ತುಂಬಳೂರಾಚಾರ್ಯ, ಶ್ಯಾಮಕುಂದಾಚಾರ್ಯ, ದುರ್ವಿನೀತ, ಮೊದಲಾದವರು ಕೃತಿಗಳನ್ನು ರಚಿಸಿದ್ದರೆಂಬುದಕ್ಕೂ ಐತಿಹಾಸಿಕ ಉಲ್ಲೇಖಗಳಿವೆ. ಶ್ಯಾಮಕುಂದಾಚಾರ್ಯ-ಸಂಸ್ಕೃತ-ಕನ್ನಡ-ಪ್ರಾಕೃತ ಮಿಶ್ರಭಾಷೆಯಲ್ಲಿ 'ಪದ್ಧತಿ' ಶೈಲಿಯ 'ಪ್ರಾಭೃತ' ಎಂಬ ಗ್ರಂಥ ರಚಿಸಿದ್ದನೆಂಬುದಕ್ಕೂ ಆಧಾರವಿದೆ. ನೃಪತುಂಗನಿಗೂ ಹಿಂದಿದ್ದ ಪ್ರಾಯಶಃ ಕೆಲವು ವರ್ಷಗಳವರೆಗೆ ಅವನ ಸಮಕಾಲೀನನೂ ಆಗಿದ್ದ ಸಯಗೊಟ್ಟ ಶಿವಕುಮಾರ, ಮತ್ತವನ ಕೃತಿಗಳನ್ನು ಎಲ್ಲರೂ ಉಲ್ಲೇಖಿಸಿದ್ದಾರೆ. ಆದರೆ ಆ ಯಾವ ಕೃತಿಗಳೂ ಉಪಲಬ್ಧವಿಲ್ಲ. ಇಲ್ಲವೆ ಆ ಕಾಲದಲ್ಲಿ ರಚಿತವಾದ ಸಂಸ್ಕೃತ-ಪ್ರಾಕೃತ ಮತ್ತಿತರ ಕೃತಿಗಳಲ್ಲಿ ಈ "ಕವಿರಾಜ ಮಾರ್ಗಕಾರ" ಹೇಳುವ ಲಕ್ಷ್ಯಗಳಿಗೆ ಲಕ್ಷಣಗಳು ದೊರೆಯುತ್ತವೆಯೋ ಎಂದು ಪರಿಶೀಲಿಸುವ ಪ್ರಯತ್ನವೂ ನಡೆದಂತೆ ಕಾಣುವುದಿಲ್ಲ.

"ಕವಿರಾಜಮಾರ್ಗ"ದಲ್ಲೇ ಉಕ್ತವಾಗಿರುವ ಲಕ್ಷ್ಯ-ಲಕ್ಷಣಗಳು ಈ ವಿಷಯದಲ್ಲಿ ಬೆಳಕು ಚೆಲ್ಲುವ ಬದಲು ಸಮಸ್ಯೆಯನ್ನು ಮತ್ತಷ್ಟು ಗೋಜಲಾಗಿಸುತ್ತವೆ. ಸಂಸ್ಕೃತ-ಪ್ರಾಕೃತ, ಸಂಸ್ಕೃತ-ಕನ್ನಡ ಮಿಶ್ರಿತ ಶೈಲಿ ಪ್ರಯೋಗಗಳ ಬಗೆಗೆ ಉಚಿತವಾದ ನಿದರ್ಶನಗಳು ಕೃತಿಯಲ್ಲಿ ಅಪರೂಪ. ಸಂಸ್ಕೃತ ಲಾಕ್ಷಣಿಕರು, ನೃಪತುಂಗನ ಕಾಲಾನಂತರದ ಕನ್ನಡ ವೈಯಾಕರಣಿಗಳು, ಛಂದಸ್ಸು ಅಲಂಕಾರ ಶಾಸ್ತ್ರಜ್ಞರ ಕೃತಿಗಳಲ್ಲಿರುವಂತೆ, ಈ ಕೃತಿಯಲ್ಲಿ ತತ್ಸಮ ತದ್ಭವ, ದೇಶ್ಯ ಮೊದಲಾದವುಗಳಿಗೆ ಹೊಲಬು ದೊರೆಯುತ್ತದೆಯಷ್ಟೆ.

ಕಾವೇರಿಯಿಂದ ಗೋದಾವರಿವರೆಗೆ ಇದ್ದ ನಾಡಿನಲ್ಲಿ ಹಲವು 'ಕನ್ನಡ'ಗಳಿದ್ದರೂ ಸಂಸ್ಕೃತ-ಪ್ರಾಕೃತ, ಸಂಸ್ಕೃತ-ಕನ್ನಡ ಭಾಷೆಗಳಲ್ಲಿ ರಚನೆಯಾದ ಸಾಹಿತ್ಯದ ಬಗೆಗೆ ಐತಿಹಾಸಿಕ ಆಧಾರಗಳಿದ್ದರೂ ಕೃತಿಕಾರ ತನ್ನ ಕೃತಿಯಲ್ಲಿ ಅವುಗಳನ್ನು ಸಾಕಷ್ಟು ಉಲ್ಲೇಖಿಸದಿರುವುದು ನಿಜಕ್ಕೂ ಸೋಜಿಗ.

"ಕವಿರಾಜಮಾರ್ಗ"ಕಾರನ ದಕ್ಷಿಣೋತ್ತರ ಮಾರ್ಗ ಪ್ರಭೇದದ ನಿರೂಪಣೆಯೂ ಇದೇ ರೀತಿ ಅಸಂದಿಗ್ಧ ಅಸ್ಪಷ್ಟ ವಿವರವಾಗಿದೆ. ಕಾವೇರಿಯಿಂದ ಗೋದಾವರಿವರೆಗಿದ್ದ ಕನ್ನಡ ನಾಡಿನಲ್ಲಿ ತಿರುಳ್ಗನ್ನಡ ನಾಡನ್ನು ಅದರ ಎಲ್ಲೆಯನ್ನು, ಸ್ಥೂಲವಾಗಿ ನಿಷ್ಕರ್ಷಿಸಿರುವ 'ಕವಿರಾಜ ಮಾರ್ಗಕಾರ' ಉಳಿದ ಪ್ರದೇಶಗಳಲ್ಲಿ ಇದ್ದ ಕನ್ನಡಗಳನ್ನು ಅಂಗೀಕರಿಸಿದ್ದರೂ ಆ 'ಕನ್ನಡಗಳು', ಅವುಗಳಲ್ಲಿದ್ದಿರಬಹುದಾದ ಸಾಹಿತ್ಯ, ಶೈಲಿಗಳ ಬಗೆಗೆ ಸ್ಪಷ್ಟವಾಗಿ ಸೂಚಿಸದಿರುವುದು ಸೋಜಿಗ.

ಅಷ್ಟೇ ಅಲ್ಲ, "ಕವಿರಾಜ ಮಾರ್ಗಕಾರ" ಉತ್ತರ-ದಕ್ಷಿಣ ಮಾರ್ಗ ಪ್ರಭೇದಕ್ಕೆ ದಂಡಿಯ ಕಾವ್ಯಲಕ್ಷಣಗಳನ್ನು ನೀಡುವುದು ಮತ್ತಷ್ಟು ವಿಚಿತ್ರ. ಆಗಿನ ಕರ್ನಾಟಕದ ಭೂಪಟದತ್ತ ಕಣ್ಣುಹಾಯಿಸಿದಲ್ಲಿ 'ಕವಿರಾಜ ಮಾರ್ಗಕಾರ' ಹೇಳುವ "ತಿರುಳ್ಗನ್ನಡ" ನಾಡು ಕರ್ನಾಟಕದ ಉತ್ತರದಲ್ಲೂ, 'ಕನ್ನಡ'ಗಳು ಇದ್ದ ಕಾವೇರಿ ವರೆಗಿನ ಪ್ರದೇಶ ದಕ್ಷಿಣ ಭಾಗವೂ ಆಗಿರುವುದು ಸ್ಪಷ್ಟ. ಹೀಗಿದ್ದೂ ಈ ವಿಶಾಲವಾದ ಕರ್ನಾಟಕದಲ್ಲಿದ್ದ ಭಾಷಾ ಪ್ರಭೇದ, ಶೈಲಿ ಪ್ರಭೇದ, ಮಾರ್ಗ ಪ್ರಭೇದಗಳನ್ನು ವಿವರಿಸದೆ, ದಂಡಿ ಸೂಚಿಸಿದ ಮಾರ್ಗವನ್ನೇ ಕನ್ನಡಕ್ಕೂ ಅನ್ವಯಿಸಿ ಹೇಳುವಲ್ಲಿ ಅದರ ವ್ಯಾಪ್ತಿಯನ್ನು ಮಾತ್ರ ವಿಸ್ತರಿಸಿರುವುದು ತೀರ ಶಂಕಾಸ್ಪದವಾಗಿದೆ. ತಿರುಳ್ಗನ್ನಡ, ಕನ್ನಡಗಳು, ಅವುಗಳಲ್ಲಿ ರಚಿತವಾದ ಸಾಹಿತ್ಯ, ಶೈಲಿಗಳ ಬಗೆಗೆ ಕರ್ತೃವಿಗೇ ಸ್ಪಷ್ಟ ಅರಿವಿದ್ದಿದ್ದರೆ ಖಂಡಿತ ನಿದರ್ಶನಗಳನ್ನು ನೀಡಲೇಬೇಕಾಗಿದ್ದಿತು. ಇಲ್ಲವೇ ಇದ್ದಿರಬಹುದಾದ ಪ್ರಭೇದಗಳನ್ನು ಬಹುಕಾಲದ ನಂತರ ಸ್ಥೂಲವಾಗಿ ಅರಿತು ಅದನ್ನು ಸಮರ್ಥಿಸಲು ದಂಡಿಯ "ಕಾವ್ಯಾದರ್ಶಕ್ಕೆ" ಮೊರೆ ಹೋಗಿರಬೇಕು. ಕರ್ತೃ ನಿಜವಾಗಿಯೂ ನೃಪತುಂಗನ ಸಮಕಾಲೀನ ಇಲ್ಲವೆ ಸಮೀಪ ಕಾಲದವನಾಗಿದ್ದಿದ್ದರೆ ಅಷ್ಟು ಖಚಿತವಾಗಿಲ್ಲದಿದ್ದರೂ ಸ್ಥೂಲವಾಗಿಯಾದರೂ ಈ ಪ್ರಭೇದಗಳನ್ನು ನಿದರ್ಶನಗಳ ಸಮೇತ ಪ್ರತಿಪಾದಿಸುತ್ತಿದ್ದ. ದಕ್ಷಿಣೋತ್ತರ ಮಾರ್ಗ ಪ್ರಭೇದದ ಬಗೆಗೆ ದಂಡಿಯ ಜಾಡನ್ನೇ ಹಿಡಿದ 'ಕವಿರಾಜಮಾರ್ಗ'ದ ಆಧಾರದ ಮೇಲೆ ನೃಪತುಂಗನ ಇಲ್ಲವೇ ಅವನಿಗೂ ಹಿಂದಿದ್ದ ಕನ್ನಡ ಸಾಹಿತ್ಯದ ಪ್ರಭೇದಗಳನ್ನು ಗುರುತಿಸಿ, ನಿಷ್ಕರ್ಷಿಸಲು ನಡೆಸುವ ಪ್ರಯತ್ನ ಎಷ್ಟು ಸಮಂಜಸ? ಸುಸಂಗತ? – ಎಂಬುದನ್ನು ಪರಿಶೀಲಿಸಬೇಕು.

ಪ್ರೊ|| ಎಂ.ವಿ. ಸೀತಾರಾಮಯ್ಯ ಅವರು 'ತಾನು ಬಲ್ಲ ಕನ್ನಡ ಲಕ್ಷ್ಯಗಳ ಆಧಾರದ ಮೇಲೆ ಕನ್ನಡ ಮಾರ್ಗ ಪ್ರಭೇದಗಳನ್ನು ವಿವರಿಸುತ್ತಿದ್ದಾನೆ ಎಂದು ಕಾಣುತ್ತದೆ' ಎನ್ನುತ್ತಾರೆ. ಆದರೆ ದಂಡಿ, ಭಾಮಹರಿಂದ ಬಹುಪಾಲು ಲಕ್ಷ್ಯ-ಲಕ್ಷಣಗಳನ್ನು ಎರವಲಾಗಿ ಪಡೆದು, ಅವರ ಕೃತಿಗಳ ಪದ್ಯಗಳ ಅನುವಾದ, ರೂಪಾಂತರಗಳನ್ನು ನೀಡಿರುವ "ಕವಿರಾಜಮಾರ್ಗ"ಕಾರನಿಗೆ ನಿಜವಾಗಿಯೂ ಆ ಕಾಲದ ಕನ್ನಡದ ಲಕ್ಷ್ಯ-ಲಕ್ಷಣಗಳ ಪರಿಚಯವಿದ್ದಿತೆ? – ಎಂಬ ಸಂಶಯ ಬಂದರೆ ತಪ್ಪಲ್ಲ.

ನೃಪತುಂಗನ ಕಾಲದಲ್ಲಿ ಜನಪದ ಸಾಹಿತ್ಯ, ದೇಸಿ ಛಂದಸ್ಸುಗಳು, ಹೆಚ್ಚು ಜನಪ್ರಿಯವಾಗಿದ್ದುವೆಂಬುದಕ್ಕೆ ಸೈಗೊಟ್ಟ ಶಿವಮಾರನ ವಿಷಯವನ್ನು ಪ್ರಸ್ತಾಪಿಸುವ ನಗರದ ಶಾಸನವೇ ಸಾಕ್ಷಿ. ರಾಷ್ಟ್ರಕೂಟರೊಡನೆ ನಿರಂತರವಾಗಿ ಹೋರಾಡುತ್ತಿದ್ದರೂ ಅವರ ಸೆರೆಮನೆಯಲ್ಲಿ ಆಗಾಗ ಕೊಳೆಯುತ್ತಿದ್ದರೂ ಗಂಗರಾಜ ಸೈಗೊಟ್ಟ ಶಿವಮಾರ,

ತನ್ನ ಪೂರ್ವಜರಾದ ಅವನೀತ, ದುರ್ವಿನೀತರಂತೆ ಸಾಹಿತ್ಯ ರಚನೆಯಲ್ಲೂ ತೊಡಗಿದ್ದ. 'ಶಿವಮಾರಮತ'ವೆಂಬ ಗಜಶಾಸ್ತ್ರ, ಸೇತುಬಂಧ, ಮೊದಲಾದ ಕೃತಿಗಳನ್ನು ಈತ ರಚಿಸಿದ್ದನಂತೆ. ನಗರದ ಶಾಸನದಲ್ಲಿ ಹೀಗೆ ಉಕ್ತವಾಗಿದೆ —

ಶಿವಮಾರದೇವಂ ಸೈಗೊಟ್ಟನೆಂಬೆರಡನೆ ಪೆಸರಂ ತಾಳ್ದಿ
ಶಿವಮಾರಮತವೆಂಬ ಗಜಶಾಸ್ತ್ರಮುಂ ಮಾಡಿ, ಮತ್ತಂ;

ಏವೇಳ್ವುದೋ ಶಿವಮಾರಮ ।
ಹೀವಳಯಾಧಿಪನ ಸುಭಗ ಕವಿತಾಗುಣಮಂ ॥
ಭೂವಳದೊಳ್ ಗಜಾಷ್ಟಕ ।
ಮೋವನಿಗೆಯು ಮೊನಕೆವಾಡು ಮಾದುದೇಪೇಳ್ವಂ ॥

ಗಜಾಷ್ಟಕವೆಂಬ ಶಾಸ್ತ್ರಗ್ರಂಥ ಕೂಡ ಜನಪ್ರಿಯವಾದ ಒನಕೆವಾಡಾಯಿತು. ಎಂಥ ಕಠಿಣ ಶಾಸ್ತ್ರ ವಿಷಯವನ್ನು ಸುಭಗ ಕವಿತಾಶೈಲಿಯಲ್ಲಿ, ಜನಮನ ಮುಟ್ಟುವಂತೆ, ರಚಿಸುವ ಶೈಲಿ ಮತ್ತು ಜನಪದ ಛಂದಸ್ಸುಗಳು ಶಿವಮಾರನ ಕಾಲಕ್ಕೆ ರೂಢಿಯಲ್ಲಿದ್ದಿತು.

'ಒನಕೆವಾಡು' ಎಂಬುದು ಕುಟ್ಟುವಾಗ ಜನರು ಹಾಡುತ್ತಿದ್ದ ಒಂದು ಕೃತಿಯನ್ನು ಸೂಚಿಸುತ್ತದೆ. ಅದು ಬಹುಶಃ ತ್ರಿಪದಿಯಾಗಿದ್ದು, ಒಂದು ಕತೆಯನ್ನೋ ಸಂಗತಿಯನ್ನೋ ಹೊಂದಿದ್ದ ಅಡಕವಾದ ಹಾಡು. ಕವಿರಾಜಮಾರ್ಗದಲ್ಲಿಯೇ ಆ ಕಾಲದ ಜಾನಪದ ಸಾಹಿತ್ಯದ ಬಗ್ಗೆ ಅಸ್ಪಷ್ಟ ಉಲ್ಲೇಖಗಳಿವೆ ಎನ್ನುತ್ತಾರೆ,- ಡಾ॥ ಎಂ. ಚಿದಾನಂದ ಮೂರ್ತಿ. ಆದರೆ 'ಕವಿರಾಜಮಾರ್ಗ'ಕಾರ ಅಂಥ ಒಂದು ನಿದರ್ಶನವನ್ನೂ ನೀಡದಿರುವುದು ಶೋಚನೀಯ.

ಇದಲ್ಲದೆ ದಿ॥ಡಿ.ಎಲ್. ನರಸಿಂಹಾಚಾರ್ ಅವರು "ಪ್ರಬುದ್ಧ ಕರ್ನಾಟಕ" ದಲ್ಲಿ (ಸಂ-45; ಸಂ.2) ಬರೆದ ಮಾನಸೋಲ್ಲಾಸದಲ್ಲಿ ಛಂದಸ್ಸು ಎಂಬ ಲೇಖನದಲ್ಲಿ 'ಧವಳದ ಹಾಡು' ಕುರಿತು ಬರೆದಿದ್ದಾರೆ. ಈ ಧವಳದ ಹಾಡು ಜನಸಾಮಾನ್ಯರ ಸೀಮಂತ, ಜಾತಕರ್ಮ ಮೊದಲಾದ ಶಾಸ್ತ್ರ-ಆಚಾರಗಳಲ್ಲಿ ಹಾಡುತ್ತಿದ್ದ ಜಾನಪದ ಹಾಡು. ಇದಲ್ಲದೆ ಎಂಟು ಪಾದಗಳ ಶ್ರೀಧವಳ, ಆರು ಪಾದಗಳ ಯಶೋಧವಳ ಮೊದಲಾದವೂ 10ನೆ ಶತಮಾನದಲ್ಲಿ ಜನಪ್ರಿಯವಾಗಿದ್ದಿತೆಂದು ಹೇಳಿದ್ದಾರೆ. 10ನೇ ಶತಮಾನದಲ್ಲಿ ಜನಪ್ರಿಯವಾದ, ಜಾನಪದ ಜಾತಿಯವೆನ್ನಬಹುದಾದ ಈ ಹಾಡುಗಳು, ಅವುಗಳ ಶೈಲಿ, ಛಂದಸ್ಸುಗಳು ಪ್ರಾಯಶಃ 9ನೇ ಶತಮಾನದಲ್ಲಿ ಕುಡಿಯೊಡೆದು ಅರಳಿರಲೂ ಬಹುದು.

ಹೀಗೆ ಚಿಂತನೆಯ ಲಹರಿ ಹರಿದರೆ ಇಂದಿನ 'ಕವಿರಾಜಮಾರ್ಗ'ದಲ್ಲಿ ಪರಸ್ಪರ ವಿರುದ್ಧವಾದ, ಶಂಕೆಗೆ ಎಡೆಗೊಡುವ ಹೆಚ್ಚು ಅಂಶಗಳು ದೊರೆಯುತ್ತವೆ. ಎಲ್ಲಕ್ಕಿಂತ ಮಿಗಿಲಾಗಿ ಕಾವೇರಿಯಿಂದ ಗೋದಾವರಿವರೆಗಿದ್ದ ಕನ್ನಡನಾಡಿನ ತಿರುಳ್ಗನ್ನಡ

ಪ್ರದೇಶ, ಕನ್ನಡಿಗರು, ಪೂರ್ವಾಚಾರ್ಯರ ಮೇರುಕೃತಿಗಳು ಸಂಸ್ಕೃತ ಕನ್ನಡ ಮಿಶ್ರಣ ಶೈಲಿ, ಕುರಿತೋದದೆಯೂ ಕಾವ್ಯಪ್ರಯೋಗ ಪರಿಣತಮತಿಗಳಾದ ಕನ್ನಡಿಗರ ಬಗೆಗೆ ಹೇಳುವ ಕರ್ತೃ ಲಕ್ಷ್ಯ–ಲಕ್ಷಣಗಳಲ್ಲಿ ಬಹುಭಾಗವನ್ನು ದಂಡಿ, ಭಾಮಹರಿಂದ ಎರವಲು ಪಡೆದು ರಚಿಸಿರುವ ಈ ಕೃತಿ ತುಂಬ ಅಸಂಗತ ವಿರೋಧಾಭಾಸವಾಗಿ ಕಂಡು ಬರುತ್ತದೆ. ಅಪಾರ ಸಾಹಿತ್ಯ ಪರಂಪರೆಯಿದ್ದೂ ಬೆಣ್ಣೆ ಇಟ್ಟುಕೊಂಡು ತುಪ್ಪಕ್ಕಾಗಿ ಪರರನ್ನು ಯಾಚಿಸಿದವರಂತೆ, ಈ 'ಕವಿರಾಜಮಾರ್ಗ' ಕರ್ತೃ ಎರವಲು ಪಡೆದದ್ದೇಕೆ? ಕನ್ನಡ, ಕನ್ನಡನಾಡವರು, ಅವರ ಕಾವ್ಯಾಭಿರುಚಿ. ಪರಿಣತಮತಿ ಇಲ್ಲಿ ಕರ್ತೃವಿಗೆ ಕನ್ನಡದ ಲಕ್ಷ್ಯ–ಲಕ್ಷಣಗಳು ಸಾಕಷ್ಟು ದೊರೆಯಲಿಲ್ಲ ಎಂದರೆ ಏನು ಹೇಳಬೇಕು? ಇಲ್ಲವೆ 'ತಿರುಳ್ಗನ್ನಡ' ಬಿಟ್ಟು ಉಳಿದ ಕನ್ನಡಿಗರು ಸಾಹಿತ್ಯಗಳ ಬಗೆಗೆ ಸಂಸ್ಕೃತ ಲಕ್ಷಣಕಾರರಂತೆ ಉಪೇಕ್ಷೆ, ಉದಾಸೀನ ಮನೋಭಾವವೆ? ಕನ್ನಡಿಗರ ಬಗೆಗೆ ಹೇಳಿಯೂ ಉದಾಹರಿಸದೆ, ಕನ್ನಡದಲ್ಲಿ ಮೇರು ಕೃತಿಗಳೆಂದು ಕರೆಯುವ ಮಹಾ ಕಾವ್ಯಗಳನ್ನು ರಚಿಸಿದ ಪಂಪ ರನ್ನ ಅವರ ತೌರು ಪ್ರದೇಶವನ್ನು ಮಾತ್ರ "ತಿರುಳ್ಗನ್ನಡ" ಪ್ರದೇಶವೆಂದು ಗುರುತಿಸಿ, ಉಳಿದ ವಿಷಯಗಳ ಬಗೆಗೆ ಉಪೇಕ್ಷಿಸಿರುವುದನ್ನು ನೋಡಿದರೆ ಕರ್ತೃ ನೃಪತುಂಗನ ಕಾಲದವನಲ್ಲವೇನೋ ಎಂಬ ಸಂದೇಹವೂ ಮೂಡುತ್ತದೆ.

ಎಂಟನೇ ಶತಮಾನದ ಉತ್ತರಾರ್ಧ, ಒಂಭತ್ತನೇ ಶತಮಾನದ ಪೂರ್ವಾರ್ಧದಲ್ಲಿ ಅಧಿಕಾರಕ್ಕಾಗಿ ರಾಷ್ಟ್ರಕೂಟರ ನಡುವೆಯೇ ನಡೆದ ಯಾದವೀ ಕಲಹವಿತ್ತು. ಈ ಯಾದವೀ ಕಲಹವನ್ನೇ ನೆಪಮಾಡಿಕೊಂಡು ರಾಷ್ಟ್ರಕೂಟ ವಂಶವನ್ನು ನುಗ್ಗೊತ್ತಲು ಇತರ ಸಾಮಂತರು, ಮಾಂಡಲಿಕರು, ಅರಸು ಮನೆತನಗಳು, ರಾಷ್ಟ್ರಕೂಟರ ಒಂದಲ್ಲ ಒಂದು ಪಕ್ಷದ ಬೆನ್ನು ಕಟ್ಟಿಕೊಂಡು ನಿರಂತರವಾಗಿ ಹೋರಾಡುತ್ತಿದ್ದುದಕ್ಕೆ ಇತಿಹಾಸದ ತುಂಬ ಆಧಾರಗಳಿವೆ. ಅವರಲ್ಲೂ ಗಂಗ-ರಾಷ್ಟ್ರಕೂಟರ ನಡುವಣ ಬದ್ಧವೈರ ಎಷ್ಟರ ಮಟ್ಟಿಗೆ ಮುಟ್ಟಿತ್ತೆಂದರೆ, ರಾಷ್ಟ್ರಕೂಟರ ಮೂರನೆ ಗೋವಿಂದ ಮತ್ತು ಅಮೋಘವರ್ಷನ ಶಾಸನಗಳಲ್ಲಿ ಗಂಗರ ಶಿವಮಾರ – ಇತರರ ಉಲ್ಲೇಖಗಳೇ ಇಲ್ಲ. ಇತರ ಕೊಡನೆಯ ಯುದ್ಧದಲ್ಲಿ ಗಂಗರು ನೆರವಾದರೂ, ಅವರ ಸಹಾಯವನ್ನು ಉಲ್ಲೇಖಿಸದಷ್ಟು ಬದ್ಧವೈರ. ಕನ್ನಡನಾಡನ್ನಾಳಿದ ಗಂಗ, ರಾಷ್ಟ್ರಕೂಟರ ನಡುವಣ ಈ ದ್ವೇಷಾಗ್ನಿ ಕನ್ನಡ ನುಡಿ, ಸಾಹಿತ್ಯ ಪರಂಪರೆಗಳಲ್ಲಿ ಎಷ್ಟು ಭಾಗವನ್ನು ಸುಟ್ಟು ಹಾಕಿತೋ ತಿಳಿಯದು. ಆರಂಭದಿಂದಲೂ ಜೈನ ಧರ್ಮಾಭಿಮಾನಿಗಳೂ ಪೋಷಕರೂ ಆದ ಗಂಗರಸರಲ್ಲಿ ಅವನೀತ, ದುರ್ವಿನೀತ, ಸೈಗೊಟ್ಟ ಶಿವಮಾರ ಮೊದಲಾದವರು ಕೇವಲ ಸಾಹಿತ್ಯಾಭಿಮಾನಿಗಳು ಮಾತ್ರವಲ್ಲ; ಸ್ವತಃ ಸಾಹಿತ್ಯವನ್ನು ರಚಿಸಿದವರೂ ಆಗಿದ್ದಾರೆ. ರಾಷ್ಟ್ರಕೂಟರ ಒಂದು ಶಾಖೆ ಮಾನ್ಯಖೇಟದಲ್ಲಿ (ಈಗಿನ ಗುಲ್ಬರ್ಗಾದಲ್ಲಿ

ರುವ ಮಳಖೇಡ್) ನೆಲೆಯೂರಿ ದಕ್ಷಿಣದತ್ತ ಸರಿಯುತ್ತ ಬಂದಂತೆ, ಸಾಕಷ್ಟು ಸ್ವಾಭಿಮಾನಿಗಳೂ ಬಲಿಷ್ಠರೂ ಆಗಿದ್ದ ಗಂಗರಿಗೂ ರಾಷ್ಟ್ರಕೂಟರಿಗೂ ಮತ್ತು ರಾಷ್ಟ್ರಕೂಟರಿಗೂ ಇತರ ಅರಸರ ನಡುವೆಯೂ ನಿರಂತರ ಹೋರಾಟ ನಡೆಯಿತು. ಮೂರನೆ ಗೋವಿಂದನ ಕಾಲದಲ್ಲಿ ಆರಂಭವಾದ ರಾಷ್ಟ್ರಕೂಟ-ಗಂಗರ ನಡುವಣ (ಗೋವಿಂದ ಮತ್ತು ಸೈಗೊಟ್ಟ ಶಿವಮಾರನ ನಡುವಣ) ಹೋರಾಟ, ವೈಮನಸ್ಸು, ನೃಪತುಂಗನ ಕಾಲದಲ್ಲಿ ಎರಡೂ ಮನೆತನಗಳ ನಡುವೆ ಬೆಳೆದ ನಂಟಸ್ತಿಕೆಯಿಂದ (ಅಮೋಘವರ್ಷ ತನ್ನ ಮಗಳು ಚಂದ್ರೋಬಲಬ್ಬೆಯನ್ನು ಗಂಗರ ಬೂತುಗನಿಗೆ ಕೊಟ್ಟು ವಿವಾಹ ಮಾಡಿದ) ಸುಧಾರಿಸಿತೆಂಬುದೂ ಇತಿಹಾಸ ವೇದ್ಯ ಸಂಗತಿ.

ಸಾಹಿತ್ಯಾಭಿಮಾನಿಯೂ ಸ್ವತಃ ಸಾಹಿತಿಯೂ ಆದ ಸೈಗೊಟ್ಟ ಶಿವಮಾರ (788-816?) ಹಲವುಬಾರಿ ರಾಷ್ಟ್ರಕೂಟರ ಸೆರೆಮನೆಯಲ್ಲಿದ್ದು, ಪುನಃ ಸಾಮಂತನಾಗಿ ಆಳಿದ. ಅಷ್ಟೇ ಅಲ್ಲ ಗಂಗರ ಜೊತೆಗೂಡಿಕೊಂಡು ರಾಷ್ಟ್ರಕೂಟರು ವಿಜಯಾದಿತ್ಯನೊಡನೆ 12 ವರ್ಷಗಳಲ್ಲಿ 108 ಬಾರಿ ಕಾದಾಡಿದರು. ಮೂರನೇ ಗೋವಿಂದನ ಕಾಲದಲ್ಲಿ ಆರಂಭವಾದ ಈ ಕದನಗಳು ಅಂತಃಕಲಹಗಳು ಅಮೋಘವರ್ಷ ನೃಪತುಂಗ ಸಿಂಹಾಸನಾರೂಢನಾದ ಕೆಲವು ದಶಕಗಳವರೆಗೂ ಮುಂದುವರೆದಿದ್ದವು. ಆದರೂ ಇಂಥ ನಿರಂತರ ಕದನಗಳ ಕಾಲದಲ್ಲೂ ಲೋಕೋತ್ತರ ಕೃತಿಗಳೂ ನಿರ್ಮಾಣಗೊಂಡವು.

ದಿಗಂಬರ ಜೈನ ಸಂಪ್ರದಾಯದ ಮೇರುಕೃತಿಗಳಾದ ಧವಳ (ಷಟ್ಖಂಡಾಗಮ), ಜಯಧವಳ, ಮಹಾಧವಳ (ಮಹಾಬಂಧ)ಗಳೂ ಈ ಅವಧಿಯಲ್ಲೇ ರಚನೆಯಾದವು. ಪುನ್ನಾಟಗಣದ ಒಂದನೆ ಜಿನಸೇನ 'ಹರಿವಂಶ ಪುರಾಣ' ಬರೆದರೆ, ವೀರಸೇನಾಚಾರ್ಯರು ಪ್ರಮಾಣದಲ್ಲಿ ವ್ಯಾಸಭಾರತವನ್ನು ಮೀರಿಸುವಂತೆ 72,000 ಶ್ಲೋಕ ಪ್ರಮಾಣದ ಧವಳ ಟೀಕೆಯನ್ನು ಸಂಸ್ಕೃತ-ಪ್ರಾಕೃತ ಮಿಶ್ರ ಮಣಿಪ್ರವಾಳ ಶೈಲಿಯಲ್ಲಿ ಬರೆದರು. ಅನಂತರ 'ಜಯಧವಳ'ದ 40,000 ಶ್ಲೋಕ ಪ್ರಮಾಣ ಗ್ರಂಥವನ್ನೂ ರಚಿಸಿದರು. ವೀರಸೇನಾಚಾರ್ಯರ ಶಿಷ್ಯರಾದ ಜಿನಸೇನರು "ಜಯಧವಳ" ಟೀಕೆಯ ಉಳಿದ 20,000 ಶ್ಲೋಕ ಪ್ರಮಾಣದ ರಚನೆ ಮುಗಿಸಿ, ಪಾರ್ಶ್ವಾಭ್ಯುದಯ ಮತ್ತು ಆದಿಪುರಾಣ (ಮಹಾಪುರಾಣ) ಬರೆದರು. ಜಿನಸೇನರು ಬರೆಯಲಾರಂಭಿಸಿ ಉಳಿದ ಭಾಗವನ್ನು ಗುಣಭದ್ರರು 'ಉತ್ತರ ಪುರಾಣ'ಎಂಬ ಹೆಸರಿನಲ್ಲಿ ರಚಿಸಿದರು. ಅಲ್ಲದೆ ನೃಪತುಂಗನ ಕಾಲದಲ್ಲಿ ಶಾಕಟಾಯನ, ಮಹಾವೀರಾಚಾರ್ಯ ಮೊದಲಾದವರೂ ಇದ್ದು ವ್ಯಾಕರಣ, ಗಣಿತ, ಶಾಸ್ತ್ರಗ್ರಂಥಗಳನ್ನು ರಚಿಸಿದರು. ನಿರಂತರವಾದ ಜ್ಞಾತಿಕಲಹ ಯುದ್ಧಗಳ ನಡುವೆಯೂ ಕೃತಿಗಳನ್ನು ರಚಿಸಲು ಲೇಖಕರಿಗೆ ಪ್ರೋತ್ಸಾಹ ನೀಡಿದ. ಅದಕ್ಕೆ ಅಗತ್ಯವಾದ ಪರಿಸರ ನಿರ್ಮಿಸಿದ ಗಂಗರ ಸೈಗೊಟ್ಟ ಶಿವಮಾರ, ರಾಷ್ಟ್ರಕೂಟ ನೃಪತುಂಗರನ್ನು ಎಷ್ಟು ಕೊಂಡಾಡಿದರೂ ಕಡಿಮೆಯೇ.

ನೃಪತುಂಗನ ಕಾಲದಲ್ಲಾಗಲೀ ಅವನಿಗೆ ಮೊದಲಾಗಲೀ ಸಂಸ್ಕೃತ ಪ್ರಾಕೃತ ಸಾಹಿತ್ಯ ಊಹಾತೀತ ಪ್ರಮಾಣದಲ್ಲಿ ನಿರ್ಮಾಣವಾಗಿರುವುದರಿಂದ, ಆ ಕಾಲದಲ್ಲಿ ಕನ್ನಡದಲ್ಲಿ ಸಾಹಿತ್ಯರಚನೆಯೇ ಆಗಿರಲಿಲ್ಲವೆ? ಕನ್ನಡ ಭಾಷೆಯಲ್ಲೂ ಇದೇ ಕಾಲದಲ್ಲೇ ಅಥವಾ ಇದಕ್ಕೆ ಮೊದಲೇ ಇಂಥದೇ ಬಗೆಯ ಸಂಕರ ಭಾಷಾ ಸಾಹಿತ್ಯದ (ಮಣಿಪ್ರವಾಳ) ರಚನೆಯಾಗಿರಬೇಕು. ಅಂಥವುಗಳಲ್ಲಿ ಶ್ಯಾಮಕುಂದಾಚಾರ್ಯನು ಸಂಸ್ಕೃತ, ಪ್ರಾಕೃತ, ಕನ್ನಡ, ಮಿಶ್ರ ಶೈಲಿಯಲ್ಲಿ ರಚಿಸಿದ ಪ್ರಾಭೃತ ಎಂಬ 'ಪದ್ಧತಿ' ಕೃತಿಯಾಗಿದೆ. ಕೃತಿ ದೊರೆಯದಿದ್ದರೂ ಈತನ ವ್ಯಾಖ್ಯಾನ 'ಪದ್ಧತಿ' ಎಂಬ ಹೆಸರು ಪಡೆದಿದೆ. 'ಪದ್ಧತಿ' ಎಂಬುದು ಒಂದು ವ್ಯಾಖ್ಯಾನ ಪ್ರಭೇದ. ಜಿನಸೇನಾಚಾರ್ಯರ "ಜಯಧವಳ" ಟೀಕೆಯ ಪ್ರಕಾರ 'ಪದ್ಧತಿ' ಎಂಬುದು ವೃತ್ತಿ ಸೂತ್ರದ ಕ್ಲಿಷ್ಟ ಪದಗಳಿಗೆ ಬರೆದ ವಿವರಣೆ ರೂಪದ ವ್ಯಾಖ್ಯಾನ. ಅಂದರೆ ನೃಪತುಂಗನ ಕಾಲದಲ್ಲಿ ಇಲ್ಲವೆ ಅವನಿಗೆ ಮೊದಲೂ ಸಂಸ್ಕೃತ–ಪ್ರಾಕೃತ ಭಾಷೆಗಳಲ್ಲಿ ರಚಿತವಾದಂತೆ ಕನ್ನಡ-ಸಂಸ್ಕೃತ–ಪ್ರಾಕೃತ ಭಾಷೆಯಲ್ಲೂ ಕೃತಿ ರಚನೆಯಾಗಿದ್ದಿತೆಂಬುದು ಸ್ಪಷ್ಟ.

ರಾಷ್ಟ್ರಕೂಟ ನೃಪತುಂಗನ ಹಲವಾರು ಬಿರುದುಗಳಲ್ಲಿ, "ಅತಿಶಯ ಧವಳ" ಎಂಬುದೂ ಒಂದು. 'ಕವಿರಾಜಮಾರ್ಗ'ದಲ್ಲಿ ಸುಮಾರು ಒಂಭತ್ತು ಎಡೆಯಲ್ಲಿ ಈ ಹೆಸರು ಉಕ್ತವಾಗಿದೆ. ನೃಪತುಂಗನಿಗೆ 'ಅತಿಶಯಧವಳ' ಎಂಬ ಹೆಸರು ಬರಲು ಕಾರಣವೇನು? 'ಅತಿಶಯ ಧವಳ' ಎಂಬ ಈ ಬಿರುದು ಅಮೋಘವರ್ಷನ ನೀಲಗುಂದ ತಾಮ್ರ ಶಾಸನದಲ್ಲೂ (ಕ್ರಿ.ಶ. 866), ಸಿರೂರು ಶಾಸನದಲ್ಲೂ (ಕ್ರಿ.ಶ. 866), ರಾಷ್ಟ್ರಕೂಟರ ಎರಡನೇ ಕೃಷ್ಣನ ಚಿಂಚೋಳಿ ಶಾಸನದಲ್ಲೂ (ಕ್ರಿ.ಶ. 897) ಉಕ್ತವಾಗಿದೆ. ಅಂದರೆ, ನೃಪತುಂಗನ ಕಾಲದಲ್ಲಿ ರಚಿತವಾದ ಧವಳ, ಜಯಧವಳ, ಮಹಾಧವಳ - ಎಂಬ ಮೇರುಸಮಾನವಾದ ವ್ಯಾಖ್ಯಾನಗಳಿಗಾಗಿ ಈ ಬಿರುದು ದೊರೆಯಿತೆ? ವೀರಸೇನರು ಮೊದಲೇ ಆರಂಭಿಸಿದ್ದ (ಪ್ರಾಯಶಃ ಸೈಗೊಟ್ಟ ಶಿವಮಾರನ ಆಶ್ರಯದಲ್ಲಿ) 'ಧವಳ' ಟೀಕೆಯನ್ನು ಕ್ರಿ.ಶ. 816ರಲ್ಲಿ ಮುಗಿಸಿದರು. ಜಿನಸೇನರ 'ಜಯಧವಳ' ಟೀಕೆಯನ್ನು ಕ್ರಿ.ಶ. 837ರಲ್ಲಿ ಮುಗಿಸಿದರು. ನಂತರ ಜಿನಸೇನರು ಆರಂಭಿಸಿದ ಮಹಾಪುರಾಣದ ಉತ್ತರ ಭಾಗವಾದ 'ಉತ್ತರ ಪುರಾಣ'ವನ್ನು ಗುಣಭದ್ರ ಬರೆದು ಪೂರೈಸಿದ. ಈ ಅಪಾರ ಸಾಹಿತ್ಯರಾಶಿ ನಿರ್ಮಾಣವಾದದ್ದರಿಂದಲೇ ಅಮೋಘವರ್ಷನಿಗೆ 'ಅತಿಶಯ ಧವಳ' ಎಂಬ ಬಿರುದು ಬಂದಿರಬೇಕೆಂದು 'ಧವಳ' ಗ್ರಂಥದ ಸಂಪಾದಕರಲ್ಲಿ ಒಬ್ಬರಾದ ಪ್ರೊ|| ಹೀರಾಲಾಲ್ ಅವರ ಅಭಿಪ್ರಾಯ. 'ಧವಳ' ಎಂದರೆ, ಅತಿರಿಕ್ತ ಶುಕ್ಲ ಅಥವಾ ಶುದ್ಧ. ವೀರಸೇನರು ತಮ್ಮ ಷಟ್ಖಂಡಾಗಮ ಟೀಕೆಯನ್ನು ಕಾರ್ತೀಕ ಶುದ್ಧ ತ್ರಯೋದಶಿಯಂದೇ ಮುಗಿಸಿದ್ದರಿಂದ ಅದಕ್ಕೆ 'ಧವಳ' ಎಂದು ಹೆಸರಿಟ್ಟಿರಬೇಕೆನ್ನುತ್ತಾರೆ – ಹೀರಾಲಾಲ್. ಆದರೆ ಜಯಧವಳ ಮತ್ತು ಮಹಾಬಂಧ ಎಂಬ ಹೆಸರೂ ಇರುವ ಮಹಾಧವಳ ಕೃ

ಗಳ ಹೆಸರಿನಲ್ಲೂ ಇರುವ 'ಧವಳ' ಎಂಬ ಶಬ್ದದ ಅರ್ಥ ವೈಶಿಷ್ಟ್ಯವೇನು ? – ಎಂದು ಚಿಂತಿಸಬೇಕಾಗುತ್ತದೆ.

ಆದರೆ ಧವಳ, ಜಯಧವಳ, ಮಹಾಧವಳ ಪರಂಪರೆಗೇ ಸೇರಿದ ವಿಜಯಧವಳ ಅತಿಶಯಧವಳ–ಎಂಬ ಕೃತಿಗಳೂ ಇದ್ದಿತ್ತೆಂಬುದಕ್ಕೆ ಆಧಾರಗಳಿವೆ. ಪ್ರಾಯಶಃ ಈ ಕೃತಿಗಳು ಜಯಧವಳ ಟೀಕೆ ಮುಗಿದ ಕ್ರಿ.ಶ. 837 ರಿಂದ ನೃಪತುಂಗನ 'ಅತಿಶಯ ಧವಳ' ಬಿರುದನ್ನು ಶಾಸನಗಳಲ್ಲಿ ಉಲ್ಲೇಖಿಸಲು ಆರಂಭಿಸಿದ ಕ್ರಿ.ಶ. 866ರ ಅವಧಿಯಲ್ಲಿ ರಚನೆಗೊಂಡಿರಬಹುದೇನೋ.

ವಿಜಯಧವಳ, ಅತಿಶಯಧವಳ ಕೃತಿಗಳಿಗೆ ಆಧಾರಗಳು :—

(1) ಶ್ರವಣಬೆಳಗೊಳದ ಶಿಲಾಲೇಖನದಲ್ಲಿ 'ವಿಜಯಧವಳ' ಎಂಬ ಹೆಸರಿದೆ. ಲಿಪಿ ಶಾಸ್ತ್ರದ ಆಧಾರದ ಮೇಲೆ ಆರ್. ನರಸಿಂಹಾಚಾರ್ ಅವರು ಇದರ ಕಾಲ ಕ್ರಿ.ಶ. 13 ನೆಯ ಶತಮಾನ ಎಂದಿದ್ದಾರೆ.

(2) ಕಾರಂಜಿಯದ ಪ್ರಾಚೀನ ಗ್ರಂಥಭಂಡಾರದಲ್ಲಿರುವ 'ಪ್ರತಿಕ್ರಮಣ ಎಂಬ ಕೃತಿ ಬರೆದ ಶಿವದಾಸ, ಕ್ರಿ.ಶ. 16 ನೆಯ ಶತಮಾನದವನು. ಈ ಕೃತಿಯಲ್ಲಿನ ಒಂದು ಶ್ಲೋಕ ಹೀಗಿದೆ :

"ಧವಲೋಹಿ ಮಹಾಧವಲೋ ಜಯಧವಲೋ ವಿಜಯ ಧವಲಾಶ್ಚ।
ಗ್ರಂಥಾಃ ಶ್ರೀಮದ್ಭಿರರ್ವಿ ಪ್ರೋಕ್ತಾಃ ಕವಿಧಾತಾರ ಸ್ತಸ್ಮಾತ್"॥

(3) ಡಾ॥ ಆ.ನೆ. ಉಪಾಧ್ಯೆ ಅವರು ಸಂಪಾದಿಸಿ ಪ್ರಕಟಿಸಿರುವ ಸೇನಗಣದ ಪಟ್ಟಾವಳಿಯಲ್ಲೂ ಮೇಲಿನ ಶ್ಲೋಕವಿದೆ.

(4) ಕೆ. ಭುಜಬಲಿ ಶಾಸ್ತ್ರಿಗಳು ಪ್ರಕಟಿಸಿರುವ ಗುಣಭದ್ರ ಪ್ರಶಸ್ತಿಯಲ್ಲಿ ಬರುವ "....ಧವಲ, ಮಹಾಧವಲ, ವಿಜಯಧವಲ, ಮಹಾ ಪುರಾಣಾದಿ ಸಕಲ ಗ್ರಂಥಕರ್ತೃ, ಶ್ರೀ ಜಿನಸೇನಾಯಾರ್ಣಾಂ...." ಎಂದಿದೆ.

(5) 1792 ರಲ್ಲಿ ರಚಿತವಾದ ಪದ್ಮರಾಜನ "ಪೂಜ್ಯಪಾದ ಚರಿತೆ" ಎಂಬ ಸಾಂಗತ್ಯ ಗ್ರಂಥದಲ್ಲಿ ಧವಲ, ಜಯಧವಲಾದಿ ಗ್ರಂಥಗಳನ್ನು ಉಲ್ಲೇಖಿಸಿದ ನಂತರ ವಿಜಯ ಧವಳದ ಉಲ್ಲೇಖ ಬರುತ್ತದೆ.

"ಮೌನಾಖ್ಯಾನಾವನಾಂತು ವಿಜಯಧವಲ ಜಯ
ಸೇನ ಬುಧರ(ರಿ)ತ ಶಂಕೆ ॥" ಎಂದಿದೆ.

(6) 1868 ರಲ್ಲಿ ಟಿ.ಎಚ್. ಬೋವರ್ ಅವರು ಪ್ರಾಚೀನ ತಮಿಳು ಕಾವ್ಯ "ಜೀವಕ ಚಿಂತಾಮಣಿ"ಯನ್ನು ಸಂಪಾದಿಸಿ ಪ್ರಕಟಿಸಿದರು. ಈ ಗ್ರಂಥದ ಮುನ್ನುಡಿಯಲ್ಲಿ ಬೋವರ್ ಜೈನ ಸಿದ್ಧಾಂತದ ಪರಿಚಯ ಮಾಡಿಕೊಟ್ಟಿದ್ದಾರೆ. ಒಂದೆಡೆ ಬೋವರ್ ಶಾಸ್ತ್ರಿ ಐಯರ್ ಎಂಬುವರು ನೀಡಿದ

ಜೈನಸಿದ್ಧಾಂತ ಗ್ರಂಥಗಳನ್ನು ಗಮನಿಸುತ್ತ "ಧವಳ, ಜಯಧವಳ, ಮಹಾಧವಳ, ಗ್ರಂಥಗಳಿರುವುದಾಗಿ ತಿಳಿಸಿದ್ದಾರೆ.

(7) 1931 ರಲ್ಲಿ ಪ್ರಕಟವಾದ ಕದಂಬ ಕುಲದಲ್ಲಿ ಜಾರ್ಜ್ ಎಂ ಮೊರೇಸ್ ಅವರು ಆಚಾರ್ಯ ಜಿನಸೇನನ ಗ್ರಂಥಗಳೆಂದು "ಜಯಧವಳ, ಅತಿ(ಶಯ) ಧವಳ"ಗಳನ್ನು ಸೂಚಿಸಿದ್ದಾರೆ.

ಈ ಆಧಾರಗಳಲ್ಲಿ ಕೆಲವು ಪೊಟ್ಟು ಎಂದು ಪರಿಗಣಿಸಿದರೂ ಧವಳ, ಜಯಧವಳ, ಮಹಾಧವಳ, ಪರಂಪರೆಗೆ ಸೇರಿದ ವಿಜಯಧವಳ, ಅತಿ(ಶಯ)ಧವಳ ರಚಿತವಾಗಿರಬಹುದೆಂದು ಊಹಿಸಬಹುದಲ್ಲವೆ? ಮೊದಲ ಮೂರು ಗ್ರಂಥಗಳು ಪ್ರಕಟವಾಗಿವೆ. ಉಳಿದೆರಡು ಇಲ್ಲ. ಮೂಲ ಪ್ರತಿಗಾಗಿ ಸಂಶೋಧನೆ ಅಗತ್ಯ.

ಇಂಥ ಪ್ರಮಾಣದಲ್ಲಿ ಜೈನಸಾಹಿತ್ಯ ರಚನೆಯಾದ ಕಾರಣ ಅಮೋಘವರ್ಷನಿಗೆ ಕನ್ನಡ ನಾಡಿನ ಜೈನ ಗುರುಗಳು, ಜನಪದ, ಕವಿಸಮೂಹ "ಅತಿಶಯಧವಳ" ಎಂಬ ಬಿರುದಿತ್ತು ಕರೆದಿದ್ದರೆ ಆಶ್ಚರ್ಯವೇನಿಲ್ಲ.

ಹೋರಾಟಗಳಿಲ್ಲ ನಿಂತನಂತರ ಶಾಂತಿ ಕಾಲದಲ್ಲಿ ಪ್ರಶಾಂತ ಮನಸ್ಕನಾಗಿದ್ದ ಅತಿಶಯಧವಳ ನೃಪತುಂಗ, ತನ್ನ ಆಡಳಿತಾವಧಿಯಲ್ಲಿ ಸೃಷ್ಟಿಯಾದ ಹಾಗೂ ಅಸ್ತಿತ್ವದಲ್ಲಿದ್ದ ಸಾಹಿತ್ಯವನ್ನು ಅಧ್ಯಯನ ಮಾಡಿರಬೇಕು. ಪರಿಶೀಲಿಸಿರಬೇಕು. ತನ್ನ ಸಭಾಸದರ ನಡುವೆ ಚರ್ಚಿಸಿರಬೇಕು. ಕುರಿತೋದದೆಯುಂ ಕಾವ್ಯಪ್ರಯೋಗ ಪರಿಣತಮತಿಗಳಾದ ಕನ್ನಡಿಗರ ಬಗೆಗೆ ಎಲ್ಲಿಲ್ಲದ ಅಭಿಮಾನ ಮಾಡಿರಬೇಕು. ಪೂರ್ವಾಚಾರ್ಯರ ಕೃತಿಗಳು, ಆಗಮೋದಿತ ಮಾರ್ಗಗಳ ಬಗ್ಗೆ, ಹಿಗ್ಗು-ಹೆಗ್ಗಳಿಕೆಯುಂಟಾಗಿರಬೇಕು. ಒಂದಲ್ಲ ಹಲವು ಭಾಷೆಗಳಲ್ಲಿ ಏಕಕಾಲದಲ್ಲಿ ಸಾಹಿತ್ಯ ರಚಿಸುವ ಪ್ರತಿಭೆ ಸಾಮರ್ಥ್ಯ ಕಂಡು ನಿಬ್ಬೆರಗಾಗಿರಬೇಕು. ಅವುಗಳ ಬಗೆಗೆ ವಿದ್ವತ್ಸಭೆಯಲ್ಲಿ ನಿತ್ಯ ಚರ್ಚೆ ನಡೆದಿರಬೇಕು. ಕೃತಿ ವಿಮರ್ಶೆ, ಭಾಷೆ-ಪ್ರಭೇದಗಳ ಹೋಲಿಕೆಗಳನ್ನು ಅರಿಯಲು ಯತ್ನಿಸಿರಬೇಕು. ಅದೇ "ನೃಪತುಂಗ ದೇವಾನುಮತ", "ಅತಿಶಯಧವಳೋಕ್ತ ಕ್ರಮ" ಆಗಿದೆ.

ಕಾಲಾಂತರದಲ್ಲಿ ಇವೆಲ್ಲವನ್ನು ಶೇಖರಿಸಿ ಕೆಲವರು ಹೆಚ್ಚಾಗಿ ಜೈನಸಾಹಿತ್ಯ ಪರಿಶೀಲನೆ ಕುರಿತಾದ "ನೃಪತುಂಗ ಮಾರ್ಗಾನುಮತ' 'ಅತಿಶಯ ಧವಳೋಕ್ತ ಕ್ರಮ'ವನ್ನು ರಚಿಸಿದೆ. ಆದರೆ ಅದನ್ನು ಬಿಡಲೂ ಆಗದೇ ಮಂಡಿ ಭಾಷಾಂತರದಿಂದ ಎರವಲನ್ನು ಪಡೆದು ಹೊಸ ಕೃತಿಯೊಂದನ್ನು ರಚಿಸಿರಲೂ ಸಾಧ್ಯ. ಅದೇ ಈಗಿನ 'ಪರಸ್ಪರ ವೈರುಧ್ಯ, ಅಸಂಗತತೆಗಳಿಂದ ಕೂಡಿರುವ "ಕವಿರಾಜಮಾರ್ಗ" ಆಗಿರಬೇಕು.

ಇಲ್ಲದಿದ್ದರೆ ನೃಪತುಂಗನ 200 ವರ್ಷಗಳ ನಂತರವೂ ಪಂಪ ಸಂಸ್ಕೃತ ಶಾಸ್ತ್ರಕಾರ (ಹಾಗೆಯೇ ಪಂಪ, ಭಾಷಾಂತರದಿಂದ ಎರವಲು ಪಡೆದ ಕವಿರಾಜಮಾರ್ಗಕಾರನ

ಕಾವ್ಯಲಕ್ಷಣಗಳಿಗನುಗುಣವಾಗಿ ರಚಿಸಿದ ಆದಿಪುರಾಣ, ಭಾರತಗಳನ್ನು ಹಿಂದಿನ ಕಾವ್ಯಗಳನ್ನೆಲ್ಲ "ಇಕ್ಕಿಮೆಟ್ಟಿದವು" ಎಂದಿರುವುದನ್ನು "ಕವಿವ್ಯಾಸನೆಂಬಗರ್ವಮೆನಗಿಲ್ಲ" ಎಂದಿರುವುದನ್ನೂ ಈ ಹಿನ್ನೆಲೆಯಲ್ಲಿ ಪರಿಶೀಲಿಸ ಬೇಕು.

ಈವರೆಗೂ ದೊರೆತಿರುವ 'ಕವಿರಾಜಮಾರ್ಗದ' ಓಲೆ, ಹಸ್ತಪ್ರತಿಗಳ ಕಾಲವನ್ನು ನಿಷ್ಕೃಷ್ಟವಾಗಿ ಯಾರೂ ನಿರ್ಧರಿಸಿದಂತೆ ಕಂಡುಬರದು. ಲಿಪಿಶಾಸ್ತ್ರದ ಆಧಾರದ ಮೇಲೆ ಅತ್ಯಂತ ಪ್ರಾಚೀನ ಪ್ರತಿ 13-14 ನೇ ಶತಮಾನಕ್ಕಿಂತ ಹಿಂದಣದಲ್ಲ. ಅದಕ್ಕೂ ಹಿಂದಣ ಪ್ರತಿ ದೊರೆತಿಲ್ಲ. ನೃಪತುಂಗನ ನಂತರ 5 6 ಶತಮಾನಗಳ ನಂತರ ಹುಟ್ಟಿದ ಈ ಪ್ರತಿಗಳಲ್ಲಿ ಎಷ್ಟು ಪ್ರಕ್ಷಿಪ್ತವೆಂಬುದು ನಿರ್ಧರಿಸಬೇಕಾದುದೂ ಅಗತ್ಯ. 'ಕವಿರಾಜಮಾರ್ಗ' ಹಸ್ತಪ್ರತಿಯ ವಂಶಾವಳಿಯನ್ನು ವೈಜ್ಞಾನಿಕವಾಗಿ ಪುನರ್ರಚಿಸಲು ಯತ್ನಿಸಿದಾಗ, ಜೊಳ್ಳು, ಗಟ್ಟಿ ತಂತಾನೆ ಹೊರಬೀಳುತ್ತವೆ.

ಧವಳಾದಿ ಗ್ರಂಥಗಳ ಪ್ರಾಚೀನ ಓಲೆಪ್ರತಿಗಳು ಈಗಲೂ ಮೂಡಬಿದರೆಯಲ್ಲಿವೆ. ಅವುಗಳಲ್ಲಿ ಧವಳ. ಜಯಧವಳ. ಮಹಾಧವಳದ ಓಲೆ ಪ್ರತಿಗಳು 12ನೇ ಶತಮಾನದಷ್ಟು ಹಳೆಯವು. ಭುಜಬಲಿಗಂಗನ ಚಿಕ್ಕಮ್ಮ ದೇವಿಯಕ್ಕ, ಶುಭಚಂದ್ರ ಸಿದ್ಧಾಂತ ದೇವರಿಗೆ ಶ್ರುತ ಪಂಚಮಿಯಂದು ಪ್ರತಿಮಾಡಿಸಿ ನೀಡಿದ ಪ್ರತಿಯೇ ಇಂದಿಗೂ ಮೂಡಬಿದಿರೆಯಲ್ಲಿದೆ. ಹಾಗೆಯೇ ದಾನಚಿಂತಾಮಣಿ ಮಲ್ಲಿಕಬ್ಬೆ ಮಾಘನಂದಿಗೆ ನೀಡಿದ ಓಲೆ ಪ್ರತಿಯೂ ಇದೆ. ಇವುಗಳ ಕಾಲ 12ನೆಯ ಶತಮಾನ. ಹಸ್ತಪ್ರತಿಗಳ ಲಿಪಿ, ದಾನ ಮಾಡಿದವರು, ದಾನ ಪಡೆದವರ ಕಾಲಮಾನ-ಎಲ್ಲವನ್ನೂ ಐತಿಹಾಸಿಕ ಆಧಾರಗಳು ಪುಷ್ಟೀಕರಿಸುತ್ತವೆ. 'ಕವಿರಾಜ ಮಾರ್ಗ' ಪ್ರತಿಗಳ ಸಂಬಂಧದಲ್ಲಿ ಇಂಥ ಐತಿಹಾಸಿಕ ಪುಷ್ಟೀಕರಣ ಅಗತ್ಯವಾಗಿದೆ.

ಧವಳಾದಿ ಗ್ರಂಥಗಳು ಅತಿಗಹನವಾದ ಧರ್ಮ-ಕರ್ಮ-ವಿಷಯಗಳನ್ನು ಹಲವು ಭಾಷೆಯಲ್ಲಿ (ಸಂಸ್ಕೃತ. ಪ್ರಾಕೃತ. ಪ್ರಾಕೃತ ಪ್ರಭೇದಗಳ) ಬಹು ಗಂಭೀರವಾಗಿ ನಿರೂಪಿಸಿದ್ದರೂ. ಇವುಗಳನ್ನು ಸುಂದರವಾದ ಕನ್ನಡ ಲಿಪಿಯಲ್ಲೇ ಬರೆದಿದ್ದಾರೆ. ಅತ್ಯಂತ ಗಂಭೀರವೂ ಗಹನವೂ ಆದ ಸಿದ್ಧಾಂತಗಳ ವ್ಯಾಖ್ಯಾನ, ಗಣಿತಶಾಸ್ತ್ರ ಪ್ರಕ್ರಿಯೆಗಳ ನಿರೂಪಣೆಗೂ ಕನ್ನಡ ಲಿಪಿಯನ್ನೇ ಆ ಕಾಲದಲ್ಲೂ ಬಳಸುತ್ತಿದ್ದರು. ಅಂದರೆ ಕನ್ನಡ ಭಾಷಾ ಲಿಪಿಯ ಸತ್ವ. ಚೈತನ್ಯಗಳನ್ನು ಊಹಿಸಿಕೊಳ್ಳಿ! ಇಂಥ ಮೇರು ಕೃತಿಗಳು ಗಂಗ ಶಿವಮಾರ, ರಾಷ್ಟ್ರಕೂಟ ಅಮೋಘವರ್ಷನ ಕಾಲದಲ್ಲಿ ರಚನೆಗೊಂಡುದು ಕನ್ನಡಿಗರಿಗೆ ಅಭಿಮಾನದ ಸಂಗತಿ. ಇನ್ನೆಷ್ಟು ಕೃತಿಗಳು ಕನ್ನಡ ಲಿಪಿಯಲ್ಲಿ ರಚಿತವಾಗಿದ್ದುವೋ ಏನೋ?

ಸರ್ವಶ್ರೀ ಎಂ. ವಿ. ಸೀತಾರಾಮಯ್ಯ, ಟಿ. ಕೇಶವಭಟ್ಟ, ಡಾ|| ಎಂ. ಎಂ. ಕಲಬುರ್ಗಿ ಮೊದಲಾದವರೆಲ್ಲ "ಕುಮುದೇಂದು-ಸಿರಿಭೂವಲಯದ" ಬಗೆಗೆ ಪ್ರಸ್ತಾಪಿ

ಸಿದ್ದಾರೆ. ಕುಮುದೇಂದು ವಿರಚಿತ 'ಸಿರಿಭೂವಲಯದ' ಮಂಗಳ ಪ್ರಾಭೃತದ 59 ಅಧ್ಯಾಯಗಳೂ ಪೂರ್ತಿಯಾಗಿ ಪ್ರಕಟವಾಗದೆ, ಅದರ ಸಮಗ್ರ ಅಧ್ಯಯನ ನಡೆಸುವುದು ಅಸಾಧ್ಯ. ಸಮಗ್ರ ಅಧ್ಯಯನ ನಡೆಸದೆ ಕೃತಿ, ಕರ್ತೃ, ಕಾಲದ ಬಗೆಗೆ ಧಿಡೀರ್ ತೀರ್ಮಾನ ಕೈಗೊಳ್ಳಲೂ ಆಗದು. ಅದರ ಭಾಷೆ, ಛಂದಸ್ಸು, ಸಾಂಗತ್ಯ, ಅದರ ಕಾಲದ ಬಗೆಗೆ ಶಂಕೆ ಹುಟ್ಟಿಸುತ್ತದೆ-ನಿಜ. ಆದರೆ ಯಾವ ಕಾಲದಲ್ಲೇ ಆಗಲೀ ಶಿಷ್ಟಭಾಷೆ ಬಿಟ್ಟು (ಗ್ರಂಥಸ್ಥ ಭಾಷೆ ಬಿಟ್ಟು) ಜನಸಾಮಾನ್ಯರ ಭಾಷೆ, ಶೈಲಿ, ಸಾಹಿತ್ಯ ಇರಲಿಲ್ಲವೆಂದಾಗಲೀ ಇಲ್ಲವೇ ಕಾವ್ಯಾಲಂಕಾರಿಗಳು ಹೇಳುವ ಛಂದಸ್ಸು ಬಿಟ್ಟು ಬೇರೆ ಛಂದಸ್ಸುಗಳು ಇರಲಿಲ್ಲವೆಂದಾಗಲೀ, ಹೇಳಲಾಗದು. ಗಣಾಷ್ಟಕವನ್ನೂ ಒನಕೆವಾಡಿನಲ್ಲಿ ನಿರೂಪಿಸುತ್ತಿದ್ದ ಈ ನಾಡಿನಲ್ಲಿ, ಈ ವಿಷಯಗಳ ಬಗೆಗೆ ಪೂರ್ವಾಗ್ರಹಕ್ಕೆ ಬಲಿಬೀಳದೆ ಮುಕ್ತಮನದಿಂದ ಪರಿಶೀಲಿಸುವುದು ಅಗತ್ಯ. 9 ರಿಂದ 13-14 ನೇ ಶತಮಾನದವರೆಗೆ ಇದರ ಕಾಲವೆಂದೂ ಹೇಳುತ್ತಾರೆ. ಕಾಲ ಯಾವುದಾದರೇನು? ಗ್ರಂಥಸ್ಥ ವಿಷಯ. ಅದರ ಸತ್ವ, ಹುರುಳು-ಮುಖ್ಯ. ಈಗ ಪ್ರಕಟವಾಗಿರುವ 20 ಅಧ್ಯಾಯಗಳಲ್ಲಿ ಕಡೆಯ 18-19-20 ಅಧ್ಯಾಯಗಳನ್ನು ಸಮಗ್ರವಾಗಿ ಅಧ್ಯಯನ ಮಾಡಿದರೆ ಈ ಕೃತಿಯ ಹಿರಿಮೆ-ಗರಿಮೆಯ ಸ್ಥೂಲ ಪರಿಚಯವಾದರೂ ಆದೀತು. ಈ ಮೂರು ಅಧ್ಯಾಯಗಳಲ್ಲಿ ಎಡದಿಂದ ಬಲಕ್ಕೆ, ಹಾಗೆಯೇ ಮೇಲಿಂದ ಕೆಳಕ್ಕೆ, ಕೆಳಗಿನಿಂದ ಮೇಲಕ್ಕೆ ಓದುತ್ತ ಹೋದರೆ, ಸಂಸ್ಕೃತ, ಪ್ರಾಕೃತ, ಕನ್ನಡ ಕಾವ್ಯಗಳು ದೊರೆಯುತ್ತವೆ — ಒಂದಲ್ಲ, ಹಲವು. ಅವುಗಳ ವಸ್ತುವಿಷಯ ವಿಭಿನ್ನ, ವೈವಿಧ್ಯಮಯ.

‘ಸಿರಿಭೂವಲಯ’ದ ಮೂಲ ಪ್ರತಿ ಅಂಕದಲ್ಲಿರಲಿಲ್ಲ. ಸುಂದರವಾದ ಕನ್ನಡ ಅಕ್ಷರದಲ್ಲೇ ಬರೆಯಲಾಗಿದ್ದಿತು – ಎಂಬ ಅಂಶವನ್ನು ಆಧಾರ ಸಮೇತ ಮಂಡಿಸಿ ಒಂದು ದಶಕದ ಮೇಲಾಯಿತು. (ನೋಡಿ : ಸಿರಿಭೂವಲಯದ ಮೂಲ ಪ್ರತಿ ಏನಾಯಿತು? – ‘ಪ್ರಜಾವಾಣಿ’ – 20–12–1970)

ಆದುದರಿಂದ, ರಾಷ್ಟ್ರೀಯ ಪತ್ರಾಗಾರದಲ್ಲಿ ಕೊಳೆಯುತ್ತಿರುವ ಹಸ್ತಪ್ರತಿಯನ್ನು ಕನ್ನಡದ ವಿದ್ವಾಂಸರು ತರಿಸಿಕೊಂಡು, ಅದನ್ನು ಮೊದಲು ಅಧ್ಯಯನ ಮಾಡಲಿ. ಸಮಗ್ರ ಕೃತಿಯ ಅಧ್ಯಯನ ನಡೆಸದೆ, ಪ್ರಕಟವಾದ 20 ಅಧ್ಯಾಯಗಳಲ್ಲಿ ಕಡೆಯ ಮೂರು ಅಧ್ಯಾಯಗಳನ್ನು ಕೂಲಂಕಷವಾಗಿ ಪರಿಶೀಲಿಸದೆ ಯಾರೂ ಯಾವ ತೀರ್ಮಾನಕ್ಕೂ ಬರಲಾಗದು.

ಕೊನೆಯದಾಗಿ ತೀ.ನಂ.ಶ್ರೀ. ಅವರ ಮಾತುಗಳಲ್ಲಿ ನನ್ನ ಲೇಖನವನ್ನು ಇಲ್ಲಿಗೆ ಮುಗಿಸುತ್ತಿದ್ದೇನೆ : "ಆನೆ ಹೆಜ್ಜೆಗಳಂತೆ ಕಲಸಿಕೊಂಡಿರುವ ಆ ಗುರುತುಗಳನ್ನು ವಿಂಗಡಿಸಿ ತೆಗೆಯುವುದು ಈಗ ಬೇಕಾದ ಕಾರ್ಯ".

ಪೂಜ್ಯಪಾದ-ದೇವನಂದಿ

ಹಂಪ. ನಾಗರಾಜಯ್ಯ

ನಮಃ ಶ್ರೀ ಪೂಜ್ಯ ಪಾದಾಯ ಲಕ್ಷಣಂ ಯದುಪಕ್ರಮಮ್
ಯದೇವಾತ್ರ ತದನ್ಯತ್ರ ಯನ್ನಾತ್ರಾಸ್ತಿ ನ ತತ್ ಕ್ವಚಿತ್

ಆಚಾರ್ಯ ಗುಣನಂದಿ, ಜೈನೇಂದ್ರಪ್ರಕ್ರಿಯಾ

ಕನ್ನಡ ಕವಿಗಳೂ, ಕನ್ನಡೇತರ ಜೈನ ಕವಿಗಳೂ ತಮ್ಮ ಕೃತಿಗಳಲ್ಲಿ (ಸಾಹಿತ್ಯ ಮತ್ತು ಶಾಸ್ತ್ರ ಕೃತಿಗಳಲ್ಲಿ, ಶಾಸನಗಳಲ್ಲಿ) ಅನೇಕ ಪ್ರಾಚೀನ ಜೈನಾಚಾರ್ಯರನ್ನು ಸ್ತುತಿಸಿದ್ದಾರೆ. ಹೀಗೆ ನೆನಕೆಗೆ ಪಾತ್ರವಾದ ಆಚಾರ್ಯ ಪರಂಪರೆ ದೊಡ್ಡದು. ಇವರಲ್ಲಿ ಅನೇಕರು ತುಂಬಾ ಹೆಸರುವಾಸಿಯಾದವರು. ಅಂಥ ಪ್ರಾತಃಸ್ಮರಣೀಯ ಪೂಜ್ಯ ಆಚಾರ್ಯ ಶ್ರೇಣಿಯಲ್ಲಿ ಎದ್ದುಕಾಣುವ ಶಿಖರ ಪೂಜ್ಯಪಾದರದು (ಪೂ. ಪಾ.). ಪೂಜ್ಯಪಾದರ ವಿಚಾರವಾಗಿ ಕಳೆದ ಒಂದು ಶತಮಾನದಲ್ಲಿ ವಿಪುಲವಾದ ಚರ್ಚೆ ನಡೆದಿದೆ. ಅವರನ್ನು ಕುರಿತು ಒಂದು ಮಹಾ ಪ್ರಬಂಧ ಬರೆದು ಪ್ರಶಸ್ತಿಗೆ ವಿಶ್ವ ವಿದ್ಯಾಲಯಕ್ಕೆ ಸಾದರಪಡಿಸಲು ಬೇಕಾಗುವಷ್ಟು ಮಾಹಿತಿಗಳಿವೆ.

ಜೈನರ 24 ಜನ ತೀರ್ಥಂಕರರೇ ಅಲ್ಲದೆ ಒಟ್ಟು ತ್ರಿಷಷ್ಟಿ(63) ಶಲಾಕಾ ಪುರುಷರೆಲ್ಲ ಉತ್ತರ ಭಾರತದಲ್ಲಿ ಹುಟ್ಟಿ ಬೆಳೆದವರು. ಅವರ ಬಹುಪಾಲು ಬದುಕೆಲ್ಲ ಉತ್ತರಕ್ಕೇ ಸೀಮಿತ. ತೀರ್ಥಂಕರರ ಉಪದೇಶವನ್ನೂ, ಜೈನ ಸಿದ್ಧಾಂತಗಳನ್ನೂ ಸಮರ್ಥವಾಗಿಯೂ ಯಶಸ್ವಿಯಾಗಿಯೂ ಕೃತಿಗಳ ಮೂಲಕ ಶಾಶ್ವತಗೊಳಿಸಿ ಲೋಕಕ್ಕೆ ಬಿತ್ತರಿಸಿದ ಶ್ರೇಷ್ಠ ಆಚಾರ್ಯರಲ್ಲಿ ಬಹುಪಾಲು ಜನ ದಕ್ಷಿಣದವರು. ಅದರಲ್ಲಿಯೂ ಕರ್ನಾಟಕದವರು. ಕುಂದಕುಂದ, ಸಮಂತಭದ್ರ, ಕವಿಪರಮೇಷ್ಠಿ, ಪೂಜ್ಯಪಾದ, ನೇಮಿಚಂದ್ರ (ಸಿದ್ಧಾಂತ ಚಕ್ರವರ್ತಿ) ಮೊದಲಾದ ಆಚಾರ್ಯರನ್ನು ಹೆಸರಿಸಬಹುದು. ಇವರಲ್ಲಿ ಒಬ್ಬರಾದ ಪೂ. ಪಾ. ರ ಬದುಕು ಬರೆಹ ಕುರಿತು ಕಿರಿದರಲ್ಲಿ ಇಲ್ಲಿ ಪರಿಚಯಿಸಲಾಗುವುದು.

ದಕ್ಷಿಣ ಭಾರತದ ಮಹಾನ್ ಆಚಾರ್ಯರೂ ಕರ್ನಾಟಕದ ಹೆಮ್ಮೆಯ ಸುಪುತ್ರರೂ ಆದ ಪೂ.ಪಾ. ರ ಇತಿವೃತ್ತ ಸಂಬಂಧವಾದ ಉಪಲಬ್ಧ ಸಾಹಿತ್ಯ ವಿಸ್ತಾರವಾಗಿದೆ. ಪೂ. ಪಾ. ರ ಜೀವನ ವಿವರವನ್ನು ದೇವಚಂದ್ರ ಕವಿ (1770—1842)

ತನ್ನ ರಾಜಾವಳೀ ಕಥೆಯಲ್ಲಿ (1838) ಕೊಟ್ಟಿದ್ದಾನೆ. ಪೂ. ಪಾ. ರು ಕೂಡ, ಅನೇಕ ಜೈನಾಚಾರ್ಯರ ಹಾಗೆ ತಮ್ಮ ವಿಚಾರವಾಗಿ ಹೇಳಿಕೊಂಡಿಲ್ಲ. ಅವರು ಸ್ವವಿಷಯದಲ್ಲಿ ದಿವ್ಯ ಮೌನವಹಿಸಿರುವುದರಿಂದ ಸಂಶೋಧಕರು ದೇವಚಂದ್ರನಿಗೇ ಶರಣು ಹೋಗಬೇಕಾಗಿದೆ. ದೇವಚಂದ್ರ ತುಂಬಾ ಅರ್ವಾಚೀನನಾದವನು. ಪರಂಪರೆಯಿಂದ ಬಂದ ಐತಿಹ್ಯ, ಸ್ಥಳ ಪುರಾಣ ಮುಂತಾದ ಎಲ್ಲ ಕಿಂವದಂತಿಗಳನ್ನೂ, ಜೈನ ಜಾನಪದ ಸಾಹಿತ್ಯವನ್ನು ಆತ ಹಿಂದು ಮುಂದು ನೋಡದೆ ದಾಖಲಿಸುತ್ತಾನೆ. ಚಾರಿತ್ರಿಕ ಪ್ರಜ್ಞೆ ಕಡಮೆ. ಉಚಿತಾನುಚಿತ ವಿವೇಕವೂ ಸಾಧಾರಣ. ಪೂರ್ವಾಗ್ರಹ ಮುಕ್ತನೂ ಅಲ್ಲ. ಅವನಿಗಿರುವ ಮಿತಿಗಳಿಂದಾಗಿ ಅವನ ಹೇಳಿಕೆಗಳನ್ನು ಅಧಿಕೃತವೆಂದು ಸ್ವೀಕರಿಸುವಾಗ ಎಚ್ಚರವಾಗಿರಬೇಕು. ದೇವಚಂದ್ರ ಹೇಳುವುದೆಲ್ಲ ಅಬದ್ಧವೆಂದಲ್ಲ; ಆತ ವಿಶ್ವಾಸಾರ್ಹನೇ ಅಲ್ಲ ಎಂದೂ ತೀರ್ಮಾನಿಸಬೇಕಾಗಿಲ್ಲ. ದೇವಚಂದ್ರನ ಹೇಳಿಕೆಗಳಲ್ಲಿ ನಂಬಲರ್ಹವಾದ ಮಾಹಿತಿಗಳೂ ಇವೆ ಎಂಬುದನ್ನು ಮರೆಯುವಂತಿಲ್ಲ. ಅವನ ಅಭಿಪ್ರಾಯಗಳನ್ನು ಅನುಮೋದಿಸುವ ಅಂತರಬಾಹ್ಯ ಆಧಾರಗಳು ಅನೇಕವೇಳೆ ದೊರೆತು ದೇವಚಂದ್ರನ ಮರ್ಯಾದೆಯನ್ನು ಕಾಪಾಡಿವೆ. ದೇವಚಂದ್ರನ ನಿರೂಪಣೆಯನ್ನು ಪುಷ್ಟೀಕರಿಸುವ ಅಥವಾ ವಿರೋಧಿಸುವ ಯಾವುದೇ ಪ್ರಮಾಣಗಳು ಸಿಗದಿರುವ ಸಂದರ್ಭಗಳೂ ಇವೆ. ಅಂಥ ಸನ್ನಿವೇಶಗಳಲ್ಲಿ ದೇವಚಂದ್ರನ ವಿವರಣೆಯನ್ನು ಸಂಶಯದಿಂದಲೇ ಆದರೂ, ತಾತ್ಕಾಲಿಕವಾಗಿ ಪರಿಶೀಲಿಸಬೇಕಾಗುತ್ತದೆ. ಪೂ. ಪಾ. ರ ವಿಚಾರವಾಗಿ ಆತ ಹೇಳಿರುವುದು ಮಿಶ್ರ ಸಾಮಗ್ರಿಯದು. ಅದರಲ್ಲಿ ಕೈಬಿಡಬೇಕಾದುದೂ ಇದೆ. ಕೈಹಿಡಿಯಬೇಕಾದುದೂ ಇದೆ.

ತನ್ನ ರಾಜಾವಳೀ ಕಥೆಯಲ್ಲಿ (1838) ದೇವಚಂದ್ರ ಕವಿ ಪೂ. ಪಾ. ರ ಬಗೆಗೆ ಕೊಟ್ಟಿರುವ ಸಾಮಗ್ರಿ: (ಕವಿಚರಿತ್ರೆಯಲ್ಲಿ ಉದಾಹೃತ ಭಾಗ)

"ಶಕವರ್ಷ 300 ಸಂದಂದು ಕರ್ನಾಟಕದೊಳು ಕೊಳ್ಳೇಗಾಲವೆಂಬ ಪುರದೊಳು ಮಾಧವ ಭಟ್ಟನೆಂಬ ಬ್ರಾಹ್ಮಣನ ಪೆಂಡತಿ ಶ್ರೀದೇವಿಯೆಂಬವಳ್ಗೆ ಗರ್ಭಂ ಬೆಳೆದು ನವಮಾಸಂ ನೆಱೆಯೆ ಶ್ರವಣ ನಕ್ಷತ್ರದೊಳ್ ಪುತ್ರೋತ್ಪತ್ತಿಯಪ್ಪುದುಂ ಜಾತನಾಮ ಕರ್ಮಾದಿಗಳಂ ಮಾಡಿ ಪೂಜ್ಯಪಾದನೆಂದು ಪೆಸರಿಟ್ಟು ಸಲಹಿದೊಡನೆ ಜೈನಶಾಸ್ತ್ರಂಗಳೊಳ್ ಬಲ್ಲಿದನಾಗಿ ಬಾಲಕಾಲದೊಳ್ ಜಿನದೀಕ್ಷೆಯಂ ತಾಳಿ ದಕ್ಷಿಣ ದಿಗ್ಭಾಗದ ಶಿಲೋಚ್ಚಯದೊಳ್ ತಪಂ ಗೆಯ್ಯುತ್ತಿರ್ದಂ ಮುಡಿಗುಂಡವೆಂಬ ಗ್ರಾಮದಲ್ಲಿದ್ದ ತನ್ನ ಸೋದರದ ಮಾವನಾದ ಪಾಣಿನ್ಯಾಚಾರ್ಯನಿಗೆ ವ್ಯಾಕರಣಮಂ ಪೂರ್ತಿ ಮಾಡುವುದಱೊಳಗೆ ಅವಸಾನ ಕಾಲಂ ಬರೆ ಆತನು ಪೂರ್ತಿಮಾಡೆಂದು ಕೇಳಿಕೊಳ್ಳಲು ಪೂಜ್ಯಪಾದಂ ಪೂರ್ತಿ ಮಾಡಿದಂ ಜೈನೇಂದ್ರ ವ್ಯಾಕರಣ ಸೂತ್ರಮಂ ರಚಿಸಿದಂ ಬಳಿಕಂ ಪಾಣಿನಿ ಸೂತ್ರ ವೃತ್ತಿಯಂ ರಚಿಸಿದಂ........ ಪೂಜ್ಯಪಾದ

ಯತೀಂದ್ರಂ ಪದಿನಾಡೊಳು ತಪಂಗೆಯ್ಯುತ್ತೆ ತೀರ್ಥವಂದನೆಯಂ ಮಾಡಲೆಂದು ಆಂಧ್ರ ಕರ್ಣಾಟ ಚೋಳ ಪಾಂಡ್ಯ ಮೊದಲಾದ ಎಲ್ಲಾ ದೇಶಗಳಂ ವಿಹಾರಿಸಿ ಕೌಂಗಲಿಯ ಶೈಲಕ್ಕಂ ಬಂದು ಜಿನಾಗಮಂ ಕೆಲವು ನೋಡಿ ತಿಳಿದುಪದೇಶಂ ಮಾಡುವರಿಲ್ಲದೆ ಕೆಲವು ಸಿದ್ಧಾಂತಂ ಮಱೆಗಿರೆದಿರ್ದುದಱಿಂ ಸಂದೇಹ ಗ್ರಸ್ತವಾಗೆ ಪೂರ್ವವಿದೇಹಕ್ಕೆ ಪಾದಲೇಪೌಷಧಿ ಸಾಮರ್ಥ್ಯದಿಂ ಪೋಗಿ ಸಮವಸರಣದೊಳಿರ್ದ ಶ್ರೀಜಿನಪತಿಗಳಂ ವಂದಿಸಿ ತತ್ತ್ವಮಂ ನಿಸ್ಸಂದೇಹವಾಗಱಿದಲ್ಲಿಯೇ ಪುಸ್ತಕದೊಳ್ ಬರೆದುಕೊಂಡು ಪ್ರತ್ಯಾಯತ್ತದಿಂ ಭರತಕ್ಷೇತ್ರಮನೆಯ್ದುವಲ್ಲಿ ಸೂರ್ಯಕಿರಣೋಷ್ಣದಿನ್ ದೃಷ್ಟಿ ಪೋಗೆ ಬಂಕಾಪುರವೆಂಬುದಱೊಳ್ ಶಾಂತೀಶ್ವರರಂ ವಂದಿಸಿ ಶಾಂತ್ಯಷ್ಟಕಮಂ ಪೇಳ್ದು ದೃಷ್ಟಿಯಂ ಪಡೆದು ಬಂದು ಸಿದ್ಧಾಂತಮಂ ಶಿಷ್ಯಪ್ರತಿಶಿಷ್ಯರ್ಗೆ ಉಪದೇಶಂಗೆಯ್ದು ಲೌಕಿಕ ಪರಮಾರ್ಥಂಗಳಂ ರಚಿಸಿ ಸದ್ಗತಿ ಪ್ರಾಪ್ತರಾದರ್ ''

ದೇವಚಂದ್ರನ ಗದ್ಯ ಅಕ್ಲಿಷ್ಟ, ನೇರ, ವಸ್ತುನಿಷ್ಠ, ಅನಲಂಕೃತ. ತಾನು ಹೇಳಬೇಕಾದುದನ್ನು, ತನಗೆ ತಿಳಿದುದನ್ನು ಮುಚ್ಚುಮರೆ ಮುಲಾಜುಗಳಿಲ್ಲದೆ ನಿರ್ಭಿಡೆಯಿಂದ ನಿರೂಪಿಸುವುದು ಅವನ ಸ್ವಭಾವ. ಅದರಂತೆ ಪೂ. ಪಾ. ರನ್ನು ಕುರಿತು ಬರೆದಿರುವ ಭಾಗವೂ ನಿಸ್ಸಂಕೋಚ ನಿರೂಪಣೆಯಾಗಿದೆ. ದೇವಚಂದ್ರನು ಕೊಟ್ಟಿರುವ ಪೂ. ಪಾ. ರ ಜೀವನಚರಿತ್ರೆಯಲ್ಲಿ ಅಂಗೀಕಾರಾರ್ಹವಾದುದೆಷ್ಟು ಎಂಬುದನ್ನು ಪರಾಮರ್ಶಿಸುವುದಕ್ಕಿಂತ ಇದರಲ್ಲಿ ನಿರಾಕರಿಸಬೇಕಾದ ಅಂಶಗಳನ್ನು ಪರಿಶೀಲಿಸಬಹುದು. ಪೂ. ಪಾ ರ ತಂದೆತಾಯಿ ಹುಟ್ಟೂರು ಹುಟ್ಟಿದ ತೇದಿ ನಕ್ಷತ್ರ ತಿಥಿ- ಇದು ಈಗ ಕದಲಿಸುವುದು ಕ್ಷೇಮವಲ್ಲ: ಸುಲಭವೂ ಅಲ್ಲ. ಆತನಿಗೆ ಹುಟ್ಟಿದಾಗಲೇ ಪೂ. ಪಾ. ರೆಂದು ನಾಮಕರಣ ಮಾಡಿದರೆಂಬ ಅಭಿಪ್ರಾಯ ಸರಿಯಲ್ಲ. ಅನ್ಯತ್ರ ದೊರೆಯುವ ಆಧಾರಗಳಿಂದ ತಿಳಿದುಬರುವಂತೆ ಆತನಿಗೆ ದೇವನಂದಿ ಎಂಬುದು ಮೊದಲಿಟ್ಟ ಹೆಸರು. ಬಾಲ್ಯದಲ್ಲಿಯೇ ಜಿನದೀಕ್ಷೆ ಪಡೆದನೆಂಬುದರ ಬಗೆಗೂ ನಾವು ತಟಸ್ಥರಾಗಿರುವುದು ಒಳ್ಳೆಯದು.

ಅಷ್ಟಾಧ್ಯಾಯಿ ಪ್ರಖ್ಯಾತಿಯ ಪಾಣಿನಿಗೂ (ಕ್ರಿ. ಪೂ. ಮೂರನೆಯ ಶತಮಾನ) ಪೂ. ಪಾ. ರಿಗೂ ಕಲ್ಪಿಸಿರುವ ಬಂಧುತ್ವ ಶುದ್ಧ ಕಾಲ್ಪನಿಕ ಹಾಗೂ ಸತ್ಯದೂರ. ಇವರಿಬ್ಬರ ನಡುವೆ ಶತಮಾನಗಳ ಅಂತರ. ಹಲನೂರು ವರ್ಷಗಳ ಕಾಲದೂರ ಇರುವಾಗ ಜನ್ಮಾಂತರಗಳ ಕಥೆಯಲ್ಲಿ ಯಾರಾದರೂ ಚಾರಣರು ಈ ನಂಟನ್ನು ದಿವ್ಯದೃಷ್ಟಿ ಹಾಯಿಸಿ ಮನಗಾಣಿಸಬೇಕಷ್ಟೆ. ಪಾಣಿನಿಯಂತೆ ಪೂ. ಪಾ. ರೂ ಪ್ರಸಿದ್ಧ ವ್ಯಾಕರಣಜ್ಞರಾದುದರಿಂದ ಈ ಬಗೆಯ ಬಾಂಧವ್ಯ ಆರೋಪಿತವಾಗಿರಬೇಕು. ಪಾಣಿನಿಯ ಅಸಮಗ್ರ ವ್ಯಾಕರಣವನ್ನೇ (ಸೋದರಳಿಯನಾದ) ಪೂ. ಪಾ. ರು ಪೂರೈಸಿಕೊಟ್ಟಿರಬೇಕಾದರೆ ಇನ್ನು ಆತನ ಶಬ್ದಶಾಸ್ತ್ರಜ್ಞಾನ ಎಷ್ಟು ಅದ್ಭುತವಾಗಿರ

ಬೇಕು ನೋಡಿ ಎಂಬ ಸದಭಿಪ್ರಾಯ ಮೂಡಿಸಲು ಅಂಕುರಿಸಿದ ಈ ಕಟ್ಟುಕಥೆ ಕ್ರ ಕಾಲುಮುಖಪಡೆದು ಮುಂದೆ ಕೆಲವು ಕನ್ನಡ ಕವಿಗಳಲ್ಲಿ ಪಲ್ಲವಿಸಿದ್ದೂ ಉಂಟು. ಆದರೆ ವಾಸ್ತವಾಂಶ ಮಾತ್ರ ಬೇರೆಯೇ ಆಗಿದೆ ಎಂಬುದನ್ನು ನಮಗೆ ನೆನಪಿನಲ್ಲಿದ್ದರೆ ಸಾಕು. ಪ್ರಸಿದ್ಧ ವಿದ್ವಾಂಸರಾದ ಕೆ. ಭುಜಬಲಿಶಾಸ್ತ್ರಿ ಹೇಳುವುದು ಸಮಂಜಸವಾಗಿದೆ: "ಪಾಣಿನಿಗೆ ಸಂಬಂಧಪಟ್ಟ ಮಾತು ನಂಬುಗೆಗೆ ಯೋಗ್ಯವಾಗಿ ಕಾಣುವುದಿಲ್ಲ. ಏಕೆಂದರೆ ಪಾಣಿನಿಯು ಕ್ರಿಸ್ತಪೂರ್ವದ ವಿದ್ವಾಂಸನು. ಪೂಜ್ಯಪಾದರು ಕ್ರಿ. ಶ. ಐದನೆಯ ಶತಮಾನದವರು. ಹೀಗಿರುತ್ತಾ ಇವರಿಬ್ಬರಲ್ಲಿ ಸಮಕಾಲೀನತೆಯು ಸಿದ್ಧವಾಗುವುದಿಲ್ಲ. (ಕೆ. ಭು. ಶಾಸ್ತ್ರಿ. ಸಂಸ್ಕೃತ ವಾಙ್ಮಯಕ್ಕೆ ಜೈನ ಕವಿಗಳ ಕಾಣಿಕೆ. 1971 ಪುಟ 38)

ದೇವಚಂದ್ರನ ಇನ್ನೊಂದು ಅಂಬೋಣವೆಂದರೆ ಪೂ. ಪಾ. ರು ಬಹಳ ದೇಶಗಳನ್ನು ಸಂಚರಿಸಿದ್ದು, ಪೂರ್ವ ವಿದೇಹಕ್ಕೂ ಹೋಗಿಬಂದರು. ಬರುವಾಗ ದಾರಿಯಲ್ಲಿ ರವಿಕಿರಣತಾಪದಿಂದ ದೃಷ್ಟಿ ಕಳೆದುಕೊಂಡರು. ಬಂಕಾಪುರದಲ್ಲಿ ಶಾಂತಿ ತೀರ್ಥಂಕರರನ್ನು ಸ್ತುತಿಸಿ ಹೋದ ಕಣ್ಣನ್ನು ಮತ್ತೆ ಪಡೆದರು. ಪೂ. ಪಾ. ರ ದೀರ್ಘ ಸಂಚಾರವನ್ನು ಅದರಲ್ಲಿಯೂ ವಿದೇಹ ಗಮನವನ್ನು ಇನ್ನೂ ಹಲವು ಲೇಖಕರು ಉಲ್ಲೇಖಿಸಿ ಸಮರ್ಥಿಸಿದ್ದಾರೆ. ತೀರ್ಥವಂದನೆಗಾಗಿ, ಸಿದ್ಧಾಂತ ಸಂದೇಹ ನಿವಾರಣೆಗಾಗಿ ವಿದೇಹ ಕ್ಷೇತ್ರಕ್ಕೆ ಒಂದೂವರೆ ಸಾವಿರ ವರ್ಷದ ಹಿಂದೆ ಹೋಗಿಬಂದುದು ಸಾಹಸದ ಕಾರ್ಯ. ಹೋಟೆಲುಗಳು ಪ್ರವಾಸಿಮಂದಿರಗಳು ಕಾರು ಬಸ್ಸು ರೈಲು ವಿಮಾನಗಳು ಇರುವ ಈ ಕಾಲದಲ್ಲಿ ಪೂಜ್ಯಪಾದರ ಪ್ರವಾಸದ ಅಗಾಧತೆ ಮನದಟ್ಟಾಗುವುದಿಲ್ಲ. ವಿದೇಹ ಕ್ಷೇತ್ರವೆಂದರೆ ಈಗಿನ ಬಿಹಾರ ಪ್ರಾಂತ್ಯದಲ್ಲಿ ಜೈನ ಪ್ರಭಾವದ ಪ್ರದೇಶ: "ವಿದೇಹ ರಾಜ್ಯದ ಸೀಮಾರೇಖೆಯ ಬಗ್ಗೆ ಯಾವ ವಿವಾದವೂ ಇಲ್ಲ. ಪ್ರಾಚೀನ ಕಾಲದಿಂದಲೂ ಬಿಹಾರ ರಾಜ್ಯದ ಗಂಗಾನದಿಯ ಉತ್ತರ ಭಾಗ ವಿದೇಹವೆಂಬುದಾಗಿ, ದಕ್ಷಿಣ ಭಾಗ ಮಗಧವೆಂಬುದಾಗಿ ಪ್ರಸಿದ್ಧವಾಗಿದೆ. ಇದೇ ವಿದೇಹ ಪ್ರದೇಶವನ್ನು ತೀರಭುಕ್ತಿ ಹೆಸರಿನಿಂದಲೂ ಕರೆಯುತ್ತಾರೆ, ಇದರ ಗಡಿರೇಖೆಗಳು: ಉತ್ತರದಲ್ಲಿ ಹಿಮಾಲಯ, ದಕ್ಷಿಣದಲ್ಲಿ ಗಂಗಾನದಿ. ಪೂರ್ವದಲ್ಲಿ ಕೌಶಿಕೀ ಪಶ್ಚಿಮದಲ್ಲಿ ಗಂಡಕೀನದಿ" – (ಸಂಪನ್ನ, ವೀರ ಜಿನೇಂದ್ರ ಚರಿತ್ರೆ, ಪುಟ 17. 1975). ಈ ರೀತಿ ಕೊಳ್ಳೇಗಾಲದಿಂದ ವಿದೇಹ ಕ್ಷೇತ್ರಕ್ಕೆ ಸುಮಾರು ಎರಡು ಸಾವಿರ ಕಿಲೋಮೀಟರ್ ದೂರ. ಕಾಡುಮೇಡು ಬೆಟ್ಟ ನದಿ ಕಳ್ಳಕಾಕರು ಹಿಂಸ್ರ ಮೃಗಗಳು, ಪ್ರಕೃತಿ ವಿಕೋಪಗಳು – ಮೊದಲಾದ ಅಡೆತಡೆಗಳನ್ನು ದಾಟಿ ಅಷ್ಟು ದೂರ ಒಂದು ಸಲ ಹೋಗಿಬರುವುದು ಎರಡು ವರ್ಷಗಳ ಮಹಾ ಸಾಹಸದ ಯಾತ್ರೆ. ಆ ಕಾಲದಲ್ಲಿ ನಾಲ್ಕು ಸಾವಿರ ಕಿ. ಮೀ. ದೂರ (ಹೋಗುತ್ತಾ ಬರುತ್ತಾ ಎರಡೂ ಸೇರಿ) ಹೋಗಿ

ಬಂದವನು ಅಂದಿನ ಜನರ ಕಣ್ಣಲ್ಲಿ ಇಂದು ಚಂದ್ರಲೋಕಕ್ಕೆ ಹೋಗಿಬಂದವನು ಇದ್ದಂತೆ. ಅಷ್ಟು ಕಷ್ಟದ ದೂರದ ದಾರಿ ಕ್ರಮಿಸಿದವನಿಗೆ ಗಗನ ಗಮನ ಸಾಮರ್ಥ್ಯವೇ ಇರಬೇಕೆಂಬ ಭಾವನೆಗಳು ಬಲಿತು ಗರಿಗೆದರಿದ್ದರಿಂದ ಪೂಜ್ಯಪಾದನಿಗೆ ಪವಾಡ ಪುರುಷನ ಪಟ್ಟ ಕಟ್ಟಲಾಯಿತು. ಅವನ ಕಾಲುಗಳಿಗೆ ನೆಲಬಿಟ್ಟು ನಡೆಯುವ ಲೇಪೌಷಧಿಯನ್ನು ಬಳಿಯಲಾಯಿತು. ಘಟನೆ ಕಥೆಯಾಯಿತು, ನಿಜಕ್ಕೆ ಬಣ್ಣ ಸವರಲಾಯಿತು. ಚಾವುಂಡರಾಯ '.... ಗಗನ ಗಮನ ಸಾಮರ್ಥ್ಯರ್ .... ಎಂದು ಪೊಗಟ್ಟುದು ಸಕಲಜನಂ ಪೂಜ್ಯಪಾದ ಭಟ್ಟಾರಕರಂ' ಎಂದು ಹೇಳಿದರೆ ಶ್ರ.ಬೆ.ಶಾ. 258 ರಲ್ಲಿ 'ಶ್ರೀ ಪೂಜ್ಯಪಾದ ಮುನಿರಪ್ರತಿಮೌಷಧರ್ದಿರ್ಜೀಯಾದ್ವಿದೇಹ ಜಿನದರ್ಶನ ಪೂತ ಗಾತ್ರಃ" ಎಂದು ಉಕ್ತ್ರೇಕ್ಷಿಸಿದೆ. ಬ್ರಹ್ಮಶಿವನೂ ಸಮಯ ಪರೀಕ್ಷೆಯಲ್ಲಿ

ಪದದನುರಾಗದಿಂ ನೆಗಟ್ದ ಶಾಸನದೇವತೆ ಪೂಸೆ ಪಾದ ಲೇ
ಪದ ಗುಣದಿಂದೆ ಯೋಜನ ಸಹಸ್ರಮನೊರ್ಮೊದಲೆಯ್ದುವೊಂದು ಸಂ
ಪದಮನಪೂರ್ವವಾಗೆ ತಳೆದೀ ಧರೆಯೊಳ್ಸಲೆ ಪೂಜ್ಯಪಾದ ನಾ
ಮದಿನೆಸೆದಾ ಮುನೀಂದ್ರನತೆಂದ್ರನನರ್ತಿಯೊಳಾರು ಬಣ್ಣಿಸರ್ ||

ಎಂಬುದಾಗಿ ಕೊಂಡಾಡಿ ಶಾಸನ ದೇವತೆಗಳನ್ನು ಪೂಪಾ.ರ ಸೇವೆಗೆ ಕೂಡಿಸಿ ಪೂಪಾ.ರನ್ನು ತೀರ್ಥಂಕರರೊಡನೆ ಸಮೀಕರಿಸಿದ್ದಾನೆ. ಪೂಪಾ.ರಿಗೂ ತತ್ಪ್ರಾಚೀನರಾದ ಕುಂದಕುಂದರಿಗೂ ಈ ವಿಚಾರದಲ್ಲಿ ಸಮಾನಶಕ್ತಿ, ವ್ಯಕ್ತಿತ್ವ ಆರೋಪಿತವಾಗಿದೆ .. ಮೂರು ಅಪರನಾಮಧೇಯದ ಜತೆಗೆ ಚತುರಂಗುಲ ಚಾರಣ ಋದ್ಧಿ ಕುಂದಕುಂದರಿಗಿತ್ತು.

ಹೀಗೆ ರೋಚಕವಾಗಿ ಮೈತಳೆದ ಕವಿ ಕಲ್ಪನೆ ಹಲವು ಕವಿಗಳಲ್ಲಿ ಅನುರಣನವಾಗಿ ಸ್ಥಾಯಿಯಾಗಿ ನಿಂತೇಬಿಟ್ಟಿತು. ಪೂಪಾ.ರು ಕಳೆದುಕೊಂಡ ಕಣ್ಣುಗಳನ್ನು ಬಂಕಾಪುರದಲ್ಲಿ ಮರಳಿ ಗಳಿಸಿಕೊಂಡರೆಂಬುದು ಎಷ್ಟು ನಿಜ ತಿಳಿಯದು. ಧಾರವಾಡ ಜಿಲ್ಲೆ ಶಿಗ್ಗಾಂವಿ ತಾಲ್ಲೂಕು ಬಂಕಾಪುರ ಹನ್ನೊಂದನೆಯ ಶತಮಾನದವರೆಗೂ ಜೈನರ ಪ್ರಮುಖ ಧಾರ್ಮಿಕ ಸಾಂಸ್ಕೃತಿಕ ಕೇಂದ್ರವಾಗಿದ್ದುದು ನಿಜ ಗುಣಭದ್ರಾಚಾರ್ಯರು ಉತ್ತರ ಪುರಾಣ ರಚನೆ ಸಮಾಪ್ತಿಗೊಳಿಸಿದ್ದು ಇಲ್ಲಿ. ಪೂಪಾ.ರಿಗೆ, ಅವರು ಭಟ್ಟಾರಕರೂ ಆಗಿದ್ದುದರಿಂದ, ಶಿಷ್ಯ ಪ್ರಶಿಷ್ಯರು ಇದ್ದರೆಂಬುದು ಶಿಷ್ಯ ಸಮುದಾಯಕ್ಕೆ ಉಪದೇಶ ಮಾಡಿದರೆಂಬುದೂ ನಿಜಾಂಶ.

ಪೂಪಾ.ರು ಕೊಳ್ಳೇಗಾಲದವರೆಂಬುದರಲ್ಲೂ ಸತ್ಯವಿರಬಹುದು. ಅವರ ಸಮಾಧಿ ಮೈಸೂರು ಜಿಲ್ಲೆಯ ಮಲೆಯೂರಿನಲ್ಲಿ (ಕನಕಗಿರಿ) ಆಯಿತೆನ್ನುತ್ತಾರೆ. ದೇವಚಂದ್ರನೂ ಪೆಚ್ಚುಕಡಮೆ ಅದೇ ಪ್ರದೇಶದವನಾದುದರಿಂದ ಅವನಿಗೆ ಪೂಪಾ.

ದಲ್ಲಿ ವಿಶೇಷ ಮಹತಿ. ಇಲ್ಲದೆ ಅವ ತನ್ನ (ಬಹುಮುಟ್ಟಗನಾದ ಪದ್ಮರಾಜನ ಜತೆಗೂಡಿ ಬರೆದನೆಂಬುದು ಪ್ರಾಯಃ ಸರಿಯಿರಲಾರದು) ಪ್ರಸಿದ್ಧವಾದ ಚರಿತೆಯೆಂಬ (15 ಸಂಧಿ 1932 ಪದ್ಯ) ಸಾಂಗತ್ಯ ಕಾವ್ಯವನ್ನು (1792) ಬರೆದಿರುವುದನ್ನು ಇಲ್ಲಿ ನೆನೆಯಬಹುದು. ಮುಂದಾನೊಂದು ಕಾಲದಲ್ಲಿ ಹೆಚ್ಚಿನ ಮಾಹಿತಿಗಳು ದೊರೆತು ದೇವಚಂದ್ರ ಕೊಡುವ ಪೂಪಾ.ರ ಜನ್ಮಸ್ಥಳ ತಂದೆತಾಯಿ - ಇವನ್ನು ಕದಲಿಸುವ ತನಕ ರಾಜಾವಳೀ ಹೇಳಿಕೆಯೇ ನಿಂತಿರುತ್ತದೆಂದು ತೋರುತ್ತದೆ. ಅನೇಕ ಜನ ವಿದ್ವನ್ಮಣಿಗಳು ಒಂದು ನೂರು ವರ್ಷದಿಂದ ದೇವಚಂದ್ರನ ಉಲ್ಲೇಖವನ್ನೇ ಒಪ್ಪಿಕೊಂಡು ಹೊರಟಿದ್ದಾರೆ. ಆದರೆ ಚಾಲುಕ್ಯ ದಾಖಲೆಯಾದ ಲಕ್ಷ್ಮೇಶ್ವರ ಶಾಸನದಲ್ಲಿ (729) ಪೂಪಾ.ರು ಅಲಕ್ತಕನಗರದವರೆನ್ನಲಾಗಿದೆ. ಪೂಪಾ.ರ ಶಿಷ್ಯ ದೇವಗಣ ಮೂಲಸಂಘದ ಉದಯದೇವ ಪಂಡಿತನಿಗೆ ದೊರೆ ವಿಜಯಾದಿತ್ಯ ಸತ್ಯಾಶ್ರಯ ಚಾಲುಕ್ಯನು ಶಂಖಜಿನೇಂದ್ರ ಬಸದಿಗಾಗಿ 700 ರಲ್ಲಿ ಕರ್ದಮ ಗ್ರಾಮವನ್ನು ದತ್ತಿಯಿತ್ತುದಾಗಿ ಹೇಳಿದೆ.

ಪೂಪಾ.ರ ಕಾಲ ವಿಚಾರದಲ್ಲಿ ಭಿನ್ನಾಭಿಪ್ರಾಯವಿದೆ. ಮೂರರಿಂದ ಏಳನೆಯ ಶತಮಾನದವರೆಗೆ ಇವರ ಜೀವಿತ ಸಮಯವನ್ನು ನಿಗದಿಗೊಳಿಸಲು ಪ್ರಯತ್ನಗಳಾಗಿವೆ; ಒಮ್ಮತವಿಲ್ಲ. ಒಂದು ಅಭಿಪ್ರಾಯದಂತೆ ಇವರ ಜನ್ಮ ವಿಕ್ರಮ ಸಂವತ್ 281, ಆಚಾರ್ಯ ಪದಾಸೀನರಾದದ್ದು ವಿಸಂ 308, ಆಯುರವಧಿ 71 ವರ್ಷ; ಆದರಿಂದ ಇವರ ಸಮಯ ವಿಸಂ 281-352. ಅಂದರೆ ಕ್ರಿ.ಶ. 223-294. ಮತ್ತೆ ಕೆಲವು ವಿದ್ವಾಂಸರು 5 ಶ. (ಬೂಲರ್, ಲೂಯಿಸ್ರೈಸ್, ಹೀರಾಲಾಲ್ ಜೈನ್, ಆ.ನೇ. ಉಪಾಧ್ಯೆ) ಹೇಳಿದ್ದಾರೆ. ಉಪಾಧ್ಯೆ ಅಭಿಪ್ರಾಯ: ''Kundakunda belonged to c. to the beginning of the christian era, and Pujyapada lived a bit earlier than the last quarter of the 5th century A.D.'' (ಮುನ್ನುಡಿ, ಪರಮಾತ್ಮ ಪ್ರಕಾಶ, ಪುಟ 67). ಕೆಲವರು 6ನೆಯ ಶ. (ಕೆ. ಬಿ. ಪಾಠಕ್, ಜ್ಯೋತಿಷಾಚಾರ್ಯ ನೇಮಿಚಂದ್ರ ಶಾಸ್ತ್ರಿ ಮತ್ತು ಡಾ|| ಬಿ. ಶೇಕ್‌ಅಲಿ) ಕೆಲವರು 7ನೇ ಶ (ಡಿ. ಸಿ. ಸರ್ಕಾರ್) — ಹೀಗೆ ವಿವಿಧ ಪ್ರತಿಪಾದನೆಗಳಿವೆ. ಏಳನೆಯ ಶ. ದ ವೇಳೆಗೆ ಪೂ. ಪಾ. ರು ಖ್ಯಾತನಾಮರಾಗಿದ್ದುದರಿಂದ ಅದಕ್ಕಿಂತ ಹಿಂದೆ ಇದ್ದಿರಬೇಕು.

ಈ ವಿವಿಧ ಸೂಚನೆಗಳ ಹಿನ್ನೆಲೆಯಲ್ಲಿಟ್ಟು ನೋಡಿದಾಗ ರಾಜಾವಳೀ ಕಥೆಯ ಕಾಲ ನಿರ್ದೇಶನ ನಂಬುಗೆ ಪಡೆಯುತ್ತದೆ. ದೇವಚಂದ್ರನು ಪೂ. ಪಾ. ರು ಶಕ ವರ್ಷ 300ರಲ್ಲಿ (378) ಹುಟ್ಟಿದರೆಂದು ಹೇಳಿದ್ದಾನೆ. ಇದನ್ನು ಒಪ್ಪಿಕೊಳ್ಳಲು ಬಾಧಕಗಳು ಹೆಚ್ಚಿಲ್ಲ. ನಂದಿಸಂಘದ ಪಟ್ಟಾವಳಿ ಪ್ರಕಾರ ಪೂ. ಪಾ. ಜಯನಂದಿ,

ಗುಣನಂದಿ, ವಜ್ರನಂದಿ—ಕ್ರಮವಿದ್ದು ಪೂ. ಪಾ. ರು ನಿಧನರಾದ 58 ವರ್ಷಗಳಾದ ಮೇಲೆ ವಜ್ರನಂದಿ ಬಂದುದಾಗಿ ಹೇಳಿದೆ. (ಸಂಸ್ಕೃತ, ಪ್ರಾಕೃತ—ಎರಡು ಗುರ್ವಾವಲಿಗಳಿವೆ. ಪ್ರಾಕೃತದ್ದು ಉಪಾದೇಯ) ಪೂ. ಪಾ. ರ ಶಿಷ್ಯನಾದ ವಜ್ರನಂದಿಯು ದಕ್ಷಿಣ ಮಧುರೆಯಲ್ಲಿ ದ್ರಾವಿಡ ಸಂಘವನ್ನು 469 ರಲ್ಲಿ ಪ್ರಾರಂಭಿಸಿದನೆಂದು ಉಜ್ಜೈನಿಯ ದೇವಸೇನ ಕೃತ (993) ದರ್ಶನಸಾರದ ಪ್ರಕಾರ ತಿಳಿದುಬರುತ್ತದೆ. ದೇವಸೇನನೂ ಕನ್ನಡದ ದೇವಚಂದ್ರನಂತೆ, ಅಷ್ಟೇನೂ ವಿಶ್ವಾಸಾರ್ಹನಲ್ಲವೆಂಬ ಅಭಿಪ್ರಾಯವಿದೆ. ಪೂ. ಪಾ. ರು ಗಂಗರ ಕಾಲದ ಪ್ರಸಿದ್ಧ ಆಚಾರ್ಯರು. ಆದರಿಂದ ಪೂ. ಪಾ. ರ ಜೀವಿತ ಕಾಲವನ್ನು 378ರಿಂದ 458 ಎಂದು ಸ್ಥೂಲವಾಗಿ ಸ್ವೀಕರಿಸಬಹುದು. ಗಂಗ ದೊರೆ ದುರ್ವಿನೀತನು ಪ್ರಾಯಃ ಪೂ. ಪಾ. ರ ಶಿಷ್ಯನೆಂದು ತಿಳಿಯಲಾಗಿದೆ. (ಆಳ್ವಿಕೆಯ ಕಾಲ ಸು. 482—522). ಆದರಿಂದ ಕೂಡ ಪೂ. ಪಾ. ರ ಕಾಲ 5 ಶ. ವೆಂದು ಭಾವಿಸುವುದರಲ್ಲಿ ಔಚಿತ್ಯವಿದೆ. ಎಸ್. ಶ್ರೀಕಂಠಶಾಸ್ತ್ರಿಗಳು ದುರ್ವಿನೀತನಿಗೆ ಪೂ. ಪಾ. ರು ಗುರುವಾಗಿದ್ದರೆಂಬುದನ್ನು ನಿರಾಕರಿಸಿದ್ದಾರೆ. (QJMS, XL) p 68). ರಾ. ನರಸಿಂಹಾಚಾರ್ಯರೂ ದುರ್ವಿನೀತ ಪೂ. ಪಾ. ಶಿಷ್ಯಗುರು ಸಂಬಂಧವನ್ನು ಅಲ್ಲಗಳೆದಿದ್ದಾರೆ (MAR, 1912, p. 35) ಡಾ॥ ಬಿ. ಷೇಕ್ ಅಲಿಯವರು ಇಬ್ಬರೂ ಸಮಕಾಲೀನರೆಂದು ಹೇಳಿ, ಪೂ. ಪಾ. ರ ಬಗೆಗೆ ಸುದೀರ್ಘವಾಗಿ ಪ್ರಸ್ತಾಪಿಸಿ ಪರಿಚಯಿಸಿದ್ದಾರೆ (Dr. B. Sheik Ali, History of the Western Gangas' 1976, pp 66-68' 71, 171, 284, 286, 289-293, 295 298, 321-324)

ಆಚಾರ್ಯ ಅಕಲಂಕರು ಪೂ. ಪಾ. ರ ಕೆಲವು ವ್ಯಾಕರಣ ಸೂತ್ರಗಳನ್ನು ತತ್ತ್ವಾರ್ಥರಾಜವಾರ್ತಿಕದಲ್ಲಿ ಉದಾಹರಿಸಿದ್ದಾರೆ. ಅಕಲಂಕ (ಭಟ್ಟಾಕಳಂಕ) ರು ರಾಷ್ಟ್ರಕೂಟ ದೊರೆ ಸಾಹಸತುಂಗದಂತಿದುರ್ಗನ (ಸು. 750) ಸಮಕಾಲೀನರು. ಜಯಾದಿತ್ಯ ವಾಮನರು (700) ಕಾಶಿಕಾವೃತ್ತಿಯಲ್ಲಿ ಉದಾಹರಿಸಿದ್ದಾರೆ. ಈ ವೇಳೆಗೆ ಪೂ. ಪಾ. ರು ಆಚಾರ್ಯ ಪರಂಪರೆಯಲ್ಲಿ ಮಾನ್ಯರಾಗಿ ಸೇರಿಹೋಗಿದ್ದುದು ಸ್ಥಾಪಿತವಾಗುತ್ತದೆ. ಇದರಿಂದಲೂ ದೇವಚಂದ್ರನ ಹೇಳಿಕೆ ಬಲಗೊಳ್ಳಬಹುದು. ವಿಜಯಾದಿತ್ಯ ಚಾಲುಕ್ಯನಿಗೆ ಧಾರ್ಮಿಕ ಗುರುವಾಗಿದ್ದ ನಿರವದ್ಯ ಪಂಡಿತನೂ ಶ್ರೇಷ್ಠ ವೈಯಾಕರಣನಾಗಿದ್ದು 678 ರಲ್ಲಿ ಇದ್ದನೆನ್ನಲಾಗಿದೆ. ಈತನೂ ಪೂ. ಪಾ. ರ ಶಿಷ್ಯನೇ. ನೇರ ಶಿಷ್ಯನೇ ಆದರೆ ಪೂ. ಪಾ. ರ ಕಾಲವನ್ನು 7ನೆಯ ಶ. ಕ್ಕೆ ತರಬೇಕಾದೀತು. ಇದನ್ನು ಪರಿಶೀಲಿಸಬೇಕು. 8ನೆಯ ಶ.ದ ಆರಂಭದಿಂದ ಇಂದಿನವರೆಗೂ ಪೂ. ಪಾ. ರ ಪ್ರಸ್ತಾಪವಿರುವ ಕೃತಿಗಳು ಹೇರಳವಾಗಿವೆ. ಪುನ್ನಾಟ ಸಂಘದ ಜಿನಸೇನರು (783) ಹರಿವಂಶ ಪುರಾಣದಲ್ಲಿ ಪೂ. ಪಾ. ರಿಗೆ ತಲೆಬಾಗಿ ನೆನೆದಿದ್ದಾರೆ.

ಇಂದ್ರಚಂದ್ರಾರ್ಕ ಜೈನೇಂದ್ರವ್ಯಾಡಿ ವ್ಯಾಕರಣೇಕ್ಷಿಣಃ
ದೇವಸ್ಯ ದೇವವಂದ್ಯಸ್ಯ ನವಂದ್ಯಂತೇ ಗಿರಃ ಕಥಮ್ ॥

ಪೂರ್ವಪುರಾಣ ಖ್ಯಾತಿಯ ಜಿನಸೇನಾಚಾರ್ಯರು (837) ಪೂಜ್ಯಪಾದರನ್ನು ಗೌರವಸ್ಮರಣೆ ಮಾಡಿದ್ದಾರೆ.

ಕವೀನಾಂ ತೀರ್ಥಕೃದ್ದೇವಃ ಕಿತರಾಂ ತತ್ರ ವರ್ಣ್ಯತೇ
ವಿದುಷಾಂ ವಾಙ್ಮಲಧ್ವಾಂಸಿ ತೀರ್ಥಂ ಯಸ್ಯ ವಚೋಮಯಮ್॥

ಆದಿಪುರಾಣ 1–52

ಕುಂದಕುಂದಾನ್ವಯದ ಮೂಲಸಂಘಕ್ಕೆ ಸೇರಿದ ಜೈನ ದಿಗಂಬರಾಚಾರ್ಯರಾದ ನಂದಿಸಂಘದ ಪೂ. ಪಾ. ರಿಗೆ ಮೊದಲಿನ ಹೆಸರು ದೇವನಂದಿ. ಕುಂದಕುಂದ, ಉಮಾಸ್ವಾತಿ (ಸ್ವಾಮಿ), ಸಮಂತಭದ್ರ, ಆಚಾರ್ಯರುಗಳಾದ ಮೇಲೆ ಬಂದವರು ಪೂ. ಪಾ. ರು ಎಂಬುದನ್ನು ಗಮನಿಸಬೇಕು. ಜಿನಸೇನ, ವಾಮನ (ಕಾಶಿಕಾ ಕರ್ತೃ), ಗುಣನಂದಿ, ಅಕಳಂಕ, ಧನಂಜಯ, ವೀರಸೇನ—ಇವರೆಲ್ಲ ಪೂ. ಪಾ. ರ ಅನಂತರದವರು.

ಜೈನಾಚಾರ್ಯರನ್ನು ಕುರಿತು ನಡೆಸುವ ಅಧ್ಯಯನಕ್ಕೆ ಧಾರ್ಮಿಕ, ಚಾರಿತ್ರಿಕ, ಸಾಮಾಜಿಕ, ಸಾಂಸ್ಕೃತಿಕ ಹಾಗೂ ಸಾಹಿತ್ಯಿಕ ಮಹತ್ವವಿದೆ. ಈ ಆಚಾರ್ಯ ಪರಂಪರೆಯಿಂದ ಹರಿದುಬಂದ ಜೈನಾಗಮ ಸಿದ್ಧಾಂತ ಸಂಬಂಧಿಯಾದ ಜ್ಞಾನದ ಹರಿಕಾರರು, ಮುಂದಿನ ತಲೆಮಾರಿಗೆ ದಾಟಿಸಿದರು. Further the jaina acaryas rendered an invaluable service to litereture (B·S. Ali, p 284). ಆದರೆ ಜೈನಾಚಾರ್ಯರಲ್ಲಿ ಒಂದೇ ಹೆಸರಿನವರು ಹಲವರು ಇರುವುದರಿಂದ ಅವರನ್ನು ಪ್ರತ್ಯೇಕಿಸಿ ಕಾಲವನ್ನು ನಿರ್ದೇಶಿಸುವುದರಲ್ಲಿ ಸಮಸ್ಯೆಗಳಿವೆ. ಹೆಸರುಗಳ ಸಮಾನತೆಯೇ ಬೇರೆ, ವ್ಯಕ್ತಿಗಳ ಸಮೀಕರಣವೇ ಬೇರೆ. ಸಮಾನ ಹೆಸರಿನ ಜೈನಾಚಾರ್ಯರಲ್ಲಿ ಯಾರು ಯಾರು, ಯಾವ ಯಾವ ಕಾಲದವರು? ಎಂಬುದರ ನಿರ್ಧಾರ ತೊಡಕಿನದಾಗಿದ್ದು ಈ ಸಿಕ್ಕುಗಳನ್ನು ಬಿಡಿಸುವಲ್ಲಿ ಪೂರ್ವಗ್ರಹವಿರದ ಬಹಳ ಎಚ್ಚರದ ಜತೆಗೆ ಜೈನಾಚಾರ್ಯ ಪರಂಪರೆಯ ತಿಳಿವಳಿಕೆ, ಪಟ್ಟಾವಲಿಗಳ ಪರಿಚಯ, ಚಾರಿತ್ರಿಕ ಪ್ರಜ್ಞೆ, ಕವಿಗಳ ಶಾಸನಗಳ ಮತ್ತಿತರ ದಾಖಲೆಗಳ ಅವಲೋಕನ–ಇವಿಷ್ಟು ಒಳಗೊಂಡ ಸಮಗ್ರ ಸಮ್ಯಕ್ ಹಾಗೂ ನಿರ್ಮಮಕಾರದ ಪರಿಶೀಲನೆ ಅಗತ್ಯ. ಪೂ.ಪಾ.ರ ವಿಚಾರದಲ್ಲಿಯೂ ಈ ಸಮಸ್ಯೆ ತಲೆದೋರಿದೆ. ವಿವಿಧ ಕಾಲದ ಕೃತಿಗಳಲ್ಲಿ ಶಾಸನಗಳಲ್ಲಿ, ಮತ್ತಿತರ ಲಿಖಿತ ದಾಖಲೆಗಳಲ್ಲಿ ಪೂ.ಪಾ.ರ ಹೆಸರು ಉಲ್ಲೇಖವಾಗಿದೆ. ಈ ಎಲ್ಲ ಉಲ್ಲೇಖಗಳೂ ಒಬ್ಬರೇ ಪೂ.ಪಾ.ರನ್ನು ಕುರಿತವು ಎಂಬ ಒಂದು ಸಾಮಾನ್ಯ ಹೇಳಿಕೆ, ತಿಳಿವಳಿಕೆ ಪ್ರಚಲಿತವಾಗಿದೆ. ಅದರ ಜತೆಗೆ ಪೂ.ಪಾ.ರು ಒಬ್ಬರಲ್ಲ, ಹಲವರಿದ್ದಾರೆ ಎಂಬ ಗಂಭೀರ ಪ್ರತಿಪಾದನೆಯೂ ಇದೆ. ಈ ಚರ್ಚೆಯನ್ನು ಇಲ್ಲಿ

ಪ್ರಸ್ತಾಪಿಸುವುದು ಅಪ್ರಸ್ತುತ. ತತ್ಸಂಬಂಧವಾದ ವಿಪುಲವಾದ ಚರ್ಚೆಯಲ್ಲಿ ಆಸಕ್ತರು ಜ್ಯೋತಿ ಪ್ರಸಾದ ಜೈನರ ಸುದೀರ್ಘ ಲೇಖನವನ್ನು ಅವಲೋಕಿಸಬಹುದು (Jyoti Prasad Jain, Jaina Gurus of the name of Pujyapada, Jaina Antiquary, XVI–1,2, XVII-1)

ಇದೇ ಸಂದರ್ಭದಲ್ಲಿ ಇಲ್ಲಿಯೇ ಪರಾಮರ್ಶಿಸಬೇಕಾದ ವಿಚಾರವೆಂದರೆ ಪೂ.ಪಾದ ಎಂಬುದು ವ್ಯಕ್ತಿಯ ಹೆಸರೇ ಅಥವಾ ಪ್ರಶಸ್ತಿಯೇ ಎಂಬುದು. ಡಾ|| ಎಫ್. ಕೀಲ್‌ಹಾರ್ನ್ ಅವರು ಕಳೆದ ಶತಮಾನದಲ್ಲಿ ಇಂಥ ಚಿಂತನೆಗೆ ಚಾಲನೆ ಕೊಟ್ಟರು. ಸ್ವಲ್ಪ ತಪ್ಪಿನಿಂದಾಗಿ ಟೀಕೆಗೂ ಗುರಿಯಾದರು. ಪುಣೆಯ ಡೆಕ್ಕನ್ ಕಾಲೇಜಿನ ಗ್ರಂಥ ಭಂಡಾರದಲ್ಲಿರುವ ಸರಕಾರಿ ಸಂಗ್ರಹವಾದ ಸಂಸ್ಕೃತ ಹಸ್ತಪ್ರತಿಗಳಲ್ಲಿ 'ಜೈನೇಂದ್ರ ವ್ಯಾಕರಣ' ಎಂಬ (= ಜೈ.ವ್ಯಾ.) ಹೆಸರಿನ ಅಯ್ದು ಹಸ್ತಪ್ರತಿಗಳನ್ನು ಉಲ್ಲೇಖಿಸಿ ಕೀಲ್‌ಹಾರ್ನ್ ಮಹಾಶಯರು ಅಯ್ದು ಪುಟಗಳ ಆಂಗ್ಲ ಲೇಖನ ಬರೆದರು. (On the Jainendra Vyakarana, Dr. F. Kielhorn, Indian Antiquary, X. March 1881, pp. 75-79), ಅದರಲ್ಲಿ ಅವರು ತಿಳಿಸಿರುವುದು "ಪೂಜ್ಯಪಾದ (ಜಿನೇಂದ್ರ) ಎಂಬುದು ಸಾಮಾನ್ಯವಾಗಿ ತೀರ್ಥಂಕರರಿಗೆ ವಿಶೇಷವಾಗಿ ಅನ್ವಯಿಸುತ್ತದೆ. ಆದರಿಂದ ಪೂಪಾ.ರೆಂದರೆ ಒಬ್ಬ ವ್ಯಕ್ತಿಯಲ್ಲ, ಅದು ವರ್ಧಮಾನ ತೀರ್ಥಂಕರರಿಗೇ ಅನ್ವಯಿಸುತ್ತದೆ. ಎಲ್ಲವೂ ದೇವರಿಂದಲೇ ಬಂದುದೆಂದು (ಜಿನಸ್ಯ ವಿನಿರ್ಗತಮ್) ಹೇಳುವುದು ಭಾರತೀಯ ಪದ್ಧತಿ. ಅದರಂತೆ 'ಪೂಪಾ-ಜಿನೇಂದ್ರ'ರಿಂದಲೇ ವ್ಯಾಕರಣವೂ ಬಂತೆಂಬ ಅಭಿಪ್ರಾಯದಲ್ಲಿ ಈ ಶಬ್ದರೂಪಗಳು ಬಳಕೆಯಾಗಿವೆ. ಆದರಿಂದ 'ಪೂಪಾ' ಎಂಬುದು ಲೌಕಿಕ ವ್ಯಕ್ತಿಯಲ್ಲ. ಪೂಪಾ.ರಾದ ಜಿನೇಂದ್ರ ವರ್ಧಮಾನರ ಮುಖದಿಂದ ಬಂದ ಜೈ.ವ್ಯಾ.ವನ್ನು ಬರೆದವನು ಸೋಮದೇವ ಮತ್ತು ಶ್ರುತಕೀರ್ತಿ ಹೇಳುವ ದೇವನಂದಿ ಎಂಬುವನು" – ಇದಿಷ್ಟೂ ಅವರ ಹೇಳಿಕೆಯ ಸಾರಾಂಶ.

ಕೆ. ಬಿ. ಪಾಠಕರು ಕೀಲ್‌ಹಾರ್ನರ ಈ ಅಭಿಪ್ರಾಯದ ಕೀಲನ್ನೇ ಮುರಿದು ಪೂಪಾ. ಎಂಬುದು ವರ್ಧಮಾನ ತೀರ್ಥಂಕರರಿಗೆ ಅನ್ವಯಿಸಿದ್ದಲ್ಲ, ಜೈ.ವ್ಯಾ.ವನ್ನು ಬರೆದ ಕರ್ತೃವಿಗೇ ಸೇರಿದ್ದೆಂಬುದನ್ನು ಕನ್ನಡ ಸಂಸ್ಕೃತ ಗ್ರಂಥಕಾರರ ಹೇಳಿಕೆಗಳನ್ನಿತ್ತು ತೋರಿಸಿಕೊಟ್ಟರು. ಜೈ.ವ್ಯಾ.ಕಾರನಿಗೆ ಪೂಪಾ ಮತ್ತು ದೇವನಂದಿ ಎಂಬ ಹೆಸರುಗಳಿದ್ದುದನ್ನೂ ಆಧಾರಗಳಿಂದ ನಿರೂಪಿಸಿದರು. (Pujyapada and the authorship of the Jainendra Vyakarana, K. B. Pathak, IA, XII.1883 pp 19-21). ಪಾಠಕರ ಹೇಳಿಕೆಯ ತಿರುಳಿಷ್ಟು :– "Having thus shown, by satisfactory proofs, that Pujyapada was the author of Jainendran, and that he was also called Devanandi, I would add,

in conclusion, that many of the works of this illustrious author have survived the wear and tear of twelve centuries, and are still to be found in the great bastis of Southern India''t (ಅದೇ, ಪುಟ 21) ಕೀಲ್‌ಹಾರ್ನರು ಜೈ.ವ್ಯಾ.ವು ಪೂಪಾ.ರಿಂದ ರಚಿತವಾದುದಲ್ಲ. ದೇವನಂದಿಯಿಂದ ರಚಿತವಾದುದು ಎಂದು ಬರೆದ ಲೇಖನ ಟೀಕೆಗೆ ಒಳಗಾದುದಕ್ಕೆ, ನೋಡಿ ಡಾ॥ ಜಿ. ಬೂಲರ್ ಕೆಳಕಂಡಂತೆ ಉತ್ತರ ಕೊಟ್ಟಿದ್ದಾರೆ.

"ಕೀಲ್‌ಹಾರ್ನರು ಪೂಪಾ.ರನ್ನು ತೀರ್ಥಂಕರ ವರ್ಧಮಾನರಿಗೆ ಹೋಲಿಕೆಯಿಸಿದ್ದು ತಪ್ಪು, ನಿಜ. ಆದರೆ ಅವರು ತಮಗೆ ಲಭ್ಯವಿದ್ದ ಅಲ್ಪ ಸಾಮಗ್ರಿಯ ಆಧಾರದಿಂದ ಬರೆದುದರಿಂದ ಹಾಗೆ ತಪ್ಪು ಸಿದ್ಧಾಂತಕ್ಕೆ ಕಾರಣವಾಯಿತೆಂಬುದನ್ನು ಮರೆಯಬಾರದು. ಪೂಪಾ.ರ ವ್ಯಕ್ತಿತ್ವವನ್ನು ಗುರುತುಪಡಿಸಿ ಸ್ಥಾಪಿಸುವುದು ಮತ್ತು ಕಾಲ ನಿಗದಿಪಡಿಸುವುದು – ಇವು ಸಂದಿಗ್ಧವಾಗಿವೆ. ನಾನೀಗ ಅವುಗಳ ವಿಚಾರವಾಗಿ ನನ್ನ ಖಚಿತ ಅಭಿಪ್ರಾಯ ಕೊಡುವ ಆಲೋಚನೆಯಲ್ಲಿಲ್ಲ. ಆದರೆ ಒಂದು ವಿಷಯದತ್ತ ಗಮನ ಹರಿಸಬೇಕು. 'ಪೂಪಾ' – ಎಂಬುದು ಒಂದು ಬಿರುದು ಇಲ್ಲವೇ ಗೌರವ ಪ್ರಶಸ್ತಿಯೇ ಹೊರತು ಆ ಯತಿಯ ನಿಜವಾದ ಹೆಸರಲ್ಲ. Though it may have been customary to designate Devanandin or Gunanandin by this term, just as it is usual to call Kumarilabhatta Bhattapadah, yet there must have been many Jaina Pujyapadas, jus as there are many Bhattas. Hence the utmost caution is necessary in using inscriptions or passages from books which mention a Pujyapada for fixing the date of the Pujyapada''. (Dr. G Buhler. Book Notice of Prof. P. Peterson's 'A Second Report of Operations in search of Sanskrit MSS in the Bombay circle, JBBRAS, 1884', IA, XIV, p. 355).

ಪೂಪಾ. ಎಂಬುದು ಪ್ರಶಸ್ತಿಯಾಗಿ ಬಂದ ಹೆಸರಾದರೂ ತುಂಬಾ ಪ್ರಚಲಿತವಾಗಿರುವುದು ಅದೇ; ಅವರಿಗೆ ದೇವನಂದಿ (ದೇವೇಂದ್ರ ಕೀರ್ತಿ ?) ಎಂಬುದು ಮೂಲ ಹೆಸರು, ಜತೆಗೆ ಜಿನೇಂದ್ರಬುದ್ಧಿ ಎಂಬ ಮತ್ತೊಂದು ಹೆಸರು ಇದೆ – ಎಂಬುದಕ್ಕೆ ಅನೇಕ ಆಧಾರಗಳಿವೆ. (ನಂದಿ ಸಂಘದ ಪಟ್ಟಾವಲೀಯಲ್ಲಿ ಹೇಳಿರುವ ದೇವನಂದೀ ಎಂಬುವರು ಇವರೇ). ಶ್ರವಣಬೆಳಗೊಳದ ಶಾಸನದಲ್ಲೂ ಇದು ತುಂಬಾ ಸ್ಪಷ್ಟವಾಗಿ ಉಕ್ತವಾಗಿದೆ. ಹೊಯ್ಸಳ ಒಂದನೆಯ ನರಸಿಂಹನ ಮಹಾಪ್ರಧಾನನೂ ಹಿರಿಯ ಭಂಡಾರಿಯೂ ಆದ ಹುಳ್ಳರಾಜನು ತನ್ನ ಗುರುದೇವಕೀರ್ತಿ ಪಂಡಿತರ ನೆನಪಿಗಾಗಿ ನಿಲ್ಲಿಸಿದ ನಿಸದಿಗೆ ಕಲ್ಲಿನ ಮೇಲೆ ಜೂನ್ 12, 1163 ರಲ್ಲಿ ಬರೆಸಿದ ಶಾಸನದಲ್ಲಿ (ಶ್ರಬೆ 71(64)) ಒಂದು ಕಡೆ ಹೀಗಿದೆ : (ಸಾಲುಗಳು 26 ರಿಂದ 34) :

ಯೋ ದೇವನನ್ದಿ ಪ್ರಥಮಾಭಿದಾನೋ ಬುದ್ಧ್ಯಾ ಮಹತ್ವಾ ಸ
ಜಿನೇಂದ್ರಬುದ್ಧಿಃ
ಶ್ರೀಪೂಜ್ಯಪಾದೋ ಜನಿದೇವತಾಭಿರ್ಯತ್ಪೂಜಿತಂ ಪಾದಯುಗಂ
ಯದೀಯಂ ||

ಮೊದಲ ಹೆಸರು ದೇವನಂದಿ ಎಂದಿದ್ದರೂ ಅವರ ಅಸಾಧಾರಣ ಬುದ್ಧಿ ಮತ್ತೆ ಯಿಂದಾಗಿ ಅವರಿಗೆ ಜಿನೇಂದ್ರಬುದ್ಧಿ ಎಂದೂ, ಅವರ ಪಾದಯುಗಳವನ್ನು ದೇವತೆಗಳು ಕೂಡ ಪೂಜೆಮಾಡಿ ಗೌರವಿಸಿದ ಕಾರಣ ಪೂಜ್ಯಪಾದ-ಎಂದು ಹೆಸರುಗಳಾದುವು. (ಇವರಿಗೆ ಔಷಧಿಋದ್ಧಿಯಿತ್ತೆಂದು ಮತ್ತಷ್ಟು ಸಾಕ್ಷಿಗಳು ಪುಷ್ಟಿ ಕೊಟ್ಟಿವೆ) ಯಾವುದೇ ಅನುಮಾನವನ್ನು ಚೂರು ಮಾಡುವ ಇಂಥ ದಾಖಲೆ ಸಿಗುವುದು ಅಪರೂಪ ಎಂಬಷ್ಟು ಅಸಂದಿಗ್ಧವಾದ ಆಧಾರವನ್ನು ಇದು ಒದಗಿಸಿದೆ. ಇದನ್ನೇ ಶ್ರಜೆ 360(254)ಶಾಸನವೂ ಪುಷ್ಟೀಕರಿಸಿದೆ (ಸಾಲುಗಳು 35-37) :

ಪ್ರಾಗ್ಯಭ್ಯಧಾಯಿ ಗುರುಣಾ ಕಿಲ ದೇವನಂದೀ ಬುದ್ಧ್ಯಾ ಪುನರ್ವಿಪುಳಯಾ
ಸಜಿನೇಂದ್ರಬುದ್ಧಿಃ
ಶ್ರೀಪೂಜ್ಯಪಾದ ಇತಿಚೈಷ ಬುಧೈಃ ಪ್ರಚಖ್ಯೇ ಯತ್ಪೂಜಿತಃ ಪದಯುಗೇ
ವನದೇವತಾಭಿಃ ||

ಜೈನಾಚಾರ್ಯರ ಸಿಡಿದಾದ ಸಾಲಿನಲ್ಲಿ ಕೆಲವರು ಕೃತಿ ರಚನೆ ಮಾಡಿರದ ಶ್ರೇಷ್ಠ ಪ್ರಭಾವಶಾಲಿ ಆಚಾರ್ಯರು ಮಾತ್ರ ಆಗಿದ್ದರೆ, ಮತ್ತೆ ಕೆಲವರು ಕೃತಿಗಳನ್ನು ರಚಿಸಿದ್ದಾರೆ. ಈ ಗ್ರಂಥ ರಚನೆಯಲ್ಲಿ ಮೂರು ವಿಧ : ಕೇವಲ ಧಾರ್ಮಿಕ ಗ್ರಂಥಗಳ ರಚನೆಕಾರರು, ಶಾಸ್ತ್ರ ಕೃತಿಕಾರರು ಮತ್ತು ಸಾಹಿತ್ಯ ಕರ್ತೃಗಳು.

ಅ. ಧಾರ್ಮಿಕ ಕೃತಿಕಾರರು : ಭೂತಬಲಿ ಪುಷ್ಪದಂತ ಮಾಘಣಂದಿ
ಉಮಾಸ್ವಾತಿ

ಆ. ಶಾಸ್ತ್ರ ಕೃತಿಕಾರರು : ಶಾಕಟಾಯನಾಚಾರ್ಯರು

ಇ. ಸಾಹಿತ್ಯಕಾರರು ಕವಿಗಳು : ಜಿನಸೇನರು, ಗುಣಭದ್ರರು.

ಪೂಜ್ಯಪಾದರು .ಧಾರ್ಮಿಕ, ಶಾಸ್ತ್ರ ಮತ್ತು ಸಾಹಿತ್ಯ – ಈ ಮೂರು ರಂಗಗಳಲ್ಲಿ ಕೃತಿ ರಚನೆ ಮಾಡಿದ ಮೇಧಾವಿಗಳು :

ಜೈನೇಂದ್ರ ನಿಜಶಬ್ದ ಭೋಗಮತುಳಂ ಸರ್ವಾರ್ಥಸಿದ್ಧಿಃ ಪರಾ
ಸಿದ್ಧಾನ್ತೇ ನಿಪುಣತ್ವಮುದ್ಧಕವಿತಾಂ ಜೈನಾಭಿಷೇಕಃ ಸ್ವಕಃ
ಛನ್ದಸ್ಸೂಕ್ಷ್ಮಧಿಯಂ ಸಮಾಧಿಶತಕ ಸ್ವಾಸ್ಥ್ಯಂ ಯದೀಯಂ ವಿದಾಮಾ
ಖ್ಯಾತೀಹಸ ಪೂಜ್ಯಪಾದ ಮುನಿಪಃ ಪೂಜ್ಯೋ ಮುನೀನಾಂ ಗಣ್ಯೈಃ ||

ಎಂಬುದಾಗಿ ಶ್ರಜೆ 71(64) ಶಾಸನದಲ್ಲಿ ಬರೆದಿದೆ. 'ಜೈನೇಂದ್ರ' ಕೃತಿಯು ಅವರ

ಅವನ ವ್ಯಾಕರಣ ಜ್ಞಾನವನ್ನು ಪ್ರಾಜ್ಞರಿಗೆ ಸಾರುತ್ತದೆ. ತತ್ವಜ್ಞಾನದಲ್ಲಿ ಅವರಿಗಿದ್ದ ಪರಿಣತಿಯನ್ನು 'ಸರ್ವಾರ್ಥಸಿದ್ಧಿ' ಗ್ರಂಥ ತೋರಿಸುತ್ತದೆ. 'ಜೈನಾಭಿಷೇಕ' ಗ್ರಂಥವು ಅವರ ಕಾವ್ಯ ಪ್ರತಿಭೆ ಮತ್ತು ಸೂಕ್ಷ್ಮ ಛಂದಸ್ಸಿನ ಜ್ಞಾನವನ್ನೂ ಪ್ರತಿಬಿಂಬಿಸಿದರೆ 'ಸಮಾಧಿಶತಕ'ವು ಚಿತ್ತಸ್ವಾಸ್ಥ್ಯವನ್ನು ಸಂಕೇತಿಸುತ್ತಿದೆ. ಹೀಗೆ ಮುನಿಜನ ವರ್ಗದಿಂದ ಗೌರವಿಸಿಕೊಂಡ ಪೂಜ್ಯಪಾ. ಮುನಿಪರ ಕೀರ್ತಿ ಗುಣಾವಳಿ ನೆಗಳ್ದಿದೆ.

ಪೂಜ್ಯಪಾದರ ಹೆಸರಿಗೆ ಹಲವಾರು ಗ್ರಂಥಗಳನ್ನು ಆರೋಪಿಸಲಾಗಿದೆ.

1. ಜೈನೇಂದ್ರ ವ್ಯಾಕರಣ 2. ನ್ಯಾಯಕುಮುದ ಚಂದ್ರೋದಯ (ನಗರ ಶಾಸನ, ಎಕ 8) 3. ಮುಗ್ಧಬೋಧ ವ್ಯಾಕರಣ 4. ಶಬ್ದಾವತಾರಟೀಕೆ (ನ್ಯಾಸ) 5. ಛಂದಶಾಸ್ತ್ರ (?) 6. ಸರ್ವಾರ್ಥಸಿದ್ಧಿ (ಜೈನ ಧರ್ಮವನ್ನು ಸಂಗ್ರಾಹ್ಯತಿಸಂಗ್ರಹರೂಪದಲ್ಲಿಳಿಸಿರುವ ತತ್ವಾರ್ಥಸೂತ್ರದ ಮೇಲೆ ಬರೆದ ಮೊದಲ ವ್ಯಾಖ್ಯಾನ) 7. ವೈದ್ಯಸಾರ (ಕಲ್ಯಾಣಕಾರಕ) 8. ಇಷ್ಟೋಪದೇಶ 9. ಸಮಾಧಿ ಶತಕ (ಸಮಾಧಿ ತಂತ್ರ) 10. ಸಾರಸಂಗ್ರಹ 11. ಜೈನಾಭಿಷೇಕ 12 ಜ್ಞಾನಚಂದ್ರ ಚರಿತೆ (ಪ್ರಾಕೃತದಲ್ಲಿ ವಾಸವಚಂದ್ರ ಬರೆದುದನ್ನು ಕನ್ನಡಕ್ಕೆ ಪರಿವರ್ತಿಸಿದರೆಂದು ಪಾಯಣವರ್ಣಿಯ ಹೇಳಿಕೆ) 13. ಸಿದ್ಧಭಕ್ತಿ (ನಿರ್ವಾಣಭಕ್ತಿ, ನಂದೀಶ್ವರ ಭಕ್ತಿ, ಶ್ರುತಭಕ್ತಿ, ಚಾರಿತ್ರಭಕ್ತಿ, ಯೋಗಭಕ್ತಿ, ಆಚಾರ್ಯಭಕ್ತಿ) 14. ಶಾಂತ್ಯಷ್ಟಕ 15. ಪಂಚವಸ್ತುಕ (ವೃತ್ತಿ) 16. ಸ್ವಪ್ನಾವಲಿ (?)

ಇತ್ಯಾದಿ ಇನ್ನೂ ಕೆಲವನ್ನು ಪೂಜ್ಯಪಾ.ರ ಹೆಸರಿಗೆ ಜಮಾ ಮಾಡಿರುವುದುಂಟು. ಇವುಗಳಲ್ಲಿ ಕೆಲವು ಇದುವರೆಗೂ ದೊರೆತಿಲ್ಲ. ಇನ್ನು ದೊರೆಯುವುದೂ ದುರ್ಲಭವೇ. ಸಂ.ಪ್ರಾ (— ಕ, ?) – ಈ ಕೃತಿಗಳಲ್ಲಿ ಲೌಕಿಕ ಪೂಜ್ಯಪಾ.ರ ಸ್ವಭಾವಾರ ಬಂದಿಲ್ಲದಿರುವುದೂ ಬಲ್ಲದರಿಗೆ ಬೆರಗುಂಟುಮಾಡಿದೆ, ತಿಣುಕುವಂತೆ ಮಾಡಿದೆ. ಪೂಜ್ಯಪಾ.ರನ್ನು ಸ್ತುತಿಸಿರುವ ಕನ್ನಡದ ಕವಿಗಳು ಮೂರು ತೆರನಾಗಿದ್ದಾರೆ :

ಅ. ಮಾಮೂಲಿನಂತೆ ಜೈನಾಚಾರ್ಯರನ್ನು ಸ್ತುತಿಗಾಗಿ ಸ್ತುತಿಸಿರುವ ಸಂಪ್ರದಾಯವಾದಿಗಳು.

ಆ. ತಾವು ಸ್ತೋತ್ರ ಮಾಡಿರುವ ಜೈನಾಚಾರ್ಯರ ಕೆಲವು ವಿಶೇಷತೆಯನ್ನು ನಿರೂಪಿಸಿರುವವರು.

ಇ. ಕೆಲವು ಕೃತಿಗಳನ್ನೂ ಹೆಸರಿಸಿರುವವರು.

ಪಾರ್ಶ್ವಪಂಡಿತನ(1222)ಪಾರ್ಶ್ವನಾಥ ಪುರಾಣದ ಪದ್ಯ ಪೂಜ್ಯಪಾ.ರ ಪುಸ್ತಕಗಳನ್ನೂ ತಿಳಿಸಿದೆ :

ಸಕಳೋರ್ವೀಸುತ ಪೂಜ್ಯಪಾದ ಮುನಿಪಂ ತಾಂ ಪೇೞ್ದ ಕಲ್ಯಾಣ ಕಾ
ರಕದಿಂ ದೇಹದ ದೋಷಮಂ ವಿತತ ವಾಚಾ ದೋಷಮಂ ಶಬ್ದ ಸಾ
ಧಕ ಜೈನೇಂದ್ರ ದಿನಾ ಜಗಜ್ಜನದ ಮಿಥ್ಯಾದೋಷಮಂ ತತ್ವಬೋ
ಧಕ ತತ್ತ್ವಾರ್ಥದ ವೃತ್ತಿಯಿಂದೆ ಕಳೆದಂ ಕಾರುಣ್ಯದುಗ್ಧಾರ್ಣವಂ 1-18

ವೃತ್ತವಿಲಾಸ ಕವಿ (1360) ತನ್ನ ಧರ್ಮಪರೀಕ್ಷೆಯಲ್ಲಿ ಇವರ ಕೆಲವು ಕೃತಿಗಳನ್ನು ಹೇಳಿದ್ದಾನೆ.

ಭರದಿಂ ಜೈನೇಂದ್ರಮಂ ಭಾಸುರಮೆನಲೊರೆದಂ ಪಾಣಿನೀಯಕ್ಕೆ ಟೀಕಂ
ಬರೆದಂ ತತ್ತ್ವಾರ್ಥಮಂ ಟಿಪ್ಪಣದಿನಱಿಪಿದಂ ಯಂತ್ರಮಂತ್ರಾದಿಶಾಸ್ತ್ರೋ
ತ್ಕರಮಂ ಭೂರಕ್ಷಣಾರ್ಥಂ ವಿರಚಿಸಿ ಜಸಮಂ ತಾಳ್ದಿದಂ ವಿಶ್ವವಿದ್ಯಾ
ಭರಣಂ ದೇವಾಂಗನಾರಾಧಿತ ಪದಕಮಳಂ ಪೂಜ್ಯಪಾದ ವ್ರತೀಂದ್ರಂ ||

ಭೂರಕ್ಷಣಾರ್ಥವಾಗಿ ಪೂಪಾ.ರು 'ಯಂತ್ರಮಂತ್ರಾದಿ ಶಾಸ್ತ್ರೋತ್ಕರ'ವನ್ನು ವಿರಚಿಸಿ ಯಶಸ್ಸು ತಳೆದರೆಂದು ವೃತ್ತವಿಲಾಸ ಕವಿ ಹೇಳುವುದನ್ನು ಗಮನಿಸಬಹುದು.

ಬಹಳ ಜನ ಹೆಸರಿಸಿ, ಬಹಳವಾಗಿ ಚರ್ಚಿಸಿ ಪ್ರಸಿದ್ಧಿ ಪಡೆದಿರುವ ಜೈವ್ಯಾ.ವನ್ನು ಒಂದು ಪರಂಪರೆ ಮಾಡಿದ ಮಹಾಶಾಸ್ತ್ರ ಕೃತಿಯೆಂದು ಮಾನ್ಯಿಸಿದ್ದಾರೆಂಬುದು ನಿಜ. ಆದರೆ ಈ ವಿಚಾರದಲ್ಲಿ ಭಿನ್ನಾಭಿಪ್ರಾಯವೂ ಇದೆಯೆಂಬುದನ್ನು ವಸ್ತುನಿಷ್ಠವಾಗಿ ನೋಡುವ ಸಂಶೋಧಕರು ಪರಿಗಣಿಸಬೇಕು. ಕೀಲ್‌ಹಾರ್ನ್‌ರ ಅಭಿಪ್ರಾಯದಂತೆ ಜೈವ್ಯಾ.ವು ಪಾಣಿನಿ, ಕಾತ್ಯಾಯನ, ಪತಂಜಲಿ ಮಟ್ಟಕ್ಕೆ ಏರದಿರುವ ಮಧ್ಯಮ ವರ್ಗದ ಕೃತಿ : ಪ್ರತಿಕೃತಿಯನ್ನುತ್ತಾರೆ; ಗಂಡುಮಗು ಹುಟ್ಟಿದಾಗ ಆಗುವ ಒಸಗೆಗೆ ಸಮನಾದ ಸಂತೋಷ, ವ್ಯಾಕರಣಕಾರನಿಗೆ ಅರ್ಧಸ್ವರ ಉಳಿದರೆ ಆಗುತ್ತದೆಂಬ ಏಕೈಕ ತತ್ತ್ವದ ಮೇಲೆ ಈ ವ್ಯಾಕರಣ ರಚಿತವಾಗಿದೆ. ಪಾಣಿನಿ ವೈದಿಕ ನುಡಿಕಟ್ಟು ಕುರಿತು ವಿವೇಚಿಸುವ ಸೂತ್ರವನ್ನು ಜೈವ್ಯಾ.ವು ಕೈಬಿಟ್ಟಿದೆ. ಉದಾತ್ತ ಅನುದಾತ್ತ ಸ್ವರಿತ ಶಬ್ದಗಳನ್ನು ವಿವರಿಸುವ ಸಾಮಾನ್ಯ ಸ್ವರಾಘಾತ ನಿಯಮಗಳನ್ನು ಉಳಿಸಿಕೊಂಡಿದೆ. ಇಷ್ಟಾದರೂ ಜೈವ್ಯಾ.ಕಾರನ ಕಲ್ಪನಾಚಾತುರ್ಯ ಒಂದೊ ಹಲವೊ ಅಕ್ಷರಗಳನ್ನು ಮಿತಗೊಳಿಸುವುದರಲ್ಲಿ ವಿಶೇಷವಾಗಿ ವ್ಯಕ್ತವಾಗಿದೆ. "But the most effective means which he employs to attain his object is the formation or, in some cases, the adoption, of a large number of short technical terms" (ಹಿಂದೆ ಉದಾಹೃತ, ಪುಟ 76-77) ಪಾಣಿನಿ ಅಷ್ಟಾಧ್ಯಾಯಿಯಲ್ಲಿ ಹೇಳುವ ಹತ್ತು ಜನ ತತ್ಪೂರ್ವ ವೈಯಾಕರಣರಾದ ಆಪಿಶಲಿ, ಭಾರದ್ವಾಜ ಚಾಕ್ರವರ್ಮಣ, ಗಾಲವ, ಗಾರ್ಗ್ಯ, ಕಾಶ್ಯಪ, ಶಾಕಟಾಯನ, ಶಾಕಲ್ಯ, ಸೇನಕ, ಸ್ಫೋಟಾಯನ ಎಂಬುವರನ್ನು ಜೈವ್ಯಾ. ಹೇಳುವುದಿಲ್ಲ. ಅಜೈನರೂ ಕೆಲವರು ಆ

ಪಟ್ಟಿಯಲ್ಲಿರುವುದರಿಂದ ಆ ಪಟ್ಟಿಯನ್ನೇ ಕೈಬಿಟ್ಟು ಜೈವ್ಯಾ.ವು ಶ್ರೀದತ್ತ, ಯಶೋಭದ್ರ, ಭೂತಬಲಿ, ಪ್ರಭಾಚಂದ್ರ, ಸಿದ್ಧಸೇನ, ಸಮಂತಭದ್ರರನ್ನು ಪೂರ್ವಸೂರಿಗಳನ್ನಾಗಿ ಹೆಸರಿಸಿದೆ. ಮುಂದೆ ಬಂದ ಪಾಲ್ಯಕೀರ್ತಿ ಶಾಕಟಾಯನನು ತನ್ನ ಶಾಕಟಾಯನ ವ್ಯಾಕರಣ (ಶಬ್ದಾನುಶಾಸನ) ದಲ್ಲಿ ಆರ್ಯವಜ್ರ, ಇಂದ್ರ ಮತ್ತು ಸಿದ್ಧನಂದಿನ ಎಂಬುವರನ್ನು ಉಲ್ಲೇಖಿಸಿದ್ದಾನೆ. ಈ ವಿಚಾರವಾಗಿ ಬೆಲ್ವಾಲ್ಕರ್ ಅವರು ಕಟುಟೀಕೆಯನ್ನೇ ಮಾಡಿದ್ದಾರೆ :

''Devanandi alias Pujyapada .....now here qouted by name or acknowledged his obligations to authors and works not belonging to his own religion . that the names so put in were simply added pujarthan and were of no value for the history of grammar and that probably they were merely well known jain authors who used particular grammatical forms and not necessarily old grammarians'' (Belvalkar, Systems of Sanskrit grammar, Poona, 1915).

ಜೈವ್ಯಾ.ದಲ್ಲಿ ಪೂಪಾ.ರು ಹೇಳುವ ಹೆಸರುಗಳು ಕೇವಲ ನಾಮಧಾರಿಗಳಲ್ಲ. ಅವರೆಲ್ಲ ವಿಖ್ಯಾತನಾಮರು. ಅಲ್ಲಿ ಬರುವ ಸಿದ್ಧಸೇನರ ಒಂದು ಪ್ರಯೋಗವನ್ನು ಕೂಡ ಗಮನಿಸಬೇಕು; ಈ ಪ್ರಯೋಗವನ್ನು ಸಿದ್ಧಸೇನನ ದ್ವಾತ್ರಿಂಶಿಕಾದಿಂದ (*IX–22*) ತೆಗೆದುಕೊಳ್ಳಲಾಗಿದೆ. ಅಲ್ಲದೆ ಪೂಪಾ.ರು ಇದೇ ದ್ವಾತ್ರಿಂಶಿಕಾದ ಪದ್ಯಭಾಗವನ್ನೂ ಸರ್ವಾರ್ಥಸಿದ್ಧಿಯಲ್ಲಿ (*VII*.13) ಉದ್ಧರಿಸಿದ್ದಾರೆ. ಅಭಯನಂದಿಯೂ ತನ್ನ ಮಹಾವೃತ್ತಿಯಲ್ಲಿ (1.4.16) ವೈಯಾಕರಣ ಸಿದ್ಧಸೇನರನ್ನು ಹೇಳಿದ್ದಾನೆ. ಜಿನಸೇನರಲ್ಲೂ ಇದೆ. ಪ್ರಭಾಚಂದ್ರರ ಕೃತಿ ಚಂದ್ರೋದಯ; ಈ ಪ್ರಭಾಚಂದ್ರರನ್ನು ಜಿನಸೇನರೂ ಸ್ಮರಿಸಿದ್ದಾರೆ. ಶ್ರೀದತ್ತನೂ ಒಬ್ಬ ವಾದಿ(ನ್)ಯಾಗಿದ್ದು ಜಿನಸೇನರು ಸ್ಮರಣೆ ಮಾಡಿರುತ್ತಾರೆ. ವಿದ್ಯಾನಂದರು ಒಬ್ಬ ಶ್ರೀದತ್ತನ 'ಜಲ್ಪನಿರ್ಣಯ'ವನ್ನು ಪ್ರಸ್ತಾಪಿಸಿರುತ್ತಾರೆ. ಯಶೋಭದ್ರರೂ ಕೂಡ ಶ್ರೀದತ್ತರಂತೆ ಪ್ರಭಾವಿವಾದಿಗಳೆಂದು ಜಿನಸೇನರ ಉವಾಚ. ಇನ್ನು ಸಮಂತಭದ್ರರಂತೂ ವಿಖ್ಯಾತರು (ಅಮರಕೋಶದಲ್ಲಿ ಹೇಳಿರುವಂತೆ ಬುದ್ಧನಿಗೂ ಸಮಂತಭದ್ರ ಎಂಬ ಹೆಸರಿದ್ದುದರಿಂದ ಈ ಸಮಂತಭದ್ರನಿಗೂ ಬುದ್ಧನಿಗೂ ನಾಮಸಾದೃಶ್ಯದಿಂದ ಸಮೀಕರಿಸುವುದು ಆಭಾಸಕ್ಕೆ ಕೊಟ್ಟ ಉದಾಹರಣೆಯಾದೀತು. ಇಂದ್ರ, ಸಿದ್ಧನಂದಿನ್ ಮತ್ತು ಆರ್ಯವಜ್ರ ಕುರಿತು ಪಂಡಿತ ನಾಥೂರಾಮ ಪ್ರೇಮಿಯವರು ವಿವರಿಸಿದ್ದಾರೆ). ಆದ್ದರಿಂದ ಪೂಪಾ.ರು ಕೊಡುವ ಪೂರ್ವಾಚಾರ್ಯರ ಹೆಸರನ್ನು ಗಂಭೀರವಾಗಿ ಪರಿಗಣಿಸಬೇಕೆಂಬುದು ನಿಜ : ಇದರೂ ಪೂಪಾ.ರು ಮತ್ತು ಶಾಕಟಾಯನರು ಹೇಳುವ ಈ ಪೂರ್ವಾಚಾರ್ಯರೆಲ್ಲ

ವ್ಯಾಕರಣಕಾರರೇ ಅಲ್ಲವೇ ಎಂಬುದು ಇನ್ನೂ ತೆರೆದ ಪ್ರಶ್ನೆಯಾಗಿಯೇ ಉಳಿಯುತ್ತದೆ. ಡಾ|| ಆ.ನೇ. ಉಪಾಧ್ಯೆಯವರು ಹೇಳುವಂತೆ 'But one thing is beyond doubt that they are the names of Jain teachers who were held in great respect by the respective grammaraians' (ಶಾಕಟಾಯನ ವ್ಯಾಕರಣ, ಸಂಪಾದಕೀಯ, ಪುಟ 9, ಭಾರತೀಯ ಜ್ಞಾನಪೀಠ ಪ್ರಕಟಣೆ, 1971) ಐದು ಅಧ್ಯಾಯಗಳ (ಕಿರಿಯ ಆವೃತ್ತಿಯಲ್ಲಿ) 300 ಸೂತ್ರಗಳ (ಹಿರಿಯ ಆವೃತ್ತಿಯಲ್ಲಿ 700 ಸೂತ್ರಗಳ) ಇದುವರೆಗೆ ದೊರೆತಿರುವ ಸಂಸ್ಕೃತ ಜೈನ ವ್ಯಾಕರಣಗಳಲ್ಲಿ ಪ್ರಾಚೀನವೂ ಪ್ರಥಮವೂ ಆದ ಜೈವ್ಯಾ.ವು ಭಾರತೀಯ ವ್ಯಾಕರಣ ಪರಂಪರೆಯ ಎಂಟು ಪದ್ಧತಿಗಳಲ್ಲೊಂದು :

ಇಂದ್ರಶ್ಚಂದ್ರಃ ಕಾಶಕೃತ್ಸ್ನಾಪಿಶಲೀ ಶಾಕಟಾಯನಃ
ಪಾಣಿನ್ಯಮರ ಜೈನೇಂದ್ರಾ ಜಯಂತ್ಯಷ್ಟಾದಿ ಶಾಬ್ದಿಕಾಃ ||

ಬೊಪ್ಪದೇವ, ಧಾತುಪಾಠ

ಅಷ್ಟ ಶಾಬ್ದಿಕ ವರ್ಗದಲ್ಲಿ ಇಷ್ಟು ಉನ್ನತ ಸ್ಥಾನ ಪಡೆದ ಜೈವ್ಯಾ.ದ ಕಾಣಿಕೆ ಸಾಧಾರಣವೇ ಹೊರತು ಉನ್ನತವಾದುದಲ್ಲ ಎಂದು Dr. R. Birwe ರವರು ಭಾವಿಸಿದ್ದಾರೆ. ಡಾ|| ಆ.ನೇ. ಉಪಾಧ್ಯೆಯವರು "ಪೂಪಾ. ದೇವನಂದಿಯ ವ್ಯಾಕರಣವು ಪಾಣಿನಿ ಮತ್ತು ಇತರ ಪೂರ್ವಾಚಾರ್ಯರಿಂದ ಸಾಕಷ್ಟು ಸಾಮಗ್ರಿಯನ್ನು ಪಡೆದುಕೊಂಡು ಸಪ್ರಮಾಣವಾಗಿಯಲ್ಲದೆ ಶಾಕಟಾಯನನಿಗೂ ಮತ್ತು ಆವನ ಮೂಲಕ ಹೇಮಚಂದ್ರನಿಗೂ ಪೃಥವಾದ ಸಹಾಯ ಸಲ್ಲಿಸಿದೆ" ಎಂಬುದಾಗಿ ಹೇಳಿದ್ದಾರೆ (ಪೂರ್ವೋಕ್ತ. ಸಂಪಾದಕೀಯ. ಪುಟ 12). ಪೂಪಾ.ರು ಈ ಜೈವ್ಯಾ.ಕ್ಕೆ ಪಂಚವಸ್ತುಕವೆಂಬ ವ್ಯಾಖ್ಯಾನ ಕೂಡ ಬರೆದಂತೆ ತಿಳಿದುಬರುತ್ತದೆ. ಡಾ|| ಪೀಟರ್ಸನ್ ಡಾ|| ಷೇಕ್‌ಅಲಿ ಇದನ್ನು ಒಪ್ಪಿಕೊಂಡಿದ್ದಾರೆ.

ಪೂಪಾ.ರು ಜೈವ್ಯಾ.ವಲ್ಲದೆ ಪಾಣಿನಿಯ ವ್ಯಾಕರಣಕ್ಕೆ 'ಶಬ್ದಾವತಾರ'ವೆಂಬ ನ್ಯಾಸವೊಂದನ್ನು ಬರೆದರೆಂದು ಹೇಳಲಾಗುತ್ತಿದೆ. ಇದನ್ನು ಶಾಸನ ಹೇಳಿಕೆ ಅನುಮೋದಿಸಿದೆ :

ನ್ಯಾಸಂ ಜೈನೇಂದ್ರಸಂಜ್ಞಂ ಸಕಲಬುಧನುತಂ ಪಾಣಿನೀಯಸ್ಯ ಭೂಯೋ
ನ್ಯಾಸಂ ಶಬ್ದಾವತಾರಂ ಮನುಜತತಿಹಿತಂ ವೈದ್ಯಶಾಸ್ತ್ರಂ ಚ ಕೃತ್ವಾ ||

ಎ.ಕ.8 ನಗರ ಶಾಸನ 46

ಅಲ್ಲದೆ "ಶಬ್ದಾವತಾರಕಾರೇಣ ದೇವಭಾರತಿ ನಿಬದ್ಧ ವೃಷ್ಟಕಥೇನ ಕಿರಾತಾರ್ಜುನೀಯ ಪಂಚದಶಸರ್ಗ ಟೀಕಾಕಾರೇಣ ದುರ್ವಿನೀತ ನಾಮಧೇಯೇನ"(ಎಂ.ಎ.ಆರ್. MAR 1912) ಎಂಬಲ್ಲಿ ಬರುವ ಶಬ್ದಾವತಾರ ಟೀಕೆ ಪೂಪಾ.ರ ಕೃತಿಗೇ ಬರದ

ದ್ದೆಂದೂ ತಿಳಿಯಲಾಗಿದೆ. ಇದನ್ನು ಒಪ್ಪದ ಆರ್.ನ.ರವರು ಇದು ನಾಗವರ್ಮನು ಅಷ್ಟಾಧ್ಯಾಯಿಗಾಗಿ ಬರೆದ ಟೀಕೆಯೆಂದಿದ್ದಾರೆ. (ಹಿಸ್ಟರಿ ಆಫ್ ಕನ್ನಡ ಲಿಟರೇಚರ್ ಮೈಸೂರು 1940 ಪುಟ 3–4).

ವೃತ್ತವಿಲಾಸಕವಿಯೂ (1360), ಧರ್ಮಪರೀಕ್ಷೆಯಲ್ಲಿ ಈ ಅಭಿಪ್ರಾಯವನ್ನು ಸಮರ್ಥಿಸಿದ್ದಾನೆ. ಬರೆದಂ ಪಾಣಿನೀಯಕ್ಕೆ ಟೀಕಂ (1–14) ಎಂದು. ಪಂಡಿತ ಕೆ. ಭುಜಬಲಿಶಾಸ್ತ್ರಿಯವರೂ ಇದನ್ನು ಮಾನ್ಯ ಮಾಡಿದ್ದಾರೆ (ಆದರ್ಶ ಜೈನ ಸಾಹಿತಿಗಳು, ಪುಟ 9 ಭಾಗ 1). ದೇವಚಂದ್ರನ 'ಪಾಣಿನಿಸೂತ್ರ ವೃತ್ತಿಯಂ ರಚಿಸಿದಂ. ಎಂಬ ಮಾತೂ ಇದನ್ನೇ ಅಂಗೀಕರಿಸುತ್ತದೆ. ಖ್ಯಾತ ಇತಿಹಾಸಜ್ಞ ಡಾ|| ಬಿ. ಶೇಕ್‌ಅಲಿಯವರೂ ಇದನ್ನು ಮನ್ನಿಸಿದ್ದಾರೆ. ''Besides he (Durvinita) translated into Sanskrit, Gunadyas Brihat Kathas and it could have been as quite possible that he put into Kannada the original sabdavatara of Pujyapada in order to express his regard for his guru'' (ಪೂರ್ವೋಕ್ತ ಪುಟ 68) ಬಿ.ಎ. ಸಾಲೆತೊರೆಯವರೂ ಸುಮಾರು ಅರ್ಧ ಶತಮಾನದ ಹಿಂದೆ ಇದಕ್ಕೆ ಸಮ್ಮತಿಯಿತ್ತಿದ್ದರು) (Mediaeval Jainism, p. 23, 1938).

ಪೂಪಾ.ರ ಈ ವ್ಯಾಕರಣ ಗ್ರಂಥಕ್ಕೆ ಸಂಬಂಧಿಸಿದಂತೆ ಟೀಕಾಗ್ರಂಥಗಳು ರಚಿತವಾಗಿವೆ :

ಅ. ಅಭಯನಂದಿಯ ಮಹಾವೃತ್ತಿ. ಸು 11 ಶತಮಾನ (– ಶ.)

ಆ. ಪ್ರಭಾಚಂದ್ರರ ಶಬ್ದಾಂಭೋಜ ಭಾಸ್ಕರನ್ಯಾಸ

ಇ. ಕನ್ನಡಕವಿ ಅಗ್ಗಳನ ಗುರುವಾದ ಆರ್ಯ ಶ್ರುತಕೀರ್ತಿಗಳ ಪಂಚವಸ್ತು ಪ್ರಕ್ರಿಯಾ

ಈ. ಪಂಡಿತ ಮಹಾಚಂದ್ರನ ಲಘುಜೈನೇಂದ್ರ, 19 ಶ.

ಇವುಗಳಲ್ಲದೆ ಕ್ರಿ.ಶ. 900 ರಲ್ಲಿ ಗುಣನಂದಿಗಳಿಂದ ರಚಿತವಾದ ಶಬ್ದಾರ್ಣವ ಎಂಬೊಂದು ವ್ಯಾಕರಣ ಗ್ರಂಥವೂ ಇದೆ. ಇದು ಜೈವ್ಯಾ.ದ ಸೂತ್ರಗಳ ಸಂಶೋಧಿತ ಹಾಗೂ ಪರಿವರ್ಧಿತ ಸಂಸ್ಕರಣ. ಇದಕ್ಕೂ ಕ್ರಿ.ಶ. 1170 ರಲ್ಲಿ ಸೋಮದೇವನು ಶಬ್ದಾರ್ಣವ ಚಂದ್ರಿಕಾ ಎಂಬ ಟೀಕೆಯನ್ನೂ ಕ್ರಿ.ಶ.ಸು. 1150 ರಲ್ಲಿ ಪ್ರಾಯಶಃ ಶ್ರುಬೆ.ದ ಚಾರುಕೀರ್ತಿ ಪಂಡಿತಾಚಾರ್ಯರು ಶಬ್ದಾರ್ಣವ ಪ್ರಕ್ರಿಯಾ ಎಂಬೊಂದು ಟೀಕೆಯನ್ನೂ ರಚಿಸಿರುವುದುಂಟು" (ಕೆ. ಭುಜಬಲಿಶಾಸ್ತ್ರಿ, ಪೂರ್ವೋಕ್ತ ಪುಟ 31).

ಪೂಪಾ.ರ ಕಲ್ಯಾಣಕಾರಕ ಪ್ರಸಿದ್ಧ ವೈದ್ಯಗ್ರಂಥವಾಗಿತ್ತೆಂದು ತಿಳಿದು ಬರುತ್ತದೆ. ಎ. ಶಾಂತಿರಾಜಶಾಸ್ತ್ರಿ ಅವರು 'ವೈದ್ಯಪ್ರಪಂಚದಲ್ಲಿ ಪೂಜ್ಯಪಾದಾಚಾರ್ಯರ

ಹೆಸರು ಸರ್ವ ಶಿರೋಧಾರ್ಯವಾಗಿರುತ್ತದೆ' ಎಂದು ಬರೆದಿದ್ದಾರೆ. (ಎ. ಶಾಂತಿರಾಜ ಶಾಸ್ತ್ರಿ, ಸಂ: ದಶಭಕ್ತಿ, ಪೀಠಿಕೆ ಪು.14, 1934). ಬ್ರಹ್ಮಶಿವಕವಿ (1190) ಸಮಯ ಪರೀಕ್ಷೆ ಕಾವ್ಯದಲ್ಲಿ ಪೂಪಾ.ರು ವೈದ್ಯಶಾಸ್ತ್ರ ರಚನೆ ವಿಚಾರವಾಗಿ ಹೇಳಿರುವ ಪದ್ಯ :

ಸಕಳಪ್ರಾಣಿ ಹಿತಾರ್ಥವಾಗೆ ರುಜೆಗಳ್ಗಿಂಗಲ್ಕೆ ಕಲ್ಯಾಣ ಕಾ
ರಕಮಂ ವಾಗ್ಮಳಮಂ ತೆರಳೆ ಕಳೆಯಲ್ + ಜೈನೇಂದ್ರಮಂ ಚಿತ್ತದೊಂ
ದುಕಳಂಕಂ ಕಿಡಿಸಲ್ + ಸಮಾಧಿಶತಯೋಗ ಗ್ರಂಥಮಂ ಪೇಳ್ದ ಸ
ರ್ವಕವೀಂಪ್ರಸ್ತುತ ಶುದ್ಧ ಚಿತ್ತನೆಸೆದಂ ಶ್ರೀ ಪೂಜ್ಯ ಪಾದೋತ್ತಮಂ॥ 1-7

ಪಾರ್ಶ್ವಪಂಡಿತನೂ (1222) ಪಾರ್ಶ್ವನಾಥ ಪುರಾಣದಲ್ಲಿ 'ಪೂಜ್ಯಪಾದ ಮುನಿಪಂ ತಾಂ ಪೇಳ್ದ ಕಲ್ಯಾಣಕಾರಕದಿಂ' (1-18) ಎಂದು ಹೇಳಿರುವುದನ್ನು ಈ ಲೇಖನದಲ್ಲಿ ಆಗಲೇ ಉದಾಹರಿಸಿದ್ದೇನೆ. ಪೂಪಾ.ರ ಈ ವೈದ್ಯ ಗ್ರಂಥವನ್ನು ಸಂಸ್ಕೃತದಿಂದ ಕನ್ನಡಕ್ಕೆ ಜಗದ್ದಳ ಸೋಮನಾಥನೆಂಬ ಜೈನ ಕವಿ (1175) ಭಾಷಾಂತರಿಸಿದ್ದಾನೆ:

ಸುಕರಂ ತಾನೆನೆ ಪೂಜ್ಯಪಾದ ಮುನಿಗಳ್ ಮುಂ ಪೇಳ್ದ ಕಲ್ಯಾಣ ಕಾ
ರಕಮಂ ಬಾಹಟ ಸಿದ್ಧಸಾರಚರಕಾದ್ಯುತ್ಕೃಷ್ಟಮಂ ಸದ್ಗುಣಾ
ಧಿಕಮಂ ವರ್ಜಿತ ಮದ್ಯಮಾಂಸ ಮಧುವಂ ಕರ್ಣಾಟದಿಂ ಲೋಕರ
ಕ್ಷಕಮಂ ಚಿತ್ರಮದಾಗೆ ಚಿತ್ರಕವಿ ಸೋಮಂ ಪೇಳ್ದನಿಂತಿರ್ದ್ದುಯಿಂ ॥

ಮದ್ಯಮಾಂಸಮಧುವೆಂಬ ಮಕಾರತ್ರಯ ವರ್ಜಿತ ಔಷಧೋಪಚಾರವನ್ನು ಪ್ರತಿಪಾದಿಸಿರುವುದು ಪೂಪಾ.ರು ಅಹಿಂಸಾ ಧರ್ಮಬೋಧೆಯನ್ನು ಎತ್ತಿ ಹಿಡಿದಿರುವ ರೀತಿಗೆ ಉದಾಹರಣೆ. "ಪೂಪಾ.ರ ವೈದ್ಯಗ್ರಂಥವನ್ನು ಜೈನರು ಮಾತ್ರವಲ್ಲ, ಜೈನೇತರರೂ ಬಹಳ ಮುತುವರ್ಜಿಯಿಂದ ನೋಡಲು ಬಯಸುವುದನ್ನು ನಾನು ಚೆನ್ನಾಗಿ ಬಲ್ಲೆ. 'ಪೂಜ್ಯಪಾದೋದಿತಂ', 'ಪೂಜ್ಯಪಾದಭಾಷಿತಂ' ಮೊದಲಾದ ಅವರ ಹೆಸರನ್ನೊಳಗೊಂಡ ಹಾಗೂ ಪ್ರಾಯಶಃ ಅವರ ಮೂಲಗ್ರಂಥದ ಆಧಾರದಿಂದಲೇ ರಚಿಸಲ್ಪಟ್ಟ ಅನೇಕ ಪದ್ಯಗಳು ನಮಗೆ ಅಲ್ಲಲ್ಲಿ ಸಿಗುತ್ತವೆ. ಅಂತಹ ಪದ್ಯಗಳನ್ನು ಸಂಗ್ರಹಿಸಿ, 'ವೈದ್ಯಸಾರ' ಎಂಬ ಹೆಸರಿನಲ್ಲಿ ಆರಾದ ಜೈನ ಸಿದ್ಧಾಂತ ಭವನದ ಕಡೆಯಿಂದ ನಾನೂ ಒಂದು ಸಂಗ್ರಹವನ್ನು ಬೆಳಕಿಗೆ ತಂದಿರುವುದುಂಟು. ಅದರಲ್ಲಿ ಕೇವಲ ರಸಗಳು ಮಾತ್ರ ಹೇಳಲ್ಪಟ್ಟಿವೆ. ಆ ರಸಗಳನ್ನು ಬೇರೆ ಬೇರೆ ರೋಗಗಳಿಗೆ ಪ್ರಯೋಗಿಸಿ ವಿಶೇಷ ಲಾಭವನ್ನು ಪಡೆದಿರುವ ಹಲವು ವೈದ್ಯರು ಆ ರಸಗಳನ್ನು ಮುಕ್ತಕಂಠದಿಂದ ಹೊಗಳಿರುವುದು ನನಗೆ ಗೊತ್ತು" ಎಂಬುದಾಗಿ ಸ್ವಾನುಭವ ಜನ್ಯ ಅಭಿಪ್ರಾಯವನ್ನು ವಿದ್ವಾಭೂಷಣ ಸಿದ್ಧಾಂತಾಚಾರ್ಯ ಕೆ. ಭುಜಬಲಿಶಾಸ್ತ್ರಿ ಹೇಳಿರುವುದು ಇಲ್ಲಿ ಉಲ್ಲೇಖನೀಯ. (ಸಂಸ್ಕೃತ ವಾಙ್ಮಯಕ್ಕೆ ಜೈನ ಕವಿಗಳ ಕಾಣಿಕೆ, ಪುಟ 38-39)

ಪೂಜ್ಯಪಾ.ಕೃತ 'ಇಷ್ಟೋಪದೇಶ' 50(51)ಪದ್ಯಗಳ ಸಂಸ್ಕೃತ ಕೃತಿ. ಇದೊಂದು ನೀತಿಬೋಧ ಕೃತಿ, ಜೈನ ಧರ್ಮದ ತಿರುಳಾದ ಭೇದ ವಿಜ್ಞಾನ ಬೋಧಿಸುವ ಸರಳ ಗ್ರಂಥ. ಇದರ

ತ್ಯಾಗಾಯ ಶ್ರೇಯಸೇ ವಿತ್ತಮವಿತ್ತಃ ಸಂಚಿನೋತಿ ಯಃ ।
ಸ್ವಶರೀರಂ ಸ ಪಂಕೇನ ಸ್ನಾಸ್ಯಾಮೀತಿ ವಿಲಿಂಪತಿ 1·16

(ಪುಣ್ಯಗಳಿಕೆಗಾಗಿ ದಾನ ಮಾಡಬೇಕಾಗುತ್ತದೆಂದು ಹಣವಿಲ್ಲದವನು ಹಣವನ್ನು ಸಂಪಾದಿಸುತ್ತೇನೆನ್ನುವನು ಸ್ನಾನಮಾಡುವೆನೆಂದು ಹೇಳಿ ತನ್ನ ದೇಹವನ್ನು ಕೆಸರಿನಿಂದ ಬಳಿದುಕೊಂಡಂತೆ ಆಗುತ್ತದೆ) ಈ ಪದ್ಯ ಮತ್ತು ಇದರಂತೆ 4, 5, 9, 40, 48 ಮೊದಲಾದ ಪದ್ಯಗಳು ಪರಿಭಾಷಿಸುವಂತಿವೆ. ಇಷ್ಟೋಪದೇಶ ಕೃತಿ ಹಲವು ಬೇರೆ ಭಾಷೆಗಳಿಗೆ ಅನುವಾದವಾಗಿದೆ. ಸಮಾಧಿಶತಕ 105 ಸಂಸ್ಕೃತ ಪದ್ಯಗಳಿರುವ ಆಧ್ಯಾತ್ಮಿಕ ಕೃತಿ. ಸರಳ ಹೃದ್ಯ ಭಾಷಾಶೈಲಿಯ ಸಮಾಧಿ ಶತಕದಲ್ಲಿ ಆತ್ಮನ ರಹಸ್ಯವನ್ನು ಸೂಕ್ಷ್ಮವಾಗಿ ತಿಳಿಸಲಾಗಿದೆ. ಈ ಗ್ರಂಥಕ್ಕೆ ಟೀಕೆಗಳೂ ರಚಿತವಾಗಿದ್ದು ಹಲವು ಭಾಷೆಗಳಲ್ಲಿ, ವಿವಿಧ ಸಂಸ್ಥೆಗಳಿಂದ ಪ್ರಕಟವಾಗಿದೆ. 'ಇದರ ಅಧ್ಯಯನದಿಂದ ಮನಸ್ಸಿಗೆ ಅಪೂರ್ವ ಹಾಗೂ ಅಲೌಕಿಕ ಶಾಂತಿಯು ಸಿಗುವುದು. ಆಚಾರ್ಯರು ಅಧ್ಯಾತ್ಮ ವಾಣಿಯನ್ನು ಚೆನ್ನಾಗಿ ಮಥಿಸಿ ಅದರ ರಸದಿಂದಲೇ ಇದನ್ನು ತುಂಬಿಸಿರುವಂತೆ ಕಾಣುತ್ತದೆ. ಆತ್ಮಸಂಬೋಧನ ಹಾಗೂ ದುಃಖ ಪರಂಪರೆಯಿಂದ ಬಿಡುಗಡೆಯನ್ನು ಹೊಂದಲು ಈ ಗ್ರಂಥ ನಿಸ್ಸಂದೇಹವಾಗಿ ಮಹೌಷಧಿಯ ಕಾರ್ಯವನ್ನು ಮಾಡುವುದು' (ಕೆ. ಭುಜಬಲಿಶಾಸ್ತ್ರಿ, ಪೂರ್ವೋಕ್ತ ಪು. 42-43).

ಪೂಜ್ಯಪಾ.ರು ಕೆಲವು ಭಕ್ತಿಪರವಾದ, ಧಾರ್ಮಿಕಾಚಾರಣೆ ಸಂಬಂಧವಾದ ಹಾಗೂ ಸ್ತೋತ್ರರೂಪಿಯಾದ ಕಿರು ಕೃತಿಗಳನ್ನು ಬರೆದಿದ್ದಾರೆ. ಅವನ್ನು ಭಕ್ತಿಮಾಲಿಕೆಯೆನ್ನಬಹುದು. ಎಂಟುಪದ್ಯಗಳ ಶಾಂತ್ಯಷ್ಟಕ ಮತ್ತು ಒಂಬತ್ತು ಪದ್ಯಗಳ ಸಿದ್ಧಭಕ್ತಿಯಿಂದ ಹಿಡಿದು ಹೆಚ್ಚಿನ ಪದ್ಯಗಳಿರುವ ನಂದೀಶ್ವರ ಭಕ್ತಿಯವರೆಗೆ ಈ ಕಿರು ಕೃತಿಗಳಿವೆ: ಆಚಾರ್ಯ ಭಕ್ತಿ, ಚಾರಿತ್ರ ಭಕ್ತಿ, ನಂದೀಶ್ವರಭಕ್ತಿ, ನಿರ್ವಾಣಭಕ್ತಿ, ಯೋಗಿಭಕ್ತಿ, ಶ್ರುತಭಕ್ತಿ, ಪಂಚಗುರುಭಕ್ತಿ, (ತೀರ್ಥಂಕರ ಭಕ್ತಿ), ಚೈತ್ಯಭಕ್ತಿ, ಸಿದ್ಧ ಭಕ್ತಿ, (ಸಮಾಧಿ ಭಕ್ತಿ), ಶಾಂತಿ ಭಕ್ತಿ — ಈ ಎಲ್ಲಾ ಭಕ್ತಿಗಳಲ್ಲಿ ಆತ್ಮಸಿದ್ಧಿಯ ಹಾದಿಯನ್ನು, ಮುಕ್ತಾತ್ಮರ ಗುಣಗಳನ್ನು, ಅಂಥಾ ಹೆಸರಿನ ವಿಷಯ ನಿರೂಪಣೆಯನ್ನು ಕಾಣಬಹುದು. ಇವುಗಳಲ್ಲಿ ಕಾವ್ಯಾಂಶ ತುಂಬ ಗೌಣ.

ಸಂಸ್ಕೃತಾಃ ಸರ್ವಾ ಭಕ್ತಯಃ ಪೂಜ್ಯಪಾದ ಸ್ವಾಮಿ ಕೃತಾಃ ।
ಪ್ರಾಕೃತಾಸ್ತು ಕುಂದಕುಂದಾಚಾರ್ಯ ಕೃತಾಃ

ಎಂಬುದಾಗಿ ಹೇಳಿರುವುದರಿಂದ ಸಂಸ್ಕೃತ ದಶಭಕ್ತಿಗಳು ಪೂ.ಪಾ. ಕೃತವೆನ್ನ

ಬಹುದು. ಪ್ರಾಕೃತದಲ್ಲಿ ಕುಂದಕುಂದಾಚಾರ್ಯರು ಬರೆದಿರುವ ಈ ದಶಭಕ್ತಿಗಳಿಗೆ ಪ್ರಭಾಚಂದ್ರಾಚಾರ್ಯರ ಸಂಸ್ಕೃತ ಟೀಕೆಯೂ ಇದೆ. ಪೂ.ಪಾ. ರು ಸಾರಸಂಗ್ರಹ ಎಂಬೊಂದು ಗ್ರಂಥ ಬರೆದಿರುವ ವಿಚಾರವನ್ನು ಜಿನಸೇನಾಚಾರ್ಯರು ತಮ್ಮ ಧವಲಾಟೀಕೆಯಲ್ಲಿ ಹೇಳಿದ್ದಾರೆ. ಜಯಕೀರ್ತಿಯು ಛಂದೋನುಶಾಸನ ಆಧಾರದಿಂದ ಪೂಪಾ.ರು ಛಂದಶ್ಶಾಸ್ತ್ರ ಕೃತಿಯನ್ನೂ ರಚಿಸಿರಬೇಕೆಂದು ಊಹೆಯಿದೆ. ಸ್ವಪ್ನಾವಲೀ ಎಂಬ ಕಿರುಕೃತಿಯನ್ನೂ ಇವರು ರಚಿಸಿರಬೇಕೆಂದು ಭಾವಿಸಲಾಗಿದೆ.

"ಸಂಖ್ಯಾಪೇಕ್ಷೆಯಿಂದ [ಈ ಭಕ್ತಿಗಳು] ಹನ್ನೆರಡಾದರೂ ಧಾರ್ಮಿಕ ಕ್ರಿಯಾಕಲಾಪಗಳಲ್ಲಿ ಹೆಚ್ಚಾಗಿ ಉಪಯೋಗಿಸಲ್ಪಡತಕ್ಕವುಗಳು. ತೀರ್ಥಂಕರಭಕ್ತಿ, ಸಮಾಧಿ ಭಕ್ತಿಗಳ ಹೊರತಾಗಿ ಉಳಿದ ಹತ್ತು ಭಕ್ತಿಗಳಾಗಿರುವುದರಿಂದ ರೂಢಿಯಲ್ಲಿ 'ದಶಭಕ್ತಿ'ಯೆಂದು ಹೆಸರು ಬಂದಿದೆ. 1. ಸಿದ್ಧಭಕ್ತಿಯಲ್ಲಿ ಸಿದ್ಧಪರಮೇಷ್ಠಿಗಳ ಸ್ವರೂಪವು ಬಲುಚೆನ್ನಾಗಿ ವರ್ಣಿಸಲ್ಪಟ್ಟಿದೆ. 2. ಶ್ರುತ ಭಕ್ತಿಯಲ್ಲಿ ಮತಿಶ್ರುತ ಅವಧಿ ಮನಃಪರ್ಯಯ ಕೇವಲಗಳೆಂಬ ಐದು ಜ್ಞಾನಗಳ ವರ್ಣನೆಯೂ ಮೊದಲ ನಾಲ್ಕು ಜ್ಞಾನಗಳ ಭೇದಪ್ರಭೇದಗಳೂ ದ್ವಾದಶಾಂಗ ಚತುರ್ದಶಪೂರ್ವ ಶಾಸ್ತ್ರಗಳೂ ವರ್ಣಿಸಲ್ಪಟ್ಟಿವೆ. 3. ಚಾರಿತ್ರ ಭಕ್ತಿಯಲ್ಲಿ ಮೋಕ್ಷಪ್ರಾಪ್ತಿಗೆ ಸಾಧನಗಳಾದ ಸಾಮಾಯಿಕ ಛೇದೋಪಸ್ಥಾಪನಾ ಪರಿಹಾರ ವಿಶುದ್ಧಿ ಸೂಕ್ಷ್ಮ ಸಾಂಪರಾಯ ಯಥಾಖ್ಯಾತಗಳೆಂಬ ಐದು ಚಾರಿತ್ರಗಳು ವರ್ಣಿಸಲ್ಪಟ್ಟಿವೆ. 4. ಯೋಗಿಭಕ್ತಿಯಲ್ಲಿ ಮುನಿಗಳ ಸ್ವರೂಪವೂ ಅವರ ಸಮ್ಯಗ್ದರ್ಶನಾದಿ ಗುಣಗಳೂ ಋದ್ಧಿಗಳೂ ವರ್ಣಿಸಲ್ಪಟ್ಟಿವೆ. 5. ಆಚಾರ್ಯಭಕ್ತಿಯಲ್ಲಿ ಮುನಿಸಂಘಾಧಿಪತಿಗಳಾದ ಆಚಾರ್ಯರ ಸ್ವರೂಪಗುಣ ಮೊದಲಾದವುಗಳು ವರ್ಣಿಸಲ್ಪಟ್ಟಿವೆ. 6. ನಿರ್ವಾಣಭಕ್ತಿಯಲ್ಲಿ ತೀರ್ಥಂಕರರು ಮೊದಲಾದ ಮುಕ್ತಾತ್ಮರ ಕೈಲಾಸ ಸಮ್ಮೇದಶಿಖರ ಮೊದಲಾದ ನಿರ್ವಾಣಸ್ಥಾನಗಳೂ ಮಹಾವೀರ ಸ್ವಾಮಿಯ ಪಂಚಕಲ್ಯಾಣಗಳೂ ವರ್ಣಿಸಲ್ಪಟ್ಟಿವೆ. 7. ನಂದೀಶ್ವರ ಭಕ್ತಿಯಲ್ಲಿ ಎಂಟನೆಯದಾದ ನಂದೀಶ್ವರ ದ್ವೀಪದಲ್ಲಿರುವ ಐವತ್ತೆರಡು ಅಕೃತಿಮ ಚೈತ್ಯಾಲಯಗಳೂ ಜಿನಬಿಂಬಗಳೂ ಆಷಾಢಕಾರ್ತಿಕ ಫಾಲ್ಗುಣ ಮಾಸಗಳಲ್ಲಿ ಭವನವ್ಯಂತರ ಜ್ಯೋತಿಷ್ಕ ಕಲ್ಪವಾಸಿಕರೆಂಬ ದೇವತೆಗಳು ಆ ದ್ವೀಪಕ್ಕೆ ಹೋಗಿ ಮಾಡುವ ಪೂಜಾವೈಭವವೂ ಎಂಟು ಮಹಾ ಪ್ರಾತಿಹಾರ್ಯಗಳೂ ಮೂವತ್ತುನಾಲ್ಕು ಅತಿಶಯ ಮೊದಲಾದವುಗಳೂ ವರ್ಣಿಸಲ್ಪಟ್ಟಿವೆ. 8. ಚೈತ್ಯಭಕ್ತಿಯಲ್ಲಿ ಕೃತ್ರಿಮಾಕೃತಿಮ ಚೈತ್ಯಾಲಯಗಳೂ ಬಿಂಬಗಳೂ ಅರ್ಹತ್ಪರಮೇಶ್ವರರ ರಾಗದ್ವೇಷ ರಾಹಿತ್ಯವೂ ವರ್ಣಿಸಲ್ಪಟ್ಟಿವೆ. 9. ಶಾಂತಿಭಕ್ತಿಯಲ್ಲಿ ಶಾಂತಿ ತೀರ್ಥಂಕರರ ಸ್ತೋತ್ರವೂ ಇದರ ಪಠನದಿಂದ ನಾನಾಪ್ರಕಾರವಾದ ವಿಘ್ನವ್ಯಾಧಿಗಳು ನಾಶವಾಗುತ್ತವೆಂಬ ವಿಷಯವೂ ವರ್ಣಿಸಲ್ಪಟ್ಟಿದೆ. 10. ಪಂಚ ಗುರುಭಕ್ತಿಯಲ್ಲಿ ಅರಹಂತ ಸಿದ್ಧ ಆಚಾರ್ಯ ಉಪಾಧ್ಯಾಯ ಸಾಧುಗಳೆಂಬ ಪಂಚ

ಪರಮೇಷ್ಠಿಗಳ ಸ್ವರೂಪವೂ ವರ್ಣಿಸಲ್ಪಟ್ಟಿದೆ. 11. ತೀರ್ಥಂಕರ ಭಕ್ತಿಯಲ್ಲಿ ಶುಭ ಭಾವನೆಯೂ ಮುಕ್ತಿಪ್ರಾಪ್ತಿಯವರೆಗೆ ಜಿನೇಶ್ವರನಲ್ಲಿ ನಿಶ್ಚಲವಾದ ಭಕ್ತಿಯಿರಲೆಂಬುದೂ ಸಮಾಧಿ ಮರಣವಾಗಬೇಕೆಂಬ ಭಾವನೆಯೂ ವರ್ಣಿಸಲ್ಪಟ್ಟಿದೆ" (ಎ. ಶಾಂತಿರಾಜಶಾಸ್ತ್ರಿ, ಪುರೋವಾಕ್ಯ, ಪುಟ 4, 5, 6.) ಈ ದಶಭಕ್ತಿಗಳಿಗೆ ವಿಶಿಷ್ಟವಾದ ಪಠನ ಸಂದರ್ಭಗಳೂ ಇವೆ.

ಪೂಪಾ. ರ ಕೃತಿಶ್ರೇಣಿಯಲ್ಲಿ ಮುಡಿಯ ಮಾಣಿಕ್ಯ ಸರ್ವಾರ್ಥಸಿದ್ಧಿ. ಈ ಟೀಕಾಗ್ರಂಥ ಸಂಸ್ಕೃತದಲ್ಲಿದೆ. ಆಚಾರ್ಯ ಉಮಾಸ್ವಾತಿಗಳ ತತ್ತ್ವಾರ್ಥಸೂತ್ರ ಜೈನ ಭಗವದ್ಗೀತೆ. ಇದರ ಮೇಲೆ ಪ್ರಾಯಃ ಬಹುಮಟ್ಟಿನ ಹಿರಿಯ ಜೈನಾಚಾರ್ಯರು ವ್ಯಾಖ್ಯಾನ ಟೀಕೆ ಟಿಪ್ಪಣಿ ವೃತ್ತಿ ಮುಂತಾದವನ್ನು ಬರೆದಿದ್ದಾರೆ. ಪೂಪಾ. ರು ಕೂಡ ಸರ್ವಾರ್ಥಸಿದ್ಧಿ ಟೀಕೆ ಬರೆದಿದ್ದಾರೆ. ಮತ್ತು ತತ್ತ್ವಾರ್ಥಸೂತ್ರಕ್ಕೆ ದಿಗಂಬರಾಚಾರ್ಯರು ಬರೆದ ಟೀಕೆಗಳಲ್ಲಿ ಇದೇ ಮೊದಲನೆಯ ಹಾಗೂ ಮೇಲುಮಟ್ಟದ ಟೀಕೆಯೆಂದು ಮನ್ನಣೆ ಪಡೆದಿದೆ. ಜೈವ್ಯಾ. ದಂತೆ ಸರ್ವಾರ್ಥಸಿದ್ಧಿಯ ಶೈಲಿಯೂ ಸಂಕ್ಷಿಪ್ತ ಸ್ವರೂಪದ್ದು. ಇದರ ಪ್ರಭಾವ ದಿಗಂಬರಾಮ್ನಾಯಾಚಾರ್ಯರ ಮೇಲೆ ಅಲ್ಲದೆ ಶ್ವೇತಾಂಬರ ಆಚಾರ್ಯರ ಮೇಲೂ ಆಗಿದೆ. ಪೂಪಾ. ರ ತರುವಾಯ ಬಂದ ಟೀಕಾಕಾರರೂ ಸರ್ವಾರ್ಥಸಿದ್ಧಿಯನ್ನು ಪ್ರಮಾಣವೆಂದು ಮಾದರಿಯಾಗಿರಿಸಿಕೊಂಡು ಗೌರವಿಸಿದ್ದಾರೆ. ಅಕಲಂಕರೂ ವಿದ್ಯಾನಂದರೂ ಇದರ ಶಬ್ದ ಇಲ್ಲವೇ ವಾಕ್ಯಗಳನ್ನು ಅಳವಡಿಸಿಕೊಂಡಿದ್ದಾರೆ. ಸರ್ವಾರ್ಥಸಿದ್ಧಿ ಹಿಂದಿ, ಮರಾಠಿ ಮೊದಲಾದ ಭಾಷೆಗಳಿಗೆ ಅನುವಾದವಾಗಿದೆ. ಕನ್ನಡದಲ್ಲೂ ಈ ಪ್ರಯತ್ನ ನಡೆದಿದೆ. ತನ್ನ ಪುಷ್ಪದಂತ ಪುರಾಣದಲ್ಲಿ ಇಮ್ಮಡಿ ಗುಣವರ್ಮಕವಿ (1214) ಸ್ತುತಿಸಿರುವುದು:

> ನಿಸದಂ ತನ್ನ ನಿರಾಮಯಂ ಕೃತಿ ಜಗದ್ವಿಖ್ಯಾತಮಾದತ್ತು ಭಾ
> ವಿಸೆ ಸರ್ವಾರ್ಥದ ಸಿದ್ಧಿಯೊಳ್ ತೊಡರ್ದ ಬೋಧಂ ಭವ್ಯಸಂದೋಹಮಾ
> ಯ್ತು ಸುತತ್ತ್ವದೊಳಂಬುಪೆತ್ತುದು ಪದನ್ಯಾಸಂ ಗಡಾರಣ್ಣ ಬ
> ಣ್ಣಿ ಸಲೋರಂತೆ ಜಿನೇಂದ್ರಬುದ್ಧಿವಸರಂ ಶ್ರೀಪೂಜ್ಯಪಾದೇಶನಾ ॥ 1-24

ಪಾರ್ಶ್ವಪಂಡಿತಕವಿ (1222) ಪಾರ್ಶ್ವನಾಥ ಪುರಾಣದಲ್ಲಿ 'ಆ ಜಗದ್ವಿದಿತ ಮಿಥ್ಯಾದೋಷಮಂ ಶಬ್ದ ಸಾಧಕ ತತ್ತ್ವಾರ್ಥದ ವೃತ್ತಿಯಿಂದೆ ಕಳೆದಂ ಕಾರುಣ್ಯದುಗ್ಧಾರ್ಣವಂ' (1. 18) ಎಂದು ಕೊಂಡಾಡಿದ್ದಾನೆ. ಹತ್ತು ಅಧ್ಯಾಯಗಳೂ 5500 ಶ್ಲೋಕಗಳೂ ಇರುವ, ಸಂಸ್ಕೃತದಲ್ಲಿ ರಚಿತವಾಗಿರುವ ವಿಸ್ತೃತ ವ್ಯಾಖ್ಯಾನವಾದ ಸರ್ವಾರ್ಥಸಿದ್ಧಿಯನ್ನು ಭಾರತೀಯರೂ ಪಾಶ್ಚಾತ್ಯರೂ ಉದ್ಗ್ರಂಥವೆಂದು ಕೀರ್ತಿಸಿದ್ದಾರೆ.

"Philosophy is another branch in which Pujyapada evinced great interest, Sarvarthasiddhi is the famous work relating to

this field. This work exhibits the deep learning of Pujyapada together with his ability to express his ideas in a lucid manner. He has offered his own interpretation and this work is composed in dignified Sanskrit Style. It is a valuable contribution to the Jaina School of Thought."
(Dr. B. Shiek Ali, ಪೂರ್ವೋಕ್ತ.)

ಇದರಲ್ಲಿ ನಯ, ಸಾಂಖ್ಯ, ಸೌಗತ ಮುಂತಾದ ಅಜೈನ ಸಿದ್ಧಾಂತಗಳ ಪ್ರಸ್ತಾಪ ಬಂದಿದ್ದರೂ ವೇದಾಂತಿಗಳ ಅಥವ ಪೂರ್ವಮೀಮಾಂಸಕರ ಉಲ್ಲೇಖವಿಲ್ಲದಿರುವುದನ್ನು ವಿಶೇಷವಾಗಿ ಗಮನಿಸಬೇಕು. ಈ ಜಗತ್ತು ಬ್ರಹ್ಮ ಸೃಷ್ಟಿ ಎಂಬುದನ್ನು ಜೈನಧರ್ಮ ನಿರಾಕರಿಸಿದೆ. ವೇದಾಂತ ತತ್ವದೊಡನೆ ಸರ್ವಾರ್ಥಸಿದ್ಧಿಯ ಪ್ರತಿಪಾದನೆಯನ್ನು ಹೋಲಿಸಿ ವಿವೇಚಿಸುವುದು ಉಪಯುಕ್ತವಾಗಿರುತ್ತದೆಂಬ ಅಭಿಪ್ರಾಯವಿದೆ. ಜೀವ, ಅಜೀವ, ಆತ್ಮ, ಬ್ರಹ್ಮ, ಜ್ಞಾನ, ಧರ್ಮ, ಅಧರ್ಮ, ಆಸ್ರವ. ಸಂವರ, ನಿರ್ಜರ, ಮೋಕ್ಷ – ಇವನ್ನು ವಿಪುಲವಾಗಿ ಚರ್ಚಿಸಲಾಗಿದೆ.

ನ ದುಃಖಂ ನಸುಖಂ ಯದ್ವದ್ ಹೇತುರ್ದೃಷ್ಟಶ್ಚಿಕಿತ್ಸಿತೇ।
ಚಿಕಿತ್ಸಾಯಾಂತು ಯುಕ್ತಸ್ಯ ಸ್ಯಾದ್ದುಃಖಮಥವಾ ಸುಖಂ॥
ನ ದುಃಖಂ ನ ಸುಖಂ ತದ್ವದ್ ಹೇತುರ್ಮೋಕ್ಷ ಸಾಧನೇ।
ಮೋಕ್ಷೋಪಾಯೋ ತು ಯುಕ್ತಸ್ಯ ಸ್ಯಾದ್ದುಃಖಮಥವಾ ಸುಖಂ॥

ಎಂದು ಸರ್ವಾರ್ಥಸಿದ್ಧಿಯಲ್ಲಿದೆ. (ರೋಗದಿಂದ ಮುಕ್ತನಾಗುವುದಕ್ಕೆ ದುಃಖವೂ ಕಾರಣವಲ್ಲ ಸುಖವೂ ಕಾರಣವಲ್ಲ. ಚಿಕಿತ್ಸೆಯಲ್ಲಿ ತೊಡಗಿದಾಗ ದುಃಖವಾಗಲಿ ಸುಖವಾಗಲಿ ಮುಖ್ಯವಲ್ಲ. ರೋಗ ದೂರವಾಗುವುದೇ ಮುಖ್ಯ. ಹಾಗೆಯೇ ಮುಕ್ತಿಸ್ಥಾನವನ್ನು ಪಡೆಯಲು ಪ್ರಯತ್ನಿಸುವಾಗ ದುಃಖವಾಗಲೀ ಸುಖವಾಗಲಿ ಮುಖ್ಯವಲ್ಲ).

ನೂರಾರು ಜನ ಕನ್ನಡ ಕವಿಗಳು ಪಂಪನಿಂದ ಹಿಡಿದು ಇಂದಿನವರೆಗೆ ಪೂಪಾ.ರ ಮುಡಿಗೊಂದು ನುಡಿಮಲ್ಲಿಗೆಯಿಟ್ಟು, ಅಡಿಗೆ ಪೊಡಮಟ್ಟು ಹಾಡಿದ್ದಾರೆ. ಇವರನ್ನು ಕೊಂಡಾಡಿದ ದೊಡ್ಡ ಕವಿಗಡಣದಲ್ಲಿ ಆಧುನಿಕರನ್ನು ಬಿಟ್ಟು ಪ್ರಾಚೀನರಲ್ಲಿ ಕೆಲವರನ್ನು ಹೆಸರಿಸಿದ್ದೇನೆ; ಅವರೆಲ್ಲರ ಪದ್ಯಗಳನ್ನು ಉದಾಹರಿಸಿಲ್ಲ.

1. ಪಂಪ, 941, ಆದಿಪುರಾಣ 1–11
2. ಪೊನ್ನ, 960, ಶಾಂತಿಪುರಾಣ (ಪರೋಕ್ಷಪ್ರಸ್ತಾಪ) 1–29
3. ಚಾವುಂಡರಾಯ, 978, 1-7 (ಈ ಪದ್ಯ ಕೆಲವು ಹಸ್ತಪ್ರತಿಗಳಲ್ಲಿಲ್ಲವೆನ್ನುತ್ತಾರೆ).
4. ಶಾಂತಿನಾಥ, 1068, ಸುಕುಮಾರಚರಿತೆ 1–16

5. ನಾಗಚಂದ್ರ, 1105, ಅ. ಮಲ್ಲಿನಾಥ ಪುರಾಣ 1-14, ಪಂಪರಾಮಾಯಣ 1-11 (ಅದೇ ಪದ್ಯ ಪುನರುಕ್ತ).
6. ನಯಸೇನ, 1112, ಧರ್ಮಪರೀಕ್ಷೆ. 1-14, 1-24.
7. ಮೋಘಚಂದ್ರ, 1148, ಸಮಾಧಿಶತಕ ವ್ಯಾಖ್ಯಾನ (ಗದ್ಯಗ್ರಂಥ).
8. ಕರ್ಣಪಾರ್ಯ, 1160, ನೇಮಿನಾಥ ಪುರಾಣ, 1-10
9. ಜಗದ್ದಳ ಸೋಮನಾಥ, ಕರ್ಣಾಟಕ ಕಲ್ಯಾಣಕಾರಕ, ಕವಿಚರಿತೆ ಉದಾಹೃತ ಪದ್ಯ, ಪುಟ 303
10. ನೇಮಿಚಂದ್ರ, 1180 (ಅರ್ಧ) ನೇಮಿನಾಥಪುರಾಣ 1-24, ಲೀಲಾವತಿ 1-6
11. ಅಗ್ಗಳ, 1189, ಚಂದ್ರಪ್ರಭ ಪುರಾಣ, 1-20
12. ಬ್ರಹ್ಮಶಿವ, 1190, ಸಮಯಪರೀಕ್ಷೆ, 1-6,7,8
13. ಅಚಣ್ಣ, 1190, ವರ್ಧಮಾನ ಪುರಾಣ, 1-13
14. ಜನ್ನ, 1209, ಯಶೋಧರ ಚರಿತೆ 1.4, ಅನಂತನಾಥ ಪುರಾಣ 1-15 (ಅದೇ ಪದ್ಯ ಪುನರುಕ್ತ)
15. ಗುಣವರ್ಮ 2, 1215, ಪುಷ್ಪದಂತ ಪುರಾಣ 1-24
16. ಪಾರ್ಶ್ವಪಂಡಿತ, 1222, ಪಾರ್ಶ್ವನಾಥ ಪುರಾಣ 1-18, 1-20
17. ಕಮಲಭವ, 1235, ಶಾಂತೀಶ್ವರ ಪುರಾಣ, 1–20
18. ಮಹಾಬಲ, 1254, ನೇಮಿನಾಥ ಪುರಾಣ 1-13
19. ಕೇಶಿರಾಜ, 1260, ಪರೋಕ್ಷ ಪ್ರಸ್ತಾಪ, ಪ್ರಯೋಗದಲ್ಲಿ ಬಂದಿದೆ 112 ಸೂತ್ರ-1
20. ಕುಮುದೇಂದು, 1275, ಕುಮುದೇಂದು ರಾಮಾಯಣ 1-15
21. ನಾಗರಾಜ, 1331, ಪುಣ್ಯಾಸ್ರವ ಚಂಪು, 1-10
22. ಮಂಗರಾಜ 1, 1350, ಖಗೇಂದ್ರಮಣಿ ದರ್ಪಣ, 2-216
23. ಬಾಹುಬಲಿ ಪಂಡಿತ, 1352, ಧರ್ಮನಾಥ ಪುರಾಣ 1-18
24. ವೃತ್ತವಿಲಾಸ, 1370, ಧರ್ಮಪರೀಕ್ಷೆ 1–14
25. ಮಧುರ, 1385, ಧರ್ಮನಾಥ ಪುರಾಣ, 1-21
26. ಪಂಚಬಾಣ, 1614, ಭುಜಬಲಿಚರಿತೆ
27. ದೇವಪ್ಪ ಕವಿ, 1525, ರಾಮವಿಜಯ ಚರಿತ್ರೆ
28. ತೆರಕಣಾಂಬಿ ಬೊಮ್ಮರಸ, 1485, ಸನತ್ಕುಮಾರ ಚರಿತೆ 1-15
29. ಸಾಳ್ವ, ಸಾಳ್ವಭಾರತ (ನೇಮಿನಾಥ ಚರಿತೆ), 1–16
30. ಮಂಗರಸ 3,1508, ಜಯನೃಪಕಾವ್ಯ 1-8, ನೇಮಿಜಿನೇಶ ಸಂಗತಿ 1-16 ಶ್ರೀಪಾಲಚರಿತೆ 1–12

31. ದೊಡ್ಡಯ್ಯ, 1550, ಚಂದ್ರಪ್ರಭಚರಿತೆ, 1-24
32. ಬಾಹುಬಲಿ, 1560, ನಾಗಕುಮಾರ ಚರಿತೆ, 1-14
33. ಪಾಯಣವರ್ಣಿ, 1659, ಜ್ಞಾನಚಂದ್ರ ಚರಿತೆ 1-21
34. ಶ್ರುತಕೀರ್ತಿ, 1567, ವಿಜಯಕುಮಾರ ಚರಿತೆ 1-14
35. ಚಿಕ್ಕಪದ್ಮಣಶೆಟ್ಟಿ, 1581, ಅನಂತನಾಥ ಚರಿತೆ, 1-20
36. ದೇವರಸಪಂಡಿತ, 1650, ಗುರುದತ್ತ ಚರಿತೆ (ಹಸ್ತಪ್ರತಿ)
37. ಧರಣಿ ಪಂಡಿತ, 1650, ವರಾಂಗನೃಪಚರಿತೆ.

ಪೂಪಾ.ರಿಗೆ ಮಣಿಹವೆಸಗಿದ ಹಳೆಯ ಕನ್ನಡ ಕಬ್ಬಿಗರೋಳಿ ಸಿಡಿದಾಗಿದೆ. ಆದರೆ ರನ್ನ, ಬಂಧುವರ್ಮ, ಮೊದಲಾದ ಕೆಲವು ಕವಿಗಳು ಪೂಪಾ.ರ. ಹೆಸರೇ ಎತ್ತುವುದಿಲ್ಲವೆಂಬುದನ್ನೂ ನಾವು ನೋಡಬೇಕು. ಪೊನ್ನ ಕೂಡ ಪ್ರಾಸಂಗಿಕವಾಗಿ ತನ್ನ ಗುರು ಜಿನಚಂದ್ರರಿಗೆ ಮಾಡುವ ಸ್ತುತಿ ಪದ್ಯದಲ್ಲಿ ಪೂಪಾ.ರ ನೆನಪನ್ನು ಹೊಳೆಯುವಂತೆ ಮಾಡಿದ್ದಾನೆಯೇ ಹೊರತು ಅದು ನೇರ ನೆನಕೆಯಲ್ಲ. ಇನ್ನು, ಪಂಪನನ್ನೂ ಸೇರಿಸಿದಂತೆ ಹಲವು ಕವಿಗಳು ಜೈನ ಪೂರ್ವಾಚಾರ್ಯರನ್ನು ಗೌರವದಿಂದ ಸ್ಮರಿಸಬೇಕೆಂಬ ಸಂಪ್ರದಾಯಕ್ಕೆ ಕಟ್ಟುಬಿದ್ದು ಪೂಪಾ.ರನ್ನು ಹೆಸರಿಸಿದ್ದಾರೆಯೇ ಹೊರತು ಅವರ ನೆನಪಿನಲ್ಲಿ ಮತ್ತಾವ ಹೆಚ್ಚಳವೂ ನನಗೆ ಕಂಡುಬರಲಿಲ್ಲ; ಹಾಜರಾತಿ ತೆಗೆದುಕೊಂಡಂತೆ ಕೆಲವರು ಆಚಾರ್ಯರ ಪಟ್ಟಿ ಕೊಟ್ಟಿರುವುದು ಸಷ್ಟಯಾಗಿದೆ. ಕೆಲವರು ತಾವು ಬರೆದ ಒಂದೇ ಕಾವ್ಯದಲ್ಲಿ ಎರಡು ಮೂರು ಪದ್ಯಗಳಲ್ಲಿ, ಕೆಲವರು ತಾವು ಬರೆದ ಎರಡು ಮೂರು ಕಾವ್ಯಗಳಲ್ಲಿಯೂ ಪೂಪಾ.ರನ್ನು ಜ್ಞಾಪಿಸಿಕೊಂಡಿದ್ದಾರೆ. ಇದೇ ರೀತಿ ಸಂಸ್ಕೃತ ಕವಿಗಳೂ ಸ್ಮರಣೆ ಮಾಡಿದ್ದಾರೆ. ನನ್ನ ಗಮನಕ್ಕೆ ಬಂದಿರುವ ಹೆಸರುಗಳು :

1. ಪುನ್ನಾಟ ಸಂಘದ ಜಿನಸೇನರು, 783, ಹರಿವಂಶ 1-3
2. ಜಿನಸೇನಾಚಾರ್ಯರು, 837, ಧವಲಾಟೀಕೆ
3. ಆಚಾರ್ಯವಾದಿರಾಜ ಸೂರಿ, 11 ಶ.ದ ಪೂರ್ವಾರ್ಧ, ಪಾರ್ಶ್ವನಾಥ ಸರ್ಗ, 1
4. ಮಹಾಕವಿ ಧನಂಜಯ
5. ಆಚಾರ್ಯ ಜಯಕೀರ್ತಿ, 11 ಶತಮಾನ, ಛಂದೋನುಶಾಸನ
6. ಆಚಾರ್ಯ ಶುಭಚಂದ್ರ, 1551, ಪಾಂಡವ ಪುರಾಣ
7. ಅರ್ಹದ್ದಾಸ, 13 ಶತಮಾನ, ಮುನಿಸುವ್ರತ ಕಾವ್ಯ, 1-10
8. ಇಂದ್ರಭೂತಿ, ಸಮಯಭೂಷಣ
9. ಸೋಮದೇವ ಸೂರಿ, ಯಶಸ್ತಿಲಕ ಚಂಪೂ

10. ದೇವಸೇನ, ದರ್ಶನಸಾರ

11. ಆಚಾರ್ಯ ಶುಭಚಂದ್ರ, ಜ್ಞಾನಾರ್ಣವ 1-15

ಕೆಲವು ಕನ್ನಡ ಕವಿಗಳಂತೆ ಕೆಲವು ಸಂಸ್ಕೃತ ಕವಿಗಳು ಪೂಜ್ಯಪಾ.ರನ್ನು ನೆನೆದಿರುವುದರಲ್ಲಿ ಔಚಿತ್ಯವಿದ್ದರೂ ಸಾರ್ಥಕತೆಯಿಲ್ಲ. ನಮಗೆ ಬೇಕಾದ ಮಾಹಿತಿಗಳನ್ನು ಒದಗಿಸುವುದಿಲ್ಲ. ಇವಲ್ಲದೆ ಶ್ರವಣಬೆಳ್ಗೊಳ ಮೊದಲಾದ ಕೆಲವು ಶಾಸನಗಳಲ್ಲೂ ಪೂಜ್ಯಪಾ.ರನ್ನು ತುಂಬಾ ಭಕ್ತಿಗೌರವ ಪೂಜ್ಯತೆಯಿಂದ ಸ್ಮರಿಸಿದ್ದರೂ ಪೂಜ್ಯಪಾ.ರ ಇತಿವೃತ್ತ ಕಟ್ಟುಕಥೆಗಳ ಕಟ್ಟಡದಲ್ಲಿ ಕದಲಿಸಲಾಗದಂತೆ ಕುಳಿತುಬಿಟ್ಟಿದೆ. ವಸ್ತುಸ್ಥಿತಿಗಿಂತ ಹೇಳಿಕೆ ಪ್ರಹೇಳಿಕೆಗಳು ಬಾಯಿಂದ ಬಾಯಿಗೆ, ಕವಿಯಿಂದ ಕವಿಗೆ ಕೈಕಾಲು ಮುಖಮೈ ಪಡೆದುಕೊಂಡು ಹಿಗ್ಗಿವೆ. ಜತೆಗೆ ಪೂಜ್ಯಪಾ.ರಿಗೆ ಅಥವಾ ಅವರ ಗುಣಗಳಿಗೆ ಇತರ ಶ್ರೇಷ್ಠ ಆಚಾರ್ಯರನ್ನು ಹೋಲಿಸಿರುವುದುಂಟು. ಕುಂದಕುಂದಾನ್ವಯ ಮೂಲಸಂಘ ಪುಸ್ತಕ ಗಚ್ಛ ದೇಶಿಯಗಣದ ಮುಖಂಡರಾದ ಮೇಘಚಂದ್ರ ತ್ರೈವಿದ್ಯರನ್ನು 'ತತ್ವಜ್ಞಾನದಲ್ಲಿ ಜಿನಸೇನ ವೀರಸೇನರಿಗೆ ಸಮಾನರು, ತರ್ಕದಲ್ಲಿ ಅಕಲಂಕದೇವರಿಗೆ ಸಮಾನರು, ವ್ಯಾಕರಣದಲ್ಲಿ ಪೂಜ್ಯಪಾದರಂತೆ ನಿಷ್ಣಾತರು' ಎಂದು ಶ್ರಬೆ 123ನೆಯ ಶಾಸನದಲ್ಲಿ (1115) ಉಲ್ಲೇಖಿಸಿದೆ.

ಸಾರಾಂಶ: ಪೂಜ್ಯಪಾ.ರನ್ನು ಕುರಿತು ಇದುವರೆಗಿನ ವಿವೇಚನೆಯ ತಿರುಳು :

1. ಪೂಜ್ಯಪಾ.ರು ಕುಂದಕುಂದ ಸಮಂತಭದ್ರರ ತರುವಾಯದವರು. ಪ್ರಾಯಃ ಕವಿಪರಮೇಷ್ಠಿಗಳು ಇವರ ಸಮಕಾಲೀನರಿರಬಹುದು. ಇವರ ಕಾಲ ನಿರ್ಧಾರ ಕ್ಲಿಷ್ಟವಾಗಿದೆ. ಸುಮಾರು 5ನೆಯ ಶತಮಾನದ ಉತ್ತರಾರ್ಧದವರು. ಕನ್ನಡನಾಡಿನವರು, ಮೈಸೂರು ಜಿಲ್ಲೆಯವರು. ಕನ್ನಡದಲ್ಲಿ ಏನೂ ಬರೆದಂತಿಲ್ಲ. ದೇವನಂದಿ, ಜಿನೇಂದ್ರಬುದ್ಧಿ, ಪೂಜ್ಯಪಾ - ಹೀಗೆ ವಿವಿಧ ಹೆಸರುಗಳಿವೆ. ಈ ಹೆಸರುಗಳಿಂದಾಗಿಯೂ ಇವರ ಸಂಬಂಧವಾಗಿ ಅನೇಕ ಚಮತ್ಕಾರಿಕ ದಂತಕಥೆಗಳು ಪ್ರಚಲಿತದಲ್ಲಿವೆ.

2. ತಮ್ಮ ಸಮಕಾಲೀನ ಕರ್ನಾಟಕ, ತಮಿಳುನಾಡು, ತೆಲುಗುದೇಶ ಮತ್ತು ಉತ್ತರ ಭಾರತವನ್ನು (ಕಾಲುನಡಿಗೆಯಲ್ಲಿ) ಪ್ರವಾಸಿಸಿದ್ದಾರೆ. ಕೊಳ್ಳೇಗಾಲದಿಂದ ವಿದೇಹದವರೆಗಿನ ಪಾದಯಾತ್ರೆಯಿಂದ ಅವರ ಪಾದಮಹಿಮೆ ಪವಾಡವಾಗಿ ರಂಗೇರಿತು. ಮನುಷ್ಯರು ಮಹಾತ್ಮರಾದರು. ಪಂಪ, ನಯಸೇನ, ಅಗ್ಗಳ, ಕಮಲಭವ, ನಾಗರಾಜ - ಇವರಿಗೆಲ್ಲಾ ಪೂಜ್ಯಪಾ.ರ ಪಾದಗಳ ಮೇಲೆ ಕಣ್ಣು - 'ಪೂಜ್ಯಪಾ.ರ ಪಾದಗಳು ಶಾಶ್ವತ ಪದವನ್ನೀಯಲಿ' ಎಂದು ಬೇಡುತ್ತಾರೆ. ಈ ಭಾವನೆ ಬೆಳೆದು ಬಲಿತು ಪೂಜ್ಯಪಾ.ರು ಗಗನಗಮನ ಮಹಾತ್ಮೆ ಪಡೆದು ವಿದೇಹ ಕ್ಷೇತ್ರಕ್ಕೆ ವಿಹಾರ ಹೋಗಿ ಬಂದ ಕಾಲ್ಪನಿಕ ವಿಚಾರವನ್ನು ಚಾವುಂಡರಾಯನಿಂದ ಪಾಯಣವರ್ಣಿವರೆಗೆ ಹಬ್ಬಿಸಿದ್ದಾರೆ.

3. (ಅ) ಪೂಪಾ.ರ ಬದುಕಿನ ಸುತ್ತ ಇಂಥ ಅವಾಸ್ತವ ಕಾಲ್ಪನಿಕ ಪರಿವೇಷವೊಂದು ಪ್ರಭಾವಳಿಯಂತೆ ಗೂಡು ಕಟ್ಟಿಕೊಂಡಿತು. ಇದರೊಳಗೆ ಮತ್ತಷ್ಟು ಮರಿಗಳು ಹುಟ್ಟಿಕೊಂಡುವು. ಪೂಪಾ.ರಿಗೆ ಪಾಣಿನಿಯೊಡನೆ ಬಂಧುತನವನ್ನು ಆರೋಪಿಸಿದ್ದು ಹೀಗೆ: ಪೂಪಾ.ರು ಶಬ್ದಪಾರಗರು. ಆದರಿಂದ ಮಹಾ ವೈಯಾಕರಣಿ ಪಾಣಿನಿಯೊಡನೆ ಇಂಥ ಸಂಬಂಧ ಕಟ್ಟಿ ಪೂಪಾ.ರ ಮೇಲ್ಮೆಯನ್ನು ಸ್ಥಾಪಿಸಲೆತ್ನಿಸಿದರು. ವೃತ್ತವಿಲಾಸ ಮೊದಲಾದ ಕವಿಗಳು ಇದನ್ನು ನಿಜವೆಂದೇ ಸ್ವೀಕರಿಸಿರುವುದು ಆಭಾಸವಾಗಿದೆ.

(ಆ) ಪಾಣಿನಿಯೊಡನೆ ಸಂಬಂಧ ಕಲ್ಪಿಸಿದಂತೆ, ನಾಗಾರ್ಜುನನ ಜತೆಗೂ ನಂಟಸ್ತಿಕೆಯನ್ನು ಸೃಷ್ಟಿಸಿದ್ದಾರೆ. ಪೂಪಾ.ರು ಕಲ್ಯಾಣಕಾರಕವನ್ನು ರಚಿಸಿದ್ದರಿಂದ, ಅವರ ವೈದ್ಯಜ್ಞಾನಾಧಿಕ್ಯವನ್ನು ಲೋಕಕ್ಕೆ ಸಾರಲು ನಾಗಾರ್ಜುನನೊಡನೆ ನಿಜದೂರವಾದ ನಂಟನ್ನು ಗಂಟುಹಾಕಿದ್ದಾರೆ. ಬಾಹುಬಲಿ ಇದು ನಿಜವೆಂದು ನಂಬಿ ಮೋಸ ಹೋಗಿದ್ದಾನೆ.

(ಇ) ಇವರ ಕಾಲುತೊಳೆವ ನೀರು ಚಿಮುಕಿಸಿದರೆ ಲೋಕ ಚಿನ್ನವಾಗುತ್ತದೆಂಬುದು ಅವೈಜ್ಞಾನಿಕ ಉತ್ಪ್ರೇಕ್ಷಾಲಂಕಾರಕ್ಕೆ ಅತ್ಯುತ್ತಮ ಉದಾಹರಣೆ.

4. ಪೂಪಾ.ರು ಮಹಾಮೇಧಾವಿಗಳೆಂಬುದು ಪ್ರಶ್ನಾತೀತ ವಿಚಾರ. ಅವರ ಅಗಾಧ ಬುದ್ಧಿಶಕ್ತಿಯನ್ನು ಬಹುಶ್ರುತತ್ವವನ್ನು. ಹಲವು ಕ್ಷೇತ್ರಗಳಲ್ಲಿ ಅವರಿಗಿದ್ದ ಪ್ರವೇಶ ಮತ್ತು ಪರಿಶ್ರಮಗಳನ್ನು ಕನ್ನಡ ಸಂಸ್ಕೃತ ಪ್ರಾಕೃತ ಲೇಖಕರು ನಮಸ್ಕಾರಪೂರ್ವಕವಾಗಿ ನೆನೆದಿದ್ದಾರೆ. ಕವಿಗಮಕಿವಾದಿ (ಶಾಂತಿನಾಥಕವಿ), ವಾಣೀವಿಲಾಸ ಪದವಾಕ್ಯಕೋವಿದ (ನೇಮಿಚಂದ್ರ). ಅನೂನಗುಣಾಂಬುಧಿ (ಅಚಣ್ಣ), ಅಚಿಂತ್ಯಮಹಿಮಾ (ಆಚಾರ್ಯ ವಾದಿರಾಜ) ಪೂಜ್ಯಪಾದಃ ಸದಾ ಪೂಜ್ಯಪಾದಃ (ಶುಭಚಂದ್ರ) – ಎಂಬ ನೆಗಳ್ತೆಯ ಗುಣಾವಳಿ ಅವರ ಬುದ್ಧಿಶಾಲಿತ್ವವನ್ನು ಕೈವಾರಿಸುತ್ತವೆ. ಜತೆಗೆ ಅವರು ಕರುಣಾಮಯಿ, ಲೋಕಕಾರುಣ್ಯ ಬುದ್ಧಿಯಿಂದ ಅಹಿಂಸಾ ಔಷಧಿಗಳಿಂದ ಮಾಡಿದ ಚಿಕಿತ್ಸಕ ವಿಧಾನ ಅನನ್ಯವಾದುದು.

5. ಪೂಪಾ.ರು ಸೃಜನಶೀಲ ಶಕ್ತಿಯ ಮಹಾನ್ ಲೇಖಕರು. ಇಂದ್ರಭೂತಿ ತನ್ನ ಸಮಯಭೂಷಣದಲ್ಲಿ ಏಲಾಚಾರ್ಯಃ ಪೂಜ್ಯಪಾದೊ ಸಿಂಹನಂದೀ ಮಹಾಕವಿ :- ಎಂದು ಹೇಳಿದ್ದಾನೆ. ಅಂದರೆ ಕುಂದಕುಂದರು, ಪೂಜ್ಯಪಾದರು, ಜಟಾಸಿಂಹನಂದಿ ಆಚಾರ್ಯರು–ಇವರು ಮೂವರೂ ಮಹಾಕವಿಗಳು. ಬ್ರಹ್ಮಶಿವ, ಪಾರ್ಶ್ವಪಂಡಿತ, ಗುಣವರ್ಮ, ವೃತ್ತವಿಲಾಸ ಮೊದಲಾದ ಕವಿಗಳೂ ಪೂಪಾ.ರ ರಚನಾ ಸಾಮರ್ಥ್ಯವನ್ನು ಸ್ತುತಿಸಿದ್ದಾರೆ. ಅವರ ಕೃತಿರಚನೆಯ ವೈಶಿಷ್ಟ್ಯವೆಂದರೆ ಒಂದಕ್ಕೊಂದು ಸಂಬಂಧಪಡೆದ ಕ್ಷೇತ್ರಗಳಲ್ಲಿ ತೋರಿರುವ ಪರಿಣತಿ. ವ್ಯಾಕರಣ

ಪಂಡಿತರು, ವೈದ್ಯವಿದ್ಯೆಯಲ್ಲಿ ನಿಪುಣರು. ಬಲನಾಡಿ ಹಿಡಿದು ನೋಡುವುದು ಉತ್ತರಧ್ರುವ, ಜನನಾಡಿ ಹಿಡಿದು ನೋಡುವುದು ಪಡುವಣ ಧ್ರುವ. ಸ್ವತಂತ್ರ ಕೃತಿಗಳಲ್ಲದೆ ಟೀಕೆ, ವ್ಯಾಖ್ಯಾನ ಬರೆದಿದ್ದಾರೆ. ಉಪಲಬ್ಧ ಕೃತಿಗಳಲ್ಲದೆ ಅನುಪಲಬ್ಧ ಕೃತಿಗಳನ್ನೂ ದೃಷ್ಟಿಯಲ್ಲಿರಿಸಿ ಹೇಳುವುದಾದರೆ. ಛಂದಸ್ಸಿನ ವಿಚಾರದಲ್ಲೂ ಕಾಣಿಕೆ ತೋರಿದ್ದಾರೆ. (ಮಂಗರಸ 3, ನೇಮಿಜಿನೇಶ ಸಂಗತಿ).

6. (ಅ) ಪೂಪಾ.ರ ಮತ್ತು ಅವರ ಕೃತಿಗಳ ಸಂಬಂಧವಾದ ವಿಪುಲ ವಾಙ್ಮಯ ಇದೆ. ಪೊನ್ನನು ತನ್ನ ಗುರು ಜಿನಚಂದ್ರರ ವಿಚಾರವಾಗಿ ಸ್ತುತಿಸುತ್ತಾ ಹೇಳಿದ 'ಪೂಜ್ಯಪಾದ ಚರಿತ್ರಂ' (1-29) ಎಂಬುದನ್ನು ಉಲ್ಲೇಖಿಸಿ, ಜಿನಚಂದ್ರರು 'ಪೂಜ್ಯಪಾದ ಚರಿತ್ರೆ' ಎಂಬ ಕೃತಿಯನ್ನೂ ರಚಿಸಿದ್ದರೆಂಬ ಅಭಿಪ್ರಾಯವಿದೆ. ನಾನು ಇದನ್ನು ಒಪ್ಪುವುದಿಲ್ಲ. ಅದು ವ್ಯಕ್ತಿ ಚಾರಿತ್ರ್ಯ ಕುರಿತ ವಿಶೇಷಣವೇ ಹೊರತು ಕೃತಿನಿರ್ದೇಶನವಲ್ಲ. ದೇವಚಂದ್ರ ಕವಿ 'ಪೂಜ್ಯಪಾದ ಚರಿತೆ' ರಚಿಸಿದ್ದಾನೆಂಬುದು ಗಮನಿಸತಕ್ಕ ವಿಚಾರ.

(ಆ) ಪೂಪಾ.ರ ಕೃತಿಗಳಿಗೆ ವೃತ್ತಿ ವ್ಯಾಖ್ಯಾನಗಳಿವೆ. ಅಭಯನಂದಿ (ಸು 10 ಶ) ಮಹಾವೃತ್ತಿ, ಪ್ರಭಾಚಂದ್ರ ಶಬ್ದಾಂಭೋಜಭಾಸ್ಕರನ್ಯಾಸ, ಆರ್ಯ ಶ್ರುತ ಕೀರ್ತಿ (12 ಶ) ಪಂಚವಸ್ತು ಪ್ರಕ್ರಿಯಾ, ಮೇಘಚಂದ್ರ (1148) ಸಮಾಧಿಶತಕ ವ್ಯಾಖ್ಯಾನ. ಚಾರುಕೀರ್ತಿ ಪಂಡಿತಾಚಾರ್ಯ (ಸು. 1150)

ಶಬ್ದಾರ್ಣವ ಪ್ರಕ್ರಿಯಾ, ಸೋಮದೇವ (1170) ಶಬ್ದಾರ್ಣವ ಚಂದ್ರಿಕಾ. ಜಗದ್ದಳ ಸೋಮನಾಥ (1175) ಕರ್ನಾಟಕ ಕಲ್ಯಾಣಕಾರಕ–ಇತ್ಯಾದಿ.

7. ಪೂಪಾ.ಎಂಬ ಹೆಸರಿನ ಆಚಾರ್ಯರು ಒಬ್ಬರಿಗಿಂತ ಹೆಚ್ಚಾಗಿರಬಹುದೆಂಬ ಸೂಚನೆಯಲ್ಲಿ ಸತ್ಯಾಂಶ ಇದೆಯೆಂದು ತೋರುತ್ತದೆ.

8. ಪೂಪಾ.ರನ್ನು ಕುರಿತು ಇದುವರೆಗೆ ವಿಪುಲವಾದ ಬರವಣಿಗೆ ಬಂದಿದೆಯಾದರೂ ಅದು ಚದರಿಹೋಗಿದೆ. ಕನ್ನಡ ಇಂಗ್ಲಿಷ್ ಹಿಂದಿ ಭಾಷೆಗಳಲ್ಲಿರುವ ಸಾಮಗ್ರಿಯನ್ನು ಪೃಥಕ್ಕರಿಸಿ ಐತಿಹಾಸಿಕ ಪ್ರಜ್ಞೆಯಿಂದ ವಸ್ತುನಿಷ್ಠವಾಗಿ ವಿವೇಚಿಸುವುದಕ್ಕೆ ವೇದಿಕೆ ಸಿದ್ಧವಾಗಿದೆ.

ಪೂಜ್ಯಪಾದರ ಸಂಬಂಧವಾಗಿ ಸಂಶೋಧನೆಗೆ ಸಹಾಯಕ ಗ್ರಂಥಸೂಚಿ :

1. Dr. F. Kiclhorn, on the Jainendra-Vyakarana, Indian Antiquary X, PP 75–79, March 1881
2. K. B. Pathak, Pujyapada and the authoraship of Jainendra Vyakarna, Indian Antiquary, XII, PP 19-21 January 1883

3. Dr. B. Sheik Ali, History of the Western Ganges, 1976
4. S. Srikanta Sastry, A) quarterly Journal of Mythic Society, XL, P 68
B) Jain Traditions in Rajavali Kathe Jaina Antiquary, VII-1
5. Jyoti Prasad Jain, Jaina Gurus of the name Pujyapada, Jaina Antiquary, XVI-I, II, June 1950 PP 1-6 December 1950 PP 46-53, XVII-I June 1951
6. ಜಿನೇಂದ್ರವರ್ಣಿ, ಜೈನೇಂದ್ರ ಸಿದ್ಧಾಂತಕೋಶ, ಭಾರತೀಯ ಜ್ಞಾನಪೀಠ ಪ್ರಕಾಶನ ಸಂಪುಟ 2.
7. ಎ. ಶಾಂತಿರಾಜಶಾಸ್ತ್ರಿ, (ಕರ್ನಾಟಕ ಟೀಕಾಕಾರರು ಮತ್ತು ಸಂಪಾದಕರು), ದಶಭಕ್ತಿ 1934
8. ಕೆ. ಭುಜಬಲಿಶಾಸ್ತ್ರಿ, ಸಂಸ್ಕೃತ ವಾಙ್ಮಯಕ್ಕೆ ಜೈನಕವಿಗಳ ಕಾಣಿಕೆ, ಪುಟ 36-43, 1971.
9. ಫೂಲಚಂದ್ರಶಾಸ್ತ್ರಿ, (ಸಂ), ಸರ್ವಾರ್ಥಸಿದ್ಧಿ, ವಾರಣಾಸಿ, ಪುಟ 84, 1955
10. ಪಂಡಿತ ನಾಥೂರಾಮ ಪ್ರೇಮಿ, ಜೈನ ಸಾಹಿತ್ಯ ಔರ್ ಇತಿಹಾಸ್ (ಹಿಂದಿ), ಪುಟ 22, ಎರಡನೆಯ ಮುದ್ರಣ, ಮುಂಬಯಿ 1956.
11. ಡಾ. ಹಿರಾಲಾಲ್ ಜೈನ್, ಭಾರತೀಯ ಸಂಸ್ಕೃತಿಗೆ ಜೈನಧರ್ಮದ ಕೊಡುಗೆ (ಹಿಂದಿ) ಕನ್ನಡ ಅನುವಾದ, ಮಿರ್ಜಿ ಅಣ್ಣಾರಾಯ, 1971
12. ಡಾ. ಆ. ನೇ. ಉಪಾಧ್ಯೆ, Chamundaraya and his Literary Predecessors, Journal of Karnataka University. IV-2, June 1960
13. B. A. Saletore Medeival Jainism, P 23, 1938
14. Dr. P. B. Desai Jainism in South India and some Jain Epigraphs, 1957.
15. D. C. Sarkar Successors of Satavahanas, P-300
16. Epigraphia Carnatica, II:
17. ದೇವಚಂದ್ರ (1770-1842) : ರಾಜಾವಳೀ ಕಥೆ, (ಹಸ್ತಪ್ರತಿ)
18. ರಾ. ನರಸಿಂಹಾಚಾರ್: ಕರ್ನಾಟಕ ಕವಿಚರಿತೆ, ಪ್ರಥಮ ಸಂಪುಟ, ಪರಿಶೋಧಿತ ಮುದ್ರಣ 1961 ಪುಟ 5, 6, 7,

19. Dr. G. Buhler: Book Notice (of Prof. P. Peterson's A Second Report of Operations in Search of Sanskrit MSS in the Bomby Circle JBBRAS 1884), IA XIV, 1885 P.355

20. ಆದಿಪುರಾಣ, ಶಾಂತಿಪುರಾಣ, ಚಾವುಂಡರಾಯಪುರಾಣ ಮೊದಲಾದ ಹಲವಾರು ಕನ್ನಡ ಜೈನ ಪುರಾಣಕಾವ್ಯಗಳು.

21. ಶಾಕಟಾಯನ ವ್ಯಾಕರಣಮ್, ಸಂ: ಪಂಡಿತ ಶಂಭುನಾಥತ್ರಿಪಾಠಿ ಭಾರತೀಯ ಜ್ಞಾನಪೀಠ, 1971

ವಡ್ಡಾರಾಧನೆಯಲ್ಲಿಯ ಛಂದಗಳು

—ಸೀತಾರಾಮ ಜಾಗೀರ್‌ದಾರ್

I

ಭಾನುಮುನಿಯ ವಾಕ್ಯಾಮೃತದಿಂದಲೇ ‘ಕೃತಿ’ ರೂಪತಳೆದ[1] ಕನ್ನಡದ ಪ್ರಾಚೀನ ಗ್ರಂಥಗಳಲ್ಲಿ ಒಂದಾದ “ವಡ್ಡಾರಾಧನೆ” ಅಥವಾ “ಉಪಸರ್ಗಕೇವಳಿಯ ಕಥೆ”[2] ತನ್ನ ಹೊಟ್ಟೆಯಲ್ಲಿ ಕೆಲವು ಪ್ರಾಕೃತ, ಸಂಸ್ಕೃತ ಮತ್ತು ಕನ್ನಡ ಪದ್ಯಗಳನ್ನು

---

1 ‘ವಡ್ಡಾರಾಧನೆ’ ಗ್ರಂಥದ ಕರ್ತೃ, ಕಾಲ, ದೇಶ–ಬಿಟ್ಟಾರೆ ಇತಿವೃತ್ತದ ಸಂಗತಿ ಇನ್ನೂ ಸರಿಯಾಗಿ ನಿರ್ಧಾರವಾಗಿಲ್ಲ. ಡಾ॥ ಡಿ. ಎಲ್. ನರಸಿಂಹಾಚಾರ್ ಹಾಗೂ ಡಾ॥ ಆ. ನೆ. ಉಪಾಧ್ಯೆ ಒಂದೊಂದು ಬಗೆಯ ಅಭಿಪ್ರಾಯಗಳನ್ನು ತಳೆದಿದ್ದಾರೆ. ಈ ದಿಶೆಯಲ್ಲಿ ಮೈಸೂರಿನ ಕನ್ನಡ ಅಧ್ಯಯನ ಸಂಸ್ಥೆಯಲ್ಲಿರುವ (ಮೂಡಬಿದ್ರೆಯ ಜೈನಮಠದ ಗ್ರಂಥಭಂಡಾರದ ತಾಳೆಓಲೆಯ ಪ್ರತಿ) ಕ್ರಿ. ಶ. ೧೮೦೩ರ ನವೆಂಬರ್ ೧೪ರಂದು ಸಂಪೂರ್ಣಗೊಂಡ ತಾಳೆಓಲೆಯ ಹಸ್ತಪ್ರತಿಯ ನಕಲುಗಳಾದ K. A. 297 ಕಾಗದ ಪ್ರತಿ ಮತ್ತು ಮೈಕ್ರೋಫಿಲ್ಮ್ ಪ್ರತಿ N. 1628—ಹೊಸ ಬೆಳಕನ್ನು ಬೀರುತ್ತವೆ. ಇಲ್ಲಿರುವ ಈ ಪುಷ್ಪಿಕಾಗದ್ಯವನ್ನು ನೋಡಿ :

ಈ ಪೇಳ್ದ ಪತ್ತೊಂಭತ್ತು ಕಥೆಗಳು ಶಿವಕೋಟ್ಯಾಚಾರ್ಯರ್ ಪೇಳ್ದ ವಡ್ಡಾರಾಧನೆಯ ಕವಚವ್ರ ಮಂಗಳಮಹಾ । ಸಂಪೂರ್ಣಂ । ಶುಭಮಸ್ತು ॥

ಸ್ವಸ್ತಿ ಶ್ರೀಮತು ಸಕವರ್ಷ ೧೭೨೫ ಸುಭಾನುಸಂವತ್ಸರದ ಕಾ ಬಾ ಅಮಾವಾಸೆ ಬುಧವಾರದಲು । ಸ್ವಸ್ತಿ ಶ್ರೀಮದ್ರಾಯರಾಜಗುರು ಮಂಡಳಾಚಾರ್ಯರ್ ಮಹಾವಾದವಾದೀಶ್ವರ ರಾಯವಾದಿಪಿತಾಮಹ ಸಕಳವಿದ್ವಜ್ಜನಚಕ್ರವರ್ತಿಗಳುಮಪ್ಪ ಶ್ರೀ ಚಿಕ್ಕಪಂಡಿತ ದೇವರ ಪ್ರಿಯಗುಡ್ಡನು ಕ್ಷೇಮಪುರದ ಅಂಕಿಯಂಣಸೆಟ್ಟಿಯ ಮಗ ಹರಿಯಂಣನು ಯಮನಿಯಮ ಸ್ವಾಧ್ಯಾಯ ಧ್ಯಾನ ಮೌನಾನುಷ್ಠಾನ ಜಪತಪ ಸಮಾಧಿಶೀಲಗುಣ ಸಂಪನ್ನರುಮಪ್ಪ ಶ್ರೀ ಭಾನುಮುನಿಗಳ ವಾಕ್ಯಾಮೃತದಿಂ ಬರೆದುಕೊಟ್ಟನು. ಬರೆಸಿಕೊಟ್ಟಾತನು ಓಜಣ್ಣಸೆಟ್ಟಿಯರ ಮಗ ಕಲ್ಲಪ್ಪಸೆಟ್ಟಿಯು ಕಮಳಶ್ರೀ ಅವ್ವಗಳಿಗೆ ಆತ್ಮಾರ್ಥವಾದೀ ವೊಡ್ಡಾರಾಧನೆಯನು ಬರಯಿಸಿಕೊಟ್ಟುದಕ್ಕೆ ಮಂಗಳಮಹಾ ॥

—ಇಲ್ಲಿನ ‘ಕ್ಷೇಮಪುರ’ ಎಂದರೆ ‘ಗೇರುಸೊಪ್ಪೆ’ ಮತ್ತು ‘ಭಾನುಮುನಿಗಳು’ ಎಂದರೆ ನನಗೆ ಕ್ರಿ. ಶ. ೧೧೧೮ರ ಎಡಬಲದಲ್ಲಿ ಇದ್ದ ಹೂವಿನಬಾಗೆ (ಈಗಿನ ರಾಯಬಾಗ)ಯಲ್ಲಿ ಸಮಾಧಿಮರಣವನ್ನಪ್ಪಿದ ಭಾನುಕೀರ್ತಿ-ಭಾನುಚಂದ್ರ-ಭಾನು ಇತ್ಯಾದಿಯಾಗಿ ಪ್ರಸಿದ್ಧರಾದ ಭಾನುಮುನೀಂದ್ರ ಜೈನಯತಿಗಳೆಂದು ತೋರುತ್ತದೆ. ಇವರ ವರ್ಣನೆ Ep. car. vol. II ಶ್ರವಣಬೆಳಗೊಳ (೧೯೭೩) ಪುಟ. ೬೩ ಮತ್ತು ೫೭೯ರಿಂದ ತಿಳಿದುಕೊಳ್ಳಬಹುದಾಗಿದೆ.

2 ಅದೇ ಕ. ಅ. ಸಂಸ್ಥೆಯಲ್ಲಿರುವ (ಕೊಲ್ಹಾಪುರದ ಬಳಿಯಲ್ಲಿರುವ ಬಾಹುಬಲಿ ಆಶ್ರಮದಲ್ಲಿರುವ ತಾಳೆಓಲೆಯ ಪ್ರತಿಯ) ಮೈಕ್ರೋಫಿಲ್ಮ್ ಹಸ್ತಪ್ರತಿ ಸಂಖ್ಯೆ : 1024 ಎನ್ 2203ರ ಕೊನೆಯ ಓಲೆಯನ್ನು ನೋಡಿ.

ಮೊತ್ತ ನಿಂತಿದೆ. ಈ ಪದ್ಯಗಳಲ್ಲಿ ವಿಶೇಷತಃ ಪ್ರಾಕೃತ ಹಾಗೂ ಸಂಸ್ಕೃತ ಪದ್ಯಗಳಲ್ಲಿ ಕೆಲವಕ್ಕೆ ಟೀಕೆಗಳೂ ದೊರೆತಿದ್ದು ಅವುಗಳ ಕರ್ತೃಗಳು ಬೇರೆ ಬೇರೆ ಎಂಬುದೂ ಈಗಾಗಲೇ ತಿಳಿದುಬಂದ ಸಂಗತಿಯೇ. ಅವುಗಳು ರಚಿತವಾದ ಕಾಲಮಾನ, ನಮ್ಮ ಕನ್ನಡದ ಪಂಪಾದಿಗಳ ಕಾಲಕ್ಕೂ ಪೂರ್ವದೆಂಬುದು ಗಮನಾರ್ಹವಾದ ಸಂಗತಿ. ಅಂತೆಯೇ ಅಂಥಾ ಕೃತಿಗಳ ಛಂದಗಳ-ಬಂಧಗಳ-ಭಾವಗಳ ಪ್ರಭಾವವು ಅನಂತರದ ಕೃತಿಗಳ ಮೇಲೆ ಪ್ರತ್ಯಕ್ಷವೂ ಪರೋಕ್ಷವೂ ಒಟ್ಟಾರೆ ತಂತಾನೇ ಕಂಡಿತಾ ಮೂಡುವುದು ಲೋಕ ರೂಢಿ; ಅವರಲ್ಲೂ ಆಗಮ-ಧಾರ್ಮಿಕ ಇತ್ಯಾದಿ ಕೃತಿಗಳದ್ದು ವಿಶೇಷ. ವಡ್ಡಾರಾಧನೆಯಲ್ಲಿನ ಛಂದಗಳ-ಕವಿತೆಗಳ-ಅಧ್ಯಯನ ಈ ದೃಷ್ಟಿಯಿಂದ ಕನ್ನಡದ ಅಭ್ಯಾಸಿಗೆ ಆಗತ್ಯ. ಇಲ್ಲಿನ ಕನ್ನಡ ಪದ್ಯಗಳಲ್ಲಿ (ಉಪಲಬ್ಧ ಪ್ರತಿಗಳ ಪದ್ಯಗಳಲ್ಲಿ) ಒಂದರಲ್ಲಾದರೂ ಪೂರ್ವದ ಹಳಗನ್ನಡ ಭಾಷೆಯ ಪ್ರಯೋಗಗಳು ಕಂಡುಬರುವುದಿಲ್ಲ. ವಡ್ಡಾರಾಧನೆಯ ಹಸ್ತಪ್ರತಿಗಳನ್ನು ಗಮನಿಸಿದರೆ ಅವು ೧೧-೧೨ ನೆಯ ಶತಮಾನದ ಸಂಧಿಕಾಲದಲಿ ರಚಿತವಾದುವೆನ್ನುವುದಕ್ಕೆ ಪುಷ್ಕಲ ಸಾಕ್ಷ್ಯವನ್ನೊದಗಿಸುತ್ತವೆ. ಇಂದು ನಾವು ಕನ್ನಡ ನಾಡಿನಲ್ಲಿ ಕಾಣುವಂತೆ - ಪಂಪ, ನಯಸೇನರ ಹಾಗೂ ಪುರಾಣ ಶೈಲಿಗಳ ಹಾಗೆ ೧೧-೧೨ ನೆಯ ಶತಮಾನದಲ್ಲಿ ನಡುಗನ್ನಡ (ಅಂದಿನ ಪ್ರಚಲಿತ ಕನ್ನಡ) ಹಳಗನ್ನಡ ಹಾಗೂ ಪೂರ್ವದ ಹಳಗನ್ನಡ ಶೈಲಿಗಳು ಪ್ರಚಲಿತವಾಗಿದ್ದವು. ವಡ್ಡಾರಾಧನೆಯ ಶೈಲಿ, ಈ ಶತಮಾನದಲ್ಲಿ ರಚಿತವಾದ ಪುರಾಣಗಳ ಹಾಗೆ ಅಂದಿನ ಪ್ರಾಚೀನ ಸ್ವರೂಪದ ಶೈಲಿ. ಆದುದರಿಂದ ಅದನ್ನು ಪಂಪಪೂರ್ವದ ಕೃತಿಯೆಂದು ಭಾವಿಸುವುದು, ಅದರ ಕರ್ತೃ ಕನ್ನಡದ ಶಿವಕೋಟಿಯೆಂದು ಹೇಳುವುದು ಕೇವಲ ಕಾಲ್ಪನಿಕ (Fictitious) ಎಂದು ಈಗ ಹೇಳಲೇಬೇಕಾಗಿದೆ[3]. ಇಲ್ಲಿನ ಛಂದಗ

3 'ವಡ್ಡಾರಾಧನೆ' ಕೃತಿಗೆ ಮೂಲ ಆಕರವಾದ 'ಭಗವತಿ ಆರಾಧನಾ' ಗ್ರಂಥದ ಕರ್ತೃ ಶಿವಕೋಟಿಯಿಂದ ಭಿನ್ನನಾದ ಇನ್ನೊಬ್ಬ ಶಿವಕೋಟಿಯು ಕನ್ನಡದಲ್ಲಿ ಗ್ರಂಥ ಬರೆದ ನೆನ್ನುವುದಕ್ಕೆ ಬೇರೆ ಯಾವ ಆಧಾರಗಳೂ ಇಲ್ಲ. ಪ್ರಸ್ತುತ ಕಾಣ್ಕೆಯನ್ನು ಪ್ರತಿಪಾದಿಸುವಲ್ಲಿ ಪೂಜ್ಯ ಪ್ರೊ॥ ಡಿ. ಎಲ್. ಎನ್. ಕೆಲವು ತಪ್ಪುಗಳನ್ನು [illegible] ಹಾಗೂ [illegible] ಗಾಢಗೆ ಹಾಕಿದೆ; ಆಭಾರ್ಥಕ್ಕೆ [illegible]. ವಡ್ಡಾರಾಧನೆಯ ಅಧ್ಯಯನದಲ್ಲಿ ಡಾ. ಆ. ನೇ. ಉಪಾಧ್ಯೆ ಹಾಗೂ ಡಾ. ಬಿ. ಕೆ. ಖಡಬಡಿ ಅವರ ಬರಹಗಳು ಅತ್ಯಂತ ಗಮನಾರ್ಹವಾಗಿವೆ :

(ಅ) ಡಾ. ಆ. ನೇ. ಉಪಾಧ್ಯೆ : (1) 'ಬೃಹತ್ಕಥಾಕೋಶ' ಗ್ರಂಥದ ಪ್ರಸ್ತಾವನೆ
(2) ಕ. ಅ. ಸಂಸ್ಥೆ ಮೈಸೂರು 'ಕನ್ನಡ ಸಾಹಿತ್ಯ ಚರಿತ್ರೆ', ಸಂಪುಟ–೩, ಪು. ೩೬೬-೩೭೫.

(ಆ) Dr. B. K. Khadabadi "Vaddaradhane : A Study" pp. 5-17 ; 199-209 and 256-268 (Appendix)

ಅಧ್ಯಯನ ವಡ್ಡಾರಾಧನೆಯ ಅಧ್ಯಯನಕ್ಕೆ ಬೇರೊಂದು ಆಯಾಮ ಒದಗಿಸುವ ದರಲ್ಲಿ ಸಂದೇಹವಿಲ್ಲ. ಆಶ್ಚರ್ಯದ ಸಂಗತಿಯೆಂದರೆ ವಡ್ಡಾರಾಧನೆಯಲ್ಲಿ ಒಂದಾದರೂ ಕನ್ನಡ ದೇಶೀಛಂದಗಳು (ತ್ರಿಪದಿ, ಅಕ್ಕರ ಇತ್ಯಾದಿ) ಇಲ್ಲದಿರುವುದು. ಅಂತೆಯೆ ಇಲ್ಲಿನ ಛಂದಗಳನ್ನು 'ಅಕ್ಷರ ಛಂದಗಳು' ಮತ್ತು 'ಮಾತ್ರಾ ಛಂದಗಳು' ಎಂದು ವಿಭಜಿಸಿಕೊಂಡು ಅಭ್ಯಾಸ ಮಾಡಬಹುದು.

II

ವಡ್ಡಾರಾಧನೆಯಲ್ಲಿ ಬಂದಿರುವ ಅಕ್ಷರ ಛಂದಗಳನ್ನು ಅಕಾರಾದಿಯಾಗಿ ಹೀಗೆ ಕೊಡಬಹುದು : ಇಂದ್ರವಜ್ರ, ಉತ್ಪಲಮಾಲೆ, ಉಪಜಾತಿ, ತೋಟಕ, ದೋಧಕ, ಮಹಾಸ್ರಗ್ಧರೆ, ಮಾಲಿನಿ, ಲಲಿತಪದ, ವಸಂತತಿಲಕ, ಶಾರ್ದೂಲವಿಕ್ರೀಡಿತ, ಶ್ಲೋಕ, ಸ್ರಗ್ಧರೆ ಮತ್ತು ಹರಿಣೆ. ಇವುಗಳಲ್ಲಿನ ವಿಶೇಷಾಂಶಗಳನ್ನು ಹೀಗೆ ವಿವರಿಸ ಬಹುದು :

(೧) ಇಂದ್ರವಜ್ರ—ಈ ಛಂದಸ್ಸಿನಲ್ಲಿ ಒಂದು ಪದ್ಯವಿದೆ :

ಯತ್ಕೇನ ಪಾಪಾನಿ ಸಮಾಚರಂತಿ
ಧರ್ಮಂ ಪ್ರಸಂಗಾದಪಿ ನಾಚರಂತಿ
ಆಶ್ಚರ್ಯಮೇತದ್ಧಿ ಮನುಷ್ಯ ಲೋಕೇ
ಕ್ಷೀರಂ ಪರಿತ್ಯಜ್ಯ ವಿಷಂ ಪಿಬಂತಿ ||[4]

೧, ೨ ಮತ್ತು ೪ ನೆಯ ಪಾದಗಳಲ್ಲಿ ಕೊನೆಯ ಅಕ್ಷರ ಲಘುವಾಗಿದ್ದರೂ ಗುರು ವೆಂದು ಸ್ವೀಕರಿಸಬೇಕು.

(೨) ಉತ್ಪಲಮಾಲೆ : ಈ ಛಂದದಲ್ಲಿ ಎರಡು ವೃತ್ತಗಳಿವೆ[5]. ಇವುಗಳಲ್ಲಿ "ಸಾವನಿತೊಂದವಕ್ಕೆ........ಜೈನಶಾಸನಂ" ಎಂಬ ಪದ್ಯದಲ್ಲಿ ೨ ನೆಯ ಪಾದದಲ್ಲಿ ಪದ್ಯ ಛಂದಸ್ಸು ಕೆಟ್ಟದೆ :

ಭಾವಿಸಿ ಬಾಹ್ಯವಸ್ತುಗಳೊಂದದೆ ತನ್ನೊಳೆ ನಿಂದು ಕರ್ಮವಿ — ಇದು ಭಾವಿಸಿ ಬಾಹ್ಯವಸ್ತುಗ[ಳನೊಂ]ದದೆ ತನ್ನೊಳೆ ನಿಂದು ಕರ್ಮವಿ : ಎಂದಿರಬೇಕು.

(೩) ಉಪಜಾತಿ : ಈ ಛಂದದಲ್ಲಿ ಬರೆದ ಪದ್ಯಗಳು-ನಾಲ್ಕು[6]. ಇವುಗಳು ಇಂದ್ರವಜ್ರ ಮತ್ತು ಉಪೇಂದ್ರವಜ್ರ ವೃತ್ತಗಳ ಸಮ್ಮಿಶ್ರಣವಾಗಿವೆ. ಈ ಎರಡು ಛಂದಗಳ ಸಮ್ಮಿಶ್ರಣ ಹೇಗಾದರೂ ಇರಬಹುದು. ಆದರೂ ಅರ್ಧ ಸಮವೃತ್ತಗಳಿಗೆ

---

4 'ವಡ್ಡಾರಾಧನೆ' ಪು. ೧೪೧

5 ಅದೇ ಪು. ೧೩೩

6 ಅದೇ ಪು. ೧೦೩, ೧೪೧, ೧೪೨, ಮತ್ತು ೧೩೪

ಹೊಂದುವಂತಹದ್ದಲ್ಲ. ಇದನ್ನು ಜಾನಾಶ್ರಯೀಕಾರ ಮೊದಲಾಗಿ ಕೆಲವರು 'ಇಂದ್ರಮಾಲಾ' ಎಂದಿದ್ದಾರೆ[7].

(೪) ತೋಟಕ : ಈ ಛಂದಸ್ಸಿನಲ್ಲಿ ಒಂದು ಪದ್ಯವಿದೆ[8].

(೫) ದೋಧಕ : ಇದನ್ನು ಗಾಹೆ ಎಂದು ಬರೆದಿದೆ[9].

ಪೆಚ್ಛಹ ಪೆಚ್ಛಹ ಓದಣಮುಂಡಂ (ಭ ಭ ಭ ಗ ಗ)
ಅಚ್ಛರ ಮಜ್ಝ ಗಯಂ ರಮಣಿಜ್ಜಂ
ಜಂಜೆಣ ಮಂತೆಣ ಕಾರಣಯೇಣ
ಪಚ್ಚಇಯವ್ವಂ ಹೋಇಣರೇಣ ॥[10]

ಇಲ್ಲಿ ಮೊದಲಿನ ಮೂರು ಪಾದಗಳಲ್ಲಿ "ಭತ್ರಯಮಿಗುರೂ ದೋಧಕವೃತ್ತಂ" ಎಂಬ ಲಕ್ಷಣವಿದೆ. ನಾಲ್ಕನೆಯ ಪಾದ ಈ ಛಂದಸ್ಸಿಗೆ ಹೊಂದುವುದಿಲ್ಲ. ಈ ಛಂದಸ್ಸಿಗೆ ಹೊಂದಬೇಕಾದರೆ ಪದ್ಯದ ಈ ಪಾದದ ಪಾಠ ಪರಿಷ್ಕರಣೆಯನ್ನು ಹೀಗೆ ಮಾಡಬೇಕಾಗುತ್ತದೆ:

ಪಚ್ಚಇಯವ್ವ[ವಿ]ಹೋಇ ಣರೇಣ ।

ಮಾತ್ರಾ ದೃಷ್ಟಿಯಿಂದ ನಾಲ್ಕು ಪಾದಗಳಲ್ಲೂ ಪದ್ಯ ನಾಲ್ಕು ನಾಲ್ಕು ಮಾತ್ರೆಯ 'ನಾಲ್ಕು ಗಣಗಳು ಬಂದಿದ್ದು ವಿರಹಾಂಕನ 'ವೃತ್ತಜಾತಿ ಸಮುಚ್ಚಯ'ದ ಪ್ರಕಾರ 'ರಾಸ' ಛಂದಸ್ಸಾಗುತ್ತದೆ[11] .ಇದನ್ನು ಅಕ್ಷರಗಣದ್ದೆನ್ನಬೇಕೆ ? ಅಥವಾ ಮಾತ್ರಾಗಣದ್ದೆನ್ನಬೇಕೇ ?. ಭಾಷೆಯದೃಷ್ಟಿಯಿಂದ ಕೊನೆಯ ಎರಡು ಪಾದಗಳು ಸರಿಯಾಗಿಲ್ಲ

(೬) ಮಹಾಸ್ರಗ್ಧರೆ: ಈ ಛಂದಸ್ಸಿನಲ್ಲಿ ಬರೆದ ಒಂದೇ ಕನ್ನಡ ಪದ್ಯವಿದೆ.[12]

(೭) ಮಾಲಿನಿ: ಈ ಛಂದದಲ್ಲೂ ಒಂದೇ ಪದ್ಯವಿದೆ.[13]

---

7 ಹೇಮಚಂದ್ರನ 'ಛಂದೋನುಶಾಸನ' (ಪ್ರೊ. ಎಚ್. ಡಿ. ವೇಲಣಕರ್) ಪು. ೩೧೪ (೧೯೬೧)

8 ವಡ್ಡಾರಾಧನೆ ಪು. ೧೨೨

9 ವಡ್ಡಾರಾಧನೆಯಲ್ಲಿ 'ಗಾಹೆ' ಎಂಬ ಶಬ್ದ 'ಪದ್ಯ' ಎಂಬ ಅರ್ಥದಲ್ಲಿ ಬಳಸಲಾಗಿದೆ ; ಅದು ಯಾವುದೇ ನಿಶ್ಚಿತವಾದ ಛಂದಸ್ಸನ್ನು ಸೂಚಿಸುವುದಿಲ್ಲ.

10 ಅದೇ ಗ್ರಂಥ ಪು. ೮೪

11 ವೃತ್ತ ಜಾತಿ ಸಮುಚ್ಚಯ (ಸಂ. ಪ್ರೊ. ಎಚ್. ಡಿ. ವೇಲಣಕರ್) IV 85, ಪು. ೬೪

12 ವಡ್ಡಾರಾಧನೆಯಲ್ಲಿ [illegible] ಸಂಸ್ಕೃತ ಪದ್ಯಮಾಲಿಕೆಯಲ್ಲಿ [illegible] ನೋಡಿ : ಪು. ೩೩೪

13 ಅದೇ ಗ್ರಂಥ, ಪು. ೧೪೩

ಕರಜ ನಿವೇಶಿತ ತೀಕ್ಷ್ಣ ಶಲಾಕಾಃ (ನ[illegible]ಯ)
ಕ್ರಕಚ ವಿಪಾಟಿತ ಭಿನ್ನ ಶರೀರಾಃ
ನರಕ ಭವೇ ವಿರಸಾ ವಿಷಹಂತೇ
ಚಿರಮಪಿ ತತ್ಕ್ಷಣ ದುಃಖವಿಷಾದಂ॥

ಈ ಪದ್ಯವನ್ನು ಹಲವು ಬಗೆಯ ಛಂದೋಲಕ್ಷಣಗಳಿಂದ ಗುರುತಿಸಬಹುದಾಗಿದೆ.

(ಅ) ಅಕ್ಷರ ಛಂದಸ್ಸಿನ ಪ್ರಕಾರ ಇಲ್ಲಿ 'ನಜಜಯ' ಲಕ್ಷಣವಿದ್ದು ವರಾಹಮಿಹಿರನ ಕಾಲದಿಂದ ಪ್ರಚಲಿತವಿರುವ 'ಲಲಿತಪದ' ಎಂಬ ಹೆಸರಿನ ಛಂದಸ್ಸು ಎಂದು ಹೇಳಬಹುದು.[14] ಜಯಕೀರ್ತಿಯು "ಲಲಿತಪದಾ ಭರತಸ್ಯ" ಎಂದಿದ್ದಾನೆ.[15] ಆದರೆ ಉಪಲಬ್ಧವಾಗಿರುವ ಭರತನ ನಾಟ್ಯಶಾಸ್ತ್ರದಲ್ಲಿ ಪದ್ಯ ಕಾಣಬರುತ್ತಿಲ್ಲ. ಜಯಕೀರ್ತಿ ನೋಡಿದ ನಾಟ್ಯಶಾಸ್ತ್ರದ ಪ್ರತಿಯಲ್ಲಿ ಇದ್ದಿರಬಹುದು. ಹೇಮಚಂದ್ರ ಈ ವೃತ್ತಕ್ಕೆ 'ತಾಮರಸ' ಎಂಬ ಹೆಸರನ್ನು ಹೇಳಿ "ಕಮಲ ವಿಲಾಸಿನೀತ್ಯನ್ಯೇ" ಎಂದೂ ಹೇಳಿದ್ದಾನೆ.[16] ಕನ್ನಡ ಛಂದೋಗ್ರಂಥಗಳಲ್ಲಿ ನಾಗವರ್ಮ 'ಲಲಿತಪದ' ಎಂದು, ಗುಣಚಂದ್ರ 'ಅಭಿನವತಾಮರಸ' ಎಂದು ಮತ್ತು ವೀರಭದ್ರ 'ಮೋದಕ' ಎಂದೂ ಬೇರೆ ಬೇರೆ ಹೆಸರುಗಳನ್ನು ಹೇಳಿದ್ದಾರೆ.[17]

(ಆ) ಕರಜನಿ । ವೇಶಿತ । ತೀಕ್ಷ್ಣಶ । ಲಾಕಾಃ (4X4 = 16) 'ಪಾದಾಕುಲಕ' ಎಂಬ ಛಂದಸ್ಸು, ವಿರಹಾಂಕನ 'ರಾಸ' ಎಂಬುದೂ ಸರಿಹೋಗುತ್ತದೆ.

(ಇ) ೯ನೆಯ ಅಕ್ಷರ ಗುರುವಾಗಿರುವುದರಿಂದ 'ಉಪಚಿತ್ರಾ' ಆಗಬಹುದು.

(ಈ) ಕರಜನಿವೇ । ಶಿತತೀ । ಕ್ಷ್ಣಶಲಾಕಾಃ (6-4-6) 'ಸಂಕುಲಕ' ಎಂಬ ಛಂದಸ್ಸಾಗಬಹುದು.

(ಉ) ಕರಜನಿವೇ । ಶಿತತೀ । ಕ್ಷ್ಣಶಲಾ । ಕಾಃ (6-4-4-ಗು) ಇದು 'ವದನಕ'ದ ಲಕ್ಷಣ (ಸ್ವಯಂಭೂ).

(ಊ) ಕರಜ । ನಿವೇಶಿತ । ತೀಕ್ಷ್ಣ । ಶಲಾಕಾಃ (3-5-3-5) ಟಿ.ಎಂ.ಶ್ರೀ. ಅವರು ಹೇಳಿದ ಈ ಮಾತ್ರಾ ಬಂಧಕ್ಕೂ ಸರಿಹೋಗುತ್ತದೆ.[18] ಆದರೆ ಪ್ರಾಚೀನರಲ್ಲಿ ಈ ಬಗೆಯ ಗಣವಿಭಜನೆ ಇಲ್ಲ.

---

14 ಹೇ. ಛಂ. ವೃತ್ತರೂಪ ಸೂಚಿ, ಪು. ೨೯೩ (೧೯೬೧)

15 ಜಯದಾಮನ್, ಪು. ೪೬

16 ಹೇ. ಛಂ. ಅ. ೨-೧೮೩, ಪು. ೪೦

17 ಕನ್ನಡ ಛಂದಸ್ಸಂಪುಟ (ಸಂ. ಡಾ. ಎಲ್. ಬಸವರಾಜು) ಪು. ೨೬೭

18 ಕನ್ನಡ ಕೈಪಿಡಿ, ಪು. ೧೪೪ ೧೯೬೫)

ಈ ಪದ್ಯವನ್ನು ಗಾಯಕ, ತನ್ನ ಮನಸ್ಸಿಗೆ ಬಂದ ಧಾಟಿಗೆ ಅಳವಡಿಸಿಕೊಳ್ಳಬಹುದು.

(೯) ವಸಂತತಿಲಕ: ಈ ಛಂದಸ್ಸಿನಲ್ಲಿ ಮೂರು ಪದ್ಯಗಳಿವೆ.[19]

(೧೦) ಶಾರ್ದೂಲ ವಿಕ್ರೀಡಿತ: ಈ ಛಂದಸ್ಸಿನಲ್ಲಿ ೧೧ ಪದ್ಯಗಳಿವೆ.[20]

(೧೧) ಶ್ಲೋಕ: ವಡ್ಡಾರಾಧನೆಯಲ್ಲಿ ಅಚ್ಚಾದ ಪ್ರತಿಯಲ್ಲಿ ಲೆಕ್ಕಹಾಕಿದರೆ 31 ಶ್ಲೋಕಗಳಿವೆ.[21] ಇವುಗಳಲ್ಲಿ "ಖಮಾಪ್ಯ .... ಣಕೇಣಃ" ಎಂಬುದು ಎರಡು ಸಲ ಬಂದಿದೆ. ಪ್ರಾಯಶಃ ವಡ್ಡಾರಾಧನಕಾರನಿಗೆ ಇದು ಬಹು ಪ್ರಿಯವಾದ ಪದ್ಯವೆಂದು ಕಂಡುಬರುತ್ತದೆ.

(೧೨) ಸ್ರಗ್ಧರೆ: ಈ ಛಂದಸ್ಸಿನಲ್ಲಿ ಮೂರು ಪದ್ಯಗಳಿವೆ.[22]

(೧೩) ಹರಿಣಿ: ಕೇವಲ ಒಂದೇ ಪದ್ಯ ಈ ಛಂದದಲ್ಲಿದೆ.

III

ಮಾತ್ರಾ ಛಂದಸ್ಸುಗಳಲ್ಲಿ ಆರ್ಯಾ ಹಾಗೂ ಅದರ ಗೋತ್ರಕ್ಕೆ ಸಂಬಂಧಪಟ್ಟ ಛಂದಗಳೇ ವಿಶೇಷ. ಇವುಗಳನ್ನು ಅಕಾರಾದಿಯಾಗಿ ಹೀಗೆ ವಿವರಿಸಬಹುದು:

(೧) ಆರ್ಯಾಗೀತಿ ಅಥವಾ ಕಂದ: (ಸ್ಕಂಧ < ಸ್ಕಂಧಕ) ಇವುಗಳ ಪದ್ಯಗಳ ಸಂಖ್ಯೆ ೬.[23] ಇವುಗಳಲ್ಲಿ ಪುಟ ೧೧ ರಲ್ಲಿ ಬಂದಿರುವ ಪದ್ಯ "ಪುಣ್ಯಾದುತ್ಪದ್ಯಂತೇ .... ಸಂಪತ್ಸ್ಯಃ" ಎಂಬುದನ್ನು "ಆರ್ಯೆ" ಎಂದು ಬರೆದಿದೆ. ಆದರೆ ಇದು 'ಆರ್ಯೆ' ಅಲ್ಲ; ಆರ್ಯಾಗೀತಿ:

ಪುಣ್ಯಾದುತ್ಪದ್ಯಂತೇ (4+4+4)
ಜೀವಾ ಪಿತ್ರಾದ್ಯ ವಿಪುಲೇ ವಂಶೇಷ್ವೇಕೇ॥ (4+4+ನಲ+4+4)
ದ್ಯುತಿಮತಿ ಧೃತಿ ಕಾಂತಿ ಶ್ರೀ (4+4+4)
ಶ್ರೀರೂಪಾರೋಗ್ಯ ಸತ್ತ್ವಬಲ ಸಂಪತ್ಸ್ಯಃ॥ (4+4+ಜ+4+4)

(೨) ಆರ್ಯೆ: ವಡ್ಡಾರಾಧನೆಯ ಪ್ರತಿಯೊಂದು ಕಥೆಯೂ ಭಗವತೀ ಆರಾಧನೆಯ ಆರ್ಯೆಗಳನ್ನೇ ಅವಲಂಬಿಸಿದೆ. ಅವತರಣಗಳನ್ನು ಬಿಟ್ಟರೆ ಗ್ರಂಥದಲ್ಲಿ ಮತ್ತು ಅಡಿಟಿಪ್ಪಣಿಯಲ್ಲಿ ಬಂದಿರುವ ಒಟ್ಟು ಆರ್ಯೆಗಳ ಸಂಖ್ಯೆ ೫೬.[24] ಛಂದಸ್ಸು ಹಾಗೂ ಪಾಠದೃಷ್ಟಿಯಿಂದ ಮುಖ್ಯವಾದ ಕೆಲವನ್ನು ಪರಿಶೀಲಿಸುವೆ:

---

19 ವಡ್ಡಾರಾಧನೆ, ಪು. ೭, ೧೦ ಮತ್ತು ೧೧

20 ಅದೇ ಪು. ೬೮, ೮೭, ೧೦೨, ೧೩೨, ೧೩೩, ೧೫೩, ೧೫೫, ಮತ್ತು ೧೮೫

21 ಅದೇ ಪು. ೧, ೪೮, ೫೭, ೫೮, ೬೭, ೬೮, ೯೭, ೧೦೧, ೧೦೩, ೧೦೯, ೧೧೩, ೧೧೮, ೧೩೨, ೧೩೩, ೧೩೯, ೧೪೨, ೧೫೮, ೧೮೧, ೧೮೩, ಮತ್ತು ೧೯೨

22 ವಡ್ಡಾರಾಧನೆ, ಪು. ೧೦, ೧೧, ಮತ್ತು ೧೪೦

23 ಅದೇ ಪು. ೧೧, ೧೨೩, ೧೨೭, ೧೩೩, ೧೫೧, ಮತ್ತು ೧೯೫

24 ಅದೇ ಪು. ೧, ೭, ೧೧, ೩೨, ೪೮, ೫೦, ೫೩, ೭೧, ೭೩, ೮೬, ೯೫, ೯೭,

(ಅ) ಪುಟ-೧ರ ಅಡಿಟಿಪ್ಪಣಿಯಲ್ಲಿಯ ಆರ್ಯೆ "ಯೇಸ ಸುರಾಸುರ ....। ತಿಚ್ಛಂದಯಸ್ಸಕತ್ತಾರಂ॥ "ಎಂಬಲ್ಲಿ ಕೊನೆಯ ಪಂಕ್ತಿಯಲ್ಲಿ ಪಾಠವೂ ಕೆಟ್ಟಿದೆ: ಛಂದಸ್ಸೂ ಸಹ. ತಿಚ್ಛಂದ[ಅ]ಯಸ್ಸ ಕತ್ತಾರಂ॥ ಎಂದು ಇದ್ದಿರಬಹುದು.

(ಆ) ಪು. ೩೨ "ಪೊಗ್ಗಳಗಿರಿ .... ಅಟ್ಟಂ" ಎಂಬ ಪದ್ಯದಲ್ಲಿ ಮೂರನೆಯ ಪಾದದ ಪಾಠ "ವಗ್ಗೀಯಿ ಖಯಿಸಂಪದಿಪೊ।" ಎಂದಿದೆ. ಇದು ಛಂದಸ್ಸಿಗೆ ಸರಿಹೊಂದುವದಿಲ್ಲ. 'ವಗ್ಗಂಯಿ' ಇಲ್ಲವೇ 'ವಗ್ಗಿಯಿ' ಎಂದು ಪಾಠವನ್ನು ತಿದ್ದಿಕೊಳ್ಳಬೇಕು.

(ಇ) ಪು. ೪೮ ರಲ್ಲಿ ಒಂದು ಆರ್ಯಾಪದ್ಯ ಹೀಗೆ ಅಚ್ಚಾಗಿದೆ:

ಮಜ್ಝ ಸಹಾವಂ ಣಾಣಂ ದಂಸಣ ಚರಣಂ ಣಕೋಇ ಆವಣ್ಣಂ
ಜೋಸಮ್ಮಯಣಗ್ಗಾಹಿ ಸೋಹಂ ಸೋ ಗಾಹವೇಯಣಾ॥

ಪ್ರೊ॥ ಡಿ. ಎಲ್.ಎನ್. ಈ ಪದ್ಯ ದೇವಸೇನನ (ಕ್ರಿ.ಶ. ೯೩೩) 'ಣಯಚಕ್ಕ' ಮತ್ತು ಆತನ ಶಿಷ್ಯ ಮಾಯಿಲ್ಲಧವಳನ "ದವ್ವ ಸಹಾವಪಯಾಸ" ಗ್ರಂಥಗಳಲ್ಲಿ ಬಂದಿದೆಯೆಂದು ಹೇಳಿ[25] ಟಿಪ್ಪಣಿಗಳಲ್ಲಿ ಪದ್ಯದ ಪಾಠವನ್ನೂ ಕೊಟ್ಟಿದ್ದಾರೆ.[26] ಇವೆಲ್ಲವನ್ನೂ ಮನದಂದು ವಡ್ಡಾರಾಧನೆಯ ಪಾಠವನ್ನು ಹೀಗೆ ನಾವು ಪರಿಷ್ಕರಿಸಬಹುದು:

ಮಜ್ಝ ಸಹಾವಂ ಣಾಣಂ
ದಂಸಣ ಚರಣಂ [ಣ ಕಿಂಪಿ] ಆವರಣಂ ।[27]
ಜೋಸಂವೇಯಣ ಗಾಹೀ
ಸೋಹಂ [ಣಾದಾ ಹವೇ ಅ] ದಾ ॥

(ಈ) ಪು. ೭೧ ರಲ್ಲಿ "ಅಗ್ನಿಲಾ ಪುತ್ರನಕಥೆ"ಯ ಆರಂಭದ ಆರ್ಯೆಯಲ್ಲಿ "[ಪಣಿಯಾ] ಪುತ್ತೋ" ಎಂದು ಪ್ರೊ। ಡಿ ಎಲ್. ಎನ್. ಅವರು ಏಕೆ ತಿದ್ದಿರು

೯೮, ೧೦೨, ೧೦೫, ೧೦೬, ೧೧೦, ೧೧೪, ೧೧೫, ೧೨೦, ೧೨೨, ೧೩೬, ೧೪೨. ೧೪೬, ೧೮೦, ೧೮೧, ೧೮೨-೮೮, ೧೫೪ ೫೫, ೧೬೨, ೧೬೭, ೧೬೯, ೧೭೦, ೧೭೫. ೧೮೦. ೧೯೪. ೧೯೮

25 ಅದೇ ಗ್ರಂಥ, ಪೀಠಿಕೆ, ಪು. xxxviii

26 ಅದೇ ಪು. ೨೨೦

27 ವಡ್ಡಾರಾಧನೆಯ 'ಕ' ಪ್ರತಿಯಲ್ಲಿ 'ಅವರಣಂ' ಎಂದೇ ಇದೆ. 'ಅ'ಕ್ಕೆ 'ಆ' ಎಂದು ಪ್ರತಿಕಾರರು ತಪ್ಪು ಓದಿಕೊಂಡಿದ್ದಾರೆ. 'ಅವಣ್ಣಂ' ಎಂಬ ರೂಪ 'ಆವರಣಂ' ಎಂಬುದಕ್ಕೆ ಹುಟ್ಟಿಕೊಂಡಿರಬಹುದು. ಮಧ್ಯಕಾಲದಲ್ಲಿ 'ಅ' ಅಕ್ಷರ 'ಯ' ಶ್ರುತಿಗೆ ಎಡೆಕೊಟ್ಟು 'ಯ' ಅಕ್ಷರದಂತೆ ಬರೆಯಲ್ಪಟ್ಟಿರಬಹುದು. ಅರ್ಥಾತ್ 'ಅದಾ > ಯದಾ' ಆಗಿದೆ.

ಸರಿಯೋ ತಿಳಿಯದು. ಪ್ರಾಕೃತದಲ್ಲೇ "ಅಣ್ಣಿಯಾ" ಎಂದು ಇರುವಾಗ ವಡ್ಡಾರಾಧನೆಕಾರ ಅದನ್ನು ತಪ್ಪು ತಪ್ಪಾಗಿ ಬರೆದನೆಂದು ಹೇಳಲು ಬಾರದು. "ಭಗವತೀ ಆರಾಧನಾ" ಗ್ರಂಥದ ಹಸ್ತಪ್ರತಿಯೊಂದರಲ್ಲಿ ಯಾವುದನ್ನು ವಡ್ಡಾರಾಧನೆಕಾರನು ನೋಡಿದ್ದನೊ ಅದರಲ್ಲಿ "ಅಣ್ಣಿಯಾ | ಅಣ್ಣಿಕಾ" ಎಂದಿದ್ದಿರಲೂ ಸಾಧ್ಯವಿದೆ. ನಮಗೆ ಉಪಲಬ್ಧವಾಗಿರುವ ವಡ್ಡಾರಾಧನೆಯ ಎಲ್ಲ ಪ್ರತಿಗಳಲ್ಲೂ "ಅಣ್ಣಿಕಾ" ಎಂದಿರುವುದು ಸಾಧುಪ್ರಯೋಗವೆ. ಅಣ್ಣಿಕಾ > ಅಣ್ಣಿಯಾ ಆಗುತ್ತದೆ ಪ್ರಾಕೃತದಲ್ಲಿ. ಆದುದರಿಂದ 'ಏಣಿಯಾ' ಎಂದು ಮಾಡುವುದಕ್ಕಿಂತ 'ಅಣ್ಣಿಯಾ' ಎಂದು ಪಾಠಪರಿಷ್ಕರಣ ಮಾಡುವುದು ಉಚಿತ.

(೨೬) ಪು. ೯೫ರ ಆರಂಭದ ಆರ್ಯೆ ಹೀಗೆ ಉಕ್ತವಾಗಿದೆ.

ಕೋಸಂಬೀಲಲಿತಘಡಾ | ಸಿಧಾಣದೀವ ಪ್ಪಾದೇಣ ತಿಪ್ಪೇಣ
ಆರಾಧಣಂ ಪವಣ್ಣಾ | ಪಾಓವಗದಾ ಅಮೂಢಮದೀ ||

ಇಲ್ಲಿ 'ಸಿಧಾ... ತಿಪ್ಪೇಣ' ಈ ಭಾಗದಲ್ಲಿ ಛಂದಸ್ಸು ಕೆಟ್ಟಿದೆ. ಇದು ಭಗವತೀ ಆರಾಧನೆಯ ೧೫೫೫ನೆಯ ಗಾಥೆಯೆ ಆಗಿದ್ದು ಅಲ್ಲಿ ಹೀಗಿದೆ :

ಕೋಸಂಬೀಲಲಿಯಘಡಾ | ಪ್ಪಾಧಾ ಣಇಪ್ಪೂರ ಏಣ ಜಲಮಜ್ಝೇ |
ಆರಾಧಣಂ ಪವಣ್ಣಾ | ಪಾಓವಗದಾ ಅಮೂಢಮದೀ ||[29]

ಈ ಪದ್ಯದ ಬೆಳಕಿನಲ್ಲಿ ಛಂದಸ್ಸು ಕೆಡದಂತೆ ವಡ್ಡಾರಾಧನೆಯ ಪಾಠವನ್ನು ಹೀಗೆ ತಿದ್ದಬಹುದು : ಪ್ಪಾಧಾ ಣದಿಪ್ಪೂರಏಣ ತಿಪ್ಪೇಣ |—'ಸಿಧಾ' ಎಂಬ ಶಬ್ದ ಪ್ರಾಕೃತದಲ್ಲಿ ಇಲ್ಲ.

(೨೭) ಪು. ೧೦೫ರಲ್ಲಿ ಒಂದು ಆರ್ಯೆ (ಗಾಥೆ) ಹೀಗೆ ಉಕ್ತವಾಗಿದೆ :

ಹಾದುಟ್ಟು ಕಯಂ ಹಾದುಟ್ಟು ಕಾರಿಯಂ ಹಾದುಟ್ಟು ಅಣುಮೋದಿಯಂ
ಜೀವೋ ಅಂತೋ ಅಂತೋವಜ್ಝ ಇ ಪಚ್ಛುತ್ತಾವೇಣ ವೇಯಂತೋ ||

ಆಗಂತು ಇದರಲ್ಲಿ ಛಂದಸ್ಸು ಕೆಟ್ಟಿದೆ. ಛಂದಸ್ಸಿನ ದೃಷ್ಟಿಯಿಂದ ಇದನ್ನು ಹೀಗೆ ತಿದ್ದಬಹುದು :

ಹಾದುಟ್ಠು ಕಯಂ ಹಾದು
ಟ್ಠು ಕಾರಿಯಂ [ದುಟ್ಠು ಹಾ ಅ]ಣು ಮೋದಿಯಂ |

---

28 'ಪಾ ಇ ಅ ಸದ್ದಮಹಣ್ಣವೋ' ಪು. ೪೬

29 Upadhye : Papers, Introduction To Brihat-kathakosa p. 67

ಜೀವ್ರೋ ಅಂತೋ ದಜ್ಝ ಇ
ಪಚ್ಛತ್ತಾವೇಣ ವೇವಂತೋ ॥[30]

(೩೬) ಪು. ೧೧೩ರಲ್ಲಿ ಒಂದು ಆರ್ಯೆ ಹೀಗೆ ಅಚ್ಚಾಗಿದೆ :

ಗಾಹೆ : ಸಣ್ಣಂ ವಾ ಬದರಂ ತಂ ಮಜ್ಜಂ ವಿಮುತ್ತಾಣ ಮುತ್ತಿಪಹಂ ।
ಅವಿಸ್ಸಾಮಂ (?) ಭೋಗ ಸುಹಲೋಹಪಿರದೋ ಮೋಕ್ಖೇಮುದಿಂ
ಕುಜ್ಜಾ ॥

ಈಗಿನ ಈ ಪಾಠ ಸಂಪೂರ್ಣ ಅಶುದ್ಧವಾಗಿದೆ. ಛಂದಸ್ಸಿನ ದೃಷ್ಟಿಯಿಂದ ಹೀಗೆ ತಿದ್ದಬಹುದು :

ಸಣ್ಣಂ ವಾ ಬದರಂ ತಂ
ಮಜ್ಜಂ ವಿಮುತ್ತಏ ಮುತ್ತಿಪಹಂ ।
ಅವಿಸ್ಸಮಂ ಭೋಗಸುಹಂ
ಲೋಹಪಿರದೊಮೋಕ್ಖೆಮುದಿಕುಜ್ಜಾ ॥ (?)

ಹೀಗೆ ತಿದ್ದಿದರೆ ಇದು ಉಪಗೀತಿ ಆಗುತ್ತದೆ. "ಅವಿಸ್ಸಾಮಂ" ಎಂಬ ಶಬ್ದ ಪ್ರಾಕೃತ ಕೋಶದಲ್ಲಿಯು ಇಲ್ಲ.

(೩೭) ಪು. ೧೨೨ರಲ್ಲಿ "ವಿದ್ಯುಚ್ಚೋರ ರಿಸಿಯ ಕಥೆ" ಆರಂಭದಲ್ಲಿ ಬಂದಿರುವ ಆರ್ಯೆ ಹೀಗೆ ಅಚ್ಚಾಗಿದೆ :

ಗಾಹೆ ॥ ದಂಸೇಹಿಯ ಮಸಕೇಹಿಯ ಖಜ್ಜಂತೋ ವೇದಣಂ
ಪರಮಘೋರಂ
ವಿಜ್ಜುಚ್ಚೋರೋ ಅಧಿಯಾಸಿಯ ಪಡಿವಣ್ಣೋ ಉತ್ತಮಂ ಅಟ್ಠಂ ॥

ಇಲ್ಲಿಯು ಉತ್ತರಾರ್ಧ ಕವಿತೆಯ ಭಾಗದಲ್ಲಿ ಛಂದಸ್ಸು ಕೆಟ್ಟಿದೆ. ಭಗವತೀ ಆರಾಧನಾ ಕವಿತೆಯ ಪಾಠ ಹೀಗಿದೆ :

ದಂಸೇಹಿಯ ಮಸಕೇಹಿಯ । ಖಜ್ಜಂತೋ ವೇದಣಂ ಪರಮಘೋರಂ ॥
ವಿಜ್ಜುಚ್ಚರೋಧಿಯಾಸಿಯ । ಪಡಿವಣ್ಣೋ ಉತ್ತಮಂ ಅಟ್ಠಂ ॥

'ವಿಜ್ಜುಚ್ಚೋರ' 'ವಿಜ್ಜುಚ್ಚರ' ಈ ಎರಡರಲ್ಲಿ ಮೊದಲನೆಯದು ಛಂದಸ್ಸಿಗೆ ಪದ್ಯದಲ್ಲಿ ಹೊಂದುತ್ತಿಲ್ಲ. ಎರಡನೆಯದನ್ನು ಸ್ವೀಕರಿಸಿದರೆ ಕನ್ನಡದ ಕಥಾನಾಯಕನ ಹೆಸರನ್ನೇ ಸಂಪೂರ್ಣ ಬದಲಿಸಬೇಕಾಗುತ್ತದೆ. ಈ ದಿಶೆಯಲ್ಲಿ ಪದ್ಯವನ್ನು ಕನ್ನಡಕ್ಕೆ ಅನುಸರಿಸಿ ಹೀಗೆ ತಿದ್ದಬಹುದು :

---

30 'ಶಬ್ದ ಪಲ್ಲಟಗಳು' 'ಪುನರುಕ್ತಿ ದೋಷ' ಇತ್ಯಾದಿ ಸ್ಖಾಲಿತ್ಯಗಳು ಇಲ್ಲಿ ಸಂಭವಿಸಿವೆಯೆಂದು ನನಗೆ ತೋರುತ್ತದೆ.

ಪಿಜ್ಜುಚ್ಚುರೋಥಿಯಾಸಿ | ಪಡಿವಕ್ಖೋ ಸುತ್ತಸುಂ. ಅಲ್ಪಂ ॥

ಈ ಪಾಠಭೇದಗಳು ಪಠ್ಯಾರಾಧನೆಯ ಕರ್ತೃವಿಗೆ ಇದ್ದ ಮೂಲ ಪರಿಶೀಲನೆಯ ಭಿನ್ನವೆಂಬುದನ್ನು ಸ್ಥಿರಪಡಿಸುತ್ತವೆ.[31]

(ಎ) ಪು. ೧೩೭ರಲ್ಲಿ ಬರುವ ಪದ್ಯ "ಏದಂ ಸರೀರಮಸುಚಿಂ....

ಅಮೇಜ್ಝಪುರಂ ॥" ಇದರಲ್ಲಿಯ ಉತ್ತರಾರ್ಧದಲ್ಲಿ ಛಂದಸ್ಸು ಕೆಟ್ಟಿದೆ. ಈಗಿರುವಂತೆ ಸ್ವೀಕರಿಸದೆ 'ಕಖಗ' ಹಸ್ತಪ್ರತಿಗಳಲ್ಲಿಯ ಪಾಠವನ್ನು ಸ್ವೀಕರಿಸಿದರೆ ಛಂದಸ್ಸು ಕೆಡುವುದಿಲ್ಲ : ನೋಡಿ :

ಏದಂ ಸರೀರಮಸುಚಿಂ
ಣಿಚ್ಚಂ ಕಲಿಕಲುಸಭಾಜಣಮಚೊಕ್ಖಂ |
ಅಂತೋ ಛಾಯುಗದಿಟ್ಠಸ
[ಕಿ]ಟ್ಟಿಸ ಭರಿ[ದೊ]ತು ಅಮೇಜ್ಝಪುರಂ ॥[32]

"ಛಾಯುಗದಿಟ್ಠ = ಪ್ರಣಷ್ಟ" ಎಂಬರ್ಥ ಗಮನಾರ್ಹವಾದುದು.

(ಬಿ) ಅದೇ ಪುಟದಲ್ಲಿಯ ಇನ್ನೊಂದು ಆರ್ಯೆ "ರಸಮಜ್ಜಮಾಂಸ....... ಸರೀರಪುರಂ" ಛಂದಸ್ಸಿನ ದೃಷ್ಟಿಯಿಂದ ಹಾಗೂ ಅರ್ಥದೃಷ್ಟಿಯಿಂದ ಕೂಡ ಸರಿಯಾಗಿಲ್ಲ. ಅದನ್ನು ಹೀಗೆ ಬರೆದಿರಬಹುದು :

ರಸಮಜ್ಜಮಾಂಸ ಸೋಣಿದ
ಪುಪ್ಫುಸ ಕಾಲಿಜ್ಜ ಸೇಮ್ಹ ಸೀಹಾಣಂ |
[ಸಿಟ್ಠಾಜಾಲಟ್ಟಿ] ಸಕಲ
ಚಮ್ಮಾಣದ್ಧಂ ಸರೀರಪುರಂ ॥

'ಜಡಜಾಲ' ಎಂಬ ಶಬ್ದ ಪ್ರಾಕೃತದಲ್ಲಿ ಇಲ್ಲ. ಟಿಪ್ಪಣಿಗಳನ್ನು ಬರೆದಿರುವಲ್ಲಿ 'ಸಿರಜಾಲ' ಎಂದು ಪ್ರೊ। ಡಿ. ಎಲ್. ಎನ್. ಏಕೆ ಬರೆದರೋ ತಿಳಿಯದು. 'ಸಿಟ್ಠಾ = ಮಲ'. ಸಿಟ್ಠಾ (>ಸಿಡಾ>ಸಿಡ>ಜಡ) ರೂಪಕೆಟ್ಟು ಹೀಗಾಗಿರಬಹುದೆ ?

(ಸಿ) ಅದೇ ಪುಟದಲ್ಲಿಯ "ಛಾಯೇವ.......ಜಣಸಾಸಣೇ" ಎಂಬ ಆರ್ಯೆ ಛಂದಸ್ಸಿಗೆ ಸರಿಹೊಂದುತ್ತಿಲ್ಲ ಪಾಠದೋಷಗಳು ವಿಪರೀತ ಇವೆ.

(ಡಿ) ಪುಟ ೧೩೮ರಲ್ಲಿ "ಜಣವಯಣ...... .ಜೀವಾಣಂ" ಪದ್ಯದಲ್ಲಿ "ಜರಾಮರಣ" ಎಂಬ ಪಾಠಪರಿಷ್ಕರಣದ ಅಗತ್ಯವಿದೆ. "ಜರಮರಣ" ಛಂದಸ್ಸಿಗೂ ಹೊಂದುವುದಿಲ್ಲ. ಅರ್ಥಕ್ಕೂ ಸರಿಹೋಗುವುದಿಲ್ಲ.

---

31 'ಆರಾಧನಾಸೂತ್ರದ ಕಥೆ' [ಧ. ಅ. ದ 'ಅಣೆಯಾಪುತ್ತ'] ಇತ್ಯಾದಿಯನ್ನು ಇಲ್ಲಿ ಗಮನದಲ್ಲಿಟ್ಟುಕೊಂಡಿದ್ದೇನೆ.

32 ಇಲ್ಲಿನ ಪಾಠಕ್ಕೂ ಮೂಲಲೇಖಕರ ಪಾಠಕ್ಕೂ ಭೇದಗಳಿದ್ದಂತೆ ಅರಿವಾಗುತ್ತದೆ. 'ಪುರಂ' 'ಘರಂ' ಎಂಬ ಪಾಠಾಂತರವೂ ಗಮನಾರ್ಹವಾಗಿದೆ.

(೬) ಪುಟ ೧೪೪ರಲ್ಲಿ "ಸತ್ತಕ್ಖರ...,ಸವ್ವಕಲ್ಲಾಣಂ" ಪದ್ಯ ಈಗ ಅಚ್ಚಾಗಿರುವಂತೆ ಸರಿಯಿಲ್ಲ, ಛಂದಸ್ಸು ಕೆಟ್ಟಿದೆ. ಅದನ್ನು ಹೀಗೆ ಪಾಠಪರಿಷ್ಕರಿಸುವುದು ವಿಹಿತ ;

ಸತ್ತಕ್ಖರ ಸಜ್ಜಾಯಂ । **ಅರಹಂತಾಣಂ** ಣಮೋತ್ತಿ ಭಾವೇಣಂ
ಜೋಕುಣಇ ಅಣ್ಣಮಣಃ । ಸೋಪಾವಇ ಸವ್ವಕಲ್ಲಾಣಂ ॥

(೭) **ಉಪಗೀತಿ** : ಪುಟ ೧೪೧ರಲ್ಲಿ ಬಂದಿರುವ ಪದ್ಯ :

ಏಗೋಯ ಮರದಿ ಜೀವೋ
ಏಗೋ ಯ ದಿವಂ **ಉವವಜ್ಜಇ** ।
ಏಗೋ ಸಜಾಇ ಮರಣಂ
ಏಗೋ ಸಜ್ಜಾಇ ಣಿರಯಂ [ವಾ] ॥

[ಈ ಜೀವ ಒಂದೇ ಸಾಯುತ್ತದೆ ; ಅದು ಒಂದೇ ಸ್ವರ್ಗವನ್ನು ಸಂಪಾದಿಸುತ್ತದೆ. ಮರಣವನ್ನು ಜೀವ ಒಂದೇ ಅಪ್ಪುತ್ತದೆ : ಮತ್ತು ಅದೊಂದೇ ನರಕಕ್ಕೆ ಹೋಗುತ್ತದೆ. ಅರ್ಥಾತ್ ಜೀವ ಒಂದೇ : ಅದಕ್ಕೆ ಯಾವ ಬಂಧಗಳೂ ಇಲ್ಲ. ಪ್ರೊ। ಡಿ. ಎಲ್. ಎನ್. ಪದ್ಯದ ಅರ್ಥವನ್ನು ಅಷ್ಟು ಸಮಂಜಸವಾಗಿ ಬರೆದಿಲ್ಲ].

(೮) **ಗೀತಿ** : ಪುಟ ೧೧ರಲ್ಲಿ ಪದ್ಯ "ವರಯುವತಿ.......ಧಮ್ಮೇಣ" ಎಂಬುದು ಮತ್ತು ಪುಟ ೩೨ರಲ್ಲಿ ಬಂದಿರುವ ಪದ್ಯ "ಸಮ್ಮತ್ತ ಸಣ".......... ಗಚ್ಛೋಯ ॥" ಈ ಛಂದಸ್ಸಿಗೆ ಸಂಬಂಧಪಟ್ಟಿವೆ.

(೯) 'ದ್ವಿಪಥಕ' ಅಥವಾ 'ದೋಹಕ' : ಪ್ರ. ೪೮ ಮತ್ತು ಪ್ರ. ೧೯೦ನೆಯ ಪುಟ ಈ ಎರಡರಲ್ಲಿ ಒಂದು ವಿಶಿಷ್ಟಜಾತಿಯ ಛಂದಸ್ಸಿದೆ. ಆ ಪದ್ಯ ಹೀಗಿದೆ ನೋಡಿ :

ಭಿಜ್ಜಉ ಬಿಜ್ಜಉ ಜಾಉ ಖಉ ಜೋಇಯ ಏಹು ಸರೀರು
ಅಪ್ಪಾ ಭಾವಹಿ ಣಿಮ್ಮಲಉ ಜೇಂಪಾವಹಿ ಭವತೀರು ॥

ಇಲ್ಲಿ ಮೊದಲನೆಯ ಪಾದದಲ್ಲಿ ನಾಲ್ಕು ನಾಲ್ಕು ಮಾತ್ರೆಯ ಆರು ಗಣಗಳಿವೆ ; ಆದರೆ ಎರಡನೆಯ ಪಾದದಲ್ಲಿ ಅದೇ ರೀತಿಯ ಗಣವಿಭಜನೆ ಸಾಧ್ಯವಿಲ್ಲ. ಇದನ್ನು ಮಾತ್ರಾವಿಷಯಕ ಅರ್ಧಸಮಚತುಷ್ಪದೀ ಎಂದೂ ಹೇಳಬಹುದು ಆಗ ಪದ್ಯವನ್ನು ಹೀಗೆ ಬರೆಯಬೇಕಾಗುತ್ತದೆ :

ಭಿಜ್ಜಉ ಭಿಜ್ಜಉ ಜಾಉ ಖಉ। (4+4+6)
~
ಜೋಇಯ ಏಹುಸರೀರು ॥ (4+4+4)
~

ಅಪ್ಪಾ ಭಾವಹಿ ಜೆಮ್ಮಲಉ | (4+4+6)
~
ಜೇಂಪಾವಹಿಭವ ತೀರು || (4+4+4)
~

ಸ್ವಯಂಭೂ ಛಂದಸ್ ಗ್ರಂಥದಲ್ಲಿಯ "ದ್ವಿಪದಕ" ಎಂಬ ಛಂದಸ್ಸಿಗೆ ಇದು ಸರಿಹೋಗುತ್ತದೆ.[33] ಪ್ರತಿಪಾದದ ಕೊನೆಯ ಅಕ್ಷರವನ್ನು ಲಯಕ್ಕೆ ಬೇಕಾದ ಹಾಗೆ ಎಳೆದು ಸರಿಪಡಿಸಿಕೊಂಡ ಹಾಗೆ, ಛಂದಸ್ಸು ಸರಿ ಹೇರು ಆಗುತ್ತದೆ. ಇಲ್ಲಿನ ಪಾದದ ಛಂದೋವಿಭಜನೆ ೧೩ | ೧೨ : ೧೩ | ೧೨, ಹೀಗೆ ಸ್ವೀಕರಿಸಿದರೆ 'ಉಪದೋಹಕ' ಎಂಬ ಛಂದಸ್ಸಾಗುತ್ತದೆ.[34] ಈ ಎರಡನೆಯ ಬಗೆ, ಅಷ್ಟು ಸಮಂಜಸವಲ್ಲವೆಂದು ನನಗೆ ತೋರುತ್ತದೆ. ಏಕಾಭಿಪ್ರಾಯ ತಳೆಯಲು ಇಲ್ಲಿ ಸಾಧ್ಯವಿಲ್ಲ ; ಮತ್ತು ಅದು ನಿಸ್ಪೃಹ ನಿಲವೂ ಅಲ್ಲ.

(೬) **ಸಂಕೀರ್ಣ ಸ್ಕಂಧಕ** : ಈ ಬಗೆಯ ವಿಭಜನೆಗೆ ಅಳವಡುವ ಪದ್ಯಗಳು ಮೂರು. ಇವುಗಳ ವ್ಯಾಪ್ತಿ ಸ್ಕಂಧಕ ಹಾಗೂ ಆರ್ಯಾ ಮತ್ತು ಗೀತಿಗಳಲ್ಲಿ ಪ್ರಸವಿಸಿಕೊಂಡಿದೆ.

(ಅ) ಪುಟ ೧೧೮ರಲ್ಲಿ ಬಂದಿರುವ ಪದ್ಯ "ಪಾಪಾತ್ಕಿಲ ಜಾಯಂತೇ....... ನಿಬಿಡಾಳಿಸ್ತೇ ||" ಎಂಬುದು ಕಾಗ ಛಂದೋದೋಷದಿಂದ ಕೂಡಿದೆ. ಇದನ್ನು ಹೀಗೆ ಬರೆಯಬಹುದೆಂದು ತೋರುತ್ತದೆ.

ಪಾಪಾತ್ಕಿಲ ಜಾಯಂತೇ
ವಾಮನಪಂಗ್ವಂಧ ಕುಬ್ಜ ಖಂಜಕರಾಳಾಃ |
ಜಡ ಬಧಿರ ಮೂಕ ಕೃಶರೋ
ಮಶ [ವಕ್ರಃ ನಿಬಿಡ ಅ]ಳಿಸ್ತೇ ||

ಇದು ಸರಿಯಾದರೆ ಇದರ ಪೂರ್ವಾರ್ಧ ಆರ್ಯಾಗೀತಿ ಮತ್ತು ಉತ್ತರಾರ್ಧ ಆರ್ಯಾ. ಎಂದರೆ 32+27 (12+20+12+15) ಮಾತ್ರೆಗಳನ್ನು ಹೊಂದಿದೆ.

---

33 ಸ್ವಯಂಭೂಛಂದಸ್ (ಪ್ರೊ|| ಎಚ್. ಡಿ. ವೇಲಣಕರ್) ೪.೫. ಪು. ೫೪ ;

ಉದಾ : ಅವ್ವಿ ಅ ಕರಹ ದುಸೀಲ ಅ ಉ।
ಜೇರಿಉ ಕಿಂಪಿ ಣ ಜಾ ಇ ||
ಕಾವಿ ಮರುತ್ಥ ಲ ವೇಲ್ಲಿಲಿ ಅ ।
ತೆಹೊ ಕಾರಣೆ ವಿದಾ ಇ ||

34 ಅದೇ ಪು. ೪–೬

(ಆ) ಪುಟ. ೧೩೨ "ಅಟ್ಟೈಹಿ ಭಣ್ಣಂ........ಸಂತತಮುಚಿಓಕ್ಖಂ ||" ಈಗ ಛಂದೋ ದೋಷದಿಂದ ಕೂಡಿದೆ.

(ಇ) ಪು. ೧೪೧ರಲ್ಲಿ ಬಂದಿರುವ ಪದ್ಯ :

ನಿಶ್ಚಯ ಮುದಿತಸ್ಯ ರವೇಃ ।
ಪತನಂ ಜಾತಸ್ಯಮರಣಮಪಿ ಸರ್ವಸ್ಯ ।
ತಸ್ಮಾದ್ವಿದುಷಾ ಭಾವ್ಯಂ ।
ಸದೈವ ಜಾತೇನ ಧರ್ಮಕರ್ಮರತೇನ ॥

ಪೂರ್ವಾರ್ಧದಲ್ಲಿ 12 + 18 ಮತ್ತು ಉತ್ತರಾರ್ಧದಲ್ಲಿ 12 + 20 ರೀತಿಯಲ್ಲಿ ಬರೆಯಲ್ಪಟ್ಟಿದೆ. ಅರ್ಥಾತ್ ಪೂರ್ವಾರ್ಧದಲ್ಲಿ 'ಗೀತಿ' ಮತ್ತು ಉತ್ತರಾರ್ಧದಲ್ಲಿ ಆರ್ಯಾಗೀತಿ (ಕಂದ) ಗಳ ಜೋಡಣೆಯಿದೆ. 'ಛಂದಕೋಶ' ಗ್ರಂಥದಲ್ಲಿ ಇದನ್ನು ಗಾಹಿಣೀ (ಗಾಥಿನಿ) ಎಂದು ಹೇಳಿದೆ.[35]

IV

ಛಂದೋದೃಷ್ಟಿಯಿಂದ ವಡ್ಡಾರಾಧನೆಯ ಅಧ್ಯಯನ ಗ್ರಂಥದಲ್ಲಿಯ ಹಲವು ಪಾಠದೋಷಗಳನ್ನು ಸರಿಪಡಿಸಿಕೊಡುವುದಲ್ಲದೆ ಭಾಷೆಯ ದೃಷ್ಟಿಯಿಂದ ಕರ್ನಾಟಕದಲ್ಲಿ ಪ್ರಾಕೃತ ಸು. ಕ್ರಿ. ಶ. ೧೪೦೩ ರಷ್ಟೊತ್ತಿಗೆ ವಿಶೇಷವಾಗಿ ಜನಬಳಕೆಯಿಂದ ದೂರ ಸರಿದಿತ್ತೆಂಬುದನ್ನು ಸೂಚಿಸುತ್ತದೆ.[36] ಈ ಪದ್ಯಗಳಿಗೂ ಹರಿಷೇಣನ ಬೃಹತ್ಕಥಾಕೋಶಕ್ಕೂ ಅಜ್ಞಾತ ಭಗವತೀ ಆರಾಧನೆಗೂ ಮೂಲವಾದ ಇನ್ನೊಂದು ಆಕರ ಇದ್ದಿತೆಂಬುದರಲ್ಲಿ ಸಂದೇಹವಿಲ್ಲವೆಂಬುದೂ ಈ ಅಧ್ಯಯನದಲ್ಲಿ ಸ್ಪಷ್ಟವಾಗುತ್ತದೆ. ಗಾಹೆ (<ಗಾಥಾ) ಎಂದರೆ ಯಾವುದೇ ವಿಶಿಷ್ಟ ಛಂದಸ್ಸಾಗಿರದೆ ಪದ್ಯ ಎಂಬ ಅರ್ಥದಲ್ಲಿ ಬಳಸಲಾಗಿರುವುದು ಗಮನಾರ್ಹವಾದ ಅಂಶ.[37]

---

35 ಕವಿದರ್ಪಣ (ಸಂ. ಪ್ರೊ. ಎಚ್. ಡಿ. ವೇಲಣಕರ್). ಪು. ೧೧೦

36 "ವಡ್ಡಾರಾಧನೆ ಹಾಗೂ ಪ್ರಾಕೃತ" ಬೇರೊಂದು ಲೇಖನದ ವಿಷಯ.

37 ಈ ಲೇಖನವನ್ನು ಬರೆಯುವಲ್ಲಿ ಡಾ. ಕೆ. ರಾಘವೇಂದ್ರರಾವ್, ಶ್ರೀಯುತರಾದ ಜಿ. ಎಸ್. ಸಣ್ಣಯ್ಯ, ಕೆ. ಆರ್. ಶೇಷಗಿರಿ ಹಾಗೂ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾಗಿರುವ ಡಾ. ಹಾ. ಮಾ. ನಾಯಕ ಅವರುಗಳಿಗೆ ಋಣಿ ಆಗಿರುವೆ.

298

॥ ಈ ಪೇಳ್ದ ಪತ್ತೊಂಭತ್ತು ಕಥೆಗಳು ಶಿವಕೋಟ್ಯಾ-
ಚಾರ್ಯರ್ಪೇಳ್ದ ವೊಡ್ಡಾರಾಧನೆ ಸಂಪೂರ್ಣಂ । ಶುಭಮಸ್ತು ॥

॥ ಸ್ವಸ್ತಿ ಶ್ರೀಮತು ಸಕವರ್ಷ ೧೩೨೫ ಸುಭಾನು ಸಂವತ್ಸರದ ಕಾ. ಬ. ಅಮಾವಾಸೆ ಬುಧವಾರದಲು, ಸ್ವಸ್ತಿ ಶ್ರೀಮದ್ರಾಯರಾಜಗುರುಮಂಡಳಾಚಾರ್ಯ ಮಹಾವಾದವಾದೀಶ್ವರರಾಯವಾದಿಪಿತಾಮಹಸಕಳವಿದ್ವಜ್ಜನ ಚಕ್ರವರ್ತಿಗಳು ಮಪ್ಪ ಶ್ರೀ ಚಿಕ್ಕಪಂಡಿತದೇವರ ಪ್ರಿಯಾಗ್ರಗುಡ್ಡನು ಕ್ಷೇಮಪುರದ ಅಂಮಯಂಣಸೆಟ್ಟಿಯ ಮಗ ಪರಿಯಂಣನು ಯಮನಿಯಮಸ್ವಾಧ್ಯಾಯಧ್ಯಾನಮೌನಾನುಷ್ಠಾನ ಜಪತಪಃಸಮಾಧಿ ಶೀಲ ಗುಣಸಂಪನ್ನರುಮಪ್ಪ ಶ್ರೀ ಭಾನುಮುನಿಗಳ ವಾಕ್ಯಾಮೃತದಿಂ ಬರೆಯ ಕೊಟ್ಟನು. ಬರಸಿಕೊಟ್ಟಾತನು ಒಜಂಣಸೆಟ್ಟಿಯರ ಮಗ ಕಲ್ಲಪ್ಪಸೆಟ್ಟಿಯು ಕಮ… ಶ್ರೀ ಅಪ್ಪಗಳಿಗೆ ಆತ್ಮಾರ್ಥವಾಗಿ ವೊಡ್ಡಾರಾಧನೆಯನು ಬರಯಿಸಿಕೊಟ್ಟುದಕ್ಕೆ ಮಂಗಳಮಹಾ ॥

K. A. 297 MSS
Government Oriental Library Mysore·

ಪಂಪನ ದುರಂತಮಯ ಕರ್ಣ

—ಕೆ. ವೆಂಕಟರಾಮಾಚಾರ್

ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ಪಂಪನೆ "ಆದಿಕವಿ" ಎಂದು ರೂಢಿಯಿದೆ. ಆತನಿಗಿಂತ (ಇ. 949ಕ್ಕಿಂತ) ಹಿಂದೆ (9ನೇ ಶತಕದ ಆಚೀಚೆಗೆ) ೧ನೇ ಗುಣವರ್ಮ 'ಶೂದ್ರಕ' ಕಾವ್ಯ ಮತ್ತು 'ಹರಿವಂಶ' ಪುರಾಣಗಳನ್ನು ಬರೆದಿದ್ದಾನೆ. ಕ್ರಿ. ಪೂ. ೧ನೆಯ ಶತಕದಲ್ಲಿದ್ದ 'ಶೂದ್ರಕ' ರಾಜನೇ ನಾಯಕನಾಗಿರುವಂತೆ ರಾಮಿಲ-ಸೋಮಿಲರು 'ಶೂದ್ರಕ' ಕಾವ್ಯವನ್ನು ಬರೆದರು. ಅದನ್ನು ಆಧರಿಸಿ ದಂಡಿ "ಅವಂತಿ ಸುಂದರಿ" ಕತೆಯನ್ನು ಬರೆದನು. ಅವೆರಡನ್ನು ನೋಡಿ ಗಂಗ ಎರೆಯಪ್ಪನ ಆಶ್ರಯದ ೧ನೆ ಗುಣವರ್ಮನು ತತ್ಕಾಲೀನ ರಾಜಕೀಯ ಚರಿತ್ರೆಯನ್ನು ಬೆರಸಿ ಕನ್ನಡದಲ್ಲಿ "ಶೂದ್ರಕ" ಕಾವ್ಯವನ್ನು ಬರೆದನು. "ಹರಿವಂಶ"ವೆಂಬ ಜೈನ ಪುರಾಣವನ್ನು ಮತ್ತೆ ಬರೆದನು. ಇವೆರಡು "ವರ್ಣಕ", "ವಸ್ತುಕ" ಕಾವ್ಯಗಳಾಗಿವೆ. ಈ ಎರಡು ಕೃತಿಗಳಂತೆ ಪಂಪನು ಚಾರಿತ್ರಿಕ ವಿಚಾರವುಳ್ಳ "ವಿಕ್ರಮಾರ್ಜುನ ವಿಜಯ"ವನ್ನು ಮತ್ತೆ "ಆದಿಪುರಾಣ"ವನ್ನು ಬರೆದನು. ಇದರಿಂದಾಗಿ ೧ನೆಯ ಗುಣವರ್ಮನೆ ಕನ್ನಡದಲ್ಲಿ ಪ್ರಕೃತ ತಿಳಿದ ಮಟ್ಟಿಗೆ ಮೊದಲ ಕವಿಯೆಂದು ತಿಳಿಯುತ್ತದೆ.[1]

"ವ್ಯಾಸ ಮುನೀಂದ್ರ ರುಂದ್ರ ವಚನಾಮೃತ ವಾರ್ಧಿಯ ನೀಸುವೆಂ, ಕವಿವ್ಯಾಸನೆಂಬ ಗರ್ವಮೆನಗಿಲ್ಲ" ಎಂದು ಪಂಪನ ಅರಿಕೆ. ಅಂತೆಯೆ ವ್ಯಾಸಭಾರತದಿಂದ ಕೆಲವನ್ನು ಬಿಟ್ಟು, ಕೆಲವನ್ನು ಸಣ್ಣಿಸಿ, ಇದನ್ನು ಬರೆದನು. ಪಂಪನ ಪ್ರತಿಭೆ, ಶಬ್ದ ಶಕ್ತಿ, ಬಹುಶ್ರುತತ್ವ, ರಸಪೋಷಣ, ಅಲಂಕಾರಪ್ರಿಯತೆ, ಇತ್ಯಾದಿಗಳು ಇದರಲ್ಲಿ ವ್ಯಕ್ತವಾಗಿದೆ. ಆಮೇಲೆ ಬರೆದ ಆದಿಪುರಾಣದಲ್ಲಿ ಜೈನಮತಾನುಸಾರ ಸಾಗಬೇಕಾಗಿ, ಇಷ್ಟು ಹೆಚ್ಚು "ತನ್ನತನಗಳನ್ನು" ತೋರಿಲ್ಲವೆನ್ನಬೇಕು. ಪಂಪನು ಭಾರತಗ್ರಂಥದಲ್ಲಿ ಎಂಟುಮಂದಿಯ ಮೇಲ್ಮೆಯೇನೆಂದು ಹೇಳಿದ್ದಾನೆ: "ಛಲದೊಳ್ ದುರ್ಯೋಧನಂ, ನನ್ನಿಯೊಳಿನತನಯಂ." ಇತ್ಯಾದಿ. ಪಂಪಭಾರತದಲ್ಲಿ ವಿಕ್ರಮಾರ್ಜುನನೆ ನಾಯಕ, ಆತನಿಗೆ ಕೊನೆಯಲ್ಲಿ ಪಟ್ಟಾಭಿಷೇಕವಾಗುತ್ತದೆ. ಹಾಗಾಗಿ ಪ್ರತಿನಾಯಕನೆಂದು ಕರ್ಣನನ್ನೇ ಹೆಸರಿಸಬೇಕಾಗುತ್ತದೆ. ಕರ್ಣ ದುರ್ಯೋಧನನ ಮಿತ್ರ "ಕರ್ಣರಸಾಯನಮಲ್ತೆ ಭಾರತಂ" ಎಂದು ಕವಿ ಹೇಳಿದ್ದಾನೆ. ಅರ್ಜುನನನ್ನು ಬಲು

1 ಇವನ ಕಾವ್ಯಗಳಿಂದ 70ರಷ್ಟು ಪದ್ಯ, ಬೇರೆ-ಬೇರೆ ಕೃತಿಗಳಲ್ಲಿ ಉದ್ಧರಿಸಲ್ಪಟ್ಟಿವೆ.

ಮೇಲ್ಮೆಯಿಂದ ಕಾಣಲು ಪ್ರತಿಕೃತಿಯಾದ ಕರ್ಣ ಅವನಿಗೆ ಬಹುಶಃ ಸರಿಯಾದಕ್ಕೆ ಯುವನೇ ಇರಬೇಕು. ಆಗಿನ ರಾಜಕೀಯ ಚರಿತ್ರೆಯೂ ಹಾಗಿತ್ತು.

ಪಂಪಭಾರತದ ಕರ್ಣಪಾತ್ರ 'ದುರಂತ' ಎಂದು ಹೇಳುತ್ತಾರೆ. ಇದು 'ದುರಂತಮಯವಾಗಿ', 'ವಿಧಿ' ಯಿಂದಾಗಿ, ಸಂಘಟಿತವಾಗಿದೆ. ಅರ್ಜುನನಿಗೆ ಹಲವರಿಂದ ಸಹಾಯ-ಸಂಪತ್ತು ಒದಗಿದೆ. ಕರ್ಣನಿಗೆ ಹಲವರಿಂದ ನಿಸ್ಸಹಾಯಕತೆಯೇ ಒದಗಿದೆ. ಆಗಲೂ ಕರ್ಣ ಸಜ್ಜ ತ್ಯಾಗ. ಸ್ವಾಭಿಮಾನ. ಉನ್ನತಿಗಳಿಂದ ಮೆರೆದಿದ್ದಾನೆ. ಅರ್ಜುನ ಕರ್ಣನ ಗೆಲ್ಮೆಯನ್ನು ಪಡೆದನು. ಕರ್ಣ ಅದರಿಂದ ಮೇಲ್ಮೆಯನ್ನೂ ಪಡೆದನು.

ಕುಂತಿ ಬಾಲ್ಯದಲ್ಲಿ ದುರ್ವಾಸನನ್ನು ಸೇವಿಸಿದಳು. 'ಭವಿಷ್ಯದ ಗುಟ್ಟನ್ನರಿತ' ಮುನಿ ಆಕೆಗೆ ಪುತ್ರೋತ್ಪತ್ತಿಯ ಮಂತ್ರಗಳನ್ನು ಉಪದೇಶಿಸಿದನು. ಆಕೆ ಮಂತ್ರ ಪರೀಕ್ಷೆಗಾಗಿ ಸೂರ್ಯನನ್ನು ಕರೆದಳು. "ಅಜ್ಞೆಯಿಂದೆ ಬರಿಸಿದೆನ್, ಒನ್ನೇಳಿಪೆನ್, ಎಂದೊಡೆ, ಆಗದು ಪೋಗಲ್" ಎಂದ ಸೂರ್ಯನಿಂದ ಆಕೆಯಲ್ಲಿ ತತ್ಕ್ಷಣ ತೇಜೋವಂತ ಮಗುವೊಗೆತಂದಿತು. ಅಪವಾದ ಭಯದಿಂದ ಕುಂತಿ ಅದನ್ನು ಚಿನ್ನದ ಪೆಟ್ಟಿಗೆಯಲ್ಲಿಟ್ಟು, ನಿಧಾನಮನೀಡಾಡುವಂತೆ. ಗಂಗೆಯಲ್ಲಿ ತೇಲಿಸಿದಳು. ಅದರ ಭದ್ರತೆಗೆ ಕುಂತಿ ಬೇಡಿದಂತೆ ಸೂರ್ಯನಿಂದ ಕವಚ ಕುಂಡಲಗಳು ಲಭ್ಯವಾಗಿದ್ದುವು.

ಈ ಕರ್ಣ ಜನನದ ರಹಸ್ಯಕ್ಕೆ ಈ ನಾಲ್ವರಲ್ಲಿ ಯಾರು ತಪ್ಪುಗಾರರೆಂದು ವಿಮರ್ಶಕರಲ್ಲಿ ಹಲವು ಮತಭೇದಗಳಿವೆ. ಆದರೆ ಅವರವರ ಕೃತಿಯನ್ನು-ಕಾರ್ಯಗಳನ್ನು ಅಮಾನುಷಿಕವಾದ 'ವಿಧಿ'ಯು ಹಾಗೆ ನಡೆಸಿತ್ತು! (ದೂರ್ವಾಸನ ಮಂತ್ರೋಪದೇಶ ತಪ್ಪಾಗದು. ಕುಂತಿಯ ಚಾಪಲ್ಯ ಸಹಜ! ಸೂರ್ಯ ನಿರ್ಧಾರ ಅಗತ್ಯ! ಗಂಗೆಯ ಕಾರ್ಯ ಸಾಹಜಿಕವೆಂದೇ ಹೇಳಬೇಕು.)

ಸೂತನಾದ ಅಧಿರಥ ಯದೃಚ್ಛೆಯಿಂದ ಆ ಪೆಟ್ಟಿಗೆಯನ್ನು ಕಂಡನು. "ನಿಧಿ ಗಂಡನಂತೆ ಪೋಲ್". ಅದರೊಳಗಿನ ಮಗುವನ್ನು ಸಾಕಲು ರಾಧೆಗೆ ಕೊಟ್ಟನು. "ವಸುಷೇಣ, ಸೂತಪುತ್ರ, ರಾಧೇಯ" ಎಂದು ಮಗುವಿಗೆ ಹೆಸರಾಯಿತು: ಕರ್ಣಾ ಕರ್ಣಿಕೆಯ ಹೆಸರಿಂದ "ಕರ್ಣ"ನೆಂದು ಹೆಸರೆಂದು ಪಂಪನ ಮಾತು. ಕರ್ಣ, ವೈಕರ್ತನಗಳೆಂಬ ಹೆಸರು ಕವಚ ಕುಂಡಲಗಳ ದಾನದಿಂದ ಬಂತೆಂದು ವ್ಯಾಸನಲ್ಲಿದೆ. ಕೌಂತೇಯ, ಕಾನೀನ, ಸೂರ್ಯಪುತ್ರನೆಂದು ಒಂದೆರಡೆಡೆ ಹೇಳಿದೆ. ಸೂತನಂತೆ ಆತನ ಸಂಸ್ಕಾರಗಳು ನಡೆದುವು! ಸಹಜ ಕವಚ ಕುಂಡಲಗಳಿದ್ದೂ ಅವನಾರೆಂದು ಯಾರೂ ಸಂಶಯಿಸಿಲ್ಲ. ಭೂಗತ, ಜಲಗತ ವಸ್ತುಗಳು ದೊರಕಿದರೆ ರಾಜಾಧೀನಕ್ಕೆ ಸಲ್ಲುತ್ತವೆ: ಆ ಮೇರೆಗೆ ಕರ್ಣ ರಾಜಪುತ್ರನಾಗಬೇಕಿತ್ತು. "ವಿಧಿಯೇ" ಅವೆಲ್ಲವನ್ನೂ ಮರೆಸಿತ್ತು!

ವಿದ್ಯೆಗಾಗಿ 'ಪಾರ್ವ'ನೆಂದು ಸುಳ್ಳಾಡಿ. ಪರಶುರಾಮನಲ್ಲಿ ಕರ್ಣ ಸೇರಿದನು :

"ಕೂರಿಸೆ ಗುರು ಶುಶ್ರೂಷೆಯೊ
ಳಾರಾಮನನುಗ್ರ ಪರಶು ಪಾಟಿತ ರಿಪುವಂ
ಶಾರಾಮನನಿಷು ವಿದ್ಯಾ
ಪಾರಂಗನೆನಿಸಿದುದು ಬಲ್ಮೆ ವೈಕರ್ತನ ನಾ"

ಎಂದು ಕರ್ಣನ ಬಲ್ಮೆಯನ್ನು ಕವಿ ಒತ್ತಿ ಹೇಳಿದ್ದಾನೆ. ಕರ್ಣನ ತೊಡೆಯಲ್ಲಿ ತಲೆಯಿರಿಸಿ ಪರಶುರಾಮ ಒರಗಿದನು. ಇಂದ್ರ ಉಪಾಯದೊಳಟ್ಟಿದ ವಜ್ರಕೀಟಗಳು ಕರ್ಣನ ತೊಡೆಯನ್ನು "ಉಳಿಯನೂಱ ಕೊಡಂತಿಯೊಳ್ ಬಿಟ್ಟವಂತೆ" ಕೊರೆದುವು. ಆ ರಕ್ತದಿಂದ ಗುರು. ತೊಯ್ದು ಎಚ್ಚತ್ತನು. "ನಿನಗಾನಿತ್ತ ಬ್ರಹ್ಮಾಸ್ತ್ರಮೆಂಬ ದಿವ್ಯಾಸ್ತ್ರಂ ಅವಸಾನ ಕಾಲದೊಳ್ ಬೆಸಕೆಯ್ಯದಿರ್ಕೆಂ"ದು ಶಪಿಸಿದನು. ಕರ್ಣ ಹುಸಿದುದು ತಪ್ಪೆ ? ಪರಶುರಾಮನ ನಿರ್ಧಾರ ತಪ್ಪೆ ? ಕರ್ಣ 'ದ್ವಿಜ'ನಾಗಿದ್ದಾನೆ-(ಬ್ರಾಹ್ಮಣನಲ್ಲ.) ಸೂತನೆಂದರೆ, ಕ್ಷತ್ರ-ವೈಶ್ಯರಲ್ಲಿ ಜನಿಸಿದವನೆಂದು ಸ್ಮೃತಿಯಲ್ಲೂ ವ್ಯಾಸನಲ್ಲೂ ಹೇಳಿದೆ. ಆತನ ಹುಸಿಗಿಂತ ಗುರುಶುಶ್ರೂಷೆಯೇ ಮೇಲಾಗಿತ್ತು. ಕರ್ಣನ ನನ್ನಿಗೆ ಇದೊಂದು ಮೊದಲನೆ ಅಪವಾದ. (ಹರಿಶ್ಚಂದ್ರನೂ, ಪುತ್ರಾಭಿಲಾಷೆಯಿಂದ ಒಮ್ಮೆ ಮೊದಲಿಗೆ ಹುಸಿದನು. ಅನಂತರ 'ಸತ್ಯವ್ರತ'ವೊಂದೇ ಸಾಧಿಸಿದನು.) ಕರ್ಣನೂ ಹುಸಿ ಚೆನ್ನಲ್ಲೆಂದು ಇದರಿಂದ ಅರಿತು 'ನನ್ನಿ'ಯನ್ನು ಕೈಗೊಂಡನು ! ಬ್ರಾಹ್ಮಣ 'ತನಗಾಗಿ' ಬಿಲ್ಲು ವಿದ್ಯೆಯನ್ನು ಕಲಿಯಲಾಗದು. ಕ್ಷತ್ರಿಯರಿಗೆ (ಅರ್ಹರಿಗೆ) ಕಲಿಸಲು ಅಥವಾ ವೇದ ರಕ್ಷಣೆಗಾಗಿ ಕಲಿಯಬೇಕಾಗಿದೆ. ಪರಶುರಾಮನ ಪ್ರತಿಜ್ಞೆ ಅಷ್ಟು ಚೆನ್ನಲ್ಲವೆಂದೇ ಕಾಣುತ್ತದೆ. ಇವರಿಬ್ಬರಿಗೆ ತಿಳಿಯದಂತೆ ಅರ್ಜುನನಿಗಾಗಿ ಇಂದ್ರಪ್ರೇರಿತ ವಜ್ರಕೀಟಗಳ ಕೊರೆತದಿಂದ ಕರ್ಣ ಶಾಪ ಪ್ರೊದಗಿತು. ವಿಧಿಯು "ಕಾಣದಕೈ" ಹೀಗೆಲ್ಲಾ ಮಾಡಿಸಿತು. ಇಂದ್ರಪ್ರೇರಿತ ವಜ್ರಕೀಟಗಳು ಕೀಲಿಗಳು. ನಿರ್ಬಲ ಕರ್ಣ ಕೈಗೊಂಬೆಯಾದನು. ಕರ್ಣ 'ಪಾರ್ವ'ನಲ್ಲ ಎಂದರೆ, ಯಾವ ಜಾತಿಯವನೆಂದು ಇಲ್ಲಿ ನಿರ್ಧಾರವಾಗಿಲ್ಲ. "ದ್ವಿಜ"ನೆಂಬುದೂ ಸೂಚ್ಯವಾಗಿಲ್ಲ. ಇದೆಲ್ಲಾ ವಿಧಿಯ 'ನಾಯಕ'ದಿಂದ ಮರೆಯಾಗಿದೆ !

'ಕವಚ ಕುಂಡಲಗಳು' ಆಗ ಕರ್ಣನಲ್ಲಿರಲಿಲ್ಲ : ಆ ಮೊದಲೇ ಇಂದ್ರನಿಗೆ ಕೊಟ್ಟಂತೆ ಪಂಪ ಕವಯಿಸಿದ್ದಾನೆ. ಅವು ಆಗ ಇದ್ದರೆ ಪರಶುರಾಮನಿಗೆ ರಕ್ತ ತೋಯುತ್ತಿರಲಿಲ್ಲ; ಶಾಪವಾಗುತ್ತಿರಲಿಲ್ಲೆಂದು ಪಂಪನ ಅನಿಸಿಕೆಯಿರಬೇಕು. ಆದರೆ ಅವು ಆಗ ಕರ್ಣನಲ್ಲಿ ಇರುವುದರಿಂದಲೇ ಅದನ್ನು (ಕವಚವನ್ನು) ಕೊರೆಯುವ "ವಜ್ರಕೀಟಗಳು" ಕಳುಹಲ್ಪಟ್ಟವೆಂದು "ಉಳಿಯನೂಱ ಕೊಡತಿಯೊಳ್ ಬಿಟ್ಟವಂತೆ ಕೊರೆದು"ವೆಂದು ಸ್ಪಷ್ಟವಾಗಿದೆ. ಕವಚಕುಂಡಲಗಳ ದಾನ ಸರಿಯಲ್ಲವೆಂದು

ಕರ್ಣನಿಗೆ ಸೂರ್ಯ ಹೇಳಿದನೆಂದು ವ್ಯಾಸನಲ್ಲಿದೆ. ಆದರೆ ಕರ್ಣ ನನ್ನಿಗೆ ಕಟ್ಟುಬಿದ್ದವನು. "ಪರಶುರಾಮನ ಶಾಪ ಕವಚಕುಂಡಲಗಳ ದಾನಗಳು ಪ್ರಕ್ಷಿಪ್ತಗಳೆಂದು ವಿಮರ್ಶಕರೆನ್ನುತ್ತಾರೆ. ವೈಕರ್ತನ, 'ಕರ್ಣ'ನೆಂಬ ಹೆಸರು ಕವಚ-ಕುಂಡಲಗಳ ಛೇದನದಿಂದಲೇ ಬಂದುದೆಂದು ವ್ಯಾಸನಲ್ಲಿದೆ.

ಕರ್ಣನು ಶಿಷ್ಯನಾಗಿ ದ್ರೋಣನಲ್ಲಿ ಸೇರಿದನು. ಶಸ್ತ್ರವಿದ್ಯೆಯ ಪರೀಕ್ಷೆಯಲ್ಲಿ ಅರ್ಜುನನೇ ಮೇಲಾದನು.

"ದುರ್ಯೋಧನನ ಮೊಗಂ ತಲೆನವಿರಗಂಟಿಂ ಕಿಱಿದಾಗೆ, ದ್ರೋಣ ಭೀಷ್ಮ ಕೃಪ ವಿದುರ ಪ್ರಭೃತಿಗಳ ಮೊಗಮರ್ ಅರಲ್ದ ತಾವರೆಯಂ ಪಿರಿದಾಗೆ."

ತೊಳಗುವ ತೇಜಂ ತೊಳ ತೊಳ
ತೊಳಗುವ ದಿವ್ಯಾಸ್ತ್ರಮುಮುರ್ವ ಕೋದಂಡಮುಮಂ
ಗೊಳಿಸೆ ಮನಂಗೊಳಿಸಿ ಭಯಂ
ಗೊಳಿಸೆ ಸಭಾಸದರನುಱದೆ ಕರ್ಣಂ ಬಂದಂ

ಎರ್ದೆಯ ಮುನಿಸು ಸಾಲಿಗೆಗೆವರೆ, ಸೈರಿಸಲಾರದೆ—ಕರ್ಣ, ಅರ್ಜುನನನ್ನು ಕಾದಲು ಕರೆದನು. (ಎಲ್ಲರಿಗಿಂತ ಮೇಲಾದವನನ್ನು ಕರೆದರೆ ತಪ್ಪಿಲ್ಲ.) ಅವನಿಗೆ ಆಗ ದ್ರೋಣ ಕೃಪರು ಹೇಳಿದರು :

ಏವದ ಮುಳಿಸಿನ ಕಾರಣ
ಮಾವುದೊ ನೀಂ ನಿನ್ನ ತಾಯ ತಂದೆಯ ಪೆಸರಂ
ಭಾವಿಸಿದೆ ಕರ್ಣ ನುಡಿವಂ
ತಾವುದು ಸಮಕಟ್ಟು ನಿನಗಮರಿಕೇಸರಿಗಂ

ಅದಕ್ಕೆ ದುರ್ಯೋಧನ ಉತ್ತರಿಸಿದನು :

ಕುಲನೆಂಬುದುಂಟೆ ಬೀರದೊ
ಕುಲಮಲ್ಲದೆ ಕುಲಮನಿಂತು ಪಿಕ್ಕದಿರಿಂ ನೀ
ನೊಲಿದೆಲ್ಲಿ ಪುಟ್ಟಿ ಬಳೆದಿರೊ
ಕುಲಮುರ್ಚಿದವೆ ಕೊಡದೊಳಂ ಶರಸ್ತಂಬದೊಳಂ.

ಕರ್ಣನ ಕುಲದ ಪ್ರಶ್ನೆಯೆತ್ತಿದ ದ್ರೋಣಾದಿಗಳೂ : ಆತನ ಸ್ವಪರಾಕ್ರಮವನ್ನು ತಿಳಿಯಲು ಪ್ರಯತ್ನಿಸಲಿಲ್ಲ. ದುರ್ಯೋಧನನ ನುಡಿಗೆ ಯಾರೂ ಉತ್ತರಿಸಿಲ್ಲ. ಅಲ್ಲಿ ವಿದ್ಯೆ ಕಲಿವಾಗ ಕರ್ಣನ ಜಾತಿಯ ಪ್ರಶ್ನೆಯೇಳಲಿಲ್ಲ. ಅರ್ಜುನನಷ್ಟೆ ವಿದ್ಯೆ ತೋರಲು ಅರ್ಜುನನನ್ನು ಕರೆಯಲು—ಜಾತೀಯ ಪ್ರಶ್ನೆಯೆದ್ದಿದೆ. ಇಂತಹ ಸಾಹಸ "ಕ್ಷತ್ರಿಯರಿಂಗಲ್ಲದಾಗದು" ಎಂದು ಪರಶುರಾಮನಂತೆ, ಅಲ್ಲಿ ಯಾರಿಗೂ ಗೋಚರಿಸಿಲ್ಲ.

ಅಂಗದೇಶದ ರಾಜ್ಯಾಭಿಷೇಕ ದುರ್ಯೋಧನನಿಂದ ಕರ್ಣನಿಗೆ ಲಭಿಸಿತು. ಆತ ರಾಜನಾದನು. ಆದರೂ ಸೂತಪುತ್ರನೆಂದೇ ಎಲ್ಲರಿಗೂ ತಾತ್ಸಾರ! 'ವಿಧಿ'ಯಾಟವಿದು!

ಕರ್ಣನ ನಿಂದೆ ಕೇಳಿ ಕುಂತಿಯು ಮೂರ್ಛಾಗತಳಾದಳೆಂದು ವ್ಯಾಸನಲ್ಲಿದೆ. ಕರ್ಣನ ನೈಜ ಕವಚ-ಕುಂಡಲಗಳಿಂದ ಆಕೆ ಆತನನ್ನು ಗುರುತಿಸಿ ದುಃಖಿಸಿರಬೇಕು. ಈ ಬಗೆ ವಿಚಾರ-ಕಾರಣ ವಿವರಣೆ-ಅಲ್ಲೇನೂ ನಡೆದಿಲ್ಲ. ವಿಧಿಯು ಎಲ್ಲರ ಬಾಯ ಮುಚ್ಚಿಸಿತು!

ಕೌರವನಲ್ಲಿ ಸಂಧಾನ ನಿಷ್ಫಲವಾಗಲು ಈ ಕರ್ಣನಲ್ಲಿ ಸಂಧಾನಕ್ಕೆಂದು ಕೃಷ್ಣ ಬಗೆದನು. ಕರ್ಣನ ಜೀವನ ವೃತ್ತವನ್ನು ಕುಂತಿಗೆ ನೆನಪಿಸಿ, ಆತನಲ್ಲಿಗೈದಿ ಪ್ರಾರ್ಥನೆಯನ್ನು ಕೇಳಲು ಪ್ರೇರಿಸಿದನು. ಆ ಮೊದಲಿಗೆ ತಾನೊಂದು ಭೇದದ ಉಪಾಯವನ್ನು ಕೈಗೊಂಡನು :

ಗುರು ಕೃಪ ಶಲ್ಯ ಸಿಂಧುಸುತರಪ್ಪೊಡೆ ನಮ್ಮ ಪಕ್ಷಮೊಂದಿದರ್
ಗುರುಸುತನೀಗಳೆನ್ನೊಳತಿಮಿತ್ರ ವಿಶಾರದನಪ್ಪನಂ ನೆಲ
ಲ್ಕರಿಯನು ಪೊಂದಿ ಬಾರದನುಮಂ ಕರ್ಣನೆ ವೀರ ನಾತನಂ
ದುರಿವರಿದತ್ತು ಚಾಗಮುಮನಿಂದುಕಿದತ್ತು ಸಮಸ್ತ ಧಾತ್ರಿಯೊಳ್

ಕೃಷ್ಣ, 'ಕರ್ಣನ ಮನೆಯ ಮುಂದನೆ ಬಂದು ಮೇಲೆ ಯಿಟ್ಟಿ ಮುಂಕಿರಿದಂತರಂ ಕಳುಪಿ ಮಗುಳ್ಚಿ ಬಾ' ಎಂದು ಕರೆದುಯ್ದು, ಆತನ ಮೂಲವೃತ್ತವನ್ನು ವಿವರಿಸಿದನು. ಇದನ್ನು ತಾನು, ಸಹದೇವ, ದುರ್ಯೋಧನ, ದಿನೇಶ, ಕುಂತಿ, (ಗಂಗೆ) ಮಾತ್ರ ತಿಳಿದವರೆಂದನು.

ದುರ್ಯೋಧನನೂ ಇದನ್ನು ತಿಳಿದವನೆಂದು ಪಂಪನಲ್ಲಿ ಮಾತ್ರ ಇದೆ. ತಾನು 'ಕೌಂತೇಯ' ಎಂದು ತಿಳಿದಿದ್ದೇನೆಂಬ ಕರ್ಣನ ವಾಕ್ಯ ವ್ಯಾಸನಲ್ಲಿದೆ. ಕೌರವನಿಗೆ ಕರ್ಣನ ನಿಜಸ್ಥಿತಿಯರಿತಂತಿದೆ. 'ಮುಕ್ಕೋಳೆ ಮುಕ್ಕನ್ ಪಾಟಿಸುವೆ' ಎಂದು ಆತ ಕರ್ಣನನ್ನು ಆತ್ಮೀಯವಾಗಿ ಕಂಡನೆಂಬುದು ನೈಮಿತ್ತಿಕವಾದ ರಾಜಕೀಯ ನೀತಿಯಾಗಿದೆ. 'ಪ್ರಯೋಜನಾಪೇಕ್ಷಿತಯಾ ಪ್ರಭೂಣಾಂ ಪ್ರಾಯಶ್ಚಲಂ ಗೌರವಮಾಶ್ರಿತೇಷು' ಎಂಬಂತೆ ದುರ್ಯೋಧನನಾ ನಡೆದುಕೊಂಡ.

"ನಿನ್ನದೀ ಮೇದಿನಿ...." ಇತ್ಯಾದಿ ಕೃಷ್ಣನ ಕರ್ಣ ಸಂಧಾನ ಸಫಲವಾಗಲಿಲ್ಲ. ಕೌರವ ತನ್ನಲ್ಲಿರಿಸಿದ ಕೆಳೆತನವನ್ನು "ಅಕೃತ್ರಿಮ"ವೆಂದೇ ಬಗೆದನು. ('ನೆತ್ತಮ ನಾಡಿ ಭಾನುಮತಿ ಸೋಲಿತ್ತೊಡೆ' ಎಂಬ ಪದ್ಯದಲ್ಲಿ ಕೌರವನ ಮೇಲ್ಮೆ ತಿಳಿಯುತ್ತದೆ.) ತನ್ನ ನೈಜ ವಿಚಾರ (ಜನ್ಮವೃತ್ತ) ಪಾಂಡವರಿಗೆ ತಿಳಿಯಬಾರದೆಂದು ಕರ್ಣ ಕೃಷ್ಣನಲ್ಲಿ ಹೇಳಿದನು. ಆತ ತನಗೆಂತೂ ಒಡಂಬಡುವನಲ್ಲೆಂದು ಕೃಷ್ಣ ತಿಳಿದನು.

"ಕುರುಪತಿಗಿಲ್ಲ ದೈವಬಲಂ" ಎಂದು ಕರ್ಣ ತಿಳಿದನು. ವಿಧಿಯೇ ಇಲ್ಲಿ ಮೇಲುಗೈ ಯಾಗಿದೆ!

ಪಂಪನ ಕರ್ಣ ನನ್ನಿಕಾರ. ಕುಂತಿ ಕರ್ಣನನ್ನು ಸಂಧಿಸಿ ವರಗಳನ್ನು ಕೇಳಿದುದು ಪಂಪನಲ್ಲಿದೆ. ವ್ಯಾಸನಲ್ಲಿ 'ವರಗಳು' ಬಗೆಯಿಲ್ಲ. ಅರ್ಜುನ ನಿದ್ದು ತಾನಿಲ್ಲದೆ ಅಥವಾ ತಾನಿದ್ದು, ಅರ್ಜುನನಿಲ್ಲದೆ, ಅಯ್ವರು ಮಕ್ಕಳು ನಿನಗುಳಿ ಯುವರೆಂದು ವ್ಯಾಸನಲ್ಲಿದೆ. (ಕರ್ಣನಿಗೆ ಅರ್ಜುನನಲ್ಲಿಯೇ 'ದ್ವೇಷ'ವೆಂದು ಇಲ್ಲಿ ಸ್ಪಷ್ಟ!) ಕರ್ಣನು ರಣದೊಳಗೆ ಪಾಂಡವರನ್ನು ಕೊಲ್ಲನು "ರಣದೊಳ್ ಕೊಲ್ವೆನು" ಎಂದಂತೆ ಕನ್ನಡ ಕೃತಿಯಲ್ಲಿದೆ. ಕರ್ಣನ ಬಗೆತನವೇನೆಂದು ಕವಿವಾಕ್ಯ ಗಮನೀಯ: "ಚಲದ ಚಾಗದ ಕುಲದ ನನ್ನಿಯ ನಾವಣಿಗಿ, ರಾಧೇಯನ್ ಒಳ್ಪಿಂಗಾಧೇಯ ಮಾಗಿರ್ದಂ."

ಸತ್ಯವ್ರತಕ್ಕಾಗಿ ಹರಿಶ್ಚಂದ್ರ ರಾಜ್ಯವನ್ನು ದಾನವಿತ್ತನು. ಕರ್ಣ ಸತ್ಯ ವ್ರತಕ್ಕಾಗಿ ಜೀವವನ್ನೇ ಕೊಟ್ಟನು. ಇದಕ್ಕೆ ವಿಧಿಯೇ ಸೂತ್ರಧಾರಿ.

ಸೇನಾಪತಿಯಾಗಿ ಭೀಷ್ಮನನ್ನು ಕೌರವ ಆರಿಸಿದನು. ಅದಕ್ಕೆ ಕರ್ಣ ಮುರುಮು ಜೋರುವನು. "ಭಗವತಿ ಯೇರುವೇಳ್ಪ ಕೆಲದಿಂ ಕತೆಯಾಯ್ತುವರೇರು." "ಅಭಿ ಮಾನವೊಂದೆ ಕುಲಂ" ಕರ್ಣ ನುಡಿಯುವನು. ಗಂಗಾಸುತನ ಮೇಲ್ವಿಚಾರವು 'ಬಲ್ವಿಡಿಯು' ಎಂದು, ಆತ ಗದ್ದರಿ 'ತಾನು ತಪಕೆ ಹೋಗುವೆ' ಎಂದು ಪ್ರತಿಜ್ಞೆ ಗೈದನು. ಈ ಮಾತು ವರ್ತನೆ ಚಂದವಲ್ಲ. ಈ ಬಗ್ಗೆ ಭೀಷ್ಮನೇ ನುಡಿಯು ವನು: "ನುಡಿದುದಂ ಪತಿಭಕ್ತಿಯ ಕೆಂಪಿಂ ನೀಂ ನುಡಿದೈ, ಪೆಜತಂದದಿಂ ನುಡಿದೆ ಯಲ್ತು." ಇದರಿಂದ ಕೌರವನಿಗೆ ತುಸ ನಷ್ಟವೆಂದು ಕಾಣುವುದು. ಕರ್ಣನ ದೃಷ್ಟಿಯಲ್ಲಿ ಹಾಗಿಲ್ಲ. ಅವನ ಬಗೆ ಸ್ವಾಭಿಮಾನದ್ದು.

ಇಂದ್ರನಿಂದ ಪಡೆದ ಶಕ್ತಿಯನ್ನು ಅರ್ಜುನನಿಗಂದೇ ಕರ್ಣ ಮೀಸಲಿರಿಸಿದ್ದನು. ಆದರೂ ಘಟೋತ್ಕಚನಿಗೆ ಅದನ್ನು ಬಳಸಿದನು. "ಇವನನೆಳ್ದುಜಿ ಕೊಂದರವ ಇನತನಯಂಗಲ್ಲದಂಗೆ ಒಪ್ಪುಗುಮೆ" ಎಂದು ಕವಿಯುದ್ಗಾರವಿದೆ. ಘಟೋತ್ಕಚ ಹಾಗೆ ತೀರಲು "ಇನ್ನು ಕರ್ಣ ನಿರ್ಬಲ"ನೆಂದು ಕೃಷ್ಣ ಸಂತಸಪಟ್ಟನು. ಸ್ವಾಮಿ ನಿಷ್ಠೆಯಿಂದಾಗಿ ಕರ್ಣ ಶಕ್ತಿಯನ್ನು ಹಾಗೆ ಬಳಸಿದನು. ಕುಂಭಜ ಹತನಾದಾಗ, "ದೈವವೇ ಪ್ರಬಲ"ವೆಂದು ಕರ್ಣ ನುಡಿಯುತ್ತಾನೆ.

ಕರ್ಣ ಸೇನಾಪತಿಯಾಗುವ ಮೊದಲಿಗೆ ಭೀಷ್ಮನಲ್ಲಿ ಗೈದ ತನ್ನ 'ಅಪ ಚಾರ'ವನ್ನು ಮನ್ನಿಸಲು ಬೇಡಿದನು. "ಕುತಂ ಕುಲೀನನಲ್ಲಿ. ... ಕುಲ ದವ್ಯನಾಗಲೇವೇಳ್ಕುಂ" ಎಂದು ಭೀಷ್ಮ ಬಗೆದನು. ಆದರೆ ಈ ಬಗೆತದ ಸತ್ಯಾಂಶ ನಿರ್ಧಾರವಾಗಲಿಲ್ಲ. ಅದು 'ವಿಧಿ'ಯಿಂದಲೇ ಮರೆಯಾಗಿತ್ತು!

ಕೌರವನ ಮಾತಿನಂತೆ ಕರ್ಣನ ಸಾರಥ್ಯಕ್ಕೆ ಶಲ್ಯ ಒಪ್ಪುವನು. ಇದನ್ನು ಕೇಳಿ ಧರ್ಮಜನು "ಇಲ್ಲಿಗೆ ಕಜ್ಜಮಾಪುದಚ್ಯುತಾ !" ಎಂದಾಗ, ಕೃಷ್ಣನ ಮಾತಿನಲ್ಲಿ ಕರ್ಣನ ಉತ್ಕರ್ಷತೆಯಿದೆ. "ಕರ್ಣಂಗಂಡಲ್ತೆ ಕಲ್ತರ್ ನುಡಿವ ಪಸುಗೆಯಂ...."

"ಬಿದಿವಸದಿಂದೆ ಪುಟ್ಟುವುದು ಪುಟ್ಟಿಸುವಂಬಿದಿ....
ಬಿದಿ ಸಮಕಟ್ಟಿ ಕೊಟ್ಟೊಡೆಯೊಳ್ ಕಿಡಿಸಲ್ ಕುಡಿಸಲ್
ಸಮರ್ಥರಾರ್- "

ಎಂಬುದು ಕರ್ಣನ ನಿರ್ಧಾರ. ನರನ ಉರದೆಡೆಗೆ ಬಾಣವನ್ನು ಹೂಡಲು-ಶಲ್ಯ ಕೇಳಿದಾಗ ಕರ್ಣ "ಆಗಳೊಳ್ಳಿನ ಪೆಮ್ಮಾತಿನ ನನ್ನಿ ಬನ್ನದೊಳೊಡಂಬಟ್ಟು ಪ್ರೀದಂ ಮಾಣ್ಬೆನೇ ?" ಎಂದು ಚಿಂತಿಸಿ, "ಇನ್ನಿಲ್ಲಿ ಪೆಂಪೆಱಕಂಬೆತ್ತಿರೆ ಕಾಪೆನೆನ್ನ ನುಡಿಯಂ ಕೆಯ್ಕೊಂಡು ಕೆಟ್ಟಾಂಬುಮಂ" ಎಂದು (ತಾಯಿಗೆ ಮಾತುಗೊಟ್ಟು 'ಪುರಿಗಣೆ' ತೊಡೆನೆಂಬುದನ್ನು) ನಿರ್ಧರಿಸುವನು. ಆಗ ಶಲ್ಯ ಅಲ್ಲಿಂದ ತೊಲಗಿದನೆಂದು ಪಂಪನಲ್ಲಿದೆ. ಕರ್ಣ ಏಕಾಂಗ ಸಾಹಸಿಯೆನ್ನಲು ಕವಿಯ ಚಿತ್ರಣವಿದು. (ವ್ಯಾಸರಲ್ಲಿ ಶಲ್ಯ ನಿರ್ಗಮನವಿಲ್ಲ.) ಇದೊಂದು ಮರ್ಮ್ಯನವ ಘಟನೆ !

ಕರ್ಣನ ತೇರು ಆಕಸ್ಮಿಕವಾಗಿ ನೆಲದಲ್ಲಿ ಹುಗಿದಿತ್ತು. ತನ್ನ ಗೋವನ್ನು ಕೊಂದ ಕರ್ಣನಿಗೆ ಬ್ರಾಹ್ಮಣನ ಶಾಪದ ಫಲವಿದು ಎಂದು ವ್ಯಾಸನಲ್ಲಿದೆ. ಕರ್ಣನಿಗೆ ಗೋಹತ್ಯೆಯೊದಗಿದುದು "ದುರ್ವಿಧಿ"ಯಿಂದ !

ಅರ್ಜುನನ 'ಅಂಜಲಿಕಾಸ್ತ್ರ'ದಿಂದ ಕರ್ಣನ ದೇಹದಿಂದ ತಲೆ ಬೇರ್ಪಟ್ಟಿತು. ಕರ್ಣನ ಗುಣಗಳನ್ನು ಕವಿ ಬಾಯ್ತುಂಬ ಸಾರಿದ್ದಾನೆ: "ಓಡಿದನೆ ಪುರಿಗಣೆಯನ್ ?" "ನೆನೆಯದಿರಣ್ಣ ಭಾರತದೊಳಿಂ ಪೆರರಾರುಮನೊಂದೆ ಚಿತ್ತದಿಂ ನೆನೆವೊಡೆ ಕರ್ಣನಂ ನೆನೆಯ....ಕರ್ಣರಸಾಯನಮಲ್ತೆ ಭಾರತಂ !" ಕರ್ಣನು ತ್ಯಾಗದಿಂದ ನನ್ನಿಯಿಂದ ಕೀರ್ತಿವಂತನಾದನು. ಕರ್ಣನ ಅವಸಾನದಿಂದ ವಿಕ್ರಮಾರ್ಜುನನು ಗೆಲ್ಮೆ ಪಡೆದನು.

ಹೀಗೆ ವ್ಯಾಸಭಾರತಕ್ಕಿಂತ ಪಂಪನ ಕರ್ಣ ವಿಧಿಯಿಂದ "ದುರಂತನಾಯ" ನಾಗಿದ್ದಾನೆ.

ಅನುಬಂಧ

ರಾಮಾಯಣದಲ್ಲಿ ಸೂರ್ಯಪುತ್ರನಿಗೆ ದೇವರ ಒಲವಿದ್ದಂತೆ, ಭಾರತದಲ್ಲಿ ಇಂದ್ರಪುತ್ರನಲ್ಲಿ ದೇವರ ಒಲವಿದ್ದುದರಿಂದ, ಕರ್ಣನಿಗೆ ಹೀಗಾಯಿತೆನ್ನುವ ತರ್ಕ ಚೆನ್ನಾಗದು. ಅಲ್ಲಿಯ ಸುಗ್ರೀವನಿಗಿಂತಲೂ, ಇಲ್ಲಿಯ ಕರ್ಣನ 'ದುರ್ವಿಧಿ' ಅಸಾಮಾನ್ಯ. ಆ ತೆರದಲ್ಲಿ ಪಂಪನು ವ್ಯಾಸನಿಗಿಂತ ಹೆಚ್ಚಾಗಿ ಕರ್ಣನನ್ನು ಚಿತ್ರಿಸಿದ್ದಾನೆ. ಕರ್ಣನ ಈ ಪಾತ್ರಚಿತ್ರಣಕ್ಕೆ ಹಿನ್ನೆಲೆಗಳೆಂದು ಪಂಪನಿಗೆ ಕೆಲವೆಡೆ ಕೊಟ್ಟಿದ್ದಾನೆ. ಅಂತೆ, ವ್ಯಾಸಭಾರತದ ಕೆಲವು ಮಾತುಗಳು ಇಲ್ಲಿವೆ :

1. ಅನಾಗಸಃ ಪಿತುಃ ರಾಜ್ಞೋ ಭ್ರಾತೃವರ್ಗಸ್ಯ ತಸ್ಯ ಚ ।
   ಅಸ್ಮಿನ್ಪುತ್ರಃ ಕಥಂ ನಸ್ಯಾತ್ ಕ್ರೂರಾತ್ಮಾ ದಸ್ಯುಭಾವಕಃ । (ವನ. 306-2)

2. ಅಬ್ರಾಹ್ಮಣೇ ನ ಬ್ರಹ್ಮ ಧ್ರುವಂ ತಿಷ್ಠೇತ್ಕದಾಚನ —
   (ಶಾಂತಿ. 3-31)

3. ಕ್ಷತ್ರಿಯಾಣಾಂ ಬಲಂ ಜ್ಯೇಷ್ಠಂ ಯೋದ್ಧವ್ಯಂ ಕ್ಷತ್ರಬಂಧುನಾ ।
   ಶೂರಾಣಾಂ ಚ ನದೀನಾಂ ಚ ದುರ್ವಿದಃ ಪ್ರಭವಃ ಕಿಲ ।
   —(ಆದಿ. 139-11)

4. ನ ಪೃಥಿವ್ಯಾ ಸಕಲಯಾ ಸುವರ್ಣಸ್ಯ ಚ ರಾಶಿಭಿಃ ।
   ಹರ್ಷಾದ್ಭಯಾದ್ವಾ ಗೋವಿಂದ ಮಿಥ್ಯಾ ಕರ್ತುಂ ತದುತ್ಸಹೇ ॥
   —(ಉ. 140-17)

5. ನತೇಜಾತುವಿನಶ್ಯಂತಿ ಪುತ್ರಾಃ ಪಂಚ ಯಶಸ್ವಿನಿ ।
   ನಿರರ್ಜುನಾಃ ಸಕರ್ಣಾ ವಾ, ಸಾರ್ಜುನಾ ವಾ ಹತೇ ಮಯಿ ॥
   —(ಉ. 145-23)

6. ಬಲಜ್ಯೇಷ್ಠಂ ಸ್ಮೃತಂ ಕ್ಷತ್ರಂ ಮಂತ್ರಜ್ಯೇಷ್ಠಾ ದ್ವಿಜಾತಯಃ ।
   ಧನಜ್ಯೇಷ್ಠಾಃ ಸ್ಮೃತಾ ವೈಶ್ಯಾಃ, ಶೂದ್ರಾಸ್ತು ವಯಸಾಧಿಕಾಃ ॥
   —(ಉ. 167-17)

7. ಅಹಮೇವ ತು ರಾಧೇಯಂ ಮೋಹಯಾಮಿ ಯುಧಾಂವರ ।
   ತತೋ ನಾವಸೃಜಚ್ಛಕ್ತಿಂ ಪಾಂಡವೇ ಶ್ವೇತವಾಹನೇ ॥
   —(ದ್ರೋ. 183-40)

8. ಅವಶ್ಯಂ ಭಾವಿಯದ್ಭಾವ್ಯಂ ಕೋಹಿಶಕ್ತೋ ನಿವಾರಿತುಮ್ ।
ದೈವಂ ಪುರುಷ ಕಾರೇಣ ಕೋಽನಿವರ್ತಿತು ಮುತ್ಸಹೇತ್ ॥

—(ಭೀ. 124.26)

9. ಸವ್ಯಂ ಚಕ್ರಂ ಮಹೀಗ್ರಸ್ತಂ ದೃಷ್ಟ್ವಾ ದೈವಾದಿದಂ ಮಮ ।
ಪಾರ್ಥ ಕಾಪುರುಷಾ ಜೀರ್ಣಮುಷ್ಯ ಸಂಘಂ ವಿಸರ್ಜಯ ।

—(ಕ. 90-104)

10. ಏವಂಶಪ್ತಸ್ತವ ಭ್ರಾತಾ ಬಹುಭಿಶ್ಚಾಪಿ ವಂಚಿತಃ ।

—(ಶಾಂ. 5-15)

ರನ್ನನ ಒಂದು ಪದ್ಯದ ಸರಿಯಾದ ಪಾಠ ಮತ್ತು ಅರ್ಥ

—ಡಾ| ಎಂ. ಚಿದಾನಂದಮೂರ್ತಿ

ರನ್ನನ "ಗದಾಯುದ್ಧ"ದ ಒಂದು ಪದ್ಯದ ಪಾಠಸಮಸ್ಯೆಯನ್ನು ಕುರಿತು ಡಾ| ಎಂ. ಎಂ. ಕಲಬುರ್ಗಿಯವರು ಪ್ರಸ್ತಾಪಿಸಿ[1] ಉಪಕಾರಮಾಡಿದ್ದಾರೆ. ಆ ಪದ್ಯ ಹೀಗಿದೆ :

> ಪಸಿಪಿ ನೊಸಲ್ಗೆವಂ [1]ಪಸಿದು ಬಂದವಗೀಕ್ಷಿಸ ಯುದ್ಧರಂಗದೊಳ್
> ಕುಸಿಯದೆ ಸೊಜಿಗೆಗೊಳ್ಳದೆ ರಣಕ್ಕೆ ಸುಚಿತ್ತಮನಪ್ಪ ಕೆಯ್ಯ[1] (?) ಮಾ
> ನಸಿಕೆಯ ನಾಲ್ಕುರಂ [2]ನಮಗೆ ಮಂದ್ಯರನಂದಿರೊಳೀ[2] ತನಲ್ಕೆ ಪಾ
> ಹಸಘನನೆಂದು ಕೆಯ್ಯು ಗಮನಂದಭಿಮನ್ಯುಗೆ ಕೌರವೇಶ್ವರಂ ||

ಇದಕ್ಕೆ ಎಂ. ಎ. ರಾಮಾನುಜಯ್ಯಂಗಾರ್ಯರ 1925ರ ಆವೃತ್ತಿಯಲ್ಲಿ (4.59) ಪಾಠಾಂತರಗಳು ಹೀಗಿವೆ :

1-1. ಸಾಫಲಿಪಕ್ಷಿ ಸುಪರ್ಣನಾಸೀವ ಯುದ್ಧದೊಳ್....ಸಮುಚಿತ್ತದೊಳಪ್ಪುಗೈದು

2-2. ಟವರೆ ಮಂದ್ಯರವರ್ಗಳೊಳೀ

ಶ್ರೀ ಕೆ. ವಿ. ಕೃಷ್ಣಭಟ್ಟರ ಆವೃತ್ತಿಯಲ್ಲಿ ಮೇಲಿನ ಪಾಠವೇ ಅಂಗೀಕೃತವಾಗಿದೆ. (ಎರಡನೆಯ ಪಾದದ ಪ್ರಶ್ನಾರ್ಥಕ ಚಿಹ್ನೆ ಅಲ್ಲಿ ಲೋಪವಾಗಿದೆ.)[2] ಶ್ರೀ ಪಿ. ಸುಬ್ರಾಯಭಟ್ಟರ ಆವೃತ್ತಿಯಲ್ಲಿ (4.60) ಮೇಲಿನ ಪಾಠವನ್ನೇ ಅಂಗೀಕರಿಸಿರುವರಾದರೂ (ಅಲ್ಲಿಯೂ ಎರಡನೆಯ ಪಾದದ ಪ್ರಶ್ನಾರ್ಥಕ ಚಿಹ್ನೆ ಲೋಪವಾಗಿದೆ.) ಆ

---

1. 'ಗದಾಯುದ್ಧದ ಒಂದು ಪದ್ಯ'. ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ. 65 : 1–2. ಪು. 30-33.

2. ರಾಮಾನುಜಯ್ಯಂಗಾರರು ಆ ಪ್ರಶ್ನಾರ್ಥಕ ಚಿಹ್ನೆಯನ್ನು ಹಾಕಿದ್ದು ಏಕೆ ಎಂಬುದು ಅಷ್ಟು ಸ್ಪಷ್ಟವಾಗಿಲ್ಲ. ಪಾಠದ ಬಗ್ಗೆ ಅವರ ಸಂದೇಹಕ್ಕೆ ಅದು ಸೂಚಕವಾಗಿ ಇರಬಹುದು ಅಥವಾ ಅರ್ಥದ ಬಗ್ಗೆ ಇರಬಹುದು ಎಂದು ತೋರುತ್ತದೆ.

ಪದ್ಯಕ್ಕೆ ಅರ್ಥ ಬರೆಯುವಾಗ "ಕುಸಿಯದೆ ಸೂಜಿಗೊಳ್ಳದೆ" ಎಂಬ ಭಾಗವು "ಕುಸಿಯದ ಸೂಜಿಗೊಳ್ಳದ" ಎಂದಿದ್ದಿರಬಹುದೇ ಎಂದು ಸಂದೇಹಪಟ್ಟಿದ್ದಾರೆ. (ಬಿ) ಪ್ರೊ. ತೀ. ನ. ಶ್ರೀಕಂಠಯ್ಯನವರ "ಗದಾಯುದ್ಧ ಸಂಗ್ರಹ"ದಲ್ಲಿ ಈ ಪದ್ಯ ಬಿಟ್ಟು ಹೋಗಿರುವುದರಿಂದ ಅವರ ಅಭಿಪ್ರಾಯವೇನಿತ್ತೋ ತಿಳಿಯದು.

ಈ ಮೇಲಿನ ಎಲ್ಲ ಸಾಮಗ್ರಿಯನ್ನೂ ಡಾ। ಕಲಬುರ್ಗಿಯವರು ಲಕ್ಷಿಸಿದ್ದಾರೆ. "ಪಸಿವಿನೊಳನ್ನಮಂ ಪಸಿದು ಬಂದವರ್ಗಿಕ್ಕುವ ಎಂಬಲ್ಲಿ ಒಂದು ಬಗೆಯ ಅರ್ಥಸಂದಿಗ್ಧತೆ ಕಾಣುತ್ತದೆ" ಎಂದಿರುವರಾದರೂ ಮುಂದೆ "ಪಸಿವು" ಎಂಬ ಪಾಠವನ್ನೇ ಒಪ್ಪಿಕೊಳ್ಳುತ್ತಾರೆ. "ಸುಫಲದಲ್ಲಿ...." ಎಂಬ ಇದೇ ಪಾಠಾಂತರವನ್ನು ಮೂಲಪಾಠವಾಗಿ ಸ್ವೀಕರಿಸಿ "ಪಸಿದು ಬಂದವರ್ಗಿಕ್ಕುವ...." ಎಂಬ ಹಿಂದಿನ ಎಲ್ಲ ಸಂಪಾದಕರೂ ಒಪ್ಪಿಕೊಂಡು ಬಂದಿದ್ದ ಪಾಠವನ್ನು ತಿರಸ್ಕರಿಸುತ್ತಾರೆ. ಅವರು ಹಾಗೆ ತಿರಸ್ಕರಿಸಿರುವುದು ಉಚಿತವಾಗಿರುವುದಾದರೂ ಏಕೆ ತಿರಸ್ಕರಿಸಿದ್ದೇನೆ ಎಂಬುದಕ್ಕೆ ಸರಿಯಾದ ಕಾರಣವನ್ನು ಕೊಡುವುದಿಲ್ಲವಾದ ಕಾರಣ ಅವರ ಆಯ್ಕೆ ಯಾದೃಚ್ಛಿಕ (arbitrary) ಎನ್ನಿಸಿಕೊಳ್ಳುವುದರಿಂದ ಅಷ್ಟರಮಟ್ಟಿಗೆ ತನ್ನ ಬೆಲೆಯನ್ನು ಕಳೆದುಕೊಳ್ಳುತ್ತದೆ. ಅವರು "ಅರ್ಥಸಂದಿಗ್ಧತೆ" ಎಂಬ ಮಾತನ್ನು ಬಳಸಿದ್ದರೂ, ಈಗಿರುವಂತೆಯೇ "(ತಾನು) ಹಸಿದಿದ್ದರೂ ಹಸಿದು ಬಂದವರಿಗೆ ಅನ್ನವನ್ನು ಇಕ್ಕುವ" ಎಂಬ ಅರ್ಥವನ್ನು ಏನಾದರೂ ಮಾಡಿ ಹೊಂದಿಸುವ ಸಾಧ್ಯತೆ ಇದ್ದೇ ಇದೆ.

ಇಲ್ಲಿ ನಿಜವಾಗಿಯೂ ಗ್ರಂಥಸಂಪಾದನೆಯ ಒಂದು ಸಮಸ್ಯೆಯಿದೆ. ಒಂದು ಪಾಠದ ಬಗ್ಗೆ ವಿಚಾರಮಾಡುವಾಗ ಇನ್ನೊಂದು ಭಿನ್ನಪಾಠ ಬಂದುದಕ್ಕೆ ಕಾರಣವೇನು ಎಂಬ ಪ್ರಶ್ನೆಯನ್ನು ನಾವು ಹಾಕಿಕೊಳ್ಳಬೇಕು. ಯಾವುದೇ ಭಿನ್ನಪಾಠ ಬರಲಿಕ್ಕೂ ಸಾಮಾನ್ಯವಾಗಿ ಒಂದು ಕಾರಣವಿರುತ್ತದೆ: ಮತ್ತು ಅದಕ್ಕೆ ಸಮಜಾಯಿಷಿಕೊಡಲು ಸಾಧ್ಯವಿರುತ್ತದೆ. (ಕೆಲವೊಮ್ಮೆ ನಮಗೆ ಸಮಜಾಯಿಷಿಕೊಡಲು ಸಾಧ್ಯವಿಲ್ಲದಿರಬಹುದು ; ಆದರೆ ಕಾರಣವೊಂದು ಇರುವುದು ಮಾತ್ರ ನಿಜ.) "ಪಸಿದು ಬಂದವರ್ಗಿಕ್ಕುವ," "ಸುಫಲದಲ್ಲಿ ಸುವರ್ಣಮಾಸಿವ" ಈ ಎರಡು ಪಾಠಗಳೂ ಸುಲಭವಾಗಿ ಅರ್ಥವಾಗುತ್ತವೆ. ನಿಷ್ಕಾರಣವಾಗಿ ಒಂದು ಸುಲಭಪಾಠವನ್ನು ತೆಗೆದು ಇನ್ನೊಂದು ಸುಲಭಪಾಠವನ್ನು ಹಾಕುವುದು ಪ್ರತಿಕಾರರಲ್ಲಿ ಸಾಮಾನ್ಯವಾಗಿ ಕಂಡುಬರುವುದಿಲ್ಲ. ಆವೆರಡರಲ್ಲಿ ಯಾವುದೋ ಒಂದು ಮೂಲಪಾಠವಾಗಿದ್ದು ಇನ್ನೊಂದು ಆಮೇಲೆ ಬಂದಿರಬೇಕು ಎಂಬುದು ನಿಜವಾಗಿದ್ದರೆ, ಆಗ ಮೂಲಪಾಠದ ಬದಲು ಇನ್ನೊಂದು ಪಾಠ ಬರಲು ಕಾರಣವಾಗುವಂಥ ಪರಿಸ್ಥಿತಿ ಇಲ್ಲಿಲ್ಲ, ಬೇರೆ ಕಡೆ ಇದೆಯೆಂಬುದು ಗೊತ್ತಾಗುತ್ತದೆ. ನಿಜವಾದ ಸಮಸ್ಯೆಯ ಮೂಲ ಇರುವುದು ಈ ಪಾಠಾಂತರಗಳಲ್ಲಿಲ್ಲ ; ಅದು ಇರುವುದು ಮೊದಲ ಆರಂಭದ "ಪಸಿವು" ಭಾಗದಲ್ಲಿ.

ತಾನು ಹಸಿದಿದ್ದರೂ ಇನ್ನೊಬ್ಬನಿಗೆ ಅನ್ನವನ್ನು ಕೊಡುವುದು ಶ್ರೇಷ್ಠ ಕಾರ್ಯವೇ ನಿಜ : ಆದರೆ ಇನ್ನೊಬ್ಬನಿಗೆ ಅನ್ನದಾನ ಮಾಡುವಾಗ ತಾನು ಹಸಿದೇ ಇರಬೇಕಾಗಿಲ್ಲ ; ಅನ್ನದಾನವನ್ನು ಮಾಡುವುದು ಮುಖ್ಯ. ಈ ಸಂದರ್ಭದಲ್ಲಿ ಬೇಲೂರು ತಾಲೂಕಿನ ಈ ಶಾಸನವನ್ನು ಗಮನಿಸಬಹುದು :

ಹಸುಗೂಸುಗಳ್ಗೆ ಹಾಲಂ
ಹಸಿದವರ್ಗನ್ನಮುಮನಪ್ಪುಕೆಯಿಂ ನಿಚ್ಚಂ
ಹಸಗಾಲದೊಳಂ ಸಲಿಸುವ
ಬೆಸನದಿ ನಾರಾದಿಗೌಂಡನಂ ಪೋಲ್ವನ್ನರ್ ॥[3]

ಈ ಕ್ರಿ. ಶ. 1182ರ ಬೇಲೂರಿನ 137ನೇ ಶಾಸನದಲ್ಲಿ "ಹಸಗಾಲ"ದಲ್ಲಿಯೂ ("ಹಸಗಾಲದೊಳಂ") ಕೂಡ ಹಸುಗೂಸುಗಳಿಗೆ ಹಾಲನ್ನೂ ಹಸಿದವರಿಗೆ ಅನ್ನವನ್ನೂ ನಿತ್ಯವೂ ದಾನಮಾಡುವ ಆದಿಗೌಂಡನ "ಬೆಸನ" (ವ್ಯಸನ)ವನ್ನು ಈ ಶಾಸನದಲ್ಲಿ ಹೊಗಳಲಾಗಿದೆ. "ಹಸಗಾಲ" ಎಂದರೆ ಕ್ಷಾಮಕಾಲ. ಕ್ಷಾಮಕಾಲದ ಅನ್ನದಾನ ಶ್ರೇಷ್ಠ ; ಮಳೆ ಬೆಳೆ ಸಮೃದ್ಧವಾಗಿರುವ ಕಾಲದಲ್ಲಿ ಮಾಡುವುದಕ್ಕಿಂತ ಹೆಚ್ಚು ಶ್ರೇಷ್ಠ. ("ಹಸಗಾಲದೊಳಂ" ಎಂಬ ಮಾತನ್ನು ಗಮನಿಸಬೇಕು. "ಕ್ಷಾಮಕಾಲದಲ್ಲಿಯೂ" ಎಂಬಲ್ಲಿ, ಕ್ಷಾಮ ಬಂದೊಡನೆ ಉದಾರಿಗಳಾಗಿರುವವರೂ ಕೂಡ ದಾನವನ್ನು ನಿಲ್ಲಿಸಿಬಿಡುತ್ತಾರೆ, ಎಲ್ಲೋ ಆದಿಗೌಂಡನಂತಹವರು ಮಾತ್ರ ತೀರ ವಿರಳವಾಗಿ ಒಳ್ಳೆಯ ಕಾಲದಲ್ಲಿ ಹೇಗೋ ಹಾಗೆ ಕ್ಷಾಮಕಾಲದಲ್ಲೂ ನಿರಂತರವಾಗಿ ಆಹಾರದಾನ ಮಾಡುತ್ತಾರೆ ಎಂಬ ಧ್ವನಿಯಿದೆ.)

"ಹಸಗಾಲ"ದಲ್ಲಿ ಎರಡು ಶಬ್ದಗಳಿವೆ : 'ಹಸ' ಅಥವಾ 'ಹಸವು'+ಕಾಲ. "ಹಸವು" ಶಬ್ದದ ಹಿಂದಿನ ರೂಪ "ಪಸವು" (=ಕ್ಷಾಮ). ರನ್ನನ ಹಿಂದಿನ ಮತ್ತು ರನ್ನನ ಸಮಕಾಲೀನ ಕೃತಿಗಳಲ್ಲಿ "ಪಸವು" ಎಂಬ ಶಬ್ದರೂಪ ಹಲವೆಡೆ ದೊರಕುತ್ತದೆ.

(1) "ಈ ನಾಡೊಳ್ ಪನ್ನೆರಡು ವರ್ಷಂಬರಂ ರೌದ್ರ ಪಸವುಮಕ್ಕುಂ"[4]

(2) "ಬಡಗನಾಡ ಪಸವು ತಿಳಿಪುದೆಂಬುದನಾ ನಾಡಿಂದಂ ಬಂದರ್
ಪೇೞೆ"[5]

3. ಆರ್. ನರಸಿಂಹಾಚಾರ್ (ಸಂ.) : ಶಾಸನಪದ್ಯ ಮಂಜರಿ (ಬೆಂಗಳೂರು, 1975, ಪು. 209).

4. ವಡ್ಡಾರಾಧನೆ (ಸಂ. ಡಿ. ಎಲ್. ನರಸಿಂಹಾಚಾರ್). ಮೈಸೂರು, 1970. ಪು. 86.

5. ಅದೇ ಪು. 90.

(3) "ಮಾನಸರ್ ಮಾನಸರಂ ತಿಂಬಂತು ಬಪ್ಪ ಘೋರಂ ಪಸವಾದೊಡಲ್ಲಿಯ
ಶ್ರಾವಕರೆಲ್ಲಂ ನೆರೆದು...."[6]

(4) "ಇಂಚೆಯ ಪಸವಿನ ಬಳಿಸ....ಬಾಧೆಯಿಲ್ಲದ ಪದವೊಳ್."[7]

(5) "ಆವ ಜೀವಕ್ಕಂ ಪಸಿವು ಪಸವುಂ ಪ್ರಾಣವಧೆಯು ಮಾಗದಿರೆಯುಂ"[8]

ಈ ಪ್ರಯೋಗಗಳು ಗದಾಯುದ್ಧದ ಪದ್ಯದ ಆರಂಭದ ಶಬ್ದ "ಪಸಿವು" ಅಲ್ಲ, "ಪಸವು" ಎಂಬುದನ್ನು ಸಹಜವಾಗಿ ಸೂಚಿಸುತ್ತವೆ. "ಪಸಿವು", "ಪಸವು"ಗಳಲ್ಲಿ "ಪಸವು" ನಿಶ್ಚಿತವಾಗಿಯೂ ಕಠಿಣಪಾಠ : ಅದು ಅರ್ಥವಾಗದೆ ಈಚಿನ ಪ್ರತಿಕಾರರು ಅದನ್ನು "ಪಸಿವು" ಎಂಬುದಾಗಿ ತಿದ್ದಿದರು. ಮುಂದಿನ ಭಾಗ "ಸುಫಲದಲ್ಲಿ...." ಎಂದಿರಬೇಕು. ಈಗ ನೋಡಿ :

"ಪಸವಿನೊಳನ್ನಮಂ ಸುಫಲದಲ್ಲಿ ಸುವರ್ಣಮನೀವ...."

ಇಲ್ಲಿ ಒಬ್ಬ ನಿಜವಾದ ಉದಾರಿಯ ಚಿತ್ರವಿದೆ. ಅವನು ಪಸವಿನಲ್ಲಿ, ಎಂದರೆ ಕ್ಷಾಮಕಾಲದಲ್ಲಿ ಆಹಾರವನ್ನೂ, ಸುಫಲಕಾಲದಲ್ಲಿ (ಸಮೃದ್ಧಿಯ ಕಾಲದಲ್ಲಿ) ಚಿನ್ನವನ್ನೂ ದಾನಮಾಡುತ್ತಾನೆ. ಕ್ಷಾಮಕಾಲದಲ್ಲಿ ಚಿನ್ನವನ್ನು ಕೊಟ್ಟರೆ ವ್ಯರ್ಥ : ಸಮೃದ್ಧಿಯ ಕಾಲದಲ್ಲಿ ಅನ್ನದಾನ ಮಾಡುವುದರಲ್ಲಿ ಅಂತಹ ವಿಶೇಷತೆ ಇಲ್ಲ. "ಪಸವು" ಮತ್ತು "ಸುಫಲ" ಇವೆರಡನ್ನೂ ಕವಿ ವಿರೋಧದಲ್ಲಿ ಇಟ್ಟಿದ್ದಾನೆ. ಪದ್ಯದ ಆ ಭಾಗದ ಸ್ವಾರಸ್ಯವೇ ಅದು. ಮತ್ತು ಕವಿಯ ಮೂಲಪಾಠ ಅದೇ ಎಂಬಲ್ಲಿ ಅನುಮಾನಕ್ಕೆ ಅವಕಾಶವೇ ಇಲ್ಲ.

ಈಗ, ಈ ಮೂಲಪಾಠ ಏಕೆ ವ್ಯತ್ಯಾಸವಾಯಿತೆಂಬುದು ಸ್ಪಷ್ಟವಾಗುತ್ತದೆ. ಮೇಲಿನ ಕವಿ ಪಾಠವನ್ನು "ಪಸಿವಿನೊಳನ್ನಮಂ" ಎಂದು ತಿದ್ದಿದ ಪ್ರತಿಕಾರನೋ ಅಥವಾ ಇನ್ನೊಬ್ಬನೋ "ಸುಫಲದಲ್ಲಿ...." ಎಂಬುದನ್ನೂ ಮತ್ತೆ ತಿದ್ದಬೇಕಾಯ್ತು. ಏಕೆಂದರೆ, "ಪಸವಿನೊಳ್" ಎಂಬುದನ್ನು ಅರ್ಥವಾಗದೆ "ಪಸಿವಿನೊಳ್" ಎಂದು ಮಾಡಿಕೊಂಡ ಬಳಿಕ, ಆ ಪಾದಭಾಗ "ಪಸಿವಿನೊಳನ್ನಮಂ ಸುಫಲದಲ್ಲಿ ಸುವರ್ಣಮನೀವ" ಎಂದಾಯ್ತು. ಇದರ ಅರ್ಥ "ಹಸಿವಿನಲ್ಲಿ ಅನ್ನವನ್ನೂ ಸುಫಲಕಾಲದಲ್ಲಿ ಚಿನ್ನವನ್ನೂ ಕೊಡುವ" ಎಂದಾಗುತ್ತದೆ. "ಪಸಿವು" ದೈಹಿಕ ಬಯಕೆಯನ್ನೂ "ಸುಫಲ"ವು ಕಾಲವನ್ನೂ ಹೇಳುತ್ತವೆ. ಇವೆರಡಕ್ಕೂ ಸಪ್ತಮೀವಿಭಕ್ತಿ ಹತ್ತಿದಾಗ

---

6. ಅದೇ ಪು. 92.

7. ಪಂಪಭಾರತ, 8.51.

8. ಶಾಂತಿಪುರಾಣ, 12.14. ವಚನ.

ಎರಡೂ ಒಂದೇ ವರ್ಗದ ಅರ್ಥವನ್ನು ಹೇಳಬೇಕು : ಆದರೆ ವಾಸ್ತವವಾಗಿ ಅವೆರಡೂ ಬೇರೆ ಬೇರೆ ವರ್ಗದ ಅರ್ಥಗಳನ್ನು ಹೇಳುತ್ತವೆ. ಜೊತೆಗೆ, "ಪಸಿವಿನೊಳ್" ಎಂಬುದರ ಹಿಂದೆ ತನ್ನ ಅಥವಾ ಇನ್ನೊಬ್ಬನ ಎಂಬುದನ್ನು ಅಧ್ಯಾಹಾರಮಾಡಿಕೊಳ್ಳಬೇಕು : ಈಗಿರುವಂತೆ ಇನ್ನೊಬ್ಬನ ಎಂಬುದರ ಅಧ್ಯಾಹಾರವೇ ಉಚಿತ. ಆಗ ಹೀಗಾಗುತ್ತದೆ ನೋಡಿ– "(ಇನ್ನೊಬ್ಬನ) ಹಸಿವಿನಲ್ಲಿ ಅನ್ನವನ್ನು" ಎಂದು ಅಧ್ಯಾಹಾರದೊಡನೆ ಅರ್ಥಮಾಡಿಕೊಂಡಂತೆ, "ಸುಫಲದಲ್ಲಿ" ಎಂಬುದರ ಹಿಂದೆಯೂ ಇನ್ನೊಬ್ಬನ ಎಂಬಂತಹ ಪದವನ್ನು ಅಧ್ಯಾಹಾರಮಾಡಿಕೊಳ್ಳಬೇಕಾಗುತ್ತದೆ– ಎರಡರಲ್ಲೂ ಸಪ್ತಮೀವಿಭಕ್ತಿ ಪ್ರತ್ಯಯ ಹತ್ತಿರುವುದರಿಂದ. ಆಗ ಹೊರಡುವ ಅರ್ಥ ಆಭಾಸವಾಗಿರುತ್ತದೆ. "ಪಸವು" ಎಂಬುದು "ಪಸಿವು" ಎಂದು ತಿದ್ದುಪಾಟವಾದುದರಿಂದ ಈ ಕ್ಲೇಶ ಒದಗಿತು. ಈ ಕ್ಲೇಶನಿವಾರಣೆಗೆ ಇರುವ ಏಕೈಕ ಮಾರ್ಗ "ಸುಫಲದಲ್ಲಿ...." ಎನ್ನುವುದನ್ನೂ ತಿದ್ದುವುದು. ಇಲ್ಲದಿದ್ದರೆ, ಸಮೃದ್ಧಿಯಕಾಲದಲ್ಲಿ ಅನ್ನವನ್ನು ಕೊಡುವವನು ಕ್ಷಾಮಕಾಲದಲ್ಲಿ ಏನುಮಾಡುತ್ತಿದ್ದ ಎಂಬುದಕ್ಕೆ ತಿದ್ದುಪಾಟದ ಪಾಠದಲ್ಲಿ ಉತ್ತರವಿಲ್ಲ. ಹೀಗಾಗಿ, "ಪಸಿವಿನೊಳನ್ನಮಂ ಪಸಿದುಬಂದವರ್ಗಿಕ್ಕುವ" ಎಂದು ಇಡೀ ಭಾಗವನ್ನು ತಿದ್ದಿದಾಗ, ಅದಕ್ಕೆ ಆರಂಭದಲ್ಲಿ "ತನ್ನ" ಎಂಬ ಅಧ್ಯಾಹಾರವೊಂದು ಮಾತ್ರ ಸಾಧ್ಯ. ಎಂದರೆ, "(ತಾನು) ಹಸಿದಿದ್ದರೂ ಹಸಿದು ಬಂದವರಿಗೆ ಅನ್ನವನ್ನು ಇಕ್ಕುವ" ಎಂಬ ಅರ್ಥ ಅದಕ್ಕುಂಟು. "ಸುಫಲದಲ್ಲಿ ಸುವರ್ಣವನೀವ" ಎಂಬ ಪಾಠಾಂತರ ದೊರಕದಿದ್ದರೆ ಅದೇ ಕವಿಪಾಠವೆಂದು ಒಪ್ಪಿಕೊಂಡುಬಿಡುತ್ತಿದ್ದೆವು. ಏಕೆಂದರೆ, ಅಲ್ಲಿ ಅನ್ವಯಕ್ಲೇಶವಾಗಲಿ ಅರ್ಥಕ್ಲೇಶವಾಗಲಿ ಇಲ್ಲ. ಮೂಲಪಾಠ ಮೇಲೆ ಹೇಳಿದಂತೆ ಎರಡನೆಯ ಬಾರಿ ಮಾರ್ಪಾಟಾದಾಗ, "ಯುದ್ಧದೊಳ್" ಎಂಬುದು "ಯುದ್ಧರಂಗದೊಳ್" ಎಂಬುದಾಗಿ ಛಂದಸ್ಸಿಗೆ ಹೊಂದಿಕೊಳ್ಳುವಂತೆ ಮಾರ್ಪಾಟಾಗಬೇಕಾಯಿತು.

"ಸುಫಲದಲ್ಲಿ ಸುವರ್ಣವನೀವ" ಎಂಬುದೇ ಸ್ವೀಕರಣಯೋಗ್ಯವೆನ್ನಲು ಅದು [ತ] ಎಂಬ ಪ್ರತಿಯಲ್ಲಿ ದೊರಕುವುದೂ ಒಂದು ಕಾರಣ. ಅದು ಮದ್ರಾಸಿನ ಪ್ರತಿ ಮತ್ತು ಅದರ ಮಾತೃಕೆಯು ಮೂಲಮಾತೃಕೆಗೆ ಸಮೀಪವೆಂದು ಸಂಪಾದಕರಾದ ಶ್ರೀ ರಾಮಾನುಜಅಯ್ಯಂಗಾರರು ಭಾವಿಸುತ್ತಾರೆ.

ಹೀಗೆ, "ಪಸವು" ಎಂಬುದು ಕಠಿಣಪಾಠವಾಗಿರುವುದರಿಂದಲೂ ಆ ರೂಪ ರನ್ನನ ಕಾಲದ ಚಂಪೂಕಾವ್ಯಗಳಲ್ಲಿ ಬಹಳ ಕಡೆ ಕಂಡುಬರುವುದರಿಂದಲೂ ಅದು "ಸುಫಲ" ಎಂಬ ಶಬ್ದದೊಡನೆ ವೈರುಧ್ಯವನ್ನು ಪಡೆದು ಅರ್ಥಪುಷ್ಟಿಗೆ ಒದಗುವುದ

9. "ರ್ಗ" ಶಿಥಿಲದ್ವಿತ್ವ.

ರಿಂದಲೂ, ಅದನ್ನು ಊಹಾತ್ಮಕ ಪರಿಷ್ಕರಣದಿಂದ "ಪಸಿವು" ಎಂಬುದರ ಭಾಗದಲ್ಲಿಟ್ಟು ಮೊದಲ ಸಾಲನ್ನು ಹೀಗೆ ತಿದ್ದಬಹುದು :

"ಪಸವಿನೊಳನ್ನಮಂ ಸುಫಲದಲ್ಲಿ ಸುವರ್ಣಮನೀವ ಯುದ್ಧದೊಳ್"

ಇದೇ ಕವಿಪಾಠವೆಂಬಲ್ಲಿ ಅನುಮಾನವಿಲ್ಲ. ಇದು ಚಂಪಕಮಾಲಾವೃತ್ತದ ಮೊದಲ ಪಾದ.

ಈಗ ಮುಂದಿನ ಸಾಲುಗಳಿಗೆ ಹೋಗೋಣ. ಎರಡನೆಯ ಪಾದದಲ್ಲಿ "ಕ್ಷೆಶುಚಿತ್ವಮನಪ್ಪುಕೆಯ್ವು" ಎಂಬ ಭಾಗಕ್ಕೆ [ತ] ಪ್ರತಿಯಲ್ಲಿ "ಸಮುಚಿತ್ತದೊಳಪ್ಪುಗೈದು" ಎಂಬ ಪಾಠಾಂತರವಿರುವುದನ್ನು ನೋಡಿದರೆ ಅಲ್ಲಿಯೂ ಕವಿಪಾಠ ಏನೋ ಇದ್ದು ಆಮೇಲೆ ಮಾರ್ಪಾಟಾಗಿರುವಂತಿದೆ. ಎರಡನೆಯ ಸಾಲಿನ ಆರಂಭದ ಇಡೀ ಭಾಗಕ್ಕೆ ಇದ್ದ [ತ] ಪ್ರತಿಯ ಪಾಠ ನಷ್ಟವಾಗಿರುವುದರಿಂದಲೂ ಈಗ ದೊರಕುವಷ್ಟು ಪಾಠಾಂತರದಿಂದ ಪಾಠಪರಿಷ್ಕರಣಕ್ಕೆ ಏನೂ ಸಹಾಯವಾಗುವಂತಿಲ್ಲವಾಗಿರುವುದರಿಂದಲೂ ಸದ್ಯಕ್ಕೆ ಅರ್ಥವಾಗುವಂತಿರುವ ಪಾಠವನ್ನೇ ತಾತ್ಕಾಲಿಕವಾಗಿ ಒಪ್ಪಿಕೊಳ್ಳಬಹುದು.[10] ಆದರೆ, ಪಾಠಾಂತರವಿಲ್ಲದಿದ್ದರೂ ಅಥವಾ ಪಾಠಾಂತರ ಸಿಗದಿದ್ದರೂ ಒಂದು ಸಮಸ್ಯೆಯನ್ನು ಎರಡನೆಯ ಪಾದದಲ್ಲಿ ಎದುರಿಸಬೇಕಾಗಿದೆ : "ಕುಸಿಯದೆ", "ಸೂಜಿಗೊಳ್ಳದೆ" ಎಂಬುವನ್ನು ಹಾಗೇ ಇಟ್ಟುಕೊಳ್ಳಬೇಕೋ, ಅಥವಾ ಅವನ್ನು "ಕುಸಿಯದ", "ಸೂಜಿಗೊಳ್ಳದ" ಎಂದು ಶ್ರೀ ಪಿ. ಸುಬ್ರಾಯಭಟ್ಟರು ತಿದ್ದಿರುವಂತೆ[11] ತಿದ್ದುವುದು ಅಗತ್ಯವೇ ? ಇದನ್ನು ಕುರಿತು ವಿಚಾರಮಾಡುವಾಗ ಒಟ್ಟು ಪದ್ಯದ ಅರ್ಥವೇನು ಎಂಬುದನ್ನು ಸ್ಪಷ್ಟಮಾಡಿಕೊಳ್ಳುವುದು ಅಗತ್ಯವಾಗಿದೆ.

ಶ್ರೇಷ್ಠರಾದ ನಾಲ್ವರು ನಮಗೆ ವಂದ್ಯರು ಎಂದು ದುರ್ಯೋಧನ ಹೇಳುತ್ತಿದ್ದಾನೆ ಎಂಬುದು ಪದ್ಯದಲ್ಲಿಯೇ ವೇದ್ಯವಾಗಿದೆ. ಆ ನಾಲ್ವರು ಯಾರು ? ಡಾ। ಕಲ್ಬುರ್ಗಿಯವರ ಪ್ರಕಾರ, ತನ್ನ ಹಸಿವಿನಲ್ಲಿ (ತಾನು ಹಸಿದಿದ್ದರೂ) ಅನ್ನವನ್ನು ಕೊಡುವಾತ ಒಬ್ಬ, ತನ್ನ ಅಭ್ಯುದಯದಲ್ಲಿ ಸುವರ್ಣವನ್ನು ದಾನಮಾಡುವಾತ ಒಬ್ಬ, ಯುದ್ಧದಲ್ಲಿ ಕುಸಿಯದೆ ರಣಶುಚಿತ್ವವನ್ನು ಕಾಪಾಡುವಾತ ಒಬ್ಬ, ಯುದ್ಧ

---

10. "...ಸಮುಚಿತ್ತದೊಳಪ್ಪುಗೈದು" ಎಂಬಲ್ಲಿ [ಅನು] ಎಂಬುದನ್ನೋ [ನಿರು] ಎಂಬುದನ್ನೋ ಊಹೆಯ ಮೇಲೆ ಆರಂಭದಲ್ಲಿ ಸೇರಿಸಿಕೊಂಡರೆ ಛಂದಸ್ಸು ಕೆಟ್ಟುಹೋಗುತ್ತದೆ.

11. ಈ ತಿದ್ದುಪಾಟನ್ನು ಪ್ರೊ. ಎಂ. ವಿ. ಸೀತಾರಾಮಯ್ಯನವರೂ ಅನುಮೋದಿಸುತ್ತಾರೆ (ಅವರೊಡನೆ ಈ ಪದ್ಯದ ಬಗ್ಗೆ ಒಮ್ಮೆ ನಾನು ನಡೆಸಿದ ಚರ್ಚೆಯಲ್ಲಿ).

ದಲ್ಲಿ ಸೂಱೆಯಂಥ ಅಸತ್ಕ್ರಿಯೆಗಳಸದೆ ರಣಬಿಚ್ಚಿನನ್ನು ಕಾಪಾಡುವಾತ ಒಬ್ಬ — ಹೀಗೆ ನಾಲ್ಕು ಶ್ರೇಷ್ಠಗುಣಗಳನ್ನು ತೋರುವವನೇ ಈ ಸಂದರ್ಭದ ನಾಯಕ. ಮೇಲಿನ ನನ್ನ ಉದಾತ್ತೀಕರಣವು ಅನ್ನವನ್ನೂ ಸಮರ್ಪಣವನ್ನೂ ಕೊಡುವ ವ್ಯಕ್ತಿ ಒಬ್ಬನೇ ಎಂಬುದನ್ನು ಖಚಿತಪಡಿಸುತ್ತದೆ (ಈ ಬಗ್ಗೆ ಬಹುಶಃ ಯಾವುದೇ ಸಂದೇಹಕ್ಕೂ ಅವಕಾಶವಿಲ್ಲ). ಆ ವ್ಯಕ್ತಿಯಲ್ಲದೆ ನಾವು ಇನ್ನು ಮೂವರನ್ನು ಹುಡುಕಬೇಕು. ಆ ಮೂವರು "ಯುದ್ಧದೊಳ್ ಕುಸಿಯದೆ ಸೂಱೆಗೊಳ್ಳದೆ ರಣಕ್ಕೆ ಬಿಚ್ಚುಮನಪ್ಪು ಕೆಯ್ವ" ಎಂಬ ಮಾತುಗಳಲ್ಲಿ ಹುದುಗಿದ್ದಾರೆ. ಆ ಮೂವರು ಇವರು : ಯುದ್ಧದಲ್ಲಿ ಕುಸಿಯದ, (ಯುದ್ಧದಲ್ಲಿ) ಸೂರೆಗೊಳ್ಳದ, ರಣಕ್ಕೆ ಬಿಚ್ಚುಮನಪ್ಪು ಕೆಯ್ವ ಮೂವರು ವ್ಯಕ್ತಿಗಳು. ಈ ಸರಳಭಾವಾನುವಾದವೇ ಹೇಳುತ್ತದೆ — "ಅಪ್ಪು ಕೆಯ್ವ" ಎಂಬ ವಿಶೇಷಣಕ್ಕೆ ಹೊಂದಿಕೊಳ್ಳುವಂತೆ "ಕುಸಿಯದೆ", "ಸೂಱೆಗೊಳ್ಳದೆ" ಎಂಬುದನ್ನು "ಕುಸಿಯದ", "ಸೂಱೆಗೊಳ್ಳದ" ಎಂಬುದಾಗಿ ತಿದ್ದಿಕೊಳ್ಳಬೇಕೆಂಬ ಪ್ರಚೋದನೆ ಯಾರಿಗಾದರೂ ಉಂಟಾಗುತ್ತದೆ. ಹಾಗೆ ತಿದ್ದಿ ನಾವು ಯಾವ ಅರ್ಥವನ್ನು ಹೇಳುತ್ತೇವೆಯೋ, ತಿದ್ದದೆ ಹಾಗೇ ಉಳಿಸಿಕೊಂಡರೂ ಅದೇ ಅರ್ಥವನ್ನು ಹೊರಡಿಸಲು ಸಾಧ್ಯವೆಂಬುದನ್ನು ಮುಂದೆ ನೋಡುತ್ತೇನೆ. ಆದರೆ, ಆ ಭಾಗದ ಅರ್ಥವೇನು ?

ಯುದ್ಧದಲ್ಲಿ ಕುಸಿಯದ ವ್ಯಕ್ತಿ ಎಂದರೆ ಯುದ್ಧದಲ್ಲಿ ಸೋಲದ ವ್ಯಕ್ತಿ ಎಂಬರ್ಥ ಸ್ಪಷ್ಟ. ಯುದ್ಧದಲ್ಲಿ ಸೂಱೆಗೊಳ್ಳದ ವ್ಯಕ್ತಿ ಎಂದರೆ ಯುದ್ಧದಲ್ಲಿ ತಾನು ಗೆದ್ದರೂ ದುರಾಶೆಯಿಂದ ಕೈಗೆ ಸಿಕ್ಕಿದ್ದನ್ನೆಲ್ಲ ದೋಚದ ವ್ಯಕ್ತಿ ಎಂಬರ್ಥವೂ ಸ್ಪಷ್ಟ. ಒಂದು ಸೈನ್ಯ ಸೋತು ಓಡುವಾಗ, ಒಂದು ಶತ್ರುನಗರ ವಶವಾದಾಗ ಗೆದ್ದವನು ನುಗ್ಗಿ ಮನಸ್ಸಿಗೆ ಬಂದದ್ದನ್ನೆಲ್ಲ ಅಪಹರಿಸುವುದೂ ಒಂದು ಪಾಪವೇ. ಗೆದ್ದ ವ್ಯಕ್ತಿ ಸೋತ ಪಂಗಡದ ಬಗ್ಗೆ ಸಂಯಮವನ್ನು ತೋರುವುದು ಒಂದು ದೊಡ್ಡ ಗುಣ : ವೀರನನ್ನು ಅದು ಉದಾತ್ತನನ್ನಾಗಿ ಮಾಡುತ್ತದೆ. "ರಣಕ್ಕೆ ಬಿಚ್ಚುಮನಪ್ಪು ಕೆಯ್ವ" ಎಂಬುದರ ಅರ್ಥವನ್ನು ನಿರ್ಣಯಕವಾಗಿ ಹೇಳುವುದು ಕಷ್ಟವಾಗಿದೆ. ಡಾ॥ ಕಲ್ಬುರ್ಗಿಯವರ ಲೇಖನಕ್ಕೆ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸುತ್ತ ಶ್ರೀ ಸು. ಕೃಷ್ಣ ಎಂಬುವರು[12] ಯುದ್ಧಶುಚಿತ್ವ ಅಥವಾ ಯುದ್ಧದಲ್ಲಿ ಧರ್ಮಮಾರ್ಗವನ್ನು ಬಿಡದಿರುವಿಕೆಯನ್ನು ಲಕ್ಷ್ಯದಲ್ಲಿರಿಸಿಕೊಂಡು ಆ ಭಾಗಕ್ಕೆ ಹೀಗೆ ಅರ್ಥೈಸುತ್ತಾರೆ ("ಯುದ್ಧಮಧ್ಯದಲ್ಲಿ ತನಗೆ ಸೋಲೇ ಬರುವಂತಿದ್ದರೂ ಸಹ ಧರ್ಮಮಾರ್ಗವನ್ನು ತ್ಯಜಿಸದೆ)

---

12. 'ಗದಾಯುದ್ಧದ ಒಂದು ಪದ್ಯ: ಒಂದು ಪ್ರತಿಕ್ರಿಯೆ.' ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ. 66 : 1. ಪು. 42.

ಯುದ್ಧಶುಚಿತ್ವವನ್ನು ಪರಿಗ್ರಹಿಸಿ ಪರಿಪಾಲಿಸುವವನು" ಎಂದು ಹೇಳುತ್ತಾರೆ. ಹಿಂದೆ ಯುದ್ಧನಿಯಮಗಳನ್ನು ಹಾಕಿದವರು ಮುಖ್ಯವಾಗಿ ಬಲಿಷ್ಠನನ್ನು ಗಮನದಲ್ಲಿಟ್ಟುಕೊಂಡಿದ್ದರೇ ಹೊರತು ಸೋಲುವ ಸ್ಥಿತಿಯಲ್ಲಿರುವ ವ್ಯಕ್ತಿಗೆ ಅಂತಹ ಯುದ್ಧನಿಯಮಗಳನ್ನು ಹೇಳಿದಂತೆ ಕಾಣಲಿಲ್ಲ. ಅಥವಾ ಹೇಳಿದ್ದರೂ ಏಕೆಂದರೆ, ಆ ನಿಯಮಗಳು ಯುದ್ಧದಲ್ಲಿ ಭಾಗಿಗಳಾದ ಎಲ್ಲರಿಗೂ ಅನ್ವಯವಾಗಬೇಕು ತಾನೇ. ನಮ್ಮ ಕಾವ್ಯಶಾಸನಗಳಲ್ಲಿ ಮತ್ತವೇರಿದವರನ್ನು ಲಿಂಗವನ್ನಪ್ಪಿದವರನ್ನು ಕೈಯಲ್ಲಿ ಹುಲ್ಲುಕಡ್ಡಿ ಹಿಡಿದಿರುವವರನ್ನು ನಿರಾಯುಧರನ್ನು ನೀರಲ್ಲಿ ಹೊಕ್ಕವರನ್ನು ಕೊಲ್ಲಬಾರದು ಎಂಬಂತಹ ನಿಯಮಗಳು ಉಲ್ಲೇಖಗೊಂಡಿವೆ. ಇವೂ ಯುದ್ಧಶುಚಿತ್ವ ಆಗಬಹುದು. ಆದರೆ ಇಲ್ಲಿ ನಾವು ಗಮನಿಸಬೇಕಾದುದು, 'ಶುಚಿತ್ವ' ಅಥವಾ 'ಶೌಚ' ಎಂಬ ಮಾತುಗಳು ರನ್ನನ ಕಾಲದ ಕನ್ನಡದಲ್ಲಿ ಮತ್ತು ಈಚಿನ ಸಾಹಿತ್ಯದಲ್ಲಿ ಯಾವ ಅರ್ಥದಲ್ಲಿ ಬಳಕೆಯಾಗುತ್ತಿತ್ತು ಎಂಬುದನ್ನು. ಅದು ಖಚಿತವಾಗಿ ಗೊತ್ತಾದರೆ 'ರಣಕ್ಕೆ ಶುಚಿತ್ವ'ವೆಂಬುದರ ಅರ್ಥವನ್ನು ನಿರ್ಣಯಿಸಲು ಸಾಧ್ಯವಾಗುತ್ತದೆ.

ಸಂಸ್ಕೃತದಲ್ಲಿ "ಶುಚಿ" ಶಬ್ದಕ್ಕೆ ನಿಘಂಟಿನ ಅರ್ಥಗಳು ಹೀಗಿವೆ :[13] ಹೊಳಪು, ಅಚ್ಚ ಬಿಳುಪು, ಶುಭ್ರ — ಇವು ಭೌತಿಕಾರ್ಥಗಳು : ಪ್ರಾಜ್ಞ, ಪ್ರಾಮಾಣಿಕ, ಒಳ್ಳೆಯ ಶೀಲವುಳ್ಳವ (Virtuous) — ಇವು ಅಮೂರ್ತಾರ್ಥಗಳು. "ಶುಚಿ"ಯಿಂದ ಬರುವ "ಶೌಚ"ಕ್ಕೆ ಶುಭ್ರತೆ, ಮನಸ್ಸಿನ ಶುದ್ಧಿ, ನಿಷ್ಠೆ ಇತ್ಯಾದಿ ಅರ್ಥಗಳಿವೆ (ಶುಚಿಗೆ ಇನ್ನೂ ಬೇರೆ ಅರ್ಥದ ಬೆಳವಣಿಗೆಗಳಿದ್ದರೂ ಅವು ಇಲ್ಲಿ ಅಪ್ರಸ್ತುತ). ಕನ್ನಡ ನಿಘಂಟಿನಲ್ಲಿ ಇದೇ ಅರ್ಥಗಳು ದಾಖಲಾಗಿದ್ದರೂ[14] ಹಳಗನ್ನಡ ಕವಿಗಳಿಗೆ ಆ ಎಲ್ಲ ಸಂಸ್ಕೃತ ಅರ್ಥಗಳು ತಿಳಿದಿದ್ದರೂ ಆ ಕವಿಗಳ ಮತ್ತು ಮುಂದಿನವರ ಕಾಲದಲ್ಲಿ ಶುಚಿ, ಶೌಚ ಪದಗಳಿಗೆ ಕನ್ನಡದಲ್ಲಿ ರೂಢಿಯಲ್ಲಿದ್ದ ಮುಖ್ಯಾರ್ಥವೆಂದರೆ ಪರಸ್ತ್ರೀಯ (ಅಥವಾ ಪರಪುರುಷನ) ವಿಷಯದಲ್ಲಿ ಸಂಯಮ ಅಥವಾ ಇಂದ್ರಿಯ ನಿಗ್ರಹ. ಶೌಚವು ನಡತೆಯ ಶುಭ್ರತೆಯಾದರೂ, ಆ ನಡತೆಯ ಶುಭ್ರತೆ ವಿಶೇಷವಾಗಿ ಪರಸ್ತ್ರೀ ಅಥವಾ ಪರಪುರುಷನ ಬಗ್ಗೆ ಆಸೆಪಡದಿರುವ ಚಾರಿತ್ರ್ಯಕ್ಕೆ ಸಂಬಂಧಿಸಿದ್ದು. ಸುಳ್ಳು ಹೇಳದಿರುವುದು, ಕೊಲೆಮಾಡದಿರುವುದು, ಔದಾರ್ಯ ಇವೂ ಕೂಡ ಶೌಚ ಆಗಬಹುದಾದರೂ, ಅಂದಿನ ಕನ್ನಡದ ಸಂದರ್ಭದಲ್ಲಿ ಮಾತ್ರ "ಶೌಚ"ಕ್ಕೆ ಇನ್ನೂ ಮಿತಿಯಾದ ಅರ್ಥವಿತ್ತು : ಅದು ವ್ಯಕ್ತಿಯ ಶೀಲಕ್ಕೆ ಅದರಲ್ಲೂ ಗಂಡು ಹೆಣ್ಣಿನ ಲೈಂಗಿಕ ಸಂಬಂಧಕ್ಕೆ ಹೊಂದಿಕೊಂಡಂತಹ ಅರ್ಥಗಳನ್ನೇ ಪಡೆದುಕೊಂಡಿತ್ತು. ಬ್ರಹ್ಮಚಾರಿ

---

13. Monier Willams ಅವರ A Sanskrit-English Dictionary ನೋಡಿ.

14. F. Kittel ಅವರ A Kannada English Dictionary ನೋಡಿ.

ಅಥವಾ ಸಂನ್ಯಾಸಿಗಳು ಸ್ತ್ರೀಯನ್ನು ಬಯಸದಿರುವುದೇ ಶೌಚ ಅಥವಾ ಶುಚಿತ್ವ: ಗೃಹಸ್ಥರಾದರೆ ಅನ್ಯಸ್ತ್ರೀ ಅಥವಾ ಅನ್ಯಪುರುಷನನ್ನು ಬಯಸದಿರುವುದು ಶೌಚ. ಈ ದೃಷ್ಟಿಯಿಂದ ನಾನು ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟು ಕಚೇರಿಯಲ್ಲಿನ ಶುಚಿ, ಶುಚಿತ್ವ, ಶೌಚ ಪದಗಳ ಎಲ್ಲ ಪ್ರಯೋಗ ಪಟ್ಟಿಕೆಗಳನ್ನು ಗಮನಿಸಿದಾಗ ಎಲ್ಲ ಪ್ರಾಚೀನ ಪ್ರಯೋಗಗಳೂ ಅದೊಂದೇ ಅರ್ಥವನ್ನು ಹೇಳುವುದು ಗಮನಕ್ಕೆ ಬಂದಿತು. ಇವು ಕೆಲವು (ಇಲ್ಲಿಯ ಕೆಲವು ಆ ಪಟ್ಟಿಕೆಗಳಿಂದ ತೆಗೆದುಕೊಂಡಂಥವು: ಇನ್ನು ಕೆಲವು ನಾನು ಹುಡುಕಿ ಕೊಟ್ಟಂಥವು).

1. "ಅಣಂ ನೆಲೆವುಟ್ಟದೆ ನೋಡೆ ಬಿಟ್ಟೊಡಂಬಡಿಸಿದನಯ್ಯ ಶೌಚಗುಣ ಮನ್ನತಿಯಂ ಸುರಸಿಂಧು ನಂದನಂ" (ಪಂಪಭಾರತ. 11.47). ಭೀಷ್ಮನು 'ಶೌಚಗುಣ'ದ ಪ್ರತೀಕ; ಅಂತೆಯೇ ಆಂಜನೇಯ. 'ಶೌಚಾಂಜನೇಯ' ಎಂಬ ಬಿರುದಿನ ಹಲವು ವ್ಯಕ್ತಿಗಳು ಶಾಸನಗಳಲ್ಲಿ ದೊರಕುತ್ತಾರೆ.

2. "ಸತ್ಯಶೌಚಾಚಾರಾನ್ವಿತಂ" (South Indian Inscriptions, Vol : IX. Part 1. No. 24, 936 A. D.).

3. "ನಯವಿನಯ ಸತ್ಯಶೌಚಾಚಾರಶೀಲಸಂಪನ್ನನಪ್ಪ" (Epigraphia Indica. XIII. Soratur Inscription, 869 A. D).

4. "ಶೌಚದಿಂ ಗಾಂಗೇಯನಂ...." South Indian Inscriptions Vol. IX. Part 1. No. 118, 1057 A. D).

5. "ಅನ್ಯವನಿತಾ ಜನದೊಳ್ ಸುಸಿಲಱಿಯದ ಶೌಚಂ" (Kannada Inscriptions of Andhra Pradesh, 2-45, 1058 A. D.)

6. "ಶೌಚದ ಪೆಂಪು ತಾಂ ಪಗವಘಗೆಜಗದಿಪ್ಪದೆ" (ಜೀವಸಂಬೋಧನೆ, ಪು. 22.)

7. "ವಿದಸ್ಥನೆನೆ ಸತ್ಯ ಶೌರ್ಯ ಶೌಚಾದಿಗುಣಾಸ್ಪದನೆನೆ" (ಅಜಿತ ಪುರಾಣ, 12.23.)

8. "ಕುಲವಿಭ್ರಂಶತೆಯರೊಳ್ ಮನೋಜಸುಖಮಂ ಮಾಣ್ಕೆಂಗೆ.... ಶೌಚಂ ಕಿಲುಂಬಕ್ಕುಂ" (ಮದನತಿಲಕ, 9.1)

9. "ಶೌಚಗುಣಂ ಅತ್ತಿಯ ಪಣ್" (Bombay Karnatak Inscriptions, Vol. 1. Part 1. No. 52, 1007 A. D.)

ಇದು ಬಹುಶಃ ರನ್ನನದೇ ಶಾಸನ. ಅನೇಕರ ಶೌಚಗುಣವು ಅತ್ತಿಯ ಹಣ್ಣ

ದ್ದಂತೆ, ನೋಡಲು ಆಕರ್ಷಕ, ಒಳಗೆಲ್ಲ ಹುಳುಕು. ಬಹಿರಂಗದಲ್ಲಿ ದೊಡ್ಡವರಂತೆ ಕಾಣುವ ಎಷ್ಟೋ ಜನ ರಹಸ್ಯದಲ್ಲಿ ಅನ್ಯಸ್ತ್ರೀ ವಿಷಯಾಸಕ್ತರು.

10. "ಪರಶುಚಿ ವೀರರಾಮನ ಚರಿತವನಿದನೊರೆವೆನು" (ರಾಮನಾಥಚರಿತೆ, 1.85) ಸುಂದರಳಾದ ಅನ್ಯಸ್ತ್ರೀ ಎಷ್ಟು ಕಾಡಿದರೂ ಅವಳತ್ತ ಮನಸ್ಸು ಕೊಡದ ಕುಮಾರರಾಮ 'ಪರಶುಚಿ'ಯಾದ ವ್ಯಕ್ತಿ.

ಈ ಹಿನ್ನೆಲೆಯಲ್ಲಿ ನೋಡಿದಾಗ "ರಣಕ್ಕೆ ಶುಚಿತ್ವ...." ಎನ್ನುವ ಮಾತು ಸ್ತ್ರೀ ಸಂಬಂಧಿ ಸಂಯಮವನ್ನು ಹೇಳುತ್ತದೆ. ಯುದ್ಧಕ್ಕೂ ಸ್ತ್ರೀಗೂ ಏನು ಸಂಬಂಧವೆಂದು ಅನ್ನಿಸಿದರೂ, ರನ್ನನಕಾಲದ ಯುದ್ಧಗಳ ಪರಿಚಯವಿದ್ದವರಿಗೆ ಸಂಬಂಧವಿರುವುದು ಗೋಚರವಾಗುತ್ತದೆ. ಅಂದಿನ ಹಲವಾರು ಶಾಸನಗಳಲ್ಲಿ "ಪೆಣ್ಣುಡೆಯುರ್ಚಿ" ಎಂಬ ಉಕ್ತಿ ಹಲವೆಡೆಗಳಲ್ಲಿ ಬರುತ್ತದೆ. ಊರಿಗೆ ನುಗ್ಗಿ ಗೋ ಇತ್ಯಾದಿ ಸಂಪತ್ತನ್ನು ಅಪಹರಿಸಿದವರು ಕೆಲವೊಮ್ಮೆ ಹೆಂಗಸರ ಮಾನಭಂಗಕ್ಕೂ ಕೈಹಾಕುತ್ತಿದ್ದರು. —ಅದೇ 'ಪೆಣ್ಣುಡೆಯನುರ್ಚು'ವುದು. ಈ ಸಂಗತಿ ಶಾಸನಗಳಲ್ಲಿ ಬಂದಿರುವುದಲ್ಲದೆ,[15] ಕೆಲವು ಶಾಸನಗಳಲ್ಲಿ ನಗ್ನರಾಗಿ ನಿಂತ ಸ್ತ್ರೀಯರನ್ನೂ ಪಕ್ಕದಲ್ಲೇ ಯುದ್ಧಮಾಡುತ್ತಿರುವ ದೃಶ್ಯವನ್ನೂ ಶಿಲ್ಪದಲ್ಲಿ ಕೆತ್ತಲಾಗಿದೆ.[16] ದುಷ್ಟರು ತಮ್ಮ ಮಾನಭಂಗಕ್ಕೆ ಕೈಹಾಕಿದಾಗ ಹೆಂಗಸರು ಸಹಾಯಕ್ಕೆ ಕೂಗಿಕೊಳ್ಳುತ್ತಿದ್ದುದೇ 'ಪೆಣ್ಬುಯ್ಯಲ್' (=ಹೆಣ್ಣಿನ ಹುಯ್ಯಲು). ಗೋಗ್ರಹಣವಾದಾಗ, 'ಪೆಣ್ಬುಯ್ಯಲಿ'ನಲ್ಲಿ, 'ಊರಳಿವಿ'ನಲ್ಲಿ ಯಾವನು ನಿಷ್ಕ್ರಿಯನಾಗುತ್ತಾನೋ ಅವನು ಶೂರನಲ್ಲ. ಷಂಡ ಎಂಬ ಮಾತು ರನ್ನನಲ್ಲೇ ಬರುತ್ತದೆ. ಯುದ್ಧ ಸಂದರ್ಭದಲ್ಲಿ ಗೆದ್ದು ಸೋತವರ ಸ್ತ್ರೀಯರ ಮಾನಭಂಗವನ್ನು ಮಾಡಲು ಅವಕಾಶವಿದ್ದರೂ ಸಂಯಮವನ್ನು ತೋರುವುದು, ಹೆಂಗಸರತ್ತ ಮನಸ್ಸು ಕೊಡದೇ ಇರುವುದೇ "ರಣಕ್ಕೆ ಶುಚಿತ್ವ ಮನಪ್ಪ ಕೆಯ್ಪು" ಗುಣ. "ರಣಕ್ಕೆ ಶುಚಿತ್ವಮನಪ್ಪ ಕೆಯ್ಪು" ಎಂಬ ಪಾಠವೇ ರನ್ನನ ಮೂಲಪಠ್ಯದಲ್ಲಿ ಇದ್ದಿದ್ದರೆ—ಅದಕ್ಕೆ ಪಾಠಾಂತರವಿರುವುದು ಅಂತಹ ಒಂದು ಸಂದೇಹವನ್ನು ವ್ಯಕ್ತಪಡಿಸಲು ಕಾರಣ—ಆಗ ಮೇಲಿನದೇ ಆ ಭಾಗದ ಅರ್ಥವೆಂದು ತೋರುತ್ತದೆ. "ರಣಕ್ಕೆ ಶುಚಿತ್ವ"ವು ಧರ್ಮಯುದ್ಧವನ್ನು ಹೇಳುತ್ತದೆ ಎಂದು ವಾದಿಸಬಹುದಾದರೂ, ರನ್ನನ ಕಾಲದ ಯುದ್ಧದ ಚಿತ್ರಣ, ಅವನದೇ "ಪೆಣ್ಬುಯ್ಯಲ್" ಮಾತು, ಅದಕ್ಕಿಂತ ಹೆಚ್ಚಾಗಿ "ಶುಚಿ" ಮಾತಿಗೆ ಅಂದಿನ ಸಮಾಜದಲ್ಲಿ

15. ನಾ. ಗೀತಾಚಾರ್ಯ : 'ಪೆಣ್ಬುಯ್ಯಲ್-ಒಂದು (ಸಾಧನೆ 9.4. ಪು. 72) ವಿಶ್ಲೇಷಣೆ'

16. ಎಂ. ಚಿದಾನಂದಮೂರ್ತಿ : ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ. (ಮೈಸೂರು. 1979. ಪು. 285.)

ಬಳಕೆಯಿದ್ದ ಅರ್ಥ ಇವುಗಳನ್ನು ಗಮನಿಸಿ. ಇಂದ್ರಿಯ ಸಂಯಮ ಸಂಬಂಧಿಯಾದ ಅರ್ಥವನ್ನೇ ಗ್ರಹಿಸುವುದು ಹೆಚ್ಚು ಉಚಿತವಾಗಿ ತೋರುತ್ತದೆ.

ಎಂದರೆ, ದುರ್ಯೋಧನನ ಪ್ರಕಾರ ಶ್ರೇಷ್ಠರೂ ಸಂಪ್ರದಾಯ ಬದ್ಧ ವಂಶ-ಜನಿತ ವ್ಯಕ್ತಿಗಳ ನಾಲ್ಕು ಗುಣಗಳು ಹೀಗಿವೆ :

(1) ಕಷ್ಟಕಾಲದಲ್ಲಿ ಅನ್ನವನ್ನು ಸಮೃದ್ಧಿಯ ಕಾಲದಲ್ಲಿ ಐಶ್ವರ್ಯವನ್ನು ದಾನವಾಗಿ ಕೊಡುವುದು.

(2) ಯುದ್ಧದಲ್ಲಿ ಕಾಲ್ತೆಗೆಯದಿರುವುದು (ಹೆದರಿ ಓಡಿಹೋಗದಿರುವುದು)

(3) ಯುದ್ಧದಲ್ಲಿ ದುರಾಸೆಯಿಂದ ಸುಲಿಗೆ ಮಾಡದಿರುವುದು

(4) ಯುದ್ಧದಲ್ಲಿ ಸೋತವರ ಹೆಂಗಸರ ಮಾನಭಂಗಕ್ಕೆ ಕೈಹಾಕದಿರುವುದು.

ಮೂರನೆಯ ಪಾದದಲ್ಲಿ "ನಮಗೆ ವಂಧ್ಯರಮಂದಿರೋ" ಎಂಬುದಕ್ಕೆ "ಟಿವರಿ ವಂಧ್ಯರವರ್ಗಕ್ಕೋ" ಎಂಬ ಪಾಠಾಂತರವಿದೆ. ಇವುಗಳಲ್ಲಿ ಎರಡು ಪಾಠಗಳೂ ಸುಲಭವಾಗಿವೆ. ಸಮಾನಸ್ಖೇತಾರ್ಥವಾಗಿವೆ : ಎರಡಕ್ಕೂ ಒಂದೇ ಅರ್ಥ. ಒಂದು ಪಾಠ ಹೋಗಿ ಇನ್ನೊಂದು ಏಕೆ ಬಂತು ಎಂಬುದಕ್ಕೆ ಸುಲಭವಾಗಿ ಸಮಾಧಾನ ಹೇಳಿ ಕೊಡಲು ಸಾಧ್ಯವಿಲ್ಲ. "ಟಿವರಿ ವಂಧ್ಯರವರ್ಗಕ್ಕೋ" ಎಂಬಲ್ಲಿ "ಗಕ" ಶಿಥಿಲ ದ್ವಿತ್ವವಾಗಿರುವುದರಿಂದ, ರನ್ನನಲ್ಲಿಯೇ "ಅವಗಳ್" ಎಂಬ ಪದಪ್ರಯೋಗವು ಶಿಥಿಲ ದ್ವಿತ್ವದೊಡನೆ ಬಳಕೆಯಾಗಿರುವುದರಿಂದ,[17] ಆ ಪಾಠವನ್ನು ಒಪ್ಪಿಕೊಂಡರೆ ಛಂದೋದೋಷವುಂಟಾಗುತ್ತದೆ. ಆ ಕಾರಣ ಅದನ್ನು ನಿರಾಕರಿಸಬಹುದಾದರೂ — ನನ್ನಕೆಲ್ಲ ಅದನ್ನು ನಿರಾಕರಿಸಿದ್ದೇನೆ— ಛಂದೋದೋಷ ಅರ್ಥಸಂದಿಗ್ಧತೆಗಳೇನೂ ಇಲ್ಲದ ಸುಲಭ ಪಾಠವೊಂದರ ಜಾಗದಲ್ಲಿ ಛಂದೋದೋಷವಿರುವ ಪಾಠಾಂತರ ಏಕೆ ಬಂದಿತೆಂಬುದು ಇನ್ನೂ ಬಗೆಹರಿಯದ ಸಮಸ್ಯೆಯಾಗಿದೆ (ಒಂದು ವೇಳೆ ರನ್ನನೇ ಎಚ್ಚರವಿಲ್ಲದೆ ಶಿಥಿಲ ದ್ವಿತ್ವವಿಟ್ಟಿದ್ದನೆಂದು ಗಮನಿಸದೆ "ಗಕ" ಎಂಬುದನ್ನು ದ್ವಿತ್ವವಾಗಿ ಭಾವಿಸಿ ಬರೆದುದನ್ನು ಗಮನಿಸಿದ ಪ್ರತಿಕಾರನೊಬ್ಬ ಛಂದೋದೋಷವನ್ನು ಗುರುತಿಸಿ ತಿದ್ದಿದನೋ ಏನೋ!

---

17. [illegible]

[ಗದಾಯುದ್ಧ. 3.16]

17. [illegible]

[ಗದಾಯುದ್ಧ. 4.31]

ಮಹಾಕವಿಗಳ ಮೇಲೆ ಎಚ್ಚರದಪ್ಪುವ ಆರೋಪವನ್ನು ಹೊರಿಸಿ ಬಚಾವಾಗುವುದು ಸುಲಭವಲ್ಲವಾದುದರಿಂದ ರನ್ನನ ಮೇಲೆ ದೋಷಾರೋಪಣೆ ಹೊರಿಸುವುದು ಧೈರ್ಯವನ್ನು ಮಾಡಲಾರೆ. ಪದ್ಯಕ್ಕೆ ಛಂದೋಬದ್ಧವಾದುದನ್ನು ತಿದ್ದಿ ಛಂದೋದೋಷಕ್ಕೆ ಪಾಠವನ್ನು ಗುರಿಮಾಡಿದ ಅಜ್ಞಾತ ಲಿಪಿಕಾರನ ಮೇಲೆ ದೋಷಾರೋಪಣೆಯನ್ನು ಹೊರಿಸಿ ಅಪರಾಧಿಯ ಕಟಕಟೆಯಲ್ಲಿ ನಿಲ್ಲಿಸಿರೋಣ !)

ರನ್ನಕವಿಯ ಪದ್ಯದ ಮೂಲಪಾಠವನ್ನು ಹೆಚ್ಚುಕಡಮೆ ಈ ರೀತಿ ಪುನಾರಚಿಸಬಹುದು :

ಪಸಿವಿನೊಳನ್ನಮಂ ಸುಫಲದಲ್ಲಿ ಸುವರ್ಣಮನೀವ ಯುದ್ಧದೊಳ್
ಕುಸಿಯದೆ ಸೂಱೆಗೊಳ್ಳದೆ ರಣಕ್ಕೆ ಶುಚಿತ್ವಮನಪ್ಪುಕೆಯ್ವ ನಾ
ನಸಿಕೆಯ ನಾಲ್ವರುಮವರೆ ವಂದ್ಯರವಂದಿರೊಳೀತನಲ್ತೆ ಸಾ
ಹಸಧನನೆಂದು ಕೆಯ್ಮುಗಿದನಂದಭಿಮನ್ಯುಗೆ ಕೌರವೇಶ್ವರಂ !

ಹಿಂದೆ ಆಗಲೇ ಸೂಚಿಸಿರುವಂತೆ, ಎರಡನೆಯ ಪಾದದಲ್ಲಿ "ಕುಸಿಯದ," "ಸೂಱೆಗೊಳ್ಳದ" ಎಂದು ತಿದ್ದುವುದು ಹೆಚ್ಚು ಸ್ವಾಭಾವಿಕವಾಗಿರುತ್ತದೆ ; ಹಾಗೆ ತಿದ್ದಬೇಕೆಂಬರೆ ನನ್ನ ಆಕ್ಷೇಪವೇನೂ ಕಾಣದು. ಆದರೆ ಯಾವ ಪ್ರತಿಕಾರನಿಗೂ ಹಾಗೆ ತಿದ್ದಬೇಕೆಂದು ಅನ್ನಿಸದೆ ಇರುವಾಗ, ಮತ್ತು ಎರಡು ಕಡೆಯೂ "ದೆ" ಎಂಬುದೇ ಸ್ಪಷ್ಟವಾಗಿರುವಾಗ ತೀರ ಅನಿವಾರ್ಯವಾದ ಹೊರತು ಹಸ್ತಪ್ರತಿಪಾಠವನ್ನು ಧೈರ್ಯಮಾಡಿ ನಾನು ತಿದ್ದಲಾರೆ. ಈಗಿರುವಂತೆಯೇ "ಯುದ್ಧದಲ್ಲಿ ಕುಸಿಯದೆ (ಇರುವ), ಸೂಱೆಗೊಳ್ಳದೆ (ಇರುವ)..." ಎಂಬುದಾಗಿ "ಇರುವ" ಎಂಬರ್ಥದ ಪದವನ್ನು ನಾವು ನಮ್ಮ ವಿವರಣೆಯ ಸಂದರ್ಭದಲ್ಲಿ ಅಧ್ಯಾಹಾರಮಾಡಿಕೊಂಡರೆ ಕ್ಲೇಶನಿವಾರಣವಾಗುತ್ತದೆ.

ಈ ಪದ್ಯದ ಪದಶಃ ಅರ್ಥ ಹೀಗಿದೆ :

"ಕ್ಷಾಮಕಾಲದಲ್ಲಿ ಅನ್ನವನ್ನು ಸುಫಲದ ಕಾಲದಲ್ಲಿ ಚಿನ್ನವನ್ನು ದಾನಮಾಡುವ, ಯುದ್ಧದಲ್ಲಿ ಕುಸಿಯದೆ (ಇರುವ), (ಯುದ್ಧದಲ್ಲಿ) ಸೂರೆ ಮಾಡದೆ (ಇರುವ), [ಅಥವಾ, ಯುದ್ಧದಲ್ಲಿ ಕುಸಿಯದ ಸೂರೆಗೊಳ್ಳದ], ಯುದ್ಧಕ್ಕೆ ಸಂಬಂಧಿಸಿದಂತೆ ಶೌಚಗುಣವನ್ನು (ಇಂದ್ರಿಯ ಸಂಯಮವನ್ನು) ಪರಿಪಾಲಿಸುವ ಉದಾತ್ತತೆಯ ನಾಲ್ಕು ಜನರೂ ವಂದ್ಯರು. ಅವರಲ್ಲಿ ಈತನೇ ಅಲ್ಲವೆ ಸಾಹಸವಂತನು ಎಂದು ಕೌರವೇಶ್ವರನಾದ ದುರ್ಯೋಧನನು ಅಂದು ಅಭಿಮನ್ಯುವಿಗೆ ಕೈಮುಗಿದನು."

ವಚನ ಸಾಹಿತ್ಯದ ನಿಲುವುಗಳು

—ಡಾ| ಪಿ. ವಿ. ನಾರಾಯಣ

ಹನ್ನೆರಡನೆಯ ಶತಮಾನದ ಮಧ್ಯಭಾಗದಲ್ಲಿ ಕರ್ನಾಟಕದಲ್ಲಿ ನಡೆದ ಒಂದು ಚಳುವಳಿಯ ಭಾಗವಾದ ವಚನಗಳು ಕೇವಲ ಸಾಹಿತ್ಯವೆಂಬಂತೆ ಮೂಲತಃ ರಚಿತವಾದವಲ್ಲ. ತಾವು ಸಾಹಿತ್ಯವನ್ನೇ ಬರೆಯುತ್ತಿದ್ದೇವೆಂಬ ಕಲ್ಪನೆ ವಚನಕಾರರಿಗೆ ಇದ್ದಿತೋ ಇಲ್ಲವೋ ನಿಖರವಾಗಿ ಹೇಳಲಾಗುವುದಿಲ್ಲ : ಏಂದರೆ ಈ ಬಗ್ಗೆ ವಚನಗಳಲ್ಲೇ ನಮಗೆ ಯಾವ ಮಾಹಿತಿ ಸಿಕ್ಕುವುದಿಲ್ಲ. ಆದರೆ ವಚನಗಳನ್ನು ಖಂಡಿತ ಬರೆದರು : ಈಚಿನ ಕೆಲವು ಕಲ್ಪನೆಗಳು ಹೇಳುವಂತೆ 'ಅನುಭವ ಮಂಟಪ'ದಲ್ಲಿ ಆಧ್ಯಾತ್ಮಿಕ ಚರ್ಚೆಯ ಫಲವೇ ವಚನಗಳು, ಅವನ್ನು ಯಾರೋ ಬರೆದಿಟ್ಟುಕೊಳ್ಳುತ್ತಿದ್ದರು--ಎಂಬುದು ಪ್ರಾಯಶಃ ಕಟ್ಟುಕತೆಗಳು. ಉಳಿಯಬೇಕಾದ, ಅಥವಾ ಉಳಿಯಬೇಕೆಂದು ಬಯಸುವ ಬರವಣಿಗೆಯನ್ನು ತಾವು ಮಾಡುತ್ತಿದ್ದೇವೆಂಬ ಪ್ರಜ್ಞೆ ವಚನಕಾರರಿಗೆ ಇದ್ದಿರಲಿಕ್ಕೆ ಸಾಕು. ಅದಕ್ಕೇ ವಚನಗಳನ್ನು ಅವರು ಬರೆದಿಟ್ಟದ್ದು : ತಮ್ಮ ರಚನೆಗಳೇ ಎಂದು ಗುರುತಿಸಲು ಸಾಧ್ಯವಾಗುವಂತೆ ಮುದ್ರಿಕೆ ಅಥವಾ ಅಂಕಿತಗಳನ್ನು ಬಳಸಿದ್ದು.

ಈ ಕಾಲದಲ್ಲಿ ನಡೆದ ಚಳುವಳಿಯ ಸಾಹಿತ್ಯಕ ಅಂಗವೇ ವಚನಗಳು. ವಚನ ರಚನೆಯು ವ್ಯಾಪಕವಾಗಿ ನಡೆಯಿತೆಂದರೆ ಒಂದು ರೀತಿಯಲ್ಲಿ ವಿದ್ಯಾವಂತ ವೀರಶೈವ ವಚನಗಳನ್ನು ಬರೆಯಲೇಬೇಕು ಎಂಬ ಭಾವನೆಯೇ ಬೆಳೆದಿದ್ದಂತೆ ತೋರುತ್ತದೆ. "ಲಿಂಗವಂತರು ತಾವಾದ ಬಳಿಕ ಅನುಭವದ ವಚನಗಳ ಹಾಡಿ ಸುಖದುಃಖಿಗಳಿಗಭೇದ್ಯನಾಗಿರಬೇಕು" ಎಂಬ ಸಿದ್ಧರಾಮನ ಮಾತುಗಳಂತಹ ಕಡೆ ಈ ಭಾವನೆ ಕಾಣಬರುತ್ತದೆ. ಹೀಗಾಗಿ ಸಮಾಜದ ವಿವಿಧಸ್ತರಗಳ ಜನರು ವಚನಗಳನ್ನು ಬರೆದರು. ಅವಕ್ಕೆ ವ್ಯಾಖ್ಯಾನ ಮಾಡುವ, ಅರ್ಥಹೇಳುವ, ಹಾಡುವ ಕಾರ್ಯಕ್ರಮಗಳೂ ಆ ಕಾಲದಲ್ಲಿ ವ್ಯಾಪಕವಾಗಿ ನಡೆದಿತ್ತೆಂದು ಹೇಳಲು ಆಧಾರಗಳುಂಟು.

ವಚನಗಳ ಮೂಲನೆಲೆಯಾದ ಚಳುವಳಿಯು ಒಂದು ಮತೀಯ ಚಳುವಳಿ. ಆಗ ಪ್ರಬಲವಾಗಿದ್ದ ಅನೇಕ ಮತಗಳ ರೀತಿನೀತಿಗಳನ್ನು ಧಿಕ್ಕರಿಸಿ, ಆಗಲೇ ಇದ್ದ ಮತವೊಂದಕ್ಕೆ ಹೊಸ ವಿಚಾರಗಳಿಂದ ಕಾಯಕಲ್ಪ ನಡೆಸಿ ಪ್ರಸಾರಮಾಡುವುದೇ ಈ ಚಳುವಳಿಯ ಉದ್ದೇಶ. ವೈದಿಕರ ಕರ್ಮ ಅಥವಾ ಯಜ್ಞ ಮತ್ತು ವರ್ಣ ವ್ಯವಸ್ಥೆ,

ಜೈನರ ಆಚರಣೆಗಳ ಅತಿ ಕಾಠಿಣ್ಯ, ಅನೇಕ ಶೈವಸಂಪ್ರದಾಯಗಳ ತಾಂತ್ರಿಕತೆ ಹಾಗೂ ಬೀಭತ್ಸಸ್ವರೂಪ ಇಂತಹ ಅನೇಕ ವಿಚಾರಗಳಿಗೆ ತಮ್ಮ ಪ್ರತಿಭಟನೆಯನ್ನು ತೋರಿಸಿ ಹೊಸ ಮತದ ಪ್ರಸಾರಕ್ಕೆ ವಚನಕಾರರು ಕೈಹಾಕಿದರು. ಈ ಹೊಸ ಮತದ ಪರಿಧಿಯಲ್ಲಿ ಅವರು ಸಾಮಾಜಿಕ ಪರಿಷ್ಕರಣಕ್ಕೂ ಅನಿವಾರ್ಯವಾಗಿ ಸ್ಥಾನಕಲ್ಪಿಸಿದರು. ಏಕೆಂದರೆ ಭಾರತದಲ್ಲಿ ಮತ ಎಂದಿಗೂ ವೈಯಕ್ತಿಕ ವಿಷಯವಾಗಿಲ್ಲ ಹಾಗೂ ಹತ್ತೊಂಬತ್ತನೆಯ ಶತಮಾನಕ್ಕೆ ಹಿಂದೆ ನಡೆದ ಯಾವ ಚಳುವಳಿಯೂ ಮತದಿಂದ ಸ್ವತಂತ್ರವಾಗಿಲ್ಲ. ಹೀಗಾಗಿ ವಚನಕಾರರು ಸಾಮಾಜಿಕವಾಗಿ ಜಾರಿಗೊಳಿಸಬಯಸಿದ ಎಲ್ಲ ಸುಧಾರಣೆಗಳು ಆಧುನಿಕ ಅರ್ಥದಲ್ಲಿ ಸಮಾಜಸುಧಾರಣೆಯ ಕೆಲಸವಲ್ಲ. ಇತರ ಮತಗಳ ವಲಯದಲ್ಲಿ ತರತಮಗಳಿಂದಾಗುತ್ತಿದ್ದ ದಾಂಧಲೆಯನ್ನು ಗುರುತಿಸಿದ ಅವರು ಅದರಿಂದ ಪಾಠಕಲಿತು ತಮ್ಮ ಮತದ ವ್ಯಾಪ್ತಿಯಲ್ಲಿ ಅವುಗಳೆಲ್ಲ ಪುನರಾವರ್ತನೆಯಾಗಬಾರದೆಂದು ಆಶಿಸಿದರು.

ಇತರ ಮತಗಳಲ್ಲಿ ಇರುವುದನ್ನೇ ತಾವೂ ಅನುಸರಿಸಹೊರಟರೆ ಅದರಲ್ಲಿ ವಿಶೇಷವೇನೂ ಇರುವುದಿಲ್ಲ; ಜೊತೆಗೆ ತಾವು ಆಗ ತಮ್ಮ ಮತಕ್ಕೆ ಬೇರೆಯವರನ್ನು ಆಕರ್ಷಿಸಲು ಸಾಧ್ಯವಿಲ್ಲ. ಅಲ್ಲದೆ ಪ್ರತಿಭಟನಾಮೂಲವಾದ ಈ ಮತಪ್ರಸಾರ ಇತರ ಮತಗಳ ಬಹ್ವಂಶಗಳನ್ನು ತಿರಸ್ಕರಿಸುವುದರ ಮೂಲಕವೇ ಅವೆಲ್ಲಕ್ಕಿಂತ ಬೇರೆಯಾಗಲು ಹೊರಟಿತು. ವಿಗ್ರಹಾರಾಧನೆ, ಮಡಿ–ಮೈಲಿಗೆಗಳ ಆಚರಣೆ, ಜ್ಯೋತಿಷ್ಯ ಮುಂತಾದವುಗಳ ನಂಬಿಕೆ, ಸಂಸ್ಕಾರಗಳು, ಜಾತಿ ವ್ಯವಸ್ಥೆ, ರಾಜನ ಶ್ರೇಷ್ಠತೆ, ಕಠಿನ ವ್ರತಗಳು ಇತ್ಯಾದಿಗಳನ್ನೆಲ್ಲ ಧಿಕ್ಕರಿಸಿದ ವಚನಕಾರರು ಆದಷ್ಟು ಸರಳವಾದ ಮತವನ್ನು ಪ್ರಸಾರಮಾಡಲು ನಿಶ್ಚಯಿಸಿದರು. ಅವರು ನಡೆಸಿದ ಚಳುವಳಿಯಲ್ಲಿ ಆಧ್ಯಾತ್ಮಿಕತೆ, ತಾತ್ವಿಕತೆಗಳಂತಹ ಬೌದ್ಧಿಕ ಅಂಶಗಳಿಗಿಂತ ಸರಳತೆ, ಮುಗ್ಧಭಕ್ತಿ, ಸಂಸಾರದ ಬಗ್ಗೆ ಆಸಕ್ತಿಗಳಂತಹ ವಿಷಯಗಳ ಮೇಲೆ ಹೆಚ್ಚು ಒತ್ತು ಇರಲು ಕಾರಣವೇನೆಂದರೆ ವಚನಕಾರರಿಗೆ ತಮ್ಮ ಮತವು ಕೇವಲ ಮೇಲುಪದರಕ್ಕೆ ಸೀಮಿತಗೊಳ್ಳದೆ ಬಹುಸಂಖ್ಯಾತರಾದ ಜನಸಾಮಾನ್ಯರನ್ನು ತಲುಪಿ ಅದು ಹೆಚ್ಚು ವ್ಯಾಪಕವಾಗಿ ಬೆಳೆಯಬೇಕೆಂಬ ಆಸೆ, ಆದರ್ಶ.

ಈ ಹಿಂದೆಯೇ ಸೂಚಿಸಿರುವಂತೆ ವಚನಕಾರರು ಪರಿಷ್ಕರಿಸ ಹೊರಟಿದ್ದು ವಿಶಾಲ ಸಮಾಜವನ್ನಲ್ಲ; ತಮ್ಮ ಮತಕ್ಕೆ ಬಂದು ಸೇರಿಕೊಂಡ ಜನಗಳ ಸಂಘಟನೆಯನ್ನು. 'ವಿಪ್ರ ಮೊದಲು ಅಂತ್ಯಜ ಕಡೆಯಾಗಿ ಶಿವಭಕ್ತರಾದವರನೆಲ್ಲರನೊಂದೆ ಎಂಬೆ; ಹಾರುವ ಮೊದಲು ಶ್ವಪಚ ಕಡೆಯಾಗಿ ಭವಿಯಾದವರನೆಲ್ಲರನೊಂದೆ ಎಂಬೆ (ಬಸವಣ್ಣನ ವಚನಗಳು, 710) ಎಂಬ ಮಾತುಗಳನ್ನು ಗಮನಿಸಿ. ಇಲ್ಲಿನ ಎರಡು ಹೇಳಿಕೆಗಳು ರೂಪಸಾದೃಶ್ಯದಿಂದ ಕೂಡಿದೆಯಾದರೂ ಎರಡರ ಹಿಂದೆ ಧ್ವನಿತವಾದ

ಭಾವನೆ ಮಾತ್ರ ತಪ್ಪಿರುವುದು. 'ಶಿವಭಕ್ತರಾದವರನೆಲ್ಲರನೊಂದೆ ಎಂಬೆ' ಎಂದು ಹೇಳು ವಾಗ ಬಸವಣ್ಣ ಭಕ್ತರೆಲ್ಲರನ್ನೂ ಸಮಾನಗೌರವದಿಂದ ಕಾಣುತ್ತೇನೆಂಬ ಭಾವನೆ ಯನ್ನು ವ್ಯಕ್ತಪಡಿಸಿದ್ದಾರೆ. 'ಭವಿಯಾದವರನೆಲ್ಲರನೊಂದೆ ಎಂಬೆ' ಎಂದು ಹೇಳುವ ಹಿಂದೆ ಅವರೆಲ್ಲರೂ ನನ್ನ ದೃಷ್ಟಿಯಲ್ಲಿ ಸಮಾನ ತಿರಸ್ಕಾರಕ್ಕೆ ಯೋಗ್ಯರೆಂಬ ಧ್ವನಿ ಯಿದೆ. ಅವನ ವಚನಗಳನ್ನು, ಅದರಲ್ಲೂ ಮಾಹೇಶ್ವರಸ್ಥಲದ ವಚನಗಳನ್ನು ಓದಿದವರಿಗೆ ಈ ಧ್ವನಿ ಕೇಳುವುದು ಸಹಜವೇ. ಮಿಕ್ಕ ವಚನಕಾರರ ಭಾವನೆಯೂ ಇಂತಹುದೇ. ಹೀಗಾಗಿ ವಚನಕಾರರು ಜಾತಿಗಳ ಬಗ್ಗೆ, ವರ್ಣವ್ಯವಸ್ಥೆಯ ಬಗ್ಗೆ ತಮ್ಮ ಕ್ರೋಧವನ್ನು ವ್ಯಕ್ತಪಡಿಸಿದ್ದು ಮತಾಂತರಗೊಂಡು ವೀರಶೈವರಾಗಿದ್ದವರ ಪೂರ್ವಾಶ್ರಮದ ಜಾತಿ ವರ್ಣಗಳಿಗೆ ಸಂಬಂಧಪಟ್ಟಂತೆ. ವಚನಕಾರರಿಗೆ ವೀರಶೈವರ ನ್ನೆಲ್ಲ ಸಮಾನತೆಯ ನೆಲೆಯಲ್ಲಿ ಸಂಘಟಿಸಬೇಕಾದ ಅವಶ್ಯಕತೆಯಿತ್ತು. ಎಂದರೆ, ಅವರಲ್ಲಿ ಸಾಕಷ್ಟು ಮಂದಿ ತಮ್ಮ ಮತಾಂತರಪೂರ್ವ ಜಾತಿಯ ಬಗ್ಗೆ ಹಿಡಿದಿದ್ದ ಅಭಿ ಮಾನ. ಅದರಿಂದಾಗಿ ಆಚರಿಸುತ್ತಿದ್ದ ವ್ಯತ್ಯಾಸ. ಆಗ ವೀರಶೈವದಲ್ಲಿದ್ದವರಲ್ಲಿ ಬಹು ಪಾಲು ಮತಾಂತರಗೊಂಡವರೇ ಆಗಿದ್ದರು: ಅವರ ಹಿಂದಿನ ಜಾತಿ-ವರ್ಣಗಳು ವಿವಿಧ ವಾಗಿದ್ದುವು. ಹೀಗಾಗಿ ಅನೇಕ ಗುರುಗಳು ದೀಕ್ಷೆ ಕೊಡುವ ಸಂದರ್ಭದಲ್ಲಾಗಲೀ, ಜಂಗಮರು ಭಕ್ತರಿಂದ ದಾಸೋಹ ಸ್ವೀಕರಿಸುವಾಗಲಾಗಲೀ ತಮಗಿಂತ ಕೀಳುಜಾತಿಯ ವರೆಂಬ ಕಾರಣದಿಂದ ಅಂತಹ ಶಿಷ್ಯರ ಮನೆಯಲ್ಲಿ ಊಟಮಾಡದೆ ಅಕ್ಕಿ-ಬೇಳೆಗಳನ್ನು ತೆಗೆದುಕೊಂಡು ಹೋಗುತ್ತಿದ್ದರು: ಸ್ವಲ್ಪ ಮಟ್ಟಿಗೆ ಮುಂದುವರಿದ ಕೆಲವರು ಊಟೋಪಚಾರಗಳಲ್ಲಿ ವ್ಯತ್ಯಾಸಮಾಡದಿದ್ದರೂ ಮದುವೆಯಾಗಬೇಕಾದ ಸಂದರ್ಭ ದಲ್ಲಿ ಜಾತಿಯನ್ನು ಆಚರಿಸುತ್ತಿದ್ದರು. (ಇವುಗಳನ್ನೆಲ್ಲ ನನ್ನ 'ಬಸವಾದಿಗಳ ಕಾಲದ ಮತಾಂತರ' ಶ್ರೀಕಂಠತೀರ್ಥ - ತೀ. ನಂ. ಶ್ರೀ. ಸ್ಮಾರಕ ಸಂಪುಟದಲ್ಲಿ ವಿವರವಾಗಿ ಪರಿಶೀಲಿಸಲಾಗಿದೆ). ಆಗಿನ ನವವೀರಶೈವರು ಆಚರಿಸುತ್ತಿದ್ದ ಜಾತಿ ವ್ಯತ್ಯಾಸಗಳನ್ನು ಅನೇಕ ವಚನಕಾರರು ಖಂಡಿಸಿದ್ದಾರೆ.

ಯಾವುದೋ ಕಾರಣಕ್ಕಾಗಿ ವೀರಶೈವಕ್ಕೆ ಮತಾಂತರಗೊಂಡ ಅನೇಕರು ತಮ್ಮ ಶ್ರೇಷ್ಠತೆಯನ್ನು ಉಳಿಸಿಕೊಳ್ಳಲು ಹಾತೊರೆಯುತ್ತಿದ್ದರು. ಬಹುಮಂದಿ ಈ ವರಿಷ್ಠತೆ ಯನ್ನು ವೈಯಕ್ತಿಕ ನೆಲೆಯಲ್ಲಿ ಆಚರಿಸಿ, ಹೊರಗೆ ಮಾತ್ರ ತಮ್ಮ ಮತೀಯ ನಾಯ ಕರ ಮಾತುಗಳಿಗೆ ಉಪದೇಶಗಳಿಗೆ ಗೋಣುಹಾಕುತ್ತಿದ್ದರು. ಕೆಲವರು ತಮ್ಮ ವಚನ ಗಳ ಮೂಲಕ ತಮ್ಮ ಭಾವನೆ ನಂಬಿಕೆಗಳಿಗೆ ಅಭಿವ್ಯಕ್ತಿಯನ್ನು ಕೊಟ್ಟರು. ಊರಿ ಲಿಂಗಪೆದ್ದಿ ಎಂಬ ಶರಣನ ಈ ವಚನಭಾಗವನ್ನು ನೋಡಿ: "ವಸಿಷ್ಠಗೋತ್ರದಲ್ಲಿ ಹುಟ್ಟಿದವನು ವಸಿಷ್ಠಗೋತ್ರದವನೆಂಬಂತೆ ಕಾಶ್ಯಪಗೋತ್ರದಲ್ಲಿ ಹುಟ್ಟಿದವನು ಕಾಶ್ಯಪ ಗೋತ್ರದವನೆಂಬಂತೆ...." ಎಂದು ಬ್ರಾಹ್ಮಣನ ಮಗ ಬ್ರಾಹ್ಮಣನು, ಕ್ಷತ್ರಿಯನ ಮಗ

ಕ್ಷತ್ರಿಯನು, ವೈಶ್ಯನ ಮಗ ವೈಶ್ಯನು, ಶೂದ್ರನ ಮಗ ಶೂದ್ರನು, ಪರಿತಪ್ಪದು" (ಪಿ. ಜಿ. ಹಳಕಟ್ಟಿ : ಉರಿಲಿಂಗಪೆದ್ದಿಯ ವಚನಗಳು, 120) ಎಂದು ಹೇಳುತ್ತಾನೆ. ಇವನು ಜಾತಿಗೋತ್ರಗಳು ಅನುಲ್ಲಂಘನೀಯವೆಂಬ ಮನೋಭಾವವನ್ನು ತಳೆದ ವಚನಕಾರ : ಅತ್ಯಂತ ಸಾಂಪ್ರದಾಯಿಕ ಆಲೋಚನೆಯುಳ್ಳವನು. ಇದಕ್ಕೆ ಕಾರಣವೂ ಇಲ್ಲದಿಲ್ಲ. ಇವನು ಪೂರ್ವದಲ್ಲಿ ಬ್ರಾಹ್ಮಣ. ಅವನ ಸಾಂಪ್ರದಾಯಿಕ ಮನೋಭಾವವು ಅವನ ವಚನಗಳಲ್ಲಿ ಯಥೇಚ್ಛವಾಗಿ ಉದ್ಧೃತಗೊಳ್ಳುವ ಸಂಸ್ಕೃತ ಶ್ಲೋಕಗಳಲ್ಲಿಯೂ ಕಾಣಬರುತ್ತದೆ. ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿ ಹಾಗೂ ಅತ್ಯಂತ ವ್ಯಾಪಕವಾದ ರೀತಿಯಲ್ಲಿ ಸಂಸ್ಕೃತೋಕ್ತಿಗಳನ್ನು ಉಲ್ಲೇಖಿಸುವ ವಚನಕಾರನೆಂದರೆ ಇವನೇ. ವಾತೂಲಾಗಮ, ಬ್ರಹ್ಮಾಂಡಪುರಾಣ, ಶಿವರಹಸ್ಯ, ನಾಲ್ಕು ವೇದಗಳು, ಗಾರುಡ-ಸ್ಕಾಂದ, ಧರ್ಮ, ಶಿವಧರ್ಮ, ಮುಂತಾದ ಪುರಾಣಗಳು, ಕಾಳಿಕಾಖಂಡ, ಶಂಕರಸಂಹಿತೆ, ವೀರಾಗಮ ಮುಂತಾದ ಮೂಲಗಳಿಂದ ಹೆಕ್ಕಿದ ಅತ್ಯಂತ ಹೆಚ್ಚಿನ ಶ್ಲೋಕಗಳನ್ನು ವಚನಗಳಲ್ಲಿ ಸೇರಿಸುತ್ತಾನೆ. ಇವನ ಈ ವ್ಯಾಪಕವಾದ ಸಂಸ್ಕೃತ ಪಾಂಡಿತ್ಯವು ವೀರಶೈವಕ್ಕೆ ಬಂದಿದ್ದರೂ ಇವನು ಸಾಂಪ್ರದಾಯಿಕವಾಗಿಯೇ ಉಳಿದಿದ್ದಾನೆ ಎಂಬುದನ್ನು ಸೂಚಿಸುತ್ತವೆ. "ವೇದವೆಂಬುದು ಓದಿನ ಮಾತು, ಶಾಸ್ತ್ರವೆಂಬುದು ಸಂತೆಯ ಸುದ್ದಿ, ಪುರಾಣವೆಂಬುದು ಪುಂಡರ ಗೋಷ್ಠಿ" ಎಂದು ಮುಂತಾಗಿ ಹೀಯಾಳಿಸುವ ಅಲ್ಲಮನ ಮನೋಭಾವಕ್ಕೆ ಇವನು ವ್ಯತಿರಿಕ್ತ (ಎಲ್. ಬಸವರಾಜು : ಅಲ್ಲಮನ ವಚನಗಳು, 230). ಆದರೆ ಪೆದ್ದಿಯಂತಹವರು ಹೀಗಿದ್ದೂ ವೀರಶೈವಕ್ಕೆ ಸೇರಲು ಕಾರಣವೇನಿತ್ತೋ.

ಉರಿಲಿಂಗಪೆದ್ದಿಯಂತಹವರು ತುಂಬ ಕಡಿಮೆಯ ಸಂಖ್ಯೆಯಲ್ಲಿದ್ದರೆಂಬುದು ನಿಜ. ಆದರೆ ತಮ್ಮ ಪೂರ್ವಾಶ್ರಮದ ಜಾತಿಯನ್ನು ತೊರೆದಿದ್ದೇವೆಂದು ಹೇಳಿಕೊಳ್ಳುವವರಲ್ಲೂ ಕೆಲವರು ತಮ್ಮ ಮನಸ್ಸಿನಾಳದಲ್ಲಿ ಹಿಂದಿನ ಜಾತಿ ಹೆಮ್ಮೆಯನ್ನು ಬಿಡಲಾರದೆ ಇದ್ದಿರಬಹುದು. ಬಸವಣ್ಣನೇ ಇದಕ್ಕೆ ಸಾಕ್ಷಿ. ಅವನು ಹುಟ್ಟಿನಿಂದ ಬ್ರಾಹ್ಮಣ. ಪ್ರಜ್ಞಾಪೂರ್ವಕವಾಗಿ, ಹೃದಯಪೂರ್ವಕವಾಗಿ ಜಾತಿವ್ಯವಸ್ಥೆಯ ವಿರುದ್ಧವಾಗಿ ಅವನು ನಿಂತುಕೊಂಡಿದ್ದರೂ ಹಾಗೆ ನಡೆಯಲು ಪ್ರಯತ್ನಿಸಿದ್ದರೂ ಕೆಲವು ವೇಳೆ ಅವನನ್ನೂ ಈ ಪೂರ್ವಾಶ್ರಮದ ಜಾತಿ ಹೆಮ್ಮೆ ಕಾಡಿದ್ದಿರಬಹುದು ಎಂಬುದಕ್ಕೆ ಅವನ ಅನೇಕ ಮಾತುಗಳೇ ಸಾಕ್ಷಿ. "ಉತ್ತಮ ಕುಲದಲ್ಲಿ ಹುಟ್ಟಿದೆನೆಂಬ ಕಷ್ಟದ ಹೊರೆಯ ಹೊರಿಸದಿರಯ್ಯ", "ಸೆಟ್ಟಿಯೆಂಬೆನೆ ಸಿರಿಯಾಳನ ? ಮಡಿವಾಳನೆಂಬೆನೆ ಮಾಚಯ್ಯನ ? ಡೋಹಾರನೆಂಬೆನೆ ಕಕ್ಕಯ್ಯನ ? ಮಾದಾರನೆಂಬೆನೆ ಚನ್ನಯ್ಯನ ? ಆನು ಹಾರುವನೆಂದರೆ ಸಂಗಯ್ಯ ನಗುವನಯ್ಯ" ಎನ್ನುವಂತಹ ಮಾತುಗಳಲ್ಲಿ ಬಸವಣ್ಣನ ಮಾನಸಿಕ ಹೋರಾಟವನ್ನು ಗುರುತಿಸಬಹುದು. ತನ್ನ ಅಂತರಾಳದಲ್ಲಿದ್ದ

ಜಾತಿಗರ್ವವನ್ನು ಪ್ರತ್ಯಕ್ಷಪೂರ್ವಕವಾದ ನೆಲೆಯಲ್ಲಿ ಒಡೆದು ನನ್ನನ್ನು ಕಾಪಾಡಿ ಕೊಲ್ಲುತ್ತಿದ್ದ ಬಸವಣ್ಣನ ರೀತಿಯನ್ನು ಈ ನುಡಿಗಳಲ್ಲಿ ಕಾಣಬಹುದು.

ಈ ಸಂದರ್ಭದಲ್ಲಿಯೇ ಭಾರತದ ಸಮಾಜ ವ್ಯವಸ್ಥೆಯಲ್ಲಿರುವ ಜಾತಿಗಳ ಕಟ್ಟು ನಿಟ್ಟಿನ ಬಗ್ಗೆ, ಎಲ್ಲರಿಗೂ ತಿಳಿದಿರುವ ಒಂದು ಆಶ್ಚರ್ಯಕರ ಅಂಶದ ಬಗ್ಗೆ ಗಮನವನ್ನು ಸೆಳೆಯಬಯಸುತ್ತೇನೆ. ಇತಿಹಾಸದ ಉದ್ದಕ್ಕೂ ಅನೇಕ ಹೊಸ ಮತಗಳ ಹುಟ್ಟು, ಪ್ರಸಾರ, ಮತಾಂತರ ಇವುಗಳು ಭಾರತದಲ್ಲಿ ನಡೆದಿದ್ದರೂ ಜಾತಿವ್ಯವಸ್ಥೆ ಎಲ್ಲೆಡೆಯೂ ತನ್ನ ಕಬಂಧ ಬಾಹುವನ್ನು ಚಾಚಿಸಿದ್ದು. ಮತಾಂತರಕ್ಕೆ ವಿರೋಧ ಕಾಣಸಲಿಲ್ಲ : ಆದರೆ ಮತ ವ್ಯತ್ಯಾಸವಾದರೂ ಜಾತಿ ವ್ಯತ್ಯಾಸವಾಗಲಿಲ್ಲ. ಅಥವಾ ಕಣ್ಮರೆಯಾಗಲಿಲ್ಲ. ಪಂಪನ ತಂದೆ ಜೈನನಾಗಿ ಮತಾಂತರಗೊಂಡರೂ ಪಂಪನು ತನ್ನ ಬ್ರಾಹ್ಮಣಜಾತಿಯ ಹಿರಿಮೆಯನ್ನು ಜೋರಾಗಿ ಹೇಳಿಕೊಳ್ಳುತ್ತಾನೆ. ಆದರೂ ಕರ್ಣನಿಂದ 'ಕುಲಂ ಕುಲಮಲ್ತು, ಚಲಂ ಕುಲಂ....' ಇತ್ಯಾದಿಯಾಗಿ ಹೇಳಿಸುತ್ತಾನೆ. ಹಾಗೆಯೇ ನಮ್ಮ ಧರ್ಮಶಾಸ್ತ್ರಗಳನ್ನು ಓದಿದರೆ ಇನ್ನೊಂದು ಅಂಶ ಕಾಣಸಿಗುತ್ತದೆ. ಹಿಂದೆಯೂ ವರ್ಣಸಂಕರಕ್ಕೆ ಎಷ್ಟೇ ವಿರೋಧವಿದ್ದರೂ ಅಂತರ್ಜಾತಿಯ ವಿವಾಹಗಳು, ಕೊನೆಯ ಪಕ್ಷ ಸಂಬಂಧಗಳು, ನಡೆಯುತ್ತಿದ್ದವು. ಅಂತಹ ದಂಪತಿಗಳಿಗೆ ಹುಟ್ಟಿದ ಮಕ್ಕಳಿಗೆ ಹೊಸ ಜಾತಿಯ ಹೆಸರನ್ನು ಅಂಟಿಸಿರುವುದು ಧರ್ಮಶಾಸ್ತ್ರಗಳಲ್ಲಿ ಕಾಣುವ ಅಂಶ.

ಈಗ ವಚನಕಾರರು ಜಾತಿಸುಧಾರಣೆಗೆ ಕೈಹಾಕಿದ ಬಗ್ಗೆ. ಬಸವಣ್ಣ ಬ್ರಾಹ್ಮಣ-ಹೊಲೆಯರ ವೈವಾಹಿಕ ಸಂಬಂಧಕ್ಕೆ ಉತ್ತೇಜನವಿತ್ತ : ಇದಕ್ಕೆ ಬೆಂಬಲವಾಗಿ ವೀರಶೈವರು ನಿಂತರು. ಆದರೆ ಬಹಳ ಅಲ್ಪಕಾಲದಲ್ಲೇ ವೀರಶೈವವನ್ನು ಈ ಜಾತಿಪಿಡುಗು ಆವರಿಸಿತು. ಬಸವಣ್ಣ ವೈದಿಕಮತವನ್ನು ಧಿಕ್ಕರಿಸಿದ. ಅದರ ಯಜ್ಞ ಯಾಗಾದಿಗಳನ್ನು ಅಲ್ಲಗಳೆದ. ವೀರಶೈವರೆಲ್ಲರ ಸಮಾನತೆಯನ್ನು ಬೋಧಿಸಿದ. ಆದರೆ ಅವನೇ ಒಂದು ತಪ್ಪು ಮಾಡಿದನೇನೋ ಎನ್ನಿಸುತ್ತದೆ. ಆ ತಪ್ಪು ಎಂದರೆ ಜಂಗಮರಿಗೆ ಕೊಟ್ಟ ಅತಿ ಪ್ರಾಶಸ್ತ್ಯ. "ಜಂಗಮವೆ ಲಿಂಗವೆನಗೆ, ಜಂಗಮವೇ ಪ್ರಾಣವೆನಗೆ" ಎಂದು ಹೇಳಿಕೊಂಡ. "ನಡೆಲಿಂಗ ಜಂಗಮ" ಎಂದು ಹೇಳಿದ. ಇದನ್ನು ಇತರ ವಚನಕಾರರೂ ಅನುಮೋದಿಸುತ್ತಾರೆ. "ಭಕ್ತನ ಕ್ರಮವೆಂತೆಂದೊಡೆ, ತಾನು ಭೋಗಿಸುವಂತಹ ಸಕಲದ್ರವ್ಯಂಗಳೆಲ್ಲವನು ಜಂಗಮಕ್ಕೆ ಕೊಟ್ಟು ತಾನು ಕೊಳ್ಳಬೇಕು" ಎಂದು ತಿಮ್ಮಪ್ಪೆಯೆಂಬ ವಚನಕಾರ್ತಿ ಹೇಳುತ್ತಾಳೆ. ಇದನ್ನು ನಂಬಬಹುದಾದರೆ, ಸ್ವಾಮಿಜಂಗಮ ಮನೆಗೆ ಬಂದಾಗ ಬೇರಾರೂ ದೊರೆಯದ ಸಂದರ್ಭದಲ್ಲಿ ಅವನ ಭೋಗಕ್ಕೆ ತನ್ನ ಹೆಂಡತಿಯನ್ನೇ ನೀಡುವವರೆಗೂ ಬಸವಣ್ಣ ಹೋಗುತ್ತಾನೆ. ಈ ಕಾಲದಲ್ಲಿ ಜಂಗಮ ಎಂಬುವವನು ಈಗಿನಂತೆ ಹುಟ್ಟಿನಿಂದ ಗುರುತಿಸ

ಲ್ಪಡುತ್ತಿರಲಿಲ್ಲವೆಂದು ಕಾಣುತ್ತದೆ. ಇದೇ ವಚನಸಮುದಾಯದಲ್ಲಿ ಒಂದು ಕಡೆ ಮಾತ್ರ ಗುರು-ಜಂಗಮರನ್ನು ಆಯುವ ಕ್ರಮವನ್ನು ಹೇಳಿರುವುದು ಕಾಣುತ್ತದೆ. ಆ ವಚನವನ್ನು ನೋಡಿ :

"ಪುಣ್ಯತೀರ್ಥಕ್ಷೇತ್ರಂಗಳಲ್ಲಿ ತಂದ ಶಿಲೆಯ ಪರೀಕ್ಷಿಸಿ ಸಂಸ್ಕಾರಗೈಯಲು
ಅದು ಲಿಂಗವಾಗಿಪ್ಪುದಯ್ಯಾ.
ಸದ್ವಂಶೀಯರಾದ ವಟುಗಳ ಪರೀಕ್ಷಿಸಿ ಸಂಸ್ಕಾರಗೈಯಲು
ಗುರುಜಂಗಮವಾಗಿರ್ಪರಯ್ಯಾ.
ಇಂತಪ್ಪುದನಾರಯ್ಯದೆ,
ಸಂಸ್ಕಾರರಹಿತ ಗುರುಲಿಂಗಜಂಗಮವ ಪೂಜಿಸುವ
ಅರಿಮರುಳರನೇನೆನಗೊಮ್ಮೆ ತೋಱದಿರಯ್ಯಾ
ಕೂಡಲ ಚನ್ನಸಂಗಮದೇವಾ"

(ಚನ್ನಬಸವಣ್ಣನವರ ವಚನಗಳು, ವ. 418 :
3ನೇ ಮುದ್ರಣ, ಪು. 187)

ಎಂದರೆ ವಚನಗಳ ಕಾಲದಲ್ಲಿ ಗುರು-ಜಂಗಮರು ಹುಟ್ಟಿನಿಂದ ನಿರ್ಧರಿತರಾಗುತ್ತಿರಲಿಲ್ಲ. ಆದರೆ ವಚನಕಾರರು ಅವರಿಬ್ಬರನ್ನೂ ಲಿಂಗದ ಸರಿಸಮನಾಗಿ ಪರಿಗಣಿಸಿ ಅಟ್ಟಕ್ಕೇರಿಸಿದ್ದರಿಂದ ಒಂದೆಡೆ ಪುರೋಹಿತರಾಹಿಯ ಪುನರ್ನಿರ್ಮಾಣವಾಯಿತು ; ಮತ್ತೊಂದೆಡೆ ಮನುಷ್ಯರು ಮನುಷ್ಯರನ್ನೇ ದೇವರೆಂದು ಕರೆದು ಸನಾತನತೆಯ ಭಾವನೆ ಘೋಷಿಸಲ್ಪಟ್ಟಿತು. ವಚನಗಳನ್ನು ನೋಡಿದರೆ, ಗುರು-ಜಂಗಮರಿಗೆ ಎಲ್ಲಿ ಬಗೆಯ ಸವಲತ್ತುಗಳು, ರಿಯಾಯಿತಿಗಳು, ದಾದಾರಿಗಳನ್ನು ಆ ಕಾಲದಲ್ಲಿ ಕೊಟ್ಟಂತೆ ತೋರುತ್ತದೆ. 'ಸದ್ವಂಶ'ದ ವಟುಗಳು ಮಾತ್ರ ಗುರು-ಜಂಗಮರಾಗಬಹುದೆಂಬುದನ್ನು ಜಾಣರಾದ ಮೇಲುಜಾತಿಯ ಜನರು ತಮ್ಮ ಅನುವಾದಿಗನುಗುಣವಾಗಿ ವ್ಯಾಖ್ಯಾನಮಾಡಿ ಜಾತಿವ್ಯವಸ್ಥೆಯು ವೀರಶೈವದಲ್ಲಿ ಪುನಃಸ್ಥಾಪಿತವಾಗಲು ಕಾರಣವಾಗಿರಬಹುದು.

ಭಾರತದ ಜಾತಿವ್ಯವಸ್ಥೆಗೆ ಆರ್ಥಿಕ ಕಾರಣವಿರಬೇಕೆಂದು ಬಸವಣ್ಣ ಭಾವಿಸಿದಂತೆ ಕಾಣುತ್ತದೆ. "ಕಾಸಿ ಕಮ್ಮಾರನಾದ, ಬೀಸಿ ಮಡಿವಾಳನಾದ, ಹಾಸನಿಕ್ಕಿ ಸಾಲಿಗನಾದ, ವೇದವನೋದಿ ಹಾರುವನಾದ" ಇತ್ಯಾದಿ ಮಾತುಗಳನ್ನು ಹೇಳುವಾಗ ವೃತ್ತಿಗಳು, ಮತ್ತು ಅವುಗಳನ್ನು ಪಾರಂಪರ್ಯವಾಗಿ ನಡೆಸಿಕೊಂಡು ಬಂದ ರೀತಿ, ಇವು ಜಾತಿಗಳಾಗಿ ಮೂಡಿಬರಲು ಕಾರಣವಾಯಿತು. ಸಣ್ಣ ಹಳ್ಳಿಯಲ್ಲಿ ಒಂದೇ ವೃತ್ತಿಯನ್ನು ಅನೇಕರು ಅನುಸರಿಸಿ ಸ್ಪರ್ಧೆಹೂಡಲು ಅವಕಾಶವಿರಲಿಲ್ಲ. ಹೀಗಾಗಿ

ತಮ್ಮ ವೃತ್ತಿಯನ್ನು ತಾವು ಮಾತ್ರವೇ ಅನುಸರಿಸಿಕೊಂಡು ಮುಂದೆ ಒಂದೊಂದು ವೃತ್ತಿಯ ಜನರೂ ಬೇರೆ ದ್ವೀಪಗಳಾಗಿ ಪರಿಣಮಿಸಲು ಕಾರಣವಾಗಿರಬೇಕು. ಹೀಗಾಗಿ ಜಾತಿಯ ಹಿಂದೆ ಆರ್ಥಿಕ ಕಾರಣವಿದೆ. ವೃತ್ತಿಗಳಲ್ಲಿನ ವ್ಯತ್ಯಾಸವಿದೆ. ಈ ಕಾರಣದಿಂದ ಜಾತಿಗಳಲ್ಲಿನ ವ್ಯತ್ಯಾಸವನ್ನು ಹೋಗಲಾಡಿಸಲು ವೃತ್ತಿಗಳ ಬಗೆಗಿನ ತರತಮ ಮನೋಭಾವವನ್ನು ಹೋಗಲಾಡಿಸುವ ಅವಶ್ಯಕತೆಯು ಬಸವಣ್ಣನಂತಹ ವಚನಕಾರರಿಗೆ ಕಾಣಿಸಿರಬೇಕು. ಇದು 'ಕಾಯಕ'ವೆಂಬ ಪರಿಕಲ್ಪನೆಗೆ ಪ್ರಚೋದಕವಾಯಿತು ಎನಿಸುತ್ತದೆ.

ದುಡಿದು ತಿನ್ನುವುದನ್ನು ಬೋಧಿಸಿದ ವಚನಕಾರರು ದುಡಿಮೆಗೆ ಆಧ್ಯಾತ್ಮಿಕ ಚೌಕಟ್ಟನ್ನು ಹಾಕಿ ಕಾಯಕವೆಂದು ಕರೆದರು. ಶ್ರಮ, ತೃಪ್ತಿ, ಪ್ರಾಮಾಣಿಕತೆಗಳಿಂದ ಕೂಡಿದ ವೃತ್ತಿಧರ್ಮವನ್ನೇ ಕಾಯಕವೆಂದು ಹೇಳುವರು. ದುಡಿದು ಸಂಪಾದಿಸುವುದು, ದುಡಿಮೆಗೆ ತಕ್ಕ ಪ್ರತಿಫಲವನ್ನು ಮಾತ್ರ ಸ್ವೀಕರಿಸುವುದು, ತನ್ನ ಅವಶ್ಯಕತೆಗಿಂತ ಹೆಚ್ಚಿನದನ್ನು ದಾಸೋಹಕ್ಕೆ ವಿನಿಯೋಗಿಸುವುದು–ಈ ಮೂರು ಕಾಯಕದ ಅತ್ಯಂತ ಪ್ರಮುಖ ಅಂಶಗಳು. ಇವುಗಳಲ್ಲಿ ಮೊದಲೆರಡು ಸರಿಯೇ. ಆದರೆ ದಾಸೋಹದ ಕಲ್ಪನೆ ಒಂದು ರೀತಿಯಲ್ಲಿ ಎಡವಟ್ಟಾಗಿ ಪರಿಣಮಿಸಿರಬೇಕು. ಏಕೆಂದರೆ ವಚನಕಾರರು ತ್ರಿವಿಧ ದಾಸೋಹ–ಎಂದರೆ ಗುರು, ಲಿಂಗ, ಜಂಗಮ, ಇವರುಗಳಿಗೆ ನೀಡುವುದನ್ನು ಒತ್ತಿ ಹೇಳಿದರು. ಅದರಲ್ಲಿ ಲಿಂಗದ ವಿಷಯಬೇಕು. ಗುರು-ಜಂಗಮ ಇವರಿಗೆ ದಾನಮಾಡಿದರೆ ಮೋಕ್ಷವೆಂಬ ಕಲ್ಪನೆ (ಉಣ್ಣುವ ಜಂಗಮಕ್ಕೆ ಬೋನವಿಡುವುದು) ಸಾಮಾನ್ಯರನ್ನು ಗುರು-ಜಂಗಮರು ಶೋಷಿಸಲು ಕಾರಣವಾಯಿತು. ಎಂದರೆ ಹಿಂದೆ ನೋಡಿದಂತೆ ಪುರೋಹಿತಶಾಹಿಯು ದಾನದ ಸ್ವರೂಪದಲ್ಲಿ ಉತ್ಪನ್ನವನ್ನು ಅನುಭವಿಸುವ ಹಕ್ಕನ್ನೂ ತನ್ನ ಸ್ವಾಧೀನಕ್ಕೆ ತೆಗೆದುಕೊಂಡಿತು. ಹೀಗಾಗಿ, ವೃತ್ತಿಯ ಎಂದರೆ ನೌಕರಿಯ ಶ್ರೇಷ್ಠತೆಯನ್ನು ಸಾಮಾನ್ಯರಲ್ಲಿ ಮೂಡಿಸಲು ಅದು ಪೂಜೆಗೆ ಸಮಾನವೆಂಬ, ಮೋಕ್ಷಕ್ಕೆ ಸಾಧನವೆಂಬ ಕಲ್ಪನೆಯು ಜನರನ್ನು ಹೆಚ್ಚಾಗಿ ಮೋಕ್ಷದ ಕಡೆಗೆ ನೋಡುವಂತೆ ಪ್ರೇರಿಸಿತಲ್ಲದೆ, ಅದರ ಫಲವನ್ನು ಪುರೋಹಿತಶಾಹಿಗೆ ಅರ್ಪಿಸಿ ಸಂತೃಪ್ತಿ ಪಡೆಯುವ ಮನೋಭಾವಕ್ಕೆ ಕಾರಣವಾಯಿತು. ಆದರೆ ಶ್ರಮದ ಬಗ್ಗೆ ನಾಚದ ಮನೋಭಾವವನ್ನೂ, ಎಲ್ಲ ವೃತ್ತಿಗಳೂ ಸಮಾನವೆಂಬ ಮನೋಭಾವವನ್ನೂ ಬೆಳೆಸಲು ವಚನಕಾರರ ಹೇಳಿಕೆಗಳು ಸಹಾಯಕವಾದವು. ಬಸವಣ್ಣನಂತಹ ಉನ್ನತ ಹುದ್ದೆಯಲ್ಲಿದ್ದವರು ಸಾಮಾನ್ಯವೆನಿಸಿಕೊಂಡ ವೃತ್ತಿಗಳವರನ್ನು, ಎಂದರೆ ಮಡಿವಾಳ, ಮೋಳಿಗ ಕಾಯಕ, ಮುಂತಾದವನ್ನು ಅನುಸರಿಸುವ ಜನರನ್ನೂ, ಗೌರವದಿಂದ ಕಾಣುವುದರ ಮೂಲಕ ಜನರಿಗೆ ಮೇಲ್ಪಂಕ್ತಿ ಹಾಕಿಕೊಟ್ಟರೆಂಬುದರಲ್ಲಿ ಸಂಶಯವಿಲ್ಲ.

ಸ್ತ್ರೀ–ಪುರುಷರಲ್ಲಿನ ವ್ಯತ್ಯಾಸಗಳ ಬಗ್ಗೆ ವಚನಕಾರರ ಪ್ರಜ್ಞಾಪೂರ್ವಕ ನಿಲುವು ಸ್ವಾಗತಾರ್ಹವಾದದ್ದು. ಮಹಾದೇವಿಯಕ್ಕನಂತಹ ಅನೇಕ ವಚನಕಾರ್ತಿಯರನ್ನು ನಾವು ಕಾಣುತ್ತೇವೆ. ಇದ್ದಕ್ಕಿದ್ದಂತೆ ಅನೇಕ ಹೆಂಗಸರು, ಇತಿಹಾಸದಲ್ಲಿಯೇ ಮೊತ್ತಮೊದಲಾಗಿ, ಕನ್ನಡದಲ್ಲಿ ಬರವಣಿಗೆಯನ್ನು ಮಾಡಿದರು. ಅಲ್ಲದೆ ಮಹಾದೇವಿಯಕ್ಕನಂತಹವಳು, ಆಗಿನ ಪಾಳೆಯಗಾರನೊಬ್ಬನಿಗೆ ಹೆಂಡತಿಯಾಗಿದ್ದೂ, ತನಗೆ ಸರಿಬರದಿದ್ದಾಗ ಅವನನ್ನು ತೊರೆಯುವ ಧೈರ್ಯಮಾಡಿದ್ದು, ಒಂದು ರೀತಿಯಿಂದ, ಆ ಕಾಲದಲ್ಲಿ ಹೆಂಗಸರಲ್ಲಿ ಆತ್ಮಸ್ಥೈರ್ಯವು ಹೆಚ್ಚಾದುದರ ಪ್ರತೀಕವೆನಿಸುತ್ತದೆ. ಆದರೆ ಬಸವಣ್ಣ ತಾನೇ ಇಬ್ಬರು ಹೆಂಡಿರನ್ನು ಪಡೆದಿದ್ದೂ, "ಪರಮ ಪತಿವ್ರತೆಗೆ ಗಂಡನೊಬ್ಬ" ಇತ್ಯಾದಿ ಹೇಳಿಕೆಗಳನ್ನು ನೀಡುವುದರ ಮೂಲಕ ಒಂದು ಬಗೆಯಲ್ಲಿ ಸಾಂಪ್ರದಾಯಿಕ ಮನೋಭಾವವನ್ನೇ ತೋರಿದ ಎನಿಸುತ್ತದೆ.

ರಾಜತ್ವದ ಬಗ್ಗೆ, ಎಂದರೆ ರಾಜನೆಂಬ ವ್ಯಕ್ತಿಯ ಬಗ್ಗೆ, ವಚನಕಾರರು ಅನೇಕ ಬಗೆಯಲ್ಲಿ ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಿದ್ದಾರೆ. ಮೊಲವನ್ನು ಬೇಟೆಯಾಡಿ ತಂದರೆ ಜನರು ಅದನ್ನು ಕೊಳ್ಳುತ್ತಾರೆ. ಆದರೆ ರಾಜನ ಹೆಣವನ್ನು ಒಂದಡಿಕೆಗೂ ಕೊಳ್ಳುವವರಿಲ್ಲ, ಎಂಬಂತಹ ಅರ್ಥದ ಮಾತುಗಳಲ್ಲಿ ರಾಜನೆಂದರೆ ವಿಶೇಷ ವ್ಯಕ್ತಿಯೇನಲ್ಲ ಎಂಬ ಮನೋಭಾವ ಕಾಣುತ್ತದೆ. ಆದರೆ ವಚನಕಾರರೆಲ್ಲಿಯೂ ರಾಜತ್ವವನ್ನು ತಿರಸ್ಕರಿಸಲಿಲ್ಲ, ಎಂದರೆ ರಾಜತ್ವ, ಅದರ ಅನುವಂಶೀಯತೆ ಇವುಗಳ ವಿರುದ್ಧವಾಗಿ ಅವರಿಗೆ ಸ್ಪಷ್ಟವಾದ ಕಲ್ಪನೆಯಿರಲಿಲ್ಲ. ರಾಜನನ್ನು ತಮ್ಮ ಅಧಿದೈವವಾದ ಶಿವನೊಂದಿಗೆ ಹೋಲಿಸಿ ನೋಡಿ ಅವನನ್ನು ಕೀಳು ಎಂದು ವಚನಕಾರರು ತೀರ್ಮಾನಿಸಿದರೇ ಹೊರತು, ಇತರ ಮನುಷ್ಯರ ಜೊತೆ ಅವನನ್ನು ನಿಲ್ಲಿಸಿ ಹೋಲಿಸುವ ಗೋಜಿಗೆ ಹೋಗಲಿಲ್ಲ. ಎಂದರೆ ರಾಜನ ಬಗೆಗಿನ ಅವರ ಕ್ರೋಧಕ್ಕೆ ಬಿಜ್ಜಳನಂತಹ ರಾಜರು ತಮ್ಮ ಮತೀಯ ಚಳುವಳಿಗೆ ಸಹಾನುಭೂತಿಯನ್ನು ತೋರಿಸುತ್ತಿಲ್ಲವೆಂಬ ಕೋಪ ಕಾರಣವಾಗಿರಬೇಕೇ ವಿನಾ ರಾಜಕೀಯ ಆಲೋಚನೆ ಅಲ್ಲ ಎಂದು ಹೇಳಬಹುದು. ಅಲ್ಲದೆ ವಚನಕಾರರು ರಾಜತ್ವಕ್ಕೆ ಪರ್ಯಾಯವಾದ ಸಂಸ್ಥೆಯೊಂದರ ಬಗ್ಗೆ ಎಂದೂ ತಲೆಕೆಡಿಸಿಕೊಳ್ಳಲಿಲ್ಲ. ಹೀಗಾಗಿ ರಾಜರ ಜೊತೆಗೆ ಕಾದಾಡುತಿದ್ದರು, ಅವರ ಜಗಳ ರಾಜರೆಂಬ ವ್ಯಕ್ತಿಗಳ ಜೊತೆಗೇ ಹೊರತು ರಾಜತ್ವವೆಂಬ ಸಂಸ್ಥೆಯ ಬಗ್ಗೆ ಆಗಿರಲಿಲ್ಲ.

ಒಟ್ಟು ನೋಡಿದಾಗ ವಚನಕಾರರು ಸಾಮಾಜಿಕ ಪರಿಷ್ಕರಣವನ್ನಾಗಲೀ, ಆರ್ಥಿಕ ಪರಿಕಲ್ಪನೆಯನ್ನಾಗಲೀ, ರಾಜತ್ವವನ್ನಾಗಲೀ ಸ್ವತಂತ್ರ ಸ್ಥಿತಿಯಲ್ಲಿ ಆಲೋಚನೆಮಾಡದೆ ಎಲ್ಲವನ್ನೂ ಮತೀಯ ಹಿನ್ನೆಲೆಯಲ್ಲಿ ನೋಡಿದರು. ಏಕೆಂದರೆ ಅವರ ಉದ್ದೇಶ ಮತವೊಂದರ ಪ್ರಸಾರವೇ ವಿನಾ ಮತದಿಂದ ಮುಕ್ತವಾದ ಸ್ಥಿತಿಯಲ್ಲಿನ

ಸಾಮಾಜಿಕ ಸುಧಾರಣೆಯಾಗಿರಲಿಲ್ಲವೆಂಬ ಮಾತನ್ನು ಗಮನಿಸಬೇಕು. ಹಾಗಾಗಿಯೇ ವೀರಶೈವದಲ್ಲಿ ಮುಂದೆ ಮಿಕ್ಕೆಲ್ಲ ಮತಗಳಲ್ಲಿನ ಹಾಗೆಯೇ ವಚನಕಾರರು ಜಾರಿಗೆ ತಂದಿದ್ದ ಸುಧಾರಣೆಗಳೆಲ್ಲ ಸ್ಥಗಿತವಾದವು. ಮತವೆಂದರೆ ಸ್ಥಗಿತತೆ ಎಂಬುದೇ ಇದಕ್ಕೆ ಕಾರಣ. ಆದರೆ ಎಂಟುನೂರು ವರ್ಷಗಳ ಹಿಂದೆ, ಆಗಿನ ಭಾರತದ ಪರಿಸ್ಥಿತಿಯಲ್ಲಿ ವಚನಕಾರರು ಸಂಪೂರ್ಣ ಲೌಕಿಕರಾಗಿ ಆಲೋಚಿಸಬೇಕಿತ್ತು ಎಂದು ನಾವು ಆಶಿಸುವುದು ತಪ್ಪು. ಜೊತೆಗೆ ಒಂದು ಮತದ ವಲಯದಲ್ಲಿಯಾದರೂ ಅವರು ತರಲು ಹವಣಿಸುತ್ತಿದ್ದ ಸಂಘಟನಾರೀತಿಯು ನಿಜವಾಗಿಯೂ ಅಸಾಮಾನ್ಯ ಪ್ರಯತ್ನ ಎಂಬುದನ್ನು ನಾವು ಮರೆಯುವಂತಿಲ್ಲ.

ರಾಘವಾಂಕ ಮತ್ತು ವಚನ ಪರಂಪರೆ: ಪ್ರಭಾವ

ಡಾ| ಸಾ. ಶಿ. ಮರುಳಯ್ಯ

೧

ಹರಿಹರ ರಾಘವಾಂಕರಿಗೆ ಸಂಬಂಧಿಸಿದ ಒಂದು ದಂತಕಥೆ ಬರುತ್ತದೆ. ರಾಘವಾಂಕನು ಹರಿಶ್ಚಂದ್ರ ಕಾವ್ಯವನ್ನು ರಚಿಸಿ, ಹರನನ್ನು ಸ್ತುತಿಸುವ ನಾಲಿಗೆಯಲ್ಲಿ ನರನನ್ನು ಸ್ತುತಿಸಿದ ಎಂದು ಆಪಾದಿಸಿ, ಹರಿಹರ ಅವನ ಹಲ್ಲುಗಳನ್ನು ಮುರಿದ; ಅನಂತರ ರಾಘವಾಂಕ ಹರಿಹರನ ಅಭಿಮತದಂತೆ 'ಶೈವ ಕೃತಿ ಪಂಚಕ'ಗಳನ್ನು ರಚಿಸಿ, ಅವನ ಪ್ರೀತಿಗೆ ಪಾತ್ರನಾಗಿ, ಕಳೆದುಕೊಂಡ ಹಲ್ಲುಗಳನ್ನು ಮತ್ತೆ ಪಡೆದ ಎಂದಿದೆ. ಕಥೆ ಏನೇ ಇರಲಿ ಅದರಲ್ಲಿ ಅಡಗಿರುವ ಧ್ವನಿ ಇಷ್ಟು—ಹರಿಹರ ತನ್ನ ಶಿಷ್ಯನ ಮೇಲೆ ವಸ್ತುವಿನ ಆಯ್ಕೆಯ ಬಗೆಗೆ ತನ್ನ ಪ್ರಭಾವದ ಮುದ್ರೆಯನ್ನೊತ್ತಿದ ಎಂಬುದು.

ಆದರೆ ಹರಿಹರನ ಬೋಧನೆಗೆ ಬದ್ಧನಾಗುವುದಕ್ಕೆ ಮೊದಲೇ ರಾಘವಾಂಕ ಶರಣ ಧೋರಣೆಯ ಪ್ರತಿಪಾದನೆಗೆ ಸಿದ್ಧವಾಗಿದ್ದಾನೆ ಎಂಬುದನ್ನು ಮರೆಯಬಾರದು. ಈ ಅಂಶ ಅವನ ಕೆಲವು ಕಾವ್ಯಗಳಲ್ಲಿ ಗುರುತಿಸುವಷ್ಟು ಮಟ್ಟಿಗೆ ಸ್ಪಷ್ಟವಾಗಿ ಮೂಡಿದೆ. ವಚನಕಾರರು ಕಂಡ ನುಡಿಯ ಮುಡಿಯನ್ನು ಬದುಕಿನಲ್ಲಿ ಅದು ವಹಿಸುವ ಪಾತ್ರದ ಮಹತ್ವವನ್ನೂ, ಹರಿಶ್ಚಂದ್ರ ಕಾವ್ಯದಲ್ಲಿ ಪಡಿಮೂಡಿಸಿದ್ದಾನೆ. ಶಿವಕಾವ್ಯಗಳಿಗೆ ಹೊರತು ಎನಿಸಿದ (ಹರಿಹರನ ದೃಷ್ಟಿಯಲ್ಲಿ) ಈ ಕಾವ್ಯದಲ್ಲಿ ಶರಣರ ನುಡಿಯ ಸತ್ಯ ಸಾಕ್ಷಾತ್ಕಾರವಾಗುತ್ತದೆ. ಹರಿಶ್ಚಂದ್ರ ಕಾವ್ಯವನ್ನುಳಿದು ಮಿಕ್ಕ ತನ್ನ ಶೈವಕೃತಿ ಪಂಚಕಗಳಾದ ಸಿದ್ಧರಾಮ ಚಾರಿತ್ರ, ಸೋಮನಾಥ ಚಾರಿತ್ರ, ವೀರೇಶ ಚರಿತೆ, ಶರಭ ಚಾರಿತ್ರ ಇವುಗಳಲ್ಲಿ ವಸ್ತುವಿನ ಆಯ್ಕೆಯಲ್ಲಿ ಮಾತ್ರ ರಾಘವಾಂಕ ಹರಿಹರನಿಗೆ ಋಣಿಯಾಗಿದ್ದಾನೆ, ಅಷ್ಟೇ ಹೊರತು ಅವನ ಹೆಜ್ಜೆಯಲ್ಲಿ ಹೆಜ್ಜೆ ಇಟ್ಟು ಎಲ್ಲೂ ಯಾವ ವಿಧದಲ್ಲೂ ನಡೆದಿಲ್ಲ ಎಂಬುದು ಗಮನಿಸಬೇಕಾದ ಅಂಶ. ಅದೇ ರೀತಿ ಶಿವ ಸಂಬಂಧವಾದ ಅವನ ವೀರೇಶ ಚರಿತೆ ಮತ್ತು ಶರಭ ಚಾರಿತ್ರಗಳನ್ನು ಬಿಟ್ಟರೆ, ಉಳಿದ ಸಿದ್ಧರಾಮ ಚಾರಿತ್ರ ಮತ್ತು ಸೋಮನಾಥ ಚಾರಿತ್ರಗಳಲ್ಲಿ ಹಾಗೂ ಉಪಲಬ್ಧವಿಲ್ಲದ ಹರಿಹರ ಮಹತ್ವದಲ್ಲೂ ರಾಘವಾಂಕನು ವಚನಕಾರರ ಬದುಕಿನ ಬಗೆಗಿನ ಧ್ಯೇಯ-

ಘೋರಣೆಗಳನ್ನು ಪ್ರತಿಪಾದಿಸಿಕೊಂಡು ಹೋಗಿದ್ದಾನೆ ಎನ್ನಬಹುದು. [illegible] ಸಿದ್ಧರಾಮ ಚಾರಿತ್ರದಲ್ಲಿ ಭಕ್ತಿಯ ಹಿರಿಮೆ, ದಯೆಯ ಗರಿಮೆ, ಕಾಯಕದ ಮಹತ್ತ್ವ-ಇವುಗಳನ್ನು, ಸೋಮನಾಥ ಚಾರಿತ್ರದಲ್ಲಿ ಮಾಹೇಶ್ವರ ಸ್ಥಲದ ನಿಷ್ಠೆಯನ್ನು ಮುಖ್ಯ ಹಿಡಿದು ಮೂಡಿಸಿದ್ದಾನೆ. ಅಂತೆಯೇ ಹರಿಹರಮಹತ್ವದಲ್ಲಿ ಶರಣಸ್ಥಲ ಐಕ್ಯಸ್ಥಲಗಳ ವೈಶಿಷ್ಟ್ಯವನ್ನು ನಿರೂಪಿಸಿರಬಹುದು. ಇದು ಊಹೆ ಮಾತ್ರ.

ಸಿದ್ಧರಾಮ ಚಾರಿತ್ರ, ಸೋಮನಾಥ ಚಾರಿತ್ರ, ಹರಿಹರ ಮಹತ್ವ ಈ ಮೂರರ ಕೃತಿಗಳ ವಸ್ತು ಸಮಕಾಲೀನವಾದುದು. ಕಲ್ಯಾಣದ ಕ್ರಾಂತಿಯ ತಾರುಣ್ಯದ ದಿನಗಳಲ್ಲಿ ರಾಘವಾಂಕ ಹುಟ್ಟಿರಲು ಸಾಧ್ಯ. ರಾಘವನಿಗೆ ಅಂದಿನ ವಚನಕಾರರಾದ ಶಿವಯೋಗಿ ಸಿದ್ಧರಾಮ ಹಾಗೂ ಆದಯ್ಯ, ಇವರ ಬದುಕು ತನ್ನ ಗುರು ಹರಿಹರನ ಬದುಕಿನಷ್ಟು ಹತ್ತಿರವಲ್ಲವಾದರೂ ತೀರ ದೂರವಾದುದಲ್ಲ. ಹೀಗೆ ಸಮೀಪದ ಬದುಕು ಅಥವಾ ಸಮಕಾಲೀನರ ಬದುಕನ್ನು ಕಾವ್ಯಕ್ಕೆ, ಅದರಲ್ಲೂ ಮಹಾಕಾವ್ಯಕ್ಕೆ ವಸ್ತುವಾಗಿಸಿಕೊಳ್ಳುವಲ್ಲಿ ಕವಿಗೆ ಹೆಚ್ಚು ಅಪಾಯವಿದೆ. ಏಕೆಂದರೆ ಕವಿ ತನ್ನ ಹೃದಯಸ್ಥವಾದ ಭಾವಗಳಿಗೆ ಸ್ಪಷ್ಟರೂಪ ನೀಡಲು ಹಲವು ಪ್ರತಿಮೆಗಳನ್ನು ಆಶ್ರಯಿಸಲೇಬೇಕಾಗುತ್ತದೆ. ಅಂತಹ ಪ್ರತಿಮೆಗಳು ಸಮಕಾಲೀನ ಬದುಕಿನಲ್ಲಿ ಹಲವು ವೇಳೆ ಹಾಸ್ಯಾಸ್ಪದವೆನಿಸಿ ಕಾವ್ಯದ ಉದ್ದೇಶ ಸಾಧಿತವಾಗದೇ ಹೋಗಬಹುದು. ಆದ್ದರಿಂದಲೇ ಕವಿ ತನ್ನ ದರ್ಶನಕ್ಕೆ ಪೂರ್ಣ ರೂಪ ಕೊಡಲು ಪ್ರಾಚೀನ ಕಾಲದ ಇತಿಹಾಸ ಇಲ್ಲವೇ ಪುರಾಣದ ವ್ಯಕ್ತಿ ಜೀವನವನ್ನೇ ತನ್ನ ಕಾವ್ಯಕ್ಕೆ ವಸ್ತುವನ್ನಾಗಿ ಆರಿಸಿಕೊಳ್ಳುತ್ತಾನೆ—ಎನ್ನುತ್ತಾನೆ ಸಿ. ಜಿ. ಯುಂಗ್.[1] ಹೀಗಿದ್ದರೂ ರಾಘವಾಂಕನ ಸಮಕಾಲೀನ ವಸ್ತುವಿನ ಆಯ್ಕೆಯಲ್ಲಿ ಆತನದೇ ಒಂದು ಸವಾಲು ಅಡಗಿರುವಂತಿದೆ. ಸಂಪ್ರದಾಯದ ಸಂಕೋಲೆಯನ್ನು ಕಡಿದೊಗೆಯುವುದರ ಜೊತೆಗೆ, ನೂತನ ಮಾರ್ಗದರ್ಶನ ನೀಡುವುದು ಕವಿಯ ಉದ್ದೇಶವಾಗಿದೆ. ಸಮಕಾಲೀನ ಐತಿಹಾಸಿಕ ವ್ಯಕ್ತಿಗಳಾದ ಸಿದ್ಧರಾಮ, ಆದಯ್ಯ, ಹರಿಹರ ಈ ಮೂವರನ್ನು ಪುರಾಣ ಪುರುಷರನ್ನಾಗಿಸಿದ್ದಾನೆ. ಸಿದ್ಧರಾಮ ಆವನ ಅಪೂರ್ವ ಆದರ್ಶ ಸೃಷ್ಟಿ. ಪಂಪನು ಹೇಳುವ ದಯೆ, ಧರ್ಮಂ, ದಾನಂ, ತಪಂ, ಶೀಲಂ—ಇವೆಲ್ಲ ಗುಣಗಳೂ ರಾಘವಾಂಕನ ಸಿದ್ಧರಾಮನಲ್ಲಿ ಮೂರ್ತೀಭವಿಸಿವೆ. ಸಿದ್ಧರಾಮನ ಒಡನಾಡಿಗಳು ಹಲವರು ಬದುಕಿದ್ದ ದಿನಗಳಲ್ಲೇ ಆವನನ್ನು ಕುರಿತ ಮಹಾಕಾವ್ಯ ಅಥವಾ ಪುರಾಣ ಕೃತಿಯನ್ನು ಸೃಷ್ಟಿಸಿದ್ದು ಕವಿಯ ಎದೆಗಾರಿಕೆಗೆ ಸಾಕ್ಷಿ.

---

1. C. G. Jung--Modern Man in search of a Soul. ಗ್ರಂಥದ psychology and Literature ಎಂಬ ಲೇಖನ.

ಆದಯ್ಯನಲ್ಲಿ ರಾಘವಾಂಕನ ಕ್ರಾಂತಿಕಾರಕ ಅಭಿಪ್ರಾಯಗಳು ತುಂಬಿ ತುಳುಕಿವೆ. ಹರದನಾಗಿ ಬಂದ ಆದಯ್ಯ ಅನ್ಯಧರ್ಮೀಯಳಾದ ಪದ್ಮಾವತಿಯನ್ನು ಮೋಹಿಸುವುದು— ಅದರಲ್ಲೂ ವಿವಾಹಿತನಾದ ಸಂಸಾರಿ ಮೋಹಿಸುವುದು—ಶಿಷ್ಟ ಸಂಪ್ರದಾಯಕ್ಕೆ ವಿರೋಧ. ಇಲ್ಲಿ ಸ್ವಧರ್ಮ–ಅನ್ಯಧರ್ಮ, ಕಾಮ ಪ್ರೇಮ ಇವುಗಳಿಗೆ ಸಂಬಂಧಿಸಿದ ಪ್ರಾಥಮಿಕ ಪ್ರಶ್ನೆಗಳೂ ಕವಿಯನ್ನು ಕಾಡಿವಂತಿಲ್ಲ. ಕೃತಿ ಉಪಲಬ್ಧವಿಲ್ಲದಿದ್ದರೂ ಹರಿಹರ ಮಹತ್ವದ ವಸ್ತುವೇನೆಂಬುದನ್ನು ಊಹಿಸಬಹುದು. ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ಕವಿಯನ್ನೇ ಕುರಿತು ಕಾವ್ಯ ರಚಿಸಿದವರಲ್ಲಿ ರಾಘವಾಂಕನೇ ಮೊದಲಿಗ. ಅಂತಯೇ ಆತ ಮುಂದಿನ ಕವಿಗಳ ಮಾರ್ಗದರ್ಶಕನೂ ಹೌದು. ಹೀಗೆ ಸಮಕಾಲೀನ ಬದುಕಿನಲ್ಲಿ ಜಾತಿ-ಸಾಂಕರ್ಯ, ಅನ್ಯಧರ್ಮ ಸ್ವೀಕರಣ (ಪದ್ಮಾವತಿಗೆ ಶಿವದೀಕ್ಷೆ ಕೊಡಿಸಿದ್ದು, ಪುಲಿಗೆರೆಯಲ್ಲಿ ಜೈನರ ಪ್ರಾಬಲ್ಯ ಕಡಿಮೆ ಮಾಡಿದ್ದು,) ಮತೀಯ ಸಂಘರ್ಷಣೆ—ಇವೆಲ್ಲಾ ಆಸ್ಯತನ ಜೀವನವನ್ನು ವಸ್ತುವನ್ನಾಗಿಸಿಕೊಳ್ಳುವ ಆಶಯಗಳೇ. ಆದರೂ ರಾಘವಾಂಕ ಅವನ್ನೇ ಆರಿಸಿಕೊಂಡಿದ್ದಾನೆ. ಇದರಿಂದ ವೇದ್ಯವಾಗುತ್ತದೆ, ಕವಿ ವಹಿಸಿದ ಸ್ವಾತಂತ್ರ್ಯ. ಇದು ವಚನಕಾರರ ಸ್ವತಂತ್ರ ಮನೋವೃತ್ತಿಯ ಪ್ರಭಾವವಲ್ಲದೆ ಬೇರಲ್ಲ.

ವಸ್ತುವಿನ ಆಯ್ಕೆಯಲ್ಲಿ ಕನ್ನಡ ಸಾಹಿತ್ಯಕ್ಕಿದ್ದ ಕೊರತೆಯನ್ನು ನೀಗಿದವರು ವಚನಕಾರರು. ಅದನ್ನು ಅನುಷ್ಠಾನಕ್ಕೆ ತಂದವರು ಹರಿಹರ ರಾಘವಾಂಕರು. ತದನಂತರದಲ್ಲಿ ಬಂದ ಕವಿಗಳ ಮನಸ್ಸು ಮುಕ್ತಿಗೊಂಡಿತು. ಸ್ವಾತಂತ್ರ್ಯ ಲಭಿಸಿತು. ಆವರೆತ್ತಿಕೊಂಡ ವಸ್ತು ಹೊಸದಾಯಿತು. ರಚನೆಯೂ ನೂತನವಾಯಿತು. ಇಂತಹ ಪ್ರಭಾವದ ಮುದ್ರೆ ಬಿದ್ದಿರುವ ತಾಣಗಳನ್ನು ರಾಘವಾಂಕನ ಕೆಲವು ಕೃತಿಗಳಲ್ಲಿ ಗುರುತಿಸುವುದೇ ಈ ಅಧ್ಯಯನದ ಮುಖ್ಯ ಉದ್ದೇಶ.

೨

ಸಮಾಜ ಸುಧಾರಣೆಯೇ ತಮ್ಮ ಬದುಕಿನ ಮುಖ್ಯ ಗುರಿ ಎಂದು ಭಾವಿಸಿದ್ದ ವಚನಕಾರರು, ಅದರ ಸ್ಥಿತಿಗಾಗಿ, ಏಳಿಗಾಗಿ, ಅದರ ಪ್ರವರ್ಧನೆಗಾಗಿ ಧರ್ಮ, ದೈವ, ಭಕ್ತಿ, ಶೌಚ, ಸತ್ಯ, ಶೀಲ ಇತ್ಯಾದಿ ಹಲವು ಮೌಲ್ಯಗಳನ್ನು ಎತ್ತಿ ಹಿಡಿದರು. ಅವುಗಳಲ್ಲಿ 'ಸತ್ಯ'ಕ್ಕೆ ಹೆಚ್ಚು ಒತ್ತು ಕೊಟ್ಟರೆಂದು ತೋರುತ್ತದೆ. ಅವರ ದೃಷ್ಟಿಯಲ್ಲಿ ಸತ್ಯದ ಅರ್ಥ ಎರಡು ತೆರನಾದದ್ದು : ಒಂದು ಸುಳ್ಳಾಡದಿರುವುದು, ಎರಡು 'ನುಡಿದಂತೆ ನಡೆಯುವುದು' ವಚನಕಾರರು ಇಲ್ಲಿಗೇ ನಿಂತರು. ಆದರೆ ಅವರ ಪ್ರಭಾವ

ಕೈಸ್ತೊಳಗಾದವನೆನ್ನಲಾದ ರಾಘವಾಂಕ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿದ್ದಾನೆ. "ಹರನೆಂಬುದೇ ಸತ್ಯ, ಸತ್ಯವೆಂಬುದೇ ಹರನು" ಎಂಬ ದರ್ಶನಕ್ಕೇರಿದ. ಸದಾ ಸತ್ಯವನ್ನೇ ಉಸುರಬೇಕು. ಸುಳ್ಳನ್ನಾಡಬಾರದು ಎಂಬುದು ಸಾಮಾನ್ಯ ತತ್ತ್ವ. ನಡೆ-ನುಡಿಗಳು ಒಂದಾಗಿರಬೇಕು ಎನ್ನುವುದು ಸಹಜ ನೀತಿ. "ಹರನೆಂಬುದೇ ಸತ್ಯ, ಸತ್ಯವೆಂಬುದೇ ಹರನು" ಎಂಬುದು ವಿಶಿಷ್ಟ ದರ್ಶನ.

ಈ ದರ್ಶನಕ್ಕೊಡ್ಡಿದ ನಿದರ್ಶನ ಹರಿಶ್ಚಂದ್ರ ಕಾವ್ಯ. ರಾಘವಾಂಕ ಇಲ್ಲಿ ಸತ್ಯವೇ ಶಿವ, ಶಿವನೇ ಸತ್ಯ ಎಂದು ಸಾರಿ, ಶಿವನಿಗೂ ಸತ್ಯಕ್ಕೂ ಅಭೇದವನ್ನು ಕಲ್ಪಿಸಿದ್ದಾನೆ. ಸತ್ಯವನ್ನು ಶಿವನಲ್ಲಿ ಸಮಾವೇಶಗೊಳಿಸಿದ್ದಾನೆ. ಇಲ್ಲಿಯೇ ಸತ್ಯ ಶಿವನ ಸ್ಥಾನದಲ್ಲಿ ಅಂದರೆ ದೈವದ ಮಟ್ಟದಲ್ಲಿ ನಿಂತಿದೆ. ವಚನಕಾರರು ಸತ್ಯಕ್ಕೆ ಈ ಅರ್ಥ ತುಂಬಲಿಲ್ಲ. ಅಂದರೆ ಶಿವನ ನೆಲೆಯಲ್ಲಿ ಸತ್ಯವನ್ನು ಸ್ಥಾಪಿಸಲಿಲ್ಲ, ಶಿವನವರೆಗೂ ಸತ್ಯವನ್ನು ಕೊಂಡೊಯ್ದುದು ಅಷ್ಟೆ. ನುಡಿದರೆ ಲಿಂಗ ಮೆಚ್ಚಿ ಅಹುದಹುದೆನ್ನಬೇಕು. ಇಲ್ಲವೇ 'ನುಡಿಗೆ ತಕ್ಕ ನಡೆಯ ಕಂಡೊಡೆ ಕೂಡಲಸಂಗಮದೇವನೊಳಗಿರ್ಪನು' ಎಂದರು. ಅಷ್ಟೇ ಹೊರತು, ಅವರಲ್ಲಿ ನುಡಿಯು ನುಡಿಯೇ ಕೂಡಲಸಂಗಮನೆನಿಸಿಲ್ಲ. ಇದರಿಂದಾಗಿ 'ಸತ್ಯದ ಬೆಲೆ ವಚನಕಾರರಿಗಿಂತ ರಾಘವಾಂಕನಲ್ಲಿ ತುಂಬಾ ಹೆಚ್ಚಿದೆ' ಎನ್ನಬಹುದು. ವಚನಕಾರರಂತೆ 'ಹುಸಿಯ ನುಡಿಯಲು ಬೇಡ,' 'ನಡೆವ ತಪ್ಪದ ನುಡಿದು ಹುಸಿಯದ ನೇಮ' - ಇಷ್ಟರಲ್ಲೇ ಸೀಮಿತವಾಗಲಿಲ್ಲ ಕವಿ ರಾಘವಾಂಕನ ಸತ್ಯದ ಅರ್ಥ. ಸುಳ್ಳು ಹೇಳಬಾರದು, ನುಡಿದಂತೆಯೇ ಯಾವಾಗಲೂ ನಡೆಯಬೇಕು ಎಂಬ ಸಾಧಾರಣಾರ್ಥಗಳನ್ನಷ್ಟೇ ಅವನು ಗ್ರಹಿಸಿದಂತಿಲ್ಲ. ಏಕೆಂದರೆ ಹರಿಶ್ಚಂದ್ರ ಕಾವ್ಯದಲ್ಲಿ ಹರಿಶ್ಚಂದ್ರನಾದಿಯಾಗಿ ಅವನ ಬದುಕಿನ ಸುತ್ತ ಸುಳಿಯುವ ಪ್ರಮುಖ ಪಾತ್ರಗಳೆಲ್ಲವೂ ಸನ್ನಿವೇಶದ ಪ್ರಭಾವಕ್ಕೋ ತತ್ಕ್ಷಣದ ಪ್ರಲೋಭನಕ್ಕೋ ಸಿಕ್ಕು ಸುಳ್ಳಾಡಿರುವುದುಂಟು. ವಿಶ್ವಾಮಿತ್ರ, ನಕ್ಷತ್ರಕ, ಗಾಣರಾಣಿಯರು ಇವರೆಲ್ಲರೂ ಸುಳ್ಳು ನುಡಿದಿದ್ದರೆ ಕ್ಷಮೆಗೆ ಸ್ಥಾನವಿದೆ. ಏಕೆಂದರೆ ಅವರು ಒಂದರ್ಥದಲ್ಲಿ ಖಳನಾಯಕ ಅಥವಾ ನಾಯಕಿಯರು. ಬಿಸಿಲಾಗಿ, ಬಿರುಗಾಳಿಯಾಗಿ, ಕಲ್ಲುನೆಲನಾಗಿ, ವಿಷಮಾಗ್ನಿಯಾಗಿ, ನಾನಾ ಕ್ರೂರ ಮೃಗವಾಗಿ, ಮಸಗಿ ಘೋರಾರಣ್ಯವಾಗಿ, ಗರ್ಜಿಸಿ ಕವಿದ ಭೂತ-ಭೇತಾಳರಾಗಿ, ಹಸಿವು ನೀರಡಿಕೆ ನಿದ್ರಾಲಸ್ಯವಾಗಿ ಸಂದಿಸಿಹೋಗಿ, ಹೊಕ್ಕಲ್ಲಿ ಹೊಕ್ಕು ಘಾತಿಗೊಳಿಸಿ ಹುಸಿಗೆ ಹೊಂಕೊಳಿಸುವ ಯತ್ನದಲ್ಲಿ ಸಾಗಿದವರು. ಅವರು ಸುಳ್ಳು ಹೇಳಿದರೆ ಅದಕ್ಕೆ ರಿಯಾಯಿತಿ ಇದೆ. ಆದರೆ ಸತ್ಯ ಹರಿಶ್ಚಂದ್ರನೇ ಸುಳ್ಳಾಡಿದರೆ? ಆಡಿದರೆ ಏನು? ಆಡಿದ್ದಾನೆ. ಹೇಳಿ ಕೇಳಿ ಈತ ಸತ್ಯವ್ರತನ-ಇಲ್ಲ ತ್ರಿಶಂಕುವಿನ ಸುಪುತ್ರ. ತನಗೆ ಪುತ್ರ ಸಂತಾನವಾದರೆ ವರುಣನಿಗೆ ಆ ಶಿಶುವನ್ನು ಅರ್ಪಿಸುವುದಾಗಿ ಆಣೆ ಮಾಡಿಕೊಂಡ ಹರಿಶ್ಚಂದ್ರ ಮುಂದೆ ತಾನಾಡಿದ ಮಾತಿನಂತೆ ನಡೆದುಕೊಳ್ಳಲಿಲ್ಲ.

ವರುಣದೇವನಿಗೇ ವಂಚಿಸುವ ಮಟ್ಟಕ್ಕೆ ಹೋದ. ಅದು ಅವನ ಪೂರ್ವಾಶ್ರಮದ ಪ್ರವರವೇ ಆಗಿದ್ದರೂ ಕಾವ್ಯದಲ್ಲಿ ಪ್ರಾಸಂಗಿಕವಾಗಿ ಬಂದಿದೆ.

ಮತ್ತೊಂದು ಸಂದರ್ಭ ಹೀಗಿದೆ :

ವೀರಬಾಹುಕನು ಹೊನ್ನುಕೊಟ್ಟು ಹರಿಶ್ಚಂದ್ರನನ್ನು ಕೊಂಡುಕೊಳ್ಳುವುದಾಗಿ ತನ್ನ ಹಡಪಿಗನ ಮೂಲಕ ಕೇಳಿಸಿದಾಗ ಹರಿಶ್ಚಂದ್ರ ಕಿಡಿಕಿಡಿಯಾಗುತ್ತಾನೆ. 'ನಡುಗದೇ ಅಂಜದೆ, ಹೆದಱದೆ, ಓಸರಿಸದೆ, ಅಕಟಕಟ ಕಡೆಯ ಹೊಲೆಯಂ ಸೋರಿದಪ್ಪಿ ಬಂದು ಎನ್ನ ತನ್ನೊಡೆಯಂಗೆ ದಾಸನಾಗೀಗಳ್ ಎಂಬುದಿದು ಕಾಲಗುಣವೋ ಎನ್ನನ್ನೆಡೆಗೊಂಡ ಕರ್ಮ ಫಲವೋ ಕಡೆಗೆ ಮೊಣಸು ಹುಳಿತಡೆ ಜೋಳದಿಂ ಕುಂದೆ ನೋಡು ನೋಡಾ' ಎಂದು ಘುಡು ಘುಡಿಸುತ್ತಾನೆ.

ಅದೇ ತರುಣದಲ್ಲಿ ಪ್ರಶ್ನೆ ಕೇಳಿಬರುತ್ತದೆ—

'ಅರ ಜಱಿದಪ್ಪೈ ?'
'ನಿನ್ನ ಹಡಪಾಳಿಯಂ'
'ಅದೇಕೆ ?'

'ಎನ್ನ ನಱಿದಱಿದು ಅನಾಮಿಕಂಗಾಳಾದಪಾ ಎಂದು ನುಡಿದನ್; ಇಂತಹುದೆ ಕೀಳು ಮೇಲಂ ನೋಡದೆ ?'

"ಕೀಳಾರು ? ಮೇಲಾರು ? ಹಮ್ಮಿಪ್ಪ ನಾನು ಚಂಡಾಳನೋ ? ಹುಸಿಯ ಹೊಲೆಯಂ ಹೊಱುವ ನೀನು ಚಂಡಾಲನೋ ಹೇಳು ?"

"ಆನೀಗ ಹುಸಿದುದೇನು ?"

'ಹೊನ್ನುಳ್ಳ ಧನಿಕರಾರಾದೊಡಂ ಕೊಂಬವರೆ ಬನ್ನಿ. ಎನ್ನ ಮಾರುಗೊಡುವೆನೆಂಬುವೆನೆ ದಿಟಂ ನನ್ನಿಯುಳ್ಳವನ್ ಎಂದು ಬಗೆದು ಬೇಡಿದೆನ್. ಉತ್ತಮ ದ್ವಿಜರ್ ಕೊಂಬುದು ಎಂದು ಮುನ್ನ ನೀನಾಡಿತ್ತು ಉಂಟೇ ಹೇಳು ಭೂಪಾಲ ? ನಿನ್ನ ನುಡಿ ನಿನಗೆ ಹಗೆಯಾಯ್ತು : ಕಂಡುದನಲ್ಲದೆ ಎನ್ನನೀ ಹೊಲೆ ಹುಸಿಯ ಹೊಱುವನಂ ಹೊಲೆಯನಲ್ಲದೆ ಬಳಿಕ್ಕಾರು ?'

ಈ ಪ್ರಶ್ನೆ ಅಪ್ಪಳಿಸಿದಾಗ ಅರ್ಥವಾಗುತ್ತದೆ ಹರಿಶ್ಚಂದ್ರನಿಗೆ ತನ್ನ ತಪ್ಪು ಏನೆಂದು. ಅಂತೂ ಸತ್ಯಹರಿಶ್ಚಂದ್ರನಲ್ಲೂ ಸಟೆ ಸುಳಿಯದೆ ಇಲ್ಲ. ಅವನ ಸತಿ ಶಿರೋಮಣಿಯೂ ಸುಳ್ಳು ನುಡಿದಿರುವುದುಂಟು. ಸಂದರ್ಭ ಹೀಗಿದೆ—ಕಾಶೀರಾಜನ ಕಂದನನ್ನು ಕೊಂದವಳು ಇವಳೇ ಎಂದು ಆಪಾದಿಸಿದಾಗ, ಅರಸನು ಅವಳನ್ನು ಕಂಡು ಶಂಕಿಸುತ, 'ನೀನಾರ್ ? ಎತ್ತವಳ್ ? ' ಏಕೆ ಕೊಂದೆ ಸುಕುಮಾರನನ್ ? ಎಂದು ಬೆಸ

ಗೋಳಲು ಅವಳು ಕೊಟ್ಟ ಉತ್ತರ—'ಪನುಜೆಯೊಳ್ಳಾಂ ಮಾಡಿದನ್. ಅರ್ಥ ವಿಷಯಮಸ್ಪೃಶ್ಯಮಂ ಕೊಂಡೊಯ್ದು ಕೊಂದನೀ ಶಿವನ್. ನೀನೊಲಿದಂತೆ ಮಾಡು' ಎಂದು. ಕಾಶಿರಾಜನಿಗೆ ಅವಳ ಸುಖ ಮತ್ತು ಅಧೈರ್ಯ ಕಾಣುತ್ತದೆ. ಆತ 'ನಿಮಂದಿರು. ತಕ್ಕುದಿರು' ಎಂದೆಲ್ಲಾ ಅಭಯಪ್ರಧಾನ ಮಾಡಿದರೂ 'ಕೊಂದುದು ದಿಟಂ ಸತ್ತ ಶಿಶು ಕೈಯೊಳಿದೆ ಇದಕ್ಕೆ ತಕ್ಕುದನ್ ಈಗ ಕಾಣುದು' ಎಂದು ನುಡಿಯುತ್ತಾಳೆ.

ಇಷ್ಟು ಅಪ್ಪಟ ಸುಳ್ಳು ಸತ್ಯಹರಿಶ್ಚಂದ್ರನ ಧರ್ಮಪತ್ನಿಯ ಬಾಯಿಂದ ಬಂದರೆ ಅಂಥದೇ ಅಪರಾಧಪ್ರಸಂಗ ಅವನ ಕುಲಗುರು, ಸಾಕ್ಷಾತ್ ಬ್ರಹ್ಮಮೂರ್ತಿ ಎನಿಸಿದ ವಾಸಿಷ್ಠ ಮುನಿವರನಿಂದ ಸಂಭವಿಸುತ್ತದೆ. ದೇವೇಂದ್ರನ ಒಡ್ಡೋಲಗದಲ್ಲಿ ವಸಿಷ್ಠ ವಿಶ್ವಾಮಿತ್ರರು ವಾದಕ್ಕಿಳಿದಾಗ 'ಕೋಣನೆರಡುಂ ಹೋರೆ ಗಿಡುವಿಂಗೆ ಮಿತ್ತು' ಎಂಬಂತಾಗುತ್ತದೆಯಷ್ಟೆ. ಆಗ ವಿಶ್ವಾಮಿತ್ರ, 'ಹರಿಶ್ಚಂದ್ರ ಭೂ ಭುಜನ ಮನೆಗೆ ಹಗಲಿರುಳು ನೀ ಹೋಗಿ ಕೌಶಿಕನು ಸೃಷ್ಟಿಸಿ ನಿನ್ನನ್ ಅಂತಿಂತು ಕೆಡಿಸಿದಪನ್. ನೀನಾವ ಪರಿಯಲಿ ಎಚ್ಚತ್ತಿರು ಎಂದು ನೆನೆಸಿಕೊಡು ಹೋಗು' ಎಂದೆನೆ—'ಆನ್ ಆಡುವವನೆ ಪೇಳು? ಎನಲ್, 'ಎನ್ನ ಗಾಸಿಗಾಳಿದೆ ನೃಪಂ ಹುಸಿ ನುಡಿಯೆ ಮುನಿತನವನೆ ಈಡಾಡಿ ಹೋಪಂತಿರೆ ಅಪನ್ಪುದು; ಹೋಗಿ ನೀಂ ಪೇಳು' ಎನ್ನುತ್ತಾನೆ. ಅದಕ್ಕೆ

ತರಣಿ ತೇಜಂಗೆಡದಿರಗ್ನಿ ಬೆಸುಪಾಜದಿರು
ಸರಸಿರುಹವೈರಿ ತಂಪಂ ಬಿಡದಿರೆಲೆಲೆ ಮಂ
ದರವೆ ಚಲಿಸದಿರೆಂದು ಬೋಧಿಸಲವೇಕೆ ನಿಜಮಹಿಮೆ ಸುಸ್ಥಿರದಲು
ವರ ಹರಿಶ್ಚಂದ್ರ ಸತ್ಯಂಗೆಡದಿರೆಂದು ಬೋ
ಧಿಸುವಂತಾಗಿ ಹುಸಿಯುಂಟೆ ಕೊಂಡೆಯವೆಮಗೆ
ಬಿಡಿಸಲುತನ ಕೆಟ್ಟಿಂತು ನುಡಿಯಲಹುದೇಯೆಂದು
ವಾಶಿಷ್ಟ ಮುನಿ ನುಡಿದನು

(ಹ. ಕಾ. II–30)

ಹೀಗೆ ಪಟ್ಟಿ ಹಿಡಿದ ಮುನಿಗೆ ಆತ್ಮವಿಶ್ವಾಸವೂ ಇಲ್ಲ. ತನ್ನ ಶಿಷ್ಯೋತ್ತಮನ ಸತ್ಯಸಂಧತೆಯ ಬಗ್ಗೆ ಭರವಸೆಯೂ ಇದ್ದಂತಿಲ್ಲ. ಹೇಳಿಗೆಂದು ಬಂದ ಅರಸನನ್ನು ಕುರಿತು—

ಎನ್ನ ನೊಲುವ್ರೊಡೆ ಕುಲಾಚಾರವಂ ಬಿಡದಿರ್ಪ
ಮನ್ನಿಕೆ ದೇವಮಾತ್ರದ ಕೀರ್ತಿ ಕೆಡದಿಹುದೆ

ಸನ್ನಿಳಿಯುಳಿವೊಡೆ ಮಗನೆ ಪೋಗದಿರು ಮಱೆದು ವಿಶ್ವಾಮಿತ್ರ
ನಾಶ್ರಮಕ್ಕೆ
ಗನ್ನದಿಂದ ಮಱಹಿಕ್ಕಿ ಕೊಂಡೊಯ್ದು ಬಳಿಕ ಮುನಿ
ಬನ್ನ ಬಡಿಸಿಯೆ ಕಾಡಿದಪನಱಿದಿರೆಂದು ಪೇಳ್ದನ್
(ಹ. ಕಾ. V–73)

ಈ ರೀತಿ ಮಾತಿನಲ್ಲಿ ಮಾತಿಲ್ಲದ ನಡೆ ವಸಿಷ್ಠನದು. ಒಟ್ಟಾರೆ, ಕಾನೂನು ಮಾಡಿದವರೇ ಅದನ್ನು ಮುರಿದಂತಾಗುತ್ತದೆ ಅಲ್ಲವೇ.

ಈ ಸಂದರ್ಭಗಳಲ್ಲೆಲ್ಲ ರಾಘವಾಂಕ ಸತ್ಯದ ಶಿರೋನಾಮೆಯಿಟ್ಟು ಸುಳ್ಳಿನ ಸೃಷ್ಟಿ ಮಾಡುತ್ತಿದ್ದಾನೆ ಎನ್ನಿಸದಿರದು. ಆದರೆ ಆತ ಚಿತ್ರಿಸಿದ ಈ ಸುಳ್ಳಿನ ಸನ್ನಿವೇಶಗಳು ಅಂತ್ಯದ ಸತ್ಯ ನಿರೂಪಣೆಗೆ ಪೋಷಕಗಳಾಗಿ. ಅನಿವಾರ್ಯವೆನಿಸಿದ ಸುಳ್ಳಿನ ಸೋಪಾನವನ್ನೇರಿ ಸತ್ಯದ ಶಿಖರವನ್ನು ಮುಟ್ಟಿಸಬೇಕಾದ ಕವಿ. ಆದ್ದರಿಂದ ಹಾಡ ಹಗಲಿನಲ್ಲೇ ದರೋಡೆ ಮಾಡುವವನಂತೆ ತೋರುತ್ತಾನೆ. ಆವನು ಚಿತ್ರಿಸಿದ ಹರಿಶ್ಚಂದ್ರರು ಮೂವರು. ಮೊದಲನೆಯವನು ಕಾವ್ಯದ ಹಿನ್ನೆಲೆಯಲ್ಲಿ ಕಾಣಸಿಗುವ ತ್ರಿಶಂಕು ಪುತ್ರ ಹರಿಶ್ಚಂದ್ರ : ಪುತ್ರರತ್ನ ಹುಟ್ಟಿದರೆ ಅದನ್ನು ಅರ್ಪಿಸುವುದಾಗಿ ಹೇಳಿ ವರುಣನಿಗೆ ಮೋಸಮಾಡಿದ ವಂಚಕ. ಎರಡನೆಯ ಹರಿಶ್ಚಂದ್ರ ಬದುಕಿನ ಸಂಕಟದ ಸೆಳವಿನಲ್ಲಿ ಸಿಕ್ಕಾಗ ತಿಳಿದೂ ತಿಳಿದೂ ಸುಳ್ಳು ಹೇಳುವವ, ಮರುಕ್ಷಣದಲ್ಲೇ ತನ್ನ ತಪ್ಪನ್ನು ತಿಳಿದು ತಿದ್ದಿಕೊಳ್ಳುವವ. ಮೂರನೆಯವನು ಪರಮೇಶ್ವರ ಸಾಕ್ಷಾತ್ಕಾರ ಪಡೆಯುವ ಸತ್ಯಸಾಧಕ ಹರಿಶ್ಚಂದ್ರ.

ಹರಿಶ್ಚಂದ್ರನ ಈ ಮೂರು ಚಿತ್ರಣಗಳನ್ನು ಅವಲೋಕಿಸಿದಾಗ ರಾಘವಾಂಕ ಆ ಪಾತ್ರದ ವಿಕಾಸ ಸ್ಥಿತಿಯನ್ನು ತೋರಿದ್ದಾನೆ ಎನ್ನಿಸುತ್ತದೆ. ಕಾವ್ಯದಲ್ಲಿ ಅದು ಬೆಳೆದು ನಿಂತ ಪಾತ್ರವಾಗಿಲ್ಲ, ಬೆಳೆಯುತ್ತಾ ಹೋಗುವ ಪಾತ್ರವಾಗಿದೆ. ಅದರಿಂದಲೆ ಅದೊಂದು ರಾಘವಾಂಕ ಕಂಡರಿಸಿದ ಜೀವಂತಶಿಲ್ಪ. ಸನ್ನಿವೇಶದ ಪ್ರಲೋಭನಕ್ಕೆ ಸಿಕ್ಕು ಸುಳ್ಳು ಹೇಳುವ ಹರಿಶ್ಚಂದ್ರ, ವಸಿಷ್ಠ ಚಂದ್ರಮತಿಯರನ್ನು ಕವಿ ಮೊದಮೊದಲು ನಿರ್ಮಿಸಿದ್ದರೂ ಅವೆಲ್ಲವನ್ನೂ ಅಂತ್ಯದಲ್ಲಿ ಸತ್ಯದ ಸೀಮೆಯಲ್ಲಿ ಸಮಾವೇಶಗೊಳಿಸಿದ್ದಾನೆ. ಇದು ಕವಿಯ ಧ್ಯೇಯ, ದೃಷ್ಟಿ. ಆದರೆ ನಾವು ಮೊದಲೇ ಹೇಳಿದಂತೆ ರಾಘವಾಂಕನ ಸತ್ಯದ ಅರ್ಥ ವಚನಕಾರರ ಸೀಮಿತಾರ್ಥದಲ್ಲಿ ನಿಂತಿಲ್ಲ. ಸುಳ್ಳುಹೇಳದಿರುವುದು, ನುಡಿದಂತೆ ನಡೆಯುವುದು ಎಂಬ ದಿನನಿತ್ಯದ ಸರಳಾಕಾರತೆಯಲ್ಲಿ ನಿಂತಿಲ್ಲ. ಸೃಷ್ಟಿ–ಸ್ಥಿತಿ ಲಯಗಳಿಗೆ ಕಾರಣೀಭೂತವಾದ ಜಗತ್ ಶಕ್ತಿಯ ಸಾಕಾರರೂಪಿಯಾಗಿದೆ. ‘ಹರನೇ ಸತ್ಯ, ಸತ್ಯವೇ ಹರನು’ ಎಂಬ ಅವಿನಾಭಾವದಲ್ಲಿ ಆವಿರ್ಭಾವ ಪಡೆದಿದೆ.

ಹರಿಶ್ಚಂದ್ರನ ಪಾತ್ರದ ಬೆಳವಣಿಗೆಗೆ ಮುಂದೆ ಮುಂದೆ ಹೋದಂತೆಲ್ಲ ಸ್ಪಷ್ಟ ಗೋಚರವಾಗುತ್ತದೆ. ಆ ಪಾತ್ರದಲ್ಲಿ ವಿಶೇಷ ಪರಿವರ್ತನೆಯನ್ನು ಕಾಣುತ್ತೇವೆ. ವೀರಬಾಹುಕನ ಮಾತುಗಳಿಂದ ಎಚ್ಚೆತ್ತ ಹರಿಶ್ಚಂದ್ರ ಸತ್ಯಸಾಕ್ಷಾತ್ಕಾರಕ್ಕಾಗಿ ತನ್ನ ಮುಂದಿನ ಬದುಕನ್ನು ಮೀಸಲಿಡುತ್ತಾನೆ. ಅನಾಮಿಕನಾಗಿ ದುಡಿವ ದಿನಗಳಲ್ಲಿ ಒಮ್ಮೆ ತನ್ನ ಒಡೆಯ ವೀರಬಾಹುಕ—

'ಎಲವೊ ನೀ ದಿಟರಾಯನಾದಡಳುಕದೆ ಬಂದು
ನೆಲದಲ್ಲಿ ಕುಳ್ಳಿರ್ದೆ—ಭವನಿಳಯದೊಳು
ತಲೆ ಮುಟ್ಟ ದುಡಿದ ಗಾವದಿಯ್ಯೆಸೆ
ಭೂಪಾಲನಲ್ಲ'

ಎಂದು ಛೇಡಿಸಿದಾಗ–

ಹಸುವನಳಿ ಹಾರುವನ ನಿಜಮಾತೆಪಿತರ ನಾ
ಡಿಸು ಸುತನ ತಿವಿ ಸತಿಯ ಕೊಲು ಮಾರಿಗೊಜಿ ಗಟ್ಟು
ವಿಷವ ಕುಡಿ. ಹಾವ ಹಿಡಿ, ಹುಲಿಗೆ ಪಾಲಿ, ದಳ್ಳುರಿಯೊಳಡಗು
ಹೋಗೆಂದೊಡೆಯನು :
ಬೆಸಸಿದಡೆ ನಾನಾಜಿ ನೆನಬಾರದೆಂಬಾಗ
ಕ ಸವನ ಪೊಳಿಸ ಕಲಸಿ ನುಡಿದೆನಾದಡೆ ಕೆಟ್ಟ
ಬೆಸನ ನಡೆಸುವೆನೆಂಬ ನುಡಿಸಹಿತವಾಗದೇ ಪೇಳಿಂದನವನೀಶನು

(ಹ. ಕಾ. XI-34)

ತನ್ನ ಧರ್ಮಪತ್ನಿಯ ಶಿರಸ್ಸನ್ನು ತಾನೇ ಛೇದಿಸಬೇಕಾಗಿ ಬಂದಾಗಲೂ ತಾನು ಸತ್ಯಪಥದಿಂದ ವಿಚಲಿತನಾಗುವುದಿಲ್ಲ. ಅದೇ ಸಂದರ್ಭದಲ್ಲಿ 'ಹೊಡೆಯಬೇಡ ಎನ್ನ ನಂದನೆಯುರಂ ಮದುವೆಯಾದಡೆ ಸತ್ತ ಮಗನನೆತ್ತುವೆನ್ ಇವಳ ತಲೆಗಾವೆನು. ವಿನಯದಿಂ ಕೊಂಡಧನಮಂ ಕೊಟ್ಟು ನಿನ್ನ ಬಂಧನಮೋಕ್ಷಮಂ ಮಾಡಿ. ರಾಜ್ಯಮಂ ಪೊಗಿಸಿ, ಮುನ್ನಿನ ಪರಿಯುಳಿಸುವೆನ್ ಕೇಳ್ ಎಂದನ್ ಅಂಬರದೊಳಿರ್ದ ವಿಶ್ವಾಮಿತ್ರನು' ಆಗ ಹರಿಶ್ಚಂದ್ರ–

ತಿರುಗಿ ಮೇಲಂ ನೋಡಿ ಕಂಡಿರ್ದೆಂ ಮುನಿ ನಿಮ್ಮ
ಹಿರಿಯತನಕೀ ಮಾತು ಯೋಗ್ಯವೆ ಕೇಳಿನ್ನ
ಸಿರಿಬೇಡದೇನು, ರಾಜ್ಯಂ ಬೇಡದೇನು, ನಾನಾರ ಸಾರ್ವಡೇನು
ಪರಪುತ್ರನನುವಳಿಸು ಬೇಡದೇನು, ನಾನಿನ್ನ

ತರುಣಿಯುಂ ಕೊಂದಡೇಂ ಕುಂದೆ ? ಸತ್ಯವನು ಬಿ
ಟ್ಟರನೆನಿಸಿದಡೆ ಸಾಕು... (ಹ. ಕಾ. X||| —17)

ಎಂದು ನುಡಿಯುತ್ತಾನೆ. ಯಾವುದೇ ಆಮಿಷಕ್ಕೂ ಬಲಿಯಾಗದ, ಸತ್ಯದ ಬಗೆಗಿದ್ದ ಅವನ ಅಚಲ ವಿಶ್ವಾಸ ಅಸಾದೃಶವಾದುದು. ಎಷ್ಟೆ ಉಗ್ರ ಪರೀಕ್ಷೆಗಳು ಬಂದೊದಗಿದರೂ ಹರಿಶ್ಚಂದ್ರ ತನ್ನ ಸತ್ಯಸಂಧತೆಯನ್ನು ತೂರಿಬಿಡುವುದಿಲ್ಲ. ಪರೀಕ್ಷಕನಾದ ವಿಶ್ವಾಮಿತ್ರನನ್ನು ಕನಸಿನಲ್ಲೂ ಶಪಿಸುವುದಿಲ್ಲ, ಏಕೆಂದರೆ ಅವನ ದೃಷ್ಟಿಯಲ್ಲಿ ಸತ್ಯ'ವೇ 'ಶಿವ', 'ಶಿವ'ನೇ 'ಸತ್ಯ'.

'ಬಾಳ್ ಬರಿಯುಪಾದಂದು ಸಾವು ತಾನ್ ಪೂರ್ಣಂ' ಎಂಬ ಸಿದ್ಧಾಂತಕ್ಕೆ ಬಂದಿದ್ದ ಚಂದ್ರಮತಿ ಒಮ್ಮೆ ಸುಳ್ಳು ನುಡಿದಿದ್ದರೂ ತನ್ನ ಪತಿಯ ಸತ್ಯಸಾಧನೆಯಲ್ಲಿ ಸಂಪೂರ್ಣ ಸಹಾಯಕಳಾಗಿದ್ದಾಳೆ. ಅವನ ಸತ್ಯನಿಷ್ಠೆ ಬಲಗೊಳ್ಳಲು ಪ್ರೋತ್ಸಾಹ ನೀಡಿದ್ದಾಳೆ. ಅವನೇ ತನ್ನ ಶಿರಚ್ಛೇದನ ಕಾರ್ಯದಲ್ಲಿ ನಿರತನಾದಾಗ,

ಬಲಿದ ಪದ್ಮಾಸನಂ ಮುಗಿದಕ್ಕಿ ಮುಚ್ಚಿದಂ
ಜಲಿವೆರಸಿ ಗುರುವಸಿಷ್ಠಂಗೆಱಗಿ ಶಿವನ ನಿ
ರ್ಮಲ ರೂಪ ನೆನೆದು ಮೌಳಿಂ ತಿರುಗಿ ನೋಡಿ [illegible]
ಚಂದ್ರಾರ್ಕ ತಾರಂಬರಂ
ಕೆಲಿ ಹರಿಶ್ಚಂದ್ರರಾಯಂ ಸತ್ಯವೆರಸಿ ಬಾ
ಳಲಿ ಮಗಂ ಮುಕ್ತನಾಗಲಿ ಮಂತ್ರಿ ನೆನೆದುದಾ
ಗಲಿ ರಾಜ್ಯದೊಡೆಯ ವಿಶ್ವಾಮಿತ್ರ ನಿತ್ಯನಾಗಲಿ ಹರಕೆ
ಹೊಡೆಯೆಂದಳು.–X|||–14

ಇಲ್ಲಿನ ಪ್ರತಿನುಡಿಯೂ ಸುವರ್ಣಾಕ್ಷರಗಳಲ್ಲಿ ಬರೆದಿಡುವಂಥದು.

ವಿಶ್ವಾಮಿತ್ರರೂಪಿಯಾದ ಶಿವ ಹರಿಶ್ಚಂದ್ರನನ್ನು ಎನಿತೆನಿತೊ ಪರೀಕ್ಷೆಗೆ ಒಳಗುಮಾಡಿ ಕಡೆಗೆ ತಾನೇ ವಿಶ್ವೇಶ್ವರನ ರೂಪದಲ್ಲಿ ಪ್ರತ್ಯಕ್ಷನಾಗಿ, 'ಅತಿ ಹುಸಿವ ಯತಿ ಪೊಲೆಯ. ಹುಸಿಯದಿಹ ಪೊಲೆಯನನ್ನುತ್ತ ಯತಿವರನು' ಎಂದು ಸಾರಿ, ಅವನನ್ನು ಕರವಿಡಿದೆತ್ತಿಕೊಳ್ಳುತ್ತಾನೆ. ಏಕೆಂದರೆ

ಶಿವಭಕ್ತನಾಗಿ ತನ್ನ ಹಿಡಿದಿಹನೆಂದು ಹೋದರೆ
ನುಗ್ಗು ಮಾಡುವ, ನುಸಿಯ ಮಾಡುವ
ಮಣ್ಣು ಮಾಡುವ, ಮಸಿಯ ಮಾಡುವ
ಕೂಡಲಸಂಗಮದೇವರ ನೆರೆ ನಂಬಿದನಾದರೆ
ಕಡೆಗೆ ತನ್ನಂತೆ ಮಾಡುವ.

(ಬಸವೇಶ್ವರ ವಚನ)

೩

ಹರಿಶ್ಚಂದ್ರ ಕಾವ್ಯದಲ್ಲಿ ಸತ್ಯಕ್ಕೆ ಆನುಷಂಗಿಕವಾಗಿ ಬರುವ ಮತ್ತೆರಡು ಅಂಶಗಳೆಂದರೆ 'ಹೊಲೆಯ' ಮತ್ತು 'ಹೊಲೆತನ' ಎಂಬವು. ವಚನಕಾರರು 'ಹೊಲೆಯ' ಎಂಬುದನ್ನು ಸಾಮಾಜಿಕಸ್ತರದಿಂದಲೇ ದೂರ ಮಾಡಿದರು. 'ಹೊಲಸು ತಿಂಬುವವನೆ ಹೊಲೆಯ' ಎಂದರು. ಆದರೆ ರಾಘವಾಂಕ 'ಅತಿ ಹುಸಿವ ಯತಿ ಹೊಲೆಯ' ಎಂದಿದ್ದಾನೆ. ಆದರಿಂದಾಗಿ ವಚನಕಾರರ ಭಾವನೆಗೆ ಪುಷ್ಟಿ ನೀಡಿದಂತಾಗಿದೆ. ಅವರ ದೃಷ್ಟಿಯಲ್ಲಿ ಹೊಲೆತನ ಲಭಿಸುವುದು ಹುಟ್ಟಿನಿಂದಲ್ಲ ಆಚರಣೆಯಿಂದ, ರಾಘವಾಂಕನ ದೃಷ್ಟಿಯಲ್ಲಿ ಹೊಲೆತನ ಲಭ್ಯವಾಗುವುದು ವರ್ತನೆಯಿಂದ. ಎರಡರ ಅಂತರಾರ್ಥವೂ ಒಂದೇ ಅದೇ ಅಂತರಂಗಶುದ್ಧಿ ಬಹಿರಂಗಶುದ್ಧಿ. ಹೀಗೆ ಹಲವು ವಿಧದಲ್ಲಿ ವಚನಕಾರರ ಘೋಷಣೆಯನ್ನು ಕಾವ್ಯದ ಮೂಲಕ ಪ್ರತಿಪಾದಿಸುವ ಓರ್ವ ಹರಿಕಾರನಾಗಿದ್ದಾನೆ ರಾಘವಾಂಕ.

ಆದರೆ ಇಲ್ಲಿ ರಾಘವಾಂಕನನ್ನು ಕುರಿತ ಒಂದೆರಡು ಆಕ್ಷೇಪಣೆಗಳಿವೆ-

'ಈ ಮಾತುಗಳು ಗಾಣಗಾತಿಯರ ಸಂದರ್ಭದಲ್ಲಿ ಮಾತಿಗೆ ಮಾತು ಕೊಡುವ ಚಮತ್ಕಾರದಲ್ಲಿ ಮತ್ತು ರಾಘವಾಂಕನ ಕಾವ್ಯ ಸಂದರ್ಭದಲ್ಲಿ ಹೇಗೋ ತಳ್ಳಿಕೊಂಡು ಹೋಗುತ್ತವಾದರೂ ನಮ್ಮ ಸಮಕಾಲೀನ ಸಾಮಾಜಿಕ ಸಂದರ್ಭದಲ್ಲಿ ಈ ಮಾತುಗಳು ಅಸ್ಪೃಶ್ಯರನ್ನು ಕುರಿತ ಅವಮಾನಾಸ್ಪದವಾದ ಟೀಕೆಯಾಗುತ್ತವೆ ಎಂಬುದನ್ನು ಗಮನಿಸಬೇಕು. ಈ ದಿನ ಈ ಮಾತುಗಳನ್ನು ನಾವು ಯಾರೂ ಒಪ್ಪಲು ಸಾಧ್ಯವಿಲ್ಲ'.. [2]

'ಕುಲದ ಹೆಮ್ಮೆಯನ್ನು ಕಳಚುವ ಕ್ರಿಯೆಗೆ ಗಾಣಗಾತಿಯರ ವೀರಬಾಹುಕನ ಪ್ರಸಂಗ ಸಹಾಯಕವಾಗಿದೆ. ಆದರೆ ವಚನಕಾರರ ವಿಚಾರಕ್ರಾಂತಿಯ ನಂತರ ಬಂದ ರಾಘವಾಂಕ ತನ್ನ ಕಥಾನಾಯಕನಲ್ಲಿ ವಚನಕಾರರು ಹೊಲೆತನದ ಬಗ್ಗೆ ತಳೆದ ನಿಲುವನ್ನು ಆತನ ವ್ಯಕ್ತಿತ್ವದ ಕಟ್ಟಕಡೆಯ ಘಟ್ಟದಲ್ಲಾದರೂ ಚಿತ್ರಿಸದೆ ಹೋದದ್ದು ಆಶ್ಚರ್ಯ ಹಾಗೂ ವಿಷಾದದ ಸಂಗತಿಯಾಗಿದೆ'.[3]

---

2. ಜಿ. ಎಸ್. ಶಿವರುದ್ರಪ್ಪ, ಹರಿಶ್ಚಂದ್ರ ಕಾವ್ಯ ಲೇಖನ.
3. ಅದೇ.

ಕಾವ್ಯೋದ್ದೇಶವನ್ನು ಚಣಕಾಲ ಮರೆತರೆ ಈ ಆರೋಪಗಳಿಗೆ ಅವಕಾಶವಾಗುತ್ತದೆ ಎನ್ನಿಸುತ್ತದೆ. ಮೊದಲನೆಯದಾಗಿ ಯಾವುದೇ ಪ್ರಾಚೀನ ಕಾವ್ಯವನ್ನು ಪ್ರಸಕ್ತ ಸಾಮಾಜಿಕ ರಾಜಕೀಯ ಸುಧಾರಣೆಯ ಅಳತೆಗೋಲಿಂದು ಅಳೆಯುವುದು ಯಾವ ದೃಷ್ಟಿಯಿಂದಲೂ ಆರೋಗ್ಯಕರವಲ್ಲ. ಎರಡನೆಯದಾಗಿ ಭಾರತೀಯ ಪ್ರಾಚೀನ ಕಾವ್ಯಗಳನ್ನು ಪರಿಶೀಲಿಸುವಾಗ ಪಾಶ್ಚಾತ್ಯ ರೀತಿಯ ವಿಮರ್ಶೆಗಿಂತ ಹಲವು ವೇಳೆ ಕಾವ್ಯದ ತಾತ್ತ್ವಿಕ ಹಿನ್ನೆಲೆಯನ್ನೂ, ಕವಿ ಮನೋಧರ್ಮವನ್ನೂ ದೃಷ್ಟಿಯಲ್ಲಿಟ್ಟುಕೊಳ್ಳುವುದು ಹೆಚ್ಚು ಸೂಕ್ತ.

ಹರಿಶ್ಚಂದ್ರ ಕಾವ್ಯದ ಕವಿಯ ಉದ್ದೇಶ ಹರಿಶ್ಚಂದ್ರನನ್ನು 'ವರ್ಣ ಸಮಾಜ ಸುಧಾರಕನನ್ನೋ' ಮಹಾತಪಸ್ವಿಯನ್ನೋ' ಮಾಡುವುದಲ್ಲ. 'ಸತ್ಯ' ಎಂಬ ಜೀವನ ಮೌಲ್ಯಕ್ಕೆ ಒಂದು ನಿದರ್ಶನವನ್ನಾಗಿಸುವುದು. ಆ ಕಾರ್ಯದಲ್ಲಿ ಕವಿ ಯಶಸ್ವಿಯಾಗಿದ್ದಾನೆ. ಅಂದಿನ ಶರಣಘೋಷಣೆಗೆ ಆ ಮೂಲಕ ತನ್ನ ಅನುಮೋದನೆ ನೀಡಿದ್ದಾನೆ. ಆದಕ್ಕಾಗಿ ನಾವು ರಾಘವಾಂಕನನ್ನು ಪ್ರಶಂಸಿಸಬೇಕೇ ಹೊರತು ದೂಷಿಸಬಾರದು.

೮

ಭಕ್ತಿ, ದಯೆ, ಕಾಯಕನಿಷ್ಠೆ—ಈ ಮೂರೂ ಸೇರಿ ಆದವನೇ ಸಿದ್ಧರಾಮ. ಶರಣಘೋಷಣೆಯ ಸಾಕಾರ ಮೂರ್ತಿ. 'ಸಾಕಾರ ನಿಷ್ಠೆ ಭೂತಂಗಳೊಳನುಕಂಪೆ ತಾನೆ ಪರಬೊಮ್ಮ' ಹಾಗೂ 'ಶಿವಯೋಗಿಯ ಶರೀರಂ ವೃಥಾ ಸವೆಯಲಾಗದು : ಅನುಗೊಂಬನಿತು ಕಾಯಕಂ ನಡೆಯುತಿರಬೇಕು'- ಇವು ಅವನ ಬದುಕು ಬರೆಹ. ಅವನು ತನ್ನ ಸಾಕಾರ ನಿಷ್ಠೆಯನ್ನು ಪ್ರತಿಷ್ಠಾಪಿಸಿದ್ದು ದೇಗುಲ ನಿರ್ಮಾಣ, ಲಿಂಗ ಪ್ರತಿಷ್ಠೆ, ನಂದಿ ಪ್ರತಿಷ್ಠೆ, ತುಪ್ಪದ ಅಭಿಷೇಕ, ಮಲ್ಲಿಕಾರ್ಜುನನ ಜಾತ್ರೆ ಇತ್ಯಾದಿಗಳ ರೂಪದಲ್ಲಿ. ಶಿವಯೋಗಿಯಾದ ತನಗೆ ಅವುಗಳ ಅಗತ್ಯವಿಲ್ಲದಿದ್ದರೂ ಸಾಮಾನ್ಯ ಜನತೆಗಾಗಿ ಅವರ ಆಂತರಿಕ ಭಕ್ತಿ ಪ್ರಕಾಶನಕ್ಕಾಗಿ ಅವೆಲ್ಲವನ್ನೂ ನಮೆದು ನಿಲ್ಲಿಸಬೇಕಾಯಿತು.

ಹರಿಹರ ರಾಘವಾಂಕರು ಪ್ರಾಚೀನ ವೀರಶೈವಕ್ಕೆ ಸೇರಿದವರಾದರೂ ಅವರ ಮೇಲೆ ಬಸವಾದಿ ಅನುಭಾವಿಗಳ ಪ್ರಭಾವ ಆಗದೆ ಇಲ್ಲ. ಆದರಿಂದಾಗಿ ಅವರು ಪ್ರಾಚೀನ ವೀರಶೈವ ಸಿದ್ಧಾಂತ ಹಾಗೂ ಅರ್ವಾಚೀನ ವೀರಶೈವ ಅನುಭಾವ ಎರಡನ್ನೂ ಸಮಾ

ಮೇಳಗೊಳಿಸಿ ಕೊಂಡವರಾಗಿದ್ದಾರೆ. ವಚನಕಾರರು ಇಷ್ಟಲಿಂಗ ಪೂಜೆಗೆ ಪ್ರಾಧಾನ್ಯ ನಿತ್ತರೆ, ಈ ಶಿವಕವಿಗಳು ಪ್ರಾಚೀನರಂತೆ ಸ್ಥಾವರಲಿಂಗ ಪೂಜೆಗೆ ಆದ್ಯತೆ ನೀಡಿದ್ದಾರೆ. ಆದರೂ ಭಕ್ತಿ ಪ್ರತಿಪಾದನೆಯಲ್ಲಿ ವಚನಕಾರರ ಪ್ರಭಾವಕ್ಕೆ ತುಂಬು ಒಳಗಾಗಿದ್ದಾರೆ.

ಭಕ್ತಿ ಒಂದು ವಿಶಿಷ್ಟ ಶಕ್ತಿ. ಅತ್ಯಂತ ಬಲಯುತವಾದದ್ದೂ ಹೌದು. ವಿಶ್ವವ್ಯಾಪಿಯಾದ ಪರಮಾತ್ಮನನ್ನು ಸಾಕ್ಷಾತ್ಕರಿಸಿಕೊಳ್ಳುವುದಕ್ಕೆ ಮುಕ್ತಿಯ ಮಹಾಫಲ ಪ್ರಾಪ್ತಿಗೆ ಅದು ಅತ್ಯುತ್ತಮ ಸಾಧನ. ಜ್ಞಾನ, ಕರ್ಮ ಮಾರ್ಗಗಳಿಗಿಂತಲೂ ಭಕ್ತಿ ಮಾರ್ಗ ಸಾಧಾರಣರಿಗೆ ಸುಲಭಸಾಧ್ಯವೆನಿಸುವ ಹಾದಿ. ಇಂತಹ ಭಕ್ತಿಗೆ ವೀರಶೈವ ಸಿದ್ಧಾಂತ ಹಾಗೂ ಅನುಭಾವ ಈ ಎರಡರಲ್ಲೂ ಅಗ್ರಸ್ಥಾನ ಮೀಸಲಿದೆ. ನಿರ್ಮಲವಾದ ಭಕ್ತಿಯೇ ಧರ್ಮದ ಮೂಲ ಬೀಜ. ಅವರ ಸೈದ್ಧಾಂತಿಕ ತತ್ತ್ವವೇ ಅಥವಾ ಷಟ್ಸ್ಥಲದ ಪಟಲವೇ ಸಾರುತ್ತದೆ ಭಕ್ತಿಯೇ ಮೊದಲ ಸ್ಥಲ ಎಂದು. ಅನುಭಾವಿಗಳಾದ ವಚನಕಾರರು ಅದೇ ಭಕ್ತಿಯನ್ನು ವಿಶೇಷವಾಗಿ ಪ್ರತಿಪಾದಿಸಿದರು. 'ನಾದ ಪ್ರಿಯನೂ ಅಲ್ಲ, ವೇದಪ್ರಿಯನೂ ಅಲ್ಲ, ಭಕ್ತಿಪ್ರಿಯ ನಮ್ಮ ಕೂಡಲ ಸಂಗಮದೇವ' ಎಂದರು. ಇಂತಹ ಶಿವನಿಗೆ ಪ್ರಿಯವಾದ ಭಕ್ತಿಮೂರ್ತಿಯೊಂದನ್ನು ಕಡೆದು ನಿಲ್ಲಿಸಿದ್ದಾನೆ ರಾಘವಾಂಕ. ಅವನ ಸಿದ್ಧರಾಮ ಭಕ್ತಸ್ಥಲದಿಂದ ಐಕ್ಯಸ್ಥಲಕ್ಕೇರಿದ ಮಹಾಚೈತನ್ಯ. ಮೂಕಬಾಲಕನಾಗಿದ್ದಾಗಲೂ ಅವನಲ್ಲಿ ಮುಗ್ಧಭಕ್ತಿ ಮನೆ ಮಾಡಿಕೊಂಡಿತ್ತು. ಗಿರಿಮಲ್ಲಯ್ಯನಲ್ಲಿ ಅವನಿಗೆ ಅಚಲವಾದ ನಂಬಿಕೆ, ಭಕ್ತಿ, ವಿಶ್ವಾಸ. ದನಗಾಯುವಾಗಲೂ ಅವನದು ಸದಾ ಭಕ್ತಿ ವಿನೋದ, ಭಕ್ತಿ ಕೇಳಿ ತನ್ನ ಇಷ್ಟದೇವ ಶ್ರೀಮಲ್ಲಿಕಾರ್ಜುನನ ಜೊತೆಯಲ್ಲಿ. ನವಣೆಯ ಹೊಲದಲ್ಲಿ ಗಿರಿಮಲ್ಲಯ್ಯನ ದರ್ಶನವಿತ್ತ ಮೇಲಂತೂ ಅವನ ಭಕ್ತಿಗೆ ಗರಿ ಮೂಡುತ್ತದೆ. ಅವನನ್ನು ಕಣ್ಣಾರ ಕಂಡು ನುಡಿಸುವ ಉತ್ಕಟೇಚ್ಛೆಯಿಂದ ಶ್ರೀಶೈಲಕ್ಕೆ ಹೋಗಿ ಅಲ್ಲಿ ಕಲ್ಲು, ಕಣಿವೆ, ಮರ, ಗಿಡ, ಪೊದೆ, ಪೊಟರೆ ಎಲ್ಲೆಡೆಗಳಲ್ಲೂ ಅರಸಿ ವಿಫಲನಾಗುತ್ತಾನೆ. ಆದರೆ ಹುಪ್ರಗಮ್ಮಜೀಯ ಬಳಿ ನಿಂತು 'ಇನ್ನೊಮ್ಮೆ ಕರೆವನಲ್ಲಿ ಮೇಲೆ ತನುವನೀ ಕಮರಿಗೆ ಕೂಡುವೆನೆಂದು' ಶಿವನಿಗೇ ಸವಾಲು ಹಾಕಿ ಸಾಕ್ಷಾತ್ಕರಿಸಿಕೊಂಡ ಪುಣ್ಯಜೀವಿ. ಇಲ್ಲಿ ಮಹೇಶ್ವರಸ್ಥಲದ ಅಚಲತೆ ಕಂಡುಬರುತ್ತದೆ.

ಅಂತೆಯೇ 'ಶರಣಸತಿ ಲಿಂಗಪತಿ' ಭಾವ ವೀರಶೈವದಲ್ಲಿ ವಿಶಿಷ್ಟವಾದುದು; ವಚನಕಾರರಿಗಂತೂ ತುಂಬಾ ಮೆಚ್ಚಾದುದು. ಈ ಭಾವಪ್ರಕಾಶನ ರಾಘವಾಂಕನ ಸಿದ್ಧರಾಮ ಚಾರಿತ್ರದ ಕಾವ್ಯ ಸಂದರ್ಭದಲ್ಲಿ ಆಗಿದೆ. ಶಿವನ ಹೇಳಿಕೆಯಂತೆ ಕುಸುಮಶರನು ತನ್ನ 'ಮೋಹನದ ಬೀಜದ ತಿರುಳ ರಸದ ಬಲಿದೊಂದು ಪೆಣ್ಣಂ ಮಾಡಿ, ವಸುಧೆಯೊಳು ಸಿದ್ಧರಾಮನೊಳು ನೆರಸಲು ಯತ್ನಿಸಿ, ಕೊಂಡೊಯ್ದು, ಕೈಮುಗಿದು,

ಮುನಿಯದೀ ಕಾಂತೆಗೇಕಾಂತಮಂಕೊಡು ವೈರಿವನಜ ಶಶಿ' ಎಂದಾಗ ಶಿವಯೋಗಿ ಸಿದ್ಧರಾಮ ಹೇಳುತ್ತಾನೆ, 'ಸತಿಗೆ ಸತಿ ಸೋಲ್ತು ಕೂಡಿದ ಕಾಲವುಂಟೆ ವಸುಮತಿಯೊಳು ?' ಎಂದು. ಈ ಮಾತು 'ಆನೆನ್ನ ಪುರುಷನೊಳು ಕೂಡಿಸುಖ ಪಡೆದನು' ಎಂಬ ವಚನಕಾರರ ನುಡಿಗೆ. ಅವರ 'ಶರಣ ಸತಿ ಲಿಂಗಪತಿ' ಭಾವಕ್ಕೆ ಸಂವಾದಿಯಾಗಿದೆ. ಹೀಗೆ ಭಕ್ತಿಯ ಕೈಲಾಸ ಗಿರಿಯನ್ನು ಮಜಲು ಮಜಲಾಗಿ ಏರಿ ಶ್ರೇಷ್ಠನೆನಿಸಿ ಬಯಲಿನಲ್ಲಿ ಬಯಲಾದ ಮಹಾಬೆಳಗು ಶಿವಯೋಗಿ ಸಿದ್ಧರಾಮ.

ಸಿದ್ಧರಾಮನಲ್ಲಿ ದಯೆಗೆ ದಾರಿದ್ರ್ಯವಿಲ್ಲ. ವಚನಕಾರರು ತಮ್ಮ ಧರ್ಮದಲ್ಲಿ ಭಕ್ತಿಗೆ ಎಷ್ಟು ಪ್ರಾಶಸ್ತ್ಯವಿತ್ತರೋ ದಯೆಗೂ ಅಷ್ಟೇ ಪ್ರಾಶಸ್ತ್ಯ ನೀಡಿದ್ದಾರೆ. 'ದಯವಿಲ್ಲದ ಧರ್ಮವದೇವುದಯ್ಯ ದಯವೇ ಬೇಕು ಸಕಲ ಪ್ರಾಣಿಗಳೆಲ್ಲರಲ್ಲಿ. ದಯವೇ ಧರ್ಮದ ಮೂಲವಯ್ಯ' ಎಂದರು. ಅದನ್ನೇ ದಯಾಘನನೆನಿಸಿದ ರಾಘವಾಂಕನ ಸಿದ್ಧರಾಮ ತನ್ನೆಲ್ಲ ಪವಾಡಗಳಲ್ಲೂ ಮೆರೆದಿದ್ದಾನೆ. ಆದರೆ ಆ ಪವಾಡಗಳೆಲ್ಲವೂ ಅವನ ಮಾನವೀಯತೆಗೆ ಒಡ್ಡಿದ ಮಹಾಪ್ರತಿಮೆಗಳು. ಸಮಾಜ ವಂಚಕನಾದ ಬಿಲ್ಲೇಶ ಬೊಮ್ಮಯ್ಯನಿಂದ ಹಿಡಿದು ಮೇಘಚೂಡ, ಮಯೂರಕ, ಭೋಗವಾಸವ ಇವರೇ ಮೊದಲಾದ ಗಂಧರ್ವರವರೆಗೂ ಅವನ ದಯೆಯ ತೋಳು ಚಾಚಿಕೊಂಡಿದೆ. ಸ್ವಯಂಭೂ ಲಿಂಗದ ರಥವನ್ನು ಎಳೆಯಲಾರದೆ ಎತ್ತುಗಳು ಪ್ರಾಣಬಿಟ್ಟಾಗ ಸಿದ್ಧರಾಮ ಅವುಗಳಿಗೆ ಮತ್ತೆ ಜೀವ ತುಂಬುತ್ತಾನೆ. ಅಲ್ಲಿ ಪವಾಡಕ್ಕಿಂತಲೂ ಮಿಗಿಲಾಗಿ ಗೋಚರಿಸುವುದು ಶಿವಯೋಗಿ ಸಿದ್ಧರಾಮನ ಪ್ರಾಣಿದಯೆ. ಭೂತ ದಯಾ ಭರಿತನಾದ ಆತನು ಸಾವಿರಾರು ಬಡಕುಟುಂಬಗಳ ಮದುವೆ ಕಾರ್ಯವನ್ನು ತನ್ನ ಪೌರೋಹಿತ್ಯದಲ್ಲಿ ಯಶಸ್ವಿಯಾಗಿ ನೆರವೇರಿಸುತ್ತಾನೆ.

ಹೀನರಿವರುತ್ತಮರಪಾತ್ರ ಸತ್ಪಾತ್ರವೆಂ
ಬೀ ನೋಟವಿಲ್ಲ ಸರ್ವರಿಗೆ ಭೂದಾನ ಗೋ
ದಾನ ಕನ್ಯಾದಾನ ವಸ್ತ್ರದಾನಂ ಮಹಿಷಿದಾನವಖಿಳಾನ್ನದಾನ |
ನಾನಾ ಮಹಾದಾನವಂ ಮಾಡಿನೆಱೆ ತಣಿಸಿ
ಜ್ಞಾನನಿಧಿ ಸರ್ವದೇವರು ನವಗ್ರಹ ತಣಿಯೆ
ನೂನವಿಲ್ಲದೆ ಜಗಜ್ಜನದ ಕೃಪೆಗಾ ಸಿತ್ಯಮೋಮುಕುಮ್ಯೋಗಿಸಿದನು ||

(ಸಿ. ರಾ. ಚಾ. IV-3)

ಇದಿಷ್ಟೇ ಸಾಲದೆಂದು 'ಹೊಱಗಿಪ್ಪ ಹುಲುಪಕ್ಷಿ ಕ್ರಿಮಿಕೀಟಾವಳಿಗಳಿತು ನೀರ್ಗುಡಿಯ ಭವವಳಿವಂತು ಕೆಱೆಯನಮರಾಪಗೆಯ ಮೈಮೆಱೆಯ ಮಾಂಗಲ್ಯ ಮೆಱೆಯಲೆಂದನುಗೆಯ್ಯುತ್ತಾನೆ. ಮಲ್ಲಿಕಾರ್ಜುನನನ್ನು ಬೇಡುವಾಗಲೂ ಅಷ್ಟೇ.

ನಿನ್ನ ಪರ್ವತಕುಳ ಸಾಮರ್ಥ್ಯಮಂ ತೆಗೆದು ತಂದೆನ್ನ ಹೊನ್ನಲಿಗೆಯೆಂಬ ಕಿರುವಾಗಿಲಿಯ ಜೇಕೆಂಬ ಜನತೆಗಾಗಿ ಜಗದ ಕಲ್ಯಾಣಕ್ಕಾಗಿ ಬೇಡಿಕೆ ಸಲ್ಲಿಸುತ್ತಾನೆ. ಅದರಂತಲೇ — 'ನಾವೆಲ್ಲರೂ ಹೊನ್ನಲಿಗೆ ಎಂಬ ಕಿರುವಳ್ಳಿಯಿಂದು....ಹಿರಿಗೆ ಹಿಂಗದೆ ನಾಯುತ್ತ, ಸರ್ವ ವಿದ್ಯಾಪಾರಸನಾಯುತ್ತ ಶಿವಲಿಂಗ ಪೂಜಾದುದು.'

ಇಂತಹ ಸರ್ವ ಭೂತಾನುಕಂಪೆಯುಳ್ಳ ದಯಾಘನನಾದ ಸಿದ್ಧರಾಮ ಶಿವಯೋಗಿ ಅಣ್ಣನೇ ಮೊದಲಾದ ವಚನಕಾರರ ಜೀವನ ಸಿದ್ಧಾಂತಕ್ಕೆ ವ್ಯಾಖ್ಯಾನವಾಗಿದ್ದಾನೆ.

ಸಿದ್ಧರಾಮನ ಕಾಯಕನಿಷ್ಠೆಗೆ ಕೆರೆಕಟ್ಟುವ ಸನ್ನಿವೇಶ ಶ್ರೇಷ್ಠನಿದರ್ಶನವೆನಿಸಿದೆ. 'ಜೀವರೆಲ್ಲರ ದುರಿತಕರಿಗೆ ಅಂಕುಶಂಗೊಂಬ ಮಾವತಿಗನಂತೆ ಗುದ್ದಲಿಗೊಂಡು, ಈ ಶಿವಯೋಗಿ ಅನುದಿನಂ ಆಗೆಯುತಿರ್ಪಾಗಳು ಒಂದು ದಿನ ನಡುವಗಲೊಳ್ ಉರುಬಿಸಿಲೊಳ್, ಅಗಜೆವೆರಸು ಇಂದುಧರನೆ ಆಕಾಶದೊಳು ಬರುತ ಕಂಡು, ಕರುಣಂ ಹುಟ್ಟಿ...ಕಂದನೀನೊಂದು ಕೆಲಸಕ್ಕಾಜನೆಲೆ ಗಂಗೆ ಇಂದುಳ್ಳ ಪುಣ್ಯ ನದಿಗಳನೆರಸಿ ಪೋಗಿ ಸಿದ್ಧೇಂದ್ರನು ಇರವೇಳ್ದಿಡೆ ಇರು ಪೋಗುಬೇಗ' ಎಂದನಂತೆ. ಗಂಗೆ ಪುಣ್ಯನದೀ ದೇವತೆಯರೊಂದಿಗೆ ಸಿದ್ಧೇಂದ್ರನ ಬಳಿ ಬಂದಾಗ-

'ಸುದತಿಯರು ನೀವಾರ್ ?'
'ಧರಾತಳದ ಪುಣ್ಯ ನದಿಗಳ್'
'ಆರ್ ಅಟ್ಟಿದರು ?'
'ಶಿವನ್'
ಏಕೆ ?
'ನಿಮ್ಮಾಪುರದೊಳಿರಲ್ಕೆ'
'ತಾವ್ಗಳಿರ ನೀವಿರಲು ತಕ್ಕ ನಡಮುಳ ಸ್ಥಾನ ವಿದಜೊಳಗಿಲ್ಲ ನಿಮ್ಮ
ನಿಜ ಸದನಕ್ಕೆ ಹದುಳ ಬಿಜಯಂಗೆಯ್ವುದು ;
'ನೀನುದಯಿಸಿದುದೇ ಮಹಾಕ್ಷೇತ್ರವು,
ಆವು ಐತಂದ ಹದನನವಧರಿಸು....
ಈ ನಜಿಯಿನ್ ಈ ಬಿಸಿಲೊಳಯ್ಯ ನೀನೆ
ಒಡೆದಗೆದು ಸೂಸುವ ಆಯಾಸಮಂ ಬಿಡು, ಸಾಕು,
ನಾವೀ ಪ್ರದೇಶದೊಳು ಕಜಿಯಾಗಿ, ತೊಜಿಯಾಗಿ,
ಡೊಣೆಯಾಗಿ, ವಾಪಿಕೂಪಂಗಳಾಗಿ ಈಶನ ಅಭಿಷವದ
ಅಗ್ರಜಲಕೆ ಸಂದಿಪ್ಪೆವು ;'
ಎಂದಾಗ—

'ಶಿವಯೋಗಿಯು ಶರೀರಂ ವೃಥಾ ಸವೆಯಲಾಗದು,
ಅನುಗೊಂಬನಿತು ಕಾಯಕಂ ನಡೆಯುತಿರಬೇಕು.

ಇಂತಿಷ್ಟು ಸ್ವಾರಸ್ಯಕರವಾದ ಸಂಭಾಷಣೆ ನಡೆದು ಸಿದ್ಧರಾಮನಲ್ಲಿ ಸದಾ ಜಾಗೃತವಾಗಿದ್ದ ಕರ್ತವ್ಯಪ್ರಜ್ಞೆಯನ್ನು ಪ್ರಕಟಪಡಿಸುತ್ತದೆ. ಅವನ ಸೇವೆಗೆ ನೂರು ಮುಖಗಳು, ಸಾವಿರ ತೋಳುಗಳು. ಕ್ರಾಂತಿಯುಗದ ವಚನಕಾರರಲ್ಲಿ ತಾನೂ ಒಬ್ಬನಾದ ಆತನಲ್ಲಿ ಅಂದಿನ ಎಲ್ಲ ಶರಣರ ಮನೋಧರ್ಮವೂ ರೂಪುವಡೆದಿರುವಂತೆ ತೋರುತ್ತವೆ. ನಾವು ಮೊದಲೇ ಹೇಳಿದಂತೆ ವಚನಕಾರರಿಗೆ ಬದುಕು ಬಹಳ ಮುಖ್ಯ. ಅದನ್ನು ಬೆಳಗಿಸುವುದಕ್ಕಾಗಿಯೇ ಅವರ ಶ್ರಮ ಮೀಸಲು. ರಾಘವಾಂಕನ ದೃಷ್ಟಿಯೂ ಅದೇ ಆಗಿದೆ. ಆತ 'ಸಕಲ ಜೀವಾತ್ಮರಿಗೂ ಲೇಸನೇ ಬಯಸುವ' ಮಹಾತ್ಮನೊಬ್ಬನ ಭವ್ಯ ಚಿತ್ರಣವನ್ನು 'ಜನಬದುಕಬೇಕೆಂದು' ಕೊಟ್ಟಿದ್ದಾನೆ.

೫

ಶುದ್ಧ ಸ್ಥಿತಪ್ರಜ್ಞ ಸ್ಥಿತಿಯೇ ಮಾಹೇಶ್ವರ ಸ್ಥಲದ ಭಕ್ತನ ಸ್ಥಿತಿ. ನಿಬಿಡ ನಿಶ್ಚಲ ಮನದಲ್ಲಿ ನಿಷ್ಠಾಭಕ್ತಿ ನೆಲೆಗೊಂಡಿರಬೇಕು. ವೀರವ್ರತಿಯಾದ ಮಾಹೇಶ್ವರ ತನ್ನ ಹರಣವೇ ಜಾರಿಹೋದರೂ ವ್ರತವನ್ನು ಮಾತ್ರ ಕೈಬಿಡಲಾರ. 'ನಿಜಕ್ಕಿಂತಲೂ ನಿಷ್ಠೆಯಲ್ಲಿಯೇ ನಿಂತು ಫಲದಲ್ಲಿ ಬಲಿಯುವುದು ಆತನ ಧ್ಯೇಯ'[4] ಇಂತಹ ನಿಷ್ಠೆಯ ಮುಷ್ಟಿ ಹಿಡಿಯುವುದರ ಉದ್ದೇಶ ಸಾಧಕ ಸಿದ್ಧನಾಗುವವರೆಗೂ ಉತ್ಸಾಹ ಕುಂದದೆ ಧೃತಿಗೆಡದೆ ನಿರಂತರ ಸಾಗಲಿ ಎಂದು. ಕಲಿಯ ಕೈಯ ಕೈದುವಿನಂತಿರಬೇಕು. ಅಯ್ಯಾ ಎಲುದೋಜು ಸರಸವಾಡಿದರೆ ಸೈರಿಸಬೇಕಯ್ಯಾ, ರಣದಲ್ಲಿ ತಲೆಹರಿದು ಅಟ್ಟೆ ನೆಲಕ್ಕೆ ಬಿದ್ದು ಬೊಬ್ಬಿಡಲದಕ್ಕೆ ಒಲಿದ ಕೂಡಲಸಂಗಮದೇವ—ಇಂತಹ ಅಚಲ ದೊಮ್ಮನದಲ್ಲಿ ಹರನ ಕಾಣಲೆಬೇಕು, ಶಿವಾಧಿಕ್ಯ ಸ್ಥಾಪಿಸಬೇಕು. ಶಿವನಿಂದೆ ಕೇಳ ಕೂಡದು, ಒಂದು ವೇಳೆ ಶಿವನಿಂದಕರನ್ನು ನಿಗ್ರಹಿಸಲಾಗದಿದ್ದರೆ ಪ್ರಾಣಾರ್ಪಣಮಾಡ ಬೇಕು.

ರಾಘವಾಂಕನ ಸೋಮನಾಥ ಚಾರಿತ್ರದ ಕಥಾನಾಯಕ ಆದಯ್ಯ ಇಂತಹ ವೀರಮಾಹೇಶ್ವರ. 'ಸೊಕ್ಕಿರ್ದ ಹುಲಿಗೆರೆಗೆ ಸೊಡ್ಡಳನ ತಂದಲ್ಲದೆ ಇಕ್ಕೆನ್ ಒಡಲೊಳ

4. ಆರ್. ಸಿ. ಹಿರೇಮಠ, ಮಹಾಕವಿ ರಾಘವಾಂಕ, ಪು. 69

ಗನ್ನವನು' ಎಂದು ಪ್ರತಿಭಟಿಸಿದವನು. ಅದರಂತೆಯೇ ಸೌರಾಷ್ಟ್ರ ಸೋಮೇಶ್ವರನನ್ನು ಒಲಿಸಿಕೊಂಡು ತಂದು, ಅವನನ್ನು ಪುಲಿಗೆರೆಯಲ್ಲಿ ಪ್ರತಿಷ್ಠಾಪಿಸಿದ ಅಚಲ ನಿರ್ಧಾರದ ಹೈಮಾಚಲ ಸದೃಶ ವ್ಯಕ್ತಿತ್ವವುಳ್ಳವನು. ಅವನ ಕರ್ತೃತ್ವಶಕ್ತಿ ಅಸಾಮಾನ್ಯ; ಅಮೋಘ.

ಆದಯ್ಯನ ಪತ್ನಿ ಪದ್ಮಾವತಿ ಪತಿಗೆ ತಕ್ಕ ಸತಿ-ಹರಿಶ್ಚಂದ್ರನಿಗೆ ಚಂದ್ರಮತಿ ಇದ್ದಂತೆ ಪತಿಕಾರ್ಯದಲ್ಲಿ ಪೂರ್ಣ ಸಹಾಯಕಳಾಗಿ ನಿಂತು, 'ಅಂಜದಿರಿ, ಅಳುಕದಿರಿ, ಸೋಮಯ್ಯ ಬಾರದಿರೆ ತಿರುಗಿ ಬಾರದಿರಿ' ಎಂದು ಆದಯ್ಯನ ನಿಷ್ಠೆ ಗಟ್ಟಿಗೊಳ್ಳುವಂತೆ ಮಾಡಿದಳು. ತಾನೂ ನಿರಶನ ವ್ರತಧಾರಿಣಿಯಾಗಿ ತನ್ನ ಗಂಡ ಹಿಂತಿರುಗುವವರೆಗೂ ನಿಂತವಳು.

ಆದಯ್ಯ ಪುಲಿಗೆರೆಯಿಂದ ಸೌರಾಷ್ಟ್ರಕ್ಕೆ ಹೋಗುವ ಹಾದಿಯಲ್ಲೇ ಉಗ್ರ ಪರೀಕ್ಷೆಗೆ ಒಳಗಾಗುತ್ತಾನೆ. ಆದರೂ ಧೃತಿಗೆಡುವುದಿಲ್ಲ. ಪಶುಪತಿ ಯತೀಂದ್ರನ ಪ್ರಚೋದನೆಗೆ ಬಲಿಯಾಗುವುದಿಲ್ಲ. ಹಸಿ ನೀರನ್ನೂ ಸೇವಿಸದೆ ಯತೀಂದ್ರ ವೇಷಧಾರಿಯಾದ ಪಶುಪತಿಯ ಪ್ರಶಂಸೆಗೆ ಪಾತ್ರನಾಗುತ್ತಾನೆ. ಆದರೆ ಅವನು ಪಟ್ಟ ದೈಹಿಕಯಾತನೆ ಬಣ್ಣನೆಗೆ ಮೀರಿದ್ದು—

'ಗಳಗಳನೆ ನಡೆವಾಗ ಬೀಸುದೋಳಿಂ ರಕ್ತವಿಳಿದು, ಬೆರಳ್ಗಳು ಬಾತು,
ಪಿಡಿದೊಡೆವೃತಂ ಜ್ವಾಲೆ ಬಳಸಿದ ಉದರಾಗ್ನಿಯಿಂ ಕಾದು
ಬಪ್ಪ ಉಸುರೊಳ್ ಎಡೆಯಾಱಿ, ರಸವಱಿತು, ಬಾಯು ಒಣಗು
ಪುಣ್ಣಾದಡಂ, ಬಿಸಿಯ ಹುಡಿಯಿಂದ ಪೊಪ್ಪಳಿಸಿ ಪದತಳದೆ,
ರಕ್ತಂ ದಾರಿಯೊಳು ವ್ರಣದ ಜಳಿಯು ಗುಡುವಂತೆ ನೆಱಿ
ಸುರಿದೊಡಂ ಬಗೆಯದೆ ಆದಯ್ಯನೈತರುತಿರ್ದನು'.

'ಈಸೊಂದು ಸಂಕಟದ ಮೇಲೆ' ಬಂದ ಬೇಸಗೆಯು ಧಗೆ ಎಂಥದೆಂದರೆ—

'ಸಂದು ಕಾಸಲು ಕರಗಿ ಕಬ್ಬುನಂ ಕಾಪೇಱು
ವಂದದಿಂ ರವಿ ತನ್ನ ಕಿರಣಕಿಚ್ಚಿಂ ಕಾಸೆ
ಬೆಂದು ಕತ್ತಲೆ ಕಾದು ಕರಗಿ ಕೆಂಗಲಿಸಿತಕ್ಕಲ್ಲದೊಡೆ ಬಡಬಿಸಲಲಿ
ನೊಂದು ನೆಲಸುರಿದು ಜಲವಱಿತು ಹೊಱಕರುಕೆದ್ದು
ನಿಂದ ಮರನೆಲೆಗಳೆದು ಗಿರಿಸಿಡಿದು ಹಾಱಿ ಮೃಗ
ವೃಂದ ನಸುವಱಿಯಾಗಿ ಹರಣಗಳೆಯಲ್ಯುಗ್ರವಾದವುದೆ ಬಿಸಲಬೇಗೆ

ಇಷ್ಟಾದರೂ ಆದಯ್ಯ ವಿಚಲಿತನಾಗಲಿಲ್ಲ. ವೃದ್ಧವೇಷದ ಶಿವನಿತ್ತ ಅನ್ನದ ಅಗುಳೊಂದನ್ನೂ ಸ್ವೀಕರಿಸುವುದಿಲ್ಲ. 'ಕರುಣಿಸಿ ಬಾರ, ಬಾರದೊಡೆ ಕೊಂದಾ

ನಾದರೂ ಹೋಗ' ಎಂದೊರಲುತ್ತಾನೆ. ಕಷ್ಟ ಹೆಚ್ಚಿದಂತೆಲ್ಲ ಅವನ ಮನ ನಿಶ್ಚಲವಾಗಿ ನಿಷ್ಠೆ ಬಲಿಯುತ್ತದೆ. ಈ ನೈಷ್ಠ್ಯವೇ ಅವನನ್ನು ಜಾತ್ಯಂಧನೇನೊ ಎಂಬ ತಪ್ಪು ತಿಳಿಯಲು ಸಾಧನವಾಗಬಹುದು. ಆದರೆ ವಸ್ತುಸ್ಥಿತಿ ಹಾಗಿಲ್ಲ. 'ರಾಘವಾಂಕನ ಕಾವ್ಯಗಳೆಲ್ಲ ಸಾಧನಮಾರ್ಗದಲ್ಲಿದ್ದ ಶರಣನ ಮನಸ್ಸಿನ ಬೇರೆ ಬೇರೆ ಹಂತಗಳನ್ನು ಚಿತ್ರಿಸುವಂತಿವೆ.' ಭಕ್ತ ಮಹೇಶ್ವರ ಸ್ಥಲಗಳಲ್ಲಿ ಕಂಡುಬರುವ ಸಾಧಕನ ಮನಸ್ಸಿನ ಹೊಯ್ದಾಟ ಹೋರಾಟ, ನಿಷ್ಠೆ, ಛಲ ಇವನ್ನೆಲ್ಲ ನಾವು ಆದಯ್ಯನಲ್ಲಿ ಕಾಣುತ್ತೇವೆ. ಸಾಧನಮಾರ್ಗ ಪ್ರಾರಂಭವಾಗುವುದು ಭಕ್ತಿಯಿಂದ. ಆಗ ಭಕ್ತನನ್ನು ಪ್ರಪಂಚ ಸುತ್ತಿ ಮುತ್ತಿರುತ್ತದೆ. ಬೇಕು ಬೇಡಗಳ ಬಲೆಯಿಂದ ಆತನು ಇನ್ನೂ ಪಾರಾಗಿರುವುದಿಲ್ಲ. ಒಮ್ಮೆ ಪ್ರಪಂಚದ ಕಡೆಗೆ ಮನಸೆಳೆದರೆ ಮತ್ತೊಮ್ಮೆ ದೇವದೇವನ ನೆನಪಾಗಿ ಭಕ್ತನು ಮರಮರನೆ ಮರುಗುತ್ತಾನೆ. ಭಕ್ತಿ ಭಂಡಾರಿ ಬಸವಣ್ಣನವರ ಉದಾಹರಣೆಯಿಂದ ಈ ಮಾತಿನ ಅರ್ಥವು ಹೆಚ್ಚು ಸ್ಪಷ್ಟವಾಗುವುದು. 'ಅಯ್ಯಾ, ಅಯ್ಯಾ ಎಂದು ಒರಲುತ್ತಲಿದ್ದೇನೆ, ಓ ಎನ್ನದೆ ಮೌನವೆ ಕೂಡಲಸಂಗಮದೇವಾ'–ಎಂದು ಪ್ರಾರ್ಥಿಸುವರೊಮ್ಮೆ. ಪ್ರಪಂಚದ ವ್ಯಾಮೋಹ ಅವರಿಗಿನ್ನೂ ಇದ್ದುದರಿಂದಲೇ ಶಿವಭಕ್ತಿಯುಂಟಾಗಿಲ್ಲ. ಅಂತೆಯೆ 'ಅರಿಸಿಣವನೆ ಮಿಂದು ಹೊಂದೊಡಿಗೆಯನೆ ತೊಟ್ಟು ಪುರುಷನ ಒಲುಮೆಯಿಲ್ಲದ ಲಲನೆಯಂತಾದೆನೆಂದು' ಅವರು ಹಲುಬುವರು. ಭಕ್ತಿಯೊಮ್ಮೆ ಅಳವಟ್ಟು ಆರಾಧ್ಯದೇವತೆಯಲ್ಲಿ ಮನವು ಸ್ಥಿರವಾಗಿ ನಿಂತರೆ ಆ ಮನ ಬೇರೆ ಕಡೆಗೆ ಹರಿಯದು. ಅವರಿಗೆ ಅನ್ಯ ವಿಷಯ ಹೊಲ್ಲ. ಅನ್ಯದೈವ ಹೊಲ್ಲ. ತಮ್ಮ ಆರಾಧ್ಯ ದೇವತೆಯೇ ಮಿಗಿಲೆಂದು ನಂಬಿ ಛಲದಿಂದ ಆತನಿಗೆ ಸರ್ವಸ್ವವನ್ನೂ ಅರ್ಪಿಸಿ ಮುಂದೆ ಸಾಗುವರು. ಇದು ಭಕ್ತ ಮಹೇಶ್ವರ ಸ್ಥಲಗಳ ಸ್ಥೂಲ ಸ್ವರೂಪ. ಆದಯ್ಯನೊಬ್ಬ ಭಕ್ತ ಸಾಧಕ. ಆದುದರಿಂದ ಈ ಹಿನ್ನೆಲೆಯನ್ನಿಟ್ಟುಕೊಂಡು ಆತನ ಮನೋಧರ್ಮ ಪರೀಕ್ಷಿಸಬೇಕಾಗುವುದು. ಇಲ್ಲದಿದ್ದರೆ ಆತನೊಬ್ಬ ಜಾತ್ಯಂಧನಾಗಿ ಕಂಡು ಬರುವ ಸಂಭವವಿದೆ.[5]

ಈ ಎಚ್ಚರಿಕೆ ಕಾವ್ಯಾಧ್ಯಯನದ ವೇಳೆಯಲ್ಲಿ ಅತ್ಯಗತ್ಯ. ಒಟ್ಟಿನಲ್ಲಿ ಆದಯ್ಯ ತಾನೇ ವಚನವೊಂದರಲ್ಲಿ ಹಾಡಿದಂತೆ 'ಮಡಿವಾಳ ಮಾಚಯ್ಯನ ಮಹೇಶ್ವರ ಸ್ಥಲವೆನಗಿರಲಿ' ಎಂಬ ಬೇಡಿಕೆಗೆ ಬದ್ಧನಾಗಿದ್ದಾನೆ.

ವಚನಕಾರರಿಗೆ ಇಹದ ಬಾಳಿನ ಬಗೆಗೆ ವಿಶೇಷ ಕಾಳಜಿ. ಅರಸನನ್ನು ಕಂಡೊಡನೆಯೆ ತನ್ನ ಪುರುಷನನ್ನು ಮರೆತವರಲ್ಲ ಶರಣರು. ಇಹದ ಬಾಳು ಸುಂದರವಾಗಬೇಕು ಎಂಬುದರಲ್ಲಿ ಅವರಿಗೆ ವಿಶೇಷ ಆಸಕ್ತಿ. ಅಂತೆಯೇ ಸತ್ತಮೇಲೆ ತೆರೆಯಬಹುದಾದ ಭಾವನಾಸ್ವರ್ಗ ಅವರ ಗೌರವಕ್ಕೆ ಪಾತ್ರವಾದ ವಸ್ತುವಾಗಿರಲಿಲ್ಲ.

---

5. ಅದೇ ಪು. 67-68

'ಸತ್ತು ಬೆರಸಿಹೆನೆಂಬರೆ ಕಬ್ಬಿನ ತುದಿಯ ಮೇಲಿದಂತೆ' ಎನ್ನುತ್ತಾರೆ. ಕಬ್ಬಿನ ಬುಡ ಮತ್ತು ಕಾಂಡಗಳಲ್ಲಿರುವ ಸಿಹಿ ತುದಿಯಲ್ಲಿಲ್ಲ. ಕಬ್ಬಿನ ತುದಿ ಉಪ್ಪು ಉಪ್ಪು. ಇಲ್ಲವೇ ನೀರಸ. ಅದು ತಿನ್ನಸಲ್ಲ. ಅಂತಹ ವ್ಯರ್ಥ ಕ್ರಮಕ್ಕೆ ಕೈ ಹಾಕಿದವರಲ್ಲ ವಚನಕಾರರು. ಸಲ್ಲದ ಆದರ್ಶಕ್ಕೆ ಹಾತೊರೆದು ಕಲ್ಪನಾ ಸ್ವರ್ಗವನ್ನು ನಂಬಿ ಅದಕ್ಕಾಗಿ ಇಹಜೀವನವನ್ನು ಬಲಿಗೊಡುವ ಮೌಢ್ಯವನ್ನು ಸಂಪೂರ್ಣವಾಗಿ ಅಲ್ಲಗಳೆದರು. ರಾಘವಾಂಕ ಅದೇ ಪರಂಪರೆಯಲ್ಲಿ ಮುಂದುವರಿದ ಕವಿ. 'ಬರೆ ಸತ್ತು ಕಾಂಬ ಸ್ವರ್ಗಕ್ಕಿರ್ದು ಕಾಣುತಿಹ ನರಕವೇ ಲೇಸು' (ಸೋ. ಚಾ. 13-33) ಎಂಬುದು ಆದಿಗಣನಾಥನು ಮರ್ತ್ಯವನ್ನು ಮೆಚ್ಚಿಕೊಂಡ ರೀತಿ. 'ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟ, ಇಲ್ಲಿ ಸಲ್ಲುವರು ಅಲ್ಲಿಯೂ ಸಲ್ಲುವರು' ಎಂಬ ವಚನಕಾರರ ಅಚಲ ವಿಶ್ವಾಸ ರಾಘವಾಂಕನದೂ ಆಗಿದೆ.

ಹೀಗೆ ಬದುಕನ್ನು ಕುರಿತ ವಚನಕಾರರ ಹತ್ತಾರು ವಿಶುದ್ಧ ಧ್ಯೇಯ ಧೋರಣೆಗಳಿಗೆ ಜ್ವಲಂತ ನಿದರ್ಶನಗಳನ್ನೊಡ್ಡಿದ್ದಾನೆ ರಾಘವಾಂಕ.

೬

ರಾಘವಾಂಕ ತನ್ನ ಸ್ವತಂತ್ರ ಮನೋಧರ್ಮಕ್ಕೆ ತಕ್ಕಂತಹ ಒಂದು ವಿಶಿಷ್ಟ ಅಭಿವ್ಯಕ್ತಿಮಾಧ್ಯಮವನ್ನು ಆಯ್ದುಕೊಂಡಿದ್ದಾನೆ. ತನ್ನ ಭಾವಾವೇಶದ ಹಾಸುಬೀಸಿಗೆ ಸಮರ್ಥವಾದ ವಾರ್ಧಕ ಷಟ್ಪದಿಯನ್ನೇ ತನ್ನ ಕಾವ್ಯ ಛಂದಸ್ಸಾಗಿ ಬಳಸಿದ್ದಾನೆ. ಆ ಪ್ರಕಾರವನ್ನು ಬೆಳೆಸಿ, ಅದರಲ್ಲಿ ಕಾವ್ಯ ರಚನೆ ಮಾಡಿದ ಪ್ರಥಮ ಕವಿಯಾಗಿದ್ದಾನೆ. ವಸ್ತುವಿನ ಆಯ್ಕೆಯಲ್ಲಿ ಹರಿಹರನಿಗೆ ಋಣಿಯಾಗಿದ್ದರೂ, ರಚನಾವಿಧಾನದಲ್ಲಿ ಆತನು ಸ್ವತಂತ್ರನಿದ್ದಾನೆ. ಅದೇ ರೀತಿ ಹಲವು ಧೋರಣೆಗಳನ್ನೂ ಜೀವನದರ್ಶನಗಳನ್ನೂ, ಬದುಕಿನ ಮೌಲ್ಯಗಳನ್ನೂ ಕಾವ್ಯ ಸಂದರ್ಭದಲ್ಲಿ ಅಳವಡಿಸುವಲ್ಲಿ ವಚನಕಾರರಿಗೆ ಋಣಿಯಾಗಿದ್ದರೂ, ಅವುಗಳನ್ನು ನಿರೂಪಿಸುವೆಡೆಯಲ್ಲಿ ಶೈಲಿ, ಭಾಷೆ, ಭಾವ, ಬಂಧ ಮೊದಲಾದವುಗಳಲ್ಲಿ ರಾಘವಾಂಕ ಎಂದಿಗೂ ವಚನಕಾರರಿಗೆ ದಾಸನಾಗಿಲ್ಲ. ಹುಟ್ಟಿದ ಮಗು ಮೊಲೆ ಉಣದಾಗ, ತಾಯಿಗೆ 'ತಿಳಿದ ಹೊಸ ಬೆಳದಿಂಗಳೊಳು ಮೋಡವೆದ್ದಂತೆ, ಬಳೆದ ಸುಗ್ಗಿಯ ಕೊಟಾರದೊಳುದೊಳು ಮಳೆ ಬಂದಂತೆ' ಆಯಿತಂತೆ. ಇಂತಹ ಸಾರಸ್ಯ ಆತನ ರಚನೆಯಲ್ಲಿ ಅಲ್ಲಲ್ಲಿ ಕಂಡುಬಂದರೂ ಆತನದು ಪಂಡಿತಶೈಲಿ. ಹಲವೆಡೆಗಳಲ್ಲಿ ಭಾವದ ಕಾವಿಗೂ ಕರಗದ

ಪೆಡಸು ಭಾಷೆ ಅವನದು. ಆದರಿಂದಾಗಿ ವಚನಕಾರರು ಆ ನುಡಿಯನ್ನು ದುಡಿಸಿಕೊಂಡಂತೆ ದುಡಿಸಿಕೊಳ್ಳಲು ರಾಘವಾಂಕಪಂಡಿತನಿಂದಾಗಿಲ್ಲ. ಅದೂ ಅವನ ವೈಶಿಷ್ಟ್ಯವೇ ಅನ್ನಬಹುದು. ಅವನ ಪ್ರಬದ್ಧ ಕವಿತಾಶಕ್ತಿಗೆ ತಕ್ಕಂತಹ ಪಂಡಿತಭಾಷೆಯೊಂದನ್ನು ಅವನ ಶೈಲಿ ಮೈಗೂಡಿಸಿಕೊಂಡಿದೆ ಅಷ್ಟೇ ಹೊರತು ಅದು ಬೇರಾವ ವಿಧದಲ್ಲೂ ಅನ್ಯರಿದೆ ತೊತ್ತಾಗಿ ದುಡಿದಿಲ್ಲ.

ನಿರುಪಮ ನಿರಾಲಂಬ ನಿತ್ಯನಿರ್ಭಯ ನಿರಾ
ವರಣ ನಿರ್ಮಾಯ ನಿರ್ಮಳ ನಿರ್ವಿಕಲ್ಪ ನಿಜ
ನಿರಸೂಯ ನಿಶ್ಚಿಂತ ನಿರ್ಲೇಪ ನಿರ್ಗುಣ ನಿರಾಧಾರ ನಿತ್ಯತೃಪ್ತ
ನಿರವದ್ಯ ನಿರ್ಭಿನ್ನ ನಿರ್ದ್ವಂದ್ವ ನಿರ್ದೋಷ
ನಿರಪೇಕ್ಷ ನಿಷ್ಕಾಮಿ ನಿಷ್ಕಳ ನಿರಾಕಾರ
ನಿರಜ ನಿರಹಂಕಾರ ನಿರ್ಮಳ ನಿರಾಳ ಪಂಪಾ ವಿರೂಪಾಕ್ಷ ಶರಣು

(ಹ. ಕಾ. I-4)

ಈ ಪದ್ಯದಲ್ಲಿ ವಚನದ ಓಟವಿದ್ದಂತೆ ಕಂಡರೂ ಅದರ ತುಂಬ ತುಂಬಿರುವುದು ರಾಘವಾಂಕನ ಪ್ರಕಾಂಡ ಪಂಡಿತತನ ಹಾಗೂ ಅವನ ಶಬ್ದಾಲಂಕಾರಜಾಲ. ಆದರೂ ತನ್ನದೇ ಆದ ಕಾವ್ಯ ಭಾಷೆಯಲ್ಲಿ ರಾಘವಾಂಕನ ಶೈಲಿಯೊಂದು ನಿರ್ಮಾಣವಾಗಿದೆ. ಅಂತೆಯೇ ಸಾಂಪ್ರದಾಯಿಕ ಕವಿ ಸಮಯಗಳಿಗಿಂತ ಚರ್ವಿತ ಚರ್ವಣವೆನಿಸಿದ ಸಮಕಲಾದ ಉಪಮೆ ರೂಪಕಗಳಿಗಿಂತ ರಾಘವಾಂಕನಲ್ಲಿ ಹೊಸದಾದ, ಹಸನಾದ, ಹದವಾದ ಕಾವ್ಯ ಪ್ರತಿಮೆಗಳು ಮೈ ತಳೆದಿವೆ. ರಾಘವಾಂಕನ ನಾಟಕೀಯ ಶೈಲಿ ಅನಸ್ಯಾದೃಶ. ಅದು ಅವನ ಶೈಲಿಯ ವೈಶಿಷ್ಟ್ಯವೂ ಹೌದು. ಚಕಮಕಿ ಹೊಡೆದಂತೆ, ಕಿಡಿಕಾರಿದಂತೆ ಅವನ ಸಂಭಾಷಣೆಯ ಸರಣಿ. ಪುಟ್ಟ ಪುಟ್ಟ ಮಾತುಗಳಲ್ಲಿ ಸನ್ನಿವೇಶದಸ್ವಾರಸ್ಯವನ್ನು ಹಿಡಿದು ನಿಲ್ಲಿಸುವ ಸಾಮರ್ಥ್ಯ ಅವನದು. ಆ ಕಾರಣ ರಾಘವಾಂಕ ರಚನೆಯಲ್ಲಿ ಹೇಗೋ ಹಾಗೆ ತನ್ನದೇ ಆದ ಶೈಲಿಯನ್ನು ಸೃಷ್ಟಿಸುವಲ್ಲಿ ಅನ್ಯರಿಗೆ ಋಣಿಯಾಗಿಲ್ಲ. ಕನ್ನಡಕ್ಕೆ ಗಣಿಯಾಗಿದ್ದಾನೆ.

ಲೇಖನವನ್ನು ಮುಗಿಸುವ ಮೊದಲು ಒಂದು ಮಾತು: ರಾಘವಾಂಕನ ಮೇಲೆ ರನ್ನನ ಪ್ರಭಾವ ಆಗಿದೆಯೆಂದು ತೋರಿಸುವ ಒಂದು ವ್ಯರ್ಥ ಪ್ರಯತ್ನ ನಡೆದಿದೆ. ಅದು ಬಚ್ಚಲ ನೀರು ತಿಳಿದರೇನು ? 'ಹಾರುವ ಮೊದಲು ಅಂತ್ಯಜ ಕಡೆ'— ಮೊದಲಾದ ವಚನದ ಮಾತುಗಳು ಕ್ರಮವಾಗಿ ಬಚ್ಚಲುದಕಂ, ತಿಳಿದಡಾರ ಮೀಹಕ್ಕೆಯೋಗ್ಯಂ 'ಕೌಶಿಕ ಮುನೀಶ್ವರ ಮೊದಲನಾಮಿಕಂಕಡೆ' ಎಂಬ ಪದ್ಯ ಪಂಕ್ತಿಗಳಿಗೆ ನೇರ ಪ್ರಭಾವ ಬೀರಿವೆ ಎನ್ನುವಷ್ಟೇ ಹಾಸ್ಯಾಸ್ಪದವಾದುದು. ಸ್ವತಂತ್ರ ಧೀರ

ನಾದ ರಾಘವಾಂಕ ತನ್ನ ಕಾವ್ಯ ರಚನೆಯಲ್ಲಿ ಶರಣ ಘೋಷಣೆಯನ್ನು ಪ್ರತಿಪಾದಿಸಿದ್ದಾನೆ. ಅಷ್ಟೇ ಹೊರತು ಯಾರನ್ನೂ ಎಲ್ಲೂ ಅನುಕರಣೆ ಮಾಡಿಲ್ಲ ಏಕೆಂದರೆ-

ಪರರೊಡವೆಯಂ ಕೊಂಡು ಕೃತಿಯ ಪೇಳದ ಭಾಷೆ
ಪರರ ಕಾವ್ಯಾರ್ಥಂಗಳಂ ಛಿದ್ರಿಸದ ಭಾಷೆ
ಪರರ ದೈನವ ನುಡಿಸದಿಪ್ಪ ಭಾಷೆ ಪರರ ಕ್ಲೇಶವೀಕ್ಷಿಸದ ಭಾಷೆ
ಪರರ ನಿಂದಿಸಿ ತನ್ನ ಪೊಗಳಿಕೊಳ್ಳದ ಭಾಷೆ
ಪರರ ವಧುವಂ ಕಂಡು ಮನವೆಳಸದಿಹ ಭಾಷೆ
ಪರರ ವಸ್ತುವ ತೃಣಕೆ ಸರಿಯೆಂಬ ಭಾಷೆಯುದು ರಾಘವಾಂಕಗೆ ಸಂದುದು

(ಹ. ಕಾ. 1-16)

ಕಾಪಾಲಿಕರು

(ನಶಿಸಿಹೋದ ಒಂದು ಉಗ್ರ ಹಾಗೂ ವಾಮಪಂಥೀಯ ಶೈವಶಾಖೆ)

—ಡಾ| ಎಸ್. ವಿದ್ಯಾಶಂಕರ

ಕಾಪಾಲಿಕರು ಕಾಲಾಮುಖ, ಪಾಶುಪತ ಹಾಗೂ ಲಾಕುಲೀಶರಂತೆ ಒಂದು ಶೈವಶಾಖೆಗೆ ಸೇರಿದವರು. ಕರ್ನಾಟಕದಲ್ಲಿ ಈ ನಾಲ್ಕು ಶೈವಶಾಖೆಗಳು ಪ್ರಚಲಿತವಿದ್ದರೂ ಇವು ತಾತ್ತ್ವಿಕವಾಗಿ ಭಿನ್ನ ಭಿನ್ನ ನೆಲೆಯಲ್ಲಿ ನಿಲ್ಲುತ್ತವೆ. ಶಂಕರಾಚಾರ್ಯರು (788-820) ಮಾಹೇಶ್ವರರನ್ನು ಮಾತ್ರ ಗಮನದಲ್ಲಿಟ್ಟುಕೊಂಡು ಹೇಳಿರುವರು. ಅವರ ಸಂವಾದದಿಂದ ಮಾಹೇಶ್ವರರು ಪಾಶುಪತರಿಂದ ಭಿನ್ನರಲ್ಲವೆಂಬುದು ಸ್ಪಷ್ಟವಾಗುತ್ತದೆ. ವಾಚಸ್ಪತಿಮಿಶ್ರನು (ಸು. 850) ಮಾಹೇಶ್ವರರನ್ನು ನಾಲ್ಕು ಗುಂಪುಗಳಾಗಿ —ಶೈವ, ಪಾಶುಪತ, ಕಾಪಾಲಿಕ, ಕಾರುಣಿಕ ಸಿದ್ಧಾಂತಿಗಳೆಂದು—ವಿಂಗಡಿಸುವನು. ಭಾಸ್ಕರಾಚಾರ್ಯನು (ಸು. 850) ಈ ವಿಂಗಡಣೆಯನ್ನು ಅನುಸರಿಸಿದರೂ ಕಾರುಣಿಕ ಸಿದ್ಧಾಂತಿಗಳ ಬದಲಿಗೆ ಕಥಕ ಸಿದ್ಧಾಂತಿಗಳನ್ನು ಸೇರಿಸಿರುವನು. ರಾಮಾನುಜರ ಗುರುವಾದ ಯಾಮುನಾಚಾರ್ಯನು (ಸು. 1050) ತನ್ನ 'ಆಗಮ ಪ್ರಾಮಾಣ್ಯ'ದಲ್ಲಿ ಶೈವ, ಪಾಶುಪತ, ಕಾಪಾಲ ಮತ್ತು ಕಾಲಾಮುಖರನ್ನು ಒಟ್ಟಿಗೆ ಪಟ್ಟಿಮಾಡಿರುವನು. ರಾಮಾನುಜರು (ಸು. 1017-1137) ತಮ್ಮ 'ಶ್ರೀಭಾಷ್ಯ'ದಲ್ಲಿ ತಮ, ಗುರುವಿನ ಅಭಿಪ್ರಾಯಗಳನ್ನು ಪುನರುಚ್ಚರಿಸಿರುವರು. ಕಾರುಕ-, ಕಾರುಣಿಕ-, ಕಾಥಕ-ಸಿದ್ಧಾಂತಿಗಳ ಉಲ್ಲೇಖ ತೀರಾ ಕನಿಷ್ಠಪ್ರಮಾಣದಲ್ಲಿದ್ದರೂ ಅವರು ಸ್ಪಷ್ಟವಾಗಿ ಕಾಲಾಮುಖರನ್ನು ಹೇಳುವರು.[1]

ಲೋರೆಂಜನ್‌ರವರು ಯಾಮುನಾಚಾರ್ಯ ಹಾಗೂ ರಾಮಾನುಜರ ವಿವರಣೆಗಳು ಅನೂರ್ಜಿತ ಸಂಗತಿಗಳನ್ನು ಒಳಗೊಂಡಿದ್ದರೂ ಆಧುನಿಕ ವಿದ್ವಾಂಸರು ಅವುಗಳನ್ನು ವಿಮರ್ಶಿಸದೆ ಒಟ್ಟಾರೆ ಒಪ್ಪಿಕೊಂಡಿರುವರೆಂದು ಟೀಕಿಸಿರುವರು. ಅವರ ಅಭಿಪ್ರಾಯದಂತೆ, ರಾಮಾನುಜರ 'ಶ್ರೀಭಾಷ್ಯ'ದ ಹಲವೆಡೆ ಅಸ್ಪಷ್ಟತೆಯಿದ್ದು, ಕಾಲಾಮುಖರ ಬಗೆಗಿನ ರಾಮಾನುಜರ ಹೇಳಿಕೆಯು ಕಾಲಾಮುಖರ ಬಗೆಗೆ ತಿಳಿದು

---

1. ನೋಡಿ : ಡೇವಿಡ್ ಎನ್. ಲೋರೆಂಜನ್ ; ದ ಕಾಪಾಲಿಕಾಸ್ ಅಂಡ್ ಕಾಲಾಮುಖಾಸ್ (1972) ಪು. 1

ಬಂದಿರುವುದಕ್ಕೆ ಎಲ್ಲೂ ಹೊಂದಿಕೆಯಾಗುವುದಿಲ್ಲ. ರಾಮಾನುಜರು ನಾಲ್ಕು ಶೈವಗಳಲ್ಲಿರುವ ಸ್ಪಷ್ಟ ವ್ಯತ್ಯಾಸಗಳನ್ನು ಉಳಿಸಿಕೊಂಡು ಬರುವುದಿಲ್ಲ. ಒಮ್ಮೆ ಅವರು ಈ ನಾಲ್ಕು ಶೈವಗಳನ್ನು ಒಟ್ಟಾಗಿ ಹೇಳಿ, ಮತ್ತೊಮ್ಮೆ ಪ್ರತ್ಯೇಕವಾಗಿ ಹೇಳುವರು. ಅವರು ಹೇಳುವ ನಾಲ್ಕು ಶೈವಶಾಖೆಗಳು ಒಂದೇ ಆಗಿ ತೋರುತ್ತವೆ. ರಾಮಾನುಜರು ಹೇಳುವ ಕಾಳಾಮುಖ ವರ್ಣನೆಯು ಕಾಪಾಲಿಕರಿಗೇ ಹೆಚ್ಚು ಹೊಂದುತ್ತದೆಂಬುದನ್ನು ಲೋರೆಂಜನ್ ಸ್ಪಷ್ಟಪಡಿಸಿರುವರು.[2]

ಸಂಸ್ಕೃತ ಮೂಲಗಳೆಲ್ಲವೂ ಕಾಪಾಲಿಕರು ಹಿಂದೂ ದೈವವಾದ ಭೈರವ-ಶಿವ ಹಾಗೂ ಅವನ ಗಣಗಳನ್ನು ಆರಾಧಿಸುವರೆಂಬುದನ್ನು ಒಪ್ಪಿವೆ. ಕಾಪಾಲಿಕರು ಶೈವಶಾಖೆಗೆ ಸೇರಿದವರೆಂಬುದರಲ್ಲಿ ಅನುಮಾನವಿಲ್ಲ. ಪಾಶುಪತರು ಮತ್ತು ಕಾಳಾಮುಖರು ಲಕುಲೀಶನನ್ನು ಆರಾಧಿಸುವರು. ಪಾಶುಪತರಲ್ಲಿ ಕೆಲವರು ಕಾಳಭೈರವನ ಅರ್ಚಕರಾಗಿದ್ದರು. ಅವರ ಸ್ಮಾರಕವಾಗಿ ಅವರ ಶಿಷ್ಯರು ಭೈರವ ದೇವಸ್ಥಾನಗಳನ್ನು ಕಟ್ಟಿಸಿದ ಮತ್ತು ಜೀರ್ಣೋದ್ಧಾರಮಾಡಿಸಿದ ನಿದರ್ಶನಗಳು ಕೆಲವಿವೆ. ಕರ್ನೂಲ್ ಜಿಲ್ಲೆಯ ಕನ್ನಡ ಶೈವಶಾಸನದಲ್ಲಿ ಕೋಕಿಲಬಿಲಾಧಿಪ ಭೈರವನ ಹೆಸರೂ, ದೇವೀ, ತ್ರಿಪುರಾ, ಕರಾಳೀ, ಕಾಳೀ, ಸ್ಮಶಾನತಲವಾಸಿನೀ ಎಂದು ಪ್ರಸಿದ್ಧಳಾದ ಭದ್ರಕಾಳಿಯ ಹೆಸರೂ ಬಂದಿದೆ. ಹುಂಚದ ಕಾಳಭೈರವನ ಗುಡಿಯ ಗೋಡೆಯ ಮೇಲೆ ವೀರ ಸಾಂತರನು ಗೊರವರ ಪಳ್ಳಿಯನ್ನು ಸರ್ವಜ್ಞ ಜೀಯನಿಗೆ ಕೊಟ್ಟ ವಿಷಯ ಲಿಖಿತವಾಗಿದೆ. ಕೋಲಾರ ಜಿಲ್ಲೆಯ ಸೀತಿಗುಡ್ಡದ ಮೇಲಿನ ಕಾಳಭೈರವನ ದೇವಸ್ಥಾನದ ಪಶ್ಚಿಮದಲ್ಲಿ ಬಹಳ ಪ್ರಾಚೀನ ದೇವಾಲಯವೊಂದಿದೆ. ಗರ್ಭಗುಡಿಯಲ್ಲಿ ಮೂರ್ತಿಯಿಲ್ಲ. ಅದರ ಗೋಡೆಯ ಮೇಲೆ ಕಿವಿಯಲ್ಲಿ ಕಿವಿಯುಂಗರಗಳನ್ನು ಧರಿಸಿ, ಕೌಪೀನಧಾರಿಯಾಗಿ, ಬಲಗೈಯಲ್ಲಿ ದಂಡವನ್ನು ಹಿಡಿದು, ಎಡಗೈಯಲ್ಲಿ ಕಮಂಡಲವನ್ನು ಧರಿಸಿ ಎಡಗೈಯ ಕೆಳಭಾಗದಲ್ಲಿ ಜೋಳಿಗೆಯನ್ನು ನೇತುಹಾಕಿಕೊಂಡಿರುವ ಒಬ್ಬ ಸನ್ಯಾಸಿಯ ಚಿತ್ರವಿದೆ. ಇದು ಬಹುಶಃ ಲಕುಲೀಶನ ಅಥವಾ ಲಾಕುಳ ಶೈವಗುರುವಿನ ಚಿತ್ರವಿರಬೇಕು.[3] ಕಾಳಾಮುಖರ ಧರ್ಮಗ್ರಂಥ ಯಾವುದೆಂಬುದು ತಿಳಿಯುವುದಿಲ್ಲ. ಬಹುಶಃ ಲಕುಲೀಶ-ಪಾಶುಪತರಂತೆ 'ಲಾಕುಲಾಗಮ'ವೇ ಇವರಿಗೂ ಆಧಾರಗ್ರಂಥವಾಗಿರಬಹುದು. "ಸೂಂಡಿಯ ಸ್ಥಾನಪತಿಗಳು ಲಾಕುಳಾಗಮದಲ್ಲಿ ಪ್ರವೀಣರಾಗಿ

---

2. ಯಾಮುನಾಚಾರ್ಯ ಹಾಗೂ ರಾಮಾನುಜರು ಕಾಪಾಲಿಕರಿಗೂ ಕಾಳಾಮುಖರಿಗೂ ಇರುವ ಮುಖ್ಯ ವ್ಯತ್ಯಾಸವನ್ನು ಗಮನಿಸಿಲ್ಲವೆಂಬುದನ್ನು ಲೋರೆಂಜನ್ ತನ್ನ ಕೃತಿಯಲ್ಲಿ ತೋರಿಸಿಕೊಟ್ಟಿರುವರು. (ನೋಡಿ : ಪು. 2.5)

3. ನೋಡಿ : ಡಾ. ಎಂ. ಚಿದಾನಂದಮೂರ್ತಿ : ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಅಧ್ಯಯನ (1979), ಪು. 152-153.

ದ್ದರು. ಅಲ್ಲಿಯ ಸ್ಥಾನಪತಿಗಳು ನೈಷ್ಠಿಕರೂ, ಕಾಳಾಮುಖರೂ ಆಗಿರಬೇಕು ಎಂಬ ವಿಷಯವನ್ನು ಶಾಸನಗಳು ವಿಧಿಸಿವೆ. ಪಾಶುಪತರು ಹೇಗೆ ಲಕುಲೀಶ್ವರನ ಮುಖದಿಂದ ಹೊರಟ ಶಾಸ್ತ್ರದ ಅನುಯಾಯಿಗಳೋ ಹಾಗೆಯೇ ಕಾಳಾಮುಖರೂ ಕೂಡ ಆಗಿದ್ದರು. ಅಷ್ಟೇ ಅಲ್ಲ ಕೆಲವು ಕಾಳಾಮುಖ ಗುರುಗಳಂತೂ ಸರ್ವಜ್ಞತ್ವದಲ್ಲಿ ಸ್ವತಃ ಲಕುಲೀಶರೇ ಆಗಿದ್ದರು. ಸುರೇಶ್ವರ ಪಂಡಿತರೆಂಬುವರು 'ಕಾಳಾಮುಖಸಮಯ ಸರೋವರ ರಾಜಹಂಸ'ರೂ 'ಲಾಕುಲಸಿದ್ಧಾಂತನೈಯಾಯಿಕನಳಿನೀ ದಿವಾಕರ'ರೂ ಆಗಿದ್ದರೆಂದು ಶಾಸನವೊಂದು ಪ್ರಶಂಶಿಸುತ್ತದೆ. ಲಾಕುಲರೂ ಮತ್ತು ಕಾಳಾಮುಖರೂ ನಡೆಯಿಸಿದ ಸಾಮಾಜಿಕ ಚಟುವಟಿಕೆಗಳೂ ಒಂದೇ ರೀತಿಯವು."[4] ಲಕುಲೀಶ-ಪಾಶುಪತರಿಗೂ ಕಾಳಾಮುಖರಿಗೂ ಹೇಳಿಕೊಳ್ಳಬಹುದಾದ ಮಹತ್ವದ ವ್ಯತ್ಯಾಸಗಳೇನೂ ಕಂಡುಬರುವುದಿಲ್ಲ. "ಕಾಳಾಮುಖರ ಹೆಸರು ಸೂಚಿಸುವಂತೆ ಅವರು ಧರಿಸುತ್ತಿದ್ದ ಚಿಹ್ನೆಯಿಂದ ಬಹುಶಃ ಮುಖದ ಮೇಲಿನ ಕಪ್ಪು ಗೆರೆಯಿಂದ ಅವರು ಪಾಶುಪತರಿಂದ ಭಿನ್ನರಿರಬಹುದು...."[5] ಕಾಳಾಮುಖಶೈವರು ದೇವಸ್ಥಾನಗಳ ನಿರ್ಮಾಣ ಹಾಗೂ ಪ್ರಾಚೀನ ವಿದ್ಯಾಕೇಂದ್ರಗಳ ಸ್ಥಾಪನೆಯ ಮೂಲಕ ಸಮಕಾಲೀನ ಸಮಾಜದೊಡನೆ ಬೆರೆತರು. ಸ್ಥಾನಪತಿಗಳಾಗಿದ್ದ ಇವರು ತಮ್ಮ ಪ್ರಗಲ್ಭ ಜ್ಞಾನ ಪಾಂಡಿತ್ಯಗಳಿಂದ, ಸ್ಫಟಿಕದ್ಯೋತಕ ಚಾರಿತ್ರಶುದ್ಧಿಯಿಂದ ದಯಾಪೂರ್ಣಸೇವಾಮನೋಭಾವದಿಂದ ರಾಜಮನ್ನಣೆಯನ್ನೂ ಜನರಪ್ರೀತಿ-ವಿಶ್ವಾಸಗಳನ್ನೂ ಗಳಿಸಿದರು. ಇವರ ಬಹುಮುಖವಾದ ಚಟುವಟಿಕೆಗೆ ಬಳ್ಳಿಗಾವೆಯ ಕೇದಾರಮಠ ಅಥವಾ ಕೋಡಿಯ ಮಠ ಒಂದು ಒಳ್ಳೆಯ ನಿದರ್ಶನ.

ಕಾಪಾಲಿಕರ ಸಿದ್ಧಾಂತವು ಸೋಮಸಿದ್ಧಾಂತವಾಗಿದೆ. ಶ್ರೀಹರ್ಷನ 'ನೈಷಧ ಚರಿತ'ದಲ್ಲಿ ಸರಸ್ವತಿಯನ್ನು ವಿಶದವಾಗಿ ವರ್ಣಿಸುತ್ತ ಅವಳ ಮುಖವೇ 'ಸೋಮ ಸಿದ್ಧಾಂತ'ವೆಂದು ಹೇಳಲಾಗಿದೆ. 'ನೈಷದ ಚರಿತೆ'ಯ ಭಾಷ್ಯಕಾರನಾದ ಚಂಡೂ ಪಂಡಿತನು ಅದನ್ನು ವಿವರಿಸುತ್ತ ಅದು ಕಾಪಾಲಿಕ ದರ್ಶನಶಾಸ್ತ್ರವೆಂದಿರುವನು. ಕೃಷ್ಣಮಿಶ್ರನ 'ಪ್ರಬೋಧಚಂದ್ರೋದಯ' ಹಾಗೂ ಆನಂದರಾಯನ 'ವಿದ್ಯಾಪರಿಣಯನ'ಗಳು ಸೋಮಸಿದ್ಧಾಂತವನ್ನು ಹೆಸರಿಸಿವೆ. ಗೋಕುಲನಾಥನ 'ಅಮೃತೋದಯ'ವು 'ನ್ಯಾಯಕುಸುಮಾಂಜಲಿ'ಯ ಭಾಷ್ಯಕಾರನಾದ ವರ್ಧಮಾನನು 'ಸೋಮಸಿದ್ಧಾಂತ' (ಅ) 'ಸೋಮತಂತ್ರ'ದೊಡನೆ ಹೋರಾಡಿ ಜಯಶಾಲಿಯಾದನೆಂದು ಹೇಳುತ್ತದೆ. ಸೋಮಸಿದ್ಧಾಂತವು ಸೋಲನ್ನನುಭವಿಸಿದಾಗ ಅದರ ರಕ್ಷಕರಾದ ಕಾಪಾಲಿಕ, ನೀಲಲೋಹಿತ, ಮಹಾಭೈರವ, ಭೂತಡಾಮರ ಮತ್ತು ಉಮಾಮಹೇಶ್ವರರುಗಳು ಓಡಿ

4. ಅದೇ, ಪು. 136

5. ಅದೇ, ಪು. 136

ಹೋದರೆಂದು ಅದು ಸೂಚಿಸಿದೆ.[6] ಸೋಮಸಿದ್ಧಾಂತವು ಕಾಪಾಲಿಕರ ತತ್ತ್ವಗ್ರಂಥವೆಂದು ತಿರುವಾರ್ರಿಯೂರಿನ ಶಾಸನ ಹೇಳುತ್ತದೆ.[7] ಕಾಪಾಲಿಕರಿಗಿದ್ದ ಮತ್ತೊಂದು ಹೆಸರು ಮಹಾವ್ರತಿ. ಯಶಸ್ತಿಲಕ ಚಂಪುವಿನಲ್ಲಿ ತನ್ನ ದೇಹದ ಮಾಂಸವನ್ನೇ ಮಾರುತ್ತಿದ್ದ ಮಹಾವ್ರತಿಗಳ ಪ್ರಸ್ತಾಪವಿದೆ. ಪಾಶುಪತ ಹಾಗೂ ಕಾಳಾಮುಖರಲ್ಲಿನ ಮಹಾವ್ರತಗಳು ಬೇರೆ ಬೇರೆಯಾದ ಸಾಧನಾವಸ್ಥೆಯಲ್ಲಿನ ವಿಧಿಗಳು. 'ಮಾಲತಿ ಮಾಧವ'ದ ಭಾಷ್ಯಕಾರನಾದ ಜಗದ್ಧರನು ಕಾಪಾಲಿಕವ್ರತ (ಅ) ಕಾಪಾಲವ್ರತವನ್ನು 'ಮಹಾವ್ರತ'ವೆಂದು ಕರೆದಿರುವನು. ಹಾಗೆಯೇ 'ನಳಚಂಪು'ವಿನ ಭಾಷ್ಯಕಾರ ಚಂಡಪಾಲನು ಕಾಪಾಲಿಕ ಹಾಗೂ ಮಹಾವ್ರತಿಗಳನ್ನು ಸಮಾನವಾಗಿ ಕಂಡಿರುವನು. ಸೋಮದೇವನ 'ಕಥಾಸರಿತ್ಸಾಗರ'ದಲ್ಲಿ (5-2-81) ಶೈವಸನ್ಯಾಸಿಯೊಬ್ಬನನ್ನು ಕಾಪಾಲಿ ಮಹಾವ್ರತಿ ಎಂದು ಕರೆಯಲಾಗಿದೆ. ಕ್ಷೀರಸ್ವಾಮಿಯು (11ನೇ ಶ. ಸ) ತನ್ನ 'ಅಮರಕೋಶ'ದ ಭಾಷ್ಯದಲ್ಲಿ ಕಪಾಲಿ, ಮಹಾವ್ರತಿ, ಸೋಮಸಿದ್ಧಾಂತಿ ಹಾಗೂ ತಾಂತ್ರಿಕರನ್ನು ಒಂದೆಡೆ ಪಟ್ಟಿಮಾಡಿರುವನು.[7A] ಬಸವಣ್ಣನ ವಚನಗಳಲ್ಲಿ ಒಂದೆಡೆ 'ಅಯ್ಯಾ, ನಿಮ್ಮ ಮಹಾವ್ರತಿಗಳನಗಲಿ ಬದುಂಕಲಾಪೆನು' ಎಂದು ಹೇಳಲಾಗಿದೆ.[8] (ಬಹುಶಃ ಈ ಹೇಳಿಕೆ ಅರುವತ್ತು ಶೀಲ ವ್ರತಗಳನ್ನು ಕಟ್ಟುನಿಟ್ಟಾಗಿ ಪಾಲಿಸಹೊರಟಿದ್ದ ಬಸವ ಸಮಕಾಲೀನ ಭಕ್ತರನ್ನು ಕುರಿತದ್ದಾಗಿರಬಹುದು. ಕಾಪಾಲಿಕರನ್ನು ಕುರಿತದ್ದಾಗಿರಲಾರದು. ಕಾಪಾಲಿಕರ ಬಗೆಗೆ ಅಂತಹ ಗೌರವಭಾವನೆ ಬಸವಾದಿ ಶಿವಶರಣರಿಗೆ ಇದ್ದಂತಿಲ್ಲ.) ಚೆನ್ನಬಸವಣ್ಣನ ವಚನವೊಂದರಲ್ಲೂ ('ಮಹಾವ್ರತಿ ಮದವೇರಿದ' ವ. 545) 'ಮಹಾವ್ರತಿ'ಯ ಉಲ್ಲೇಖ ಕಂಡುಬಂದಿದೆ. (ಇಲ್ಲೂ 'ಮಹಾವ್ರತಿ'ಗಳ ಬಗೆಗೆ ಟೀಕೆಯನ್ನು ಕಾಣಬಹುದು.) ನಿಜಗುಣ ಶಿವಯೋಗಿಯು ಪಾಶುಪತ, ಕಾಪಾಲಿಕ, ಮಹಾವ್ರತಗಳು ಭಿನ್ನ ಪಂಥಗಳೆಂದು ಭಾವಿಸಿ ಅವನ್ನು

---

6. ಡೇವಿಡ್ ಎನ್. ಲೋರೆಂಜನ್ : ದ ಕಾಪಾಲಿಕಾಸ್ ಅಂಡ್ ಕಾಲಾಮುಖಾಸ್ (1972), ಪು. 82

7. ಅದೇ, ಪು. 392

7A ಅದೇ, ಪು. 73-81
ಲೋರೆಂಜನ್‌ರವರು ಪಾತಂಜಲಿಯ 'ಯೋಗಸೂತ್ರ' (ii. 30.31)ದಲ್ಲಿ ಹೇಳಲಾಗಿರುವ ಅಹಿಂಸಾ, ಸತ್ಯ, ಅಸ್ತೇಯ, ಬ್ರಹ್ಮಚರ್ಯ, ಅಪರಿಗ್ರಹ — ಈ ಐದು ಬಗೆಯ ನಿರ್ಬಂಧಗಳನ್ನು ಕಾಳಾಮುಖರ ಮಹಾವ್ರತವಾಗಿದೆ ಎಂದು ಅಭಿಪ್ರಾಯಪಡುವರು (ನೋಡಿ : ಪು. 81)

8. ಬಸವಣ್ಣನವರ ಷಟ್ಸ್ಥಲದ ವಚನಗಳು (ಜನಪ್ರಿಯ ಆವೃತ್ತಿ) ಸಂ : ಪ್ರೊ. ಬಸವನಾಳ ಶಿವಲಿಂಗಪ್ಪ, ವ. 370.

‘ಅತಿಮಾರ್ಗಿಕ’ಗಳೆಂದು ಕರೆದಿರುವನು. ಅವನ ಪ್ರಕಾರ ಪಾಶುಪತವು ಮಾಯೆ, ಕರ್ಮ ಪಾಶಧ್ವಂಸಾದಿಗಳನ್ನು ನಿರ್ವಸುವುದು. ಕಾಪಾಲಿಕವು ನರಕಪಾಲ ಭಿಕ್ಷಾಟನಾದಿಗಳನ್ನು ವಿವರಿಸುವುದು. ಮಹಾವ್ರತವು ಅಸ್ಥಿಧಾರಣಾದಿಗಳನ್ನು ವಿವರಿಸುವುದು.[9]

ಕಾಪಾಲಿಕರು ಎಂದೂ ತಮ್ಮ ಸಮಕಾಲೀನ ಸಮಾಜದೊಡನೆ ಬೆರೆಯಲಿಲ್ಲ. ಸಮಾಜವು ಇವರ ಬೀಭತ್ಸ್ಯ ಆಚರಣೆಗಳನ್ನು ನೋಡಿ ಇವರನ್ನು ತನ್ನಿಂದ ದೂರವೇ ಇರಿಸಿತು. ಬಹುವಾಗಿ ಇವರ ಕಾರ್ಯಚಟುವಟಿಕೆಗಳು ಜನದೂರವಾದ ಕಾಡುಮೇಡು, ಗುಹೆ ಗಹ್ವರಗಳಲ್ಲೇ ಪರಿಮಿತಗೊಂಡಿರಬಹುದು. ಇದಕ್ಕೆ ಅಪವಾದವಾಗಿ ಕಪಾಲಿಕರು ದೇವಾಲಯಗಳಲ್ಲೂ ವಾಸಿಸುತ್ತಿದ್ದರು. ಡಾ॥ ದೊರೈರಂಗಸ್ವಾಮಿಯವರು ಅಭಿಪ್ರಾಯಪಡುವಂತೆ ಪುಲಿಕೇಶಿಯ ಸೋದರಳಿಯ ನಾಗವರ್ಧನನು ಕಾಪಾಲೇಶ್ವರರು ಹಾಗೂ ಮಹಾವ್ರತಿಗಳು ದೇವಾಲಯದಲ್ಲಿ ವಾಸಿಸಲು ಅವಕಾಶ ಕಲ್ಪಿಸಿದ್ದನು. ಕಾಪಾಲಿಕರು ಕಾಂಜೀವರಂನ ಏಕಾಂಬರನಾಥನ ದೇವಾಲಯದೊಳಗೆ ವಾಸಿಸುತ್ತಿದ್ದರು. ಕಾಪಾಲಿಕರಿಂದಾಗಿ ಮೈಲಾಪುರದ ದೇವಾಲಯವು ‘ಕಾಪಾಲೀಶ್ವರಂ’ ಎಂಬ ಹೆಸರು ಪಡೆಯಿತು.[10] ನಾಸಿಕ್ ಜಿಲ್ಲೆಯ ಕಾಪಾಲೇಶ್ವರ ದೇವಸ್ಥಾನದಲ್ಲಿ ಕಾಪಾಲಿಕರು ವಾಸಿಸುತ್ತಿದ್ದರೆಂಬುದಾಗಿ ತಿಳಿದುಬರುತ್ತದೆ.[11] ಕಾಪಾಲಿಕ ಮತ್ತು ಕಾಲಾಮುಖರ ಮಧ್ಯೆ ಎದ್ದುಕಾಣುವ ಒಂದು ದೊಡ್ಡ ಅಂತರವೆಂದರೆ ಕಾಲಾಮುಖರಂತೆ ಕಾಪಾಲಿಕರು ಸಮಾಜದ ಒಂದು ಅಂಗವಾಗಿ ತಮ್ಮ ಮತಪ್ರಸಾರ ಮಾಡಲಿಲ್ಲವೆಂಬುದು. ಅವರು ಸಮಾಜದಿಂದ ದೂರ ಸರಿದು, ಕಾಡು-ಬೆಟ್ಟಗಳಲ್ಲಿ ಕೇಂದ್ರಗಳನ್ನು ಸ್ಥಾಪಿಸಿಕೊಂಡು, ತಮ್ಮ ಧಾರ್ಮಿಕ ನಿಯಮಗಳನ್ನು ಪಾಲಿಸಿಕೊಂಡು ಬಂದರು.[12]

ಬಹುಶಃ ‘ಯಾಜ್ಞವಲ್ಕ್ಯ ಸ್ಮೃತಿ’ಯಲ್ಲಿ (iii. 243) ಪ್ರಥಮಬಾರಿಗೆ ಕಪಾಲಿ ಎಂಬ ಪದ ಕಂಡುಬರುತ್ತದೆ. ಇಲ್ಲಿನ ಸೂತ್ರವು ಬ್ರಾಹ್ಮಣನೊಬ್ಬನನ್ನು ಕೊಂದದ್ದಕ್ಕೆ

---

9. ವಿವೇಕ ಚಿಂತಾಮಣಿ : (ಸಂ : ಪ್ರೊ. ಟಿ ಎಂ. ಉಮಾಪತಿಶಾಸ್ತ್ರಿ). ಪು. 13 (1969)

10. The Religion And Philosophy of Tevaram Book I (1958) P. 392

11. G. S. Ghurye : Indian Sadhus, P. 52

12. ಡಾ॥ ಎಸ್. ಶೆಟ್ಟರ್ : ಭಾರತೀಯ ಹಿನ್ನೆಲೆಯಲ್ಲಿ ಕರ್ನಾಟಕದ ಧಾರ್ಮಿಕ ಸಾಮಾಜಿಕ ಜೀವನ (ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ, ಸಂ. 3 ಬೆಂ. ವಿ. ವಿ) ಪು. 30

ಮಹಾವ್ರತವಾದ ತಪಸ್ಸನ್ನು ಸೂಚಿಸುತ್ತದೆ. ಇಲ್ಲಿ ಕಪಾಲಿ ಪದವು ಕಪಾಲವನ್ನು ಧರಿಸಿದವನು ಎಂಬುದನ್ನು ಸೂಚಿಸುತ್ತದೆಯೇ ಹೊರತು ಕಾಪಾಲಿಕ ಪಂಥವಿದ್ದುದರ ಸೂಚನೆಯನ್ನಲ್ಲ. 'ಮೈತ್ರಾಯಣೀಯ ಉಪನಿಷತ್'ನಲ್ಲಿ ವೇಷಧಾರೀ ಕಾಪಾಲಿಗಳಲ್ಲಿ ಕೆಲವರು ಕಾಷಾಯವಸ್ತ್ರವನ್ನೂ ಕರ್ಣಕುಂಡಲವನ್ನೂ ಧರಿಸುವರು. ಸಂಬಂಧ ಬೆಳೆಸಬಾರದ ವ್ಯಕ್ತಿಗಳಲ್ಲಿ ಇವರೂ ಒಬ್ಬರು ಎಂದಿದೆ. ಇದು ಕಾಪಾಲಿಕ ಪಂಥಕ್ಕೆ ಸೇರಿದವನೊಬ್ಬನನ್ನು ಕುರಿತು ಹೇಳುತ್ತಿದೆ. ಆದರೆ ಈ ಭಾಗವು ಖಚಿತವಾಗಿ ಕಾಲಾಂತರದ ಇಲ್ಲಿನ ಪ್ರಕ್ಷೇಪವಾಗಿದ್ದು ಉಚಿತವಾಗಿ ಊಹಿಸದು ಎಂದು ಲೋರೆಂಜನ್ ಹೇಳುವರು.[13] ಹಾಲನ ಪ್ರಾಕೃತ 'ಗಾಥಾಸಪ್ತಶತೀ'ಯ ಪದ್ಯವೊಂದರಲ್ಲಿ 'ನವ' ಕಾಪಾಲಿಕೆಯೊರ್ವಳು ತನ್ನ ಪ್ರಿಯಕರನ ಶವಸಂಸ್ಕಾರದ ಬೂದಿಯನ್ನು ತನ್ನ ದೇಹಕ್ಕೆಲ್ಲಾ ಪೂಸಿಕೊಂಡ ವಿವರ ಬಂದಿದೆ. ಇಲ್ಲಿನ 'ನವ' ಎಂಬ ಪದವು ಸಾಮಾನ್ಯವಾಗಿ 'ತರುಣಿ' ಎಂಬುದನ್ನು ಧ್ವನಿಸಿದ ಹೊರತು ಅವಳು ತನ್ನ ಪ್ರಿಯಕರನ ಸಾವಿನ ಸಂದರ್ಭದಲ್ಲಿ ಕಾಪಾಲಿಕ ವ್ರತವನ್ನು ಧರಿಸಿದಳೆಂದು ಹೇಳಲಾಗದು. ಬಹುಶಃ ಕಾಪಾಲಿಕ ಪಂಥದ ಮೊದಲ ಉಲ್ಲೇಖ ಇಲ್ಲಿ ದೊರೆಯಬಹುದೆಂದು ಲೋರೆಂಜನ್ ಅಭಿಪ್ರಾಯಪಡುವರು.[14]

ಕ್ರಿ.ಶ. ಪ್ರಾರಂಭದ ಬೌದ್ಧ ಕೃತಿಯೊಂದಾದ 'ಲಲಿತವಿಸ್ತರ'ವು ಬುದ್ಧಿಗೇಡಿಗಳು ಸ್ತ್ರೀವೆಂಬ ಭ್ರಮೆಯಿಂದ ದೇಹಕ್ಕೆ ಬೂದಿಯನ್ನು ಬಳಿದುಕೊಂಡ ಕಾಷಾಯವಸ್ತ್ರ ಧರಿಸಿದ, ಮುಂದೆ ಬೋಳಿಸಿಕೊಂಡ ತ್ರಿದಂಡ ಕುಂಡಿಕೆ ಕಪಾಲ ಹಾಗೂ ಖಟ್ವಾಂಗಗಳನ್ನು ಹಿಡಿದು ಹೊರಟ ಹಲವಾರು ಮಂದಿ ಮೂರ್ಖರನ್ನು ಕುರಿತು ಹೇಳಿದೆ. ಇವರು ಕಾಪಾಲಿಕರೇ ಆಗಿರಬೇಕೆಂದು ಲೋರೆಂಜನ್ ಹೇಳುವರು.[15] ಕ್ರಿ.ಶ. 6–7ನೇ ಶತಮಾನಗಳಲ್ಲಿ ಕಾಪಾಲಿಕ ಸನ್ಯಾಸಿಗಳ ಉಲ್ಲೇಖ ಸಾಮಾನ್ಯವಾದುದು ಎಂದು ಅಭಿಪ್ರಾಯಪಡುವ ಲೋರೆಂಜನ್ ಖಗೋಳಶಾಸ್ತ್ರಜ್ಞನೂ ಗಣಿತ ವಿದ್ವಾಂಸನೂ ಆದ ವರಾಹಮಿಹಿರನು ತನ್ನ 'ಬೃಹತ್‌ಸಂಹಿತೆ'ಯಲ್ಲಿ (IX.25) 'ಕಪಾಲವ್ರತ' ಉಲ್ಲೇಖಗೊಂಡಿರುವುದನ್ನು ಪ್ರಸ್ತಾಪಿಸುವರು.[16] ವರಾಹಮಿಹಿರನು ತನ್ನ ಮತ್ತೊಂದು ಕೃತಿಯಾದ 'ಬೃಹಜ್ಜಾತಕ'ದಲ್ಲಿ (XV.1) ವಿವಿಧ ಗ್ರಹಗಳ ಪ್ರಭಾವದಿಂದ ಜನಿಸುವ ಏಳು ಮಂದಿ ಸನ್ಯಾಸಿಗಳನ್ನು ಹೆಸರಿಸುವುದನ್ನು

13. ಪೂರ್ವೋಕ್ತ, ಪು. 13
14. ಅದೇ, ಪು. 13
15. ಅದೇ, ಪು. 13
16. ಅದೇ, ಪು. 14

ಲೋರೆಂಜನ್ ಉಲ್ಲೇಖಿಸಿರುವರು.[17] ವರಾಹಮಿಹಿರನ ಪ್ರಕಾರ ಮಾರ್ಸ್‌ನಿಂದ ಶಾಕ್ಯನೂ, ಮರ್ಕ್ಯೂರಿಯಿಂದ ಆಜೀವಿಕನೂ, ಜುಪಿಟರ್‌ನಿಂದ ಭಿಕ್ಷುವೂ, ಚಂದ್ರನಿಂದ ವೃದ್ಧನೂ, ವೀನಸ್‌ನಿಂದ ಚರಕನೂ, ಸ್ಯಾಟರ್ನ್‌ನಿಂದ ನಿರ್ಗ್ರಂಥನೂ, ಸೂರ್ಯನಿಂದ ವನ್ಯಾಸನನೂ ಜನಿಸುವರು. ಹತ್ತನೇ ಶತಮಾನದ ಭಾಷ್ಯಕಾರನಾದ ಉತ್ಪಲ (ಭಟ್ಟೋತ್ಪಲ) ಸೂಚಿಸುವಂತೆ ವೃದ್ಧರು ವೃದ್ಧಶ್ರಾವಕರು (ಅ) ಕಪಾಲಿಕರೆಂದೇ ಪ್ರಸಿದ್ಧರಿರುವರು. ಉತ್ಪಲನು 5ನೇ ಶತಮಾನದ ಜೈನಪಂಡಿತ ಕಾಲಿಕಾಚಾರ್ಯನು ಮಾಡಿದ ಇದೇ ಬಗೆಯ ಹಂಗಡಣೆಯನ್ನು ಉಲ್ಲೇಖಿಸಿರುವನು. ಇದು ಸೂರ್ಯನೊಂದಿಗೆ ತಪಸ್ವಿಯನ್ನೂ, ಚಂದ್ರನೊಂದಿಗೆ ಕಾಪಾಲಿಕನನ್ನೂ, ಮಾರ್ಸ್‌ನೊಂದಿಗೆ ರಕ್ತಪಾತನನ್ನೂ, ಮರ್ಕ್ಯುರಿಯೊಂದಿಗೆ ಏಕದಂಡಿಯನ್ನೂ, ಜುಪಿಟರ್‌ನೊಂದಿಗೆ ಯತಿಯನ್ನೂ, ವೀನಸ್‌ನೊಂದಿಗೆ ಚರಕನನ್ನೂ ಮತ್ತು ಸ್ಯಾಟರ್ನ್‌ನೊಂದಿಗೆ ಕ್ಷಪಣಕನನ್ನೂ ಹೊಂದಿಸಿತು. ಈ ಸಂದರ್ಭದಲ್ಲಿ ಲೋರೆಂಜನ್‌ರವರು ವೃದ್ಧ (ಅ) ವೃದ್ಧಶ್ರಾವಕನನ್ನು ಕಾಪಾಲಿಕನೊಂದಿಗೆ ಗುರುತಿಸುವುದು ಸರಿಯಾದರೆ. ಅವರು ಮಹೇಶ್ವರನನ್ನು ಪೂಜಿಸುತ್ತಿದ್ದರೆಂಬ ವಾದವೂ ಸರಿ ಎಂದಿರುವರು.[18] ವರಾಹಮಿಹಿರನು ತನ್ನ 'ಬೃಹತ್‌ಸಂಹಿತೆ'ಯಲ್ಲಿ (1 : 20) ಇನ್ನೊಮ್ಮೆ ವೃದ್ಧಶ್ರಾವಕನನ್ನು ಹೆಸರಿಸಿರುವನು. ಈ ಪದ್ಯದ ಅನುವಾದದಲ್ಲಿ ಎಚ್. ಕೆರ್ನ್ ವೃದ್ಧಶ್ರಾವಕನನ್ನು 'ಕಪಾಲಧಾರಿ ಶೈವಸನ್ಯಾಸಿ' ಎಂದು ಭಾಷ್ಯವೊಂದರ ಆಧಾರದಿಂದ ಹೇಳಿರುವುದನ್ನು ಗಮನಿಸಿದ ಲೋರೆಂಜನ್‌ರವರು ಬೇರೆಲ್ಲೂ ಕಾಪಾಲಿಕರನ್ನು ಈ ಹೆಸರಿನಲ್ಲಿ (ವೃದ್ಧಶ್ರಾವಕ) ಕರೆದಿರುವುದು ಕಂಡುಬರುವುದಿಲ್ಲವೆನ್ನುವರು.[19]

ಹರ್ಷವರ್ಧನನ ಕಾಲಕ್ಕೆ (ಕ್ರಿ. ಶ. 606-647) ಭಾರತಕ್ಕೆ ಭೇಟಿ ನೀಡಿದ ಚೈನಾದೇಶದ ಬೌದ್ಧಯಾತ್ರಿ ಹುಯೆನ್‌ತ್ಸಾಂಗನು ತನ್ನ ಪ್ರವಾಸ ಕಥನದಲ್ಲಿ ದೇವತೆಗಳ ಹತ್ತು ದೇವಾಲಯಗಳನ್ನೂ, ಸುಮಾರು ಒಂದುಸಾವಿರ ಹೆರೆಟಿಕ್ಸ್ (ನಾನಾ ಬಗೆಯ ಧರ್ಮೀಯರು)ಗಳನ್ನೂ, ಬತ್ತಲಿಗರಾದ ಸನ್ಯಾಸಿಗಳನ್ನೂ, ಬೂದಿಬಳಿದುಕೊಂಡಿದ್ದವರನ್ನೂ, ಮೂಳೆಗಳ ಹಾರಗಳನ್ನು ಮಾಡಿ ಅವನ್ನು ಶಿರೋಭೂಷಣವಾಗಿ ಧರಿಸಿದವರನ್ನೂ ತಾನು ನೋಡಿದುದಾಗಿ ಹೇಳಿರುವನು. ಈ ವಿವಿಧ ಧರ್ಮೀಯರನ್ನು ಎಸ್. ಬೀಲನು (ಪ್ರವಾಸಕಥನದ ಅನುವಾದಕ) ದಿಗಂಬರ ಜೈನರು, ಪಾಶುಪತರು, ಕಪಾಲಧಾರಿಗಳು (ಕಾಪಾಲಿಕರು) ಎಂದು ಗುರುತಿಸಿರುವನು. ಇನ್ನೊಂದೆಡೆ

17. ಅದೇ. ಪು. 14

18. ಅದೇ, ಪು. 15

19. ಅದೇ, ಪು. 15

ಹುಯೆನ್ ತ್ಸಾಂಗನು ತಾನು ಭಾರತದಲ್ಲಿ ಭೇಟಿಮಾಡಿದ ವಿವಿಧ ಬೌದ್ಧೇತರ ಸನ್ಯಾಸಿಗಳ ಸಾಮಾನ್ಯ ವರ್ಣನೆಯನ್ನು ಕೊಡುತ್ತಾ 'ಹಲವರು ಕಪಾಲ ಮಾಲೆಗಳಿಂದ ಮಾಡಿದ ಕಂಠಾಭರಣಗಳನ್ನು ಧರಿಸಿದ್ದರು' ಎಂದಿರುವನು. ಕಪಾಲದ ಹಾರಗಳನ್ನು ಧರಿಸಿದವರು ಎಸ್. ಬೀಲನ ಪ್ರಕಾರ ಕಾಪಾಲಿಕರಾಗಿರಬಹುದು.

ಬಾಣಭಟ್ಟನು ಹರ್ಷವರ್ಧನನ ಸಮಕಾಲೀನನಾಗಿದ್ದು ಆ ಕಾಲದ ಧಾರ್ಮಿಕ ಜೀವನದ ಚಿತ್ರವನ್ನು ತನ್ನ 'ಹರ್ಷಚರಿತ' ಹಾಗೂ 'ಕಾದಂಬರಿ'ಯಲ್ಲಿ ಕೊಟ್ಟಿರುವನು. ಲೋರೆಂಜನ್‌ರವರ ಪ್ರಕಾರ ಇವು ಬಳಿಕೆಯ ಶತಮಾನಗಳಲ್ಲೀ ಪ್ರಚಲಿತವಿದ್ದ ಪ್ರಾಚೀನ ಹಾಗೂ ಸುಧಾರಿತ ತಾಂತ್ರಿಕ ಆರಾಧನಾ ವಿಧಾನಗಳನ್ನು ತಿಳಿಸುತ್ತವೆ.[20] ಅತ್ಯಂತ ಪ್ರಾಚೀನವಾದ ತಾಂತ್ರಿಕ ಆರಾಧನಾ ವಿಧಾನವು 'ಕಾದಂಬರಿ'ಯಲ್ಲಿ ಚಿತ್ರಿತವಾಗಿದೆ. ವಿಂಧ್ಯಪರ್ವತದ ಅರಣ್ಯದ ಶಬರಕುಲದವರ ಧರ್ಮವು ಚಂಡಿಕಾಮಾತೆಗೆ ಮನುಷ್ಯಮಾಂಸವನ್ನು ಅರ್ಪಿಸುವುದಾಗಿದ್ದು. ಅದರ ನಾಯಕನ ಭುಜವು ಕಠಿಣವಾಗಿದ್ದು ಅವು ಹರಿತವಾದ ಆಯುಧಗಳಿಂದ ಆಗಾಗ್ಗೆ ಚಂಡಿಕೆಗೆ ರಕ್ತವನ್ನು ಅರ್ಪಿಸಲು ಮಾಡಿದ ಗಾಯಗಳಿಂದ ಕೂಡಿದ್ದವಂತೆ. 'ಕಾದಂಬರಿ'ಯ ಇನ್ನೊಂದೆಡೆಯಲ್ಲಿ ಉಜ್ಜಯಿನಿಯ ರಾಣಿ ವಿಲಾಸವತಿಯು ಪುತ್ರಭಾಗ್ಯಕ್ಕಾಗಿ ನಾಲ್ಕೂರಸ್ತೆಗಳು ಸೇರುವೆಡೆಯಲ್ಲಿ ಮಾಡಿದ ಹಲವು ಧಾರ್ಮಿಕ ಹಾಗೂ ಭೂತದಯೆಯ ಕ್ರಿಯೆಗಳನ್ನು ಬಾಣನು ವರ್ಣಿಸಿರುವನು. 'ಹರ್ಷಚರಿತ'ದಲ್ಲಿ ಹರ್ಷನ ತಂದೆ ಮರಣಾಂತಿಕಸ್ಥಿತಿಯಲ್ಲಿದ್ದಾಗ ಅವನ ಮರಣವನ್ನು ತಪ್ಪಿಸಲು ರಾಜಧಾನಿಯ ಪ್ರಜೆಗಳು ಹಲವಾರು ವ್ರತಗಳನ್ನು ಕೈಗೊಂಡುದಾಗಿ ಹೇಳಲಾಗಿದೆ :

"ಹರೆಯದ ರಾಜಪುತ್ರರು ಮಾತೃಕೆಗಳ ತೃಪ್ತ್ಯರ್ಥವಾಗಿ ದೀಪಗಳಿಂದ ತಮ್ಮನ್ನು ತಾವೇ ಸುಟ್ಟುಕೊಳ್ಳುತ್ತಿದ್ದರು : ದ್ರಾವಿಡನೊಬ್ಬನು ವೇತಾಳನನ್ನು ಪ್ರಾರ್ಥಿಸಲು ಸನ್ನದ್ಧನಾಗಿ ಕಪಾಲವೊಂದಕ್ಕೆ ಅರ್ಪಿಸುತ್ತಿದ್ದನು ; ಇನ್ನೊಂದೆಡೆ ಆಂಧ್ರದವನೊಬ್ಬನು ಚಂಡಿಕೆಯನ್ನು ಒಲಿಸಲು ತನ್ನ ತೋಳುಗಳನ್ನು ಕೋಲಿಯಂತೆ ಮೇಲೆತ್ತಿದ್ದನು. ಮತ್ತೊಂದೆಡೆಯಲ್ಲಿ ಯುವಕರಾದ ಸೇವಕರು ಮಹಾಕಾಳನನ್ನು ಸಂತೈಸಲು ತಮ್ಮ ಶಿರದಮೇಲೆ ಕರಗುವ ಗುಗ್ಗುಳವನ್ನು ಹೊತ್ತಿದ್ದರು ; ಬೇರೊಂದೆಡೆಯಲ್ಲಿ ಸಂಬಂಧಿಗಳ ಗುಂಪೊಂದು ತಮ್ಮ ದೇಹದ ಮಾಂಸವನ್ನು ಬಲಿರೂಪದ ಕಾಣಿಕೆಯಾಗಿ ಸಮರ್ಪಿಸಲು ಉಗ್ರವೂ ಹರಿತವೂ ಆದ ಕತ್ತಿಯನ್ನು ಹಿಡಿದು ನಿಂತಿದ್ದರು. ಯುವ ಸ್ತುತಿಪಾಠಕರು ಮನುಷ್ಯಮಾಂಸದ ಮಾರಾಟಕ್ಕಾಗಿ ಜೋರಾಗಿ ಪ್ರಾರ್ಥನೆ ಸಲ್ಲಿಸುತ್ತಿದ್ದರು.

---

20 ಅದೇ, ಪ. 16

ಸ್ಮಶಾನದ ಪಿಶಾಚಿಗಳಿಗೆಂದು ಮನುಷ್ಯಮಾಂಸದ ಮಾರಾಟವಾಗುತ್ತಿದ್ದುದನ್ನು ಭವಭೂತಿಯ 'ಮಾಲತೀಮಾಧವ', 'ಕಥಾಸರಿತ್ಸಾಗರ' ಹಾಗೂ ಇತರ ಸಂಸ್ಕೃತ ಕೃತಿಗಳಲ್ಲಿ ಹೇಳಲಾಗಿದೆ. ಸೋಮದೇವನ (ಕ್ರಿ. ಶ. 959) 'ಯಶಸ್ತಿಲಕ'ದಲ್ಲಿ ಮಹಾವ್ರತಿ ವೀರರು ಮನುಷ್ಯಮಾಂಸದ ಮಾರಾಟಕ್ಕಾಗಿ ತಮ್ಮ ದೇಹವನ್ನೇ ಕತ್ತರಿಸಿ ಕೊಡುತ್ತಿದ್ದುದನ್ನು ಹೇಳಲಾಗಿದೆ. 'ಮಹಾವ್ರತಿ' ಎಂಬ ಪದದ ಬಳಕೆಯು ಸಾಮಾನ್ಯವಾಗಿ ಕಾಪಾಲಿಕರನ್ನು ಕುರಿತೇ ಬಳಸಲಾಗಿದೆ ಎಂದು ಲೋರೆಂಜನ್ ಹೇಳುವರು.[21] ಮೇಲಿನ ಉಲ್ಲೇಖದಲ್ಲಿ ದ್ರಾವಿಡನೊಬ್ಬನು ವೇತಾಳನಿಗೆ ಕಪಾಲವೊಂದನ್ನು ಸಮರ್ಪಿಸುತ್ತಿರುವುದು ಕಾಪಾಲಿಕನನ್ನೇ ಸೂಚಿಸುತ್ತಿರಬೇಕು. ಇಲ್ಲವೇ ಅವನನ್ನು ಹೆಚ್ಚು ಹೋಲುವ ಸನ್ಯಾಸಿಯನ್ನು ಸೂಚಿಸುತ್ತಿರಬೇಕು ಎಂದು ಲೋರೆಂಜನ್ ಅಭಿಪ್ರಾಯಪಡುವರು.[22]

'ವಾಮನಪುರಾಣ'ದಲ್ಲಿ ಹೇಳಲಾಗಿರುವ ಮಹಾಪಾಶುಪತರ ಬಗೆಗೆ ಲೋರೆಂಜನ್ ಪ್ರಸ್ತಾಪಿಸುತ್ತಾ ಮಹಾಪಾಶುಪತರು ಸಾಧಾರಣ ಪಾಶುಪತರಿಗಿಂತ ಸ್ವಲ್ಪ ಮಟ್ಟಿಗಾದರೂ ಭಿನ್ನರಿರುವರೆನ್ನುವರು. ಹಂಡಿಕ್ವಿರವರು ಮಹಾಪಾಶುಪತರ ಉಲ್ಲೇಖವನ್ನು ಉದಯನ (10ನೇ ಶ. ನದ ಕೊನೆ). ವರದರಾಜ (11ನೇ ಶ. ನ) ಹಾಗೂ ಶಂಕರಮಿಶ್ರ (ಸು. 1600) ಇವರುಗಳು ಮಾಡಿದ್ದು, ಇವರೆಲ್ಲರೂ ಮಹಾವ್ರತವನ್ನು ಪಾಲಿಸುತ್ತಿದ್ದ ಪಾಶುಪತರೆಂದು ಗುರುತಿಸಿರುವರು. ಮಹೇಂದ್ರವರ್ಮನ 'ಮತ್ತವಿಲಾಸ'ವು ಕಾಪಾಲಿಕನೊಬ್ಬನನ್ನು ಮಹಾಪಾಶುಪತನೆಂದು ಸಂಬೋಧಿಸಿದಂತೆ ತೋರುತ್ತದೆ. ಕ್ರಿ. ಶ. 1148 ಮತ್ತು 1219-20ರ ಬೆಳಗಾಂ ಜಿಲ್ಲೆಯ ಎರಡು ಕನ್ನಡ ಶಾಸನಗಳಲ್ಲಿ ಕಂಡುಬಂದ ಪದ್ಯವೊಂದರಲ್ಲಿ ಕಾಲಾಮುಖರನ್ನು ಮಹಾಪಾಶುಪತ ಹಾಗೂ ಮಹಾವ್ರತಿಗಳೆಂದು ಗುರುತಿಸಿದಂತೆ ತೋರುವುದು. ಬೇರೆ ಹಲವು ಶಾಸನಗಳಲ್ಲೂ ಕಾಳಾಮುಖ ಗುರುಗಳನ್ನು ಮಹಾವ್ರತಿಗಳೆಂದು ಕರೆಯಲಾಗಿದೆ. ಸಾಮಾನ್ಯವಾಗಿ ಮಹಾವ್ರತಿ ಎಂಬ ಹೆಸರಿನ ಬಳಕೆಯು ಕಾಪಾಲಿಕರಿಗೆ ಕೊಡಲಾಗಿದೆಯಾದರೂ ಕಾಲಾಮುಖ ಹಾಗೂ ಕಾಪಾಲಿಕರ ಮಹಾವ್ರತಗಳ ಸಂಪೂರ್ಣವಾಗಿ ಭಿನ್ನಪ್ರತಿಜ್ಞೆಗಳೇ ಆಗಿವೆ. ಕಾಲಾಮುಖರು ಸಾಮಾನ್ಯ ಪಾಶುಪತರಿಗೆ ಹೆಚ್ಚು ಸಮೀಪಸ್ಥರಾಗಿರುವುದರಿಂದ ಮಹಾಪಾಶುಪತರೊಂದಿಗೆ ಕಾಪಾಲಿಕ ಇಲ್ಲವೇ ಪಾಶುಪತರನ್ನು ಹೊಂದಿಸುವುದಕ್ಕಿಂತ ಕಾಳಾಮುಖರನ್ನು ಹೊಂದಿಸುವುದು ಹೆಚ್ಚು ಸಮಂಜಸನೆಂದು ಲೋರೆಂಜನ್ ಅಭಿಪ್ರಾಯಪಡುವರು.[23]

---

21. ಅದೇ, ಪು. 17
22. ಅದೇ, ಪು. 17
23. ಅದೇ, ಪು. 19

ಲೋರೆಂಜನ್ ಕಾಪಾಲಿಕರ ಬಗೆಗಿನ ಶಾಸನಾಧಾರಗಳು ಬಹಳ ಕಡಿಮೆ ಎನ್ನುವರು.[24] ಅವರ ಪ್ರಕಾರ ಎರಡೇ ಎರಡು ಶಾಸನಗಳು ಮಹಾವ್ರತಿ ಸನ್ಯಾಸಿಗಳ ಪತ್ತೆಹಚ್ಚಿದನ್ನು ಹೇಳುತ್ತವೆ. ಇವರು ಬೇರಾರೂ ಆಗಿರದೆ ಕಾಪಾಲಿಕರೇ ಆಗಿರುವರು. ಕಾಪಾಲಿಕ ಪದದ ಬಳಕೆಯಾಗಿರುವ ಮೂರು ಶಾಸನಗಳು ಕರ್ನಾಟಕ ರಾಜ್ಯದ ದಕ್ಷಿಣಭಾಗದಲ್ಲಿ ದೊರೆತಿವೆ. ಇವುಗಳಲ್ಲಿ ಎರಡು ಶ್ರವಣಬೆಳಗೊಳದ್ದು, ಒಂದು ತಿರುಮಕೂಡಲು ನರಸೀಪುರ ತಾಲ್ಲೂಕಿನದ್ದು. ಮೊತ್ತಮೊದಲನೆಯದು ಪಶ್ಚಿಮ ಗಂಗರಸ ಮೂರನೇ ಮಾರಸಿಂಹನು (ಕ್ರಿ. ಶ. 960-974) ಸಲ್ಲೇಖನ ವ್ರತವನ್ನು ಸ್ವೀಕರಿಸಿದುದನ್ನು ಹೇಳುತ್ತದೆ. ಈ ಶಾಸನ ಸಂಸ್ಕೃತ ಹಾಗೂ ಹಳಗನ್ನಡದಲ್ಲಿದೆ. ಈ ಶಾಸನದ ಕರ್ತೃ ಮಾರಸಿಂಹನನ್ನು ಕಾಪಾಲಿಕರ ಒಡೆಯನಾದ ಶಿವನಿಗೆ ಹೋಲಿಸುವನು. ಉಳಿದ ಎರಡು ಶಾಸನಗಳು ಸಂಸ್ಕೃತದಲ್ಲಿದ್ದು 12ನೇ ಶ. ಕ್ಕೆ ಸೇರಿವೆ. ಶ್ರವಣಬೆಳಗೊಳ ಶಾಸನವು ಜೈನಗುರು ಮಲ್ಲಿಸೇನ ಮಲಧಾರಿದೇವನು ಕ್ರಿ. ಶ. 1129ರಲ್ಲಿ ಸಲ್ಲೇಖನವ್ರತ ಸ್ವೀಕರಿಸಿ ಮರಣಹೊಂದಿದುದನ್ನು ಸ್ಮರಿಸುತ್ತದೆ. ತಿರುಮಕೂಡಲು ನರಸೀಪುರ ತಾಲ್ಲೂಕು ಶಾಸನವು ಕ್ರಿ. ಶ. 1183ರಲ್ಲಿ ಚಂದ್ರಪ್ರಭಮುನಿಯು ಸಲ್ಲೇಖನ ವ್ರತವನ್ನು ಸ್ವೀಕರಿಸಿ ಮರಣಹೊಂದಿದುದನ್ನು ಸ್ಮರಿಸುತ್ತದೆ. ಮೇಲಿನ ಮೂರೂ ಶಾಸನಗಳು ಕಾಪಾಲಿಕರು 9-10ನೇ ಶತಮಾನಗಳಲ್ಲಿ ಕರ್ನಾಟಕದ ದಕ್ಷಿಣಭಾಗದಲ್ಲಿದ್ದುದನ್ನು ಸೂಚಿಸುತ್ತವೆ. ಏಳನೇ ಶತಮಾನದ ಆದಿಭಾಗದಲ್ಲಿ ದಕ್ಷಿಣಭಾರತದಲ್ಲಿ ಕಾಪಾಲಿಕರು ಇದ್ದರೆಂಬುದು ಪಲ್ಲವ ಅರಸು ಮಹೇಂದ್ರವರ್ಮನ 'ಮತ್ತವಿಲಾಸ' ನಾಟಕದಿಂದ ತಿಳಿದುಬರುತ್ತದೆ. ಡಾ। ಎಂ. ಚಿದಾನಂದಮೂರ್ತಿಯವರು ಹೇಳುವಂತೆ "ಕಾಲವು ಖಚಿತವಾಗಿ ತಿಳಿದುಬಂದ ಶಾಸನವೊಂದರಲ್ಲಿ 'ಕಾವಾಳಿಗ ಭಟಾರ' ಎಂಬ ಒಬ್ಬರು ಭೂಮಿಯನ್ನು ದಾನವಾಗಿ ಪಡೆದ ವಿಷಯ ಬಂದಿದೆ. ಇದನ್ನು ಸಂಸ್ಕೃತಕ್ಕೆ ತಿರುಗಿಸಿದರೆ 'ಕಾಪಾಲಿಕ ಭಟ್ಟಾರಕ' ಎಂದಾಗುತ್ತದೆ. ಬಹುಶಃ ಈತ ಒಬ್ಬ ಕಾಪಾಲಿಕ ಗುರುವಾಗಿರಬಹುದು. ಸಾಂತರರ ವಂಶದಲ್ಲಿ ಬಹು ಹಿಂದೆ ಸಹಕಾರ ಎಂಬುವನು ನರಮಾಂಸದಲ್ಲಿ ಆಸಕ್ತನಾದಾಗ ಆದಕ್ಕೆ ಹೇಸಿ ಅವನ ಮಗ ಜಿನ್ನದತ್ತ ದಕ್ಷಿಣಕ್ಕೆ ಬಂದು ಪದ್ಮಾವತೀದೇವಿಯ ಕೃಪೆಯಿಂದ ಪೊಂಬುಜ್ಜ (ಈಗಿನ ಹುಂಚ)ದಲ್ಲಿ ನೆಲಸಿದಂತೆ ಒಂದು ಶಾಸನ ಹೇಳುತ್ತದೆ. ಈ ಸಹಕಾರ ಎಲ್ಲಿಯವನು, ಯಾವ ಕಾಲದವನು, ಕಾಪಾಲಿಕರ (ಅಥವಾ ಕೌಲರ) ಪ್ರಭಾವ ಅವನ ಮೇಲೆ ಬಿದ್ದಿತ್ತೇ ಎಂಬ ವಿಷಯಗಳು ಪ್ರಶ್ನೆಯಾಗಿಯೇ ಉಳಿಯುತ್ತವೆ. ಶ್ರವಣಬೆಳಗೊಳದ ಶಾಸನವೊಂದರಲ್ಲಿ ಕಾಪಾಲಿಕರು ಹಸಿಯ ತಲೆಗಳನ್ನು ಪೋಣಿಸಿ ಮಾಲೆ ಮಾಡಿಕೊಳ್ಳುತ್ತಿದ್ದ ವಿಷಯವಿದೆ. ಕ್ರಿ. ಶ. 1148ರ

24. ಅದೇ, ಪು. 24-27

ಶಾಸನದಲ್ಲಿ (ಮಹಾಬ್ರತಿ'ಗಳ (ಕಾಪಾಲಿಕ) ಪ್ರಸ್ತಾಪವಿದೆ. 13ನೇ ಶತಮಾನದ ಶಾಸನವೊಂದರಲ್ಲಿ (SII. XV. No. 643) "ಶ್ರೀ ಕಪಾಳೇಶ್ವರಕೆಯ" ಎಂದಿರುವುದು, ಕಾಪಾಲಿಕರ ದೇವಾಲಯವೊಂದನ್ನು ಸೂಚಿಸುವಂತೆ ಕಾಣುತ್ತದೆ.[25]

ಕಾಪಾಲಿಕರ ಬಗೆಗೆ ಹಲವು ಅತ್ಯಂತ ಅಮೂಲ್ಯ ವಿಷಯಗಳು ಶಂಕರಾಚಾರ್ಯರ ಜೀವನಚರಿತ್ರೆಯನ್ನು ನಿರೂಪಿಸುವ ಪೌರಾಣಿಕ ಕೃತಿಗಳಲ್ಲಿ ಕಂಡುಬರುತ್ತವೆ. ಆನಂದಗಿರಿಯ 'ಶಂಕರ ವಿಜಯ', ಮಾಧವಾಚಾರ್ಯ (ಅ) ವಿದ್ಯಾರಣ್ಯರ 'ಶಂಕರ ದಿಗ್ವಿಜಯ', ಆನಂದಗಿರಿಯ 'ಶಂಕರವಿಜಯ'ಕ್ಕೆ ಧನಪತಿಸೂರಿಯು ಬರೆದಿರುವ ಟೀಕಾಗ್ರಂಥ 'ಡಿಂಡಿಮ', ಕಾನಫಟಾ ಕೃತಿಯಾದ 'ಗೋರಕ್ಷ ಸಿದ್ಧಾಂತ ಸಂಗ್ರಹ' ಇವು ಮೇಲೆ ತಿಳಿಸಿದ ಮುಖ್ಯವಾದ ಪೌರಾಣಿಕ ಕೃತಿಗಳಾಗಿವೆ. ಈಚಿನ ವಿದ್ವಾಂಸರು ಅಭಿಪ್ರಾಯಪಡುವಂತೆ 'ಶಂಕರ ವಿಜಯ'ದ ಕರ್ತೃ ಶಂಕರರ ಶಿಷ್ಯ ಆನಂದಗಿರಿಯಲ್ಲ 15ನೇ ಶತಮಾನದ ಬೇರೆಯವನಾಗಿರುವನು. ಅನೇಕ ವಿದ್ವಾಂಸರು ಭಾವಿಸುವಂತೆ 'ಶಂಕರ ದಿಗ್ವಿಜಯ'ದ ಕರ್ತೃ ಮಾಧವಾಚಾರ್ಯನಾಗಿರದೆ, ತೀರ ಈಚಿನ ಲೇಖಕನೊಬ್ಬನು ಅವನ ಹೆಸರಿನಲ್ಲಿ ಕೃತಿರಚನೆ ಮಾಡಿರುವನು. ಡಿಂಡಿಮನ ಟೀಕೆಯು ಇವೆಲ್ಲದಕ್ಕಿಂತ ಈಚಿನದು. ಗೋರಕ್ಷ ಸಿದ್ಧಾಂತ ಸಂಗ್ರಹವೂ ಸುಮಾರು ಮಧ್ಯಕಾಲಕ್ಕೆ ಸೇರಿದುದು.[26]

ಆನಂದಗಿರಿಯ 'ಶಂಕರ ವಿಜಯ'ದಲ್ಲಿ ಕಾಪಾಲಿಕರ ಗುರುವಾದ ಉನ್ಮತ್ತ ಭೈರವನ ಪ್ರಸ್ತಾಪ ಬಂದಿದೆ. ಕಾಪಾಲಿಕನಾದ ಉನ್ಮತ್ತ ಭೈರವನು ಶೂದ್ರಜಾತಿಯವನೆಂದೂ, ಅವನ ಶರೀರವು ಚಿತಾಭಸ್ಮದಿಂದ ಉದ್ಧೂಳಿತವಾಗಿದ್ದಿತೆಂದೂ, ಅವನ ಕೊರಳು ಮನುಷ್ಯ ಕಪಾಲಗಳ ಮಾಲೆಯನ್ನು ಹೊಂದಿದ್ದಿತೆಂದೂ, ಅವನ ಹಣೆಯ ಮೇಲೆ ಸಮಾನಾಂತರವಾಗಿ ಮೂರು ಕಪ್ಪು ಗೆರೆಗಳಿದ್ದುವೆಂದೂ, ಅವನ ಕೂದಲು ಎತ್ತಿ ಕಟ್ಟಲ್ಪಟ್ಟು ಗಂಟುಹಾಕಲಾಗಿದ್ದಿತೆಂದೂ, ಅವನ ಸೊಂಟಪಟ್ಟಿ ಹಾಗೂ ವಸ್ತ್ರವು ಹುಲಿಯ ಚರ್ಮದ್ದಾಗಿದ್ದಿತೆಂದೂ, ಅವನ ಎಡಗೈಯಲ್ಲಿ ಕಪಾಲಪಾತ್ರೆಯೂ ಬಲಗೈಯಲ್ಲಿ ಜೋರಾಗಿ ಧ್ವನಿಗೈವ ಗಂಟೆಯೂ ಇದ್ದಿತೆಂದೂ, ಅವನು ಮೇಲಿಂದ ಮೇಲೆ 'ಓ ಶಂಭು ಭೈರವಾ ! ಅಹೋ ಕಾಳೀಶಾ !' ಎಂದು ಜಪಿಸುತ್ತಿದ್ದನೆಂದೂ ಆನಂದಗಿರಿಯು ವರ್ಣಿಸುವನು. ಧನಪತಿಸೂರಿಯ ಪ್ರಕಾರ, ಲೈಂಗಿಕ ಸಮಾಗಮದಿಂದಾಗುವ ಆನಂದದ ನೈಜಸ್ವರೂಪವೇ ಭೈರವನು, ಮೃತ್ಯುಮುಖದಲ್ಲಿ ಆ ಆನಂದವನ್ನು ಪಡೆಯುವುದೇ ಮೋಕ್ಷವಾಗಿದೆ.

---

25. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ (1979) ಪು. 155

26. ವಿವರಗಳಿಗೆ ನೋಡಿ : ಡೇವಿಡ್ ಎನ್. ಲೊರೆಂಜನ್, ದ ಕಾಪಾಲಿಕಾಸ್ ಅಂಡ್ ಕಾಲಾಮುಖಾಸ್, ಪು. 31-48

ದುಷ್ಟ ಕಾಪಾಲಿಕ ಸನ್ಯಾಸಿಗಳು ಅನೇಕ ಸಂಸ್ಕೃತ ನಾಟಕಗಳಲ್ಲಿ ಹಾಗೂ ಕಥೆಗಳಲ್ಲಿ ಬಂದಿರುವರು. ಪಲ್ಲವ ಅರಸು ಮಹೇಂದ್ರವರ್ಮನ (ಕ್ರಿ. ಶ. ಸು. 600-630) 'ಮತ್ತವಿಲಾಸ' ಭವಭೂತಿಯ (ಸು. 725) 'ಮಾಲತೀ-ಮಾಧವ' ಕ್ಷೇಮೀಶ್ವರನ (ಸು. 900-950) 'ಚಂಡಕೌಶಿಕ' ಕೃಷ್ಣಮಿಶ್ರನ (ಸು. 1050-1100) 'ಪ್ರಬೋಧ ಚಂದ್ರೋದಯ' ಕವಿರಾಜ ರಂಗಧರನ (ಸು. 1100-1150) 'ಲಟಕಮೇಲಕ' ರಾಮಚಂದ್ರನ (ಸು. 1143-1175) 'ಕೌಮುದೀಮಿತ್ರಾನಂದ' ಹಾಗೂ 'ನಳವಿಲಾಸ' ಯಶಃಪಾಲನ (ಸು. 1175) 'ಮೋಹರಾಜ ಪರಾಜಯ'—ಇವು ಕಾಪಾಲಿಕ ಸನ್ಯಾಸಿಗಳನ್ನು ಉಲ್ಲೇಖಿಸಿರುವ ನಾಟಕಗಳು. ಈ ಸನ್ಯಾಸಿಗಳ ಉಲ್ಲೇಖ ಇತ್ತೀಚಿನ ಕೃತಿಗಳಾದ ಗೋಕುಲನಾಥನ (ಕ್ರಿ. ಶ. 1693) 'ಅಮೃತೋದಯ' ಹಾಗೂ ಆನಂದರಾಯ ಮಖಿನ (ಸು. 1700)ದೆಂದು ಹೇಳಲಾಗುವ 'ವಿದ್ಯಾಪರಿಣಯನ'ಗಳಲ್ಲೂ ಬಂದಿದೆ.[27] ಬಹುತೇಕ ನಾಟಕಕಾರರು ಕಾಪಾಲಿಕರ ಬಗೆಗೆ ನಿಷ್ಕರುಣೆಗಳಾಗಿರುವರು.[28] ಈ ಎಲ್ಲ ನಾಟಕಕಾರರು ಕಾಪಾಲಿಕ ಪಂಥದವರ ಉನ್ಮತ್ತ ಹಾಗೂ ವಿಸ್ಮೃತಿ ಲಕ್ಷಣಗಳ ಬಗೆಗೆ ತಮ್ಮ ತಾತ್ಪರ್ಯವನ್ನು ವ್ಯಕ್ತಪಡಿಸಿರುವರು.[29] ಈ ನಾಟಕಗಳಲ್ಲಿ ಮತ್ತವಿಲಾಸ, ಮಾಲತೀ-ಮಾಧವ, ಚಂಡಕೌಶಿಕ ಹಾಗೂ ಪ್ರಬೋಧ ಚಂದ್ರೋದಯ—ಇವುಗಳಲ್ಲಿ ಮಾತ್ರ ಕಾಪಾಲಿಕರಿಗೆ ಪ್ರಧಾನ ಪಾತ್ರಗಳಿವೆ. ನಾಟಕಗಳಿಂದ ತಿಳಿದುಬರುವ ಸಂಗತಿಗಳ ಆಧಾರದಿಂದ ಕಾಪಾಲಿಕರು 8ನೇ ಶತಮಾನಕ್ಕಿಂತ ಮುನ್ನವೇ ದಕ್ಷಿಣಭಾರತದಲ್ಲಿದ್ದರೆಂದು ಹೇಳಬಹುದು. ಮುಖ್ಯವಾಗಿ ಕಂಚಿ, ಮೈಸೂರಿನ ಭಾಗಗಳು, ಪಶ್ಚಿಮ ಹಾಗೂ ಮಧ್ಯ ಮಹಾರಾಷ್ಟ್ರ, ಉಜ್ಜೈನಿ, ಮಧ್ಯಪ್ರದೇಶದ ಗ್ವಾಲಿಯರ್, ಆಂಧ್ರಪ್ರದೇಶದ ಕರ್ನೂಲ್—ಇವುಗಳೊಡನೆ ಕಾಪಾಲಿಕರಿಗೆ ಸಂಬಂಧವಿದ್ದಿತು.[30]

ಕಾಪಾಲಿಕ ಪಂಥದ ಮೂಲಸೂತ್ರವು ತನಿಯಾದ ದೈವಕ್ಕೆ ತನಿಯಾದ ಶ್ರದ್ಧಾಭಕ್ತಿಯಲ್ಲಿದೆ. ಕಾಪಾಲಿಕರ ದೈವವು ಸಾಮಾನ್ಯವಾಗಿ ಶಿವನೆಂದು ಪರಿಗಣಿಸಲ್ಪಟ್ಟದ್ದರೂ ಅವನು ಉಗ್ರಭೈರವನ ಸ್ವರೂಪದಲ್ಲಿರುವನು. ಇವರ ಆಚರಣಾವಿಧಿಗಳ ಗುರಿಯು ಪೂಜ್ಯ ಹಾಗೂ ಪೂಜಕರ ಅನುಭಾವಿಕ ಮಿಲನವಾಗಿದೆ. ಲೋರೆಂಜನ್‌ರವರು ಹೇಳುವಂತೆ ಈ ಮಿಲನ ಫಲವು ಎರಡು ಬಗೆಯದಾಗಿದೆ. 1. ಭಕ್ತನು ಅತಿ

27, ಅದೇ, ಪು. 48-62

28. ಅದೇ, ಪು. 49

29. ಅದೇ, ಪು. 50

30. ಅದೇ, ಪು. 52

ಮಾನುಷವಾದ ಅದ್ಭುತ ಶಕ್ತಿಗಳನ್ನೂ ಸಿದ್ಧಿಯನ್ನೂ ಪಡೆಯುವನು. 2. ಭಕ್ತನು ಮುಕ್ತಿಯನ್ನು ಹೊಂದಿ ಅಲೌಕಿಕ ಆನಂದದಲ್ಲಿ ಲೀನನಾಗುವನು.[31] ಕಾಪಾಲಿಕರು ತಾಂತ್ರಿಕ ಶೈವಪಂಥೀಯರಾದುದರಿಂದ ಮಧು, ಮಾಂಸ, ಮೀನು, ಮುದ್ರಾ ಹಾಗೂ ಮೈಥುನಗಳೆಂಬ ಪಂಚ 'ಮ'ಕಾರಗಳೊಡನೆ ಸಂಬಂಧ ಹೊಂದಿರುವರು. ಮೊದಲ ನಾಲ್ಕು ಉತ್ತೇಜಕಗಳಾಗಿದ್ದು ಕೊನೆಯದಾದ ಮೈಥುನಕ್ಕೆ ಅವರನ್ನು ಇವು ಅಣಿಗೊಳಿಸುತ್ತವೆ. 'ಕುಲಾರ್ಣವ ತಂತ್ರ'ವು (V. 79-80) ಮಧ್ಯವು ಶಕ್ತಿಯೆಂದೂ ಮಾಂಸವು ಶಿವನೆಂದೂ ಇವುಗಳನ್ನು ಅನುಭೋಗಿಸುವವನು ಸ್ವತಃ ಭೈರವನೇ ಆಗಿರುವನೆಂದೂ ಈ ಎರಡರ ಸಂಯೋಗದಿಂದ ಉದ್ಭವವಾಗುವ ಪರಮಾನಂದವೇ ಮೋಕ್ಷವೆಂದೂ ಹೇಳುತ್ತದೆ.[32] ತಾಂತ್ರಿಕ ಪಂಥಗಳಲ್ಲಿ ಬಹಳಷ್ಟು ಹಠಯೋಗಕ್ಕೆ ಪ್ರಾಧಾನ್ಯ ಕೊಟ್ಟಿದ್ದು ಕಾಪಾಲಿಕರು ಅದಕ್ಕೆ ಹೊರತಾಗಿರುವಂತೆ ತೋರಿಬರುವುದಿಲ್ಲ. ಕಾಪಾಲಿಕರು ಮಾಯ, ಮಂತ್ರ ಹಾಗೂ ಸಿದ್ಧಿಗಳ ಸಂಪಾದನೆಯಲ್ಲಿ ತಲ್ಲೀನರಾದಂತೆ ಕಂಡುಬರುತ್ತದೆ. ಅಷ್ಟಮಹಾಸಿದ್ಧಿಗಳನ್ನು (ಅಣಿಮಾನ್, ಲಘಿಮಾನ್, ಗರಿಮಾನ್, ಮಹಿಮಾನ್, ಈಶಿತ್ವ, ಪ್ರಾಕಾಮ್ಯ, ವಾಶಿತ್ವ, ಕಾಮಾವಸಾಯಿತ್ವ) ಪಡೆಯುವುದು ಅವನ ಸಾಧನೆಯ ಪ್ರಧಾನಗುರಿಗಳಲ್ಲಿ ಒಂದಾಗಿದೆ.

ಕರ್ನಾಟಕದಲ್ಲಿ ಹನ್ನೆರಡನೆ ಶತಮಾನಕ್ಕೆ ಹಿಂದೆಯೇ ಕಾಪಾಲಿಕರು ಇದ್ದಿರಬಹುದು. ಕಾಪಾಲಿಕರು ಶೈವಶಾಖೆಗೆ ಸೇರಿದವರಾದರೂ ಅವರ ಉಗ್ರ ಖಂಡನೆ ಹನ್ನೆರಡನೆ ಶತಮಾನದ ವಚನಕಾರರಿಂದ ಆಗಿದೆ. ಅವರ ವಾಮಮಾರ್ಗೀಯ ಆಚರಣೆಗಳು, ಬೀಭತ್ಸ ವರ್ತನೆಗಳು ವಚನಕಾರರು ಅವರನ್ನು ಉಗ್ರವಾಗಿ ಟೀಕಿಸಲು ಕಾರಣಗಳಾಗಿರಬೇಕು. ಅಲ್ಲಮಪ್ರಭುವು ಕಾಪಾಲಿಕರ ಭೈರವನನ್ನು ಭಯಂಕರ ಸ್ವರೂಪಿಯಾದ ಶಿವನೆಂದು ಕರೆಯುವವರನ್ನು ಶಿವದ್ರೋಹಿಗಳು, ಗುರುದ್ರೋಹಿಗಳು ಎಂದಿರುವನು.[33] ನವನಾಥಸಿದ್ಧರ (ಸತ್ಯನಾಥ, ಸತೋಕನಾಥ, ಆದಿನಾಥ, ಅನಾದಿನಾಥ, ಅಕುಳಿತನಾಥ, ಮಾತಂಗನಾಥ, ಮಚ್ಛೇಂದ್ರನಾಥ, ಘಟಯಂತ್ರನಾಥ ಮತ್ತು ಘೋರಕ್ಷ) ಮತೋಕ್ತವೆಂದು ಹೇಳಿ ಮಲಮೂತ್ರಗಳನ್ನು ಸೇವಿಸುತ್ತಾ, ವಾತಪಿತ್ತಶ್ಲೇಷ್ಮಗಳನ್ನು ತೆಗೆದು ಅಮೃತವೆಂದು ತೋರಿಸುತ್ತಾ, ಹಣ್ಣಿನ ರಸ, ಹಾಲುಗಳನ್ನು ಸೇವಿಸಿ ಅನ್ನವನ್ನು ಮಾತ್ರ ಬಿಟ್ಟಿದ್ದೇವೆ ಎಂದು ಹೇಳಿ

---

31. ಅದೇ, ಪು. 83

32. ಅದೇ, ಪು. 89

33. ಅಲ್ಲಮಪ್ರಭುದೇವರ ವಚನಗಳು : (ಸಂ.) ಡಾ. ಆರ್. ಸಿ. ಹಿರೇಮಠ, ಡಾ. ಎಂ. ಎಸ್. ಸುಂಕಾಪುರ (1976). ಪ. 1028

ಕೊಲ್ಲುತ್ತಾ ಜನರನ್ನು ವಂಚಿಸುತ್ತಿದ್ದುದನ್ನು ಅಲ್ಲಮ ತನ್ನ ವಚನವೊಂದರಲ್ಲಿ[34] ಪ್ರಸ್ತಾಪಿಸಿರುವನು. ಹಠಯೋಗ ಸಾಧನೆಯಲ್ಲಿ, ವಜ್ರೋಳಿಯೋಗದಲ್ಲಿ ಅತೀವ ಆಸಕ್ತರಾದ ಕಾಪಾಲಿಕರನ್ನು ಅಲ್ಲಮ ಟೀಕಿಸುವನು. ಕಾಪಾಲಿಕರ ಆಚರಣೆಗಳೆಲ್ಲವೂ ಅಲ್ಲಮನ ಪ್ರಕಾರ 'ಕಾಕು, ಸಟೆ, ಭ್ರಾಂತು'.[35] ಷಡ್ದರ್ಶನಗಳಲ್ಲಿ ಅನಾಚಾರವನ್ನು ನಡೆಯುತ್ತಿದ್ದು, ಸುರೆಯನ್ನು ಕುಡಿಯುವವರೂ ಮಾಂಸವನ್ನು ತಿನ್ನುವವರೂ ಆಗಿದ್ದರು. ಇವರ ಅನಾಚಾರವನ್ನು ಖಂಡಿಸಲೆಂದೇ ತಾನು ಗುರುವಾದುದಾಗಿ ಅಲ್ಲಮ ತನ್ನ ವಚನವೊಂದರಲ್ಲಿ ಹೇಳಿರುವನು.[36] ನವನಾಥ ಸಿದ್ಧರಲ್ಲಿ ಒಬ್ಬನಾದ ಘೋರಕ್ಷನು ಅಲ್ಲಮನನ್ನು ಶ್ರೀಶೈಲದಲ್ಲಿ ಸಂಧಿಸಿ ತನ್ನ ವಜ್ರಕಾಯದ ಹಿರಿಮೆಯನ್ನು ಪ್ರದರ್ಶಿಸಿ ಹಮ್ಮಿನಿಂದಿರಲು, ಅವನ ಕಾಯದ ಮೇಲಿನ ಮೋಹವನ್ನು ಪ್ರಭುವು ಪರಿಹರಿಸಿ ಅವನಿಗೆ, ವೀರಶೈವೋಪದೇಶ ಮಾಡಿದುದಾಗಿ ಚಾಮರಸ 'ಪ್ರಭುಲಿಂಗಲೀಲೆ'ಯಲ್ಲಿ ಹೇಳಿರುವನು. ಚನ್ನಬಸವಣ್ಣನು ಭೈರವನನ್ನು ಆರಾಧಿಸುವವರು ಲಿಂಗವಂತಮತಕ್ಕೆ ಬಾಹಿರರೆಂದು ಹೇಳುವನು.[37] ಅವನೇ ಇನ್ನೊಂದೆಡೆ ಶೈವ, ಪಾಶುಪತಿ, ಕಾಳಾಮುಖಿ, ಮಹಾವ್ರತಿ, ಸನ್ಯಾಸಿ ಹಾಗೂ ಕಾಪಾಲಿ- ಈ ಆರು ಭಕ್ತಿಪಥಕ್ಕೆ ಸಲ್ಲವು. ಎಂದು ಹೇಳುವನು.[38] (ಮಹಾವ್ರತಿ ಹಾಗೂ ಕಾಪಾಲಿಕರನ್ನು ಅವನು ಬೇರೆಯಾಗಿಯೇ ಕರೆದಿರುವುದು ಗಮನೀಯ.) ಹಾಗೆಯೇ, 'ಸುರೆಯ ತೆರೆ, ಮಾಂಸದ ಬಟ್ಟಲು, ಭಂಗಿಯ ಬಣವೆ, ಜಾಯಿಕಾಯಿ ಜಾಯಿಪತ್ರೆಯ ತಿಂಬ ಓರಿಯರ ಓರಿಯ ಹರಿಕಾಜಿರ ಜಂಗಮವೆಂದಡೆ ನಾಯಕನರಕ ತಪ್ಪದು' ಎಂದು

---

34. ಅದೇ, ವ. 1039

35. ಅದೇ, ವ. 1039

* ಚನ್ನಬಸವಣ್ಣನವರ ಪ್ರಕಾರ ಯೋಗಿ, ಜೋಗಿ, ಶ್ರವಣ, ಸನ್ಯಾಸಿ, ಕಾಳಾಮುಖಿ, ಪಾಶುಪತಿ–ಇವರು ಷಡುದರ್ಶನದ ಶೈವಕರ್ಮಿಗಳು. (ನೋಡಿ : ಚನ್ನಬಸವಣ್ಣನವರ ವಚನಗಳು : (ಸಂ.) ಡಾ। ಆರ್. ಸಿ. ಹಿರೇಮಠ (1965). ವ. 466) ಅರಿವಿನ ಮಾರಿ ತಂದೆಗಳ ಪ್ರಕಾರ ಯೋಗಿ, ಪಾಶುಪತಿ, ಕಾಳಾಮುಖಿಗಳು ಶೈವಪಕ್ಷದವರಾದರೆ ಜೋಗಿ, ತ್ರಿದಂಡಿ, ಬೌದ್ಧರುಗಳು ವಿಷ್ಣುಪಕ್ಷದವರು. (ನೋಡಿ : ಸಕಲ ಪುರಾತನರ ವಚನಗಳು ಸಂಪುಟ ೧ (ಸಂ.) ಡಾ। ಆರ್. ಸಿ. ಹಿರೇಮಠ (1972) ಪು. 169 ವ. 250)

36. ಪೂರ್ವೋಕ್ತ, ವ. 1040

37. ಚನ್ನಬಸವಣ್ಣನವರ ವಚನಗಳು (ಸಂ.) ಡಾ। ಆರ್. ಸಿ. ಹಿರೇಮಠ (1965). ವ. 443

38. ಅದೇ, ವ. 545

ತನ್ನೊಂದು ವಚನದಲ್ಲಿ ಎಚ್ಚರಿಸಿರುವನು. ಪರವಸ್ತುವು ಪರಮ ಲೀಲಾವಿನೋದದಿಂದ ಸಕಲ ಬ್ರಹ್ಮಾಂಡವನ್ನು ಆವರಿಸಿರುವುದು ತಿಳಿಯದೆ ಶೈವರು, ಶಾಕ್ತೇಯರು, ವೈಷ್ಣವರು, ಗಾಣಪತ್ಯರು, ಸೌರರು, ಕಾಪಾಲಿಕರು ಒಂದೊಂದು ಬಗೆಯಾಗಿ ಲಕ್ಷಿಸಿ ಹೆಸರಿಟ್ಟು ನುಡಿವರು ಎಂದು ಹೇಳುವ ಚನ್ನಬಸವಣ್ಣ, ಈ ಆರೂ ಪಂಥದವರ ಯುಕ್ತಿಯನ್ನು ಒಂದೊಂದೇ ಮಾತಿನಲ್ಲಿ ಹೇಳುತ್ತಾ ಅವನ್ನು ಖಂಡಿಸುವನು. ಕಾಪಾಲಿಕರ ‘ಜೋಗ್ಯಸುಮಂ ವಿಶ್ವ ಮಹಾಜೋಗಿ ಜೋಗ್ಯೈವ ಈಶಂ’ ಎಂಬ ಕಾಪಾಲಿಕ ಯುಕ್ತಿಯನ್ನು ಅವನು ಟೀಕಿಸುವನು.[40]

ವಚನಕಾರರು ವಾಮಪಂಥೀಯರಲ್ಲದ ಕಾಳಾಮುಖ, ಪಾಶುಪತರ ನೀತಿ ನಡಾವಳಿಯನ್ನೂ ಟೀಕಿಸಿರುವರು.[41] ಪಾಶುಪತರ ದಿನದಲ್ಲಿ ಮೂರು ವೇಳೆ ಭಸ್ಮಸ್ನಾನ, ಆಹಾ ಆಹಾ ಎಂದು ಕೂಗುವುದು, ಭಗವಂತನ ನಾಮವನ್ನು ಸ್ಮರಿಸುವುದು, ಕುಣಿಯುವುದು, ಹುಡುಕ್ಕಾರ ಎಂಬ ಶಬ್ದವನ್ನು ಮಾಡುವುದು (ನಾಲಗೆಯ ತುದಿಯನ್ನು ತಾಲುವಿಗೆ ಒತ್ತಿ ಹೊರಡಿಸುವ ಧ್ವನಿ), ನಮಸ್ಕರಿಸುವುದು—ಈ ಬಗೆಯ ವ್ರತಗಳು; ಹುಚ್ಚರಂತೆ ವರ್ತಿಸುವುದು, ನಿದ್ದೆಯಿಲ್ಲದಿದ್ದರೂ ನಿದ್ದೆ ಬಂದವರಂತೆ, ಲಕ್ವ ಹೊಡೆದವರಂತೆ, ವಾಯುರೋಗ ಪೀಡಿತರಂತೆ, ಕುಂಟರಂತೆ, ಕಾಮುಕರಂತೆ ನಟಿಸುವ ವಿಚಿತ್ರತರವಾದ ಆಚರಣೆಗಳು; ಕಾಳಾಮುಖರ ದೇವಾಲಯ ನಿರ್ಮಾಣ ಹಾಗೂ ಸ್ಥಾವರ ಲಿಂಗಪ್ರತಿಷ್ಠಾಪನಾಕಾರ್ಯಗಳು ವಚನಕಾರರು ಅವನ್ನು ಖಂಡಿಸಲು ಮುಖ್ಯ ಕಾರಣಗಳಾಗಿರಬಹುದು. (ನಿಜಗುಣರು ‘ವಿವೇಕಚಿಂತಾಮಣಿ’ಯಲ್ಲಿ ಪಾಶುಪತ, ಕಾಪಾಲಿಕ, ಮಹಾವ್ರತಗಳು ಅತಿಮಾರ್ಗಿಕಗಳು. ಕಾಪಾಲಿಕವು ನರಕಪಾಲ ಭಿಕ್ಷಾಟನಾದಿಗಳನ್ನು ವರ್ಣಿಸಿದರೆ, ಮಹಾವ್ರತವು ಅಸ್ಥಿಧಾರಣಾದಿಗಳನ್ನು ವಿವರಿಸುತ್ತದೆ ಎಂದಿರುವರು. ಅವರ ಅಭಿಪ್ರಾಯದಂತೆ ಪಾಶುಪತವು ಸಾತ್ವಿಕ ಆಚರಣೆಗೊಳ್ಳುವುದು. ಇದರಲ್ಲಿ ಬೀಭತ್ಸ ಕೃತ್ಯಗಳಿಲ್ಲ.) ಕಾಳಾಮುಖ, ಕಾಪಾಲಿ, ಪಾಶುಪತ, ಶೈವ ಎಂಬ ನಾಲ್ಕು ಶಾಖೆಗಳನ್ನು ಬ್ರಹ್ಮಶಿವನು ತನ್ನ ‘ಸಮಯಪರೀಕ್ಷೆ’ಯಲ್ಲಿ (1-50) ಹೇಳಿ ಅವುಗಳಲ್ಲಿ ಒಬ್ಬ ‘ಮಹಾಬ್ರತಿ ಗೊರವ’ನು ರುದ್ರಮಾರ್ಗದಿಂದ ನಡೆಯುವನು, ಉಳಿದ ಮೂವರು ನಡೆಯರು ಎಂದಿರುವನು. ಅವನ ಪ್ರಕಾರ ಕಾಳಾಮುಖ, ಪಾಶುಪತ ಹಾಗೂ ಶೈವಶಾಖೆಗಳು ಸೌಮ್ಯಾಚರಣೆಯುಳ್ಳವುಗಳಾದರೆ ಕಾಪಾಲಿಕವು ರುದ್ರಮಾರ್ಗಾಚರಣೆಯದು. (ಬ್ರಹ್ಮಶಿವ ಕಾಪಾಲಿಕ ಹಾಗೂ ಮಹಾ

---

39. ಅದೇ, ಪ. 501

40. ಅದೇ, ಪ. 480

41. ಚನ್ನಬಸವಣ್ಣನು ಕಾಳಾಮುಖ ಪಾಶುಪತರನ್ನು ಷಡುದರ್ಶನದ ಶೈವಕರ್ಮಿಗಳ ಪಟ್ಟಿಯಲ್ಲಿ ಸೇರಿಸುವನು. ಅವರನ್ನು ಗುರುಮನೆಂದೂ ಮಹಾಘನ ಗುರು

ಪ್ರತಿಗಳನ್ನು ಬೇರೆ ಬೇರೆಯಾಗಿ ಕರೆಯದೆ ಒಂದೇ ಎಂದಿರುವನು.) ಕರ್ನಾಟಕದಲ್ಲಿ ಕಾಪಾಲಿಕರಂತೆ ಕೌಳರದೂ[42] ಒಂದು ಶಾಖೆ. ಇವೆರಡರ ಆಚರಣೆಗಳಲ್ಲಿ ಹೆಚ್ಚು ವ್ಯತ್ಯಾಸಗಳಿಲ್ಲ. ಕಾಪಾಲಿಕರು ಶೈವರಾದರೆ, ಕೌಳರು ಶಾಕ್ತರು.

ಮುಂಬೋಳು ಸಿದ್ಧರಾಮನ (1596) 'ಷಟ್‌ಸ್ಥಲ ತಿಲಕ'ದಲ್ಲಿ[43] ಕಾಪಾಲಿಕರ ಬಗೆಗೆ ಹೆಚ್ಚಿನ ವಿವರಗಳು ತಿಳಿದುಬರುತ್ತವೆ. ಅಲ್ಲಿ ಗೌತಮನೊಡನೆ ವಾದ ಮಾಡಲು ಬಂದ ಕಾಪಾಲಿಕನು ತನ್ನ 'ಕಾಪಾಲಿಕರ ಮತ'ವನ್ನು ಹೀಗೆ ಹೇಳುವನು: "ಆದಿಭೈರವನು ಕಾಪಾಲವನ್ನು ಧರಿಸಲು ನಮ್ಮ ಮತಕ್ಕೆ ಕಪಾಲಿ ಮತವೆಂದು ಹೆಸರಾಯಿತು. ಹಿಂದೆ ದಕ್ಷಯಾಗದಲ್ಲಿ ಯಜ್ಞಪುರುಷನಾದ ಹರಿಯು ಜಿಂಕೆಯಾಗಿ ಓಡಲು ಭದ್ರಕಾಳನು ಆ ಜಿಂಕೆಯನ್ನು ಕೊಂದು ಅದರ ಕೋಡನ್ನು ಪ್ರೀತಿಯಿಂದ ಕೊಟ್ಟನು (3-84) ಪರಮಾಕಾರನಾದ ಭೈರವನು ಮಾಡುವ ಪೂರ್ಣಹೋಮದಲ್ಲಿ ಮಾಂಸವೇ ಯಜ್ಞದ ಹವಿಸ್ಸು, ಭೈರವನು ಮನಮೆಚ್ಚಿ ಕೊಲ್ಲುವುದೇ ಯಜ್ಞಪಶು. ಭೈರವನ ರಕ್ಷೆಯೇ ಯಜ್ಞದ ಸಮಿತ್ತುಗಳು. ಗಟ್ಟಿಯಾಗಿ ಕಟ್ಟುವುದೇ ಯೂಪಸ್ತಂಭ, ಮತ್ಸ್ಯೇಂದ್ರನೇ ಹೋತೃ, ಬ್ರಾಹ್ಮಣರ ಮನೆಯಲ್ಲಿರುವುದೇ ಸುರೆ. ಸ್ಮಶಾನದಲ್ಲಿ ಹೆಣವನ್ನು ಸುಡುವ ಬೆಂಕಿಯೇ ಯಜ್ಞದ ಅಗ್ನಿಹೋತ್ರಗಳಲ್ಲಿ ಒಂದಾದ ಗಾರುಹಪತ್ಯ (3-86) ಗೋರಕ್ಷನೆಂಬುವನೇ ಮಂತ್ರ ಹೇಳುವವನು. ನವನಾಥಸಿದ್ಧರೇ ಸದಸ್ಯರು. ರಕ್ತವೇ ತುಪ್ಪ, ಉದುರಿದ ರೋಮವೇ ದರ್ಭೆ. ಮಧುಪಾತ್ರೆಯನ್ನು ಪೂಜಿಸುವುದೇ ನೇರವಾದ ಪರಪೂಜೆ, ಉರುಳಿಬಂದು ಉತ್ಸಾಹದಿಂದ ಕುಣಿಯುವುದೇ ಯಜ್ಞಮಾಡುವುದು. ಈ ಕ್ರಮವಾಗಿ ಅಷ್ಟತುಷ್ಟಿಯ ಮಾಡಿದವನಿಗೆ ಅಷ್ಟಸಿದ್ಧಿಗಳ ಪ್ರಾಪ್ತಿ ರಂಭೆಯೊಡನೆ ಸಂಭೋಗಪ್ರಾಪ್ತಿ (3-87). ಕಾಪಾಲಿಕನ ಮಾತು ಕೇಳಿದ ಗೌತಮನು ಅವನನ್ನು ಹಾಸ್ಯಮಾಡುತ್ತಾ ಹೀಗೆನ್ನುವನು: ತಲೆಯ ಬುರುಡೆ ಕೋಡುಗಳನ್ನು ನೋಡಿದರೇ ಹೇಯ. ನಿನ್ನ ಗುರುವಾದ ಮತ್ಸ್ಯೇಂದ್ರನನ್ನು

ಲಿಂಗಕ್ಕೆ ಸಮನಾಗಿ ಭಾವಿಸಿದರೆ, ಬಂದ ಬಂದರೆ ಅಘೋರ ನರಕ [illegible] (ಪ. 466) [illegible] (ಪ. 366).

42. ಕೌಳರ ಬಗೆಗೆ ಹೆಚ್ಚಿನ ವಿವರಗಳಿಗೆ ಡಾ. ಎಂ. ಚಿದಾನಂದಮೂರ್ತಿ ಅವರ 'ಸಂಶೋಧನ ತರಂಗ'ದಲ್ಲಿ ಬಂದಿರುವ 'ಕೌಳರು ಒಂದು ಟಿಪ್ಪಣಿ' ಎಂಬ ಲೇಖನವನ್ನು; ಡಾ. ಎಸ್. ವಿದ್ಯಾಶಂಕರ ಅವರ 'ತಾಂತ್ರಿಕ ಸಂಪ್ರದಾಯದ ಆಚರಣೆಗಳ ಬಗೆಗೆ ಒಂದು ಟಿಪ್ಪಣಿ' ('ಸಾಧನೆ' ಸಂಪುಟ 9 ಸಂಚಿಕೆ 3) ಎಂಬ ಲೇಖನವನ್ನು ನೋಡಬಹುದು.

43. ಷಟ್‌ಸ್ಥಲ ತಿಲಕ (ಸಂ.) ಶ್ರೀ. ಸಿ. ಭಾನುಮತಿ (ಪ್ರ :) ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು (1979)

ಪೋತನೆಂದು ಬಗೆದು ಅದರ ರಕ್ತವೇ ಆಜ್ಯ, ರೋಮವೇ ದರ್ಭೆ, ಎಲುಬೇ ಸಮಿತ್ತು ಎಂದು ಭಾವಿಸಿ ಅವನನ್ನು ಪೋತನೆಂದು ಸುಟ್ಟು ತಿಂದು ಮದ್ಯವನ್ನು ಕುಡಿದು ಸೊಕ್ಕೇರಿ ಕುಣಿಯಲು ಅದು ಪೂರ್ಣ ಸೋಮವೆ ? ಗುರುದ್ರೋಹದಿಂದ ಅಷ್ಟಮಹಾ ಸಿದ್ಧಿಗಳೂ ರಂಭೆಯೊಡನೆ ಭೋಗವೂ ಉಂಟೆ ? ಮೂಢೆಯಾ, ಇದನ್ನು ಮಾಡಿದವನಿಗೆ ನರಕವಲ್ಲದೆ ಬೇರಿಲ್ಲ. ಮಲವನ್ನು ವಜ್ರಕಲ್ಪವೆಂದು ತಿಂದು, ಮೂತ್ರವನ್ನು ಕುಡಿದು ಅಮರೀಕಲ್ಪವೆಂದು ನಡೆವ ನಿನ್ನಯ ಮತಕ್ಕೆ ಛೀ : (3-87.88). ಅವಮಾನದಿಂದ ತಲೆತಗ್ಗಿಸಿದ ಕಾಪಾಲಿಕನ ಮುಂದೆ ಗೌತಮನು ವೇದಾಂತಿ, ಶೈವವಾದಿ, ಮಾಯಾವಾದಿ, ವೈಷ್ಣವ, ಗಾಣಾಪತ್ಯ, ಕಾಪಾಲಿಕ, ಶಕ್ತಿ, ಸೌರ ಮೊದಲಾದ ಮತದವರನ್ನೂ ವಿಧಿವಾದಿ ಕಾಲವಾದಿ, ಕರ್ಮವಾದಿ, ವೇದವಾದಿ, ಗ್ರಹವಾದಿ, ಪೃಥ್ವೀವಾದಿ, ಜಲವಾದಿ, ಅಗ್ನಿವಾದಿ, ಅನಿಲವಾದಿ, ಆಕಾಶವಾದಿ, ಜಿನವಾದಿಗಳನ್ನೂ, ಚಾರ್ವಾಕರನ್ನೂ ಖಂಡಿಸಿ ವೀರಶೈವದ ಮಹತ್ವವನ್ನು ಸ್ಥಿರೀಕರಿಸುವನು. (3-20-129) 12ನೇ ಶತಮಾನದಲ್ಲಿ ಪ್ರಚಲಿತವಿದ್ದಿರಬಹುದಾದ ಹಲವಾರು ಸಂಘಗಳನ್ನೂ ಅವುಗಳ ತಾತ್ತ್ವಿಕ ಸಿದ್ಧಾಂತಗಳನ್ನೂ ಮುಖಾಮುಖಿಗೊಳಿಸಿ ಸಿದ್ಧರಾಮನು ತನ್ನ 'ಷಟ್ಸ್ಥಲ ತಿಲಕ'ದಲ್ಲಿ ಹೇಳಿ ನಮಗೆ ಉಪಕರಿಸಿರುವನು. ಅವನು ಕೊಡುವ ವಿವರಗಳಿಂದ ಸ್ವಲ್ಪಮಟ್ಟಿಗೆ ಆ ಕಾಲದ ಧಾರ್ಮಿಕ ಪರಿಸರವನ್ನು ತಿಳಿಯಲು ಸಾಧ್ಯವಾಗುತ್ತದೆ.

ಇವನಂತೆ ಶಂಕರಾಚಾರ್ಯರ 'ಸೌಂದರ್ಯ ಲಹರೀ' ಎಂಬ ಗ್ರಂಥಕ್ಕೆ ಷಟ್ಚಕ್ರ ದೀಪಿಕೆ'[44] ಎಂಬ ಕನ್ನಡ ಟೀಕನ್ನು ಬರೆದಿರುವ ಜಕ್ಕಣಾಮಾತ್ಯನೂ (ಸು. 17ನೇ ಶ. ನ) ಕಾಪಾಲಿಕ ಸಂಘದ ಬಗೆಗೆ ಕೆಲವು ಉಪಯುಕ್ತ ಮಾಹಿತಿಗಳನ್ನು ನೀಡಿರುವನು. ಜಕ್ಕಣಾಮಾತ್ಯನು ಹೇಳುವಂತೆ ಶಿವನು ಪಾರ್ವತಿಗೆ ತಿಳಿಸಿದ ವೈದಿಕ ವಿರುದ್ಧವಾದ 64 ತಂತ್ರಗಳಲ್ಲಿ ಮಹಾಕಾಪಾಲಿಕವೂ ಒಂದು (ಪು. 39-41) ಈ ತಂತ್ರಗಳು ಶೂದ್ರಾದಿಗಳಿಗೆ ಹೇಳಿದ್ದು (ಪು. 41) ಬ್ರಹ್ಮ, ಕ್ಷತ್ರಿಯ, ವೈಶ್ಯರಿಗೆ ದಕ್ಷಿಣಾಚಾರದಲ್ಲಿ ಅನುಷ್ಠಾನವಾದರೆ ಶೂದ್ರರಿಗೆ ವಾಮಾಚಾರದಲ್ಲಿ ಅನುಷ್ಠಾನ. ಶುಭಾಗಮ ತಂತ್ರ ಪಂಚಕದಲ್ಲಿ ಶೂದ್ರರ ಹೊರತಾಗಿ ಬ್ರಹ್ಮ ಕ್ಷತ್ರಿಯ ವೈಶ್ಯರುಗಳಿಗೆ ಅಧಿಕಾರವುಂಟು. ಶುಭಾಗಮ ತಂತ್ರ ಪಂಚಕವು ವೈದಿಕಾಚಾರದಲ್ಲಿ ಅನುಷ್ಠಾನ. ಇವು ವಸಿಷ್ಠ, ಸನಕ, ಶುಕ, ಸನಂದನ, ಸನತ್ಕುಮಾರರಿಂದ ಹೇಳಲಾಯಿತು. ಇದುವೆ ಸಮಯಾಚಾರ (ಪು. 42). 64 ತಂತ್ರಗಳಲ್ಲಿ ಮಹಾಮಾಯಾಶಾಂಬರ ತಂತ್ರದಲ್ಲಿ ಮೋಹಿಸಿ

---

44. ಸೌಂದರ್ಯಲಹರೀ (ಶ್ರೀ ಜಕ್ಕಣಾಮಾತ್ಯನ ವಿರಚಿತ ಟೀಕಾ ಸಹಿತ) ಸಂ. ವಿದ್ವಾನ್ ಸು. ನಾರಾಯಣಸ್ವಾಮಿಶಾಸ್ತ್ರೀ (1971) ಪ್ರ : ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.

ಮಾಯಾ ಪ್ರಧಾನವು. ಯೋಗಿನೀಜಾಲಶಂಬರ ತಂತ್ರದಲ್ಲಿ ಶ್ಮಶಾನಾದಿಗಳಲ್ಲಿ ಅನುಷ್ಠಾನವು (ಪು. 40) ಭೈರವಾಷ್ಟಕತಂತ್ರದಲ್ಲಿ ಸಿದ್ಧಭೈರವ, ವಟುಕಭೈರವ, ಕಂಕಾಳಭೈರವ, ಶಕ್ತಿ ಭೈರವ, ಯೋಗಿನೀ ಭೈರವ, ಮಹಾಭೈರವ, ಕಾಲಭೈರವ, ಕಾಲಾಗ್ನಿಭೈರವ ಮೊದಲಾದ ಎಂಟು ತಂತ್ರಗಳು ಐಹಿಕಫಲಮಾತ್ರನಾದ ಕಾಪಾಲಿಕಮತ ಪ್ರವೇಶವು. ಚಂದ್ರಜ್ಞಾನತಂತ್ರವು ಹದಿನಾರು ನಿತ್ಯೆಗಳ ಪ್ರತಿಪಾದಿಸಿದರೂ ಕಾಪಾಲಿಕ ಮತ ಪ್ರವೇಶವು. ಮಾಲಿನೀ ತಂತ್ರವು ಸಮುದ್ರದ ಮೇಲೆ ನಡೆಯುವುದು. ಮಹಾಸಂಮೋಹನ ತಂತ್ರದಲ್ಲಿ ಬಾಲಕರುಗಳ ನಾಲಿಗೆಯನ್ನು ಕತ್ತರಿಸಿ ಸಾಧನೆಮಾಡುವುದು. ವಾಮಜುಷ್ಟ ಹಾಗೂ ಮಹಾದೇವ ತಂತ್ರಗಳು ವಾಮಾಚಾರವು. ವೃಷೋದ ತಂತ್ರವು ಕಾಪಾಲಿಕಮತವು. ಕಲಾವಾದತಂತ್ರವು ಪರಸ್ತ್ರೀಗಮನಾದಿಗಳಿಂದ ಕೂಡಿರುವುದು. ಕಲಾಸಾರತಂತ್ರವು ವಾಮಾಚಾರದಿಂದ ಕೂಡಿರುವುದು. ಕುಂಡಿಕಾಮತತಂತ್ರವು ಘುಟಿಕಾಸಿದ್ಧಿಯು. ವಾಮಾಚಾರವು. ಮತೋತ್ತರಮತತಂತ್ರವು ರಸಸಿದ್ಧಿಯು (ಪು. 41). ಕಾಪಾಲಿಕ ದಿಗಂಬರರಿಗೆ ಅಂತರ ಬಾಹ್ಯಗಳೆಂಬ ಎರಡು ವಿಧದ ಪೂಜೆಯುಂಟು (ಪು. 49).

ಕಾಪಾಲಿಕರಿಗೆ ಭಕ್ತಿಮಾರ್ಗದಲ್ಲಿ ವಿಶ್ವಾಸವಿದ್ದರೂ ಅವರಿಗೆ ವೈಯಕ್ತಿಕ ಸಾಧನೆಯಲ್ಲಿಯೇ ಹೆಚ್ಚು ನಂಬಿಕೆ. ಈ ಸಾಧನೆಗಾಗಿಯೇ ಅವರು ಜನವಿದೂರವಾದ ಕಾಡನ್ನು ಆಶ್ರಯಿಸಿದರು. ಜನಸಂಪರ್ಕದಿಂದ ದೂರವಾಗಿ ನಿಂತು ಹಠಯೋಗ ಸಿದ್ಧಿಗಳ ಪ್ರಾಪ್ತಿಗಾಗಿ ಅವರು ಅನುಸರಿಸಿದ ಮಾರ್ಗ ಸಮಾಜದಿಂದ ಅವರು ಇನ್ನಷ್ಟು ದೂರ ಸರಿಯುವಂತೆ ಮಾಡಿತು. ವರ್ಣಾಶ್ರಮಧರ್ಮವನ್ನು ಟೀಕಿಸಿದುದರಿಂದ ಅವರು ಪುರೋಹಿತವರ್ಗದ ತಿರಸ್ಕಾರಕ್ಕೂ ಪಾತ್ರರಾದರು. ವಿದ್ಯಾದಾನ, ದೇವಾಲಯಗಳ ನಿರ್ಮಾಣ ಇತ್ಯಾದಿ ಸಾಮಾಜಿಕ ಚಟುವಟಿಕೆಗಳಲ್ಲಿ ವಿಶೇಷ ಆಸಕ್ತಿ ತೋರಿಸಿದ ಕಾಳಾಮುಖರು ರಾಜಪೂಜಿತರೂ ಜನಾನುರಾಗಿಗಳೂ ಆಗಿ ಕಾಪಾಲಿಕ ಸಂಘದ ಅಳಿವಿಗೆ ಬಹುಶಃ ಕಾರಣರಾದರೇನೋ! ಲೋರೆಂಜನ್‌ರವರು ಅಭಿಪ್ರಾಯ ಪಡುವಂತೆ ಕಾಪಾಲಿಕರು 14ನೇ ಶ. ನದ ಸುಮಾರಿಗೆ ಹೇಳಹೆಸರಿಲ್ಲದಂತಾಗಿರಬಹುದು. ಈ ಸಂಘವು ಬಹುಶಃ ಬೇರೆ ಶೈವ ತಾಂತ್ರಿಕಶಾಖೆಗಳಾದ ಗಾಣಪತ್ಯ ಹಾಗೂ ಅಘೋರಿಗಳ ಜೊತೆ ಸೇರ್ಪಡೆಯಾಗಿರಬಹುದು.

ಹದಿನೆಂಟು ಜಾತಿ

—ಡಾ|| ಸೂರ್ಯನಾಥ ಕಾಮತ್

‘ಹದಿನೆಂಟು ಜಾತಿ’ ಅಥವಾ ‘ಹದಿನೆಂಟು ಸಮಯ’ ಅಥವಾ ‘ಅಷ್ಟಾದಶ ಪ್ರಕೃತಿ’ ಎಂಬ ಸಮಸ್ತ ಸಮಾಜವನ್ನು ಉಲ್ಲೇಖಿಸುವ ಒಂದು ಶಬ್ದ ಸಮುಚ್ಚಯವು ದಕ್ಷಿಣ ಭಾರತದ ಎಲ್ಲ ಪ್ರಾಂತಗಳಲ್ಲಿ ಪ್ರಾಚೀನ ಕಾಲದಲ್ಲಿ ಕಾಣಬರುತ್ತದೆ. ಯಾವುದಾದರೂ ಒಂದು ಊರಿನ ಸಾರ್ವತ್ರಿಕ ವ್ಯವಹಾರಕ್ಕೆ ಸಂಬಂಧಪಟ್ಟಂತೆ ನಿರ್ಧಾರವೊಂದನ್ನು ಆ ಊರ ಸಕಲ ಜಾತಿಯ ಪ್ರಮುಖರು ಸೇರಿ ನಿರ್ಧರಿಸಿದಾಗ ‘ಊರ ಸಮಸ್ತರು’, ‘ಊರ ಹಲವರು’ ಎಂದು ಅವರನ್ನು ಉಲ್ಲೇಖಿಸಿದ್ದು ಶಾಸನಗಳಲ್ಲಿ ಕಾಣಬರುತ್ತದೆ. ಅವರೆ ಕೆಲವೊಂದು ಬಾರಿ ‘ಊರ ಹದಿನೆಂಟು ಜಾತಿ’ ಎಂದೂ ಈ ಊರಸಮುದಾಯವನ್ನು ಕುರಿತು ಹೇಳುವ ಸಂಗತಿ ಶಾಸನಗಳಲ್ಲಿದೆ.

ತಮಿಳುನಾಡಿನ ಶಾಸನವೊಂದು (1408 : ಕೊಯಮುತ್ತೂರು ತಾ||) ಹದಿನೆಂಟು ಸಮಯಗಳನ್ನು ಉಲ್ಲೇಖಿಸುತ್ತದೆ. (ಸೌತ್ ಇಂಡಿಯನ್ ಇನ್ಸ್‌ಕ್ರಿಪ್ಷನ್ಸ್, IX, ಭಾಗ 2, ನಂ. 433.) "ಪದಿನೆಣ್ ಭೂಮಿ ಸಮಯತ್ತಾರ್" ಎಂಬುದಾಗಿ ಕುನ್ನಾಂಡಾರ್ ಕೋಯಿಲ್ ಊರಿನ ಶಾಸನವು ಅವರನ್ನು ಉಲ್ಲೇಖಿಸುವುದಾಗಿ ಪ್ರೊ|| ಟಿ. ವಿ. ಮಹಾಲಿಂಗಂ ಹೇಳಿದ್ದಾರೆ. (ಎಡ್ಮಿನಿಸ್ಟ್ರೇಶನ್ ಆ್ಯಂಡ್ ಸೋಶ್ಯಲ್ ಲಾಯಿಫ್ ಅಂಡರ್ ವಿಜಯನಗರ್ I, ಪು. 229). ಕೇರಳವನ್ನು ವರ್ಣಿಸುವಾಗ ಪೋರ್ತುಗೀಜ್ ಪ್ರವಾಸಿ ಬರ್ಬೋಸ ಕೂಡ ಇದೇ ರೀತಿ ಹೇಳಿದ್ದಾನೆ ("ಮಲಬಾರ ಜೆಂಟೈಲರಲ್ಲಿ ಹದಿನೆಂಟು ಜಾತಿಗಳಿವೆ". ಪ್ರವಾಸಿ ಕಂಡ ಇಂಡಿಯಾ, II, ಪು. 303). ಅಂಥದ ಒಂದು ದಾಖಲೆಯಲ್ಲೂ (ಆದಿಲ್‌ಶಾಹಿಗಳಿಗೆ ಸಂಬಂಧಿಸಿ) ಈ ಹದಿನೆಂಟು ಜಾತಿಗಳನ್ನು ಉಲ್ಲೇಖಿಸಿ ಹೇಳಿದ್ದು ನನಗೆ ನೆನಪಿದೆ.

ಈ "ಹದಿನೆಂಟು ಜಾತಿ" ಎಂಬ ವ್ಯವಸ್ಥೆ ಆರ್ಯರು ತಂದ ಚಾತುರ್ವರ್ಣ್ಯಕ್ಕಿಂತ ಪ್ರತ್ಯೇಕವಾದ ವ್ಯವಸ್ಥೆ ಇದ್ದಿರಬೇಕು. ಬಹುಶಃ ನಾಗರಿಕ ಜೀವನ ಆರಂಭ ಆದಾಗ ಇದ್ದ ಮುಖ್ಯ ಉದ್ಯೋಗಗಳನ್ನು ಗಮನಿಸಿ ಸಮಾಜವನ್ನು ಹದಿನೆಂಟು ಜಾತಿಗಳಾಗಿ ವಿಭಜಿಸಿದ್ದಿರಬೇಕು. ಬ್ರಾಹ್ಮಣ, ಕ್ಷತ್ರಿಯ ವರ್ಗಗಳು ಇದರಲ್ಲಿ ಮೊದಲು ಸೇರಿರಲಿಕ್ಕಿಲ್ಲ. ಬ್ರಾಹ್ಮಣ "ಜಾತಿ" ದಕ್ಷಿಣಕ್ಕೆ ಬಂದಾಗ ಅವರನ್ನೂ ಅವರ ಜೊತೆ ವರ್ಣವ್ಯವಸ್ಥೆಯಲ್ಲಿ ಉಲ್ಲೇಖಿತವಾದ ಇತರ ಮೂರು ವರ್ಣಗಳನ್ನು ಸೇರಿಸಿ ಹದಿ

ನೆಂಟು ಜಾತಿಗಳನ್ನು ಉಲ್ಲೇಖಿಸುವ ಪದ್ಧತಿ ಮುಂದೆ ಬಂದಿರಬೇಕು. ಕಾಲಕ್ರಮ ದಲ್ಲಿ ವರ್ಣವ್ಯವಸ್ಥೆಗೆ ಹೊರಗಾದ ಲಿಂಗಾಯತರನ್ನೂ ಈ ಹದಿನೆಂಟು ಜಾತಿಗಳಲ್ಲಿ ಸೇರಿಸಿದ್ದನ್ನು ಕಂಡಾಗ ಈ ಊಹೆಗೆ ಸಮರ್ಥನೆ ಸಿಗುತ್ತದೆ. ಮತ್ತು ಹದಿನೆಂಟನೆಯ ಶತಮಾನದಲ್ಲಿ ಮೊದಲಬಾರಿ ಸ್ಪಷ್ಟವಾಗಿ ಹೇಳಲಾದ ಹದಿನೆಂಟು ಜಾತಿಗಳ ಪಟ್ಟಿ ಯಲ್ಲಿ ಚತುರ್ವರ್ಣದವರನ್ನು ಮೊದಲು ಉಲ್ಲೇಖಿಸಿದ್ದನ್ನೂ ಆ ಕಾಲದಲ್ಲಿ ಇದ್ದಿರ ಬಹುದಾದ ಇನ್ನೂ ಅನೇಕ ಮುಖ್ಯ ಜಾತಿಗಳನ್ನು ಬಿಟ್ಟಿರುವುದನ್ನು ಗಮನಿಸಿದಾಗ ಈ ಊಹೆಗೆ ಪುಷ್ಟಿ ದೊರೆಯುತ್ತದೆ.

ಕರ್ನಾಟಕದಲ್ಲಿ ಈ ಹದಿನೆಂಟು ಜಾತಿಗಳನ್ನು ಉಲ್ಲೇಖಿಸುವ ಮೊದಲ ಶಾಸನ ಲಕ್ಷ್ಮೇಶ್ವರದ್ದು. (ಎಪಿ. ಇಂಡಿಕಾ XIV, ಪು. 190) ಇದು ಬಾದಾಮಿ ಚಾಳುಕ್ಯರ ಕಾಲದ ದಾಖಲೆ. ಇಲ್ಲಿ ಆ ಊರ "ಅಷ್ಟಾದಶ ಪ್ರಕೃತಿ"ಗಳ ಉಲ್ಲೇಖವಿದೆ. ಮುಂದೆ ಹದಿನೆಂಟನೆಯ ಶತಮಾನದ ವಚನಕಾರರಾದ ಸೊಡ್ಡಳ ಬಾಚರಸ, ಮಾದರ ಚನ್ನಯ್ಯ ಹಾಗೂ ಜೇಡರ ದಾಸಿಮಯ್ಯ ಇವರುಗಳು ಈ ಹದಿನೆಂಟು ಜಾತಿಗಳನ್ನು ಉಲ್ಲೇಖಿಸುವುದರ ಜೊತೆ ಅವರಲ್ಲಿ ಒಬ್ಬರು ಈ ಜಾತಿಗಳ ಪಟ್ಟಿಯನ್ನೂ ನೀಡು ತ್ತಾರೆ. ವಚನಕಾರ ಸೊಡ್ಡಳ ಬಾಚರಸ ನೀಡುವ ಪಟ್ಟಿ ಹೀಗಿದೆ : ಬ್ರಾಹ್ಮಣ, ಕ್ಷತ್ರಿಯ, ಬಣಜಿಗ, ಒಕ್ಕಲಿಗ, ಗೊಲ್ಲ, ಕುಂಭಾರ, ಪಾಂಚಾಳ, ಉಪ್ಪಾರ, ನಾಯಿಂದ, ಡೊಂಬ, ಅಗಸ, ಜಾಡ, ಕಬ್ಬಲಿಗ, ಹೊಲೆಯ, ಈಡಿಗ, ಸಮಗಾರ, ಮೊಚ್ಚಿಗ ಹಾಗೂ ಮಾದಿಗ--(ವಚನಧರ್ಮಶಾಸ್ತ್ರ I, ಪು. 362-3). ಇದರಲ್ಲಿ ಚಿಪ್ಪಿಗ, ಗಾಣಿಗ, ಬೆಸ್ತ, ಮೇದ (ಬುಟ್ಟಿ ಹೆಣೆಯುವವರು : ಬುರುಡ) ಮುಂತಾದ ಗಣ್ಯ ಜಾತಿಗಳನ್ನು ಬಿಟ್ಟಿದ್ದು ಗಮನಿಸಬೇಕಾದ ಅಂಶ. ಮಾದರ ಚನ್ನಯ್ಯ ತನ್ನ ವಚನವೊಂದರಲ್ಲಿ ಕೃಷಿಮಾಡುವವನು ಶೂದ್ರ, ಎನ್ನುತ್ತಾನೆ. (ಹದಿನೆಂಟು ಜಾತಿ ಗಳನ್ನು ಆತ ಉಲ್ಲೇಖಿಸಿದರೂ ಅವುಗಳ ಪಟ್ಟಿ ನೀಡುವುದಿಲ್ಲ.) ಇದಲ್ಲದೆ ಶ್ರೀ ತತ್ತ್ವನಿಘಂಟು (ಟಿ. ವಿ. ವೆಂಕಟಾಚಲಶಾಸ್ತ್ರಿ, ಮೈಸೂರು 1971)ದಲ್ಲಿ ಕೆಲವೊಂದು ಆಕರಗಳಿಂದ ಆಯ್ದು ಕೊಟ್ಟ ಹದಿನೆಂಟು ಜಾತಿಗಳ ಪಟ್ಟಿಯಿದೆ. ಈ ಕೃತಿ [illegible] ಕಲ್ಪತರು ಎಂಬ ಕೃತಿಯಲ್ಲಿರುವಂತೆ ಚತುರ್ವರ್ಣಗಳ ಬಿನಾ ವ್ಯಾವಹಾರಿಕ, ಗೋರಕ್ಷಕ, ಶಿಲ್ಪಿಕ, ಪಂಚಾಣ, ಕುಂಭಕಾರ, ತಂತುವಾಯ, ಕ್ಷೌರಿಕ, ರಜಕ, ವಸ್ತ್ರಚ್ಛೇದಕ, ಚರ್ಮಕಾರ, ತಿಲಘಾತ, ಲುಬ್ಧಕ, ಚಂಡಾಲ ಮತ್ತು ಮಾತಂಗ ಈ ಹೆಸರುಗಳಿವೆ. ಇಲ್ಲಿ ಗಾಣಿಗ (ತಿಲಘಾತ) ಚಿಪ್ಪಿಗ (ವಸ್ತ್ರಚ್ಛೇದಕ) ಮೇಲಿನ ಪಟ್ಟಿಯಲ್ಲಿ ಇಲ್ಲದೆ, ಹೊಸದಾಗಿ ಸೇರಿಸಲ್ಪಟ್ಟ ಜಾತಿಗಳು. ಚಂಡಾಲ ಮತ್ತು ಮಾತಂಗರಲ್ಲಿ ವ್ಯತ್ಯಾಸ ಗೊತ್ತಾಗುವುದಿಲ್ಲ. ಶಿಲ್ಪಿಕನು ಪಂಚಾಣ (ಪಾಂಚಾಳ)ದಲ್ಲಿ ಸೇರದೇ ಪ್ರತ್ಯೇಕವಾಗಿ ಉಲ್ಲೇಖಿತನಾಗಿದ್ದಾನೆ. ಇಲ್ಲಿನ ವ್ಯಾವಹಾರಿಕನು ವ್ಯಾಪಾರಿ

ಯಾದಲ್ಲಿ ಮೊದಲೇ ಉಲ್ಲೇಖಿತನಾದ ವೈಶ್ಯನನ್ನು ಬಿಟ್ಟು ಪ್ರತ್ಯೇಕವಾಗಿ ಹೇಗೆ ಹೆಸರಿಸಲ್ಪಟ್ಟನೋ ತಿಳಿಯದು.

ಅದೇ ನಿಘಂಟುವಿನಲ್ಲಿ ಹದಿನೇಳನೆಯ ಶತಕದ ಚಿಕ್ಕದೇವರಾಯ ಯಶೋಭೂಷಣ ಎಂಬ ಕೃತಿಯಿಂದ ಎತ್ತಿಕೊಟ್ಟ ಪಟ್ಟಿ ಇನ್ನೂ ಸ್ವಾರಸ್ಯವಾಗಿದೆ. ಅದು ಹೀಗಿದೆ : ಮೊದಲ ಮೂರು ವರ್ಣಗಳಲ್ಲದೆ ಲಿಂಗವಂತ, ಬಣಜಿಗ, ಗಂಗಡಿಕಾರ, ವೊಕ್ಕಲಿಗ, ಮಡಿವಾಳ, ಕೆಲಸಿಗ, ಕುರುಬ, ಕುಂಬಾರ, ಕಟುಕ, ಬಡಗಿ (ಓಜ), ಅಕ್ಕಸಾಲೆ, ಕೊರೆಯ, ಉಪ್ಪಾರ, ಬೆಸ್ತ, ಹೊಲೆಯ ಹಾಗೂ ಮಾದಿಗ. ಇಲ್ಲಿ ಲಿಂಗವಂತ ಹೊಸದಾಗಿ ಸೇರಿಕೊಂಡಿದ್ದಾನೆ. ಗಂಗಡಿಕಾರನು ವೊಕ್ಕಲಿಗರಿಂದ ಪ್ರತ್ಯೇಕವಾಗಿ ಉಲ್ಲೇಖಿತನಾಗಿದ್ದಾನೆ. ಗೊಲ್ಲರ ಉಲ್ಲೇಖವಿಲ್ಲ ; ಆದರೆ ಕುರುಬ ಹೊಸದಾಗಿ ಬಂದಿದ್ದಾನೆ. ಅದೇ ರೀತಿ ಕಟುಕ ಹೊಸದಾಗಿ ಬಂದಿದ್ದಾನೆ. ಬೆಸ್ತ ಹಾಗೂ ಕೊರೆಯ ಎಂದು ಒಂದೇ ಜಾತಿಯನ್ನು ಎರಡಾಗಿ ಉಲ್ಲೇಖಿಸಿದೆ. ಪಾಂಚಾಳರಲ್ಲಿ ಸೇರಿದ ಬಡಗಿ ಹಾಗೂ ಅಕ್ಕಸಾಲಿಯನ್ನು ಇಲ್ಲಿ ಪ್ರತ್ಯೇಕಿಸಿ ಹೇಳಿದೆ.

ಇದೆಲ್ಲವನ್ನೂ ಗಮನಿಸಿದಾಗ ಸಾಹಿತ್ಯ ಹಾಗೂ ಶಾಸನಗಳಲ್ಲಿ ಪದೇ ಪದೇ ಉಲ್ಲೇಖಿತವಾಗುವ ಈ ಹದಿನೆಂಟು ಜಾತಿ ಎಂಬುದು ಸಮಾಜದ ಒಂದು ಸಾಂಪ್ರದಾಯಿಕ ವರ್ಗೀಕರಣವೇ ಅಲ್ಲದೆ ಇನ್ನೇನೂ ಅದಕ್ಕೆ ಹೆಚ್ಚಿನ ಮಹತ್ವವಿಲ್ಲವೆಂಬ ನಿರ್ಣಯಕ್ಕೆ ಬರಲು ಅವಕಾಶವಿದೆ,

ಆದರೆ ಹದಿನೆಂಟು ಜಾತಿಗಳೆಂಬ ಪ್ರಾಚೀನ ಕಲ್ಪನೆ ಮೊದಲಿನಿಂದ ಇದ್ದಿರಬೇಕೆಂಬ ಭಾವನೆ ದೃಢವಾಗಲು ಬೇರೆ ಬೇರೆ ಕಾರಣಗಳಿವೆ. ಕ್ರಿ. ಪೂ. 6–7ನೆಯ ಶತಕದಲ್ಲಿ ಆರ್ಯೀಕರಣವಾಗುವ ಪೂರ್ವದ ಇತಿಹಾಸಾರಂಭ ("ಪ್ರೋಟೋ ಹಿಸ್ಟಾರಿಕ್") ಕಾಲದ ಸಮಾಜದಲ್ಲಿ ವೃತ್ತಿಗಳಿಗನುಗುಣವಾಗಿ ಈ ಮುಖ್ಯವಾದ ಹದಿನೆಂಟು ಜಾತಿಗಳು ಕಾಣಿಸಿರಬೇಕು. ಯಾವುದೇ ವೃತ್ತಿಯನ್ನು ಪರಂಪರಾಗತವಾಗಿ ಅನುಸರಿಸದೆ ಕಾಯಕವಿಭಜನೆ ('ಡಿವಿಜನ್ ಆಫ್ ಲೇಬರ್') ಹಾಗೂ ಒಂದೇ ವೃತ್ತಿಯಲ್ಲಿ ಪಳಗುವಿಕೆ ('ಸ್ಪೆಶಲೈಜೇಶನ್') ಸಾಧ್ಯವಿಲ್ಲ. ಎಲ್ಲ ವೃತ್ತಿಗಳಿಗೆ ಬೇಕಾಗುವ ಎಲ್ಲ ಸಲಕರಣೆ ('ಟೂಲ್ಸ್')ಗಳನ್ನು ಒಬ್ಬನೇ ಹೊಂದಲು ಸಾಧ್ಯವಿಲ್ಲ. ಪರಂಪರಾಗತವಾಗಿ ಒಂದು ವೃತ್ತಿಯನ್ನು ಅವಲಂಬಿಸುತ್ತ ಬಂದುದು ಭಾರತದ ವೈಶಿಷ್ಟ್ಯ. ಬಹುಶಃ ಆರಂಭದಲ್ಲಿ ಮುಖ್ಯವಾದ 18 ವೃತ್ತಿಪರ ಜಾತಿಗಳು ಇದ್ದಿರಬೇಕು. ಆದರೆ ಲೇಖನಕಲೆ ರೂಢಿಗೆ ಬರುವಷ್ಟೊತ್ತಿಗೆ ಆರ್ಯರ ವಶಕೆ ಆಗಿಹೋಗಿದ್ದು ವೈದಿಕ ಸಾಹಿತ್ಯದಲ್ಲಿ ಬರುವ ನಾಲ್ಕು ವರ್ಣಗಳನ್ನೂ ಸೇರಿಸಿ ಪಾರಂಪರಿಕವಾದ 18 ಜಾತಿಗಳನ್ನು ಹೇಳುವ ಯತ್ನ ಆಗಿರಬೇಕು. ಆದರೆ ಕ್ಷತ್ರಿಯ ಎಂಬ ಜಾತಿಯೊಂದು ಕರ್ನಾಟಕ

ದಲ್ಲಿ ಉಲ್ಲೇಖಿಸಿರುವಾಗಿ ಇದ್ದುದು ಕಾಣಿಸದು. ಕದಂಬರು ಮೂಲತಃ ಬ್ರಾಹ್ಮಣರು. ಚಾಳುಕ್ಯರು, ರಾಷ್ಟ್ರಕೂಟರು ಮೂಲತಃ ಕೃಷಿಕರು (ಸಲ್ಕಿ-ಸಲಿಕೆಯಿಂದ ಚಳ್ಕಿ, ಚಾಳುಕ್ಯ ಹುಟ್ಟಿತೆಂಬ ಊಹೆ : ಸಲಿಕೆ ಕೃಷಿ ಸಾಧನ : ರಾಷ್ಟ್ರಕೂಟರ ಅನೇಕ ಶಾಸನಗಳಲ್ಲಿ ನೇಗಿಲು ಗಣ್ಯವಾಗಿ ಕೆತ್ತಲ್ಪಟ್ಟಿದ್ದು ಅದು ಅವರ ಕೃಷಿಕ ಮೂಲವನ್ನು ಸಮರ್ಥಿಸುತ್ತದೆ.) ವಿಜಯನಗರದ ಅರಸರು ಮೂಲತಃ ಕುರುಬರಿರಬೇಕೆಂಬ ಹೇಳಿಕೆ ಸುಳ್ಳಿರಲಾರದು. ವಿಜಯನಗರೋತ್ತರ ಕಾಲದ ಅನೇಕ ಪಾಳಯಗಾರರು ಕೃಷಿಕರು (ಒಕ್ಕಲಿಗರು) ಇಲ್ಲವೇ ಬೇಡರು. ಕೆಳದಿ ನಾಯಕರೂ ಮೂಲತಃ ಕೃಷಿಕರು. ಹೊಯ್ಸಳರಾದರೋ 'ಮಲೆಪ'ರಾಗಿದ್ದು ಮಲೆನಾಡಿನಲ್ಲಿ ಕ್ಷತ್ರಿಯರ ಉದ್ಭವ ಊಹೆಗೆ ನಿಲುಕದ ವಿಷಯ. ಕರ್ನಾಟಕದಲ್ಲಿ ಕ್ಷತ್ರಿಯರಾಗಿದ್ದವರು ಯಾರೆಂಬುದು ಶೋಧನೆಗೆ ಕಷ್ಟಸಾಧ್ಯವಾದ ವಿಷಯ. ಯುದ್ಧವೇ ಗಣ್ಯ "ಉದ್ದಿಮೆ" ಆಗಿದ್ದ ಕಾಲದಲ್ಲಿ, ಯುದ್ಧದಲ್ಲಿ ಗಣ್ಯತೆ, ಪರಾಕ್ರಮ ತೋರಿದವನು ಸೇನಾನಿಯಾಗಿ ಪಾಳಯಗಾರನಾಗಿ ಅರಸನಾಗಿ, ಮುಂದೆ ಅವನ ಮೇಲೆ "ಕ್ಷಾತ್ರ" ಜಾತಿ ಆರೋಪಿತವಾದ ಉದಾಹರಣೆ ಹೆಚ್ಚು. "ಜಾತ" ಕ್ಷತ್ರಿಯರು ಕಾಣಸಿಗರು. ಹೀಗಾಗಿ ಚತುರ್ವರ್ಣಗಳು ದಕ್ಷಿಣ ಭಾರತಕ್ಕೆ, ಕರ್ನಾಟಕಕ್ಕೆ ಹೊಂದಿಕೊಳ್ಳತಕ್ಕವಲ್ಲ. ಅವುಗಳನ್ನು ಹದಿನೆಂಟು ಜಾತಿಗಳಲ್ಲಿ ಸೇರಿಸುವ ಯತ್ನ ಬೌದ್ಧಿಕ ಕಸರತ್ತಾಗಿ ಕಾಣುತ್ತದೆ.

ಆದರೆ ತಮಿಳುನಾಡಿನ ಹದಿನೇಳನೆಯ ಶತಮಾನದ ಒಂದು ಶಾಸನದಲ್ಲಿ ಉಲ್ಲೇಖಿತವಾದ (ಎಪಿ. ಇಂಡಿಕಾ XX, ಪುಟ 90) 18 ಜಾತಿಗಳನ್ನು ಹೇಳಿದಲ್ಲಿ ಸಮಸ್ಯೆಯ ಪರಿಹಾರಕ್ಕೆ ಸ್ವಲ್ಪ ಬೆಳಕು ಕಾಣಿಸೀತೆನಿಸುತ್ತದೆ. ಇಲ್ಲಿ ಹದಿನೆಂಟು "ಪಣ"ಗಳೆಂದು ಹೇಳಿದ ಜಾತಿಗಳು ಇವು : ವ್ಯಾವಹಾರಿಕ (?) ಪಾಂಚಾಲ, ಕುಂಭಾಲಿಕ, ತಂತುವಾಯಿ, ವಸ್ತ್ರಭೇದಕ (?) ತಿಲಘಾತಕ, ಕುರಂಜಕ (ಮೋಚಿ ?) ವಸ್ತ್ರರಕ್ಷಕ (ಚಿಪ್ಪಿಗ ?) ದೇವಾಂಗ, ಪರಿಕೇಲಿತಿ (ಹೇರೆತ್ತುಗಾರ) ಗೋರಕ್ಷ, ಕಿರಾತ, ರಜಕ ಹಾಗೂ ಕ್ಷೌರಿಕ. ಇಲ್ಲಿ ಪಾಂಚಾಳರನ್ನು ಐದು ಜಾತಿಗಳೆಂದು ಹಿಡಿದು ಹದಿನೆಂಟು ಜಾತಿಗಳಾದರೂ ಎಷ್ಟೋ ಪ್ರಮುಖ ವೃತ್ತಿಗಳನ್ನು (ಬೆಸ್ತ ಹಾಗೂ ಹೊಲೆಕೆಲಸಮಾಡುವವರು) ಬಿಟ್ಟುದು ಕಾಣಿಸುತ್ತದೆ. ಆದರೆ ತಂತುವಾಯಿ ಮತ್ತು ದೇವಾಂಗ ಹಾಗೂ ವಸ್ತ್ರರಕ್ಷಕ ಮತ್ತು ವಸ್ತ್ರಭೇದಕ ಈ ವೃತ್ತಿಗಳಲ್ಲಿನ ಭೇದ ತಿಳಿಯದಾಗುತ್ತದೆ. ಹೇಗಿದ್ದರೂ ಇಲ್ಲಿ ಚತುರ್ವರ್ಣಗಳ ಉಲ್ಲೇಖವೇ ಇಲ್ಲ. ಮತ್ತು ಈ ಪಟ್ಟಿಯಲ್ಲಿ ಪ್ರಥಮವಾಗಿ ಉಲ್ಲೇಖಿತನಾದ ವ್ಯಾವಹಾರಿಕ ವ್ಯಾಪಾರಿಯೆಂದು ಊಹಿಸಿದಲ್ಲಿ ಹದಿನೆಂಟು ಜಾತಿಗಳಲ್ಲಿ ಈತನೇ ಪ್ರಥಮ ಅಥವಾ ಅಗ್ರಗಣ್ಯನೆಂದು ಸ್ಪಷ್ಟವಾಗುತ್ತದೆ. ವಿದ್ಯಾರ್ಣವ ಕಲ್ಪತರುವಿನಲ್ಲಿ ನಾಲ್ಕು ವರ್ಣಗಳ ನಂತರ ಈ

ವ್ಯಾವಹಾರಿಕನೇ ಪ್ರಥಮನಾಗಿದ್ದಾನೆ. ಚಿಕ್ಕದೇವರಾಯ ಯಶೋಭೂಷಣದಲ್ಲಿ ಪ್ರಥಮ ಮೂರು ವರ್ಣಗಳ ನಂತರ ಲಿಂಗವಂತನಿದ್ದು ಮುಂದೆ ಬಣಜಿಗ ಬರುತ್ತಾನೆ. ಎಂದರೆ ಹಿಂದೆ ಇದ್ದಿರಬಹುದಾದ ಹದಿನೆಂಟು ಜಾತಿಗಳಲ್ಲಿ ವ್ಯಾಪಾರಿಗೇ ಅಗ್ರಸ್ಥಾನವಿದ್ದಿರಬೇಕೆಂಬ ಊಹೆಗೆ ಅವಕಾಶ ಸಿಗುತ್ತದೆ.

ಕನ್ನಡ ಸಾಹಿತ್ಯ ಹಾಗೂ ಶಾಸನಗಳಲ್ಲಿ ಉಲ್ಲೇಖಿತವಾದ ಆಧಾರಗಳಿಂದ ದಕ್ಷಿಣ ಭಾರತದಲ್ಲಿನ ಹದಿನೆಂಟು ಜಾತಿಗಳು ಯಾವುವಿರಬಹುದೆಂದು ಊಹಿಸುವ ಯತ್ನವನ್ನು ಈ ರೀತಿ ಮಾಡಬಹುದು. ಅವುಗಳ ಬಗ್ಗೆ ಹೆಚ್ಚಿನ ಅಧ್ಯಯನಕ್ಕೆ ಚಾಲನೆ ನೀಡುವುದೇ ಈ ಪಟ್ಟಿಯ ಉದ್ದೇಶ. ಇದು ಅಂತಿಮ ಪಟ್ಟಿ ಅಲ್ಲವೇ ಅಲ್ಲ. ಚತುರ್ವರ್ಣಗಳಿಗೆ ಇಲ್ಲಿ ಸ್ಥಾನವಿಲ್ಲವೆಂದು ಮೊದಲು ಇಲ್ಲಿ ಗಮನಿಸಿದರೆ ಒಳಿತು.

1. ಬಣಜಿಗ 2. ಪಾಂಚಾಳ (ಇದರಲ್ಲಿ ಕುಶಲಕರ್ಮಿಗಳಾದ ಅಕ್ಕಸಾಲಿ, ಬಡಗಿ, ರೂವಾರಿ, ಕಮ್ಮಾರ ಹಾಗೂ ಕಂಚುಗಾರ ಸೇರಿದ್ದಾರೆ) 3. ಕುಂಬಾರ 4. ನೇಕಾರ 5. ಚಿಪ್ಪಿಗ 6. ಅಗಸ 7. ಮೇದ (ಬುಟ್ಟಿ ಹೆಣೆಯುವವ) 8. ಸಮಗಾರ 9. ಮೋಚಿ 10. ಕ್ಷೌರಿಕ 11. ತೆಲ್ಲಿಗ (ಗಾಣಿಗ) 12. ಬೇಡ 13. ಗೊಲ್ಲ 14. ಕುರುಬ 15. ಬೆಸ್ತ 16. ಈಡಿಗ 17. ಹೊಲೆಯ ಮತ್ತು 18. ಮಾದಿಗ.

ಇಲ್ಲಿ ಕೃಷಿಕನ ಪ್ರತ್ಯೇಕ ಜಾತಿ ಇಲ್ಲ. ಬಹುಪಾಲು ಜನ ತಮ್ಮ ತಮ್ಮ ವೃತ್ತಿಗಳನ್ನು ಅನುಸರಿಸುವುದರ ಜೊತೆ ಆರಂಭದಲ್ಲಿ ಕೃಷಿಕಾರ್ಯವನ್ನೂ ಆಯಾ ಋತುಗಳಲ್ಲಿ ತಾವೇ ಮಾಡುತ್ತಿದ್ದರು. ಅಥವಾ ಸಂಗಂ ಸಾಹಿತ್ಯದಲ್ಲಿ ಉಲ್ಲೇಖಿತವಾಗಿರುವಂತೆ ಮಹಿಳೆಯರೇ ಹೆಚ್ಚಾಗಿ ಕೃಷಿಕಾರ್ಯ ಮಾಡುತ್ತಿದ್ದರು. ಇತಿಹಾಸಪೂರ್ವ ಕಾಲದಲ್ಲಿ ಕೃಷಿಕಾರ್ಯ ('ಆರಂಬ') ಮಾಡಿದವರು ಮಹಿಳೆಯರೇ. ಪುರುಷರು ಬೇಟೆಯಂಥ ಸಾಹಸಕಾರ್ಯಕ್ಕೆ, ಮುಂದಿನ ಇತಿಹಾಸಾರಂಭ ಕಾಲದ ಸಮಾಜದಲ್ಲಿ ಯುದ್ಧ–ಕೊಳ್ಳೆಗಳಿಗೆ ಮಹತ್ವ ನೀಡಿದಂತೆ ತೋರುತ್ತದೆ. ಎಲ್ಲರೂ ಕೃಷಿಕರಾಗಿದ್ದಂತೆ ಎಲ್ಲರೂ ಆತ್ಮರಕ್ಷಣೆಯಲ್ಲಿ ಸ್ವತಃ ಯೋಧರೂ ಆಗಬೇಕಾಗಿತ್ತು.

ಅಂದಿನ ಸಮಾಜದಲ್ಲಿ ಪ್ರತ್ಯೇಕವಾದ ಒಂದು ಪುರೋಹಿತ ವರ್ಗವಿತ್ತೇ ಎಂಬುದು ಪರಿಶೀಲನಾರ್ಹವಾದ ಸಂಗತಿ. ಇಂದಿನ ಹಳ್ಳಿಗಳಲ್ಲಿ ಪ್ರತಿಯೊಂದು ಧಾರ್ಮಿಕ ವಿಧಿಯಲ್ಲಿ (ನಾಮಕರಣ, ವಿವಾಹ, ಶವಸಂಸ್ಕಾರ ಇತ್ಯಾದಿ) ಪ್ರತಿಯೊಂದು ಜಾತಿಯ ವ್ಯಕ್ತಿಯು ನಿರ್ವಹಿಸಬೇಕಾದ ಒಂದು ವಿಧಿ ಇರುವುದನ್ನು ಗಮನಿಸಿದಲ್ಲಿ, ಎಲ್ಲ ಜಾತಿಗಳೂ "ಪುರೋಹಿತವೃತ್ತಿ"ಯನ್ನು ಆಂಶಿಕವಾಗಿ ನಿರ್ವಹಿಸುತ್ತಿದ್ದರೆಂದು ಭಾವಿಸಲು ಅವಕಾಶವಿದೆ. ಎಷ್ಟೋ ಬ್ರಾಹ್ಮಣೇತರ ಜಾತಿಗಳು ಇಂದಿಗೂ

ಹಳ್ಳಿಗಳಲ್ಲಿ ಗ್ರಾಮದೇವತೆ, ಭೂತಾರಾಧನೆಗಳಲ್ಲಿ ತಮ್ಮದೇ ಗಣ್ಯ ಪಾತ್ರ ವಹಿಸುತ್ತಿರುವುದೂ ಇದಕ್ಕೆ ನಿದರ್ಶನ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಾರಿಯಮ್ಮನ ಆರಾಧಕರು ಬಿಲ್ಲವರು ("ಪೂಜಾರಿ" ಜಾತಿ : ಇವರು ಹೆಂಡ ಇಳಿಸುವವರು). ಭೂತದ ನೇಮ ಕೊಡುವವರು ನಲ್ಕೆ, ಮುಂಡಾಳ ಮುಂತಾದ ಅಸ್ಪೃಶ್ಯ ಜಾತಿಯವರು. ಕೆಲವೆಡೆ ಕುರುಬರು ಪೂಜಾರಿಯಾಗಿ ಕೆಲಸಮಾಡುವ ನಿದರ್ಶನಗಳುಂಟು.

ಕಟ್ಟಿಗೆಹಳ್ಳಿ ಸಿದ್ಧಲಿಂಗನ "ಏಕೋತ್ತರಸಾರ"

—ಎಸ್. ಶಿವಣ್ಣ

ವಚನ ಸಂಕಲನ ಪ್ರಕಾರಕ್ಕೆ ಸೇರಿದ 'ಏಕೋತ್ತರಸಾರ'ದ[1] ಕರ್ತೃ ಕಟ್ಟಿಗೆಹಳ್ಳಿ ಸಿದ್ಧಲಿಂಗ. ಈತ ತೋಂಟದ ಸಿದ್ಧಲಿಂಗೇಶ್ವರರ (1561) ಪರಂಪರೆಗೆ ಕೂಡಿದವನಾಗಿದ್ದು, ಶೂನ್ಯಸಿಂಹಾಸನಾಧೀಶನಾಗಿದ್ದನು. ಈತನ ಕಾಲ ಸು. 1675.[2]

ಸಿದ್ಧಲಿಂಗನನ್ನು ಕುರಿತು ಕುಂತಾರದ ಮಹಾಂತಯ್ಯ (ಸು. 1700) 'ಮುರಿಗೆಸ್ವಾಮಿಗಳ ನಾಂದ್ಯ'ದಲ್ಲಿ "ಆದಿಯಲಿ ಗುರು ತೋಂಟದಾರ್ಯ, ಭೇದವಿಲ್ಲದೆ ಬಂದು ಇಳೆಯೊಳು, ನಾದಮೂರುತಿ ಕಟ್ಟಿಗೆಯ ನಿಜಸಿದ್ಧಲಿಂಗಾರ್ಯಂ" ಎಂದೂ "ನಿಜಶರಣತ್ರಿವಿಧಿ"ಯ ಕರ್ತೃ ರಾಮಪುರದ ಬೊಕ್ಕಪ್ಪ (ಸು. 1700) "ಇಷ್ಟಲಿಂಗಪ್ರೇಮಿ, ಸೃಷ್ಟಿಗಿಳಿದು ಬಂದು, ಸಿಟ್ಟುಕೋಪವ[ನ]ಳಿದು, ಷಟ್ಸ್ಥಲವನುದ್ಧರಿಸಿದ, ಕಟ್ಟಿಗೆಹಳ್ಳಿ ನಿಜಶರಣ" ಎಂದೂ ಸ್ತುತಿಸಿದ್ದಾರೆ. "ಕಟ್ಟಿಗೆ ತಾರಾವಳಿ"[3]ಯಲ್ಲಿ ಸಿದ್ಧಲಿಂಗನನ್ನು ಅವನ ಶಿಷ್ಯ ಮುರಿಗೆ ಶಾಂತವೀರ (ಸು. 1700) ಹೆಸರಿಸಿದ್ದಾನೆ.

ಕಟ್ಟಿಗೆಹಳ್ಳಿ ಸಿದ್ಧಲಿಂಗನ ಹೆಸರಿನಲ್ಲಿ ಈ ಕೆಳಕಂಡ ನಾಲ್ಕು ಕೃತಿಗಳಿರುವುದಾಗಿ ತಿಳಿದುಬಂದಿದೆ :

(1) ಏಕೋತ್ತರಸಾರ
(2) ಮಡಿವಾಳಯ್ಯನವರ ಚರಿತ್ರೆ(ಯ)[4]
(3) ಸಂಪಾದನೆಯ ವಚನ ಅಥವ ಸಂಪಾದನೆಯ ವಚನಸಾರಾಮೃತ[5]

---

1. ಈ ಕೃತಿಯ ಬಗೆಗೆ ವಿವರಗಳನ್ನು ಒದಗಿಸಿದ ವಿದ್ವಾನ್ ಎಂ. ಎಸ್. ಬಸವರಾಜಯ್ಯನವರಿಗೆ ಕೃತಜ್ಞತೆಗಳು.
2. ಬಸವ ಜರ್ನಲ್ 2-3-1977 ಪುಟ 30ರಲ್ಲಿನ ಪಟ್ಟಿ ನೋಡಿ.
3. 677/1 (ವಚನ ವಾಙ್ಮಯ ಭಾಂಡಾರ) ಧಾರವಾಡ.
4. ಡಾ. ಚಂದ್ರಶೇಖರಶಾಸ್ತ್ರಿ : ಬಸವತತ್ತ್ವ ರತ್ನಾಕರ. ಹೋಳಲು 1961 ಪು. 589.
5. 1528 (ಕಾಗದ ಪ್ರತಿ) ವ. ವಾ. ಭಾಂ. (ಧಾ). ಇದರಲ್ಲಿ 152 ಟೀಕಾವಚನಗಳಿದ್ದು, ಈ ಕೃತಿ ಗೂಳೂರು ಸಿದ್ಧವೀರನ "ಶೂನ್ಯಸಂಪಾದನೆ"ಯನ್ನು ಆಧರಿಸಿ ಸಂಕಲಿತವಾಗಿರುವ ಅಂಶವನ್ನು ಡಾ॥ ವೀರಣ್ಣ ರಾಜೂರ ತಿಳಿಸಿದ್ದಾರೆ. ಈ ಅಂಶಕ್ಕಾಗಿ ಅವರಿಗೆ ನನ್ನ ವಂದನೆಗಳು.

(4) ಸ್ವರ ವಚನಗಳು.[6]

ಏಕೋತ್ತರಸಾರದಲ್ಲಿ ಇಪ್ಪತ್ತನಾಲ್ಕು ಶಿವಶರಣರಿಗೆ ಸೇರಿದ 392 ವಚನಗಳಿವೆ.[7] ಕೃತಿ ಚನ್ನಬಸವಣ್ಣನವರ ವಚನದಿಂದ ಆರಂಭವಾಗಿ ಗಜೇಶ ಮಸಣಯ್ಯನವರ ವಚನದಿಂದ ಮುಕ್ತಾಯವಾಗಿದೆ. ಕೃತಿಯ ವಚನಗಳಿಗೆಲ್ಲ 'ಟೀಕೆ' ಉಪಲಬ್ಧವಿದೆ. ಇಲ್ಲಿರುವ 'ಕೂಡಲ ಸಂಗಮದೇವಾಂಕಿತ'ದ ಕೆಲವು ಟೀಕಾವಚನಗಳನ್ನು 'ಬಸವ ವಚನ ಸಾರಾಮೃತ'ದ ಸಂಕಲನಕಾರನಾದ ಗುರು ಬಸವರಾಜದೇವರು ಉದಾಹರಿಸಿರುವ ಸಂಗತಿಯನ್ನು ಡಾ|| ಎಂ. ಎಂ. ಕಲಬುರ್ಗಿ ಅವರು ಈಗಾಗಲೇ ಗಮನಿಸಿ ಸೂಚಿಸಿದ್ದಾರೆ.[8]

ಏಕೋತ್ತರಸಾರದಲ್ಲಿ ಬಸವಾದಿಗಳ ಹಿರಿಯ ಸಮಕಾಲೀನರಾದ ಜೇಡರ ದಾಸಿಮಯ್ಯ (1140) ಸಕಲೇಶ ಮಾದರಸ (1140)- ಇವರ ವಚನಗಳಿವೆ. ಬಸವಾದಿಗಳ ಹಾಗೂ ಅವರ ಸಮಕಾಲೀನರ ವಚನಗಳೇ ವಿಪುಲವಾಗಿವೆ. ಆದರೆ ಬಸವಾದಿಗಳ ಉತ್ತರಕಾಲೀನ ವಚನಕಾರರ ಯಾವ ವಚನಗಳೂ ಇಲ್ಲಿ ಸಮಾವೇಶಗೊಳ್ಳದಿರುವುದು ಗಮನಾರ್ಹ ಅಂಶವಾಗಿದೆ.

---

6. "ಕಟ್ಟಿಗೆಹಳ್ಳಿ ಸಿದ್ಧ" ಹಾಗೂ "ಕಟಿಗೆಹಳ್ಳಿ ಸ್ವಾಮಿ" ಅಂಕಿತದಲ್ಲಿ ಸ್ವರವಚನಗಳು ಉಪಲಬ್ಧವಿವೆ. ಇವು ಕ. ಸಿದ್ಧಲಿಂಗನವೇ ಅಥವಾ ಬೇರೆಯವರವೇ ಎಂಬ ಅಂಶ ಪರಿಶೋಧನಾರ್ಹ.

"ಕಟ್ಟಿಗೆಹಳ್ಳಿ ಸಿದ್ಧ" ಅಂಕಿತದ ಸ್ವರ ವಚನದ ಪಲ್ಲವಿ ಹೀಗಿದೆ :

(1) "ಆರಾದೊಡೇನು ಲಿಂಗಾರ್ಚನೆಯ ಮಾಡಿದೊಡೆ...(ಮೂರು ನುಡಿ)

[ಶ್ರೀ ಭೋಜರಾಜ ಪಾಟೀಲ ಹಾವೇರಿ ಅವರ ಸಂಗ್ರಹ].

"ಕಟಿಗಿಹಳ್ಳಿ ಸ್ವಾಮಿ" ಅಂಕಿತದ ಸ್ವರ ವಚನಗಳ ಪಲ್ಲವಿ ಹೀಗಿದೆ :

(i) "ನಂಬಿ ಬಂದೆನೊ ನಿನ್ನ ನಾಮವನು....(ಒಂಭತ್ತು ನುಡಿ)

(ii) "ಶರೀರವು ಸ್ಥಿರವೆಂದು ನಂಬಿ...(ಮೂರು ನುಡಿ)

(ಈ ಎರಡು ಸ್ವರ ವಚನಗಳನ್ನು 'ಕೋಗಿಲೆ'ಯನ್ನು ಸಂಬೋಧಿಸಿ ರಚಿಸಲಾಗಿದೆ)

--(ಶ್ರೀ ಸಿದ್ಧರಾಮ ಶಿವಾಚಾರ್ಯ. ಗುಲಬುರ್ಗಿ–ಅವರ ಸಂಗ್ರಹ.) (7) 'ಅನುಬಂಧ' ನೋಡಿ.

(8) ಎಂ. ಎಂ. ಕಲಬುರ್ಗಿ (ಸಂ): ಬಸವಣ್ಣನವರ ಟೀಕಿನ ವಚನಗಳು–ಪ್ರಸ್ತಾವನೆ ಧಾರವಾಡ 1979 ಪು. X.

ಅನುಬಂಧ

ಕ್ರ. ಸಂ.	ವಚನಾಂಕಿತ	ವಚನಕಾರ/ಕಾರ್ತಿ	ಕಾಲ	ವ. ಸಂ.
1.	ಅಜಗಣ್ಣ ತಂದೆ	ಮುಕ್ತಾಯಕ್ಕ	ಸು. 1160	2
2.	ಅಂಬಿಗರ ಚೌಡಯ್ಯ	ಅಂಬಿಗರ ಚೌಡಯ್ಯ	ಸು. 1160	5
3.	ಉರಿಲಿಂಗದೇವ	ಉರಿಲಿಂಗದೇವ	ಸು. 1180	1
4.	ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ	ಉರಿಲಿಂಗಪೆದ್ದಿ	ಸು. 1180	12
5.	ಉಳಿಯುಮೇಶ್ವರ	ಉಳಿಯುಮೇಶ್ವರದ ಚಿಕ್ಕಣ್ಣ	ಸು. 1160	1
6.	ಕಪಿಲಸಿದ್ಧ ಮಲ್ಲಿಕಾರ್ಜುನ	ಸಿದ್ಧರಾಮ	ಸು. 1160	1
7.	ಕಲಿದೇವರದೇವ	ಮಡಿವಾಳ ಮಾಚಯ್ಯ	ಸು. 1160	2
8.	ಕೂಡಲ ಚೆನ್ನಸಂಗ	ಚೆನ್ನಬಸವ	ಸು. 1160	118
9.	ಕೂಡಲಸಂಗ	ಬಸವಣ್ಣ	ಸು. 1160	72
10.	ಗುಹೇಶ್ವರ	ಅಲ್ಲಮಪ್ರಭು	ಸು. 1160	138
11.	ಚಿಕ್ಕಯ್ಯಪ್ರಿಯ ಸಿದ್ಧಲಿಂಗ	ಘಟ್ಟಿವಾಳ ಮುದ್ದಣ್ಣ	ಸು. 1160	8
12.	ಚೆನ್ನಮಲ್ಲಿಕಾರ್ಜುನ	ಅಕ್ಕಮಹಾದೇವಿ	ಸು. 1160	6
13.	ತೆಲುಗೇಶ್ವರ	ತೆಲುಗೇಶ ಮಸಣಯ್ಯ	ಸು. 1160	1
14.	ನಿಜಗುರು ಸ್ವತಂತ್ರ ಕಪಿಲಸಿದ್ಧ ಮಲ್ಲೇಶ್ವರ	?	?	1
15.	ಬಸವಪ್ರಿಯ ಕೂಡಲ ಚೆನ್ನಸಂಗಮದೇವ	ಹಡಪದಪ್ಪಣ್ಣ	ಸು. 1160	2
16.	ಮಹಾಲಿಂಗ ಕಲ್ಲೇಶ್ವರ	ಹಾವಿನಹಾಳ ಕಲ್ಲಯ್ಯ	ಸು. 1180	1

ಕ್ರ. ಸಂ	ವಚನಾಂಕಿತ	ವಚನಕಾರ/ಕಾರ್ತಿ	ಕಾಲ	ವ. ಸಂ.
17.	ಮಹಾಲಿಂಗ ಗಜೇಶ್ವರ	ಗಜೇಶ ಮಸಣಯ್ಯ	ಸು. 1160	1
18.	ರಾಮನಾಥ	ಜೇಡರ ದಾಸಿಮಯ್ಯ	ಸು. 1140	3
19.	ರೇಕಣ್ಣ ಪ್ರಿಯನಾಗಿನಾಥ	ಬಹುರೂಪಿ ಚೌಡಯ್ಯ	ಸು. 1160	3
20.	ಶಂಭುಜಕ್ಕೇಶ್ವರ	ಸತ್ಯಕ್ಕ	ಸು. 1160	2
21.	ಶಂಭುಸೋಮನಾಥ ಲಿಂಗ	ಜೋದರ ಮಾಯಣ್ಣ	ಸು. 1160	1
22.	ಸಕಳೇಶ್ವರ	ಸಕಲೇಶ ಮಾದರಸ	ಸು. 1140	4
23.	ಸಿಮ್ಮಲಿಗೆ ಚೆನ್ನರಾಮ	ಚೆಂದಿಮರಸ	ಸು. 1140	6
24.	ಹುಲಿಗೆರೆಯ ವರದ ಸೋಮನಾಥ	?	?	1

ಕುಮಾರ ವ್ಯಾಸನ ಕಾವ್ಯದಲ್ಲಿ ಜನಜೀವನದ ಚಿತ್ರ

—ಡಾ। ಕೆ. ಶ್ರೀಕಂಠಯ್ಯ

"ಕುಮಾರವ್ಯಾಸ ನಮ್ಮ ಕವಿಗಳಲ್ಲಿ ಹಿರಿಯುತಲೆ. ಹಿರಿಯರಲ್ಲಿ ಹಿರಿಯ. ನಮ್ಮ ಸಾಹಿತ್ಯದ ಉತ್ತಮ ರತ್ನಗಳಲ್ಲಿ ನಾಯಕರತ್ನ. ಪಂಪ, ರನ್ನ. ಬಸವಣ್ಣ, ಹರೀಶ್ವರ, ಪುರಂದರ, ಲಕ್ಷ್ಮೀಶ—ಇವರ ಜೊತೆಯಲ್ಲಿ ನಾರಣಪ್ಪನನ್ನು ನಿಲ್ಲಿಸಿ, ಕೈಯಲ್ಲಿ ಕನ್ನಡ ಬಾವುಟವನ್ನು ಕೊಟ್ಟು, ಲೋಕದ ಯಾವುದೇ ದೊಡ್ಡ ಕವಿಯನ್ನಾದರೂ ಧೈರ್ಯದಿಂದ ಪ್ರೇಮದಿಂದ ಎದುರುಗೊಳ್ಳಬಹುದು"- ಇದು ಬಿ. ಎಂ. ಶ್ರೀಯವರು 'ಕುಮಾರವ್ಯಾಸ ಪ್ರಶಸ್ತಿ'ಗೆ ಬರೆದ ಮುನ್ನುಡಿಯಿಂದ ಆಯ್ದ ಮಾತುಗಳು.

ಕುಮಾರವ್ಯಾಸ ಎಲ್ಲೀ ಮಹಾಕವಿಯಾದರೂ ಕನ್ನಡ ಜನತೆಯ ಕವಿ. ವ್ಯಾಸರ ಸಂಸ್ಕೃತ ಭಾರತ ಭಾರತೀಯ ಸಂಸ್ಕೃತಿಯಿಂದ ತುಂಬಿರುವಂತೆ ಕನ್ನಡ ಭಾರತವು ಕನ್ನಡ ಸಂಸ್ಕೃತಿಯಿಂದ ತುಂಬಿ ಹೊರಸೂಸುತ್ತಿದೆ. ಕನ್ನಡಿಗರ ಆಚಾರ ವಿಚಾರಗಳ ಸೊಗಸನ್ನು ಇಲ್ಲಿ ಕಾಣಬಹುದು.

ಕುಮಾರವ್ಯಾಸ ಮಹಾಭಾರತದ ಕಥೆಯನ್ನು ಅರಗಿಸಿಕೊಂಡು ತನ್ನ ಭಾರತದಲ್ಲಿ ವಿಜಯನಗರ ಕಾಲದ ಜನಜೀವನವನ್ನು ಹಿನ್ನೆಲೆಯಾಗಿ ಇಟ್ಟುಕೊಂಡಂತಿದೆ. ಆತನ ಅಪಾರ ಭಕ್ತಿ ಅಂದಿನ ಧಾರ್ಮಿಕ ಜೀವನದ ಗುರುತೆಂದು ಹೇಳಬಹುದು. ಶಾಂತಿ, ಸಂತೃಪ್ತಿಗಳ ಕಾಲವಾದ ವಿಜಯನಗರದ ವೈಭವ ಜೀವನವನ್ನು ಕವಿ ಬಗೆ ಬಗೆಯಾಗಿ ಬಣ್ಣಿಸಿದ್ದಾನೆ. ಅವನ ಕಾವ್ಯದಲ್ಲಿ ಬಣ್ಣನೆಗೊಂಡ ಊಟ-ವೈಭವ ಕನ್ನಡಿಗರ ವೈಶಿಷ್ಟ್ಯವನ್ನೇ ಸೂಚಿಸುವಂತಿದೆ. ರಾಜವೈಭವವನ್ನು ವರ್ಣಿಸುವಾಗ ಆತನ ಕಣ್ಣೆದುರು ವಿಜಯನಗರದ ಅರಸರ ಅರಮನೆಯ ಚಿತ್ರವೇ ಕಂಡಿರಬೇಕು.ಅ

ಕುಮಾರವ್ಯಾಸ ಪಂಡಿತನಾಗಿ ಪಂಡಿತರಿಗಾಗಿಯೇ ಗ್ರಂಥರಚನೆ ಮಾಡದೆ ಜನಸಾಮಾನ್ಯರಿಗಾಗಿ ಅವರ ಭಾಷೆಯಲ್ಲಿಯೇ ಸುಲಭವಾಗಿ ಹಾಡಿಕೊಳ್ಳಬಲ್ಲ ಭಾಮಿನಿ ಷಟ್ಪದಿಯಲ್ಲಿ ಗ್ರಂಥರಚನೆ ಮಾಡಿದ. ಆದ್ದರಿಂದ ಅವನ ಗ್ರಂಥ ವ್ಯಾಸ ಭಾರತದ ಭಾಷಾಂತರವೂ ಅಲ್ಲ, ವಿಸ್ತರಣವೂ ಅಲ್ಲ. ಅದೊಂದು ಸ್ವತಂತ್ರ ಗ್ರಂಥ.

ಅ ಎಸ್. ಎಸ್. ಮಾಳವಾಡ 'ಕನ್ನಡನುಡಿ' ಸಂಪುಟ 14. ಸಂಚಿಕೆ 6. ಪು. 189

ವ್ಯಾಸಭಾರತದಲ್ಲಿ ಇಲ್ಲದ್ದು ಇಲ್ಲಿ ಸ್ವತಂತ್ರವಾಗಿ ಸೇರಿರುವುದೂ ಉಂಟು. ಇದ್ದದ್ದು ಬಿಟ್ಟು ಹೋಗಿರುವುದೂ ಉಂಟು. ಸಂಗ್ರಹವಾಗಿರುವುದೂ ಉಂಟು. ವಿಸ್ತೃತವಾಗಿರುವುದೂ ಉಂಟು.ಆ

ಕುಮಾರವ್ಯಾಸ ಸ್ವತಃ ಕಥನ ಕುಶಲನು. ಪಾಂಡಿತ್ಯಕ್ಕೆ ಬೇಕಾದ ಸಂಸ್ಕೃತವನ್ನು ಕಲಿತಿದ್ದನು, ಆದರೂ ಪಂಡಿತನಾಗಲಿಲ್ಲ. ಪಂಡಿತ ಕವಿಯಾಗಲಿಲ್ಲ. ಸಾಮಾನ್ಯರಲ್ಲಿ ಹುಟ್ಟಿ ಬೆಳೆದು, ಸಾಮಾನ್ಯರಂತೆ ಮಾತನಾಡುತ್ತ ಅವನು ಸಾಮಾನ್ಯರಿಗಾಗಿ ಕಾವ್ಯವನ್ನು ನಿರ್ಮಿಸಿದನು. ಈ ಕಾರಣದಿಂದ ಕೃತಿಮೂಲದ ಅತಿ ವಿಸ್ತಾರಕ್ಕೆ ಹೋಗದೆ ಅದರ ಆಖ್ಯಾನದ ಬರಿಯ ಕ್ರೋಢೀಕರಣವೂ ಆಗದೆ ತಕ್ಕಷ್ಟು ವಿಸ್ತಾರವಾದ ಆದರೂ ಅಡಕತಪ್ಪದ ಉದ್ಗ್ರಂಥವಾಯಿತು.

ಸ್ವಯಂವರಕ್ಕೆಂದು ಬಂದ ದ್ರೌಪದಿಯನ್ನು ವರ್ಣಿಸುವಲ್ಲಿ ದೂತಕೃಷ್ಣನು ಕೌರವನ ಅರಮನೆಗೆ ಬಂದ ಸಂದರ್ಭ. ಕೌರವನ ಸೇನೆಯನ್ನು ಕಂಡಾಗ ಉತ್ತರನ ಪಲಾಯನ, ಗೀತೋಪದೇಶ ಸಂಗ್ರಹಣೆ 'ಧರ್ಮರಾಯನು ಕೃಷ್ಣನನ್ನು ಉತ್ತರೆಯ ಮದುವೆಗೆ ಕರೆದ ಸಂದರ್ಭ—ಇಲ್ಲೆಲ್ಲಾ ಕುಮಾರವ್ಯಾಸ ವ್ಯಾಸರ ಕುಮಾರನಾಗಿದ್ದಾನೆ: ಅಣಕದ ಬೊಂಬೆಯಾಗಿಲ್ಲ. ತನ್ನ ಕಾಲದ ಅತ್ಯುತ್ತಮ ಸಂಸ್ಕೃತಿಯನ್ನು ತನ್ನದನ್ನಾಗಿಯೂ ಮಾಡಿಕೊಂಡು ಕುಮಾರವ್ಯಾಸ' ಭರತ ವರ್ಷದ ಮತ್ತು ಕನ್ನಡ ದೇಶದ ಅಂದಿನವರೆಗಿನ ಸಂಸ್ಕೃತಿಯನ್ನು ತನ್ನ ಕಾವ್ಯದಲ್ಲಿ ಮೂಡಿಸಿದ್ದಾನೆ.

ಭಾರತದ ವ್ಯಕ್ತಿಗಳ ವರ್ಣನೆಯಿಂದ ಇವನು ನೋಟ ತೆಗೆದು ತನ್ನ ಸುತ್ತಮುತ್ತಣ ಪ್ರಪಂಚದಲ್ಲೇ ಭೀಷ್ಮ, ಧರ್ಮ, ಕೃಷ್ಣ, ಕೌರವ, ಕುಂತಿ, ಗಾಂಧಾರಿ, ದ್ರೌಪದಿ, ಭಾನುಮತಿಯರನ್ನು ಕಂಡನು. ಇದರಿಂದ ದೂರದಲ್ಲಿರುವ ವಸ್ತುವನ್ನು ಕಣ್ಣಿನ ಹತ್ತಿರಕ್ಕೆ ತಂದು ತೋರಿಸುವ ಗಾಜಿನಂತೆ ಇವನ ಕಾವ್ಯಕ್ಕೆ ಎಂದಿನದೋ ಎಂದು ತೋರಬಹುದಾದ ಜೀವನವನ್ನು ಇಂದಿನದು ಎಂದು ತೋರಿಸಿ ಕೊಡುವ ಶಕ್ತಿ ಒದಗಿತು. ಹೀಗೆ ಕೊಡುವುದರಲ್ಲಿ ಈ ಕಾವ್ಯ, ಒಬ್ಬೊಬ್ಬರ ಕಣ್ಣನ್ನು ಅವರವರ ಯೋಗ್ಯತೆಗೆ ತಕ್ಕಂತೆ ತೆರೆದು 'ನಿಮ್ಮ ಎದುರಿನ ಬಾಳಿನಲ್ಲಿ ಎಂದಿನ ಬಾಳನ್ನು ನೋಡಿ' ಎಂದು ಕಲಿಸಿತು. ಕವಿಯ ಸ್ವಾಭಾವಿಕ ಶಕ್ತಿ ವ್ಯಾಸಋಷಿಯಿಂದ ಎಚ್ಚರಗೊಂಡು ಜನಜೀವನವನ್ನು ಸಮಗ್ರವಾಗಿ ನೋಡುವ ದೃಷ್ಟಿ ಪಡೆಯಿತು.

ಆದಿಪರ್ವದಲ್ಲಿ ಕೌರವ-ಪಾಂಡವರ ಬಾಲಲೀಲೆಗಳನ್ನು ವರ್ಣಿಸುವಾಗ ಕುಮಾರವ್ಯಾಸ ಮೂಲಭಾರತದಿಂದ ಪ್ರೇರಿತನಾದರೂ ಕವಿಕೊಡುವ ಆಟದ ಹೆಸರುಗಳು ಇಂದಿಗೂ ಜನಪ್ರಿಯವಾಗಿರುವ ಕೆಲವು ಆಟದ ಹೆಸರುಗಳು. ಕವಿ ಕಂಡು ಕೇಳಿರಬಹುದಾದವುಗಳು. ಈ ಕೆಲವು ಆಟದ ಹೆಸರುಗಳನ್ನು ನೋಡಿ :

ಆ 'ಕುಮಾರವ್ಯಾಸ' ಪುಟ 23 ಐ ಬಿ ಎಚ್ ಪ್ರಕಟಣೆ.

ಗುಡುಗು ಗುತ್ತಿನ ಚೆಂಡು ಗುಮ್ಮನ
ಬಡಿವಕತ್ತಲೆ ಗುದ್ದು ಗಂಬದ
ಗಡಣೆ ಕಣ್ಣುಮುಚ್ಚಸಗವರಿ ಹರಿಹಲಗೆ ಸಿಡುಗವಣೆ ।
ಕೆಡುಹು ಕುಟ್ಟಿಗನಾದಿಯಾದವ
ಗಡ ವಿನೋದವಲಾಡಿದರು ಸಂ
ಗಡದಲೈವರು ನೂರ್ವರಿವರಿತ್ತಂಡವೊಂದಾಗಿ ॥*

o o o o

ಆಳಿನೇರಿಕೆ ಹಿಡಗವಡೆ ಗುರಿ
ಯಾಳು ಚೆಂಡಿನ ಹೊಣಕೆ ಚಿಣಿಕೋ
ಲಾಳು ಗೊತ್ತಿನ ದಂಡೆಯೆನೆ ನಾನಾ ವಿನೋದದಲಿ.**

o o o o

ಕೈಯಲ್ಲಿ ಕವಡೆ ಹಿಡಿದು ಆಡುವ ಸರಿಬೆಸದ ಹಿಡಿಗವಡೆಯಾಟ ಒಬ್ಬರನ್ನೊಬ್ಬರು ಚೆಂಡಿನಿಂದ ಹೊಡೆಯುವ ಗುರಿಯಾಳು ಚೆಂಡಿನ ಹೊಣಕೆ ಹಾಮು ಅಥವಾ ದಂಡೆ ತೆಗೆಯುವ ದಂಡೆಯಾಟ ಒಬ್ಬರನ್ನೊಬ್ಬರು ಕಾಣದಂತೆ ಗುದ್ದಿ ಮರೆಯಾಗುವ 'ಗುಮ್ಮನ ಬಡಿವ ಕತ್ತಲೆ ಗುದ್ದು' ಸಾಲಾಗಿ ಮರಳ ರಾಶಿ ಹಾಕಿ ಜಿಗಿಯುತ್ತ ಓಡುವ 'ಹಾರುಗುಪ್ಪಿ' ಒಬ್ಬರ ಮೇಲೆ ಒಬ್ಬರು ಏರಿ ಕೂತು ಆಡುವ 'ಆಳಿನೇರಿಕೆ' ಕಂಬಕಂಬವನ್ನು ಹಿಡಿದು ಓಡಿ ಆಡುವ 'ಕಂಬದಗಡಣೆ' ಕಣ್ಣಾಮುಚ್ಚಾಲೆಯಾಟ ಹಂಚಿನ ಬಿಲ್ಲೆಯನ್ನು ಕುಂಟುತ್ತ ಗೆರೆಕೊರೆದ ಮನೆ ಮನೆ ಮನೆಗೆ ಸಾಗಿಸುವ ಕುಂಟಬಿಲ್ಲೆ ಆಟದಂತಹ 'ಹಲ್ಲೆಯಾಟ' ಕುಸ್ತಿಯಾಟವನ್ನು ಹೋಲುವ 'ಕೆಡಹು ಕುಟ್ಟುವ ಆಟ' ಇವೆಲ್ಲ ಗೊತ್ತಿರುವ ಆಟಗಳೇ ಅಲ್ಲವೆ ?

ಕೌರವ ಪಾಂಡವರ ಬಾಲಲೀಲೆಗಳನ್ನು ವರ್ಣಿಸುವ ಸಂದರ್ಭದಲ್ಲೇ ಭೀಮನ ತುಂಟತನ, ಕುಚೋದ್ಯ ಕೌರವನ ಅಂಜುಬುರುಕುತನಗಳನ್ನು ಕವಿ ಸ್ವಾರಸ್ಯವಾಗಿ ವರ್ಣಿಸಿದ್ದಾನೆ. ಅಲ್ಲದೆ ಕೌರವ ಧೃತರಾಷ್ಟ್ರನ ಬಳಿಗೆ ಬಂದು ಚಾಡಿಹೇಳುವುದು, ಭೀಮ ಅದಕ್ಕೆ ಸೃಷ್ಟಿಸಿಕೊಂಡು ಹೇಳುವ ಉತ್ತರ—ಇವು ನಿಜಕ್ಕೂ ಬಾಲಕರ ಜಗಳದ ನೈಜಚಿತ್ರವನ್ನೇ ನಮ್ಮ ಮುಂದಿಡುತ್ತದೆ.

o o o o

ಭೀಮನ ಈ ಅಗುಡುತನವನ್ನು ನೋಡಿ :

---

*, ** ಆದಿಪರ್ವ–ಆರನೆಯ ಸಂಧಿ ಪದ್ಯ ೨ ಮತ್ತು ೧

ಕೆಣಕಿ ದುರ್ಯೋಧನನ ನೆತ್ತಿಯ
ನಣೆದು ಹಾಯ್ವನು ನಿಮ್ಮ ನೂರ್ವರ
ಬಣಗುಗಳಿಗೆಡಗಾಲ ತೊಡರಿದೆ ಬಸ್ಸಿ ಸೀಸೆನುತ[1]
ಹೇಳುವರು ಯಮಜಂಗೆ ನಿನ್ನವ
ನೂಳಿಗವ ನಿಲಿಸೆಂದು ಪಾರ್ಥಗೆ
ಹೇಳುವರು ಬಳಿಕವರು ಭೀಮನ ಕರೆದು ಗಾರಾಡಿಸೆ
ಕೇಳುವನು ಹೈಯೆಂದು ತನ್ನಯ
ಸೋಲದಲಿ ಮೈಯೊಡ್ಡುವನು ಮೇ
ಲಾಳನೇರಿಸಿ ಹರಿದು ಪಡೆವನು ಗುತ್ತಿನಲಿ ಕೆಡಹಿ.[2]

○ ○ ○ ○

ಆಗ ಭೀಮ ತನ್ನದೇನು ತಪ್ಪಿಲ್ಲವೆಂದೂ ಕೌರವರೇ ತನ್ನನ್ನು ಕೆಣಕಿ ಕೈಸ್ಸಿಗಳನ್ನೂ ಗಾಯಗೊಳಿಸಿದರೆಂದೂ, ಮುಳ್ಳಿನಿಂದ ಕರೆಗಾಯಮಾಡಿಕೊಂಡು ಧೃತರಾಷ್ಟ್ರ ಭೀಷ್ಮರಿಗೆ ತಾನೇ ಮೊದಲು ಹೋಗಿ ದೂರು ಕೊಡುವನು :

ಅಳುತ ಧೃತರಾಷ್ಟ್ರಂಗೆ ಭೀಮನು
ಕಳೆದ ಹುಲುಗಳನೊಡೆದ ಮೊಳಕಾ
ಲ್ಗಳನು ತೋರಿಸಿ ದೂರುವನು ದುರ್ಯೋಧನಾದಿಗಳು
ಮುಳು ಮೊನೆಗಳಲಿ ಗೀರಿ ನೆತ್ತರ
ಗಳೆದು ಹುಡಿಯಲಿ ಹೊರಳಿತಾ ಬಂ
ದಳುತ ಧೃತರಾಷ್ಟ್ರಂಗೆ ಭೀಷ್ಮಗೆ ದೂರುವನು ಭೀಮ.[3]

○ ○ ○ ○

ಭೀಷ್ಮರು ಆ ಮಕ್ಕಳಿಗೆ ರಾಜನ್ಯಾಯ ಮಾಡಿ. 'ನೀವು ಭೀಮನ ಜೊತೆ ಸೇರದೆ ಬೇರೆ ಆಡಿಕೊಳ್ಳಿ' ಎಂದು ಸಮಾಧಾನಮಾಡಿ ಕಳುಹಿಸುವರು.

○ ○ ○ ○

ಸಭಾಪರ್ವದ ಎರಡನೇ ಸಂಧಿಯಲ್ಲಿ ಬರುವ ಭೀಮ ಜರಾಸಂಧರ ಮಲ್ಲಯುದ್ಧದ ವರ್ಣನೆ ವಿಜಯನಗರದ ಅರಸರ ಅರಮನೆಗಳಲ್ಲಿ ನವರಾತ್ರಿಯ ಹಬ್ಬದ ಸಂದರ್ಭದಲ್ಲಿ ನಡೆಯುತ್ತಿದ್ದ ಜಟ್ಟಿಕಾಳಗಗಳ 'ಮಾರ್ಪೊಳಿಕೆ' ಎಂದರೆ ಆಶ್ಚರ್ಯವಾಗದು ! ಈ

1. 2. 3. ಆದಿಪರ್ವ ಆರನೆಯ ಸಂಧಿ—ಪದ್ಯಗಳು 4. 5. 6.

ಇಲ್ಲಿ ಆ ಪದ್ಯಕ್ಕೆ ಸಂಬಂಧಿಸಿದಂತೆ ಕೊಡುವ ಪಾರಿಭಾಷಿಕ ಶಬ್ದಗಳು ಮಲ್ಲಯುದ್ಧದಲ್ಲಿ ನಾವು ಕೇಳುತ್ತಿರುವ ಮಾತುಗಳೇ ಆಗಿವೆ. ಕುತ್ತಿಗೆಗೆ ಕೈಹಾಕುವ (ಗಳಹತ್ತ), ಹಾವಿನಂತೆ ಒಬ್ಬರಿಗೊಬ್ಬರು ತೆಕ್ಕೆಹಾಕುವ (ನಾಗಬಂಧ), ತೋಳಿನಿಂದ ಬಿಗಿಯುವ (ತೋಳತೆಕ್ಕೆ). ಮಂಗನಂತೆ ಹಾಕುವ ಹಿಡಿತವಾದ (ಮರ್ಕಟಬಂಧ), ನಾಲ್ಕು ಹೆಜ್ಜೆ ಎರಡು ಹೆಜ್ಜೆ ಹಾಕುವ (ಚೌಪ್ಪಂಗುಲ-ದುಪ್ಪಂಗುಲ) ಮುಂತಾದ ಪ್ರಯೋಗಗಳನ್ನು ಕವಿ ವರ್ಣನೆಯಲ್ಲಿ ಕಾಣಿಸಿದ್ದಾನೆ.

ಸಿಕ್ಕರೊಬ್ಬರಿಗೊಬ್ಬರುರೆ ಕೈ
ಮಿಕ್ಕು ಹರಿಯದು ಕೊಂಡ ಹೆಜ್ಜೆಯ
ತಕ್ಕಿನಲಿ ಮೈಗೊಡದು ತಿರಿಮುರಿವುಗಳ ಮಂಡಿಗಳ
ಇಕ್ಕಿದರು ಗಳಹಸ್ತದಲಿ ಸಲೆ
ಮಿಕ್ಕು ಸತ್ರಾಣದಲಿ ಮಿಗೆ ಸರಿ
ನೊಕ್ಕಿ ಹಿಡಿದರು ಬಿನ್ನಣದ ಚೊಕ್ಕೆಯದ ಜೋಡಿಯಲಿ.[4]

o o o o

ಬಿಡಿಸಿ ಗಳಹತ್ತವನು ಡೊಕ್ಕರ
ಕೊಡೆ ಮುರಿವ ಸಕುಟುಂಬ ಡೊಕ್ಕರ
ಕಡಸಿ ಕತ್ತರಿ ಘಟ್ಟಿಸುವ ಗಳಹತ್ತ ಡೊಕ್ಕರವ
ತಡೆವ ಚಾಮಂಗುಲ ದುಮಂಗುಲ
ಕೊಡೆಮುರಿವ ಪಟ್ಟಸಕೆ ಚಾಚುವ
ಝಡಿತೆಗೊಡಗುವ ಭಟರು ಮೆಣಗಿದರರಸ ಕೇಳೆಂದ.[5]

ಅವರ ಭೀಕರ ಸೆಣಸಾಟದ ಪರಿಣಾಮವನ್ನು ಹೇಳುತ್ತಾ
"ಧೂಳಿ ಕುಡಿದುದು ಬೆಮರನಾ ಕೆಂಧೂಳಿ ನೆನೆದುದು ಬೆವರಿನಲಿ"
ಎಂದು ಕವಿ ವರ್ಣಿಸುತ್ತಾನೆ.

o o o o

ಕೌರವ ಪಾಂಡವರು ತೋರಿದ ಧನುರ್ವಿದ್ಯಾ ಪ್ರದರ್ಶನವನ್ನು ವರ್ಣಿಸುವಲ್ಲಿ ನಾರಣಪ್ಪ ನಾವೀನ್ಯತೆಯನ್ನು ತೋರಿದ್ದಾನೆ. ಮೂಲ ಭಾರತದಲ್ಲೂ ಧನುರ್ವಿದ್ಯಾ ಪ್ರದರ್ಶನದ ವಿಚಾರವಿರುವುದರಿಂದ ಇಲ್ಲಿ ನಾರಣಪ್ಪ ಹೇಳುವುದರಲ್ಲಿ ಹೊಸ ವಿಷಯ

4, 5. ಸಭಾಪರ್ವ–ಎರಡನೆಯ ಸಂಧಿ–ಪದ್ಯ 96, 97.

ನೇನೂ ಕಂಡುಬರದಿದ್ದರೂ ಈ ಪರೀಕ್ಷೆ ನಡೆದ ವಿಧಾನವನ್ನು ನಿರೂಪಿಸುವುದರಲ್ಲಿ. ಕವಿಯ ಮನಸ್ಸಿನಲ್ಲಿ ಆಗಿನ ಕಾಲದಲ್ಲಿ ರಾಜರ ಸಮ್ಮುಖದಲ್ಲಿ ನಡೆಯುತ್ತಿದ್ದ ಯಾವ ದಾದರೂ ಕ್ರೀಡಾ ಪ್ರದರ್ಶನದ ಚಿತ್ರ ಅಚ್ಚೊತ್ತಿರಬಹುದೆಂದು ಊಹಿಸಲಿಕ್ಕೆ ಅವಕಾಶ ವಿದೆ.

ಪರೀಕ್ಷೆ ನಡೆಯುವಾಗಿನ ಕೆಲವು ಸಂಪ್ರದಾಯಗಳನ್ನೂ ವಿಧಿವಿಧಾನಗಳನ್ನೂ ನಿರೂಪಿಸುವುದನ್ನು ನೋಡಿದರೆ ಅವುಗಳಲ್ಲಿ ಕೆಲವಾದರೂ ಕವಿಯ ಕಾಲದಲ್ಲಿ ರೂಢಿಯಲ್ಲಿದ್ದಿರಬಹುದೆಂದು ಊಹಿಸಬಹುದು : ಧನುರ್ವಿದ್ಯಾ ಪರೀಕ್ಷೆಗೆ ಜೋಯಿಸರಿಂದ ಶುಭಲಗ್ನದ ಆಯ್ಕೆ, ಪ್ರದರ್ಶನಕ್ಕೆಂದು ವಿಸ್ತಾರವಾದ ಪ್ರದೇಶದ ರಚನೆ, ಅಂತಃಪುರದವರಿಗೆ ಪುರಜನರಿಗೆ ಪ್ರೇಕ್ಷಾಗಾರದ ನಿರ್ಮಾಣ, ರಾಜಮನೆತನದವರಿಂದ ವೀಕ್ಷಣೆ, ಪ್ರದರ್ಶನಕ್ಕೆ ಮುನ್ನ ದಿಗ್ಬಲಿ, ಅಷ್ಟದಿಕ್ಕುಗಳಿಗೆ ಹೋಮ, ಘಳಿಗೆಬಟ್ಟಲನ್ನು ನಿರೀಕ್ಷಿಸುತ್ತಾ ಸುಮುಹೂರ್ತದಲ್ಲಿ ಪ್ರದರ್ಶನಾರಂಭ, ಪ್ರದರ್ಶನಾರಂಭದಲ್ಲಿ ಧನುರ್ಧಾರಿಗಳು ಗುರುವಿಗೆ ತೋರಿದ ಗೌರವ, ಸಭ್ಯಸಂಪ್ರದಾಯಗಳು— ಇವುಗಳೊಂದೊಂದರ ವಿಸ್ತಾರವಾದ ವರ್ಣನೆಯನ್ನು ನಾರಣಪ್ಪ ಬಾನುಲಿಯಲ್ಲಿ ಬರುವ ಕ್ರೀಡಾಪಂದ್ಯದ ವೀಕ್ಷಕ ವಿವರಣೆಯಂತೆ ನೀಡುತ್ತಾನೆ.

ಪ್ರದರ್ಶನದಲ್ಲಿ ಪಾಲುಗೊಂಡಿದ್ದ ಒಬ್ಬೊಬ್ಬರ ಪರಿಚಯವನ್ನೂ ಅಂಧನೃಪ ಧೃತರಾಷ್ಟ್ರನಿಗೆ ವಿದುರ ಮಾಡಿಕೊಟ್ಟ ಪರಿ ಇದು :

ಈತ ಧರ್ಮಜನಿವರು ಮಾದ್ರೀ
ಜಾತರೀತ ಸುಲೋಚನನು ಬಳಿ
ಕೀತ ದೀರ್ಘಕ ವಿಂದನಿವನಿಂತೀತನಿವನೆಂದು
ಈತ ಧನುವಿನಲೀತ ಖಡ್ಗದ
ಲೀತ ಪರಿಘದಲೀತ ಕುಂತದ
ಲೀತ ಬಲುಹೆಂದಂಧ ಭೂಪತಿಗರುಹಿದನು ವಿದುರ.[6]

ಕ್ರೀಡೆಯಲ್ಲಿ ಸಾಹಸ ತೋರಿದವರ ಬಗೆಗೆ ಜನರಿಂದ ಬರುತ್ತಿದ್ದ ಮೆಚ್ಚಿಗೆ ಜಯಘೋಷ, ದೃಷ್ಟಿ ತೆಗೆಯುವ ಪ್ರೀತಿ, ಕ್ರೀಡಾಪಟುಗಳ ಹಾವಭಾವಗಳು, ಇವುಗಳೊಂದೊಂದೂ ಕೇವಲ ವ್ಯಾಸಭಾರತದ ಪಡಿಯಚ್ಚಿನಂತಿರದೆ ಕವಿಯ ಮನಸ್ಸಿನಲ್ಲಿ ಮೂಡಿರುವ ಸಮಕಾಲೀನ ಸಮಾಜದ ಪ್ರತಿರೂಪಗಳಂತಿವೆ. ಉದಾಹರಣೆಗೆ ಒಂದೆರಡು ಚಿತ್ರಗಳನ್ನು ನೋಡಿ :

6. ಆದಿಪರ್ವ. ಏಳನೆಯ ಸಂಧಿ. ಪದ್ಯಗಳು 24. 30 ಮತ್ತು 36.

ಧೀರರೇ ಜಗಜಟ್ಟಿ ರಾಜಕು
ಮಾರ ಚೌಪಟಮಲ್ಲ ಕುರುಕುಲ
ಕೈರವಾಮೃತ ಕಿರಣ ಧಿರು ಧಿರು ಭಲರೆ ಭಲರೆನುತ
ಭೂರಿಸಭೆಯಲಿ ಸುಲಿದು ಬಿಸುಡುವ
ಸೀರೆಗಳ ತೂಪಿರಿದು ಸುಳಿವು
ಪ್ಪಾರತಿಯ ತನಿಪರಕೆ ತಳಿತುದು ತಾಯಸೇವಾದಲಿ.[7]

ಭೀಮ ದುರ್ಯೋಧನರ ದ್ವಂದ್ವ ಕಾಳಗವನ್ನು ನೋಡಿ ಸಭೆ ದಿಙ್ಮೂಢ ವಾಯಿತು. ಅವರಿಬ್ಬರನ್ನೂ ಬೇರ್ಪಡಿಸಲು ಭೀಷ್ಮಾದಿಗಳು ಧಾವಿಸಿದ ಪರಿಯನ್ನು ಬಣ್ಣಿಸುವಾಗ ಕವಿ ನಮ್ಮ ಕೌತುಕವನ್ನೂ ಕೆರಳಿಸುತ್ತಾನೆ :

ಎಲೆಲೆ ಹಿಡಿಹಿಡಿ ಭೀಮನನು ತೆಗೆ
ಕೆಲಕೆ ದುರ್ಯೋಧನನಿದು ಮಂ
ಗಳದ ಬೆಳಗಿಂಗಳಿನ ಮಳೆ ಸುರಿದುದೆ ಮಹಾದೇವ
ಕಳವಳಿಸೆ ಭೀಷ್ಮಾದಿಗಳು ನೃಪ
ತಿಲಕರಿಬ್ಬರ ನಡುವೆ ಹಾಯ್ದರು
ಕುಲಗಿರಿಗಳಂದದಲಿ ಕೃಪಗುರುಸುತರು ವಹಿಲದಲಿ.[8]

o o o o

ಕರ್ಣನ ರಂಗಪ್ರವೇಶ ಕೌತುಕಮಯವಾಗಿ ಪ್ರಾರಂಭದಲ್ಲೇ ಅವನು ಪಾರ್ಥನ ಪರಾಕ್ರಮವನ್ನು ಬಣ್ಣಿಸುತ್ತಿದ್ದ ಜನರನ್ನು ಬಾಯಿಮುಚ್ಚಿಸುವಂತಿದ್ದು, ಆ ಸನ್ನಿವೇಶ ಮೈನವಿರೇಳಿಸುವಂತಿದೆ :

ಬಾಯ ಹೊಯ್ ಫಲುಗುಣನ ಹೊಗಳುವ
ನಾಯಿಗಳನೇನಾಯ್ತು ಕೌತುಕ
ನಾಯಕಿವದಿರ ಪಕ್ಷಪಾತವ ನೋಡು ನೋಡೆನುತ
ಸಾಯಕವ ತಿರುಹುತ್ತಲಾ ಕ
ರ್ಣಾಯಕಾಂಬಿಕ ನೆಪಬಲದ ಕುರು
ರಾಯನನುಜರ ಮೇಳದಲಿ ಹೊರವಂಟನಾ ಕರ್ಣ.[9]

o o o o

7, 8. ಆದಿಪರ್ವ, ಏಳನೆಯಸಂಧಿ..ಪದ್ಯಗಳು 24, 30 ಮತ್ತು 36.

9. ಆದಿಪರ್ವ..ಏಳನೆಯಸಂಧಿ..ಪದ್ಯಗಳು 47, 50.

ಸೆಣಸುವಡೆ ಬಾಯೆಂದು ಪಾರ್ಥನ
ಕೆಣಕಿದನು ಘನರೋಷ ಶಿಖಿಯಲಿ
ಕುಣಿದನಿಬ್ಬರ ಹಿಡಿದ ಕಂಗಳೊಳೊಗುವ ಕಿಡಿಗಳಲಿ.[10]

o o o o

ಹೀಗೆ ಕುರುಪಾಂಡವರ ಧನುರ್ವಿದ್ಯಾ ಪ್ರದರ್ಶನವನ್ನು ಬಣ್ಣಿಸುವ ನೆಪದಲ್ಲಿ ಕವಿ ಕುಮಾರವ್ಯಾಸ ತಾನು ಕಂಡ ಅಥವಾ ಕೇಳಬಹುದಾದ ಆಗಿನ ಕಾಲಕ್ಕೆ ಬಹಳ ಪ್ರಚಲಿತವಾಗಿದ್ದ ಜಟ್ಟಿಕಾಳಗ, ದ್ವಂದ್ವಯುದ್ಧ—ಮುಂತಾದ ಶಕ್ತಿ ಸಾಹಸ ಪ್ರದರ್ಶನದ ಚಿತ್ರವೊಂದನ್ನು ಪರೋಕ್ಷವಾಗಿ ಮೂಡಿಸಿದಂತಿದೆ.

o o o o

ಪಾಂಡವರು ನಡೆಸಿದ ರಾಜಸೂಯಯಾಗದ ವೈಭವದ ವೈಖರಿಯನ್ನು ಬಣ್ಣಿಸುವಾಗ ಕವಿಯ ಕಣ್ಣ ಮುಂದೆ ಯಾವುದೋ ಒಂದು ಸಮಕಾಲೀನ ಚಿತ್ರ ಮೂಡಿರಲಿಕ್ಕೂ ಸಾಕು ಎನಿಸುತ್ತದೆ.

ಪುರದಲೆಂಬತ್ತೆಂಟು ಸಾವಿರ
ಧರಣಿಯಮರರು ನಿತ್ಯ ಪಡೆಯುವ
ರರಸ ಕೇಳ್ಳೈ ಹತ್ತು ಸಾವಿರ ಹೊನ್ನ ತಳಿಗೆಯಲಿ
ವರ ಯತೀಶರು ಹತ್ತು ಸಾವಿರ
ವರ ಮನೆಯಲುಂಬುದು ನೃಪಾಲಾ
ಧ್ವರದ ಸಿರಿಯನು ನೀವೆ ಕಂಡಿರೆಯೆಂದನಾ ಭೂಪ.[11]

o o o o

ಇದು ನಿಜಕ್ಕೂ ಒಂದು ಶ್ರೀಮಂತರಾಜ್ಯದ ವೈಭವದ ಭೂರಿ ಭೋಜನದ ಚಿತ್ರ. ಕನಕ, ಪುರಂದರ, ಕುಮಾರವ್ಯಾಸ ಕೃತಿಗಳಲ್ಲಿ ಆಗಿನ ಕಾಲದ ಜನಜೀವನದ ಚಿತ್ರ ಪಡಿಮೂಡಿದೆ ಎಂಬುದು ನಿಸ್ಸಂಶಯವಾದ ವಿಷಯ. ಈ ಎಲ್ಲ ಕವಿಗಳೂ ಸಂತರೂ ವಿಜಯನಗರ ಸಾಮ್ರಾಜ್ಯದ ವೈಭವದ ದಿನಗಳನ್ನು ಕಂಡುಂಡವರು. ಜನಜೀವನವನ್ನು ತಮ್ಮ ಕೃತಿಗಳಲ್ಲಿ ಪಡಿಮೂಡಿಸುವುದರಲ್ಲಿ ನಿಷ್ಣಾತರಾಗಿ ಜನತೆಗೆ ತಮ್ಮ ಸಂದೇಶವನ್ನು ಅವರ ಆಡುನುಡಿಯಲ್ಲೇ ತಿಳಿಸುವುದಕ್ಕಾಗಿ, ತಮ್ಮ ಕೃತಿಗಳನ್ನು ಮಾಧ್ಯಮವನ್ನಾಗಿ ಮಾಡಿಕೊಂಡವರು.

---

10. ಆದಿಪರ್ವ..ಏಳನೆಯಸಂಧಿ..ಪದ್ಯಗಳು 47, 50.

11. ಸಭಾಪರ್ವ : ಸಂಧಿ-12-ಪದ್ಯ-46.

ಕನಕದಾಸರು ‘ಮೋಹನತರಂಗಿಣಿ’ಯಲ್ಲಿ ಕೃಷ್ಣನಗರಿಯಲ್ಲಿ ಅರ್ಥಾತ್ ವಿಜಯನಗರದಲ್ಲಿ ಬ್ರಾಹ್ಮಣರ ಬೀದಿಯಲ್ಲಿನ ಒಂದು ಮಧ್ಯಾಹ್ನದ ಚಿತ್ರವನ್ನು ಸುಂದರವಾಗಿ ನೀಡಿದ್ದಾರೆ. ಅಲ್ಲಿ ಅನ್ನಸತ್ರಗಳನ್ನೂ ಅರವಟ್ಟಿಗೆಗಳನ್ನೂ ಇಟ್ಟು ಧರ್ಮಶ್ರೇಷ್ಠರಿದ್ದರು. ವಿಪುಲ ಅನ್ನಸತ್ರಗಳೇ ಅಲ್ಲದೆ ಮಠ ಮಠಗಳಲ್ಲಿಯೂ ಅಸಂಖ್ಯಾತ ಸಂಖ್ಯೆಯ ಸನ್ಯಾಸಿಗಳು ಉಂಡು ತಣಿಯುತ್ತಿದ್ದರು.

ಸಾಸಿರ ಶತಲಕ್ಷ ಕೋಟಾನುಕೋಟಿ ಸನ್ಯಾಸಿಗಳ್ ಮಠ-ಮಠದಲ್ಲಿ ಗ್ರಾಸಿಗಳಾಗೆ ಸಂತಸವೆತ್ತು ನಿಖಿಲ ಪ್ರದೇಶಗಳಿದ್ದರೂರೊಳಗೆ"[12]

ಕನಕದಾಸರು ನೀಡುವ ಈ ಸಂತರ್ಪಣೆಯ ಚಿತ್ರ ಕುಮಾರವ್ಯಾಸ ರಾಜಸೂಯಯಾಗದ ನೆಪದಲ್ಲಿ ಕೌರವನ ಬಾಯಲ್ಲಿ ಹೇಳಿಸಿರುವ ಚಿತ್ರಕ್ಕೂ ಹೆಚ್ಚು ಅಂತರವಿರಲಾರದು. ವಿಜಯನಗರದ ವೈಭವವನ್ನೇ ಈ ಕವಿಗಳು ತಮ್ಮ ಕೃತಿಗಳಲ್ಲಿ ಪರೋಕ್ಷವಾಗಿ ಪ್ರತಿಬಿಂಬಿಸಿದ್ದಾರೆಂದು ಊಹಿಸಿದರೆ ತಪ್ಪಾಗಲಾರದು.

ಇದಕ್ಕೊಂದು ಸಮಕಾಲೀನ ನಿದರ್ಶನವಿದೆ. ವಿಜಯನಗರದ ಪ್ರಾಂತೀಯ ಆಡಳಿತಗಾರರು ಬ್ರಾಹ್ಮಣರನ್ನು ಯಾವ ರೀತಿ ಸತ್ಕರಿಸುತ್ತಿದ್ದರು ಎಂಬುದನ್ನು ಹೇಳುವ ಸಂದರ್ಭದಲ್ಲಿ "ತಂಜಾವೂರುವಾರಿ ಚರಿತಂ" ಎಂಬ ಕೃತಿಯು ತಂಜಾವೂರಿನ ವಿಜಯರಾಘವನಾಯಕನು ಪ್ರತಿದಿನವೂ 12,000 ಜನ ಬ್ರಾಹ್ಮಣರಿಗೆ ಅನ್ನದಾನ ಮಾಡಿ ಅನಂತರ ತಾನು ಊಟಮಾಡುತ್ತಿದ್ದನೆಂದು ಹೇಳುತ್ತದೆ. ಇದರಿಂದ ವಿಜಯನಗರ ಸಾಮ್ರಾಜ್ಯದಲ್ಲಿ ಅಲ್ಲಲ್ಲಿ ನಿತ್ಯಸಂತರ್ಪಣೆಗಳು ನಡೆಯುತ್ತಿದ್ದಿರಬೇಕೆಂದು ಊಹಿಸಲು ಅವಕಾಶವಿದೆ.[13]

ರಾಜಸೂಯಯಾಗದ ಸಂದರ್ಭದಲ್ಲಿ ಬರುವ ಸಂತರ್ಪಣೆಯು ಒಂದು ಸುದೀರ್ಘ ಚಿತ್ರ ಆಗಿನ ಕಾಲದಲ್ಲಿ ನಡೆಯುತ್ತಿದ್ದ ಭೂರಿಭೋಜನದ ಒಂದು ಚಿತ್ರವೇ ಆಗಿದೆ. ಸಾವಿರಾರು ಜನರಿಗೆ ಏಕಕಾಲದಲ್ಲಿ ಭೋಜನ ವ್ಯವಸ್ಥೆ ಮಾಡುವುದು ಸಾಮಾನ್ಯ ವಿಷಯವಲ್ಲ. ಪಾಕಶಾಲೆಯಲ್ಲೇ ಆಗಲೀ ಬಡಿಸುವುದರಲ್ಲೇ ಆಗಲೀ ಮುಂದಾಲೋಚನೆ ಇಲ್ಲದೆ ಸ್ವಲ್ಪ ವ್ಯವಸ್ಥೆ ತಪ್ಪಿದರೂ ಕೂಡ ಅಭಾಸಗಳಾಗಿ ಮಾನಹಾನಿ ಅರ್ಥಹಾನಿಗಳಾಗುವ ಸಂದರ್ಭಗಳುಂಟು. ಊಟಕ್ಕೆ ಕುಳಿತ ಸಾವಿರಾರು ಜನಕ್ಕೆ ಆಹಾರ ಸಾಮಗ್ರಿಗಳನ್ನು ಸರಬರಾಜುಮಾಡಲು ಕೈಗೊಂಡಿದ್ದ ವ್ಯವಸ್ಥೆಯನ್ನು ಕವಿ ಕೊಡುವ ಈ ಪಾಕಶಾಲೆಯ ಚಿತ್ರದಲ್ಲಿ ನೋಡಬಹುದು :

---

12. ಮೋಹನ-ತರಂಗಿಣಿ : 3.60

13. B. A. Saletore : Social and political life in Vijaya Nagar-Part II page 123.

08399

ಅರಸ ಕೇಳೈ ಪಾಕಶಾಲೆಯು
ಹಿರಿಯ ಹಂತಿಗಳಲಿ ಚತುರ್ದಶ
ಕರಿ ಘಟೆಗಳೆಡೆಯಾಡುವವು ಸಂಭಾರವನು ಹೇರಿ
ಹರಿವ ರಜತ ದ್ರೋಣಿಯಲಿ ಸುರಿ
ಸುರಿದು ಸೇದುವ ರಾಟಳಂಗಳೊ
ಳೆರೆವ ಘೃತ ಮಧು ತೈಲ ಧಾರಾ ರಚನೆ ಚೆಲುವಾಯ್ತು.[14]

ಊಟದಲ್ಲಿ ಮಾಡಿದ್ದ ವ್ಯವಸ್ಥೆಯ ಚಿತ್ರ ಇನ್ನೂ ಮನೋಹರವಾಗಿದೆ :

ನೆರೆದ ಭೂಸುರತತಿಯ ನೋಟಕೆ
ಕರೆಸಿ ಕುಳ್ಳಿರಿಸುವನು ಸಾತ್ಯಕಿ
ಭರದಿನೆಂಜಲ ತೆಗೆಸಿ ಸಾರಿಸುವುದು ವಿಕರ್ಣಂಗೆ
ಅರಸಕೇಳ್, ಭೋಜನದ ಸಮನಂ
ತರದ ವೀಳೆಯ ಗಂಧ ಮಾಲ್ಯಾಂ
ಬರವಸೇವಧಿಕಾರ ದುಶ್ಶಾಸನನ ವಶವಾಯ್ತು.[15]

ಕುಮಾರವ್ಯಾಸನಿಗೆ ರಾಜವೈಭವದ ಚಿತ್ರವನ್ನು ಕೊಡುವಾಗ ಅವನ ಕಣ್ಣೆದುರಿಗೆ ವಿಜಯನಗರದ ಅರಮನೆಯ ಚಿತ್ರವೇ ಕಂಡಿರಬೇಕು. ವಿಜಯನಗರದ ಅರಸರ ರಾಜಸಭೆಗಳು, ಸಾಹಿತ್ಯ ಸಂಗೀತ ನೃತ್ಯ ಕಲಾವಿದರಿಂದ ವಿಜೃಂಭಿಸುತ್ತಿದ್ದವು ಎಂಬುದಕ್ಕೆ ಸಮಕಾಲೀನ ಸಾಹಿತ್ಯದ ವೈಭವದ ವರ್ಣನೆಗಳೇ ಸಾಕ್ಷಿ.

ಕವಿ ಕೊಡುವ ರಾಜಸಭೆಯ ವರ್ಣನೆಗಳಲ್ಲಿ ಕೆಲವು ಸಾಂಪ್ರದಾಯಿಕ ಹೆಸರುಗಳಿದ್ದರೂ ಕೆಲವು ಹೊಸ ಹೆಸರುಗಳನ್ನೂ ಕಾಣಬಹುದು. ಕವಿ ರಾಜಸಭೆಗೆ ಬರುತ್ತಿದ್ದ ಕಲಾವಿದರ ಹೆಸರನ್ನು ಹೇಳುವಾಗ ಚಿತ್ರಕರು, ಶಿಲ್ಪಿಗಳು, ಸರಸ ಕವಿಗಳು, ತಾರ್ಕಿಕರು, ವಾಗ್ಮಿಗಳು, ಕಥಕರು, ಗದ್ಯ-ಪದ್ಯ ವಿನೋದಿಗಳು, ಪುರೋಹಿತರು, ವೇದಾಂಗ ರಹಸ್ಯ ವಿವಾದಕರು, ಪಡಿಯರರು, ಮಾಯಾಕೋವಿದರು, ಮಾಂತ್ರಿಕರು, ಮಹೇಂದ್ರ ಜಾಲಿಗಳು, ವೈದ್ಯರು, ಶಾಕುನಿಕರು, ವಿದೂಷಕರು, ಗಣಿಕೆಯರ ಹೆಸರನ್ನು ಹೇಳುತ್ತಾನೆ.

ಉದ್ಯೋಗ ಪರ್ವದಲ್ಲಿ ಕೌರವನ ಸಭೆಯನ್ನು ವರ್ಣಿಸುತ್ತಾ ಕವಿ ಹೇಳುವ ಒಂದು ಪದ್ಯ, ಲಂಚಧಾರಿಗಳ ವಿಷಯವನ್ನೂ ಹೇಳುತ್ತದೆ :

14, 15. ಸಭಾಪರ್ವ, ಸಂಧಿ 7 : ಪದ್ಯ 18, ಪದ್ಯ 16.

ಒಲಿದರೊಳಲಂಚದಲಿ ಛಿದ್ರಿಸಿ
ಕೊಲುವ ಮುನಿದೊಡೆ ಮಂತ್ರಶಕ್ತಿಯೊ
ಳಳುಕಿಸುವ ಮಂತ್ರಿಗಳು ಮೆರೆದರು ವಾಮಭಾಗದಲಿ.[16]

ಬರೆದ ಬಳಿಕದು ವಿಧಿಯ ಸೀಮೆಯ
ಬರಹ ನಿಜಕಾರ್ಯಾರ್ಥ ಲಾಭವು
ದೊರಕಿದೊಡೆ ಪತಿಯರ್ಥ ಸೀರಲಿ ಬರೆದ ಲಿಪಿಯಂತೆ
ಕರಗುಪಿತ ಲೋಲುಪರು ಲಂಚದ
ಪರಮ ಜೀವನ ಜಾಣರಾ ಸಿರಿ
ಕರಣದವರೊಪ್ಪಿದರು ಭೂಪಾಲಕನ ಸಭೆಯೊಳಗೆ.[17]

ಕುಮಾರವ್ಯಾಸನ ಕಾವ್ಯದಲ್ಲಿ ತಾಂಬೂಲಕ್ಕೆ ಸಂಬಂಧಿಸಿದಂತೆ ದೊರೆಯುವ ಒಂದೆರಡು ಚಿತ್ರಗಳು ಮೆಲಕುಹಾಕುವಂತಿವೆ : ವಿದುರನೀತಿಯಲ್ಲಿ ಬರುವ ಒಂದು ಸಂದರ್ಭ, ವೀಳೆಯದೆಲೆಯನ್ನು ಹಾಕುವಾಗ ಕೆಲವು ವಿಷಯಗಳ ಕಡೆಗೆ ಎಚ್ಚರ ತಪ್ಪಿದರೆ ಹೇಗೆ ಭಾಗ್ಯಸಿರಿ ನಾಶವಾಗುತ್ತದೆ ಎಂಬುದರ ಬಗೆಗೆ ನಮ್ಮ ಗಮನವನು ಸೆಳೆಯುತ್ತದೆ. ವೀಳೆಯದೆಲೆಯನ್ನು ಹಾಕುವಾಗ ಅದರ ಹಿಂದೆ ಮುಂದೆ ಇರುವ ತೊಟ್ಟನ್ನು ತೆಗೆಯದೆ, ಚೂರ್ಣಪರ್ಣತ್ಯಾಗವಿಲ್ಲದೆ ದಂತಧಾವನಪರ್ಣವನು ಸವಿದ ಭೋಗಿಸಿದರೆ, ಅವನು ದೇವೇಂದ್ರನಾಗಿರಲೀ ಆದಿಶೇಷನಾಗಿರಲಿ 'ಭಾಗ್ಯಸಿರಿ' ಅವನಿಂದ ದೂರವಾಗುವಳು. (ಗದುಗಿನ ಭಾರತ-ಉದ್ಯೋಗಪರ್ವ-3-59)

ವೀಳೆಯದೆಲೆ ಮತ್ತು ಅದರ ಪರಿಕರಗಳನ್ನು ಇಡುವುದಕ್ಕೆ 'ಸಂಚಿ ಅಥವಾ ಹಡಪ' ಎಂದು ಹೆಸರು. ಸಂಚಿ ಇಲ್ಲದವರು ತಮ್ಮ ಉತ್ತರೀಯ ಅಥವಾ ಅಂಗವಸ್ತ್ರದ ತುದಿಯಲ್ಲಿ ಕಟ್ಟಿರುವರು. ನಾರಣಪ್ಪ ಘೋಷಯಾತ್ರೆಯ ಸಂದರ್ಭದಲ್ಲಿ ಇಂತಹ ಒಂದು ಚಿತ್ರವನ್ನು ಕೊಡುತ್ತಾನೆ. ತುರುಗಳು ಆಶ್ರಮವನ್ನು ಹೊಕ್ಕು ಅಲ್ಲಿನ ಆಶ್ರಮವಾಸಿಗಳ ಶಾಂತಿಯನ್ನು ಕಲಕಲು ಹೆದರಿ ಓಡಿಹೋಗುತ್ತಿದ್ದವರಲ್ಲಿ ತಾಂಬೂಲವನ್ನು ಕಟ್ಟಿದ ರಕಟುಪಾದ್ಯರು ಇದ್ದರಂತೆ :

ಸ್ರುಕ್‌ಸುವವ ಮುಟ್ಟಿದರು ಧೌತಾಂ
ಶುಕದೊಳಗೆ ತಂಬುಲವ ಕಟ್ಟಿದ

16, 17. ಉದ್ಯೋಗಪರ್ವ : ಸಂಧಿ : 8-ಪದ್ಯ 35, ಪದ್ಯ 40.

ಶಕಟುಪಾರ್ಶ್ವದ ಮೋರೆಯನು ತೀಡಿಸುತ ಬೆರಳಿನಲಿ
ಚಕಿತಧೃತಿಯರು ದೀಕ್ಷಿತರ ಚಂ
ಡಿಕೆಗಳನು ತುಡುಕಿದರು ಮುನಿವಟು
ನಿಕರ ಶಿರದಲಿ ಕುಣಿಸಿದರು ಕುಂಚಿತ ಕರಾಂಗುಲಿಯ.[18]

ತಾಂಬೂಲದಲ್ಲಿ ಅದರ ರಸವೇ ಜೀವಾಳ. ಆ ರಸವನ್ನು ಸದಾ ಬಾಯಲ್ಲಿ ತುಂಬಿಕೊಂಡಿದ್ದರೆ ತಾಂಬೂಲಪ್ರಿಯರಿಗೆ ಅದೇನೋ ಒಂದು ಬಗೆಯ ಆನಂದ! ತಾಂಬೂಲ ಸವಿಯುವಾಗ ಒಮ್ಮೊಮ್ಮೆ ತುಟಿಯ ಮಧ್ಯದಿಂದ ರಸ ಒಸರಿ ಬಾಯಿ ಬಿಟ್ಟರೆ ಹೊರ ಸೂಸುತ್ತದೆ. ನಾರಣಪ್ಪ ಅಂತಹ ಒಂದು ಚಿತ್ರವನ್ನು ಕೊಡುತ್ತಾನೆ:

ಅಳಲುವೀ ಧೃತರಾಷ್ಟ್ರನುರು ಕಳ
ಕಳವ ಕೇಳಿದು ಕರ್ಣಶಕುನಿಗ
ಳುಲಿದು ತಂಬುಲ ಸೂಸೆ ನಕ್ಕರು ಹೊಯ್ದು ಕರತಳವ.[19]

ಪಾಂಡವರಿಗಾದ ದುರ್ಗತಿಯನ್ನು ಕುರಿತು ಧೃತರಾಷ್ಟ್ರ ಚಿಂತಿಸುತ್ತಿರುವಾಗ ಕರ್ಣ ಶಕುನಿಗಳು ಅವನನ್ನು ಲೇವಡಿ ಮಾಡಿದ ಪರಿ ಇದು.

ದ್ರೌಪದಿಯ ಮನಮೋಹಕ ರೂಪಿಗೆ ಮನಸೋತು ಬಾಡಿ ಬಸವಳಿದು ಬಾಹ್ಯ ಪರಿವೆಗೆ ಅಂಧರಾಗಿ ತದೇಕಚಿತ್ತದಿಂದ ಇದ್ದ ಆ ನೃಪರನ್ನು ವರ್ಣಿಸುವಾಗ ನಾರಣಪ್ಪ ಮತ್ತೊಂದು ಬಗೆಯ ತಾಂಬೂಲದ ಚಿತ್ರವನ್ನು ಕೊಡುತ್ತಾನೆ :

ಮಡಿಸಿದೆಲೆ ಬೆರಳೊಳಗೆ ಬಾಯೊಳ
ಗಡಸಿದೆಲೆ ಬಾಯೊಳಗೆ ಸಚಿವರ
ನುಡಿಯ ಕೇಳರು ಸುಳಿಯ ಕಾಣರು ಲೋಚನಾಗ್ರದಲಿ
ಕಡುಮುಳಿದ ಕಂದರ್ಪ ಶರವವ
ಘಡಿಸಿ ಕೈಗಳ ನೋಡಿ ನೃಪರಿವೆ
ಮಿಡುಕದಿರ್ದರು ಚಿತ್ರ ಸಮೂಗಿನ ಹೊತ್ತ ಮಗುಳದಲಿ.[20]

---

18. ಅರಣ್ಯಪರ್ವ : ಸಂಧಿ-18, ಪದ್ಯ.8

19. ಅರಣ್ಯಪರ್ವ : ಸಂಧಿ-17, ಪದ್ಯ.8

20. ಆದಿಪರ್ವ : ಸಂಧಿ-13, ಪದ್ಯ.67

ತಾಂಬೂಲ ಹಾಕುವವರು ಎಲೆಯನ್ನು ಸುರುಳಿಸುತ್ತಿ ಕೈಬೆರಳುಗಳ ಸಂದಿಯಲ್ಲಿ ಸಿಕ್ಕಿಸಿಕೊಂಡು ಒಂದೊಂದಾಗಿ ಬಾಯಿಗೆ ಇಟ್ಟುಕೊಳ್ಳುವುದೂ, ಬೇರೆ ಕಡೆ ದೃಷ್ಟಿ ಹರಿದಾಗ ಕೈ-ಬಾಯಿಗಳ ಎಲೆ ಹಾಗೆ ಇರುವುದೂ ಇವೆಲ್ಲ ತಾಂಬೂಲ ಧಾರಿಗಳಲ್ಲಿ ಇಂದಿಗೂ ಕಾಣಬಹುದಾದ ನೈಜಚಿತ್ರಗಳೇ !

ನಮ್ಮ ಧಾರ್ಮಿಕ ನಂಬಿಕೆಗಳಾದ ಶಕುನ, ಹರಕೆ ಮುಂತಾದವುಗಳ ಬಗೆಗೆ ಕುಮಾರವ್ಯಾಸಭಾರತ ಸ್ವಲ್ಪ ಬೆಳಕು ಚೆಲ್ಲುತ್ತದೆ. ದ್ರೌಪದಿಯ ಸ್ವಯಂವರಕ್ಕೆಂದು ಹೊರಟ ರಾಜರು ತಮ್ಮ ಅದೃಷ್ಟ ಪರೀಕ್ಷೆಯಲ್ಲಿ ಜಯವಾಗಲೆಂದು ಹಲವಾರು ದೇವರುಗಳಿಗೆ ಹರಸಿಕೊಂಡರಂತೆ !

ಹರಸಿಕೊಂಡರು ನಿಖಿಳ ಪೃಥ್ವೀ
ಶ್ವರರು ಮಾಯಾಪುರದ ಕಾಂಚೀ
ಪುರದ ಜಾಳಾಂಧರದ ವಿವಿಧಸ್ಥಾನ ದೇವರಿಗೆ
ಕರಿಮುಖನ ಕಜ್ಜಾಯದಲಿ ಸ
ತ್ಕರಿಸಿ ಸಂಶಯ ಭೇದವರ್ಗದ
ಪರುಷದಲಿ ಹೊರವಂಟರೊಬ್ಬರನೊಬ್ಬರುರವಣಿಸಿ.[21]

ಹಾಗೆಯೇ ದ್ಯೂತಕ್ಕೆ ಸಿದ್ಧರಾದ ಕರ್ಣ ಶಕುನಿಗಳೂ ;

ಹರಸಿಕೊಂಡರು ಗೌರಿಯಕ್ಷೇ
ಶ್ವರಿ ಕಳಾವತಿ ದುರ್ಗಿ ಭುವನೇ
ಶ್ವರಿಗಳಿಗೆ ವಿವಿಧೋಪಚಾರದ ಬಲಿ ವಿಧಾನದಲಿ.[22]

ಸಭಾಪರ್ವದಲ್ಲಿ ಬರುವ ಧರ್ಮರಾಯ ದ್ಯೂತಕ್ಕೆಂದು ಹೊರಟಾಗಿನ ಸನ್ನಿವೇಶ ಶಕುನಗಳ ಬಗೆಗೆ ಕವಿಯ ಸಮಕಾಲೀನ ಪ್ರಜ್ಞೆಯನ್ನು ಅರಿಯಲು ಸ್ವಲ್ಪಮಟ್ಟಿಗೆ ಸಹಾಯವಾಗಬಹುದೆನಿಸುತ್ತದೆ. ಯಮನಂದನ ದ್ಯೂತಕ್ಕೆಂದು ಹೊರಟಾಗ ಅಪಶಕುನಗಳಾಗುತ್ತವೆ. ಆಗ ಬ್ರಾಹ್ಮಣರು :

ಶಕುನಗತಿ ಸಾಮಾನ್ಯವಿದು ಕಂ
ಟಕದ ನೆಲೆ ಜನ್ಮದಲಿ ಸಪ್ತಾ

---

21. ಆದಿಪರ್ವ : ಸಂಧಿ 17, ಪದ್ಯ 3
22. ಸಭಾಪರ್ವ : ಸಂಧಿ 13, ಪದ್ಯ 21

ಧಿಕದೊಳಿದ್ದರು ಸೌರಿ ಗುರುಭೌಮಾಬ್ಜಬಾಂಧವರು.
ವಿಕಳದೆಸೆ ನಿಮ್ಮಡಿಗೆ ನೈರಿ
ಪ್ರಕರಕುನ್ನತದೆಸೆ ಮಹೀ ಪಾ
ಲಕ ಶಿರೋಮಣಿ ಪುರಕೆ ಮರಳೆಂದರು ಮಹೀಸುರರು.[23]

ರಾಜನಿಗೆ ಶಕುನ ಕೂಡಲಿಲ್ಲವೆಂದು ಹೇಳಿ ಪುರಕ್ಕೆ ಮರಳುವಂತೆ ತಿಳಿಯ ಹೇಳುವರು. ಆಗ ಧರ್ಮರಾಯ ಕೊಡುವ ಉತ್ತರ ತೀಕ್ಷ್ಣವಾಗಿದೆ. ವಿಚಾರ ಮತಿಗಳು ಶಕುನದ ಬಗೆಗೆ ವಿಚಾರ ಮಾಡುವಂತಿದೆ.

ಮರುಳಲಹುದೈ ದೈವವಿಕ್ಕಿದ
ಕೊರಳುಗಣ್ಣಿಯ ಕುಣಿಕೆಯಾರಲಿ
ಹರಿವುದೈ ಮನ್ನಿಸುವನೇ ಮಾಹಾರ್ತಿಕರ ನುಡಿಯ
ಕರೆಸುವನು ಧೃತರಾಷ್ಟ್ರ ನಮಗೀ
ನರಿ ಮೊಲಂಗಳ ಹಕ್ಕಿ ಹರಿಣೆಯ
ಕರಹವೇಗುವನೆಂದು ಜರೆದನು ಶಕುನ ಕೋವಿದರ.[24]

ಯಾವುದಾದರೂ ಕೆಲಸಕ್ಕೆ ಹೊರಟ ಸಂದರ್ಭದಲ್ಲಿ ಹೆಜ್ಜೆ-ಹೆಜ್ಜೆಗೂ ಶಕುನ ನೋಡಿ ಕೆಲಸ ಮಾಡಲು ಸಾಧ್ಯವೆ ? ಹಾಗೆ ಮಾಡುತ್ತಾ ಹೋದರೆ ಕಾರ್ಯಪ್ರಗತಿ ತಾನೆ ಹೇಗೆ ಸಾಧ್ಯ ? 'ನಮ್ಮನ್ನು ಕರೆಸುತ್ತಿರುವವನು ಧೃತರಾಷ್ಟ್ರ— ಹೀಗಿರುವಾಗ ಈ ನರಿ, ಮೊಲ, ಹಕ್ಕಿ-ಪಕ್ಷಿಗಳ ಗೊಡವೆ ನಮಗೇಕೆ ? ದೈವೇಚ್ಛೆ ಇದ್ದಂತಾಗಲಿ. ಅದನ್ನು ಮೀರಲು ಯಾರಿಂದ ತಾನೆ ಸಾಧ್ಯ ?' ಎಂದು ಧರ್ಮರಾಯನ ಬಾಯಲ್ಲಿ ಕವಿ ಆಡಿಸಿರುವ ದಿಟ್ಟತನದ ಮಾತುಗಳು ನಿಜಕ್ಕೂ ಮೆಚ್ಚುವಂತಹವು.

ರತ್ನಾಕರ ಕವಿ ಕೂಡ ಒಂದು ಸಂದರ್ಭದಲ್ಲಿ ಹಲ್ಲಿ ಕಾಗೆಗಳಿಂದ 'ಅಪಶಕುನವಾಯಿತು' ಎಂದಾಗ "ಕಾಗೆ ಹಾರುವುದನ್ನೂ ಹಸುಬ-ಹಲ್ಲಿ-ಮುಂತಾದವುಗಳ ಬಾಯಿಯನ್ನೂ ಮುಚ್ಚಿಸಲು ಸಾಧ್ಯವೆ ?" ಎಂದು ಹೆಜ್ಜೆ-ಹೆಜ್ಜೆಗೂ ಶಕುನ ನೋಡುವವರ ಮೂಗು ಮುರಿಯುತ್ತಾನೆ.

ಹೀಗೆ ಕುಮಾರವ್ಯಾಸನ ಕಾವ್ಯದಲ್ಲಿನ ಅನೇಕ ಸಂದರ್ಭಗಳನ್ನು ಪರಾಮರ್ಶಿಸಿದಾಗ ಆತನ ಸಮಕಾಲೀನ ಜನಜೀವನದ ಚಿತ್ರ ಓದುಗರ ಮನಸ್ಸಿನಲ್ಲಿ ಮೂಡುತ್ತದೆ.

---

23. ಸಭಾಪರ್ವ : ಸಂಧಿ 13, ಪದ್ಯ 03
24. ಸಭಾಪರ್ವ : ಸಂಧಿ 13, ಪದ್ಯ 4

ಶ್ರೀ ವ್ಯಾಸ ವಿಟ್ಠಲರ ಬದುಕು-ಬರೆಹ

—ಪ್ರೊ। ವಸಂತಕುಷ್ಟಗಿ

ದಾಸಸಾಹಿತ್ಯದ ದ್ವಿತೀಯ ಘಟ್ಟದಲ್ಲಿ ಶ್ರೀ ವಿಜಯದಾಸರು ಕೇಂದ್ರಬಿಂದುವಾಗಿ ಸಮಾಜದ ಓರೆಕೋರೆಗಳನ್ನು ತಿದ್ದಿ, ಸ್ವತಃ ಆದರ್ಶವಾಗಿ ಅನೇಕರನ್ನು ಉದ್ಧಾರಮಾಡಿದ್ದಾರೆ. ಮಾನವಜೀವಿಗಳ ಯೋಗ್ಯತೆಗಳನ್ನು ಅರಿತು ಅವರ ವಿಕಾಸಕ್ಕೆ ಅಡ್ಡಿಯಾಗಿರುವ ಮಾನವ ಸಹಜದೋಷಗಳನ್ನು ನಿವಾರಣೆಮಾಡಿ ಅವರ ವ್ಯಕ್ತಿತ್ವ ವಿಕಾಸಗೊಳಿಸಿದ್ದಾರೆ. ಅರ್ಥವಿಲ್ಲದ ಕೇವಲ ಪಾಂಡಿತ್ಯಕ್ಕಿಂತಲೂ ಸದಾಚಾರದಿಂದ ಬಂದ ಅನುಭವವು ಶ್ರೇಷ್ಠವಾದ ಮಾನವ ವೇದಾಂತವೆಂದು ಬಾಳಿದ್ದಾರೆ. ಈ ದಿಸೆಯಲ್ಲಿ ಶ್ರೀ ಕಲ್ಲೂರ ಸುಬ್ಬಣ್ಣಾಚಾರ್ಯರ ಬದುಕು-ಬರೆಹಗಳು ಶ್ರೀ ವಿಜಯದಾಸರ ಕೃಪಾಕಟಾಕ್ಷದಿಂದ ಸುಂದರಗೊಂಡಿವೆಯೆಂದು ಇಲ್ಲಿ ನೆನೆಯಬಹುದು.

ಶ್ರೀ ಕಲ್ಲೂರ ಸುಬ್ಬಣ್ಣಾಚಾರ್ಯರು ರಾಯಚೂರು ಜಿಲ್ಲೆಯ ಮಾನ್ವಿ ತಾಲ್ಲೂಕಿನ ಕಲ್ಲೂರ ಗ್ರಾಮದಲ್ಲಿ ಸಾಧನಾ ಜೀವಿಗಳಾಗಿ ಬದುಕಿದವರು. ಪುಣೆಯ ಪೇಶ್ವೆಗಳು ಇವರಿಗೆ ದಾಸತ್ವ ಸ್ವೀಕರಿಸುವ ಮುನ್ನ ಆಶ್ರಯದಾತರಾಗಿದ್ದರು. ಸಂಸ್ಕೃತದಲ್ಲಿ ಪ್ರಕಾಂಡ ಪಂಡಿತರು. ಇವರು ವೇದಶಾಸ್ತ್ರ ಪುರಾಣಗಳಲ್ಲಿ ಎತ್ತಿದ ಕೈ. ಮಧ್ವಶಾಸ್ತ್ರದ ಸೂಕ್ಷ್ಮಾತಿಸೂಕ್ಷ್ಮಗಳನ್ನು ಬಲ್ಲವರು. ಈ ಹಿನ್ನೆಲೆಯಲ್ಲಿ ಪ್ರತಿವರ್ಷ ತಮ್ಮ ಶಿಷ್ಯರಿಗೆ ಶ್ರೀ ಮನ್ನ್ಯಾಯ ಸುಧೆಯನ್ನು ಪಾಠಹೇಳಿ ಮಂಗಳಮಾಡುವುದು ನಡೆದುಬಂದ ವಿಧಿಯಾಗಿಬಿಟ್ಟಿತ್ತು.

ಈ ಕಾಲಕ್ಕಾಗಲೇ ಶ್ರೀ ವಿಜಯದಾಸರು ತಮ್ಮ ಚಾರಿತ್ರ್ಯದಿಂದ ಸಾಧನೆಯಿಂದ ಲೋಕಮನ್ನಣೆಯನ್ನು ಪಡೆದಿದ್ದರು. ಬಡತನದ ಬವಣೆಗಳನೇಕವಿದ್ದರೂ ಹೃದಯ ಶ್ರೀಮಂತಿಕೆಯನ್ನು ಬೆಳೆಸಿಕೊಂಡಿದ್ದರು. ವೇದಶಾಸ್ತ್ರ ಪುರಾಣಗಳ ತಿರುಳನ್ನು ಬಲ್ಲವರಾಗಿದ್ದು ಜೊತೆಗೆ ಬದುಕಿನಲ್ಲಿ ನಂಬುಗೆಯನ್ನು ತಾವು ಧೃಡಪಡಿಸಿಕೊಂಡಿದ್ದರಲ್ಲದೆ ತಮ್ಮ ಪರಿಸರದಲ್ಲೆಲ್ಲ ಅದನ್ನೇ ಬಿತ್ತಿಬೆಳೆದವರು. ಅದಕ್ಕಾಗಿ ವೇದಶಾಸ್ತ್ರ ಪುರಾಣಗಳ ಸಾರಸರ್ವಸ್ವವನ್ನು, ಪುರಂದರ ಮಾರ್ಗದಲ್ಲಿ ನಡೆದು ಕನ್ನಡದ ಪದ ಸುಳಾದಿಗಳ ಮುಖಾಂತರ ಅದನ್ನು ಜನತೆಗೆ ನೀಡಿ ಆತ್ಮವಿಶ್ವಾಸವನ್ನು ಬೆಳೆಸಿದವರು. ಊರು ಊರು ತಿರುಗಿ ಜಾಗೃತಿಯನ್ನುಂಟುಮಾಡಿದವರು. ಭಗವಂತನ ಸಖ್ಯವನ್ನು ವಾತ್ಸಲ್ಯವನ್ನು ದಾಸಮಾರ್ಗದಿಂದ ಮನುಷ್ಯನು ತಾಸಿರುವಲ್ಲಿಯೇ

ತಂದು ನೀಡಿದವರು. ಇಂತಹ ವ್ಯಕ್ತಿತ್ವವನ್ನು ಕುರಿತು ಸಂಪ್ರದಾಯ ಪರರಾಗಿ ಬೆಳೆಯುತ್ತಿದ್ದವರಿಗೆ ಸಹನೆ ಇರಲಿಲ್ಲ. ಭಗವಂತನ ಅನುಗ್ರಹ ಪಡೆಯಬೇಕಾದರೆ ಕೇವಲ ಸಂಸ್ಕೃತದಲ್ಲಿರುವ ವೇದಶಾಸ್ತ್ರ ಪುರಾಣಗಳಿಂದ ಮಾತ್ರ ಸಾಧ್ಯವೆಂದು ಅಂತಹವರು ಕನ್ನಡದ ಪದ ಸುಳಾದಿಗಳನ್ನು ತಾತ್ಸಾರವಾಗಿ ಕಾಣುತ್ತಿದ್ದರು. ಅಷ್ಟೇ ಅಲ್ಲ ದೈವೀಪೂಜೆಗೆ ಕನ್ನಡ ಮಾಧ್ಯಮವು ಮೈಲಿಗೆ ಎಂಬುದು ಇನ್ನೂ ಬಲವಾಗಿಯೇ ನಂಬಿದ ಜನರಿದ್ದ ಕಾಲವದು. ಅಂತಹ ಸಮಯದಲ್ಲಿ ಶ್ರೀ ಸುಬ್ಬಣ್ಣಾಚಾರ್ಯರಲ್ಲಿ ಶ್ರೀ ವಿಜಯದಾಸರನ್ನು ಕುರಿತು ಗೌರವವು ಲೋಪವಾಗಿರುವುದು ಸಹಜವೇ ಸರಿ. ತಾವು ಇಷ್ಟು ಪಂಡಿತರಾಗಿದ್ದರೂ ತಮಗೆ ಜನಪ್ರಿಯತೆಯಿಲ್ಲವೆಂಬ ಕೊರಗಿನ ಜೊತೆಗೆ ಶ್ರೀ ವಿಜಯದಾಸರ ಪ್ರತಿಭೆ ಜನಪ್ರಿಯತೆಗಳು ಅವರಲ್ಲಿ ಹೊಟ್ಟೆಯಕಿಚ್ಚನ್ನು ಎಬ್ಬಿಸಿದ್ದವು. ಹೇಗಾದರೂ ಮಾಡಿ ಅವರ ಮುಖಭಂಗ ಮಾಡುವ ಯೋಜನೆಯಲ್ಲಿಯೇ ಅವರು ಇದ್ದರು. ಅಂತೆಯೇ ಮೂರುನಾಲ್ಕು ಸಲ ಸುಧಾಮಂಗಲಕ್ಕೆ ಆಗಮಿಸಲು ಶ್ರೀ ವಿಜಯದಾಸರಿಗೆ ಆಹ್ವಾನ ಕಳಿಸಿದ್ದರು. ಆದರೆ ಅವರು ಸಮಾರಂಭಕ್ಕೆ ಬಂದು ಪ್ರಸಾದ ಸ್ವೀಕರಿಸಿ ಹೋದುದು ಯಾರಿಗೂ ಗೊತ್ತಾಗಿರಲಿಲ್ಲ. ಒಂದು ಸಲ ಮಾನ್ವಿಯಲ್ಲಿ ಈ ಇಬ್ಬರು ಪರಸ್ಪರ ಸಂದರ್ಶಿಸುವ ಯೋಗ ಬಂದಾಗ ಈ ಒಂದೆ ಸುಧಾಮಂಗಲ ಸಂದರ್ಭದಲ್ಲಿ ಒಮ್ಮೆಯೂ ಭಾಗವಹಿಸಿ ತಮ್ಮನ್ನು ಕಾಣುವಷ್ಟು ವಿನಯ ಮೆರೆಯಲಿಲ್ಲವೆಂಬ ಆಕ್ಷೇಪಣೆಯನ್ನು ಶ್ರೀ ಸುಬ್ಬಣ್ಣಾಚಾರ್ಯರು ಧ್ವನಿಸಿ ಈ ಸಲವಾದರೂ ಸುಧಾಮಂಗಲ ಸಮಾರಂಭದಲ್ಲಿ ಅವಶ್ಯವಾಗಿ ಶ್ರೀ ವಿಜಯದಾಸರು ಭಾಗವಹಿಸಿ ತಮ್ಮನ್ನು ಅಲ್ಲಿ ಕಾಣಬೇಕೆಂದು ಸೂಚಿಸಿ ಅಧಿಕಾರ ಬೆರೆತ ಆಹ್ವಾನವನ್ನಿತ್ತರು. ಆಗ ಶ್ರೀ ವಿಜಯದಾಸರು ಆಚಾರ್ಯರಿಗೆ ಪಕ್ವಕಾಲ ಬಂದಿತೆಂದು ಭಾವಿಸಿ ಅಂತೆಯೇ ಮಾಡಲು ಯೋಚಿಸಿದರು.

ಈ ಪಕ್ವಕಾಲದಲ್ಲಿ ನಡೆದ ಘಟನೆಯು ಶ್ರೀ ಆಚಾರ್ಯರ ಜೀವನದಲ್ಲಿ ಅರುಣೋದಯವನ್ನು ತಂದಿತು. ಅದಕ್ಕೆ ಪರಮಾತ್ಮನು ಶ್ರೀ ವಿಜಯದಾಸರ ಮುಖಾಂತರ ಕರುಣಾಮಯಿ ಆದುದೇ ಕಾರಣ. ಆ ಕರುಣೆಯು ಸುಧಾಮಂಗಲದಂದು ಮಂಡಿಗೆಯನ್ನು ಮಾಡುವ ಅಡಿಗೆಯವನು ಬಾರದೇ ಇದ್ದಾಗ ಶ್ರೀ ವಿಜಯದಾಸರು ಆ ಕಾರ್ಯವನ್ನು ಗುಪ್ತವೇಷದಲ್ಲಿ ನಿರ್ವಹಿಸುವಲ್ಲಿ ಪ್ರಕಟವಾಯಿತು. ಅದು ಅನೇಕರಿಗೆ ತಿಳಿದು ಅವರು ಶ್ರೀ ವಿಜಯದಾಸರಿಗೆ ತಮ್ಮ ಗೌರವಗಳನ್ನು ಸೂಚಿಸಿದರು. ಇದು ನಡೆದ ಕೆಲವು ನಿಮಿಷಗಳಲ್ಲಿ ಶ್ರೀ ಆಚಾರ್ಯರ ಶ್ರೀ ಸುಧಾಮಂಗಲಕ್ಕಾಗಿ ಪ್ರವಚನ ಮಾಡುತ್ತಿರುವಾಗ ಒಂದು ಕಡೆಗೆ ಅನುವಾದ ನಿಂತುಹೋಯಿತು. ಆಗ ಅಲ್ಲಿ ಶ್ರೀ ವಿಜಯದಾಸರು ಕುಳಿತಿರುವುದನ್ನು ಕಂಡು ಮತ್ತಷ್ಟು ಕತ್ತು ಹಿಸುಕಿಕೊಳ್ಳುವಂತಾಯಿತು. ಅವರೆದುರು ತಮ್ಮ ಗೌರವವು ಜನರಲ್ಲಿ ಕಡಿಮೆಯಾಯಿತೆಂದು

ಯೋಗ್ಯತೆಯ ಬೆಲೆಯನ್ನು ಕಟ್ಟಿದ ಹಾಗೆ ಆಯಿತೆಂದು. ಆಗ ತತ್‌ಕ್ಷಣ ಶ್ರೀ ವಿಜಯ ದಾಸರು ದಡ್ಡನೆಂದು ಪರಿಗಣಿಸಿದ್ದ ಪರಿಚಾರಕನ ಕೈಹಿಡಿದು ಆತನ ಕಡೆಯಿಂದ ನಿಂತು ಹೋಗಿದ್ದ ಶ್ರೀಸುಧಾ ಅನುವಾದ ಕಾರ್ಯವನ್ನು ಪೂರ್ಣಗೊಳಿಸಿದರು. ದಾಸರು ಆತನನ್ನು ಹಿಡಿದು ಕೈಯನ್ನು ಹಿರುಗಿ ತೆಗೆದುಕೊಂಡ ಮೇಲೆ ಆ ಪರಿಚಾರಕ ಮತ್ತೆ ಯಥಾವಿಧಿಯಾದನು.

ಈ ಘಟನೆಯನ್ನು ಬೇಲೂರ ಕೇಶವದಾಸರು ಸ್ವಲ್ಪ ಬೇರೆ ರೀತಿಯಿಂದ ವಿವರಿಸಿ ದ್ದಾರೆ. ಮುಂಡಿಗೆಯ ಅಡುಗೆಯನ್ನು ಕಟ್ಟಿ ಬಂದ ವೇಷಧಾರಿಯು ಶ್ರೀ ವಿಜಯ ದಾಸರೆಂದು ಗುರುತಿಸಿ ಶ್ರೀ ಆಚಾರ್ಯರು ಕುಶಲೋಪರಿ ಪ್ರಶ್ನೆಗಳನ್ನು ಕೇಳಿದರು. ಆ ಸಂದರ್ಭದಲ್ಲಿ ದಾಸರು ತಮಗೆ ಸುಧೆಯ ಒಂದು ವಾಕ್ಯವನ್ನು ಉಪದೇಶಮಾಡ ಬೇಕೆಂದು ಬಿನ್ನವಿಸಿಕೊಂಡರು. ಆದರೆ ಶ್ರೀ ಆಚಾರ್ಯರು "ಕೂಸೀಮುಗದಾಸ ಕನ್ನಡಪದ ಹಾಡೋ ದಾಸ" ಎಂಬ ತಾತ್ಸಾರ ಭಾವನೆಯಿಂದಲೇ ಅವರಿಗೆ ಉಪದೇಶ ನೀಡಲು ನಿರಾಕರಿಸಿದರು. ಅಲ್ಲದೇ ಅವರು ಈ ವಿಷಯಕ್ಕೆ ಅಧಿಕಾರಿಗಳಲ್ಲವೆಂದು ನಿರ್ದಾಕ್ಷಿಣ್ಯವಾಗಿ ಮುಖದ ಮೇಲೆ ಹೇಳಿಬಿಟ್ಟರು. ಆಗ ಜನರು ಈ ಘಟನೆಯ ಬಗೆಗೆ ಮರಮರ ಮರುಗಿದರು. ಈ ಸಂದರ್ಭದಲ್ಲಿ ಶ್ರೀ ವಿಜಯದಾಸರು ವ್ಯಾಸರೂ ದಾಸರೂ ಎಲ್ಲರೂ ನಟರೆ ಎಂದು ಹೇಳಿ 'ಉಪದೇಶ ನೀಡುವವರು ಅರ್ಥಮಾಡಿಕೊಂಡಿ ದ್ದರೆ ಉಳಿದವರು ಅದನ್ನು ಅರ್ಥಮಾಡಿಕೊಳ್ಳಬೇಕಲ್ಲ?' ಎಂದು ವ್ಯಂಜಕವಾಗಿ ನುಡಿದು ನೀರುತರುವ ದಡ್ಡ ಪರಿಚಾರಕನಿಂದ ಸುಧಾ ಅನುವಾದ ಮಾಡಿಸಿ ಸೋಜಿಗ ಗೊಳಿಸಿದರು.

ಈ ಘಟನೆಯ ನಿರೂಪಣೆಯು ಬೇರೆಬೇರೆ ರೀತಿಯಿದ್ದರೂ ಈ ಘಟನೆಯ ಹಿನ್ನೆಲೆಯಲ್ಲಿ ಶ್ರೀ ಆಚಾರ್ಯರು ಪಶ್ಚಾತ್ತಾಪದ ಜ್ವಾಲೆಯಲ್ಲಿ ಪಾವನರಾಗಿ ದೃಷ್ಟಿ ಯನ್ನು ಶುದ್ಧಗೊಳಿಸಿಕೊಂಡು ಮನಸ್ಸಿನಲ್ಲಿ ಆನಂದವನ್ನು ಹೊಂದಿ ತಾವೂ ದಾಸ ರಾಗುವ ಅಪೇಕ್ಷೆಯನ್ನು ವ್ಯಕ್ತಮಾಡಿದರು. ಪಶ್ಚಾತ್ತಾಪವು ಜ್ಞಾನಿಗಳನ್ನೂ ಹೃದಯವಂತರನ್ನಾಗಿ ಮಾಡುತ್ತದೆಂಬುದನ್ನು ನಂಬಿದ್ದ ವಿಜಯದಾಸರು ಅವರಿಗೆ ಕಂಕಣಾಕಾರ ಸುಳಾದಿಯನ್ನು ಬೋಧಿಸಿದರು. ಶ್ರೀ ಆಚಾರ್ಯರಲ್ಲಿ ಇದು ವರೆಗೆ ಆವರಿಸಿದ್ದ ಅಹಂಕಾರವು ಆಗ ನಿರಸನವಾಗಿ ಅವರಲ್ಲಿ ವೈರಾಗ್ಯೋದಯವಾಗಿರು ವುದನ್ನು ಕಂಡು ಅವರಿಗೆ,

ಬೂದಿಮುಚ್ಚಿದ ಕೆಂಡದಂತಿಪ್ಪರು ||ಪ||
ಈ ಧರೆಯ ಮೇಲೆ ಶ್ರೀ ಹರಿಭಕ್ತರು ||ಅಪ||
ಅಂಗ ನೋಡಲು ಅಷ್ಟಾವಕ್ರವಾಗಿಪ್ಪರು । ಕಂಗಳಿಂದಲಿ ನೋಡೆ
ಘೋರತರರು ।

ಮಂಗಳಾಂಗನ ಅಂತರಂಗದಲಿ ಭಜಿಸುತ್ತ । ಹಿಂಗದೇ ಸಂತಜನ
ಸಂಗದೊಳಿಹರು ||೧||

ನಾಡಜನಗಳಂತೆ ನಡೆಯರೂ ನುಡಿಯರು । ಕೂಡರು
ಕುಟಿಲಜನಸಂಗದಲ್ಲಿ
ಚಾಡಿಕ್ಷುದ್ರವ ಪೇಳಿ ಒಡಲ ತುಂಬಿಸಿಕೊಳರು । ರೂಢಿಯೊಳಗೆಂದೆಂದು
ಸೃಷ್ಟಿ (ಬ್ರಹ್ಮ) ಚರ್ಯರಾಗಿಹರು ||೨||

ಡಂಭಕತನದಿಂದ ಬೊಂಬೆ ನಿರಹೀಕೊಂಡು । ಡೊಂಬ ಕುಣಿತವಂತೆ
ಕುಣಿದಾಡರು ।
ಹಂಬಲಿಲ್ಲವ ಬಿಟ್ಟು ಹರುಷವುಳ್ಳವರಾಗಿ । ಬಿಂಬ ಮೂರುತಿಯನ್ನು
ಕೊಂಡಾಡುತಿಹರು ||೩||

ಶತೃಮಿತ್ರರುಗಳ ಸಮವಾಗಿ ಎಣಿಸುವರು । ಪುತ್ರಮಿತ್ರಭಾಗ್ಯಗಳ
ನೆಚ್ಚರು ।
ಯಾತ್ರೆತೀರ್ಥಗಳಮಾಡುತ್ತ ಶ್ರೀಹರಿಯ । ಸ್ತೋತ್ರಗಳ ಪಾಡಿ
ಸಾಧನೆಗೊಂಬರು ||೪||

ಕಷ್ಟಸೌಖ್ಯಗಳೆಲ್ಲ ಕರಿವದನಗರ್ಪಿಸುವರು । ಇಟ್ಟುಕೊಟ್ಟುದು
ಹರಿಕೊಟ್ಟನೆಂಬವರು ।
ಸೃಷ್ಟೀಶ ಸಿರಿ ವಿಜಯವಿಟ್ಠಲ ಪದಪದ್ಮ । ಮುಟ್ಟಿ ಭಜಿಸಿ ಮೋಕ್ಷ
ಸಾಮ್ರಾಜ್ಯ ಪಡೆಯುವರು ||೫||

—ಎಂದು ಹರಿದಾಸರ ಲಕ್ಷಣಗಳನ್ನು ತಿಳಿಸಿ ಶ್ರೀ ವಿಜಯದಾಸರು 'ವ್ಯಾಸ ವಿಟ್ಠಲ' ಎಂಬ ಅಂಕಿತವನ್ನು ಶ್ರೀ ಕಲ್ಲೂರ ಸುಬ್ಬಣ್ಣಾಚಾರ್ಯರಿಗೆ ಕರುಣಿಸಿದರೆಂದು ತಿಳಿದುಬರುತ್ತದೆ. ಆದರೆ ಮತ್ತೊಂದು ಕಡೆಗೆ ಇವರಿಗೆ ಅಂಕಿತ ಪ್ರದಾನವು ಶ್ರೀ ವೇಣುಗೋಪಾಲದಾಸರಿಂದ ನಡೆಯಿತೆಂದು ಉಲ್ಲೇಖಿಸಲಾಗಿದೆ. ಏಕೆಂದರೆ ಶ್ರೀ ಕಲ್ಲೂರ ಸುಬ್ಬಣ್ಣಾಚಾರ್ಯರು ಪೂರ್ವಜನ್ಮದಲ್ಲಿ ಶ್ರೀ ವೈಕುಂಠದಾಸರ ಶಿಷ್ಯರಾಗಿದ್ದ ನಂಜುಂಡ, ಮತ್ತು ಈ ಜನ್ಮದಲ್ಲಿ ಶ್ರೀ ವೇಣುಗೋಪಾಲದಾಸರು ಹಿಂದಿನ ಜನ್ಮದ ಶ್ರೀ ವೈಕುಂಠದಾಸರು ಅಂತೆಯೇ ಶ್ರೀ ವಿಜಯದಾಸರು ಶ್ರೀ ಆಚಾರ್ಯರನ್ನು ಶ್ರೀ ವೇಣುಗೋಪಾಲದಾಸರ ಹತ್ತಿರ ಕಳಿಸಿ ಅಂಕಿತಕೊಡಿಸಿದುದೆಂದು ಗ್ರಹಿಕೆ ಅದಕ್ಕಾಗಿ ಕೆಳಗಿನ,

ಶ್ರೀ ವ್ಯಾಸವಿಠಲ ಆಶ್ರಿತ ಕಲ್ಪತರು
ನೀಡದಗಿ ಪಾಲಿಸುವುದೋ ||ಪ||
ಭಾವಶುದ್ಧದಿ ನಿನ್ನ ಭಜಿಸಿ ಸುಖಿಸುವ ನರನ
ಕೋವಿದರ ಸಂಗ ಸಹಿತಾ ಸ್ವರತ ||ಅಪ||

ಶ್ರೀ ಗುರುಗಳ ಚರಣರಾಗಪೂರಿತ ಪೂಜೆಯೋಗಮನದಲಿ ಎಸಗಲಿ
ಅಗಮಾರ್ಥಗಳೆಲ್ಲ ಅತಿಶೀಘ್ರ ಬುದ್ಧಿಗೆ ಸಾಗಿ ವಿಸಯದಿ ಒದಗಲಿ
ಭಾಗವತರ ವ್ಯಾಳದಲಿ ಜಾಗರೂಕದಿದುಷ್ಟಭೋಗಗಳನೀಡ್ಯಾಡಲಿ
ನಾಗಾರಿವಾಹನನ ನಮ್ರದಲಿ ಅರ್ಚಿಸುತ ಹೇಗುಣವಂತಸ್ವಾಮಿ
ನೀಗತಿಯೆಂದೆ ನಲಿ ||೧||

ವಾತಾತ್ಮಜನಮತದ ಶ್ರೀತತ್ತ್ವಗಳು ಪ್ರತಿಭಾತತೀವ್ರದಿ ಆಗಲೀ
ಪಾತಕಿಗಳು ಒಂದು ಮಾತಿನಿಂದಲಿ ಸೋತು ಭೀತಿಪೂರಿತರಾಗಲೀ
ಜ್ಯೋತಿ ಅತಿಪೊಳೆದಂತೆ–ಚಿತ್ತದಲಿ ನೀ ಪೊಳೆದು ಖ್ಯಾತಿ ಕೇವಲವಾಗಲೀ
ಪೂತನೆಂದು ಸುರವ್ರಾತ ಸತ್ಪರ ನಿನ್ನ ಪ್ರೀತಿ ಬಲು ವಿಧವಾಗಿ ಹೇ
ತಾತ ಸಲಹಲೀ ||೨||

ಕ್ಷೋಣಿ ಸುರರೆಲ್ಲರೂ ಪಾಣಿಯನು ಪಿಡಿದುದಯ ವೇಣು ವೇಣನೆ
ಮಾಡಲೀ
ವಾಣಿಯರಸನಪಿಡಿದು ಸಾಕ್ಷಿಣ್ಯಾಂತರತಮಶ್ರೇಣಿಚಿತ್ತಕೆ ಎರಗಲೀ
ಕಾಣುವ ಪ್ರಪ್ರದಲಿ ಸುರಸಿನಿಸಹಿತ ನಿನ್ನ ಮಾಣದಲೆ ಸ್ಮರಿಸುತಿರಲೀ
ವೇಣುಗೋಪಾಲ ವಿಠ್ಠಲ ಚಿತ್ತ ನಿನ್ನಯಾರಾಣಿಲಕುಮಿಸಹಿತ
ರಾಜ್ಯದಲಿ ಮೆರೆಸಲೀ ||೩||

ಎಂಬ ಪದವು ಆಧಾರನೀಡುತ್ತದೆ. ಆದರೆ ಇದು ಶ್ರೀ ವೇಣುಗೋಪಾಲ ದಾಸರ ಪದವೆಂಬುದರ ಬಗೆಗೆ ಕಿಂಚಿತ್ ಸಂಶೋಧನೆ ನಡೆದರೆ ಚೆನ್ನು. ಅದೇನೇ ಇದ್ದರೂ ಶ್ರೀ ಕಲ್ಲೂರ ಆಚಾರ್ಯರು ಶ್ರೀ ವಿಜಯದಾಸರ ಕರುಣಾಕವಚವನ್ನು ಪಡೆದು ನಿಜದಿವನ್ನು ಹೊಂದಿದುದು ಸತ್ಯವಾದ ಮಾತು. ಅಂತೆಯೇ "ಸ್ಮರಿಸಿ ಬದುಕಿರೋ, ದಿವ್ಯ ಚರಣಕೆರಗಿರೋ : ದುರಿತ ತರಿದು ಪೊರೆವ ವಿಜಯಗುರುಗಳೆಂಬರ" ಎಂಬ ವ್ಯಾಸವಿಟ್ಠಲರ ವಿಜಯಕವಚವು ತರೆತರೆಯಾಗಿ ಸದ್ಭಕ್ತರ ನಿರ್ಮಾಣದಲ್ಲಿ ಬಹು ಮಹತ್ತ್ವವನ್ನು ಇಂದಿಗೂ ವಹಿಸುತ್ತ ಬಂದಿದೆ. ಅದು ಗುರುಕಾರುಣ್ಯದ ಗಂಗೆಯನ್ನು ಉಕ್ಕೇರಿಸಿದೆ. ಅದರ ಪಾಠವು ಇಂತಿದೆ ;

"ದಾಸರಾಯನಾ ದಯವ ಸೂಸಿ ಪಡೆದನಾ
ದೋಷರಹಿತನಾ ಸಂತೋಷ ಭರಿತನಾ ||೧||

ಜ್ಞಾನವಂತನಾ ಬಲು ನಿಧಾನಿಶಾಂತನಾ
ಮಾನವಂತನಾ ಮಹವದಾನ್ಯದಾಂತನಾ ||೨||

ಹರಿಯಭಜಿಸುವಾ ನರಹರಿಯಯಜಿಸುವಾ
ದುರಿತ ತ್ಯಜಿಸುವಾ ಜನಕೆ ಹರುಷ ಸುರಿಸುವಾ ||೩||

ಮೋದ ಭರಿತನಾ ಪಂಚ ಭೇದವರಿತನಾ
ಸಾಧು ಚರಿತನಾ ಮನ ವಿಷಾದ ಮರೆತನಾ ||೪||

ಇವರನಂಬಿದಾಜನಕೆ—ಭಯವಿದೆಂಬುದೂ
ಹವಣವಾಗದೋ ನಮ್ಮವರ ಮಾತವಿದೊ ||೫||

ಪಾಪಕೋಟಿಯಾ ರಾಶಿ ಲೇಪವಾಗದೋ
ತಾಪಕಳೆವನೋ ಬಲು ದಯಾಪಯೋನಿಧೀ ||೬||

ಕವನರೂಪದೀ ಹರಿಯ ಸ್ತವನ ಮಾಡಿದಾ
ಭವನ ಬೇಡಿದಾ ಮಾಧವನ ನೋಡಿದಾ ||೭||

ರಂಗನೆಂದನಾ ಭವವು ಹಿಂಗಿತೆಂದನಾ
ಮಂಗಳಾಂಗನಾ ಅಂತರಂಗವರಿತನಾ ||೮||

ಕಾಶಿನಗರದಲ್ಲಿದ್ದ ವ್ಯಾಸದೇವನಾ—ದಯವ
ಸೂಸಿ ಪಡೆದನಾ ಉಲ್ಲಾಸತನದಲೀ ||೯||

ಚಿಂತೆ ಬೇಡಿರೋ ನಿಶ್ಚಿಂತರಾಗಿರೋ
ಶಾಂತ ಗುರುಗಳ ಪಾದವಿಂತು ನಂಬಿರೋ ||೧೦||

ಖೇದವಾಗದೋ ನಿಮಗೆ ಮೋದವಾಹುದೋ
ಆದಿ ದೇವನಾ ಸುಪ್ರಸಾದವಾಹುದೋ ||೧೧||

ಪಾಪತಡೆವನೂ ಬಂದ ಪಾಪ ಕಡಿವನೂ
ಶ್ರೀಪತಿಯ ಪದವ ಸಮೀಪವಿಡುವನೂ ||೧೨||

ಗಂಗೆಮಿಂದರೆ ಮಲವು ಹಿಂಗಿತಲ್ಲದೇ
ರಂಗನೊಲಿಯನೋ ಭಕ್ತರಸಂಗದೊರಕದೇ ||೧೩||

ವೇದವ್ಹೋದಲು ಬರಿದೆ ವಾದಮಾಡಲೂ
ಹಾದಿಯಾಗದೋ ಬುಧರ ಪಾದನಂಬದೇ ||೧೪||

ಲೆಕ್ಕವಿಲ್ಲದಾದೇಶ ತುಕ್ಕಿಬಂದರೂ
ದುಃಖವಲ್ಲದೇ ಲೇಶ ಭಕ್ತಿದೊರಕದೊ ||೧೫||

ದಾನಮಾಡಲೂ ದಿವ್ಯಗಾನ ಪಾಡಲೂ
ಜ್ಞಾನದೊರೆಯದೋ ಇವರಧೀನವಾಗದೇ ||೧೬||

ಇಷ್ಟ್ಯಯಾತಕೇ ಕಂಡ ಕಷ್ಟವ್ಯಾತಕೇ
ಧಿಟ್ಟ ಗುರುಗಳಾ ಪಾದ ಮುಟ್ಟಿ ಭಜಿಸಿರೋ ||೧೭||

ಪೂಜೆ ಮಾಡಲೂ ಕಂಡಗೋಜು ಬೀಳಲೂ
ಬೀಜವೂತಿದೂ ಫಲಸಹಾಜ ದೊರಕದು ||೧೮||

ಸುರರು ಎಲ್ಲರೂ ಇವರ ಕರವ ಪಿಡಿವರೋ
ತರಳರಂದದೀ ಹಿಂದೆ ತಿರುಗತಿಪ್ಪರೋ ||೧೯||

ಗ್ರಹಗಳೆಲ್ಲವೂ ಇವರ್ಗೆ ಸಹಾಯಮಾಡುತಾ
ಅಹೋರಾತ್ರಿಲೀ ಸುಖದ ಸಿಸಹ ಕೊಡುವವೂ ||೨೦||

ವ್ಯಾಧಿ ಬಾರದೋ ದೇಹಬಾಧೆ ತಟ್ಟದೋ
ಆದಿದೇವನಾ ಸುಪ್ರಸಾದ ವಾಹುದೋ ||೨೧||

ಪತಿತಪಾಮರಾ ಮಂದಮತಿಯುನಾ ಬಲೂ
ತುತಿಸಲಾಪನೇ ಇವರ ಅತಿಶಯಂಗಳಾ ||೨೨||

ಕರುಣದಿಂದಲೀ ಎಮ್ಮ ಪೊರೆವನಲ್ಲದೇ
ದುರಿತಕೋಟಿಯಾ ಬೇಗ ತರಿವ ದಯದಲೀ ||೨೩||

ಮಂದಮತಿಗಳೂ ಇವರ ಚೆಂದವರಿಯದೇ
ನಿಂದಿಸುವರೋ ಭವದ ಬಂಧ ತಪ್ಪದೋ ||೨೪||

ಇಂದಿರಾಪತೀ ಇವರ ಮುಂದೆ ಕುಣಿವನೋ
ಅಂದ ವಚನವಾ ಜನಕ ತಂದುಕೊಡುವನೋ ||೨೫||

ಉದಯಕಾಲದೀ ಈ ಪದವ ಪಠಿಸಲೂ
ಮುದಡನಾದರೂ ಜ್ಞಾನ ಉದಯವಾಹುದೂ ||೨೬||

ಸಟೆಯಿದಲ್ಲವೋ ವ್ಯಾಸವಿಠಲಬಲ್ಲನೋ
ಪಠಿಸಬಹುದಿದೊ ಕೇಳಿ ಕುಟಿಲರಹಿತರೂ ||೨೭||

—ಇಲ್ಲಿ ಗುರುಶಿಷ್ಯರ ಸಂಬಂಧ ಎಂತಹ ಗಾಢವಾದ ಸತ್‌ಪರಿಣಾಮವನ್ನು ಪರಂಪರಾಗತವಾಗಿ ನೀಡುತ್ತ ಸಾಗಿದೆಯೆಂಬುದನ್ನು ಗಮನಿಸಬಹುದಾಗಿದೆ. ಅಷ್ಟೇ ಅಲ್ಲ ಶ್ರೀ ವಿಜಯದಾಸರ ಮಹಾವ್ಯಕ್ತಿತ್ವ ದರ್ಶನವೂ ಇಲ್ಲಿ ನಿರೂಪಿತವಾಗಿದೆ.

ಗುರುಕಾರುಣ್ಯದಿಂದ ಪಾವನಗೊಂಡ ವ್ಯಾಸವಿಟ್ಠಲರಲ್ಲಿ ಆರ್ತಭಕ್ತಿಯು ಅವ್ಯಾಹತವಾಗಿ ಬೆಳೆದು ದುರಿತಗಳನ್ನು ಪರಿಹಾರಮಾಡಿಕೊಂಡು ಪರಮಾತ್ಮನ ದಿವ್ಯಜ್ಞಾನಕ್ಕಾಗಿ ಕಾತರಗೊಂಡ ಭಾವವು ಅವರ ಕೀರ್ತನೆಗಳಲ್ಲಿ ದಾಂಗುಡಿಯಿಡುತ್ತ ಸಾಗಿರುವುದನ್ನು ಕಾಣಬಹುದಾಗಿದೆ. ಈ ಕೆಳಗಿನ ಪದವು ಈ ಮಾತಿಗೆ ಸಾಕ್ಷಿ ನುಡಿಯುತ್ತದೆ.

"ಸತ್ಯ ಸಂಕಲ್ಪ ಸ್ವಾತಂತ್ರ್ಯ ಸರ್ವೇಶ
ಸರ್ವೋತ್ತಮನೆ ಸಾರ್ವಭೌಮ ||ಪ||
ಭೃತ್ಯರಿಗೆ ಬಂದ ಪರಿಪರಿ ಭಯಂಗಳ ಕಳೆದು
ನಿತ್ಯದಲಿ ಕಾವ ಸ್ವಾಮಿ ಪ್ರೇಮಿ ||ಅಪ||
ಆವ ಜನುಮದ ಫಲವೊ ಆವಕ್ರಿಯೆಗಳಿಂದ ಆವ ಸಾಧನದ ಬಗೆಯೆ ಓ
ಆವುದಿಂದಾವುದಕೆ—ಘಟನೆಯನು ಮಾಳ್ಪೆಯೋ
ಆವುದು ನಿನ್ನಾಧೀನವೋ
ಆವಾವ ಪರಿಯಿಂದ ಜೀವಿಗಳ ಸಲಹುವಿ ಆವುದು ನಿನ್ನ ವಶವೋ
ದೇವೇಶ ನಿನ್ನಯಾ ಭಾದ ಬಲ್ಲವರಾರು
ಭಾವಜನಪಿತ ಕೃಪಾಳೋ ಸ್ವಾಮಿ ||೧||

ದಿಪ್ರ(ಪು)ತ ರೈಜಸ ಪ್ರಾಜ್ಞ ತುರ್ಯರೂಪಗಳಿಂದ
ಸ್ವಪನ ಕಾಲದಲಿ ನೀನು
ಸುಪರ್ವಣಾ ದೈತ್ಯರನು ಸೃಜಿಸಿ ಮನೆ ಮನೆ ಮಾಡಿ
ಅಪರಿಮಿತ ಕಾರ್ಯಗಳನು
ಸುಫಲ ದುಷ್ಕರ್ಮಫಲ ತೋರಿಸೀ ಜೀವರಿಗೆ ಕ್ಲುಪತವಾಗಿದ್ದುವೆಲ್ಲ
ಕೃಪೆಯಿಂದ ನೋಡಿ ಬಂದಾಪತ್ತುಗಳ ಕಳೆವೆ
ಅಪರಿಮಿತ ಸುಖಸಾಗರಾ ಶೂರಾ ||೨||

ಎನ್ನಂಥ ಪಾಪಿಷ್ಠರಿನ್ನಿಲ್ಲ ಧರೆಯೊಳಗೆ ನಿನ್ನಂಥ ಕರುಣಿಲ್ಲ
ಘನ್ನ ಸಂಸಾರದಲಿ ಭವಣೆ ಬಂಡಟ್ಟುವರೆ ನಿನ್ನ ಸ್ಮೃತಿಯೊಂದೆ ಇರಲಿ

ಚೆನ್ನ ಗುರು ವಿಜಯರಾಯರ ನಂಬಿದವನೆಂದು ಮನ್ನಿಸಬೇಕು ಕರುಣೆ
ಸನ್ನುತಾಂಗಿಯು ರಮಣ ವ್ಯಾಸವಿಟ್ಠಲ ಮಧ್ವ
ಮುನಿಗೊಲಿದ ಉಡುಪಿವಾಸ ಶ್ರೀಶ ||೩||

ಇದರಂತೆ,

"ಸುಖವಾಗಲಿ ಬಹುದುಃಖವಾಗಲಿ
ಸಖನೀನಾಗಿರು ಪಾಂಡುರಂಗ ।
ನಿಖಿಲಾಂತರ್ಗತ ವ್ಯಾಸವಿಟ್ಠಲತವ
ಮುಖಪಂಕಜ ತೋರೋ ಪಾಂಡುರಂಗ ॥

ಎಂಬಲ್ಲಿ ಸಖ್ಯ ಭಾವದತ್ತ ಇವರ ಮನಸ್ಸು ಹಾತೊರೆದಿದೆ. ಮುಂದೆ ಸಂಸಾರದ ತೆರೆಗಳ ಮಧ್ಯದಲ್ಲಿ ಅಂತರ್ಮುಖಿಯಾದ ದಾಸರಿಗೆ,

"ವ್ಯರ್ಥವಾಯಿತಲ್ಲ ಜನ್ಮವು ಸಾರ್ಥಕಾಗಲಿಲ್ಲ
ಮುಕ್ತಿ ಬಯಸಲಿಲ್ಲ ಜ್ಞಾನ ವಿರಕ್ತಿಯು ಮೊದಲಿಲ್ಲ
ಎತ್ತ ತಿಳಿಯದೆ ಸುತ್ತಿ ಭವದೊಳು
ನ್ಮತ್ತ ನಡೆಯಲಿ ಹೊತ್ತು ಕಳೆದೆ ವೊರೆ ।

ಎಂದು ಮೊರೆಯಿಡಬೇಕೆನ್ನಿಸುತ್ತದೆ. ಈ ಅಂತರಂಗ ಪರಿಶೀಲನೆಯ ಫಲದಿಂದ ತಾವು ಕಂಡ ದಿವ್ಯ ಜ್ಞಾನವನ್ನು

"ಸಂಸಾರವನು ಮಾಡಿ ಸಕಲ ಜನರು
ಕಂಸಾರಿ ಶ್ರೀ ಕೃಷ್ಣ ಕೈಪಿಡಿದು ಸಲಹುವನು"

ಎಂದು ನಂಬಿಗೆಯನ್ನು ಹುಟ್ಟಿಸಿ,

"ಬುದ್ಧಿಯೆಂತೆಂಬ ಕನ್ನಿಕೆಯ ಮದುವೆಯ ಮಾಡಿ
ಸದ್ಧರ್ಮದಭಿಮಾನದಿಂದ ಬೆಳಸಿ
ಶುದ್ಧ ಭಕ್ತಿಗಳೆಂಬ ಮಕ್ಕಳನು ಪಡೆದು ಬಹು
ಅದ್ಭುತ ಭವಾಬ್ಧಿಯನು ದಾಟಿರಯ್ಯಾ ||೧||

ಚಾರು ಸುಜ್ಞಾನವೆಂಬುವ ಮುದ್ದು ಮಗನ ಪಡೆದು
ವೈರಾಗ್ಯವೆಂಬ ಭಾಗ್ಯವ ಬೇಡಿ
ಸಾರ ಹರಿನಾಮ ರಸಪದಾರ್ಥಗಳನುಣಿಸಿ
ಕಾರುಣ್ಯದಲಿ ಮಕ್ಕಳನು ಬೆಳಸಿರಯ್ಯಾ ||೨||

ಯಮನಿಯಮ ಅಷ್ಟಾಂಗ ಅಣಿಮಾದಿಗಳು
ಕ್ಷಮೆದಯಾದಿಗಳೆಂಬ ಬಂಧು ಬಳಗ
ಮಮತೆ ಪೆರ್ಚಿಸಿಕೊಂಡು ಜೀಗತನ ಮೊದಲಾದ
ಅಮರಿಕೆಯ ಸಂಬಂಧವನು ಮಾಡಿರಯ್ಯಾ ||೨||

ಶೀಲ ಸನಕಾದಿಗಳು ಮುನಿದೇವತಾದಿಗಳು
ತಾಳ ತಮ್ಮೊಳಗೆ ಸಮವಿಷಯರಾಗಿ
ಆಲಂಪಟಗಳ್ಳಚ್ಚಿಕೊಂಡು ಭವಸಿಧಿದಾಟ
ಸಾಲೋಕ್ಯ ಮೊದಲಾದ ಮುಕ್ತಿಗೈದಿದರು ||೩||

ಹೊರಗಿದ್ದ ಪಶು ಪತಿಸುತರು ಭಾಗ್ಯವೆ ನಿನಗೆ
ಪರಿಯಿತ್ತ ಕಾಲಕ್ಕಾ ಹೃದಯದೊಳಗೆ
ಮರೆಯಲಾಗದು ಹಿಂದೆ ಸಂಸಾರದಾ ಬಂಧ
ದುರಿತಾರಿ ವ್ಯಾಸವಿಟ್ಠಲನೊಲಿವಾ ||೪||

ಎಂದು ಸಂಸಾರಯೋಗದ ಗುಟ್ಟನ್ನು ಬಹು ನಿಚ್ಚಳವಾಗಿ ಹಾಡುತ್ತ ಜನರಿಗೆ ಆತ್ಮವಿಶ್ವಾಸವನ್ನು ಅವರು ಮೂಡಿಸಿರುವುದನ್ನು ಇಲ್ಲಿ ಗುರುತಿಸಬಹುದಾಗಿದೆ.

ಸಂಸಾರದಲ್ಲಿ ಆತ್ಮವಿಶ್ವಾಸ ಮೂಡಬೇಕಾದರೆ ಹಲವಾರು ಪುಣ್ಯಪುರುಷರ ಜೀವನ ಚರಿತ್ರೆಗಳನ್ನು ನೋಡಿ ಓದಿ ಪ್ರಭಾವಿತರಾಗಬೇಕಾಗುವುದು ಸಾಧನಾಜೀವನ ಪ್ರಗತಿಯ ಒಂದು ಘಟ್ಟ. ಇಲ್ಲಿ ಶ್ರೀ ವ್ಯಾಸವಿಟ್ಠಲರು,

"ದಯದಿ ಪಾಲಿಸೋ ಜಯ ತೀರ್ಥರಾಯ ಅಕ್ಷೋಭ್ಯರತನಯ"
"ಮರೆಯದಿರು ಮರೆಯದಿರು ಮಾರಮಣನೇ
ಗುರುಸತ್ಯಬೋಧಾರ್ಯ ವರದ ರಘುರಾಮ"

ಎಂದು ಸ್ಮರಿಸುವ ಉಕ್ತಿಗಳನ್ನು ನೋಡಿದಾಗ ಶ್ರೀ ಶ್ರೀ ಜಯತೀರ್ಥರು, ಶ್ರೀ ಶ್ರೀ ಸತ್ಯಬೋಧತೀರ್ಥರು, ಶ್ರೀ ವಿಜಯದಾಸರು ಮೊದಲಾದವರ ಜೀವನ ಚಾರಿತ್ರ್ಯಗಳಿಗೆ ಅವರು ಮಾರುಹೋಗಿ ತಮ್ಮ ಜೀವನಕ್ಕೊಂದು ಸ್ಫೂರ್ತಿಯನ್ನು ಪಡೆದಿರುವರೆಂದು ತಿಳಿದುಬರುತ್ತದೆ. ಇಂತಹವರ ಬದುಕು, ಸಾಮಾನ್ಯರ ಬದುಕನ್ನು ಮುಂದಾರವಾಗಿಸಿ ಪರಮಾತ್ಮನಿಗೆ ಬೇಕಾದ ವಸ್ತುವಾಗಿಸಿಬಿಡುತ್ತದೆ. ಸಂಸ್ಕಾರದ ಸಾಮೀಪ್ಯದಲ್ಲಿ ಪುಣ್ಯಪುರುಷರ ಜೀವನಮೌಲ್ಯಗಳು ಮೇಲೆ ವಿವರಿಸಿದ ರೀತಿಯಲ್ಲಿ ವ್ಯಕ್ತಿ ವಿಕಸನಗೊಳಿಸಿದಂತೆ ಪರಮಾತ್ಮನ ವಿವಿಧ ಅವತಾರಗಳು, ಸ್ವರೂಪಗಳು ಸಾಧನಾ ಜೀವಿಗೆ ಹಿತಕಾರವಾದ ತತ್ತ್ವವನ್ನು ನೀಡುತ್ತವೆ. ಎಂಬುದನ್ನು ಇಲ್ಲಿ

ದಾಸಾರ್ಯರು ಕಂಡುಂಡಂತೆ, ಶ್ರೀ ವ್ಯಾಸವಿಟ್ಠಲರೂ ಅನುಭವಿಸಿದ್ದಾರೆ. ಆ ಅನುಭವವನ್ನೂ, ಆ ಅವತಾರಗಳ ವರ್ಣನೆಗಳನ್ನು,

"ತಿಳಿಯದೋ ನಿನ್ನಾಟ । ತಿರುಪತಿಯವೆಂಕಟ ॥ಪ॥
ಪೊಳೆವ ನೀರೊಳುಗೆಲುವ ನೊರೆಯ । ನೆಲವ ನೋಡುವ ಸುಳಿವ
ಕಂಬದಿ ।
ಇಳೆಯನಳೆಯುವ ಭಳಿರೆ ಭಾರ್ಗವ । ಖಳನ ಛೇದಿಸಿ ಕೊಳಲಧ್ವನಿಗೆ ।
ನಳಿನ ಮುಖಿಯರ ನಾಚಿಸುವ ಬಲು । ಹಯದಳದ"
ಬಹು ಹವಣಿಗಾರನೆ ॥ಅಪ॥ (ವೆಂಕಟರಮಣ)

"ಇಂದಿರೆ ಮಂದಿರದಲ್ಲಿ ನಿಂದಿರೆ ॥ಪ॥
ಇಂದಿರಾದೇವಿ ನಿನ್ನ ಪಾದ ಪೊಂದಿದೆ ಸಲಹಬೇಕೆನ್ನ । ಆಹಾ
ಕಂದರ್ಪ ಇಂದ್ರ ಫಣೀಂದ್ರ ಗರುಡ ಕಂಬು
ಕಂಧರ ಬ್ರಹ್ಮಾದಿ ವಂದ್ಯಳೆ ಸುಂದರಿ ॥ಅಪ॥ (ಲಕ್ಷ್ಮೀದೇವಿ)

"ನೆರೆನಂಬಿದೆ ಮದ್ ಹೃದಯಮಂಟಪದೊಳು
ಪರಿಶೋಭಿಸುತಿರೆ ಪಾಂಡುರಂಗ" (ಪಾಂಡುರಂಗ)

"ಜಯ ಜಯ ವೆಂಕಟರಮಣ । ಜಯತು ಪನ್ನಗಶಯನ
ಜಯತು ಭಾರ್ಗವಿರಮಣ । ಜಯ ಜಗದಾಧಾರ ॥ಪ॥
(ವೆಂಕಟರಮಣ)

"ಸೂತ್ರನಾಮಕ ಸುಂದರನೇಕ । ಸೂತ್ರನಾಮಕ ॥ಪ॥
ಸೂತ್ರನಾಮಕ ಸತ್ಪಾತ್ರ ಗರುಡ ಶಿಖಿ—
ನೇತ್ರವಿನುತ ಶುಭಗಾತ್ರ ಪವಿತ್ರ ॥ಅಪ॥

ರಾಮ ಪದಾಬ್ಜಭೃಂಗ ರಾವಣ ಭಂಗ
ಕಾಮಗಜ ಸಿಂಗ
ತಾಮಸ ಕುಲವನ ಧೂಮಕೇತು ಬುಧ
ಸೌಮನಸಾಗ್ರಣಿ ಕಾಮಿತ ಫಲದಾ ॥೧॥

ಪಾಂಡುನಂದನ ಪಾಲಿಸೋ ಎನ್ನ
ಖಂಡ ಪಾವನ
ಅಂಡಜಾಧಿಪನ ಕಂಡು ಭಜಿಸಿದೋ
ದಂಡದಿ ಖಳಕುಲ ಪ್ರಚಂಡ ॥೨॥

ಜ್ಞಾನದಾಯಕ ಆನಂದತೀರ್ಥ
ದೀನ ಪೋಷಕಾ
ಭಾನುಕೋಟಿ ತೇಜ (ಶ್ರೀ) ವ್ಯಾಸವಿಠ್ಠಲನ
ಧ್ಯಾನದೊಳಿಡು ಸ(ಮ) ನ್ಯಾನಸಹಂಸಾ ||[illegible]||

(ಹನುಮ, ಭೀಮ, ಮಧ್ವ)

ಎಂಬ ಪದಚಿತ್ರಗಳಲ್ಲಿ ಸ್ಪಷ್ಟವಾಗಿ ಕಂಡುಕೊಳ್ಳಬಹುದಾಗಿದೆ. ಇಂತಹ ಸ್ತೋತ್ರ ಶಬ್ದಚಿತ್ರಗಳಲ್ಲಿ ಮನಸ್ಸಿಗೊಂಡು ಏಕೀಭಾವ ಹೊಂದಿದಾಗ್ಗಲೆ, ಪರಮಾತ್ಮನ ಅನುಗ್ರಹವು ಪ್ರಾಪ್ತವಾಗುತ್ತದೆ.

ಹೀಗೆ ಸಾಧಕರಾದ ದಾಸರು ದೈವಾನುಗ್ರಹವನ್ನು ಸಂಪಾದಿಸಿ ಲೋಕ ಮಟ್ಟಕ್ಕೆ ಬಂದ ಮೇಲೆ ಸಮಾಜವನ್ನು ಸೂಕ್ಷ್ಮವಾಗಿ ಅವಲೋಕಿಸಿ ಅದರಲ್ಲಿಯ ಕೊಳೆಯನ್ನೆಲ್ಲ ವಿಮರ್ಶಾತ್ಮಕವಾಗಿ ನೋಡಿ ಸಮಾಜದ ಉದ್ಧಾರಕ್ಕೆ ಬೇಕಾದ ವಿಷಯಗಳನ್ನು ನೀಡಲು ಮುಂದೆ ಬರುತ್ತಾರೆ. ಈ ದಿಶೆಯಲ್ಲಿ ಶ್ರೀ [illegible] ಈ ಕೆಳಗಿನ ಪದವನ್ನು ಇಲ್ಲಿ ಸಂಗ್ರಹಿಸಬಹುದು :

"ಹ್ಯಾಂಗೆ ಸುಮ್ಮನಿರಲಿ ಕಂಡು ಕಂಡು
ಹ್ಯಾಂಗೆ ಸುಮ್ಮನಿರಲಿ ||ಪ||

ಗುರುಹಿರಿಯರ ಸೇವೆಯು ಜರೆದು ನರ
ಹರಿಯಾರಾಧನೆಯನೆ ಮರೆದು
ಕರಕರಿಪಡಿಸುವ ಕರ್ಣ ಪಿಶಾಚಿಯು
ನರಗಳಬೇಡುವ ದುರುಳಜನರ ಕಂಡು ||೧||

ಎಲ್ಲ ಪದಾರ್ಥಗಳನೆ ಮಾಡಿ
ಎಲ್ಲಾಯಿಗೋಸುಗ ಎಡೆಮಾಡಿ
ಹೊಲ್ಲೆಯು ಜಾತಿಯು ಸಲ್ಲಿಯು [illegible]
ಸಲ್ಲಿಸಿ ಮಿಕ್ಕುದ ಮೆಲ್ಲುವವರ ಕಂಡು ||೨||

ಬೇವಿನ ತೊಪ್ಪಲ ಬಿಗಿದುಟ್ಟು
ಶಿವರದಲಿ ಮದ್ಯವನಿಟ್ಟು
ದೇವಾರಿಗಳಿಗೆ ದೈನ್ಯದಿ ಬೇಡುತ
ಹೇಯವಿಲ್ಲದ ಜೀವಿಗಳನೆಕಂಡು ||೩||

ಕಷ್ಟಗಳನು ಸೈರಿಸಬಹುದು
ನಿಷ್ಠುರವಚನವ ಕೇಳಲಿಬಹುದು
ದುಷ್ಟಪಿಶಾಚಿಯು ಮುಟ್ಟಿ ಭಜಿಸುವಂಥ
ಚಿಟ್ಟೆಯು ಮಾಡುವ ಭ್ರಷ್ಟಜನರ ಕಂಡು ||೪||

ಭೂಸುರ ಜನುಮದಲವತರಿಸಿ
ಮೀಸಲು ಮಾರ್ಗವನನುಸರಿಸಿ
ವ್ಯಾಸವಿಟ್ಠಲನ ದಾಸರೊಳಾಡುತ
ಕ್ಲೇಶವ ತೊಳೆಯುವದೋಷಗಳನೆ ಕಂಡು ||೫||

ಈ ತರಹದ ಪದಗಳಿಂದ ಸಮಾಜ ವಿಮರ್ಶೆಯನ್ನು ಮಾಡಿ ಆ ಸಮಾಜವನ್ನು ತಮ್ಮ ಸಾತ್ವಿಕ ಜೀವನದ ಮೌಲ್ಯದ ಬೆಳಕಿನಲ್ಲಿ ಮೇಲಕ್ಕೆತ್ತುವ ಸಾಮರ್ಥ್ಯವನ್ನು ಪಡೆದ ಶ್ರೀ ವ್ಯಾಸವಿಟ್ಠಲರು ಉಳಿದೆಲ್ಲ ದಾಸವರೇಣ್ಯರಂತೆ ಪರಮಾತ್ಮನೊಡನೆ ಆತ್ಮೀಯತೆಯನ್ನು ಬೆಳೆಸಿ ಆತನಿಗೆ ತಾಯಿ ಯಶೋದಾದಿಯಲ್ಲಿ ಲಾಲಿಹೇಳಿ, "ತೂಗೇ ನೀ ಲಾಲಿಯ ಲಾಲಿಸಿದೆಯೊ ರಾಮಾ ತೊಟ್ಟಿಲೊಳ್ಮಲಗಿ ! ನಾಗಾರಿವಾಹನ ನತಜನ ಪ್ರೇಮಾ, ಸುರಸಾರ್ವಭೌಮಾ" ಎಂದು ಸಾಂತ್ವನ ಹೇಳುವ ಶಕ್ತಿಯನ್ನು ಪಡೆದ ಪ್ರಾತಃಸ್ಮರಣೀಯರಲ್ಲಿ ಒಬ್ಬರಾಗಿದ್ದಾರೆ. ಪಂಡಿತರಾಗಿದ್ದ ಇವರು ಶ್ರೀ ವಿಜಯದಾಸರ ಅನುಗ್ರಹ ಪಡೆದ ಮೇಲೆ ತಮ್ಮ ಸಾಹಿತ್ಯದಲ್ಲಿ ಜನಹಿತವಾದ ಸರಳ ದೇಸೀ ಭಾಷೆಯನ್ನೇ ಬಳಸಿ ತಮ್ಮ ಪಾಂಡಿತ್ಯವನ್ನು ಮೃದುವಾಗಿರಿಸಿ ಎಲ್ಲರ ಸೊತ್ತನ್ನಾಗಿರಿಸಿದ ಮಹಾಮಹಿಮರಲ್ಲಿ ಇವರು ಶ್ರೇಷ್ಠರಾಗಿದ್ದಾರೆ. ಹೀಗೆ ಶ್ರೀ ವ್ಯಾಸವಿಟ್ಠಲರ ಬದುಕು ಬರಹಗಳು ದಾಸಸಾಹಿತ್ಯದಲ್ಲಿ ಶಾಶ್ವತವಾದ ಹೆಜ್ಜೆಗಳನ್ನು ಮೂಡಿಸಿ ವಿದ್ಯೆಗೆ ವಿನಯ, ಬದುಕಿಗೆ ಸಹಜತೆಗಳು ಭೂಷಣವೆಂದು ಸಾರುತ್ತ ಶಾಶ್ವತವಾಗಿ ನಿಂತಿವೆ.

ನರಹರಿ ಕವಿಯ ಪ್ರಹ್ಲಾದ ಚರಿತ್ರೆ

—ಪು. ಶ್ರೀನಿವಾಸ ಭಟ್

ಕನ್ನಡದ ಭಕ್ತಿಕಾವ್ಯಗಳಲ್ಲಿ ಪ್ರಹ್ಲಾದ ಚರಿತ್ರೆಯು ಒಂದಾಗಿದೆ. ಇದನ್ನು ಬರೆದವನು ನರಹರಿ ಕವಿ. ಕರ್ನಾಟಕ ಕವಿಚರಿತೆಯ ದ್ವಿತೀಯ ಸಂಪುಟದಲ್ಲಿ [ಪು. 356-357], "ಇವನು ಬ್ರಾಹ್ಮಣ ಕವಿಯೆಂದು ತೋರುತ್ತದೆ. ಗರುಡಗಿರಿ ವಾಸನನ್ನು ಪ್ರಾರ್ಥಿಸುವುದರಿಂದ ಇವನ ಊರು ಬಲ್ಲಾಳಪುರದ ಸಮೀಪದಲ್ಲಿ ಗರುಡಗಿರಿ ಇದ್ದಿರಬಹುದು. ಇವನು ಸುಮಾರು ಕ್ರಿ. ಶ. 1650 ರಲ್ಲಿ ಇದ್ದಿರಬಹುದು. ಭಾಮಿನೀಷಟ್ಪದಿಯಲ್ಲಿ ಬರೆದಿರುವ ಈ ಕಾವ್ಯದಲ್ಲಿ 17 ಸಂಧಿಗಳಲ್ಲಿ 1111 ಪದ್ಯಗಳಿವೆ" ಎಂದಿದೆ.

ಇವನ ಕಾವ್ಯದ ಕೊನೆಯಲ್ಲಿ :

ಧಾರಿಣಿಯೊಳುನ್ನತದ ದಕ್ಷಿಣ ।
ವಾರಣಾಸಿಯ ದೆನಿಪ ವರಕಾ ।
ವೇರಿ ತೀರದೊಳೆಸೆವ ಬಲ್ಲಳ ಪುರದ ಪ್ರಭುವಿಳೆಗೆ
ವೀರವೈಷ್ಣವ ಸಂಗರುಗಳ ಕು ।
ಮಾರ ನರಹರಿ ದೇವನೀಕೃತಿ ।
ಸಾರುವನು ವರ್ಣಿಸಿದ ನೊಲಿದು ನೃಸಿಂಹನಾಜ್ಞೆಯಲಿ ॥ [17-64]

ಎಂದು ತನ್ನ ಕುರಿತು ಹೇಳಿಕೊಂಡಿರುವನು. ಅದೇರೀತಿ ಒಂಬತ್ತನೆಯ ಸಂಧಿಯಲ್ಲಿ, ಪುಣ್ಯಾತ್ಮರನ್ನು ಯಮಲೋಕದಲ್ಲಿ ಸತ್ಕರಿಸುವ ಬಗೆಯನ್ನು ಹೇಳುತ್ತಾ,

ಕೇಳುತಾಕ್ಷಣ ಯಮನು ಶಿವಶರ ।
ಣಾಳಿಯನು ಕೈವಿಡಿದು ಸತ್ಕೃತಿ ।
ಜಾಲ ಪೂಜೆಗಳಿಂದ ಮನ್ನಿಸಿ ಕೈಗಳನು ಮುಗಿದು ॥
ಏಳಿಗೆಯ ಹರಿಸದಲಿ ಪೂಜಿಸಿ ।
ಕಾಲಮೇಲೆಡೆ ಗೆಡೆದು ಪೊಗಳುತ ।
ಭಾಳಲೋಚನ ನೆಡೆಗೆ ಕಳುಹುತ ಲಿಹನು ಕರುಣದಲಿ ॥ [9-32]

ಎಂದು ಶಿವಪಾರಮ್ಯ ಹೇಳಿದೆ. ಹಾಗಾಗಿ ಇವನು ಹರಿಹರರನ್ನು ಸಮಾನತೆಯಿಂದ ಕಾಣುವ ಅದ್ವೈತಿಯಾಗಿರಬಹುದು. ಪರೀಕ್ಷಿತನಿಗೆ ಶುಕಮುನಿಯು ಹೇಳಿದಂತಿರುವ ಈ ಕೃತಿಯ ಸಂಧಿಗಳ ಕೊನೆಯಲ್ಲಿ ನರಸಿಂಹನನ್ನು ಸ್ಮರಿಸಿರುವನು. ಇಲ್ಲಿ ಇವನೊಬ್ಬ ರಾಜಸಂಬಂಧಿಕನೆಂದು ಕಾಣುತ್ತದೆ, ಇತರ ಆಧಾರಗಳು ತಿಳಿದಿಲ್ಲ. ವ್ಯಾಸ ಭಾಗವತ, ವಿಷ್ಣು ಪುರಾಣಗಳಲ್ಲಿ ಪ್ರಹ್ಲಾದನ ಕತೆ ಪೌರಾಣಿಕವಾಗಿ ಬಂದಿದೆ. ಅದನ್ನು ಆಧರಿಸಿ ಹಾಗೂ ಇತರ ಕಾವ್ಯಗಳಿಂದ ಪ್ರಭಾವಿತನಾಗಿ ಈ ಕವಿಯು ಈ ಕಾವ್ಯರತ್ನವನ್ನು ಬರೆದಿರುವನು. ಮೈಸೂರಿನ ಒಂದು ಹಸ್ತಪ್ರತಿಯಲ್ಲಿ 1115 ಪದ್ಯಗಳಿವೆ. ಮತ್ತೊಂದರಲ್ಲಿ 1135 ಪದ್ಯಗಳಿವೆ, ಇನ್ನೊಂದರಲ್ಲಿ 1350 ಪದ್ಯಗಳು, ಬೇರೊಂದರಲ್ಲಿ 16 ಸಂಧಿಗಳಿದ್ದು 1215 ಪದ್ಯಗಳಿವೆ. ಒಂದು ಪ್ರತಿಯಲ್ಲಿ ಈ ಕಾವ್ಯವನ್ನು ಪ್ರಹ್ಲಾದ ಭಾರತವೆಂದು ಹೆಸರಿಸಿದೆ. [ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿ– ಮೈಸೂರು]

ಕಥಾಸಾರ : ಈ ಕಾವ್ಯದ ನಾಂದೀಸಂಧಿಯಲ್ಲಿ ಅನೇಕ ದೇವತಾ ಸ್ತುತಿಗಳಿವೆ. ಮುಂದಿನ ೨ನೇ ಸಂಧಿಯಲ್ಲಿ, ವೈಕುಂಠದ ದ್ವಾರಪಾಲಕರಾದ ಜಯವಿಜಯರು ಸನಕಾದಿಗಳ ಶಾಪದಿಂದ ಹಿರಣ್ಯಕಶಿಪು ಹಿರಣ್ಯಾಕ್ಷರೆಂಬ ದಾನವರಾಗಿ ಜನಿಸುವ ಕತೆಯಿದೆ. ಆಮೇಲಿನ ೩–೪ನೆ ಎರಡು ಸಂಧಿಗಳಲ್ಲಿ, ದಾನವವೀರರು ವೈಭವದಿಂದ ರಾಜ್ಯಭಾರಮಾಡುತ್ತಿದ್ದಾಗ ಸಭೆಗೆ ಬಂದ ನಾರದರು 'ಶ್ರೀಹರಿಯೊಬ್ಬನೇ ನಿಮಗೆ ಸಮಾನ'ನೆಂದುದು : ಇದನ್ನು ಕೇಳಿದ ಹಿರಣ್ಯಾಕ್ಷನು ಹರಿಯ ಗಮನವನ್ನು ಸೆಳೆಯಲು ಭೂದೇವಿಯನ್ನು ಅಪಹಾರ ಮಾಡುವುದು : ದೇವತೆಗಳ ಮೊರೆಯನ್ನು ಕೇಳಿದ ಹರಿಯು, ಬ್ರಹ್ಮನ ಮೂಗಿನಿಂದ ವರಾಹರೂಪದಿಂದ ಬಂದು ದುರುಳನ ಸಂಹಾರ ಮಾಡುವುದು ಎಂಬ ವಿಷಯಗಳಿವೆ. ಐದನೆಯ ಸಂಧಿಯಲ್ಲಿ, ಹಿರಣ್ಯಕಶಿಪುವು ಬ್ರಹ್ಮನನ್ನು ತಪಸ್ಸಿನಿಂದ ಮೆಚ್ಚಿಸಿ ವರಪಡೆದು, ದೇವತೆಗಳನ್ನು ಸೋಲಿಸಿ ತನ್ನ ಮನೆಯೊಳಗಿದವರನ್ನಾಗಿ ಮಾಡಿ ದರ್ಪದಿಂದ ಮೆರೆಯುವನು. ಆದರೂ ತಮ್ಮನನ್ನು ವಧಿಸಿದ ಹರಿಯನ್ನು ಗೆಲ್ಲಲಾಗಲಿಲ್ಲವೆಂದು ಮತ್ತೊಮ್ಮೆ ಹೊರಡುವನು. ಆಗ ಹರಿಯು ಕಪಟ ವಿಪ್ರನಾಗಿ ಬಂದು "ಹರಿಯು ನಿನ್ನ ಉದರದಲ್ಲೇ ಇರುವನು" ಎಂದು ಅದೃಶ್ಯನಾಗುವನು. ನಾರದರು ಹರಿಯ ಅನುಜ್ಞೆಯಂತೆ ಬಂದು ಋತುಸ್ನಾತೆಯಾಗಿದ್ದ ಹಿರಣ್ಯಕಶಿಪುವಿನ ರಾಣಿಗೆ ತತ್ವೋಪದೇಶ ಮಾಡಿದರು. ಆಕೆಯ ಪುತ್ರೋತ್ಸವದ ಮುನ್ಸೂಚನೆಯಿತ್ತರು. ಹರಿಯ ವಂಚನೆಯಿಂದ ಉರಿಗೊಂಡ ದಾನವನು ರಾಜ್ಯಕ್ಕೆ ಬಂದು ಬಲಸಂವರ್ಧನೆಗೆ ಶಂಕರನ ವರಪಡೆವೆನೆಂದು ಕಾಡಿಗೆ ನಡೆದನು. ಈ ಸಮಯ ಕಾದಿದ್ದ ದೇವತೆಗಳು ಕಯಾಧುವನ್ನು (ಹಿರಣ್ಯಕಶಿಪುವಿನ ಸತಿಯನ್ನು) ಸೆರೆಹಿಡಿದರು. ಬ್ರಹ್ಮನ ಸೂಚನೆಯಂತೆ ನಾರದರು ಬಂದು ಅವಳನ್ನು

ಬಿಡಿಸಿದರು. ಇದನ್ನು ಕೇಳಿದ ದೈತ್ಯಚಕ್ರವರ್ತಿಯು ತನ್ನನ್ನು ಬಿಟ್ಟು ಬಂದಾಗ
ಮಗನ ಜನನವಾಗಿತ್ತು. ಅವನಿಗೆ ಪ್ರಹ್ಲಾದನೆಂದು ಹೆಸರಿಟ್ಟನು. ಅವನು ಬೆಳೆಯು
ತ್ತಿದ್ದಂತೆ ಹರಿಯ ಕುರಿತಾದ ವಿಷಯಗಳಲ್ಲಿ ಆಸಕ್ತನಾಗುವನು. ಅವನ ಈ ಅಭ್ಯಾಸ
ವನ್ನು ಬಿಡಿಸಲು ಶುಕ್ರಾಚಾರ್ಯನ ಮಕ್ಕಳಿಗೆ [ಶಂಡ-ಅಮರ್ಕ] ವಿದ್ಯೆ ಕಲಿಸಲು
ಕಳುಹಿಸಲಾಯಿತು. ಆರು ಮತ್ತು ಏಳನೇ ಸಂಧಿಗಳಲ್ಲಿರುವಂತೆ ಪ್ರಹ್ಲಾದನು ತನ್ನ
ಹರಿನಾಮಸ್ಮರಣೆಯ ಅಭ್ಯಾಸವನ್ನು ಬಿಡಲಿಲ್ಲ. ಅವನ ತಂದೆಯ ಬುದ್ಧಿವಾದಗಳು
ಸಫಲವಾಗಲಿಲ್ಲ. ಅವನನ್ನು ಮತ್ತೊಮ್ಮೆ ಗುರುಮಠಕ್ಕೆ ಕಳುಹಿಸಿದನು. ತಾತ್ವಿಕ
ವಿಷಯಗಳಲ್ಲೇ ಮಗ್ನನಾಗಿ ಮಗನು ಹರಿನಾಮ ಸ್ಮರಣೆಯನ್ನು ಮಾಡುತ್ತಾ
ಇರುವುದನ್ನು ಕಂಡ ದೈತ್ಯೇಶ್ವರನು ಹಾವುಗಳಿಂದ ಕಡಿಸಿ, ಆನೆಗಳಿಂದ ತುಳಿಸಿ, ಬೆಂಕಿ
ಯಿಂದ ಸುಡಿಸಿದನು. ಪ್ರಹ್ಲಾದನು ಬದುಕಿ ಬಂದಾಗ ಅವನ ತಾಯಿಯ ಕೈಯಿಂದ
ವಿಷಪಾನ ಮಾಡಿಸಿದರೂ ಅದು ಅಮೃತಸದೃಶವಾಗುವುದು. ಮುಂದಿನ 8-9ನೇ
ಎರಡು ಸಂಧಿಗಳಲ್ಲಿ ಅನುಕ್ರಮವಾಗಿ ಪ್ರಹ್ಲಾದನನ್ನು ಇನ್ನೊಮ್ಮೆ ಗುರುಮಠಕ್ಕೆ
ಕಳುಹಿಸುವ, ಅವನು ಗೆಳೆಯರಿಗೆ ಹರಿಭಕ್ತಿಸಾರವನ್ನು ಬೋಧಿಸುವ ಶಾಲಾ ಓದು
ಮುಕ್ತಿಗೆ ಸಾಧನವಲ್ಲವೆಂದು ವಾದಿಸುವ, ಮರಣದ ಬಳಿಕ ಪುಣ್ಯಾತ್ಮರಿಗೆ ಸಿಗುವ
ಸುಖವನ್ನೂ ಪಾಪಿಗಳಿಗೆ ಸಿಗುವ ದುಃಖವನ್ನೂ ವಿವರಿಸುವನು. ಹತ್ತನೆಯ ಸಂಧಿ
ಯಲ್ಲಿ, ಮಗನನ್ನು ಮಂತ್ರವಾದದ ಮೂಲಕ ಸರಿದಾರಿಗೆ ತರಲು ಜೋಗಿಗಳಿಂದ
ಮಂತ್ರವಾದಗಳನ್ನೂ ಬ್ರಾಹ್ಮಣರಿಂದ ಯಾಗಗಳನ್ನೂ ರಾಕ್ಷಸನು ಮಾಡಿಸಿದ
ನೆಂದಿದೆ. ಹನ್ನೊಂದು ಹನ್ನೆರಡನೇ ಸಂಧಿಗಳಲ್ಲಿ ಮಗನು ಯಾವುದಕ್ಕೂ ಬಗ್ಗದೆ
ಹೋದಾಗ ತಂದೆ ಅವನನ್ನು ಉಪ್ಪರಿಗೆಯಿಂದ ಎಸೆದುಬಿಡುವನು. ಆಗ ಭೂದೇವಿ
ಬಂದು ಸಂತೈಸುವಳು. ಸದ್ಯಃ ಹರಿದರ್ಶನವಾಗುವುದೆನ್ನುವಳು. ದನುಜೇಶನು
ಶಂಬರಾಸುರನೆಂಬವನಿಂದ ಮಾಯಾಮೃಗಗಳನ್ನು ನಿರ್ಮಿಸಿ ಹೆದರಿಸಿದರೂ
ಪ್ರಹ್ಲಾದನು ಸುಖದಿಂದ ಅರಮನೆಗೆ ಬಂದನು. ಅಲ್ಲಿ ಮಂತ್ರಿಗಳು 'ಹರಿಭಜನೆ ಬಿಡು'
ಎಂದು ಒತ್ತಾಯಿಸುವರು. ಆಕಾಶವಾಣಿಯೊಂದು 'ಪ್ರಹ್ಲಾದನನ್ನು ಸಮುದ್ರಕ್ಕೆಸೆ
ಯಿರಿ' ಎಂದಿತು. ಸಮುದ್ರದಲ್ಲಿ ವರುಣನಿಂದ ಪ್ರಹ್ಲಾದ ಸನ್ಮಾನ ಪಡೆದು ಧ್ಯಾನಾ
ಸಕ್ತನಾಗಿದ್ದಾಗ ಶ್ರೀಹರಿ ಪ್ರತ್ಯಕ್ಷನಾಗುವನು. ಮುಕ್ತಿಯನ್ನು ಯಾಚಿಸಿದರೂ
ಅದನ್ನು ಮುಂದಕ್ಕೆ ಕೊಡುತ್ತೇನೆ ಎಂದು ಸಮಚಿತ್ತವನ್ನು ಅನುಗ್ರಹಿಸಿ ಹರಿಯು
ಅದೃಶ್ಯನಾಗುವನೆಂದಿದೆ. ಮುಂದಿನ 13-16ನೇ ನಾಲ್ಕು ಸಂಧಿಗಳಲ್ಲಿರುವ ಕತೆ
ಮುಖ್ಯವಾದುದು. ಹಿರಣ್ಯಕಶಿಪುವಿಗೆ ಮರಣಸೂಚಕ ಸ್ವಪ್ನಗಳು ಕಾಣಲಾರಂಭಿಸಿ
ದುವು. ಸಮುದ್ರದಿಂದ ಎದ್ದು ಬಂದ ಮಗನನ್ನು ಕಂಡು ದಾನವೇಂದ್ರನು ಕ್ರೋಧ
ದಿಂದ ಕುದಿದನು. ಶ್ರೀಹರಿಯ ಇರುವಿಕೆಯ ಕುರಿತು ಪ್ರಶ್ನಿಸುತ್ತಾ 'ಅವನು
ಚಾವಡಿಯ ಕಂಬದಲ್ಲಿರುವನೇ ?' ಎಂದು ಕೇಳುವನು. ಮಗನು ಹೌದೆಂದಾಗ ಗದೆ

ಯಿಂದ ಕಂಬವನ್ನೊಡೆಯುವನು. ಹರಿಯು ನರಸಿಂಹನಾಗಿ ಉದಿಸಿ ಬರುವನು. ದಾನವವೀರರು ನರಸಿಂಹನನ್ನು ಕೊಲ್ಲಲು ಹರಿಬರುವರು. ಅವರು ಸಮೂಲನಾಶವಾದಾಗ ಸ್ವಯಂ ದಾನವೇಂದ್ರನೇ ಎದ್ದು ಬರುವನು. ಬ್ರಹ್ಮನ ವರಕ್ಕೆ ಚ್ಯುತಿ ಬಾರದಂತೆ ಹರಿಯು ಅವನನ್ನು ವಧಿಸಿ ಲೋಕಕ್ಕೆ ಮಂಗಳವನ್ನುಂಟುಮಾಡುವನು. ಕೊನೆಯ 17ನೇ ಸಂಧಿಯಲ್ಲಿ ಪ್ರಹ್ಲಾದನಿಗೆ ಪಟ್ಟಗಟ್ಟುವುದು. ಸುಮನಸರುಂ ಹರಿಯ ಸ್ತುತಿ ಮಾಡುವುದು ಇತ್ಯಾದಿ ಕಥಾಭಾಗವಿದೆ.

ಕಾವ್ಯಾಂತರಾಳದಲ್ಲಿ :

ಪ್ರಹ್ಲಾದ ಭಾರತದ ಕೆಲವು ಸ್ವಾರಸ್ಯಕರ ಘಟ್ಟಗಳು, ಪದ್ಯಗಳು ವಾಚಕರ ಆಸ್ವಾದನೆಗಾಗಿ ಬರೆಯಲಾಗಿವೆ.

1 ನರಹರಿಮೂರ್ತಿ ಅಲೌಕಿಕವಾದ ಅವತಾರವೆಂದು ಕವಿ ಬಣ್ಣಿಸಿದ್ದಾನೆ.

ಶ್ರುತಿಗಳಾದವು ನಾಲ್ಕು ಕಾಲು
ಸ್ವರದ ವಾಸುಕಿ ಬಾಲವಾದನು
ಸ್ಮೃತಿ ಪುರಾಣಗಳಿಂದು ಕಿವಿಯಾದವು ಶನೈಶ್ಚರನ ||
ಪಿತನಿಶೇಶರು ನಯನವಾದರು
ಕ್ರತುಗಳಾದವು ದಾಡೆಮಂತ್ರ
ಪ್ರತತಿಯೇ ಸರ್ವಾಂಗವಾಯಿದು ದಿವ್ಯಸೂಕಕರಗೆ || [3-17]

2 ವ್ಯಾಸಭಾಗವತದಿಂದ ಬರಿಸಿ ಮತ್ತು ಕೆಲವನ್ನು ಸೇರಿಸಿ, ಹಿರಣ್ಯಕಶಿಪುವು ಬ್ರಹ್ಮನಿಂದ ವರಗಳನ್ನು ಪಡೆದುದನ್ನು ಕವಿ ನಿರೂಪಿಸುತ್ತಾನೆ :

ಸುರನರೋರಗ ಖಗಮೃಗಗಳಿಂ
ಪರಿಪರಿಯ ಚೇತನಗಳಿಂದಂ
ಧರಣಿ ನಭಗಳೊಳಗೆ ಹೊರಗೆಯು ಹಗಲಿರುಳ್ಗಳೊಳು ||
ಉರಿಸಿಡಿಲು ಶಿಲೆಯೊಳಗೆ ಶಸ್ತ್ರದಿ
ಗರಳ ಗದೆ ತೃಣ ಕಾಷ್ಠ ಮಂತ್ರೋ
ಚ್ಚಾರಣೆ ಗಳೊಳಂ ಸಾಯದಂದದಿ ವರವನೀಡೆಂದ || [4-30]

ಹಲವು ವರಾವಳಿನ್ನು ಸಗ್ಗಕೆ
ಕಲಶವೆಂಬಂತಿನ್ನು ನಗರಿಯ
ಬಲಿಸಿ ಕೊಡು ಸುರಲೋಕಪಾಲಕರುರಗರು ತನ್ನ ||
ಕೆಳಗೆ ಬಂದೋಲೈಸಲಿ [4-31]

3 ಹಿರಣ್ಯಕಶಿಪು-ಪ್ರಹ್ಲಾದರಲ್ಲಿ ಹರಿಭಕ್ತಿಯ ಬಗೆಗೆ ಆದ ಸಂವಾದದಲ್ಲಿ ಹರಿಯು 'ಬೂದಿ ಮುಚ್ಚಿದ ಕೆಂಡದಂತೆ' ಎಂದು 'ವಿಷ್ಣು ಸ್ಮರಣೆ ಬಾಯಿಗೆ ಬರಲು ನಾನದನೆಂತು ಬಿಡಲೆಂದು' ಸಾಲಂಕಾರದ ಸಯುಕ್ತಿ ಕವನಾದ ಒಕ್ಕಣೆಯಿದೆ :

ಆದೊಡೆಲೆ ಪ್ರಹ್ಲಾದ ಕೇಳೈ
ಬೂದಿ ಮುಚ್ಚಿದ ಕೆಂಡವಾ ಮಧು
ಸೂದನನ ನಂಬದಿರು ತಿಮಿರದ ರವಿಯು ಸಖತನದ ||
ಗಾದೆಯಹುದಂತ್ಯದಲಿ ನಮ್ಮೊಳು
ವಾದಿಸದೆ ಬಿಡುಬೇಗದಲಿಲ
ಕ್ಷ್ಮೀಧವನನೆಂದಸುರ ಬೋಧಿಸಿದನು ಕುಮಾರಂಗೆ || [6-16]

ಅರಸುತಿಹಲತೆ ಕಾಲ ತೊಡಕಲು
ಹರಿದು ಬಿಸುಡುವರುಂಟೆ, ಸಿರಿ ಬರ
ಲರಿದರಿದು ಪದದಿಂದ ಲೊದೆದವರುಂಟೆ, ಹಸಿದಿರಲು ||
ಕರೆದು ಕ್ಷೀರಾನ್ನವನು ಬಡಿಸಲು
ಹೊರಗೆ ಸೂಸುವವರುಂಟೆ, ವಿಷ್ಣು
ಸ್ಮರಣೆ ಬಾಯಿಗೆ ಬರಲು ನಾನದನೆಂತು ಬಿಡಲೆಂದ || [6-17]

4 ಲೌಕಿಕ ವಿದ್ಯೆಗಳು ಪಾರಲೌಕಿಕ ಸುಖದ ಸಾಧನಗಳಲ್ಲವೆಂದು ಪ್ರಹ್ಲಾದ ಹೇಳುವಲ್ಲಿ ಉದಾಹರಣೆಗಾಗಿ ಗಣಿತದ ವಿಭಾಗಗಳು ನಿಷ್ಫಲಗಳೆಂದು ಕವಿಯು ವಿವರಿಸಿದ್ದಾನೆ :

ಮುಗ್ಗಿಗಳ ಮಿಗೆ ಕೂಡಿ ಕಳೆದರೆ
ಸಗ್ಗವಹುದೇ, ಮುಂದೆ ಭಾಗಿಸಿ
ಯೆಗ್ಗಡದ ಘನವರ್ಗ ಮೂಲವ ನರಿದೊಡೀಭವದ ||
ಹಗ್ಗಹರಿದೇರುವನೆ ಮುಕ್ತಿಯ
ದುಗ್ಗವನು ಕೇಳಯ್ಯ ತೆರಪಿನ
ಬುಗ್ಗಿಯಲ್ಲದೆ ಬರೆದೊಡಂತ್ಯದೊಳಿಲ್ಲ ಸುಖವೆಂದ [7-19]

5 ಮಂತ್ರವಾದಕ್ಕಾಗಿ ಬರುವ ಜೋಗಿಯ ವರ್ಣನೆ ಇಲ್ಲಿದೆ. ನೇಮಿಚಂದ್ರ ಮೊದಲಾದ ಕವಿಗಳ ಕೃತಿಗಳಲ್ಲಿ ಜೋಗಿ–ಜೋಗಿನಿಯರ ಪ್ರಸ್ತಾಪವಿದ್ದು, ಈ

ಕವಿಯು ಆದರಿಂದ ಪ್ರಭಾವಿತನಾಗಿ ಅಂತಹ ಪುಚ್ಛವನ್ನು ಕೃತಿಯಲ್ಲಿ ಅಳವಡಿಸಿದ್ದಾನೆ.

ಹಿಡಿದ ಬೆತ್ತದ ಕೋಲು ಹೆಗಲಲಿ
ಜಡಿದ ಭಸ್ಮದ ಗುಂಡಿಗೆಯು ಜಡೆ
ಮುಡಿಗಳುಟ್ಟ ಚವುರು ಚರ್ಮವು ನಿಖಿಳಭೂತಗಳ ॥
ಗಡಣ ಮಸ್ತಕ ಶೂಲವೆಂದೆಡೆ
ಬಿಡದುಲಿದ ಬಲು ಮಂತ್ರ ತಂತ್ರದ
ತೊಡರು ಬಾವುಲಿಗಳು ಮೆರೆಯಲ್ಕೈತಂದನಾಸಿದ್ಧ ॥ [10-11]

6 ಹಿರಣ್ಯಕಶಿಪುವು ಪ್ರಹ್ಲಾದನ ಹರಿಭಕ್ತಿಯ ಸೋಂಕನ್ನು ನಿವಾರಿಸುವ ಹೋಮಕ್ಕಾಗಿ ಶೈವ ಬ್ರಾಹ್ಮಣರನ್ನು ಕರೆಸಿದನು.

ಹರಿಸಮಿಗಲಮರಾರಿ ಗದ್ದದ
ಹಿರಿಯುಪಾಧ್ಯ ನಿಕಾಯವನು ಕರೆ
ತರಿಸಿದನು ಸಿಮಿಷಾರ್ಥದೊಳಾಚಾರ್ಯ ಸಿದ್ದೆಡೆಗೆ ॥ [10-18]

ಇಟ್ಟ ಸುವಿಭೂತಿಗಳ ಹೆಗಲಲಿ
ಕಟ್ಟ ಜಡೆವುಪವೀತಗಳಮಿಗೆ
ಮುಟ್ಟ ಲೊಪ್ಪುವ ಧೋತ್ರಗಳ ಕಕ್ಷದಲಿ ಮೆರೆವಾ ॥
ಮುಷ್ಟಿ ಪುಸ್ತಕ ಸಹಿತ ಬುಧಜನ
ವಿಟ್ಟಣಿಸಿ ಬಂದಸುರವೈರಿಗೆ
ಕೊಟ್ಟು ಮಂತ್ರಾಕ್ಷತೆಯ ಪರಸುತ ಸಿಂದರೊಗ್ಗಿನಲಿ ॥ [10-19]

7 ಸಮುದ್ರಕ್ಕೆಸೆಯಲ್ಪಟ್ಟರೂ ಹರಿದರ್ಶನದ ಹಂಬಲದಿಂದ ಪ್ರಹ್ಲಾದನು ಚಿಂತಿಸುವನು. "ಪೂರ್ವಕರ್ಮದ ಫಲವೇ ಇಹದಲ್ಲಿ ಫಲಿಸುವುದು" ಎಂಬುದನ್ನಿಲ್ಲಿ ಅಳವಡಿಸಿದೆ :

ಆವಧರ್ಮವನುಳಿದೆನೋ ಮೇ
ಣಾವವ್ರತಗಳ ಹಳಿದೆನೋ, ದಿಟ
ವಾವ ಸತ್ಪುರುಷರನು ಜರೆದೀಡಾಡಿದೆನೊ, ಶಿಶಿಯ ॥
ಭಾವನದಕಾಗೆನಗೆ ತನ್ನಯ
ಪಾವನಾಂಘ್ರಿಯ ತೋರ, ಸುಡಲೀ
ಜೀವವೇಕೆಂದೊಲೆದೊಲೆದು ಹಲುಬಿದನು ಪ್ರಹ್ಲಾದ ॥ [12-40]

8 ಪ್ರಹ್ಲಾದನಿಗೆ ಅನುವಾಗಿ ಹರಿಯು ಇರುವನೆಂಬರೆ, ಮುಂದೆ ಹರಿಯು ಪ್ರತ್ಯಕ್ಷನಾಗುವನೆಂದೂ ಕವಿಯ ವಾಕ್ಯದಲ್ಲಿ ಅಡಕವಾಗಿದೆ :

ಎಲ್ಲರಂದದ ಭಕ್ತನೆಂದಿಹು
ದಿಲ್ಲ, ನಿನ್ನನು ಮಗನೆ ನಮ್ಮಯ
ಪುಲ್ಲ ಶರನಿಂದಧಿಕವಾಗಿಹುದೆನಗೆ ಮಮಕಾರ ॥
ಎಲ್ಲಿ ನೀನೆನೆಬಹೆನು ವಹಿಲದೊ
ಳಿಲ್ಲಿಗೆಲೆ ಪ್ರಹ್ಲಾದ ನಡೆಯೆಂ
ದಲ್ಲಿ ಕೊಟ್ಟಭಯವ ನೃಸಿಂಹನದೃಶ್ಯರೂಪಿಂದ ॥ [12-72]

9 ದಶಭುಜನಾದ ನರಹರಿಯು, ಎರಡು ಕೈಗಳಿರುವ ಹಿರಣ್ಯಕಶಿಪುವನ್ನು ಕೊಂದು, ಮುಂದೆ ಅವನು (ರಾವಣನಾಗಿ) ಇಪ್ಪತ್ತು ಕೈಗಳಿಂದ ಕೂಡಿದ್ದರೂ ತಾನು ಎರಡೇ ಕೈಗಳಿಂದ ಅವನನ್ನು ಕೊಲ್ಲುವೆನೆಂಬ ಭಾವೀಘಟನೆ ಚಮತ್ಕೃತಿಯಾಗಿ ಇದೆ :

ಐಸಲೇ ನಿನಗೀಗ ಮಿಗೆ ಹರಿ
ಹಾಸವೆನ್ನೊಳು ಮಾಳ್ಪೆ ಮುಂದೆ ವಿ
ಶೇಷ ವಾಗೀರೈದು ಶಿರ ವಿಪ್ಪತ್ತು ತೋಳಿನಲಿ ॥
ನೋಸ ಹೋಗದೆ ಜ್ಞಾನಿಯಾಗುದಿ
ಸೀ ಶರೀರವ ಬಿಸುಟು ನಡೆ ನರ
ವೇಷದಲಿ ನಾ ಬಂದು ಕೆಡಹುವೆನೆಂದನಸುರಾರಿ ॥ [16-15]

10 ನರಹರಿಯು ಪ್ರಹ್ಲಾದನಿಗೆ ಜೀವನ ಧರ್ಮದ ಸಾರವನ್ನು "ಧರ್ಮವನು ಬಿಟ್ಟಿರದೆ ರಾಜ್ಯವಾಳೋ" ಎಂದುದು ಹರಿಭಕ್ತರಿಗೆ ಹೇಳಿದ ಉಪದೇಶದಂತಿದೆ :

ಕರೆದು ಪ್ರಹ್ಲಾದನಿಗೆ ಬುದ್ಧಿಯ
ನೊರೆದ ನೊಳಗಡೆ ಗೈದಿ ನೀನಿ
ಟ್ಟಿರವ ನಾಡದಿರೊಬ್ಬರೊಳು ಹಿಡಿಯದಿರಧರ್ಮವನು ॥
ಒರಿಯ ತನದಲಿ ಧರ್ಮವನು ಬಿ
ಟ್ಟಿರದೆ ರಾಜ್ಯವನಾಳು ಹೋಗೆಂ
ದಿರಿಸುತೆದ್ದು ಮುರಾಂತಕನು ಪೊರವಂಟನರಮನೆಯ ॥ [17-57]

ಭಕ್ತಿಯು ಇಹಪರಗಳ ಸುಖಾನುಭವಕ್ಕೆ ಕಾರಣವೆಂದು ನಂಬಿದ ಭಕ್ತಶಿರೋಮಣಿ ಪ್ರಹ್ಲಾದ. ನರಹರಿ ಕವಿಯ ಈ ಕಾವ್ಯ ಭಕ್ತಿಯ ಮೇಲ್ಮೆಯನ್ನೂ ಪ್ರಹ್ಲಾದನ ಹಿರಿಮೆಯನ್ನೂ ಸಾರುತ್ತದೆ.

ಅನುಬಂಧ

ಭಾಗವತದಲ್ಲಿ :

ವೈಷ್ಣವ ಭಾಗವತದ ಸಪ್ತಮಸ್ಕಂದದಲ್ಲಿ ಈ ಕತೆಯಿದೆ. ಅದರಲ್ಲಿ ದೇವತೆಗಳಿಂದ ಅಪಹರಿಸಲ್ಪಡುವಾಗಲೇ ಕಯಾಧು ಗರ್ಭವತಿಯಾಗಿದ್ದು, ನಾರದರ ಆದೇಶದಂತೆ ಬಂಧಮುಕ್ತಳಾಗಿ ಮುಂದೆ ಕೆಲಕಾಲ ಅವರ ಆಶ್ರಮದಲ್ಲೇ ಇದ್ದಳೆಂದಿದೆ. ಆ ಕಾಲದಲ್ಲಿ ಗರ್ಭದಲ್ಲಿದ್ದ ಮಗುವಿಗೆ ನಾರದರು ಭಕ್ತಿಯೋಗವನ್ನು ಉಪದೇಶಮಾಡಿದರೆಂಬುದು ಪ್ರತ್ಯೇಕ ಘಟ್ಟವಾಗಿ ಮೂಡಿಬಂದಿದೆ. ಪ್ರಹ್ಲಾದನ ಭಕ್ತಿಗಾಗಿ ಹಿರಣ್ಯಕಶಿಪುವಿನ ಆಸ್ಥಾನದ ಕಂಬದಿಂದ ಮೂಡಿದ ನರಹರಿಯು ಹಿರಣ್ಯಕಶಿಪುವನ್ನು ಕೊಂದು ಪ್ರಹ್ಲಾದನನ್ನು ರಕ್ಷಿಸಿದ ಕತೆ ಎಲ್ಲರಿಗೆ ತಿಳಿದಿದೆ.

ವಿಷ್ಣು ಪುರಾಣದಲ್ಲಿ :

ಇದರಲ್ಲಿ ಪ್ರಹ್ಲಾದನು ಹರಿಯೊಡನೆ ವರಕೇಳಿದಾಗ ತನ್ನ ತಂದೆಯ ಅಪರಾಧಗಳನ್ನು ಮನ್ನಿಸಿ ಕೈವಲ್ಯವನ್ನು ಕರುಣಿಸು ಎನ್ನುವುದು ಪ್ರಹ್ಲಾದನ ಯೋಗ್ಯತೆಯನ್ನು ತೋರಿಸುವ ಘಟ್ಟ ವಿಶೇಷವಾಗಿದೆ, ಕಾವ್ಯದಲ್ಲಿ ಅದು ಕಾಣುವುದಿಲ್ಲ.

ಯಕ್ಷಗಾನದಲ್ಲಿ :

ಇಪ್ಪತ್ತನೇ ಶತಕದ ಪ್ರಾರಂಭದಲ್ಲಿ ಮಾಯ್ಯವಟಿ ವೆಂಕಟರಮಣ ಯಕ್ಷಗಾನ ಪ್ರಹ್ಲಾದ ಚರಿತ್ರೆಯನ್ನು ಬರೆದಿರುವನು. ಇಲ್ಲಿ ಹಿರಣ್ಯಕಶಿಪುವಿನಿಂದ ಸೋತು ದೇವತೆಗಳು ಸೇವಕ ವೃತ್ತಿಯಲ್ಲಿದ್ದಾಗ, ಶಚೀದೇವಿ ಇಂದ್ರನೊಡನೆ ತಮ್ಮ ಬವಣೆಗಾಗಿ ದುಃಖಿಸುವುದು, ಇಂದ್ರನು ಸುರಗಡಣದೊಂದಿಗೆ ಬ್ರಹ್ಮ, ಈಶ್ವರ, ನಾರಾಯಣರಲ್ಲಿ ಮೊರೆಯಿಡುವುದು, ಆಗ ಹರಿಯು "ಕಿರಿದು ದಿನದಲಿ ಕೊಲುವೆ ಖಳನ ಯತ್ನದಲಿ" ಎನ್ನುವುದು ಕಾವ್ಯಕ್ಕಿಂತ ಮಿಗಿಲಾಗಿರುವ ಘಟ್ಟವಾಗಿದೆ. ಅಲ್ಲದೆ ಪ್ರಹ್ಲಾದನನ್ನು ದಂಡಿಸುವಾಗ "ಎತ್ತಿರೋ ಕೋದಂಡಕೀಲನ, ತನ್ನಿರೋ ಕಸೆಯ ಕೋಲನು, ಒತ್ತಿ ತುಳಿಸಿ ಪರಂಗಿ ಮಣೆಯೊಳು" ಎಂದಿರುವುದು ಆ ಕವಿಯು ಬಾಳಿದ ಕಾಲದ ಶಾಲೆಯಲ್ಲಿ ಸಿಗುತ್ತಿದ್ದ ಶಿಕ್ಷೆಯ ಸ್ವರೂಪವಿರಬಹುದು.

ಕೆಳದಿ ಲಿಂಗಣ್ಣ ಕವಿಯ ಕೃತಿಗಳು

—ಕೆಳದಿ ಗುಂಡಾಜೋಯಿಸ್

ಕ್ರಿ. ಶ. 1499 ರಿಂದ 1763ರ ವರೆಗೆ ದಕ್ಷಿಣ ಭಾರತದಲ್ಲಿ ತನ್ನದೇ ಆದ ಸಾಂಸ್ಕೃತಿಕ ಪರಂಪರೆಯನ್ನು ಪಾಲಿಸಿಕೊಂಡು ಬಂದ ಕೆಳದಿಯು ವೈಶಿಷ್ಟ್ಯಪೂರ್ಣ ಸಂಸ್ಥಾನಗಳಲ್ಲಿ ಒಂದು. ಈ ಸಂಸ್ಥಾನವನ್ನಾಳಿದ ರಾಜ-ರಾಣಿಯರು ಕೇವಲ ರಣೋತ್ಸಾಹಿಗಳಷ್ಟೇ ಅಲ್ಲದೆ ವಿದ್ವಾಂಸರೂ ಹಾಗೂ ಮಹಾ ಧರ್ಮಾಭಿಮಾನಿಗಳೂ ಆಗಿದ್ದರು. ಸಮಕಾಲೀನ ಗ್ರಂಥಗಳಾದ "ಶಿವತತ್ವರತ್ನಾಕರ," "ಕೆಳದಿ ನೃಪವಿಜಯ" ಮುಂತಾದ ಕೃತಿಗಳಲ್ಲಿ ಉಲ್ಲೇಖಿಸಿರುವಂತೆ :

"ಅನೇನ ಬಸವಭೂಪಾಲೇನ ಸಂಸ್ಕೃತ ಭಾಷಾಯಾಂ
ಶಿವತತ್ವರತ್ನಾಕರಃ ಸುಭಾಷಿತ ಸುರದ್ರುಮಃ [1]ಸಂಸ್ಕೃತ
ಕನ್ನಡೋಭಯ ಭಾಷಾಮಿಶ್ರಣೇನ ಸೂಕ್ತಿಸುಧಾಕರ ಇತಿ ಚ
ಸರ್ವ ವಿದ್ವಜ್ಜನ ಮನಸ್ತುಷ್ಟಿ ಕರಾಸ್ತ್ರಯೋ ಗ್ರಂಥಾಃ ವೀರ
ಶೈವಾನಂದ ಹೇತು ಭೂತಾ ಸಿದ್ಧಾಂತ ಶಿಖಾಮಣಿ ಗ್ರಂಥ
ವ್ಯಾಖ್ಯಾ ಚ ವಿರಚಿತಾ ಜ್ಞಾಯಂತೇ." (ಶಿ. ತ. ರ.)

"ಸುಧಾ ಮಧುರಯಾ ಗಿರಾ ಬಸವ ಭೂಮಿಪಾಲಾಗ್ರಣೀಃ
ಸುಭಾಷಿತ ಸುರದ್ರುಮಂ ಸ ಶಿವತತ್ವರತ್ನಾಕರಮ್ ।
ಸುಧಾಕರ ಮಚೀಕರತ್ತದನು ಸೂಕ್ತಿ ಶಬ್ದಾದಿಮಂ
ಕೃತಿತ್ರಿತಯ ಮಪ್ಯದಃ ಸರಸ ಸನ್ಮನ ಸ್ತುಷ್ಟಯೇ ॥" (ಕೆ. ನೃ.)

"ಪ್ರೌಢ ಶ್ರೀ ಬಸವ ಕ್ಷಿತೀಂದ್ರತಿಲಕಸ್ತಸ್ಯಾಸ್ತ ನೂಜೋ ಭಜ
ತ್ಕ್ಷೋಣಿ ಮಂಡಲ ಧೂರ್ವಹತ್ವ ಮಧಿಕಂ ಪ್ರಖ್ಯಾತ ಕೀರ್ತ್ಯೂರ್ಜಿತಃ ।
ಸದ್ವಿದ್ಯೋ ವಿವಿಧಾಃ ಕೃತೀಶ್ಚ ಕಲಯನ್ನಾನಂದಯನ್ಪಂಡಿತಾ
ನ್ನಿತ್ಯಂ ಶ್ರೀ ಗುರುಲಿಂಗ ಜಂಗಮ ಪದಾಂಭೋಜಾರ್ಚನಾ ಸಾದರಃ"[2]
(ವೀ. ಧ. ಶಿ.)

---

1. ಈ ಕೃತಿಯು ಹಸ್ತಪ್ರತಿರೂಪದಲ್ಲಿದ್ದು, ಪೂನಾದಲ್ಲಿದೆ.
2. ವೀರಶೈವ ಧರ್ಮಶಿರೋಮಣಿ ([illegible]) 1908. ಪು. 8.

"ಕಾಶಿಯಿಂ ಭಟ್ಟೋಜಿ ದೀಕ್ಷಿತನೆಂಬ ಘಟಕ ವಿದ್ವಾಂಸ
ನೈದಿರಲಾ ಭಟ್ಟೋಜಿ ದೀಕ್ಷಿತರ್ಗಂ ಆ ರಾಮಾನುಜ
ಶೃಂಗಿಗಂ, ವಿಶಿಷ್ಟಾದ್ವೈತ ಶುದ್ಧಾದ್ವೈತ ಶಾಸ್ತ್ರಂಗಳಲ್ಲಿ ಪ್ರಸಂಗವಂ
ಮಾಡಿಸಿ......." (ಕೆ. ನೃ. ವಿ. ಆ. V.)

ಕೆಳದಿ ಆಸ್ಥಾನವು ಕ್ರಿ. ಶ. 17ನೆಯ ಶತಮಾನದಲ್ಲಿಯೇ, ದೇಶೀಯ ರಾಜ್ಯಗಳಲ್ಲಿ ಸಾಹಿತ್ಯ ಹಾಗೂ ಸಾಂಸ್ಕೃತಿಕ ಪ್ರಲೋಭನಗಳಿಂದ ಕೂಡಿದ ಒಂದು ಪ್ರಮುಖ ಕೇಂದ್ರವಾಗಿತ್ತು. ಈ ಆಸ್ಥಾನದಲ್ಲಿ ಸುಮಾರು 59 ಕ್ಕಿಂತಲೂ ಹೆಚ್ಚಾಗಿ ಕಾವ್ಯ, ಸಾಹಿತ್ಯ ಹಾಗೂ ಶಾಸ್ತ್ರಗ್ರಂಥಗಳು ಬೆಳಕು ಕಂಡಿವೆ. ಕೆಳದಿ ರಾಜ್ಯದ ಅವನತಿ ಕಾಲದಲ್ಲಿಯೂ ರಾಜಮನೆತನದ ಹಿರಿಮೆಯನ್ನು ಗುಣಗಾನಮಾಡಿ ಆ ಆಸ್ಥಾನ ಪರಂಪರೆಗೇ ಅಂಟಿಕೊಂಡಂತೆ ವಿರಚಿಸಿದ ಕಾವ್ಯ ಸಾಹಿತ್ಯ ಕೃತಿಗಳೂ ಈಚೆಗೆ ದೊರಕುತ್ತಿವೆ. ದೇಶೀಯ ಸಂಸ್ಥಾನದಲ್ಲಿ ರಚಿಸಲ್ಪಟ್ಟ ಇಂತಹ ಕೃತಿಗಳು ಚಾರಿತ್ರಿಕ ಮೂಲ ಸಾಮಗ್ರಿಯನ್ನು ಗುರುತಿಸುವಲ್ಲಿ ಪ್ರೊ. ರೋಮಿಲಾಥಾಪರ್, ಹಾಗೂ ಡಾ|| ಎಸ್. ಆರ್. ರಾವ್‌ರವರೇ ಪ್ರಸ್ತಾಪಿಸಿದಂತೆ ಕಡೆಗಣಿಸತಕ್ಕವುಗಳಲ್ಲ. ಹಳೆಯ ತಲೆಮಾರಿನ ಮನೆತನಗಳಲ್ಲಿ ಅದೃಶ್ಯವಾಗಿದ್ದ ಇವು ವಿದ್ವತ್ ಕ್ಷೇತ್ರದಲ್ಲಿ ಅಪಾರ ಕೊಡುಗೆಗಳಾಗಿವೆ.[3] ಇವುಗಳನ್ನು ಸಮಗ್ರವಾಗಿ ಸಮೀಕ್ಷಿಸಿ, ಸಶಾಸ್ತ್ರೀಯವಾಗಿ ಪರಿಶೋಧಿಸಬೇಕಾದುದು ಅತ್ಯವಶ್ಯ. ಬಹಳಷ್ಟು ಕೃತಿಗಳು ತಾಡೆಯೋಲೆಯಲ್ಲಿಯೋ ಕಡತಗಳಲ್ಲಿಯೋ ಅದೃಶ್ಯವಾಗಿದ್ದು ಅವುಗಳನ್ನು ರಣರಂಗದೋಪಾದಿಯಲ್ಲಿ ಹೊರ ತರಬೇಕಾಗಿದೆ. ಅನೇಕ ಹಸ್ತಪ್ರತಿಗಳು ವಿದೇಶಗಳಿಗೂ ರವಾನೆಯಾಗಿದ್ದು ನಮ್ಮ ಶ್ರೀಮಂತ ಸಾಹಿತ್ಯ ಕ್ಷೇತ್ರಕ್ಕೆ ಕೊರತೆಯನ್ನು ತಂದಿವೆ. ಪ್ರೊ. ಎಂ. ವಿ. ಸೀತಾರಾಮಯ್ಯನವರೇ ಹೇಳಿದಂತೆ ವಿದೇಶಗಳಲ್ಲಿರುವ ಪ್ರತಿಯೊಂದು ಪ್ರಾಚ್ಯ ಗ್ರಂಥ ಭಂಡಾರದ ಗ್ರಂಥಸೂಚಿಯನ್ನೂ ಸಮೀಕ್ಷಿಸಿ ಕನ್ನಡ ಕಾವ್ಯ–ಸಾಹಿತ್ಯಗಳ ಪ್ರಕಟನೆಗಳನ್ನು ಕೈಗೊಳ್ಳಬೇಕಾದುದು ಸೂಕ್ತ.[4] ಈ ಮಾಲೆಯಲ್ಲಿ ಕೆಳದಿ ಆಸ್ಥಾನ ಪರಂಪರೆಯನ್ನು ಆಧರಿಸಿ ರಚಿಸಿದ ಕೆಳದಿ ಕವಿ ಲಿಂಗಣ್ಣನ ಕೃತಿಗಳು ಕನ್ನಡ ವಿದ್ವತ್ಪ್ರಪಂಚಕ್ಕೆ ವೈದಿಕ, ಜೈನ ಹಾಗೂ ವೀರಶೈವ ಪಂಥಗಳ ಸಮನ್ವಯ ಹಾಗೂ ವೈವಿಧ್ಯಸ್ತರಗಳ ಬಗೆಯಲ್ಲಿ ಕನ್ನಡ ಸಂಸ್ಕೃತಿಯನ್ನು ಸಾಧಿಸಿ ತೋರಿಸುವುದಕ್ಕೆ ತನ್ನದೇ ಆದ ಪರಂಪರೆಯನ್ನು ಗಳಿಸಿಕೊಂಡಿದೆ.

---

3. ಇಂತಹವು ಹಳೆಯತಲೆಮಾರಿನ ಮನೆತನಗಳಲ್ಲಿ ಈಗಲೂ ಉಪಲಬ್ಧವಿವೆ.

4. ಅನೇಕ ಸಂಗ್ರಹಾಲಯಗಳಲ್ಲಿ ಕನ್ನಡ ಸಾಹಿತ್ಯ ಹಸ್ತಪ್ರತಿಗಳ ಸೂಚಿಯು ದೊರಕದಿರುವುದು ದುರ್ದೈವವೇ ಸರಿ.

ಈ ವರೆಗೆ ಉಪಲಬ್ಧವಿರುವ ಲಿಂಗಣ್ಣ ಕವಿಯ ಕೃತಿಗಳು ಒಟ್ಟು ಐದು: (1) ಕೆಳದಿ ನೃಪವಿಜಯ (2) ಶಿವಪೂಜಾದರ್ಪಣ (3) [illegible] (4) ದಕ್ಷಾಧ್ವರ ವಿಜಯ (5) ಶಿವಕಲ್ಯಾಣ.

ಕೆಳದಿ ನೃಪವಿಜಯವನ್ನು ಬಿಟ್ಟರೆ ಉಳಿದ ಕೃತಿಗಳು ಅಪ್ರಕಟಿತ ಗ್ರಂಥಗಳು. ಇವುಗಳಲ್ಲದೆ ಕೆಳದಿ ನೃಪವಿಜಯದ ಪೀಠಿಕಾ ಪ್ರಕರಣದಂತೆ ಹಾಗೂ ಚಾರಿತ್ರಿಕ ದಾಖಲೆಗಳನ್ನೊಳಗೊಂಡ ಹಲವಾರು ಓಲೆಗಳೂ [illegible] ಕಟ್ಟಿನಲ್ಲಿವೆ. ಕವಿಯ ನಾಮನಿರ್ದೇಶನಗಳನ್ನು ನಿರ್ದಿಷ್ಟವಾಗಿ ಒದಗಿಸಿ ಕೆಳದಿ ನೃಪವಿಜಯದ ಹಸ್ತಪ್ರತಿಯಲ್ಲಿ ಮೂಲ ಸಾಮಗ್ರಿಗೆ ಇವುಗಳು ಸಹಾಯಕವಾಗಿವೆ.[5] ಎ. ಆರ್. ಕೃ. ರವರು ಕೆ. ನೃ. ವಿ. ಉಪೋದ್ಘಾತದಲ್ಲಿ ಶಾರ್ವರೀವಲ್ಲಭ [illegible], ನರಹರಿ ವಿಜಯ, ಮತ್ತು ಶಿವಕಲ್ಯಾಣ ಗ್ರಂಥಗಳನ್ನು ಮಾತ್ರ ಪ್ರಸ್ತಾಪಿಸಿದ್ದಾರೆ.[6] (ಬೆಂಗಳೂರಿನ ವಿಶ್ವೇಶ್ವರಪುರದಲ್ಲಿ ನಮ್ಮ ತಾತ ಕವಿ ಲಿಂಗಣ್ಣಯ್ಯನವರ ಮನೆಯಲ್ಲಿ [illegible] ಕಟ್ಟಿನಲ್ಲಿರುವ ನೋಲ್ಕೊಂಡ ಕೃತಿಗಳನ್ನು ಪರಿಶೀಲಿಸಿಲ್ಲವೆಂದು ಕಂಡುಬರುತ್ತದೆ.)

"ಕೆಳದಿ ನೃಪವಿಜಯ" ಈ ಕೃತಿಯು ಭಾರತದ ಅದರಲ್ಲೂ ದಕ್ಷಿಣ ಭಾರತದ ಚರಿತ್ರೆಯನ್ನು ರೂಪಿಸುವ ಆಕರ ಗ್ರಂಥಗಳಲ್ಲಿ ಒಂದು. ಇಂದು ಪ್ರಕಟಗೊಂಡಿರುವ ಕೃತಿಯು ಹೊರತಾಗಿ ಉಳಿದ ಹಸ್ತಪ್ರತಿಯೊಂದಿಗೆ ಇದು ತಾಳೆನೋಡಬೇಕಾಗಿರುವುದರಿಂದ ಇದರ ಪರಿಷ್ಕರಣದ ಅಗತ್ಯತೆಯಿದೆ. 18ನೆಯ ಶತಮಾನದಲ್ಲಿ ವಿರಚಿಸಲ್ಪಟ್ಟ ಈ ಐತಿಹಾಸಿಕ ಚಂಪೂಕಾವ್ಯದ ಮಹತ್ವವನ್ನು ಡಾ॥ ಸೂರ್ಯನಾಥ ಕಾಮತ್ ಹಾಗೂ ಡಾ॥ ಚಿದಾನಂದಮೂರ್ತಿಯವರೇ ಆದಿಯಾಗಿ ಭಾರತದ ವಿವಿಧ ವಿದ್ವಾಂಸರು ಮುಕ್ತವಾಗಿ ಶ್ಲಾಘಿಸಿದ್ದಾರೆ.

"ಶಿವಪೂಜಾದರ್ಪಣ" K M 246ನೇ ನಂಬರಿನ ಈ ಹಸ್ತಪ್ರತಿಯು ಕೆಳದಿ ಪ್ರಾಚ್ಯವಸ್ತು ಸಂಶೋಧನಾಲಯದಲ್ಲಿದೆ. 28-8 X 5 8 ಸೆಂಟಿಮೀಟರ್ ಪ್ರಮಾಣವಿರುವ ಈ ಕಟ್ಟು 27 ಓಲೆಗಳನ್ನು ಹೊಂದಿದೆ.

---

5. ಕೆ. ನೃ. ವಿ ; ಕ. ಸಾ. ಪ. 1977. ಉಪೋದ್ಘಾತ-ಪು. 8.

6. ಕೆ. ಸಂ. ಕ್ರ. (ಕೆಳದಿ ಪ್ರಾಚ್ಯವಸ್ತು ಸಂಶೋಧನಾಲಯದಿಂದ ಪ್ರಕಟಿತ) ನೋಡಿರಿ. ಶಿವಕಲ್ಯಾಣ ಯಕ್ಷಗಾನ ಹಸ್ತಪ್ರತಿಯನ್ನು 'ಕೆಳದಿ ಅರಸರು ಮತ್ತು ಕನ್ನಡ ಸಾಹಿತ್ಯ' ಮಹಾಪ್ರಬಂಧಕ್ಕೆ ಒದಗಿಸಿದ್ದು ಈ ಹಸ್ತಪ್ರತಿಯು ಓಲೆಗಳು ಅಲ್ಲದೆ. [illegible] ಟೀಕೆಯನ್ನೊಳಗೊಂಡ ಇದೀಗ ಕೆಳದಿ ಪ್ರಾಚ್ಯವಸ್ತು ಸಂಶೋಧನಾಲಯದಲ್ಲಿದೆ.

a. Palm leaf copy of the Manuscript is in the India Office library at London. See–Nayakas of Ikkeri–P. 7 (Madras).

["ಶ್ರೀ ಗಣಾಧಿಪತಯೆ ನಮಃ || ಶ್ರೀ ಮತ್ಕೊಲ್ಲೂರ ಮೂಕಾಂಬಿಕೆ ಅಂಮನವರ ದಿವ್ಯ ಶ್ರೀ ಚರಣಾರವಿಂದವೆ ಗತಿ || ಶಿವಪೂಜಾದರ್ಪಣಮೆಂಬ ಕರ್ನಾಟಕ ಪುಸ್ತಕ ಕಾವ್ಯಮಂ ಬರೆಯುದಕ್ಕೆ ಶುಭಮಸ್ತು ||"

ಕಂದ || ಶ್ರೀಮದ್ವಿಷ್ಣು ವಿರಿಂಚಿ ಮು
ಖಾಮರ ನರನಾಗಪೂಜಿತಾಂಘ್ರಿ ಸರೋಜಂ
ಹೈಮವತೀಶಂ ವಿಬುಧ ಲ
ಲಾಮಂ ಪೊರೆಗೆಂಮಗಿತ್ತು ವಾಂಛಿತ ಫಲಮಂ ||೧||

ಶ್ರೀಗಿರಿರಾಜಾತ್ಮಜೆನಿಗ
ಮಾಗಮ ನುತೆ ಲೋಕಮಾತೆ ಪುರಹರಸುಮನೋ
ರಾಗಾನುಕೂಲೆ ಶಂಕರಿ
ಯೀಗೆಮಗತಿ ಕೃಪೆಯಿನಧಿಕಸೌಖ್ಯೋದಯಮಂ ||೨||

ಹೀಗೆ ಶಿವಸ್ತುತಿಯಿಂದ ಆರಂಭಿಸಿ—

ನೆರೆ ರುದ್ರಭಟ್ಟ ಪಂಪಾ
ಹರಿಹರ ಸು ರಾಘವಾಂಕ ಷಡಕ್ಷರಾದಿ ಕಬಂ
ಧುರ ಕರ್ಣಾಟಕವೀಂದ್ರ
ರ್ಗೆರಗಿ ಮನೋಮುದದಿನೀ ಪ್ರಬಂಧವನುಸುರ್ವೆಂ ||೩||

ಪವಣೆನೆ ಸಂಸ್ಕೃತ ಕರ್ಣಾ
ಟ ಪಿರಿಯೋಕ್ತಿಗಳ ನಿರಿದು ಯೋಜಿಸಿಯುನಂ
ಶಿವಪೂಜಾದರ್ಪಣಮೆಂ
ಬ ವಿರಳ ಮಂತ್ರ ಕ್ರಿಯಾವಳಿಯುಂ ವಿರಚಿಸುವೆಂ[7] ||೪||

ಕವಿಯು ಗಣಪತಿ ಸರಸ್ವತಿ ಹಾಗೂ ಕನ್ನಡ-ಸಂಸ್ಕೃತ ಕವಿಗಳ ಸ್ಮರಣೆಮಾಡಿ "ತಂತ್ರ ಕ್ರಿಯಾನಳಿಯುಂ ವಿರಚಿಸುವೆಂ" ಎಂದು ಉದ್ದೇಶಿಸಿ "ಶಿವಗರ್ಪಿಸುವೆಂ" ಎನ್ನುತ್ತಾನೆ. ಕೆಳದಿ ಬಸವ ಭೂಪಾಲನನ್ನು—

ಮೆರೆವೀ ಕೃತಿಗಧಿನಾಥಂ
ಗಿರಿಜಾಧಿಪನಿದರೊಳು ಸುವರ್ಣದನೆನೆತಳ್ಳಂ
ಕರಪೂಜಾ ವಿಭವಮೆನಲ್

7. ಶಿ. ಪೂ. ದ. ಓಲೆ ಪುಟ ೧ (ಮುಂಭಾಗ)

ಧರೆಯೊಳಿದಂ ಕೇಳ್ದು, ಮೆಚ್ಚಿ, ಪೊಗರದರೊಳು....
.....ಕೃತಿಯಿಂತ್ತಾಂ
ವಿರಚಿಸಿದಂ ಸಕಲನೃಪ ಶಿರೋಮಣಿ ಕೆಳದೀ
ವರ ಬಸವೇಂದ್ರಾಶ್ರಿತ ಭೂ
ಸುರ ಕುಲಮಣಿ ನೆಂಕಪಾತ್ಮಜಂ ಲಿಂಗಬುಧಂ[8] ||೧೩||

ಈ ರೀತಿ ಸ್ಮರಿಸಿದ್ದಾನೆ. ಪೀಠಿಕಾಂತ್ಯದಲ್ಲಿ :

ನುತ ಕೆಳದಿಯ ಲಿಂಗಣ ಪಂ
ಡಿತ ನಿಂದಿಂತ್ತೆಂದು ಸಸಿನೆ ವಿರಚಿತ ಮಾದು
ನ್ನತ ಶಿವಪೂಜಾದರ್ಪಣ
ಕೃತಿಯನಿದಂ ಕೇಳ್ದು ಮೆಚ್ಚಿಪೊಗಳದರೊಳರೆ ||೬೩||

ಗದ್ಯ || ಯಿದಖಿಲ ಸುರನರೊರಗ ನಿಕರ ಮಕುಟ ತಟ ಘಟಿತ
ಮಾಣಿಕ್ಯ ಮಯೂಖಿ ಮಂಜರೀ ಪುಂಜ ಶಬಲೀ ಕೃತ ಕನತ್ಕನಕ
ಪಾದುಕಾ
ವಿರಾಜಮಾನ ಶ್ರೀ ಮತ್ಸಾಂಬ ಸದಾಶಿವ ಚರಣಾರವಿಂದ ದ್ವಂದ್ವ
ಭಕ್ತಿರಸ ಮಕರಂದ ಮತ್ತ ಮಧುಕರಾಯ ಮಾಣ ಮಾನಸ
ಭೂಸುರ ಕುಲಪ್ರದೀಪ ಹರಿತಸಗೋತ್ರೋದ್ಭವ ನೆಂಕಪಾತ್ಮಜ
ಲಿಂಗಣ ಸೂರಿ ವಿರಚಿತ ಶಿವಪೂಜಾದರ್ಪಣ ಪ್ರಬಂಧದೊಳ್
ಪೀಠಿಕಾರಚನಂ ಪ್ರಥಮಾಶ್ವಾಸಂ ಸಂಪೂರ್ಣಂ[9] ||೬೪||

ಹೀಗೆ ಉಲ್ಲೇಖಿಸಿಕೊಂಡಿದೆ. ಶಿವಪೂಜೆಯೇ ಈ ಕಾವ್ಯದ ವಸ್ತು. ಪರಶಿವನನ್ನು ಮಂಗಳ ಪಾಠಗಳಿಂದ ಆರಂಭಿಸಿ ಪವಡಿಸುವವರೆಗೆ ಭಕ್ತನ ಸೇವಾಕಾರ್ಯ ವಿವರಿಸಲ್ಪಟ್ಟಿದೆ. ದರ್ಪಣಾದಿಯೊಡನೆ ಹೂವುಗಳು, ವಾದ್ಯಪರಿಕರಗಳು, ಧೂಪ ದೀಪಗಳು, ವೈವಿಧ್ಯತೆಯ ಪಾಕರಸಗಳು, ಪತ್ರಪುಷ್ಪಗಳು, ನೃತ್ಯಭೇದಗಳು, ಮುಂತಾದ ವಿವರಣಾತ್ಮಕ ಕಥನಗಳು ಕಂದಪದ್ಯಗಳಲ್ಲಿ ಹಾಸುಹೊಕ್ಕಾಗಿ ಸಮ್ಮಿಳಿತಗೊಂಡಿವೆ. ಮಾನವ ಪ್ರೇಮ, ನೀತಿ-ನಿಷ್ಠೆ, ಶಿವಭಕ್ತಿ, ಸಮಾನಭಾವ ಇವುಗಳನ್ನು ಹೆಚ್ಚೆಂದು ತಿಳಿದು ನಡೆಯುವ ಸಮಾನ ವ್ಯಕ್ತಿಗಳ ನೂತನ ಸಮಾಜ ವ್ಯವಸ್ಥೆ. ಅದಕ್ಕೆ ಮಾದರಿಯಾಗಿ ಎತ್ತರದ ಶರಣ ಮಾರ್ಗದಲ್ಲಿರುವ ದಿವ್ಯ ಜೀವಿಗಳ ಅನುಭಾವ ಗೋಷ್ಠಿ ಮುಂತಾದ ಪ್ರಲೋಭನೆಗಳಿಂದ ಕೂಡಿದ ಈ ಕೃತಿಯು ಶಿವಶರಣರಿಗೆ

8. ಅದೇ ಶಿ. ಪೂ. ದ. ಓಲೆ ಪು. ೧ (ಹಿಂಭಾಗ)
9. ಅದೇ ,, ,, ೫ (ಮುಂಭಾಗ)

ಆಧ್ಯಾತ್ಮಿಕ ಕಾಣಿಕೆಯಾಗಿದೆ. ಕಾವ್ಯಾಂಶಕ್ಕಿಂತ ಭಕ್ತಿಪ್ರಧಾನವಾದ ಈ ಕೃತಿಯಲ್ಲಿ ಹರಿಹರನ ಪ್ರಭಾವವನ್ನೂ ಕಂಡುಕೊಳ್ಳಬಹುದಾಗಿದೆ.

"**ಪಾರ್ವತೀ ಪರಿಣಯ**" ಕೆಳದಿ ಪ್ರಾಚ್ಯವಸ್ತು ಸಂಶೋಧನಾಲಯದಲ್ಲಿ KM 247ನೇ ನಂಬರಿನ ಈ ಕೃತಿಯು 28-7 X 6 ಸೆಂಟಿಮೀಟರ್ ಪ್ರಮಾಣವಿರುವ ಚಂಪೂಕಾವ್ಯ ಅಥವಾ ವಸ್ತುಕ ಕೃತಿಯೇ "ಪಾರ್ವತೀ ಪರಿಣಯ" ಈ ಓಲೆಯ ಕಟ್ಟು 92 ಪತ್ರಗಳನ್ನೊಳಗೊಂಡಿದೆ. ಹಲವು ಓಲೆಗಳು ತ್ರುಟಿತವಾಗಿವೆ. ಆರಂಭದಲ್ಲಿ :

ವಿಭ್ರಾಜದ್ರಜತಾಚಲಪ್ರತಿನಿಭಾದ ಭ್ರಾಮ್ಯನ್ಮಾಲೊಚ್ಚಲ
ಭ್ಭಭ್ರಾಂಭಃ ಕಣಪುಂಜ ಮಂಜರಿಗಳಿಂದಾವಾರ್ತ ಜಾಲಂಗಳಿಂ
ಫ್ಭ್ರಭ್ರಾಮ್ಯತ್ಕಠಿನ ಕ್ರಮತ್ಸ್ಯತ ಮಹಾದ್ಯಂಭ ಶರವ್ರಾತದಿಂ
ದಭ್ರಾಲಂಬನಮೊಬ್ಬ ಸತ್ತುರುತರ ಶ್ರೀಗಾಗರಂ ಸಾಗರಂ[10]

ಕಂದ॥ ತರಣಿ ಮಂಡಲ ಸುಶೋಭಾಂ
ಕರಮನಿಮಿಷ ಪೂಜ್ಯಮತುಳ ವಿದ್ರುಮವಲ್ಲೀ
ಪರಿಲಸಿತಂ ಶೊಭಿಸಿತಂ
ಬರದಂತ್ತಮರೇಂದ್ರನಂತ್ತೆ ಬನದಂತ್ತೆ ಕದಲ್ ॥೨॥

ಎಂಬುದಾಗಿ ಕಾವ್ಯವು ಆರಂಭಗೊಳ್ಳುತ್ತದೆ. ಶಿವ, ಗಣೇಶ, ವಾಣಿ, ಷಣ್ಮುಖ, ನಂದೀಕೇಶ್ವರನನ್ನು ಪ್ರಾರ್ಥಿಸಿ, ಸಂಸ್ಕೃತ ಕವಿಗಳಾದ ವಾಲ್ಮೀಕಿ, ವ್ಯಾಸ, ಕಾಳಿದಾಸ, ದಂಡಿ ಮೊದಲಾದವರನ್ನೂ, ಹಾಗೆಯೇ ಚಾಮರಸ, ರಾಘವಾಂಕ, ಹಂಪೆಯ ಹರಿಹರನನ್ನೂ ಸ್ತುತಿಸಿದ್ದಾನೆ. ದ್ವಿತೀಯ ಆಶ್ವಾಸಾಂತ್ಯದಲ್ಲಿ[11] :—

ಯಿಂತ್ತತಿ ಮನೊಹರತ್ವವ
ನಾಂತ್ತಧಿ ಕೈಶ್ವರ್ಯತತಿಗೆ ನೆಲೆಯೆನಿಸಿ ಕರಂ
ಸಂತತ ಮಾಧರಣೀ ಭೃ
ತ್ಕಾಂತ ನೃಪಾಗಾರ ಮುರೆ ವಿರಾಜಿಸುತಿರ್ಕುಂ ।೧೦೦॥

ಹೀಗೆ ಸಮಾಪ್ತಿಗೊಂಡಿದೆ.

---

10. ಓಲೆಯಲ್ಲಿರುವ ಪ್ರತಿಯಂತೆಯೇ ನಿರೂಪಿಸಲಾಗಿದೆ.
11. ಪ್ರಥಮಾಶ್ವಾಸದ ಪತ್ರ ಉಪಲಬ್ಧವಿಲ್ಲ. ಓಲೆ ಪುಟ ೮, ಪಾ. ಪ. ದ್ವಿತೀಯಾಶ್ವಾಸ.

ಕೃತಿಯಲ್ಲಿ ಜಂಬೂದ್ವೀಪ, ಅಮರಾಚಲ, ಹಿಮಗಿರಿ, ಕಾಂಚನಶೈಲ, ಹಾಗೂ ಓಷಧಿ ಪ್ರಸ್ಥಪುರದ ವರ್ಣನೆಗಳು ಕಂಡುಬಂದಿವೆ. ಪಾರ್ವತಿಯು ಇಲ್ಲಿ [“ಶಿವಕಥೆಯಲ್ಲದನ್ಯಕಥೆಯುಂ ಶುಭಕೀರ್ತನೆಯಲ್ಲದನ್ಯ ಸಂಸ್ತವಗಳನ್ ಒಪ್ಪವೆತ್ತ ಶಿವಮೂರ್ತಿಯನಲ್ಲದೆ ಅನ್ಯಮೂರ್ತಿಯುಂ ಶಿವಪದಮಲ್ಲದನ್ಯಪದಮುಂ ಶಿವತತ್ವ ಮಲ್ಲದನ್ಯತತ್ವಮ ಉಮೆ ಕೇಳಲ್, ಓದಲ್ ಅಭಿವೀಕ್ಷಿಸಲ್ ಅರ್ಚಿಸಲ್ ಐದೆ ಜಾನಿಸಲ್” ಎಂಬುದಾಗಿ ಉದ್ಧರಿಸುತ್ತಾಳೆ. ಸತಿಪತಿಭಾವದಲ್ಲಿ ಉಮೆಯು ಹೇಗೆ ಪ್ರಗತಿ ಹೊಂದುತ್ತಾ ಪರಿಣತಳಾದಳೆಂಬುದು ಹಾಗೂ ಸಂಸಾರ ಸ್ನೇಹ, ವಿರಹಾವಸ್ಥೆ ಮುಂತಾದ ರಸಭಾವಗಳು ಇಲ್ಲಿ ಘನೀಭೂತವಾಗಿವೆ. 18ನೆಯ ಆಶ್ವಾಸದ 111ನೆಯ ಪತ್ರದಲ್ಲಿ :

ನಿರುಪಮವೇದವಾಹಧರ
ಣೀರಥ ಹಂಸವರೂಢ ಸೂತಕಂ ।
ಜವವರ ಕೃತ್ತಿ ಚೆಲ
ಚರಣಾನತ ಪಾಲ ಭೂರಿಲೀಲ ಭಾ ।
ಸುರ ರಜತಾದ್ರಿವಾಸ ವಿಮಲಾಂಬರ
ಕೇಶ ಮಹೇಶ ದುಷ್ಕೃತೌ ।
ತ್ಕರತಿವಿಹಾರಾಬ್ಜನೀಶ ಜಯಶಂಕರ
ಬಾಲ ಶಶಾಂಕ ಶೇಖರ ||೧೨೮||

ಕಂ|| ಯೆಂದು ನುತಿಪಮರ ನೈಭುಜಗ
ವೃಂದನಾದರಿಸಿ ತೆರಳಲಪ್ಪಲೆ ಯಿತ್ತ
ರ್ಥೇಂದು ಕಿರೀಟಂ ಪರಮಾ
ನಂದದೆ ಗಿರಿತನುಜೆ ವೆರಸುತಾನೊಳ ಪೊಕ್ಕಂ ||೧೨೯||

ಅಂತ್ಯ ಪತ್ರದಲ್ಲಿ ಈ ಭಾಗವಿದೆ. ಅಸಮಗ್ರವಾಗಿರುವ ಈ ಕೃತಿಯ ಉಳಿದ ಪತ್ರಗಳಲ್ಲಿ ಕವಿಯ ಹಾಗೂ ಕಾವ್ಯದ ಪೀಠಿಕಾಂತ್ಯ ಭಾಗಗಳು ಉಲ್ಲೇಖನಗೊಂಡಿದ್ದಿರಬಹುದೆಂದು ಊಹಿಸಲು ಅವಕಾಶವಿದೆ. ಸಧ್ಯಕ್ಕೆ ಇದು ಅಪರಿಪೂರ್ಣ ಕೃತಿಯಾಗಿದೆ.

“ದಕ್ಷಾಧ್ವರ ವಿಜಯ” : ಕೆಳದಿ ಕವಿ ಲಿಂಗಣ್ಣನ “ದಕ್ಷಾಧ್ವರ ವಿಜಯ” ಕೃತಿಯು 29·3 X 5·8 ಸೆಂಟಿ ಮೀಟರ್ ಪ್ರಮಾಣವಿರುವ ತಾಡಯೋಲೆಯಲ್ಲಿದೆ. ಈ ಖಂಡಕಾವ್ಯದಲ್ಲಿ ಐದು ಉಲ್ಲಾಸಗಳಿವೆ.

[ಶ್ರೀ ಗಣಾಧಿಪತೆಯೆ ನಮಃ ॥ ದಕ್ಷಾಧ್ವರ ವಿಜಯ ಕಾವ್ಯವ ಬರೆವುದಕ್ಕೆ ಶುಭಮಸ್ತು ॥ ನಿರ್ವಿಘ್ನಮಸ್ತು ॥

ವೃತ್ತ ॥ ಶ್ರೀ ಗೌರೀಕೃತ ಕುಂಕುಮಾಂಕಿತ ಲಸದ್ವಕ್ಷಸ್ಥಳಾ ರಾಜಿತಂ
ವಾಗೀಶಾದಿ ಸಮಸ್ತದೆವವಿನುತಂ ವಿಶ್ವೈಕ ಸಂಸೆವಿತಂ
ನಾಗಾಲಂಕೃತನಭ್ರ ಸಿಂಧು ಸುಮನೊ ಮಾಲಾ ಸಮಂಚಜ್ಜಟಾ
ಭಾಗಂ ಶಂಕರನಾದಿದೆವನೆಮಗೀಗಾನಂದ ಸಂದೋಹಮಂ ॥೧॥

ರಾಗ ನಾಟಿ ॥ತಾಳ॥
ಜಯ ಜಯ ಶ್ರೀ ಮಹಾದೆವಾ
ಜಯ ಜಯ ಶ್ರೀ ಮಹಾದೆವ ಶಂಕರಶೆಷ
ಶಯನ ನಯನಾರಾಧಿತಾಂಘ್ರಿರಾಜೀವಾ । ಜಯ ಜಯ ॥ಪಲ್ಲವ॥

ದ್ವಿತೀಯೋಲ್ಲಾಸದ ಅಂತ್ಯದಲ್ಲಿ :--

ಗದ್ಯ ॥ ಯಿದಖಿಲ ಸುರನರೊರಗ ಮಕುಟ ತಟ ಘಟಿತ ಮಾಣಿಕ್ಯಮಯೂಖ ಮಂಜರೀ ಪುಂಜ ಶಬಲೀಕೃತ ಕನತ್ಕನಕ ಪಾದುಕಾ ವಿರಾಜಮಾನ । ಶ್ರೀಮತ್ಸಾಂಬ ಸದಾಶಿವ ಚರಣಾರವಿಂದ ದ್ವಂದ್ವ ಮತ್ತ ಮಧುಕರಾಯಮಾಣ ಮಾನಸ । ಕೆಳದಿ ಬಸವರಾಜೆಂದ್ರ ಚಂದ್ರ ಕೃಪಾ ವಿಶೆಷ ಪರಿಲಬ್ಧ ನಿರಂತರಾನೆಕ ವಿಭವ । ಹರಿತಸ ಗೊತ್ರೊದ್ಭವ ಲಿಂಗಣ ಸೂರಿ ವಿರಚಿತ ಪದ ಪದ್ಯ ಗದ್ಯ ವಚನ ರಚನಾಭಿರಂಜಿತ ಶಿವಕಥಾಮೃತಸಾರ ಸಮನ್ವಿತ । ದಕ್ಷಾಧ್ವರ ವಿಜಯ ಮಹಾ ಪ್ರಬಂಧದೊಳ್ । ದಕ್ಷ ಸಂತ್ತಾನ ವಿವರಣ । ರಜತಾಚಲ ವರ್ಣನ ಶಿವಸಭಾ ವರ್ಣನ । ದಕ್ಷಯಜ್ಞ ಪ್ರಾರಂಭಕಥನಂ ದ್ವಿತೀಯೊಲ್ಲಾಸಂ ಸಂಪೂರ್ಣಂ ॥ ಶ್ರೀಮತ್ಸಾಂಬ ಸದಾ ಶಿವಾರ್ಪಣಮಸ್ತು ॥ ವಚನ.

ಕೆಳದಿ ಬಸವರಾಜನ ರಾಜಾಶ್ರಯ ಹಾಗೂ ಲಿಂಗಣಸೂರಿಯ ಗೋತ್ರವೂ ನಿರ್ದಿಷ್ಟವಾಗಿ ಉಲ್ಲೇಖನಗೊಂಡಿದೆ. ಶಿವಪೂಜಾದರ್ಪಣದಲ್ಲಿ ರಾಜಾಶ್ರಯದ ವಿವರಣೆ ಕೈಬಿಟ್ಟು ಹೋಗಿರುವುದು ಕಂಡುಬರುತ್ತದೆ. ಕವಿತಾ ಸಾಮರ್ಥ್ಯವೊಂದರಲ್ಲಿ :—

ಸುರರಿಂ ಗುಹ್ಯಕ ಯಕ್ಷರಿಂ ಗರುಡರಿಂ ಗಂಧರ್ವರಿಂ ಸನ್ಮುನೀ
ಶ್ವರರಿಂ ಪನ್ನಗರಿಂ ಮರುದ್ವಸುಗಳಿಂದಂ ಸಿದ್ಧರಿಂದಾನವಾ

ಪ್ಸರರಿಂ ಚಾರಣರಿಂದೆ ಸಾಧ್ಯಚರ್ಯದಿಂ ವಿದ್ಯಾಧರೊತ್ತುಂಗ ಕಿಂ
ನರರಿಂದಂ ಸಭೆಯೊಪ್ಪಿ ದತ್ತಣೆಯರಂ ಶ್ರೀಮನ್ಮಹಾದೇವನಾ ॥೧॥

ವಿರೇಶ ಚರಿತೆಯಲ್ಲಿಯೂ ಕಂಡುಬರುವ ದಕ್ಷಯಜ್ಞದ ಕಥೆಯಂತೆ, ಕೃತಿಯಲ್ಲಿ ದಕ್ಷ, ದಧೀಚಿ, ಶಿವ, ಪಾರ್ವತಿ, ಇವರೆಲ್ಲರ ಕ್ರೋಧಸ್ಥಾಯಿಯಾದ ರೌದ್ರರಸ ತಾನೇ ಒಂದಾಗಿ ಇಲ್ಲಿ ಒಡಮೂಡಿ ಕವಿ ಲಿಂಗಣ್ಣನ ವರ್ಣನಾ ವೈಖರಿಯಿಂದ ದೃಗ್ಗೋಚರವಾಗಿದೆ. ಕವಿಯೇ ನಿರೂಪಿಸಿದಂತೆ ಈ ಕೃತಿಯು ಆಕರ ಗ್ರಂಥ. 'ಸ್ಕಾಂದ ಪುರಾಣ' ವಾಗಿದ್ದು ಶಿವನ ಒಡ್ಡೋಲಗ, ವೀರೇಶೋತ್ಪತ್ತಿ, ದಕ್ಷ ಭಂಗ. ದಕ್ಷನ ತೀರ್ಥಯಾತ್ರಾ ದರ್ಶನ, ಮೇನಾದೇವಿಯ ತಪಸ್ಸು, ರತಿವಿಲಾಪ, ಮುಂತಾದ ಕಥನಾ ಕೌಶಲ್ಯಗಳು ಶಿವಪಾರಮ್ಯದಲ್ಲಿ ಗಭೀರತೆಯನ್ನು ನಿರ್ದೇಶಿಸಿವೆ.

"ಶಿವಕಲ್ಯಾಣ" : 23.3 x 5.2 ಸೆ.ಮೀ. ಪ್ರಮಾಣವಿರುವ ಓಲೆಯು ಮೂರು ಗರಿಗಳು ಮಾತ್ರ, ಕೆಳದಿ ಪ್ರಾಚ್ಯ ವಸ್ತು ಸಂಶೋಧನಾಲಯದಲ್ಲಿವೆ. ಹಿಂದೆಯೇ ನಿರೂಪಿಸಿದಂತೆ ಉಳಿದ ಭಾಗಗಳು, ಮಹಾಪ್ರಬಂಧಕಾರರು, ಇನ್ನೂ ಹಿಂದಿರುಗಿಸಿಲ್ಲವಾದ್ದರಿಂದ ಅದನ್ನು ಸಮೀಕ್ಷಿಸಲು ಸಾಧ್ಯವಾಗಿಲ್ಲ. ಎ. ಆರ್. ಕೃ. ರವರೇ ಪ್ರಸ್ತಾಪಿಸಿದಂತೆ ಇದೊಂದು ಪ್ರೌಢ ಯಕ್ಷಗಾನ ಕೃತಿ. ಈ ಸಂಶೋಧನಾಲಯದಲ್ಲಿರುವುದು ಕೇವಲ ಪೀಠಿಕಾ ಪ್ರಕರಣವನ್ನೊಳಗೊಂಡ ಪತ್ರವಾಗಿದೆ.

ಮೂಲ ಪಾಠ :

1. ಶ್ರೀ ಗಣಾಧಿಪತಯೇ ನಮಃ । ನಿರ್ವಿಘ್ನಮಸ್ತು । ಶಿವಕಲ್ಯಾಣ
ಯಕ್ಷಗಾನ ಕೃತಂ ಪ್ರಬಂಧಮಂ ಬರ
2. ಉದಕೆ ಶುಭಮಸ್ತು ॥ ವೃತ್ತ॥ ಶ್ರೀಮಚ್ಚಂದ್ರಕಲಾಧರಂ
ನೀಹ (ಹಾ)ರ ಶೈಲಾತ್ಮಜಾವಾ
3. ಮಾಂಗಂ ವರದಂ ವಿರಿಂಚಿವಿನುತಂ ವಿಶ್ವೈಕ ಸಂಸೇವಿತಂ
ಸೋಮಾರ್ಕಾನಲ ಲೋಚನಂ ಶು
4. ಭಕ (ರಂಕಾರು)ಣ್ಯಾ ರತ್ನಾಕರಂ ಪ್ರೇಮಂಚೆತ್ರ(ತ್ರೆ)ಮಾಗೀನೆ
ಸಂಭು ನಲಸಿಂದಾನಂದ ಸಂದೋಹ
5. ಮಂ ॥೧॥ ....

ಮೂಲ ಪಾಠ (ಅಂತ್ಯ ಭಾಗ)

8. ಕರ್ಣಾಟಕಾದಿ ಮಿಶ್ರಭಾಷೆಗಳಿಂದೊಡಗೂಡಿ । ಪದಪದ್ಯ
ವಚನಪ್ರಚಯಗಳಿಂ ।

9. (+ವಿ) ರಚನೆಯಪ್ಪಂತು । ತರವರಿದು । ಸ (ಸೇ) ರುವೆ
   ಗೂಳಿಶಿ (ಸಿ) ಶಿವಕಲ್ಯಾಣಯಕ್ಷ.

3ನೇ ಓಲೆ ಹಿಂಭಾಗ — ಪುಟ 6

1. ಗಾನ ಪ್ರಬಂಧಮೇಂದೀ ಕೃತಿಗೆ ನಾಮಾಂಕಿತಂ ಗೈದು ಸಕಲ
   ಜನ ಶ್ರಾವ್ಯ
2. ಮಪ್ಪಂತು ಸುರ್ವನದೆಂತೆಂದೆನೆ ||ಕಂ|| ಶ್ರೀ[12]

ಇತರ ಕೃತಿಗಳು :

I ಗೀತಗಳು – ವೀರಭದ್ರನ ಹಸೆಗೆ ಕರೆವ ಪದ-ರಾಗ

ರುದ್ರಕಾಯರ್ಾಸಕ್ತಸ್ವಾಂತ ಭದ್ರಕಾಳಿಯ ಪ್ರಾಣಕಾಂತ
ಭದ್ರರೂಪ ದುರಿತ ದುಃಖೋಪದ್ರವಾದಿ ರಹಿತ ದಕ್ಷ ಕುದ್ಧ
ವಜ್ರಕಾರುಣ್ಯಸಮುದ್ರ ರೌದ್ರವೀರಭದ್ರ ಹಸೆಗೆ ಚಿತ್ತೈಯಿಸು ||೧||

ಅಸಮ ಸಾಹಸಮಗಜೇಶ ಕುಮಾರಂ
ಬಿಸಜ ಭವಾಂಡಾ ವೃತ್ತಕ ಶರ್ರಿರಂ
ಅಸುರೇಂದ್ರ ಕ್ರೌಂಚ ವಿದಾರಣಧೀರಂ
ಬಸವೇಂದ್ರ ನೃಪ ವಾಂಛ್ಛಿತಾರ್ಥದಾತಾರಂ

|| ....ಶಿವಗಣ ಸಮೂಹ। ತದುಚಿತ ವಿಕೀರ್ಣ ಮಠ ಮಾನ್ಯಾದಿ ವ್ಯಾಂಬರಾಭರಣಂ ವಾಹನ ಕಂಥಾ ಕಂಬಳ ಶಿವ ಸಜ್ಜಿತಾ ಭಸ್ಮ ರುದ್ರಾಕ್ಷಮಾಲಾ ಕಲಾಪ ಪುಸ್ತಕ ಹಸ್ತ ವಸ್ತ್ರಾದಿ ಶಿವ ಲಾಂಛನೋ ಪಿತ ಸಮಸ್ತ ವಸ್ತೂತ್ಕರ। ತನ್ಮಹೋತ್ಸ ಹರಿ ಭವಾರ್ಥ ಸ್ವಬುದ್ಧಿ ಕೌಶಲ ಪರಿಕಲ್ಪಿತ ಮಹೋನ್ನಕ ಕುರುಜು। ಮೇರು ಮಹಾಮೆರು। ಗುಡಿ ತೋರಣ ಮಕರ ತೋರಣ ಸ್ವರ್ಣ ಸ್ಥಾಲಾವಳೀ ತೋರಣ ಕಲಶಾದರ್ಶಧ್ವಜ ಚಮರ ಪತಾಕೋಜ್ವಲ ರಂಭಾಸ್ತಂಭಪುಂಡ್ರೇಕ್ಷು ದಂಡಾದಿ ಮಂಗಲ ಪದಾರ್ಥ ಬಹುವಿಧ ವಿಚಿತ್ರ ತರ ರಚನಾಲಂಕೃತ ಪ್ರತಿಭವನ ವಿರಾಜ ಮಾನ ಸೊಪು ಸೂರ್ಯ ವಿಧಿತಾ ಪರಿಶೋಭಿತ ದ್ವಿತೀಯ ಕಲ್ಯಾಣ ಪುರಾಯಕೂಣ ಜಗದ್ವಿಖ್ಯಾತ ವೇಣುಪುರವರಾಧೀಶ್ವರ ಮಲ್ಲಮಾಂಬಿ

---

12. ಪ್ರದೀಪಿಕೆ– ವಿದ್ವಾನ್ ಸುರತ್ಕಲ್ ವೆಂಕಟರಾಯಾಚಾರ್ಯರ ಅಭಿನಂದನಾ ಗ್ರಂಥ 1979. ಪುಟ 127, ಹೆಚ್ಚಿನ ವಿವರಗಳನ್ನು ಚರ್ಚಿಸಲಾಗಿದೆ.

ಕೋದರ ಕ್ಷೀರಸಾರಾವಾರರಾಕಾ ಸುಧಾಕರ ಸಮಸ್ತ ಗುಣಸಾಂದ್ರ ।
ಕೆಳದಿ ಬಸವ ನೃಪಾಲ ಚಂದ್ರ ಸಕಲ ಮನೋರಥ ಪೂರಣ ಕಾರಣ
ಮಹಾ ಮಹಿಮಾತಿಶಯ ಅಭಾವ ಮಹಾ ಜಂಗಮುರೇ । ಸಲಿಯಾರ್ಸಿ
ಮಗೀ ಜಗದೊಳ್ ಮಝುರೆ ಭಳಿರೆ ಭಲರೆ ಶರಾಕು ಶರಾಕು ರೇ ।
ವಿಜಯಿಭೋ! ದಿಗ್ವಿಜಯೀ ಭವಾ ॥೧॥ ತುರಂಗ ವೃತ್ತ ॥ ಜಂಗಮ ।
ಜಯ ಜಯ ಪರವಾದಿ ವಿಹಂಗಮ ।........................ಇತ್ಯಾದಿ

III ವಾಸವ ಮುಖ್ಯ ಸು
ರಾಸುರ ನರಪಂ ನ
ಗೆ ಶ ಪೂಜಿತ ನಿತ್ಯ ಸಾಂಬಶಿವಾ ॥
ಭಾಸುರತರ ಭೊಗ
ಶ್ರೀ ಕೆಳದೀ ಪುರ
ವಾಸ ರಾಮೆಶ್ವರ ಸಾಂಬಶಿವಾ ॥೧॥

ಮೇಲ್ಕಂಡ ಈ ಭಾಗಗಳು ಕೆಳದಿ ಪ್ರಾಚ್ಯವಸ್ತು ಸಂಶೋಧನಾಲಯದ ಹಸ್ತಪ್ರತಿ ಭಂಡಾರದ ಸಂ. KM 243 B ಮತ್ತು KM 248 ರಲ್ಲಿನ ತಾಡೆಯೋಲೆಯಲ್ಲಿ ಕಂಡುಬಂದಿವೆ. ಇವುಗಳನ್ನು ಸಮೀಕ್ಷಿಸಿ ಸಶಾಸ್ತ್ರೀಯವಾಗಿ ಸಧ್ಯಯನ ನಡೆಸಿ ಪ್ರಕಟಿಸುವುದು ಅಗತ್ಯವಾಗಿದೆ. 2ನೇ ಭಾಗದಲ್ಲಿ ಕಂಡುಬರುವ "ಮಲ್ಲಮಾಂಬಿ ಕೋದರ....ಪಳದಿ ಬಸವ ನೃಪಾಲಚಂದ್ರ" ಎಂಬ ಅಂಶವು ಈತನು ಕ್ರಿ. ಶ. 1740–55ರಲ್ಲಿ ಆಳಿದನು.[13] ಅಂತೆಯೇ ಇಲ್ಲಿ ಹೇಳಿದ ಕಥಾ ಕಂಬಳ....ಭಾಗವು ಡಾ॥ ಚಿದಾನಂದಮೂರ್ತಿಯವರೇ ಪ್ರಸ್ತಾಪಿಸಿದಂತೆ ಕೆಳದಿ ನೃಪವಿಜಯದಲ್ಲಿರುವ—

ವ॥ ಇಂತು ಲಕ್ಷದ ಮೇಲೆ ತೊಂಬತ್ತಾರು ಸಾವಿರ ಜಂಗಮ ಮೂರ್ತಿಗಳ್ಗೆ ನಾನಾವಿಧ ಭಕ್ಷ್ಯ ಭೋಜ್ಯ ರಸಾಯನ ಫಲಂಗಳ್ ಮುಂತಾದ ಇಚ್ಛಾ ಪದಾರ್ಥಂಗಳಂ ನೀಡಿಸಿ ಸಂತುಷ್ಟಿವಡಿಸಿಯವರ್ಗೆ ನಾನಾವಿಧ ವಿಚಿತ್ರತರ ವಸ್ತ್ರ ಕಂಬಳಿ ಕಂಥೆ ಶಿವದಾರ ವಿಭೂತಿಯಾಧಾರ ಭಸ್ಮರುದ್ರಾಕ್ಷಿ ಆಗಮ ಶಿವಶಾಸ್ತ್ರ ಲಿಖಿತ ಪುಸ್ತಕ ಪಾವಡ ಛತ್ರ ಪಾದುಕೆ ಹಸ್ತಾಧಾರ ದಂಡ ಮುಂತಾದ ಇಚ್ಛಾ ಪದಾರ್ಥಂಗಳಂ ಕೊಡಿಸಿ ಪೇಟೆಯಲ್ಲಿ ಆರಾಧನ ಪೂರ್ವಕಂ ಮಹೋತ್ಸವ ಮೆರೆವಣಿಗೆಗಳಂ ಮಾಡಿಸಿ ಶಾಶ್ವತ ಧರ್ಮಕೀರ್ತಿಗಳಂ ಸಂಪಾದಿಸಿ ರಾಜ್ಯಂಗೆಯ್ಯುತಿರ್ದ ಬಸವ ನರೇಂದ್ರನೊಂದವಸರನೊಳ್....

—ಕೆ. ನೃ. ವಿ. XI ಆಶ್ವಾಸ

---

13. ಕೆ. ನೃ. ವಿ. ವಂಶವೃಕ್ಷ ನೋಡಿರಿ.

ಈ ಉಲ್ಲೇಖವು ಹಲವು ಐತಿಹಾಸಿಕ ಅಂಶಗಳನ್ನು ಪರೋಕ್ಷವಾಗಿ, ಪ್ರತಿಬಿಂಬಿಸುತ್ತವೆ. ಅಲ್ಲದೆ ಆಗಮ, ಶಿವ, ಶಿವಶಾಸ್ತ್ರ ಲಿಖಿತ ಪುಸ್ತಕದಲ್ಲಿ ಅಡಕವಾಗಿರುವ ಸಾಮಗ್ರಿಗಳೂ ಇದರಲ್ಲಿ ಸೇರ್ಪಯಾಗಿವೆಯೋ ಎಂಬುದೂ ಕುತೂಹಲಕರ ಅಂಶಗಳಲ್ಲಿ ಒಂದಾಗಿದೆ !

ಸೂತಭಾರತ ಒಂದು ಅಪ್ರಕಟಿತ ಷಟ್ಪದಿ ಕಾವ್ಯ

—ಡಾ॥ ಶ್ರೀಕೃಷ್ಣ ಭಟ್
ಮತ್ತು
—ಎಂ. ಜಿ. ಹೆಗ್ಡೆ ಹಲಸಿಗೆ

ಪ್ರತಿ ಪರಿಚಯ :

ಸೂತಭಾರತವು ತಾಳೆಯ ಓಲೆಯಲ್ಲಿ ಬರೆದಿದೆ. ಬರಹ ಶುದ್ಧವಾಗಿದೆ. ತಾಳೆಯೋಲೆಯ ಉದ್ದ 16 ಇಂಚು ಮತ್ತು ಅಗಲ 2 ವರೆ ಇಂಚು ಇದೆ. ಇದರಲ್ಲಿ ಒಟ್ಟು 40 ವಾಲೆಗಳಿವೆ. ಈ ಕಾವ್ಯವು ಭಾಮಿನಿ ಷಟ್ಪದಿಯಲ್ಲಿ ರಚಿತವಾಗಿದೆ. ಒಟ್ಟು 14 ಸಂಧಿಗಳಿವೆ. 610 ಪದ್ಯಗಳಿವೆಯೆಂದು ಉಕ್ತವಾಗಿದ್ದರೂ, ಒಟ್ಟು ಪದ್ಯಗಳು 468 ಮಾತ್ರ ಇವೆ. ಇವುಗಳಲ್ಲಿ ಸುಮಾರು 10 ಪದ್ಯಗಳು ಅಪೂರ್ಣವಾಗಿವೆ. ಕವಿ ಚರಿತೆ, ಕನ್ನಡ ಸಾಹಿತ್ಯ ಚರಿತ್ರೆಗಳು, ಕನ್ನಡ ಹಸ್ತ ಪ್ರತಿಗಳ ವರ್ಣನಾತ್ಮಕ ಸೂಚಿಗಳು ಮೊದಲಾದವುಗಳಲ್ಲಿ ಈ ಸೂತ ಭಾರತದ ಉಲ್ಲೇಖ ಇಲ್ಲ. ಪ್ರಾಚ್ಯ ಹಸ್ತ ಪ್ರತಿ ಭಂಡಾರಗಳಲ್ಲಿ ಇದರ ಹಸ್ತ ಪ್ರತಿಗಳೂ ಇಲ್ಲ. ಪ್ರಕೃತ ದೊರಕಿರುವುದು ಇದೊಂದೇ ಪ್ರತಿಯಾಗಿದೆ *

ಮೂಲ ಭಾರತದ ಮಹಾಪ್ರಸ್ಥಾನ ಪರ್ವ ಮತ್ತು ಸ್ವರ್ಗಾರೋಹಣದ ಕಥೆ :

ಯುಧಿಷ್ಠಿರನು ಸ್ವರ್ಗಕ್ಕೆ ಹೋಗುಲುದ್ದೇಶಿಸಿ, ಅಭಿಮನ್ಯುವಿನ ಮಗ ಪರಿಕ್ಷಿತ್ತಿಗೆ ರಾಜ್ಯದಲ್ಲಿ ಪಟ್ಟಾಭಿಷೇಕ ಮಾಡಿ ಯುಯುತ್ಸುವಿನಲ್ಲಿ ರಾಜ್ಯವನ್ನೊಪ್ಪಿಸಿ, ಕಲಿಯುಗ ಪ್ರಾಪ್ತವಾಯಿತೆಂದು ತಿಳಿದು ನಗರವಾಸಿಗಳ ಅನುಮತಿಯನ್ನು ಪಡೆದು ತನ್ನ ತಮ್ಮಂದಿರೊಡನೆಯೂ, ದ್ರೌಪದಿಯೊಡನೆಯೂ, ಒಂದು ನಾಯಿಯೊಡನೆಯೂ ಹೊರಡುತ್ತಾನೆ. ಪಾಂಡವರೂ ದ್ರೌಪದಿಯೂ ಉಪವಾಸದಿಂದಿದ್ದು ಯೋಗಿಗಳಾಗಿ ಸನ್ಯಾಸಧರ್ಮವನ್ನವಲಂಭಿಸಿ ಪೂರ್ವಾಭಿಮುಖವಾಗಿ ಹೊರಟು ನಾನಾ ದೇಶಗಳನ್ನು ದಾಟಿ ಹೋದರು. ಎಲ್ಲರಿಗೆ ಮುಂದೆ ಯುಧಿಷ್ಠಿರನೂ ಆತನ ಹಿಂದೆ ಕ್ರಮವಾಗಿ ಭೀಮ, ಅರ್ಜುನ, ನಕುಲ ಸಹದೇವ ದ್ರೌಪದಿ ಮತ್ತು ಒಂದು ನಾಯಿ. ಮುಂದೆ ಹೋದಾಗ ಅಗ್ನಿ ಎದುರಾಯಿತು. ಅದರ ಮಾತಿನಂತೆ ಅರ್ಜುನನು ತನ್ನ ಬಿಲ್ಲನ್ನೂ

ಬತ್ತಳಿಕೆಯನ್ನೂ ಸಮುದ್ರದಲ್ಲಿ ಬಿಸಾಡುವನು. ಪಾಂಡವರೂ ದ್ರೌಪದಿಯೂ ಸಾಲಾಗಿ ಹೋಗುತ್ತಿರುವಾಗ ದ್ರೌಪದಿಯಿಂದ ತೊಡಗಿ ಭೀಮನವರೆಗೆ ಎಲ್ಲರೂ ಕೆಳಗೆ ಬೀಳುತ್ತಾರೆ. ಈ ರೀತಿ ಬೀಳುವುದಕ್ಕೆ ಕಾರಣವೇನೆಂದು ಭೀಮನು ಕೇಳಿದುದಕ್ಕೆ ಯುಧಿಷ್ಠಿರನು—ಅರ್ಜುನನಲ್ಲಿ ಪಕ್ಷಪಾತವಿದ್ದುದರಿಂದ ದ್ರೌಪದಿಯೂ, ತನಗೆ ಸಮಾನರಾದ ಪಂಡಿತರೇ ಇಲ್ಲವೆಂಬ ಗರ್ವವಿದ್ದುದರಿಂದ ಸಹದೇವನೂ, ಸೌಂದರ್ಯ ದಲ್ಲಿ ತನಗೆ ಸಮಾನರಾರೂ ಇಲ್ಲವೆಂಬ ಗರ್ವವಿದ್ದುದರಿಂದ ನಕುಲನೂ, ತಾನೇ ಶೂರ ನೆಂಬ ಗರ್ವವಿದ್ದುದರಿಂದ ಅರ್ಜುನನೂ. ಅಮಿತ ಭೋಗ ಜೀವಿಯಾಗಿದ್ದು, ದೇಹ ಧಾರ್ಢ್ಯದಿಂದ ಇತರರನ್ನು ಲಕ್ಷಿಸದೆ 'ಆತ್ಮಸ್ತುತಿ ಮಾಡುತ್ತಿದ್ದುದರಿಂದ ಭೀಮನೂ ಬಿದ್ದುದೆಂದು ಹೇಳುತ್ತಾನೆ. ನಾಯಿಯೊಂದು ಮಾತ್ರ ಧರ್ಮರಾಯನನ್ನು ಹಿಂಬಾ ಲಿಸುತ್ತಿತ್ತು. ಯುಧಿಷ್ಠಿರನು ನಾಯಿಯೊಂದಿಗೆ ಸ್ವರ್ಗಕ್ಕೆ ಹೋದಾಗ ಇಂದ್ರನು ಅವನನ್ನು ರಥವೇರುವಂತೆ ಹೇಳುತ್ತಾನೆ. ಯುಧಿಷ್ಠಿರನು ತನ್ನ ಜೊತೆಯಲ್ಲಿ ಬರು ತ್ತಿದ್ದ ನಾಯಿಯನ್ನು ಬಿಡಲು ಸಮ್ಮತಿಸಲಿಲ್ಲ. ಆಗ ನಾಯಿಯ ರೂಪದಲ್ಲಿದ್ದ ಯಮಧರ್ಮರಾಯನು ಪ್ರತ್ಯಕ್ಷನಾಗಿ ಶರೀರವೊಡನೆಯೇ ಅಕ್ಷಯ ಲೋಕಗಳು ಸಿಗುವಂತೆ ಧರ್ಮರಾಯನಿಗೆ ಅನುಗ್ರಹಿಸುತ್ತಾನೆ. ಯುಧಿಷ್ಠಿರನು ಸ್ವರ್ಗದಲ್ಲಿ ತನ್ನ ತಮ್ಮಂದಿರನ್ನು ಕಾಣದೆ ಅವರಿರುವ ಸ್ಥಳಕ್ಕೆ ಹೋಗಬಯಸುತ್ತಾನೆ. ಅಲ್ಲದೆ ಸ್ವರ್ಗ ದಲ್ಲಿ ವೈಭವದಿಂದ ಮೆರೆಯುವ ದುರ್ಯೋಧನನನ್ನು ಕಂಡು ಸಹಿಸಲಾರದೆ ಆತನೊಡನೆ ವಾಸಿಸಲು ಸಮ್ಮತಿಸಲಿಲ್ಲ. ತನ್ನ ತಮ್ಮಂದಿರೊಡನೆ ಇರಬೇಕೆಂದು ನಿರ್ಬಂಧಿಸಲು ದೇವದೂತನೊಬ್ಬನು ಆ ಬಂಧುಗಳನ್ನು ತೋರಿಸಲು ಧರ್ಮರಾಜನನ್ನು ನರಕಕ್ಕೆ ಕರೆದೊಯ್ಯುತ್ತಾನೆ. ನರಕದಲ್ಲಿರುವವರ ಯಾತನೆಯನ್ನು ನೋಡಲಾರದೆ ಹಿಂತಿರುಗು ವದರಲ್ಲಿದ್ದ ಯುಧಿಷ್ಠಿರನು ತನ್ನಲ್ಲಿ ಮೊರೆಯಿಡುತ್ತಿದ್ದ ದೀನವಾಕ್ಯಗಳನ್ನು ಕೇಳಿ ಅಲ್ಲಿರುವವರು ತನ್ನವರೆಂದು ತಿಳಿದು ತಾನೂ ಅಲ್ಲಿಯೇ ಇರುವೆನೆಂದು ಹೇಳುತ್ತಾನೆ. ದೇವದೂತನು ಈ ಸಂಗತಿಯನ್ನು ಇಂದ್ರನಿಗೆ ತಿಳಿಸುತ್ತಾನೆ. ಯುಧಿಷ್ಠಿರನ ಅಭಿಪ್ರಾಯವನ್ನರಿತ ಇಂದ್ರಾದಿ ದೇವತೆಗಳು ಅಲ್ಲಿಗೆ ಬರುತ್ತಾರೆ. ಯಮನು ಯುಧಿಷ್ಠಿರನನ್ನು ಕೊಂಡಾಡಿ ಆ ನರಕಗಳು ತನ್ನ ಮಾಯೆಯಿಂದಲೇ ತಲೆದೋರಿದ ವೆಂದು ಹೇಳುತ್ತಾನೆ. ಬಳಿಕ ಅವನು ದೇವ ಶರೀರವನ್ನು ಧರಿಸಿ ದೇವರ್ಷಿಗಣ ಗಳಿಂದ ಸ್ತುತಿಸಲ್ಪಡುತ್ತ ತಮ್ಮಂದಿರಿರುವಲ್ಲಿಗೆ ಹೋಗುತ್ತಾನೆ. ಯುಧಿಷ್ಠಿರನು ಸ್ವರ್ಗದಲ್ಲಿ ಕೃಷ್ಣ, ಕರ್ಣ ಹಾಗೂ ಇತರರನ್ನು ಕಾಣುತ್ತಾನೆ. ತಮ್ಮ ತಮ್ಮ ಸ್ಥಾನ ಗಳಲ್ಲಿದ್ದ ದ್ರೌಪದಿ ಪುತ್ರರೇ ಮೊದಲಾದವರನ್ನು ಇಂದ್ರನು ಯುಧಿಷ್ಠಿರನಿಗೆ ತೋರಿಸು ತ್ತಾನೆ. ಭೀಷ್ಮನೇ ಮೊದಲಾದವರು ಸ್ವರ್ಗವನ್ನು ಅನುಭವಿಸಿದ ಮೇಲೆ ತಮ್ಮ ತಮ್ಮ ದೇವರೂಪಗಳಲ್ಲಿ ಇರುತ್ತಾರೆ. ಜನಮೇಜಯನು ಆಸ್ತಿಕನೇ ಮುಂತಾದವ

ರನ್ನು ಪೂಜಿಸಿ ಯಾಗವನ್ನು ಪೂರೈಸಿ ಹಸ್ತಿನಾಪುರಕ್ಕೆ ಹೋಗಿ ರಾಜ್ಯಭಾರ ಮಾಡುತ್ತಾನೆ.

ಸೂತಭಾರತದ ಕಥೆ ಮತ್ತು ವೈಶಿಷ್ಟ್ಯ

ಕವಿ ಕಾವ್ಯದ ಆರಂಭವನ್ನು ಗಣಪತಿ, ಹರಿಹರ, ಬ್ರಹ್ಮ, ಗಿರಿಜೆ ಮೊದಲಾದ ದೇವತೆಗಳ ಸ್ತುತಿಯೊಂದಿಗೆ ಮಾಡಿದ್ದಾನೆ. ನಂತರ ನಾರದ ವೇದವ್ಯಾಸ, ಶುಕಮುನಿ ಮುಂತಾದವರಿಗೆ ವಂದನೆ ಸಲ್ಲಿಸಿ ಕಾವ್ಯವನ್ನು ಮುಂದುವರಿಸುತ್ತಾನೆ. ಮುಂದೆ ಕಲಿ ಅವತಾರದ ದುಷ್ಪರಿಣಾಮಗಳ ವರ್ಣನೆ ದೀರ್ಘವಾಗಿ ಬಂದಿದೆ. ಕೃಷ್ಣನ ಅಳಿವಿಗಾಗಿ ಪಾಂಡವರು ಚಿಂತಿಸುವ ವಿಚಾರವೂ ದೀರ್ಘವಾಗಿದೆ. ಮೂಲಭಾರತದ ಕಥೆಯಲ್ಲಿ ಕಲಿ ಅವತಾರದ ವಿಚಾರವನ್ನು ಧರ್ಮರಾಯನಿಗೆ ತಿಳಿಸುವವನು ಸಹದೇವ. ಇಲ್ಲಿ ಬೇಹುಗಾರರು ತಿಳಿಸುತ್ತಾರೆ. ಮೂಲದ ಭಾರತದಲ್ಲಿ ಧರ್ಮರಾಯನು ಕಲಿ ಆಗಮನದ ವಿಚಾರ ತಿಳಿಯುವದಕ್ಕೆ ಮೊದಲೇ ಪರೀಕ್ಷಿತರಾಯನಿಗೆ ಪಟ್ಟಗಟ್ಟುತ್ತಾನೆ.

ಪರೀಕ್ಷಿತರಾಜನನ್ನು ಮಂತ್ರಿಗಳಿಗೊಪ್ಪಿಸಿ ಧರ್ಮರಾಯನೂ ಹೊರಡಲು ಪ್ರಜೆಗಳ ಅನುಮತಿಯನ್ನು ಪಡೆಯುವ ಸನ್ನಿವೇಶ ಸುಂದರವಾಗಿದೆ. ಪಾಂಡವರನ್ನು ಬೀಳ್ಕೊಳ್ಳಲು ಪುರಜನರೂ, ಮುನಿಜನರೂ ಪಡುವ ವ್ಯಾಕುಲ ಹೃದಯಂಗಮವಾಗಿದೆ. ರಾಜ್ಯವನ್ನುಳಿದು ಹೊರಡುವ ಸಂದರ್ಭದಲ್ಲಿ ದ್ರೌಪದಿಯನ್ನು ಹಿಂದೆ ಬಿಟ್ಟು ಹೋಗಲು ಆಕೆ ರೋದಿಸಿ ಕರೆದುಕೊಂಡು ಹೋಗಬೇಕೆಂದು ಪ್ರಾರ್ಥಿಸುತ್ತಾಳೆ. ಅವಳ ಹಾಗೂ ಪಾಂಡವರೊಳಗಿನ ಸಂಭಾಷಣೆ ಸ್ವಾರಸ್ಯಪೂರ್ಣವಾಗಿದೆ. ಕೊನೆಗೆ ದ್ರೌಪದಿಯನ್ನು ಕರೆದುಕೊಂಡು ಹೋಗುವುದಕ್ಕೆ ಸಮ್ಮತಿಸುತ್ತಾನೆ. ಸುಭದ್ರೆ ತಾನೂ ಬರುತ್ತೇನೆಂದು ಕೇಳಿಕೊಂಡರೂ ಪರೀಕ್ಷಿತನ ರಕ್ಷಣೆಗೆ ನಿಲ್ಲುವಂತೆ ಹೇಳಿ ಧರ್ಮರಾಯ ಅವಳನ್ನು ಸಮಾಧಾನಪಡಿಸುತ್ತಾನೆ.

ಬಳಿಕ ಪಾಂಡವರು ಕುಂತಿದೇವಿಯಲ್ಲಿಗೆ ಹೋಗಿ ತಾವು ರಾಜ್ಯವನ್ನುಳಿದು ಹರಿಪದ ಸೇರಲು ಹೋಗುತ್ತೇವೆಂದು ಹೇಳಲು ಆಕೆ ತಾನೂ ಬರುವುದಾಗಿ ಹೇಳಲು ಅವಳನ್ನು ಸಮಾಧಾನಪಡಿಸಿ ಹೊರಡುತ್ತಾರೆ. ತಮ್ಮನ್ನು ಹಿಂಬಾಲಿಸಿದ ಪುರಜನರನ್ನು ಸಂತೈಸಿ ಹಿಂದೆ ಕಳಿಸುತ್ತಾರೆ. ಆಗ ಧರ್ಮರಾಯ ಪರೀಕ್ಷಿತನಿಗೆ ಸಕಲ ರೀತಿಯ ನೀತಿಯನ್ನುಪದೇಶ ಮಾಡುತ್ತಾನೆ. ಇದು ಸಾಕಷ್ಟು ವಿವರವಾಗಿ ಬಂದಿದೆ. ಈ ನೀತಿ ಭೋಧೆ ಸೂತಭಾರತದ ವೈಶಿಷ್ಟ್ಯವಾಗಿದೆ. ಪರೀಕ್ಷಿತನನ್ನು ಸಂತೈಸಿ ಬೀಳ್ಕೊಟ್ಟು ಉತ್ತರಾಭಿಮುಖವಾಗಿ ಸಾಗುತ್ತಾರೆ.

ಪರೀಕ್ಷಿತನು ದುಃಖದಿಂದ ಅರಮನೆಗೆ ಹೋಗುತ್ತಾನೆ. ಪಾಂಡವರನ್ನು ಅಗಲಿದ ಪರೀಕ್ಷಿತನ ದುಗುಡವನ್ನು ಕವಿ ಸುಂದರವಾಗಿ ಚಿತ್ರಿಸಿದ್ದಾನೆ. ಈ ಭಾಗ ಮೂಲ

ಭಾರತದಿಂದ ವಿಸ್ತಾರವಾಗಿದೆ. ಅಂತಃಪುರದ ಸ್ತ್ರೀಯರು ಗೋಳಿಡುವ ದೃಶ್ಯ ಕರುಣಾ ರಸಪೂರ್ಣವಾಗಿದೆ-

ಆರ ನೊಂಪಿಯ ಕೆಡಿಸಿದೆವೋ ಮೇ
ಣಾರ ವಾಲೆಯ ಸೆಳೆದೆವೋ ಮೇ
ಣಾರ ಗಂಡರನಗಲಿಸಿದೆವೋ ಪೂರ್ವಕಾಲದಲಿ
ಆರಿಸಿರಿಯನು ಹಳಿದೆವೋ ಮತ್ತಾರ
ಭೋಜನವಳಿದು ಕೊಂಡೆವೊ
ವೀರ ಪಾಂಡವರೆಮ್ಮನಗಲಿದರೆಂದು ಮರುಗಿದರೂ.

ವೇದವ್ಯಾಸಮುನಿ ಬಂದು ಪರೀಕ್ಷಿತನನ್ನು ಸಂತೈಸಿ ಪಾಂಡವರ ಪೂರ್ವ ಕಥೆಯನ್ನು ಹೇಳುತ್ತಾನೆ. "ಹಿಂದೆ ಪಾಂಡವರೈದು ಜನವೂ ಇಂದ್ರರಾಗಿದ್ದರು. ಗರ್ವದಿಂದ ಅವರು ಕೈಲಾಸವನ್ನು ವಶಪಡಿಸದೇಕೆಂದು ಯೋಚಿಸುತ್ತಿದ್ದುದನ್ನು ತಿಳಿದ ಶಿವನು ಅವರಿಗೆ ಭೂಲೋಕದಲ್ಲಿ ನೃಪಸಂಭೂತರಾಗಿ ಜನಿಸುವಂತೆಯೂ ಐವರಿಗೂ ಒಬ್ಬಳೇ ಸತಿಯಾಗುವಳೆಂದೂ ಆಜ್ಞಾಪಿಸುತ್ತಾನೆ. ಆ ರೀತಿ ಅವರು ಪಾಂಡುವಿಗೆ ಮಕ್ಕಳಾಗಿ ಜನಿಸಿದರು. ಕೃಷ್ಣ ರೋಗಿತನೆಂಬ ಮುನಿಯನ್ನು ದ್ರೌಪದಿ ಭಜಿಸುತ್ತಿದ್ದಾಗ ಅವಳ ಮನಸ್ಸನ್ನು ಪರೀಕ್ಷಿಸುತ್ತಾನೆ. ಮುನಿ ಆಕೆಯ ಗುಣಕ್ಕೆ ಮೆಚ್ಚಿ ಬೇಕಾದ ವರ ಕೇಳೆನ್ನಲು ದ್ರೌಪದಿ ದಿವ್ಯರೂಪದಿಂದ ತನಗೆ ಕಾಮಕ್ರೀಡೆಯನ್ನು ಮಾಡೆಂದು ಹೇಳುತ್ತಾಳೆ. ಅಂತೆಯೇ ಆಕೆಯನ್ನು ಕೂಡಿ ಹಿಂದೆ ಹೋಗುವಾಗ ಆಕೆ ತಡೆಯಲು ಮುನಿ ರಾಜಕುಮಾರಿಯಾಗಿ ಹುಟ್ಟುವಂತೆ ಶಾಪವೀಯುತ್ತಾನೆ. ನೊಂದ ಆಕೆ ಶಿವನನ್ನು ಭಜಿಸುತ್ತಾಳೆ. ಅವಳ ತಪಸ್ಸಿಗೆ ಮೆಚ್ಚಿದ ಶಿವನಲ್ಲಿ ಅವಳು ಐದು ಜನ ಗಂಡಂದಿರನ್ನು ಕೇಳುತ್ತಾಳೆ. ಈ ಕಾರಣದಿಂದ ಪಾಂಡವರಿಗಾಗಿ ಇಂದ್ರಕ್ಕವರು ಜನಿಸಿದರು. ಇವರೆಲ್ಲರೂ ಮತ್ತೆ ದೇವತೆಗಳೇ ಆಗುತ್ತಾರೆ" ಆದುದರಿಂದ ಬೇಸರಿಸಬೇಡವೆಂದು ಮುನಿ ಪರೀಕ್ಷಿತನನ್ನು ಸಮಾಧಾನಗೊಳಿತ್ತಾನೆ. ಸುಭದ್ರೆ ಹಿಡಂಬ, ಗಂಧಿ, ಸುಗಂಧಿ ಮೊದಲಾದವರನ್ನು ಸಂತೈಸಿ ವೇದವ್ಯಾಸ ಮುನಿ ತೆರಳುತ್ತಾನೆ. ವೇದವ್ಯಾಸರ ಮಾತಿನಂತೆ ದೌಮ್ಯಮುನಿ ಪರೀಕ್ಷಿತನಲ್ಲಿಗೆ ಬಂದು ನೀತಿ ಬೋಧಿಸುತ್ತಾನೆ. ಅದರಿಂದ ಚಿಂತೆಯನ್ನುಳಿದು ಪರೀಕ್ಷಿತನು ಸಂತೋಷಗೊಂಡು ವೈಭವದಿಂದ ರಾಜ್ಯವಾಳುತ್ತಾನೆ. ಇದೂ ಕೂಡ ಸೂತಭಾರತದ ವೈಶಿಷ್ಟ್ಯವಾಗಿದೆ.

ಮುಂದೆ ಹಿಮಗಿರಿಯ ಕಡೆ ಸಾಗುತ್ತಿದ್ದ ಪಾಂಡವರಿಗಾದ ವಿಪತ್ತಿನ ವರ್ಣನೆ. ವರ್ಣನೆ. ಕಾಡಿನ ಮಧ್ಯೆ ಹೋಗುತ್ತಿದ್ದಾಗ ಅವರು ಬೇಡರ ಪಡೆಯಲ್ಲಿ ಸಿಕ್ಕಿ ಬೀಳ

ತ್ತಾರೆ. ಬೇಡರು ಪಾಂಚಾಲೆಯನ್ನು ಅವಮಾನಪಡಿಸಲೆತ್ನಿಸಿದಾಗ ಅವಳು ಪತಿಗಳಲ್ಲಿ ಮೊರೆಯಿಡುತ್ತಾಳೆ. ಅವಳ ಮೊರೆಗೆ ಪಾಂಡವರು ಓಗೊಡದಿರಲು ಅವಳು ಹರಿ-ಹರರನ್ನು ಧ್ಯಾನಿಸುತ್ತಾಳೆ. ನಾನಾ ಪರಿಯಾಗಿ ಪ್ರಾರ್ಥಿಸುತ್ತಾಳೆ. ಇದರ ಚಿತ್ರಣ ತುಂಬಾ ದೀರ್ಘವಾಗಿದೆ. ಅವಳ ಮೊರೆಯನ್ನು ಕೇಳಿದ ಕೃಷ್ಣನು ಅವಳನ್ನು ಕಾಪಾಡಬೇಕೆಂದು ಯೋಚಿಸಿದ. ಅವನ ಮಹಿಮೆಯಿಂದಾಗಿ ಬೇಡರು ದ್ರೌಪದಿಯನ್ನು ತಮ್ಮೊಡೆಯ ವೃಷಸೇನನಲ್ಲಿಗೆ ಕರೆದೊಯ್ಯಲು ಅವನು ಆಕೆ ಲೋಕಪಾವನೆ, ಮಹಾಸತಿ ಎಂದು ಕೊಂಡಾಡಿ ಅವಳನ್ನು ಬಿಟ್ಟುಬಿಡಲು ಹೇಳುತ್ತಾನೆ. ದ್ರೌಪದಿಯ ಬಿಡುಗಡೆ ಆಗುತ್ತದೆ. ಈ ಕಥಾಂಶವು ಸೂತಭಾರತದಲ್ಲಿರುವ ವಿಶೇಷ ಅಂಶವಾಗಿದೆ.

ಪಾಂಡವರು ಕಾಡಿನಲಿ ಹೋಗುತ್ತಿದ್ದಾಗ ಕವಿ ಅಲ್ಲಿ ಅವರು ಕಂಡ ನಿಸರ್ಗದ ವರ್ಣನೆ ಮಾಡುತ್ತಾನೆ. ಮುಂದೆ ಅವರಿಗೆ ಕಾಡ್ಗಿಚ್ಚು ಎದುರಾಯಿತು. ದೇವರನ್ನು ನೆನೆಯುತ್ತ ದ್ರೌಪದಿ ಬೆಂಕಿಗೆ ಹಾರಲು ಅವಳ ಪಾತಿವ್ರತ್ಯ ಮಹಿಮೆಯಿಂದ ಬೆಂಕಿ ದೂರಾಯಿತು. ಮುಂದೆ ಸಾಗಿದಾಗ ಒಬ್ಬ ದಾನವ ಎದುರಾಗುತ್ತಾನೆ. ಭೀಮನು ಅವನೊಂದಿಗೆ ಹೋರಾಡಿ ಸೋಲಿಸುತ್ತಾನೆ. ಮುಂದೆ ಅವರು ಪದ್ಮ ಪರ್ವತವನ್ನು ಏರುತ್ತಾರೆ. ನಂತರ ನಿಗುನ ವಿಜೇಯ ಪರ್ವತವನ್ನು ಏರುತ್ತಾರೆ. ಕುಡಿಯಲು ನೀರೂ ಕೂಡ ಸಿಗದೆ ತೊಳಲಿದರು, ಬಳಲಿದರು. ಪಾಂಡವರೆಲ್ಲರೂ ಬಸವಳಿದು ನಡೆಯಲಸಮರ್ಥರಾದರು. ಶ್ರೀ ಹರಿಯನ್ನು ನೆನೆಯುತ್ತಾ ಹೇಗೋ ಮುಂದೆ ಸಾಗಿದರು.

ಎಂಟನೆಯ ಸಂಧಿಯ ಮೊದಲಲ್ಲಿ ಹಿಮದ ವರ್ಣನೆ ಇದೆ. ಹಿಮದಲ್ಲಿ ನಡೆಯಲಾಗದೆ ದ್ರೌಪದಿ ಬಿದ್ದು ಸಾಯುತ್ತಾಳೆ. ಅವಳನ್ನು ನೋಡಿ ಪಾಂಡವರು ಮರುಗಿದರು, ವಿಧಿಯನ್ನು ಬೈದರು. ದ್ರೌಪದಿಯಿಂದಾಗಿಯೇ ತಮಗೆ ಅನೇಕ ವಿಪತ್ತು ಬಂತೆಂದೂ ಅವಳು ಸದಾ ಕರ್ಣನ ಧ್ಯಾನದಲ್ಲಿ ಇರುತ್ತಿದ್ದಳೆಂದೂ ಅವಳಿಗೆ ಸ್ವರ್ಗ ಸಿಗಲಾರದೆಂದೂ ಧರ್ಮರಾಯ ತಿಳಿಸಲು ಅವಳನ್ನುಳಿದು ಪಾಂಡವರು ಮುಂದೆ ಸಾಗುವರು. ನಂತರ ನಕುಲ ಬೀಳುತ್ತಾನೆ. ಬಳಿಕ ಸಹದೇವನು ಧರೆಗೊರಗಿದಾಗ ಉಳಿದವರು ಮರುಗುತ್ತಾರೆ. ಆಗ ಧರ್ಮರಾಯನು ಬಂಧುಗಳ ವಧೆ ಮಹಾಪಾತಕವೆಂಬು ತಿಳಿದಿದ್ದರೂ ನಮಗೆ ತಿಳಿಸದ ಪಾತಕಿ ಸಹದೇವ ಎಂದು ನುಡಿಯಲು ಭೀಮ ಪಾರ್ಥರು ಅವನನ್ನುಳಿದು ಧರ್ಮರಾಯನ ಹಿಂದೆಯೇ ಹೋಗುವರು. ಮುಂದೆ ಪಾರ್ಥ ಬೀಳುತ್ತಾನೆ. ಭೀಮ ಮರುಗುತ್ತಾನೆ. ಆಗ ಧರ್ಮರಾಯನು—ಇವನು ಬಂಧುವಧೆ ಗುರುಗೋತ್ರವಧೆ ಮಾಡಿದ ಪಾತಕಿ ಇವನಿಗೆ ಪರಲೋಕ ಇಲ್ಲವೆನ್ನಲು

ಭೀಮ ಅವನನ್ನು ಬಿಟ್ಟು ಮುಂದೆ ಹೋಗುತ್ತಾನೆ. ಮುಂದೆ ಭೀಮ ಬೀಳುತ್ತಾನೆ. ಅವನಿಗೆ ಧರ್ಮಜನೇ ಮರುಗುತ್ತಾನೆ.

ಮಡಿದ ಭೀಮನ ಗುಣವನ್ನು, ಶೂರತನವನ್ನೂ, ಕೊಂಡಾಡುತ್ತಾನೆ. ದ್ರೌಪದಿ ಮತ್ತು ತಮ್ಮಂದಿರು ಪಟ್ಟ ಕಷ್ಟಗಳನ್ನು ಅವರ ಉತ್ತಮಗುಣಗಳನ್ನೂ ಕೇಳಿ ಕೃಷ್ಣನು ಮಾಯಾವೇಷದಿಂದ ಬಂದು ಅಶರೀರವಾಣಿಯಲ್ಲಿ ನೀತಿಧರ್ಮವನ್ನು ಹೇಳಿ ಎಚ್ಚರಿಸುತ್ತಾನೆ. ಧರ್ಮರಾಯನು ಭೀಮನ ಹೆಣವನ್ನು ಹೊತ್ತುಕೊಂಡು ಹೋಗುತ್ತಿದ್ದಾಗ ಕೃಷ್ಣನು ವೃದ್ಧ ವಿಪ್ರನವೇಷದಲ್ಲಿ ಬಂದು ಬಿದ್ದಿದ್ದ ಅರಳೀ ಮರಕ್ಕೆ ತೂತಿರುವ ಮಡಿಕೆಯಲ್ಲಿ ನೀರು ತಂದೆರೆಯುತ್ತಾನೆ. 'ಹಳೆಯ ಮರ ಮತ್ತೆ ಚಿಗುರಿದಂತಾಗುವುದೇ' ಎಂದು ಕೇಳಿದ್ದಕ್ಕೆ ಆತನು ನೀನು ಹೊತ್ತಿರುವ ಹೆಣಕ್ಕೆ ಪುನಃ ಜೀವ ಬರುವದೇ ಇದರಿಂದ ನಿನಗೆ ನರಕ ಪ್ರಾಪ್ತಿ ಎನ್ನಲು ಹೆಣವನ್ನು ಬಿಸಾಡುವುದಾಗಿ ಹೇಳಲು ಆ ವಿಪ್ರನು ಅನುಗ್ರಹಿಸುತ್ತಾನೆ. ಮುಂದೆ ಬಂದಾಗ ಯಮನು ನಾಯಿಯ ವೇಷದಲ್ಲಿ ಅವನನ್ನು ಹಿಂಬಾಲಿಸುತ್ತಾನೆ. ಮುಂದೆ ವೈತರಣಿಯನ್ನು ಕಂಡು ದಾಟುವುದು ಹೇಗೆಂದು ಚಿಂತಿಸಲು ಹರಿಯು ಪುಷ್ಪಕವನ್ನು ಕಳುಹಿಸುತ್ತಾನೆ. ಈ ಅಂಶಗಳೆಲ್ಲವೂ ಮೂಲ ಭಾರತಕ್ಕಿಂತ ಭಿನ್ನವಾಗಿವೆ.

ಮಾತಳಿ ಪುಷ್ಪಕವನ್ನು ಧರೆಗೆ ತಂದು ಧರ್ಮರಾಯನನ್ನು ಸ್ವರ್ಗಕ್ಕೆ ಕರೆದುಕೊಂಡು ಹೋಗುತ್ತಾನೆ. ಅಲ್ಲಿ ದೇವೇಂದ್ರನು ಇದಿರ್ಗೊಂಡು ಉಪಚರಿಸುತ್ತಾನೆ. ದೇವೇಂದ್ರನ ಮಾತಿನಂತೆ ವೈತರಣಿಗಿಳಿಯಲು ಧರ್ಮರಾಯನ ಚರ್ಮಕಳೆದುಹೋಗುತ್ತದೆ. ದ್ರೋಣನಲ್ಲ ಅಶ್ವತ್ಥಾಮನ ಗಜ ಬಿದ್ದುದೆಂದು ಹೇಳಿದುದರಿಂದ ಧರ್ಮರಾಯನ ನೈಜ ಸತ್ವಕ್ಕೆ ಕುಂದು ಬಂತು. ಅವನ ಚರ್ಮಹೋಯಿತು ದೇವೇಂದ್ರನು ದಿವ್ಯ ತನುವನ್ನು ಕರುಣಿಸುತ್ತಾನೆ. ಇಂದ್ರನು ಧರ್ಮರಾಯನನ್ನು ರಥವನ್ನೇರಲು ಹೇಳುತ್ತಾನೆ. ಆದರೆ ಅವನು ನಾಯಿಯನ್ನು ಬಿಟ್ಟು ರಥವನ್ನೇರಲು ಸಿದ್ಧನಿರುವುದಿಲ್ಲ. ಆಗ ನಾಯಿರೂಪದ ಯಮನು ಪ್ರತ್ಯಕ್ಷನಾಗಿ ಅನುಗ್ರಹಿಸುತ್ತಾನೆ. ಆಗ ಇಂದ್ರನೊಂದಿಗೆ ಪುಷ್ಪಕವನ್ನೇರುತ್ತಾನೆ. ಇಂದ್ರನು ಧರ್ಮರಾಯನಿಗೆ ಸಕಲ ಲೋಕವನ್ನು ತೋರಿಸುತ್ತಾನೆ. ಅಲ್ಲಿನ ಸ್ವರ್ಗಸ್ಥರಾದ ಜನರನ್ನೆಲ್ಲಾ ತೋರಿಸುತ್ತಾನೆ. ಮುಂದೆ ನರಕದಲ್ಲಿ ತೊಳಲಾಡುವ ಜೀವಿಗಳನ್ನು ಕಾಣಿಸಿ ಅವರ ಗುಣಗಳನ್ನು ತಿಳಿಸುವನು. ನರಕದಲ್ಲಿ ಕೌರವನನ್ನು ಕಂಡು ಧರ್ಮರಾಯ ಮಾತನಾಡುತ್ತಾನೆ. ತಮ್ಮಂದಿರೊಡಗೂಡಿ ತನ್ನೊಂದಿಗೆ ಸ್ವರ್ಗಕ್ಕೆ ಬಾ ಎಂದು ಕರೆಯುತ್ತಾನೆ. ಆದರೆ ಕೌರವ ತಿರಸ್ಕರಿಸುತ್ತಾನೆ. ಆಗ ಇಂದ್ರನು ಸುಕೃತವನ್ನು ಮಾಡಿದ ನಿನಗೆ ಮಾತ್ರ ಸ್ವರ್ಗದಲ್ಲಿ ಸ್ಥಾನವಿದೆಯೆಂದು ಹೇಳಿ ಧರ್ಮರಾಯನನ್ನು ಕರೆದುಕೊಂಡೊಯ್ಯುತ್ತಾನೆ. ನಂತರ ಹರಿಯು ಧರ್ಮಜನಿಗೆ ನಿಜರೂಪವನ್ನು ತೋರಿಸುವನು. ಕೃಷ್ಣನನ್ನು ನೋಡಿ

ಧರ್ಮಜನು ನಾನಾ ವಿಧವಾಗಿ ಸ್ತುತಿಸುತ್ತಾನೆ. ಹತ್ತವತಾರಗಳ ಮಹಿಮೆಯನ್ನು ಕೊಂಡಾಡುವನು. ಕುಮಾರವ್ಯಾಸನಂತೆ ಕೃಷ್ಣನ ಭಕ್ತಿಯಲ್ಲಿ ತಾನೇನೂ ಕಡಿಮೆ ಇಲ್ಲವೆಂಬುದನ್ನು ಕವಿ ಮೂರ್ನಾಲ್ಕು ಪದ್ಯಗಳಲ್ಲಿ ತೋರಿಸಿಕೊಟ್ಟಿದ್ದಾನೆ. ಕೃಷ್ಣನು ಧರ್ಮರಾಯನನ್ನು ಸಂತೈಸಿ ನಿಜಪದವಿಯನ್ನೀಯುತ್ತಾನೆ. ನಕುಲ, ಸಹದೇವ, ಭೀಮಾರ್ಜುನ ದ್ರೌಪದಿಯರನ್ನು ಸ್ವರ್ಗದಲ್ಲಿ ತೋರಿಸುತ್ತಾನೆ. ಅವರೆಲ್ಲರಿಗೂ ಹರಿಯು ದಿವ್ಯ ದೇಹವನ್ನೀಯುತ್ತಾನೆ. ಅವರೆಲ್ಲ ಜಡದೇಹವನ್ನು ತೊರೆದು ಅಮೃತ ಶರೀರಿಗಳಾಗುತ್ತಾರೆ.

ಹರಿಯು ಪಾಂಡವರೊಂದಿಗೆ ಕೈಲಾಸವನ್ನು ಸೇರುತ್ತಾನೆ. ಶಿವನನ್ನು ಕಾಣುತ್ತಾನೆ. ಇಲ್ಲಿ ಕವಿ ಹರಿ-ಹರರಲ್ಲಿ ಭೇದವಿಲ್ಲವೆಂಬಂತೆ ಚಿತ್ರಿಸಿರುವನು, ಅಲ್ಲದೆ ಶಿವನೋಲಗದ ವರ್ಣನೆಯನ್ನು ಸುಂದರವಾಗಿ ಮಾಡಿರುವನು. ಅಲ್ಲಿ ಯಾರು ಯಾರು ಸೇರಿದ್ದಾರೆಂಬುದನ್ನು ವಿಸ್ತಾರವಾಗಿ ವರ್ಣಿಸಿದ್ದಾನೆ. ಹರಿಯು ಶಿವನಲ್ಲಿ ಪಾಂಡವರಿಗೆ ಸಾಯುಜ್ಯವನ್ನು ಕರುಣಿಸಬೇಕೆಂದು ಕೇಳಿಕೊಳ್ಳುತ್ತಾನೆ. ಪಾಂಡವರು ಶಿವನಿಗೆ ವಂದಿಸಿ ಅವನ ಸ್ತೋತ್ರಮಾಡುತ್ತಾರೆ. ನೀವು ಅಮರರಾಗಿ ಎಂದು ಶಿವನು ಹರಸುತ್ತಾನೆ. ಪಾಂಡವರಿಗೆ ಬೇಕಾದ ವರವನ್ನು ನೀಡುವೆನೆನ್ನಲು ಅರ್ಜುನ ಸುಖವನ್ನು ಬಯಸುತ್ತಾನೆ. ಅವನಿಗೆ ನೀನು ಭೋಜನಾಗೆಂದು ವರವೀಯುತ್ತಾನೆ. ಧರ್ಮರಾಯನು ನರಕದಲ್ಲಿರುವ ಕೌರವರಿಗೆ ಕರುಣೆ ತೋರಿಸಬೇಕೆಂದು ಕೇಳುವನು. ಶಿವನು ಅವರನ್ನು ಕರೆಸಿ ಮೂರು ದಿನ ಅವರ ಲೋಕದಲ್ಲಿರಲು ಆಜ್ಞಾಪಿಸುತ್ತಾನೆ. ಬಳಿಕ ಕರ್ಣನನ್ನೂ ಆಸ್ಥಾನಕ್ಕೆ ಕರೆಸುವನು. ಕರ್ಣನು ಶಿವನ ಗುಣಗಾನಮಾಡುತ್ತಾನೆ. ಕರ್ಣನ ಅಪೇಕ್ಷೆಯಂತೆ ಅನ್ನದಾನ ಮಾಡುವ ಸಲುವಾಗಿ ಲೋಭಿಯಾದ ಸೆಟ್ಟಿಯ ಮಗನಾಗೆಂದು ವರವೀಯುತ್ತಾನೆ. ಉಳಿದ ಪಾಂಡವರಿಗೂ ಉಚಿತ ಪದವಿಗಳನ್ನು ಕರುಣಿಸುವನು. ಎಲ್ಲರಿಗೂ ಅಪೂರ್ವವಾದ ಸಾಯುಜ್ಯ ಪದವಿ ದೊರೆಯುತ್ತದೆ.

ಕೃಷ್ಣನು ಅಭಿಮನ್ಯುವಿಗೆ ಸಾಯುಜ್ಯ ಪದವಿಯನ್ನು ಶಿವನ ಮೂಲಕ ಕೊಡಿಸುವನು. ತನ್ನ ಮಗಳಾದ ಉತ್ತರೆಯನ್ನು ಕೃಷ್ಣನು ಅಭಿಮನ್ಯುವಿಗೆ ತೋರಿಸುತ್ತಾನೆ. ಉತ್ತರೆ ಹಾಗೂ ಅಭಿಮನ್ಯು ಇಬ್ಬರ ನೋಟಗಳ ಮಿಲನದಿಂದ ಉತ್ತರೆ ದೃಷ್ಟಿ ಗರ್ಭಧರಿಸುತ್ತಾಳೆ. ಆಕೆಯ ಮಕ್ಕಳು ತನಗೆ ವಿರೋಧಿಗಳೆಂದು ತಿಳಿದು ಒಂದು ಉಪಾಯ ಹೂಡಿ, ಕೊಳದಲ್ಲಿ ಮುಳುಗಿ ದೇವರಿಗೆ ವಂದಿಸಿ ಬಾ ಎಂಬುದಾಗಿ ಹೇಳಲು ಆಕೆ ಅಂತೆಯೇ ಕೊಳದಲ್ಲಿ ಮುಳುಗುತ್ತಾಳೆ. ಆಗ ಅವಳ ಗರ್ಭಸ್ರಾವವಾಗುತ್ತದೆ. ಅವಳು ಹಿಂದೆ ಹೋಗಲು ಅವಳ ಗರ್ಭದಿಂದ ಹುಟ್ಟಿದ ಮಕ್ಕಳು ಕೃಷ್ಣನನ್ನು ಸಂಧಿಸುತ್ತಾರೆ. ಅವರಾರೆಂದು ತಿಳಿದ ಕೃಷ್ಣನು ಅವರಿಗೆ ಬುಕ್ಕಯ

ರಾಗಿ ಜನಿಸುವಂತೆ ವರಕೊಡುತ್ತಾನೆ. ಈ ಮೇಲಿನ ಅಂಶಗಳು ಮೂಲ ಭಾರತದಲ್ಲಿಲ್ಲ, ಸೂತಭಾರತದ ಈ ಸಂಧಿಯ ಕೊನೆಯಲ್ಲಿ ಕವಿ ಈ ಭಾರತವನ್ನೋದಿದವರಿಗುಂಟಾಗುವ ಪ್ರಯೋಜನವನ್ನು ಹೇಳುವನು.

ಸೂತಭಾರತದ ಕೊನೆಯ ಸಂಧಿ ತುಂಬಾ ವೈಶಿಷ್ಟ್ಯಪೂರ್ಣವಾಗಿದೆ. ಕವಿ 18 ಪದ್ಯಗಳಲ್ಲಿ 18 ಪರ್ವಗಳ ಪರಿಚಯ ಹೇಳಿದ್ದಾನೆ.

ಕಾವ್ಯ ವಿಚಾರ : ಕವಿಯು ಕಾವ್ಯದ ಆರಂಭದಲ್ಲಿ ಸ್ವರ್ಗಾರೋಹಣ ಬರೆಯುವುದಕ್ಕೆ ಎಂದು ಹೇಳಿಕೊಂಡರೂ ಕಾವ್ಯದ ಕೊನೆಯಲ್ಲಿ "ಸೂತಭಾರತ ಸಮಾಪ್ತ" ಎಂದು ಹೇಳಿದ್ದಾನೆ. ಇದರಲ್ಲಿ ಬರುವ ಕಥಾಂಶವು ಮೂಲ ಭಾರತದ 'ಮಹಾಪ್ರಸ್ಥಾನ ಪರ್ವ' ಹಾಗೂ ಸ್ವರ್ಗಾರೋಹಣ ಪರ್ವದಲ್ಲಿರುವುದೇ ಆಗಿದೆ. ಆದರೂ ಕವಿ ಸಾಕಷ್ಟು ಬದಲಾವಣೆ ಮಾಡಿಕೊಂಡು ತನ್ನ ಸ್ವಂತಿಕೆಯನ್ನು ತೋರಿದ್ದಾನೆ. ಭಾಷೆ ಸರಳವಾಗಿದ್ದು ಹೆಚ್ಚು ಕಷ್ಟವಾಗಿಲ್ಲ ಸಂಸ್ಕೃತ ಹಾಗೂ ಕನ್ನಡಗಳ ಹಿತಮಿತ ಬಳಕೆಯನ್ನು ಕಾಣಬಹುದು. ಕಾವ್ಯದಲ್ಲಿ ಅನೇಕ ಗಾದೆಗಳನ್ನು ಸಂದರ್ಭಾನುಸಾರ ಬಳಸಿಕೊಂಡಿದ್ದಾನೆ.

1. 'ಕರು ತಾಯ ಮೊಲೆಯನು ಅರಸುವಾ ವೋಲು'
2. 'ನಾರಿಯರ ಸಂಸಾರವು ಕಷ್ಟವು'
3. 'ಸತ್ಯದ ಬಲುಹು ತಾಯಾಗಿಹುದು'
4. 'ರಾಹುತುಡುಕಿದ ಚಂದ್ರಮಂಡಲ ಗಾಹಿನಂತೆ' ಇತ್ಯಾದಿ.

ಕವಿ ಪ್ರಾಸದ ಕಡೆ ಹೆಚ್ಚಿನ ಲಕ್ಷ್ಯ ವಹಿಸಿಲ್ಲ ಆದಿಪ್ರಾಸ ಸರಿಯಾಗಿ ಬಂದಿಲ್ಲ ಅಲ್ಲಲ್ಲಿ ಬೇಕಾದ ಅಲಂಕಾರಗಳನ್ನು ಉಪಯೋಗಿಸಿಕೊಂಡು ಕಾವ್ಯವನ್ನು ಸುಂದರವಾಗಿಸಿದ್ದಾನೆ.

ಈ ಕಾವ್ಯಕ್ಕೆ 'ಸೂತಭಾರತ' ಎಂಬ ಹೆಸರು ಯಾಕೆ ಬಂತೆಂಬುದು ವಿವೇಚಿಸತಕ್ಕ ವಿಚಾರ. ಕವಿ 'ಸೂತಭಾರತ' ಎಂದು ಕರೆದಿರುವುದಕ್ಕೆ ಕಾವ್ಯದಲ್ಲಿ ಆಧಾರಗಳೇನೂ ದೊರೆಯುವುದಿಲ್ಲ. ವಿವಿಧ ಮೂಲಗಳಿಂದ ಸಂಗ್ರಹಿಸಿ ನೋಡಿದಾಗ ರೋಮ ಹರ್ಷಣನೆಂಬ ಮಹರ್ಷಿಗೆ ಸೂತನೆಂಬ ಹೆಸರು ಪ್ರಸಿದ್ಧವಾಗಿದೆಯೆಂದೂ ಆತನು ಇತಿಹಾಸ ಪುರಾಣಗಳನ್ನು ಹೇಳುತ್ತಿದ್ದನೆಂದು ವ್ಯಕ್ತವಾಗುತ್ತದೆ. ಇವನು ಭಾರತದ ಕಥೆಯನ್ನು ಹೇಳುತ್ತಿದ್ದಿರಬೇಕು ಆದುದರಿಂದ ಮುಂದೆ ಭಾರತಕ್ಕೆ 'ಸೂತಭಾರತ' ಎಂಬ ಹೆಸರೂ ಬಂದಿರಬಹುದೇನೋ ? ಹಾಗಾಗಿ ಭಾರತದ ಕಥೆಯ ಒಂದಂಶವಾದ ಸ್ವರ್ಗಾರೋಹಣದ ಕಥೆಯನ್ನೊಳಗೊಂಡ ಈ ಕಾವ್ಯಕ್ಕೆ ಸೂತಭಾರತ

ವೆಂಬ ಹೆಸರು ಬಂದಿದ್ದರೂ ಇರಬಹುದು. ಆದರೆ ಇವೆಲ್ಲ ಊಹೆ ಮಾತ್ರ. 'ಸೂತ ಭಾರತ'ವೆಂಬ ಹೆಸರು ಬರುವುದಕ್ಕೆ ಇನ್ನೊಂದು ಮುಖ್ಯ ಕಾರಣವನ್ನೂ ಕಂಡು ಕೊಳ್ಳಬಹುದಾಗಿದೆ. ಕಿಟ್ಟೆಲ್ ಕೋಶದಲ್ಲಿ 'ಸೂತ' ಎಂಬುದಕ್ಕೆ impellsent' dispatched, gone, departed ಎಂಬ ಅರ್ಥಗಳನ್ನು ಕೊಡಲಾಗಿದೆ. ಪ್ರಸ್ತುತ dispatched ಮತ್ತು departed ಎಂಬ ಎರಡು ಅರ್ಥಗಳನ್ನು ಮುಖ್ಯವಾಗಿ ಇಟ್ಟು ಕೊಂಡು 'ಸೂತ' ಎಂಬುದರ ಅರ್ಥವನ್ನು ವಿವೇಚಿಸಬಹುದು dispatch ಎಂದರೆ ಕಳಿಸಿಕೊಡು ರವಾನಿಸು ಯಮಲೋಕಕ್ಕೆ ಕಳಿಸು ಎಂಬುದಾಗಿಯೂ depart ಎಂಬುದಕ್ಕೆ ಹೊರಟುಹೋಗು, ಹೊರಡು, ಬೀಳ್ಕೊಳ್ಳು, ತೆರಳು, ಮರಣಹೊಂದು ಎಂಬುದಾಗಿಯೂ ಅರ್ಥಗಳಿವೆ. ಸೂತಭಾರತದಲ್ಲಿರುವ ಸ್ವರ್ಗಾರೋಹಣದ ಕಥೆ ಯಲ್ಲಿ ಭೀಮಾರ್ಜುನ, ನಕುಲ, ಸಹದೇವರು ಮತ್ತು ದ್ರೌಪದಿ ಎಲ್ಲರೂ ಒಬ್ಬೊಬ್ಬ ರಾಗಿ ಬಿದ್ದು ಮರಣಹೊಂದುವ ಹಾಗೂ ಯುಧಿಷ್ಠಿರನನ್ನು ಅಗಲಿ ಹೋಗುವ ವಿಚಾರವೇ ಪ್ರಧಾನವಾಗಿದೆ. ಕೊನೆಗೆ ಕೃಷ್ಣನ ಅನುಗ್ರಹದಿಂದ ಪಾಂಡವರಿಬ್ಬರೂ ಸ್ವರ್ಗಾರೋಹಣ ಮಾಡುವ ವಿಚಾರವು ಇದೆ.

ನಡೆದರ್ರೈ ಪಾಂಡವರು ಯೆಲ್ಲರು
ಗಣದಲಿ ಹಿಮಗಿರಿಯ ಹೊಯಿಲಲಿ
ನಡುಗಿ ಬಸವಳಿವಲ್ಲಿ ಕೈಕಾಲ್ಮುರುಟಿ ನರೆಬಿದ್ದೂ
ಮಡಿದರೆಲ್ಲಿರೂ ಧರ್ಮರಾಯಗೆ
ಕಡೆಯುಲರಿವಾಯರ್ಗಾಗ ಹರಿಹರ
ಬಿಡದೆ ಮುಕ್ತಿಯನಿತ್ತು ಸ್ವರ್ಗಾರೋಹಣ ಪರ್ವದಲಿ

(ಸಂ. 14, ಪ-18)

ಎಂದು ಹೇಳಿದ್ದಾನೆ. ಹಾಗಾಗಿ ಈ ರೀತಿಯ ಕಥಾವಸ್ತು ಇರುವುದರಿಂದಲೇ ಈ ಕಾವ್ಯವನ್ನು 'ಸೂತಭಾರತ'ವೆಂಬುದಾಗಿ ಕರೆದಿರಬೇಕೆಂಬ ಸಂಶಯ ಬಲ ವಾಗಿದೆ.

ಕವಿಕಾಲ ವಿಚಾರ

ಸೂತಭಾರತವನ್ನು ಬರೆದ ಕವಿಯ ಬಗ್ಗೆ ಸ್ಪಷ್ಟಮಾಹಿತಿಗಳು ದೊರೆಯು ವುದಿಲ್ಲ. ಕವಿಯು ತನ್ನ ವಿಚಾರವಾಗಿ ಏನನ್ನೂ ಹೇಳಿಕೊಂಡಿಲ್ಲ, ಆದರೆ ಇವನು ಕುಮಾರವ್ಯಾಸನನ್ನು ಸ್ಮರಿಸಿದ್ದಾನೆ

ವರ ಮಹಾಭಾರತದ ರಚಿಸಿವ
ಸಿರಿ ಕುಮಾರವ್ಯಾಸ ದೇವರ
ಚರಣವನು ನೆನೆವುತ್ತ ಸ್ವರ್ಗಾರೋಹಣ ಕಥೆಯಾ

ಇದರಿಂದಾಗಿ ಈತನು ಕುಮಾರವ್ಯಾಸನಿಗಿಂತ ಅನಂತರದ ಕವಿಯೆಂಬುದು ಸ್ಪಷ್ಟವಾಗಿದೆ. ಕೆಲವು ಪದ್ಯಗಳ ಅಂತ್ಯದಲ್ಲಿ "ಗದುಗಿನ ವೀರನಾರಾಯಣ" ಎಂಬ ಅಂಕಿತವು ಬರುವುದರಿಂದ ಇದನ್ನು ಕುಮಾರವ್ಯಾಸನೇ ರಚಿಸಿರಬಹುದೇ ಎಂಬ ಸಂದೇಹ ಉಂಟಾಗುವುದಾದರೂ ಮೇಲಿನ ಪದ್ಯದಲ್ಲಿ ಕವಿ ಕುಮಾರವ್ಯಾಸನನ್ನು ನೆನೆದಿರುವುದರಿಂದ ಈ ಕಾವ್ಯ ಕುಮಾರವ್ಯಾಸನದಲ್ಲ ಎಂಬುದು ದೃಢವಾಗುವುದು. ವ್ಯಾಸ ಹಾಗೂ ಕುಮಾರವ್ಯಾಸರನ್ನುಳಿದು ಮತ್ತಾವ ಕವಿಗಳನ್ನೂ ಸ್ಮರಿಸಿಲ್ಲ. ಕುಮಾರವ್ಯಾಸ ಭಾರತದ ಪ್ರಭಾವ ಈ ಕವಿಯ ಮೇಲೆ ಆಗಿದೆ ಎಂಬುದರಲ್ಲಿ ಸಂದೇಹವೇ ಇಲ್ಲ. ಸೂತ ಭಾರತದ ಹದಿಮೂರನೆಯ ಸಂಧಿಯ ಕೊನೆಯಲ್ಲಿ ಬರುವ ಒಂದೆರಡು ಪದ್ಯ ಕುಮಾರವ್ಯಾಸನ ಪದ್ಯವನ್ನೇ ಹೋಲುತ್ತದೆ. ಕುಮಾರವ್ಯಾಸನು ಮಹಾಭಾರತದ 10 ಪರ್ವಗಳನ್ನು ಮಾತ್ರ ಬರೆದಿದ್ದಾನೆ. ಉಳಿದೆಂಟು ಪರ್ವಗಳನ್ನು ತಿಮ್ಮಣ್ಣ ಕವಿಯು ಕುಮಾರವ್ಯಾಸನನ್ನನುಸರಿಸಿ ಭಾಮಿನಿ ಷಟ್ಪದಿಯಲ್ಲೇ ಬರೆದಿದ್ದಾನೆ. ಸೂತಭಾರತ ಬರೆದ ಕವಿ ತಿಮ್ಮಣ್ಣ ಕವಿಗಿಂತಲೂ ಹಿಂದಿನವನಾಗಿರಬೇಕು; ಆದರೂ ಕವಿಯ ಕಾಲದ ಬಗ್ಗೆ ನಿರ್ದಿಷ್ಟವಾಗಿ ಹೇಳುವುದು ಅಸಾಧ್ಯ. ಕವಿಯು ಕುಮಾರವ್ಯಾಸನಂತೆ ಗದುಗಿನ ವೀರನಾರಾಯಣನ ಭಕ್ತನೆಂದು ತಿಳಿಯುತ್ತದೆ. ಹನ್ನೆರಡನೆಯ ಸಂಧಿಯ ಕೊನೆಯ ಪದ್ಯದಲ್ಲಿ ಹದಿಮೂರನೆ ಸಂಧಿಯ ಹದಿನಾರನೆಯ ಪದ್ಯದ ಕೊನೆಯಲ್ಲಿ ಗದುಗಿನ ವೀರನಾರಾಯಣ ಎಂದೂ ಹದಿಮೂರನೆಯ ಸಂಧಿಯ ಕೊನೆಯ ಪದ್ಯದಲ್ಲಿ ವೀರನಾರಾಯಣ ಎಂಬುದಾಗಿಯೂ ಬರುತ್ತದೆ

ಕವಿಯು ಕೃಷ್ಣನ ಸ್ತೋತ್ರಮಾಡುತ್ತ ಕೃಷ್ಣನ ಲೀಲೆ ಮಹಿಮೆ ಮತ್ತು ಹತ್ತವತಾರಗಳ ವಿಚಾರ ಎಲ್ಲವನ್ನೂ ಸಂಕ್ಷಿಪ್ತವಾಗಿ ತಿಳಿಸಿದ್ದಾನೆ.

ಹರಿಯ ಲೀಲಾ ಮಾತ್ರವೆಲ್ಲವು
ಹರಿಸುತಿಹ ಜಗದೊಳಗೆ ಯೀ
ಹರಿಯೊಳಗೆ ಜಗವಿರುತಿಹುದು ಸರ್ವವಿಷ್ಣುಮಯ ಜಗವೂ

ಎಂಬುದಾಗಿ ಹೇಳಿ ಇಡೀ ವಿಶ್ವವೇ ವಿಷ್ಣುಮಯವೆಂಬ ತತ್ವವನ್ನೂ ಹೇಳಿದ್ದಾನೆ. ಇದರಿಂದ ಈ ಕವಿಗೆ ಕೃಷ್ಣನ ಮೇಲಿರುವ ಆಧಿಕ್ಯ ಎಷ್ಟೆಂಬುದರ ಅರಿವಾಗುತ್ತದೆ. ಕವಿ ಕೃಷ್ಣನನ್ನು ಹೊಗಳುವಂತೆ ಶಿವನಿಗೂ ಪ್ರಾಶಸ್ತ್ಯ ಕೊಟ್ಟು ಹರಿಹರ

ರಲ್ಲಿ ಭೇದವಿಲ್ಲವೆಂಬುದನ್ನು ಸ್ಪಷ್ಟಪಡಿಸಿದ್ದಾನೆ. ಉದಾಹರಣೆಗೆ ಸಂಧಿ 12ರ ಪದ್ಯ 4ನ್ನು ನೋಡಬಹುದು.

ಅಲ್ಲಿ ಶಿವಮಯ ಅಲ್ಲಿ ವಿಷ್ಣುವೆ
ಯೆಲ್ಲ ಹರಿಮಯನಲ್ಲಿ ಶಿವನಿಹ
ನಲ್ಲಿಯೂ ಹರಿಮಯವೆಲ್ಲಿಯೆ ಬೇರೆತಾನಿಲ್ಲಾ
ಬಲ್ಲ ಶಾಸ್ತ್ರ ಸ್ಮೃತಿ ನಿಕರ ತಾವೆಲ್ಲಿ ಸಾರುತಿಹವು ಭೇದವನಲ್ಲಿ
ಕಾಂಬವರ್ಗಹುದು ದುರ್ಗತಿಯೆಂದನಾ ಮುನಿಪಾ

ಹರಿಹರರಲ್ಲಿ ಭೇದವಿಲ್ಲ. ಅವರಲ್ಲಿ ಭೇದ ಎಣಿಸಿದವರಿಗೆ ದುರ್ಗತಿ ಬರುತ್ತದೆಂದು ಕವಿ ತಿಳಿಸಿದ್ದಾನೆ. ಕವಿಯ ಹುಟ್ಟೂರು, ಕುಲ, ಕುಟುಂಬಗಳ ವಿಚಾರ ಕಾವ್ಯಗಳ ಮೂಲಕ ತಿಳಿಯಬರುವುದಿಲ್ಲ. ಇವನು ಸ್ಮಾರ್ತನಾಗಿರಬಹುದೆಂದು ಊಹಿಸಬಹುದಾಗಿದೆ.

ಒಟ್ಟಿನಲ್ಲಿ ಈ ಷಟ್ಪದಿ ಕಾವ್ಯವು ಚಿಕ್ಕದಾದರೂ ವಸ್ತುಶೈಲಿ, ನಿರೂಪಣಾಕ್ರಮ, ವರ್ಣನೆ ಮುಂತಾದವುಗಳ ದೃಷ್ಟಿಯಿಂದ ಮೆಚ್ಚತಕ್ಕ ಕಾವ್ಯವಾಗಿದೆ.

ಮಂದಾರ ರಾಮಾಯಣ

ತುಳು ಆದಿಕಾವ್ಯ

—ಡಾ|| ಹೊಸಬೆಟ್ಟು ಸೀತಾರಾಮಾಚಾರ್ಯ

ದ್ರಾವಿಡ ಭಾಷಾ ಸಮುದಾಯದಲ್ಲಿ ತುಳುವೂ ಒಂದು. ಕರಾವಳಿ ಕರ್ನಾಟಕದ 15 ಲಕ್ಷಗಳಿಗೂ ಮಿಕ್ಕಿದ ಜನರ ತಾಯ್ನುಡಿ ಇದು. ಇದು ಯಾವುದೇ ಇನ್ನೊಂದು ಭಾಷೆಯ ಕೂಸೂ ಅಲ್ಲ, ಉಪಭಾಷೆಯೂ ಅಲ್ಲ. ತುಳು ಇತರ ದ್ರಾವಿಡ ಭಾಷೆಗಳೊಂದಿಗೆ ಹೆಗಲೆಣೆಯಾಗಿ ನಿಲ್ಲಬಲ್ಲುದು. ಭಾವ, ವಿಚಾರಗಳ ಸಂವಹನೆಗೆ ಸಮರ್ಥವಾದ ನುಡಿ, ನುಡಿಗಟ್ಟುಗಳ ಸಂಪತ್ತನ್ನು ಈ ಭಾಷೆ ಹೊಂದಿದೆ. ಇದರಲ್ಲಿನ ಜಾನಪದ ಸಾಹಿತ್ಯವು ಜೀವನ ಸಪಸ್ಪಂದಿಯಾಗಿದೆ, ವೈವಿಧ್ಯಪೂರ್ಣವಾಗಿದೆ.

ಮಲೆಯಾಳ ಲಿಪಿಯನ್ನು ಹೋಲುವ ಲಿಪಿಯೊಂದು 'ತುಳು ಲಿಪಿ'ಯೆಂದು ಕರೆಯಲ್ಪಡುತ್ತಿದೆ. ಆ ಲಪಿಯಲ್ಲಿ ಬರೆಯಲ್ಪಟ್ಟ ತಾಳೆ ಓಲೆ ಗ್ರಂಥಗಳು ಬಹು ಸಂಖ್ಯೆಯಲ್ಲಿ ಸಿಗುವುದಾದರೂ ಯಾವೊಂದರಲ್ಲಿಯೂ ತುಳು ನುಡಿಯ ಕೃತಿಗಳಿಲ್ಲ. ಅಲ್ಲಿರುವುದು ಸಂಸ್ಕೃತ, ಮತ್ತಿತರ ಭಾಷೆಗಳ ರಚನೆಗಳೇ! ಹೀಗಾಗಿ ತುಳು ವಾಙ್ಮಯವನ್ನು ಗ್ರಂಥಸ್ಥಗೊಳಿಸುವಲ್ಲಿ—ಶ್ರಾವಣ ಸಾಹಿತ್ಯವನ್ನು ಚಾಕ್ಷುಷವಾಗಿಸುವಲ್ಲಿ ತನ್ನದೇ ಆದ ಲಿಪಿಯನ್ನು ರೂಢಿಸಿಕೊಂಡು ಬರಲಿಲ್ಲ. ಇಂದು ತುಳು ಕನ್ನಡ ಲಿಪಿಯಲ್ಲೇ ಲಿಖಿತಗೊಳ್ಳುತ್ತಿದೆ.

ಸ್ವಂತ ಲಿಪಿಯಿಲ್ಲವಾಗಿ, ರಾಜಾಶ್ರಯವೂ ದೊರೆಯದೆ ಹೋಗಿ, ಶಿಕ್ಷಣದಲ್ಲಿ ಮನ್ನಣೆಯ ಮಣೆ ಅಲಭ್ಯವಾಗಿ ತುಳು ನುಡಿಯಲ್ಲಿ--ಜಾನಪದ ಸಾಹಿತ್ಯವನ್ನುಳಿದು ಗಮನಾರ್ಹ ಪ್ರಮಾಣದಲ್ಲಿ ಕೃತಿಗಳು ರಚಿತವಾಗಿಲ್ಲ. ಕ್ರೈಸ್ತ ಮಿಷನರಿಗಳು ಈ ನುಡಿಗೆ ವ್ಯಾಕರಣ (1872) ನಿಘಂಟು (1886) ಗಳನ್ನು ಮೊದಲಾಗಿ ಸಿದ್ಧಪಡಿಸಿದರು. ಈ ಶತಮಾನದ 2 ಮತ್ತು 3ನೇ ದಶಕಗಳಲ್ಲಿ ಎಸ್. ಯು. ಪಣಿಯಾಡಿಯವರ ನಾಯಕತ್ವದಲ್ಲಿ ತುಳು ಭಾಷೆ, ಸಾಹಿತ್ಯಗಳ ಪ್ರಚಾರ, ಪ್ರಕಾಶನ ಕಾರ್ಯ

ಗಳು ನಡೆದವು. 'ತುಳುನಾಡು ಪ್ರಾಂತ'ದ ಬೇಡಿಕೆಯೂ ಕೇಳಿ ಬಂತು. ಕ್ರಮೇಣ ಅದರ ವೇಗ ಕ್ಷೀಣಿಸತೊಡಗಿತು. ಈಗ 8ನೇ ದಶಕದಲ್ಲಿ ಡಾ॥ ಕು. ಶಿ. ಹರಿದಾಸ ಭಟ್ಟರ ಪ್ರಧಾನ ಸಂಪಾದಕತ್ವದಲ್ಲಿ ತುಳು ನಿಘಂಟು ರಚನೆಯ ಮಹಾಯೋಜನೆಯೊಂದು ಕಾರ್ಯರೂಪಕ್ಕಿಳಿದಿದೆ. ತುಳು ಸಂಸ್ಕೃತಿ, ಆಚಾರ ವಿಚಾರ, ಜನಪದ ಸಾಹಿತ್ಯ, ಕುರಿತು ಸಂಗ್ರಹ ನಡೆಯುತ್ತಿದೆ. ತುಳುವಿನ ಒಳಬಗೆಗಳನ್ನೆಲ್ಲ ಪರಿವೀಕ್ಷಣೆಗೆ ಗುರಿಪಡಿಸಿ ಉಪಭಾಷೆಗಳ ವಿಶ್ಲೇಷಣೆಯೂ ಕಾರ್ಯಗತಗೊಳ್ಳುತ್ತಿದೆ. ವಿದೇಶದ ವಿಶ್ವವಿದ್ಯಾಲಯಗಳಲ್ಲಿ ಭಾಷಾ ವಿಜ್ಞಾನದ ಪ್ರಾಧ್ಯಾಪಕರುಗಳಾಗಿ ಹೆಸರುಗಳಿಸಿದ ಡಾ॥ ಯು. ಪಿ. ಉಪಾಧ್ಯಾಯ ದಂಪತಿಗಳ ಸೇವೆ, ಸಹಭಾಗಿತ್ವಗಳೂ ಇಲ್ಲಿ ಉಲ್ಲೇಖನೀಯ.

ಇಂತಹ ಹಿನ್ನೆಲೆಯುಳ್ಳ ತುಳು ನುಡಿಯಲ್ಲಿ ಇದೀಗ ಈ ಶತಮಾನದ ಉತ್ತರಾರ್ಧದಲ್ಲಿ, ನುಡಿಯ ಭಾಗ್ಯೋದಯವೋ ಎನ್ನುವಂತೆ ರಾಮಾಯಣವೊಂದು ಸೃಷ್ಟಿಗೊಂಡಿದೆ. ಮಂದಾರ ರಾಮಾಯಣವೆಂದು ಇದರ ನಾಮಾಂಕಿತ. ಇದು ತುಳು ಆದಿಕಾವ್ಯವಾಗಿ, ಇತಿಹಾಸ ಮಹತ್ವ ಪಡೆಯುವ ಕೃತಿಯೆನ್ನುವುದರಲ್ಲಿ ಸಂದೇಹವಿಲ್ಲ. ಕನ್ನಡ, ತುಳು, ಮರಾಠಿ, ಸಂಸ್ಕೃತಗಳಲ್ಲಿ ಪ್ರಭುತ್ವ ಸಂಪಾದಿಸಿದ ವಿದ್ವಾನ್ ಶ್ರೀ ಮಂದಾರ ಕೇಶವಭಟ್ಟರು ಇದರ ಕವಿಗಳು. ಕವಿವರ್ಯರು 'ಮಂದಾರ' ಎಂಬ ಮನೆತನಕ್ಕೆ ಸೇರಿದವರು. ಧ್ವನಿಪೂರ್ಣವಾದ ಆ ಹೆಸರು ಅವರ ರಾಮಾಯಣ ಕೃತಿಗೆ ಅಂಕಿತಗೊಂಡಿದೆ. ಲಿಖಿತ ಛಂದಸ್ಸಿನ 'ಮಂದಾರ ರಾಮಾಯಣ'ದ ಮೊದಲ ಎರಡು ಎಸಳುಗಳು ಎರಡು ಆವೃತ್ತಿಗಳು (1977, 1981) ಪ್ರಕಾಶಿತವಾಗಿವೆ. ಮಂಗಳೂರಲ್ಲಿ 'ಮಂದಾರ ರಾಮಾಯಣ ಪ್ರಕಾಶನ ಸಮಿತಿ' ರೂಪುಗೊಂಡಿದೆ. ಈ ಮಹಾಕೃತಿಯನ್ನು ಪೂರ್ಣವಾಗಿ ಮುದ್ರಿಸಿ, ಪ್ರಕಟಿಸುವ ಕಾರ್ಯದಲ್ಲಿ ಪ್ರವೃತ್ತವಾಗಿದೆ. 'ಮಂದಾರ ರಾಮಾಯಣ'ದ ಪ್ರಕಾಶನ ತುಳು ನುಡಿ ಸಾಹಿತ್ಯಗಳ ಚರಿತ್ರೆಯಲ್ಲಿ ಬಹುದೊಡ್ಡ ಘಟನೆ ಆಗಲಿದೆ.

ಭಾರತದ ಎಲ್ಲ ಭಾಷೆಗಳಲ್ಲಿ ಶ್ರೀರಾಮ ಕಥೆ ಬಗೆಬಗೆಯಾಗಿ ಮೂಡಿದೆ. ಬೌದ್ಧ ಜಾತಕಗಳಲ್ಲೂ, ಜೈನ ಗ್ರಂಥಗಳಲ್ಲೂ ಅದೇ ಕಥೆ ಭಿನ್ನ ಭಿನ್ನ ರೂಪ ತಳೆದು ಹಬ್ಬಿ, ಹರಡಿದೆ. ತುಳು ಜಾನಪದ ಸಾಹಿತ್ಯದ ಸಂಧಿ, ಪಾಡ್ದನಗಳಲ್ಲಿ ಅಲ್ಲಲ್ಲಿ ರಾಮಾಯಣದ ಕಥಾಂಶಗಳು ಕೇಳಿಬರುತ್ತಿವೆ. ಆದರೆ ಪೂರ್ಣಪ್ರಮಾಣದಲ್ಲಿ, ಘನತೆ, ಗಾಂಭೀರ್ಯಗಳನ್ನೊಳಗೊಂಡು ಮಹಾಕಾವ್ಯವಾಗಿ ಆದಿ ಕಾವ್ಯದ ಕಥೆ ತುಳುವಿನಲ್ಲಿ ಮೈದೋರುತ್ತಿರುವುದು—ಮಂದಾರ ರಾಮಾಯಣದಲ್ಲೇ. ತಾಯ್ನುಡಿ ತುಳುವಾಗಿ ಉಳ್ಳ ವಿದ್ವಾಂಸರೂ, ಸಾಹಿತಿಗಳೂ ತಮ್ಮ ನುಡಿಯಲ್ಲಿ ಸಾಹಿತ್ಯ ನಿರ್ಮಾಣಕ್ಕೆ ಗಮನಹರಿಸದೆ ಇದ್ದಾಗ, ಮರಾಠಿ ಮನೆತನದ ಮಾತಾಗಿ ಕನ್ನಡ ಮನೆ

ಬಳಕೆಯ ನುಡಿಯಾಗಿ ಇರುವ ಕವಿ ಶ್ರೀ ಮಂದಾರರು ತುಳು ನುಡಿಯ ಜೀವ-ಸತ್ವವನ್ನು ಅರಗಿಸಿಕೊಂಡು ರಾಮಾಯಣ ರಚಿಸಿದ್ದು ಒಂದು ಅದ್ಭುತ ಕಾರ್ಯವೇ !

ರಾಮಾಯಣದ ಕಥೆಗಾಗಿಯೇ ಮಂದಾರರ ಮಹಾಕಾವ್ಯ ಮುಖ್ಯವೆನಿಸುವುದಲ್ಲ. ಅದರಲ್ಲಿ ತುಂಬಿಕೊಂಡ ತುಳು ಸಿರಿ ಮನಸೆಳೆಯುವಂತಹುದು. ಇಂದು ಕಿವಿ ಮರೆಯಾಗುತ್ತಿರುವ ಅಸಂಖ್ಯ ತುಳು ನುಡಿಗಳು, ನುಡಿಗಟ್ಟುಗಳು ಧ್ವನಿಪೂರ್ಣ ಹೇಳಿಕೆಗಳು, ಗಾದೆಗಳು ಎಲ್ಲವೂ ಇಲ್ಲಿ ಮಡುಗಟ್ಟಿವೆ. ತುಳುನಾಡಿನ ವೈಶಿಷ್ಟ್ಯಗಳಾಗಿರುವ—ಕೋಲ, ನೇಮ, ತಂಬಿಲ, ಆಲಿಚೆ, ನಾಗಮಂಡಲ, ಹರಕೆ, ಸೇವೆ, ಕಂಬಳ, ಕೋಳಿಕಟ್ಟ ಆಟ-ಬಯಲಾಟಗಳಂತಹ ಅಕ್ಷರಶಃ ನೂರಾರು ಸಂಗತಿಗಳನ್ನು ಕವಿ ರಾಮಾಯಣದಲ್ಲಿ ಸಂದರ್ಭೋಚಿತವಾಗಿ ಮೈಗೂಡಿಸಿದ್ದಾರೆ ; ದಾಖಲಿಸಿದ್ದಾರೆ. ಅವುಗಳಲ್ಲಿ ಹಲವು ಈಗಾಗಲೇ ಜೀವನದಲ್ಲಿ ನಮ್ಮ ಕಣ್ಮರೆಯಾಗುತ್ತಿರುವ ಸ್ಥಿತಿ ಮುಟ್ಟಿರುವುದನ್ನು ಗಮನಿಸಿದರೆ ಮಂದಾರರ ಕೃತಿಯ ಪ್ರಾತಿನಿಧಿಕ ಮೌಲ್ಯದ ಮನವರಿಕೆಯಾದೀತು.

ಹೀಗೆ ತುಳುಬದುಕಿನ ತಿರುಳನ್ನೆಲ್ಲ ಸೆರೆಹಿಡಿದು, ಸಮರ್ಥವೂ ಸಹಜವೂ ಆದ ತುಳು ನುಡಿಯಲ್ಲಿ, ರಗಳೆ ಛಂದಸ್ಸಿನ 15000 ಕ್ಕೂ ಮಿಕ್ಕ ಪಂಕ್ತಿಗಳಲ್ಲಿ ಮೈದೋರಿದ 'ಮಂದಾರ ರಾಮಾಯಣ' ಭವಿಷ್ಯದಲ್ಲಿ ತುಳು ಅಭ್ಯಾಸಿಗಳಿಗೆ ಒಂದು ಆಕರಗ್ರಂಥವಾಗಿ ಆಧಾರಕೃತಿಯಾಗಿ ಬಾಳುವುದು ನಿಸ್ಸಂದೇಹ.

ಆ ಕಾವ್ಯದ ಕೆಲವು ಸಾಲುಗಳನ್ನು ಇಲ್ಲಿ ಉಲ್ಲೇಖಿಸಿ, ಸ್ಥಾಲೀಪುಲಾಕ ನ್ಯಾಯದಂತೆ ಕೃತಿಯ ಸ್ವರೂಪ ಪರಿಚಯ ಮಾಡಿಸುವುದು ಈ ಬರವಣಿಗೆಯ ಉದ್ದೇಶ. ಕಾವ್ಯದ ಮೊದಲ ಎಸಳಿನ ಶೀರ್ಷಿಕೆ ; 'ಪುಂಚದ ಬಾಲೆ' (ಹುತ್ತದ ಮಗು)

> ಬರವುಸರವುಡು ಎನನ್ ನರಮಾನಿ ಮಳ್ತಿಂಚಿ
> ಸಿರಿ ಗುರುಕುಳೆನ್ ಸೆನೆತ್‌ದಾನೆ ಮೋಣೆದ ದೇವೆ
> ರೆನ ಕಾರ ಮುದೆಲ್‌ಡೀ ತರೆನ್ ತಗ್ಗಾದ್, ಬೆರಿ
> ಬಗ್ಗಾದ್, ಪತ್ತ್ ಬಿರೆಲ್‌ದ ಕಾಣಿಕೆನ್ ಬಗ್ತಿ
> ಡೊಪ್ಯಾದ್, ಯಾನ್ ಬರೆಪಿನ ಕಡ್ತ ತಲೆಪುಲೊಂ
> ಜಲ ಮುಟ್ಟ ಸೋಂಕಂದಿಲೆಕ್ಕವೆನ್ ಕಡಪರಾ
> ಜ್ಯೊಗು ಪಾಡ್ದ್ ಗೇಣ ಕಯ್ಸೇರಾದ್ ಕೊರ್ದು, ದಯ
> ದೀದ್ ಪೊರ್ಲುಡು ಕಾಪೊಡುಂದ್ ನಟ್ಟೊಂದು....

ತನ್ನನ್ನು ಮಾನವನನ್ನಾಗಿ ಮಾಡಿದ ಗುರುಗಳನ್ನು ನೆನೆದು ಗಜಾನನನ ಕಾಲ ಬುಡದಲ್ಲಿ ತಲೆ ತಗ್ಗಿಸಿ, ಬೆನ್ನು ಬಾಗಿಸಿ ಎರಡು ಕೈಗಳ ಹತ್ತು ಬೆರಳುಗಳ ಕಾಣಿಕೆ

ಯನ್ನೊಪ್ಪಿಸುತ್ತ ವಿಘ್ನನಿವಾರಣೆ ಮಾಡಿ ಕಾವ್ಯ ನಿರಾತಂಕವಾಗಿ ಮುನ್ನಡೆಯುವಂತೆ ಅನುಗ್ರಹಿಸಬೇಕೆಂದು ಪ್ರಾರ್ಥಿಸುತ್ತಿದ್ದಾರೆ ಕವಿ. ಈ ಕಾವ್ಯಾರಂಭ ಸಾಂಪ್ರದಾಯಿಕವಾಗಿದ್ದರೂ, ಇಲ್ಲಿನ ತುಳುತನ ಗಮನಾರ್ಹ. ಇಲ್ಲಿ ಕನ್ನಡ, ಸಂಸ್ಕೃತಗಳ ಬಳಕೆ ವಿರಳ. ನೇರವಾದ ಸಂಸ್ಕೃತ ಶಬ್ದಗಳು—ಈ 45 ನುಡಿಗಳಲ್ಲಿ ಎರಡು ಮಾತ್ರ. ಹೀಗೆ ಕಾವ್ಯದ ಉದ್ದಕ್ಕೂ ಕನ್ನಡ ಸಂಸ್ಕೃತ ಪದಗಳಿಗೆ ಸಮಾನಾಂತರವಾದ ತುಳು ರೂಪಗಳ ಬಳಕೆ ತುಂಬಿ ತುಳುಕುತ್ತಿರುವುದೇ ಒಂದು ಸೊಗಸು !

ಪೂರ್ವಾಶ್ರಮದಲ್ಲಿ 'ಬೇಡ' ಆಗಿದ್ದವನು. ಮುಂದೆ ಕವಿಯಾಗಿ ಎಲ್ಲರಿಗೂ 'ಬೇಕು' ಎನಿಸಿದ ಕಥೆ—ಅಧ್ಯಾತ್ಮರಾಮಾಯಣಾನುಸಾರವಾಗಿ ಇಲ್ಲಿಯೂ ಇದೆ. ಆದರೆ ಸನ್ನಿವೇಶ ಚಿತ್ರಣದಲ್ಲಿ ತುಳುನಾಡಿನ ಬದುಕಿನ ವಾಸನೆ, ವಿಡಂಬನೆ, ಹಾಸ್ಯ ಚುಚ್ಚಿನೋಡು ಕೆಚ್ಚು ಎಲ್ಲವೂ ಅಚ್ಚರಿ ಮೂಡುವಷ್ಟು ಪರಿಣಾಮಕಾರಿಯಾಗಿ ಒಡಮೂಡಿದೆ.

'ಮಂದಾರ ರಾಮಾಯಣ'ದ ಕಥೆಯಲ್ಲಿ ಕಾಣಿಸುವ ಮುಖ್ಯ ವ್ಯತ್ಯಾಸ ವೈಶಿಷ್ಟ್ಯಗಳನ್ನು ಹೀಗೆ ಸಂಗ್ರಹಿಸಬಹುದು.

1) ಪುಂಚದ ಬಾಲೆ (ಹುತ್ತದ ಮಗು) ಯಾದ ವೃದ್ಧ ವಾಲ್ಮೀಕಿಗೆ ಕನಸಿನಲ್ಲಿ ತನ್ನೊಡಲೊಳಗಿಂದಲೇ ಕಾವ್ಯ ಕನ್ನಿಕೆ ಪ್ರತ್ಯಕ್ಷಳಾಗುತ್ತಾಳೆ. ಆಕೆಯನ್ನಪ್ಪಿಕೊಂಡದ್ದಕ್ಕಾಗಿ ಜನ ಸಡಿಲು ನುಡಿದಾಗ ನೊಂದು ಕೆರಳಿದ ಕವಿಯಿಂದ ಬಂದ ಶಾಪವಾಕ್ಯ ರಾಮಾಯಣದ ಬೀಜವಾಗುತ್ತದೆ. ಕ್ರೌಂಚಮಿಥುನದ ಕಥೆ ಇಲ್ಲಿ ಇಲ್ಲ.

2) ಸೀತಾಸ್ವಯಂವರಕ್ಕೆ ಮೊದಲು ಪರಶುರಾಮನು ಜನಕನಲ್ಲಿಗೆ ಬಂದು ಅಲ್ಲಿನ ಬಿಲ್ಲೊಂದರಲ್ಲಿ ಶಿವಶಕ್ತಿಯನ್ನು ಆವಾಹಿಸುತ್ತಾನೆ. ಶ್ರೀರಾಮಾಗಮನದ ತನಕ ಅದರಲ್ಲಿ ಶಿವಸಾನ್ನಿಧ್ಯವಿರಬೇಕೆಂದು ಅವನ ಆಕಾಂಕ್ಷೆ. ತನ್ನ ಬಳಿಕ ಶ್ರೀರಾಮನೇ ಧರ್ಮರಕ್ಷಣೆಯ ಹೊಣೆ ಹೊರಲು ಸಮರ್ಥ ಎಂದೂ ಪರಶುರಾಮನ ಆಶಯ.

3) ಶೂರ್ಪನಖಿಯ ಪಾತ್ರ ಸೀತಾಕಲ್ಯಾಣ ಪ್ರಕರಣದಲ್ಲೇ ಕಾಣಿಸಿಕೊಳ್ಳುತ್ತದೆ. ಸುಬಾಹು, ತಾಟಕಿಯರನ್ನು ಶ್ರೀರಾಮ ಕೊಂದ ಸುದ್ದಿಯನ್ನು ಆಕೆ ರಾವಣನಿಗೆ ತಿಳಿಸುತ್ತಾಳೆ. ಒಡನೆ ರಾವಣನು ಅತಿಕಾಯ, ಇಂದ್ರಜಿತುಗಳನ್ನು ರಾಮಸೀತೆಯರನ್ನು ಹಿಡಿದು ತರುವುದಕ್ಕಾಗಿ ಮಿಥಿಲೆಗೆ ಕಳುಹುತ್ತಾನೆ. ಲಕ್ಷ್ಮಣ ಆ ರಕ್ಕಸರಿಬ್ಬರನ್ನು ಎದುರಿಸಿ ಹಿಮ್ಮೆಟ್ಟಿಸಿದಾಗ ಸೇಡು ತೀರಿಸುವುದಕ್ಕಾಗಿ ಅವರು ತಪಸ್ಸು ಮಾಡಿ ಬ್ರಹ್ಮನಿಂದ ವರಪಡೆಯುತ್ತಾರೆ. ಗೃಹಸ್ಥನಾಗಿದ್ದು 12 ವರ್ಷ ಬ್ರಹ್ಮಚರ್ಯ

ಪಾಲನೆ ಮಾಡಿದವನಿಂದ ಮಾತ್ರ ತನಗೆ ಮರಣ ಎಂದು ಅತಿಕಾಯನು ವರಪಡೆದ. ಲಕ್ಷ್ಮಣನನ್ನು ಒಮ್ಮೆ ಕೊಲ್ಲುವ ಶಕ್ತಿಯನ್ನು ಪಡೆದು, ಅದಕ್ಕಾಗಿ ಸರ್ಪಾಸ್ತ್ರವನ್ನು ಸಿದ್ಧಿಸಿಕೊಳ್ಳುತ್ತಾನೆ ಇಂದ್ರಜಿತು.

4) ಮಂಥರೆ ಕುರೂಪಿಯಲ್ಲ, ಚೆಲುವೆ. ಶ್ರೀರಾಮನಲ್ಲಿ ಆಕೆ ಮರುಳಾಗಿ ಪ್ರಣಯಭಿಕ್ಷೆ ಬೇಡುತ್ತಾಳೆ. ಶ್ರೀರಾಮ ತಿರಸ್ಕರಿಸಿದಾಗ ಕೆರಳಿ, ಸೇಡು ತೀರಿಸಲು ಕೈಕೇಯಿಯನ್ನು ಬಳಸಿಕೊಳ್ಳುತ್ತಾಳೆ.

5) ದಶರಥನ ಕಿರೀಟವನ್ನು ಸಿಂಹಾಸನದ ಮೇಲಿರಿಸಿ ಶ್ರೀರಾಮನ ಪ್ರತಿನಿಧಿಯಾಗಿ ಭರತ ರಾಜ್ಯಭಾರ ನಡೆಸುತ್ತಾನೆ. ಇವನು ಶ್ರೀರಾಮನ ಹಾವುಗೆಗಳನ್ನು ತಲೆಯ ಮೇಲೆ ಧರಿಸಿದ್ದು ಅಕ್ಷರಶಃ ಪಾದುಕಾ ಕಿರೀಟಿಯಾಗಿಯೇ ಇರುತ್ತಾನೆ.

6) ಸೀತಾಪಹರಣಕ್ಕಾಗಿ ರಾವಣ ಬಂದದ್ದು ಮಲೆಕುಡಿಯನ ವೇಷಾಂತರದಲ್ಲಿ. ಅವನೊಂದಿಗೆ ಒಂದು ಜಿಂಕೆಯ ಮರಿಯೂ ಇರುತ್ತದೆ. ಅದರ ಚೆಲುವಿಗೆ ಮನಸೋತ ಸೀತೆ ಅದನ್ನು ಕೈಗೆತ್ತಿಕೊಳ್ಳುತ್ತಾಳೆ. ಆಕೆಯಿಂದ ತಪ್ಪಿಸಿಕೊಂಡ ಜಿಂಕೆ ಓಡುತ್ತಾ ಆಶ್ರಮದ ಅಂಗಳ ದಾಟುತ್ತಿದ್ದಂತೆ ಪೊದರೊಳಗಿಂದ ಹುಲಿಯೊಂದು ಕಾಣಿಸಿಕೊಂಡು ಆ ಜಿಂಕೆ ಮರಿಯನ್ನು ಕಚ್ಚೊಯ್ಯುತ್ತದೆ. ರಾಮಲಕ್ಷ್ಮಣರಿಬ್ಬರೂ ಹುಲಿಯನ್ನು ಬೆನ್ನಟ್ಟಿಕೊಂಡು ಬಹುದೂರ ಸಾಗಿ ಬಾಣವೆಸೆಯುತ್ತಾರೆ. ಹುಲಿಯು ಮಾರೀಚ, ಜಿಂಕೆಮರಿ, ಶೂರ್ಪನಖಿ – ರೂಪತಾಳಿ ಸಾಯುತ್ತಾರೆ. ಈ ಸಂದರ್ಭದಲ್ಲಿ ತನ್ನ ಬುಟ್ಟಿಯಲ್ಲಿ ಸೀತೆಯನ್ನು ತುಂಬಿಕೊಂಡು ಲಂಕೆಗೆ ಒಯ್ಯುತ್ತಾನೆ ಮಲೆಕುಡಿಯ (ರಾವಣ).

7) ಜಟಾಯು ಹಕ್ಕಿಯಲ್ಲ. ತುಳುನಾಡಿನ ಬೇದಿಗಳಲ್ಲಿ ಕಾಣಿಸಿಕೊಳ್ಳುತ್ತಿದ 'ಪಕ್ಕಿಪತ್ತುನಾಯೆ' (ಹಕ್ಕಿ ಹಿಡಿಯುವವನು).

8) ಎಲ್ಲೆಲ್ಲೂ ಕೈಯಾಗಿ ತನ್ನ ಪ್ರತಿಷ್ಠೆಯನ್ನು ಹಬ್ಬಿಸಿಕೊಳ್ಳುವ ಅಬ್ಬರದ ಸರ್ವಾಧಿಕಾರೀ ಶಕ್ತಿಯ ವ್ಯಕ್ತಿರೂಪವೇ ಕಬಂಧ.

9) ಶಬರಿ ರಾಮಭಕ್ತಳೇನೂ ಅಲ್ಲ. ಲೋಕಾನುಭವವುಳ್ಳ ವೃದ್ಧ ಸ್ತ್ರೀ. ಹನುಮಂತನ ಮೂಲಕ ತನ್ನಲ್ಲಿಗೆ ಸುಗ್ರೀವನನ್ನು ಕರೆಸಿ ರಾಮನೊಂದಿಗೆ ಸ್ನೇಹ ಬೆಳೆಸಲು ಕಾರಣಳಾದ, ಅವಳನ್ನು ಕೃತಜ್ಞನಾದ ರಾಮ – ಸುಗ್ರೀವನ ರಕ್ಷಣೆಗೆ ಒಪ್ಪಿಸಿ, ಅಯೋಧ್ಯೆಗೆ ಕರೆದೊಯ್ಯಲು ಮರೆಯುವುದಿಲ್ಲ.

10) ರುಮೆ, ಅಹಲ್ಯೆಯರು ವ್ಯಭಿಚಾರ ನಡೆಸಿದ ಅಪರಾಧಿಗಳಲ್ಲ.

11) ಹನುಮಂತನು ಸ್ವಯಂಪ್ರಭೆಯ ನಗರವನ್ನು ಕಂಡದ್ದು ತನ್ನ ಕನಸಿನಲ್ಲಿ. ಇವನು ಕಡಲನ್ನು ಈಜಿಯೇ ದಾಟುತ್ತಾನೆ. ರಾವಣನು ವಿಭೀಷಣನನ್ನು ಸೆರೆಮನೆ

ಯಲ್ಲಿ ಬಂಧಿಸಿಟ್ಟದ್ದರಿಂದ – ಅವರು ಶ್ರೀರಾಮನ ಪಕ್ಷಕ್ಕೆ ಸೇರಲು ಸಾಧ್ಯವಾಗುವುದಿಲ್ಲ.

12) ಸಮುದ್ರರಾಜನ ವರುಣನ ಸ್ಥಾನದಲ್ಲಿ – ಜೆಸ್ತ ಅಪ್ಪಣ್ಣ (ಜಸ್-ಪೀರು) ನ ಸಹಕಾರದಿಂದ ನಾವೆಗಳ ಮೂಲಕ ಶ್ರೀರಾಮನ ಸೇನೆ (ಕಪಿಸಾಳ್ಯವಲ್ಲ!) ಸಮುದ್ರ ದಾಟುತ್ತದೆ.

ಹೀಗೆ 30 ರಷ್ಟು ಪ್ರಮುಖ ಕಥಾವ್ಯತ್ಯಾಸಗಳನ್ನು ಈ ರಾಮಾಯಣದಲ್ಲಿ ಗುರುತಿಸಬಹುದು. ಇಷ್ಟರಿಂದ ಕಥೆಯನ್ನು ಹೆಚ್ಚು ವಾಸ್ತವಗೊಳಿಸುವುದರೊಂದಿಗೆ ತುಳುನಾಡಿನ ಜೀವನ ಪರಿಸರಗಳ ಚಿತ್ರಣಕ್ಕೆ ಕಾವ್ಯದಲ್ಲಿ ಅವಕಾಶ ಕಲ್ಪಿಸಿದಂತಾಗಿದೆ.

ಬ್ರಹ್ಮನು ವಾಲ್ಮೀಕಿಯನ್ನು ಹರಸಿದ ಕವಿಯ ನುಡಿಗಳು ಈ ಕಾವ್ಯಕೂ ಒಪ್ಪುವಂತಿದೆ, ಒಗ್ಗುವಂತಿದೆ.

.... ಬಾರಿ ಅಚ್ಚಣದ ಕವಿ
ತೆದ ಮರತ ಗೆಲ್ಲ್ ವೆಡ್ ತಾವ್ರೊಂದು ತಟ್ಟೆದಿಂ
ಜಿದಿ ತೊಡ್ಡೆನೆಯ್ತ್ತ ಲೆಕ್ಕಂತಿ ದಿತಿರಿತಿಯಾಯಿ
ರಾಮು ರಾಮುನ್ಪಿನಚ್ಚರೊಳೆ ನೇಪಲ ಬುಳಿಪು
ದೋಟಮುಂಜಾಣೆಯಾಲ. (ಪಂಕ್ತಿ-698-702)

ಕವಿತಾ ಶಾಖೆಯನ್ನೇರಿ 'ರಾಮ ರಾಮ' ಎಂದು ಕುಕಿಲಿಡುವ ಕೋಗಿಲೆ – ಸಂಸ್ಕೃತದ ಆದಿಕವಿ ವಾಲ್ಮೀಕಿ ಅಮರ! ಮುಂದಾರ ರಾಮಾಯಣದ 'ಪುಂಚದ ಬಾಲೆ' (ವಾಲ್ಮೀಕಿ)ಯ ನೆನಪೂ ಚಿರಸ್ಥಾಯಿ.

ಕೊಂಡಹಾಯುವ ಸಂಪ್ರದಾಯ

—ಡಾ|| ತೀ. ನಂ. ಶಂಕರನಾರಾಯಣ

೧

ಅಗ್ನಿಷ್ಟಿಕೆಯಲ್ಲಿನ ಅಥವಾ ಒಲೆಯೊಳಗಿನ ಕೆಂಡವನ್ನು ಕೈಯಿಂದ ಮುಟ್ಟಿ ತೆಗೆಯದೆ ಇಕ್ಕಳವನ್ನಾಗಲಿ ಬೇರೆ ಯಾವುದೇ ಸಾಧನವನ್ನಾಗಲಿ ಬಳಸಿ ತೆಗೆಯುತ್ತೇವೆ. ಕೈಯಿಂದ ಕೆಂಡವನ್ನು ಮುಟ್ಟಿದರೆ ಅದು ಸುಡುತ್ತದೆ ಎಂಬುದು ಎಲ್ಲರಿಗೂ ಅನುಭವದಿಂದ ತಿಳಿದಿರುವ ಸತ್ಯ. ಇದರಿಂದಾಗಿ ಕೆಂಡದೊಡನೆ ವ್ಯವಹರಿಸುವಾಗ ತುಂಬ ಎಚ್ಚರವಾಗಿರುತ್ತೇವೆ. ಬಿಸಿ ನೀರನ್ನಾಗಲಿ ಉರಿಯನ್ನಾಗಲಿ ಯಾರೂ ಕೂಡ ಕೈಯಿಂದ ಮುಟ್ಟುವುದಿಲ್ಲ : ಶಾಖ ತಟ್ಟಿ ಮೈಸುಡದಂತೆ ಸುರಕ್ಷಿತವಾದ ದೂರದಲ್ಲಿ ನಿಲ್ಲುತ್ತೇವೆ. ಮಗೂ ಕೂಡ ಒಮ್ಮೆ ಬೆಂಕಿಯಲ್ಲಿ ಕೈ ಸುಟ್ಟುಕೊಂಡರೆ ಪುನಃ ಪ್ರಯೋಗಮಾಡಲು ಹೋಗುವುದಿಲ್ಲ ಬೆಂಕಿಯನ್ನು ಕಂಡರೆ ಹೆದರುತ್ತದೆ. ದಿನ ನಿತ್ಯದ ಸಾಮಾನ್ಯ ಪ್ರಸಂಗಗಳಲ್ಲಿ ಬೆಂಕಿಯ ಬಗ್ಗೆ ಇಷ್ಟು ಎಚ್ಚರಿಕೆಯಿಂದಿರುವ ಜನ ದೇವರ ವಿಷಯದಲ್ಲಿ, ಧಾರ್ಮಿಕ ವಿಷಯಗಳಲ್ಲಿ ಅಪಾಯವನ್ನು ಲೆಕ್ಕಿಸದೆ ಕೆಲವು ಸಾಹಸಗಳಲ್ಲಿ ತೊಡಗುತ್ತಾರೆ. ಈ ಬಗೆಯ ಸಾಹಸ ಕಾರ್ಯಗಳಲ್ಲಿ ಕೊಂಡಹಾಯುವ ಸಂಪ್ರದಾಯವೂ ಒಂದು.

ಕೊಂಡಹಾಯುವ ದೃಶ್ಯವನ್ನು ನೋಡುವುದು ರೋಮಾಂಚಕಾರಿಯಾದ ಅನುಭವ. ಇದರ ಬಗ್ಗೆ ಹೆಚ್ಚಿನ ವಿವರಗಳನ್ನು ತಿಳಿದು ಈ ಸಂಪ್ರದಾಯದ ಸ್ವರೂಪವನ್ನು ತಿಳಿಯುವ ಪ್ರಯತ್ನ ಮಾಡಬೇಕು. ಕರ್ನಾಟಕದಲ್ಲಿ ಗ್ರಾಮದೇವತೆಗಳ ಪ್ರೀತ್ಯರ್ಥವಾಗಿ ನಡೆಯುವ ಈ ಸಂಪ್ರದಾಯವನ್ನು ಇಲ್ಲಿ ವಿವರಿಸಲಾಗಿದೆ. ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕಿಗೆ ಸೇರಿದ ದಬ್ಬೆಗಟ್ಟ ಗ್ರಾಮದ ಗ್ರಾಮದೇವತೆಯಾದ ಕೆಂಡಪ್ಪ ಎಂಬ ದೇವತೆಯ ಸಮ್ಮುಖದಲ್ಲಿ ಜರುಗುವ ಕೊಂಡಹಾಯುವ ಸಂಪ್ರದಾಯಗಳು ಈ ರೀತಿ ಇವೆ. ದಬ್ಬೆಗಟ್ಟದ 'ಕೆಂಡ' ಚೈತ್ರಮಾಸದಲ್ಲಿ ನಡೆಯುತ್ತದೆ. ಕೆಂಡಪ್ಪದೇವತೆಯ ಪ್ರೀತ್ಯರ್ಥವಾಗಿ ಪ್ರತಿವರ್ಷ ಭಕ್ತಾದಿಗಳಿಂದ ಕೆಂಡಹಾಯುವ ಆಚರಣೆ ನಡೆಯುತ್ತದೆ. ಇಲ್ಲಿ ಕೆಂಡಹಾಯುವುದು ಧಾರ್ಮಿಕವಾದ

ಆಚರಣೆ. ಇದು ಈ ಸಂದರ್ಭದಲ್ಲಿ ಈ ದೇವರಪೂಜೆ ಹಾಗೂ ಉತ್ಸವದಲ್ಲಿ ಇದು ಪ್ರಮುಖವಾದ ಭಾಗ. ಕೆಂಡಕ್ಕೆ ಬೇಕಾದ ಸೌದೆ ತರುವುದೂ ನಿಯಮಬದ್ಧವಾಗಿಯೇ ನಡೆಯಬೇಕು. ಈ ಸೌದೆ ತರುವುದಕ್ಕೆ ಕೆಲವರನ್ನು ನೇಮಿಸುತ್ತಾರೆ. ಇವರು ಸ್ನಾನಮಾಡಿ, ಮಡಿಯಾಗಿರಬೇಕು. ಮಡಿಯಲ್ಲಿಯೇ ಕಾಡಿಗೆ ಹೋಗಿ ಸೌದೆ ತರುತ್ತಾರೆ. ಮಾವಿನಸೌದೆ, ಹಿಪ್ಪೆಸೌದೆ, ಹುಣಿಸೇಸೌದೆ—ಈ ಮೂರು ಬಗೆಯ ಸೌದೆಗಳ ತುಂಡುಗಳನ್ನು ಕೆಂಡಪ್ಪದೇವರ ದೇವಸ್ಥಾನದ ಎದುರಿನಲ್ಲಿ ಒಟ್ಟುತ್ತಾರೆ. ಈ ಕೊರಡುಗಳನ್ನು ಸೀಳಿ ರಾಶಿ ಹಾಕುತ್ತಾರೆ. ಈ ಸೌದೆಯನ್ನು ಕಾಯಬೇಕಾದ ತಳವಾರ ಐದು ದಿನಗಳ ಹಿಂದಿನಿಂದಲೂ ಎಳನೀರು ಕುಡಿದು, ಬಾಳೆಹಣ್ಣು ಮಾತ್ರ ತಿಂದು, ನೇಮದಿಂದಿರುತ್ತಾನೆ. ಕೆಂಡಹಾಯಬೇಕಾಗಿರುವ ಹಿಂದಿನದಿನ ರಾತ್ರಿ ದೇವರಿಗೆ ಮಾಡಿದ ಮಂಗಳಾರತಿಯ ಜ್ವಾಲೆಯಿಂದ, ದೇವರನ್ನು ಎದುರಿಗೆ ನಿಲ್ಲಿಸಿಕೊಂಡು ಸೌದೆಯ ಗುಡ್ಡೆಯನ್ನು ಹಚ್ಚುತ್ತಾರೆ. ರಾತ್ರಿಯೆಲ್ಲಾ ಸೌದೆ ಹತ್ತಿಕೊಂಡು ಉರಿದು ಬೆಳಗಾಗುವ ವೇಳೆಗೆ ಕೆಂಡವಾಗಿರುತ್ತದೆ. ಈ ಕೆಂಡವನ್ನು ಸಮತಲವಾಗಿ ಹರಡುತ್ತಾರೆ. ಸುಮಾರು ಆರು ಅಡಿ ಉದ್ದ, ನಾಲ್ಕು ಅಡಿ ಅಗಲ, ಎರಡು ಅಡಿ ಎತ್ತರ ಬರುವಂತೆ ಕೆಂಡವನ್ನು ಹರಡುತ್ತಾರೆ. ಕೆಂಡದಲ್ಲಿರುವ ಕೊಳ್ಳಿಗಳನ್ನು ತೆಗೆಯುತ್ತಾರೆ. ಕೆಂಡದ ಮೇಲೆ ಶೇಖರವಾಗಿರುವ ಬೂದಿಯನ್ನು ದೊಡ್ಡ ಬೀಸಣಿಗೆಗಳಿಂದ ಬೀಸಿ, ಕೇವಲ ಕೆಂಡ ಮಾತ್ರ ಉಳಿಯುವಂತೆ ವ್ಯವಸ್ಥೆಮಾಡುತ್ತಾರೆ. ದೇವರಿಗೆ ಮಂಗಳಾರತಿ ಮಾಡಿ ಎಲ್ಲರಿಗೂ ಮಂಗಳಾರತಿಯನ್ನು ಕೊಡುತ್ತಾರೆ. ಅನಂತರ ದೇವರನ್ನು ಕೆಂಡದ ಕೊಂಡದ ಸುತ್ತಲೂ ಮೂರು ಬಾರಿ ಪ್ರದಕ್ಷಿಣೆ ಬರುತ್ತಾರೆ. ಕೊಂಡಹಾಯಬೇಕಾಗಿರುವ ಜನರೂ ದೇವರ ಹಿಂದೆಯೇ ಕೊಂಡದ ಸುತ್ತ ಮೂರು ಬಾರಿ ಪ್ರದಕ್ಷಿಣೆ ಬರುತ್ತಾರೆ. ಕೆಂಡ ಹಾಯುವವರೆಲ್ಲರೂ ಮೂರು ಹೊತ್ತು ಉಪವಾಸ ಇರುತ್ತಾರೆ. ಮೊದಲು ದಬ್ಬೆಗಟ್ಟಿದ ಶಾನುಭೋಗರು ದೇವರ ಬಸವನನ್ನು ಹಿಡಿದುಕೊಂಡು ಕೆಂಡವನ್ನು ಪ್ರವೇಶಮಾಡುತ್ತಾರೆ. ಅನಂತರ ದೇವರನ್ನು ಪಲ್ಲಕ್ಕಿಯಲ್ಲಿ ಹೊತ್ತುಕೊಂಡ ಜನ ಕೆಂಡ ತುಳಿಯುತ್ತಾರೆ. ಇವರ ಹಿಂದೆ ಕೆಂಡ ತುಳಿಯುವುದಾಗಿ ಹರಸಿಕೊಂಡ ಜನ ಹಾದು ಬರುತ್ತಾರೆ. ದೇವರ ಬಸವ ಕೆಂಡದಲ್ಲಿ ಕಾಲಿಟ್ಟಾಗ ಅದರ ಕಾಲಿನ ಗೊರಸು ಕೆಂಡದಲ್ಲಿ ಸಂಪೂರ್ಣವಾಗಿ ಮುಳುಗಿರಬೇಕು. ಇಲ್ಲದಿದ್ದರೆ ಬಸವನನ್ನು ಕೊಂಡಹಾಯಲು ಬಿಡುವುದಿಲ್ಲ. ಅದು ಕೆಂಡದಿಂದ ಹೊರಗೆ ನಿಲ್ಲುತ್ತದೆ. ಆಗ ಗ್ರಾಮದ ಪ್ರಮುಖರು ಕೆಂಡಪ್ಪದೇವರಿಗೆ ಅಡ್ಡಬಿದ್ದು ಮುಂದಿನ ವರ್ಷ ಹೆಚ್ಚು ಕೆಂಡ ಮಾಡಿಸುವೆವು ಎಂದೂ ಈ ಬಾರಿ ತಮ್ಮ ತಪ್ಪನ್ನು ಮನ್ನಿಸಬೇಕೆಂದೂ ಪ್ರಾರ್ಥನೆ ಮಾಡಿಕೊಳ್ಳುತ್ತಾರೆ. ಅನಂತರ ಬಸವ ಕೊಂಡವನ್ನು ಪ್ರವೇಶಮಾಡುತ್ತದೆ. ಕೊಂಡಹಾಯ್ದು ಹೊರಕ್ಕೆ ಬಂದು ಕೊಂಡದ ಸುತ್ತ ಎಲ್ಲರೂ ಒಂದು ಸಲ ಪ್ರದಕ್ಷಿಣೆ

ಬರುತ್ತಾರೆ. ಹರಕೆ ಮಾಡಿಕೊಂಡ ಕಾರಣದಿಂದಾಗಿ ಕೊಂಡ ಹಾಯ್ದು ಬಂದ ಜನ ದೇವರ ಎದುರಿನಲ್ಲಿ ನಿಲ್ಲುತ್ತಾರೆ. ಆಗ ದೇವರ ಪೂಜಾರಿ ಈ ಭಕ್ತರಲ್ಲಿ ಒಬ್ಬೊಬ್ಬರ ತಲೆಯ ಮೇಲೆಯೂ ಒಂದೊಂದು ಬಾಳೆ ಎಲೆಯನ್ನಿಟ್ಟು ಅದರ ಮೇಲೆ ಒಂದೊಂದು ಬೊಗಸೆ ಕೆಂಡವನ್ನು ಸುರಿದು ತಕ್ಷಣ ಒಂದೊಂದು ಚೊಂಬು ನೀರು ಹುಯ್ಯುತ್ತಾನೆ. ಅಂತೂ ಈ 'ಕೆಂಡದ ಸ್ನಾನ' ಈ ಭಕ್ತರಿಗೆ ದೇವರ ಎದುರಿನಲ್ಲಿ ನಡೆಯುತ್ತದೆ. 'ಕೆಂಡಸ್ನಾನ' ಮಾಡಿದ ಭಕ್ತರು ಕೊಂಡದ ಸುತ್ತ ಒಂದು ಸಲ ಪ್ರದಕ್ಷಿಣೆ ಬರುತ್ತಾರೆ. ಅನಂತರ ದೇವರ ಪೂಜಾರಿ ಕೊಂಡದ ಸುತ್ತ ಮೂರು ಸುತ್ತು ಬಂದು ಕೊಂಡದೊಳಕ್ಕೆ ಎರಡು ಕೈಗಳನ್ನು ಹಾಕಿ, ಅಲ್ಲಿರುವ ತಟ್ಟೆಗೆ ಮೂರು ಬೊಗಸೆ ಕೆಂಡ ಹಾಕಿ, ತಟ್ಟೆಯಲ್ಲಿನ ಕೆಂಡವನ್ನು ಸುತ್ತಲೂ ಎರಚುತ್ತಾನೆ. ಅನಂತರ ಕೆಂಡದಿಂದ ತುಂಬಿದ ತಟ್ಟೆಯನ್ನು ತೆಗೆದುಕೊಂಡು ಹಿಂದುಮುಂದಾಗಿ ನಿಂತು ದೇವರಿಗೆ ಕೆಂಡದ ನೈವೇದ್ಯ ಮಾಡುತ್ತಾನೆ. ಅನಂತರ ದೇವರಿಗೆ ಮಂಗಳಾರತಿ ಮಾಡುತ್ತಾನೆ. ಬಿಲ್ವಪತ್ರೆಯ ಐದು ದಳಗಳನ್ನು ತಂದು ಅವನ್ನು ಕೊಂಡದೊಳಕ್ಕೆ ಕೆಂಡದ ಮೇಲೆ ಹಾಕುತ್ತಾನೆ. ಮಾರನೆಯದಿನ ಬೆಳಗಿನವರೆಗೂ ಆ ಬಿಲ್ವಪತ್ರೆಯ ದಳಗಳು ಬಾಡಿಹೋಗದೆ ಹಸಿಯಾಗದೆ ಇದ್ದರೆ ಊರಿಗೆ ಶುಭವಾಗುವುದೆಂದೂ ಬಾಡಿಹೋದರೆ ಊರಿಗೆ ಹಾನಿಯೆಂದೂ ಜನ ನಂಬುತ್ತಾರೆ. ಬಿಲ್ವಪತ್ರೆ ಬಾಡಿಹೋಗಿದೆಯೆ ಅಥವಾ ಇಲ್ಲವೆ ಎಂಬುದನ್ನು ಮಾರನೆಯದಿನ ಬಂದು ಪರೀಕ್ಷಿಸುತ್ತಾರೆ. ಬಿಲ್ವಪತ್ರೆ ಬಾಡಿಹೋಗಿದ್ದರೆ ಆಚರಣೆಯಲ್ಲಿ ಏನೋ ದೋಷವಾಗಿದೆಯೆಂದೂ ಮುಂದಿನಬಾರಿ ಅದಕ್ಕೆ ಪ್ರಾಯಶ್ಚಿತ್ತ ಮಾಡಿಕೊಳ್ಳುವುದಾಗಿಯೂ ಪ್ರತಿಜ್ಞೆ ಮಾಡುತ್ತಾರೆ. ಇಲ್ಲಿಗೆ ಕೆಂಡ ತುಳಿಯುವ ಆಚರಣೆ ಮುಕ್ತಾಯವಾಗುತ್ತದೆ. ದಬ್ಬೆಗಟ್ಟದಲ್ಲಿ ನಡೆಯುವ ಕೆಂಡ ತುಳಿಯುವ ಆಚರಣೆ ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿಯೇ ಪ್ರಸಿದ್ಧವಾದುದು. ಈ ತಾಲ್ಲೂಕಿನ ಇತರ ಕೆಲವು ಗ್ರಾಮಗಳಲ್ಲಿಯೂ ಕೆಂಡ ತುಳಿಯುವ ಸಂಪ್ರದಾಯವಿದೆ. ಆದರೆ ಇವುಗಳಲ್ಲೆಲ್ಲಾ ದಬ್ಬೆಗಟ್ಟದ 'ಕೆಂಡ' ಹೆಚ್ಚಿನ ಪ್ರಸಿದ್ಧಿ ಪಡೆದಿದೆ. ಬಯಲು ಸೀಮೆಯಲ್ಲಿ ನಡೆಯುವ ಕೊಂಡಹಾಯುವ ಆಚರಣೆಗಳು ಸಾಮಾನ್ಯವಾಗಿ ಈ ರೀತಿಯಲ್ಲಿ ಇರುತ್ತವೆ. ಸಾಮಾನ್ಯವಾಗಿ ಈ ಉದ್ದೇಶಗಳನ್ನೇ ಹೊಂದಿರುತ್ತವೆ.

ಆಚರಣೆಗೆ ಸಂಬಂಧಿಸಿದಂತೆ ಪ್ರಾದೇಶಿಕವಾದ ವ್ಯತ್ಯಾಸಗಳು ಎಷ್ಟೇ ಇದ್ದರೂ ಸಾಮಾನ್ಯವಾಗಿ ಕೊಂಡಹಾಯುವ ಸಂಪ್ರದಾಯದಲ್ಲಿ ಕೆಳಕಂಡ ಅಂಶಗಳು ಇದ್ದೇ ಇರುತ್ತವೆ. ಕೆಂಡದಿಂದ ತುಂಬಿರುವ ವಿಶಾಲವಾದ ಒಂದು ಗುಂಡಿ ; ಗುಂಡಿಯ ಭರ್ತಿ ಸೌದೆಯ ತುಂಡುಗಳನ್ನು ತುಂಬಿ ಅದಕ್ಕೆ ಬೆಂಕಿ ಹಚ್ಚಿ ಕೆಂಡವನ್ನು ಮಾಡುವುದು ; ಕೆಂಡದ ಮೇಲಿನ ಬೂದಿಯನ್ನು ಹಾರಿಸಿ ಕೇವಲ ಕೆಂಡ ಮಾತ್ರ ಉಳಿಯುವಂತೆ ವ್ಯವಸ್ಥೆ ಮಾಡುವುದು. ದೇವರ ಪೂಜಾರಿ ಅಥವಾ ದೇವರಿಗೆ ಹರಸಿಕೊಂಡ ಜನ

ಒಬ್ಬರ ಹಿಂದೊಬ್ಬರು 'ದೇವರ ಮೇಲೆ ಭಾರ ಹಾಕಿ' ದೇವರಲ್ಲಿ ತಮಗಿರುವ ನಂಬಿಕೆಯ ಬಲದಿಂದ ನಾಲ್ಕಾರು ಹೆಜ್ಜೆಗಳನ್ನು ಹಾಕಿ ಕೆಲವಾರು ಸೆಕೆಂಡುಗಳ ಕಾಲದಲ್ಲಿ ಇಪ್ಪತ್ತು ಅಡಿ ದೂರವಿರುವ ಕೆಂಡದ ಕೊಂಡವನ್ನು ಹಾಯ್ದು ಬರುವುದು : ಕೆಂಡದ ಮೇಲೆ ಅವರು ನಡೆದುಬಂದರೂ ಕೂಡ ಅವರ ಪಾದಗಳಾಗಲಿ, ಶರೀರದ ಇತರ ಭಾಗಗಳಾಗಲಿ, ಶರೀರದ ಮೇಲಿನ ಬಟ್ಟೆಯಾಗಲಿ ಸುಟ್ಟಿರದಿರುವುದು : ಹೀಗೆ ಕೆಂಡ ಈ ವ್ಯಕ್ತಿಗಳ ಶರೀರವನ್ನು ಸುಡದಿರಲು ಈ ವ್ಯಕ್ತಿಗಳು ದೇವರಲ್ಲಿ ಇಟ್ಟಿರುವ ನಂಬಿಕೆಯೇ ಕಾರಣವೆಂದು ಜನ ಹಾಗೂ ಕೊಂಡ ಹಾಯ್ದ ವ್ಯಕ್ತಿಗಳು ನಂಬುವುದು : ನಂಬಿಕೆ ಇಲ್ಲದ, ನಿಯಮಗಳನ್ನು ಸರಿಯಾಗಿ ಪಾಲಿಸದ ವ್ಯಕ್ತಿ ಕೆಂಡದ ಮೂಲಕ ಹಾಯ್ದು ಬಂದರೆ ಅವರ ಕಾಲು ಸುಟ್ಟೇ ಸುಡುವುದೆಂದು ಜನ ನಂಬುವುದು : ಅಂತೂ ಒಟ್ಟಾರೆ ದೇವರನ್ನು ನಂಬಿದ ವ್ಯಕ್ತಿ ಕೊಂಡ ಹಾಯ್ದರೆ ಅವನ ಕಾಲು ಸುಡುವುದಿಲ್ಲ : ದೇವರನ್ನು ನಂಬದಿದ್ದರೆ ಕಾಲು ಸುಡುವುದು ಖಂಡಿತ ಎಂಬುದು ಜನಸಾಮಾನ್ಯರ ದೃಢವಾದ ನಂಬಿಕೆ. ಈ ಸಂಪ್ರದಾಯ ಈಚಿನದೇನೂ ಅಲ್ಲ : ಇದಕ್ಕೆ ಹಲವಾರು ಶತಮಾನಗಳ ಇತಿಹಾಸವಿದೆ. ಹಾಗೆಯೇ ಈ ಸಂಪ್ರದಾಯ ಕೇವಲ ಕರ್ನಾಟಕಕ್ಕೆ ಮಾತ್ರ ಸೀಮಿತವಾದುದೇನೂ ಅಲ್ಲ : ಪ್ರಪಂಚದ ಹಲವಾರು ದೇಶಗಳಲ್ಲಿ ಬಳಕೆಯಲ್ಲಿತ್ತು, ಇಂದಿಗೂ ಬಳಕೆಯಲ್ಲಿದೆ. ಈ ಸಂಪ್ರದಾಯ ಹಿಂದೂಗಳಲ್ಲಿ ಮಾತ್ರವಲ್ಲದೆ ಮುಸಲ್ಮಾನರಲ್ಲಿ ಮತ್ತು ಇತರರಲ್ಲಿ ಬಳಕೆಯಲ್ಲಿದೆ.

೨

ಕೊಂಡಹಾಯುವ ಸಂಪ್ರದಾಯ ಹಲವಾರು ಶತಮಾನಗಳ ಕಾಲದಿಂದ ಜನರನ್ನು ಆಶ್ಚರ್ಯಚಕಿತರನ್ನಾಗಿ ಮಾಡಿದೆ. ಇದನ್ನು ವೈಜ್ಞಾನಿಕವಾಗಿ ಪರೀಕ್ಷಿಸಲು ಮತ್ತು ಪ್ರಯೋಗಕ್ಕೆ ಒಳಪಡಿಸಲು ಸಾಧ್ಯವಾಗದ್ದರಿಂದ ಬಹಳ ಕಾಲದವರೆಗೆ ಇದೊಂದು ಒಗಟಾಗೇ ಉಳಿದಿತ್ತು. ಆದರೆ ೧೯೩೫ ರಿಂದ ೧೯೩೭ ರ ತನಕ ಇಂಗ್ಲೆಂಡಿನಲ್ಲಿ ಹ್ಯಾರಿಪ್ರೈಸ್ ಎಂಬ ಅತೀಂದ್ರಿಯ ಸಂಶೋಧಕ ಈ ಬಗ್ಗೆ ವೈಜ್ಞಾನಿಕ ಪ್ರಯೋಗಗಳನ್ನು ನಡೆಸಿ ಇದರ ರಹಸ್ಯವನ್ನು ಭೇದಿಸಿದ.

ಹ್ಯಾರಿಪ್ರೈಸ್ ತುಂಬ ಸಾಹಸಶೀಲ ವ್ಯಕ್ತಿ. ಯಾವುದನ್ನೂ ಕಣ್ಣುಮುಚ್ಚಿ ಒಪ್ಪಿಕೊಳ್ಳದ ವೈಜ್ಞಾನಿಕ ದೃಷ್ಟಿಯವನು. ಜಗತ್ತಿನಲ್ಲಿ ನಡೆಯುವ ಅತೀಂದ್ರಿಯವಾದ ಘಟನೆಗಳಿಗೆ ವೈಜ್ಞಾನಿಕ ಕಾರಣಗಳನ್ನು ಹುಡುಕುವ ಪ್ರಯತ್ನ ಆ ವೇಳೆಗಾಗಲೇ ಸಾಕಷ್ಟು ನಡೆದಿತ್ತು. ದೆವ್ವ, ಭೂತ, ಭವಿಷ್ಯ ಮೊದಲಾದ ಅತೀಂದ್ರಿಯ ವಿಷಯಗಳನ್ನು ಅಧ್ಯಯನ ಮಾಡುವ ಶಾಸ್ತ್ರವನ್ನು ಅತೀಂದ್ರಿಯ ಸಂಶೋಧನೆ ಎಂದು

ಕರೆಯುತ್ತಿದ್ದರು. ಹ್ಯಾರಿಪ್ರೈಸ್ ಈ ಕ್ಷೇತ್ರದಲ್ಲಿಯೇ ಸಂಶೋಧನೆಯನ್ನು ನಡೆಸುತ್ತಿದ್ದುದರಿಂದ ಸಹಜವಾಗಿಯೇ ಇವನ ಗಮನ ಕೊಂಡಹಾಯುವುದರ ಸಂಶೋಧನೆಯತ್ತ ತಿರುಗಿತು. ಆ ತನಕ ಲಭ್ಯವಾಗಿದ್ದ ಎಲ್ಲಾ ವೈಜ್ಞಾನಿಕ ತಿಳಿವಳಿಕೆ ಮತ್ತು ಉಪಕರಣಗಳನ್ನು ಬಳಸಿಕೊಂಡು ತುಂಬ ವೈಜ್ಞಾನಿಕ ರೀತಿಯಲ್ಲಿ ಹಲವಾರು ಜನ ಗಣ್ಯವಿಜ್ಞಾನಿಗಳು, ಡಾಕ್ಟರುಗಳು ಮತ್ತು ಇತರ ಬುದ್ಧಿ ಜೀವಿಗಳ ಸಮ್ಮುಖದಲ್ಲಿ ಈತ ೧೯೩೫ ರಲ್ಲಿ ಒಂದು ಪ್ರಯೋಗವನ್ನೂ ೧೯೩೭ ರಲ್ಲಿ ಎರಡು ಪ್ರಯೋಗಗಳನ್ನೂ ನಡೆಸಿ ಕೊಂಡಹಾಯುವ ಸಂಪ್ರದಾಯದ ಬಗ್ಗೆ ಕೆಲವು ಖಚಿತ ಅಭಿಪ್ರಾಯಗಳಿಗೆ ಬಂದ.

ಯೂನಿವರ್ಸಿಟಿ ಆಫ್ ಲಂಡನ್ ಕೌನ್ಸಿಲ್ ಫಾರ್ ಸೈಕಿಕಲ್ ಇನ್ವೆಸ್ಟಿಗೇಷನ್ ಎಂಬ ಸಮಿತಿಯ ಆಶ್ರಯದಲ್ಲಿ ಸರ್ರೆ ಪ್ರಾಂತ್ಯದ ಕಾರ್‌ಷಲ್ಟನ್ ಎಂಬ ಊರಿನಲ್ಲಿ ಖಾಸಗಿ ವ್ಯಕ್ತಿಯೊಬ್ಬರ ಮೈದಾನದಲ್ಲಿ ೧೯೩೫ರ ಸೆಪ್ಟೆಂಬರ್ ೯ ಮತ್ತು ೧೭ ರಂದು ಮೊದಲನೆಯ ಪ್ರಯೋಗವನ್ನು ನಡೆಸಲಾಯಿತು. ಇದರಲ್ಲಿ ಕೊಂಡ ಹಾಯ್ದ ವ್ಯಕ್ತಿ ಕೂಡಾ ಬಕ್ಸ್ ಎಂಬ ಕಾಶ್ಮೀರಿ; ಆ ಸಂದರ್ಭದಲ್ಲಿ ಲಂಡನ್ನಿನಲ್ಲಿದ್ದ ಆತ ಹ್ಯಾರಿಪ್ರೈಸ್ 'ಟೈಮ್ಸ್' ಪತ್ರಿಕೆಯಲ್ಲಿ ಕೊಟ್ಟಿದ್ದ ಪ್ರಕಟಣೆಯ ಸವಾಲನ್ನು ಒಪ್ಪಿ ಕೊಂಡಹಾಯಲು ಒಪ್ಪಿದ. ಪ್ರಯೋಗದ ವಿವರಗಳು ಹೀಗಿವೆ: ಕೊಂಡದ ಪ್ರಮಾಣ: ೧೧ ಅಡಿ ಉದ್ದ, ೬ ಅಡಿ ಅಗಲ ೯ ಅಂಗುಲ ಆಳ; ಈ ಕೊಂಡ ಮಾಡಲು ೭ ಟನ್ ಓಕ್ ಮರದ ಸೌದೆ, ಒಂದು ಟನ್ ಇತರ ಸೌದೆ, ಒಂದು ಲೋಡ್ ಕಲ್ಲಿದ್ದಲು ೧೦ ಗ್ಯಾಲನ್ ಪ್ಯಾರಫಿನ್ ಮತ್ತು ಟೈಮ್ಸ್ ಪತ್ರಿಕೆಯ ೫೦ ಪ್ರತಿ ಇಷ್ಟನ್ನು ಬಳಸಲಾಯಿತು. ಕೆಂಡವನ್ನು ಕೊಂಡದ ಭರ್ತಿ ಸಮತಲವಾಗಿ ಹರಡಲಾಯಿತು. ಕೊಂಡದ ಮೇಲ್ಭಾಗದ ಉಷ್ಣತೆ ೪೩೦° C ಇತ್ತು. ಒಳಗಿನ ಉಷ್ಣತೆ ೧೪೦೦° C. ಕೂಡಾಬಕ್ಸ್ ತುಂಬ ಆತ್ಮ ವಿಶ್ವಾಸದಿಂದ ಈ ಕೊಂಡವನ್ನು ಬರಿಗಾಲಿನಲ್ಲಿ ಹಾಯ್ದು ಪ್ರತಿಸಾರಿ ಹೋದಾಗಲೂ ಕೊಂಡದ ಮೇಲೆ ಒಂದೊಂದು ಸಲಕ್ಕೆ ೪ ಹೆಜ್ಜೆಗಳನ್ನು ಇಟ್ಟಿದ್ದ. ಈ ಎರಡು ಬಾರಿಯೂ ಅವನ ಕಾಲು ಸುಡಲಿಲ್ಲ. ಈತನನ್ನು ಅನುಸರಿಸಿದ ಕೆಲವರು ಕಾಲು ಸುಟ್ಟುಕೊಂಡರು. ಈ ಪ್ರಯೋಗದಿಂದ ಹ್ಯಾರಿಪ್ರೈಸ್ ಕೆಲವು ವಿಷಯಗಳನ್ನು ಕಂಡುಕೊಂಡ.

೧. ಕೊಂಡ ಹಾಯುವುದಕ್ಕೆ ಮೊದಲು ಅಂಗಾಲಿಗೆ ಯಾವ ರಕ್ಷಣೆಯನ್ನೂ ಒದಗಿಸಿಕೊಳ್ಳಬೇಕಾದ ಅಗತ್ಯವಿಲ್ಲ. ಬರಿಗಾಲಿನಲ್ಲಿಯೇ ಕೊಂಡಹಾಯಲು ಸಾಧ್ಯ. ನಿದರಿಸಿ ಆತ್ಮವಿಶ್ವಾಸದಿಂದ ಕೊಂಡ ಹಾಯುವುದು ಬಲು ಅಗತ್ಯ.

೨. ಕೊಂಡ ಹಾಯಲು ಅಂಗಾಲಿನ ಚರ್ಮ ದಪ್ಪವಾಗಿದ್ದು, ಜಡ್ಡು ಕಟ್ಟಿರಲೇಬೇಕೆಂಬ ನಿಯಮವಿಲ್ಲ. ಅಂಗಾಲು ಮೃದುವಾಗಿದ್ದರೂ ಕೆಂಡದ ಮೇಲೆ ನಡೆ

ಯಲು ಸಾಧ್ಯ (ಕೂಡಾಬಕ್ಸ್‌ನ ಕಾಲು ಮೃದುವಾಗಿತ್ತು : ಅವನನ್ನು ಹಿಂಬಾಲಿಸಿ ದವರ ಅಂಗಾಲುಗಳು ಒರಟಾಗಿದ್ದವು.)

೨. ಕೆಂಡ ಹಾಯುವ ಮೊದಲು ಉಪವಾಸ ಮಾಡುವುದು ಕೆಲವು ನಿಯಮ ಗಳನ್ನು ಪಾಲಿಸುವುದು ಮೊದಲಾದ ಧಾರ್ಮಿಕ ಕ್ರಿಯೆಗಳ ಅಗತ್ಯವಿಲ್ಲ. ದೇವರನ್ನು ನಂಬಲೇಬೇಕಾದ ಅಗತ್ಯವಿಲ್ಲ. ಜೊತೆಗೆ ಕೆಂಡ ಹಾಯಲು ಮೊದಲು ಒಂದಿಯನ್ನು ತೆಗೆಯಬೇಕು.

೪. ಪಾದಗಳು ತೇವವಾಗಿರಬೇಕಾಗಿಲ್ಲ. ವಾಸ್ತವವಾಗಿ ಕಾಲು ಒದ್ದೆಯಾಗಿ ದ್ದರೆ ಕೆಂಡ ಕಾಲಿಗಂಟಿ ಸುಡುತ್ತದೆ.

೫. ಕೆಂಡ ಹಾಯುವುದು ಕಣ್ಕಟ್ಟಲ್ಲ: ವಾಸ್ತವವಾದ ಘಟನೆ. ಕೆಂಡದ ಮೇಲೆ ಕಾಲಿಟ್ಟಾಗ ಅದು ಸುಡದಿರಲು ಕಾರಣವೇನೆಂಬುದನ್ನು ಅಭ್ಯಾಸ ಮಾಡಿದ ಹ್ಯಾರಿಪ್ರೈಸ್ ಅವರಿಗೆ ಈ ಮುಂದಿನ ಮೂರು ಅಂಶಗಳಲ್ಲಿ ಯಾವುದಾದರೂ ಒಂದು ಸಾಧ್ಯವಿರಬಹುದೆನಿಸಿತು.

೧. ಕೇವಲ ನಂಬಿಕೆಯಿಂದ ಕೆಂಡ ಹಾಯಲು ಸಾಧ್ಯ.

೨. ಅಂಗಾಲು ಕೆಂಡದ ಮೇಲೆ ಸಂಪರ್ಕದಲ್ಲಿರುವ ಅವಧಿ ತೀರಾ ಕಡಿಮೆ ಯಾಗಿರಬಹುದು.

೩. ನಡಿಗೆಯಲ್ಲಿಯೇ ಕುಶಲತೆಯಿರಬಹುದು.

ಈ ಪ್ರಯೋಗ ಪ್ರಪಂಚದಾದ್ಯಂತ ತುಂಬ ಕುತೂಹಲ ಕೆರಳಿಸಿತು. ೧೯೩೫ ರ ಸೆಪ್ಟೆಂಬರ್ ೨೧ ಮತ್ತು ೨೮ ರ ನೇಚರ್ ಪತ್ರಿಕೆಯಲ್ಲಿ ಇದರ ಸಂಪೂರ್ಣ ವರದಿ ಯನ್ನು ಅಚ್ಚುಮಾಡಲಾಯಿತು. ಅನಂತರ ಪ್ರಪಂಚದ ಪ್ರತಿಯೊಂದು ಪತ್ರಿಕೆ ಯಲ್ಲಿಯೂ ಈ ಬಗ್ಗೆ ವಿವರಗಳು ಪ್ರಕಟವಾದವು. ಭಾರತದಲ್ಲಂತೂ ಕೂಡಾ ಬಕ್ಸ್ ಒಬ್ಬ ಹೀರೋ ಆಗಿಬಿಟ್ಟನೆಂದು ಹ್ಯಾರಿಪ್ರೈಸ್ ಹೇಳಿದ್ದಾನೆ.

ಈ ಘಟನೆಯಿಂದ ಸ್ಫೂರ್ತಿ ಪಡೆದ ಅಹಮದ್ ಹುಸೇನ್ ಎಂಬ ಕಾನ್ಪುರದ ಸಿಪಾಯಿ ೧೯೩೭ ರಲ್ಲಿ ಹ್ಯಾರಿಪ್ರೈಸ್‌ನ ಪ್ರಯೋಗದಲ್ಲಿ ಭಾಗವಹಿಸಲು ಒಪ್ಪಿಕೊಂಡ. ಈತನಿಗೆ ಭಾರತದಲ್ಲಿ ಹಲವಾರು ಬಾರಿ ಕೆಂಡ ಹಾಯ್ದ ಅನುಭವವಿತ್ತು. ಈತ ತನ್ನಲ್ಲಿದ್ದ ಶಕ್ತಿಯಿಂದ ತಾನು ಕಾಲು ಸುಟ್ಟುಕೊಳ್ಳದಂತೆ ಕೆಂಡ ಹಾಯುವುದು ಮಾತ್ರವಲ್ಲದೆ ತನ್ನ ಹಿಂಬಾಲಿಸಿದವರಿಗೂ ಕಾಲು ಸುಡದಂತೆ ಮಾಡುವ ಶಕ್ತಿಯನ್ನು ಹೊಂದಿದ್ದುದಾಗಿ ಘೋಷಿಸಿದ. ಇವನೊಬ್ಬ ಮಾಂತ್ರಿಕ. ಹ್ಯಾರಿಪ್ರೈಸ್ ತನ್ನ ಮೊದಲ ಪ್ರಯೋಗದಲ್ಲಿ ಅಸ್ಪಷ್ಟವಾಗಿದ್ದ ಕೆಲವು ಅಂಶಗಳನ್ನು ಸ್ಪಷ್ಟಗೊಳಿಸಿ

ಕೊಳ್ಳಲು ಅಹಮುದನನ್ನು ಪ್ರಯೋಗಕ್ಕೆ ಒಳಪಡಿಸಿ, ಈ ಪ್ರಯೋಗ ಕೂಡ ಯೂನಿವರ್ಸಿಟಿ ಆಫ್ ಲಂಡನ್ ಕೌನ್ಸಿಲ್ ಫಾರ್ ಸೈಕಿಕಲ್ ಇನ್ವೆಸ್ಟಿಗೇಷನ್ ಎಂಬ ಸಮಿತಿಯ ಆಶ್ರಯದಲ್ಲಿ ಮೊದಲು ಪ್ರಯೋಗ ನಡೆದಿದ್ದ ಸ್ಥಳದಲ್ಲಿಯೇ ನಡೆಯಿತು. ಈ ಬಾರಿಯ ಕೊಂಡ ಹನ್ನೆರಡೂವರೆ ಅಡಿ ಉದ್ದ, ನಾಲ್ಕೂವರೆ ಅಡಿ ಅಗಲ ಮತ್ತು ಒಂದೂಕಾಲು ಅಡಿ ಆಳವಾಗಿತ್ತು. ಉಷ್ಣತೆಯನ್ನು ಕರಾರುವಾಕ್ಕಾಗಿ ಅಳೆಯಲು ಅಂದಿಗೆ ಪ್ರಪಂಚದಲ್ಲಿಯೇ ಅತ್ಯಂತ ಶ್ರೇಷ್ಠ ಉಷ್ಣತಾಮಾಪಕ ಯಂತ್ರದ ತಯಾರಕರೆಂದು ಪ್ರಸಿದ್ಧಿ ಪಡೆದಿದ್ದ ಕೇಂಬ್ರಿಡ್ಜ್ ಇನ್‌ಸ್ಟ್ರುಮೆಂಟ್ ಕಂಪೆನಿಯವರ ಸಹಾಯವನ್ನು ಪಡೆದು ಉಷ್ಣತೆಯನ್ನು ನಿಖರವಾಗಿ ದಾಖಲು ಮಾಡಿಕೊಳ್ಳಲಾಯಿತು. ಕೆಂಡದ ಒಳಭಾಗದ ಉಷ್ಣತೆ 200° C, ಮೇಲ್ಭಾಗದ ಉಷ್ಣತೆ 577° C ಇತ್ತು. ಅಹಮದ್ ಕೊಂಡ ಹಾಯುವ ಮೊದಲು ಮತ್ತು ಅನಂತರ ಅವನ ಅಂಗಾಲನ್ನು ವಿವರವಾಗಿ ಪರೀಕ್ಷಿಸಲಾಯಿತು. ಕೊಂಡ ಹಾಯ್ದ ಅವಧಿಯನ್ನು ಅತ್ಯಂತ ಸೂಕ್ಷ್ಮವಾದ ಗಡಿಯಾರದಿಂದ ಗುರುತಿಸಲಾಯಿತು. ಈ ಪ್ರಯೋಗದಲ್ಲಿ ಅಹಮದ್ ಹುಸೇನನ ಅಂಗಾಲು ಸ್ವಲ್ಪವೂ ಸುಟ್ಟಿರಲಿಲ್ಲ. ಧಾರ್ಮಿಕ ಪ್ರವೃತ್ತಿಯ ಈತ ಕೊಂಡ ಹಾಯುವ ಮೊದಲು ಖುರಾನ್ ಅನ್ನು ಪಠಿಸಿದ್ದ.

ಅಹಮದ್ ಹುಸೇನನ್ನು ೧೯೩೭ ರಲ್ಲಿ ಇನ್ನೊಮ್ಮೆ ಪರೀಕ್ಷೆಗೆ ಒಳಪಡಿಸಲಾಯಿತು. ಈ ಸಂದರ್ಭದಲ್ಲಿ ಅಹಮದ್ ಹುಸೇನ್ ಕೊಂಡದ ಮೇಲೆ ತನ್ನನ್ನು ಹಿಂಬಾಲಿಸಿದವರಿಗೆ ಕಾಲು ಸುಡದಂತೆ ಮಾಡುವ ಶಕ್ತಿಯನ್ನು ಹೊಂದಿರುವನೇ ಎಂಬುದನ್ನು ಪರಿಶೀಲಿಸುವ ಉದ್ದೇಶವಿತ್ತು. ಜಾನ್‌ಕ್ರೇಗಿ, ಮಾರ್ಷಲ್, ಚಾರ್ಲ್ಸ್, ಜೆಕ್ಸ್ ಮತ್ತು ರೆಜಿನಾಲ್ಡ್ ಆಡ್‌ಕಾಕ್ ಎಂಬ ಐದು ಜನರನ್ನು ಆರಿಸಲಾಯಿತು. ಈ ಪ್ರಯೋಗದಲ್ಲಿ ಕೊಂಡದ ಮೇಲ್ಮೈ ಉಷ್ಣತೆ ೭೪೦° C ಹಾಗೂ ಆಂತರಿಕ ಉಷ್ಣತೆ ೭೫೦° C. ಅಹಮದ್ ಹುಸೇನನ್ನು ಹಿಂಬಾಲಿಸಿ ಈ ಐದು ಜನ ಕೊಂಡವನ್ನು ಹಾಯ್ದರು. ಈ ಪ್ರಯೋಗವನ್ನು ಪುನರಾವರ್ತನೆ ಮಾಡಬೇಕೆಂದಾಗ ಅಹಮದ್ ಹುಸೇನ್ ನಿರಾಕರಿಸಿದ. ಆದರೂ ಅವನನ್ನು ಒಪ್ಪಿಸಲಾಯಿತು. ಈ ಬಾರಿ ಕೊಂಡ ಹಾಯ್ದಾಗ ಅವನ ಅಂಗಾಲು ಸುಟ್ಟಿತು ಮತ್ತು ಅವನನ್ನು ಹಿಂಬಾಲಿಸಿದ ಐದು ಜನರಲ್ಲಿ ರೆಜಿನಾಲ್ಡ್ ಆಡ್‌ಕಾಕ್ ಅವರನ್ನು ಬಿಟ್ಟು ಉಳಿದೆಲ್ಲರ ಅಂಗಾಲುಗಳು ಸುಟ್ಟಿದ್ದವೆಂದು ತಿಳಿಯಿತು. ಇವರೆಲ್ಲರನ್ನೂ ಪುನಃ ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿದಾಗ ಅಹಮದ್ ಹುಸೇನನ ಅಂಗಾಲಿನ ಚರ್ಮ ಸ್ವಲ್ಪ ದಪ್ಪವಾಗಿತ್ತೆಂದೂ ಅವನ ಅಂಗಾಲು ಸ್ವಲ್ಪ ಚಪ್ಪಟೆಯಾಗಿತ್ತೆಂದೂ ಭಾರತದಲ್ಲಿ ಬರಿಗಾಲಿನಲ್ಲಿ ನಡೆಯುವ ಅಭ್ಯಾಸವಿತ್ತೆಂದೂ ತಿಳಿಯಿತು. ಆದರೆ ಈ ಯಾವ ಅನುಕೂಲತೆಗಳೂ ಇಲ್ಲದಿದ್ದ ರೆಜಿನಾಲ್ಡ್ ಆಡ್‌ಕಾಕ್ ೭೫೦° C ನ ಉಷ್ಣತೆಯ ಕೊಂಡ ಹಾಯ್ದುದು

ಅತ್ಯಂತ ಅಪೂರ್ವವಾದ ಸಾಧನೆಯೆಂದು ಪರಿಗಣಿಸಲಾಯಿತು. ಈ ಪ್ರಯೋಗದಲ್ಲಿ ಅತ್ಯಂತ ಹೆಚ್ಚಿನ ಆತ್ಮವಿಶ್ವಾಸದಿಂದ ಕೊಂಡಹಾಯ್ದ ವ್ಯಕ್ತಿ ರೆಜಿನಾಲ್ಡ್ ಆಡ್‌ಕಾಕ್ ಮಾತ್ರ. ಇದರಿಂದ ಈ ಮುಂದಿನ ಅಂಶಗಳು ಸ್ಪಷ್ಟವಾಗಿ ತಿಳಿದುವು:

೧. ಕೊಂಡ ಹಾಯುವ ವ್ಯಕ್ತಿ ಆ ಕೆಲಸದಲ್ಲಿ ಕಸುಬುದಾರನಾಗಿರಲಿ ಸಾಮಾನ್ಯನಾಗಿರಲಿ, ಅವನು ಕೆಂಡದ ಮೇಲೆ ನಡೆಯುವಾಗ ಒಂದೊಂದು ಕಾಲಿನ ಎರಡೆರಡು ಹೆಜ್ಜೆಗಳನ್ನಿಡಲು ಮಾತ್ರ ಸಾಧ್ಯ. ಒಂದೊಂದು ಸಲವೂ ಅಂಗಾಲು ಕೆಂಡದ ಮೇಲೆ ೦.೫ ಸೆಕೆಂಡಿನಷ್ಟು ಕಾಲ ಮಾತ್ರ ಇರಲು ಸಾಧ್ಯ.

೨. ಕೊಂಡಹಾಯುವ ವ್ಯಕ್ತಿಯ ಆತ್ಮವಿಶ್ವಾಸ ಆತ ಕೊಂಡ ಹಾಯುವುದರಲ್ಲಿ ಅತ್ಯಂತ ಪ್ರಮುಖಪಾತ್ರವಹಿಸುತ್ತದೆ. ಈ ಶಕ್ತಿಯನ್ನು ಇನ್ನೊಬ್ಬರಿಗೆ ವರ್ಗಾಯಿಸಲು ಸಾಧ್ಯವಿಲ್ಲ.

ದಕ್ಷಿಣ ಭಾರತದಲ್ಲಿ ತಯಾರುಮಾಡುವ ಕೊಂಡದ ಉಷ್ಣತೆ ೩೦೦° C ಗಳಿಗಿಂತ ಹೆಚ್ಚಿರುವುದಿಲ್ಲ ಎಂದು ತಿಳಿದುಬರುತ್ತದೆ. ಹೀಗಿರುವಾಗ ಹ್ಯಾರಿಪ್ರೈಸ್‌ನ ಪ್ರಯೋಗದಲ್ಲಿ ೭೪೨° C. ಉಷ್ಣತೆಯಲ್ಲಿ ರೆಜಿನಾಲ್ಡ್ ಆಡ್‌ಕಾಕ್ ಅಂಗಾಲು ಸುಟ್ಟುಕೊಳ್ಳದೆ ಕೊಂಡಹಾದದ್ದು ಅತ್ಯಪೂರ್ವವಾದ ಘಟನೆಯೆಂಬುದರಲ್ಲಿ ಯಾವ ಸಂಶಯವೂ ಇಲ್ಲ.

೩

ಪ್ರಪಂಚದ ಇತರ ಭಾಗಗಳಲ್ಲಿ ಇರುವ ಕೊಂಡ ಹಾಯುವ ಸಂಪ್ರದಾಯಕ್ಕೂ ಫಿಜಿ ದ್ವೀಪಗಳಲ್ಲಿ ಕೆಂಪಗೆ ಕಾದ ಕಲ್ಲಿನ ಮೇಲೆ ನಡೆಯುವ ಸಂಪ್ರದಾಯಕ್ಕೂ ಬಹಳ ವ್ಯತ್ಯಾಸವಿದೆ. ಆಡ್‌ಕಾಕ್ ಅವರ ಸಾಧನೆಯೇ ಆಶ್ಚರ್ಯಕರ ಎಂದೆನಿಸಬಹುದಾದರೆ ಫಿಜಿ ದ್ವೀಪದಲ್ಲಿ ಚಿಕ್ಕ ಚಿಕ್ಕ ಹುಡುಗರನ್ನು ಮೊದಲುಗೊಂಡು ದೊಡ್ಡವರವರೆಗೆ ಅಲ್ಲಿನ ಜನ ಕಾದ ಕಲ್ಲಿನ ಮೇಲೆ ನಡೆಯುವುದು ಅತ್ಯಂತ ರೋಮಾಂಚಕಾರಿ ಹಾಗೂ ಮನೋಹರ ಭಯಂಕರ ಅನುಭವ ಎಂದು ನಾರ್ಮಾಲೀ ಬ್ರೌನಿಂಗ್ ಎಂಬ ಅಮೇರಿಕಾದ ಪತ್ರಿಕೋದ್ಯೋಗಿ ಮಹಿಳೆ ಪ್ರತ್ಯಕ್ಷದರ್ಶಿ ವರದಿಯನ್ನು ಹೇಳಿದ್ದಾಳೆ.

ಫಿಜಿ ದ್ವೀಪ ಸಮೂಹದಲ್ಲಿನ ಅನೇಕ ದ್ವೀಪಗಳಲ್ಲಿ 'ಬೆಕುವಾ' ದ್ವೀಪದಲ್ಲಿ ಮಾತ್ರ ಈ ಸಂಪ್ರದಾಯ ಅಸ್ತಿತ್ವದಲ್ಲಿದೆ. ಈ ಒಂದು ಕಾರ್ಯಕ್ರಮವನ್ನು

ಏರ್ಪಡಿಸಬೇಕಾದರೆ ಫಿಜಿ ಸರಕಾರಕ್ಕೆ ಎರಡು ವಾರಗಳು ಮುಂಚಿತವಾಗಿ ತಿಳಿಸಿ, ಅದಕ್ಕೆ ತಗಲುವ ಖರ್ಚನ್ನು ಕೊಡಬೇಕಾಗುತ್ತದೆ. ಒಬ್ಬ ಪ್ರವಾಸಿಗೆ ಮುನ್ನೂರು ಡಾಲರ್ ಖರ್ಚು ಬರುತ್ತದೆ. ಫಿಜಿ ದ್ವೀಪದ ರಾಜಧಾನಿ ಸುವಾದಿಂದ ಈ ಕಾರ್ಯ ಕ್ರಮ ನಡೆಯುವ ದ್ವೀಪಕ್ಕೆ ದೋಣಿಗಳಲ್ಲಿ ಹೋಗಬೇಕಾಗುತ್ತದೆ. ಹೀಗಾಗಿ ಈಚಿನ ವರ್ಷಗಳಲ್ಲಿ ಕಾದ ಕಲ್ಲಿನ ಮೇಲೆ ಬೆಕುವಾ ಜನರು ನಡೆಯುವ ಕಾರ್ಯಕ್ರಮ ಒಂದು ವರ್ಷದಲ್ಲಿ ೧೦–೧೨ ಸಲಕ್ಕಿಂತ ಹೆಚ್ಚಾಗಿರುವುದಿಲ್ಲ. ಇದರಿಂದ ಬೆಕುವಾ ಜನ ಸಂಪಾದಿಸಿದ ಹಣವನ್ನು ತಮ್ಮ ಹಳ್ಳಿಗಳಲ್ಲಿ ಅಭಿವೃದ್ಧಿ ಕಾರ್ಯಗಳಿಗಾಗಿ ಉಪಯೋಗಿಸು ತ್ತಾರೆ. ಹೀಗಾಗಿ ಸಾಕಷ್ಟು ಜನ ಪ್ರವಾಸಿಗಳು ಅಪೇಕ್ಷೆಪಟ್ಟು ಈ ಕಾರ್ಯಕ್ರಮ ಏರ್ಪಡಿಸಿದರೆ ಬೆಕುವಾ ಜನರು ಕಾದ ಕಲ್ಲಿನ ಮೇಲೆ ನಡೆಯುವರೇ ಹೊರತು ಉಳಿ ದಂತೆ ವರ್ಷಕ್ಕೊಂದು ಬಾರಿ ತಮ್ಮ ಸಂಪ್ರದಾಯದಂತೆ ನಡೆಯುತ್ತಾರೆ

ಫಿಜಿ ದ್ವೀಪದಲ್ಲಿ ಕಾದ ಕಲ್ಲಿನ ಕೊಂಡಹಾಯುವುದರ ವಿವರಗಳು ಈ ರೀತಿ ಇವೆ. ಕೊಂಡದ ಆಳ ಐದು ಅಡಿ, ವ್ಯಾಸ ೧೫ ಅಡಿ, ತಲೆಬುರುಡೆ ಗಾತ್ರದ ಕಲ್ಲು ಗಳನ್ನು ಕೊಂಡದಲ್ಲಿ ಜೋಡಿಸಲಾಗುತ್ತದೆ. ಆ ದ್ವೀಪದಲ್ಲಿ ದೊರೆಯುವ ದಾವಾ ಎಂಬ ಮರದ ತುಂಡುಗಳನ್ನು ಇದರಲ್ಲಿ ತುಂಬಿ ಬೆಂಕಿ ಹಚ್ಚುತ್ತಾರೆ ಎಂಟು ಗಂಟೆಗಳ ಕಾಲ ನಿರಂತರವಾಗಿ ಸೌದೆ ಉರಿದು ಕಲ್ಲುಗಳು ಚೆನ್ನಾಗಿ ಕಾಯುತ್ತವೆ. ಹೀಗೆ ತಯಾರಾದ ಕೊಂಡಕ್ಕೆ ಲೋವೋ ಎಂದು ಹೆಸರು ; ಮಣ್ಣಿನ ಒಲೆ ಎಂದರ್ಥ. ಕೊಂಡದ ಬಳಿ ಪ್ರೇಕ್ಷಕರು ಐದು ಅಡಿಗಳಷ್ಟು ದೂರದಲ್ಲಾದರೂ ನಿಂತಿರಬೇಕು. ಇಲ್ಲದಿದ್ದರೆ ಹಬೆ ಬಡಿಯುವ ಸಾಧ್ಯತೆ ಇರುತ್ತದೆ. ಕಾದಕಲ್ಲಿನ ಉಷ್ಣತೆ ೮೦೦ ೦ C. ಗಿಂತಲೂ ಜಾಸ್ತಿಯಿರುವುದೇ ಇದಕ್ಕೆ ಕಾರಣ. ಕಾದಕಲ್ಲಿನ ಮೇಲೆ ನಡೆಯುವ ವ್ಯಕ್ತಿಗಳು ತುಂಬಾ ನಿಯಮಬದ್ಧವಾಗಿರಬೇಕು. ಸ್ತ್ರೀಯರ ಸಂಪರ್ಕಮಾಡಕೂಡದು, ತೆಂಗಿನಕಾಯಿ ತಿನ್ನಕೂಡದು ಆತನ ಹೆಂಡತಿ ಗರ್ಭಿಣಿಯಾಗಿದ್ದರೆ ಅವನು ಕಾದ ಕಲ್ಲಿನ ಮೇಲೆ ನಡೆಯಕೂಡದು. ಈ ನಿಯಮಗಳನ್ನು ಮೀರಿದ ವ್ಯಕ್ತಿ ಕಾದಕಲ್ಲಿನ ಮೇಲೆ ನಡೆದರೆ ಅವನ ಕಾಲು ಸುಡುವುದು ಖಂಡಿತ ಎಂದು ನಂಬುತ್ತಾರೆ. ಇಂಥ ನಿದರ್ಶನಗಳನ್ನು ಸಾಕಷ್ಟು ಉಲ್ಲೇಖಿಸುತ್ತಾರೆ. ೧೯೫೦ ರಲ್ಲಿ ಒಬ್ಬನ ಕಾಲು ಸುಡಲು ಅವನ ಪತ್ನಿ ಗರ್ಭಿಣಿಯಾಗಿದ್ದುದು ಕಾರಣವೆಂದು ಹೇಳುತ್ತಾರೆ.

ಕೊಂಡ ಸಿದ್ಧವಾದ ಬಳಿಕ ಮೇಲೆ ಹೇಳಿದ ನಿಯಮಗಳನ್ನು ಅನುಸರಿಸಿದ ವ್ಯಕ್ತಿಗಳು ನಿರಾತಂಕವಾಗಿ ನಗುನಗುತ್ತಾ ಕೊಂಡವನ್ನು ಪ್ರವೇಶಿಸುತ್ತಾರೆ. ಭೂಮಿಯ ಮೇಲೆ ನಡೆಯುವಂತೆ ಬಹಳ ಸಹಜವಾಗಿ, ನಿಧಾನವಾಗಿ, ಭದ್ರವಾಗಿ ಕಾಲೂರಿ ನಡೆಯುತ್ತಾರೆ. ಇಪ್ಪತ್ತು ಸೆಕೆಂಡುಗಳ ಕಾಲ ಕೊಂಡದ ಮೇಲೆಯೇ ನಡೆಯು ತ್ತಾರೆ. ಒಂದು ಕಡೆಯಿಂದ ಇನ್ನೊಂದು ಕಡೆಗೆ ನೆಗೆಯುವುದಾಗಲೀ ಹಾರುವುದಾ

ಗಳೇ ಇಲ್ಲ. ಕೆಂಡದಿಂದ ನಡೆದುಬಂದ ಅನಂತರ ಊರಿನ ಬೆಸ್ತಾವ ಜನರು ಕೆಂಡಕ್ಕೆ ಮಣ್ಣನ್ನು ಹಾಕಿ ಅದರ ಮೇಲೆ ಹಸಿರು ಎಲೆಗಳನ್ನು ಹರಡಿ, ಅದರ ಮೇಲೆ ಹಾಡುತ್ತಾ ಕುಣಿಯುತ್ತಾನೆ. ನಾಲ್ಕು ದಿನಗಳ ತರುವಾಯ ಪುನಃ ಅದೇ ಕೆಂಡದ ಮೇಲೆ ಹಬ್ಬದ ಅಡಿಗೆಯನ್ನು ಊಟಮಾಡಿ ಸಂತೋಷವಾಗಿ ಮನೆಗೆ ಹೋಗುತ್ತಾರೆ. ನಾರ್ಮಾ ಲೀ ಬ್ರೌನಿಂಗ್ ಅವರು ಈ ಎಲ್ಲ ವಿವರಗಳನ್ನು 'ದಿ ಅದರ್ ಸೈಡ್ ಆಫ್ ದಿ ಮೈಂಡ್' ಎಂಬ ಗ್ರಂಥದಲ್ಲಿ ಕೊಟ್ಟಿದ್ದಾರೆ. ಅವರು ಮಾತ್ರವಲ್ಲದೆ ಇನ್ನೂ ಅನೇಕರು ಈ ಅಪೂರ್ವ ದೃಶ್ಯವನ್ನು ಕಣ್ಣಾರೆ ನೋಡಿರುವ ದಾಖಲೆಗಳಿವೆ. ಈ ಆಚರಣೆಯಲ್ಲಿ ಯಾವ ಮೋಸವೂ ಇಲ್ಲವೆಂದು ಡಾಕ್ಟರುಗಳು ಮತ್ತು ವಿಜ್ಞಾನಿಗಳು ಅತ್ಯಂತ ಸೂಕ್ಷ್ಮವಾದ ವಿವರವಾದ ಪರೀಕ್ಷೆಗಳಿಂದ ದೃಢಪಡಿಸಿದ್ದಾರೆ. ಈ ಕೆಂಡದ ಮೇಲೆ ನಡೆಯುವ ವ್ಯಕ್ತಿಗಳ ಅಂಗಾಲಿನಲ್ಲಿ ವಿಶೇಷವೇನೂ ಇಲ್ಲವೆಂದು ಅದು ಇತರರ ಅಂಗಾಲಿನಂತೆಯೇ ಇರುವುದೆಂದು ಅಭಿಪ್ರಾಯಪಟ್ಟಿದ್ದಾರೆ. ಕೆಂಡದಲ್ಲಿ ಹಾಕುವ ಕಲ್ಲುಗಳು ಬಹುಕಾಲ ಶಾಖವನ್ನು ಇಟ್ಟುಕೊಳ್ಳುವ ಗುಣವನ್ನು ಹೊಂದಿರುವ ಕಲ್ಲುಗಳೆಂದು ಇದರಲ್ಲೇನೂ ಮೋಸವಿಲ್ಲವೆಂದು ದೃಢೀಕರಿಸಲಾಗಿದೆ. ಈ ಸಂಬಂಧವಾದ ವೈಜ್ಞಾನಿಕ ಸಂಶೋಧನೆಯಿಂದ ಈ ಮುಂದಿನ ಅಂಶಗಳು ತಿಳಿದುಬರುತ್ತವೆ.

೧. ಬೆಸ್ತಾವ ಜನರಿಗೆ ಕಾದಕಲ್ಲಿನ ಮೇಲೆ ನಡೆಯಲು ಯಾವ ಪೂರ್ವ ಪ್ರಯತ್ನಗಳ ಅವಶ್ಯಕತೆ ಇರುವುದಿಲ್ಲ. ನೇರವಾಗಿ ಮೊದಲ ಬಾರಿಗೇ ಅವರು ಕೊಂಡ ಹಾಯುತ್ತಾರೆ.

೨. ಕಾದಕಲ್ಲಿನ ಮೇಲೆ ನಡೆಯುವ ಮೊದಲಾಗಲೀ, ನಡೆಯುವ ಸಮಯದಲ್ಲಾಗಲೀ, ನಡೆದು ಹೊರಬಂದ ತರುವಾಯವಾಗಲೀ ಕೊಂಡ ಹಾಯ್ವ ವ್ಯಕ್ತಿ ಆವೇಶದ ಸ್ಥಿತಿಯಲ್ಲಾಗಲೀ, ಸಮ್ಮೋಹನ ಸ್ಥಿತಿಯಲ್ಲಾಗಲೀ ಇರುವುದಿಲ್ಲ. ಅದಕ್ಕೆ ವಿರುದ್ಧವಾಗಿ ನಗುನಗುತ್ತಾ, ಸಮಾಧಾನ ಚಿತ್ತದಿಂದ, ಜನಪದ ಗೀತೆಗಳನ್ನು ಹಾಡುತ್ತಾ ನಡೆಯುತ್ತಾನೆ.

೩. ಹ್ಯಾರಿಪ್ರೈಸ್ ಅವರು ನಡೆಸಿದ ಕೆಂಡ ಹಾಯುವ ಸಂಪ್ರದಾಯದ ಪ್ರಯೋಗದಿಂದ ಕೊಂಡಹಾಯುವವರ ತೂಕ ಹೆಚ್ಚಾಗಿದ್ದರೆ ಅಂಗಾಲು ಸುಡುವ ಸಾಧ್ಯತೆಗಳು ಹೆಚ್ಚು ಎಂದು ತಿಳಿದುಬಂದಿತ್ತು. ಆದರೆ ಬೆಸ್ತಾವ ಜನರು ಕಟ್ಟುಮಸ್ತಾದ ದೇಹವುಳ್ಳವರಾಗಿದ್ದು, ತುಂಬ ತೂಕವಾಗಿದ್ದರೂ ಕೂಡ ಅವರ ಅಂಗಾಲು ಸುಡದಿರುವುದು ಗಮನಾರ್ಹ. ವ್ಯಕ್ತಿಯ ಭಾರ ಅವನ ನಡಿಗೆಯ ಮೇಲೆ ಪರಿಣಾಮ ಬೀರುವುದಿಲ್ಲ

೭. ಕೆಂಡದ ಮೇಲೆ ನಡೆಯುವುದರ ಸ್ವರೂಪವೇ ಬೇರೆ, ಕಾದಕಲ್ಲಿನ ಮೇಲೆ ನಡೆಯುವುದರ ಸ್ವರೂಪವೇ ಬೇರೆ. ಕಾದಕಲ್ಲಿನಲ್ಲಿ ಶಾಖವೂ ಹೆಚ್ಚು ಮತ್ತು ಅದರ ಮೇಲೆ ಕಾಲಿಟ್ಟಾಗ ನೆಲದ ಮೇಲೆ ಕಾಲಿಟ್ಟಷ್ಟೇ ಸ್ಥಿರವಾಗಿರುವುದರಿಂದ ಅಂಗಾಲು ಸುಡುವ ಸಾಧ್ಯತೆಗಳು ಹೆಚ್ಚು. ಈ ದೃಷ್ಟಿಯಿಂದ ಕೆಂಡದ ಮೇಲೆ ನಡೆಯುವುದು ಇದರಷ್ಟು ಕಷ್ಟವಾಗಲಾರದು. ಒಟ್ಟಾರೆ ಹೇಳುವುದಾದರೆ ಕೆಂಡ ಹಾಯುವುದಕ್ಕಿಂತ ಕಾದಕಲ್ಲನ್ನು ಹಾಯುವುದು ಹೆಚ್ಚು ಕಷ್ಟಕರ. ಅಪಾಯಕರ ಮತ್ತು ಭಯಂಕರ ಸಾಹಸ.

೮. ಬಿಕುವಾ ಜನ ಕೇವಲ ನಂಬಿಕೆಯ ಬಲದಿಂದ ಕಾದಕಲ್ಲಿನ ಕೊಂಡವನ್ನು ಹಾಯುತ್ತಾರೆ. ನಂಬಿಕೆ, ಆತ್ಮವಿಶ್ವಾಸ ಅತ್ಯಂತ ಮುಖ್ಯಪಾತ್ರ ವಹಿಸುತ್ತವೆ. ಚಿಕ್ಕಂದಿನಿಂದಲೂ ಈ ಜನ ಈ ನಂಬಿಕೆಯನ್ನು ಬೆಳೆಸಿಕೊಂಡಿರುವುದರ ಬಲದಿಂದ ಮಾತ್ರ ಈ ಅಸಾಧ್ಯವಾದದ್ದನ್ನು ಸಾಧಿಸಿದ್ದಾರೆ ಎಂಬ ನಿರ್ಧಾರಕ್ಕೆ ಬರಬೇಕಾಗುತ್ತದೆ. ವಿಜ್ಞಾನದ ಬೇರೆ ಯಾವ ವಿವರಣೆಯನ್ನು ಇವರಿಗೆ ಇದಕ್ಕೆ ಕೊಡಲು ಸಾಧ್ಯವಾಗಿಲ್ಲ.

ಆಧಾರಗ್ರಂಥಗಳು

1. Rawcliff, D. H. Occult ard Supernatural Phenomena, [Newyork : Dover publication, Inc, 1969.]

2. Stone, Clement, W and Browning, Norma Lee, The Other Side of the Mind, [U. S. A. prentice hall Inc 1964]

3. Price, Harry, Fifty years of psychical research [London : Longmen's Green and company]

4. Thurston Edgar, Ethnographic Notes In Southern India, [Madras : 1906]

ಜಾನಪದ ಅಳತೆಯ ವಿಧಾನಗಳು

—ಡಾ|| ಎಂ. ಜಿ. ಬಿರಾದಾರ

ದೊಡ್ಡದು-ಸಣ್ಣದು ಹೆಚ್ಚು-ಕಡಿಮೆ ದೂರ-ಸನಿಹ ಎನ್ನುವ ತಾರತಮ್ಯ ವಿಚಾರ ಮಾನವಸಹಜವೆನ್ನುವುದಕ್ಕಿಂತ ಪ್ರಾಣಿಸಹಜವೆನ್ನುವುದೇ ಹೆಚ್ಚು ಸಮಂಜಸ. ಒಂದು ಪ್ರಾಣಿ ಆಹಾರದ ದೊಡ್ಡ ಗುಂಪಿಯ ಕಡೆಗೆ ಹೋಗುವುದೆ ವಿನಹ ಸಣ್ಣದನ್ನೆಂದೂ ಇಚ್ಛಿಸದು : ಈ ಬುದ್ಧಿ ವ್ಯಾವಹಾರಿಕ ಅಳತೆಯ ವಿಧಾನಗಳನ್ನು ಬೆಳೆಸಿಕೊಂಡು ಬರಲು ಮೂಲವಾಯ್ತು. ಅನಾಗರಿಕ ಸ್ಥಿತಿಯಿಂದಲೇ ಬೆಳೆದು ಬಂದ ಈ ವಿಚಾರ ಈಗ ತೀರ ಸೂಕ್ಷ್ಮವೂ ಅಷ್ಟೇ ಬೃಹತ್ತೂ ಆದುದನ್ನು ಕಾಣುತ್ತೇವೆ; ಇಂದು ಅಣುವನ್ನು ಅಳತೆ ಮಾಡುತ್ತೇವೆ. ಭೂಮಿಯನ್ನೇ ತೂಗುತ್ತೇವೆ. ಆಕಾಶವನ್ನೇ ಅಳೆಯುತ್ತೇವೆ. ಅಳತೆ ತೂಕಗಳ ಹಲವಾರು ವಿಧಾನ ಸಾಧನಗಳನ್ನು ಬೆಳೆಸಿಕೊಂಡು ಬಂದಿರುತ್ತೇವೆ.

ತಕ್ಕಡಿ ಕಲ್ಲುಗಳಿಂದ ತೂಕ ಚೇನು ಟೇಪು ಇಂಚುಪಟ್ಟಿಗಳಿಂದ ಉದ್ದಗಲ ಗಡಿಯಾರದಿಂದ ಕಾಲ ಸೇರು ಲೀಟರ್‌ಗಳಿಂದ ಪ್ರವಾಹಿಯನ್ನು ಅಳೆಯುವ ಕಾಲವೂ ತೀರ ಹಳೆಯದೀಗ. ವೈಜ್ಞಾನಿಕ ಯುಗ ಸಾಧಿಸಿರುವ ತೂಕ ಅಳತೆಯ ಸೂಕ್ಷ್ಮಾತಿಸೂಕ್ಷ್ಮ ಸಾಧನಗಳನ್ನು ಜನಸಾಮಾನ್ಯರನ್ನು ಬಿಡಿ ; ಕಲಿತವರೂ ಕಲ್ಪಿಸುವುದು ಅಶಕ್ಯವಾಗಿದೆ. ಇದು ಕಾಂಪ್ಯುಟರ್ ಯುಗ. ಬಟನ್ ಒತ್ತಿದರೆ ಸಾಕು ನೀವು ಬಯಸಿದ ತೂಕ ಅಳತೆ ಲೆಕ್ಕ ಎಲ್ಲವೂ ಸಿದ್ಧ !

ಮಾನವ ಮೂಲವಾದ ಅವನ ವ್ಯಾವಹಾರಿಕ ಬದುಕಿನ ತೀರ ಹಳೆಯ ಅಳತೆಯ ವಿಧಾನಗಳು ಇಂದೂ ಜನಪದದಲ್ಲಿ ರೂಢಿಯಲ್ಲಿವೆ. ಅವರು ಈ ವೈಜ್ಞಾನಿಕ ಯುಗದಲ್ಲಿಯೂ ಆ ವಿಧಾನಗಳನ್ನೇ ಅನುಸರಿಸುವುದನ್ನು ಗಮನಿಸಿದರೆ ಜನಪದರನ್ನು ಅನಾಗರಿಕರು ಮುಂತಾಗಿ ಹೇಳುವುದಕ್ಕಿಂತ ವೈಜ್ಞಾನಿಕ ವಿಧಾನಗಳಿಗೆ ಮೂಲದ ಸಾಧನಗಳ ಸ್ಥಾನಮಾನ ಪಡೆಯಲು ಶಕ್ತಿ ಸಾಕಿಲ್ಲವೆಂದೇ ಹೇಳಬೇಕು.

ಜನಪದರು ರೂಢಿಸಿಕೊಂಡು ಬಂದ ಅಳತೆಯ ಮಾಧ್ಯಮಗಳು ತಮ್ಮ ಪರಿಸರದಲ್ಲಿ ಸರ್ವರಿಂದ ಸ್ವೀಕೃತವಾದವುಗಳಾಗಿರುತ್ತಿದ್ದವು. ಆದರೆ ಅಲ್ಲಿ ಸ್ವಲ್ಪ ಹೆಚ್ಚು ಕಡಿಮೆಗೆ ಅವಕಾಶವಿತ್ತು. ವೇಳೆ ಅಳೆಯಲು ಗಡಿಯಾರ ಕಟ್ಟಿದ ನಮಗೂ ಹತ್ತಿಪ್ಪತ್ತು ನಿಮಿಷಗಳು ಹೆಚ್ಚು ಕಡಿಮೆಯೇ ಅಲ್ಲ. ತಾಸೆರಡು ತಾಸೂ ಒಮ್ಮೊಮ್ಮೆ

ನೋಡು! ಮಾನವ ಪಶುಪಕ್ಷಿಪ್ರಾಣಿಗಳ ಹೆಸರನ್ನು ನೀಡಿ ಪರಿಚಯಿಸಿದ ಕಾರಣ ತಾನು ಪ್ರತ್ಯೇಕ ಎನಿಸಿಕೊಳ್ಳುತ್ತಾನೆ. ಸಂಸ್ಕೃತಿ ಮಾನವನನ್ನು ಪರಿಪೂರ್ಣ ಮಾನವನ ಸ್ಥಿತಿಗೆ ಬಂದಿರುವುದರ ಹೆಸರೇ ಎಂದು ಕೆಲವರು ಹೇಳುವರಾದರೂ, ನನ್ನ ದೃಷ್ಟಿಯಿಂದ ಮಾನವನನ್ನು ಪ್ರಾಣಿ "ಮನುಷ್ಯ" ಆಗಿಸಿರುವುದರ ಸಂಕೇತ ಮಾತ್ರ.

ಜನಪದದಲ್ಲಿ ಕಾಲವನ್ನು ಅಳೆಯುವ ಮಾನದಂಡ ಇಲ್ಲ. ನಿಸರ್ಗದ ಕ್ರಿಯೆಯನ್ನೇ ಸಾಮೂಹಿಕ ತಿಳುವಳಿಕೆಗೆ ತಂದಿದ್ದರು. ಬಿಸಿಲು ಹೆಚ್ಚಾದ ಕಾಲವನ್ನು ಬೇಸಗೆ ಚಳಿ ಹೆಚ್ಚಾದ ಕಾಲವನ್ನು ಚಳಿಗಾಲ ಮಳೆ ಬೀಳುವ ಕಾಲವನ್ನು ಮಳೆಗಾಲ ಅಂದರು. ಹೊತ್ತು ಹುಟ್ಟಿ ಹೊತ್ತು ಮುಳುಗುವವರೆಗೆ ದಿನ ಮುಳುಗಿ ಹೊತ್ತು ಹೊರಡುವವರೆಗೆ ರಾತ್ರಿ. ದಿನವನ್ನು ನಸುಕು, ಮುಂಜಾನೆ, ಮಧ್ಯಾಹ್ನ, ಇಳಿ ಹೊತ್ತು, ಬೈಗು (ಸಂಜೆ) ರಾತ್ರಿ ಎಂದು ವಿಭಾಗಿಸಿದರು. ಹುಣ್ಣಿಮೆಯಿಂದ ಹುಣ್ಣಿಮೆ, ಅಮಾವಾಸ್ಯೆಯಿಂದ ಅಮಾವಾಸ್ಯೆ ಒಂದು ತಿಂಗಳು. ಯುಗಾದಿಯಿಂದ ಯುಗಾದಿ ಒಂದು ವರ್ಷ. ಇದು ಅವರು ನಿಗದಿಪಡಿಸಿಕೊಂಡ ಕಾಲಚಕ್ರ.

ಆದರೆ ಸಮಯ ಅಳೆಯಲು ಸೂರ್ಯ, ಚುಕ್ಕಿ, ಚಂದ್ರರನ್ನೇ ಒಂದು ಸಾಧನವಾಗಿ ಮಾಡಿಕೊಂಡರು. ಜನಪದದಲ್ಲಿ ಸೂರ್ಯನಿಗೆ ಸಮಯ ಹೊತ್ತು ಎಂದೇ ಅರ್ಥ. 'ಹೊತ್ತು ಹುಟ್ಟಿತು' 'ಹೊತ್ತು ಹೊಳ್ಳಿತು' 'ಹೊತ್ತು ಮುಳುಗ್ತು' ಎಂದು ಹೇಳುತ್ತಾರೆ. "ಮಧ್ಯಾನ ಹೊತ್ತು ನೋಡ್ದು' ಹೋತು : ಅತ್ತಿ ಮನಿ ಕೂಳಿ ಉಣ್ಣದ ಹೋದ್ಳು" ಎಂಬ ಗಾದೆಯೆ ಇದೆ.

ಸೂರ್ಯ ಚುಕ್ಕಿಗಳನ್ನು ಧರಿಸಿ ಜನಪದದಲ್ಲಿ ಸಮಯ ಗುರುತಿಸುವ ಬೇರೆ ಪದ ಪ್ರಯೋಗಗಳೇ ಇವೆ. 'ಬೆಳ್ಳಿ ಮೂಡಿತ್ತು ಜುಮುಜುಮು ನಸುಕಾಗಿತ್ತು ಮೂಡ್ಲು ಹರದಿತ್ತು ಸೂರ್ಯಾ ಮಾರೇರಿದ್ದ ಸೂರ್ಯಾ ನೆತ್ತಿಮ್ಯಾಲಿ ಬಂದಿದ್ದ ಸೂರ್ಯಾ ತಾಯಿ ಹೊಟ್ಯಾಗ ಹೋಗಿದ್ದ ಚುಕ್ಕಿ ಬಿದ್ದಿದ್ದು ಬೆಳದಿಂಗ್ಳು ಹೊಂಟಿತ್ತು ಮುತ್ತಾಳ ಕೂರ್ಗಿ ಮೂಡಿತ್ತು : ಚೆನ್ನಮ್ಮನ ದಂಡಿ ನೆತ್ತಿಮ್ಯಾಲಿ ಬಂದಿತ್ತು.' ಹೀಗೆ ವಿವಿಧ ರೀತಿಯ ನಿಸರ್ಗದ ಕ್ರಿಯೆಯನ್ನು ಸರ್ವ ಸ್ವೀಕೃತ ಅಭಿವ್ಯಕ್ತಿಗಳಿಂದ ಸಮಯ ಗುರುತಿಸಲಾಗುತ್ತದೆ. ಅವರ ವ್ಯವಹಾರ ನಿಸರ್ಗದ ಈ ಕ್ರಿಯೆಯೊಂದಿಗೆ.

ದಪ್ಪ (thickness), ಉದ್ದಗಲ (Length and breadth), ಆಳ (Depth), ಅಂತರ (Distance) ಅಳೆಯುವಾಗ ತಮ್ಮ ದೇಹದ ಅಂಗಗಳನ್ನೇ ಅಳತೆಗೋಲಾಗಿಸುವ ವಿಧಾನ ಇಂದೂ ಜನಪದದಲ್ಲಿವೆ.

ದಪ್ಪ ಕುರಿತು ಹೇಳುವಾಗ ಕಿರಬೆಳ್ಳು ಅಳತೆ, ಹೆಬ್ಬೆಟ್ಟು ದಪ್ಪ ಒಡಿ ಅಳತೆ. ತೆಕ್ಕೆ ಗಡತರ ಎಂದು ಹೇಳಿದರೆ ಉದ್ದಗಲ ಹೇಳುವಾಗ ಬಳ್ಳ ಎಡ್ಡುಬಳ್ಳ ಮೂಬಳ್ಳ ನಾಬಳ್ಳ ಜೋಟಿ ಗೇಣು ಮೊಳ ಮಾರು ಎಂದು ಬೆರಳು ಕೈಗಳನ್ನೇ ಅಳತೆಗೋಲಾಗಿಸುತ್ತಾರೆ.

ಪ್ರವಾಹಿಯ ಆಳ (ಗುಪ್ತ) (Deepth), ಬೆಳೆಯ ಎತ್ತರ (Hight) ಮೊದಲಾದುವನ್ನು ಹೇಳುವಾಗ ಆಳನ್ನೇ (ಮನುಷ್ಯ) ಅಳತೆಗೋಲಾಗಿಸುತ್ತಾರೆ. ಹಿಂಡ್ರಿಮಟ, ಮೊಳಕಾಲ್ಮಟ, ತೊಡಿಮಟ, ಟೊಂಕಮಟ, ಎದಿಮಟ, ಕುತ್ತಗಿಮಟ, ತಲಿಮಟ, ಎಂದೂ ಇದಕ್ಕೂ ಹೆಚ್ಚಿನದನ್ನು ಒಂದಾಳ, ಎಡ್ಡಾಳ, ಎಂದು ಭಾವಿಯ ನೀರನ್ನು ಹೇಳುತ್ತಾರೆ.

ತೀರ ಸಣ್ಣ ಪ್ರಮಾಣದ ಅಳತೆಗೂ ನಮ್ಮ ಕೈಯನ್ನೇ ಅಳತೆಯ ಸಾಧನವಾಗಿಸುತ್ತಾರೆ. ಒಂದು ಕೈ ಮುಚ್ಚಿ ಹಿಡಿಯುವಷ್ಟು ಮುಟಿಗಿ (ಮುಷ್ಟಿ) ಒಂದು ತೆರದಾಗ ತುಂಬುವಷ್ಟು 'ಕರ' ಎರಡೂ ಕೈ ಕೂಡಿಸಿ ತುಂಬುವಷ್ಟು 'ಬಗಸಿ' 'ಕುಡಲಿ' ಯಷ್ಟು. ಇದಕ್ಕೂ ಹೆಚ್ಚು ಅಳೆಯಲು ಬೇಕಾಗಿದ್ದಾಗ ಅದಕ್ಕೆ ಬೇರೆ ಸಾಧನಗಳನ್ನು ಬಳಸಿಕೊಂಡರು. 'ಚಿಗರಟ್ಟು' ಎಂದರೆ ತೀರ ಕಡಿಮೆ. ಒಂದ 'ಮುಕ್ಕ' ಅಂದರೆ ಬಾಯಲ್ಲಿ ಹಿಡಿಸುವಷ್ಟು ಅಥವಾ ಬೀಸುವ ಕಲ್ಲಿನ ಬಾಯಿ ತುಂಬುವಷ್ಟು.

ಬಹಳಷ್ಟು ಸಾಕಷ್ಟು ಎಂದು ಹೇಳುವಾಗಲೂ ಅಂಗಾಂಗಗಳನ್ನೇ 'ಅಳತೆ' ಯಾಗಿ ಹೇಳುತ್ತಾರೆ.

ತಲಿ ತುಂಬ ಬಳಗ (ಕೂದಲಿರುವಷ್ಟು!) ಕೈ ತುಂಬ ಕೆಲಸ ಹೊಟ್ಟಿತುಂಬ ಊಟ ಮೈತುಂಬ ಅರಿವಿ.

ಸಂಕಷ್ಟ ಸಂತುಷ್ಟಿಯ ಭಾವವನ್ನು ಅಳೆಯಲೂ ಇಂಥವೇ ಪ್ರಯೋಗಗಳು ಅವರಲ್ಲಿವೆ.

ಎದಿತುಂಬ ಸಂಕಟ, ಕಣ್ತುಂಬ ನೋಡು, ಬಾಯ್ತುಂಬ ಹೊಗಳು, ಉಡಿತುಂಬ, ಮನತುಂಬ (....ಮುಂಜಾಣದಾಗ ಗಿಳಿವಳ್ಳಿ ಕೊಟ್ಟರ ಮನಿತುಂಬ ನಮ್ಮ ಮನ ತುಂಬಿ.)

ಹಣ್ಣು ಮೊದಲಾದವುಗಳನ್ನು ಎಣಿಸುವಾಗ ಒಂದ ಕೈ (ಐದು) ಎಡ್ಡ ಕೈ ಎಂದೇ ಎಣಿಸುತ್ತಾರೆ. ಒಡ್ಡಿ (ನಾಲ್ಕು) ಎಡ್ಡೊಡ್ಡಿ ಮೂರೊಡ್ಡಿ. ಎಂದೂ ಎಣಿಸುತ್ತಾರೆ.

ಇಂದ್ರಿಯಗಳ ಶಕ್ತಿ ಸಾಮರ್ಥ್ಯವನ್ನೇ ಒಂದು ಪ್ರಮಾಣವಾಗಿ ಅಂತರವನ್ನು ಅಳೆಯುವ ರೂಢಿ ಇಂದೂ ಗ್ರಾಮಗಳಲ್ಲಿದೆ.

‘ಕೂಗಳತೆ’ (ಕೂಗಿದರೆ ಕೇಳಬಹುದಾದ ಗರಿಷ್ಠ ದೂರ), ಕೈಗಲ್ಲಳತೆ (ಕಲ್ಲು ಎಸೆದಾಗ ಅದು ಬೀಳುವ ದೂರ), ಅದರಂತೆ ಕವಣೆಕಲ್ಲಳತೆ ಕಣ್ಣಳತೆ (ಕಾಣಿಸುವಷ್ಟು ದೂರ).

ಜನಪದದಲ್ಲಿ ತೂಕದ ಸಾಧನಗಳು ಇರಲಿಲ್ಲ. ಎಲ್ಲವೂ ಅಳತೆಯಿಂದಲೇ ಸಾಗಬೇಕು. ಭಾರ (weight) ವನ್ನು ನಿರ್ದೇಶಿಸುವಾಗ ‘ಹೊರೆ’ (ಒಬ್ಬ ವ್ಯಕ್ತಿ ಹೊರುವಷ್ಟು) ‘ತಲೆಭಾರ’ ‘ಹೇರು’ (ಒಂದು ಎತ್ತಿನ ಮೇಲೆ ಅಥವಾ ಚಕ್ಕಡಿಯಲ್ಲಿ ಹೇರುವಷ್ಟು) ಎಂದು ಹೇಳುತ್ತಾರೆ.

ಹೊಲದ ಕ್ಷೇತ್ರವನ್ನು ಅಳೆಯಲೂ ಅವರು ತಮ್ಮದೇ ಆದ ವಿಧಾನಗಳನ್ನು ಅನುಸರಿಸುತ್ತಾರೆ. ತಮ್ಮ ದಿನ ಬಳಕೆಯ ಎತ್ತು ನೇಗಿಲು ಕೂರಿಗೆ ಬೀಜ ಇವುಗಳನ್ನೇ ಮಾನದಂಡವಾಗಿಸಿಕೊಂಡರು. ಆಂಗ್ಲರು ಅಶ್ವಶಕ್ತಿ (Horse power) ಯನ್ನು ಒಂದು ಪ್ರಮಾಣವಾಗಿಸಿದಂತೆ ಭಾರತೀಯರು ಎತ್ತಿನ ಶಕ್ತಿಯನ್ನು ಪ್ರಮಾಣವಾಗಿಸಿಕೊಂಡರು.

ಇಂದಿನ ನಾಲ್ಕು ಎಕರೆ ಹೊಲಕ್ಕೆ ಅವರು ‘ಕೂರಿಗೆ’ ಎಂದು ಹೇಳುತ್ತಾರೆ. ‘ಎರಡು ಎತ್ತುಗಳು, ಒಂದು ಕೂರಿಗೆಯಿಂದ ಒಂದು ದಿನ ಪೂರ್ತಿ ಬಿತ್ತುವ ಕ್ಷೇತ್ರ ‘ಒಂದು ಕೂರಿಗೆ’ ಅದೇ ರೀತಿಯಲ್ಲಿ ನೇಗಿಲಿನಿಂದಲೂ ಕ್ಷೇತ್ರ ನಿರ್ದೇಶಿಸುವ ರೂಢಿ ಇದೆ. ಎಡ್ಡ ನೇಗಿಲ ಹೊಲಾ ನಾಕ ನೇಗಿಲ ಹೊಲಾ ಐದ ನೇಗಿಲ ಹೊಲಾ ಎಂದು ಹೊಲಕ್ಕೆ ಹೆಸರೇ ಇವೆ. ಆ ನೇಗಿಲುಗಳಲ್ಲಿಯೂ ಎರಡೆತ್ತು ನಾಕೆತ್ತು ಎಂಟೆತ್ತಿನವರೆಗಿನ ನೇಗಿಲುಗಳೂ ಇವೆ. ಅಷ್ಟು ಎತ್ತುಗಳು ಕೂಡಿ ಎಳೆಯಬೇಕಾದ ನೇಗಿಲು ಅದು.

ಎತ್ತುಗಳು ರಾಬ ಮಾಡುವುದನ್ನು ಲಕ್ಷಿಸಿಯೂ ಕ್ಷೇತ್ರ ಪ್ರಮಾಣ ಹೇಳುತ್ತಾರೆ. ಎಡ್ಡೆತ್ತಿನ ಹೊಲಾ ನಾಕೆತ್ತಿನ ಹೊಲಾ ಎಂಟೆತ್ತಿನ ಹೊಲಾ ಹೀಗೆ.

ಹೊಲಗಳ ಅಳತೆಯನ್ನು ನಿರ್ಧರಿಸುವ ಇನ್ನೊಂದು ಸಾಧನವೂ ಪ್ರಬಲವಾಗಿ ರೂಢಿಯಲ್ಲಿದೆ. ಆ ಪ್ರದೇಶದ ಪ್ರಮುಖ ಬೆಳೆಯ ಬೀಜ ಬಿತ್ತುವ ಅಳತೆಯ ಮೇಲೆ ಹೊಲವನ್ನು ಅಳೆಯಲಾಗುತ್ತಿತ್ತು. ‘ಒಂದುಡಿ ಹೊಲಾ’ ‘ನಾಕುಡಿ ಹೊಲಾ’ ಹೀಗೆ. ‘ಉಡಿ’ ಅಂದರೆ ಬೀಜ ತುಂಬಿ ಉಡಿಗೆ ಕಟ್ಟಿಕೊಳ್ಳುವ ಚೀಲದ ಅಳತೆ. ಇದಕ್ಕೆ ‘ಉಡಿಚೀಲ ಎಂದೇ ಹೆಸರಿದೆ. ಹಲವಾರು ಶಾಸನಗಳಲ್ಲಿಯೂ ಇಂಥ ಉದಾ

ಹರಣೆಗಳು ದೊರೆಯುತ್ತವೆ. ಹನ್ನೆರಡನೆಯ ಶತಮಾನದ ಒಂದು ಶಾಸನದಲ್ಲಿ 'ಎರಡು ಸಲಗೆ ಗದ್ದೆ' ಎಂದು ಹೇಳಲಾಗಿದೆ. ಆ ಕಾಲದ ಸೊಲಗೆ ಅದ್ದನ ಗಿದ್ದನ ಕೊಳಿವೆ ನಿಳಿವೆಯ ಮಾಪುಗಳು ವಿಜಾಪುರ ಜಿಲ್ಲೆಯ ಗ್ರಾಮಗಳಲ್ಲಿ ಇಂದೂ ರೂಢಿಯಲ್ಲಿವೆ.

ಹೊಲ ಅಳೆಯಲು 'ಗಳೆ' ಬಳಸುತ್ತಿದ್ದರೆಂದು ಹಲವಾರು ಶಾಸನಗಳು ಹೇಳುತ್ತವೆ. ವ್ಯವಹಾರ ಗಣಿತ ಕ್ಷೇತ್ರಗಣಿತಗಳ ಕರ್ತೃವಾದ ರಾಜಾದಿತ್ಯನೂ ಹೊಲ ಅಳೆಯಲು 'ಗಳೆ' ಬಳಸಬೇಕೆಂದು ಹೇಳಿದ್ದಾನೆ. ಶಾಸನಗಳಲ್ಲಿ 'ಇಪ್ಪತ್ತೆಂಟು ಗೇಣ ಗಳೆ' 'ಐವತ್ತೆರಡು ಗೇಣ ಗಳೆ' 'ಕತ್ಸನಿಯ ಗಳೆ' ಎಂಬುಕ್ತಿಗಳಿವೆ. ಈ 'ಗಳೆ' ಅಂದರೆ 'ಗಳ' 'ಬಿದಿರಿನ ಕೋಲು' ಎಂಬರ್ಥಕ್ಕೆ ಪುಷ್ಟಿಕೊಡಲು 'ಪದಿನಱುಗೇಣ್ ಕೋಲ್' 'ಕುಱುತ ಕೂಂಟಿಯ ಕೋಲ್' 'ನಗರೇಶ್ವರಗಡಿಂಬದ ಕೋಲ್' ಎಂಬ ಹೇಳಿಕೆಗಳೂ ಶಾಸನಗಳಲ್ಲಿವೆ. ಆದರೆ ಜನಪದದಲ್ಲಿ 'ಗಳೆ' ಅಂದರೆ ನೇಗಿಲು ಅಥವಾ ಕುಂಟೆಯಿಂದ ಜೋಡೆತ್ತು ಒಂದು ದಿನ ದುಡಿಯುವುದಕ್ಕೆ ಒಂದು 'ಗಳೆ' ಎಂದು ಹೇಳಲಾಗುತ್ತದೆ. ಶಾಸನೋಕ್ತ 'ಗಳೆ' ಅಂದರೆ 'ಕೋಲು' ಎಂಬುದಂತೂ ಖಚಿತವೆನ್ನಲಿಕ್ಕೆ ಊರೂರಿನ ದೇವಸ್ಥಾನಗಳಲ್ಲಿ ಆ ಕೋಲಿನ ಉದ್ದಳತೆಯನ್ನು ಕೆತ್ತಿ ಇಡಲಾಗುತ್ತಿತ್ತು ಎಂಬ ಶಾಸನೋಕ್ತ ಮಾತೂ ಸಾಕ್ಷಿ. ಆದರೆ ಜನಪದದಲ್ಲಿ 'ಆ ಹೊಲಕ ನಾಕಗಳೇ ಬೇಕಾಗುತ್ತವೆ' ಎಂಟ ಗಳೇದ ಹೊಲಾ ಐತದು' ಎಂದು ಹೇಳಲಾಗುತ್ತದೆ. ಜನಪದದ 'ಗಳೆ' ಪದ ಎರಡೆತ್ತಿನಿಂದ ಒಂದು ದಿನ ಕೆಲಸ ಮಾಡಬಹುದಾದ ಶಾಸನೋಕ್ತ 'ಗಳ' ದಿಂದ ಅಳೆದ ಹೊಲವನ್ನು ಸೂಚಿಸುತ್ತದೆ. ಶಾಸನೋಕ್ತ 'ಗಳೆ' ಎಲ್ಲ ಕಡೆಗೆ ಒಂದೇ ಅಳತೆಯವಿದ್ದುವೆಂದು ಹೇಳಲು ಆಧಾರಗಳಿಲ್ಲ. ಆದರೆ ಸಾಮಾನ್ಯವಾಗಿ ಜೋಡೆತ್ತಿನ ಒಂದು ದಿನದ ಕೆಲಸ ಮಾಡುವ ಕ್ಷೇತ್ರವನ್ನು ಒಂದು ಅಳತೆಯಾಗಿ ಸರ್ವಸಾಮಾನ್ಯವಾಗಿ ಜಾನಪದದಲ್ಲಿ 'ಗಳೆ' ಎಂದು ಸ್ವೀಕರಿಸಲಾಗಿದೆ.

ನಡೆದು ಹೆಜ್ಜೆಯ ಲೆಕ್ಕದ ಮೇಲೂ ಹೊಲ ಅಳೆಯುತ್ತಿದ್ದರು. ಬರಬರುತ್ತ ಎತ್ತಿನ ಹಣಿಗೆ ಹಚ್ಚುವ 'ಹಣೆಗ್ಗ'ದಿಂದ ಹೊಲ ಅಳೆಯ ಹತ್ತಿದರು, ಹಗ್ಗದಿಂದ ಅಳೆಯುವದು ಇನ್ನೂ ರೂಢಿಯಲ್ಲಿದೆ.

ಒಕ್ಕಲುತನದ ವ್ಯವಹಾರದಲ್ಲಂತೂ ಎತ್ತು ಎತ್ತಿನಗಾಡಿಗಳನ್ನೇ ಒಂದು ಅಳತೆಯ ಸಾಧನವಾಗಿಸುವುದು ರೂಢಿ.

ಕಣ ಮಾಡುವಾಗ ರಾಶಿಯ ಅಂದಾಜು ನೋಡಿ ಎತ್ತುಗಳ ಲೆಕ್ಕದಿಂದ ಕಣಕಡಿಯುತ್ತಾರೆ. ನಾಕೆತ್ತಿನಿಂದ ಹದಿನೆಂಟೆತ್ತಿನವರೆಗಿನ ಕಣಗಳಿರುತ್ತವೆ. ಆರೆ

ತ್ತಿನ ಕಣ ಪತ್ತೆತ್ತಿನ ಕಣ ಮುಂಚಿತಾಗಿ ಇನ್ನು ಕಾಲು ಕದಕೆ ಗೊಬ್ಬರಕ್ಕೆ ಬತ್ತಿನ ಗಾಡಿಯನ್ನೇ ಒಂದು ಅಳತೆಯಾಗಿಸುತ್ತಾರೆ. ಒಂದ ಗಾಡಿ ಕಾಳ ಅಂದರೆ ಇದು ಚೀಲ ಕಾಳು. ಹೊಲಕ್ಕೆ ಗೊಬ್ಬರ ಹಾಕುವಾಗಲಂತೂ ಗಾಡಿಯೇ ಒಂದು ಅಳತೆಯ ಸಾಧನ. ಕೂಲಿಗೆಗೆ ಪತ್ತುಗಾಡಿ ಮೊದಲಾಗಿ ಲೆಕ್ಕ. ಕಾಗದಯ ಬಗೆಯನ್ನು ಕುರಿತು ಹೇಳುವಾಗ ಹತ್ತುಗಾಡಿ ಬಣವಿ ಇಪ್ಪತ್ತುಗಾಡಿ ಬಣವಿ ಎಂದು ಹೇಳುತ್ತಾರೆ.

ಜೋಳಕಿತ್ತು ಗೂಡುಹಾಕುವಾಗ ಅಕ್ಕಡಿಯ ಲೆಕ್ಕದಲ್ಲಿ ಗೂಡುಗಳ ಅಳತೆಯನ್ನು ಹೇಳುತ್ತಾರೆ. 'ನಾಕಕ್ಕಡಿ ಗೂಡು' 'ಏಳಕ್ಕಡಿ ಗೂಡು' ಇತ್ಯಾದಿ. ಆ ಅಳತೆಯ ಸಹಾಯದಿಂದ ಇಷ್ಟೇ ಕಾಳು ದೊರೆಯುತ್ತದೆಂದು ಅವರು ನಿಖರವಾಗಿ ಹೇಳುತ್ತಾರೆ. ರಾಶಿಯನ್ನು 'ತೆಲಿರಾಶಿ' (ಮೊದಲುಸಾರೆ ತೂರಿಸಿದ್ದು) 'ನಡುಗಣ' 'ಕಡಿಗಣ' ಎಂದು ಹೇಳುವರೆ ಹತ್ತಿಬಿಡಿಸಿದ್ದನ್ನು ಕನ್ನೆಬೀಡು (ಕನ್ಯೆಬೀಡು) 'ಎರಡ್ನೆ ಬೀಡು' 'ಕಡಿಬೀಡು' ಎಂದು ಹೇಳುತ್ತಾರೆ.

ಮನೆಯಲ್ಲಿ ಬಳಸುವ ದಿನಬಳಕೆಯ ಸಾಮಾನುಗಳು ಅಳತೆಯ ಸಮರ್ಥ ಹಾಗು ಸಹಜಸಿಕ್ಕಬಲ್ಲ ಉಪಕರಣಗಳಾಗಿವೆ. ಗಡಿಗೆ ಮಾಡುವ ಕುಂಬಾರ ಗಳೆ ಗಾಡಿ ಮಾಡುವ ಬಡಿಗ. ಸೀರಿ ದೋತರ ನೇಯುವ ಜಾಡ ಪುರಬುಟ್ಟಿ ಹೆಣೆಯುವ ಮೇದಾರ ಹೆಡಿಗೆ ಗಳಿಗಿ ಹೆಣೆಯುವ ಕೊರವ ಮೊದಲಾದವರು ಗ್ರಾಮೀಣ ಬದುಕಿನ ಪ್ರಮುಖ ಅಂಗ. ಬ್ರಹ್ಮ ಸೃಷ್ಟಿಯ ಮನುಷ್ಯ ಪಶು ಪಕ್ಷಿ ಮೊದಲಾದವುಗಳ ಆಕಾರ ಅಳತೆಯಲ್ಲಿ ಒಂದು (Uniformity) ಸಾಮ್ಯ ಇರುವಂತೆ ಈ ಆಯಗಾರರು ರಚಿಸುವ ವಸ್ತುಗಳಲ್ಲಿಯೂ ಒಂದು ರೀತಿಯ ಸಾಮ್ಯ ಇರುವುದೊಂದು ವೈಶಿಷ್ಟ್ಯ. ಸಾಮಾನ್ಯವಾಗಿ ಕುಂಬಾರ ಮಾಡಿದ ಗಡಿಗೆಗಳು ಕೊರವರ ಬುಟ್ಟಿ ಹೆಡಿಗೆಗಳು ಒಂದೇ ಆಕಾರ ಅಳತೆಯವೇ ಇರುತ್ತವೆ. ಇನ್ನು ಜಾಡ ಮತ್ತು ಬಡಿಗರ ರಚನೆಯಲ್ಲಿ ವ್ಯತ್ಯಾಸವಿರುವುದಂತೂ ಅವಶ್ಯ.

ಈ ದಿನಬಳಕೆಯ ಗಡಿಗೆ ಬುಟ್ಟಿ ಹೆಡಿಗೆಗಳನ್ನೇ ಅಳತೆಯ ಸಾಧನಗಳನ್ನಾಗಿ ಬಳಸಿಕೊಂಡರು. ಕುಂಬಾರರಲ್ಲಿ ಮಿಳ್ಳಿ ಕುಳ್ಳಿ ಮಗಿ ಗಡಗಿ ಸ್ವಾಲಿ ಹಂದಿಗಿ ಕೊಡ ಹರವಿ ರಂಜಣಗಿ ಹೀಗೆ ವಿವಿಧ ಅಳತೆ ಆಕಾರದ ಮಣ್ಣಿನ ಪಾತ್ರೆ ನಿರ್ಮಾಣವಾಗುತ್ತವೆ. ಪ್ರಮಾಣವನ್ನು ಹೇಳಲು ಇಂದೂ ಹಳ್ಳಿಗಳಲ್ಲಿ ತುಪ್ಪದ ಮಿಳ್ಳಿ ಮೊಸರಿನ ಕುಳ್ಳಿ ಎಣ್ಣಿ ಮಗಿ ಮಜ್ಜಿಗಿಗಡಗಿ ಹಾಲಿ ಸ್ವಾಲಿ ನೀರ ಹಂದಗಿ ಕೊಡ ಹರವಿ ರಂಜಣಗಿ ಹೀಗೆ ಹೇಳುತ್ತಾರೆ. ಅವರು ಬದಕ (ಹಣ ಬಂಗಾರ) ಹುಗಿದಿಡಲು ಕೊಡ ರಂಜಣಿಗೆಗಳನ್ನ ಬಳಸುತ್ತಿದ್ದುದು ಇಂದೂ ನಿದರ್ಶನಕ್ಕೆ ಬರುತ್ತಿವೆ. ಒಂದು ಮಗಿದೂ ಇನ್ನೊಂದು ಮಗಿಗೂ ವಿಶೇಷ ವ್ಯತ್ಯಾಸ ಅಳತೆಯಲ್ಲಿರುತ್ತಿರಲಿಲ್ಲ. ಅದರಂತೆ ಗಡಿಗೆ ಹಂದಿಗೆ

ಕೊಡಗಳಲ್ಲಿಯೂ ಸಹ ಇಷ್ಟು ಮಿಳ್ಳಿ ಅಂದರೆ ಒಂದು ಕುಳ್ಳಿ. ಇಷ್ಟು ಕುಳ್ಳಿ ಅಂದರೆ ಒಂದು ಗಡಿಗೆ ಹೀಗೆ ಅವರ ಕೋಷ್ಟಕವೆ ಇದೆ.

ಇದರಂತೆ ಬುಟ್ಟಿ ಹೆಡಿಗೆ ಗಳಿಗೆಗಳೂ ಕಾಳು ಮೊದಲಾದವನ್ನು ಅಳೆಯುವ ಅಳತೆಯ ಸಾಧನಗಳಾಗಿದ್ದವು. ವಸ್ತುವಿನ ಭಾರವನ್ನನುಸರಿಸಿ ಸಣ್ಣ ದೊಡ್ಡ ಆಕಾರದ ಹೆಡಿಗೆ ಬುಟ್ಟಿಗಳನ್ನು ಹೆಣೆಯುತ್ತಿದ್ದರು. 'ಬಿಟ್ಟಿನ ಬುಟ್ಟಿ' 'ಕಣ್ಣದ ಬುಟ್ಟಿ' ಗಳಿದ್ದರೆ ಕಸರಿನ ಹೆಡಿಗೆ ಹಂಡೆ ಹೆಡಿಗೆ ಹೊಟ್ಟಿನ ಹೆಡಿಗೆಗಳಿರುತ್ತವೆ. ಬುಟ್ಟಿಗಳು ಪಡಸಾಲೆಯಿಂದ ಅಡಿಗೆ ಮನೆವರೆಗೆ ಓಡಾಡುವ ವಸ್ತು. ಹಡೆದಿದ್ದರೆ ಹೆಡಿಗೆಗಳು ವಸ್ತು ಕೇವಲ ಅಂಗಳಕ್ಕೇ ಮೀಸಲು. ಕಾರಣ ಹೆಡಿಗೆಗಳನ್ನು ಹಿಂಡಿ (ಈಚಲು) ಘರಕೆಯಿಂದ ಮಾಡಿರುತ್ತಾರೆ. ಆ ಗಿಡ ಮೈಲಿಗೆಯದೆಂಬ ಭಾವನೆ ಇದೆ. ಬುಟ್ಟಿಗೆ ಬುಟ್ಟಿಗಳನ್ನು ಲಕ್ಕಿ ಹುತ್ತು ಹೂಲಿಯ ಜಬರುಗಳಿಂದ ಮಾಡುತ್ತಾರೆ. ಅವುಗಳಿಗೆ ಎಣ್ಣೆ ಮಾಡಿ ಬಳಸುವರು. ಹೆಸರುಗಳು ಒಂದೇ ಅಳತೆಯವಾದರೂ ಬುಟ್ಟಿಗಳು ವಿವಿಧ ಅಳತೆ ಆಕಾರದವಿರುತ್ತವೆ. 'ದುರಡಿ' ಮಾತ್ರ ರೊಟ್ಟಿ ಇಡಲು ಮಾಡಿದ್ದು. ಅದಕ್ಕೆ ಏನೂ ಹಚ್ಚುವುದಿಲ್ಲ.

ಈ ಬುಟ್ಟಿಗಳಿಂದಲೇ ಕೊಡುಕೊಳ್ಳುವುದು. ಕಾಳುಕಡಿ ಹಂಚಿಕೊಳ್ಳುವುದು. ಪಾಲುಮಾಡಿಕೊಳ್ಳುವುದು ಈಗಲೂ ರೂಢಿ. ಇದಕ್ಕೆ ಅಳತೆಯ ಗಡಿಗೆಗಳನ್ನೂ ಬಳಸುವ ವಿಧಾನವೂ ಕೆಲವು ಕಡೆ ಇದೆ. ಸಾಮಾನ್ಯವಾಗಿ 'ಮಾನ' (Measurement) ಅಂದರೇನೆ ಅಳತೆ. ಈ ಪದವನ್ನು ಮೂಲವಾಗಿಟ್ಟುಕೊಂಡು ಒಮ್ಮಾನ ಇಮ್ಮಾನ ನಾಕ್‌ಮಾನ ಅರಮಾನ ಎಂದು ಹೇಳುತ್ತಾರೆ. ಇಮ್ಮಾನ ಬುಟ್ಟಿ ನಾಕಮಾನ ಬುಟ್ಟಿ ಎಂದು ಅಳತೆಯ ಬುಟ್ಟಿಗಳು ಒಮ್ಮಾನಗಡಗಿ ಇಮ್ಮಾನಗಡಗಿ ಎಂದು ಅಳತೆಯ ಗಡಿಗೆಗಳೂ ಇದ್ದುವು. ಈ 'ಮಾನ' ಪದ ತೀರ ಹಳೆಯದು. ಬಸವಣ್ಣನವರ ವಚನ ಹಾಗೂ ಅದಕ್ಕೂ ಮೊದಲಿನ ಗ್ರಂಥಗಳಲ್ಲಿ ಕಾಣಬರುತ್ತದೆ. ಆದರೆ ಈ 'ಮಾನ' ಅನ್ನುವುದನ್ನೇ ಒಂದು 'ಮಾಪು' ಎಂದು ಹೇಳುತ್ತಾರಾದರೂ ಎಲ್ಲ ಕಡೆಗೂ ಅದೇ ಅಳತೆಯ ಮಾಪು ಆದಾಗಿಲ್ಲ. ನಾಲ್ಕು ಸೊಲಿಗೆಗೆ ಒಂದು 'ಮಾನ' ಹದಿನಾರು 'ಮಾನ'ಕ್ಕೆ ಒಂದು ಒಕ್ಕಳ ಚೀಲ ಎಂದು ಹೇಳುವ ರೂಢಿ ಸಾಮಾನ್ಯವಾದುದು. ಇದೇ ಲೆಕ್ಕದ ಮೇಲೆ 'ಗಳಗಿ' 'ಹಗೆ' 'ಅಂಬಾರಿ'ಗಳನ್ನು ವಿರಚಿಸುತ್ತಿದ್ದರು. 'ನಾಕಮಾನದ' 'ಗಳಗಿ' ಎಂಟು ಮಾನದ ಗಳಗಿ ನಾಕವಕ್ಕಳ ಗಳಿಗಿ ಮುಂತಾಗಿ 'ಹಗೆ'ಗಳ ಅಳತೆಯನ್ನು ಹೇಳುವಾಗಲೂ ಮೂವತ್ತು ಚೀಲದ ಹಗೆ ಎಪ್ಪತ್ತು ಚೀಲದ ಹಗೆ ಎಪ್ಪತ್ತರವಾ (ಹತ್ತು) ಚೀಲದ ಹಗೆ. ಅಂಬಾರಿ 'ಹತ್ತ ಹೇರಿನದು' ನಾಕ ಖಂಡುಗದ್ದು (ಖಂಡುಗ=ಇಪ್ಪತ್ತು ಚೀಲ) ಎಂದೂ

ಹೇಳುತ್ತಾರೆ. ಮಾನದಂಡಗಳೂ ಇದ್ದವೆನ್ನುವುದನ್ನು ಈಗಲೇ ನೋಡಿದ್ದೇವೆ. ಅದರಂತೆ 'ಚಾಪೆ' ಮೆಣಸಿನಕಾಯಿ 'ಜೋಳಗಿ' ಹತ್ತಿ ಹೊಟ್ಟು ಇವು ಅವರ ಪ್ರಮಾಣದ ಸಾಧನಗಳು.

ಮೈ ಮುಚ್ಚಲು ಬೇಕಾದ ಅರಿವೆಯನ್ನು ಹೆಣ್ಣು ಗಂಡುಗಳಿಗೆ ಒಂದು ಅಳತೆಯಲ್ಲಿ ನಿರ್ಧರಿಸಿದ್ದರು. ಹದಿನಾರ ಮೊಳದ ಸೀರಿ ನಾಕಮೊಳದ ಸೆಲ್ಲೆ ಒಂಬತ್ತ ಮೊಳದ ಧೋತರ ಇಪ್ಪತ್ತೆರಡ ಮೊಳದ ರುಮಾಲು. ಹೀಗೆ ಮೊಳ ಗುದ್ದ–ಮೊಳ ಗೇಣು ಮುಂತಾದ ಅಳತೆಯಲ್ಲೇ ನೇಯುತ್ತಿದ್ದರು. ಇದರಲ್ಲಿ ಹೆಚ್ಚು ಕಡಿಮೆ ಆಗದಂತೆ ನೋಡಿಕೊಳ್ಳುತ್ತಿದ್ದರು ನೆಯ್ಕಾರರು.

ಜನಪದದಲ್ಲಿ ಇಪ್ಪತ್ತಕ್ಕಿಂತ ಹೆಚ್ಚಿನ ಸಂಖ್ಯೆ ಎಣಿಸುವ ಅರ್ಥಮಾಡುವ ಸಾಮರ್ಥ್ಯ ಬಹಳ ಜನರಿಗಿರಲಿಕ್ಕಿಲ್ಲ. ಅದಕ್ಕಾಗಿ ದೊಡ್ಡ ಸಂಖ್ಯೆಗಳನ್ನು ಇಪ್ಪತ್ತರ ಗುಂಪಿನಲ್ಲೇ ಹೇಳುತ್ತಿದ್ದರು. ವಯಸ್ಸು ಹಣ ಮುಂತಾದವುಗಳ ಲೆಕ್ಕ ಹೇಳುವಾಗ ಎಡ್ಡಿಪ್ಪತ್ತು ನಾಕಿಪ್ಪತ್ತು ಆರಿಪ್ಪತ್ತು ಹೀಗೆ ಅವರ ಎಣಿಕೆ.

ಬದುಕಿನ ಹಲವು ಪ್ರಮುಖ ಘಟನೆಗಳನ್ನಾಧರಿಸಿ ಅಂದರೆ 'ಡೋಗಿ ಬರದಾಗ' 'ಸಾತಿ ಮಳೆ ಹತ್ತಿದ ವರಸ' 'ಸೀರಿನ ಬರಾ ಬಿದ್ದಾಗ' 'ಚಾಲಚಿಕ್ಕಿ ಮೂಡಿದಾಗ' ಹೀಗೆ ನಿಸರ್ಗದ ಪ್ರಕೋಪಗಳನ್ನು ನೆನಪಿಟ್ಟುಕೊಂಡು ವಯಸ್ಸನ್ನು ಹೇಳುತ್ತಿದ್ದರು. ಹೆಣ್ಣು ಮಕ್ಕಳು ವಯಸ್ಸು ಹೇಳುವಾಗ : ಮೈ ನೆರದಾಗ ನೆರತ ನಾಕೊರಸಾತು ಎಡ್ಡ ಹಡದಾಗ ಹೀಗೆ ವಯಸ್ಸನ್ನು ನಿರ್ಧರಿಸುವ ರೂಢಿ ಇಂದೂ ಇದೆ.

ದನಗಳ ವಯೋಮಾನದ ವಿಚಿತ್ರ ವಿಧಾನಗಳು ಅವರಲ್ಲಿವೆ. ಸಾಮಾನ್ಯವಾಗಿ ಕರು ಹೋರಿ ಎತ್ತು. ಅದರಂತೆ ಕರು ಮಣಕ ಆಕಳು (ಎಮ್ಮೆ) ಎಂದು ಮೂರು ಹಂತಗಳನ್ನು ಹೇಳುತ್ತಾರೆ. ಗಂಡುದನಗಳ ವಯಸ್ಸನ್ನು ಅವುಗಳ ಹಲ್ಲುಗಳ ಮೇಲಿಂದ ನಿರ್ಧರಿಸುತ್ತಾರೆ. ಹಾಲ್ಹಲ್ಲ ಹಲ್ಲಕೆಡವು (ಸುಮಾರು ಎರಡುವರೆ ವರ್ಷ) 'ಹಲ್ಲ ಹಚ್ಚು' (ಸುಮಾರು ಮೂರು ವರ್ಷ) ಹೂಡಲಿಕ್ಕೆ ಸಿದ್ಧವಾದ ಸ್ಥಿತಿ. ಮುಂದೆ ಎರಡ್ಹಲ್ಲ ನಾಕ್ಹಲ್ಲ ಆರ್ಹಲ್ಲ ಅದರಂತೆ ಎಂಟ್ಹಲ್ಲ ಅನ್ನುವುದಿಲ್ಲ. ಅಲ್ಲಿ 'ಬಾಯ್ಗೂಡು' ಅನ್ನುತ್ತಾರೆ. ಆಗ ಆ ಎತ್ತಿನ ವಯಸ್ಸು ಸುಮಾರು ಎಂಟು ಒಂಬತ್ತು ವರ್ಷ. ಇಂದೂ ಮನುಷ್ಯರ ಹಲ್ಲುಗಳನ್ನು ನೋಡಿ ವಯಸ್ಸನ್ನು ಡಾಕ್ಟರರು ನಿರ್ಧರಿಸುತ್ತಾರೆ. ಎತ್ತಿನ ಹೆಗಲ 'ಹನ್ನೆಡ್ಡ ವರ್ಷ' ಎಂದರೆ ಅಷ್ಟೇಕಾಲ ಅದು ಹೂಡಲಿಕ್ಕೆ ಬರುತ್ತದೆಂದು ಅರ್ಥ. 'ಹೆಗಲ ತೋಂದೈತಿ' ಅಂದರೆ ಎತ್ತಿಗೆ ಪೆನ್ಶನ್ ಆಗಿದೆ ಎಂದು ತಿಳಿಯಬೇಕು.

ಆಕಳು ಎಮ್ಮೆಗಳನ್ನು ಕುರಿತು ಹೇಳುವಾಗ ಒಂದು ಈದದ್ದು 'ಚೊಚ್ಚಿಲ' ಎರಡು ಈದದ್ದು 'ಮರಿಚಲ.' ಮುಂದೆ ಮೂರುಸೂಲು ನಾಕಸೂಲು ಹೀಗೆ ಅವುಗಳ ವಯಸ್ಸನ್ನು ನಿರ್ಧರಿಸುತ್ತಾರೆ. ಅವುಗಳ ಹಾಲಿನ ವಿಷಯ ಹೇಳುವಾಗ 'ಗಿಣ್ಣ ಪ ಹಾಲು' (ಗಿಂಪದ ಹಾಲು) ಈದು ಹತ್ತು ದಿನದವರೆಗೆ 'ಎಳಗಂದಿ' ಈದು ನಾಕ ತಿಂಗಳವರೆಗೆ 'ಅನಂತರ ಕಡಗಂದಿ' 'ಒಪ್ಪತ್ತಿಂಡು' ಹಿಂಡುವದನ್ನು ನಿಲ್ಲಿಸುವ ಕಾಲ. ಬೆಳೆಯ ವಯಸ್ಸು ಹೇಳುವಾಗ 'ಎಡಿಗಿ ಬರು' (ಸುಮಾರು ಮೊಳಕಾಲೆತ್ತರ ಬೆಳೆದಾಗ ಎಡೆಹೊಡೆಯುತ್ತಾರೆ.) 'ಹೊಡಿಗಿ ಬರು' 'ತೆನಿತೇರಿ' 'ಹೊಡೆನಿ' 'ಹಾಲ್ಗಾಳು' 'ಸೀತನಿ' ಹುರಗಾಳು' 'ಮಾಗು' 'ಕೊಯ್ಲಿಗೆ ಬರು' ಹೀಗೆ ಹಲವಾರು ಹಂತಗಳನ್ನು ಹೇಳುತ್ತಾರೆ. ಹಣ್ಣು ಕಾಯಿಯ ವಿಷಯದಲ್ಲಿ 'ಮಿಡಿ' ಗೊಟ್ಟಗಟ್ಟು (ಮಾವಿನ ಕಾಯಿಗೆ) ಪಾಡಾಗು ಹಣ್ಣಾಗು ಎಂದು ಹೇಳುವರು.

ಗ್ರಾಮೀಣ ಮನೆಗಳು ಸೌಂದರ್ಯಕ್ಕಿಂತ ಬದುಕಿನ ಅವಶ್ಯಕತೆಯನ್ನು ಆಧರಿಸಿ ಕಟ್ಟಿದಂಥವುಗಳು. 'ಅಂಗಳ' ಗ್ವಾದ್ಲಿ (ದನಣಿ) ಪಡಸಾಲಿ ಅಡಗಿಮನಿ ದೇವರಮನಿ ಮತ್ತು ಕೊಟ್ರಿ ಇವು ಒಂದು ಒಕ್ಕಲುತನದ ಕುಟುಂಬಕ್ಕೆ ಬೇಕಾದ ಅವಶ್ಯಕತೆಗಳು: ಆದರೆ ಅವುಗಳ ಅಳತೆ ಮಾತ್ರ ಬೇರೆ ಬೇರೆಯಾಗಿರುತ್ತದೆ. 'ಅಂಕಣ' ಮನೆಗಳ ಅಳತೆಯನ್ನು ಹೇಳುವ ಸಾಧನ. ಹನ್ನೆರಡಂಕಣದ ಪಡಸಾಲಿ ಹತ್ತಂಕಣದ ಅಂಗಳ ಆರಂಕಣದ ಅಡಗಿಮನಿ ನಾಕಂಕಣದ ದೇವ್ರಮನಿ ಇದು ಮನೆಯ ಅಳತೆ (Size) ಹೇಳುವ ರೀತಿ ಒಂದು ಅಂಕಣ ಎಂದರೆ ತಮಗೆ ಸಿಕ್ಕುವ ತೊಲೆ ಜಂತಿಗಳನ್ನಾಧರಿಸಿ ಸುಮಾರು ಹತ್ತು ಅಡಿ ಉದ್ದ ಐದು ಅಡಿ ಅಗಲವಾಗುತ್ತದೆ. ಕಂಭಗಳ ಲೆಕ್ಕದ ಮೇಲೂ ಮನೆಯ ವಿಸ್ತಾರವನ್ನು ಹೇಳಲಾಗುತ್ತಿತ್ತು. ಹತ್ತಕಂಬದ ಮನಿ ಇಪ್ಪತ್ತಕಂಬದ ಮನಿ ಮುಂತಾಗಿ. ಉದ್ದಳತೆಯಲ್ಲಿ ಎರಡು ತೊಲೆಗಳು. ಕೂಡುವಲ್ಲಿ ಒಂದು ಕಂಭ ಬರುತ್ತಿತ್ತು. 'ಸಾವಿರ ಕಂಭದ ಬಸದಿ' ಮೊದಲಾದ ಹೆಸರುಗಳೂ ಅದರ ವಿಸ್ತಾರವನ್ನೇ ಸೂಚಿಸುತ್ತವೆ.

'ಕೂಲಿಗಾಗಿ ಕಾಳು' ಜನಪದದಲ್ಲಿ ಅನಂತಕಾಲದಿಂದ ನಡೆದು ಬಂದ ರೀತಿ. ನಟ್ಟು ತಡಿಯಲಿಕ್ಕೆ ಇಷ್ಟು ; ಮಟ್ಟೀಹೊಡೆಯಲಿಕ್ಕೆ ಇಷ್ಟು : ಎಂದು ಜೋಳ ಮೊದಲಾದ ಕಾಳನ್ನೂ ನಿರ್ಣಯಿಸುತ್ತಾರೆ. ಆದರೆ ಹತ್ತೀ ಬಿಡಿಸಲಿಕ್ಕೆ ಸೇಂಗಾ ಮೆಣಸಿನ ಕಾಯಿ ಹರಿಯಲಿಕ್ಕೆ ಹೋದರೆ ಅವರು ಬಿಡಿಸಿದ ಹತ್ತಿಯ ಇಪ್ಪತ್ತನೆ ಭಾಗ ಹರಿದ ಸೇಂಗಾ ಮೆಣಸಿನಕಾಯಿಯ ಹದಿನಾರನೆಯ ಭಾಗ ಹೀಗೆ ಅವರ ಕೂಲಿಯಾಗುತ್ತದೆ. ಒಬ್ಬರ ಹೊಲ ಇನ್ನೊಬ್ಬ ಮಾಡುವಾಗ ಸರಿಪಾಲು ಮುಕುವೆ ಚೌಥಾಯಿ ಹೀಗೆ ಒಪ್ಪಿಕೊಂಡು (ಮಾನದ) ಅಳತೆಯ ಬುಟ್ಟಿಯಿಂದ ತಮ್ಮ ತಮ್ಮ ಪಾಲು

ಹಂಚಿಕೊಳ್ಳುತ್ತಾರೆ. ಕಟ್ಟಿಗೆಯನ್ನು, [illegible] ಕಟ್ಟುಗಳಾಗಿ ಈ ಕೊಪ್ಪರದಿಂದ ಹಂಚಿಕೊಳ್ಳುತ್ತಾರೆ. ಹಾಗೆ ಪಾಲುಮಾಡಿಗ ಬಂದುದು [illegible] ಮೂರುಮಾರದ ಕಟ್ಟು ನಾಲ್ಕುಮಾರದ ಕಟ್ಟು ಎಂದು ಹೇಳುತ್ತಾರೆ. (ಮೂರು [illegible] ಹಗ್ಗದಲ್ಲಿ ಕಟ್ಟಬಹುದಾದಷ್ಟು 'ಮೂರು ಮಾರದ ಕಟ್ಟು')

ಹೆಣ್ಣು ಮಕ್ಕಳು ತಮ್ಮದೇ ಆದ ಅಳತೆ ಪ್ರಮಾಣಗಳನ್ನು ಅನುಸರಿಸುತ್ತಿದ್ದಾರೆ. ನಾಲ್ಕುಬಟ್ಟಲು [illegible] ಹಸನ ಮಾಡಿದ್ದಿ ಎಷ್ಟು [illegible] ಬಿಡಿದ್ದಿ, ಬಟ್ಟೆಬಟ್ಟೆ ರೊಟ್ಟಿಮಾಡಿದ್ದಿ ಒಂದು ಮುದ್ದೆ ರೊಟ್ಟಿ ಬಡಿದ್ದಿ ಹೀಗೆ ಮಾತ ಬಟ್ಟೆಯ ಅಳತೆಯಲ್ಲಿಯೇ ಹೇಳುತ್ತಾರೆ. [illegible]ದರೆ ನಾಡಿದ ಹಿಟ್ಟನ್ನು 'ಒಬ್ಬೆ'ಗಳಲ್ಲಿ ಒಬ್ಬೆಯನ್ನು 'ಉಳ್ಳೆ'ಗಳಲ್ಲಿ ವಿಭಾಗಿಸುತ್ತಾರೆ. ಒಂದು ರೊಟ್ಟಿಯಾಗುವಷ್ಟು ಹಿಟ್ಟಿನ ಮುದ್ದಿಗೆ 'ಉಳ್ಳೆ' ಎಂದೂ ಹತ್ತು ಇಪ್ಪತ್ತು ರೊಟ್ಟಿಯಾಗುವಷ್ಟು ಹಿಟ್ಟಿನ ಮುದ್ದಿಗೆ ಒಬ್ಬೆ ಎಂದೂ ಕರೆಯುತ್ತಾರೆ. 'ಒಬ್ಬೆ' ಎಂದರೆ ಒಬ್ಬ ತಿನ್ನುವಷ್ಟು ಎಂದು ಅರ್ಥವೇನೊ? ಕಟ್ಟಿಗಾಗಲೂ ಒಂದು 'ಒಬ್ಬೆ' ಹಿಡಿಯುವಷ್ಟಕ್ಕೆ ಒಂದು 'ಒಬ್ಬಿ' ಅನ್ನುತ್ತಾರೆ.

ಹಾಲು ಮೊಸರು ಮಾರುವ ಹೆಣ್ಣು ಮಕ್ಕಳಿಗೆ ಬಾರ ತಿಥಿ ಲೆಕ್ಕ ಗೊತ್ತಾಗುತ್ತಿರಲಿಲ್ಲ. ಒಂದು ಪಾಗಿ ಹಾಲೊ ಒಂದು ಕುಳ್ಳ ಮೊಸರೊ ಕೊಟ್ಟು ಅದರ ಲೆಕ್ಕ ಬರೆದಿಡುವ ರೀತಿ ವಿಚಿತ್ರ. ಹಾಲೊ ಮೊಸರೊ ಕೊಟ್ಟಕೂಡಲೆ ಅವುಗೆ ಮನೆಯ ಗೋಡೆಯ ಮೇಲೆ ವಿಭೂತಿಯಿಂದ ಇಲ್ಲವೆ ಸುಣ್ಣದಿಂದ ಒಂದೊಂದು ಗೆರೆಯನ್ನು ಬರೆಯುತ್ತಿದ್ದರು. ಬಿಲ್ ತೆಗೆದುಕೊಳ್ಳುವಾಗ ಆ ಗೆರೆ ಎಣಿಸಿ ಅವರ ಲೆಕ್ಕ. ಇದರಂತೆ ದುಡಿಯಲು ಬಂದ ದಿನಗೂಲಿಯವರು ತಾವು ದುಡಿದಷ್ಟು ದಿನಗಳ ನೆನಪಿಗಾಗಿ ಮನೆಯ ಹೊರಗಿನ ಗೋಡೆಯ ಮೇಲೆ ಹಂಚಿ (ಸೆಗಣಿ) ಯಿಂದ ಬೆರಳು ಮೂಡಿಸುತ್ತಿದ್ದರು. ಅದೇ ಅವರ ಲೆಕ್ಕಪತ್ರದ ಡೈರಿ!

ತೀರ ಚಿಕ್ಕ ಸೂಕ್ಷ್ಮ ಅಳತೆ ಹೇಳಲು ಕಾಳು ಕಾಯಿಗಳ ಗಾತ್ರವನ್ನು ಒಂದು ಪ್ರಮಾಣವಾಗಿಸಿ ಹೇಳುತ್ತಾರೆ. 'ಎಳ್ಳುಕಾಳಷ್ಟು' 'ಸಾಸ್ವಿಕಾಳಷ್ಟು' 'ಜೋಳದ ಕಾಳಷ್ಟು' 'ಗುಲಗಂಜಿಯಷ್ಟು' 'ನಿಂಬೆಕಾಯಷ್ಟು' 'ಬಳೊಲ ಕಾಯಷ್ಟು' 'ಹೀಗಿನ ಕಾಯಷ್ಟು' ಮುಂತಾಗಿ.

'ಹನಿ ಸೀರಿಲ್ಲ' 'ಹನಿತುಪ್ಪ ನೀಡು' ಎನ್ನುವಲ್ಲಿ 'ಹನಿ' ತೀರ ಸೂಕ್ಷ್ಮ ಪ್ರಮಾಣಕ್ಕೆ ಸಾಕ್ಷಿ. 'ಹೂಂ' ಅನುವಾಗ್ರ ಬರ್ತೀನೂ 'ಕಣ್ಣುಚ್ಚಿ ತೆರೆಯುವಾಗ್ರ ಬರ್ತೀನು' ತೀರ ಸೂಕ್ಷ್ಮ ಅವಧಿಯ ನಿರ್ದೇಶನ. ಹೀಗೆ ಚಿಕ್ಕ ಗಾತ್ರ ಸೂಕ್ಷ್ಮ ಅವಧಿಯನ್ನು ಹೇಳುತ್ತಾರೆ.

ಅಳತೆಯ ಸಾಧನಗಳು ಕಾಲಾನುಕಾಲಕ್ಕೆ ಪ್ರದೇಶದಿಂದ ಪ್ರದೇಶಕ್ಕೆ ಬದಲಾಗುತ್ತ ಬಂದಿವೆ. ಜನಪದ ಎಲ್ಲದರಲ್ಲಿಯೂ ತನ್ನ ಪ್ರಾದೇಶಿಕತೆಯ ವೈಶಿಷ್ಟ್ಯಗಳನ್ನು ಕಾಯ್ದುಕೊಂಡು ಬಂದಂತೆ ಈ ಸಾಧನಗಳಲ್ಲಿಯೂ ಪ್ರಾದೇಶಿಕತೆಯ ಪ್ರಾಬಲ್ಯವನ್ನು ಉಳಿಸಿಕೊಂಡು ಬಂದಿವೆ. ಅದಕ್ಕೆಂದೇ ನಾನು ಜಾನಪದ ಅಳತೆ ಮಾಪ್ಯಗಳಿಗೆ ಸರಿಸಮಾನವಾದ ಇಂದಿನ ಅಳತೆಯ ಮಾಪ್ಯಗಳ ಪ್ರಮಾಣ ಕೋಷ್ಟಕವನ್ನು ಹೇಳದೆ ಜನಪದದಲ್ಲಿ ಸಾಮೂಹಿಕವಾಗಿ ಸ್ವೀಕರಿಸಿದ ಅಳತೆಯ ಪದ್ಧತಿಗಳ ಕಡೆಗೆ ಗಮನ ಸೆಳೆದಿದ್ದೇನೆ. ಅದೂ ಉತ್ತರ ಕರ್ನಾಟಕಕ್ಕೆ ಸಂಬಂಧಿಸಿದ್ದು.

ಅಳತೆಗೆ ಸಂಬಂಧಪಟ್ಟಂತೆ ಜಾನಪದದಲ್ಲಿ ಕಂಡ ಇನ್ನೊಂದು ವೈಶಿಷ್ಟ್ಯವೆಂದರೆ ತೂಕ (weight) ಮಾಡುವ ಪದ್ಧತಿಯೇ ಇರಲಿಲ್ಲ. ಅಳೆಯುವ (Measurement) ರೀತಿಯನ್ನೇ ಎಲ್ಲದರಲ್ಲಿಯೂ ಅಳವಡಿಸಿಕೊಂಡಿದ್ದರು. ತಮ್ಮ ದೇಹದ ಅಂಗಾಂಗಗಳನ್ನು ಮರ ಬುಟ್ಟಿ ಗಡಿಗೆ ಮೊದಲಾದ ದಿನಬಳಕೆಯ ವಸ್ತುಗಳನ್ನು ಎತ್ತು ಮೊದಲಾದ ಪ್ರಾಣಿಯನ್ನು ಅಳತೆಗೋಲಾಗಿಸಿಕೊಂಡರು. ಅವರ ವಿಧಾನಗಳನ್ನೇ ಉಪಯೋಗಿಸಿಕೊಂಡು ಆಧುನಿಕ ಅಳತೆ ಮತ್ತು ಸಾಧನಗಳನ್ನು ಅಭಿವೃದ್ಧಿಪಡಿಸಿಕೊಳ್ಳಲಾಗಿದೆ. ಉದಾಹರಣೆಗೆ ಒಂದು ಕುಣಿ (pit) ಅಥವಾ 'ಕಟ್ಟಿ' ಮಣ್ಣು ಅಗೆಯುವುದೆಂದರೆ 'ಗುದ್ಮುಳಾ' (ಮುಷ್ಟಿ ಮಾಡಿದ ಮೊಳ) ತಗ್ಗು, ಹತ್ತು ಗುದ್ಮುಳಾ ಉದ್ದಗಲ ಅಗೆಯುವುದು. ಅದನ್ನೇ ಇಂದು ಒಂದು ಅಡಿ ಆಳ ಹತ್ತು ಅಡಿ ಉದ್ದಗಲ ಮಾಡಿಕೊಂಡಿದ್ದೇವೆ. ಆದರೆ ಅಂದು ಕಟ್ಟಿಗೆ ಕೋಲು ಹಗ್ಗದಿಂದ ಅಳೆಯುತ್ತಿದ್ದರೆ ಇಂದು ಟೇಪು ಬಂದಿದೆ ಅಷ್ಟೆ. ಆದರೆ ಈ ಅಳತೆಗೆ ಮೂಲ ಒಬ್ಬ ಮನುಷ್ಯ (ಆಳು) ಒಂದು ದಿನದ ಕೆಲಸದ ಅವಧಿಯಲ್ಲಿ ಎಷ್ಟು ಅಗೆಯಬಲ್ಲ ಎನ್ನುವುದನ್ನು ನಿರ್ಧರಿಸಿದ್ದು ಮಾತ್ರ ಜಾನಪದ ಬುದ್ಧಿ.

ಶಿಲ್ಪದಲ್ಲಿ ಅಳತೆ ಪದ್ಧತಿ

—ಎಂ. ಎನ್. ಪ್ರಭಾಕರ್

ನಮ್ಮ ದೇಶದ ಗುಡಿಗೋಪುರಗಳ ಅಧ್ಯಯನ ಪಾಶ್ಚಾತ್ಯರಿಂದ ಆರಂಭಗೊಂಡಾಗ, ಈ ಅಧ್ಯಯನಕ್ಕೆ ತಮ್ಮದೇ ಆದ ಚೌಕಟ್ಟನ್ನು ನಿರ್ಮಿಸಿಕೊಂಡು ವಿವರಣೆ ನೀಡಿದ ಪರಂಪರೆಯಲ್ಲಿ ಜೆಮ್ಸ್ ಫರ್ಗ್ಗುಸನ್ ಮೊದಲಿಗರು. ಈತ ಸುಮಾರು ಐದುಸಾವಿರ ಛಾಯಾ ಚಿತ್ರಗಳನ್ನು ಆಧರಿಸಿ ದೇವಾಲಯ ಶಿಲ್ಪವನ್ನು ವಿವರಿಸಿದ. ಆತನ ಗ್ರಂಥದ ಪ್ರಸ್ತಾವನೆಯಲ್ಲಿ ಈ ರೀತಿ ನುಡಿಯುತ್ತಾನೆ.

"In sush a country as India, the chisels of her sculptors are, so for as I can judge, immeasurably more to be trusted than the pens of her authors."

ಆತನನ್ನು ಬೆರಗುಗೊಳಿಸಿದ ವಾಸ್ತುಶಿಲ್ಪದ ಬಗ್ಗೆ ಬಹುಶಃ ಆತನಿಗೆ ದೊರಕಿದ ಗ್ರಂಥಗಳಾವುವೂ ಸಹಕಾರಿಯಾಗಿರಲಿಲ್ಲ. ಆದ್ದರಿಂದ ಅವರೇ ಹಾಕಿಕೊಂಡ ತಳಹದಿಯ ಮೇಲೆ ಅಧ್ಯಯನ ಆರಂಭವಾಯಿತು. ನಮ್ಮ ಕೆಲವು ಸಂಶೋಧಕರು ಇವರ ರೀತಿ ನೀತಿಗಳನ್ನು ಕಂಡು ಅಪಹಾಸ್ಯ ಮಾಡಿರುವುದುಂಟು. ಅವರಿಗೆ ಗ್ರಂಥಭಂಡಾರದ ಪರಿಚಯವಿಲ್ಲವೆನ್ನುವುದು ನಿಜ. ನಮ್ಮ ಶಿಲ್ಪಿಗಳೂ ಹಾಗೂ ವಿದ್ವಾಂಸರ ಸಹಾಯ ಒದಗಿಲ್ಲ ಎನ್ನುವುದೂ ನಿಜ. ಇದಕ್ಕೆ ನಮ್ಮಲ್ಲಿನ ಮಡಿವಂತಿಕೆ ಅಥವಾ ಅಪಕ್ವಜ್ಞಾನ ಕಾರಣವಾಗಿರಬಹುದು. ಫರ್ಗ್ಗುಸನ್ ಮೇಲೆ ಹೇಳಿದ ರೀತಿಯನ್ನು ತಿರಸ್ಕರಿಸುವ ಮುನ್ನ ಈ ವಿಷಯಕ್ಕೆ ಸಂಬಂಧಿಸಿದಂತೆ ಅಂದು ಬಳಕೆಯಲ್ಲಿದ್ದ ಅಳತೆ ಪದ್ಧತಿಯನ್ನು ಮಾತ್ರ ಇಲ್ಲಿ ಖಚಿತವಾದ ವಿವರಗಳೊಂದಿಗೆ ಪರಿಚಯಿಸುತ್ತೇನೆ. ಇದರಿಂದ ಶಿಲ್ಪ ಅಂದು ಎಷ್ಟು ಆಳವಾಗಿ ಹಾಗೂ ಶಾಸ್ತ್ರೀಯವಾಗಿ ಬೆಳೆದು ಬೇರೂರಿತ್ತು ಎಂದು ವ್ಯಕ್ತವಾಗುತ್ತವೆ. ಈ ವಿಷಯಾದಿಗಳನ್ನು ಗುರುತಿಸುವ ಗ್ರಂಥಗಳು ಫರ್ಗ್ಗುಸನ್ ಮುಂತಾದವರಿಗೆ ದೊರಕಿದ್ದಲ್ಲಿ ಈ ಶಾಸ್ತ್ರದ ಅಧ್ಯಯನ ಹೆಚ್ಚು ಪ್ರಚಲಿತದಲ್ಲಿ ಇರುತ್ತಿತ್ತು ಎನ್ನಬಹುದು. ಈ ಶಾಸ್ತ್ರದ ಅಧ್ಯಯನ ನಮ್ಮಲ್ಲಿ ಹೆಚ್ಚು ವ್ಯಾಪಕವಾಗಿ ಬೆಳೆದಿಲ್ಲ ಹಾಗೂ ಕಿಶೋರಾವಸ್ಥೆಯಲ್ಲಿದೆ ಎಂದು ಒಪ್ಪಿಕೊಳ್ಳಬೇಕಾಗಿದೆ.

ಈ ಕೆಳಗಿನ ಮಹಾಭಾರತದ ಶ್ಲೋಕವನ್ನು ಗಮನಿಸೋಣ.

ದೇವಾಯತನಸ್ಥಾಶ್ಚ ಕೌರವೇಂದ್ರಶ್ಚದೇವತಾಃ ।
ಕಂಪತೇ ಹಸಂತೇ ಚ ನೃತ್ಯಂತೀ ಚ ರುದಂತಿ ಚ ॥

ಭೀಷ್ಮಪರ್ವದ ಈ ಶ್ಲೋಕದಿಂದ ನಮಗೆ ಮಹಾಭಾರತದ ರಚನೆಯ ಕಾಲದಲ್ಲಿ ದೇವತಾಯತನಗಳು ಇದ್ದವೆಂದು ನಿರ್ಣಯಕ್ಕೆ ಬರಬಹುದು. ಆದರೆ ಅವುಗಳ ಸ್ವರೂಪ ವ್ಯಕ್ತವಾಗುವುದಿಲ್ಲ. ಕೆಲವು ವಿದ್ವಾಂಸರು ಇದು ವಿದ್ಯುಕ್ತವಾಗಿ ನಿರ್ಮಾಣ ಗೊಳ್ಳದ ಹಾಗೂ ಶಾಸ್ತ್ರ ರೀತ್ಯಾ ಪ್ರತಿಷ್ಠೆಮಾಡದ ವಿಗ್ರಹಗಳ ಅವಸ್ಥೆ ಎಂದು ತರ್ಕಿಸುತ್ತಾರೆ ಈ ವಿವರಗಳಲ್ಲಿ ಭಿನ್ನಾಭಿಪ್ರಾಯವಿದ್ದಾಗ್ಯೂ, ವ್ಯವಸ್ಥಿತವಾದ, ನಿರ್ಮಾಣಕಾರ್ಯಗಳು ಹಾಗೂ ಪ್ರತಿಷ್ಠಾಪನಾದಿಗಳು ಮಹಾಭಾರತದ ಕಾಲದಿಂದ ನೆರವೇರುತ್ತಿದ್ದವೆಂದು ಸಾಮಾನ್ಯವಾಗಿ ಪರಿಗಣಿಸಬಹುದು.

ಕ್ರಿ. ಶ. ೧೨ನೇ ಶತಮಾನದಲ್ಲಿದ್ದ ಸೂತ್ರಧಾರ ಮಂಡನನು ತನ್ನ 'ರೂಪ ಮಂಡನ' ಗ್ರಂಥದಲ್ಲಿ ದೇವಾಲಯಗಳಲ್ಲಿ ಪ್ರತಿಷ್ಠಾಪಿಸಲ್ಪಡುವ ಮೂರ್ತಿಗಳು ಶಾಸ್ತ್ರ ಗಳಲ್ಲಿ ತಿಳಿದಿರುವ ಲಕ್ಷಣಪ್ರಮಾಣಗಳನ್ನು ಅನುಸರಿಸಿ ಕಡೆದಿರಬೇಕೆಂದು ನಿರ್ದೇಶಿಸು ತ್ತಾನೆ.

ಪ್ರಾಸಾದೇ ಲಿಂಗಮೂರ್ತೀನಾಂ ಪ್ರಮಾಣೇ ಶಾಸ್ತ್ರಲಕ್ಷಣಮ್
ನಾಧಿಕಾಂಗಾ ನಹೀನಾಂಗಾ ಕರ್ತವ್ಯಾ ದೇವತಾಃ ಕ್ವಚಿತ್
ಮಾನಾಧಿಕಾ ಪರಿವಾರ ರಹಿತಾ ನೈವಪೂಜ್ಯಂತೇ

ಇದರಿಂದ ಶಾಸ್ತ್ರ ಸಂಪ್ರದಾಯಗಳನ್ನು ಅನುಸರಿಸಿ ಕಡೆದ ಮೂರ್ತಿಗಳೇ ಪ್ರತಿಷ್ಠಾಪಿಸಲ್ಪಟ್ಟವು ಎಂದು ವ್ಯಕ್ತವಾಗಿದೆ. ಇದೇ ರೀತಿ ದೇವಾಲಯಗಳೂ ನಿಯಮಬದ್ಧವಾಗಿ ರಚಿಸಲ್ಪಟ್ಟವೆ. ದೇವಾಲಯಗಳ ರಚನೆಯಲ್ಲಿ ಹಸ್ತಮಾನವೂ, ಶಿಲ್ಪರಚನೆಯಲ್ಲಿ ತಾಳಮಾನ ಹಾಗೂ ಹಸ್ತಮಾನವೂ ಬಳಸಲ್ಪಟ್ಟಿದೆ. ವಿಗ್ರಹಗಳ ಅಳತೆಯನ್ನು ಗರ್ಭಗೃಹ, ಸ್ತಂಭಗಳು ಇವುಗಳ ಅಳತೆಯನ್ನು ಆಧರಿಸಿ ಕಡೆಯು ವುದುಂಟು.

ಭರತನ ನಾಟ್ಯಶಾಸ್ತ್ರದ ಎರಡನೇ ಅಧ್ಯಾಯದಲ್ಲಿ ಅಂದು ಪ್ರಚಲಿತದಲ್ಲಿದ್ದ ಅಳತೆಪ್ರಮಾಣವನ್ನು ಈ ರೀತಿ ಉಲ್ಲೇಖಿಸುತ್ತಾನೆ.

ಅಣುರಜಶ್ಚ ಬಾಲಶ್ಚ ಲಿಕ್ಷಾ ಯೂಕಾ ಯವಾಸ್ತಥಾ
ಅಂಗುಲಶ್ಚ ತಥಾಹಸ್ತೋ ದಂಡಶ್ಚೈವ ಪ್ರಕೀರ್ತಿತಃ
(ನಾಟ್ಯಶಾಸ್ತ್ರ ೨-೧೬)

ನಾಟ್ಯಶಾಸ್ತ್ರವು ಕ್ರಿ. ಪೂ. ಐದನೇ ಶತಮಾನದಲ್ಲಿ ರಚಿಸಲ್ಪಟ್ಟಿದ್ದೆಂದು ವಿದ್ವಾಂಸರು ಅಭಿಪ್ರಾಯಪಟ್ಟಿರುವುದರಿಂದ ಈ ಅಳತೆ ಪದ್ಧತಿ ಅಂದಿನಿಂದ ಪ್ರಚಲಿತದಲ್ಲಿದೆ ಎಂದು ತಿಳಿಯಬಹುದು. ಭರತನ ನಾಟ್ಯಶಾಸ್ತ್ರದ ಅರಿವು ಭಾಸನಿಗೆ ಇತ್ತೆಂದೂ, ಭಾಸನ ಅಸ್ತಿತ್ವಕಾಲವು ಕೌಟಿಲ್ಯನಿಗಿಂತ ಹಿಂದೆ ಎಂದು ವಿದ್ವಾಂಸರು ನಿರ್ಧರಿಸಿದ್ದಾರೆ.

ಅಣುವೋಷ್ಟೌರಜಃಪ್ರೋಕ್ತವಸ್ ತಾನ್ಯಷ್ಟೌ ಬಾಲಉಚ್ಯತೇ
ಬಾಲಾಸ್ತ್ವಷ್ಟೌ ಭವೇಲ್ಲಿಕ್ಷಾ ಲಿಕ್ಷಾ ಷ್ಟೌಚ ಯೂಕಾಮತಾ
ಯೂಕಾಸ್ತ್ವ ಷ್ಟೌ ಯವೋ ಜ್ಞೇಯೋ ಯವಾಷ್ಟೌ ಚ ತಥಾಂಗುಲಂ
ಅಂಗುಲಾನಿ ತಥಾ ಹಸ್ತಶ್ಚ ತುರ್ವಿಂಶತಿರುಚ್ಯತೇ

(ನಾಟ್ಯಶಾಸ್ತ್ರ ೨-೧೭-೧೮)

ನಾಟ್ಯಶಾಸ್ತ್ರದ ಅನುಗುಣವಾಗಿ ಅಳತೆ ಪದ್ಧತಿ ಈ ರೀತಿಯಲ್ಲಿದೆ.

೮ ಅಣು — ೧ ರಜ
೮ ರಜ — ೧ ಬಾಲ
೮ ಬಾಲ — ೧ ಲಿಕ್ಷಾ
೮ ಲಿಕ್ಷಾ — ೧ ಯೂಕಾ
೮ ಯೂಕಾ — ೧ ಯವ
೮ ಯವ — ೧ ಅಂಗುಲ
೨೪ ಅಂಗುಲ — ೧ ಹಸ್ತ

ನಾಟ್ಯಶಾಸ್ತ್ರದ ನಂತರದ ಕಾಲದ್ದೆಂದು ನಿರ್ಧರಿಸಲ್ಪಟ್ಟ ಕೌಟಿಲ್ಯನ ಅರ್ಥಶಾಸ್ತ್ರದ ಪ್ರಕಾರ ಈ ಅಳತೆಯ ಉಲ್ಲೇಖ ಈ ರೀತಿಯಲ್ಲಿದೆ.

ಅಷ್ಟೌ ಪರಮಾಣವೋ ರಥಚಕ್ರೇ ವಿಪ್ರುಟ್ । ಅಷ್ಟೌಲಿಕ್ಷಾ ।
ತಾ ಅಷ್ಟೌ ಯೂಕಾಮಧ್ಯಃ । ತೇ ಅಷ್ಟೌ ಯವ ಮಧ್ಯಃ ।
ಅಷ್ಟೌ ಯವ ಮಧ್ಯಾಂಗುಲಂ ।

(ಅರ್ಥಶಾಸ್ತ್ರ ೨-೨೦-೯)

೧೧ನೇ ಶತಮಾನದಲ್ಲಿದ್ದ ಭೋಜರಾಜನು ತನ್ನ ಸಮರಾಂಗಣ ಸೂತ್ರಧಾರವೆಂಬ ಗ್ರಂಥದಲ್ಲಿ ಪ್ರಚಲಿತದಲ್ಲಿದ್ದ ಪದ್ಧತಿಯನ್ನು ಈ ರೀತಿ ವಿವರಿಸುತ್ತಾನೆ.

ರೇಣ್ವಷ್ಟಕೇನ ವಾ (ಬಾ) ಲಾಗ್ರಂ ಲೀಕ್ಷ ಸ್ಯಾದಷ್ಟಭಿಸ್ತುತೈಃ ।
ಭವೇದ್ ಯೂಕಾಷ್ಟಭಿಸ್ತಾಭಿರ್ಯವ ಮಧ್ಯಂ ತದಷ್ಟಕಾತ್ ॥
ಅಷ್ಟಭಿಃ ಸಪ್ತಭಿಃ ಷಡ್ಭಿರಂಗುಲಾನಿ ಯುವೋದರೈಃ ।
ಜ್ಯೇಷ್ಠಮಧ್ಯ ಕನಿಷ್ಠಾನಿ ತಚ್ಚ ತುರ್ವಿಂಶತಿ ಕರಃ ॥

(ಸಮರಾಂಗಣ ಸೂತ್ರಧಾರ ೯-೪-೫)

ಈ ಗ್ರಂಥಗಳ ಅಳತೆಯನ್ನು ಹೀಗೆ ಸಂಗ್ರಹಿಸಬಹುದು.

೮ ರೇಣು	— ೧ ಬಾಲಾಗ್ರ
೮ ಬಾಲಾಗ್ರ	— ೧ ಲೀಕ್ಷಾ
೮ ಲೀಕ್ಷಾ	— ೧ ಯೂಕಾ
೮ ಯೂಕಾ	— ೧ ಯವಮಧ್ಯ
೮-೭-೬ ಯವಮಧ್ಯ	— ೧ ಅಂಗುಲ
೨೪ ಅಂಗುಲ	— ೧ ಹಸ್ತ

ನಾಟ್ಯಶಾಸ್ತ್ರದ ಪದ್ಧತಿಯೊಂದಿಗೆ ಹೋಲಿಸಿದಾಗ ಈ ಚಿಕ್ಕ ಅಳತೆಗಳಲ್ಲಿ ಹೆಸರಿನಿಂದ ಕೊಂಚ ಭಿನ್ನವಾಗಿ ಕಂಡರೂ ಸಮಗ್ರವಾಗಿ ನೋಡಿದಾಗ ಈ ಪದ್ಧತಿಗಳು ಲೀಕ್ಷಾದ ನಂತರ ವ್ಯತ್ಯಾಸವಿಲ್ಲದೆ ಕರಾರುವಾಕ್ಕಾಗಿ ಬಳಕೆಯಲ್ಲಿವೆ. ಯವ, ಅಂಗುಲ ಹಸ್ತಗಳ ಬಳಕೆ ಮೂರ್ತಿಗಳ ಪ್ರಮಾಣವನ್ನು ಗುರುತಿಸುವಾಗ ಬಳಸುವುದುಂಟು. 'ಯವ' ಎಂದಲ್ಲಿ ಒಂದು ಸಾಧಾರಣ ಬಾರ್ಲಿಕಾಳಿನ ದಪ್ಪವನ್ನು ಸೂಚಿಸುತ್ತದೆ. ಇದನ್ನೇ ಯವಮಧ್ಯ, ಯವೋದರ, ಯವತಾರ ಎಂದು ಹಲವಾರು ಗ್ರಂಥಗಳು ಗುರುತಿಸುವುದುಂಟು. ೮, ೭ ಅಥವಾ ೬ ಕಾಳಿನೊಡಗೂಡಿದ ಅಂಗುಲವನ್ನು ಜ್ಯೇಷ್ಠಮಾನಾಂಗುಲ. ಮಧ್ಯಮಾನಾಂಗುಲ, ಕನಿಷ್ಠಮಾನಾಂಗುಲ ಎಂದು ಕ್ರಮವಾಗಿ ಭೋಜರಾಜನು ಹೆಸರಿಸುತ್ತಾನೆ. ಬಹುಶಃ ಈ ಕ್ರಮವು ೧೦ ಅಥವಾ ೧೧ ನೇ ಶತಮಾನದಿಂದ ಪ್ರಾರಂಭಿಸಲ್ಪಟ್ಟಿರಬೇಕು. ಟಿ. ಎ. ಗೋಪೀನಾಥರಾಯರು ಉತ್ತಮಮಾನಾಂಗುಲ ಮಧ್ಯಮಮಾನಾಂಗುಲ ಮತ್ತು ಅಧಮಮಾನಾಂಗುಲ ಎಂದು ಗುರುತಿಸಿದ್ದಾರೆ.

ಷಟ್ ಸಪ್ತಕಾಷ್ಟ ಯವತಾರ ವಿಹಿನ ಮಧ್ಯಂ ।
ಜ್ಯೋತ್ಯಷ್ಟಕಃ ತ್ರಿವಿಧಮಂಗುಲಮಾನಮುನ್ಯತ್ ॥

(ಸಕಲಾಧಿಕಾರ ೧-೨೦)

ಅಗಸ್ತ್ಯ ಪ್ರಣೀತವೆಂದು ನಿರ್ಧರಿಸಲ್ಪಟ್ಟ 'ಸಕಲಾಧಿಕಾರ' ವೆಂಬ ಗ್ರಂಥದಲ್ಲಿ ಆರು ಮಾನಗಳು ಸೂಚಿಸಲ್ಪಟ್ಟಿದ್ದು ಮೊದಲು ತಿಳಿಸಿನ ಮೂರು ಅಂಗುಲ ಮಾನಗಳು ಉತ್ಕೃಷ್ಟವೆಂದು ವಿವರಿಸಲ್ಪಟ್ಟದೆ.

ಅಂಗುಲವನ್ನು ಕರಾರುವಾಕ್ಕಾಗಿ ನಿರ್ದೇಶಿಸಲು ಹಲವಾರು ತೊಡಕುಗಳಿದು. ಶಿಲ್ಪಕ್ಕೆ ಸಂಬಂಧಿಸಿದಂತೆ ಮತ್ಸ್ಯಪುರಾಣ, ಅರ್ಥಶಾಸ್ತ್ರಗಳಲ್ಲಿ ಕೆಲವೆಡೆ ಅಸ್ಪಷ್ಟವಿವರಗಳಿಂದ ಕೂಡಿರುವುದುಂಟು. ಅಂಗುಲ ನಿರ್ಣಯದಲ್ಲಿ ಮಾನಾಂಗುಲ ಹಾಗೂ ಮಾತ್ರಾಂಗುಲವೆಂದು ಎರಡು ರೀತಿಯುಂಟು. ಈವರೆವಿಗೂ ಚರ್ಚಿಸಿದ ಅಂಶಗಳು ಮಾನಾಂಗುಲಕ್ಕೆ ಸಂಬಂಧಿಸಿದ್ದು. ಮಾತ್ರಾಂಗುಲ ನಿರ್ಣಯದಲ್ಲಿ ದೇವಾಲಯ ರಚನೆಗೆ ಕಾರಣನಾದ ಯಜಮಾನನ ಅಥವಾ ಶಿಲ್ಪಿಯ, ಅಥವಾ ಸಾಧಾರಣ ಪುರುಷನ ಬಲಹಸ್ತದ ನಡುಬೆರಳಿನ ಮಧ್ಯಪಲ್ಲವದ ಉದ್ದ ಅಥವಾ ವ್ಯಾಸವನ್ನು ಒಂದು ಅಂಗುಲವೆಂದು ಗುರುತಿಸುತ್ತಾರೆ.

ಯಜಮಾನ ದಕ್ಷಿಣೇ ಹಸ್ತೆ ಮಧ್ಯಮಾಂಗುಲಿ ಮಧ್ಯಮೇ ।
ಪರ್ವದೀರ್ಘಂ ತತಂವಾಪಿ ಮಾತ್ರಾಮಾತ್ರಮಿತೀಷ್ಯತೆ ॥

(ಸಕಲಾಧಿಕಾರ ೧–೨೧)

ಸಕಲಾಧಿಕಾರದಲ್ಲಿ ಯಜಮಾನನೆಂಬ ಸ್ಪಷ್ಟ ಉಲ್ಲೇಖವಿದೆ. ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಸಾಧಾರಣಪುರುಷನ ನಡುಬೆರಳಿನ ನಡುಪಲ್ಲವನೆಂದು ಸೂಚಿಸಲ್ಪಟ್ಟದೆ.

"ಮಧ್ಯ ಮಸ್ಯ ಪುರುಷಸ್ಯ ಮಧ್ಯಮಾಯಾಂ ಅಂಗುಲ್ಯಾಂ ।
ಮಧ್ಯಪ್ರಕರ್ಷೋಽವಾಂಗುಲಂ"

(ಅರ್ಥಶಾಸ್ತ್ರ, ೨–೨೦–೭)

ಬೃಹತ್ಸಂಹಿತೆ ಮತ್ತು ಮತ್ಸ್ಯಪುರಾಣಾದಿಗಳಲ್ಲಿ "ಸ್ವಕೀಯಾಂಗುಲ" "ಸ್ವೈರಂಗುಲ" ಎಂದು ಗುರುತಿಸಿದ್ದು 'ಸ್ವ' ಎನ್ನುವಲ್ಲಿ ಯಜಮಾನನೇ ಅಥವಾ ಶಿಲ್ಪಿಯೇ ಎನ್ನುವುದು ಪ್ರಶ್ನಾರ್ಥಕವಾಗಿ ಉಳಿದಿದೆ.

ಅಂಗುಲವನ್ನು ನಿಖರವಾಗಿ ತಿಳಿಯಲು ಮತ್ತೊಂದು ರೀತಿಯನ್ನು ಉದಾಹರಿಸಬಹುದು. ಬ್ರಿಟಿಷ್ ಪದ್ಧತಿಯ ಪ್ರಕಾರ ಬಳಕೆಯಲ್ಲಿರುವ ೧೮ ಅಂಗುಲಗಳಿಗೆ ಒಂದು ಹಸ್ತಸಮವೆಂದು ವಿದ್ವಾಂಸರು ನಿರ್ಣಯಿಸಿದ್ದಾರೆ. (ಈ ವಿವರವನ್ನು ಒದಗಿಸಿದವರು ಆಗಮಿಕರಾದ ಶ್ರೀಯುತ ಆಸೂರಿ ಶ್ರೀನಿವಾಸ ಅಯ್ಯಂಗಾರ್‌ರವರು.)

ಮೂರ್ತಿಶಿಲ್ಪದಲ್ಲಿ ಪ್ರಮಾಣವು ಕಾಲಮಾನ ರೀತ್ಯ ನಿರ್ದೇಶಿಸಲ್ಪಟ್ಟಿದೆ. ಕಾಲದ ಖಚಿತ ವಿವರಣೆ ವಿಷ್ಣುಧರ್ಮೋತ್ತರ ಪುರಾಣದಲ್ಲಿದ್ದು "ದ್ವಾದಶಾಂಗಲ ವಿಸ್ತಾರಸ್ತಾಲ ಇತ್ಯಭಿಧೀಯತೇ" ಎಂದು ತಾಲವೊಂದಕ್ಕೆ ೧೨ ಅಂಗುಲಗಳೆನಿಸಿದೆ. ವಿಗ್ರಹಮಾನವನ್ನು ನಿರ್ಧರಿಸುವಾಗ ಹಲವಾರು ರೀತಿಗಳುಂಟು. ಸಕಲಾಧಿಕಾರವು ಹನ್ನೊಂದು ವಿಧಾನಗಳನ್ನು ನಿರ್ದೇಶಿಸಿದೆ. ಮಾನಾಂಗುಲ, ಮಾತ್ರಾಂಗುಲ, ಮೂಲಬೇರಾಂಗುಲ, ದೇವಾಲಯದ ಗರ್ಭಗೃಹ, ದ್ವಾರ, ಅಧಿಷ್ಠಾನ, ಸ್ತಂಭಾದಿಗಳ ಎತ್ತರವನ್ನು ಆಧರಿಸಿದ ಪ್ರಮಾಣ, ಹಸ್ತಮಾನ, ತಾಳಮಾನ ಹೀಗೆ ಹಲವಾರು ರೀತಿಯುಂಟು. ಮೂರ್ತಿರಚನೆಯಲ್ಲಿ ಸಂಖ್ಯೆ ಒಂಬತ್ತಕ್ಕೆ ಮಹತ್ವಸ್ಥಾನವುಂಟು. ವಿಷ್ಣುಧರ್ಮೋತ್ತರ ಪುರಾಣವು ಐದು ಪುರುಷಪ್ರಮಾಣವನ್ನು ವಿವರಿಸಿದ್ದು ಗರಿಷ್ಠ ಮಾನವುಳ್ಳ ಹಂಸ ಜಾತಿಯು ನವತಾಲದಿಂದ ಕೂಡಿದೆ.

ಹಂಸೋ ಭದ್ರೋಥ ಮಾಲವ್ಯೋ ರುಚಕಃ ಶಶಕಃ ಸ್ತಥಾ ।
ವಿಜ್ಞೇಯಾಃ ಪುರುಷಾಃ ಪಂಚ ತೇಷಾಂ ವಕ್ಷ್ಯಾಮಿ ಲಕ್ಷಣಂ ॥

ಹಂಸ, ಭದ್ರ, ಮಾಲವ್ಯ, ರುಚಕ ಮತ್ತು ಶಶಕ ಈ ಐದು ಪುರುಷಪ್ರಮಾಗಳು ಕ್ರಮವಾಗಿ ೧೦೮, ೧೦೬, ೧೦೪, ೧೦೦ ಮತ್ತು ೯೦ ಅಂಗುಲಗಳ ಎತ್ತರದಿಂದ ರಚಿಸಲ್ಪಟ್ಟಿವೆ. ಮೂರ್ತಿಗಳ ಗರಿಷ್ಠಮಾನವು ಒಂದು ಕಾಲಕ್ಕೆ ನವತಾಲಮಾನಕ್ಕೆ ಅಥವಾ ನವಹಸ್ತಮಾನಕ್ಕೆ ಸೀಮಿತಗೊಳಿಸಲ್ಪಟ್ಟಿದ್ದು ಕೆಲವು ಕಾಲಾನಂತರ ಈ ನಿಯಮೋಲ್ಲಂಘನೆಯಾಗಿ ನಂತರದ ಶಾಸ್ತ್ರಗಳೂ ಒಪ್ಪಿಕೊಂಡು ನಿಯಮಗಳು ಸಡಲಿಸಿರಬಹುದು.

ಸಕಾಲಾಧಿಕಾರದಲ್ಲಿ ಉತ್ತಮ, ಮಧ್ಯಮ ಹಾಗೂ ಅಧಮ ದಶತಾಲದ ವರ್ಣನೆಗೆ ಹೆಚ್ಚು ಪ್ರಾಶಸ್ತ್ಯವಿದೆ. ಆದರೂ ಈ ಗ್ರಂಥದ ಮೊದಲ ಅಧ್ಯಾಯದಲ್ಲಿ ಕೆಲವು ಶ್ಲೋಕಗಳನ್ನು ಗಮನಿಸಬಹುದು.

ಏಕತಾಲಂ ಸಮಾರಭ್ಯ ತಾಲೈಕೇನ ಪ್ರವರ್ಧಯೇತ್ ।
ನವತಾಲಾಂತ ಮುತ್ತುಂಗಂ ನವಧಾ ತಾಲ ಮಾನಕಂ ॥

(ಸಕಲಾಧಿಕಾರ ೧–೧೪)

ಕೆಲವೆಡೆ ತಾಲಮಾನಕ್ಕೆ ಬದಲಾಗಿ ಹಸ್ತಮಾನ ಬಳಕೆಯಲ್ಲಿದೆ. ಹಸ್ತಮಾನವನ್ನೂ ಸಕಲಾಧಿಕಾರವು ಮೇಲ್ಕಂಡಂತೆ ಗುರುತಿಸಿದೆ. ಇದೇ ಸಂಪ್ರದಾಯವನ್ನು ಕಾಶ್ಯಪ ಶಿಲ್ಪಗ್ರಂಥದಲ್ಲೂ ಕಾಣಬಹುದು.

ಏಕಾದಿ ನವ ಹಸ್ತಾಂತಂ ನವಧಾ ಹಸ್ತ ಮಾನಕಂ ।
ತಾಲಾದಿ ನವತಾಲಾಂತಂ ತಥಾ ನವ ವಿಧಂ ಭವೇತ್ ॥

(ಕಾಶ್ಯಪಶಿಲ್ಪ ೫೦-೩೪)

ಕಾಶ್ಯಪಶಿಲ್ಪದಲ್ಲಿ ಯಜಮಾನನ ಅಥವಾ ಶಿಲ್ಪಿಯ ಎತ್ತರವನ್ನು ಒಂಬತು ಭಾಗಗಳನ್ನಾಗಿಸಿ ಈ ಉತ್ತರವನ್ನು ಆಧರಿಸಿದ ಅಳತೆ ಬಳಕೆಯಲ್ಲಿತ್ತು ಎಂದು ವ್ಯಕ್ತವಾಗಿದೆ. ಇದನ್ನು "ಕರ್ತುಸ್ತುಂಗಂತು ನವಭಾಗ ವಿಭಾಜಿತೇ" ಎಂದು ಗುರುತಿಸುತ್ತದೆ.

ರೂಪಮಂಡನಾದಿ ಶಿಲ್ಪಶಾಸ್ತ್ರಗಳ ರಚನೆಕಾಲದಲ್ಲಿ ನವಹಸ್ತಮಾನದವರೆಗಿನ ಮೂರ್ತಿಗಳನ್ನು ದೇವಾಲಯದಲ್ಲಿ ಪೂಜಿಸುವ ಪದ್ಧತಿ ಬೆಳೆದುಬಂತು. ಈ ಸಂಪ್ರದಾಯವನ್ನು "ನವಹಸ್ತಾತು ಪೂಜನೀಯಾ ಸುರಾಲಯೇ" ಎಂದು ಸೂತ್ರಧಾರ ಮಂಡನನು ಗುರುತಿಸುತ್ತಾನೆ. ದೀಪಾರ್ಣವವೆಂಬ ಗ್ರಂಥದಲ್ಲಿ ಲಿಂಗಗಳ ಬಗ್ಗೆ ವಿವರಿಸುವಾಗ ಇದರ ಉಲ್ಲೇಖವಿದೆ. ಈ ಶಾಸ್ತ್ರ ರೀತ್ಯ ಒಂದರಿಂದ ಐವತ್ತು ಹಸ್ತಗಳವರೆಗೆ ಲಿಂಗವನ್ನು ನಿರ್ಮಿಸಬಹುದು. ನವಹಸ್ತಾನಂತರದ ಲಿಂಗಗಳನ್ನು ಪ್ರಸಾದವಿಲ್ಲದೆ ರಚಿಸಿದ್ದು ಪೂಜಿಸಬೇಕು.

ನವಹಸ್ತಂ ಭವೇತ್ ಲಿಂಗಂ ಪ್ರಾಸಾದೇ ಶತಾರ್ಧಕೇ
ನವ ಹಸ್ತೋರ್ಧ್ವಂ ಲಿಂಗಂತು ಪ್ರಾಸಾದೇನ ವಿನಾರ್ಚಯೇತ್

(ದೀಪಾರ್ಣವ ೧೩-೩-೫)

ಆಗಮಾದಿ ಗ್ರಂಥಗಳಲ್ಲಿ ಶಿಲ್ಪಕ್ಕೆ ಸಂಬಂಧಿಸಿದ ವಿವರಗಳನ್ನು ಗ್ರಹಿಸಿ ಗ್ರಂಥಗಳನ್ನು ರಚಿಸಿರುವುದಾಗಿ ಹಲವಾರು ಗ್ರಂಥಕಾರರು ಹೇಳಿದ್ದಾರೆ. ಸತತ ಅಭ್ಯಾಸ ಪರಿಶ್ರಮಗಳ ಫಲವಾಗಿ ಶಿಲ್ಪವನ್ನು ಸವಿವರವಾಗಿ ಬಿಡಿಸಿ ಹೇಳುವ ಕಾರ್ಯ ಮುಂದುವರೆದಿದೆ. ಈ ಬಗ್ಗೆ ಪಾಶ್ಚಾತ್ಯ ವಿದ್ವಾಂಸ ಬೆಂಜಮಿನ್ ರೋಲೆಂಡ್ ಈ ರೀತಿ ನುಡಿಯುತ್ತಾರೆ.

"To understand the Indian qualities of Indian art in the iconographic and stylistic aspects we must examine the frag. mentary survivals of those ancient times when these things were heither sentimental nor a patronising fashion but objectively."

ನಮ್ಮಲ್ಲಿರುವ ಪ್ರಾಚೀನ ಗ್ರಂಥಭಂಡಾರದೆಡೆಗೆ ಕಣ್ಣು ತೆರೆಯಲು ಹಲವಾರು ಪ್ರಾಶ್ಚಾತ್ಯರು ನೆರವಾಗಿದ್ದಾರೆ. ಅವರಿಗೆ ನಮ್ಮಿಂದ ಸಲ್ಲಬೇಕಾದ ಋಣಭಾರ ಅಪಾರ. ಈ ದಿಸೆಯಲ್ಲಿ ಈ ಲೇಖನ ಕೊಂಚ ಅರಿವು ಮೂಡಿಸುತ್ತದೆ ಎಂದಲ್ಲಿ ತಪ್ಪಾಗಲಾರದು.

ಕನ್ನಡಿಗರ ಸ್ವಭಾವ

ಒಂದು ಐತಿಹಾಸಿಕ ನೋಟ :

—ಡಾ॥ ಬಾ. ರಾ. ಗೋಪಾಲ್

ಗೋಕಾಕರ ವರದಿ ನಮ್ಮ ಕರ್ನಾಟಕದಲ್ಲಿ ಆಂದೋಳನಗಳಿಗೆ ಕಾರಣ ವಾಯಿತು. ತಮಿಳುನಾಡಿನಂತಹ ರಾಜ್ಯಗಳಲ್ಲಿ ಹಿಂದಿಯಂತಹ ಅನ್ಯಭಾಷೆಗಳನ್ನು ಬಲವಂತವಾಗಿ ಹೇರಬಾರದೆಂದು ಆಂದೋಳನ ನಡೆದರೆ, ನಮ್ಮಲ್ಲಿ ನಮ್ಮ ಭಾಷೆ ಯನ್ನು ಉಳಿಸಿಕೊಳ್ಳಲು ಚಳುವಳಿ ! ಇದೊಂದು ವಿಪರ್ಯಾಸ !

ಇತಿಹಾಸಕಾರನಾಗಿ ಈ ವಿಪರ್ಯಾಸವನ್ನು ವಿಶ್ಲೇಷಿಸಿದಾಗ ಕೆಲವು ಕುತೂ ಹಲಕಾರಿಯಾದ ಅಂಶಗಳು ಕಂಡುಬರುತ್ತವೆ. ಅದರಿಂದ ನಾವು ಕನ್ನಡಿಗರು ಎಂತಹ ವರು ಎಂಬುದನ್ನರಿತಂತಾಗುತ್ತದೆ. ಇತಿಹಾಸ ಕಾಲದಿಂದಲೂ ನಮ್ಮ ಮನೋ ಭಾವವೇ ಅಂತಹುದಾಗಿದೆ. ಅನ್ಯಭಾಷೆಗಳನ್ನು, ಅನ್ಯಜನರನ್ನೂ ಅನ್ಯಧರ್ಮ ಗಳನ್ನೂ ಮುಕ್ತಮನಸ್ಸಿನಿಂದ ಬರಮಾಡಿಕೊಳ್ಳುವ ಮನೋಧರ್ಮ ಮೊದಲಿನಿಂದಲೂ ನಮ್ಮಲ್ಲಿ ಬೆಳೆದಿದೆ. ಬೇರೆ ಜನ ನಮ್ಮ ನಾಡಿಗೆ ಬಂದಾಗ ನಮ್ಮ ಒಳಿತಿನ ಲಾಭ ಪಡೆದೂ ತಾವು ಮಾತ್ರ ಪರಕೀಯರಾಗಿಯೇ ವರ್ತಿಸುವ ಧೋರಣೆಯನ್ನು ಕರ್ನಾಟ ಕದ ಇತಿಹಾಸದಲ್ಲೂ ಕಂಡಿದ್ದೇವೆ.

ಬಾದಾಮಿಯ ಚಾಲುಕ್ಯರ ಕಾಲದಿಂದಲೂ ನಮ್ಮ ಇತಿಹಾಸದಲ್ಲಿ ಇದಕ್ಕೆ ಹಲವಾರು ನಿದರ್ಶನಗಳನ್ನು ಕೊಡಬಹುದು. ತಮಿಳುನಾಡಿನ ಪಲ್ಲವರ ಅರಸನಾದ ನರಸಿಂಹವರ್ಮ ಬಾದಾಮಿಗೆ ದಂಡೆತ್ತಿ ಬಂದು ಇಮ್ಮಡಿ ಪುಲಿಕೇಶಿಯನ್ನು ಸೋಲಿಸಿ ದಾಗ, ಅಂದಿನ ನಮ್ಮ ಆ ರಾಜಧಾನಿ ಪಟ್ಟಣದಲ್ಲಿ ತನ್ನದೊಂದು ಸ್ತಂಭಶಾಸನವನ್ನು ಕೊರೆಯಿಸಿದ.[1] ಅದರ ಲಿಪಿ ತಮಿಳು ಮತ್ತು ಗ್ರಂಥ ಭಾಷೆ ತಮಿಳು. ಇಲ್ಲಿನ ಜನರಿಗೆ ಇದು ಅರ್ಥವಾದೀತೇ, ಓದಲಾದೀತೇ ಎಂಬ ಯೋಚನೆಯನ್ನೇ ಆತ ಮಾಡಲಿಲ್ಲ.

---

1. ಸೌತ್ ಇಂಡಿಯನ್ ಇನ್‌ಸ್ಕ್ರಿಪ್ಷನ್ಸ್, ಸಂಪುಟ XI, ಭಾಗ I, ಸಂಖ್ಯೆ 1.

ದಕ್ಷಿಣ ಕರ್ನಾಟಕದಲ್ಲಿ ಕಾವೇರೀ ಪರಿಸರದಲ್ಲಿ ತಲಕಾಡಿನ ಗಂಗರಿಗೂ ತಮಿಳು ನಾಡಿನ ಅರಸರಿಗೂ ಮೇಲಿಂದ ಮೇಲೆ ಕದನಗಳಾಗುತ್ತಲೇ ಇದ್ದವು. ಕೆಲವು ಪ್ರದೇಶಗಳಲ್ಲಿ ವಿಜಯಲಕ್ಷ್ಮಿ ಯಾರನ್ನೂ ಸ್ಥಿರವಾಗಿ ಒಲಿಯಲೇ ಇಲ್ಲ ಎಂತಲೇ ಮೈಸೂರು, ಬೆಂಗಳೂರು, ಕೋಲಾರ ಜಿಲ್ಲೆಗಳಲ್ಲಿ ಹಲವಾರು ತಮಿಳು ಶಾಸನಗಳು ದೊರೆತಿವೆ. ತಮಿಳುನಾಡಿನ ಅರಸರು ಇಲ್ಲಿನ ಭಾಗಗಳನ್ನು ತಮ್ಮದಾಗಿಸಿಕೊಂಡಾಗ ಅಲ್ಲಿ ಶಾಸನಗಳನ್ನು ಹಾಕಿಸಲು ತಮಿಳು ಲಿಪಿ ಭಾಷೆಗಳನ್ನೇ ಉಪಯೋಗಿಸಿದರು. ಅಪರೂಪವಾಗಿ ಕೆಲವು ಸಂದರ್ಭಗಳಲ್ಲಿ ಲಿಪಿ ಕನ್ನಡದಲ್ಲಿದ್ದರೂ ಭಾಷೆ ಮಾತ್ರ ತಮಿಳಿನಲ್ಲೇ ಇರುತ್ತಿತ್ತು.

ಇದೇನೂ ಅಷ್ಟು ಮಹತ್ವದ್ದಲ್ಲವೆನ್ನಬಹುದಾದರೂ ಇದೇ ಭಾಗಗಳಲ್ಲಿ ನಮ್ಮ ಅರಸರೇ ಹಾಕಿಸಿದ ಕನ್ನಡ ಶಾಸನಗಳಲ್ಲಿಯೂ ತಮಿಳಿನ ಪ್ರಭಾವ ಬಹಳಷ್ಟು ಮಟ್ಟಿಗೆ ಕಾಣಿಸುತ್ತದೆ ಎಂಬುದೀಗ ಸ್ವಾರಸ್ಯಕರ. ಚಾಮರಾಜನಗರದ ತಾಲ್ಲೂಕಿನ ಹೊಮ್ಮಗ್ರಾಮದಲ್ಲಿರುವ ಗಂಗರ ಶ್ರೀಪುರುಷನ ಕನ್ನಡ ಶಾಸನದಲ್ಲಿ ದೇವೇಂದ್ರ ತಮ್ಮಡಿಗಳು ವಾಣಿಗ ತೋಟದ "ತೆನ್ಕಣ್ಣಮುಂ ವಡಕಣ್ಣಮುಂ" "ವೆಲೆಕೊಣ್ಡು" ಅಂದರೆ ತೋಟವೊಂದರ ದಕ್ಷಿಣ ಹಾಗೂ ಉತ್ತರ ಭಾಗಗಳನ್ನು ಬೆಲೆಕೊಟ್ಟು ಕೊಂಡು ದಾನಮಾಡಿದರೆಂಬ ಮಾತಿದೆ.[2] ಕಮ್ಮಳಿ ಗ್ರಾಮದ ಮಹಾಜನಗಳು ಗ್ರಾಮದ ದೇಗುಲಕ್ಕೆ ಬಸದಿಗೆ ಅಂಬಲಕ್ಕೆ ಅಂದರೆ ಸಭಾಸ್ಥಾನಕ್ಕೆ ಹಣವನ್ನು ದಾನನೀಡಿದ ಪ್ರಸ್ತಾಪವಿದೆ.[3] ಸುಮಾರು 8ನೆಯ ಶತಮಾನದ ಹೊಳಲವಾಡಿ ಶಾಸನದಲ್ಲಿ[4] ಅಮಿತ ಭಟ್ಟಡಿಗಳ್ಗೆ ಕೆಸಲ್ಮನೆಯ ಒಡೆಯರುಗಳು ತಮ್ಮ ಕೆರೆಯ ಕೆಳಗೆ ಕವಿಸಿ ಮಣ್ಣನ್ನು ಅಂದರೆ ಭತ್ತದ ಗದ್ದೆಯನ್ನು ದಾನವಾಗಿ ನೀಡಿದರೆಂದಿದೆ. ಗಂಗರ ಶ್ರೀಪುರುಷನ ಮಗನೆಂದು ಗುರುತಿಸಲಾದ ದುಗ್ಗಮಾರನ ಹೆಸರಿನಲ್ಲಿ ಕಟ್ಟಿಸಲಾದ "ಕೋಯಿಲ ಸದಿ"ಯ ಪ್ರಸ್ತಾಪ ಹೆಬ್ಬಲಗುಪ್ಪೆ ಶಾಸನದಲ್ಲಿ[5] ಬಂದಿದೆ. "ದುಗ್ಗಮಾರ ಕೋಯಿಲ್ಪ ಸದಿಗೆ ಅಜಿಗಣ್ಣಗ ಬೆದೆವಣ್ಕೊಟ್ಟರ್" ಎಂಬಲ್ಲಿ "ಕೋಯಿಲ್" ಎಂಬುದು ತಮಿಳಿನಿಂದ ಬಂದ ಪದ. ದೇಸ್ಯ ದೇಸಿ ಎಂದು ನಿಘಂಟನಲ್ಲಿ ಇದನ್ನು ವಿವರಿಸಿದ್ದರೂ ಇದು ಶುಧ್ಧ ಕನ್ನಡವಲ್ಲವೆಂಬುದಂತೂ ನಿಜ. "ಬೆದೆ" ಎಂಬುದು "ನೆದೆ" ಎಂಬುದರಿಂದ

2. ಎಪಿಗ್ರಾಫಿಯ ಕರ್ನಾಟಕ (ಸಂ. ಬಾ. ರಾ. ಗೋಪಾಲ್) ಸಂಪುಟ IV ಚಾ. ನ. 147.

3. ಅದೇ, ಸಂಪುಟ III ಗು. ಪೇ. 92.

4. ಅದೇ, ನಂ ಗೂ. 187.

5. ಅದೇ, ಹೆ ಕೋ 63.

ಬಂದದ್ದು. "ನೆಲ್ಕಿಣ್ಕೊಟ್ಟಿರ್" ಎಂಬಲ್ಲಿನ "ನೆಲ್ಕಿಣ್ಣು" ಸಹ ಅಂತೆಯೇ ಕ್ರಿ. ಶ. 1049ರ ಶಾಸನವೊಂದರಲ್ಲಿ[6] ಬರುವ "ಕೇಸವಭಟ್ಟರುಳ್ಳಿಟ್ಟ ಸಭೆಯು" ಎಂಬಲ್ಲಿನ "ಉಳ್ಳಿಡು" ಎಂಬ ಪದ ಅದೇ ಶಾಸನದಲ್ಲಿ ಮತ್ತು 8-9ನೆಯ ಶತಮಾನಗಳ ಇತರ ಶಾಸನಗಳಲ್ಲಿ ಸಾಮಾನ್ಯವಾಗಿ ಕಾಣಿಸಿಕೊಳ್ಳುವ "ಪೊನ್ನರ ಕೊಟ್ಟು ಮಣ್ಣರ ಕೊಣ್ಡು" ಎಂಬ ಪದಪುಂಜ 10ನೆಯ ಶತಮಾನದ ಶಾಸನದಲ್ಲಿ ಬರುವ "ಸನಾತ್ತೆನೆಳಕು" ಎಂಬ ಪದ—ಇವುಗಳೆಲ್ಲ ದೇಸಿ ಪದಗಳು. ಬಹುಶಃ ಕವಿರಾಜಮಾರ್ಗಕಾರ ಈ ದೇಸಿ ಪದಗಳ ಬಳಕೆಯನ್ನು ತನ್ನ "ಬೇರೆ ಬೇರೆ ದೇಸಿ"ಗಳೆಂಬ ಮಾತನ್ನಾಡುವಾಗ ಗಮನದಲ್ಲಿಟ್ಟುಕೊಂಡಿರಬಹುದು. ಇವುಗಳಲ್ಲನೇಕವು ಈಗ ಕನ್ನಡದಲ್ಲಿ ಬಳಕೆಯಲ್ಲಿಲ್ಲದ ತಮಿಳು ಭಾಷೆಯಿಂದ ಎರವಲು ಪಡೆದ ಪದಗಳೆಂದು ಖಚಿತವಾಗಿ ಹೇಳಲಾಗದಿದ್ದರೂ ಈಗಲೂ ಆ ಭಾಷೆಯಲ್ಲಿ ಬಳಕೆಯಲ್ಲಿರುವ ಪದಗಳು. ಆ ಶಾಸನಗಳು ಹುಟ್ಟಿದ ಕಾಲದಲ್ಲಿ ಚಲಾವಣೆಯಲ್ಲಿದ್ದು ಇಂದು ಕಣ್ಮರೆಯಾಗಿರುವುದನ್ನು ಗಮನಿಸಿದರೆ ಈ ಪದಗಳು ಅನ್ಯಭಾಷಾ ಪ್ರಭಾವಗಳ ಫಲಗಳಾಗಿದ್ದು ಅಂತಹ ಪ್ರಭಾವ ಕಡಿಮೆಯಾದಾಗ ಇವುಗಳ ಬಳಕೆ ಸಹ ಅರ್ಥಹೀನವಾದವುಗಳಂತೆ ತೋರುತ್ತದೆ.

ಮೇಲ್ಕಂಡ ಪ್ರದೇಶಗಳು ತಮಿಳುನಾಡಿನ ಅರಸರ ಕೈಸೇರಿದಾಗ ಅವರು ಅಲ್ಲಲ್ಲಿ ತಮ್ಮದೇ ಆದ ಆಡಳಿತ ವ್ಯವಸ್ಥೆಯನ್ನು ಜಾರಿಗೆ ತಂದರು. ಆಡಳಿತ ವಿಭಾಗಗಳಿಗೆ ಹೊಸ ಹೆಸರುಗಳನ್ನಿಟ್ಟರು. ನಂಜನಗೂಡಿನ ಪ್ರದೇಶ ಮುಡಿಗೊಂಡ ಚೋಳ ಮಂಡಲದ ಗಂಗೈಕೊಂಡ ಚೋಳ ವಳನಾಡಿಗೆ ಸೇರಿದುದೆಂದು ಕೆಲ್ಲಸೂರು ಗ್ರಾಮದ 12ನೆಯ ಶತಮಾನದ ಶಾಸನ ಹೇಳುತ್ತದೆ.[7] ಸುಪ್ರಸಿದ್ಧವಾದ ವೀರಶೈವ ಕ್ಷೇತ್ರವೆನಿಸಿದ ಸುತ್ತೂರು ಕ್ರಿ. ಶ. 1015-16 ಮೇಲ್ಕಾಣಿಸಿದ ವಳನಾಡಿಗೆ ಸೇರಿದ ಇಡೈನಾಡಿನ ಸೊತ್ತಿಯೂರ್ ಸುತೂರೂರ್ ಎಂಬ ಬ್ರಹ್ಮದೇಯವಾಗಿತ್ತು.[8] ಸಿಂಧುವಳ್ಳಿ ಗ್ರಾಮ ಕಾರೈನಾಡಿಗೆ ಸೇರಿತ್ತು.[9] ಹೆಗ್ಗಡದೇವನಕೋಟೆ ತಾಲೂಕಿನ ಕೋಳಗಾಲಿ ಗ್ರಾಮ ಇದೇ ಮಂಡಲದ ನವಲೆನಾಡಿಗೆ ಸೇರಿತ್ತು.[10] ಕುಂದೂರು ಗ್ರಾಮ ನುಗುನಾಡಿಗೆ ಸೇರಿತ್ತು.[11] ಪ್ರಸಿದ್ಧವಾದ ತಲಕಾಡಿಗೆ ಅವರು ರಾಜರಾಜಪುರವೆಂಬ ಹೆಸರ

6. ಅದೇ, ಗು. ಪೇ. 56.
7. ಅದೇ, ನಂ ಗೂ. 102.
8. ಅದೇ ನಂ. ಗೂ. 213
9. ಅದೇ ನಂ. ಗೂ. 348
10. ಅದೇ ಹೆ. ಕೋ. 34
11. ಅದೇ ಹೆ. ಕೋ. 82

ಸ್ನಿತ್ತಿದ್ದರು.[12] ಕೋಲಾರ ಜಿಲ್ಲೆಗೆ ಚೋಳರು ನೀಡಿದ್ದ ಹೆಸರು ನಿಕರಿಲಿ ಚೋಳ ಮಂಡಲ.[13]

ಈ ಭಾಗಗಳೆಲ್ಲ ಆ ಬಳಿಕ ಚೋಳರ ಕೈತಪ್ಪಿ ಹೊಯ್ಸಳರ ಅಧೀನವಾದುವು. ಆದರೂ ತಮ್ಮ ಉದಾರ ನೀತಿಯಿಂದ ಈ ಪ್ರದೇಶಗಳಲ್ಲಿ ತಮ್ಮ ಶಾಸನಗಳನ್ನು ತಮಿಳು ಭಾಷೆ-ಲಿಪಿಗಳಲ್ಲಿಯೇ ಕೊರೆಯಿಸಿದರೆಂಬುದು ನಾವು ಗಮನಿಸಬೇಕಾದ ಮಾತು. ಕೋಲಾರ ಜಿಲ್ಲೆಯಲ್ಲಿ ಕೆಲವನ್ನು ಹೊರತುಪಡಿಸಿದರೆ ಉಳಿದ ಹೊಯ್ಸಳ ಶಾಸನಗಳೆಲ್ಲ ತಮಿಳು ಭಾಷೆಯವು. ವಿಚಿತ್ರವೆಂದರೆ ಇವರು ಆ ಪ್ರದೇಶದಲ್ಲಿ ನೇಮಿಸಿದ ಅಧಿಕಾರಿಗಳು ಮಾತ್ರ ಕನ್ನಡಿಗರೇ. ಚೊಕ್ಕಮಯ್ಯ ದಂಡನಾಥ[14] ನರಸಿಂಗ ದಂಡನಾಯಕನ ಮಗ ಬಲ್ಲಪ ದಂಡನಾಯಕ[15] ಇತ್ಯಾದಿ. ಮೈಸೂರು ಜಿಲ್ಲೆಯ ಯಳಂದೂರು ಕೊಳ್ಳೇಗಾಲ ಚಾಮರಾಜನಗರ ತಾಲ್ಲೂಕುಗಳಲ್ಲಿರುವ ಹೊಯ್ಸಳ ಸೋಮೇಶ್ವರನ ಸುಮಾರು 15 ಶಾಸನಗಳೆಲ್ಲ ತಮಿಳು ಭಾಷೆಯಲ್ಲೇ ಇವೆ.

ಇದಕ್ಕಿಂತಲೂ ಮಿಗಿಲಾದ ಇನ್ನೊಂದು ಅಂಶವಿದೆ. ಸಾಮಾನ್ಯವಾಗಿ ಕರ್ನಾಟಕದ ಅರಸರು ತಮ್ಮ ಪ್ರದೇಶದ ಹೊರಗಿನ ಇನ್ನೊಬ್ಬರ ರಾಜ್ಯವನ್ನು ಆಕ್ರಮಿಸುವ ಮನೋಭಾವ ಹೊಂದಿರಲಿಲ್ಲ. ಬಯಸಿದ್ದರೆ ಅದು ಕಷ್ಟವಾಗುತ್ತಿರ ಲಿಲ್ಲವಾದರೂ ಅಂತಹ ಯಾವ ಬಯಕೆಯನ್ನೂ ಅವರು ವ್ಯಕ್ತಪಡಿಸಿರಲಿಲ್ಲ. ಆದರೆ ಅಪರೂಪವೆಂಬಂತೆ ರಾಷ್ಟ್ರಕೂಟರ ಮುಮ್ಮಡಿಕೃಷ್ಣ ಮತ್ತು ಹೊಯ್ಸಳರ ಇಮ್ಮಡಿ ಬಲ್ಲಾಳನ ನಂತರದ ಅರಸರು ಕೆಲವರು ಪಲ್ಲವರ ಚೋಳರ ರಾಜ್ಯಗಳ ಒಳನುಗ್ಗಿ ಅಲ್ಲಿ ತಮ್ಮ ಪ್ರಭುತ್ವವನ್ನು ಸ್ಥಾಪಿಸಿದರು. ಆದರೆ ಅಲ್ಲಿನ ಪ್ರಜೆಗಳ ಮೇಲೆ ತಮ್ಮ ಭಾಷೆ ಯನ್ನು ಇವರು ಹೇರಲಿಲ್ಲ. ತಮಿಳುನಾಡಿನ ಉತ್ತರ-ದಕ್ಷಿಣ ಆರ್ಕಾಟ್ ಚೆಂಗಲ್ಪೇಟೆ ತಿರುಚಿರಾಪಲ್ಲಿ ತಂಜಾವೂರು ಮುಂತಾದ ಜಿಲ್ಲೆಗಳಲ್ಲಿ ನಮ್ಮ ಈ ಕನ್ನಡದ ಅರಸರ ಶಾಸನಗಳು ದೊರೆತಿದ್ದರೂ ಅವುಗಳೆಲ್ಲ ತಮಿಳು ಭಾಷೆ ಮತ್ತು ತಮಿಳು ಹಾಗೂ ಗ್ರಂಥ ಲಿಪಿಗಳಲ್ಲಿವೆ ಎಂಬುದಿಲ್ಲಿ ಗಮನಾರ್ಹ.

ಪಲ್ಲವರ ನರಸಿಂಹವರ್ಮ ಬಾದಾಮಿಯಲ್ಲಿ ತನ್ನ ಶಾಸನವೊಂದನ್ನು ಸ್ಥಾಪಿಸಿದ್ದ ನೆಂದು ಹಿಂದೆ ಹೇಳಿದೆ. ಪಲ್ಲವರು ಇಲ್ಲಿಗೆ ಬಂದಾಗ ಇಲ್ಲಿನ ವಾಸ್ತುಶಿಲ್ಪ ಶೈಲಿಗಳಿಂದ

12. ಅದೇ ನಂ. ಗೂ. 359
13. ಅದೇ ಸಂಪುಟ X (ಸಂ. ಬಿ. ಎಲ್. ರೈಸ್). ಕೆ. ಎಲ್. 75.
14. ಅದೇ ಬಿ. ಪಿ. 9.
15. ಅದೇ ಕೆ. ಎಲ್. 102

ಪ್ರಭಾವಿತರಾದರು. ಅದನ್ನು ತಮ್ಮ ರಾಜ್ಯದಲ್ಲಿಯೂ ಬಳಸಿದರು ಎಂಬುದು
ವಿದಿತವೇ. ಇದು ಪರಸ್ಪರ ಪ್ರಭಾವಗಳಿಗೊಳಪಟ್ಟುದೆಂಬುದೂ ನಿಜ. ಆದರೆ ಅವರು
ನಮ್ಮ ಈ ಕಲೆಯನ್ನು ಕಂಡು ಸಂತೋಷಪಡುವಷ್ಟರಲ್ಲೇ ಅದರಿಂದ ಪ್ರಚೋದಿತರಾಗಿ
ತಮ್ಮಲ್ಲೂ ಅಂತಹ ಕಲೆಯನ್ನು ಪೋಷಿಸುವಷ್ಟರ ಮಟ್ಟಿಗೆ ಆಸಕ್ತಿ ತೋರಿಸಿದ್ದರೆ
ಚೆನ್ನಾಗಿರುತ್ತಿತ್ತು. ಆದರೆ ನಮ್ಮದನ್ನೂ ಅವರು ಬಲವಂತವಾಗಿ ನಮ್ಮಿಂದ ಕಸಿದು
ಕೊಂಡು ತಮ್ಮ ರಾಜ್ಯಗಳಿಗೆ ಸಾಗಿಸಿ ಅಲ್ಲಿ ಅವುಗಳನ್ನು ಸ್ಥಾಪಿಸಿದುದು ಅವರ
ಮನೋಭಾವವನ್ನು ಸೂಚಿಸುತ್ತದೆ. ಬಾದಾಮಿಯಲ್ಲಿದ್ದ ಗಣಪತಿಯ ವಿಗ್ರಹವನ್ನು
ಅವರು ತಮ್ಮ ರಾಜ್ಯಕ್ಕೊಯ್ದು ರೆಂಡೂ ಶತಮಾನಗಳ ನಂತರ ಆ ವಾತಾಪಿಯ ಗಣಪತಿ
ಯನ್ನೇ ಅವರು ಸಂಗೀತದಲ್ಲಿ ಸ್ತುತಿಸಿ ಕೀರ್ತನೆ ರಚಿಸಿದರೆಂದೂ ಹೇಳಲಾಗಿದೆ.
ಕಲ್ಯಾಣದ ಚಾಲುಕ್ಯರ ಕಾಲದಲ್ಲಿ ಚೋಳ ರಾಜಾಧಿರಾಜನು ಕಲ್ಯಾಣ ಪುರವನ್ನೂ
ಮುತ್ತಿ ಸುಟ್ಟು ಅಲ್ಲಿದ್ದ ದ್ವಾರಪಾಲಕರ ವಿಗ್ರಹವನ್ನು ತನ್ನ ನಾಡಿಗೇ ಒಯ್ದ.
ಈಗಲೂ ಅದನ್ನು ತಂಜಾವೂರು ಜಿಲ್ಲೆಯ ದಾರಾಸುರಂನ ದೇವಾಲಯದಲ್ಲಿ ಕಾಣ
ಬಹುದಾಗಿದೆ.[16] ಆ ಅರಸರು ಕರ್ನಾಟಕದ ಮೇಲೆ ದಾಳಿಮಾಡಿದಾಗಲೆಲ್ಲಾ
ನಮ್ಮಲ್ಲಿನ ಸುಂದರ ದೇವಾಲಯಗಳನ್ನು ಹಾಳಗೆಡವಿದರು. ಅದರ ಆಸ್ತಿಗಳನ್ನೆಲ್ಲಾ
ವಶಮಾಡಿಕೊಂಡರು. ಅದನ್ನು ತಮ್ಮ ಶಾಸನಗಳಲ್ಲಿ ಹೆಮ್ಮೆಯಿಂದ ಹೇಳಿಕೊಂಡರು.
ಚಾಲುಕ್ಯರ ಮೇಲೆ ಸತತವಾಗಿ ಯುದ್ಧಮಾಡುತ್ತಿದಾಗ ಮೊದಲನೆಯ ಸೋಮೇಶ್ವರ
ನನ್ನು ಐದು ಬಾರಿ ಸೋಲಿಸಿದೆವೆಂದೂ ಅವನ ಸೈನಿಕರನ್ನು ಮೂದಲಿಸಿ ಅವಮಾನ
ಗೊಳಿಸಲಾಯಿತೆಂದೂ ವಾಸ್ತವಿಕ ಹಾಗೂ ಉತ್ಪ್ರೇಕ್ಷಿತ ಹೇಳಿಕೆಗಳನ್ನು ನೀಡಿದರು.
ತಮ್ಮ ಪ್ರಶಸ್ತಿಗಳಲ್ಲಿ ಅದನ್ನು ವ್ಯಕ್ತಪಡಿಸಿದರು.

ತದ್ವಿರುದ್ಧ ಮನೋಭಾವ ನಮ್ಮ ಅರಸರದು. ಇಮ್ಮಡಿ ಪುಲಿಕೇಶಿಯ
ಬಳಿಕ ಬಾದಾಮಿಯ ಚಾಲುಕ್ಯರು ಮೇಲಿಂದ ಮೇಲೆ ಕಾಂಚೀಪುರವನ್ನು ಮುತ್ತಿ
ಪಲ್ಲವರನ್ನು ಸೋಲಿಸಿದರು. ಇಮ್ಮಡಿ ವಿಕ್ರಮಾದಿತ್ಯ ಹಾಗೊಮ್ಮೆ ಕಾಂಚೀಪುರ
ವನ್ನು ಮುತ್ತಿದಾಗ ಅಲ್ಲಿ ಪಲ್ಲವರ ಅರಸನಾದ ನಂದಿ ಪೋಲುವರ್ಮನನ್ನು ಸೋಲಿಸಿ
ಅಲ್ಲಿನ ರಾಜ ಸಿಂಹೇಶ್ವರ (ಈಗಿನ ಕೈಲಾಸನಾಥ) ದೇವಾಲಯದಲ್ಲಿ ಕನ್ನಡ ಶಾಸನ
ವೊಂದನ್ನು ಹಾಕಿಸಿದ.[17] ಇದು ಬಹುಮಟ್ಟಿಗೆ ನರಸಿಂಹವರ್ಮ ಬಾದಾಮಿಯಲ್ಲಿ
ತಮಿಳು ಶಾಸನ ಹಾಕಿಸಿದುದಕ್ಕೆ ಪ್ರತೀಕಾರವಾಗಿರಬಹುದು. ಆದರೆ ಆತ ನಮ್ಮಲ್ಲಿನ
ದನ್ನು ಸೂರೆಮಾಡಿದ. ಈತನಾದರೋ ಆ ದೇವಾಲಯದ "ಧನಮಾನ್ ಕಂಡು

16. ಕೆ. ಎ. ನೀಲಕಂಠಶಾಸ್ತ್ರಿ : "ದಿ ಚೋಳಾಸ್" ಎರಡನೆಯ ಆವೃತ್ತಿ, ಪು. 255.

17. ಎಪಿಗ್ರಾಫಿಯಂ ಇಂಡಿಕ, ಸಂಪುಟ III, ಪು 359.60.

ಮಗುಳ್ದು" ದೇವರಿಗೆ ಇನ್ನೂ ಒಂದಷ್ಟು ದಾನಗಳನ್ನು ಮಾಡಿದನೆಂದು ಆ ಕನ್ನಡ ಶಾಸನ ಹೇಳುತ್ತದೆ.

ಚಾಲುಕ್ಯರ ಅರಸನಾದ ಮೊದಲನೆಯ ಸೋಮೇಶ್ವರನ ಕಾಲದಲ್ಲಿ ಚೋಳ ರಾಜಾಧಿರಾಜ ನಮ್ಮ ನಾಡಿನ ಕೊಪ್ಪಂ (ಕೊಪ್ಪಳ) ದಲ್ಲಿ ನಡೆದ ಕದನದಲ್ಲಿ ಆನೆಯ ಮೇಲಿದ್ದಾಗ ಇರಿತದಿಂದ ಕೊಲ್ಲಲ್ಪಟ್ಟ. ಆದರೆ ನಮ್ಮ ಜನ ಇಂತಹ ಮಹತ್ತರ ಘಟನೆಯನ್ನು ಇನ್ನೂ ಇಂತಹ ಹಲವಾರು ಘಟನೆಗಳನ್ನು ಹೇಳಿಕೊಳ್ಳಲೂ ನಾಚಿದ್ದಾರೆ. ಚಾಲುಕ್ಯರ ಶಾಸನಗಳಲ್ಲೆಲ್ಲಿಯೂ ಈ ಘಟನೆಯ ನೇರವಾದ ಪ್ರಸ್ತಾಪವೇ ಇಲ್ಲ. ಮಾರಪೆರ್ಮಾಳ (ಪೆರ್ಮಾಳ ಮಾರರಸ) ನೆಂಬೊಬ್ಬ ದಂಡನಾಯಕ ಮಾತ್ರ ರಾಜಾಧಿರಾಜ ಚೋಳಂಗೊಂಡ" "ರಾಜಾಧಿರಾಜ ಚೋಳ ಶಿರಚ್ಛೇದಕ" ಎಂಬ ಬಿರುದುಗಳನ್ನು ಧರಿಸಿದ್ದನೆಂಬುದು ಶಾಸನಗಳಲ್ಲಿ[18] ಕಂಡುಬಂದಿರುವ ಕಾರಣ ಈತನೇ ರಾಜಾಧಿರಾಜನ ಸಾವಿಗೆ ಕಾರಣನಾಗಿರಬಹುದೆಂದು ಊಹಿಸಬಹುದಷ್ಟೆ. ಆದರೆ ಚೋಳರೇ ಈ ಘಟನೆಗೆ ಮಹತ್ವವನ್ನು ಕೊಟ್ಟು ತಮ್ಮ ಆ ಅರಸನನ್ನು ಮುಕ್ತಕಂಠದಿಂದ ಹೊಗಳಿದ್ದಾರೆ. "ಆನೈಮೇಲ್ ತುಞ್ಜಿಯರುಳಿನ ವಿಜಯರಾಜೇಂದ್ರದೇವ" ನೆಂದು ವರ್ಣಿಸಿದ್ದಾರೆ.[19] ಮೊದಲನೆಯ ಸೋಮೇಶ್ವರನ ಮಗ ಭುವನೈಕಮಲ್ಲ ಇಮ್ಮಡಿ ಸೋಮೇಶ್ವರನ ಕ್ರಿ. ಶ. 1171-72ನೆಯ ಶಾಸನವಲ್ಲಿ[20] ಮಾತ್ರ ಒಮ್ಮೆ ಈ ಮಾತು ಬಂದಿದೆ. ಅದರಲ್ಲಿ ನೆಲೆಗೆಟ್ಟ ಚೋಳ ಅರಸನು ಬೆಳ್ವಲ ದೇಶಕ್ಕೆ ದಾಳಿಯಿಟ್ಟು ದೇವಾಲಯಗಳನ್ನು ಭಗ್ನಗೊಳಿಸಿ ಸುಡುವುದೇ ಮುಂತಾದ ವಿಧ್ವಂಸನ ಕೃತ್ಯಗಳಲ್ಲಿ ತೊಡಗಿದ್ದು ಕೊನೆಗೊಮ್ಮೆ ಯುದ್ಧದಲ್ಲಿ ತ್ರೈಲೋಕ್ಯ ಮಲ್ಲನಿಗೆ ತನ್ನ ತಲೆಯನ್ನು ಕೊಟ್ಟು ಅಸುವನ್ನು ನೀಗಿದನೆಂದು ಹೇಳಿದೆ.

14ನೆಯ ಶತಮಾನದ ಮಧ್ಯಭಾಗದಲ್ಲಿ ಮಹಮದೀಯರ ದಾಳಿಗಳಿಂದ ರಾಜಕೀಯವಾಗಿ ಏರುಪೇರುಗಳಾಗುತ್ತಿದ್ದುದಕ್ಕಿಂತಲೂ ಮಿಗಿಲಾಗಿ ಹಿಂದೂಧರ್ಮ ಸಂಸ್ಕೃತಿಗಳಿಗೇ ಕುತ್ತುಂಟಾದ ಸಂದರ್ಭದಲ್ಲಿ ಸಮಗ್ರ ದಕ್ಷಿಣಭಾರತವನ್ನು ರಕ್ಷಿಸುವ ಹೊಣೆ ಹೊತ್ತವರು ಕನ್ನಡ ಜನ. ಮೇಲಿಂದ ಮೇಲೆ ಬಹಮನೀಯರ ಸೈನ್ಯಗಳನ್ನೆದುರಿಸಿ ಅವರೊಡನೆ ಹೋರಾಡಿ ನಾಡಿನ ಸ್ವಾತಂತ್ರ್ಯಕ್ಕಾಗಿ ನೆತ್ತರು ಸುರಿಸಿದವರು

---

18. "ಅನ್ಯುಯಲ್ ರಿಪೋರ್ಟ್ ಆನ್ ಇಂಡಿಯನ್ ಎಪಿಗ್ರಫಿ" (ಭಾರತೀಯ ಶಾಸನಗಳ ವಾರ್ಷಿಕ ವರದಿ) 1958.59, ಬಿ.714, ಸೌತ್ ಇಂಡಿಯನ್ ಇನ್‌ಸ್ಕ್ರಿಪ್ಷನ್ಸ್. XI, ಭಾಗ I, ನಂ. 97

19. ಅರಿಇಎ, 1899, ನಂ. 5, 1920, ನಂ. 472, 1925, ನಂ. 193 ಇತ್ಯಾದಿ.

20. ಎ. ಇ, XV.ಪು. 257 ರಿಂದ.

ನಮ್ಮವರು. ದೂರದ ದಕ್ಷಿಣದಲ್ಲಿದ್ದ ವಿಜಯನಗರದ ಸಾಮಂತರ ಅಧೀನರಾಗಿದ್ದ ಜನರಿಗೆ ಈ ಬೇಗೆ ಅಷ್ಟಾಗಿ ತಾಗಲಿಲ್ಲ. ಆದರೆ ವಿಜಯನಗರದ ಅರಸರು ತಾವು ಜಯಶಾಲಿಗಳಾಗಿ ರಣರಂಗದಿಂದ ಹಿಂದಿರುಗಿದಾಗಲೆಲ್ಲಾ ಕೇವಲ ತಮ್ಮ ರಾಜಧಾನಿಗಲ್ಲದೆ ರಾಜ್ಯದ ಇತರ ಧಾರ್ಮಿಕ ಕ್ಷೇತ್ರಗಳಿಗೂ ಅಪಾರವಾದ ಧನಕನಕಗಳನ್ನು ದಾನವಾಗಿ ನೀಡಿದರು. ಅಲ್ಲಿನ ದೇವಾಲಯಗಳನ್ನು ಸಮೃದ್ಧಿಗೊಳಿಸಿದರು. ಆ ದೇವಾಲಯಗಳು ಧಾರ್ಮಿಕವಾಗಿ ಪುಣ್ಯಕ್ಷೇತ್ರಗಳೆನಿಸಿಕೊಂಡ ಕಾರಣ ದೇವಾಲಯಗಳಿಗೆ ಹೊಸದಾಗಿ ಮಂಟಪಗಳನ್ನು ಕಲ್ಯಾಣಮಂಟಪ, ವಾಹನಮಂಟಪ, ನೃತ್ಯಮಂಟಪ ಇತ್ಯಾದಿ ಸೇರಿಸಿ ಕಟ್ಟಿಸಿದರು. ವಾಸ್ತುಶಿಲ್ಪ, ಮೂರ್ತಿಶಿಲ್ಪ, ಲಲಿತಕಲೆ, ಸಂಗೀತ, ಸಾಹಿತ್ಯಗಳಿಗೆ ಯಾವ ಭೇದ ಭಾವವೂ ಇಲ್ಲದೆ ಪ್ರೋತ್ಸಾಹ ನೀಡಿದರು. ಆಂಧ್ರಪ್ರದೇಶದ ಕಾಳಹಸ್ತಿ, ವೇಂಕಟಾದ್ರಿ, ಶ್ರೀಶೈಲ, ಅಹೋಬಲಗಳು ತಮಿಳುನಾಡಿನ ಕಾಂಚೀಪುರ, ಶ್ರೀರಂಗ, ಕುಂಭಕೋಣ, ಚಿದಂಬರಂ ಮುಂತಾದ ಸ್ಥಳಗಳ ದೇವಾಲಯಗಳು ಕೃಷ್ಣದೇವರಾಯನ ಬಿಚ್ಚುಗೈಯ ದಾನಗಳಿಗೆ ಪಾತ್ರಗಳಾದುವು. ಆದರೆ ಅಂತಿಮವಾಗಿ ರಕ್ಕಸತಂಗಡಿಯ ಕದನ ನಡೆದಾಗ ಅದರ ಪೆಟ್ಟಿಗೆ ತುತ್ತಾಗಿ ರಾಜ್ಯಕೋಶಗಳನ್ನು ಕಳೆದುಕೊಂಡವರು ಕನ್ನಡಿಗರು.

ಅನಂತರದ ಶತಮಾನಗಳಲ್ಲಿ ಉತ್ತರ ಕರ್ನಾಟಕದ ಭಾಗಗಳು ಮರಾಠರ, ನೈಜಾಮರ ಅಧೀನಕ್ಕೊಳಪಟ್ಟುವು. ಮರಾಠೀ ಹಾಗೂ ಉರ್ದು ಭಾಷೆಗಳನ್ನು ಬಲಾತ್ಕಾರವಾಗಿ ಕನ್ನಡಿಗರ ಮೇಲೆ ಹೇರಲಾಯಿತು. ಅವರ ಆಡಳಿತ ಪದ್ಧತಿಗಳು ಇಲ್ಲೂ ಜಾರಿಗೆ ಬಂದವು. ದೇಸಾಯಿ, ಸರ್ದೇಸಾಯಿ, ಮುತಾಲಿಕ ದೇಸಾಯಿ, ಪೋತದಾರ ಇತ್ಯಾದಿ ಅಧಿಕಾರಗಳನ್ನು ಹಿಡಿದ ಕನ್ನಡ ಜನ ತಮ್ಮ ಮನೆತನಗಳಿಗೂ ಅವನ್ನೇ ಅಡ್ಡಹೆಸರುಗಳನ್ನಾಗಿ ಮಾಡಿಕೊಂಡರು. ವಿದ್ಯಾಭ್ಯಾಸ, ವ್ಯವಹಾರಗಳೆಲ್ಲ ಆಯಾಭಾಷೆಗಳಲ್ಲಿ ಕೊನೆಗೆ ಅನೇಕ ಸಂದರ್ಭಗಳಲ್ಲಿ ಮನೆಮಾತು ಸಹ ಮರಾಠೀ ಅಥವಾ ಉರ್ದು. ಈ ಪರಿಸ್ಥಿತಿ ಆ ಪ್ರದೇಶಗಳು ನೇರವಾಗಿ ಬ್ರಿಟಿಷರ ಆಡಳಿತಕ್ಕೊಳಪಟ್ಟಿದ್ದಾಗಲೂ ಮುಂದುವರೆಯಿತು. ಹಿಂದಿನ ಮೈಸೂರು ರಾಜ್ಯದಲ್ಲಿ ಕನ್ನಡತನ ಇನ್ನೂ ಉಳಿದಿತ್ತು. ಆದರೆ ಒಂದೆರಡು ತಲೆಮಾರುಗಳ ಹಿಂದಿನವರಿಗೆ ನಮ್ಮ ರಾಜ್ಯದಲ್ಲಿ ಮಹಾರಾಜರ ಮಂತ್ರಿವರ್ಗ, ಪ್ರಮುಖ ಅಧಿಕಾರಿವರ್ಗ ಹೊರಗಿನಿಂದ ಬಂದಂತಹವರಿಗೆ ವಿಶೇಷವಾಗಿ ಲಭಿಸುತ್ತಿತ್ತೆಂಬ ಆಪಾದನೆ ಆರಂಭವಾಗಿ ಅದು ರಾಜಕೀಯ ಪ್ರಶ್ನೆಯಾಗುವ ಮಟ್ಟಕ್ಕೆ ಹೋಗಿತ್ತೆಂಬುದರ ನೆನಪಿರಬಹುದು.

ನಾಲ್ಕು ಶತಮಾನಗಳ ಹಿಂದೆ ಹರಿದು ಹಂಚಿಹೋಗಿದ್ದ ಕರ್ನಾಟಕ ಇದೀಗ ಒಂದಾಗಿದೆ. ಕನ್ನಡ ಭಾಷೆ ಜೀವಂತವಾಗಿದೆ. ಶತಮಾನಗಳಿಂದಲೂ ನಾವು ಬೆಳಸಿಕೊಂಡು ಬಂದ ಔದಾರ್ಯಸ್ವಭಾವ ಮೆಚ್ಚತಕ್ಕದ್ದೇ. ಆದರೆ ಅದರಿಂದಾಗಿ ನಾವು ಈಗ

ಎಲ್ಲವನ್ನೂ ಕಳೆದುಕೊಂಡಂತಾಗಿದೆ. ಈಗ ಸ್ವಾಭಿಮಾನ ಬೆಳಸಿಕೊಳ್ಳಬೇಕಾದುದು ಅತ್ಯವಶ್ಯಕ. ನಮ್ಮ ನಾಡು, ಭಾಷೆ, ಸಂಸ್ಕೃತಿಗಳಲ್ಲಿ ವಿಶೇಷ ಆಸಕ್ತಿ ತೋರಿಸಿ, ಅವನ್ನು ಶ್ರೀಮಂತಗೊಳಿಸಿ, ನಾಡನ್ನು ಪುನಶ್ಚೇತನಗೊಳಿಸಬೇಕಾದುದು ನಮ್ಮ ಆದ್ಯ ಕರ್ತವ್ಯ. ಅದಕ್ಕಾಗಿ ನಾವು ಶ್ರಮಿಸಬೇಕು. ಮುಖ್ಯವಾಗಿ ಅಂತಹ ಮನೋಧರ್ಮವನ್ನು ನಮ್ಮಲ್ಲಿ ನಾವೇ ಬೆಳಸಿಕೊಳ್ಳಬೇಕು. ಇದು ಒತ್ತಾಯದಿಂದ ಬರುವಂತಹದಲ್ಲ, ಪ್ರೇಮದಿಂದ ಬರತಕ್ಕದ್ದು.

ಕೋಲಾರ ಜಿಲ್ಲೆಯ ಸ್ಥಳನಾಮಗಳಲ್ಲಿ

ಜಲಸೂಚಕ ಅಂಶಗಳು

—ವಿ. ಗೋಪಾಲಕೃಷ್ಣ

I

ಕೋಲಾರ ಜಿಲ್ಲೆಯಲ್ಲಿ ಸಂಗ್ರಹಿಸಲಾಗಿರುವ ಸುಮಾರು 4000 ಸ್ಥಳನಾಮಗಳಲ್ಲಿ ಸುಮಾರು 400 ಸ್ಥಳನಾಮಗಳು ಒಂದಲ್ಲ ಒಂದು ರೀತಿಯಲ್ಲಿ ಜಲಸೂಚಕ ಅಂಶಗಳನ್ನೊಳಗೊಂಡಿದೆ. ಸ್ಥಳನಾಮದ ಆದಿಯಲ್ಲಿ ಅಥವಾ ಅಂತ್ಯದಲ್ಲಿ ಸೇರಿಕೊಂಡಿರುವ ಇಂತಹ ಜಲಸೂಚಕ ಪ್ರತ್ಯಯಾಂಶಗಳನ್ನು ಕುರಿತು ಈ ಲೇಖನದಲ್ಲಿ ವಿವೇಚಿಸಲಾಗಿದೆ.

ಕರ್ನಾಟಕದಲ್ಲಿ ಅತ್ಯಂತ ಕಡಿಮೆ ಮಳೆ ಬೀಳುವ ಜಿಲ್ಲೆಗಳಲ್ಲಿ ಕೋಲಾರ ಜಿಲ್ಲೆಯೂ ಒಂದು. ಇಲ್ಲಿ ಸರಾಸರಿ ವರ್ಷಕ್ಕೆ 730·5 ಮಿ.ಮೀ (28·76 ಅಂಗುಲ) ಮಳೆಯಾಗುತ್ತದೆ. ಇದಕ್ಕಿಂತ ಹೆಚ್ಚು ಮಳೆಯಾಗಿರುವ ದಾಖಲೆಗಳು ಈ ಶತಮಾನದಲ್ಲಿಯೇ ದೊರೆತಿಲ್ಲ. ಜಿಲ್ಲೆಯ ಮುಖ್ಯ ನದಿಗಳಾದ ಪಾಲಾರ್, ಉತ್ತರ ಪೆನ್ನಾರ್, ದಕ್ಷಿಣ ಪೆನ್ನಾರ್, ಚಿತ್ರಾವತಿ, ವೃಷಭಾವತಿ, ಕುಶಾವತಿ ಮೊದಲಾದ ನದಿಗಳು ಈಗಂತೂ ಜೀವನದಿಗಳಾಗಿ ಉಳಿದಿಲ್ಲ. ಈ ನದಿಗಳಲ್ಲಿ ಬಹುಪಾಲು ನಂದಿ ದುರ್ಗದ ಶ್ರೇಣಿಯಲ್ಲಿ ಜನಿಸಿ ಮಳೆಗಾಲದಲ್ಲಿ ಮಾತ್ರ ಪ್ರವಹಿಸುತ್ತವೆ. ನೈಸರ್ಗಿಕ ಜಲಾಶಯಗಳಿಂದ ವಂಚಿತವಾಗಿರುವ ಈ ಜಿಲ್ಲೆಯಲ್ಲಿ ಸಹಜವಾಗಿಯೇ ಕೃತಕ ಜಲಾಶಯಗಳು ಹೆಚ್ಚಾಗಿವೆ. ಜಿಲ್ಲೆಯಲ್ಲಿ ಕೆಲವೇ ಮೈಲುಗಳಷ್ಟು ದೂರ ಹರಿಯುವ ಈ ನದಿಗಳು ಮುಖ್ಯ ಜಲಾಶಯಗಳಿಗೆ ಆಸರೆ.

ಸಮುದ್ರ । ಸಂದ್ರ ಎಂಬ ಅಂಶಗಳುಳ್ಳವು 108, ಕೆರೆ । ಚೆರುವು ಎಂಬ ಅಂಶದ 82, ಕುಂಟೆ ಎಂಬ ಅಂಶದ 74 ಸ್ಥಳನಾಮಗಳು ಎಂದರೆ ಒಟ್ಟನಲ್ಲಿ ಅರ್ಧಕ್ಕಿಂತ ಹೆಚ್ಚು ಪಾಲು ಕೃತಕ ಜಲಾಶಯಗಳ ಹೆಸರನ್ನು ಸೂಚಿಸುವ ಜಲಸೂಚಕ ಸ್ಥಳನಾಮಗಳಾಗಿವೆ. ದೊರೆತಿರುವ ಅಂಕಿಅಂಶಗಳ ಪ್ರಕಾರ ಕೋಲಾರ ಜಿಲ್ಲೆಯಲ್ಲಿ ಸಣ್ಣ ಪುಟ್ಟ

ಕೆರೆಗಳೆಲ್ಲಾ ಸೇರಿ 64,500 ಎಂಬುದಾಗಿ ತಿಳಿದುಬಂದಿದೆ. ಈ ಅಂಶವನ್ನು ಪರಿಶೀಲಿಸಿದಾಗ ಬಯಲು ಸೀಮೆಯ ಜಲಾಭಾವ ಪ್ರದೇಶದಲ್ಲಿ ಜಲಾಶಯಗಳಿಗೆ ಎಷ್ಟು ಪ್ರಾಧಾನ್ಯವಿತ್ತಿದ್ದರೆಂಬ ಅಂಶ ಸ್ಪಷ್ಟವಾಗುತ್ತದೆ.

II

ಜಲಸೂಚಕ ಅಂಶಗಳನ್ನು ಅಕಾರಾದಿಯಲ್ಲಿ ಪಟ್ಟಿಮಾಡಿದೆ. ಮೊದಲು ಅವುಗಳ ಅರ್ಥವನ್ನು ವಿವರಿಸಿ ಅವಶ್ಯಕತೆಯಿರುವ ಕಡೆ ಅವುಗಳ ನಿಷ್ಪತ್ತಿಯನ್ನು ಇತರ ದ್ರಾವಿಡಭಾಷೆಗಳೊಡನೆ ಹೋಲಿಸಿದೆ. ನಂತರ ಆದಿಪ್ರತ್ಯಯಾಂಶವನ್ನು ಅದು ಜಿಲ್ಲೆಯ ಸ್ಥಳನಾಮಗಳಲ್ಲಿ ಕಾಣಸಿಗುವ ಒಟ್ಟು ಸಂಖ್ಯೆಯನ್ನೂ ಉದಾಹರಣೆಸಹಿತ ಕೊಡಲಾಗಿದೆ. ಇದೇ ಕ್ರಮವನ್ನು ಅಂತ್ಯಪ್ರತ್ಯಯಾಂಶಗಳನ್ನು ವಿವರಿಸುವಾಗಲೂ ಅನುಸರಿಸಿದೆ. ಅಲ್ಲಲ್ಲಿ ಸಂಕೇತಾಕ್ಷರಗಳನ್ನು ಬಳಸಲಾಗಿದೆ (ವಿವರಗಳನ್ನು ಅನುಬಂಧದಲ್ಲಿ ಕೊಡಲಾದೆ)

1. ಅತಿ|ಅತ್ತಿ. ನೈಸರ್ಗಿಕ ಚಿಲುಮೆ, ಕೊಳ ಸರಸು.
   ಅತಿ|ಅತ್ತಿ. (6) ಉದಾ : **ಕಲ್ಲತ್ತಿ**

(ಎ.ಕ. X ಚಿಕ್ಕಬ. 35-1150)

[ಅತ್ತಿ ಎಂಬ ಆದಿಪ್ರತ್ಯಯಾಂಶಗಳು ಕೋಲಾರ ಜಿಲ್ಲೆಯ ಸ್ಥಳನಾಮಗಳಲ್ಲಿ ಹೇರಳವಾಗಿ ದೊರೆಯುತ್ತದೆ. ಅದು ವೃಕ್ಷಸೂಚಿಯೇ ಜಲಸೂಚಿಯೇ ಎಂಬುದನ್ನು ನಿರ್ಧರಿಸಲು ಈಗ ದೊರೆತಿರುವ ಆಧಾರಗಳಿಂದ ತೀರ್ಮಾನಿಸಲು ಸಾಧ್ಯವಾಗಿಲ್ಲ.]

2. **ಆಲ|ಆಟಿ|ಆಳ|ಅಲ|ಅಲಿ|ಅಟಿ**
   ತಗ್ಗಾದ ಸ್ಥಳ, ನದಿಯ ಮುಖಜಭೂಮಿ : ಅಳಂ (ತ) ತಗ್ಗುನೆಲ
   ಮೂಲ.ದ್ರಾ. *ಅಳ್. ತಗ್ಗಾದ

ಬಹುತೇಕ ಎಲ್ಲಾ ದ್ರಾವಿಡ ಭಾಷೆಗಳಲ್ಲೂ ಕಂಡುಬರುವ ಒಂದು ಅಸ್ವತಂತ್ರ ರೂಪ.

—ಆಲ ಉದಾ : ಕೊಂಡಾಲ (ಎ.ಕ. X ಮುಳು. 54-1102)
—ಆಳ|ಅಳ ಕೇಶಂಬಾಳ|ಕೆಸಂಬಳ (ಎ.ಕ. X ಬಂಗಾ. 18-1465)
—ಅಟಿ ಆಲಂಬಾಟಿ (ಎ. ಕ. X ಮಾಲೂ. 21-1356)

[ಅಲ|ಅಲ ಎಂಬ ಆದಿ ಪ್ರತ್ಯಯಾಂತಗಳು ಕೋಲಾರ ಜಿಲ್ಲೆ ಸ್ಥಳನಾಮದಲ್ಲಿ ಸಾಕಷ್ಟು ದೊರೆಯುತ್ತವೆ. ವೃಕ್ಷಸೂಚಿಯೋ ಜಲಸೂಚಿಯೋ ಎಂಬುದು ಸ್ಪಷ್ಟವಾಗಿಲ್ಲ.]

3. ಏರಿ : ನೀರು ನಿಲ್ಲಿಸಲು ಹಾಕುವ ಎತ್ತರವಾದ ಕಟ್ಟೆ, ಕೆರೆ, ಒಡ್ಡು
ಏರಿ (17) ಉದಾ : ಕೂಟ್ಟೇರಿ (ಎ.ಕ. X ಕೋಲಾ. 143-1284)

4. ಏರು : ನದಿ, ಹಳ್ಳ, ತೊರೆ.
ಏರು (ತೆ) ಆಱ್(ತ) ಆಱು (ಮ)
ಮೂಲ.ದ್ರಾ. *ಯಾಱ್. DED-3233.
ಏರು (2) ಉದಾ : ಏರು ಕಾಲುವೆ (ಎ.ಕ. X ಶ್ರೀನಿ. 69-81)
ಏರು (4) ಬೂಡದೇರು (ಶ್ರೀನಿ)

5. ಒಡ್ಡು|ವಡ್ಡು : ನೀರು ನಿಂತಿರುವ ತಗ್ಗಾದ ಜಾಗ, ಸಣ್ಣ ಕುಂಟೆ, ಸಣ್ಣ ಕೆರೆ.

ಒಡ್ಡು (1) ಉದಾ : ಒಡ್ಡು ಮುರವೇ ಹಳ್ಳಿ (ಗುಡಿ)
ಒಡ್ಡು (3) ತಾವರೇವಡ್ಡು (ಶಿಡ್ಲ)

6. ಓಡು|ಓಡಿ : ಸಣ್ಣ ತೊರೆ, ಹಳ್ಳ
ಓಡೈ (ತ)

ಓಡು (11) ಉದಾ : ಪರಗೋಡು (ಬಾಗೇ)
ಪಸಪಲೋಡು (ಗುಡಿ)

7. ಕಡವು : ಒಡ್ಡು, ಹೊಳೆಯನ್ನು ದಾಟುವ ಸ್ಥಳ, ಕಟ್ಟದ ರೇವು.

ಕಡವು (2) ಉದಾ : ಕಡಬೂರು

(ಎ.ಕ. X ಗೌರಿ. 62, 63-1371)

8. ಕಾಲುವೆ : ನೀರು ಹರಿಯಲು ಮಾಡಿರುವ ತಗ್ಗು
ಕಾಲುವೆ (2) ಉದಾ : ನೋ. ಕ್ರ. ಸಂ. 4

9. ಕುಂಟೆ : ನೀರು ನಿಲ್ಲುವ ದೊಡ್ಡ ಗುಣಿ, ಕಟ್ಟೆ, ಸಣ್ಣ ಕೆರೆ.
ಕುಟ್ಟೈ|ಕೊಂಟೆ > ಕುಂಟೆ.

(ಎ.ಕ. X ಬಂಗಾ. 55-1280)

ಕುಟ್ಟೈ (3) ಉದಾ : ಕುಂಟಪಲ್ಲಿ (ಬಾಗೇ)
ಕುಂಟೆ (71) ಉದಾ : ಅಲ್ಲಿಕುಟ್ಟೈ

10. ಕುಡು|ಕೂಡು : ಸಂಗಮಿಸು : ಒಂದೆಡೆ ಸೇರುವುದು.
ಬೆರೆಯುವುದು ; ಕೂಡಲು.

ಕುಡು (2) ಉದಾ : ಕುಡುವತ್ತಿ.

(ಎ. ಕ. X ಚಿಕ್ಕಬ. 41-1330)

11. ಕುಳ|ಕೊಳ : ಸರೋವರ, ಕೆರೆ : ನೀರು ನಿಂತಿರುವ ಕುಂಟೆ.
ಕುಳ|ಕೊಳ (3) ಉದಾ : ಕೊಳತ್ತೂರು.

(ಎ.ಕ. X ಮುಳು. 157-338)

ಕುಳ (2) ಉದಾ : ಹುದುಕುಳ

(ಎ.ಕ. X ಕೋಲಾ. 113-1379)

12. ಕೆರೆ : ಪರಿಹಾಕಿ ನೀರು ನಿಲ್ಲಿಸಿರುವ ಸ್ಥಳ, ಜಲಾಶಯ.
ಕೆರೆ (1) ಉದಾ : ಕೆರೆಹಳ್ಳಿ (ಗುಡಿ)
ಕೆರೆ (68) ಬಿತ್ತೂರಳ್ಳಿ ಕೆಱೆ

(ಎ.ಕ. X ಶ್ರೀನಿ. 59-985 ?)

13. ಕುಳಿ|ಗುಳಿ. : ಕುಣಿ, ಹಳ್ಳ, ಗುಣಿ, ತಗ್ಗು
ಕುಳಿ (4) ಉದಾ : ಇಲವು ಕುೞಿ

(ಎ.ಕ. X ಮಾಲೂ. 26-1336)

ಗಂಜಗುಳಿ

(ಎ.ಕ. X ಚಿಂತಾ. 150-1614)

14. ಕೋಡಿ : ಕೆರೆ|ಕಟ್ಟೆಯಿಂದ ಹೆಚ್ಚುವರಿ ನೀರು ಹರಿದುಹೋಗಲು
ಮಾಡಿರುವ ದಾರಿ.

ಕೋಡಿ (10) ಉದಾ : ಕೋಡಿಪಲ್ಲಿ

(ಎ.ಕ. X ಮುಳು. 241-1451)

15. ಕೋಲ್।ಗೋಲ್।ಗೊಳ್ಳ : ಕೆರೆ, ಸರಸ್ಸು, ಕೊಳ.
ಕೊಲನು (ತೆ)
ಮೂಲ.ದ್ರಾ. *ಕುಳ್. DED. 1518.

ಕೋಲ್।ಗೋಲ್ (3) ಉದಾ : ಕೋಲದೇವಿ (ಮುಳು)
ಕೋಲ್।ಗೋಲ್ (5) ಉದಾ : ತಾಡಿಗೋಲ್ (ಶ್ರೀನಿ)
ಗೊಳ್ಳ ಎಂಬ ಸ್ವತಂತ್ರರೂಪದ ಒಂದು ಸ್ಥಳನಾಮವೂ ಇದೆ.
(ಗೊಳ್ಳ ಎ.ಕ. X ಚಿಕ್ಕಬ. 54-1646 ?)

16. ಚೆರುವು।ಚೆರ್ಲ।ಚೆರ್ಲು. (ತೆ) ಜಲಾಶಯ, ಕೆರೆ.
ಚೆರ್ಲ ಬಹು. ವ. ರೂಪ.
ಚೆರುವು (1) ಉದಾ : ಚೆರ್ಲೋಪಲ್ಲಿ (ಗುಡಿ)
ಚೆರುವು (12) ಉದಾ : ಕೂತನಾಯಣಿ ಚೆರವು
(ಎ.ಕ. X ಶ್ರೀನಿ. 37-1713)

17. ಜೌಗು।ಜವುಗು : ಸದಾ ತೇವದಿಂದ ಕೂಡಿರುವ ಸ್ಥಳ
ಜಿನುಗುತ್ತಿರುವ ಭೂಭಾಗ.
ಜೌಗು (1) ಉದಾ : ಜೌಗುಪಲ್ಲಿ (ಮುಳು)

18. ತೇವ : ಹಸಿಯಾಗಿರುವುದು, ಒದ್ದೆಯಾಗಿರುವುದು,
ನೀರು ಜಿನುಗುತ್ತಿರುವುದು.
ತೇವ (1) ಉದಾ : ತೇಕ್ಕಲ್‌ನಾಡು.
(ಎ.ಕ. X ಮಾಲೂ. 26-1336)

19. ತೊರೆ. ಸಣ್ಣ ಹಳ್ಳ, ಹೊಳೆ.
ತೊರೆ (4) ಉದಾ : ತೊರೆಹಳ್ಳ (ಬಂಗಾ)

20. ದೀವಿ।ದೇವಿ ; ದ್ವೀಪ, ಸುತ್ತಲೂ ನೀರು ಆವರಿಸಿರುವ ಪ್ರದೇಶ.
<ದೀವಿ (ತೆ)
ದೇವಿ. ಉದಾ : ಕೋಲದೇವಿ (ಮುಳು)

21. ದೊಣೆ : ಬಂಡೆಗಳ ಮಧ್ಯೆ ಇರುವ ಸಣ್ಣ ಜಲಾಶಯ.
ದೊಣೆ (1) ಉದಾ : ದೊಣಹಳ್ಳ (ಶಿಡ್ಲ)

22. ಬಾವಿ : ಅಂತರ್ಜಲಕ್ಕಾಗಿ ತೋಡಿರುವ ಆಳವಾದ ಗುಣಿ, ಕೂಪ.
ಬಾವಿ (3) ಉದಾ : ಗಾಜಲಬಾವಿ (ಮುಳು)

23. ಮಡವು|ಮಡಗು|ಮಡಕ|ಮಡ್ಲು.
ಆಳವಾಗಿ ನೀರು ನಿಂತಿರುವ ಸ್ಥಳ, ಕೆರೆ.
ಮಡವು (7) ಉದಾ : ಮಡವಳ.
(ಎ.ಕ. X ಬಂಗಾ. 18-1465
ಮಡವು (18) ಉದಾ : ಕಲ್‌ಪಳ್ಳಿ ಮಡವು.
(ಎ.ಕ. X ಮುಳು. 186-1277

24. ಮರವೆ : ಕೆರೆಯಲ್ಲಿನ ಹೆಚ್ಚು ನೀರು ಹೋಗಲು ಮಾಡಿರುವ ದಾರಿ, ಕೋಡಿ.
ಮರವ (ಕೆ)
ಮರವೆ (4) ಉದಾ : ಮರನೀಡ್ಲು (ಬಾಗೇ)

25. ವಾನಿ|ವಾಣಿ|ವೇಣಿ|ಓಣಿ, ಹಳ್ಳ, ನದಿ.
ವಾನಿ|ವಾಣಿ (10) ಉದಾ : ಕಾದಶಾಣ್ಣೆಯಗ್ರಾಮ.
(ಎ.ಕ. X ಗೌರೀ. 53-1516)

26. ಸಮುದ್ರ|ಸಂದ್ರ : ಜಲಾಶಯ, ದೊಡ್ಡಕೆರೆ.
ಸಮುದ್ರ > ಸಂದ್ರ.
ಸಮುದ್ರ|ಸಂಪ್ರ (108) ಉದಾ : ಇರುಗಸಮುದ್ರ.
(ಎ.ಕ. X ಚಿಂತಾ. 34-955)

27. ಸಾಗರ. ಜಲಾಶಯ, ದೊಡ್ಡಕೆರೆ.
ಸಾಗರ (5) ಉದಾ : ಲಕ್ಷ್ಮೀಸಾಗರ (ಬಂಗಾ)
ಲಕ್ಕಸಂದ್ರ (ಗೌರೀ)

ಅನುಬಂಧ

ಎ. ಕ. - ಎಪಿಗ್ರಾಫಿಯ ಕರ್ನಾಟಕ

ಕೋ.	ಕೋಲಾರ ತಾಲ್ಲೂಕು	
ಚಿಂತಾ.	ಚಿಂತಾಮಣಿ	,,
ಚಿಕ್ಕ.	ಚಿಕ್ಕಬಳ್ಳಾಪುರ	,,
ಗುಡಿ.	ಗುಡಿಬಂಡೆ	,,
ಗೌರೀ.	ಗೌರೀಬಿದನೂರು	,,
ಬಂಗಾ.	ಬಂಗಾರಪೇಟೆ	,,
ಬಾಗೇ.	ಬಾಗೇಪಲ್ಲಿ	,,
ಮಾಲೂ.	ಮಾಲೂರು	,,
ಮುಳು.	ಮುಳುಬಾಗಿಲು	,,
ಶ್ರೀನಿ.	ಶ್ರೀನಿವಾಸಪುರ	,,
ಶಿಡ್ಲ.	ಶಿಡ್ಲಘಟ್ಟ	,,
ಹೋ. ನೋ.	ಹೋಲಿಸಿ ನೋಡಿ	
ಮೂಲದ್ರಾ.	ಮೂಲದ್ರಾವಿಡ	
(ತ)	ತಮಿಳು	
(ತೆ)	ತೆಲುಗು	
(ಮ)	ಮಲಯಾಳಂ	
DED.	Dravidian Etymological Dictionary.	

ಆಡುಗನ್ನಡ ಕ್ರಿಯಾಪದಗಳ ಆಕೃತಿಮಾ ರಚನೆ

—ಡಾ|| ಸಿ. ಓಂಕಾರಪ್ಪ

ಈ ಲೇಖನವು ಕನ್ನಡ ಕ್ರಿಯಾಪದಗಳ ಆಕೃತಿಮಾರಚನೆಯನ್ನು ಕುರಿತ ಪರಿಶೀಲನೆಯಾಗಿದೆ. ನಿತ್ಯಬಳಕೆಯಲ್ಲಿ ನಾನು ಉಪಯೋಗಿಸುವ ನನ್ನ ಸ್ವಂತ ಭಾಷೆಯನ್ನು ಕುರಿತ ಈ ವರ್ಣನೆ ಕರ್ನಾಟಕದ ಶಿವಮೊಗ್ಗ ಜಿಲ್ಲೆಯ ಗ್ರಾಮಾಂತರ ಪ್ರದೇಶದಲ್ಲಿ ವಾಸಿಸುವ ಜನಸಾಮಾನ್ಯರ ಭಾಷೆಯನ್ನು ಕುರಿತ ವರ್ಣನೆಯಾಗಿದೆ. ವೈವಿಧ್ಯತೆಗಳ ಸಾಧ್ಯತೆಯನ್ನು ಅಲ್ಲಗಳೆಯಲಾಗದಿದ್ದರೂ ನಮ್ಮ ಪ್ರಾಂತದಲ್ಲಿ ಅಂದರೆ ಶಿಕಾರಿಪುರ ತಾಲ್ಲೂಕಿನಲ್ಲಿ ಜನಸಾಮಾನ್ಯರು ಆಡುವ ಭಾಷೆಯನ್ನು ಕುರಿತ ನಿಸ್ಕೃ ಈ ಲೇಖನದಲ್ಲಿ ಉದ್ದಿಷ್ಟವಾಗಿದೆ. ಈ ಪರಿಶೀಲನೆಗೆ ಒಳಪಟ್ಟ ಸಾಮಗ್ರಿಗೆ ವಿಶಿಷ್ಟವಾದ ರೂಪಗಳೂ ಮತ್ತು ಲಕ್ಷಣಗಳೂ ಹೇರಳವಾಗಿರುವುದರಿಂದ ಈ ಸಾಮಗ್ರಿಯನ್ನು ಕುರಿತ ಪರಿಪೂರ್ಣವ್ಯಾಕರಣಕೃತಿಯೊಂದರ ರಚನೆಯ ಅಗತ್ಯವಿದೆ ಎಂದು ನನಗೆ ತೋರುತ್ತದೆ. ಇಲ್ಲಿ ಆರಿಸಿಕೊಂಡಿರುವ ಪ್ರದೇಶವು ಹಳೆಯ ಮೈಸೂರು ಮತ್ತು ಉತ್ತರ ಕರ್ನಾಟಕಗಳ ಗಡಿನಾಡಿನ ಸರಹದ್ದಿನ ಪ್ರಾಂತವಾದುದರಿಂದ ಇಲ್ಲಿ ಉಪಭಾಷೆಗಳ ಮಿಶ್ರಣದ ಸರ್ವಸಾಧ್ಯತೆಗಳೂ ಇವೆ. ಆದರೆ ಇಲ್ಲಿ ನಮ್ಮ ಜಿಲ್ಲೆಯ ಗ್ರಾಮಾಂತರ ಪ್ರದೇಶದಲ್ಲಿ ಜನಸಾಮಾನ್ಯರು ಆಡುವ ಮೈಸೂರು ಕನ್ನಡ ಎಂಬ ಅಂಕಿತದಲ್ಲಿ ಪರಿಚಿತವಾದ ಭಾಷೆಗೆ ಪರ್ಯಾಯವೆನಿಸುವ ಸಾಮಗ್ರಿಯನ್ನು ಕುರಿತು ಪರಿಶೀಲಿಸಿದ್ದೇನೆ. ಇದು ಹಳೆಯ ಮೈಸೂರು ಪ್ರಾಂತದ ಗ್ರಾಮಾಂತರ ಪ್ರದೇಶದ ನಿವಾಸಿಗಳಾದ ಅವಿದ್ಯಾವಂತರು ಬಳಸುವ ಭಾಷೆಯೇ ಹೊರತು ವಿದ್ಯಾವಂತರ ವಲಯದಲ್ಲಿ ವ್ಯವಹರಿಸಲ್ಪಡುವ ಪ್ರೌಢಕನ್ನಡವಲ್ಲ ಎಂಬುದೇ ಇಲ್ಲಿನ ಸಾಮಗ್ರಿಯ ವೈಶಿಷ್ಟ್ಯ.

ಪ್ರಸ್ತುತ ಸಾಮಗ್ರಿಯಲ್ಲಿ (ವ್ಯಂ) ಸ್ವವ್ಯಂಸ್ವ* ಆಕಾರದ ಕೆಲವು ಧಾತುಗಳು-ಇಕಾರಾಂತವಾಗಿವೆ. ಅವುಗಳ ಹೊರತು ಉಳಿದ ಎಲ್ಲ ಸ್ವರಾಂತಧಾತುಗಳೂ ಮಧ್ಯಮ ಪುರುಷ ಏಕವಚನದ ಹೊರತು ಉಳಿದ ಕಡೆ ಕ್ರಿಯಾಪದದ ಪ್ರಾತಿಪದಿಕಗಳ ರಚನೆಯಲ್ಲಿ ತಪ್ಪದೆ ಲೋಪವಾಗುವ ಅಂತ್ಯ-ಉಕಾರವನ್ನು ಹೊಂದಿವೆ. ಪ್ರೇರಣಾರ್ಥಕ ಪ್ರಾತಿಪದಿಕಗಳು ಸಿದ್ಧಿಸುವಲ್ಲಿ ಧಾತುಗಳಿಗೆ ಪ್ರೇರಣಾರ್ಥಕ ಪ್ರತ್ಯಯವಾದ '-ಸು'

* ವ್ಯಂ= ವ್ಯಂಜನ, ಸ್ವ= ಸ್ವರ

ಸೇರುತ್ತದೆ. '--ಸು' ಕಾರವು ಪರವಾದಲ್ಲಿ ಧಾತ್ವಂತ್ಯದ ಸ್ವರವು '+' *ಕಾರವಾಗಿ ಬದಲಾಯಿಸುತ್ತದೆ.

ಆಕೃತಿಮಾ ಪ್ರಕ್ರಿಯೆಗಳಲ್ಲಿ ಪ್ರೇರಣಾರ್ಥಕ ಪ್ರಾತಿಪದಿಕಗಳೂ ಸಹ ಸಾಮಾನ್ಯ ಧಾತುಗಳಂತೆಯೇ ವರ್ತಿಸುತ್ತವೆ. ಸಜಾತೀಯ ದ್ವಿತ್ವಗಳು ಇತರ ವ್ಯಂಜನಗಳು ಪರವಾದಾಗ ಸರಳಗಳಾಗಿ ಮಾರ್ಪಡುತ್ತವೆ.

ಭೂತಕಾಲ :—ಭೂತಕಾಲವಾಚಕಪ್ರತ್ಯಯದ ಉಪರೂಪಿಕೆ (allo-morph)ಗಳು |—ದ್—|, |—ಡ್—|, |—ತ್—|, |—ಟ್—| ಮತ್ತು |—ϕ—|.

(1) ಪ್ರಥಮ ಪುರುಷ ನಪುಂಸಕಲಿಂಗ ಏಕವಚನದ ಪುರುಷವಾಚಕ ಪ್ರತ್ಯಯವು ಪರವಾದಲ್ಲಿ |—ϕ—| ಉಪರೂಪಿಕೆಯು ಹತ್ತುತ್ತದೆ. ಈ ಪರಿಸರದಲ್ಲಿ ವಿವಿಧ ನಿಯಮಿತಾಕೃತಿಯ (different canonical shapes) ಧಾತುಗಳಲ್ಲಿ ಈ ಕೆಳಗಿನ ಬದಲಾವಣೆಗಳಾಗುತ್ತವೆ.

(a) ಧಾತ್ವಂತ್ಯದ |—ಇ| ಕಾರವು ದೀರ್ಘವಾಗುತ್ತದೆ.

ಕಲಿ—ಕಲೀ—ϕ—ತು ಒಡಿ—ಒಡೀ—ϕ—ತು

ಬಡಿ—ಬಡೀ—ϕ—ತು ಬೆಳಿ—ಬೆಳೀ—ϕ—ತು

ಕರಿ—ಕರೀ—ϕ—ತು ಹುಳಿ—ಹುಳೀ—ϕ—ತು

(b) ಈ ಮೊದಲೇ ಸೂಚಿಸಿದಂತೆ ಧಾತ್ವಂತ್ಯದ |—ಉ| ಕಾರವು ಲೋಪವಾಗುತ್ತದೆ.

ಉದಾ : ಕೊಡು—ಕೊಡ್—ϕ—ತು

ಹೇಳು—ಹೇಳ್—ϕ—ತು ಅಳು—ಅಳ್—ϕ—ತು

ಹಾಡು—ಹಾಡ್—ϕ—ತು ಬೇಡು—ಬೇಡ್—ϕ—ತು

(c) (ವ್ಯಂ) ಸ್ವ ವ್ಯಂವ್ಯಂ ಸ್ವ ಆಕಾರದ ಧಾತುಗಳ ದ್ವಿತ್ವ ವ್ಯಂಜನವು ಸರಳವಾಗುತ್ತದೆ.

---

* '+' ಎಂಬ ಸ್ವರದ ಉಚ್ಚಾರಣೆಯನ್ನು ಸ್ಪಷ್ಟತೆಗಾಗಿ ಈ ಕೆಳಗಿನ ಶಬ್ದ ಜೋಡಿಗಳಲ್ಲಿ ಗಮನಿಸಿ.

ಕರಿ=to call—ಕ್+ರಿ=tofry

ಮರಿ=to forget—ಮ್+ರಿ=young one

ಉದಾ : ನುಗ್ಗು—ನುಗ್—ϕ—ತು   ತಟ್ಟು—ತಟ್—ϕ—ತು
ಮುಟ್ಟು—ಮುಟ್—ϕ—ತು   ಮುಚ್ಚು—ಮುಚ್—ϕ—ತು
ಕ್+ಚ್ಚು—ಕ್+ಚ್—ϕ—ತು   ತಿದ್ದು—ತಿದ್—ϕ—ತು

(d) ಈ ಪ್ರತ್ಯಯವು ಪರವಾದಲ್ಲಿ ।ತೇಯ್।, ।ನೇಯ್।, ।ತೋಯ್।, ।ಬೇಯ್।, ।ನೋಯ್। ಮತ್ತು ।ಮೇಯ್। ಧಾತುಗಳು ಹ್ರಸ್ವ ಮತ್ತು ದೀರ್ಘ ಸ್ವರಯುಕ್ತವಾದ ವಿಕಲ್ಪರೂಪಗಳನ್ನು ಹೊಂದಿವೆ.

ಉದಾ : ತೇಯ್—ತೇಯ್—ϕ—ತು ~ ತೆಯ್—ϕ—ತು
ನೇಯ್—ನೇಯ್—ϕ—ತು ~ ನೆಯ್—ϕ—ತು
ತೋಯ್—ತೋಯ್—ϕ—ತು ~ ತೊಯ್—ϕ—ತು
ಬೇಯ್—ಬೇಯ್—ϕ—ತು ~ ಬೆಯ್—ϕ—ತು
ಮೇಯ್—ಮೇಯ್—ϕ—ತು ~ ಮೆಯ್—ϕ—ತು

(e) ।ಆಗು। ಮತ್ತು ।ಹೋಗು। ಧಾತುಗಳ ಅಂತ್ಯದ ಅಕ್ಷರವು (syllable) ಬಿದ್ದುಹೋಗುತ್ತದೆ.

ಆಗು—ಆ—ϕ—ತು   ಹೋಗು—ಹೋ—ϕ—ತು

(f) ಭೂತಕಾಲವಾಚಕ ಪ್ರತ್ಯಯವು ಪರವಾದಲ್ಲಿ ।ಬೀಳು। ಧಾತುವು ।ಬಿದ್—। ಎಂಬ ಉಪರೂಪಿಕೆಯನ್ನು ಹೊಂದಿದೆ. ।—ತು। ಕಾರವು ಪರವಾದಲ್ಲಿ ।ಬಿದ್—। ನ ಅಂತ್ಯವ್ಯಂಜನವು ಅಘೋಷವಾಗುತ್ತದೆ.

ಬೀಳು—ಬಿದ್—ϕ—ತು—ಬಿತ್ತು.

(g) ।ತ್+ರು। ಮತ್ತು ।ಬ್+ರು। ಧಾತುಗಳ ಕಡೆಯ ಅಕ್ಷರದಲ್ಲಿರುವ ವ್ಯಂಜನವು ।—ನ್। ಕಾರವಾಗಿ ಬದಲಾವಣೆ ಹೊಂದುತ್ತದೆ.

ತ್+ರು—ತ್+ನ್—ϕ—ತು
ಬ್+ರು—ಬ್+ನ್—ϕ—ತು

ಪ್ರಥಮಪುರುಷ ನ. ಲಿಂ. ಏಕವಚನದ ಪುರುಷವಾಚಕ ಪ್ರತ್ಯಯದ ಹೊರತು ಉಳಿದ ಪು. ವಾ. ಪ್ರತ್ಯಯಗಳು ಪರವಾದಲ್ಲಿ ಈ ಕೆಳಗಣ ಭೂತಕಾಲವಾಚಕ ಪ್ರತ್ಯಯದ ಉಪರೂಪಿಕೆಗಳು ಹತ್ತುತ್ತವೆ.

(1) ನಿಯತಧಾತುಗಳ (regular roots) ಪರದಲ್ಲಿ |—ದ್—| ಬರುತ್ತದೆ. ಬೇರೆ ಬೇರೆಯ ನಿಯಮಿತಾಕೃತಿಯ (Canonical Shapes) ಧಾತುಗಳಲ್ಲಿ ಈ ಕೆಳಗಣ ಬದಲಾವಣೆಗಳಾಗುತ್ತದೆ.

(a) (ವ್ಯಂ) ದೀ. ಸ್ವ ಯ್ ಅಕಾರದ ಧಾತುಗಳ ಅಂತ್ಯ |—ಯ್| ಕಾರವು ಬಿದ್ದುಹೋಗುತ್ತದೆ.

ಕಾಯ್—ಕಾ—ದ್—ಅ, ಕಾ—ದ್—ರು
ತೇಯ್—ತೇ—ದ್—ಅ, ತೇ—ದ್—ಲು ಇತ್ಯಾದಿ.

(b) (ವ್ಯಂ) ಸ್ವ ವ್ಯಂ ಸ್ವ ಅಕಾರದ ಧಾತುಗಳ ಕಡೆಯ |—ಇ| ಕಾರವು |—+—| ಆಗಿ ಪರಿಣಮಿಸುತ್ತದೆ. (+=ಅ)

ಎಳಿ—ಎಳ್+—ದ್—ಅ, ಬೆಳಿ—ಬೆಳ್+—ದ್—ರು
ಕರಿ—ಕರ್+—ದ್—ಲು, ಕಳಿ—ಕಳ್+—ದ್—ವಿ
ತ್+ಗಿ—ತ್+ಗ್+—ದ್—ಎ, ಬರಿ—ಬರ್+—ದ್—ಎ

(c) (ವ್ಯಂ) ದೀ. ಸ್ವ ವ್ಯಂಸ್ವ, (ವ್ಯಂ) ಸ್ವ ವ್ಯಂವ್ಯಂ ಸ್ವ. (ವ್ಯಂ) ಸ್ವ ವ್ಯಂಸ್ವ ವ್ಯಂಸ್ವ ಅಕಾರದ ಧಾತುಗಳಿಂದ ನಿಷ್ಪನ್ನವಾದ ಪ್ರಾತಿಪದಿಕಗಳ ಮತ್ತು ಪ್ರಥಮ ಪುರುಷ ಪುಲ್ಲಿಂಗ ಏಕವ. ಪುರುಷವಾಚಕ ಪ್ರತ್ಯಯವಾದ |—ಅ| ಗಳ ಮಧ್ಯೆ |—ಯ್—| ಬರುತ್ತದೆ. ಧಾತ್ವಂತ್ಯದ |—ಉ| ಕಾರವು |—ಇ| ಕಾರವಾಗಿ ಪರಿಣಮಿಸುತ್ತದೆ.

ಕಾಡು—ಕಾಡಿದ್—ಯ್—ಅ
ಕೂಡು—ಕೂಡಿದ್—ಯ್—ಅ
ಬೇಡು—ಬೇಡಿದ್—ಯ್—ಅ
ಸೀಳು—ಸೀಳಿದ್—ಯ್—ಅ
ಓದು—ಓ(ದಿ)ದ್—ಯ್—ಅ
ನಾಡು—ನಾ(ದಿ)ದ್—ಯ್—ಅ
ಕ್+ಚ್ಚು—ಕ್+ಚ್ಚಿದ್—ಯ್—ಅ
ಮುಟ್ಟು—ಮುಟ್ಟಿದ್—ಯ್—ಅ
ಕುಂಟು—ಕುಂಟಿದ್—ಯ್—ಅ
ಕೆಣ್+ಕು—ಕೆಣ್+ಕಿದ್—ಯ್—ಅ

ತ್+ರ್+ಸು—ತ್+ರ್+ಸಿದ್—ಯ್—ಅ
ಗುದ್ದು—ಗು(ದ್ದಿ)ದ್—ಯ್—ಅ
ಎದ್ದು—ಎ(ದ್ದಿ)ದ್—ಯ್—ಅ

ಈ ಮೇಲಿನ ಪರಿಸರಗಳಲ್ಲಿ ಕಡೆಯ ಅಕ್ಷರವು ಸರಳ ಅಥವಾ ದ್ವಿತ್ವ ।—ದ್—। ಕಾರವಾಗಿದ್ದಲ್ಲಿ ಅದು ಬಿದ್ದುಹೋಗುತ್ತದೆ.

2) ಅನಿಯತ ಧಾತು (irregular root) ಧಾತುಗಳಾದ ।ಆಗು।, ।ಹೋಗು।, ।ಇರು।, ।ಅನ್ನು।, ।ಗೆಲ್ಲು।, ।ತ್+ರು।, ।ಬ್+ರು।, ।ಕ್+ದಿ।, ।ನೊಯ್।, ।ಏಳು।, ।ಬೀಳು।, ।ಕೊಲ್ಲು।, ।ಬೆಯ್। ಮತ್ತು ।ತಿನ್ನು।ಗಳ ಪರದಲ್ಲಿಯೂ ।—ದ್—।ವು ಹತ್ತುತ್ತದೆ. ಈ ಪ್ರತ್ಯಯವು ಪರವಾದಾಗ ಈ ಧಾತುಗಳಲ್ಲಿ ಆಕೃತಿಮಾಧ್ವನಿಮಾತ್ಮಕ ವಿಕಲ್ಪಗಳು (morphophonemic alterations) ಉಂಟಾಗುತ್ತವೆ.

ಆಗು—ಆ—ದ್—ಅ, ಹೋಗು—ಹೋ—ದ್—ಅ
ಇರು—ಇದ್—ದ್—ಅ, ಇ(ದ್)—ದ್—ರು
ಅನ್ನು—ಅನ್—ದ್—ಅ, ಗೆಲ್ಲು—ಗೆ(ದ್)—ದ್—ಲು
ಬ್+ರು—ಬ್+ನ್—ದ್—ವಿ, ತ್+ರು—ತ್+ನ್—ದ್—ಎ
ಕ್+ದಿ—ಕ್+(ದ್)—ದ್—ರು, ನೊಯ್—ನೊನ್—ದ್—ಅ
ಬೆಯ್—ಬೆನ್—ದ್—ವು, ಏಳು—ಎದ್—ದ್—ಎ
ಬೀಳು—ಬಿದ್—ದ್—ಎ, ಕೊಲ್ಲು—ಕೊನ್—ದ್—ರು
ತಿನ್ನು—ತಿನ್—ದ್—ಲು

3) ಇಕಾರಾಂತ ಅನಿಯತ ಧಾತುಗಳಾದ ಕ್+ಲಿ, ಮರಿ, ಕೊಳಿ, ಹುಳಿ, ಬೆರಿ, ಮೋಳಿ, ಕಿಸಿ, ಮುಸಿ, ಪಸಿ ಮತ್ತು ಕುಸಿಗಳ ಪರದಲ್ಲಿ —ತ್—ಉಪರೂಪಿಕೆಯು ಹತ್ತುತ್ತದೆ. ಇದರ ಪರದಲ್ಲಿ ಬರುವ ಪುರುಷವಾಚಕಪ್ರತ್ಯಯವು ವ್ಯಂಜನವಾಗಿದ್ದಲ್ಲಿ ಅಥವಾ ಧಾತುವಿನ ಅಂತ್ಯಾಕ್ಷರದ ವ್ಯಂಜನವು 'ಸ್' ಕಾರವಾಗಿದ್ದಲ್ಲಿ ಧಾತ್ವಂತ್ಯದ—ಇಕಾರವು । ಕಾರವಾಗಿ ಬದಲಾಯಿಸುತ್ತದೆ. ಇತರತ್ರ ಅದು ಲೋಪವಾಗುತ್ತದೆ.

ಕ್+ಲಿ—ಕ್+ಲ್+ತ್—ರು
ಕೊಳಿ—ಕೊಳ್+ತ್—ವಿ
ಹುಳಿ—ಹುಳ್+ತ್—ಲು
ಮರಿ—ಮರ್+ತ್—ಲು

ಸ್ವರಾನುಸಾರಿಯಾದ ಪ್ರಾತಿಪದಿಕಗಳಲ್ಲಿ ಅಥವಾ ಧಾತುವಿನ ಅಂತ್ಯಾಕ್ಷರದ ವ್ಯಂಜನವು 'ಸ್' ಕಾರವಾಗಿದ್ದಲ್ಲಿ ಧಾತ್ವಂತ್ಯದ –ಇಕಾರವು ಲೋಪವಾಗುವುದಕ್ಕೆ ಉದಾ :

ಕುಸಿ—ಕುಸ್+ತ್—ರು
ಮರಿ—ಮರ್+ತ್—ಲು
ಮುಸಿ—ಮುಸ್+ತ್—ವು
ಕಿಸಿ—ಕಿಸ್+ತ್—ರು
ಬೆರಿ—ಬೆರ್‌ತ್—ಅ, ಮಲಿ—ಮಲ್‌ತ್—ಅ
ಹ್+ಸಿ—ಹ್+ಸ್‌ಸ್‌ತ್—ಎ, ಮರಿ—ಮರ್‌ತ್—ಅ
ರ್+ಲಿ—ರ್+ಲ್‌ತ್—ಅ, ಪುಳಿ—ಪುಳ್‌ತ್—ಇ

4) ಅನಿಯತ ಧಾತುಗಳಾದ +ಳು, ಕುಂದ್ರು, ನಿಲ್ಲು—ನಿಂದ್ರು, ಸಾಯ್, ಸೋಲು, ಕೀಳು, ಹೇಲು, ಆನು ಮತ್ತು ಬಾಯ್‌ಗಳ ಪದದಲ್ಲಿ —ತ್—ವು ಹತ್ತುತ್ತದೆ. ಈ ಪ್ರತ್ಯಯವು ಪರವಾದಲ್ಲಿ ಈ ಧಾತುಗಳು ನಿಬದ್ಧ (conditioned) ಉಪರೂಪಿಕೆಗಳನ್ನು ಪಡೆದಿರುತ್ತವೆ.

+ಳು— +(ತ್)—ತ್—ರು, ಕುಂದ್ರು—ಕುಂ—ತ್—ಅ
ನಿಲ್ಲು—ನಿಂದ್ರು—ನಿಂ—(ತ್)—ತ್—ಲು, ಸಾಯ್—ಸ್(ತ್)—ತ್—ಎ
ಸೋಲು—ಸೋ—ತ್—ರು, ಹೇಲು—ಹೇ—ತ್—ಅ
ಕೀಳು—ಕಿ(ತ್)—ತ್—ಲು, ಬಾಯ್—ಬಾ—ತ್—ಅ

'ಆನು' ಧಾತುವು ಸ್ವತಂತ್ರವಾಗಿ ಪ್ರಯೋಗದಲ್ಲಿಲ್ಲ. 'ಕೊಳ್' ಧಾತುವಿನ ಸಹಾಯಕ ಕ್ರಿಯಾರೂಪಗಳೊಡನೆ ಮಾತ್ರ ಅದು ಪ್ರಯೋಗದಲ್ಲಿದೆ.
ಆನು—ಇ—ತ್—ಗ

5) ಮೂರ್ಧನ್ಯ ಅನುನಾಸಿಕ ಅಥವಾ ಮೂರ್ಧನ್ಯ ಪಾರ್ಶ್ವಿಕ (Lateral) ಗಳಿಂದ ಅಂತ್ಯವಾಗುವ ಪ್ರಾತಿಪದಿಕಗಳ ಪದದಲ್ಲಿ —ಡ್—ಉಪರೂಪಿಕೆಯೂ ಹತ್ತುತ್ತದೆ. ಈ ಪ್ರತ್ಯಯದ ಪರದಲ್ಲಿ 'ಉಣ್ಣು' 'ಕಾಣು' ಮತ್ತು 'ಕೊಳ್ಳು' ಧಾತುಗಳು ಉಪರೂಪಿಕಾ ವಿಕಲ್ಪಗಳನ್ನು (allomorphic alternations) ಹೊಂದಿವೆ.

ಉಣ್ಣು—ಉಣ್—ಡ್—ಅ, ಕಾಣು—ಕಣ್—ಡ್—ಎ
ಕೊಳ್ಳು—ಕೊಣ್—ಡ್—ಳು.

6) '—ಗು' '—ಡು' ಮತ್ತು '—ರು'ಗಳಲ್ಲಿ ಅಂತ್ಯವಾಗುವ (ವ್ಯಂ)ಸ್ವ ವ್ಯಂಸ್ವ ಅಕಾರದ ಧಾತುಗಳ ಪರದಲ್ಲಿಯೂ ಸಹ '—ದ್—' ಕಾರವು ಹತ್ತುತ್ತದೆ ಭೂತಕಾಲವಾಚಕ ಪ್ರತ್ಯಯವು ಪರವಾದಲ್ಲಿ ಈ ಧಾತುಗಳ ಅಂತ್ಯಕ್ಷರದ ವ್ಯಂಜನವು ಕ್ರಮವಾಗಿ '—ಕ್' '—ಟ್' ಮತ್ತು '—ತ್' ಕಾರವಾಗಿ ಬದಲಾಯಿಸುತ್ತದೆ ಮತ್ತು ಅಂತ್ಯಕ್ಷರದ ಸ್ವರವು ಲೋಪವಾಗುತ್ತದೆ. '—ದ್—' ಉಪರೂಪಿಕೆಯು ತನ್ನ ಪೂರ್ವದ ವ್ಯಂಜನದಲ್ಲಿ ಅಂತರ್ಗತವಾಗುತ್ತದೆ.

ಸ್+ಗು—ನ್+ಕ್—ಕ್—ಅ, ಸಿಗು—ಸಿಕ್—ಕ್—ಎ
ಕೊಡು—ಕೊಟ್—ಟ್—ಅ, ಸುಡು—ಸು(ಟ್)—ಟ್—ಳು
ಹೊರು—ಹೊ(ತ್)—ತ್—ಲು, ತೆರು—ತೆ(ತ್)—ತ್—ವಿ

7) 'ಹೊಂಡು' ಧಾತುವಿನಲ್ಲಿ ಅಂತ್ಯಸ್ವರವು ಲೋಪವಾಗಿ ಅಂತ್ಯ '—ಡ್' ಕಾರವು ಅಘೋಷವಾಗಿ ಪರಿಣಮಿಸುತ್ತದೆ. ಈ ಧಾತುವಿನ ಪರದಲ್ಲಿ —ϕ—ಉಪ ರೂಪಿಕೆಯು ಹತ್ತುತ್ತದೆ.

ಹೊಂಡು—ಹೊಂಟ್—ϕ—ಅ.

ಅಭೂತ ಕಾಲ

ಅಭೂತಕಾಲ ವಾಚಕಪ್ರತ್ಯಯದ ಉಪರೂಪಿಕೆಗಳು '—ತ್—' ಮತ್ತು '—ϕ—'

1) '—ತ್—' ಉಪರೂಪಿಕೆಯು ನಿಯತ ಮತ್ತು ಅನಿಯತ ಎಲ್ಲ ಧಾತು ಗಳ ಪರದಲ್ಲಿಯೂ ಹತ್ತುತ್ತದೆ. ಈ ಪ್ರತ್ಯಯವು ಪರವಾದಲ್ಲಿ ಧಾತುವಿನ ಅಂತ್ಯದ '—ಇ' ಕಾರವು ದೀರ್ಘವಾಗುತ್ತದೆ. ಮತ್ತು ಧಾತುವಿನ ಅಂತ್ಯದ '—ಉ' ಕಾರವು ಬಿದ್ದುಹೋಗುತ್ತದೆ.

ಕಾಡು—ಕಾಡ್—ತ್—ಅನೆ
ಕಾಡ್—ತ್—ಅಳೆ
ಕಾಡ್—ತ್—+ಿ

ಕ್+ಚ್ಚು—ಕ್+(ಚ್)ಚ್—ತ್—ಅವೆ
ಕ್+(ಚ್)ಚ್—ತ್—ಇ

ಕೊಳ್ಳು—ಕೊ(ಳ್)ಳ್—ತ್—ಅರೆ
ಕೆ(ಳ್)ಳ್—ತ್—ಈರಿ
ಕೊ(ಳ್)ಳ್—ತ್—+ನಿ

ಕರಿ—ಕರೀ—ತ್—ಅನೆ
ಕರೀ—ತ್—ಅಳೆ

ಕ್+ಲಿ—ಕ್+ಲೀ—ತ್—ಅರೆ
ಮರಿ—ಮರೀ—ತ್—ಅಳೆ

ಆಗು—ಆಗ್—ತ್—ಅನೆ
ಆಗ್—ತ್—+ತಿ

ಹೋಗು—ಹೋತ್—ತ್—ಅರೆ
ಹೋಗ್—ತ್—ಅವೆ

2) ಈ ಪ್ರತ್ಯಯವು ಪರವಾದಲ್ಲಿ 'ಆಗು' ಮತ್ತು 'ಹೋಗು' ಧಾತುಗಳು ಐಚ್ಛಿಕ ವಿಕಲ್ಪಗಳನ್ನು ಪಡೆದಿವೆ. ಅಂತ್ಯಾಕ್ಷರದ ಸ್ಪರ್ಶವ್ಯಂಜನವು ಅಘೋಷವಾಗುತ್ತದೆ. ಮತ್ತು ಈ ಧಾತುಗಳ ಪರದಲ್ಲಿ —ϕ—' ಉಪರೂಪಿಕೆಯೂ ಹತ್ತುತ್ತದೆ.

ಆಗು—ಆಕ್—ϕ—+ತಿ
ಆಕ್—ϕ—ಅಳೆ
ಆಕ್—ϕ—ಅರೆ
ಆಕ್—ϕ—ಅನೆ

ಹೋಗು—ಹೋಕ್—ϕ—ಅವೆ
ಹೋಕ್—ϕ—+ತಿ

3) ಕಾಲವಾಚಕಪ್ರತ್ಯಯಗಳ ಪೂರ್ವದಲ್ಲಿ 'ಇರು' ಧಾತುವು '+ದ್—' '+ಯ್ದ್—' 'ಇದ್—' ಮತ್ತು '—ϕ—' ಎಂಬ ವಿಕಲ್ಪ ರೂಪಗಳನ್ನು ಹೊಂದಿದೆ. ಮುಖ್ಯ ಕ್ರಿಯಾಪದಗಳು ಸಿದ್ಧಿಸುವಾಗ ಭೂತಕಾಲಪ್ರತ್ಯಯದ ಪೂರ್ವದಲ್ಲಿ 'ಇದ್—' ಮತ್ತು '—+ದ್' ಬರುತ್ತವೆ. 'ಇರು' ಧಾತುವಿನಿಂದ ಸಹಾಯಕ

ಕ್ರಿಯಾಪದಗಳು ಸಿದ್ಧಿಸುವಾಗ ಭೂತಸ್ಥ್ಯಾನಗಳ (gerundials) ಪರದಲ್ಲಿ '—+ದ್—' '—ಇದ್—' ಮತ್ತು '—ϕ—' ಗಳು ಸೇರುತ್ತವೆ. ಮತ್ತು ಈ ಪರಿಸರದಲ್ಲಿ ಪ್ರಥಮಪುರುಷ ಏಕವಚನ ನಪುಂಸಕಲಿಂಗ ಅಭೂತಪುರುಷವಾಚಕ ಪ್ರತ್ಯಯದ ಪೂರ್ವದಲ್ಲಿ '—ϕ—' ಉಪರೂಪಿಕೆ ಮಾತ್ರ ಸೇರುತ್ತದೆ (ಉದಾಹರಣೆ ಗಳಿಗೆ ಸಹಾಯಕ ಕ್ರಿಯಾಪದಗಳ ವಿಭಾಗವನ್ನು ನೋಡಿ.)

'ಇರು' ಧಾತುವೂ ಮತ್ತು ಅದರ ವಿಕಲ್ಪರೂಪಗಳಾದ '+ದ್—' ಮತ್ತು '+ಯ್‌ದ್—' ಗಳೂ ಅಭೂತಕಾಲಪ್ರತ್ಯಯದ ಪೂರ್ವದಲ್ಲಿ ಬರುತ್ತವೆ. ಅವುಗಳ ಪರದಲ್ಲಿ ಹತ್ತುವ ಅಭೂತಕಾಲಪ್ರತ್ಯಯದ ಉಪರೂಪಿಕೆಗಳು ಈ ಕೆಳಕಂಡಂತೆ ಇವೆ.

a) ಹೆಚ್ಚು ಬಳಕೆಯ ಉಪರೂಪಿಕೆಯಾದ '—ತ್—' ವು 'ಇರು' ಧಾತು ವಿನ ಪರದಲ್ಲಿ ಸಾಮಾನ್ಯಾರ್ಥದಲ್ಲಿ ಹತ್ತುತ್ತದೆ.

ಇರು—

ಇರ್—ತ್—+ನಿ, ಇರ್—ತ್—+ವಿ
ಇರ್—ತ್—ಇ, ಇರ್—ತ್—ಈರಿ
ಇರ್—ತ್—+ಅ, ಇರ್—ತ್—ಅವೆ

b) ಅಭೂತ ನಿಶ್ಚಿತಾರ್ಥದಲ್ಲಿ ಅಭೂತ ಪುರುಷವಾಚಕಪ್ರತ್ಯಯ ಮತ್ತು '+ದ್—' ಮತ್ತು '+ಯ್‌ದ್—' ಮಧ್ಯೆ '—ϕ—' ಉಪರೂಪಿಕೆಯು ಹತ್ತುತ್ತದೆ. ಪ್ರಥಮಪುರುಷ ನಪುಂಸಕಲಿಂಗ ಏಕವಚನ ಪುರುಷವಾಚಕಪ್ರತ್ಯಯ ವನ್ನುಳಿದು ಇತರ ಪುರುಷವಾಚಕಪ್ರತ್ಯಯಗಳ ಪೂರ್ವದಲ್ಲಿ '+ದ್—' ಮತ್ತು '+ಯ್‌ದ್' ಗಳು ಸ್ವಚ್ಛಂದ ಪರಿವರ್ತನ (freevariation) ದಲ್ಲಿರುತ್ತವೆ. ಪ್ರಥಮ ಪುರುಷ ನಪುಂಸಕಲಿಂಗ ಏಕವಚನದ ಪುರುಷವಾಚಕಪ್ರತ್ಯಯದ ಪೂರ್ವದಲ್ಲಿ '+ಯ್‌ದ್—' ಮಾತ್ರ ಬರುತ್ತದೆ. ಇಲ್ಲಿ '+ಯ್‌ದ್—' ನ ಕಡೆಯ 'ದ್' ಕಾರವು ಲೋಪವಾಗುತ್ತದೆ. ಅಲ್ಲದೆ ಪ್ರಥಮಪುರುಷ ಏಕವಚನ ನಪುಂಸಕಲಿಂಗದ ಪುರುಷವಾಚಕಪ್ರತ್ಯಯವಾದ '—+ತಿ' ಯ ಆದಿಸ್ವರವು ಕೂಡ ಈ ನಿರ್ದಿಷ್ಟ ಪರಿಸರದಲ್ಲಿ ಲೋಪವಾಗುತ್ತದೆ.

+ದ್—ϕ—+ನಿ~ +ಯ್‌ದ್—ϕ—+ನಿ
+ದ್—ϕ—+ವಿ~ +ಯ್‌ದ್—ϕ—+ವಿ

+ದ್—ϕ—ಇ~	+ಯ್‌ದ್—ϕ—ಇ
+ದ್—ϕ—ಅನೆ~	+ಯ್‌ದ್—ϕ—ಅನೆ
+ದ್—ϕ—ಅಳೆ~	+ಯ್‌ದ್—ϕ—ಅಳೆ
+ದ್—ϕ—ಅರೆ~	+ಯ್‌ದ್—ϕ—ಅರೆ
	+ಯ್(ದ್)—ϕ—(+)ತಿ
+ದ್—ϕ ಅವೆ~	+ಯ್‌ದ್—ϕ—ಅವೆ

ಪುರುಷವಾಚಕ ಪ್ರತ್ಯಯಗಳು

ಪುರುಷವಾಚಕಪ್ರತ್ಯಯಗಳು ಮೂರು ಪುರುಷಗಳು (ಉತ್ತಮ, ಮಧ್ಯಮ ಮತ್ತು ಪ್ರಥಮ) ಎರಡು ವಚನಗಳು (ಏಕ ಮತ್ತು ಬಹು) ಮತ್ತು ಮೂರು ಲಿಂಗ ಪುಲ್ಲಿಂಗ, ಸ್ತ್ರೀಲಿಂಗ ಮತ್ತು ನಪುಂಸಕಲಿಂಗ) ಗಳನ್ನು ನಿರೂಪಿಸುತ್ತವೆ. ವಾಸ್ತವವಾಗಿ ಉತ್ತಮ ಮತ್ತು ಮಧ್ಯಮ ಪುರುಷಗಳಲ್ಲಿ ವಚನಭೇದವು ಮಾತ್ರ ಕಂಡುಬರುತ್ತದೆ. ಪ್ರಥಮಪುರುಷ ಏಕವಚನದಲ್ಲಿ ಮೂರು ಲಿಂಗಗಳ ಭೇದವು ಕಂಡುಬರುತ್ತದೆ. ಬಹುವಚನದಲ್ಲಿ ನಪುಂಸಕ ಮತ್ತು ನಪುಂಸಕಕೇತರ (neuter and Non-nueter) ಎಂಬ ಎರಡು ಲಿಂಗಗಳು ಮಾತ್ರ ಗುರುತಿಸಲ್ಪಡುತ್ತವೆ.

ಈ ಕೆಳಗಿನ ಪಟ್ಟಿಯು ಒಂಬತ್ತು ಸಾಧ್ಯತೆಗಳನ್ನು ಸೂಚಿಸುತ್ತದೆ.

	ಏ. ವ	ಬ. ವ
I	1	1
II	2	2
III	3 ಪುಂ 3 ಸ್ತ್ರೀ	3 ಪುಂಸ್ತ್ರೀ
	3 ನ	3 ನ

ಪುರುಷವಾಚಕ ಪ್ರತ್ಯಯಗಳು ಮೂರು ಗುಂಪುಗಳಾಗಿವೆ. i) ಸಾಮಾನ್ಯ ರೂಢಿಗತ ii) ಸಾಮಾನ್ಯಭೂತ ಮತ್ತು ಅನಿಶ್ಚಿತ ನಿಷೇಧ iii) ಸಂಭಾವನಾ.

ಸಾಮಾನ್ಯರೂಢಿಗತ ಪ್ರತ್ಯಯಗಳು ಅಭೂತಪ್ರಾತಿಪದಿಕಗಳ ಪರದಲ್ಲಿ ಸೇರುತ್ತವೆ. ಸಾಮಾನ್ಯಭೂತ ಮತ್ತು ಸಂಭಾವನ ಪ್ರತ್ಯಯಗಳು ಭೂತಕಾಲದ

ಪ್ರಾತಿಪದಿಕಗಳ ಪರದಲ್ಲಿ ಹತ್ತುತ್ತವೆ. ಆದರೆ (ವ್ಯಂ) ದೀ.ಸ್ವವ್ಯಂಸ್ವ, (ವ್ಯಂ)ಸ್ವ ವ್ಯಂವ್ಯಂಸ್ವ, (ವ್ಯಂ) ಸ್ವವ್ಯಂಸ್ವ ವ್ಯಂಸ್ವ ಆಕಾರದ ನಿಯತ ಧಾತುಗಳು ಮತ್ತು ಸಂಭಾವನ ಪ್ರತ್ಯಯಗಳ ಮಧ್ಯೆ ಭೂತಕಾಲವಾಚಕಪ್ರತ್ಯಯವು '—φ—' ಉಪರೂಪಿಕೆಯನ್ನು ಹೊಂದಿದೆ. ಅನಿಶ್ಚಿತನಿಷೇಧ ಪ್ರತ್ಯಯಗಳೂ ಮತ್ತು ಸಾಮಾನ್ಯ ಭೂತಕಾಲದ ಪು. ವಾ. ಪ್ರ. ಗಳೂ ಏಕರೂಪವಾಗಿವೆ. ಧಾತುಗಳಿಗೆ '—ಲಾರ್—' ಪ್ರತ್ಯಯವು ಹತ್ತುವುದರಿಂದ ಸಿದ್ಧವಾಗುವ ಪ್ರಾತಿಪದಿಕಗಳ ಪರದಲ್ಲಿ ಅನಿಶ್ಚಿತ ನಿಷೇಧಾರ್ಥಕಪ್ರತ್ಯಯಗಳು ಹತ್ತುತ್ತವೆ.

ಈ ಮೂರು ಗುಂಪುಗಳ ಸ್ಪಷ್ಟರೂಪಗಳನ್ನು ಕೆಳಗೆ ಕೊಟ್ಟಿದೆ.

i) ಸಾಮಾನ್ಯ ರೂಢಿಗತ :

	ಏ.ವ.	ಬ.ವ.
I	—+ನಿ	—+ವಿ
II	—ಇ	—ಈರಿ

	ಏ.ವ.	ಬ.ವ.
III	ಪು.—ಅನೆ ಸ್ತ್ರೀ—ಅಳೆ	—ಅರೆ
	ನ—+ತಿ	—ಅವೆ

ii) ಸಾಮಾನ್ಯ ಭೂತ ಮತ್ತು ಅನಿಶ್ಚಿತ ನಿಷೇಧ :

	ಏ.ವ.	ಬ.ವ.
I	—ಎ	—ವಿ
II	—ಎ	—ರಿ
III	ಪು—ಅ ಸ್ತ್ರೀ—ಲು	—ರು
	ನ—ತು∼—ದು	—ವು

ಅನಿಶ್ಚಿತ ನಿಷೇಧಾರ್ಥಕ ಪ್ರಾತಿಪದಿಕಗಳ ಪರದಲ್ಲಿ ಮಾತ್ರ '—ದು' ಹತ್ತುತ್ತದೆ. ಅಲ್ಲದೆ ಸಾಮಾನ್ಯಭೂತಕಾಲವಾಚಕ ಪ್ರಾತಿಪದಿಕಗಳ ಪರದಲ್ಲಿ '—ತು' ಹತ್ತುತ್ತದೆ. ಈ ಪರಿಸರದಲ್ಲಿ III ನ. ಏ. ವ. ದ ವಿಕಲ್ಪವು (alternation) ಆಕೃತಿಮಾ ನಿಬದ್ಧವಾಗಿದೆ. (morphologically conditioned).

ಮೂರ್ಧನ್ಯ ವ್ಯಂಜನಗಳ ಪರದಲ್ಲಿ III ಸ್ತ್ರೀ ಲಿಂಗವಾಚಕ ಪ್ರತ್ಯಯವಾದ ‘—ಲು’ ಎಂಬುದು ‘—ಳು’ ಆಗಿ ಮಾರ್ಪಡುತ್ತದೆ.

iii) ಸಂಭಾವನಾರ್ಥಕ :

	ಏ.ವ.	ಬ.ವ.
I	—ಏನು	—ಏವು
II	—ಈ	—ಈರಿ
III	—ಪು—ಆನು ಸ್ತ್ರೀ—ಆಳು	—ಆರು
	ನ—ಈತು	—ಆವು

ರೂಪಾವಳಿ (paradigm ಗಳ ಮಾದರಿ :

i) ಸಾಮಾನ್ಯರೂಢಿಗತ : ಧಾತು—‘ಮಾಡು’

	ಏ.ವ.	ಬ.ವ.
I	ಮಾಡ್—ತ್—+ನಿ	ಮಾಡ್—ತ್—+ವಿ
II	ಮಾಡ್—ತ್—ಇ	ಮಾಡ್—ತ್—ಈರಿ
III	ಪು. ಮಾಡ್—ತ್—ಆನೆ ಸ್ತ್ರೀ. ಮಾಡ್—ತ್—ಆಳೆ	ಮಾಡ್—ತ್—ಆರೆ
	ನ. ಮಾಡ್—ತ್—+ತಿ	ಮಾಡ್—ತ್—ಆವೆ.

ii) ಸಾಮಾನ್ಯಭೂತ :

	ಏ.ವ.	ಬ.ವ.
I	ಮಾಡ್—ದ್—ಎ	ಮಾಡಿ—ದ್—ವಿ
II	ಮಾಡ್—ದ್—ಎ	ಮಾಡಿ—ದ್—ರಿ
III	ಪು. ಮಾಡ್—ದ್—ಯ್—ಅ ಸ್ತ್ರೀ. ಮಾಡಿ—ದ್—ಲು	ಮಾಡಿ—ದ್—ರು
	ನ. ಮಾಡ್—ϕ—ತು	ಮಾಡಿ—ದ್—ವು

ii) ಅನಿಶ್ಚಿತ ನಿಷೇಧ :

	ಏ.ವ.	ಬ.ವ.
I	ಮಾಡ್—ಳಾರ್—ಎ	ಮಾಡ್—ಳಾರ್—ವಿ

II	ಮಾಡ್—ಳಾರ್—ಎ	ಮಾಡ್—ಳಾರ್—ರಿ
III	ಪು. ಮಾಡ್—ಳಾರ್—ಅ ಸ್ತ್ರೀ. ಮಾಡ್—ಳಾರ್—ಳು	ಮಾಡ್—ಳಾರ್—ರು
	ನ. ಮಾಡ್—ಳಾರ್—ದು	ಮಾಡ್—ಳಾರ್—ವು

iii) ಸಂಭಾವನ :

	ಏ.ವ.	ಬ.ವ.
I	ಮಾಡ್—ϕ—ಏನು	ಮಾಡ್—ϕ—ಏವು
II	ಮಾಡ್—ϕ—ಈ	ಮಾಡ್—ϕ—ಈರಿ
III	ಪು. ಮಾಡ್—ϕ—ಯ್—ಆನು ಸ್ತ್ರೀ. ಮಾಡ್—ϕ—ಯ್—ಆಳು	ಮಾಡ್—ϕ—ಯ್—ಆರು
	ನ. ಮಾಡ್—ϕ—ಈತು	ಮಾಡ್—ϕ—ಯ್—ಆವು

iii) ಅನಿಯತಧಾತುಗಳಿಂದ ನಿಷ್ಪನ್ನವಾದ ಭೂತಕಾಲದ ಪ್ರಾತಿಪದಿಕಗಳ ಪರದಲ್ಲಿ ಹತ್ತುವ ಸಂಭಾವನಾರ್ಥಕ ಪ್ರತ್ಯಯಗಳು.

ಧಾತು : 'ಕೊಡು'

	ಏ.ವ.	ಬ.ವ.
I	ಕೊಟ್—ಟ್—ಏನು	ಕೊಟ್—ಟ್—ಏವು
II	ಕೊಟ್—ಟ್—ಈ	ಕೊಟ್—ಟ್—ಈರಿ
III	ಪು. ಕೊಟ್—ಟ್—ಆನು ಸ್ತ್ರೀ. ಕೊಟ್—ಟ್—ಆಳು	ಕೊಟ್—ಟ್—ಆರು
	ನ. ಕೊಟ್—ಟ್—ಈತು	ಕೊಟ್—ಟ್—ಆವು

ವಿಧ್ಯರ್ಥ

ವಿಧ್ಯರ್ಥಕಪ್ರತ್ಯಯಗಳು ಕ್ರಿಯಾಪದದ ಪ್ರಾತಿಪದಿಕಗಳಿಗೆ ನೇರವಾಗಿ ಹತ್ತುತ್ತವೆ. ಉತ್ತಮ ಮತ್ತು ಮಧ್ಯಮಪುರುಷಗಳಲ್ಲಿ ಎರಡು ವಚನಗಳು ವಿಂಗಡಿಸಲ್ಪಡುತ್ತವೆ. ಉತ್ತಮಪುರುಷ ಏಕವಚನದಲ್ಲಿ ವಿಧ್ಯರ್ಥಕಪ್ರತ್ಯಯವು ಪ್ರಶ್ನಾರ್ಥದಲ್ಲಿ ಮಾತ್ರ ಸೇರುತ್ತದೆ. ಇತರ ಕ್ರಿಯಾಪೂರ್ಣ ಪ್ರತ್ಯಯಗಳ (vest closing

suffixecs) ಕ್ರಮದಂತೆ ಪ್ರಥಮಪುರುಷದಲ್ಲಿ ವಚನವಾಗಲೀ ಲಿಂಗವಾಗಲೀ ವಿಂಗಡಿಸಲ್ಪಡುವುದಿಲ್ಲ.

	ಏ.ವ.	ಏವ.ಬವ.	ಬ.ವ.
I	—ಲಿ.	—	—ಅನ
II	—ϕ,—ಇ	—	—ರಿ
III	—	—ಲಿ	—

ಸ್ವರಾಂತ ಧಾತುಗಳಿಗೆ ಮಧ್ಯಮಪುರುಷದಲ್ಲಿ ಶೂನ್ಯರೂಪಿಕೆಯು ಹತ್ತುತ್ತದೆ. —ಯ್. ಕಾರಾಂತ ಧಾತುಗಳ ಪರದಲ್ಲಿ '—ಇ' ಕಾರವು ಹತ್ತುತ್ತದೆ. 'ತ್+ರು' 'ಬ್+ರು' ಮತ್ತು 'ಕೊಳ್ಳು' ಧಾತುಗಳ ವರ್ತನೆ ಮಾತ್ರ ಭಿನ್ನವಾಗಿದೆ. ಧಾತುಗಳ ಅಂತ್ಯಾಕ್ಷರವು ಲೋಪವಾಗುತ್ತದೆ ಮತ್ತು ಆದ್ಯಕ್ಷರದ ಸ್ವರವು ದೀರ್ಘವಾಗುತ್ತದೆ. ಅಲ್ಲದೆ 'ಕೋ'ನಲ್ಲಿ 'ಓ' ಕಾರವು ಮತ್ತೆ ।ಓ। ಆಗಿ ಮಾರ್ಪಡುತ್ತದೆ. ಧಾತ್ವಂತ್ಯದ '—ಇ' ಕಾರವು ವ್ಯಂಜನಾದಿಯಾದ ಪ್ರತ್ಯಯಗಳು ಪರವಾದಲ್ಲಿ ದೀರ್ಘವಾಗುತ್ತದೆ.

ಉದಾ : ಧಾತುಗಳು 'ಮಾಡು' 'ಸಿಗು' 'ತಿನ್ನು' 'ಕಲಿ' ಮತ್ತು 'ಸಾಯ್'

	ಏವ.	ಏವ.ಬವ.	ಬವ.
I	ಮಾಡ್—ಳಿ	—	ಮಾಡ್—ಅನ
	ಸಿಗ್—ಲಿ	—	ಸಿಗ್—ಅನ
	ತಿನ್—ಲಿ	—	ತಿನ್ನ್—ಅನ
	ಕ್+ಲೀ—ಲಿ	—	ಕ್+ಲಿಯ್—ಅನ
	ಸಾಯ್—ಲಿ	—	ಸಾಯ್—ಅನ
II	ಮಾಡು—ϕ	—	ಮಾಡ್—ರಿ
	ಸಿಗು—ϕ	—	ಸಿಗ್—ರಿ
	ತಿನ್ನು—ϕ	—	ತಿ(ನ್)ನ್—ರಿ
	ಕ್+ಲಿ—ϕ	—	ಕ್+ಲೀ—ರಿ
	ಸಾಯ್—ಇ	—	ಸಾಯ್—ರಿ

	ಏವ.	ಏವ.ಬವ.	ಬವ.
III	—	ಮಾಡ್—ಳಿ	—
	—	ಸಿಗ್—ಲಿ	—
	—	ತಿ(ನ್)ನ್—ಲಿ	—
	—	ಕ್ + ಲ್—ಲಿ	—
	—	ಸಾಯ್—ಲಿ	—

ಧಾತುಗಳು : 'ತ್ + ರು' 'ಬ್+ರು' 'ಕೊಳ್ಳು'.

	ಏವ.	ಏವ.ಬವ.	ಬವ.
I	ತ್ + ರ್—ಲಿ	—	ತ್ + ರ್—ಅನ
	ಬ್ + ರ್—ಲಿ	—	ಬ್ + ರ್—ಅನ
	ಕೊ(ಳ್)ಳ್—ಳಿ	—	ಕೊಳ್ಳ್—ಅನ
II	ತಾ	—	ತ್ + ರ್—ರಿ
	ಬಾ	—	ಬ್+ರ್—ರಿ
	ಕೋ	—	ಕೊಳ್ಡ್—ರಿ
III	—	ತ್ + ರ್—ಲಿ	—
	—	ಬ್ + ರ್—ಲಿ	—
	—	ಕೊ(ಳ್)ಳ್—ಳಿ	—

ಪ್ರಥಮಪುರುಷದ '—ಲಿ' ಪ್ರತ್ಯಯವು ಶಾಪಹಾಕುವ ಅರ್ಥದಲ್ಲಿಯೂ ಸೇರುತ್ತದೆ. ಈ ಅರ್ಥದಲ್ಲಿ ಅದು ಇನ್ನೊಂದು ಪ್ರತ್ಯಯವಾದ '—ಅ' ದೊಡನೆ ಸ್ವಚ್ಛಂದಪರಿವರ್ತನದಲ್ಲಿರುತ್ತದೆ.

ಶಾಪಹಾಕುವ ಅರ್ಥದಲ್ಲಿ—ಲಿ ~ —ಅ

ನಿನ್ ಮಣ್ಣಾಗ್(ಎ) ಪೆಟ್ಟ್ ಬರ್—ಅ ~

ನಿನ್ನ್ ಮಣ್ಣಾಗ್(ಎ) ಪೆಟ್ಟ್ ಬರ್—ಲಿ

ನಿಷೇಧಾರ್ಥ

ನಿಷೇಧಾರ್ಥವನ್ನು ಸೂಚಿಸುವ ಯಾವ ಪ್ರತ್ಯಯವೂ ಇಲ್ಲ. ಪೂರ್ಣಕ್ರಿಯಾಪದವೆಂದು ಪರಿಗಣಿಸಲ್ಪಡುವ 'ಇಲ್ಲ' ಎಂಬ ರೂಪವೇ ಇತರ ಕ್ರಿಯಾರೂಪಗಳ

ಮುಂದೆ ಬಂದು ನಿಷೇಧಾರ್ಥವನ್ನು ಕೊಡುತ್ತದೆ. ಪ್ರಥಮಪುರುಷ ಏಕವಚನ ನಪುಂಸಕಲಿಂಗದ ಕೃದಂತನಾಮಪದದ ಮುಂದೆ 'ಇಲ್ಲ' ವಾಚಕವು ಸೇರಿ ಲಿಂಗವಚನ ಪುರುಷಭೇದವಿಲ್ಲದೆ ನಿಷೇಧಾರ್ಥವನ್ನು ಕೊಡುತ್ತದೆ. ಅಲ್ಲದೆ 'ಇಲ್ಲ' ವಾಚಕವು ಅಪೂರ್ಣಕ್ರಿಯಾಪದಗಳಿಗೆ ಹತ್ತುವುದರಿಂದಲೂ ನಿಷೇಧಾರ್ಥವು ಸೂಚಿತವಾಗುತ್ತದೆ.

'ಇಲ್ಲ' ವಾಚಕವು ಅಪೂರ್ಣಕ್ರಿಯಾಪದಗಳಲ್ಲಿ ಅಭೂತನ್ಯೂನ, ಭೂತನ್ಯೂನ ಮತ್ತು ಭಾವಾರ್ಥಕ ಕ್ರಿಯಾಪದಗಳ ಪರದಲ್ಲಿ ಹತ್ತುತ್ತದೆ. ನಿಷೇಧಾರ್ಥಕ ಕ್ರಿಯಾಪದಗಳಲ್ಲೂ ಕೂಡ ಎರಡು ಕಾಲಗಳು ವಿಂಗಡಿಸಲ್ಪಡುತ್ತವೆ a) '—ಲ್' ಉಪರೂಪಿಕೆ ಸಮೇತವಾದ ಭಾವಾರ್ಥಕಕ್ರಿಯೆಗಳು ಮತ್ತು b) 'ಇಲ್ಲ' ವಾಚಕದಿಂದ ಅನುಸರಿಸಲ್ಪಟ್ಟ (fo!lowed) ಭೂತನ್ಯೂನಗಳೂ ಮತ್ತು ಕೃದಂತನಾಮಪದಗಳ ರಚನೆಯಲ್ಲಿ ಪು. ವಾ. ಪ್ರ. ದ ಉಪರೂಪಿಕೆಯಿಂದ ಕೂಡಿದ ಪ್ರ. ಪು. ನ. ಲಿಂ. ಏ. ವ. ದ ಕೃದಂತನಾಮರೂಪಗಳೂ ಭೂತಕಾಲವನ್ನು ಸೂಚಿಸುತ್ತವೆ. ಅಲ್ಲದೆ 'ಇಲ್ಲ' ವಾಚಕದಿಂದ ಅನುಸರಿಸಲ್ಪಡುವ '—ಲಿಕ್ಕೆ' ಮತ್ತು '—ಆಕೆ' ಉಪರೂಪಿಕೆಗಳಿಂದ ಕೂಡಿದ ಭಾವಾರ್ಥಕಕ್ರಿಯೆಗಳೂ, ಅಭೂತನ್ಯೂನರೂಪಗಳೂ ಮತ್ತು ಪ್ರಥಮಪುರುಷ ನ. ಲಿಂ. ಏ. ವ. ದ ಕೃದಂತನಾಮಪ್ರತ್ಯಯದ ಉಪರೂಪಿಕೆಯಾದ ಸರಳ '—ದು' ಉಪರೂಪಿಕೆಯಿಂದ ಕೂಡಿದ ಕೃದಂತನಾಮರೂಪಗಳೂ ಅಭೂತಾರ್ಥವನ್ನು ಕೊಡುತ್ತವೆ.

ಕೃದಂತನಾಮಪದಗಳ ಬಗ್ಗೆ ಇಲ್ಲಿ ಒಂದು ಟಿಪ್ಪಣಿಯನ್ನು ಸೇರಿಸಬಹುದು. ಕೃದಂತನಾಮಪದಗಳ ರಚನೆಯಲ್ಲಿ ಕ್ರಿಯಾಪದದ ಪ್ರಾತಿಪದಿಕಕ್ಕೆ ಹತ್ತುವ ಪ್ರತ್ಯಯದ ಉಪರೂಪಿಕೆಗಳು '+', '+ :' '[illegible]' ಮತ್ತು 'ϕ'. ಅಭೂತಾರ್ಥಕ ಪ್ರಾತಿಪದಿಕಗಳಲ್ಲಿ ಕಾಲಪ್ರತ್ಯಯವು ಪ್ರತ್ಯಕ್ಷವಾಗಿರುವುದಿಲ್ಲ. ಆದರೆ ಭೂತಕಾಲದ ಪ್ರಾತಿಪದಿಕಗಳಲ್ಲಿ ಕಾಲಪ್ರತ್ಯಯವು ಕೆಲವು ವೇಳೆ ಪ್ರತ್ಯಕ್ಷವಾಗಿಯೇ ಇರುತ್ತದೆ. III ಬ. ವ. ದಲ್ಲಿ ಕೃದಂತನಾಮಪದಗಳ ನಿಷ್ಪತ್ತಿಯಲ್ಲಿ ಸಾಮಾನ್ಯಭೂತಕಾಲಸೂಚಕ ಪು. ವಾ. ಪ್ರತ್ಯಯಗಳೇ ಹತ್ತುತ್ತವೆ. ಆದರೆ ಕೃದಂತನಾಮಪದಗಳ ನಿಷ್ಪತ್ತಿಯಲ್ಲಿ III ಏ. ವ. ದ ಪು. ಪ್ರತ್ಯಯಗಳು ಅವಕ್ಕಿಂತ ಸ್ವಲ್ಪ ಭಿನ್ನವಾಗಿವೆ. ಈ ಕೆಳಗಿನ ನಕ್ಷೆಯು ಕೃದಂತನಾಮಪದಗಳ ನಿಷ್ಪತ್ತಿಯಲ್ಲಿ ಕಂಡುಬರುವ ಪುರುಷವಾಚಕ ಪ್ರತ್ಯಯಗಳನ್ನು ಸೂಚಿಸುತ್ತವೆ. ಕೃದಂತನಾಮಪದಗಳು ಪ್ರ. ಪು. ಕ್ಕೆ ಮಾತ್ರ ಅನ್ವಯಿಸುವುದರಿಂದ ಈ ಕೆಳಗೆ ಪ್ರ. ಪು. ದ ಪ್ರತ್ಯಯಗಳನ್ನು ಮಾತ್ರವೇ ಕೊಟ್ಟಿದೆ.

	ಏ.ವ.	ಬ.ವ.
III	ಪು.—ನು ಸ್ತ್ರೀ.—ಳು	—ರು
	ನ.—ದು, —ದ್ದು, —ϕ	—ವು.

III ನ ಲಿಂ. ಏ. ವ. ದ ಪ್ರ. ವಾ. ಪ್ರ. ದ ಉಪರೂಪಿಕೆಗಳಲ್ಲಿ '—ದು' ಅಭೂತಕಾಲಸೂಚಕ ಪ್ರಾತಿಪದಿಕಗಳಿಗೂ '—ದ್ದು' ಮತ್ತು ϕ ಗಳು ಭೂತಕಾಲದ ಪ್ರಾತಿಪದಿಕಗಳಿಗೂ ಹತ್ತುತ್ತವೆ.

III ನ. ಲಿಂ. ಏ. ವ. ದ ಪ್ರ. ಪ್ರ. ಗಳ ಹೊರತು ಉಳಿದ ಪ್ರ. ವಾ. ಪ್ರ. ಗಳ ಮತ್ತು ಪ್ರಾತಿಪದಿಕಗಳ ಮಧ್ಯೆ '+', '+ :' ಮತ್ತು 'ಓ' ಗಳು ಸ್ವಚ್ಛಂದ ಪರಿವರ್ತನದಲ್ಲಿರುತ್ತವೆ.

ಉದಾ : 'ಕರಿ'—

ಕರಿಯ್—+—ನು ~ ಕರಿಯ್—+ :—ನು ~ ಕರಿಯ್—ಓ—ನು
ಕರಿಯ್—+—ಳು ~ ಕರಿಯ್—+ :—ಳು ~ ಕರಿಯ್—ಓ—ಳು
ಕರ್+ದ್—+—ನು ~ ಕರ್+ದ್—+ :—ನು ~ ಕರ್+ದ್—ಓ—ನು
ಕರ್+ದ್—+—ಳು ~ ಕರ್+ದ್—+ :—ಳು ~ ಕರ್+ದ್—ಓ—ಳು
ಕರ್+ದ್—+—ವು ~ ಕರ್+ದ್—+ :—ವು ~ ಕರ್+ದ್—ಓ—ವು
ಕರಿಯ್—+—ರು ~ ಕರಿಯ್—+ :—ರು ~ ಕರಿಯ್—ಓ—ರು
ಕರಿಯ್—+—ವು ~ ಕರಿಯ್—+—:ವು ~ ಕರಿಯ್—ಓ—ವು

ಪ್ರಾತಿಪದಿಕಗಳ ಮತ್ತು '—ದು' ನ ಮಧ್ಯೆಯೂ '—+' '—+:' ಮತ್ತು '—ಓ' ಗಳು ಸ್ವಚ್ಛಂದ ಪರಿವರ್ತನದಲ್ಲಿರುತ್ತವೆ.

ಉದಾ :

ತಿಳಿಯ್—+—ದು ~ ತಿಳಿಯ್—+ :—ದು ~ ತಿಳಿಯ್—ಓ—ದು
ಬರಿಯ್—+—ದು ~ ಬರಿಯ್—+ :—ದು ~ ಬರಿಯ್—ಓ— ದು
ಕೊಡ್—+—ದು ~ ಕೊಡ್—+ :—ದು ~ ಕೊಡ್—ಓ—ದು
ಕಾಣ್—+—ದು ~ ಕಾಣ್—+ :—ದು ~ ಕಾಣ್—ಓ—ದು

ಅನಿಯತಧಾತುಗಳಿಂದ ಮತ್ತು।ಅಥವಾ (ವ್ಯಂ) ಸ್ವವ್ಯಂಸ್ವ ಆಕೃತಿಯ ಧಾತುಗಳಿಂದ ನಿಷ್ಪನ್ನವಾದ ಭೂತಕಾಲದ ಪ್ರಾತಿಪದಿಕಗಳ ಮತ್ತು '—ದ್ದು' ನ ಮಧ್ಯೆ '+' ಉಪರೂಪಿಕೆ ಮಾತ್ರ ಬರುತ್ತದೆ.

ಉದಾ :

ಬ್‌+ರು— ಬ್‌+ಂದ್‌—+—ದ್ದು
ಕರಿ —ಕರ್‌+ದ್‌—+—ದ್ದು
ಹಿಡಿ —ಹಿಡ್‌+ದ್‌—+—ದ್ದು
ಕಾಣು —ಕಂಡ್‌+ದ್‌—+—ದ್ದು
ಕ್‌+ಲಿ —ಕ್‌+ಲ್‌+ತ್‌—+—ದ್ದು
ಸಾಯ್‌—ಸತ್‌—+—ದ್ದು

'ಆದ್‌+ದ್ದು' ರ ಪೂರ್ವದಲ್ಲಿ ಇತರ ರೂಪಗಳು ಬಂದಾಗ ಅದರ ಎರಡನೆಯ ಅಕ್ಷರವು ಲೋಪವಾಗುತ್ತದೆ.

ಕೈಲ್‌—ಆ(ದ್‌+)ದ್ದು—ಕೈಲ್‌—ಆದ್ದು
ಬೇಕ್‌—ಆ(ದ್‌+)—ದ್ದು—ಬೇಕ್‌—ಆದ್ದು
ತ್‌+ಯಾರ್‌—ಆ(ದ್‌+)—ದ್ದು—ತ್‌+ಯಾರ್‌—ಆದ್ದು

ಅದೇ ರೀತಿ 'ಸುಮಾರಾದ್ದು', 'ಸಾಕಾದ್ದು' ಇತ್ಯಾದಿ.

ಇತರ ರೂಪಗಳ ಪರದಲ್ಲಿಲ್ಲದೆ ಸ್ವತಂತ್ರವಾಗಿ ಪ್ರಯೋಗವಾದಾಗಲೂ 'ಆದ್‌+ದ್ದರಿಂದ' ಎಂಬುದರ ಎರಡನೆಯ ಅಕ್ಷರವು ಲೋಪವಾಗುತ್ತದೆ.

ಆದ್‌+ದ್ದರಿಂದ > ಆದ್ದರಿಂದ

ಮೇಲೆ ಸೂಚಿಸಿದ ಧಾತುಗಳ ಹೊರತು ಇತರ ಭೂತಕಾಲದ ಪ್ರಾತಿಪದಿಕಗಳ ಎಲ್ಲ ಪ್ರೇರಣಾರ್ಥಕ ಪ್ರಾತಿಪದಿಕಗಳ ಮತ್ತು '—ದ್ದು' ನ ಮಧ್ಯೆ 'ø' ಉಪರೂಪಿಕೆಯು ಕೃದಂತನಾಮಪದಗಳ ರಚನೆಯಲ್ಲಿ ಹತ್ತುತ್ತದೆ. ಇಲ್ಲಿ ಭೂತಕಾಲವಾಚಕ ಪ್ರತ್ಯಯವೂ ಸಾಮಾನ್ಯವಾಗಿ ಶೂನ್ಯೋಪರೂಪಿಕೆಯನ್ನು ಹೊಂದಿರುತ್ತದೆ.

ಕ್‌+ಲ್‌+ಸು —ಕ್‌+ಲ್‌+ಸಿ—ø—ದ್ದು
ತಿರ್‌+ಗು —ತಿರ್‌+ಗಿ—ø—ದ್ದು
ಬ್‌+ರ್‌+ಸು —ಬ್‌+ರ್‌+ಸಿ—ø—ದ್ದು
ನ್‌+ಂಬು —ನ್‌+ಂಬಿ—ø—ದ್ದು
ಹೇಳು —ಹೇಳಿ—ø—ದ್ದು
ಕ್‌+ಚ್ಚು —ಕ್‌+ಚ್ಚಿ—ø—ದ್ದು
ಮಾಡು —ಮಾಡಿ—ø—ದ್ದು
ಬಳ್‌+ಲು —ಬ್‌ಳ್‌+ಲಿ—ø—ದ್ದು

ಈವರೆಗೆ ವರ್ಣಿಸಿದ ।।। ನ. ಲಿಂ. ಏ. ವ. ಕೃದಂತನಾಮಪದಗಳು 'ಇಲ್ಲ' ವಾಚಕದಿಂದ ಅನುಸರಿಸಲ್ಪಟ್ಟಾಗ ಲಿಂಗ, ವಚನ ಮತ್ತು ಪುರುಷಭೇದವಿಲ್ಲದೆ ನಿಷೇಧಾರ್ಥವನ್ನು ಕೊಡುತ್ತವೆ.

ಉದಾ :

ಬ್ + ರು —ಬ್+ರ್+ದ್—+ಲ್ಲ
ಬ್+ಂದ್+ದ್ದ—+ಲ್ಲ
ಕಾಣು —ಕಾಣ್+ದ್—+ಲ್ಲ
ಕಂಡ್+ದ್ದ—+ಲ್ಲ
ಕೇಳು —ಕೇಳ್+ದ್—+ಲ್ಲ
ಕೇಳಿದ್ದ—+ಲ್ಲ
ಕ್+ಚ್ಚು —ಕ್+ಚ್+ದ್—+ಲ್ಲ
ಕ್+ಚ್ಚ್ದ್—+ಲ್ಲ
ಕೆಣ್+ಕು —ಕೆಣ್+ಕ್+ದ್—+ಲ್ಲ
ಕೆಣ್+ಕಿದ್ದ—+ಲ್ಲ
ಕರ್+ಸು —ಕರ್+ಸ್+ದ್—+ಲ್ಲ
ಕರ್+ಸಿದ್ದ—+ಲ್ಲ

ಲಿಂಗ, ವಚನ, ಪುರುಷಭೇದವಿಲ್ಲದ್ದಕ್ಕೆ ಉದಾ :

ನಾನು	
ನಾವು	
ನೀನು	
ನೀವು	ಕಾಣ್+ದ್—+ಲ್ಲ
ಅವನು	
ಅವಳು	ಕಂಡ್+ದ್ದ—+ಲ್ಲ
ಅವರು	
ಅದು	
ಅವು	

ಮೇಲಿನ ಪರಿಸರಗಳಲ್ಲಿ 'ಇಲ್ಲ' ವಾಚಕದ ಆದಿಸ್ವರವು '+' ಆಗಿ ಮಾರ್ಪಡುವುದನ್ನು ಗಮನಿಸಬಹುದು.

ಮೇಲೆ ವರ್ಣಿಸಿದ ರೂಪಗಳಲ್ಲಿ ಅಭೂತಕಾಲಸೂಚಕ ನಿಷೇಧಾರ್ಥಕಕ್ರಿಯಾ-ರೂಪಗಳಲ್ಲಿ ಕೃದಂತನಾಮಪದದ ಕಡೆಯ ಅಕ್ಷರವು 'ಇಲ್ಲ' ವಾಚಕದ ಪೂರ್ವದಲ್ಲಿ ಐಚ್ಛಿಕವಾಗಿ ಲೋಪವಾಗುತ್ತದೆ.

ಕಾಣ್ + (ದು) — ಇಲ್ಲ — ಕಾಣ್ + ದ್ + ಲ್ಲ ~ ಕಾಣ್ + ಲ್ಲ
ಕೇಳ್ + (ದು) — ಇಲ್ಲ — ಕೇಳ್ + ದ್ + ಲ್ಲ ~ ಕೇಳ್ + ಲ್ಲ
ಕ್ + ಚ್ + (ದು) — ಇಲ್ಲ — ಕ್ + ಚ್ + ದ್ + ಲ್ಲ ~ ಕ್ + ಚ್ + ಲ್ಲ
ಕೆಣ್ + ಕ್ + (ದು) — ಇಲ್ಲ — ಕೆಣ್ + ಕ್ + ದ್ + ಲ್ಲ ~ ಕೆಣ್ + ಕ್ + ಲ್ಲ

ಭೂತಾರ್ಥವನ್ನು ಕೊಡುವ ನಿಷೇಧಾರ್ಥಕಕ್ರಿಯಾಪದಗಳಿಗೆ

ಉದಾ :

a) ಕಾಣು—ಕಾಣ್ಳ್—+ಲ್ಲ
ಹೋಗು—ಹೋಗ್ಲ್—+ಲ್ಲ
ಹೇಳು—ಹೇಳ್ಳ್—+ಲ್ಲ
ಬರಿ—ಬರೀಲ್—+ಲ್ಲ
ತಿನ್ನು—ತಿ(ನ್)ನ್ಲ್—+ಲ್ಲ
ಕುಣಿ—ಕುಣೀಲ್—+ಲ್ಲ

b) ತಿಳಿ—ತಿಳ್+ದ್—+ಲ್ಲ
ಕರಿ—ಕರ್+ದ್—+ಲ್ಲ
ಬ್+ರು—ಬ್+ಂದ್—+ಲ್ಲ
+ಳು—+ತ್ತ್—+ಲ್ಲ
ಸಾಯ್—ಸತ್ತ್—+ಲ್ಲ
ಅನ್ನು—ಅಂದ್—+ಲ್ಲ
ಕ್+ದಿ—ಕ್+ದ್ದ್—+ಲ್ಲ

ಮೇಲಿನ (a) ಗುಂಪಿನ ರೂಪಗಳು ಸಾಮಾನ್ಯ ನಿಷೇಧಾರ್ಥವನ್ನು ಸೂಚಿಸಿದರೆ (b) ಗುಂಪಿನ ರೂಪಗಳು ನಿಶ್ಚಿತನಿಷೇಧಾರ್ಥವನ್ನು ಸೂಚಿಸುತ್ತವೆ. ಇಲ್ಲಿ 'ϕ' ನ ಹೊರತು ಉಳಿದ ಉಪರೂಪಿಕೆಗಳ ಪರದಲ್ಲಿ 'ಇಲ್ಲ' ವಾಚಕದ ಆದಿಸ್ವರವು '+' ಆಗಿ ಮಾರ್ಪಡುವುದು ಗಮನಾರ್ಹವಾಗಿದೆ.

ಭೂತಕಾಲಪ್ರತ್ಯಯದ ϕ ಉಪರೂಪಿಕೆಸಹಿತವಾದ ಭೂತನ್ಯೂನಗಳ ಪರದಲ್ಲಿ 'ಇಲ್ಲ' ಸೇರುವುದಕ್ಕೆ ಉದಾಹರಣೆಗಳು :

ಹೋಗು—ಹೋಗ್(ಇ)—ϕ—ಇಲ್ಲ
ಹಾಕು—ಹಾಕ್(ಇ)—ϕ—ಇಲ್ಲ
ಕ್+ಟ್ಟು—ಕ್+ಟ್ಟ್(ಇ)—ϕ—ಇಲ್ಲ
ಕೆಣ್+ಕು—ಕೆಣ್+ಕ್(ಇ)—ϕ—ಇಲ್ಲ.

ಪ್ರ. ಪ್ರ. ನ. ಲಿಂ. ಏ ವ ಪು. ಪ್ರ ದ '—ದ್ದು' ಉಪರೂಪಿಕೆಯಿಂದ ಕೂಡಿದ ಕೃದಂತನಾಮಪದಗಳ ಪರದಲ್ಲಿ 'ಇಲ್ಲ' ಹತ್ತಿದಾಗ ಸೂಚಿತವಾಗುವ ಭೂತಾರ್ಥಕ್ಕೆ ಉದಾ. ಗಳು.

ಬ್+ರು—ಬ್+ಂದ್+—ದ್ದ್(ಉ)—+ಲ್ಲ
ಕರಿ—ಕರ್+ದ್+—ದ್ದ್(ಉ)—+ಲ್ಲ
ಹಿಡಿ—ಹಿಡ್+ದ್+—ದ್ದ್(ಉ)—+ಲ್ಲ
ಕಾಣು—ಕಂಡ್+—ದ್ದ್(ಉ)—+ಲ್ಲ
ಕ್+ಲಿ—ಕ್+ಲ್+ತ್+—ದ್ದ್(ಉ)—+ಲ್ಲ
ಸಾಯ್—ಸತ್+—ದ್ದ್(ಉ)—+ಲ್ಲ
ಕ್+ಳಿಸು—ಕ್+ಳಿಸಿ—ದ್ದ್(ಉ)—+ಲ್ಲ
ನ್+ಂಬು—ನ್+ಂಬಿ—ದ್ದ್(ಉ)—+ಲ್ಲ. ಹೇಳಿದ
'—ಲ್ಲ' ಇತ್ಯಾದಿ.

'ಇಲ್ಲ' ವಾಚಕದಿಂದ ಅನುಸರಿಸಲ್ಪಟ್ಟಾಗ ಇತರ ಅನಿಯತಧಾತುಗಳಿಂದ ನಿಷ್ಪನ್ನವಾದ ಭೂತಕಾಲದ ಪ್ರಾತಿಪದಿಕಗಳಂತೆ 'ಆಗು' 'ಹೋಗು' ಧಾತುಗಳ ಭೂತಕಾಲದ ಪ್ರಾತಿಪದಿಕಗಳ ಪರದಲ್ಲಿ III ನ. ಲಿಂ. ಏವ. ಪು. ಪ್ರ. ದ ಉಪರೂಪಿಕೆಯಾದ '—ದ್ದು' ಹತ್ತುವುದಿಲ್ಲ. ಅದರ ಬದಲು ಅದು 'ಆಗು' 'ಹೋಗು' ಧಾತುಗಳ ಭೂತನ್ಯೂನಗಳ ಪರದಲ್ಲಿ ಮಾತ್ರ ಹತ್ತುತ್ತದೆ. ಆದ್ದರಿಂದ 'ಆದ್+ದ್ದ್+ಲ್ಲ' 'ಹೋದ್+ದ್ದ್+ಲ್ಲ' ಎಂಬ ರೂಪಗಳ ಬದಲು 'ಆಗಿದ್ದ್+ಲ್ಲ' 'ಹೋಗಿದ್ದ್+ಲ್ಲ' ಎಂಬ ರೂಪಗಳು ಸಿದ್ಧಿಸುತ್ತವೆ.

ಆಗು—ಆಗಿದ್ದ್(ಉ)—+ಲ್ಲ
ಹೋಗು—ಹೋಗಿದ್ದ್(ಉ)—+ಲ್ಲ

'—ಲಿಕ್ಕೆ' ಮತ್ತು '—ಆಕೆ' ಉಪರೂಪಿಕೆಗಳಿಂದ ಕೂಡಿದ ಭಾವಾರ್ಥಕ ಕ್ರಿಯೆಗಳೂ ಮತ್ತು III ನ. ಲಿಂ. ಏ. ವ. ಪು. ಪ್ರ. ದ '—ದು' ಉಪರೂಪಿಕೆಯಿಂದ ನಿಷ್ಪನ್ನವಾದ ಕೃದಂತನಾಮರೂಪಗಳೂ 'ಇಲ್ಲ' ವಾಚಕದಿಂದ ಅನುಸರಿಸಲ್ಪಟ್ಟಾಗ ಅನಿಶ್ಚಿತ ಅಭೂತನಿಷೇಧಾರ್ಥವನ್ನು ಕೊಡುತ್ತವೆ.

(a) ಬ್+ರು —ಬ್+ರ್ —ಲಿಕ್(ಎ)—ಇಲ್ಲ
ಹೋಗು —ಹೋಗ್—ಲಿಕ್(ಎ)—ಇಲ್ಲ
ತಿನ್ನು —ತಿನ್ —ಲಿಕ್(ಎ)—ಇಲ್ಲ
ಕಾಣು —ಕಾಣ್—ಲಿಕ್(ಎ)—ಇಲ್ಲ

(b) ಬ್+ರು —ಬ್+ರ್—ಅಕ್(ಎ)—+ಲ್ಲ
ಹೋಗು —ಹೋಗ್—ಅಕ್(ಎ)—+ಲ್ಲ
ತಿನ್ನು —ತಿನ್—ಅಕ್(ಎ)—+ಲ್ಲ
ಕಾಣು —ಕಾಣ್—ಅಕ್(ಎ)—+ಲ್ಲ

'ಅಕ್' ಉಪರೂಪಿಕೆಯಿಂದ ಕೂಡಿದ ರೂಪಗಳ ಪರದಲ್ಲಿ 'ಇಲ್ಲ' ವಾಚಕದ ಆದಿಸ್ವರವು '+' ಆಗಿ ಮಾರ್ಪಡುತ್ತದೆ. 'ಇಲ್ಲ' ವಾಚಕದಿಂದ ಅನುಸರಿಸಲ್ಪಡುವ ಅಭೂತನ್ಯೂನರೂಪಗಳಿಗೆ ಉದಾಹರಣೆಗಳು :

ಬ್+ರು—ಬ್+ರ್ತ್(ಅ)—ಇಲ್ಲ
ತಿನ್ನು—ತಿನ್ತ್(ಅ)—ಇಲ್ಲ
ನುಂಗು—ನುಂಗ್ತ್(ಅ)—ಇಲ್ಲ
ಸುಡು—ಸುಡ್ತ್(ಅ)—ಇಲ್ಲ

'ಇಲ್ಲ' ವಾಚಕದ ಪೂರ್ವದಲ್ಲಿ '—ತ್' ಪ್ರತ್ಯಯದ ಅಂತ್ಯ '—ಅ' ಕಾರವು ಐಚ್ಛಿಕವಾಗಿ ಲೋಪವಾಗುತ್ತದೆ.

ಅಪೂರ್ಣ ಕ್ರಿಯಾಪದಗಳು

ಅಪೂರ್ಣ ಕ್ರಿಯಾಪದಗಳಲ್ಲಿ ಆರು ವಿಧಗಳಿವೆ : 1) ಅಭೂತನ್ಯೂನ 2) ಭೂತನ್ಯೂನ 3) ಪಕ್ಷಾರ್ಥಕ 4) ನಿಷೇಧನ್ಯೂನ 5) ಭಾವಾರ್ಥಕ ಮತ್ತು 6) ಸತಿಸಪ್ತಮೀ ರೂಪಗಳು.

1) '—ಅ' ಪ್ರತ್ಯಯವು ಅಭೂತನ್ಯೂನಕ್ರಿಯೆಯನ್ನು ಸೂಚಿಸುತ್ತದೆ. ಇದು ಅಭೂತಕಾಲವಾಚಕಪ್ರತ್ಯಯವಾದ '—ತ್—' ಪರದಲ್ಲಿ ಹತ್ತುತ್ತದೆ.

ಬ್+ರು—ಬ್+ರ್+—ತ್—ಅ
ಹೋಗು—ಹೋಗ್—ತ್—ಅ
ಕಾಣು—ಕಾಣ್—ತ್—ಅ
ಬೀಳು—ಬೀಳ್—ತ್—ಅ
ಕೊಡು—ಕೊಡ್—ತ್—ಅ
ತಿನ್ನು—ತಿನ್—ತ್—ಅ
ಕ್+ಲಿ—ಕ್+ಲೀ—ತ್—ಅ
ಮರಿ—ಮರೀ—ತ್—ಅ

2) ಭೂತನ್ಯೂನಕ್ರಿಯಾಪದಗಳ ನಿಷ್ಪತ್ತಿಯಲ್ಲಿ ಸೇರುವ ಪ್ರತ್ಯಯದ ಉಪರೂಪಿಕೆಗಳು a) '—ಇ' ಮತ್ತು b) '—ಉ' ಈ ಪ್ರತ್ಯಯವು ಭೂತಕಾಲ ಸೂಚಕ ಪ್ರಾತಿಪದಿಕಗಳ ಪರದಲ್ಲಿ ಹತ್ತುತ್ತವೆ.

a) '—ಇ' ಉಪರೂಪಿಕೆಯು ಉಕಾರಾಂತವಾದ ಎಲ್ಲ ನಿಯತಧಾತುಗಳ ಪರದಲ್ಲೂ ಮತ್ತು ಅನಿಯತಧಾತುಗಳಲ್ಲಿ ಕೇವಲ 'ಆಗು' ಮತ್ತು 'ಹೋಗು'ಗಳ ಪರದಲ್ಲೂ ಹತ್ತುತ್ತದೆ. ಭೂತಕಾಲವಾಚಕಪ್ರತ್ಯಯವು ಇಲ್ಲಿ ಸಾಮಾನ್ಯವಾಗಿ ಶೂನ್ಯೋಪರೂಪಿಕೆಯನ್ನು ಹೊಂದಿರುವುದನ್ನು ಗಮನಿಸಿ.

ಹೇಳು—ಹೇಳ್—ಇ, ತಿರ್+ಗು—ತಿರ್+ಗ್—ಇ
ಕೆಣ್+ಕು—ಕೆಣ್+ಕ್—ಇ, ಬೆರ್+ಸು—ಬೆರ್+ಸ್—ಇ
ಆಗು—ಆಗ್—ಇ, ಹೋಗು—ಹೋಗ್—ಇ

b) ಇತರ ಎಲ್ಲ ಧಾತುಗಳ ಭೂತಕಾಲದ ಪ್ರಾತಿಪದಿಕಗಳ ಪರದಲ್ಲೂ '—ಉ' ಹತ್ತುತ್ತದೆ.

ಕಳ—ಕಳ್+ದ್—ಉ, ಕ್+ಲಿ—ಕ್+ಲ್+ತ್—ಉ
ಮರಿ—ಮರ್+ತ್—ಉ, ಕೊಡು—ಕೊಟ್ಟ್—ಉ
ಕೊಳ—ಕೊಳ್+ತ್—ಉ, ಬಿಡು—ಬಿಟ್ಟ್—ಉ

3) ಪಕ್ಷಾರ್ಥಕಕ್ರಿಯಾಪದಗಳ ನಿಷ್ಪತ್ತಿಯಲ್ಲಿ ಹತ್ತುವ ಪ್ರತ್ಯಯ '—ರೆ' ಈ ಪ್ರತ್ಯಯವು ಭೂತಕಾಲದ ಪ್ರಾತಿಪದಿಕಗಳ ಪರದಲ್ಲಿ ಹತ್ತುತ್ತದೆ.

ಬ್+ರು—ಬ್+ಂದ್—ರೆ
ಮಾಡು—ಮಾಡಿದ್—ರೆ

ಹೇಳು—ಹೇಳಿದ್—ರಿ
ತಿಳಿ—ತಿಳ್+ದ್—ರೆ
ಆಗಿ—ಆಗ್+ದ್—ರಿ
ಕಾಯ್—ಕಾದ್—ರಿ
ತೇಯ್—ತೇದ್—ರೆ

4) ನಿಷೇಧನ್ಯೂನ ಪ್ರತ್ಯಯದ ಉಪರೂಪಿಕೆಗಳು '—+ದ' '—+ದೆ', '—+ದ್+ಲೆ' ಇವು ಸ್ವಸ್ಪಂದ ಪರಿವರ್ತನೆಯಲ್ಲಿವೆ. ಅಭೂತಾರ್ಥಕಪ್ರಾತಿಪದಿಕ ಗಳ ಪರದಲ್ಲಿ ಈ ಪ್ರತ್ಯಯವು ಹತ್ತುತ್ತದೆ.

'ಹೇಳು'—ಹೇಳ್—+ದ~ಹೇಳ್—+ದೆ~ಹೇಳ್—+ದ್+ಲೆ
ಕಾಣು—ಕಾಣ್—+ದ~ಕಾಣ್—+ದೆ~ಕಾಣ್—+ದ್+ಲೆ
ತಿಳಿ—ತಿಳೀ—(+)ದ~ತಿಳೀ—(+)ದೆ~ತಿಳೀ—(+)ದ್+ಲೆ
ಮರಿ—ಮರೀ—(+)ದ~ಮರೀ—(+)ದೆ~ಮರೀ—(+)ದ್+ಲೆ
ಆಗು—ಆಗ್—+ದ~ಆಗ್—+ದೆ~ಆಗ್—+ದ್+ಲೆ

ಇಕಾರಾಂತ ಧಾತುಗಳ ಪರದಲ್ಲಿ ಉಪರೂಪಿಕೆಗಳ ಆದಿಸ್ವರವು ಲೋಪವಾಗು ತ್ತದೆ.

5) ಭಾವಾರ್ಥಕ ಕ್ರಿಯಾಪದಗಳ ನಿಷ್ಪತ್ತಿಯಲ್ಲಿ ಹತ್ತುವ ಪ್ರತ್ಯಯದ ಉಪ ರೂಪಿಕೆಗಳು a) '—ϕ—', b) '—ಅಕೆ' ಮತ್ತು c) '—ಲ್'. ಈ ಪ್ರತ್ಯ ಯವು ಅಭೂತಾರ್ಥಕ ಪ್ರಾತಿಪದಿಕಗಳ ಪರದಲ್ಲಿ ಹತ್ತುತ್ತದೆ.

a) 'ಬ್+ಕು', 'ಬ್+ಯುದ್', 'ಬ್+ವ್ದ', 'ಬಾಡ', 'ಬಲ್ಲ' ಇತ್ಯಾದಿ ಸಹಾಯಕ ಕ್ರಿಯಾಪದಗಳಿಂದ ಅನುಸರಿಸಲ್ಪಡುವ ಅಭೂತಾರ್ಥಕಪ್ರಾತಿ ಪದಿಕಗಳ ಪರದಲ್ಲಿ '—ϕ—' ಉಪರೂಪಿಕೆಯು ಹತ್ತುತ್ತದೆ.

ಹೋಗು—ಹೋ(ಗ್)—ϕ—ಬ್+ಕು
ತಿನ್ನು—ತಿನ್—ϕ—ಬ್+ಯುಟ್
ಕರಿ—ಕರೀ—ϕ—ಬಾಡ
ಕೇಳು—ಕೇಳ್—ϕ—ಬಲ್ಲೆ
ಬ್+ರು—ಬ್+ರ್—ϕ—ಬಾಡ್ದ

'ಕೂಡ್ + ದು' ಸಹಾಯಕ ಕ್ರಿಯಾಪದದ ಪೂರ್ವದಲ್ಲಿ '—ϕ—' ಮತ್ತು '—ಆಕೆ' ಉಪರೂಪಿಕೆಗಳು ಸ್ವಚ್ಛಂದಪರಿವರ್ತನದಲ್ಲಿವೆ.

ಉದಾ : '—ϕ—' ~ '—ಆಕೆ'

ತಿನ್ನು—ತಿನ್—ϕ—ಕೂಡ್ + ದು ~ ತಿನ್—ಆಕ್(ಎ)—ಕೂಡ್ + ದು
ಹೇಳು—ಹೇಳ್—ϕ—ಕೂಡ್ + ದು ~ ಹೇಳ್—ಆಕ್(ಎ)—ಕೂಡ್ + ದು
ಹೋಗು—ಹೋಗ್—ϕ—ಕೂಡ್ + ದು ~ ಹೋಗ್—ಆಕ್ + (ಎ) —ಕೂಡ್ + ದು
'ಬ್ + ರು'—ಬ್ + ರ್—ϕ—ಕೂಡ್ದು ~ ಬ್ + ರ್—ಆಕ್(ಎ) —ಕೂಡ್ದು

'ಬೇಕು', 'ಕೂಡ್ದು', 'ಒಲ್ಲ' ಮತ್ತು 'ಇಲ್ಲ' ಸಹಾಯಕ ಕ್ರಿಯಾಪದಗಳಿಂದ ಅನುಸರಿಸಲ್ಪಡುವ ಕ್ರಿಯಾರೂಪಗಳಲ್ಲಿ ಧಾತು ಮತ್ತು ಅವಧಾರಣೆಯ 'ಏ' ಗಳ ಮಧ್ಯೆ '—ಲ್' ಮತ್ತು '—ಆಕೆ' ಉಪರೂಪಿಕೆಗಳು ಸ್ವಚ್ಛಂದಪರಿವರ್ತನದಲ್ಲಿರುತ್ತವೆ.

ಉದಾ : '—ಲ್' ~ '—ಆಕೆ'

ಹೋಗು—ಹೋಗ್—ಲ್—ಏ—ಬೇಕು ~ ಹೋಗ್—ಆಕ್(ಏ)—ಏ—ಬೇಕು
ಮಾಡು—ಮಾಡ್—ಳ್—ಏ—ಬೇಕು ~ ಮಾಡ್—ಆಕ್(ಏ)—ಏ—ಬೇಕು
ಕೊಡು—ಕೊಡ್—ಲ್—ಏ—ಬೇಕು ~ ಕೊಡ್—ಆಕ್(ಏ)—ಏ—ಬೇಕು
ಮುಟ್ಟು—ಮು(ಟ್)ಟ್—ಳ್—ಏ—ಕೂಡ್ದು ~ ಮುಟ್ಟ್—ಆಕ್(ಏ) —ಏ—ಕೂಡ್ದು
ಬ್ + ರು—ಬ್ + ರ್—ಲ್—ಏ—ಕೂಡ್ದು ~ ಬ್ + ರ್—ಆಕ್(ಏ) —ಏ—ಕೂಡ್ದು
ಕೊಡು—ಕೊಡ್—ಳ್—ಏ—ಒಲ್ಲ ~ ಕೊಡ್—ಆಕ್(ಏ)—ಏ—ಒಲ್ಲ
ಮುಟ್ಟು—ಮು(ಟ್)ಟ್—ಳ್—ಏ—ಇಲ್ಲ ~ ಮುಟ್ಟ್—ಆಕ್(ಏ) —ಏ—ಇಲ್ಲ

ಸಹಾಯಕ ಕ್ರಿಯಾಪದವಾದ 'ಬಾಡ' ಮತ್ತು ಅದರ ರೂಪಗಳು ಪರದಲ್ಲಿ ಧಾತು ಮತ್ತು ಅವಧಾರಣೆಯ ಅವ್ಯಯವಾದ 'ಏ' ಗಳ ಮಧ್ಯೆ 'ಲ್' ಮಾತ್ರವೇ ಬರುತ್ತವೆ.

ಹೋಗು—ಓೋಗ್—ಳ್—ಏ—ಬಾಡ
ತಿನ್ನು—ತಿ(ನ್)ನ್—ಲ್—ಏ—ಬ್ಹಾಡ್ದು
ಕೊಡು—ಕೊಡ್—ಳ್—ಏ—ಬಾಡ್ರಿ

(6) ಪತ್ರಿಸಸ್ತ್ರಿರಾ [illegible]ಗಳ ನಿಷ್ಪತ್ತಿಯಲ್ಲಿ [illegible] ತ್ತು' ಪ್ರತ್ಯಯ
ಸೇರ್ಪತ್ತದೆ.

ಹೇಳು—ಹೇಳ್—+ತ್ಲು
ಬ್+ರು—ಬ್+ರ್—+ತ್ಲು
ತಿನು—ತಿನ್ನ್—+ತ್ಲು
ಕ್—ಚ್ಚು—ಕ್+ಚ್ಚ್—+ತ್ಲು
ಕೊಳ್ಳು—ಕೊಳ್—+ತ್ಲು
"ಅವನು ಕಾಣ್+ತ್ಲು ನನ್ನ ಕರಿ"
"ನೀ ಕೊಡ್+ತ್ಲು ನಾ ಹೋಕ್+ನಿ."

ಸಹಾಯಕ ಕ್ರಿಯಾಪದಗಳು

ಈವರೆಗೆ ವರ್ಣಿಸಿದ ಸಾಪೇಕ್ಷಕ್ರಿಯಾಪದಗಳು ಪರಸ್ಪರ ಒಂದನ್ನೊಂದು ಅನುಸರಿಸಿ ಬರುತ್ತವೆ. ಮತ್ತು ಕಡೆಯಲ್ಲಿ ಒಂದು ಪೂರ್ಣಕ್ರಿಯಾಪದದಿಂದ ವಾಕ್ಯವು ಪೂರ್ಣವಾಗುತ್ತದೆ. ವಾಸ್ತವವಾಗಿ ಅಪೂರ್ಣಕ್ರಿಯಾಪದವು ತಾನೇ ಸ್ವತಂತ್ರವಾಗಿ ಪ್ರವರ್ತಿಸಲಾರದು. ಅದು ಒಂದು ಪೂರ್ಣಕ್ರಿಯಾಪದದ ಸಹಾಯವನ್ನು ಅಪೇಕ್ಷಿಸುತ್ತದೆ. ಅಪೂರ್ಣಕ್ರಿಯಾಪದಗಳ ನಂತರ ಬರುವ ಪೂರ್ಣಕ್ರಿಯಾಪದಗಳಲ್ಲಿ ಈ ಕೆಳಗಿನವು ಸಹಾಯಕಕ್ರಿಯಾಪದಗಳ ಕಾರ್ಯವನ್ನು ಮಾಡುತ್ತವೆ. ವರ್ಣನೆಯ ಅನುಕೂಲತೆಗಾಗಿ ಅವನ್ನು ಆರು ವಿಧಗಳಾಗಿ ವಿಂಗಡಿಸಲಾಗಿವೆ.

I 'ಕೊಳ್ಳು', 'ಕೊಡು', 'ಇಡು' ಮತ್ತು 'ಬಿಡು'

II 'ಇರು'

III 'ಹಾಕು'

IV 'ಹೋಗು'

V 'ಬ್+ಕು', 'ಬ್+ಯ್ಯು—ಬ್+ವ್ವು', 'ಬಾಡ', 'ಬಲ್ಲ', 'ಕೂಡ್ದು.'

VI 'ಆಗು ' ಬೇರೆ ಬೇರೆ ಗುಂಪಿನ ಈ ಸಹಾಯಕ ಕ್ರಿಯಾಪದಗಳು ಬೇರೆ ಬೇರೆ ಗುಂಪಿನ ಕ್ರಿಯಾಪದಗಳೊಡನೆ ಹಂಚಿಕೆಯಾಗಿವೆ. ಅವುಗಳ ಹಂಚಿಕೆ ಈ ಕೆಳಕಂಡಂತೆ ಇದೆ.

ಮೇಲೆ ಹೇಳಿದ ಆರು ವಿಭಾಗದ ಸಹಾಯಕ ಕ್ರಿಯಾಪದಗಳು ಕ್ರಮವಾಗಿ ಕೆಳಗೆ ತಿಳಿಸಿದ ಕ್ರಿಯಾಪದಗಳ ಅನಂತರ ಬರುತ್ತದೆ.

I ಗುಂಪಿನ ಕ್ರಿಯಾಪದಗಳು — ಭೂತನ್ಯೂನತೆಗಳು

II — ,, — — (i) ಭೂತನ್ಯೂನಗಳು (ii) ಅಭೂತನ್ಯೂನಗಳು

— ,, — — (i) ಭೂತನ್ಯೂನಗಳು (ii) ಭಾವಾರ್ಥಗಳು

IV — ,, — — (i) ಭೂತನ್ಯೂನಗಳು (ii) ಭಾವಾರ್ಥಗಳು (iii) ಮತ್ತೊಂದು ಸಹಾಯಕ ಕ್ರಿಯಾಪದವಾದ 'ಕೊಳ್ಳು' ಧಾತುವಿನ ರೂಪಗಳಿಂದ ಅನುಸರಿಸಲ್ಪಡುವ ಭೂತನ್ಯೂನಗಳು

V ಭಾವಾರ್ಥಕಗಳು . (ii) ಮತ್ತೊಂದು ಸಹಾಯಕ ಕ್ರಿಯಾಪದವಾದ 'ಕೊಳ್ಳು' ಧಾತುವಿನ ರೂಪಗಳಿಂದ ಅನುಸರಿಸಲ್ಪಡುವ ಭೂತನ್ಯೂನಗಳು

VI — ,, — — ಕೇವಲ ಭಾವಾರ್ಥಗಳು

V ಮತ್ತು VIನೇ ಗುಂಪಿನ ರೂಪಗಳು ಪೂರ್ಣಕ್ರಿಯಾಪದಗಳಾಗಿದ್ದು ಇತರ ಗುಂಪಿನ ರೂಪಗಳು ಧಾತುಗಳಾಗಿವೆ ಎಂಬುದು ಗಮನಾರ್ಹ.

ಭೂತನ್ಯೂನಗಳು ಯಾವ ನಿಯಮಿತಾಕೃತಿಯ (canonical Shapes) ಧಾತುಗಳಿಂದ ನಿಷ್ಪನ್ನವಾಗಿವೆ ಎಂಬ ಆಧಾರದ ಮೇಲೆ ಅವು ಸಹಾಯಕ ಕ್ರಿಯಾಪದಗಳಿಂದ ಅನುಸರಿಸಲ್ಪಟ್ಟಾಗ ಈ ಭೂತನ್ಯೂನಗಳಲ್ಲಿ ಒಂದಿಲ್ಲೊಂದು ಬದಲಾವಣೆಗಳುಂಟಾಗಬಹುದು. ಈ ಬಗ್ಗೆ ಈ ಕೆಳಗಿನ ಅಂಶಗಳನ್ನು ಗುರುತಿಸಬಹುದು.

p) (ವ್ಯಂ) ದೀ.ಸ್ವವ್ಯಂಸ್ವ. (ವ್ಯಂ) ಸ್ವವ್ಯಂವ್ಯಂಸ್ವ ಮತ್ತು (ವ್ಯಂ) ಸ್ವವ್ಯಂಸ್ವ ವ್ಯಂಸ್ವ ಆಕಾರದ ನಿಯತ ಧಾತುಗಳಿಂದ ನಿಷ್ಪನ್ನವಾದ ಭೂತನ್ಯೂನಗಳ ಪರದಲ್ಲಿ

ಸಹಾಯಕ ಕ್ರಿಯಾಪದಗಳು ಬಂದಾಗ ಭೂತನ್ಯೂನಗಳಲ್ಲಿ ಯಾವ ಬದಲಾವಣೆಯೂ ಆಗುವುದಿಲ್ಲ.

q) 'ಕೊಳ್ಳು' ಮತ್ತು 'ಕೊಡು' ಧಾತುಗಳ ಕ್ರಿಯಾರೂಪಗಳಿಂದ ಅನುಸರಿಸಲ್ಪಟ್ಟ (ವ್ಯಂ) ಸ್ವವ್ಯಂಸ್ವ ಆಕಾರದ ನಿಯತ ಧಾತುಗಳ ಪ್ರಾತಿಪದಿಕಗಳ ಪರದ ಕಾಲ ವಾಚಕಪ್ರತ್ಯಯದೊಡನೆ ಭೂತನ್ಯೂನ ಪ್ರತ್ಯಯವು ಲೋಪವಾಗುತ್ತದೆ.

R) ಇತರ ಕಡೆಗಳಲ್ಲಿ ಭೂತನ್ಯೂನ ಪ್ರತ್ಯಯವು ಮಾತ್ರ ಲೋಪವಾಗುತ್ತದೆ.

ಉದಾಹರಣೆಗಳಿಗಾಗಿ ಈ ಕೆಳಗಿನ ವಿಭಾಗಗಳನ್ನು ನೋಡಿ.

I (1) —'ಕೊಳ್ಳು' : '—ಕೊಳ್ಳು' ಧಾತುವಿನ ಕ್ರಿಯಾರೂಪಗಳು ತಾವು ಅನುಸರಿಸುವ ಕ್ರಿಯಾಪದಕ್ಕೆ ಆತ್ಮಾರ್ಥಕಭಾವವನ್ನುಂಟುಮಾಡಿ ಕೊಡುತ್ತವೆ. (x) '—ಗ್+ಳ್' ಮತ್ತು (y) '—ಕ್+ಳ್'ಗಳು —ಕೊಳ್ಳು' ಧಾತುವಿನ ಉಪರೂಪಿಕೆಗಳಾಗಿವೆ. ಅವು (ವ್ಯಂ)ಸ್ವವ್ಯಂಸ್ವ ಆಕಾರದ ಧಾತುಗಳಿಂದ ಮತ್ತು ಅಥವಾ ಅನಿಯತಧಾತುಗಳಿಂದ ನಿಷ್ಪನ್ನವಾದ ಭೂತನ್ಯೂನಗಳ ಪರದಲ್ಲಿ ಬರುತ್ತವೆ. (Z) (i) ಈ ಉಪರೂಪಿಕೆಗಳು (ವ್ಯಂ)ಸ್ವವ್ಯಂಸ್ವ. (ವ್ಯಂ)ಸ್ವವ್ಯಂವ್ಯಂಸ್ವ ಮತ್ತು (ವ್ಯಂ)ಸ್ವವ್ಯಂಸ್ವವ್ಯಂಸ್ವ ಈ ಆಕಾರಧಾತುಗಳಿಂದ ನಿಷ್ಪನ್ನವಾದ ಭೂತನ್ಯೂನಗಳ ಪರದಲ್ಲಿ ಬಂದಾಗ ಈ ಉಪರೂಪಿಕೆಗಳ ಆದಿವ್ಯಂಜನ ಮತ್ತು ತದುಪಾಂತ ಸ್ವರದ ಮಧ್ಯೆ 'ಯ್' ಕಾರವು ಬಂದು ಸೇರುತ್ತದೆ. (a) '—ಟ್', (b) '—ಸ್', (c) '—ತ್', (d) '—ಚ್' ಅಥವಾ (e) '—ಪ್' ಗಳಲ್ಲಿ ಅಂತ್ಯವಾಗುವ ಅಥವಾ ಅವುಗಳನ್ನು ಅಂತ್ಯಾಕ್ಷರಗಳಲ್ಲಿ ಹೊಂದಿರುವ ಪ್ರತಿಪದಿಕಗಳಿಂದ ನಿಷ್ಪನ್ನವಾದ ಭೂತನ್ಯೂನಗಳ ಪರದಲ್ಲಿ ಮಾತ್ರ 'ಗ್'ಕಾರಾದಿಯಾದ ಉಪರೂಪಿಕೆಯ ರೂಪಗಳು ಬರುತ್ತವೆ ಮತ್ತು ಇನ್ನೊಂದು ಉಪರೂಪಿಕೆಯ ರೂಪಗಳು ಇತರತ್ರ ಬರುತ್ತವೆಯಾದ್ದರಿಂದ ಈ ಉಪರೂಪಿಕೆಗಳು ಆಕೃತಿಮಾನಿಯಮಬದ್ಧವಾಗಿವೆ (Morphologically Conditioned). (ii) ಪ್ರೇರಣಾರ್ಥಕ ಪ್ರಾತಿಪದಿಕಗಳಿಂದ ನಿಷ್ಪನ್ನವಾದ ಭೂತನ್ಯೂನಗಳ ಪರದಲ್ಲಿ '—ಗ್+ಳ್' ಮತ್ತು 'ಕ್+ಳ್' ಎರಡು ಉಪರೂಪಿಕೆಗಳೂ '—ಗ್ಯಳ್' ಆಗಿ ಮಾಡುತ್ತವೆ. iii ಏ.ವ. ಪ್ರ. ದ. ಪೂರ್ವದಲ್ಲಿ ಈ ಎಲ್ಲ ರೂಪಗಳ ಅಂತ್ಯ '—ಳ್' ಕಾರವು ಲೋಪವಾಗುತ್ತದೆ. ಮತ್ತು '+' 'ಸ್ವರವು 'ಅ' ಆಗಿ ಮಾರ್ಪಡುತ್ತದೆ. ಇವುಗಳ ಹಂಚಿಕೆಯ ವರ್ಣನೆಯನ್ನು ಕುರಿತ ಈ ಕೆಳಗಿನ ಉದಾಹರಣೆಗಳಲ್ಲಿ ಉಪಲಬ್ಧರೂಪಗಳಾದ

'—ಗ'.. '—ಕ', '—ಗ್ಯ' ಮತ್ತು '—ಕ್ಯ' ಗಳನ್ನು ಆರಿಸಿಕೊಂಡಿದೆ. ಈ ರೂಪಗಳನ್ನು ಮುಂದೆ ವಿವರಿಸಲಾಗುತ್ತದೆ.

ಉದಾ :

(X) (a) ಕೊಡು—ಕೊ(ಟ್)ಟ್—ಗ
ಬಿಡು—ಬಿ(ಟ್)ಟ್—ಗ
ತೊಡು—ತೊ(ಟ್)ಟ್—ಗ
ಕೆಡು—ಕೆ(ಟ್)ಟ್—ಗ

(b) ಮಸಿ—ಮಸ್—ಗ
ಕ್+ಸಿ—ಕ್+ಸ್—ಗ
ಹೊಸಿ—ಹೊಸ್—ಗ
ಕುಸಿ—ಕುಸ್—ಗ
ಬೆಸಿ—ಬೆಸ್—ಗ
ಇಸ್— —ಇಸ್—ಗ

"ಇಸ್ –" ಎಂಬುದು ಬದ್ಧಧಾತು. ಇದು ಸಹಾಯಕ ಕ್ರಿಯಾ ಪದವಾದ "—ಗ" ನೊಡನೆ ಮಾತ್ರ ಪ್ರಯೋಗವಾಗುತ್ತದೆ.

(Y) ಕುಡಿ—ಕುಡ್+—ಕ
ಹೊಡಿ—ಹೊಡ್+—ಕ
ಬೆಳಿ—ಬೆಳ್+—ಕ
ಕಳಿ—ಕಳ್+—ಕ
ಬರಿ—ಬರ್+—ಕ
ಸುಲಿ—ಸುಲ್+—ಕ
ತ್—ರು—ತ್+ಂದ್—ಕ
ಕೊಳ್ಳು—ಕೊಂಡ್—ಕ
ಕಾಣು—ಕಂಡ್—ಕ

ತಿನ್ನು—ತಿಂದ್—ಕ
ನ್+ಗು—ನ್+ಕ್—ಕ
ಕಾಯ್—ಕಾದ್—ಕ
ಹೋಗು—ಹೊಕ್—ಕ
ಸಿಗು—ಸಿಕ್—ಕ
ಮಿಗು—ಮಿಕ್—ಕ

ಅನಿಯತ ಧಾತುಗಳಿಂದ ನಿಷ್ಪನ್ನವಾದ ಪ್ರಾತಿಪದಿಕಗಳ ಅಂತ್ಯಸ್ವರವಾದ '।' ಲೋಪವಾಗುತ್ತದೆ. ಮತ್ತು (ವ್ಯಂ)ಸ್ವವ್ಯಂಸ್ವ ಆಕಾರದ ಧಾತುಗಳ ಎರಡನೆಯ ಅಕ್ಷರದ 'ಗ' ಕಾರವು ಅಘೋಷವಾಗಿ ಮಾರ್ಪಡುತ್ತದೆ ಮತ್ತು ಈ ಧಾತುಗಳು

ಈ ಪರಿಸರದಲ್ಲಿ ನಿಯತಧಾತುಗಳಾದರೂ ಅನಿಯತ ಧಾತುಗಳಂತೆ ತಮ್ಮ ಪ್ರಾತಿಪದಿಕದ ಅಂತ್ಯ ಸ್ವರ ,+ 'ವನ್ನು ಲೋಪಗೊಳಿಸುತ್ತವೆ.

ಬ್+ಗಿ+ಬ್ —ಗ್(+)—ಕ—ಬ್+ಕ್ಕ
ಅಗಿ—ಅಗ್(+)—ಕ—ಅ+ಕ್ಕ
ತ್+ಗಿ —ತ್+ಗ್(+)—ಕ—ತ್+ಕ್ಕ
ಉಗಿ—ಉಗ್(+)—ಕ—ಉಕ್ಕ
ವಗಿ—ವಗ್(+)ಕ—ವಕ್ಕ
ಮ್+ಗಿ—ಮ್+ಗ್(+)—ಕ—ಮ್+ಕ್ಕ
ಹುಗಿ—ಹುಗ್(+)—ಕ—ಹುಕ್ಕ
ಮುಗಿ—ಮುಗ್(+)—ಕ—ಮುಕ್ಕ
ತೊಳಿ—ತೋಳ್(+)—ಕ—ತೊಕ್ಕ
ಮಲ— — ಮಲ್(+)—ಕ—ಮಕ್ಕ

'ತೊಳ್+ಕ' ಮತ್ತು 'ತೊಕ್ಕ'ಗಳು ವಿಕಲ್ಪ ರೂಪಗಳು. 'ತೊಕ್ಕ' ಮತ್ತು 'ಮಕ್ಕ' ರೂಪಗಳಲ್ಲಿ 'ತೊಳ್+'ಮತ್ತು 'ಮಲ್+' ಪ್ರಾತಿಪದಿಕಗಳ ಅಂತ್ಯ ಸ್ವರವಾದ '+' ಲೋಪವಾಗಿ ಎರಡನೆಯ ಅಕ್ಷರದ ವ್ಯಂಜನವು 'ಕ್' ಆಗಿ ಮಾರ್ಪಡುತ್ತದೆ. 'ಮಲ್+' ಎಂಬುದು 'ಮಲ್+ಗು' ಧಾತುವಿನ ಬದ್ಧೋಪ ರೂಪಿಕೆ (Conditioned allomorph) ಅದು—'ಕ' ಸಹಾಯಕ ಕ್ರಿಯಾರೂಪದ ಪೂರ್ವದಲ್ಲಿ ಮಾತ್ರ ಸೇರುತ್ತದೆ. (c. f. ಇಸ್-ಗ ಮತ್ತು ಮುಂದಿನ ವಿಭಾಗದಲ್ಲಿ 'ಮಲಗು 'ವನ್ನು ಕೂಡ ನೋಡಿ.)

Z i (X)ಗೆ ಎಂದರೆ ಭೂತನ್ಯೂನಗಳ ಪರದಲ್ಲಿ ಬರುವ '—ಗ್ಯ'ಕ್ಕೆ ಉದಾಹರಣೆಗಳು :

(a) ಕ್+ಟ್ಟು —ಕ್+ಟ್ಟಿ ಗ್ಯ
ಮುಟ್ಟು—ಮುಟ್ಟಿ—ಗ್ಯ
ಅಟ್ಟು—ಅಟ್ಟಿ—ಗ್ಯ
ಹುಟ್ಟು—ಹುಟ್ಟಿ—ಗ್ಯ
ತ್+ಟ್ಟು —ತ್+ಟ್ಟಿ—ಗ್ಯ
ಮೀಟು—ಮೀಟಿ—ಗ್ಯ
ನಾಟು—ನಾಟಿ—ಗ್ಯ

ದಾಟು—ದಾಟಿ—ಗ್ಯ
ಹಳ್ಟು—ಹಳ್ಟಿ—ಗ್ಯ
ಜಿಮುಟು—ಜಿಮುಟಿ—ಗ್ಯ

(b) ಕಾಸು—ಕಾಸಿ—ಗ್ಯ
ಹಾಸು—ಹಾಸಿ—ಗ್ಯ
ಮಾಸು—ಮಾಸಿ—ಗ್ಯ
ಬೀಸು—ಬೀಸಿ—ಗ್ಯ
ಹೇಸು—ಹೇಸಿ—ಗ್ಯ
ಬಳ್+ಸು—ಬಳ್+ಸಿ—ಗ್ಯ
ಸೋಸು—ಸೋಸಿ—ಗ್ಯ

(c) ಎತ್ತು—ಎತ್ತಿ—ಗ್ಯ ಮೆತ್ತು—ಮೆತ್ತಿ—ಗ್ಯ
ಸುತ್ತು—ಸುತ್ತಿ—ಗ್ಯ, ಬಿತ್ತು—ಬಿತ್ತಿ—ಗ್ಯ
ಹ್+ತ್ತು—ಹ್+ತ್ತಿ—ಗ್ಯ ಬ್+ತ್ತು—ಬ್+ತ್ತಿ—ಗ್ಯ

(d) ನಾಚು—ನಾಚಿ—ಗ್ಯ, ಚಾಚು—ಚಾಚಿ—ಗ್ಯ
ಬಾಚು—ಬಾಚಿ—ಗ್ಯ' ಕಳ್+ಚು—ಕಳ್+ಚಿ—ಗ್ಯ
ಹೆಚ್ಚು—ಹೆಚ್ಚಿ—ಗ್ಯ, ಹ್+ಚ್ಚು—ಹ್+ಚ್ಚಿ—ಗ್ಯ
ಬಿಳ್+ಚು—ಬಿಳ್+ಚ್—ಗ್ಯ, ಮುಚ್ಚು—ಮುಚ್ಚಿ—ಗ್ಯ

(e) ಸೀಪು—ಸೀಪಿ—ಗ್ಯ ಒಪ್ಪು—ಒಪ್ಪಿ—ಗ್ಯ
ಅಪ್ಪು—ಅಪ್ಪಿ—ಗ್ಯ ತ್+ಪ್ಪು—ತ್+ಪ್ಪಿ—ಗ್ಯ

Zi (y) ಗೆ ಎಂದರೆ ಭೂತನ್ಯೂನಗಳ ಪರದಲ್ಲಿ '—ಕ್ಯ' ಬರುವುದಕ್ಕೆ ಉದಾಹರಣೆಗಳು :

y) ಕಾಡು—ಕಾಡಿ—ಕ್ಯ, ಬೇಡು—ಬೇಡಿ—ಕ್ಯ
ಓಡು—ಓಡಿ—ಕ್ಯ, ಕೇಳು—ಕೇಳಿ—ಕ್ಯ
ಸೀಳು—ಸೀಳಿ—ಕ್ಯ, ನಾರು—ನಾರಿ—ಕ್ಯ
ಚೆಲ್ಲು—ಚೆಲ್ಲಿ—ಕ್ಯ, ತ+ಳ್ಳು—ತ್+ಳ್ಳಿ—ಕ್ಯ
ಗುದ್ದು—ಗುದ್ದಿ—ಕ್ಯ, ತಿರ್+ಗು—ತಿರ್+(ಗ್)—ಕ್ಯ

ಹುಡ್ + ಕು—ಹುಡ್ + (ಕಿ)ಕ್ಯ, ಬ್ + ದ್ + ಕು—ಬ್ + ದ್ + (ಕಿ)—ಕ್ಯ

ನ್ + ಂಬು—ನ್ + ಂಬಿ—ಕ್ಯ, ನೆಕ್ಕು—ನೆ(ಕ್ಕಿ)—ಕ್ಯ
ತಿಕ್ಕು—ತಿ(ಕ್ಕಿ)—ಕ್ಯ, ಸಾಕು—ಸಾ(ಕಿ)—ಕ್ಯ
ಹಾಕು—ಹಾ(ಕಿ)—ಕ್ಯ, ಬ್ + ಗ್ಗು—ಬ್ + (ಗ್ಗಿ)—ಕ್ಯ
ನುಗ್ಗು—ನು(ಗ್ಗಿ)—ಕ್ಯ, ಸುಂಗು—ಸುಂ(ಗಿ)—ಕ್ಯ
ಮನ್ + ಗು—ಮನ್ + (ಗಿ) ಕ್ಯ—ಕ್ಯ, ಮಲ್ + ಗು—ಮಲ್ + (ಗಿ)—ಕ್ಯ

ಭೂತನ್ಯೂನಗಳ ಅಂತ್ಯಾಕ್ಷರದ ವ್ಯಂಜವು ಸರಳ ಅಥವಾ ದ್ವಿತ್ವ 'ಗ್' ಅಥವಾ 'ಕ್' ಆಗಿದ್ದಲ್ಲಿ —'ಕ' ಕ್ರಿಯಾರೂಪದ ಪೂರ್ವದಲ್ಲಿ ಅದು ಲೋಪವಾಗುತ್ತದೆ.

(X) ii) ಪ್ರೇರಣಾರ್ಥಕ ಪ್ರಾತಿಪದಿಕಗಳ ಪರದಲ್ಲಿ '—ಗ', '—ಕ್' ಮತ್ತು '—ಕ್ಯ'ಗಳು '—ಗ್ಯ' ಆಗಿ ಮಾರ್ಪಡುವುದಕ್ಕೆ ಉದಾಹರಣೆಗಳು :

(X) (a) ಕೊಡು—ಕೊಟ್—ಗ—ಕೊಡ್ + ಸಿ—ಗ್ಯ
ಬಿಡು—ಬಿಟ್—ಗ—ಬಿಡ್ + ಸಿ—ಗ್ಯ
ಉಡು—ಉಟ್—ಗ—ಉಡ್ + ಸಿ—ಗ್ಯ
ಕೆಡು—ಕೆಟ್—ಗ—ಕೆಡ್ + ಸಿ—ಗ್ಯ

b) ಬೆಸಿ—ಬೆಸ್—ಗ—ಬೆಸ್ + ಸಿ—ಗ್ಯ
ಹೊಸಿ—ಹೊಸ್—ಗ—ಹೊಸ್ + ಸಿ—ಗ್ಯ
ಮುಸಿ—ಮುಸ್—ಗ—ಮುಸ್ + ಸಿ—ಗ್ಯ

c) ಹೊರು—ಹೊತ್—ಗ—ಹೊರ್ + ಸಿ—ಗ್ಯ
ಅ + ಳು—+ ತ್—ಗ—+ ಳ್ + ಸಿ—ಗ್ಯ
ಕೇಳು—ಕೆತ್—ಗ—ಕೇಳ್ + ಸಿ—ಗ್ಯ
ಮುರಿ—ಮುರ್ + ತ್ + ಗ—ಮುರ್ + ಸಿ—ಗ್ಯ

(y) ಕುಡಿ—ಕುಡ್ + —ಕ—ಕುಡ್ + ಸಿ—ಗ್ಯ
ಕ್ + ಡಿ—ಕ್ + ಡ್ + —ಕ—ಕ್ + ಡ್ + ಸಿ—ಗ್ಯ
ಕೊಳ್ಳು—ಕೊಂಡ್—ಕ—ಕೊಳ್ಳ್ + ಸಿ—ಗ್ಯ
ಕಾಣು—ಕಂಡ್—ಕ—ಕಾಣ್ + ಸಿ—ಗ್ಯ

ಸ್ + ಗ—ಸ್ + ಕ್—ಕ—ಸ್ + ಗ್ + ಸಿ—ಗ್ಯ
ಸಿಗು—ಸಿಕ್—ಕ—ಸಿಗ್ + ಸಿ—ಗ್ಯ

(z) (i) ಹೇಳು—ಹೇಳ್—ಕ್ಯ—ಹೇಳ್ + ಸಿ—ಗ್ಯ
ಮಾರು—ಮಾರಿ—ಕ್ಯ—ಮಾರ್ + ಸಿ—ಗ್ಯ
ಬ್ + ಯ್—ಬ್ + ಯ್—ಕ್ಯ—ಬ್ + ಯ್ಸಿ—ಗ್ಯ
ಅಡ್ + ಗು—ಅಡ್ + (ಗಿ)—ಕ್ಯ—ಅಡ್ + ಗ್ + ಸಿ—ಗ್ಯ
ಬ್ + ದ್ + ಕು—ಬ್ + ದ್ + (ಕಿ)—ಕ್ಯ—ಬ್ + ದ್ + ಕ್
+ ಸಿ—ಗ್ಯ
ನ್ + ಂಬು—ನ್ + ಂಬಿ—ಕ್ಯ—ನ್ + ಂಬಿ + ಸಿ—ಗ್ಯ

(i) ಒಂದು ಸ್ವರ ಅಥವಾ (ii) ಏ.ಪ. ವಿಧ್ಯರ್ಥಕ ಪು.ಪ್ರ.ದ ಹೊರತು ಉಳಿದ ಪು.ಪ್ರ,ಗಳು ಪರವಾದಲ್ಲಿ ಭೂತನ್ಯೂನಗಳ ಪರದಲ್ಲಿ ಬರುವ ಮೇಲೆ ಹೇಳಿದ ಎಲ್ಲ ಉಪರೂಪಿಕೆಗಳ ಅಂತ್ಯ '—ಳ್'ಕಾರವು ಲೋಪವಾಗದೆ ಉಳಿದಿರುತ್ತದೆ.

(i) ಸ್ವರಪರವಾದ ರೂಪಗಳಿಗೆ ಉದಾ :

ಕುಡಿ—ಕುಡ್ + ಕ್ + ಳ್—ಓ —ಕುಡ್ + ಕ್ + ಳೋ
ಕೇಳು—ಕಿತ್ಗ್ + ಳ್—ಓ —ಕಿತ್ಗ್ + ಳೋ
ಮರಿ—ಮರ್ + ತ್ಗ್ + ಳ್—+ ಲೇ —ಮರ್ + ತ್ಗ್ + ಳ್
—ಲೇ
ಬರಿ—ಬರ್ + ಕ್ + ಳ್—+ ಲೇ —ಬರ್ + ಕ್ + ಳ್—ಲೇ
ಕ್ + ದಿ—ಕಾ + ದ್ + ಕ್ + ಳ್—+ ಲೇ —ಕ್ + ದ್ + ಕ್
+ ಳ್ + ಲೇ

(ii) II ಬ.ವ. ಮತ್ತು IIIದ ಮತ್ತು I ಏ.ವ.ಗಳು ವಿಧ್ಯರ್ಥಕ ಪ್ರತ್ಯಯಗಳು ಪರವಾದ ರೂಪಗಳಿಗೆ ಉದಾ :

IIಬವ.

ಕುಡಿ—ಕುಡ್ + ಕ್ + ಳ್—ರಿ
ಕೇಳು—ಕಿತ್ಗ್ + ಳ್—ರಿ
ಮರಿ—ಮರ್ + ತ್ಗ್ + ಳ್—ರಿ

।ಏ.ವ. ಮತ್ತು ।।। ಪ್ರ.ಪ್ರ.ಗಳು

ಕುಡಿ—ಕುಡ್+ಕ್+ಳ್—ಳಿ
ಕೇಳು—ಕಿತ್‌ಗ್+ಳ್+ಳಿ
ಮರಿ—ಮರ್+ತ್‌ಗ್+ಳ್—ಳಿ
ಕೊಡು—ಕೊಟ್‌ಗ್+ಳ್—ಳಿ

।.ಬ.ವ. ವಿಧ್ಯರ್ಥದ ಪ್ರ.ಪ್ರ.ವಾದ '—ಆನ' ಪರವಾದಲ್ಲಿ '—ಕ್+ಳ್' ಮತ್ತು '—ಗ್+ಳ್'ನ ಅಂತ್ಯ 'ಳ್' ಕಾರವು ಐಚ್ಛಿಕವಾಗಿ 'ಣ್'ಕಾರವಾಗಿ ಮಾರ್ಪಡುತ್ತದೆ.

'ಕೊಡು'—ಕೊಟ್‌ಗ್+ಳ್—ಆನ~ಕೊಟ್‌ಗ್+ಣ್—ಆನ
ಕೂಡು—ಕೂಡಿಕ್ಯಳ್—ಆನ~ಕೂಡಿಕ್ಯಣ್—ಆನ
ಕೇಳು—ಕಿತ್‌ಗ್+ಳ್—ಆನ~ಕಿತ್‌ಗ್+ಣ್—ಆನ
ಮರಿ—ಮರ್+ತ್‌ಗ್+ಳ್—ಆನ~ಮರ್+ತ್‌ಗ್+ಣ್—ಆನ

ಕಾಲವಾಚಕ ಪ್ರತ್ಯಯಗಳು ಪರವಾದಲ್ಲಿ '—ಕ್+ಳ್' ಮತ್ತು '—ಗ್+ಳ್' ರೂಪಗಳ ಅಂತ್ಯ 'ಳ್'ಕಾರವು 'ನ್'ಕಾರವಾಗಿ ಮಾರ್ಪಡುತ್ತವೆ.

ಬರಿ—ಬರ್+ಕ್+—ನ್—ದ್—ಎ
ಕೇಳು—ಕಿತಗ್+—ನ್—ದ್—ಅ
ಬೀಳು—ಬಿದ್‌ಕ್+—ನ್—ದ್—ಲು
ಸುಡು—ಸುಟ್‌ಗ್+—ನ್—ತ್—+ನಿ
ತಿನ್ನು—ತಿಂದ್‌ಕ್+—ನ್—ϕ—ತು
ಹೇಳು—ಹೇಳಿಕ್ಯ—ನ್—ದ್—ರು
ಕಾಸು—ಕಾಸಿಗ್ಯ—ನ್+ದ್—ಲು
ಕ್+ಟ್ಟು—ಕ್+ಟ್ಟಿಗ್ಯ—ನ್—ದ್—ವಿ
ದ್+ಬ್ಬು—ದ್+ಬ್ಬಿಕ್ಯ—ನ್—ತ್—ಇ

ವರ್ತ್ಸ್ಯ (acclusive) ಗಳಿಂದ ಆದಿಯಾದ ಇತರ ಕ್ರಿಯಾ ಪದಗಳ ಪೂರ್ವದಲ್ಲಿ 'ಕೊಳ್ಳು' ಧಾತುವಿನ ಉಪರೂಪಿಕೆಗಳ ಪರದ ಭೂತಸ್ಥಾನ ಪ್ರತ್ಯಯ ಮತ್ತು ಕಾಲವಾಚಕ ಪ್ರತ್ಯಯಗಳು ಲೋಪವಾಗುತ್ತವೆ. ಈ ಉಪರೂಪಿಕೆಗಳ ಅಂತ್ಯ 'ಳ್' ಕಾರವು ತತ್ಸ್ಥಾನಾದಿಯಾದ ವರ್ತ್ಸ್ಯ ಅನುನಾಸಿಕವಾಗಿ ಮಾರ್ಪಡುತ್ತದೆ.

ಕಾಸಿಗ್ಯ+ಂ—(ದು)—ಕುಡಿ
ಹಾಸಿಗ್ಯ+ಂ—(ದು)—ಮಕ್ಕ
ಕರ್+ಕ್+ಂ—(ದು)— ಬಾ
ಬೇಸಿಗ್+ಂ—(ದು)—ತಿನ್ನ
ಹ್+ಸ್+ಸಿಗ್ಯ+ಂ—(ದು)—ಚೆಲ್ಲು

‘ಸ್—’ ಮತ್ತು ‘ಹ್—’ದಂತಹ ಅವರ್ತ್ಸ್ಯಗಳಿಂದ ಮೊದಲಾಗುವ ಕ್ರಿಯಾಪದಗಳ ಪೂರ್ವದಲ್ಲಿ ಭೂತ ನ್ಯೂನಪ್ರತ್ಯಯ ಮಾತ್ರ ಲೋಪವಾಗುತ್ತದೆ.

ಕ್+ಟ್ವಿಗ್ಯ+ಂ—ದ್ (ಉ)—ಸಾಕು
ಹೇಳಿಕ್ಯ+ಂ—ದ್ (ಉ)—ಹೋಗು

(2) ‘—ಕೊಡು’ : ‘—ಕೊಡು’ ಧಾತುವು ತನ್ನ ಪೂರ್ವದಲ್ಲಿ ಬರುವ ಧಾತುವಿಗೆ ‘ಪ್ರಯೋಜನಕರ’ (benefactive) ಅರ್ಥವನ್ನುಂಟು ಮಾಡಿಕೊಡುತ್ತದೆ. ಇದು ಸಕರ್ಮಕ ಕ್ರಿಯಾಪದಗಳ ಪರದಲ್ಲಿ ಬರುತ್ತದೆ.

p) ಹೇಳು—ಹೇಳಿ—ಕೊಡು
ಸಾಕು—ಸಾಕಿ—ಕೊಡು
ಮಾಡು—ಮಾಡಿ—ಕೊಡು
ಹೇರು—ಹೇರಿ—ಕೊಡು

ಮಾರು—ಮಾರಿ—ಕೊಡು, ತೂಗು—ತೂಗಿ—ಕೊಡು
ಕಳ್+ಚು—ಕಳ್+ಚಿ—ಕೊಡು, ಬೆರ್+ಸು—ಬೆರ್+ಸಿ—ಕೊಡು
ಕ್+ಚ್ಚು—ಕ್+ಚ್ಚಿ—ಕೊಡು, ಬಿಚ್ಚು—ಬಿಚ್ಚಿ—ಕೊಡು

q) ಹೆಣಿ—ಹೆಣ್+—ಕೊಡು, ಬೆಳಿ—ಬೆಳ್+—ಕೊಡು
ಅಳಿ—ಅಳ್+—ಕೊಡು, ಕುಡಿ—ಕುಡ್+—ಕೊಡು
ಕ್+ಸಿ—ಕ್+ಸ್+—ಕೊಡು, ಕರಿ—ಕರ್+—ಕೊಡು

r) ಬಿಡು—ಬಿಟ್—ಕೊಡು, ಇಡು—ಇಟ್—ಕೊಡು
ಕೇಳು—ಕೇಳ್—ಕೊಡು, ಹೊರು—ಹೊತ್—ಕೊಡು
ತಿನ್ನು—ತಿಂದ್—ಕೊಡು, ಗೆಲ್ಲು—ಗೆದ್—ಕೊಡು

3) —'ಆಡು' : ಭೂತನ್ಯೂನಗಳ ಪರದಲ್ಲಿ '—ಆಡು' ಧಾತುವಿನ ಕ್ರಿಯಾ ರೂಪಗಳು ಒಂದು ಬಗೆಯ ಪುನರಾವರ್ತನೆಯ ಅರ್ಥವನ್ನು ಕೊಡುತ್ತವೆ.

ಕೊಡು—ಕೊಟ್ಟ್—ಆಡು, ಹೋಗು—ಹೋಕ್ಕ್—ಆಡು
ತ್+ಗಿ—ತ್+ಗ್+ದ್—ಆಡು, ಚೆಲ್ಲು—ಚೆಲ್ಲ್—ಯ್—ಆಡು

4) '—ಬಿಡು' : '—ಬಿಡು' ರೂಪವು 'ಬಿಡು' ಧಾತುವಿನ ವಿಕಲ್ಪರೂಪ. ಭೂತನ್ಯೂನಗಳ ಪರದಲ್ಲಿ '—ಬಿಡು' ಸೇರಿದಾಗ ಕ್ರಿಯಾಪದಕ್ಕೆ ಒಂದು ಬಗೆಯ ಸಂಪೂರ್ಣತೆಯ ಅರ್ಥ ಪ್ರತೀತಿಯುಂಟಾಗುತ್ತದೆ. ಇತರ ಭೂತನ್ಯೂನಗಳನ್ನು ಅನುಸರಿಸಿ ಬರುವ ಸಹಾಯಕ ಕ್ರಿಯಾಪದವಾದ 'ಕೊಳ್' ನ ರೂಪಗಳ ಪರದಲ್ಲಿಯೂ ಎರಡನೆಯ ಸಹಾಯಕ ಕ್ರಿಯಾಪದವಾಗಿ ಬರುತ್ತದೆ. ಇಂಥ ಸಂದರ್ಭಗಳಲ್ಲಿ ಮುಖ್ಯಕ್ರಿಯಾಪದದ ಭೂತನ್ಯೂನವು ಸಕರ್ಮಕಧಾತುವಿನಿಂದ ನಿಷ್ಪನ್ನವಾಗಿರುತ್ತದೆ.

ಕೊಡು—ಕೊಟ್—ಬಿಡು, ತಿನ್ನು—ತಿಂದ್—ಬಿಡು
ಬ್+ರು—ಬ್+ಂದ್—ಬಿಡು, ಹೇಳು—ಹೇಳಿ—ಬಿಡು
ಕ್+ದಿ—ಕ್+ದ್—ಬಿಡು, ಸಾಯ್—ಸತ್—ಬಿಡು

ಇಡು—ಇ+(ಟ್)ಟ್—ಗ್+ಬಿಡು, ಹೊರು—
ಹೊ(ತ್)ತ್—ಗ್+ಂ—ಬಿಡು
ಕಳೆ—ಕಳ್+—ಕ್ಂ+—ಬಿಡು, ಹ+ರಿ—ಹ್+ರ್—+ಂ-ಬಿಡು

ii) 'ಇರು' : i) ಭೂತನ್ಯೂನಗಳ ಪರದಲ್ಲಿ ಬರುವ 'ಇರು' ಧಾತುವಿನ ಉಪರೂಪಿಕೆಗಳು. '—ಇದ್', '—+ದ್' ಮತ್ತು '—φ'. iii ನ.ಲಿಂ.ಏ.ವ. ಪ್ರ.ಪ್ರ.ದ ಪೂರ್ವದಲ್ಲಿ '—φ—' ಮಾತ್ರ ಬರುತ್ತದೆ. ಭೂತನ್ಯೂನ ಮತ್ತು ಅಭೂತ ಪು.ಪ್ರ.ಗಳ ಮಧ್ಯೆ ಬರುವ 'ಇರು' ಧಾತುವಿನ ರೂಪಗಳ ಪರದಲ್ಲಿ ಅಭೂತ ಕಾಲವಾಚಕ ಪ್ರತ್ಯಯವು '—φ—' ಉಪರೂಪಿಕೆಯನ್ನು ಹೊಂದಿರುತ್ತದೆ. ಆದ್ದರಿಂದ iii ನ.ಲಿಂ.ಏ.ವ. ಅಭೂತ ಪು.ಪ್ರ. ಮತ್ತು ಭೂತನ್ಯೂನಗಳ ಮಧ್ಯೆ '—ಇರು' ಧಾತುವೂ ಮತ್ತು ಅಭೂತ ಕಾಲವಾಚಕ ಪ್ರತ್ಯಯವೂ ಎರಡೂ '—φ—' ಉಪರೂಪಿಕೆಗಳನ್ನೇ ಪಡೆದಿವೆ. ಆದ್ದರಿಂದ ಅಂಥ ಪರಿಸರಗಳಲ್ಲಿ iii ನ.ಲಿಂ.ಏ.ವ.ದ ಅಭೂತ ಪು.ಪ್ರ.ವು ನೇರವಾಗಿಯೇ ಭೂತನ್ಯೂನಗಳಿಗೆ ಸೇರುತ್ತದೆ. ಆದರೆ '—ಇರು' ಧಾತುವಿನ ರೂಪಗಳ ನಂತರ [illegible] ಆಗಿರುವ ಭೂತ ಕಾಲದ ಪು.ಪ್ರ.ಗಳ ಪೂರ್ವದಲ್ಲಿ ಮಾತ್ರ ಭೂತಕಾಲವಾಚಕ ಪ್ರತ್ಯಯವು ಪ್ರತ್ಯಕ್ಷವಾಗಿಯೇ ಇರುತ್ತದೆ. ಮತ್ತು ಹಿಂದಿನ ವಿಭಾಗದಲ್ಲಿ ಈಗಾಗಲೇ ತಿಳಿಸಿರುವಂತೆ

iii ನ. ಲಿಂ. ಏ.ವ.ದ ಪು.ಪ್ರ.ದ ಪೂರ್ವದಲ್ಲಿ ಭೂತಕಾಲ ವಾಚಕ ಪ್ರ. ಕೂಡ '—φ' ಉಪರೂಪಿಕೆಯನ್ನು ಹೊಂದಿದೆ.

III ನ. ಲಿಂ. ಏ.ವ.ದ ಹೊರತು ಉಳಿದ ಭೂತ ಮತ್ತು ಅಭೂತ ಎರಡೂ ಪು. ಪ್ರ.ಗಳ ಮತ್ತು ಭೂತನ್ಯೂನಗಳ ಮಧ್ಯೆ '—ಇದ್' ಮತ್ತು '—+ದ್' ಉಪರೂಪಿಕೆಗಳು ಬರುತ್ತವೆ. ಈ ಪರಿಸರಗಳಲ್ಲಿ ಭೂತನ್ಯೂನ ಪ್ರತ್ಯಯವು ಯಾವಾಗಲೂ ಲೋಪವಾಗುತ್ತದೆ.

a) '—ಇ' ಪ್ರತ್ಯಯ ಸಹಿತವಾದ ಭೂತನ್ಯೂನಗಳ ಪರದಲ್ಲಿ '—ಇದ್—' ಸೇರುತ್ತದೆ. ಮತ್ತು ಇಲ್ಲಿ '—+ದ್—' ಸೇರುವುದಿಲ್ಲ.

b) (i) '—ಉ' ಪ್ರತ್ಯಯ ಸಹಿತವಾದ ಭೂತನ್ಯೂನಗಳ ಪರದಲ್ಲಿ '—+ದ್' ಸೇರುತ್ತದೆ.

(ii) ಭೂತ ಮತ್ತು ಅಭೂತ ಎರಡೂ ಪು. ಪ್ರ.ಗಳ ಪೂರ್ವದಲ್ಲಿ II ಪುರುಷದಲ್ಲಿ '—+ದ್' ಮತ್ತು '—ಇದ್—'ಗಳು ಸ್ವಚ್ಛಂದ ಪರಿವರ್ತನದಲ್ಲಿವೆ. ಮತ್ತು I ಪುರುಷದಲ್ಲಿ ಭೂತಕಾಲದ ಪು. ಪ್ರ.ಗಳ ಪೂರ್ವದಲ್ಲಿ ಮಾತ್ರ ಅವು ಸ್ವಚ್ಛಂದ ಪರಿವರ್ತನದಲ್ಲಿವೆ. ಈ ಕೆಳಗಿನ ಉದಾಹರಣೆಗಳನ್ನು ಪರಿಶೀಲಿಸಿ.

1 ಅಭೂತ ಪು. ಪ್ರ.ಗಳ ಪೂರ್ವದಲ್ಲಿ '—ಇರು' ಧಾತುವಿನ ಕ್ರಿಯಾ ರೂಪಗಳಿಂದ ಕೂಡಿದ ಭೂತನ್ಯೂನಗಳು ನಿಶ್ಚಿತ ಅಭೂತಾರ್ಥವನ್ನು ಕೊಡುತ್ತವೆ.

ಉದಾ : (a) ಧಾತು—'ಹೇಳು'

	ಏ.ವ.	ಬ.ವ.
I	ಹೇಳ್—ಇದ್—φ—+ಸಿ,	ಹೇಳ್—ಇದ್—φ—+ವಿ
II	ಹೇಳ್—ಇದ್—φ—ಇ	ಹೇಳ್—ಇದ್—φ—ಈರಿ
III	ಪು. ಹೇಳ್—ಅದ್—φ—ಆನೆ) ಸ್ತ್ರೀ. ಹೇಳ್—ಇದ್—φ—ಅಳೆ)	ಹೇಳ್—ಇದ್—φ—ಆರೆ
	ನ. ಹೇಳ್—φ—φ—ಯ್—+ತು	ಹೇಳ್—ಇದ್—φ—ಆವೆ

b) ಗೆ ಉದಾ : ಧಾತು—'ಕಾಣು'

	ಏ.ವ.	ಬ.ವ.
I	ಕಂಡ್—+ದ್—φ—+ಸಿ	ಕಂಡ್—+ದ್—φ—+ವಿ
II	ಕಂಡ್—+ದ್—φ—ಇ ~	ಕಂಡ್—+ದ್—φ—ಈರಿ ~
	ಕಂಡ್—ಇದ್—φ—ಇ	ಕಂಡ್—ಇದ್—φ—ಈರಿ

III ಪು. ಕಂಡ್—+ದ್—ϕ—ಅನೆ)ಕಂಡ್—ದ್+—ϕ—ಅರೆ
ಸ್ತ್ರೀ. ಕಂಡ್—+ದ್—ϕ—ಅಳ್)
ನ. ಕಂಡ್—ϕ—ϕ—+ತು ಕಂಡ್—+ದ್—ϕ—ಅವೆ

ಆಭೂತ ಪು. ಪ್ರ.ಗಳ ಪೂರ್ವದಲ್ಲಿ 'ನೊಯ್', ಬೇಯ್', 'ಗೆಲ್ಲು', 'ತಿನ್ನ್' ಧಾತುಗಳಿಂದ ನಿಷ್ಪನ್ನವಾದ ಭೂತನ್ಯೂನಗಳ ಪರದಲ್ಲಿ '—+ದ್—' ಮತ್ತು '—ϕ—' ಉಪರೂಪಿಕೆಗಳು ಸ್ವಚ್ಛಂದ ಪರಿವರ್ತನದಲ್ಲಿವೆ. ತತ್ಪರಿಣಾಮವಾಗಿ II ಪುರುಷದಲ್ಲಿ '—+ದ್', '—ಇದ್—' ಮತ್ತು '—ϕ—' ಮೂರೂ ಉಪ ರೂಪಿಕೆಗಳೂ ಸ್ವಚ್ಛಂದ ಪರಿವರ್ತನದಲ್ಲಿರುತ್ತವೆ.

ಉದಾ: 'ತ್+ರು'

	ಏ.ವ.	ಬ.ವ.
I	ತ್+ಂದ್—+ದ್—+ನಿ~	ತ್+ಂದ್—+ದ್—ϕ—+ವಿ~
	ತ್+ಂದ್—ϕ—ϕ—ನಿ	ತ್+ಂದ್—ϕ—ϕ—+ವಿ
II	ತ್+ಂದ್—+ದ್—ϕ—ಇ~	ತ್+ಂದ್—+ದ್—ϕ—ಈರಿ~
	ತ್+ಂದ್—ಇದ್—ϕ—ಇ~	ತ್+ಂದ್—ಇದ್—ϕ—ಈರಿ~
	ತ್+ಂದ್—ϕ—ϕ—ಇ	ತ್+ಂದ್—ϕ—ϕ—ಈರಿ
III	ಪು. ತ್+ಂದ್—+ದ್—ϕ—ಅನೆ~)	
	ತ್+ಂದ್—ϕ—ϕ—ಅನೆ)	ತ್+ಂದ್—+ದ್—ϕ+ಅರೆ
	ಸ್ತ್ರೀ. ತ್+ಂದ್—ϕ—ಅಳ್~)	ತ್+ಂದ್—ϕ—ϕ—ಅರೆ
	ತ್+ಂದ್—ϕ—ಅಳ್)	
	ನ. ಅತ್+ಂನ್—ϕ—ϕ—ತು	ತ್+ಂದ್—+ದ್—ϕ—ಅವೆ
		ತ್+ಂದ್—ϕ—ϕ—ಅವೆ

(ವ್ಯಂ) ಸ್ವವ್ಯಂಸ್ವ ಅಕಾರದ ನಿಯತ ಧಾತುಗಳ ಪರದಲ್ಲಿ ಮತ್ತು 'ನೊಯ್ 'ಬೆಯ್'ಗಳ ಹೊರತು ಉಳಿದ 'ಯ್' ಕಾರಾಂತಧಾತುಗಳ ಪರದಲ್ಲಿ '+ದ್' ಮತ್ತು '—ಇದ್ ಗಳ ಆದಿಸ್ವರವು ಐಚ್ಛಿಕವಾಗಿ ಲೋಪವಾಗುತ್ತದೆ.

ಉದಾ: 'ಕುಣಿ'

ಉದಾ; 'ಕುಣಿ'

	ಏ. ವ.	ಬ. ವ.
I	ಕುಣ್+ದ್—+ದ್—+ನಿ~	ಕುಣ್+ರ್—+ದ್—+ವಿ~
	ಕುಣ್+ದ್—ದ್—+ನಿ	ಕುಣ್+ದ್—ದ್—+ವಿ
II	ಕುಣ್+ದ್—+ದ್—ಇ~	ಕುಣ್+ದ್—+ದ್—ಈರಿ~
	ಕುಣ್+ದ್—ಇದ್—ಇ~	ಕುಣ್+ದ್—ಇದ್—ಈರಿ~
	ಕುಣ್+ದ್—ದ್—ಇ	ಕುಣ್+ದ್—ದ್—ಈರಿ
III ಪು.	ಕುಣ್+ದ್—+ದ್—ಅನೆ~)	
	ಕುಣ್+ದ್—ದ್—ಅನೆ)	ಕುಣ್+ದ್—+ದ್—ಅರೆ
ಸ್ತ್ರೀ	ಕುಣ್+ದ್—+ದ್—ಅಳೆ~)	ಕುಣ್+ದ್—ದ್—ಅರ್
	ಕುಣ್+ದ್—ದ್—ಅಳೆ)	
ನ.	ಕುಣ್=ದ್—ϕ—+ತಿ	ಕುಣ್+ದ್—+ದ್~ಅವೆ~
		ಕುಣ್+ದ್—ದ್—ಅವೆ

ಇಲ್ಲಿ 'ϕ' ಉಪರೂಪಿಕೆಯಾದ ಕಾ.ವಾ.ಪ್ರ.ವನ್ನು ತೋರಿಸಿಲ್ಲ.
ಉದಾ: ಕಾಯ್

	ನ. ವ.	ಬ. ವ.
I	ಕಾದ್—+ದ್—+ನಿ~	ಕಾದ್—+ದ್—+ವಿ~
	ಕಾದ್—ದ್—+ನಿ	ಕಾದ್—ದ್—+ವಿ
II	ಕಾ+—ದ್—ಇ~	ಕಾದ್—+ದ್—ಈರಿ~
	ಕಾದ್—ಇದ್—ಇ~	ಕಾದ್—ಇದ್—ಈರಿ~
	ಕಾದ್—ದ್—ಇ	ಕಾದ್—ದ್—ಈರಿ
III ಪು.	ಕಾದ್—+ದ್—ಅನೆ~)	
	ಕಾದ್—ದ್—ಅನೆ)	ಕಾದ್—+ದ್—ಅರೆ=
ಸ್ತ್ರೀ	ಕಾದ್—+—ಅಳೆ~)	ಕಾದ್—ದ್—ಅರೆ
	ಕಾದ್—ಗ್—ಅಳೆ)	
ನ	ಕಾದ್—ϕ—+ತು	ಕಾದ್—+ದ್—ಅವೆ
		ಕಾದ್—ದ್—ಅವೆ

2. ಭೂತಕಾಲದ ಪ್ರ ಪ್ರ ಗಳ ಪೂರ್ವದಲ್ಲಿ '+ಇರು' ಧಾತುವಿನ ರೂಪಗಳಿಂದ ಕೂಡಿದ ಭೂತನ್ಯೂನಗಳು ನಿಶ್ಚಿತ ಭೂತಕಾಲದ ಅರ್ಥವನ್ನು (past perfect sence) ಕೊಡುತ್ತವೆ.

(a) ಉದಾ : 'ಹೇಳು'—

	ಏ. ವ.	ಬ. ವ.
I	ಹೇಳ್—ಇದ್—ದ್—ಎ	ಹೇಳ್—ಇ(ದ್)—ದ್—ವಿ
II	ಹೇಳ್—ಇದ್—ದ್—ಎ	ಹೇಳ್—ಇ(ದ್)—ದ್—ರಿ
III ಪು.	ಹೇಳ್—ಇದ್—ದ್—ಅ)	ಹೇಳ್—ಇ(ದ್)—ದ್—ರು
ಸ್ತ್ರೀ.	ಹೇಳ್—ಇ(ದ್)—ದ್—ಲು)	
ನ.	ಹೇಳ್—ಇತ್—φ—ತು	ಹೇಳ್ ಇ(ದ್) ದ್ ವು

(b) ಉದಾ : 'ಕಾಣು' —

	ಏ. ವ.	ಬ. ವ.
I	ಕಂಡ್—+ದ್—ಎ~	ಕಂಡ್—+(ದ್)—ದ್—ವಿ~
	ಕಂಡ್—ಇದ್—ದ್—ಎ	ಕಂಡ್—+(ದ್)—ವಿ
II	ಕಂಡ್—+ದ್—ದ್—ಎ~	ಕಂಡ್—+(ದ್)—ದ್—ರಿ~
III ಪು.	ಕಂಡ್—+ದ್—ದ್—ಅ	ಕಂಡ್—+(ದ್)—ದ್—ರಿ
ಸ್ತ್ರೀ.	ಕಂಡ್—+(ದ್)—ದ್—ಲು	
ನ.	ಕಂಡ್—+ತ್—φ—ತು	ಕಂಡ್—(ದ್)—ದ್—ವು

III ನ.ಲಿಂ.ಏ.ವ.ಪು.ಪ್ರ ವಾದ '—ತು'ನ ಪೂರ್ವದಲ್ಲಿ '—+ದ್—' ಮತ್ತು 'ಇದ್—' ಉಪರೂಪಿಕೆಗಳ ಅಂತ್ಯ—'ದ್' ಕಾರವು ಸಂಧಿನಿಯಮದ ಪ್ರಕಾರ '—ತ್' ಕಾರವಾಗಿ ಮಾರ್ಪಡುತ್ತದೆ.

(ii) ಅಭೂತನ್ಯೂನಗಳ ಪರದಲ್ಲಿ ಸೇರುವ '—ಇರು' ಧಾತುವಿನ ಉಪ ರೂಪಿಕೆಗಳು :

I—'ಇದ್—' ಮತ್ತು '+ದ್—' ಉಪರೂಪಿಕೆಗಳು ಅಭೂತನ್ಯೂನಗಳ ಪರದಲ್ಲಿಯೂ ಸೇರುತ್ತವೆ. ಈ ಪರಿಸರಗಳಲ್ಲಿ I ಪುರುಷ ಮತ್ತು II ಪುರುಷಗಳಲ್ಲಿ ಭೂತಕಾಲದ ಪು.ಪ್ರ.ಗಳ ಪೂರ್ವದಲ್ಲಿ '—ಇದ್—' ಮತ್ತು '—+ದ್—' ಗಳು ಸ್ವಚ್ಛಂದ ಪರಿವರ್ತನದಲ್ಲಿರುತ್ತವೆ. ಮತ್ತು III ಪುರುಷತ್ವದಲ್ಲಿ '—+ದ್'

ಮಾತ್ರ ಸೇರುತ್ತದೆ. ಇಲ್ಲಿ ಅಭೂತ ನ್ಯೂನಪ್ರತ್ಯಯವು ಸಾಮಾನ್ಯವಾಗಿ ಲೋಪವಾಗಿರುತ್ತದೆ. ಮತ್ತು '—ಇರು' ಧಾತುವಿನ ರೂಪಗಳಿಂದ ಕೂಡಿದ ಅಭೂತನ್ಯೂನ ಕ್ರಿಯಾಪದಗಳು ನಿಶ್ಚಿತ ಭೂತ ಮುಂದುವರಿಕೆಯ (certain past progressive) ಅರ್ಥವನ್ನು ಕೊಡುತ್ತವೆ.

ಉದಾ : 'ಕಾಣು'—

	ಏ ವ.	ಬ.ವ.
I	ಕಾಣತ್—ಇದ್—ದ್—ಎ	ಕಾಣತ್—ಇ(ದ್)—ದ್—ಪಿ
	ಕಾಣತ್—+ದ್—ದ್—ಎ	ಕಾಣತ್—+(ದ್)—ದ್—ಪಿ
II	ಕಾಣತ್—ಇದ್—ದ್—ಎ	ಕಾಣತ್—ಇ(ದ್)—ದ್—ರಿ
	ಕಾಣತ್—+ದ್—ದ್—ಎ	ಕಾಣತ್—ಇ(ದ್)—ದ್—ರಿ
III	ಪು.ಕಾಣ್ತ್—+ದ್—ದ್—ಅ ಸ್ತ್ರೀ.ಕಾಣತ್—+(ದ್)-ದ್-ಲು	ಕಾಣ್ತ್—+(ದ್)—ದ್—ರು
	ನ. ಕಾಣತ್—+ತ್—ϕ—ತು	ಕಾಣತ್—+(ದ್)—ದ್—ವು

1—ಇರು ಧಾತುವಿನ ಅಭೂತರೂಪಗಳು (a) ಅಭೂತನ್ಯೂನಗಳ ಮತ್ತು (b(ಭೂತನ್ಯೂನಗಳ ಪರದಲ್ಲಿ ಸೇರುತ್ತವೆ. ಆಗ ಅವು ಕ್ರಮವಾಗಿ ನಿಶ್ಚಿತ ಅಭೂತ ಮುಂದುರಿಕೆ ಮತ್ತು ನಿಶ್ಚಿತ ಅಭೂತ ಪೂರ್ಣಾರ್ಥಗಳನ್ನು ಕೊಡುತ್ತವೆ.

ಉದಾ : 'ಕಾಣು'—

	ಏ. ವ.	ಬ. ವ.
I	ಕಾಣಾತ್—ಇರ್ತ್—+ನಿ	ಕಾಣ್ತ್—ಇರ್ತ್—+ವಿ
II	ಕಾಣ್ತ್—ಇರ್ತ್—ಇ	ಕಾಣ್ತ್—ಇರ್ತ್—ಈರಿ
III	ಪು. ಕಾಣ್ತ್—ಇರ್ತ್—ಅನೆ) ಸ್ತ್ರೀ. ಕಾಣ್ತ್—ಇರ್ತ್—ಅಳೆ)	ಕಾಣ್ತ್—ಇರ್ತ್—ಅರೆ
	ನ, ಕಾಣ್ತ್—ಇರ್ತ್—+ತಿ	ಕಾಣ್ತ್—ಇರ್ತ್—ಅವೆ
I	ಕಂಡ್—ಇರ್ತ್—~ಪಿ	ಕಂಡ್—ಇರ್ತ್—+ಪಿ
II	ಕಂಡ್—ಇರ್ತ್—ಇ	ಕಂಡ್~ಇರ್ತ್—ಈರಿ
III	ಪು. ಕಂಡ್—ಇರ್ತ್+ಅನೆ) ಸ್ತ್ರೀ. ಕಂಡ್—ಇರ್ತ್—ಅಳೆ)	ಕಂಡ್—ಇರ್ತ್—ಅರೆ
	ನ. ಕಂಡ್—ಇರ್ತ್—ಅತಿ	ಕಂಡ್—ಇರ್ತ್—ಅವೆ

III (i) ಭೂತನ್ಯೂನಗಳ ಪರದಲ್ಲಿ ಸೇರುವ '—ಹಾಕು' ಧಾತುವಿನ ಕ್ರಿಯಾರೂಪಗಳು,

(a) ಸಕರ್ಮಕ ಭೂತನ್ಯೂನಗಳ ಪರದಲ್ಲಿ ಸೇರುವ '—ಹಾಕು' ಮತ್ತು ಅದರ ಕ್ರಿಯಾರೂಪಗಳು ಒಂದು ಬಗೆಯ ತೀವ್ರತೆಯ ಅರ್ಥವನ್ನು ಕೊಡುತ್ತವೆ.

ಕೊಚ್ಚು—ಕೊಚ್ಚಿ—ಹಾಕು, ನುಂಗು—ನುಂಗಿ—ಹಾಕು
ಮುಚ್ಚು—ಮುಚ್ಚಿ—ಹಾಕು, ಚಿಗಿ—ಚಿಗ್ + ದು—ಹಾಕು
ಕ್ + ಟ್ಟು—ಕ್ + ಟ್ಟಿ—ಹಾಕು, ತ್ + ರು—ತ್ + ಂದು—ಹಾಕು
ಕೂಡು—ಕೂಡಿ—ಹಾಕು, ಬೀಸು—ಬಿಸ್—ಅಕು

ಸ್ವಾಭಾವಿಕ ಕ್ರಮದಂತೆ ಭೂತನ್ಯೂನ ಪ್ರತ್ಯಯವಾದ 'ಉ' ಲೋಪವಾಗುತ್ತದೆ. 'ಬಿಸಾಕು' ರೂಪದಲ್ಲಿ ಭೂತನ್ಯೂನಪ್ರತ್ಯಯವಾದ '—ಇ' ಕೂಡ ಲೋಪವಾಗಿವೆ. 'ಬೀಸು' ಧಾತುವಿನ ಆದ್ಯಕ್ಷರದ ಸ್ವರವು ಹ್ರಸ್ವವಾಗುತ್ತದೆ. ಮತ್ತು 'ಹಾಕು' ಧಾತುವಿನ ಆದಿವ್ಯಂಜನವು ಕೂಡ ಲೋಪವಾಗಿದೆ.

d) '—ಹಾಕು' ಧಾತುವೂ ಮತ್ತು ಅದರ ಕ್ರಿಯಾ ರೂಪಗಳೂ (i) ಕೆಲವು ಭೂತನ್ಯೂನಗಳ ಮತ್ತು (ii) ಅಕರ್ಮಕ ಧಾತುಗಳಿಂದ ನಿಷ್ಪನ್ನವಾದ ಭಾವಾರ್ಥಕಗಳ ಪರದಲ್ಲಿ ಬಂದಾಗ ಪ್ರೇರಣಾರ್ಥವನ್ನು ಕೊಡುತ್ತವೆ.

I) ಭೂತನ್ಯೂನಗಳ ಪರದಲ್ಲಿ '—ಹಾಕು' ಧಾತುವೂ ಮತ್ತು ಅದರ ರೂಪಗಳೂ ಪ್ರೇರಣಾರ್ಥವನ್ನು ಕೊಡುವುದಕ್ಕೆ ಉದಾ :

ಏರು—ಏರ್(ಇ)—ಹಾಕು (ಏರಿಸಿ ಹಾಕು)
ಆರು—ಆರ್(ಇ)—ಹಾಕು (ಆರಿಸಿ ಹಾಕು)
ಉಳ್ಡು—ಉಳ್ಡ್(ಇ)—ಹಾಕು (ಉಳ್ಡಿಸಿ ಹಾಕು)

ಈ ಮೇಲಿನ ಪರಿಸರಗಳಲ್ಲಿ ಭೂತನ್ಯೂನ ಪ್ರತ್ಯಯವು ಐಚ್ಛಿಕವಾಗಿ ಲೋಪವಾಗುತ್ತದೆ.

(ii) ಭಾವಾರ್ಥಕಗಳ ಪರದಲ್ಲಿ '—ಹಾಕು' ಮತ್ತು ಅದರ ರೂಪಗಳು ಪ್ರೇರಣಾರ್ಥವನ್ನು ಕೊಡುವುದಕ್ಕೆ ಉದಾ :

ಇಲ್ಲಿ ಭಾವಾರ್ಥಕ ಪ್ರತ್ಯಯವು ಸಾಮಾನ್ಯವಾಗಿ ಶೂನ್ಯೋಪರೂಪಿಕೆಯನ್ನು ಹೊಂದಿದೆ. ಮತ್ತು 'ಸಿಗು' ಧಾತುವಿನ ಪರದಲ್ಲಿ ಅದು '—ಅ' ಆಗಿ ಮಾರ್ಪಡುತ್ತದೆ.

ತ್+ಗ್+ಲು—ತ್+ಗ್+ಲ್ (ಉ) ϕ—ಹಾಕು (ತಗಲಲು ಹಾಕು)
ತೂಗು—ತೂಗ್ (ಉ)—ϕ—ಹಾಕು (ತೂಗಲು ಹಾಕು)
ಸಾಗು—ಸಾಗ್ (ಉ)—ϕ ಹಾಕು (ಸಾಗಲು ಹಾಕು)
ಸಿಗು—ಸಿಗ್ (ಉ)—ಅ—ಹಾಕ—ಸಿಗಹಾಕು (ಸಿಗಲು ಹಾಕು)
ಒಣ್+ಗು—ಒಣ (ಗು)—ϕ—ಹಾಕು (ಒಣಗಲು ಹಾಕು)

'ಒಣಗು' ಧಾತುವಿನ ಅಂತ್ಯಾಕ್ಷರವು ಲೋಪವಾಗುತ್ತದೆ. ಮತ್ತು ಮಧ್ಯದ ಅಕ್ಷರದ ಸ್ವರವಾದ+ಕಾರವು 'ಅ' ಕಾರವಾಗಿ ಮಾರ್ಪಡುತ್ತದೆ.

'ಮುಳ್+ಗು' ಧಾತುವಿನ ಭಾವಾರ್ಥಕದ ಪರದಲ್ಲಿ—'ಹಾಕು' ಧಾತುವಿನ ರೂಪಗಳು ಆತ್ಮಾರ್ಥವನ್ನು ಕೊಡುತ್ತವೆ.

ಮುಳ್+ಗು—ಮುಳ್+ಗ್ (ಉ)—ϕ—ಹಾಕು (ತಾನೇ ಮುಳುಗುವುದು)

IV '—ಹೋಗು' ; (i) ಭೂತನ್ಯೂನಗಳ ಪರದಲ್ಲಿ '—ಹೋಗು' ಧಾತುವಿನ ರೂಪಗಳು ಒಂದು ಸಂಪೂರ್ಣತೆಯ ಅರ್ಥವನ್ನು ಕೊಡುತ್ತವೆ.

ಬೀಳ್—ಬಿದ್ದ್—ಹೋಗು, ಮುರಿ—ಮುರ್+ದ್—ಹೋಗು
ಮರಿ—ಮರ್+ತ್—ಹೋಗು, ಕರ್+ಗು—ಕರ್+ಗಿ—ಹೋಗು
ಅಡ್+ಗು—ಅಡ್+ಗಿ—ಹೋಗು, ಆಗು—ಆಗಿ—ಹೋಗು
ಬ್+ಗ್ಗು—ಬ್+ಗ್ಗಿ—ಹೋಗು, ಒಗ್ಗು—ಒಗ್ಗಿ—ಹೋಗು

(ii) ಭಾವಾರ್ಥಕ ಪ್ರತ್ಯಯದ ಉಪರೂಪಿಕೆಗಳಲ್ಲಿ '—ಅಕೆ' ರೂಪವು '—ಹೋಗು' ಸಹಾಯಕ ಕ್ರಿಯಾಪದದ ಪೂರ್ವದಲ್ಲಿ ಬರುತ್ತದೆ.

ಬ್+ರು—ಬ್+ರ್—ಅಕ್ (ಎ)—ಹೋಗು
ತ್+ರು—ತ್+ರ್—ಅಕ್ (ಎ)—ಹೋಗು
ತಿನ್ನು—ತಿನ್ನ್—ಅಕ್ (ಎ)—ಹೋಗು
ಹೇಳ್—ಹೇಳ್—ಅಕ್ (ಎ)—ಹೋಗು
ಹೋಗು—ಹೋಗ್—ಅಕ್ (ಎ)—ಹೋಗು

ಇಲ್ಲಿ ಈ ಕ್ರಿಯಾಪದವನ್ನು ಬಳಸುವವನ ಅಭಿಪ್ರಾಯದಲ್ಲಿ ಈ ಕ್ರಿಯೆ ನಡೆಯುವುದು ಅನವಶ್ಯಕ ಎಂಬ ಅರ್ಥ ಪ್ರತೀತಿಯುಂಟಾಗುತ್ತದೆ.

(iii) ಇನ್ನೊಂದು ಸಹಾಯಕ ಕ್ರಿಯಾಪದವಾದ 'ಕೊಳ್ಳು' ಧಾತುವಿನ ರೂಪಗಳಿಂದ ಅನುಸರಿಸಲ್ಪಡುವ ಭೂತನ್ಯಾಸಗಳ ಪರದಲ್ಲಿ '—ಹೋಗು' ಧಾತುವಿನ ಕ್ರಿಯಾ ರೂಪಗಳು ಎರಡನೆಯ ಸಹಾಯಕ ಕ್ರಿಯಾಪದವಾಗಿ ವರ್ತಿಸುತ್ತದೆ.

ಬೀಡು—ಬಿ (ಟ್) ಟ್—ಗ—ಹೋಗು
ಕ್+ಚ್ಚು—ಕ್+ಚ್ಚಿ+ಗ—ಹೋಗು
ಕೇಳು—ಕೇಳಿ—ಕ್ಯ—ಹೋಗು
ಸಾಕು—ಸಾ (ಕಿ)—ಕೃ—ಹೋಗು
ಸಾರು—ಸಾರಿ—ಕ್ಕ—ಹೋಗು
ಕೊಳ್ಳು—ಕೆಂಡ್—ಕ್ಯ—ಹೋಗು

ಈ ಕೆಳಗಿನ V ಮತ್ತು VI ನೆಯ ಗುಂಪಿನಲ್ಲಿ ಸೇರಿರುವ ಬಹುತೇಕ ಕ್ರಿಯಾಪದಗಳು ಒಂದಲ್ಲ ಒಂದು ಧಾತುವಿನ ಪೂರ್ಣ ಕ್ರಿಯಾಪದದ ರೂಪಗಳು. ಅಂಥ ಧಾತುಗಳು ಇತರ ಆಕೃತಿಯ ಘಟಕಗಳನ್ನು ಹೊಂದಿಲ್ಲ. V ನೆಯ ಗುಂಪಿನ ಬಹುತೇಕ ರೂಪಗಳು '—ϕ—' ಉಪರೂಪಿಕೆಯಿಂದ ಕೂಡಿದ ಭಾವಾರ್ಥಕ ಕ್ರಿಯೆಗಳ ಪರದಲ್ಲಿ ಸೇರುತ್ತವೆ.

V (i) a) '—ಬೇಡು' ಧಾತುವಿನ '—ಬ್+ಕು' ಮತ್ತು '—ಬೇಕು' ಉಪರೂಪಿಕೆಗಳ ವಿಕಲ್ಪ ರೂಪಗಳು ನಿಷ್ಪನ್ನವಾಗಿವೆ. ಭಾವಾರ್ಥಕ ಕ್ರಿಯೆಗಳ ಪರದಲ್ಲಿ ಬಂದಾಗ ಅವು ಅವಶ್ಯಕತೆಯ ಅರ್ಥವನ್ನು ಕೊಡುತ್ತವೆ. ಅವ ಧಾರಣೆಯ ಅವ್ಯಯವಾದ '—ಏ'ಯಿಂದ ಕೂಡಿದ ಭಾವಾರ್ಥಕಗಳ ಪರದಲ್ಲಿ ಮಾತ್ರ '—ಬೇಕು' ಸೇರುತ್ತದೆ. ಮತ್ತು '—ಬ್+ಕು' ಇತರತ್ರ ಸೇರುತ್ತದೆ. ಈ ವಿಕಲ್ಪವು ಆಕೃತಿಮಾ ರಚನಾಬದ್ಧವಾಗಿವೆ (morphologically conditioned).

'ಬ್+ಕು'ಗೆ ಉದಾ :

ಹೋಗು—ಹೋ(ಗ್)—ಬ್+ಕು
ತಿಳಿ—ತಿಳೀ—ಬ್+ಕು
ತಿದ್ದು—ತಿ(ದ್)—ಬ್+ಕು

ಈ ಪರಿಸರದಲ್ಲಿ 'ಹೋಗು' ಧಾತುವಿನ ಅಂತ್ಯಾಕ್ಷರವು ಐಚ್ಛಿಕವಾಗಿ ಲೋಪವಾಗತ್ತದೆ.

'—ಬೇಕು' ಗೆ ಉದಾ :

ಹೋಗು—ಹೋಗ್—ಲ್—ಏ—ಬೇಕು
ತಿದ್ದು—ತಿ(ದ್)ದ್—ಲ್—ಏ—ಬೇಕು
ತಿಳಿ—ತಿಳೀ—ಲ್—ಏ—ಬೇಕು

b) '—ಬ್+ಯ್ದು'~'—ಬ್+ವ್ದು' 'ಬ್ರು' ಧಾತುವಿನಿಂದ ನಿಷ್ಪನ್ನ ವಾದ 'ಬ್+ಯ್ದು' ಮತ್ತು '—ಬ್+ವ್ದು'ಗಳು III ನ.ಲಿಂ., ಏ.ವ. ಅಭೂತ ಕಾಲದ ಪೂರ್ಣಕ್ರಿಯಾಪದಗಳು. ಭಾವಾರ್ಥಕಗಳ ಪರದಲ್ಲಿ ಅವು ಸ್ವಚ್ಛಂದ ಪರಿವರ್ತನದಲ್ಲಿವೆ. ಅವು ಅನುಮತಿಯ ಅರ್ಥವನ್ನು ಕೊಡುತ್ತವೆ.

ಹೋಗು—ಹೋಗ್—ಬ್+ಯ್ದು ~ ಹೋಗ್—ಬ್+ವ್ದು
ಬ್+ರು—ಬ್+ರ್—ಬ್+ಯ್ದು ~ ಬ್+ರ್—ಬ್+ವ್ದು
ಕೊಡು—ಕೊಡ್—ಬ್+ಯ್ದು ~ ಕೊಡ್—ಬ್+ವ್ದು
ತ್+ರು—ತ್+ರ್—ಬ್+ಯ್ದು ~ ತ್+ರ್—ಬ್+ವ್ದು
ತಿನ್ನು—ತಿ(ನ್)ದ್—ಬ್+ಯ್ದು—ತಿ(ನ್)ನ್—ಬ್+ವ್ದು

c) '—ಬಾಡ' : 'ಬೇಡು' ಧಾತುವಿನ ನಿಷ್ಪನ್ನ ರೂಪವಾದ '—ಬಾಡ' ಎಂಬುದು II ಏ.ವ. ನಿಷೇಧಾರ್ಥಕ ರೂಪವಾಗಿದೆ. ಅದಕ್ಕೆ ಸಂವಾದಿಯಾದ ಬ.ವ. ರೂಪವು '—ಬಾಡ್ರಿ' ಮತ್ತು III ನ.ಲಿಂ.ಏ.ವ.ದ ರೂಪವಾದ '—ಬಾಡ್ದು' ಎಂಬುದು ಲಿಂಗವಚನ, ಪುರುಷ ಭೇದವಿಲ್ಲದೆ ಪ್ರಯೋಗ ವಾಗುತ್ತದೆ. ಮಾತನಾಡು ವವನ ಅಭಿಪ್ರಾಯದಲ್ಲಿ ಆಗ ಕೂಡದಾದ ಒಂದು ಕ್ರಿಯೆಯ ಬಗ್ಗೆ ಇದು ನಿಶ್ಚಿತ ವಿಧ್ಯರ್ಥವನ್ನು ಕೊಡುತ್ತದೆ.

ಉದಾ : 'ಹೋಗು'

	ಏ.ವ.	ಬ.ವ.
I	ಹೋಗ್—ಬಾಡ್ದು	ಹೋಗ್—ಬಾಡ್ದು
II	ಹೋಗ್—ಬಾಡ್ದು ~ ಹೋಗ್—ಬಾಡ	ಹೋಗ್—ಬಾಡ್ದು ಹೋಗ್—ಬಾಡ್ರಿ
III	ಪು. ಹೋಗ್—ಬಾಡ್ದು) ನ. ಹೋಗ್—ಬಾಡ್ದು)	ಹೋಗ್—ಬಾಡ್ದು

c) '—ಬಲ್ಲ' : ಭಾವಾರ್ಥಕಗಳ ಪರದಲ್ಲಿ '—ಬಲ್' ಧಾತುವಿನ ಪೂರ್ಣ ಕ್ರಿಯಾರೂಪಗಳು ಸಾಮರ್ಥ್ಯದ ಅರ್ಥವನ್ನೇ ಕೊಡುತ್ತದೆ.

ಬ್ + ರು—ಬ್ + ರ್—ಬಲ್ಲೆ
ಹೇಳು—ಹೇಳ್—ಬಲ್ಲೆ
ಆಗು—ಆಗ್—ಬಲ್ರಿ
ಕುಣಿ—ಕುಣೀ—ಬಲ್ಲು
ಕಾಣು—ಕಾಣ್—ಬಲ್ವು

ɵ) '—ಕೂಡ್ದು' : ಇದು 'ಕೂಡು' ಧಾತುವಿನ ||| ನ.ಲಿಂ.ಏ.ವ.ದ. ನಿಷೇದಾರ್ಥಕ ರೂಪ. ಆಡುವವನ ಅಭಿಪ್ರಾಯದಲ್ಲಿ ಮಾಡಕೂಡದಾದ ಕಾರ್ಯದ ಬಗ್ಗೆ ಒಂದು ನಿಶ್ಚಿತ ನಿಷೇದಾರ್ಥವನ್ನು ಕೊಡುತ್ತದೆ. '—ϕ—' ಮತ್ತು '—ಅಕೆ—' ಉಪರೂಪಿಕೆಗಳಿಂದ ಕೂಡಿದ ಭಾವಾರ್ಥಗಳ ಪರದಲ್ಲಿ ಇದು ಸೇರುತ್ತದೆ.

ಹೇಳು—ಹೇಳ್—ϕ—ಕೂಡ್ದು ~ ಹೇಳ್—ಅಕೆ (ಎ)—ಕೂಡ್ದು
ಕಾಣು—ಕಾಣ್—ϕ—ಕೂಡ್ದು ~ ಕಾಣ್—ಅಕೆ (ಎ)—ಕೂಡ್ದು
ಮುಚ್ಚು—ಮು (ಚ್) ಚ್—ಕೂಡ್ದು ~ ಮುಚ್ಚ್—ಅಕೆ(ಎ)—ಕೊಡ್ದು
ಸಿಗು—ಸಿಗ್—ϕ—ಕೂಡ್ದು ~ ಸಿಗ್—ಅಕ್(ಎ)—ಕೂಡ್ದು

ii) ಮೇಲೆ ಹೇಳಿದ ರೂಪಗಳು '—ಕೊಳ್ಳು ಧಾತುವಿನಿಂದ ನಿಷ್ಪನ್ನವಾದ ಇನ್ನೊಂದು ಸಹಾಯಕ ಕ್ರಿಯಾರೂಪದಿಂದ ಅನುಸರಿಸಲ್ಪಟ್ಟ ಭೂತನ್ಯೂನಗಳ ಪರದಲ್ಲಿಯೂ ಸೇರುತ್ತದೆ.

a) 'ತಿಳಿ'—ತಿಳ್ + —ಕ—ಬ್ + ಕು

ತಿಳ್ + —ಕ್ + ಳ್—ಳ್—ಏ—ಬೇಕು
ತೆಳ್ + —ಕ್ + ಳ್—ಳ್—ಏ—ಬೇಕು

ಸೇರು—ಸೇರಿ—ಕ್ಯ—ಬ್ + ಕು

ಸೇರಿ—ಕ್ಯ—ಣ್—ಆಕೇ—ಬೇಕು
ಸೇರಿ—ಕ್ಯ + ಳ್—ಳ್—ಏ—ಬೇಕು

b) 'ತಿಳಿ'—ತಿಳ್ + ಕ—ಬ್ + ಯ್ದು ತಿಳ್ + ಕ—ಬ್ + ವ್ದು
'ತಿದ್ದು'—ತಿದ್ದಿ—ಕ್ಯ—ಬ್ + ಯ್ದು + ತಿದ್ದಿ—ಕ್ಯ—ಬ್—ವ್ದು
ಸೇರು—ಸೇರಿ—ಕ್ಯ—ಬ್ + ಯ್ದು ಸೇರಿ—ಕ್ಯ—ಬ್ + ವ್ದು

c) ತಿಳಿ—ತಿಳ್+—ಕ—ಬಾಡ
ತಿದ್ದು—ತಿದ್ದಿ—ಕ್ಯ—ಬಾಡ್ದು
ಸೇರು—ಸೇರಿ—ಕ್ಯ—ಬ್ಯಾಡ್ರಿ

d) ತಿಳಿ—ತಿಳ್+—ಕ—ಬಲ್ಲ
ತಿದ್ದು—ತಿದ್ದಿ—ಕ್ಯ—ಬಲ್ಲ
ಸೇರು—ಸೇರಿ—ಕ್ಯ—ಬಲ್ಲ
ಕಾಣು—ಕಂಡ್—ಕ—ಬಲ್ರು

e) ಹೇಳು—ಹೇಳಿ—ಕ್ಯ—ಕೂಡ್ದು
ಕಾಣು—ಕಂಡ್—ಕ—ಕೂಡ್ದು
ಮುಚ್ಚು—ಮುಚ್ಚಿ—ಗ್ಯ—ಕೂಡ್ದು
ಸಿಗು—ಸಿ (ಕ್) ಕ್—ಕ—ಕೂಡ್ದು
ಬಳ್+ಸು—ಬಳ್+ಸಿ—ಗ್ಯ—ಕೂಡ್ದು

vi) '—ಅಗ್ದು': ಇದು '—ಅಗು' ಧಾತುವಿನ III ನ.ಲಿಂ.ಏ.ವ.ದ ನಿಷೇಧಾರ್ಥಕ ರೂಪ. ಇದು '—ಅಕೆ' ಉಪರೂಪಿಕೆಯಿಂದ ಕೂಡಿದ ಭಾವಾರ್ಥಗಳ ಅನಂತರ ಸೇರುತ್ತದೆ. ಇದು ಆಡುವವನ ಅಭಿಪ್ರಾಯದಲ್ಲಿ ನಡೆಯಕೂಡದ ಒಂದು ಕ್ರಿಯೆಯ ಬಗ್ಗೆ ಸೌಮ್ಯವಾದ ಅಜ್ಞಾರ್ಥವನ್ನು ಕೊಡುತ್ತದೆ.

ಹೇಳು—ಹೇಳ್—ಅಕ್ (ಎ)—ಅಗ್ದು
ಕಾಣು—ಕಾಣ್—ಅಕ್ (ಎ)—ಅಗ್ದು
ಮುಚ್ಚು—ಮುಚ್ಚ್—ಅಕ್ (ಎ)—ಅಗ್ದು
ಸಿಗ್ಗು—ಸಿಗ್—ಅಕ್ (ಎ)—ಅಗ್ದು
ಬಳ್+ಸು—ಬಳ್+ಸ್—ಅಕ್ (ಎ)—ಅಗ್ದು

ಖ್ಯಾತ ಇತಿಹಾಸಕಾರ ಹೆನ್ರಿ ಹೆರಾಸ್

—ಡಾ|| ಎಂ. ವಿ. ಶ್ರೀನಿವಾಸ್

ಭಾರತೀಯ ಇತಿಹಾಸ ಮತ್ತು ಸಂಸ್ಕೃತಿಯ ಅಧ್ಯಯನಕ್ಕೆ ವಿದೇಶೀಯರು ನೀಡಿರುವ ಕೊಡುಗೆ ಬಹು ಅಮೂಲ್ಯವಾದದ್ದು. ನಮ್ಮ ನಾಡಿನ ಸಂಸ್ಕೃತಿಯ ಪ್ರಭಾವಕ್ಕೆ ಒಳಗಾಗಿಯೋ ಅಥವಾ ಧಾರ್ಮಿಕ, ರಾಜಕೀಯ ಉದ್ದೇಶಗಳಿಂದಲೋ ಭಾರತಕ್ಕೆ ಬಂದ ಅನೇಕ ಐರೋಪ್ಯ ವಿದ್ವಾಂಸರು ಇತಿಹಾಸ, ಸಮಾಜಶಾಸ್ತ್ರ, ಭಾಷಾಶಾಸ್ತ್ರ, ಸಾಹಿತ್ಯ, ದರ್ಶನ ಮುಂತಾದ ಕ್ಷೇತ್ರಗಳಲ್ಲಿ ವಿಪುಲವಾದ ಸಾಧನೆಯನ್ನು ಮಾಡಿದ್ದಾರೆ. ಕೆಲವು ಕ್ಷೇತ್ರಗಳಲ್ಲಿ ಅವರು ಮೊದಲಿಗರಾದರೆ ಮತ್ತೆ ಕೆಲವು ಕ್ಷೇತ್ರಗಳಲ್ಲಿ ಮಾರ್ಗಪ್ರವರ್ತಕರಾಗಿದ್ದಾರೆ. ಕ್ರೈಸ್ತಪಾದ್ರಿಗಳಂತೂ ಭಾರತೀಯ ಸಾರಸ್ವತ ಲೋಕವನ್ನು ಶ್ರೀಮಂತಗೊಳಿಸಲು ಅನೇಕ ವಿಧಗಳಲ್ಲಿ ಶ್ರಮಿಸಿದ್ದಾರೆ. ನಮ್ಮ ನಾಡಿನ ಪ್ರಾಚೀನ ಸಂಸ್ಕೃತಿಯ ವೈಜ್ಞಾನಿಕ ಅಧ್ಯಯನವನ್ನು ಕೈಕೊಂಡ ಪಾಶ್ಚಿಮಾತ್ಯ ವಿದ್ವಾಂಸರು ನಮ್ಮ ಸಂಸ್ಕೃತಿ ಸಾಹಿತ್ಯಗಳಲ್ಲಿ ಆಸಕ್ತರಾಗಿ ಅದರ ಹಿರಿಮೆಯನ್ನು ಅರಿಯಲು ಪ್ರಯತ್ನಿಸಿದಂತೆ ಅದನ್ನು ಪ್ರಕಟಿಸಲು ಸತತವಾಗಿ ಶ್ರಮಿಸಿದರು. ಕಾಲಿನ್ ಮೆಕೆಂಜಿ, ಬುಕಾನನ್, ಬಿ. ಎಲ್. ರೈಸ್, ಮೊದಲಾದವರು ನಮ್ಮ ದೇಶದ ಮೂಲೆ-ಮೂಲೆಗಳಲ್ಲಿ ಸಂಚರಿಸಿ, ಹೊಸ-ಹೊಸ ವಿಷಯಗಳನ್ನು ಚಾರಿತ್ರಿಕ ಆಧಾರಗಳನ್ನು ಸಂಗ್ರಹಿಸಿದರು. ಅದರಂತೆಯೇ ಭಾರತದಲ್ಲಿ ಇತಿಹಾಸ ಶಾಸ್ತ್ರದ ಬೆಳವಣಿಗೆಗೆ ಫಾದರ್ ಹೆನ್ರಿ ಹೆರಾಸ್ ಅವರ ಸೇವೆ ಅಮೂಲ್ಯವಾದುದಾಗಿದೆ.

ಭಾರತದ ಪ್ರಾಚೀನ ಇತಿಹಾಸ, ಕರ್ನಾಟಕದ ಇತಿಹಾಸ, ತಮಿಳುನಾಡಿನ ಇತಿಹಾಸ, ಭಾರತದಲ್ಲಿ ಕ್ರೈಸ್ತಧರ್ಮದ ಇತಿಹಾಸ ಮೊದಲಾದ ಕ್ಷೇತ್ರಗಳಲ್ಲಿ ಉತ್ಕೃಷ್ಟವಾದ ಸೇವೆಯನ್ನು ಮಾಡಿದ ಹೆರಾಸ್‌ರವರು, ನಮ್ಮ ನಾಡಿನಲ್ಲಿ ಇತಿಹಾಸ ಬೆಳೆಯಲು ಬಹುಮಟ್ಟಿಗೆ ಶ್ರಮಿಸಿದ್ದಾರೆ.

ಸ್ಪೇಯಿನ್ ದೇಶದ ಭಾರ್ಸಿಲೋನಾದಲ್ಲಿ ಹುಟ್ಟಿದ 1888) ಹೆರಾಸ್ "ಸೊಸೈಟಿ ಆಫ್ ಜೀಸಸ್" ಸಂಘಕ್ಕೆ ಸೇರಿ 1920 ರಲ್ಲಿ ಕ್ರೈಸ್ತ ಪಾದ್ರಿಯಾದರು 1922 ರಲ್ಲಿ ಮುಂಬಯಿಗೆ ಬಂದು ಅಲ್ಲಿ ಸಂತ ಜೇವಿಯರ್ ಕಾಲೇಜಿನಲ್ಲಿ ಅಧ್ಯಾಪಕವೃತ್ತಿಯನ್ನು ಪ್ರಾರಂಭಿಸಿದರು. ಯೂರೋಪಿನಿಂದ ಅದೇ ತಾನೇ ಬಂದಿದ್ದ ಹೆರಾಸರಿಗೆ ನಮ್ಮ

ದೇಶದ ಇತಿಹಾಸದ ಪೂರ್ಣಪರಿಚಯವಿರಲಿಲ್ಲ. ಮೂವತ್ತು ವರ್ಷದಾಟಿದ್ದ ಫಾ|| ಹೆರಾಸ್ ಜೇವಿಯರ್ ಕಾಲೇಜಿಗೆ ನೇಮಕಗೊಂಡಾಗ, ಅಲ್ಲಿನ ಪ್ರಿನ್ಸಿಪಾಲರು ಅವರನ್ನು ಕೇಳಿದರು. "ನೀವು ಯಾವ ವಿಷಯವನ್ನು ಬೋಧಿಸುವಿರಿ ?" "ಭಾರತದ ಇತಿಹಾಸ" ಎಂದರು ಹೆರಾಸ್. "ಆ ವಿಷಯ ನಿಮಗೆಷ್ಟು ಗೊತ್ತಿದೆ" ಎಂದರು ಪ್ರಿನ್ಸಿಪಾಲರು. ಹೆರಾಸರು ಉತ್ತರವಿತ್ತರು: "ನನಗೇನೂ ಗೊತ್ತಿಲ್ಲ. ನಾನು ಓದಿ, ಆನಂತರ ಅದನ್ನು ಬೋಧಿಸುತ್ತೇನೆ." ಫಾ|| ಹೆನ್ರಿ ಹೆರಾಸ್ ಈ ಕಾರ್ಯವನ್ನು ತಮ್ಮ ಜೀವನದುದ್ದಕ್ಕೂ ಮಾಡುತ್ತಾ ಬಂದರು. ಹೀಗೆ ಭಾರತದ ಇತಿಹಾಸದ ಅಭ್ಯಾಸ ಅದರ ಬೋಧೆ ಶೋಧನೆ ಇದಕ್ಕಾಗಿ ತಮ್ಮ ಜೀವನವನ್ನು ಮೀಸಲಾಗಿಟ್ಟರು–ಹೆರಾಸ್. ಹಲವಾರು ವಿದೇಶೀಯ ವಿದ್ವಾಂಸರಿಗಾದಂತೆ ಭಾರತವು ಅವರ ಅಭ್ಯಾಸದ ವಿಷಯವಾಗಿ ಮಾತ್ರ ಉಳಿಯದೆ ಅವರ ಪ್ರೀತಿಯ ವಸ್ತುವಾಗಿ ಬೆಳೆಯಿತು. ಈ ದೇಶದ ಇತಿಹಾಸ, ಸಂಸ್ಕೃತಿ, ಅವರ ಆಸಕ್ತಿಯನ್ನು ಕೆಳೆದವು. ಭಾರತದ ನಾಗರಿಕತೆಯ ಒಂದೊಂದು ಅಂಶ, ಅದರ ಬೆಳವಣಿಗೆಯ ಘಟ್ಟ, ಅವರ ಕುತೂಹಲವನ್ನು ಕೆರಳಿಸುತ್ತಾ ಹೋಯಿತು. ಇದೇ ಹಾದಿಯಲ್ಲಿ ಮುನ್ನಡೆದು ಹೆರಾಸ್ ಅನೇಕ ವಿಷಯಗಳಲ್ಲಿ ಸಂಶೋಧನೆ ನಡೆಸಿದರು. ಗ್ರಂಥಗಳನ್ನೂ ಲೇಖನಗಳನ್ನೂ ಬರೆದರು.

ಭಾರತದ ಇತಿಹಾಸದ ಗಣಿಯಲ್ಲಿ ಇಳಿದು ಸಂಶೋಧನೆ ನಡೆಸಲು ಪ್ರಾರಂಭಿಸಿದಾಗ ಅಲ್ಲಿ ಬೆಳಕಿಗೆ ಬರಬೇಕಾದ ಅನರ್ಘ್ಯ ರತ್ನಗಳಿರುವುದೆಂಬುದನ್ನು ಹೆರಾಸ್ ಕಂಡುಕೊಂಡಂತೆ ಭಾರತದ ಇತಿಹಾಸ ಶೋಧನೆ ಎಷ್ಟು ಕಷ್ಟವೆಂಬುದನ್ನೂ ಅರಿತುಕೊಂಡರು. ಈ ಕಾರಣದಿಂದ ನಮ್ಮ ದೇಶದ ಚರಿತ್ರೆಯನ್ನು ಆಳವಾಗಿ ಅಭ್ಯಾಸ ಮಾಡಿ ತಮ್ಮ ಜತೆ ಸಂಶೋಧನೆ ಮಾಡಲು ಅವರು ಸಮರ್ಥ ಸಂಶೋಧಕರನ್ನೂ ತಯಾರಿಸುವುದು ಅಗತ್ಯವೆಂಬುದನ್ನು ಮನಗಂಡರು. ಈ ಉದ್ದೇಶದಿಂದ ಇತಿಹಾಸದ ಅಧ್ಯಯನ ನಡೆಸುತ್ತಿದ್ದಂತೆ ಅದರ ಸಂಶೋಧನೆ ಬೋಧನೆ ರಚನೆಗಳನ್ನೂ ಮಾಡುವ ವಿಧಾನಗಳನ್ನು ಕುರಿತು ಗ್ರಂಥ ಮತ್ತು ಲೇಖನ ಬರೆದರು. "ಮೊಘಲ್ ಇತಿಹಾಸ ಮತ್ತು ಕ್ರೈಸ್ತಪಾದ್ರಿಗಳು" ಎನ್ನುವುದು ಅವರ ಮೊದಲ ಕೃತಿ. ಆದರೆ ಅದೇ ಸಮಯದಲ್ಲಿ ಹೆರಾಸ್‌ರವರು "ಇತಿಹಾಸದ ಬರವಣಿಗೆ" ಎನ್ನುವ (The writing of History) ಉಪಯುಕ್ತ ಪುಸ್ತಕವನ್ನು ಬರೆದು ತಮ್ಮ ವಿದ್ಯಾರ್ಥಿಗಳಿಗೆ ಇತಿಹಾಸದ ಅಭ್ಯಾಸವು ಸುಲಭವಾಗುವಂತೆ ಮಾಡಲು ಪ್ರಯತ್ನಿಸಿದರು.

ಇತಿಹಾಸ ಸಂಶೋಧನ ಕಾರ್ಯವನ್ನು ಬಹುಗಂಭೀರವಾಗಿ ಕೈಗೊಂಡ ಹೆರಾಸ್ ಅವರಿಗೆ ಈ ಕ್ಷೇತ್ರದಲ್ಲಿ ಸಾಕಷ್ಟು ಕಾರ್ಯವಾಗಬೇಕಾಗಿದೆಯೆಂಬುದು ಅರಿವಾಯಿತು. ಕೆಲವು ಸಂಸ್ಥೆಗಳು ವ್ಯಕ್ತಿಗಳು ಈ ಕಾರ್ಯವನ್ನು ಕೈಗೊಂಡಿದ್ದರು. ಮುಂಬೈಯಲ್ಲಿ

“ರಾಯಲ್ ಏಷ್ಯಾಟಿಕ್ ಸೊಸೈಟಿ” ಎಂಬ ಪ್ರಸಿದ್ಧ ಸಂಶೋಧನಾ ಸಂಸ್ಥೆ, ಬಹು ಉಪಯುಕ್ತವಾದ ಕಾರ್ಯವನ್ನು ಮಾಡಿದ್ದಿತು. ಭೂಲರ್, ಫ್ಲೀಟ್, ಭಂಡಾರ್‌ಕರ್ ಮೊದಲಾದ ಖ್ಯಾತ ಸಂಶೋಧಕರು ಈ ಸಂಸ್ಥೆಯಲ್ಲಿದ್ದುಕೊಂಡು ಪ್ರಾಚೀನ ಭಾರತದ ಇತಿಹಾಸದ ಬೆಳವಣಿಗೆಗೆ ಗಣನೀಯವಾದ ಸೇವೆಯನ್ನು ಸಲ್ಲಿಸಿದ್ದರು. ಪುಣೆಯಲ್ಲಿದ್ದ ಓರಿಯಂಟಲ್ ರಿಸರ್ಚ್ ಇನ್‌ಸ್ಟಿಟ್ಯೂಟ್ ಸಹ ಶ್ಲಾಘನೀಯವಾದ ಕೆಲಸವನ್ನು ಮಾಡಿದ್ದಿತು. ಆದರೆ ಈ ಸಮಯದಲ್ಲಿ ಸಂಶೋಧನಾ ಕಾರ್ಯ ಅಷ್ಟು ಚುರುಕಾಗಿ ನಡೆಯುತ್ತಿರಲಿಲ್ಲ. ಆದುದರಿಂದ ಹೆರಾಸ್ ಅವರು ಇತಿಹಾಸ ಸಂಶೋಧನೆಗೆ ಪೂರಕವಾದ ಸಂಘ ಸಂಸ್ಥೆಗಳನ್ನು ಸ್ಥಾಪಿಸುವಲ್ಲಿ ಮುಂದಾದರು. ಇದರ ಪರಿಣಾಮವಾಗಿ “ಇಂಡಿಯನ್ ಹಿಸ್ಟಾರಿಕಲ್ ರಿಸರ್ಚ್ ಇನ್‌ಸ್ಟಿಟ್ಯೂಟ್” ಎಂಬ ಸಂಸ್ಥೆಯು ಜನ್ಮತಾಳಿತು (1926.) ಮುಂದೆ ಈ ಸಂಸ್ಥೆಯು ಹಲವಾರು ಖ್ಯಾತ ಇತಿಹಾಸಕಾರರನ್ನೂ ವಿದ್ವಾಂಸರನ್ನೂ ಸೃಷ್ಟಿಸಿ ಇತಿಹಾಸ ಕ್ಷೇತ್ರದಲ್ಲಿ ಮಹತ್ವದ ಪಾತ್ರವನ್ನು ವಹಿಸಿತು. ಈ ಸಂಸ್ಥೆ ಮುಂದೆ “ಹೆರಾಸ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯನ್ ಹಿಸ್ಟರಿ ಅಂಡ್ ಕಲ್ಚರ್” ಎಂಬ ಹೆಸರನ್ನು ಪಡೆಯಿತು. ಹೆರಾಸ್ ಅವರು ಮೇಲೆ ತಿಳಿಸಿದ ಸಂಸ್ಥೆಯಲ್ಲದೆ “ಬಾಂಬೆ ಹಿಸ್ಟಾರಿಕಲ್ ಸೊಸೈಟಿ” ಸಂಸ್ಥೆಯ ಸ್ಥಾಪಕ ಸದಸ್ಯರೂ ಆಗಿದ್ದರು. ಇದಲ್ಲದೆ ಇಂಡಿಯನ್ ಹಿಸ್ಟರಿ ಕಾಂಗ್ರೆಸ್ (ಭಾರತ ಇತಿಹಾಸ ಸಮ್ಮೇಳನ), (Indian Historical Records Commission) ಮೊದಲಾದ ಬೃಹತ್ ಸಂಸ್ಥೆಗಳೊಂದಿಗೆ ಸಂಪರ್ಕವಿಟ್ಟುಕೊಂಡಿದ್ದು ಅವುಗಳ ಕಾರ್ಯಕ್ರಮಗಳಲ್ಲಿ ಮುಖ್ಯಪಾತ್ರವನ್ನು ವಹಿಸಿ ಸೇವೆ ಸಲ್ಲಿಸುತ್ತಾ ಬಂದರು.

ಹೆರಾಸ್ ಸ್ಥಾಪಿಸಿದ ‘ಭಾರತ ಇತಿಹಾಸ ಸಂಸ್ಕೃತಿ ಸಂಘವು’ ಬಹುಬೇಗ ಒಂದು ಬೃಹತ್ ಸಂಶೋಧನಾ ಕೇಂದ್ರವಾಗಿ ಬೆಳೆಯಿತು. ಜಗತ್ತಿನ ವಿವಿಧ ಭಾಗಗಳಲ್ಲಿದ್ದ ಅಮೂಲ್ಯ ದಾಖಲೆಗಳನ್ನೂ ವಸ್ತುಗಳನ್ನೂ ಸಂಗ್ರಹಿಸಿ ಇಲ್ಲಿ ಇಡಲಾಯಿತು. ಗಾಂಧಾರ ಶಿಲ್ಪಗಳು, ಮೆಸಪೊಟೇಮಿಯದ ಮುದ್ರೆಗಳು, ಭಾರತದ ವಿವಿಧ ಭಾಗಗಳಿಂದ ವಿಗ್ರಹಗಳು, ಕಲಾವಸ್ತುಗಳು ಮುತ್ತಿತರ ಇತಿಹಾಸ ಸಾಮಗ್ರಿಗಳನ್ನು ಸಂಗ್ರಹಿಸಲಾಯಿತು. ಹೆರಾಸ್ 80 ಪುಸ್ತಕಗಳಿಂದ ಪ್ರಾರಂಭಿಸಿದ ಗ್ರಂಥಭಂಡಾರವು ಈಗ 30,000ಕ್ಕೂ ಹೆಚ್ಚು ಗ್ರಂಥಗಳನ್ನು ಒಳಗೊಂಡಿದ್ದು ನಾಡಿನ ಅನೇಕ ಭಾಗಗಳಿಂದ ವಿದ್ವಾಂಸರಿಗೆ ಸಂಶೋಧನೆ ನಡೆಸಲು ಉಪಯೋಗವಾಗಿದೆ.

ಫಾ|| ಹೆರಾಸರ ಇತಿಹಾಸಪ್ರೇಮ ಅಸದೃಶವಾದುದು. ಇತಿಹಾಸದ ಅಧ್ಯಯನ ಶೋಧನೆಯಲ್ಲಿ ಆಸಕ್ತಿ ಹೆಚ್ಚುತ್ತಾ ಹೋಗಿ ಕೊನೆಗೆ ಅವರು ಇತಿಹಾಸದೊಂದಿಗೆ ವಿಲೀನರಾದರು. ಭಾರತದ ಪೌರತ್ವವನ್ನು ಪಡೆದ ಹೆರಾಸರು ಭಾರತೀಯ

ವಿದ್ವಾಂಸರೂ ನಾಚುವಂತೆ ಇತಿಹಾಸ ಕ್ಷೇತ್ರದಲ್ಲಿ ಕೆಲಸಮಾಡುತ್ತಾ ಬಂದರು. ನಮ್ಮ ನಾಡಿನ ಸಂಸ್ಕೃತಿಯನ್ನು ಅದರ ವೈಶಿಷ್ಟ್ಯವನ್ನೂ ಅರ್ಥಮಾಡಿಕೊಂಡು ಅದನ್ನು ವಿವರಿಸುವುದರಲ್ಲಿ ಅವರು ತಮ್ಮ ಕಾಲದ ವಿದ್ವಾಂಸರಿಗಿಂತ ಮುಂದಿದ್ದರು.

ಇತಿಹಾಸದ ಸಂಶೋಧನೆಗೆ ತಮ್ಮನ್ನು ಅರ್ಪಿಸಿಕೊಂಡ ಹೇರಾಸರು ಭಾರತೀಯ ಸಂಕೇತ ಹಾಗೂ ಶೈಲಿಯ ಮೂಲಕ ಕ್ರೈಸ್ತ ತತ್ವಗಳನ್ನು ವಿವರಿಸುವುದು, ಹೊಸ ಕಲಾವಿದರಿಗೆ ಪ್ರೋತ್ಸಾಹ ನೀಡಿ ಅವರ ಕೃತಿಗಳ ಪ್ರದರ್ಶನ ಏರ್ಪಡಿಸುವುದು, ತಮ್ಮ ಗ್ರಂಥಭಂಡಾರಕ್ಕೆ ಹಾಗೂ ವಸ್ತು ಸಂಗ್ರಹಾಲಯಕ್ಕೆ ಪುಸ್ತಕ ಹಾಗೂ ಕಲಾಕೃತಿಗಳನ್ನು ಸಂಗ್ರಹಿಸುವುದು-ಹೀಗೆ ಒಂದಲ್ಲ ಒಂದು ಕಾರ್ಯದಲ್ಲಿ ತೊಡಗಿ ನಮ್ಮ ದೇಶದಲ್ಲಿ ಇತಿಹಾಸ ಬೆಳೆಯಲು ನೆರವಾದರು. ಮೊಘಲ್ ಯುಗದ ಕ್ರೈಸ್ತ ಪಾದ್ರಿಗಳ ಬಗ್ಗೆ ಅಧ್ಯಯನ-ಸಂಶೋಧನೆ ಮಾಡಿದ ಹೇರಾಸರ ದೃಷ್ಟಿಕೋನ ಆ ಪಾದ್ರಿಗಳ ದೃಷ್ಟಿಕೋನಕ್ಕಿಂತ ಬೇರೆಯಾಗಿತ್ತು. ಮೂಲ ಆಧಾರಗಳಲ್ಲಿ ಪೂರ್ಣಶ್ರದ್ಧೆ, ವೈಜ್ಞಾನಿಕ ದೃಷ್ಟಿ, ಭಾರತೀಯ ಭಾಷೆಗಳ ಮೇಲಿನ ಪ್ರಭುತ್ವ, ನಿಷ್ಪಕ್ಷಪಾತ ಮನೋಭಾವ. ಈ ಗುಣಗಳಿಂದ ಕೂಡಿದ ಹೇರಾಸರು "ಆದರ್ಶ ಸಂಶೋಧಕ"ರೆಂದು ಪ್ರಸಿದ್ಧರಾದರು. ಪ್ರಾರಂಭದಲ್ಲಿ ಸದಾ ವಿದ್ಯಾರ್ಥಿಗಳೊಡನೆ ಕಲಾವಿದರೊಡನೆ ಸೇರಿ ಕೆಲಸಮಾಡುತ್ತಿದ್ದ ಅವರು ಸಂಶೋಧನೆಯು ಮುಂದುವರಿದಂತೆ ಒಂಟಿಯಾಗಿ ಕೆಲಸಮಾಡುತ್ತಾ ಬಂದರು. ಆರೋಗ್ಯವು ಕುಂದಿ ಕಣ್ಣು ಕಾಣದಂತಾದಾಗಲೂ ಅವರು ತಮ್ಮ ಅಧ್ಯಯನವನ್ನು ಬಿಡಲಿಲ್ಲ. ಕ್ಷೀಣಿಸುತ್ತಿದ್ದ ಆರೋಗ್ಯದ ನಡುವೆಯೇ ಮುಂಬಯಿಯಲ್ಲಿ ನೌಕಾವಸ್ತು ಪ್ರದರ್ಶನವನ್ನೇರ್ಪಡಿಸಲು ಶ್ರಮಿಸಿದರು. ಈ ರೀತಿ ಅಧಿಕ ಶ್ರಮದಿಂದ ಬಳಲಿ ಹೆನ್ರಿ ಹೇರಾಸ್‌ರವರು 1955ರಲ್ಲಿ ಮುಂಬಯಿಯಲ್ಲಿ ನಿಧನರಾದರು.

ಹೇರಾಸ್‌ರದು ಸ್ನೇಹಪರವಾದ ವಿಶಾಲ ಮನೋಭಾವ. ಉದ್ದನೆಯ ಖಾದಿ ನಿಲುವಂಗಿಯನ್ನು ತೊಟ್ಟು, ಮೈಲಿಗಟ್ಟಲೆ ನಡೆದು, ತಮ್ಮ ಅಧ್ಯಯನಕ್ಕೆ ವಿಷಯವನ್ನು ಸಂಗ್ರಹಿಸುತ್ತಾ ವಸ್ತುಸಂಗ್ರಹಾಲಯಕ್ಕೆ ಕಲಾಕೃತಿಗಳನ್ನು ಸಂಗ್ರಹಿಸುತ್ತಿದ್ದ ಅವರನ್ನು ಅವರ ಶಿಷ್ಯರೂ ಅಭಿಮಾನಿಗಳೂ ಎಂದಿಗೂ ಮರೆಯಲಾರರು. ಸರಳ ಜೀವಿಯಾದರೂ ಆಕರ್ಷಕ ವ್ಯಕ್ತಿ ಹೇರಾಸ್. ಮುಗ್ಧಸ್ವಭಾವದವರಾಗಿದ್ದರು. ದೀಕ್ಷಾಬದ್ಧ ಪಾದ್ರಿಯಾಗಿದ್ದರೂ ಅವರು ನಿಷ್ಪಕ್ಷಪಾತ ಸತ್ಯಶೋಧಕರಾಗಿದ್ದರು. ಹೇರಾಸರು ತಮ್ಮ ಶಿಷ್ಯರೊಂದಿಗಿಟ್ಟುಕೊಂಡಿದ್ದ ಸಂಬಂಧ ಅನುಕರಣೀಯವಾಗಿದ್ದಿತು. ತಮ್ಮ ಬಿಡುವಿಲ್ಲದ ಸಂಶೋಧನಾ ಕಾರ್ಯಗಳಲ್ಲಿಯೂ ಶಿಷ್ಯರ ಕೆಲಸವನ್ನು ಆಸಕ್ತಿಯಿಂದ ಗಮನಿಸುತ್ತಿದ್ದು ಅವರ ಸುಖ-ದುಃಖಗಳಲ್ಲಿ ಸಮಭಾಗಿಯಾಗಿ ಮಾರ್ಗದರ್ಶನ ಮಾಡಿದ ಹೇರಾಸ್‌ರಂತಹ ಗುರುಗಳು ಅತಿವಿರಳ.

26-11-1939 2ನೇ ಮಗ ಭಾಸ್ಕರನ ಜನನ
1939-46 ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ—ಇಂಗ್ಲಿಷ್ ಕೋಶದ ಸಹ-ಸಂಪಾದಕ
24-6-1943 3ನೇ ಮಗ ರಾಮಪ್ರಸಾದನ ಜನನ
25-9-1945 4ನೇ ಮಗ ರಾಧಾಕೃಷ್ಣನ ಜನನ
1946 ಬೆಂಗಳೂರು ಸರ್ಕಾರಿ ಕಾಲೇಜಿನಲ್ಲಿ ಅಧ್ಯಾಪಕ ವೃತ್ತಿ ಆರಂಭ.
"ಹಕ್ಕಿ ಹಾಡು" ಕವನ ಸಂಕಲನಕ್ಕೆ ದೇವರಾಜ ಬಹದ್ದೂರ್ ಹಾಗೂ ಕನ್ನಡ ಸಾಹಿತ್ಯ ಪರಿಷತ್ತಿನ ಬಹುಮಾನ
1951 "ರಾಘವ ಪ್ರಕಾಶನ" ಪ್ರಾರಂಭ
"ನಾಡನ ಮಗಳು" ಕಾದಂಬರಿಗೆ ದೇವರಾಜ ಬಹದ್ದೂರ್ ಬಹುಮಾನ
1953 ಬೆಂಗಳೂರು ಸರ್ಕಾರಿ ಕಾಲೇಜಿನ ಕರ್ನಾಟಕ ಸಂಘವನ್ನು ಶ್ರೀ ಜಿ. ಪಿ. ರಾಜರತ್ನಂ ಅವರಿಂದ ವಹಿಸಿಕೊಂಡದ್ದು.
29-9-1954 5ನೇ ಮಗ ಶೇಷಾದ್ರಿನಾಥನ ಜನನ.
1957 "ಮುಗಿಯದ ಮಾಯೆ" ಕವನ ಸಂಕಲನಕ್ಕೆ ದೇವರಾಜ ಬಹದ್ದೂರ್ ಬಹುಮಾನ.
"ತೊಟ್ಟಿಲು ತೂಗದ ಕೈ" ನಾಟಕಕ್ಕೆ ರಾಜ್ಯ ಸರ್ಕಾರದ ಪ್ರಶಸ್ತಿ.
1959 "ಕರ್ನಾಟಕ ಸಂಘ"ದ ಪುನರಾರಂಭ.
1960 "ಜೀವನ ನಾಟಕ" ಕಾದಂಬರಿಗೆ ರಾಜ್ಯಸರ್ಕಾರದ ಪ್ರಶಸ್ತಿ.
1961 ಆಕಾಶವಾಣಿಯ ರಾಷ್ಟ್ರೀಯ ಕವಿ ಸಮ್ಮೇಳನದಲ್ಲಿ ಭಾಗವಹಿಸಿದ್ದು
1963 ಕನ್ನಡ ರೀಡರ್ ಆಗಿ ನೇಮಕ.
1964 ದಕ್ಷಿಣಭಾಷಾ ಪುಸ್ತಕ ಸಂಸ್ಥೆಯ ಆಶ್ರಯದಲ್ಲಿ ನಡೆದ ಮಕ್ಕಳ ಸಾಹಿತ್ಯದ ವಿಚಾರಗೋಷ್ಠಿಯಲ್ಲಿ ಭಾಗವಹಿಸಿದ್ದು.
1965 ಅಣ್ಣಾಮಲೈ ಹಾಗೂ ಮೈಸೂರು ವಿಶ್ವವಿದ್ಯಾನಿಲಯಗಳ ಆಶ್ರಯದಲ್ಲಿ ನಡೆದ ಭಾಷಾವಿಜ್ಞಾನ ಗೋಷ್ಠಿಯಲ್ಲಿ ಭಾಗವಹಿಸಿದ್ದು.
1967 ಮೈಸೂರು ವಿಶ್ವವಿದ್ಯಾನಿಲಯದ ಸುವರ್ಣ ಮಹೋತ್ಸವದ ಅಂಗವಾಗಿ ನಡೆದ ಲೇಖಕರ ಸಮ್ಮೇಳನದಲ್ಲಿ ಭಾಗವಹಿಸಿದ್ದು.
1967 ನಿವೃತ್ತಿ, ಮಾರ್ಚ್ 24.
ಸರ್ಕಾರಿ ಕಲಾ ಮತ್ತು ವಿಜ್ಞಾನ ಕಾಲೇಜಿನಲ್ಲಿ ನಿವೃತ್ತರಾದ

ಸಮಯದಲ್ಲಿ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳ ಪರವಾಗಿ "ರಾಘವ ಸನ್ಮಾನ ಸಮಿತಿ" ಯಿಂದ ಸನ್ಮಾನ (ಅಧ್ಯಕ್ಷತೆ ಡಾ|| ಮಾಸ್ತಿ ವೆಂಕಟೇಶ ಅಯ್ಯಂಗಾರ್)

1967 ಶ್ರೀ ಸಿದ್ಧಗಂಗಾ ಮಠ ಶ್ರೀಗಳವರಾದ ಡಾ: ಜ.ಚ.ನಿ. ಅವರಿಂದ ಸ್ವರ್ಣ ಪದಕ ಸಮೇತ 'ವಿಚಾರ ರತ್ನಾಕರ' ಎಂಬ ಪ್ರಶಸ್ತಿ.

1968-73 ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಯು.ಜಿ.ಸಿ. ಪ್ರಾಧ್ಯಾಪಕ (1973-74 ಗೌರವ ಪ್ರಾಧ್ಯಾಪಕ.)

1968 'ಕವಿರಾಜ ಮಾರ್ಗ' ಪ್ರಕಟಣೆ.

1969 ಸೆಂಟ್ರಲ್ ಕಾಲೇಜು ಕರ್ನಾಟಕ ಸಂಘದ ವಿಚಾರ ಗೋಷ್ಠಿಯಲ್ಲಿ ಭಾಗವಹಿಸಿದ್ದು.

1970 ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗದ ಆಶ್ರಯದಲ್ಲಿ ಮೂರು ವಿಶೇಷ ಉಪನ್ಯಾಸಗಳು (ವಿಷಯ: "ಭಾರತೀಯ ಕಾವ್ಯ ಮೀಮಾಂಸೆಗೆ ಕನ್ನಡ ಕವಿಗಳ ಕೊಡುಗೆ")

1973 ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ.

ಮಿಥಿಕ್ ಸೊಸೈಟಿ ಆಶ್ರಯದಲ್ಲಿ ರಾಷ್ಟ್ರಕೂಟ ವಂಶದ ಮತ್ತು ಕಲ್ಯಾಣ ಚಾಲುಕ್ಯರ ವಿಷಯವಾಗಿ ನಡೆದ ವಿಚಾರ ಗೋಷ್ಠಿಗಳಲ್ಲಿ ಭಾಗವಹಿಸಿದ್ದು.

ಧಾರವಾಡದಲ್ಲಿ ನಡೆದ ದ್ರಾವಿಡ ಭಾಷಾ ವಿಜ್ಞಾನಿಗಳ ಸಮ್ಮೇಳನದಲ್ಲಿ ಪ್ರಬಂಧ ಮಂಡನೆ.

ಬೆಂಗಳೂರಿನಲ್ಲಿ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ನಡೆದ ಭಾಷಾ ವಿಜ್ಞಾನಿಗಳ ಸಮ್ಮೇಳನದಲ್ಲಿ ಭಾಗವಹಿಸಿದ್ದು.

1975 ಕನ್ನಡ ಸಾಹಿತ್ಯ ಪರಿಷತ್ತಿನ ವಜ್ರಮಹೋತ್ಸವದ ಸಂದರ್ಭದಲ್ಲಿ ಗ್ರಂಥ ಸಂಪಾದನ ಕ್ಷೇತ್ರದಲ್ಲಿ ಸೇವೆಗಾಗಿ ಪ್ರಶಸ್ತಿ.

1978 ಧಾರವಾಡದಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಪ್ರಸಾರಾಂಗದ ಆಶ್ರಯದಲ್ಲಿ ಮೂರು ವಿಶೇಷೋಪನ್ಯಾಸಗಳು (ವಿಷಯ: "ಕನ್ನಡ ಸಾಹಿತ್ಯದಲ್ಲಿ ಶಾಂತರಸ")

ರಾಜ್ಯ ಸರ್ಕಾರದಿಂದ ಆಜೀವ ಗೌರವ ಮಾಸಿಕ ವೇತನ.

1979 "ಬಿ. ಎಂ. ಶ್ರೀ. ಸ್ಮಾರಕ ಪ್ರತಿಷ್ಠಾನ"ದ ಸ್ಥಾಪನೆ.

1980 ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ : 'ಕನ್ನಡ ವ್ಯಾಕರಣಗಳು' ಪುಸ್ತಕಕ್ಕೆ.

ಯಾವುದೋ ದೇಶದಿಂದ ಕ್ರೈಸ್ತ ಪಾದ್ರಿಯಾಗಿ ಭಾರತಕ್ಕೆ ಬಂದ ಹೆನ್ರಿ ಹೆರಾಸ್ ಈ ನಾಡಿನ ಇತಿಹಾಸ ಸಂಸ್ಕೃತಿಯನ್ನು ಅಭ್ಯಾಸಮಾಡಿ, ಅದರ ಮೇಲೆ ಹೊಸ ಬೆಳಕನ್ನು ಚೆಲ್ಲಿ ಸಂಶೋಧನೆ ಮಾಡುವ ಒಂದು ಉತ್ಸಾಹಿ ತಂಡವನ್ನು ಸೃಷ್ಟಿಸಿದರು. ಅಷ್ಟುಮಾತ್ರವಲ್ಲ, ಇತಿಹಾಸದ ಸಂಶೋಧನೆಗೆ ಮೀಸಲಾದ ವಸ್ತುಸಂಗ್ರಹಾಲಯ, ಗ್ರಂಥಭಂಡಾರಗಳನ್ನು ಸ್ಥಾಪಿಸಿ-ಅವು ಮುಂದಿನ ಪೀಳಿಗೆಯ ವಿದ್ವಾಂಸರಿಗೆ ಉಪಯುಕ್ತ ಸಾಧನಗಳಾಗುವಂತೆ ಮಾಡಿದರು. ಹೆರಾಸ್ ಸ್ಥಾಪಿಸಿದ ಸಂಸ್ಥೆ 1954ರಲ್ಲಿ ಬೆಳ್ಳಿ ಹಬ್ಬವನ್ನು 1976ರಲ್ಲಿ ಸುವರ್ಣ ಮಹೋತ್ಸವವನ್ನೂ ಆಚರಿಸಿತು. ಈ ಇತಿಹಾಸಕಾರನ ನೆನಪಿನಲ್ಲಿ 1960 ರಲ್ಲಿ 'ಹೆರಾಸ್ ಸೊಸೈಟಿ'ಯನ್ನು ಸ್ಥಾಪಿಸಲಾಯಿತು. ಅದು ಖ್ಯಾತ ವಿದ್ವಾಂಸರಿಂದ ಉಪನ್ಯಾಸಗಳನ್ನೂ ಏರ್ಪಡಿಸುವುದಲ್ಲದೆ, ಇತಿಹಾಸಕ್ಕೆ ಮೀಸಲಾದ ಪತ್ರಿಕೆಯನ್ನೂ ಪ್ರಕಟಿಸುತ್ತದೆ. ಭಾರತದಲ್ಲಿ ಹೆರಾಸರು ಇತಿಹಾಸ ಸಂಶೋಧನೆಗೆ ಸಲ್ಲಿಸಿದ ಸೇವೆಯನ್ನು ಎಂದಿಗೂ ಮರೆಯಲಾಗುವುದಿಲ್ಲ. ಹೆರಾಸರಂತಹ ಹೃದಯ ವೈಶಾಲ್ಯ ಶುದ್ಧಾಂತಃಕರಣವುಳ್ಳ ವಿದ್ವಾಂಸರು ಬಹು ವಿರಳ. ಅಧ್ಯಯನದ ಬಗ್ಗೆ ಅವರಿಗಿದ್ದ ಅದಮ್ಯ ಉತ್ಸಾಹ ಸತ್ಯಾನ್ವೇಷಣೆಯ ಬಗ್ಗೆ ಅವರ ಸಂಪೂರ್ಣ ತನ್ಮಯತೆ ಆದರ್ಶಪ್ರಾಯವಾಗಿದೆ.

ಎಂ. ವಿ. ಸೀ. ಸಾಹಿತ್ಯ-ಜೀವನ ಪಥ

1910 ಜನನ. ಮೈಸೂರು, ಸೆಪ್ಟೆಂಬರ್ 9 (ಸಾಧಾರಣ ಸಂವತ್ಸರ ಭಾದ್ರಪದ ಶುದ್ಧ ಷಷ್ಠಿ).

1916-26 ಪ್ರಾಥಮಿಕ, ಮಾಧ್ಯಮಿಕ, ಪ್ರೌಢ ಶಿಕ್ಷಣ: ಸರ್ಕಾರಿ ಪ್ರಾಥಮಿಕ ಶಾಲೆ ಹಾಗೂ ಬನುಮಯ್ಯನವರ ವಿದ್ಯಾಶಾಲಾ, ಮೈಸೂರು.

1920 ಸಂಗೀತಾಭ್ಯಾಸ (ಮೃದಂಗ) ಪ್ರಾರಂಭ. ಮುಂದೆ ಎಲ್. ರಾಜಾರಾಯರೊಂದಿಗೆ ಅಭ್ಯಾಸ.

1921 ಚಿತ್ರಕಲಾಭ್ಯಾಸ ಪ್ರಾರಂಭ.

1922 ಮೈಸೂರು ದಸರಾ ವಸ್ತುಪ್ರದರ್ಶನದಲ್ಲಿ Pen & Ink drawin ರೇಖಾಚಿತ್ರಗಳಿಗೆ ಪ್ರಶಸ್ತಿಪತ್ರ (Certificate of merit)

1923 ಮದರಾಸಿನ ಕಾಂಗ್ರೆಸ್ ವಸ್ತುಪ್ರದರ್ಶನದಲ್ಲಿ ಅದೇ ಚಿತ್ರಗಳಿಗೆ ಪ್ರಶಸ್ತಿಪತ್ರ.

1928 ವಿವಾಹ ಧರ್ಮಪತ್ನಿ ಸೌ|| ಸಾವಿತ್ರಮ್ಮ ಅವರೊಂದಿಗೆ.

1930 ಮೊದಲ ಕವನ 'ಬೀದಿಯೊಳಗಲೆಯುತಿಹಳಾರಿವಳು ಚೆಲುವೆ' ಕವನವನ್ನು ತೀ. ನಂ. ಶ್ರೀ ಅವರಿಂದ ತಿದ್ದಿಸಿದ್ದು. ಸ್ವಯಂ ಚಿತ್ರ ಬರೆದುಕೊಂಡದ್ದು.

1931 ಬಿ. ಎ. ಪದವಿ, (ಕನ್ನಡ, ಇಂಗ್ಲಿಷ್ ಚರಿತ್ರೆ.)

1932 ಕೆ. ವೆಂಕಟಪ್ಪನವರ ಶಿಷ್ಯತ್ವದಲ್ಲಿ ಚಿತ್ರಕಲಾಭ್ಯಾಸ.

1933 ಎಂ.ಎ. ಪದವಿ. ಶ್ರೀಪದಕ (ಕನ್ನಡ) : ೮ ಚಿತ್ರಗಳು ಕವನಕ್ಕೆ. ಚಿತ್ರಕಲೆ ಕಲಿಯಲು ಶಾಂತಿನಿಕೇತನ್‌ಗೆ ಪ್ರಯಾಣ, ಟಿ. ಎಸ್. ವೆಂಕಣ್ಣಯ್ಯನವರಿಂದ ಬೀಳ್ಕೊಡುಗೆ.

15-11-1934 ಮಗಳು ಶಾರದಳ ಜನನ

1936 ಮೊದಲ ಪ್ರಕಟನೆಗಳು : (1) ಶಿಲಾಮುಖ (2) ಯೌವನ ಸುಧೆ.
ಮೊದಲನೇ ಮಗ ವೆಂಕಟೇಶನ ಜನನ (ಮರಣ 1945

1934-39 ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಕಾರ್ಯದರ್ಶಿ

1935 ರಲ್ಲಿ ಹರಪ್ಪ-ಮೊಹೆಂಜೋದಾರೋ ಸಂಶೋಧನೆಗಳಲ್ಲಿ ಹೆರಾಸರಿಗೆ ಆಸಕ್ತಿ ಬೆಳೆಯಿತು. ಭಾರತದ ಪ್ರಾಚೀನ ಇತಿಹಾಸದ ಕಗ್ಗಂಟಾಗಿರುವ ಸಿಂಧೂನದಿಯ ಲಿಪಿಯನ್ನು ಕುರಿತು ಹೆರಾಸರು ದೀರ್ಘಕಾಲ ಸಂಶೋಧನೆಯನ್ನು ಮಾಡಿ ಹಲವಾರು ಗ್ರಂಥಗಳನ್ನೂ ಲೇಖನಗಳನ್ನೂ ಬರೆದರು. ಹರಪ್ಪ-ಮೊಹೆಂಜೋದಾರೋದ ಮುದ್ರೆಗಳಲ್ಲಿ ಕಂಡುಬಂದ ಮೀನಿನ ಕಣ್ಣಿನ ಬಗ್ಗೆ ಒಂದು ಸಂಶೋಧನಾ ಗ್ರಂಥವನ್ನು ಬರೆದು ಆ ಚಿತ್ರದ ದಾರ್ಶನಿಕ ಮಹತ್ವವನ್ನು ವಿವರಿಸಿದರು. ಭಾರತೀಯ ಇತಿಹಾಸ ಪುರಾಣಗಳ ಆಳವಾದ ಪಾಂಡಿತ್ಯದ ನೆರವಿನಿಂದ ಇಂತಹ ಕ್ಲಿಷ್ಟವಾದ ಸಮಸ್ಯೆಯನ್ನು ಹೆರಾಸ್ ವಿವರಿಸಿದರು. ಅನೇಕ ವರ್ಷಗಳ ಹಿಂದೆಯೇ ಹೆರಾಸ್ ಅವರು ಸಿಂಧು ಲಿಪಿಯನ್ನು ಓದಿ ಅದು ಆರಂಭದ 'ದ್ರಾವಿಡ ಭಾಷೆ' ಎಂದು ಅಭಿಪ್ರಾಯಪಟ್ಟರು. ಸೈಂಧವ ಸಂಸ್ಕೃತಿಗೂ ಮೆಸಪೊಟೇಮಿಯಾ ಈಜಿಪ್ಟ್ ಸಂಸ್ಕೃತಿಗಳ ನಡುವಿನ ಸಂಬಂಧದ ಬಗೆಗೂ ಅವರು ಸಂಶೋಧನೆ ನಡೆಸಿದರು. ಅವರ ಈ ದೀರ್ಘ ಸಂಶೋಧನೆಯ ಫಲ Studies in Proto-Indo Mediterranean Culture (1955) ಎಂಬ ಗ್ರಂಥ. ವಿಜಯನಗರದ ಅರವೀಡು ಸಂತತಿಯನ್ನು ಕುರಿತ ಹೆರಾಸ್ ಅವರ ಬೃಹತ್ ಗ್ರಂಥ ಕರ್ನಾಟಕ ಇತಿಹಾಸಕ್ಕೆ ಅವರ ಮಹತ್ವ ಕೊಡುಗೆಯಾಗಿದೆ. ಪರಿಪಕ್ವವಾದ ಬರವಣಿಗೆ, ಮೂಲಾಧಾರಗಳ ಸಮರ್ಥ ವಿವರಣೆ, ನಿಷ್ಪಕ್ಷಪಾತವಾದ ದೃಷ್ಟಿ ಇವೆಲ್ಲವೂ ಸೇರಿ ಈ ಪುಸ್ತಕ ಭಾರತೀಯ ಇತಿಹಾಸ ಕೃತಿಗಳಲ್ಲಿ ಮಹತ್ವದ ಸ್ಥಾನ ಪಡೆಯುವಂತೆ ಮಾಡಿತು. ಹೆರಾಸರು ಈ ಗ್ರಂಥ ರಚನೆಯಿಂದ ಭಾರತದ ಶ್ರೇಷ್ಠ ಇತಿಹಾಸಕಾರರಾದ ಟಾಡ್, ಗ್ರಾಂಟ್‌ಡಫ್ ಇವರ ಸಾಲಿನಲ್ಲಿ ಸೇರಿಹೋದರು.

ಭಾರತೀಯ ಮತ್ತು ಕ್ರೈಸ್ತ ವಿಚಾರ ಧಾರೆಯ ತುಲನಾತ್ಮಕ ಅಧ್ಯಯನದಲ್ಲಿ ಹೆರಾಸರು ತೋರಿಸಿರುವ ಸಂಯಮ ಸಮತೋಲನ ಆದರ್ಶವಾದುದು. ಪ್ರಾಚೀನ ಚೀನ, ಈಜಿಪ್ಟ್, ಪರ್ಶಿಯನ್ ಮತ್ತು ಹಿಬ್ರೂ ದರ್ಶನಗಳ ಹಿನ್ನೆಲೆಯಲ್ಲಿ ಮೂಡಿಬಂದ ಈ ಚರ್ಚೆ ಹೆರಾಸರ ಪ್ರಬಲ ಪಾಂಡಿತ್ಯದ ಅತ್ಯುತ್ಕೃಷ್ಟ ನಿದರ್ಶನ. ಕರ್ನಾಟಕ ಹರಿದಾಸರ ಸಾಹಿತ್ಯವನ್ನು ಕುರಿತ ವಿವೇಚನೆ ಹೆರಾಸರ ಮತ್ತೊಂದು ಶ್ರೇಷ್ಠ ಕೃತಿ. ನಳಂದ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಿದ ಗುಪ್ತ ದೊರೆಯ ಬಗ್ಗೆ ಬೆಳಕು ಚೆಲ್ಲಿದ್ದು ಹೆರಾಸರ ಅಮೂಲ್ಯ ಕಾಣಿಕೆ. ಭಾರತದ ಆಧ್ಯಾತ್ಮಿಕ ಬೆಳವಣಿಗೆಗೆ ಕ್ಷತ್ರಿಯರ ಕೊಡುಗೆ ಸೂಕ್ಷ್ಮವೂ ಬಹು ಮಹತ್ವಪೂರಿತವೂ ಆದುದು ಎನ್ನುವುದನ್ನು ಹೆರಾಸರು ಬಹು ಸಮರ್ಥವಾಗಿ ಸಾಕ್ಷ್ಯಾಧಾರಗಳೊಡನೆ ಚರ್ಚಿಸಿದ್ದಾರೆ. ದಕ್ಷಿಣ ಭಾರತದ ಬಹು ಪ್ರಾಚೀನ ವಂಶವಾದ ಪಲ್ಲವರನ್ನು ಕುರಿತ ಅವರ ಗ್ರಂಥ ಮತ್ತೊಂದು ಪಾಂಡಿತ್ಯಪೂರ್ಣ ಕೃತಿ. ಹೀಗೆ ಒಂದರ ಹಿಂದೊಂದು ಗ್ರಂಥಗಳು ಲೇಖನಗಳು

ಹೊರಬರಲಾರಂಭಿಸಿದವು. ಹೇರಾಸರು ಒಟ್ಟು ಹನ್ನೊಂದು ಗ್ರಂಥಗಳನ್ನೂ ಇನ್ನೂರಕ್ಕೂ ಹೆಚ್ಚು ಸಂಶೋಧನಾ ಲೇಖನಗಳನ್ನೂ ಬರೆದರು. ಅವರು ಸಂಶೋಧನೆ ಮಾಡುತ್ತಿದ್ದಂತೆ ಇತರ ಇತಿಹಾಸಕಾರರ ಸಂಪರ್ಕವನ್ನಿಟ್ಟುಕೊಂಡಿದ್ದರು. ತಮ್ಮ ಶಿಷ್ಯರ ಕೆಲಸದಲ್ಲಿ ಆಸಕ್ತಿ ವಹಿಸಿ ಅವರ ಬೆಳವಣಿಗೆಗೆ ನೆರವಾದರು. ಈ ರೀತಿಯಲ್ಲಿ ನಮ್ಮ ನಾಡಿನಲ್ಲಿ ಶ್ರೇಷ್ಠ ಮಟ್ಟದ ಇತಿಹಾಸರಚನೆಗೆ ಹೇರಾಸರು ಕಾರಣರಾದರು.

"ಮಾಗಿಯ ಕತೆ" ಎನ್ನುವುದು ಹೇರಾಸರ ಕಡೆಯ ಗ್ರಂಥ (1954). ಭಾರತದಲ್ಲಿ ಕ್ರೈಸ್ತಧರ್ಮ ಸ್ಥಳೀಯಧರ್ಮವಾಗುವಂತೆ ಮಾಡಲು ಅವರು ನಡೆಸಿದ ಪ್ರಯತ್ನದಿಂದ ಅವರಿಗೆ "ಭಾರತೀಯ ಕ್ರೈಸ್ತ ಕಲೆಯ ಪಿತಾಮಹ" ಎಂಬ ಹೆಸರು ಬಂದಿತು. ಹೀಗೆ ಅವರು ಲೇಖನಗಳನ್ನೂ ಗ್ರಂಥಗಳನ್ನೂ ಬರೆಯುತ್ತಾ ಹೋದಂತೆ ಅವರ ಗ್ರಂಥಭಂಡಾರವೂ ವಸ್ತುಸಂಗ್ರಹಾಲಯಗಳೂ ಬೆಳೆದು ಇಂದು ವಿದ್ವಾಂಸರಿಗೆ ಉಪಯುಕ್ತವಾದ ಸಂಶೋಧನಾ ಕೇಂದ್ರಗಳಾಗಿವೆ. ತನ್ನ ನಾಡಿನ ಹೆಮ್ಮೆಯ ಪುತ್ರನಾಗಿ ಬಂದ ಹೇರಾಸ್ ತಾನು ನೆಲೆಸಿದ ಕರ್ಮಭೂಮಿಯ ಪ್ರಸಿದ್ಧ ಪುತ್ರನಾದುದು ಒಂದು ವಿಶೇಷ. ಸಣ್ಣ ಕಾಲೇಜೊಂದರ ಅಧ್ಯಾಪಕರಾಗಿ ಇತಿಹಾಸವನ್ನು ಬೋಧಿಸುತ್ತಾ ವಿದ್ಯಾರ್ಥಿಗಳಲ್ಲಿ ಆಸಕ್ತಿಯನ್ನು ಮೂಡಿಸಿ ಚರಿತ್ರೆಯನ್ನು ಉನ್ನತ ವ್ಯಾಸಂಗ ಮಾಡುವವರಿಗೆ ಬೋಧಿಸುತ್ತಾ ಸಂಶೋಧನಾ ಕೇಂದ್ರವನ್ನು ಸ್ಥಾಪಿಸಿ ನಮ್ಮ ಶೈಕ್ಷಣಿಕ ಪ್ರಪಂಚದಲ್ಲಿ ಒಂದು ಹೊಸ ಶಕ್ತಿಯಾಗಿ ಕಾರ್ಯನಿರ್ವಹಿಸಿದವರು ಹೇರಾಸ್. ಪಿ. ಎಂ. ಜೋಶಿಯವರು ಹೇಳಿದಂತೆ ನಳಂದದ ಶೀಲಭದ್ರನ ಬಳಿ ಕಲಿಯಲು ದೇಶ ವಿದೇಶಗಳಿಂದ ವಿದ್ಯಾರ್ಥಿಗಳು ಬರುತ್ತಿದ್ದಂತೆ ಹೇರಾಸ್ ಅವರ ಬಳಿ ಕಲಿಯಲು ನಾಡಿನ ವಿವಿಧ ಮೂಲೆಗಳಿಂದ ವಿದ್ಯಾರ್ಥಿಗಳು ಅವರಲ್ಲಿಗೆ ಬರುತ್ತಿದ್ದರು. ನಮ್ಮ ನಾಡಿನಲ್ಲಿದ್ದ ಕೆಲವೇ ಆದರ್ಶ ಇತಿಹಾಸ ಪ್ರಾಧ್ಯಾಪಕರಲ್ಲಿ ಒಬ್ಬರಾದ ಹೇರಾಸರು ಪ್ರಾಚೀನ ಇತಿಹಾಸದ ಅಧ್ಯಯನದಲ್ಲಿ ಹೊಸ ಚೈತನ್ಯವನ್ನು ತಂದರು. ಹೆನ್ರಿ ಹೇರಾಸರ ಸೇವೆಯನ್ನು ರಾಷ್ಟ್ರದ ಪ್ರಸಿದ್ಧ ಇತಿಹಾಸಕಾರರೂ ವಿದ್ಯಾರ್ಥಿಗಳೂ ನಾಯಕರೂ ಮುಕ್ತಕಂಠದಿಂದ ಪ್ರಶಂಸಿಸಿದ್ದಾರೆ.

ಕೆ. ಎಂ. ಮುನ್ಷಿಯವರ ಮಾತಿನಲ್ಲಿ "ಹೇರಾಸ್ ಅವರು ಕರ್ತವ್ಯಜ್ಞಾನವುಳ್ಳ ಪರಿಪಕ್ವವಾದ ಚರಿತ್ರಕಾರ. ಆತನ ವಿಶಾಲಜ್ಞಾನ ಮತ್ತು ತಾಳ್ಮೆಯಿಂದ ಕೂಡಿದ ಕೆಲಸ ನಮ್ಮ ನಾಡಿನ ಇತಿಹಾಸದ ಅನೇಕ ಅಜ್ಞಾತ ಭಾಗಗಳ ಮೇಲೆ ಬೆಳಕನ್ನು ಚೆಲ್ಲಿದೆ. ಆತ ಸದಾ ಪುಸ್ತಕಗಳ ನಡುವೆ ಋಷಿಯಂತೆ ಬಾಳಿದ. ಅನೇಕ ವಿದ್ವಾಂಸರು ಸಂಶೋಧನೆ ಮಾಡಲು ಸ್ಫೂರ್ತಿ ನೀಡಿದ."

1982 ಬೆಂ.ವಿ.ವಿ. ಕನ್ನಡ ಅಧ್ಯಯನ ಕೇಂದ್ರದಲ್ಲಿ. ವಿದ್ಯಾರ್ಥಿ ಕವಿ ಸಮ್ಮೇಳನದ ಅಧ್ಯಕ್ಷತೆ.

ಗೋಕಾಕ್ ವರದಿ ಹೋರಾಟದಲ್ಲಿ ಪಾಲ್ಗೊಂಡು, ನಗರದ ಸಾಹಿತಿ ಕಲಾವಿದರ ಬಳಗದ ಚಟುವಟಿಕೆಗಳ ಸಹಾಯಕ್ಕಾಗಿ 'ಕನ್ನಡವ್ವನ ಕೊರಗು' ಪುಸ್ತಕವನ್ನು ಪ್ರಕಟಿಸಿ ದಾನಮಾಡಿದ್ದು.

1983 ಕನ್ನಡ ಸಾಹಿತ್ಯ ಪರಿಷತ್ತಿನ ತುಮಕೂರು ಜಿಲ್ಲಾ ಸಮಿತಿಯಿಂದ ಡಾ|| ಗೋವಿಂದ ಪೈ ಜನ್ಮಶತಮಾನೋತ್ಸವ ಸಂದರ್ಭದಲ್ಲಿ ಸನ್ಮಾನ.

ಕೋಲಾರದ ಕನ್ನಡ ಪಕ್ಷ ಮತ್ತು ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾ ಸಮಿತಿಯಿಂದ ಸನ್ಮಾನ.

ಲಯನ್ಸ್ ಕ್ಲಬ್ ಬೆಂಗಳೂರು (ಪಶ್ಚಿಮ)ರವರಿಂದ ಸನ್ಮಾನ.

ಕನ್ನಡ ಸಾಹಿತ್ಯ ಪರಿಷತ್ತಿನ ಮೈಸೂರು ಜಿಲ್ಲಾ ಸಮಿತಿ ಕೊಳ್ಳೆಗಾಲದಲ್ಲಿ ನಡೆಸಿದ ಜಿಲ್ಲಾ ಸಾಹಿತ್ಯ ಸಮ್ಮೇಳನದ ಸಂದರ್ಭದಲ್ಲಿ ಸನ್ಮಾನ.

ಮೈಕೋ ಕಾರ್ಖಾನೆ, ಬೆಂಗಳೂರು ಅವರಿಂದ ರಾಜ್ಯೋತ್ಸವ ಸಂದರ್ಭದಲ್ಲಿ ಸನ್ಮಾನ.

ಬಬ್ಬೂರು ಕಮ್ಮೆ ಸಂಘದಿಂದ ಮೈಸೂರಿನಲ್ಲಿ ಸನ್ಮಾನ.

ಕುಟುಂಬ ವಿವರಗಳು :—

ಎಂ. ವಿ. ಸೀತಾರಾಮಯ್ಯ :— ಕಾವ್ಯನಾಮ : "ರಾಘವ"
(ಮೈಸೂರು ವೆಂಕಟದಾಸಪ್ಪನವರ ಸೀತಾರಾಮಯ್ಯ)
ತಂದೆ : ಎಂ. ವೆಂಕಟದಾಸಪ್ಪ (ಮೈಸೂರು)
ತಾಯಿ : ಸಾವಿತ್ರಮ್ಮ (ಅರಕಲಗೂಡು ಛತ್ರದ ರಾಮಣ್ಣನವರ ಮಗಳು)
ಒಡಹುಟ್ಟಿದವರು :
ಅಣ್ಣಂದಿರು : ಇಬ್ಬರು (ಈಗ ಇಲ್ಲ)
ತಮ್ಮಂದಿರು : ಇಬ್ಬರು (ಈಗ ಇಲ್ಲ)
ತಂಗಿಯರು : ಇಬ್ಬರು (ಒಬ್ಬಳು ಈಗ ಇಲ್ಲ)
ಪತ್ನಿ : ಸಾವಿತ್ರಮ್ಮ (ಕೋಣನೂರು ನಂಜುಂಡಯ್ಯನವರ ಮಗಳು)
ಗಂಡುಮಕ್ಕಳು : ಐವರು
ಹೆಣ್ಣುಮಕ್ಕಳು : ಒಬ್ಬಳು

ಎಂ. ವಿ. ಸೀ. ಅವರ ಕೃತಿ-ಲೇಖನ ಸೂಚಿ

1. ಕಾವ್ಯ

1 ಹಕ್ಕಿ ಹಾಡು : ಸತ್ಯಶೋಧನ ಪ್ರಕಟನ ಮಂದಿರ, 1944 (ದೇವರಾಜ ಬಹದ್ದೂರ್ ಸಾಹಿತ್ಯ ನಿಧಿಯ ಬಹುಮಾನ 1945. ಕನ್ನಡ ಸಾಹಿತ್ಯ ಪರಿಷತ್ತಿನ ಬಹುಮಾನ, 1945)

2 ಆ ಚಿತ್ರಗಳು ಮತ್ತು ಇತರ ಕಥನ ಕವನಗಳು : ಸತ್ಯಶೋಧನ ಪ್ರಕಟನ ಮಂದಿರ, 1946 (ಆ ಚಿತ್ರಗಳು : —ಬಿ.ಎಂ.ಶ್ರೀ ರಜತೋತ್ಸವ ಸ್ವರ್ಣ ಪದಕ ಪಡೆದ ಕವಿತೆ, 1933)

3 ರಾಗ : (ಪ್ರಣಯ ಗೀತಗಳು) : ಸತ್ಯಶೋಧನ ಪ್ರಕಟನ ಮಂದಿರ 1946

4 ಅಶೋಕ ಚಕ್ರ : (ದೇಶಭಕ್ತಿ ಕವನಗಳು) : ಸತ್ಯಶೋಧನ ಪ್ರಕಟನ ಮಂದಿರ, 1947

5 ವಿಶ್ವಜ್ಯೋತಿ ಬಾಪು : ಸತ್ಯಶೋಧನ ಪ್ರಕಟನ ಮಂದಿರ, 1948

6 ರಾಷ್ಟ್ರರಥ : ಸತ್ಯಶೋಧನ ಪ್ರಕಟನ ಮಂದಿರ, 1951

7 ರಾಷ್ಟ್ರದಿನೋತ್ಸವ ಗೀತೆ : ರಾಘವ ಪ್ರಕಾಶನ, 1954

8 ಮುಗಿಯದ ಮಾಯೆ : ರಾಘವ ಪ್ರಕಾಶನ, 1958 (ದೇವರಾಜ ಬಹದ್ದೂರ್ ಸಾಹಿತ್ಯ ನಿಧಿಯ ಬಹುಮಾನ)

9 ಗೀತ ಭಾರತಿ : (ಆಯ್ದ ದೇಶಭಕ್ತಿ ಗೀತೆಗಳ ಸಂಕಲನ) ರಾಘವ ಪ್ರಕಾಶನ 1969

10 ಹಂಸಪಥ : ರಾಘವ ಪ್ರಕಾಶನ, 1971

11 ಬೀಸಿ ಬಂದ ಗಾಳಿ : ರಾಘವ ಪ್ರಕಾಶನ, 1980

12 ಮೊದಲ ಹೆಜ್ಜೆ : (ಪ್ರಾರಂಭದ ಕವನಗಳು) ರಾಘವ ಪ್ರಕಾಶನ 1981.

13 ಕಾವ್ಯಾಲಾಪ : (46 ಬಿಡಿ ಪದ್ಯಗಳ ಸಂಕಲನ ; ಕಾವ್ಯ ಜಿಜ್ಞಾಸೆ ; 1944. ಸುಮಾರು 350 ಪದ್ಯಗಳ ವಿಸ್ತೃತ ಸಂಕಲನ- ಅಪ್ರಕಟಿತ)

14 ಸೌದರ್ಯ ಲಹರಿ : (1980) ಶ್ರೀ ಶಂಕರಾಚಾರ್ಯ ರಚಿತ ಸಂಸ್ಕೃತ, ಸೌಂದರ್ಯ ಲಹರಿಯ ಅನುವಾದ : ಅಪ್ರಕಟಿತ)

15 ಪುರಾತನ ನಾವಿಕ : (ಕೋಲರಿಜ್ ಕವಿಯ Ancient Mariner ಕವನದ ಅನುವಾದ : ಅಪ್ರಕಟಿತ)

3 ಕನ್ನಡದ ಕತೆ : ಕನ್ನಡ ಸಾಹಿತ್ಯ ಪರಿಷತ್ತು, 1979.
4 ವೈದಿಕ ವಿದ್ವಾನ್ ಎಲ್. ರಾಜಾರಾವ್. ಐ. ಬಿ. ಹೆಚ್. ಪ್ರಕಾಶನ ಬೆಂಗಳೂರು 1983.

13. ಜೀವನ ಚರಿತ್ರೆ

1 ವಿವೇಕಾನಂದ : (ನೆಲ್ಲೂರಿನ ಶ್ರೀ ವಿ. ಶ್ರೀ ಕೃಷ್ಣಕುಮಾರಿ ಅವರ ತೆಲುಗು ಕೃತಿಯ ಅನುವಾದ) ವಿವೇಕ ಪಬ್ಲಿಷರ್ಸ್, ಬೆಂಗಳೂರು, 1951.
2 ಎ. ಆರ್. ರಾಜರಾಜವರ್ಮ : (ಕೆ. ಎಂ. ಜಾರ್ಜ್ ಅವರ ಇಂಗ್ಲಿಷ್ ಕೃತಿಯ ಅನುವಾದ ಸಾಹಿತ್ಯ ಅಕಾಡೆಮಿ

14. ಇತರ ಮರುಮುದ್ರಣಗಳು, ಇತ್ಯಾದಿ

1 ರಾಘವ ಕವನಕೋಶ : (ಹಂಸ ಪಥ ಮುಗಿಯುವ ಮಾಯೆ ಮತ್ತು ಗೀತ ಭಾರತಿ ಸಂಕಲನಗಳ ಕೂಡು ಸಂಪುಟ)
2 ಗೀತ ಭಾರತಿ : (ಆಯ್ದ ದೇಶಭಕ್ತಿ ಗೀತೆಗಳ ಸಂಕಲನ) ರಾಘವ ಪ್ರಕಾಶನ. 1969.
3 ಗಂಡಸನ್ನು ಗೆದ್ದವರು : (ಭಾಗ್ಯಲಕ್ಷ್ಮಿ ಮತ್ತು ಸೌಭಾಗ್ಯವತಿ ಕಾದಂಬರಿಗಳ ಕೂಡು ಸಂಪುಟ) ಗೀತ ಬುಕ್ ಹೌಸ್ 1974.
4 ರಸಿಕತೆ : (ಲಲಿತ ಪ್ರಬಂಧ : ಮೂರು ಹೊಸ ಪ್ರಬಂಧಗಳ ಜೊತೆಗೆ ಹಳೆಯವು ಕೆಲವನ್ನು ಸೇರಿಸಿ ಪ್ರಕಟಿಸಿದ ಸಂಕಲನ) ಹಂಸಧ್ವನಿ ಪ್ರಕಾಶನ
5 ದಾದಿರನ್ನೆ (ಮಕ್ಕಳಿಗಾಗಿ ಕಥನ ಕವನ : ಚಿತ್ರಗಳು ಮತ್ತು ಇತರ ಕವನ ಸಂಕಲನಗಳಿಂದ ಆಯ್ದು) ಹಂಸಧ್ವನಿ ಪ್ರಕಾಶನ 1979.
6 ಕಾವ್ಯ ಪ್ರದೀಪಿಕೆ : (ಲೇಖಕರು : ಎಂ ವಿ. ಸೀ.: ಜಿ.ವಿ.: ಕೆ.ವೆಂ. ಕಾವ್ಯ ಸಮೀಕ್ಷೆ) ಕರ್ನಾಟಕ ಸಂಘ ಗೌ॥ ಕಾಲೇಜು. ಬೆಂಗಳೂರು
7 ಬಿರಿಮೊಗ್ಗು : (ವಿದ್ಯಾರ್ಥಿಗಳ ಬರಹ) ಸಂಪಾದಿತ : ಕ.ಸಂಘ ಗೌ॥ ಕಾಲೇಜು.
8 ಕೊಡರು : (ವಿದ್ಯಾರ್ಥಿಗಳ ಕವನ ಸಂಕಲನ) ಸಂಪಾದಿತ ; ಕ. ಸಂಘ ಗೌ : ಕಾಲೇಜು
9 ಹೊಳಪು-ಧುಮುಕು : (ಬೇರೆ ಬೇರೆ ಕವಿಗಳ ಯುದ್ಧಗೀತೆಗಳ ಸಂಕಲನ) ಸಂಪಾದಿತ : ಗೌ: ಕಾಲೇಜು, ಕ.ಸಂಘ

10 ವಿಕಾಸ : (ಮೂರು ಸಂಚಿಕೆಗಳು : ವಿದ್ಯಾರ್ಥಿಗಳ ಪ್ರಬಂಧಗಳು) ಸಂಪಾದಿತ : ಕ.ಸಂಘ, ಗೌ: ಕಾಲೇಜು

11 ಚಿನ್ನದ ಬೆಳಸು : ಸಂಪಾದಿತ ಕನ್ನಡ ಸಾಹಿತ್ಯ ಪರಿಷತ್ತಿನ ಸ್ವರ್ಣ ಮಹೋತ್ಸವದ ಪ್ರಕಟನೆ, ಕ.ಸಾ.ಪ. 1970

12 ಕೌಸ್ತುಭ : ಸಂಪಾದಿತ ; ಕನ್ನಡ ಮತ್ತು ಇಂಗ್ಲಿಷಿನಲ್ಲಿ : ಕನ್ನಡ ಸಾಹಿತ್ಯ ಪರಿಷತ್ತಿನ ವಜ್ರ ಮಹೋತ್ಸವ ಪ್ರಕಟನೆ, ಕ.ಸಾ.ಪ. 1977.

13 ಆಕಾಶಯಾನ : (ಕೆ.ಪಿ. ರಾವ್ ಅವರ ಆಂಗ್ಲ ಕಿರುಹೊತ್ತಗೆಯ ಅನುವಾದ ಮೈಸೂರು ವಿಶ್ವವಿದ್ಯಾನಿಲಯ, 1944.

ಲೇಖನಸೂಚಿ – ಕೃತಿ ಸಮೀಕ್ಷೆ

1 ಕುಮಾರ ಸಂಭವ—ಕಾವ್ಯ ಪ್ರದೀಪಿಕೆ 1958

2 ಕುವೆಂಪು ಅವರ ಪ್ರೇಮದರ್ಶನ :—ಉಪಾಯನ ಕೃತಿ. ಕರಂಡ ಶ್ರೀ ಕುವೆಂಪು ಸಂಭಾವನಾಗ್ರಂಥ, ಚಿಕ್ಕಮಗಳೂರು 1969

3 ಡಿ. ವಿ. ಜಿ. ಅವರ ನಿವೇದನ : ಕುಸುಮಾರ್ಪಣೆ, ಬೆಂಗಳೂರು

4 ತಿಮ್ಮಪ್ಪದಾಸರ ಕೃಷ್ಣದರ್ಶನ : ಜೀವನ 29-9-1969

5 ಗೊರೂರು ಅವರ 'ಹಳ್ಳಿಯ ಚಿತ್ರಗಳು : ಗೊರೂರು ಗೌರವಗ್ರಂಥ ಮೈಸೂರು 1973

6 ವಿನಾಯಕರ 'ಚೆಲುವು ನಿಲುವು' (ಪ್ರಬಂಧಗಳು) : ವಿನಾಯಕ ವಾಙ್ಮಯ ಮೈಸೂರು 1969

7 ಶ್ರೀನಿವಾಸರ ಗೇಯ ಕಾವ್ಯ : 'ಶ್ರೀನಿವಾಸ', ಬೆಂಗಳೂರು

ವಿಚಾರ ಪ್ರಬಂಧ

1 ಇಂದಿನ ಜೀವನ ದರ್ಶನ : ನಂದಿನಿ (ದಸರಾ ವಿಶೇಷಾಂಕ)

2 ಜ್ಞಾನದೀಪ : ವಿಶ್ವಕರ್ನಾಟಕ (ದೀಪಾವಳಿ ಸಂಚಿಕೆ) 1949

3 ವಿದ್ಯಾಭ್ಯಾಸದ ಪರಿ—ಗುರಿ : ಶಿಕ್ಷಣ-ಸಂಸ್ಕೃತಿ, ಬೆಂಗಳೂರು 1973

4 ಸಂಯಮ ಪಾಲನದಿಂದಲೇ ಸಾಹಿತ್ಯದ ಉಳಿವು : ವಿಶ್ವಕರ್ನಾಟಕ, 15-8-1948

5 ಭಾಗವತಧರ್ಮ : ಸೇವಾಸದನ, ಜನವರಿ 1976

6 ಭಾವೈಕ್ಯ : ಸಾಧನೆ 1981

7 ಕನ್ನಡಕ್ಕೆ ಕ್ರೈಸ್ತರ ಕಾಣಿಕೆ : ಕನ್ನಡ ನುಡಿ, 29-7-1966

6 ತಿರುಕಿಯ ಕನಸು : ಅಪ್ರಕಟಿತ (ಮಕ್ಕಳಿಗಾಗಿ)
7 ಕುಮಾರ ಗೌತಮ : ಹಂಸಧ್ವನಿ ಪ್ರಕಾಶನ, 1979, (ಮಕ್ಕಳ ನಾಟಕ)
8 ಕೈಕೋಲು : ಕಾವ್ಯಾಲಯ, 1979 (ಮಕ್ಕಳ ನಾಟಕ)
9 ಕರುಣೆಯ ಕುಡಿ : ರಾಘವ ಪ್ರಕಾಶನ, 1980 (ಮಕ್ಕಳ ನಾಟಕ)

7. ಪ್ರಬಂಧಗಳು

1 ಹಿಡಿಹೂವು : ರಾಘವ ಪ್ರಕಾಶನ, 1946 ('ಕನ್ನಡಮ್ಮನ ಕೊರುಗು' ಶೀರ್ಷಿಕೆಯಲ್ಲಿ ಪುನರ್ಮುದ್ರಿತ, 1983)
2 ಮುಗಿಲುಗಳು : ಎಸ್. ಎಸ್. ಎನ್. ಬುಕ್ ಡಿಪೋ. 1950, (ದ್ವಿ. ಮು. ಧೂಮಲೀಲೆ ಮತ್ತು ಮುಗಿಲುಗಳು : ರಾಘವ ಪ್ರಕಾಶನ, 1959)
3 ಬಾಳಿನ ಬುತ್ತಿ : ಸಾಹಿತ್ಯ ಮಂದಿರ, ಬೆಂಗಳೂರು 1957

8. ವ್ಯಕ್ತಿ ಚಿತ್ರ

1 ಗುರುಹಿರಿಯರು ಮತ್ತು ಗೆಳೆಯರು (ಅಪ್ರಕಟಿತ)

9. ಕಾವ್ಯಮೀಮಾಂಸೆ

1 ಭಾರತೀಯ ಕಾವ್ಯಮೀಮಾಂಸೆಗೆ ಕನ್ನಡ ಕವಿಗಳ ಕೊಡುಗೆ : ಮೈಸೂರ ವಿಶ್ವವಿದ್ಯಾನಿಲಯ 1970
2 ಕನ್ನಡ ಸಾಹಿತ್ಯದಲ್ಲಿ ಶಾಂತರಸ : ಕರ್ನಾಟಕ ವಿಶ್ವವಿದ್ಯಾಲಯ, 1970 ? 1973

10. ಗ್ರಂಥ ಸಂಪಾದನೆ

1 ಕವಿರಾಜಮಾರ್ಗ : ಕರ್ನಾಟಕ ಸಂಘ, ಗೌ : ಕಾಲೇಜು, ಬೆಂಗಳೂರು 1968, ಇದೇ ಗ್ರಂಥದ ವಿದ್ಯಾರ್ಥಿಗಳ ಆವೃತ್ತಿ ಡಿ. ವಿ. ಕೆ. ಮೂರ್ತಿ ಮೈಸೂರು, 1975
2 ಉದಯಾದಿತ್ಯಾಲಂಕಾರ : ಡಿ. ವಿ. ಕೆ. ಮೂರ್ತಿ, ಮೈಸೂರು 1969
3 ಅರ್ಚನ : ಬೆಂಗಳೂರು ವಿಶ್ವವಿದ್ಯಾಲಯ, 1971.
4 ಕೀರ್ತನ ಕುಸುಮಾಂಜಲಿ : ಬಿ. ಎಂ. ಶ್ರೀ. ಪ್ರತಿಷ್ಠಾನ, 1980

5 ಕವಿ ಕಪಿವೆಂಕಣ್ಣನ ಕೃತಿಗಳು : ಕೆಳದಿ ಗುಂಡಾಜೋಯಿಸರೊಂದಿಗೆ ; ಕೆಳದಿ ಮ್ಯೂಸಿಯಂ 1980

6 ಸೂತ ಭಾರತ : ಶ್ರೀ ಕೃಷ್ಣಭಟ್, ಎಂ. ಜಿ. ಹೆಗಡೆ ಅವರೊಂದಿಗೆ ಬಿ. ಎಂ. ಶ್ರೀ. ಪ್ರತಿಷ್ಠಾನ 1982

7 ಸರ್ವಜ್ಞ ವಚನಗಳು : ಕೆ. ಆರ್. ಗಣೇಶ್ ಮತ್ತು ವಿ. ವೆಂಕಟರಾವ್ ಅವರೊಂದಿಗೆ ; ಬಿ. ಎಂ. ಶ್ರೀ ಪ್ರತಿಷ್ಠಾನ 1982.

8 ಕೃಷ್ಣದೇವರಾಯನ ದಿನಚರಿ : ಡಾ|| ವಿ. ಎಸ್. ಆಚಾರ್ ಅವರೊಂದಿಗೆ: ಬಿ. ಎಂ. ಶ್ರೀ ಪ್ರತಿಷ್ಠಾನ 1983

9 ದ್ರುವ ಚರಿತ್ರೆ : ಡಾ|| ಎಸ್. ಎಸ್. ಲಕ್ಷ್ಮೀನಾರಾಯಣ ಭಟ್ಟರೊಂದಿಗೆ ಬಿ. ಎಂ. ಶ್ರೀ. ಪ್ರತಿಷ್ಠಾನ. 1983

10 ಶ್ರೀ ಕೃಷ್ಣ ಬಾಲಲೀಲೆ : ಬಿ. ಎಂ. ಶ್ರೀ. ಪ್ರತಿಷ್ಠಾನ

11 ವೀರ ಅಭಿಮನ್ಯು : ಕ. ಸಂಘ, ಗೌ|| ಕಾಲೇಜು, 1960, (ಶ್ರೀ ಮತಿ ಎಂ. ಎಲ್. ಲಲಿತಮ್ಮನವರ ಜೊತೆ)

12 ಮಣಿಹ : ಸಿದ್ಧಯ್ಯ ಪುರಾಣಿಕ, ಶೇಷಶಾಸ್ತ್ರಿಗಳ ಜೊತೆಯಲ್ಲಿ ಬಿ. ಎಂ. ಶ್ರೀ. ಪ್ರತಿಷ್ಠಾನ 1982

13 ಬೇಂದ್ರೆ ಸ್ಮೃತಿ : ಗೋವಿಂದ ಅ. ಜಾಲಿಹಾಳರ ಜೊತೆಯಲ್ಲಿ ಬಿ. ಎಂ. ಶ್ರೀ. ಪ್ರತಿಷ್ಠಾನ 1982

14 ಹಸ್ತಪ್ರತಿ ಶಾಸ್ತ್ರ : ಡಾ|| ಚಿದಾನಂದ ಮೂರ್ತಿಯವರ ಜೊತೆಯಲ್ಲಿ ಬಿ. ಎಂ. ಶ್ರೀ. ಪ್ರತಿಷ್ಠಾನ 1983

11. ಶಾಸ್ತ್ರ ಗ್ರಂಥ

1 ಪ್ರಾಚೀನ ಕನ್ನಡ ವ್ಯಾಕರಣಗಳು : ಕನ್ನಡ ಅಧ್ಯಯನ ಸಂಸ್ಥೆ ಮಾನಸ ಗಂಗೋತ್ರಿ, ಮೈಸೂರು 1980

12. ಮಕ್ಕಳ ಸಾಹಿತ್ಯ (ಜೀವನ ಚರಿತ್ರೆ)

1 ಯುಧಿಷ್ಠಿರ : ರಾಷ್ಟ್ರೋತ್ಥಾನ ಪರಿಷತ್ತು, ಬೆಂಗಳೂರು, 1973 (ಕನ್ನಡ ಮತ್ತು ಇಂಗ್ಲಿಷ್‌ಗಳಲ್ಲಿ)

2 ಕವಿರನ್ನ : ರಾಷ್ಟ್ರೋತ್ಥಾನ ಪರಿಷತ್ತು, 1976.

2 ಮಕ್ಕಳ ಪದ್ಯಗಳು

1 ಹೂವಾಡಗಿತ್ತಿ : ಕಾವ್ಯಾಲಯ. ಮೈಸೂರು (1946 ; ತೃತೀಯ ಆವೃತ್ತಿ 1968)

2 ಹಾವಾಡಿಗ : ಕಾವ್ಯಾಲಯ. ಮೈಸೂರು ; 1958 (ದ್ವಿ.ಆ. 1968)

3 ಕೋಡಂಗಿ : ಕಾವ್ಯಾಲಯ. ಮೈಸೂರು : 1979

3. ಸಣ್ಣ ಕಥೆ

1 ಶಿಲಾಮುಖಿ : (ಹಾತಾರ್ನಿನ ಮೂರು ಕಥೆಗಳ ರೂಪಾಂತರ) : ಭಾರತೀ ಸಾಹಿತ್ಯ ಮಂದಿರ, ಬೆಂಗಳೂರು 1936

2 ಯೌವನ ಸುಧೆ : (ಹಾತಾರ್ನಿನ ನಾಲ್ಕು ಕಥೆಗಳ ರೂಪಾಂತರ) ಸ್ವಂತ ಪ್ರಕಟಣೆ, 1946

3 ಮಾರ್ಗದರ್ಶಕ : (13 ಸಣ್ಣ ಕಥೆಗಳು) ಮನೋಹರ ಗ್ರಂಥಮಾಲೆ, ಧಾರವಾಡ, 1940 (ದ್ವಿ. ಮು. 1948)

4 ರತೀದೇವಿ ಮತ್ತು ಇತರ ಕಥೆಗಳು : (7 ಸಣ್ಣ ಕಥೆಗಳು) : ಸತ್ಯಶೋಧನ ಪ್ರಕಟನ ಮಂದಿರ, 1945.

5 ಕರುಣಾಲಹರಿ : (11 ಸಣ್ಣ ಕಥೆಗಳು) : ಶಾರದಾ ಮಂದಿರ, ಮೈಸೂರು, 1955.

6 ಬಿಸಿಲು—ಬೆಳುದಿಂಗಳು : (11 ಸಣ್ಣ ಕಥೆಗಳು) : ಪ್ರಭಾ ಪ್ರಕಟನಾಲಯ, 1953 (ದ್ವಿ. ಮು. ರಾಘವ ಪ್ರಕಾಶನ 1954)

7 ಜೀವನ ನಾಟಕ : (11 ವ್ಯಕ್ತಿ ಕಥೆಗಳು) : ರಾಘವ ಪ್ರಕಾಶನ, 1961 (ರಾಜ್ಯ ಸರಕಾರದ ಪ್ರಶಸ್ತಿ)

8 ಗುಂಡಿನೇಟು ಮತ್ತು ಇತರ ಕಥೆಗಳು : ಕರ್ನಾಟಕ ಸಂಘ, ಗೌ॥ ಕಾಲೇಜು ಬೆಂಗಳೂರು : 1966 (ಪುಷ್ಕಿನ್ನನ 5 ಕಥೆಗಳ ಅನುವಾದ)

9 ಸಿಲ್ಬಾಣಗಳ ನಡುವೆ : (25 ಸಣ್ಣ ಕಥೆಗಳು) : ರಾಘವ ಪ್ರಕಾಶನ 1974

10 ವಿರಹಿಗಳ ಶೃಂಗಾರ : (ಕನ್ನಡ ಕಾವ್ಯಗಳಿಂದ ಆಯ್ದ ಪ್ರಣಯ ಪ್ರಸಂಗಗಳು —ಅಪ್ರಕಟಿತ)

4. ಕಾದಂಬರಿ

1 ಭಾಗ್ಯಲಕ್ಷ್ಮಿ : ಎಸ್.ಎಸ್.ಎನ್. ಬುಕ್ ಡಿಪೋ, ಬೆಂಗಳೂರು ; 1942 (ದ್ವಿ. ಮು. 1944)

2 ರಾಬಿನ್‌ಸನ್ ಕ್ರೂಸೊ (1) : ಎಸ್. ಎಸ್. ಎನ್. ಬುಕ್ ಡಿಪ್ಪೋ, ಬೆಂಗಳೂರು 1948
3 ಮಾದನ ಮಗಳು : ಮನೋಹರ ಗ್ರಂಥಮಾಲೆ, 1950 (ದೇವರಾಜ ಬಹುದ್ದೂರ್ ಸಾಹಿತ್ಯ ನಿಧಿ ಬಹುಮಾನ)
4 ಸೌಭಾಗ್ಯವತಿ : ಎಸ್.ಎಸ್.ಎನ್. ಬುಕ್ ಡಿಪ್ಪೋ, 1951
5 ನಂಜಿನಸವಿ : ಉಷಾ ಸಾಹಿತ್ಯ ಮಾಲೆ, ಮೈಸೂರು 1952
6 ಸ್ನೇಹದ ಕಾಣಿಕೆ : ರಾಘವ ಪ್ರಕಾಶನ 1953
7 ತಾಯಿ ಬಯಕೆ : ಸುಧಾ ಪ್ರಕಾಶನ : 1954 (ದ್ವಿ. ಮು. ಶಾರದಾ ಪ್ರಕಟನಾಲಯ, ಬೆಂಗಳೂರು 1959)
8 ಕುಂಕುಮ ಭಾಗ್ಯ : ಉಷಾ ಸಾಹಿತ್ಯ ಮಾಲೆ 1955.
9 ಜೀವನದ ಜೊತೆಗಾತಿ : ಶಾರದಾ ಪ್ರಕಟನಾಲಯ 1959
10 ಜೂಡಿ ಲಕ್ಷ್ಮಿ : (ಇಂಗ್ಲಿಷಿನಿಂದ ಅನುವಾದ) ನ್ಯಾಷನಲ್ ಬುಕ್ ಟ್ರಸ್ಟ್ 1965.
11 ಏಳು ಇಪ್ಪಾರಿನ ಮನೆ : (ಹಾತಾರ್ನಿನ ಕಾದಂಬರಿಯ ಅನುವಾದ) ಕಾವ್ಯಾಲಯ, 1966.

5. ಸಾಹಿತ್ಯ ಸಮೀಕ್ಷೆ

1 ಹೊಸಕನ್ನಡ ಸಾಹಿತ್ಯ ಮತ್ತು ಇತರ ಲೇಖನಗಳು : ರಾಘವ ಪ್ರಕಾಶನ, 1958 (19 ಲೇಖನಗಳು)
2 ಕನ್ನಡ ಜೀವನ ಚರಿತ್ರೆ : ಕನ್ನಡ ಸಾಹಿತ್ಯ ಪರಿಷತ್ತು 1973.
3 ಶಾಸ್ತ್ರ ಸಾಹಿತ್ಯ : ಬೆಂಗಳೂರು ವಿಶ್ವವಿದ್ಯಾಲಯ 1975.

6. ನಾಟಕ

1 ಹೂವಿನ ಆಸೆ : ಭಾರತೀ ಸಾಹಿತ್ಯ ಮಂದಿರ, 1936 (ದ್ವಿ.ಮು. 1943)
2 ತೆರೆಮರೆಯ ಚಿತ್ರಗಳು : ಕಾವ್ಯಾಲಯ, 1941.
3 ಸ್ವಯಂವರ : ರಾಘವ ಪ್ರಕಾಶನ, 1953.
4 ಕನಿಯ ಹೆಂಡತಿ : ರಾಘವ ಪ್ರಕಾಶನ, 1955
5 ತೊಟ್ಟಿಲು ತೂಗದ ಕೈ : ಶಾರದಾ ಪ್ರಕಟನಾಲಯ, 1959 (ಮೈಸೂರು ಸರ್ಕಾರದ ಬಹುಮಾನ)

ಸಾಹಿತ್ಯಸಮೀಕ್ಷೆ

1 ಕನ್ನಡ ಕಾವ್ಯ : 1920-1947 (ಸಾಹಿತ್ಯ ಮತ್ತು ಸಾಮಾಜಿಕ ಮೌಲ್ಯ). ಬೆಂಗಳೂರು ವಿಶ್ವವಿದ್ಯಾಲಯ. 1973

2 ಕವಿಕಂಠ ಕದಲು : ಸಂಗೀತ ಮಂಡಲಿ ಪತ್ರಿಕೆ. 6-2-1945

3 ಚಳವಳಿಯಿಂದ ಸಾಹಿತ್ಯಕ್ಕೆ ಧಕ್ಕೆಯೇ? : [illegible]. ಏಪ್ರಿಲ್ 1946

4 ಜನರಿಗಾಗಿ ಸಾಹಿತ್ಯ : ಆಕಾಶವಾಣಿ. 1960

5 ಪರಿವರ್ತನಕಾರ (ಸಣ್ಣ ಕತೆ) : ಕನ್ನಡ ನುಡಿ : (ವರ್ಷ ?)

6 ಪದ್ಯಕಾವ್ಯಕ್ಕೆ ಪುನರುತ್ಥಾನ : ಕನ್ನಡ ನುಡಿ. 14-7-1951

7 ಸಣ್ಣ ಕತೆಗಳ ಬೆಳವಣಿಗೆ (ಸ್ವಾತಂತ್ರ್ಯಾನಂತರದಲ್ಲಿ) : ಕನ್ನಡ ನುಡಿ. 26-12-1963

8 ಸಾಹಿತ್ಯದಲ್ಲಿ ಮೌಲ್ಯಗಳು : ಸಮನ್ವಯ-8. ಬೆಂಗಳೂರು ಆಗಸ್ಟ್ 1969

9 ಸಾಹಿತ್ಯ ಮತ್ತು ಚಿತ್ರಕಲೆ : ಪ್ರಬೋಧಕ 1-8+9. ಫೆಬ್ರವರಿ—ಮಾರ್ಚ್ 1931

10 ಸ್ವಾತಂತ್ರ್ಯೋತ್ತರ ಕನ್ನಡ ಸಾಹಿತ್ಯ : [illegible], ಮೈಸೂರು 1973

11 ಸ್ವಾತಂತ್ರ್ಯೋತ್ತರ ಕನ್ನಡ ಸಾಹಿತ್ಯದ ಒಲವು - ನಿಲವುಗಳು - ವಸ್ತು, ಉದ್ದೇಶ ಮತ್ತು ಪಾತ್ರ : ಸುವರ್ಣ ಸಂಚಯ. ಮೈಸೂರು 1967

12 ಸ್ವಾತಂತ್ರ್ಯೋತ್ತರ ಕನ್ನಡ ಸಾಹಿತ್ಯದಲ್ಲಿ ರಾಷ್ಟ್ರೀಯ ಪ್ರಜ್ಞೆ, 1973

ಸಂಶೋಧನೆ

1 ಉದಯಾದಿತ್ಯಾಲಂಕಾರದ ಕೆಲವು ಸಮಸ್ಯೆಗಳು : ಪರಿಷತ್ ಪತ್ರಿಕೆ. 54-1, 1969

2 ಉದಯಾದಿತ್ಯಾಲಂಕಾರ ಕರ್ತೃ ವಿಚಾರ (ವಿವೇಚನೆ) : ಕರ್ನಾಟಕ ಭಾರತಿ 7-4, 1975

3 ಎರಡನೇ ನಾಗವರ್ಮನ ಕಾಲ ವಿಚಾರ : ಪರಿಷತ್ಪತ್ರಿಕೆ. 54-1, 1969

4 ಓವನಿಗೆ : ಕರ್ನಾಟಕ ಭಾರತಿ. 6-4, 1974

5 ಕನ್ನಡ ಗ್ರಂಥ ಸಂಪಾದನೆಗೆ ತೀ. ನಂ. ಶ್ರೀ.ಯವರ ಕೊಡುಗೆ : ಶ್ರೀಕಂಠ ತೀರ್ಥ, ಬೆಂಗಳೂರು-1976

6 ಕವಿರಾಜಮಾರ್ಗದ ಹೆಸರು—ಒಂದು ಟಿಪ್ಪಣಿ : ಪ್ರಬುದ್ಧ ಕರ್ನಾಟಕ, 53.1

7 ಕವಿರಾಜಮಾರ್ಗದಲ್ಲಿನ ರಾಮಾಯಣ ಪದ್ಯಗಳು: ಪರಿಷತ್ಪತ್ರಿಕೆ, 51-1, 2, 1966

8 ಕವಿರಾಜಮಾರ್ಗದಲ್ಲಿ ಕಾರಕ ವಿಚಾರ : ಸಾಧನೆ, 4-3, 1975

9 ಕವಿರಾಜಮಾರ್ಗದ ಮೇಲೆ ಉದ್ಭಟನ ಪ್ರಭಾವ : ಸಾಧನೆ, 4-2, 1975

10 ಕವಿರಾಜಮಾರ್ಗದ ಮೂರು ಶಬ್ದಗಳ ವಿಚಾರ — ಕಿಲ್ ತ್ಲ್ ಪೊಳ್ (ಪುಳ್ ?)

11 ಕವಿರಾಜಮಾರ್ಗ : ಶ್ರೀ ವಿಜಯ ಕರ್ತೃತ್ವದ ಬಗೆಗೆ ಹೊಸ ಬೆಳಕು, ಪ್ರಬುದ್ಧ ಕರ್ನಾಟಕ 55-3

12 ಪುರುಷವ್ರತ ಮತ್ತು ಕವಿರಾಜಮಾರ್ಗ : ಪರಿಷತ್ಪತ್ರಿಕೆ

13 ಕವಿರಾಜಮಾರ್ಗ : ಕಾಲ ಕರ್ತೃ, ಸ್ವರೂಪ : ಕವಿಕಾವ್ಯ ಪರಂಪರೆ 1 ಐ. ಬಿ. ಎಚ್. ಪ್ರಕಾಶನ. ಬೆಂಗಳೂರು, 1975

14 ಶ್ರೀವಿಜಯರ ಕವಿರಾಜಮಾರ್ಗಂ — (ಒಂದು ವಿವರಣೆ) ; ಸಾಧನೆ 5-1, 1976 ಪು. 149,

15 ಸಭಾಮಧ್ಯಲಬ್ಧವರಂ ಶ್ರೀವಿಜಯಂ : ಸಾಹಿತ್ಯ ಜೀವಿ (ಜಿ. ವೆಂಕಟಸುಬ್ಬಯ್ಯ ಅಭಿನಂದನ ಗ್ರಂಥ), ಬೆಂಗಳೂರು 1976

16 ಸರ್ವಜ್ಞನ ತ್ರಿಪದಿಗಳು — ಪುನಃ ಪರಿಷ್ಕರಣದ ಅಗತ್ಯ : ಪರಿಷತ್ಪತ್ರಿಕೆ, 60-1, 1975 ಪು. 43,

ಸಾಹಿತ್ಯ ವಿಮರ್ಶೆ

1 ಕಥಾ ಸಾಹಿತ್ಯ : ಪ್ರಬುದ್ಧ ಕರ್ನಾಟಕ ಚಿನ್ನದ ಸಂಚಿಕೆ 1969

2 ಕನ್ನಡ ಕಾವ್ಯಗಳಲ್ಲಿ ಪ್ರಣಯ ಕಥೆಗಳು (1–6)

(1) ಅಮೃತಮತಿಯ ಅಪಾತ್ರ ಪ್ರಣಯ ; ಚಿತ್ರಗುಪ್ತ ವಾರಪತ್ರಿಕೆ, ಬೆಂಗಳೂರು, 17-2—1950

(2) ಪ್ರಣಯಚ್ಚಲಿ ಚಂಡಶಾಸನ ; ಚಿತ್ರಗುಪ್ತ, 24-2, 1950, 3-3-1981

(3) ಕೀಚಕ ವಿಲಾಸ : ಚಿತ್ರಗುಪ್ತ. 10-3-1950, 17-3-1958

(4) ಪ್ರಣಯಾವರ್ತ : ಚಿತ್ರಗುಪ್ತ 24-3-1950, 31-3-1950

(5) ಪಾಂಡುವಿನ ಮರಣ : ಚಿತ್ರಗುಪ್ತ 7-4-1950

(6) ಕಾಮಲತೆ : ಚಿತ್ರಗುಪ್ತ, 28-4-1950

3 ಕನ್ನಡ ನಾಟಕ : ಕನ್ನಡ ನುಡಿ 3-7-1940

4 ಕನ್ನಡ ಸಾಹಿತ್ಯದ ಪಕ್ಷಿನೋಟ (ಹೊಸಗನ್ನಡ ಯುಗ), ಕನ್ನಡ ನುಡಿ, 5-39, 1962

5 ಕನ್ನಡ ಸಾಹಿತ್ಯದಲ್ಲಿ ಮಾನವ ಭ್ರಾತೃತ್ವ ಕಲ್ಪನೆ, ನಂದನವನ (ಶ್ರೀ ರಾಘವೇಂದ್ರಸ್ವಾಮಿ ಅಭಿನಂದನ ಗ್ರಂಥ), ಮಲ್ಲಾಡಿಹಳ್ಳಿ 1978

6 ಕನ್ನಡ ಸಾಹಿತ್ಯದಲ್ಲಿ ಸ್ವಾತಂತ್ರ್ಯದ ಹೆಜ್ಜೆಗಳು : ಮಲೆನಾಡು, ಆಗಸ್ಟ್ 1956

7 ಕವಿರಾಜಮಾರ್ಗ—ಕನ್ನಡಿಗರ ಕೈಗನ್ನಡಿ : ಜನಪದ, 11-13, ನವೆಂಬರ್ 1, 1976

8 ಕಾವ್ಯಗಳಲ್ಲಿ ಕರ್ನಾಟಕ : ಕನ್ನಡ ನುಡಿ 37-1, 1974

9 ಕುಮಾರವ್ಯಾಸನ ವರ್ಣನೆ : ಕನ್ನಡ ನುಡಿ 1938

10 ಕುವೆಂಪು ಸಾಹಿತ್ಯದಲ್ಲಿ ಸಾರ್ವಕಾಲೀನ ಪ್ರಜ್ಞೆ : ಸಹ್ಯಾದ್ರಿ, ಮೈಸೂರು 1975

11 ಪಂಪನ ಕಾವ್ಯಧರ್ಮ, ಸತ್ಸಂಗ 1968

12 ವಿಮರ್ಶಕ ನರಸಿಂಹಸ್ವಾಮಿ : ಚಂದನ, ಬೆಂಗಳೂರು 1972

13. [illegible]

14. [illegible]

ಗ್ರಂಥ ವಿಮರ್ಶೆ

1 ಅಭಿಜ್ಞಾನ ಶಾಕುಂತಲ (ವಿಜಯ ಗ್ರಂಥ ಪ್ರಕಾಶನ) : ಸುಧಾ 23-6-1974

2 ಆಳಿದ ಮಹಾಸ್ವಾಮಿಯವರು (ಶಿ.ಕೆ.ನಂ) : ಪರಿಷತ್ಪತ್ರಿಕೆ, 26-2

3 ಕರ್ಣಾಟಕ ಕಾದಂಬರಿ (ಸಂ : ಎನ್. ಅನಂತರಂಗಾಚಾರ್) ಸುಧಾ 11-5-1975

4 ಕನ್ನಡ ಕಾವ್ಯಗಳು : ಜೀವನ, ಸಂ : 24

5 ಕನ್ನಡ ಒಗಟುಗಳು (ಶ್ಯಾಮಲಾ)
ಕನ್ನಡ ಮಾತಾಡುವ ಅಥವಾ ಕರ್ನಾಟಕದಲ್ಲಿಯ ಮಹಾರಾಷ್ಟ್ರ ಪ್ರದೇಶ (ವೆಂ. ಶ್ರೀ ಪಂಡಿತ) : ಪರಿಷತ್ಪತ್ರಿಕೆ, 22-1, 2

6 ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ (ಡಾ: ಎಂ.ಎಂ. ಕಲಬುರ್ಗಿ) : ಕನ್ನಡನುಡಿ 16-8 1973.

7 ಜೈನರ ಮೂರು ರತ್ನಗಳು (ಕೆ. ಭುಜಬಲಿಶಾಸ್ತ್ರಿ), ಪರಿಷತ್ಪತ್ರಿಕೆ, 20-2

8 ದ್ರಾವಿಡ ಭಾಷಾ ವಿಜ್ಞಾನ (ಹಂಪನಾ) ಕನ್ನಡನುಡಿ, 11 13, 1968

9 ನಾಡಹಬ್ಬ (ಶ್ರೀ ರಾಮರಾಯರು) ; ವಿದೇಶೀಯ ಲೋಕೋಪಕಾರಿಗಳು (ಎಸ್. ಸ್ವಾಮಿರಾವ್), ಸರ್. ಸಿ. ವಿ. ರಾಮನ್ ಅವರ ಜೀವನ ಚರಿತ್ರೆ (ಎಸ್. ಎಸ್. ಲೋಕನಾಥ್), ಹಾಡಿನ ಚಿಲುಮೆ (ಹೊಯಿಸಳ) : ಪರಿಷತ್ಪತ್ರಿಕೆ, 23-1-1938, ಪು : 58.

10 ನಿಷ್ಕ್ರಮಣ (ಹ.ಪಿ. ಜೋಶಿ) ; ಪರಿಷತ್ಪತ್ರಿಕೆ, 20-1

11 ಪಕ್ಷ್ಮಲಾಕ್ಷಿ (ಎಂ ಜಿ. ಸಂಜುಂಡಾರಾಧ್ಯ) ; ಮಹಾಯುದ್ಧ (ವೈ. ಎಂ. ಷಣ್ಮುಖಯ್ಯ); ಮಾಂಗಲ್ಯ (ಓ.ಎನ್.ಲಿಂಗಣ್ಣಯ್ಯ) ; ವೈಶಾಖ ಅಥವ ಬುದ್ಧನ ಕಡೆಯ ದಿನಗಳು (ಎಂ. ಗೋವಿಂದಪೈ) : ಪುಸ್ತಕ ಪ್ರಪಂಚ, 2 2. ಸುವರ್ಣ ಸಂಪುಟ (ಎಚ್.ಪಿ. ವೀರಪ್ಪ) ಸೆಪ್ಟೆಂಬರ್ 1943

12 ಭಾನುವಾರದ ಬಯಕೆ (ರ.ಪೆಂ. ಶ್ರೀನಿವಾಸ್) ; ಬೃಂದಾವನ : ಜೀವನ ಸಂ. 14

13 ಮುಮುವಣಿಗ ಸೋಮಶೇಖರ (ಪರಿಮಿಪದ್ಮನಾಭಯ್ಯ) ಪರಿಷತ್ಪತ್ರಿಕೆ 20-1

14 ಮಹಾದೇವಿಯಕ್ಕನ ಚರಿತ್ರೆ (ಟಿ.ಎನ್. ಮಹದೇವಯ್ಯ) ಪರಿಷತ್ಪತ್ರಿಕೆ 2'-1-2

15 ಮಾಕಂದ (ಸಂ : ಆನಂದಮಿತ್ರ) ; ತರುಣ-ಧಮನಿ (ಚಕ್ರಪಾಣಿ ;) ಪರಿಷತ್ಪತ್ರಿಕೆ, 22-3. 1937, ಪು ; 193

16 ಸಿಕ್ಷವಾಣಿ (ಸಂ : ಸಿದ್ಧಲಿಂಗಪ್ಪ) ಪರಿಷತ್ಪತ್ರಿಕೆ, 19-3

17 ವಾಲ್ಮೀಕ ವೀರರತ್ನ ಪ್ರಕಾಶಿಕೆ : ಪರಿಷತ್ಪತ್ರಿಕೆ, 20-2

18 ಶ್ರೀ ರಾಮಾಶ್ವಮೇಧಂ (ಗೋವಿಂದ ಪೈ ಸ್ಮಾರಕ ಗ್ರಂಥ ಪ್ರಕಾಶನ) : ಸುಧಾ 16-6-1974.

19 ಸಂಸ್ಕೃತಿಯ ಸ್ವರೂಪ (ಡಿ.ವಿ.ಜಿ.) : ಜೀವನ 20-5, ಆಗಸ್ಟ್ 1954

20 ಸವ್ಯಸಾಚಿ (ಉಡುಪಿ ಕಲಾವೃಂದದ ಪ್ರಕಟನೆ) ; ಗಿರಿಜಾ ಕಲ್ಯಾಣವು(ಪಂಪಾ ಸಾಹಿತ್ಯ ಪ್ರಕಟನಾಲಯ ದಾವಣಗೆರೆ) ಕನ್ನಡ ನುಡಿ 20-10-1957

21 ಸಾಹಿತ್ಯ ವಾರ್ಷಿಕ 1971, (ಬೆಂ.ವಿ.ವಿ) : ಸುಧಾ, 19-8-1973

22 ಸುಭಾಷಿತಗಳು (ಅನು : ಎಸ್. ರಂಗಾಚಾರ್) ಪ್ರಜಾವಾಣಿ 20-5-1956

23 ಸೌಂದರ್ಯಲಹರಿ ಮತ್ತು ಶಿವಮಹಿಮೆ ಸ್ತೋತ್ರ, (ಡಾ: ಬಿ. ಪುಟ್ಟಸ್ವಾಮಯ್ಯ ನವರ ಪುಸ್ತಕಕ್ಕೆ ಬರೆದುಕೊಟ್ಟ ಅಭಿಪ್ರಾಯ)

24 ಸ್ನೇಹಸೂಕ್ತ : ಜೀವನ ನಂ. 13

25 ಹೊನಲು (ಎಂ.ಜಿ. ಆನಂದಮೂರ್ತಿ) ಕನ್ನಡ ನುಡಿ ಸಂ. 1, 1938

26 ಹುಲಿಯ ಮೇವು ; ದ್ವಾಸುಪರ್ಣ ; ಬೆಟ್ಟದಿಂದ ಬಟ್ಟಲಿಗೆ, ಆಕಾಶವಾಣಿ

27 ಹೊಸ ಪುಸ್ತಕಗಳು : ಅಗ್ನಿಕನ್ನೆ, ವಿಲಾಸಿನಿಯ ಅಕಾಲಮರಣ, ನಳಪಾಕ, ಗಾಳಿಯ ಹಾವಳಿ, ಸುಧಾಮ ಚರಿತ್ರೆ, ಪಂಡಿತ ಜವಹರಲಾಲ ನೆಹರು ಚಕ್ರವರ್ತಿಯ ಕೋಗಿಲೆ, ಚಂದ್ರನನ್ನು ತಂದವರು, ಅಲಿವರ್ ಟ್ರಿಸ್ಟ್, ಬಮ್ಮೇರ ಪೋತನ, ಅಂದಿನ ಕನ್ನಡ ಕಾವ್ಯದ ಗೊತ್ತುಗುರಿಗಳು.

—ಪುಸ್ತಕ ಪ್ರಪಂಚ, 1-8 ಮಾರ್ಚ್ 1934

ಚರಿತ್ರಾಹೀನರು, ಕಳ್ಳಸಂತೆ ಬೆಸ್ತರ ಕರಿಯ, ಪುರಂದರದಾಸರ ಪರಿಚಯ, ಬೆಳಗಾವಿಯಲ್ಲಿ ಕನ್ನಡ ಚಳವಳಿಯ ಸಮಸ್ಯೆ, ಕರ್ನಾಟಕದ ಕಣ್ಮಣಿಯಾದ ಆಗಸ್ಟ್ ವೀರರು, ಕ್ರಾಂತಿಯ ನೂರು ವರುಷ, ಗಾಂಧೀಜಿಯವರ ರಾಜಕೀಯ ಪತ್ರಗಳು, ನಡುಗಾಲ ಪ್ರಭುತ್ವ, ವಿಪರ್ಯಾಸ, ಮೀಸಾಮದುವೆ, ನವೀನ ನಾಟಕಗಳು, ಲೋಪವರಾಪ, ಪುಟಾಣಿ ಪಂಚತಂತ್ರ, ಅಗಲಿದ ಮುಗಳು, ಸುಳ್ಳನ ಸೋಲು. —ಪುಸ್ತಕ ಪ್ರಪಂಚ, 1-8, ಏಪ್ರಿಲ್ 1947

ಪೂರ್ಣಚಂದ್ರ, ಬಾಡದಹೂವು, ಮುಂಬೆಳಗು, ರಾಗ, ಉದ್ಯೋಗ, ರಘುನಾಥನ ಸಾಹಸ, ಸಂಧಿಕಾಲ, ರಕ್ತ ಸರೋವರ, ಕಸದ ಬುಟ್ಟಿ, ಒಡೆದ ಕನ್ನಡಿ ರಾಬಿನ್ ಹುಡ್, ಕಲಿತರ್, ಮರಿ ವಿಜ್ಞಾನಿ, ಅಂಕಲ್ ರಾಬೆ, ಮನೆಮದ್ದು.

—ಪುಸ್ತಕ ಪ್ರಪಂಚ, 1-10, ಮೇ 1947

ಪಲಾಯನ, ರಕ್ತಾಂಜಲಿ, ಪುಣ್ಯಭೂಮಿ, ರುದ್ರಪೀಠ, ಆಹಾರ ವಿಜ್ಞಾನ—ಸಂತಾನ ವಿಜ್ಞಾನ, ದಾಂಪತ್ಯ ವಿಜ್ಞಾನ, ಕಟ್ಟಿಯ ಬಸವೇಶ್ವರನ ವಚನಗಳು, ಅಕ್ಕಮಹಾದೇವಿ, ಅಮ್ಮ ಮತ್ತು ಬಾಬನ ಪಾಠ, ಭಾರತದಿಂದ ತೋಂಗಿರಿ, ಜವಾಬ್ದಾರಿ ಸರ್ಕಾರ, ಕೈಲಾಸಂ.

—ಪುಸ್ತಕ ಪ್ರಪಂಚ, 1-11, ಜೂನ್ 1974

ಕುಮುದಿನಿ, ವಿಧಿ ತಂದ ವಧು, ಸವತಿ, ಲೋಕ ಚರಿತ್ರೆ

—ಪುಸ್ತಕ ಪ್ರಪಂಚ, 1-12, ಜುಲೈ 1947

ಪುನರಾಗಮನ, ಮಾಧವ ಲೀಲೆ, ಕಾಂಚನ ಮೃಗ, ಹೊಸ ಹೆಜ್ಜೆ, ಪ್ರೇತ ಸಂಸಾರ, ಭಾಸನ ಭಾರತ, ಮಂಜಿನ ಮಣಿ, ಕನ್ನಡದಲ್ಲಿ ವಿಡಂಬನ ಸಾಹಿತ್ಯ, ಯುಗಾಂತರ —ಪುಸ್ತಕ ಪ್ರಪಂಚ, 2-1, ಆಗಸ್ಟ್ 1947

ಕರ್ತವ್ಯ, ಮುರುಕು ಮಂಟಪ, ಕಥಾವಲ್ಲರಿ, 1857ರ ದೊಡ್ಡ ದಂಗೆ, ಮಹಾತ್ಮರ ಸ್ವಾತಂತ್ರ್ಯ ಭಾರತದ ರಾಜ್ಯ ಘಟನೆ, ನಾಡ ಪದಗಳು

—ಪುಸ್ತಕ ಪ್ರಪಂಚ, 2-3, ಅಕ್ಟೋಬರ್ 1947

ಅನಕೃ, ಸತೀ ತುಳಸಿ, ಆಶೆ-ನಿರಾಶೆ

—ಪುಸ್ತಕ ಪ್ರಪಂಚ 2-4, ನವೆಂಬರ್ 1947

ಇಂಗ್ಲಿಷ್ ಪತ್ರಿಕೆಗಳಲ್ಲಿ

28 ಬಲಿಯ ಬೀಸಿದರು : ಹಿಂದು, 7-8-1955

29 ಅಭಿವ್ಯಕ್ತಿ : ಡೆಕ್ಕನ್ ಹೆರಾಲ್ಡ್

30 ಚಂದವಳ್ಳಿಯ ತೋಟ : ಹಿಂದು, 10-7-1955

31 ದೇವದಾಸಿ ; ಎಚ್ಚಮನಾಯಕ ; ರಾಜಾಮುಲಯ ಸಿಂಹ ಭಾಗ—1 (ಎಂ.ವಿ. ಶ್ರೀನಿವಾಸಾಚಾರ್ಯ) : ಹಿಂದು, 15-5-1955

32 ಫೋಕ್ಲೋರ್ ಆಸ್ ಕೋರ್ ಆಫ್ ಕಲ್ಚರಲ್ ಹೆರಿಟೇಜ್ : ಡೆಕ್ಕನ್ ಹೆರಾಲ್ಡ್ 6-7-1960

33 ಕನ್ನಡ ಮಿಸ್ಸಲಿಸಿ : ಡೆಕ್ಕನ್ ಹೆರಾಲ್ಡ್ 27-9-1970

34 ಕನ್ನಡ ಡಿಂಡಿಮ (ಕುವೆಂಪು) : ಡೆಕನ್ ಹೆರಾಲ್ಡ್

35 ಕೇದಿಗೆ ವನ : ಹಿಂದು 8-5-1955

36 ನಗೆಯ ನೆಲೆ (ಎಸ್.ಕೆ. ರಾಮಚಂದ್ರರಾವ್) : ನಕ್ಷತ್ರಲೋಕ (ಜಿ.ಟಿ. ನಾರಾಯಣರಾವ್) : ಡೆಕ್ಕನ್ ಹೆರಾಲ್ಡ್

37 ಶ್ರೀ ಶ್ರೀ ಬಾಬಾರವರ ಶಾಸನಗಳು ಮತ್ತು ಅಮೃತವಾಣಿಗಳು : ಹಿಂದು 18-5-1969

38 ಮದುವೆ ಬೇಕೆ (ಎಸ್. ತ್ಯಾಗರಾಜ್), ಕಲ್ಯಾಣಕ್ರಾಂತಿ (ಮಹದೇವಬಣಕಾರ) ಡೆಕನ್ ಹೆರಾಲ್ಡ್

39 ವಿರಾಟಪರ್ವ (ಕುಕ್ಕೆ ಸೀತಾರಾಮಶಾಸ್ತ್ರಿ) : ಡೆಕನ್ ಹೆರಾಲ್ಡ್

40 ಸಮಾಜ ಗರ್ಭದಲ್ಲಿ ಜನಿವಾರ ಮತ್ತು ಶನಿವಾರ : ಹಿಂದು 30-7-1955

41 ಸುಗ್ಗಿಯ ಕಣ (ವಿರೂಪಾಕ್ಷ) : ಹಿಂದು 29-5-1960

42 ಶಬ್ದಮಣಿ ದರ್ಪಣ ದಿಗ್ದರ್ಶನ (ದೊಡ್ಡಸ್ವಾಮಿ) : ಡೆಕನ್‌ಹೆರಾಲ್ಡ್

43 ಡಾ: ಜಾಕೀರ್‌ಹುಸೇನ್ (ಮುತ್ತೂರು ಕೃಷ್ಣಮೂರ್ತಿ) : ಡೆಕನ್‌ಹೆರಾಲ್ಡ್

ಪ್ರಾಯೋಗಿಕ ವಿಮರ್ಶೆ

44 ನಗರದಲ್ಲಿ ನೆರಳು (ಕಣವಿ) : ಜೇಂಬೆಳಕು, (ಚೆನ್ನವೀರ ಕಣವಿ ಸಂಭಾವನಾ ಗ್ರಂಥ) ಧಾರವಾಡ 1980

45 ಶರ್ವರೀ ಸುಷಮೆ (ಪು ತಿ ನ) : ಯದುಗಿರಿ (ಪು ತಿ ನ ಸಂಭಾವನಾ ಗ್ರಂಥ) ಮೈಸೂರು

46 ಶೂದ್ರರ್ಷಿ (ಗೋವಿಂದ ಪೈ) ; ತೆಂಗಾಳಿ (ಶ್ರೀನಿವಾಸ) : ಗೊಮ್ಮಟೇಶ್ವರ (ಕುವೆಂಪು) : ಆಕಾಶವಾಣಿ

ಕಾವ್ಯ ಮೀಮಾಂಸೆ

1 ಅನ್ವಯ ಜಿಜ್ಞಾಸೆ—ಪ್ರತಿಕ್ರಿಯೆ : ಪರಿಷತ್ಪತ್ರಿಕೆ 58-2

2 ಅನುಭೂತಾಭ್ಯಾಸ—ಒಂದು ಅಲಂಕಾರ : ಸಾಧನೆ, 1-1

3 ಆಷಾಢದರ್ಶನ : ಪ್ರಭಾತ ವಿಶೇಷ ಸಂಚಿಕೆ, ಮಂಗಳೂರು
4 ಕನ್ನಡ ಸಾಹಿತ್ಯದಲ್ಲಿ ಶಾಂತರಸ : ಶಂಕರಮಠ ನವರಾತ್ರಿ ಧರ್ಮ ಸಮ್ಮೇಳನದ ಸಾಹಿತ್ಯ ಗೋಷ್ಠಿಯಲ್ಲಿ ಓದಿದ ಪ್ರಬಂಧ 1975 (ಅಪ್ರಕಟಿತ)
5 ಕವಿಗಳ ಅನುಭವ ಸಂಪತ್ತು : 1959
6 ಕರ್ನಾಟಕ ಕಾವ್ಯಕಲೆ: ಜೀವನ 17-196
7 ಕಾವ್ಯದ ವಸ್ತು : ಶ್ರದ್ಧಾಂಜಲಿ (ಪಂಜೆಯ ತಿಮ್ಮಪ್ಪಯ್ಯ ಸ್ಮರಣ ಸಂಪುಟ) ಮಂಗಳೂರು, 1956 ಪು. 174-184
8 ಕಾವ್ಯ ಮೀಮಾಂಸೆಯ ಬಗೆಗೆ ಷಡಕ್ಷರ ಕವಿಯ ಚಿಂತನ ಮಂಥನ : ಮಹಾಕವಿ ಷಡಕ್ಷರಿ, ಎಳಂದೂರು, 1975, ಪು : 53-65
9 ನಾಟಕ ಕಲೆ : ಸಮರ್ಪಣೆ (ಮಂಜಯ್ಯ ಹೆಗ್ಗಡೆ ಅಭಿನಂದನ ಗ್ರಂಥ) 1950, ಪು 227-229
10 ಪಂಪನ ಅಲಂಕಾರ ಧ್ವನಿ : ಸಾಧನೆ, 3-3, 1973
11 ಮಹೋಪನಿಷದ್-ಕನ್ನಡಕ್ಕೆ ಕುವೆಂಪು ಅವರ ಕೊಡುಗೆ : ಉಡುಗೊರೆ, ಮೈಸೂರು 1956
12 ರಸಪ್ರಸ್ಥಾನ : ಸಿದ್ಧಯ್ಯ ಪುರಾಣಿಕ ಅಭಿನಂದನ ಗ್ರಂಥ 1981
13 ಕಾವ್ಯ-ಕವಿಯ ಅನುಭವ : ವಿಭೂತಿ ಗಿರಿಯಾಪುರ 1961, ಪು 454-461
14 ವೀರಶೈವ ಸಾಹಿತ್ಯದಲ್ಲಿ ಲಕ್ಷಣ ಪ್ರಜ್ಞೆ : ಜಂಗಮಜ್ಯೋತಿ, ಚಿತ್ರದುರ್ಗ 1975, ಪು 280
15 ಶಾಕುಂತಲದಲ್ಲಿ ದೈವಪ್ರಾಬಲ್ಯ ದೃಷ್ಟಿ (ಕಾಳಿದಾಸನ ದೃಷ್ಟಿ-ಸೃಷ್ಟಿ) ಕ.ಸಾ. ಪರಿಷತ್ತಿನ ಪ್ರಕಟನೆ 1966
16 1947ರ ಸಣ್ಣ ಕತೆಗಳು : ವಾಹಿನಿ (ದ್ವಿತೀಯ ವಾರ್ಷಿಕ ಸಂಚಿಕೆ) ಪು. 191-198
17 ಶಾಂತರಸ : ಜೈನಧರ್ಮದ ಕೊಡುಗೆ (ಅಪ್ರಕಟಿತ)
18 ವಿಮರ್ಶೆಯ ಭಾಷೆ ಮತ್ತು ಪರಿಭಾಷೆ : (ಬೆಂಗಳೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಕೇಂದ್ರದ ವಿಚಾರಗೋಷ್ಠಿಯಲ್ಲಿ ಓದಿದ ಪ್ರಬಂಧ)

ಛಂದಸ್ಸು, ವ್ಯಾಕರಣ, ಭಾಷೆ

1 ಕನ್ನಡ ಹಾಡಿನ ವಿಕಾಸ ಮತ್ತು ಲಯ ಸ್ವರೂಪ : ಚಿನ್ನದ ಬೆಳಸು 1970
2 ಗೀತಿಕೆ, ಮದನ ಮತಿ, ಅಕ್ಕರಿಕೆ, ಚೌಪದಿ(ಗೆ). ಉತ್ಸಾಹ, ಛಂದೋವಸಂತ ಲಕ್ಷಣ ಪ್ರಯೋಗ : ಛಂದಸ್ಸಿನ ಚರಿತ್ರೆ (ಮೈ.ವಿ.ವಿ.)

3 ಏಳೆಯ ಸ್ವರೂಪ : ಚಿಂತನ ಬೆಂಗಳೂರು 1971-72
4 ಉದ್ದಂಡ ಷಟ್ಪದಿಯ ಸಮಸ್ಯೆ (ಸಂಶೋಧನೆ) : ಪರಿಷತ್ಪತ್ರಿಕೆ 54-1
5 ರಾಘವಾಂಕನು ಷಟ್ಪದಿಯ ನಿರ್ಮಾಪಕನೆ : ಬೆಳ್ಳಿ ಶಾರದೆ ಮೈಸೂರು 1973
6 ಕನ್ನಡ ನುಡಿಯ ಅಳಿವು-ಉಳಿವು : ಅಭಿವಂದನೆ, ಮೈಸೂರು 1956
7 ಕನ್ನಡದ ತದ್ಧಿತ ಪ್ರತ್ಯಯಗಳು : ಅಧ್ಯಯನ, ಬೆಂಗಳೂರು 1980
8 ಕೆಲವು ಅಕ್ಷರಗಳ ಅನುನಾಸಿಕೋಚ್ಚಾರಗಳು : ಕನ್ನಡನುಡಿ, ಜನವರಿ-ಫೆಬ್ರವರಿ 1957
9 ಪ್ರಾಚೀನ ಕನ್ನಡ ವ್ಯಾಕರಣಗಳು : ಕನ್ನಡ ಭಾಷೆಯ ಚರಿತ್ರೆ (ಮೈ.ವಿ.ವಿ)
10 ವ್ಯಾಕರಣ ಮತ್ತು ಶಾಸ್ತ್ರ : ಸದಾನಂದಾಭಿನಂದನ, ಬೆಂಗಳೂರು-1974
11 ಶಬ್ದಾವತಾರ : ಗೋವಿಂದಪೈ ಸ್ಮಾರಕ ಉಪನ್ಯಾಸ (ಗೋಖಲೆ ವಿಚಾರ ಸಂಸ್ಥೆ) 1980
12 ಶಿಲಾಹಾರ—ವಂಶನಾಮದ ನಿರ್ವಚನೆ : ಅಪ್ರಕಟಿತ
13 ಕಾವ್ಯಾಲಾಪಾಂಶ್ಚ ವರ್ಜಯೇತ್ : ಜಿ.ಪಿ. ರಾಜರತ್ನಂ ಸ್ಮಾರಕೋಪನ್ಯಾಸ (ಗೊ.ಸಾ.ವಿ. ಸಂಸ್ಥೆ)
14. ಅವಿನುಭಾರ ಗೆ - ಜೀವನ 1953 (ಸಂ! ಸಂ?)

ಸಂಗೀತ ಮತ್ತು ಕಲೆ

1 ಬೃಹದ್ದೇಶಿ—ಪರಿಚಯಾತ್ಮಕ ಲೇಖನ : ಪರಿಷತ್ಪತ್ರಿಕೆ, 62-1, 2
2 ಭಾರತೀಯ ಚಿತ್ರಕಲೆ—ಅದರ ಚೇತನ ಮತ್ತು ಬೆಳವಣಿಗೆ : ಹೊಸಬೆಳಕು, ಮೈಸೂರು 1960, ಪು : 147-156
3 ರತ್ನಾಕರನ ಕಲಾಭಿಜ್ಞತೆ : ಪರಿಷತ್ಪತ್ರಿಕೆ
4 ಸ್ವತಂತ್ರ ಭಾರತದಲ್ಲಿ ಕಲಾ ಶಿಕ್ಷಣ, ಕನ್ನಡ ನುಡಿ 16-1-1948
5 ಗಮಕ ಕಲೆಯ ಸ್ವರೂಪ : ಗಮಕ ಕಲೆ, ಕ.ಸಾ.ಪ. 1974
6 ಸಂಗೀತ ಸಾಹಿತ್ಯ : ಲೋಚನ 1-1, 1983

ವ್ಯಕ್ತಿ ಚಿತ್ರ

1 ಎತ್ತರದ ವ್ಯಕ್ತಿ (ಬೆಳ್ಳಾವೆ ವೆಂಕಟನಾರಾಯಣಪ್ಪ) : (ಅಪ್ರಕಟಿತ)
2 ಬಿ.ಎಂ.ಶ್ರೀ—(ಅಪ್ರಕಟಿತ)

3 ಕನ್ನಡದ ಹೊಸ ಸಾಹಿತ್ಯದಲ್ಲಿ ಪ್ರೊ : ಎ. ಆರ್. ಕೃಷ್ಣಶಾಸ್ತ್ರಿಗಳ ಸ್ಥಾನ : ಜೀವನ 13-4, 1952 ಪು. 113

4 ಕಲಾ ತಪಸ್ವಿ ಕೆ. ವೆಂಕಟಪ್ಪ ಕನ್ನಡನುಡಿ

5 ಕಲೆಯಲ್ಲಿ ಪರಿಪಕ್ವ ಸ್ಥಿತಿಯನ್ನು ಮುಟ್ಟಿರುವವರು : ಗಾನಕೋಗಿಲೆ ಜಿ. ಚನ್ನಮ್ಮ ಸನ್ಮಾನ ಸಂಚಿಕೆ. ಬೆಂಗಳೂರು, ಪು. 19-20

6 ಡಿ. ವಿ. ಗುಂಡಪ್ಪನವರ ಪೂರ್ಣ ವ್ಯಕ್ತಿತ್ವ : ಸಾರ್ವಜನಿಕ. ಬೆಂಗಳೂರು 10-11-1975

7 ಗುರುವಿನ ಒಂದು ಭಾವಚಿತ್ರ : ಸವಿ ನೆನಪು, ಮೈಸೂರು-1970

8 ಗುರುಸ್ಮರಣೆ : ಅನಂತರಾಗ, ಮೈಸೂರು-1977

9 ಜ್ಯೋತಿರ್ಲಿಂಗಾನುಭವಿ ಶ್ರೀ ಜ.ಚ ನಿ : ದಾಸೋಹ ಬೆಂಗಳೂರು, 1963 ಪು. 1-18

10 ತಪಸ್ವಿನಿ ಯಶೋಧರ : ಪೌರವಾಣಿ 1962

11 ನನ್ನನ್ನು ಕಡೆದ ರೂವಾರಿ ಡಿ.ವಿ.ಜಿ. : ಕರ್ಮವೀರ 8-2-1970

12 ನಾನು ಕಂಡ ಕೆ. ಗೋಪಾಲಕೃಷ್ಣರಾಯರು : ಕನ್ನಡ ನುಡಿ 1.31, 1968 ಪು. 4

13 ನಾನು ಕಂಡ ತೀ. ನಂ. ಶ್ರೀ : ಕನ್ನಡ ನುಡಿ 29-10, 1966

14 ನಾನು ಕಂಡ ಶಿವರುದ್ರಪ್ಪನವರು : ಸ್ನೇಹಕಾರ್ತೀಕ, ಬೆಂಗಳೂರು, 1977

15 ನುಡಿಸೇವೆ : ಸ್ವರ್ಣರಶ್ಮಿ, ಬೆಂಗಳೂರು 1979, ಪು. 11-12

16 ಪೂಜ್ಯ ಎ. ಆರ್. ಕೃ ಅವರನ್ನು ಕುರಿತು ನಾಲ್ಕು ನೆನಪಿನ ಮಾತು : ಕನ್ನಡನುಡಿ, 31-4-5, 1968

17 ಪೂಜ್ಯ ಕೃಷ್ಣಶಾಸ್ತ್ರಿಗಳಿಂದ ನಾನು ಕಲಿತ ಪಾಠ : ಎ. ಆರ್. ಕೃ. ಜೀವನ ಮತ್ತು ಸಾಧನೆ : ಮೈ. ವಿ. ವಿ. 1971

18 ಬಳ್ಳಾರಿಯ ಸಮ್ಮೇಳನ — ಅದರ ಅಧ್ಯಕ್ಷರು : ಕನ್ನಡ ನುಡಿ 21-5, 1978, ಪು. 116-118

19 ವಾಗ್ಗೇಯಕಾರ ವಾಸುದೇವಾಚಾರ್ಯ : ವಾಗ್ಗೇಯಕಾರ ವಾಸುದೇವಾಚಾರ್ಯ, ಮೈಸೂರು 1965, ಪು. 241-248

20 ವಿನಯಶಾಲಿ ವೀರ ಕನ್ನಡಿಗ: ರಸಪುಷ್ಪ, ಮೈಸೂರು 1980, ಪು. 95-101

21 ವಿ. ಸೀ. — ನಾನು ತಿಳಿದ ಹಾಗೆ : ವಿ. ಸೀ. 75, ಬೆಂಗಳೂರು 1973

22 ಶ್ರೀರಾಮಕೃಷ್ಣ ಪರಮಹಂಸರು : ಪ್ರಜಾಮತ

23 ಸಾಹಿತ್ಯ—ರಾಜರತ್ನಂ ಅವರ ಪರಿಚರ್ಯ : ರಾಜಮಾರ್ಗ, ಬೆಂಗಳೂರು 1980
24 ವೈಣಿಕ ವಿದ್ವಾನ್ ಎಲ್. ರಾಜಾರಾವ್ : 1979

ಮುನ್ನುಡಿ : ಪ್ರಸ್ತಾವನೆ

1 ಚಂದ್ರಪ್ರಭ — (ಜಚನಿ ಗ್ರಂಥಕ್ಕೆ) 7-6-1981
2 ಚೆನ್ನಿಗ ಚೆಲವಯ್ಯ (ಸಾ : ಕ. ರಾ. ಕೃ-) ಜನಪದ ಅಕಾಡೆಮಿ, ಬೆಂಗಳೂರು 1965,
3 ನಥೆನಿಯಲ್ ಹಾತಾರ್ನ್‌ರು ಮತ್ತು ಏಳು ಇಪ್ಪಾರಿನ ಮನೆ : ಕಾವ್ಯಾಲಯ, ಮೈಸೂರು
4 ವಿನೋಬ ಜೀವನ ದರ್ಶನ : ಕರ್ನಾಟಕ ಸರ್ವೋದಯ ಸಾಹಿತ್ಯ ಸಮಿತಿ, ಬೆಂಗಳೂರು 1975
5 ವೆಂಕಣ್ಣನ ಕೃತಿಗಳು : ಕೆಳದಿ ಮ್ಯೂಸಿಯಂ, ಕೆಳದಿ 1980
6 ಉದಯ ವಂದನೆ: ವಿ. ಹರಿಕೃಷ್ಣ ಲಕ್ಷಣ ಅಳವರದಾ, ಕವನ ಸಂಕಲ, 1963
7 ಕಾಣಿಕೆ: (ಸಂ: ನಾ. ಗೀತಾಚಾರ್ಯ, ಇತರರು) ಕನ್ನಡ ಅಧ್ಯಯನ ಕೇಂದ್ರ, ಬೆಂ. ವಿ. ವಿ., ಬೆಂಗಳೂರು 1982

ಕನ್ನಡ ವಿಶ್ವಕೋಶದ ಬರಹಗಳು

1 ಅಯ್ಯ ಶಾಸ್ತ್ರಿ ಸೋಸಲೆ
2 ಉದಯಾದಿತ್ಯಾಲಂಕಾರ
3 ಕನ್ನಡದಲ್ಲಿ ಪ್ರಬಂಧ ಸಾಹಿತ್ಯ
4 ಕವಿರಾಜಮಾರ್ಗ
5 ಕುಮಾರವ್ಯಾಸ
6 ಖಗೇಂದ್ರ ಮಣಿದರ್ಪಣ
7 ಗೀತಿಕೆ
8 ಚಂದ್ರಪ್ರಭ ಪುರಾಣ
9 ಚೌಂಡರಸ
10 ಜೀವನ ಚರಿತ್ರೆ
11 ಕರ್ನಾಟಕ ಸಂಘಗಳು
12 ಕನ್ನಡ ಸಾಹಿತ್ಯ ಪರಿಷತ್ತು
13 ಕಾನಕಾನಹಳ್ಳಿ ವರದಾಚಾರ್ಯ
14 ತಿಮ್ಮ
15 ತಿಮ್ಮಪ್ಪದಾಸರು
16 ತುಂಬಲೂರಾಚಾರ್ಯ
17 ನೃಪತುಂಗ
18 ನಾರಾಯಣದಾಸರು
19 ನಾರಾಯಣಶಾಸ್ತ್ರಿ
20 ಪಂಪ
21 ಮೋಟಗಾನಹಳ್ಳಿ ಶಂಕರಶಾಸ್ತ್ರಿ
22 ಮೋಟಗಾನಹಳ್ಳಿ ರಾಮಶೇಷಶಾಸ್ತ್ರಿ
23 ರಾಜಪುರೋಹಿತ ನಾರಾಯಣ ಶ್ರೀನಿವಾಸ
24 ವಾಸುದೇವಾಚಾರ್ಯ
25 ಶ್ರೀವಿಜಯ
26 ಸೂಕ್ತಿ ಸುಧಾರ್ಣವ

ಬಾನುಲಿ ಬರಹ

1 ಅಯೋಧ್ಯೆಯ ಅರಸು [ರೂಪಕ]
2 ಇಂದಿನ ಸಾಹಿತ್ಯದ ಕೆಲವು ಸಮಸ್ಯೆಗಳು [ಭಾಷಣ]
3 ಕನ್ನಡ ಸಣ್ಣಕಥೆ [ಭಾಷಣ]
4 ಕರೀಮುದ್ದು—ಬಿಳೀಹಾವು [ನಾಟಕ]
5 ಕಾರ್ತಿಕೇಯ [ಸಂಭಾಷಣೆ] 11-12-1956
6 ಕೈಕೋಲು [ಮಕ್ಕಳ ಕಾರ್ಯಕ್ರಮ]
7 ಗಾಂಧಿಸ್ಮೃತಿ 10-8-1979
8 ಜನ್ನನ ಯಶೋಧರ ಚರಿತೆ [ರೂಪಕ]
9 ಜೀರ್ಣೋದ್ಧಾರ [ಸಣ್ಣಕತೆ] ಪ್ರ : ಸಮಾಜ ಕಲ್ಯಾಣ
10 ಜೈಮಿನಿ ಭಾರತ [ರೂಪಕ] ಪ್ರ : ಜೀವನ
11 ದಂಡಿಗೆ ಬೆತ್ತ ಹಿಡಿಸಿದಳಯ್ಯ [ರೂಪಕ] 17-1-1981
12 ಬಾಲಬಸವೇಶ್ವರ [ರೂಪಕ—ಮಕ್ಕಳ ಕಾರ್ಯಕ್ರಮ]
13 ಮಾದನ ಮಗಳು [ರೇಡಿಯೋ ರೂಪಾಂತರ] ಧಾರವಾಡ ನಿಲಯ 16-12-1973
14 ಮಾಲಿನಿ [ನಾಟಕ] ಮೂಲ : ರವೀಂದ್ರನಾಥ ಠಾಕೂರ್, ಪ್ರ : ಜೀವನ
15 ಮೋಹನ ಮುರಲಿ [ರೂಪಕ]
16 ಯತ್ರನಾರ್ಯಸ್ತು ಪೂಜ್ಯತೆ [ರೂಪಕ] ಪ್ರ : ಸಮಾಜ ಕಲ್ಯಾಣ
17 ಯುಗಧರ್ಮವಾಣಿ [ಗೇಯರೂಪಕ]
16 ಸಾಹಿತ್ಯ ಸ್ಮೃತಿಗಳು [1 ರಿಂದ 5]
19 ಪುರಂದರದಾಸರು ಮತ್ತು ದಾಸಕೂಟ [ಭಾಷಣ]
20 ಡಾ। ಜ ಪಿ. ರಾಜರತ್ನಂ [ಭಾಷಣ] ನವೆಂಬರ್ 1980
21 ಹಸ್ತಪ್ರತಿಗಳ ಸಂಗ್ರಹಣ ಮತ್ತು ಸಂರಕ್ಷಣ [ಭಾಷಣ] ಪ್ರ : ಮಣಿಹ
22 ಹೋರಾಟ [ರೂಪಕ] ಏಪ್ರಿಲ್ 1960
23 ಹೊಸಗನ್ನಡ ಕವಿತೆಯಲ್ಲಿ ಹೇಮಂತಋತು ವರ್ಣನೆ [ಭಾಷಣ] 13-10-61 ಪ್ರ : ಶಾರದಾ ಮಂದಿರ

ಅನುವಾದ

1 ಆಕಾಶಯಾನ : [ಸರ್ ಕೆ. ಪಿ. ಪುಟ್ಟಣ್ಣ ಚೆಟ್ಟಿ ಪುದುವಟ್ಟಿನ ಗ್ರಂಥಮಾಲೆ] ಮೈ. ವಿ. ವಿ.

2 ಕನ್ನಡ ನಾಡಿನ ಚರಿತ್ರೆ : [ಮೂಲ : ಸಾಲೆತೋರೆ ಅವರ ಲೇಖನ] ಕ. ಸಾ. ಪರಿಷತ್ತಿನ ಪ್ರಕಟನೆ

3 ಠಾಕೂರರು ಮತ್ತು ಪಾಶ್ಚಾತ್ಯ ಸಂಗೀತ :
ರವೀಂದ್ರ ಪೂಜನ : ಬೆಂ. 1963, ಪು- 187-203

4 ತೆಲುಗು ಏಕಾಂಕ ನಾಟಕಗಳು : [ಎನ್. ಬಿ. ಬಿ.] ಅಪ್ರಕಟಿತ

5 ನಿಜವಾದ ಒಲವು, ಒಲ್ಲಭಿಯ ಕಂಗಳು : [ಮೂ : ಷೇಕ್ಸ್‌ಪಿಯರ್ ಸಾನೆಟ್ 116, 130] ಷೇಕ್ಸ್‌ಪಿಯರಿಗೆ ನಮಸ್ಕಾರ, ದೆಹಲಿ 1966

6 ಮಹಾತ್ಮ : [ಪುಸ್ತಕ] ಮೂಲ : ಬಿಂಡೋಲ್ಕರ್ ಭಾಗ 7, ಪು. 277-415, ಮೈ. ವಿ. ವಿ.

ಇಂಗ್ಲಿಷ್ ಬರಹಗಳು

1 Adoption of Devanagari as an Additional script for use in Karnataka in particular and in India in General : (Unpublished)

2 A note on the Historical Information in Neminatha Purana by Karnaparya (C 1140)-Unpublished.

3 Art and Architecture : Kaustubha 1975.

4 Biographical writings in Kannada, 1979.
(Comparative Indian literature Kerala Sahitya Akadamy)

5 Creative writing : P. E. N. 1955.

6 The Case system in Kannada : Kannada Studies Vol : 2-2, 1966.

7 Contribution for symposiam : Treditional Values Modern thinking : Deccan Herald.

8 Chavundaraya and Attimabbe : March of Karnataka 1981 (March)

9 Etymology of silahara-Unpublished.

10 Kannada Literary Journals : P. E. N. August 1963.

11 Kannada Vs Sanskrit ? No : Deccan Herald, 1979.

12 Kavirajamargam : Dravidian Encyclopedia 1982

13 Goravas of Karnataka : SriKanthika Mysore 1973 : pp 316-322.

13a. Modern Trends in Kannada literature : Hindu Jan, 26, 1965

14 Nagari as the First script of India (A note) ; Old Kannada Souvenir of the First world Kannada meet-Nagapur times, 25-2-1974.

15 Relavance of Grammar in the Study of Poetics : Mythic Society Journel. LXV-2, 1974 : pp : 24-31.

16 Study of Language-Aids & Means, Hindu.

17 Social Function and Ideology of a writer : 1977.

18 Sastra Literature during the Kalyana Chalukyan Period : Mythic Society Journal, Feb : 1976.

19 Sreepurandara Dasa : Life and thought : 9th National Geetha Gyana Yagna, Bangalore 1981.

20 Sri Ramapattabhishekam by Masti : (Short Note)

21 Taddhita (Derivative) Suffixes in Kannada : Un published.

22 "Bankimachandra" : Note on the Biography of Bankimchandra by Dr. A. R.K.

23 'Antiquity of Kannada' : Nagapur Karnataka Sangha Souvenir (1974) Heritage

24 "Kannada : 1965-1760" Karnataka through the ages 1968.

25 The Place of Kanaka Dasa in Haridasa Literature : (Included in "Priceless gold", Published by Kalidasa Samskritika Sanga, Bangalore).

ಭಾರತೀಯ ಸಾಹಿತ್ಯ ವಿಶ್ವಕೋಶಕ್ಕೆ ಬರೆದ ಕಿರುಲೇಖನಗಳು

1 Brahmashiva 2 Chamarasa 3 Chikkadeva Raja
4 Duragasimha 5 Mummadi Krishana raja
6 Anthologies of Poetry and Prose in Kannada.
7 Ashtaka in Kannada Poetry. 8 Harikatha in Kannda.
9 Basavappa Shastri 10 Halakatti, P.G.
11 Awards, Literary 12 Elegy in Kannda Poetry.
13 Encyclopedia's in Kannada.
14 Institutions (Literary) 15 Gadayuddha.
16 Grammars in Kannada 17 Kirtana Poems in Kannada
18 Poetics in Kannada.
19 Research (Kannada Literary)
20 Sarvajna 21 Ranna

ಇತರೆ

1 ಏಕಲಿಪಿ ಸಮಸ್ಯೆ ; ವಿಚಾರವಾಣಿ, ಮಂಗಳೂರು-1956.

2 ಒಂದು ಸ್ಮರಣೀಯ ಸಂದರ್ಶನ : ಡಿ. ವಿ. ಜಿ. ಅವರೊಂದಿಗೆ : ಜೀವನ.

3 ಕನ್ನಡ ನಾಟಕ (ಭಾಷಣ) ಕನ್ನಡ ನುಡಿ (ಸಾರಾಂಶ ಪ್ರಕಟನೆ) 6-6.1948.

4 ಕನ್ನಡ ಟೈಪರೈಟರಿಗೊಂದು ಕೀ ಬೋರ್ಡ್ : ಜೀವನ 1953.

5 ಗೊಮ್ಮಟ ದರ್ಶನ : ಉದಯವಾಣಿ, ದೀಪಾವಳಿ ವಿಶೇಷಾಂಕ 1980, ಪು. 98-102

6 ನಾನು ಮತ್ತು ನನ್ನ ಸಾಹಿತ್ಯ (ಭಾಷಣ) ವ್ಯಾಕರಣ ಗ್ರಂಥಕ್ಕೆ ಪ್ರಶಸ್ತಿ ನೀಡಿದ ಸಂದರ್ಭದಲ್ಲಿ 1981

7 ಪಂಚಶೀಲ (ಭಾಷಣ—ಬುದ್ಧಜಯಂತಿಗೆ) ಮಲೆನಾಡು, 3-3, ಮೇ, 56 ಪು. 9

(ಸಂಕಲನ : **ನಾ. ಗೀತಾಚಾರ್ಯ**)

ಈ ಸಂಪುಟದ ಲೇಖಕರು

ಪ್ರೊ|| ಎಂ. ವಿ. ಸೀತಾರಾಮಯ್ಯ
54, "ಅರವಿಂದ" 3ನೇ ಅಡ್ಡ ಬೀದಿ
ಗವೀಪುರ ವಿಸ್ತರಣ, ಬೆಂಗಳೂರು-19

ಆರ್. ಎಸ್. ರಾಮರಾವ್
ನಂ. 2155, "ಕಾಂತಿನಿಲಯ" 36ನೇ "ಬಿ" ಮುಖ್ಯರಸ್ತೆ
9ನೇ ಬ್ಲಾಕ್ ಪೂರ್ವ, ಜಯನಗರ, ಬೆಂಗಳೂರು-11

ಡಾ|| ಮಾಸ್ತಿ ವೆಂಕಟೇಶ ಅಯ್ಯಂಗಾರ್
49, ಗವೀಪುರ ವಿಸ್ತರಣ, ಬೆಂಗಳೂರು-19

ಡಾ|| ರಂ. ಶ್ರೀ. ಮುಗಳಿ
"ಕಮಲಾಲಯ" ನಂ. 95, ಬಿ, 1ನೇ "ಎನ್" ಬ್ಲಾಕ್,
ರಾಜಾಜಿನಗರ, ಬೆಂಗಳೂರು-10

ಪ್ರೊ|| ಆರ್. ಜಿ. ಕುಲಕರ್ಣಿ
ಕನ್ನಡ ವಿಭಾಗದ ಮುಖ್ಯಸ್ಥರು, ಸತ್ಯಸಾಯಿ ಕಾಲೇಜು
ಕಾಡುಗೋಡಿ, ಬೆಂಗಳೂರು ಉತ್ತರ ತಾಲ್ಲೂಕು

ಎಚ್. ಎಸ್. ಪಾರ್ವತಿ
649, 10ನೇ ಮುಖ್ಯ ರಸ್ತೆ 4ನೇಬ್ಲಾಕ್, ಜಯನಗರ
ಬೆಂಗಳೂರು-11

ಜಿ. ಅಬ್ದುಲ್ ಬಷೀರ್
ಕನ್ನಡ ಉಪನ್ಯಾಸಕರು, ಆಚಾರ್ಯಪಾಠಶಾಲಾ ಕಾಲೇಜು
ಎನ್. ಆರ್. ಕಾಲೋನಿ, ಬೆಂಗಳೂರು-19

ಎಚ್. ಎಂ. ರಂಗನಾಥ್
ನಂ. 45. "ಶ್ರೀರಂಗ" 2ನೇ ರಸ್ತೆ, ನಾಗೇಂದ್ರ ಬ್ಲಾಕ್
ಮೈಸೂರು ಬ್ಯಾಂಕ್ ಕಾಲೋನಿ, ಬೆಂಗಳೂರು-50

ಬಿ. ಎಸ್. ರಾಮಪ್ರಸಾದ್
ಕನ್ನಡ ಉಪನ್ಯಾಸಕರು, ವಿಜಯ ಸಂಜೆ ಕಾಲೇಜು
ಬಸವನಗುಡಿ, ಬೆಂಗಳೂರು-4

ಡಿ. ಲಿಂಗಯ್ಯ
ನಂ. 690, ಒಂದನೇ "ಬಿ" ಮುಖ್ಯರಸ್ತೆ
7ನೇ ಬ್ಲಾಕ್, ಬನಶಂಕರಿ 3ನೇ ಹಂತ, ಬೆಂಗಳೂರು.85

ಚೆನ್ನವೀರ ಕಣವಿ
"ಚೆಂಬೆಳಕು", ಮಾಳಮಡ್ಡಿ, ಧಾರವಾಡ

ಟಿ. ಕೇಶವ ಭಟ್ಟ
ನಂ. 745, "ಶ್ರೀವರ್ಧನ", 15ನೇ ಮುಖ್ಯರಸ್ತೆ
ಬನಶಂಕರಿ 2ನೇ ಹಂತ, ಬೆಂಗಳೂರು.11

ಪ್ರೊ|| ಜಿ. ವೆಂಕಟಸುಬ್ಬಯ್ಯ
ನಂ. 58, 31ನೇ ಅಡ್ಡರಸ್ತೆ, 7ನೇ ಬ್ಲಾಕ್
ಜಯನಗರ, ಬೆಂಗಳೂರು. 11

ಕೈವಾರ ವಾಮನರಾವ್
ನಂ. 4, ಪಟಾಲಮ್ಮ ಗುಡಿರಸ್ತೆ
ಬಸವನಗುಡಿ, ಬೆಂಗಳೂರು.4

ಡಾ|| ಎನ್. ವಿ. ವಿಮಲ
"ಸಿಂಹಾಲಯ" ನಂ. 33, 6ನೇ ಮುಖ್ಯರಸ್ತೆ
ಮಲ್ಲೇಶ್ವರಂ, ಬೆಂಗಳೂರು.3

ಎಲ್. ಎಸ್. ಶೇಷಗಿರಿರಾವ್
ನಂ, 267, "ಜ್ಯೋತಿ", 3ನೇ ಬ್ಲಾಕ್, ಜಯನಗರ, ಬೆಂಗಳೂರು.11

ಈಶ್ವರಚಂದ್ರ
ನಂ. 225, ಬಾಪೂಜಿ ಹೌಸಿಂಗ್ ಸೊಸೈಟಿ ವಿಸ್ತರಣ
ವಿಜಯನಗರ ಪಶ್ಚಿಮ, ಬೆಂಗಳೂರು.40

ಬಿ. ಎ. ರಂಗನಾಥ್
ನಂ. 386, "ಮಹಾವೀರ" 6ನೇ ಬ್ಲಾಕ್, ಒಂದನೇ "ಎಫ್" ಕ್ರಾಸ್"
ಬನಶಂಕರಿ 3ನೇ ಹಂತ, ಬೆಂಗಳೂರು.85

ಎಂ. ಜಿ. ನಾಗರಾಜ್
ಜೋಡು ಬೀಟಿ ರಸ್ತೆ, ಪೊನ್ನಂಪೇಟೆ-
ದಕ್ಷಿಣ ಕೊಡಗು 571216

ಎನ್. ಬಸವಾರಾಧ್ಯ
508/ಎ 14ನೇ ಮುಖ್ಯರಸ್ತೆ
ಸರಸ್ವತೀಪುರಂ, ಮೈಸೂರು-9

ಡಾ॥ ಟಿ. ಎನ್. ನಾಗರತ್ನ
ಕನ್ನಡ ಅಧ್ಯಾಪಕರು, ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು-6

ಡಾ॥ ಟಿ.ವಿ. ವೆಂಕಟಾಚಲಶಾಸ್ತ್ರಿ
ಕನ್ನಡ ಪ್ರಾಧ್ಯಾಪಕಕು, ಕನ್ನಡ ಅಧ್ಯಯನ ಸಂಸ್ಥೆ
ಮಾನಸ ಗಂಗೋತ್ರಿ, ಮೈಸೂರು-6

ಡಾ॥ ಜಿ. ವರದರಾಜರಾವ್
ನಿವೃತ್ತ ಕನ್ನಡ ಪ್ರಾಧ್ಯಾಪಕರು
"ಸುದರ್ಶನ" 12ನೇ ಅಡ್ಡರಸ್ತೆ, ಜಯನಗರ, ಮೈಸೂರು-14

ದಿ॥ ಕೊರಟಿ ಶ್ರೀನಿವಾಸರಾವ್
"ಆನಂದನಿಲಯ", ಎಂ.ಜಿ.ಕೆ. ಮೂರ್ತಿ ಲೇಔಟ್
ಸಮೀರಪುರ, ಬೆಂಗಳೂರು-18

ವೆಂಕಟರಾವ್
ಬಿ. ಎಂ. ಶ್ರೀ ಸ್ಮಾರಕ ಪ್ರತಿಷ್ಠಾನ, ನಂ. 54, 3ನೇ ಅಡ್ಡರಸ್ತೆ
ಗವೀಪುರಂ ವಿಸ್ತರಣ ಬೆಂಗಳೂರು

ದೇವರ ಕೊಂಡಾರೆಡ್ಡಿ
ಕನ್ನಡ ಅಧ್ಯಾಪಕರು
ಸರ್ಕಾರಿ ಕಿರಿಯ ಕಾಲೇಜು, ಗುಂಡ್ಲಪೇಟೆ

ಕೆ. ನಾಗರಾಜ್
ನಂ. 9, ಮಾಸಿಲಾಮಣಿ ಸ್ಟ್ರೀಟ್
ತ್ಯಾಗರಾಜನಗರ, ಮದರಾಸು-17

ಹಂಪ. ನಾಗರಾಜಯ್ಯ
"ಸ್ವನಿಮಾ"- 1079, 5ನೇ ವಿಭಾಗ
ರಾಜಾಜಿನಗರ, ಬೆಂಗಳೂರು-10

ಸೀತಾರಾಮ ಜಾಗೀರದಾರ್
ನಂ. 9, ಮೂರನೇ ಮುಖ್ಯರಸ್ತೆ
ಸರಸ್ವತೀಪುರಂ, ಮೈಸೂರು-9

ವಿದ್ವಾನ್ ಕೆ. ವೆಂಕಟರಾಮಾಚಾರ್ಯ
ಸುರತ್ಕಲ್-574158

ಡಾ|| ಎಂ. ಚಿದಾನಂದಮೂರ್ತಿ
ಕನ್ನಡ ಪ್ರಾಧ್ಯಾಪಕರು, ಕನ್ನಡ ಅಧ್ಯಯನ ಕೇಂದ್ರ
ಜ್ಞಾನಭಾರತಿ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು–56

ಡಾ|| ಪಿ. ವಿ. ನಾರಾಯಣ
25/12, 6ನೇ ಕ್ರಾಸ್
ಎಲ್. ಐ. ಸಿ. ಕಾಲೋನಿ, ಬೆಂಗಳೂರು-11

ಡಾ|| ಸಾ. ಶಿ. ಮರುಳಯ್ಯ
60/1, 4ನೇ ಮುಖ್ಯ ರಸ್ತೆ
5ನೇ ಅಡ್ಡರಸ್ತೆ, ಚಾಮರಾಜಪೇಟೆ, ಬೆಂಗಳೂರು 18

ಡಾ|| ಎಸ್. ವಿದ್ಯಾಶಂಕರ್
ಕನ್ನಡ ಅಧ್ಯಾಪಕರು, ಕನ್ನಡ ಅಧ್ಯಯನ ಕೇಂದ್ರ
ಜ್ಞಾನಭಾರತಿ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು-56

ಡಾ|| ಸೂರ್ಯನಾಥ ಕಾಮತ್
ನಂ. 798, 11ನೇ ಮುಖ್ಯರಸ್ತೆ
6ನೇ ಕ್ರಾಸ್, ಹನುಮಂತನಗರ, ಬೆಂಗಳೂರು-19

ಎಸ್. ಶಿವಣ್ಣ
ಸಂಶೋಧನ ಸಹಾಯಕರು, ಕನ್ನಡ ಅಧ್ಯಯನ ಕೇಂದ್ರ
ಜ್ಞಾನಭಾರತಿ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು-56

ಡಾ|| ಕೆ. ಶ್ರೀಕಂಠಯ್ಯ
393, 1ನೇ ಬ್ಲಾಕ್, ಜಯನಗರ, ಬೆಂಗಳೂರು-11

ಪ್ರೊ|| ವಸಂತ ಕುಷ್ಟಗಿ
ಉಪಕುಲಸಚಿವರು
ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರ್ಗಿ-6

ವಿದ್ವಾನ್ ಪು. ಶ್ರೀನಿವಾಸಭಟ್
"ಪಂಚವಟಿ" ಕಟೀಲು, ದಕ್ಷಿಣ ಕನ್ನಡ

ಕೆಳದಿ ಗುಂಡಾ ಜೋಯಿಸ್
ಕೆಳದಿ ಇತಿಹಾಸ ವಸ್ತು ಸಂಗ್ರಹಾಲಯ
ಕೆಳದಿ, ಶಿವಮೊಗ್ಗ ಜಿಲ್ಲೆ

ಡಾ॥ ಶ್ರೀ ಕೃಷ್ಣ ಭಟ್ ಅರ್ತಿಕಜೆ
ಕನ್ನಡ ಅಧ್ಯಾಪಕರು
ಮದರಾಸು ವಿಶ್ವವಿದ್ಯಾನಿಲಯ, ಮದರಾಸು

ಎಂ. ಜಿ. ಹೆಗ್ಡೆ
ತುಡಗಣಿ, ಹಲಸಿಗೆ ಅಂಚೆ, ಸಿರಸಿ-50

ಡಾ॥ ಎಚ್. ಸೀತಾರಾಮಾಚಾರ್ಯ
ಕನ್ನಡ ವಿಭಾಗದ ಮುಖ್ಯಸ್ಥರು
ಗೋವಿಂದ ದಾಸ್ ಕಾಲೇಜು, ಸುರತ್ಕಲ್-574158

ಡಾ॥ ಶೀ. ನಂ. ಶಂಕರನಾರಾಯಣ
ಕನ್ನಡ ರೀಡರ್, ಸ್ನಾತಕೋತ್ತರ ಕೇಂದ್ರ
(ಮೈಸೂರು ವಿಶ್ವವಿದ್ಯಾನಿಲಯ) ಬಿ.ಆರ್. ಪ್ರಾಜೆಕ್ಟ್, ಶಿವಮೊಗ್ಗ

ಡಾ॥ ಎಂ. ಜಿ. ಬಿರಾದಾರ
ರೀಡರ್, ಕನ್ನಡ ವಿಭಾಗ
ಗುಲಬರ್ಗ ವಿಶ್ವವಿದ್ಯಾನಿಲಯ, ಗುಲಬರ್ಗ-6

ಎಂ. ಎಸ್. ಪ್ರಭಾಕರ್
ಮ್ಯಾನೇಜರ್
ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಸಾಪಲಿ: ಕೋಲಾರ ಜಿಲ್ಲೆ

ಡಾ॥ ಬಾ. ರಾ. ಗೋಪಾಲ್
ಶಾಸನ ತಜ್ಞರು, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು-6

ವಿ. ಗೋಪಾಲಕೃಷ್ಣ
ಕನ್ನಡ ಅಧ್ಯಾಪಕರು, ಆದಿರಾಮಯ್ಯ ಪ್ರೌಢಶಾಲೆ
ದಾರಿ ನಾಯಕನ ಪಾಳ್ಯ, ಗೌರೀಬಿದನೂರು ತಾಲ್ಲೂಕು

ಡಾ॥ ಸಿ. ಓಂಕಾರಪ್ಪ
ಕನ್ನಡ ಅಧ್ಯಾಪಕರು
ಸರ್ಕಾರಿ ಕಲಾ ಕಾಲೇಜು, ಚಿತ್ರದುರ್ಗ

ಡಾ॥ ಎಂ. ವಿ. ಶ್ರೀನಿವಾಸ್
ರೀಡರ್,ಇತಿಹಾಸ ವಿಭಾಗ, ಮಾನಸಗಂಗೋತ್ರಿ
ಮೈಸೂರು ವಿಶ್ವವಿದ್ಯಾನಿಲಯ. ಮೈಸೂರು.6

ನಾ. ಗೀತಾಚಾರ್ಯ
ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ
ನಂ. 54, 3ನೇ ಅಡ್ಡರಸ್ತೆ. ಗವೀಪುರ ವಿಸ್ತರಣ, ಬೆಂಗಳೂರು.19

A Blade of Grass

It's a blade of grass
Beneath a stone-slab,
No fear it has
Of the death-dealing weight
Of the slab
Above.
The slender shoot of grass
from beneath
Thrusts
Its leafy head of a fresh blade
From out of the crevice-mouth
Of a grave of darkness.
'How bold and heroic'! –
Admires the Sun,
Embraces with rays warm
And blessings of life infused.
And wind, the friend of all living
beings,
Blows with soothing touch
Life-breath into the struggling
blade.
And how now the blade of grass
Twists and sways,
Tosses its head,
In sheer joy of fearlessness!
No fear it has now
Of shadow of death.
True: THENA VINA TRUNAMAPI
NA CHALATI –
But even He
Would not stretch out His
helping hand
To those when fallen
Make not effort to rise.

– Raghava

Translated by the author.

ಕಲ್ಲಡಿಯ ಹುಲ್ಲುಗಳು

ಕಲ್ಲಡಿಯ ಹುಲ್ಲುಗರಿಕೆ:
ಅದಕಿಲ್ಲ ಹೆದರಿಕೆ
ಮೇಲೆ ಕೋಲೆ ಕುಳಿತ ಚಪ್ಪಡಿಯ
    ಭಾರವಪ್ಪಳಿಸುತಿರೆಯೆಂದು.
ಕತ್ತಲೆಂಬ ಗೋರಿಗವಿಸಂದು ಬಾಯಿಂದ
ಘೋರದಾಹ ಹುದು ತಲೆಂಬ - ತನ್ನ ಹೊನ್ನ ಬೆಳೆಂಬ
    ಎಳೆಂಬ ಎಲೆಯ ತಲೆಯ:
ಏನದರ ಸ್ಥೈರ್ಯ ಶೌರ್ಯ!
ಅದ ಮೆಚ್ಚಿ
ಬದುಕೆಂದು ಹರಸಿದನು ಸೂರ್ಯ,
ತುಂಬಿದನು ಆಯುಷ್ಯ,
ಅಪ್ಪುಗೆಯ ಬಿಸುಪಿತ್ತು;
ಗಾಳಿ, ಬಾಳನೆಗೆಳೆಯ,
ಬಂದು ತಡವಿದನು ಮೈಯ,
ಹೊಸ ಉಸಿರನಿತ್ತು.
ಮೈಮೊಳೆದು ತಲೆಕೊಡಹಿ
ನಿರ್ಭಯತೆಯಲಿ ನಲಿಯುತಿದೆ ಹುಲ್ಲುಗಳು
ಅದಕಿಲ್ಲ ಹೆದರಿಕೆ.
ಅಹುದು, ತೇನ ವಿನಾ ತೃಣಾಮಪಿ ನ ಚಲತಿ-
ಆದರೆ-
ಬಿದ್ದಾಗಲೆದ್ದು ನಿಲ್ಲುವ ಯತ್ನವಿಲ್ಲದಿರಲವನೂ
ಹಿಡಿಯ ಮೇಲೆತ್ತ.

೩-೩-೧೯೫೮ - ವೈವೆಂಸೀ ರಾಘವ.